ಇತಿಹಾಸ ದರ್ಶನ

ಸಂಪುಟ ೧೨ / ೧೯೯೭

KARNATAKA ITIHASA ACADEMY

कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ.) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೧೨/೧೯೯೭

೧೯೯೬ರಲ್ಲಿ ಧಾರವಾಡದಲ್ಲಿ ಸಮಾವೇಶಗೊಂಡ ಕರ್ನಾಟಕ ಇತಿಹಾಸ ಅಕಾದೆಮಿಯ
ಹತ್ತನೆಯ ವಾರ್ಷಿಕ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳ ಸಂಪುಟ

ಸಂಪಾದಕರು

ಎಂ. ಜಿ. ನಾಗರಾಜ್

ಪಿ.ವಿ. ಕೃಷ್ಣಮೂರ್ತಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,) ಬೆಂಗಳೂರು

ITIHĀSA DARSHANA

Proceedings of the Tenth Annual
Conference of the Karnataka Ithiāsa
Academy (Regd) held at Dharwar
on 7, 8 and 9 June 1996

Volume 12, October 1997

Edited by : M. G. Nagaraj
P. V. Krishna Murthy

Published by Karnataka Itihāsa Academy (Regd.)
Gokhale Institute of Public Affairs Premises
Basavanagudi Road, Narasimharaja Colony
Bangalore - 500 019


ಬೆಲೆ : ರೂ. ೧೦೦-೦೦

ಪ್ರಬಂಧಕಾರರ ಗಮನಕ್ಕೆ

ಈ ಸಂಪುಟದಲ್ಲಿನ ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆ. ಅವು ಅವಶ್ಯವಾಗಿ ಅಕಾದೆಮಿಯ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲ. ಕರ್ನಾಟಕ ಇತಿಹಾಸದ ಮೇಲೆ ಹೊಸಬೆಳಕು ಚೆಲ್ಲುವ ಬರಹಗಳಿಗೆ 'ಇತಿಹಾಸ ದರ್ಶನ' ಮೀಸಲಾಗಿದೆ. ಲೇಖನಗಳು ಹಸ್ತ ಲಿಖಿತ ೧೦ ಪುಟಗಳ ಪರಿಮಿತಿಯಲ್ಲಿ ಇರುವುದು ಸೂಕ್ತ. ಲೇಖನಗಳು ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು ಅಡಿಟಿಪ್ಪಣಿಗಳನ್ನು, ಗ್ರಂಥ ಲೇಖನಾಧಾರ ವಿವರಗಳನ್ನು ಈಗಾಗಲೇ ಸಂಶೋಧನ ಬರಹಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಕ್ರಮದಲ್ಲಿ ನೀಡುವುದು ಒಳ್ಳೆಯದು. ೧೧ನೇ ಸಮ್ಮೇಳನದಲ್ಲಿ ಮಂಡಿತ ಪ್ರಬಂಧಗಳನ್ನು ಅನಿವಾರ್ಯ ಕಾರಣಗಳಿಂದ ಕೊಡಲಾಗದಿರುವ ಲೇಖಕರು ದಯಮಾಡಿ ಜನವರಿ ೩೦, ೧೯೯೮ರ ಒಳಗಾಗಿ ಸಂಪಾದಕರ (ಅಕಾಡೆಮಿ ಕಛೇರಿ) ವಿಳಾಸಕ್ಕೆ ಕಳುಹಿಸುವುದು.

ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮
ದೂರವಾಣಿ : ೬೬೧೩೧೨೩, ೬೬೧೮೭೫೨

ಹತ್ತನೆಯ ಸಮ್ಮೇಳನದ ಅಧ್ಯಕ್ಷರು



ಪ್ರೊ|| ಜಿ. ಎಸ್. ದೀಕ್ಷಿತ್

(ಕೃಪೆ) : ಡಾ|| ಅ. ಲ. ನರಸಿಂಹನ್

ಸಂಪಾದಕೀಯ

ಕರ್ನಾಟಕ ಇತಿಹಾಸ ಅಕಾದೆಮಿಯ ಹತ್ತನೆಯ ವಾರ್ಷಿಕ ಸಮ್ಮೇಳನವು ಕಳೆದ ವರ್ಷ (ತಾ॥ ೭.೬.೯೬ ರಿಂದ ೯.೬.೯೬) ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಹಯೋಗ ಹಾಗೂ ಮುರುಘಾಮಠದ ಆಶ್ರಯದಲ್ಲಿ ನಡೆಯಿತು. ಸಮ್ಮೇಳನ ಸಮಯದಲ್ಲಿ ಮಂಡಿಸಿದ ಪ್ರಬಂಧಗಳು ಹಾಗು ಧಾರವಾಡದ ಶ್ರೀ ಮುರುಘಾಮಠದ ಸಂಬಂಧದ ವಿಶೇಷ ಗೋಷ್ಠಿಯಲ್ಲಿ ಮಂಡಿತವಾದ ಪ್ರಬಂಧಗಳ ಪೈಕಿ ಒದಗಿದವುಗಳನ್ನು ಸೇರ್ಪಡೆ ಮಾಡಿ ಸಂಕಲಿಸಿದ '**ಇತಿಹಾಸ ದರ್ಶನ**'ದ ೧೨ನೆಯ ಸಂಪುಟವಿದು.

ಸಮ್ಮೇಳನದ ಸಮಯದಲ್ಲಿ ಮಂಡಿಸಿದ ಪ್ರಬಂಧಗಳ ಪ್ರತಿಯನ್ನು ಅನಿವಾರ್ಯ ಕಾರಣಗಳಿಂದಾಗಿ ಕೊಡಲಾಗದಿದ್ದ ವಿದ್ವಾಂಸರಿಗೆ ಸಂಪಾದಕರ ವಿಳಾಸಕ್ಕೆ ಅದನ್ನು ಸಕಾಲಕ್ಕೆ ಕಳುಹಿಸಿಕೊಡಲು ಸಂಪಾದಕರ ವಿನಂತಿಯ ನೆನಪಿನೋಲೆಯುಂಟು. ಅದಕ್ಕೆ ಸ್ಪಂದಿಸಿ ಪ್ರಬಂಧಗಳನ್ನು ಕಳುಹಿಸಿದರೆ ವಿಭಾಗ ಕ್ರಮದಲ್ಲಿ ಜೋಡಿಸಿ ಸಂಪಾದಿಸಲು ಅನುಕೂಲವಾಗುತ್ತದೆ; ಮುದ್ರಣಕಾರ್ಯಕ್ಕೂ ನೆರವಾಗುತ್ತದೆ. ಇಲ್ಲವಾದರೆ ಕ್ರಮ ವ್ಯತ್ಯಯವಾಗಲವಕಾಶವಾಗುತ್ತದೆ. ಆದ್ದರಿಂದ ಕಾಲ ಸಾಲದಾಗಿ ಸಕಾಲಕ್ಕೆ ಬರದ ಪ್ರಬಂಧಗಳ ಪ್ರಕಟನೆಯನ್ನು ಕೈಬಿಡಬೇಕಾಗಬಹುದು. ದಯವಿಟ್ಟು ವಿದ್ವಾಂಸರು ಸಕಾಲಕ್ಕೆ ಮಂಡಿತ ಪ್ರಬಂಧಗಳನ್ನು ನೀಡಿ ಸಹಕರಿಸಬೇಕೆಂದು ಕೋರುತ್ತೇವೆ.

ಅಕಾದೆಮಿ ದ್ವಾದಶ ವರ್ಷಕ್ಕೆ ಕಾಲಿಡುವ ಸಮಯ. ತಪ್ಪದ ವಾರ್ಷಿಕ ಐತಿಹಾಸಿಕ ಸಮ್ಮೇಳನ, ಪಟ್ಟಣಗಳಿಂದ ಹಿಡಿದು ಮೂಲೆ ಮೂಲೆಯ ಗ್ರಾಮಗಳವರೆಗೆ 'ಇತಿಹಾಸ ಪರಂಪರೆ ಉಳಿಸಿ' ಕಾರ್ಯಕ್ರಮಗಳು, 'ಇತಿಹಾಸ ಪ್ರಶಸ್ತಿ ಪರೀಕ್ಷೆ ಹಾಗು ಮೌಲ್ಯಮಾಪನ, ತ್ವರಿತ ಫಲಿತಾಂಶ ಪ್ರಕಟನಾಕಾರ್ಯ, ಆದಿಲ್‌ಶಾಹಿ ವಿಚಾರ ಸಂಕಿರಣ, ಪದವಿಪೂರ್ವ ಇತಿಹಾಸ ಶಿಕ್ಷಕರಿಗೆ ಕಾರ್ಯಾಗಾರ, ಸಂಸ್ಥಾ-ಸಹಯೋಗದಲ್ಲಿ ವಿಜಯನಗರ ಸಾಮ್ರಾಜ್ಯದ ೬೬೦ನೇ ವರ್ಷದ ನೆನಪಿನಲ್ಲಿ ಹಂಪಿಯಲ್ಲಿ ವಿಜಯನಗರ ಇತಿಹಾಸ ಗೋಷ್ಠಿಗಳು, ತಾಲೂಕು ಇತಿಹಾಸ ಸಾಹಿತ್ಯ ವಿಚಾರ ಸಂಕಿರಣ, ಇತಿಹಾಸ ಸಂಬಂಧದ ಕಾರ್ಯಕ್ರಮಗಳು, ಇತಿಹಾಸ ಪೂರ್ವಕಾಲದ ಬಗೆಗಿನ ಸಂಶೋಧನ ತರಬೇತಿ ಕಾರ್ಯಾಗಾರ, ವಾರ್ಷಿಕ ಸಮ್ಮೇಳನ ಸಮಯದಲ್ಲಿ ಹೊಸ ಪಿಎಚ್.ಡಿ. ಪದವೀಧರ ಸದಸ್ಯರಿಗೆ ಗೌರವಸತ್ಕಾರ, ಸದಸ್ಯರ ಹೊಸ ಕೃತಿಗಳ ಬಿಡುಗಡೆ, ಅಕಾದೆಮಿಯ ಆರ್ಥಿಕ ಇತಿಮಿತಿಯಲ್ಲಿ ಇತಿಹಾಸೋ-ಸಾಂಸ್ಕೃತಿಕ ಸಂಸ್ಥೆಗಳಿಗೆ ನೀಡಿರುವ ನೆರವು, ದಶಮಾನೋತ್ಸವ ಹಾಗು ಆ ಸಮಯದಲ್ಲಿ ಇತಿಹಾಸದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಇತ್ಯಾದಿಗಳು, ಅಕಾದೆಮಿಯು ನಡೆದು ಬಂದ ಹಾದಿಯಲ್ಲಿ ಇಟ್ಟ ಹಿರಿಯ ಹೆಜ್ಜೆಗಳ ಅಚ್ಚುಗಳೆನಿಸಿವೆ.

೧೯೮೬ರಲ್ಲಿ ಆಕಾದೆಮಿಯು ಆರಂಭವಾದಂದಿನಿಂದ ಅದರ ಕಾರ್ಯಕಾರಿ ಸಮಿತಿಯ ಸಕ್ರಿಯಾವಂತಿಕೆ ಹಾಗು ಸರ್ವ ಸದಸ್ಯರು, ಜಿಲ್ಲಾ ಘಟಕಗಳು, ಹಿತೈಷಿ ಸಂಸ್ಥೆಗಳು, ಮತ್ತು ಸುದ್ದಿ-ಸಮೂಹ ಮಾಧ್ಯಮಗಳು ನೀಡಿದ ಸಹಕಾರದಿಂದಾಗಿ ಈವೊತ್ತಿನ ಅದರ ಪ್ರಗತಿಪಥವು ಎದ್ದು ಕಾಣುವಂತಾಗಿದೆ. ಇದೊಂದು ರೀತಿ ಸದಸ್ಯ ಸಮುದಾಯ ಕಾಯಕ; ಸದಸ್ಯ ಸಮುದಾಯದ ಇತಿಹಾಸ ಪ್ರಜ್ಞಾ ಶೋಭೆ. ಈ ಬೆಳಗು, ಬೆಳಸು, ಶಿಸ್ತು ನಿರಂತರವಿರಲೆನ್ನುವುದೂ ಅಕಾದೆಮಿಯ ಬಯಕೆಯೆ.

ಕಾರ್ಯಕಾರಿ ಸಮಿತಿಯಲ್ಲಿ ಬಂದ ಸಲಹೆಯಂತೆ ೧೯೯೫ರ ಕಾರ್ಯಕ್ರಮಗಳ ವಾರ್ಷಿಕ ವರದಿಯ ಜೊತೆಗೆ, ೧೯೯೬ರ ಕಾರ್ಯ ಚಟುವಟಿಕೆಗಳ ವಾರ್ಷಿಕ ವರದಿಯನ್ನೂ, ಚಟುವಟಿಕೆಗಳು ನಡೆದಿರುವುದು ನಿರ್ದಿಷ್ಟವಾಗಿರುವ ಕಾರಣ, ಪ್ರಸ್ತುತ ಸಂಪುಟದಲ್ಲಿ ಅಳವಡಿಸಲವಕಾಶವಾಗಿದೆ. ವಾರ್ಷಿಕ ವರದಿಯು ಅದರಿಂದಾಗಿ '(ಅಪ್-ಟು-ಡೇಟ್) ಇತ್ತೀಚಿನ ವರ್ಷದವರೆಗಿನದಾದದ್ದು' ಸ್ವಾಗತಾರ್ಹ ವಿಷಯ.

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾ ಸಂಸ್ಥಾನ ಮಠ ಹಾಗು ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನಗಳ ಸಂಯುಕ್ತ ನೇತೃತ್ವದಲ್ಲಿ ಒದಗಿರುವ ಆಶ್ರಯದ ಕಾರಣ ಶಿರಸಿಯಲ್ಲಿ (೨೫, ೨೬ ಮತ್ತು ೨೭ನೇ ಅಕ್ಟೋಬರ್ ೧೯೯೭) ನಡೆಯುತ್ತಿರುವ ಅಕಾದೆಮಿಯ ಈ ೧೧ನೆಯ ವಾರ್ಷಿಕ ಸಮ್ಮೇಳನದ ಸಂದರ್ಭದಲ್ಲಿ **ಇತಿಹಾಸದರ್ಶನದ ೧೨ನೆಯ ಸಂಪುಟವು** ಬಿಡುಗಡೆಯಾಗುತ್ತಿರುವುದೂ ಸಂತೋಷದ ಸಂಗತಿ.

ಪ್ರಸ್ತುತ ಸಂಪುಟವನ್ನು ಸುಂದರವಾಗಿ ಸಕಾಲಕ್ಕೆ ಮುದ್ರಿಸಿಕೊಟ್ಟ ಲಕ್ಷ್ಮಿಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್ ಕುಮಾರ್ ಮತ್ತು ಮೇನೇಜರ್ ಶ್ರೀ ವೆಂಕಟೇಶ್ ಹಾಗು ಸಿಬ್ಬಂದಿ ವರ್ಗದವರಿಗೆ ನಾವು ಬಹಳ ಆಭಾರಿ.

★ ಎಂ. ಜಿ. ನಾಗರಾಜ್
★ ಪಿ.ವಿ. ಕೃಷ್ಣಮೂರ್ತಿ

ಈಶ್ವರ ಸಂವತ್ಸರ, ತುಲಾಮಾಸ
ಸೋಮವಾರ, ಪಂಚಮಿ
೨೦.೧೦.೧೯೯೭

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಬೆಂಗಳೂರು

ಕಾರ್ಯಕಾರಿ ಸಮಿತಿ

(ದಿನಾಂಕ ೯.೬.೧೯೯೬ರಲ್ಲಿ ಆಯ್ಕೆಗೊಂಡಂತೆ)

ಅಜೀವ ಗೌರವ ಅಧ್ಯಕ್ಷರು

ಪ್ರೊ || ಜಿ. ಎಸ್. ದೀಕ್ಷಿತ್, ಧಾರವಾಡ

ಅಧ್ಯಕ್ಷರು

ಡಾ || ಸೂರ್ಯನಾಥ ಕಾಮತ್, ಬೆಂಗಳೂರು

ಉಪಾಧ್ಯಕ್ಷರು

ಡಾ || ಡಿ. ವಿ. ದೇವರಾಜ್, ಮೈಸೂರು

ಶ್ರೀ ಎಂ. ಜಿ. ನಾಗರಾಜ್, ಬೆಂಗಳೂರು

ಪ್ರಧಾನ ಕಾಯದರ್ಶಿಗಳು

ಡಾ || ಎಚ್. ಎಸ್. ಗೋಪಾಲರಾವ್, ಅರಿಶಿನಕುಂಟೆ

ಕಾರ್ಯದರ್ಶಿಗಳು

ಡಾ || ಎಚ್. ಆರ್. ರಘುನಾಥಭಟ್, ಧಾರವಾಡ

ಡಾ || ಕೋ. ವಸಂತಲಕ್ಷ್ಮಿ

ಕೋಶಾಧಿಕಾರಿ

ಶ್ರೀ ಎಂ. ಬಿ. ಪಾಟೀಲ್, ಬೆಂಗಳೂರು

ಸದಸ್ಯರು

ಡಾ || ಬೆಂ. ಶಾ. ಶ್ಯಾಮಲಾರತ್ನ ಕುಮಾರಿ, ಬೆಂಗಳೂರು

ಡಾ || ಅ. ಸುಂದರ, ಬಿಜಾಪುರ

ಡಾ || ಎಸ್. ರಾಜಶೇಖರ್, ಧಾರವಾಡ

ಡಾ || ಚೆನ್ನಕ್ಕಪಾವಟೆ, ಧಾರವಾಡ

ಡಾ || ಎ. ಕೆ. ಶಾಸ್ತ್ರಿ, ಶಿರಸಿ,

ಡಾ || ಕೆ. ಜಿ. ವಸಂತ ಮಾಧವ, ಹಳಿಯಂಗಡಿ

ಶ್ರೀ ಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ

ಪ್ರೊ || ಲಕ್ಷ್ಮಣ್ ತೆಲಗಾವಿ, ಹಂಪಿ

ಡಾ || ದೇವರಕೊಂಡಾರೆಡ್ಡಿ, ಹಂಪಿ

ಶ್ರೀ ವಿ. ಸಿ. ಮಾಲಗತ್ತಿ, ಬೆಳಗಾವಿ

ಪ್ರೊ || ಭೀಮಪ್ಪ ಸುರಪುರ, ಶಹಾಪುರ

ಶ್ರೀ ಕೇಶವ ಉಮರ್ಜಿ, ಜಮಖಂಡಿ

ಶ್ರೀ ಸಿದ್ದಯ್ಯ ಹಿರೇಮಠ, ಶಿವಮೊಗ್ಗ




ಪರಮಪೂಜ್ಯ ಶ್ರೀ ಮ.ನಿ.ಪ್ರ. ಮೃತ್ಯುಂಜಯ ಅಪ್ಪಗಳು
ಶ್ರೀ ಮುರುಘಾಮಠ, ಧಾರವಾಡ



ಶ್ರೀ ಮ.ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳು

ಶ್ರೀ ಮುರುಘಾಮಠ, ಧಾರವಾಡ



ಡಾ॥ ಎಸ್. ರಾಮೇಗೌಡ

ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



ಸಮ್ಮೇಳನದ ಉದ್ಘಾಟನೆ



ಪ್ರದರ್ಶನದ ಉದ್ಘಾಟನೆ



ಶ್ರೀ ಮುರುಘಾಮಠದ ಪೂಜ್ಯ ಶಿವಯೋಗಿ ಮಹಾಸ್ವಾಮಿಗಳ ಹಾರೈಕೆಗಳು



ಶ್ರೀ ಮುರುಘಾಮಠ ಕುರಿತ ವಿಶೇಷ ಗೋಷ್ಠಿ



೧೯೮೬ರಲ್ಲಿ ಬೆಂಗಳೂರಿನಲ್ಲಿ ನಡೆದ ಸಂಶೋಧನಾ ಕಾರ್ಯಾಗಾರದಲ್ಲಿ
ಪಾಲುಗೊಂಡ ಅಭ್ಯರ್ಥಿಗಳು



ಶಿವಮೊಗ್ಗ ಜಿಲ್ಲಾ ಘಟಕದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ

ಪರಿವಿಡಿ

ಧಾರವಾಡದ ಶ್ರೀ ಮುರುಘಾಮಠಕ್ಕೆ ಸಂಬಂಧಿಸಿದ ಗೋಷ್ಠಿಯ ಮಂಡಿತ ಪ್ರಬಂಧಗಳು

ಧಾರವಾಡದಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ಹತ್ತನೆಯ ವಾರ್ಷಿಕ ಇತಿಹಾಸ ಸಮ್ಮೇಳನ

ಜೂನ್ ೭,೮ ಮತ್ತು ೯, ೧೯೯೬

ಸಮ್ಮೇಳನ ಅಧ್ಯಕ್ಷರ ಭಾಷಣ

- ಡಾ ॥ ಜಿ.ಎಸ್.ದೀಕ್ಷಿತ್

ಕರ್ನಾಟಕ ಇತಿಹಾಸ ಅಕಾದೆಮಿಯ ದಶವಾರ್ಷಿಕ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಅಕಾದೆಮಿಯ ಕಾರ್ಯಕಾರೀ ಸಮಿತಿಯವರಿಗೆ ನನ್ನ ವಂದನೆಗಳು. ನನ್ನ ಜೀವನದ ಬಹುಮುಖ್ಯ ಭಾಗವನ್ನು ಕಳೆದಂತಹ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ನಡೆಯುತ್ತಿರುವ ಈ ಸಮ್ಮೇಳನದ ಅಧ್ಯಕ್ಷಸ್ಥಾನ ಲಭಿಸಿರುವುದು ನನಗೆ ಹೆಮ್ಮೆಯ ವಿಷಯ. ಕರ್ನಾಟಕ ವಿಶ್ವವಿದ್ಯಾಲಯವೂ ಮತ್ತು ಇಲ್ಲಿಯ ಸುಪ್ರಸಿದ್ಧ ಮುರುಘಾ ಮಠವೂ ಸೇರಿ ನಡೆಸುತ್ತಿರುವುದು ಈ ಸಮ್ಮೇಳನದ ಒಂದು ವೈಶಿಷ್ಟ್ಯ. ಈ ಊರಿಗೆ ಇರುವ ಪ್ರಾಮುಖ್ಯತೆಗೆ ಈ ಎರಡೂ ಸಂಸ್ಥೆಗಳೂ ಕಾರಣ. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಅಂದರೆ ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಇವು ಮೇರು ಶಿಖರದಂತಿವೆ. ಕರ್ನಾಟಕ ಇತಿಹಾಸ ಅಕಾದೆಮಿಯು ಇಂತಹ ಸಂಸ್ಥೆಗಳ ಕೃಪೆಗೆ ಪಾತ್ರವಾಗಿರುವುದು ಅದರ ಸೌಭಾಗ್ಯ. ಈ ಸಂಸ್ಥೆಗಳ ಮುಖ್ಯಸ್ಥರಾದ ಮುರುಘಾಮಠದ ಶ್ರೀ ಶ್ರೀ ಶಿವಯೋಗಿ ಮಹಾಸ್ವಾಮಿಗಳಿಗೂ ಮತ್ತು ಕುಲಪತಿ ಡಾ ॥ ಎಸ್. ರಾಮೇಗೌಡರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಶ್ವವಿದ್ಯಾಲಯದ ಪರವಾಗಿ ಈ ಸಮ್ಮೇಳನವನ್ನು ನಡೆಸುತ್ತಿರುವ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ ಮತ್ತು ಕನ್ನಡ ಸಂಶೋಧನ ಸಂಸ್ಥೆ ಇವುಗಳ ಮುಖ್ಯಸ್ಥರಿಗೂ ನನ್ನ ವಂದನೆಗಳು.

ಈ ನನ್ನ ಭಾಷಣದಲ್ಲಿ ಇತಿಹಾಸ ಸಂಶೋಧನೆಯಿಂದ ಸದ್ಯದ ನೀರಿನ ಸಮಸ್ಯೆಗೆ ಪರಿಹಾರವನ್ನು ಸೂಚಿಸುತ್ತೇನೆ. ಬೇಸಿಗೆಯಲ್ಲಿ ನಮ್ಮ ರಾಷ್ಟ್ರದ ಮುಂದಿರುವ ದಾರುಣ ಸಮಸ್ಯೆ ನೀರಿನ ಸರಬರಾಜಿನದು. ಹಿಂದಿನವರು ಕಂಡುಕೊಂಡ ಪರಿಹಾರ ಇಂದಿನವರಿಗೆ ತಕ್ಷಣ ಉಪಯೋಗವಾಗಬಲ್ಲದು. ಇತಿಹಾಸ ಸಂಶೋಧನೆಯಲ್ಲಿ ಇದು ಒಂದು ಹೊಸಕ್ಷೇತ್ರ. ಈ ಕ್ಷೇತ್ರದಲ್ಲಿ ಸಂಶೋಧನೆ ಅತ್ಯಂತ ಉಪಯುಕ್ತ. ನಮ್ಮ ಪೂರ್ವಜರು ನೀರಿನ ಸಮಸ್ಯೆಯ ಪರಿಹಾರಕ್ಕೆ ಹೆಚ್ಚಾಗಿ ಕೆರೆಗಳನ್ನು-ಬಾವಿಗಳನ್ನು ಅವಲಂಬಿಸಿದ್ದರು. ಮಳೆ ಚೆನ್ನಾಗಿ ಬಂದರೆ ಕೆರೆ-ಬಾವಿಗಳು ತುಂಬಿರುತ್ತವೆ. ಬರಗಾಲ ಬಂದರೂ ಕೆರೆಗಳ ಅಂಗಳದಲ್ಲಿ ಬೆಳೆಗಳನ್ನು ಬೆಳೆದು ಸ್ವಲ್ಪಮಟ್ಟಿಗಾದರೂ ಬರಗಾಲದ ಬವಣೆಯನ್ನು ಕಡಿಮೆಮಾಡಿಕೊಳ್ಳಬಹುದು. ಮಹಾಪೂರ ಬಂದರೂ ಅದರಿಂದ ಆಗುವ ಹಾನಿಯನ್ನು ಕೆರೆಗಳು ಕಡಿಮೆ ಮಾಡಬಲ್ಲವು. ಕೆರೆಗಳಿಂದ ಬಾವಿಯ ನೀರು ಒಣಗುವುದು ಕಡಿಮೆಯಾಗುತ್ತದೆ. ಹೀಗೆ ಎಲ್ಲಾ ಕಾಲಗಳಲ್ಲಿಯೂ ಸ್ಥಿತಿಗಳಲ್ಲಿಯೂ ಕೆರೆಗಳು ಉಪಯುಕ್ತ.

ನೀರಿನ ಸಮಸ್ಯೆಗೆ ಈಗ ನಮಗೆ ಹೊಳೆಯುವ ಪರಿಹಾರಗಳು - ಭಾರೀ ಅಣೆಕಟ್ಟುಗಳು ಮತ್ತು ಕೊಳವೆ ಬಾವಿಗಳು. ಭಾರೀ ಅಣೆಕಟ್ಟುಗಳನ್ನು ಎಲ್ಲಾ ಕಡೆಗಳಲ್ಲಿಯೂ ಕಟ್ಟುವುದು ಸಾಧ್ಯವಿಲ್ಲ. ಎಲ್ಲಿ ಸಾಧ್ಯವೋ ಅಲ್ಲಿ ಕಟ್ಟಬೇಕು. ಆದರೆ ಈಚೆಗೆ ಅವುಗಳ ಬಗೆಗೆ ಜನರಲ್ಲಿ ಮೊದಲಿದ್ದ ಆಕರ್ಷಣೆ ಕಡಿಮೆಯಾದ ಹಾಗೆ ಕಾಣುತ್ತದೆ. ಕೆಲವುಕಡೆ ವಿರೋಧವೂ ಕಂಡುಬರುತ್ತದೆ. ಇದಕ್ಕೆ ಕಾರಣ, ಅವುಗಳ ನಿರ್ಮಾಣಕ್ಕೆ ಹಣದ ಹೊಳೆಯನ್ನು ಹರಿಸಬೇಕು. ಕಟ್ಟಲಿಕ್ಕೆ ಅನೇಕ ವರ್ಷಗಳು ಬೇಕು. ಅವುಗಳನ್ನು ಕಟ್ಟುವಾಗ ಎಷ್ಟೋ ಸಲ ಬಹು ಉಪಯುಕ್ತವಾದ ದಟ್ಟವಾದ ಕಾಡುಗಳು ನಾಶವಾಗುತ್ತವೆ. ಇವುಗಳ ಜತೆಗೆ ಅನೇಕ ಜನರು ತಮ್ಮ ಹೊಲ ಮನೆಗಳನ್ನು ಕಳೆದು ಕೊಳ್ಳುತ್ತಾರೆ, ಮತ್ತು ಅವರ ಪುನರ್ವಸತಿ ಸುಲಭ ಸಾಧ್ಯವಲ್ಲ. ಆದ್ದರಿಂದ ಅಂಥವರು ಇವು ಬೇಡವೇ ಬೇಡವೆನ್ನುತ್ತಾರೆ. ಇಷ್ಟೆಲ್ಲಾ ಅಡಚಣೆಗಳಿದ್ದರೂ ಅವನ್ನು ಸರಿಪಡಿಸಿ ಅಣೆಕಟ್ಟುಗಳನ್ನು ಕಟ್ಟುವುದು ಅವಶ್ಯ.

ನೀರಿನ ಸಮಸ್ಯೆಗೆ ಹೊಚ್ಚ ಹೊಸದಾದ ಪರಿಹಾರ ಕೊಳವೆ ಬಾವಿಗಳು. ಇದಕ್ಕೆ ಅಷ್ಟು ಖರ್ಚಾಗುವುದಿಲ್ಲ. ಮತ್ತು ಅನೇಕ ಕಡೆಗಳಲ್ಲಿ ಅತಿಶೀಘ್ರವಾಗಿ ಅವನ್ನು ನಿರ್ಮಿಸಬಹುದು. ಆದರೂ ಇತ್ತೀಚಿನ ದಿನಗಳಲ್ಲಿ ಅವುಗಳ ಆಳ ದಿನದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತಿದೆ. ಮತ್ತು ಅವುಗಳನ್ನು ನಿರ್ಮಿಸುವಲ್ಲಿ ಲಾಭ ನಷ್ಟಗಳನ್ನು ಮೊದಲೇ ಊಹಿಸುವ ಹಾಗಿಲ್ಲ. ಅದೊಂದು ಲಾಟರಿಯಾಗಿದೆ. ಆದರೂ ಕೊಳವೆ ಬಾವಿಗಳ ಆಳ ಕಡಿಮೆ ಮಾಡುವ ಉಪಕ್ರಮಗಳನ್ನು ಹುಡುಕಬೇಕೇ ಹೊರತು ಅವುಗಳನ್ನು ಕೈಬಿಡುವ ಹಾಗಿಲ್ಲ. ಇಂಥ

ಉಪಕ್ರಮಗಳಲ್ಲಿ ಮುಖ್ಯವಾದದ್ದು ಹಳೆಯ ಕೆರೆಗಳ ಜೀರ್ಣೋದ್ಧಾರ. ಯಾಕೆಂದರೆ ಕೆರೆಗಳಿಂದಲೆ ಬಾವಿಗಳಲ್ಲಿ ನೀರು ಹೆಚ್ಚಾಗುವುದು. ಈ ಸಂಬಂಧವನ್ನು ನಮ್ಮ ಹಿರಿಯರು ಚೆನ್ನಾಗಿ ಅರಿತಿದ್ದರು. ಅದನ್ನು ಮರೆತು ನಾವು ಕೊಳವೆ ಬಾವಿಗಳ ಆಳವನ್ನು ಹೆಚ್ಚಿಸುತ್ತಾ ಹೋಗುತ್ತಿದ್ದೇವೆ. ಕೆರೆಗಳ ಜೀರ್ಣೋದ್ಧಾರದಿಂದ ಈ ಆಳವನ್ನು ಕಡಿಮೆ ಮಾಡಬಹುದು.

ಕೆರೆಗಳ ಜೀರ್ಣೋದ್ಧಾರ ಮಾಡುವ ಮುಂಚೆ ಅವು ಹೇಗೆ ಬೆಳೆದು ಬಂದವೆನ್ನುವುದನ್ನು ನೋಡುವುದು ಅವಶ್ಯ. ಈ ಸಮ್ಮೇಳನದಲ್ಲಿ ಹುಬ್ಬಳ್ಳಿ, ಧಾರವಾಡ ಈ ಅವಳೀ ನಗರಗಳ ಇತಿಹಾಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರುವುದರಿಂದ ಧಾರವಾಡ ಜಿಲ್ಲೆಯಲ್ಲಿ ಕೆರೆಗಳ ಬೆಳವಣಿಗೆಯನ್ನು ಈಗ ಗುರುತಿಸೋಣ. ಹೀಗೆ ಗುರುತಿಸುವುದಕ್ಕೆ ಶಾಸನಗಳು ನಮಗೆ ಸಹಾಯಕ. ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಕ್ರಿ.ಶ. ೭೦೭ರ ಶಿಗ್ಗಾವಿ ಶಾಸನದಲ್ಲಿ ಗುಡ್ನಗೆರೆಯಲ್ಲಿ ಅಂದರೆ ಈಗಿನ ಗುಡಿಗೇರಿಯಲ್ಲಿ ಒಂದರ ಹತ್ತಿರ ಇನ್ನೊಂದು ಒಟ್ಟು ೧೪ ಕೆರೆಗಳಿದ್ದವೆಂದು ಹೇಳಿದೆ. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ೮ ನೇ ಶತಮಾನದ ಆರಂಭದಲ್ಲಿ ಕೆರೆ ಕಟ್ಟುವ ಪದ್ಧತಿ ಜನರಿಗೆ ಚೆನ್ನಾಗಿ ಗೊತ್ತಿತ್ತೆಂದು ಈ ಉದಾಹರಣೆಯಿಂದ ಹೇಳಬಹುದು. ರಾಷ್ಟ್ರಕೂಟರ ಕಾಲದಲ್ಲಿ ಕ್ರಿ.ಶ. ೮೭೨ ರ ಗದಗ ತಾಲ್ಲೂಕಿನ ಚಿಂಚ್ಲಿ ಶಾಸನದಿಂದ ಕೆರೆಗಳ ದುರಸ್ತಿಗೆ ನೀರುಣಿ ಸುಂಕವನ್ನು ವಸೂಲ್ಮಾಡುತ್ತಿದ್ದುದು ವ್ಯಕ್ತವಾಗುತ್ತದೆ. ಮುಂದಿನ ಶತಮಾನದಲ್ಲಿ ಅಂದರೆ ೯೨೭-೩೦ ರಲ್ಲಿ ಬಂಕಾಪುರದ ನಾಲ್ಕನೆಯ ಗೋವಿಂದನ ಶಾಸನದಲ್ಲಿ, ತಪ್ಪು ಮಾಡಿದವರು ಕೊಡುತ್ತಿದ್ದ ದಂಡದ ಹಣವನ್ನು ಕೊಂಡಲಿ ಕೆರೆಯ ದುರಸ್ತಿಗೆ ಉಪಯೋಗಿಸುತ್ತಿದ್ದರೆಂದಿದೆ. ಅದೇ ಕಾಲದಲ್ಲಿ ನರಗುಂದದ ಹತ್ತಿರವಿರುವ ಆಲೂರಿನಲ್ಲಿ ಅದೇ ಉದ್ದೇಶಕ್ಕೆ ಶುಭ ಕಾರ್ಯಗಳ ಸಮಯದಲ್ಲಿ ನಿಧಿಯನ್ನು ಕೂಡಿಸಿ ವ್ಯಯಮಾಡುತ್ತಿದ್ದರೆಂದಿದೆ. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಗದುಗಿನ ಹತ್ತಿರವಿರುವ ಕೋಟ ಉಮಚಗಿಯಲ್ಲಿ ಅಪರಾಧಿಗಳು ಕೊಡುವ ದಂಡವನ್ನು ಕೆರೆಯ ಖರ್ಚಿಗೆ ತೆಗೆದಿಡುತ್ತಿದ್ದರು. ಇದುವರೆಗೂ ಹೇಳಿದುದರ ಸಾರಾಂಶ, ಕೆರೆಗಳನ್ನು ಜನರು ತಮ್ಮ ಆಸ್ತಿಯೆಂದು ತಿಳಿದು ಅವನ್ನು ಕಾಪಾಡುವುದಕ್ಕೆ ಕರಗಳನ್ನು ಮತ್ತು ದಂಡದ ಹಣವನ್ನು ಮೀಸಲಾಗಿಡುತ್ತಿದ್ದರು.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೆರೆಗಳ ಕಟ್ಟುವಿಕೆಗೆ ಮಹಾಪೂರ ಬಂತೆಂದು ಹೇಳಬಹುದು. ಈ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಅವರ ಕಾಲದ ಶಾಸನಗಳು ದೊರಕುತ್ತಿವೆ. ಅವುಗಳಲ್ಲಿ ದೇವಸ್ಥಾನ - ಕೆರೆಗಳ ಉಲ್ಲೇಖಗಳನ್ನು ವಿಪುಲವಾಗಿ ಕಾಣಬಹುದು. ಕೆಲವೇ ಕೆಲವು ಉದಾಹರಣೆಗಳು ಹೀಗಿವೆ: ೧೦೪೫ರಲ್ಲಿ ಮುಗದದಲ್ಲಿ ಸಮಣ ಮತ್ತು ಪೆರ್ಗ್ಗೆರೆಗಳೆನ್ನುವ ಕೆರೆಗಳಿದ್ದವು. ೧೧೨೫ರಲ್ಲಿ ಇವುಗಳಲ್ಲಿ ಒಂದನ್ನು ಪಡಿಸಲಿಸುವುದಕ್ಕೆ ಅಂದರೆ ದುರಸ್ತಿ ಮಾಡುವುದಕ್ಕೆ ಒಂದು ಗದ್ದೆಯನ್ನು ಊರಿನವರು ದಾನಮಾಡಿದರು. ಇಂತಹ ಗದ್ದೆಗಳಿಗೆ ಇತರ ಶಾಸನಗಳಲ್ಲಿ ಬಿತ್ತುವಟ್ಟ ಅಥವಾ ಬಿತ್ತುವಾಟವೆಂದು ಕರೆದಿದ್ದಾರೆ. ಮುಗದದಲ್ಲಿ ಈ ಬಿತ್ತುವಟ್ಟವನ್ನು ಅರಸರು ಅರವತ್ತೊಕ್ಕಲು ಅಂದರೆ ರೈತರು ರಕ್ಷಿಸುವರೆಂದು ಹೇಳಿದೆ. ಈಗ ಆ ಊರಿನ ಹೊರಗಿರುವ ದೊಡ್ಡದಾದ ಹೊನ್ನವ್ವನ ಕೆರೆ, ಈ ಶಾಸನೋಕ್ತವಾದ ಕೆರೆ. ಅದು ಕನಿಷ್ಠ ಒಂದು ಸಾವಿರ ವರ್ಷ ಉಪಯುಕ್ತವಾಗಿದೆ. ೧೧೮೬ರಲ್ಲಿ ಧರ್ಮಪುರದಲ್ಲಿ (ಈಗಿನ ಡಂಬಳದಲ್ಲಿ) ''ಎಸೆವ ಗೋನ ಸಮುದ್ರದ ಅಗರ್‍ತ್ತ ತುಂಬು ಕಲ್ಲಿನ ಮರಗೆಲಸ ಮೊದಲಾಗಿನ ಕೆಲ ಕೆಲಸಗಳ ಮಾಡುವಂತಾಗಿ'' ಊರಿನ ಮುಖ್ಯಸ್ಥರು ತೋಟಗಳ ಮೇಲಿನ ಸುಂಕವನ್ನು ಬಿಟ್ಟರು. ಅಂದರೆ ಆ ಕೆರೆಯ ಹೂಳು ತೆಗೆಯುವುದಕ್ಕೆ ಮತ್ತು ದುರಸ್ತಿಗೆ ಬೇಕಾದ ಕಲ್ಲು ಮತ್ತು ಮರ ಗೆಲಸವನ್ನು ಮಾಡುವುದಕ್ಕೆ ತೋಟಗಳ ಮೇಲಿನ ಸುಂಕವನ್ನು ಉಪಯೋಗಿಸಬಹುದಾಗಿತ್ತು. ತೋಟಗಳ ಮೇಲಿನ ಸುಂಕ ಎಷ್ಟು ನ್ಯಾಯ ಸಮ್ಮತವಾದುದೆಂದರೆ ಆ ತೋಟಗಳಿದ್ದುದು ಆ ಕೆರೆಗಳಿಂದ. ಆದ್ದರಿಂದ ಆ ಕೆರೆಯ ದುರಸ್ತಿಗೆ ಆ ತೋಟಗಳ ಉತ್ಪನ್ನದ ಸ್ವಲ್ಪ ಭಾಗವನ್ನು ಉಪಯೋಗಿಸುತ್ತಿದ್ದುದು ಯೋಗ್ಯವಾದದ್ದು. ತೋಟಗಾರರು ಈ ಕರವನ್ನು ಕೊಡಲಿಕ್ಕೆ ಹಿಂಜರಿಯುವ ಹಾಗಿರಲಿಲ್ಲ. ಇಂತಹ ಒಳ್ಳೆಯ ವ್ಯವಸ್ಥೆ ಮಾಡಿದ್ದರಿಂದ ಮತ್ತು ಗ್ರಾಮಸ್ಥರು ಅದನ್ನು ನಡೆಸಿಕೊಂಡು ಬಂದದ್ದರಿಂದ ಇವತ್ತಿಗೂ ಆ ಕೆರೆ ಉಳಿದುಕೊಂಡು ಬಂದಿದೆ. ಧಾರವಾಡ ಜಿಲ್ಲೆಯಲ್ಲಿ ಇದು ಒಂದು ಅತಿದೊಡ್ಡ ಕೆರೆ. ಇದು ೪೦೦೦ ಅಡಿ ಉದ್ದ ೨೫ ಅಡಿ ಎತ್ತರವಿದೆ.

ಮಣಗಂಡಿಯಲ್ಲಿ (ಹಿಂದಿನ ಮಣಿಗಂದಗೆ) ಸು. ೧೨೦೩-೧೧ರಲ್ಲಿ ಪವಿತ್ರದ ಪರ್ವವೆನ್ನುವ ಒಂದು ಭಾರೀ ಉತ್ಸವವಾಯಿತು. ಅದನ್ನು ನೋಡಲಿಕ್ಕೆ ಭಕ್ತರು ದೂರದೂರದ ಊರುಗಳಿಂದ ಬಂದಿದ್ದರು. ನೀರಸಾಗರದಿಂದಲೂ ಬಂದಿದ್ದರು. ಈ ನೀರಸಾಗರ ಈಗಲೂ ಅದೇ ಹೆಸರಿನ ದುಮ್ಮವಾಡದ ಹತ್ತಿರವಿರುವ ಊರಾಗಿರಬೇಕು. ಕೆಲವರು ಈ ನೀರಸಾಗರ ಮಣಗಂಡಿಯ ಉತ್ತರಕ್ಕಿರುವ ನೀರಲ ಕಟ್ಟೆ, ಎಂದು ಹೇಳುತ್ತಾರೆ. ಒಂದುವೇಳೆ ಈ ಶಾಸನದಲ್ಲಿ ಹೇಳಿರುವ ನೀರಸಾಗರ ಬೇರೆಯಾದರೂ, ದುಮ್ಮವಾಡದ ನೀರಸಾಗರ ಬಹಳ ಹಳೆಯದು ಮತ್ತು ಆ ಊರಿಗೆ ಆ ಹೆಸರು ಇರಬೇಕಾದರೆ ಅಲ್ಲಿ ನೀರಿನ ಸಾಗರವಿದ್ದೇ ಇರಬೇಕು. ಆ ಊರಿನಲ್ಲಿ ಹರಿಯುವ ಬೇಡ್ತಿನದಿಗೆ ಅಲ್ಲಿ ಒಡ್ಡು ಕಟ್ಟಲು ಯೋಗ್ಯವಾದ ನಿವೇಶನವಿದೆ. ಅಲ್ಲಿ ಒಡ್ಡುಕಟ್ಟಿ ಕೆರೆಯನ್ನು ನಿರ್ಮಿಸಿದ್ದರಿಂದ ಆ ಊರಿಗೆ ಆ ಹೆಸರಿಟ್ಟರೆಂದು ತಿಳಿಯಬಹುದು. ಮುಂದೆ ಯಾವಾಗಲೊ ನಾದುರಸ್ತಾಗಿ ಕೆರೆ ನಾಶವಾಗಿರಬೇಕು. ಊರಿನ ಹೆಸರು ಮಾತ್ರ ಉಳಿದಿರಬೇಕು. ಮುಂಬಯಿ ಸರ್ಕಾರದವರು ಸ್ವಾತಂತ್ರ್ಯದ ಹೊತ್ತಿಗೆ ಅದನ್ನು ದುರಸ್ತಿಮಾಡಿಸಿ ಹುಬ್ಬಳ್ಳಿ - ಧಾರವಾಡಗಳಿಗೆ ನೀರು ಸರಬರಾಜಿನವ್ಯವಸ್ಥೆ ಮಾಡಿದ್ದಾರೆ. ಕೆರೆಯ ಜೀರ್ಣೋದ್ಧಾರದಿಂದ ಆಗುವ ಲಾಭಕ್ಕೆ ಈ ಯೋಜನೆ ಉತ್ತಮ ನಿದರ್ಶನ.

ಕಲ್ಯಾಣ ಚಾಲುಕ್ಯ - ಯಾದವರ ರಾಜಮನೆತನಗಳ ನಂತರ ವಿಜಯನಗರದ ಅರಸರು ನೀರಾವರಿಗೆ ವಿಶೇಷ ಲಕ್ಷ್ಯಕೊಟ್ಟರು. ಅವರ ಕಾಲದಲ್ಲಿ ಹಳೇಹುಬ್ಬಳ್ಳಿಗೆ ರಾಯರ ಹುಬ್ಬಳ್ಳಿಯೆನ್ನುತ್ತಿದ್ದರು. ರಾಯಾಪುರದ ಕೆರೆ, ಕೃಷ್ಣರಾಯ ಸಮುದ್ರ, ಸದಾಶಿವ ಸಮುದ್ರ - ಇವು ಅವುಗಳ ಹೆಸರಿನ ಮೇಲಿನಿಂದ ಅವರ ಕಾಲದ್ದೆಂದು ಹೇಳಬಹುದು. ಹಾನಗಲ್ಲಿಗೆ ೬ ಮೈಲಿ ದೂರದಲ್ಲಿ ಶೃಂಗೇರಿಯ ಬಳಿಯಲ್ಲಿ ಧರ್ಮಾ ನದಿಗೆ ಕಟ್ಟಿರುವ ಒಡ್ಡು ಬಹು ಭದ್ರವಾಗಿದೆ. ತಲೆಯ ಮೇಲೆ ೧೬ ಅಡಿ ಅಗಲ, ತಳದಲ್ಲಿ ೪೦ ಅಡಿ ಅಗಲ ಮತ್ತು ೧೦ ಅಡಿ ಉದ್ದವಿದೆ. ಈ ಒಡ್ಡನ್ನು ವಿಜಯನಗರದ ಅರಸರು ಕಟ್ಟಿರಬೇಕೆಂದು ಹೇಳುತ್ತಾರೆ. ಇತ್ತೀಚಿಗೆ ಇನ್ನೊಂದು ಒಡ್ಡನ್ನು ನಮ್ಮ ಸರಕಾರದವರು ಕಟ್ಟಿ ಅದರಿಂದ ಬರುವ ಹೆಚ್ಚು ನೀರನ್ನು ಹಳೆಯ ಕಾಲುವೆಗಳಿಗೆ ಒದಗಿಸುತ್ತಿದ್ದಾರೆ. ಹಳೆಯ ಕೆರೆಯಿಂದ ಹೆಚ್ಚು ಉಪಯೋಗ ಪಡೆಯುವ ಈ ಯೋಜನೆ ಸದ್ಯದ ಪರಿಸ್ಥಿತಿಯಲ್ಲಿ ಅನುಕರಣೀಯ.

ವಿಜಯನಗರದ ರಾಜರ ಕಾಲದಲ್ಲಿ ಕಟ್ಟಿದ ಅಣೆಕಟ್ಟನ್ನು ಇದಕ್ಕಿಂತ ಇನ್ನೂ ಚೆನ್ನಾಗಿ ಉಪಯೋಗಿಸಿಕೊಂಡ ಉದಾಹರಣೆಯನ್ನು ಹಿರೇಕೇರೂರು ತಾಲೂಕಿನ ಮದಗ-ಮಾಸೂರಿನಲ್ಲಿ ನೋಡಬಹುದು. ಈ ಕೆರೆಗೆ ಸಂಬಂಧಿಸಿದ ಬಲಿದಾನದ ಕುರಿತ ಕೆಲವು ಜನಪದ ಗೀತೆಗಳಿವೆ. ಒಂದು ಕತೆಯ ಪ್ರಕಾರ ಕೆರೆಯ ಒಡ್ಡು ನಿಲ್ಲದಿದ್ದಾಗ ಒಡ್ಡರ ಪ್ರಮುಖನ ಮಗಳು ಲಕ್ಷ್ಮಿ ತನ್ನನ್ನು ಕೆರೆಗೆ ಆಹುತಿಯನ್ನಾಗಿ ಅರ್ಪಿಸಿಕೊಂಡಳೆಂದೂ ಅವಳ ತ್ಯಾಗದಿಂದ ಕೆರೆಯ ಒಡ್ಡು ನಿಂತು ನೀರು ತುಂಬಿತೆಂದು ಹೇಳುತ್ತಾರೆ. ಕೆರೆಯ ತೂಬಿನ ಬಳಿ ಆಕೆಯ ಹೆಸರಿನ ಒಂದು ದೇವಾಲಯವಿದೆ.

ಈ ಬಲಿದಾನದಿಂದ ಮಾತ್ರವಲ್ಲದೆ, ಕಟ್ಟಡದ ಗಾತ್ರದಿಂದಲೂ ಆ ಕೆರೆ ಅದ್ಭುತವಾಗಿದೆ. ತುಂಗಭದ್ರೆಯ ಉಪನದಿ ಕುಮುದ್ವತಿಗೆ ಮಾಸೂರಿಗೆ ೪ ಮೈಲಿ ದೂರದಲ್ಲಿ ಎರಡು ಗುಡ್ಡಗಳ ನಡುವೆ ಈ ಒಡ್ಡನ್ನು ಕಟ್ಟಿದ್ದಾರೆ. ತಳದಲ್ಲಿ ಈ ಒಡ್ಡು ಸು. ೯೦೦ ಅಡಿ ಅಗಲ, ತಲೆಯಲ್ಲಿ ಸು. ೫೦೦ ಅಡಿ ಅಗಲವಿದೆ. ಒಡ್ಡಿನ ಎತ್ತರ ೧೦೦ ಅಡಿ ಮತ್ತು ಉದ್ದ ೧೮೫೦ ಅಡಿ. ವಿಜಯನಗರದ ರಾಜರು ಕಟ್ಟಿದ ಮಣ್ಣಿನ ಒಡ್ಡಿನಲ್ಲಿ ಇದರಷ್ಟು ಎತ್ತರವಾದ ಒಡ್ಡು ಇನ್ನೊಂದಿಲ್ಲ. ಕೆರೆ ತುಂಬಿದಾಗ ೧೦-೧೫ ಮೈಲಿ ಉದ್ದವಿರುತ್ತದೆ.

ಬ್ರಿಟಿಷರು ಈ ಭಾಗವನ್ನು ಗೆದ್ದಾಗ ಈ ಕೆರೆಯಿಂದ ಯಾವ ಉಪಯೋಗವೂ ಆಗುತ್ತಿರಲಿಲ್ಲ. ಕಾರಣ ಕೆರೆಯ ನೀರು, ತೂಬು ಮತ್ತು ಕಾಲುವೆಗಳಿಗಿಂತ ಕೆಳಮಟ್ಟದಲ್ಲಿತ್ತು. ಕರ್ನಲ್ ಫ್ಲೇಫೇರ್ ಎನ್ನುವ ಬ್ರಿಟಿಷ್ ಎಂಜನಿಯರನು ಬಹಳ ಪ್ರಯಾಸಪಟ್ಟು ನೀರಿನ ಮಟ್ಟಕ್ಕೆ ತೂಬು ಕಾಲುವೆಗಳನ್ನು ನಿರ್ಮಿಸಿ, ಈ ಕೆರೆಯ ಜೀರ್ಣೋದ್ಧಾರ ಮಾಡಿ ಮಾಸೂರಿನವರಿಗೆ ಮಹದುಪಕಾರ ಮಾಡಿದನು.

ಇಷ್ಟು ಎತ್ತರದ ಮಣ್ಣಿನ ಒಡ್ಡನ್ನು ಹೇಗೆ ಕಟ್ಟಿದರು ಮತ್ತು ಅದರಲ್ಲಿ ನೀರು ಸೋರದಂತೆ ಹೇಗೆ ನೋಡಿಕೊಂಡರು, ಇವು ನಮಗೆ ಆಶ್ಚರ್ಯವನ್ನುಂಟುಮಾಡುತ್ತವೆ. ಅದನ್ನು ಜೀರ್ಣೋದ್ಧಾರ ಮಾಡಿದ ಫ್ಲೇಫೇರನಿಗೂ ಆಶ್ಚರ್ಯವನ್ನುಂಟು ಮಾಡಿರಬೇಕು. ಆಗ ಅವನು ಏನು ಹೇಳಿದನೆಂದರೆ ೧೮೬೬ರಲ್ಲಿ ಯುರೋಪಿನ ಕೆರೆಗಳಿಗೆ ಮದಗದ ಕೆರೆಯನ್ನು ಹೋಲಿಸಿದರೆ ಯುರೋಪಿನ ಕೆರೆಗಳು ಅತಿ ಚಿಕ್ಕವಾಗಿದ್ದವೆನ್ನುತ್ತಾನೆ. ಅಂದರೆ ಅಂದು ಯುರೋಪಿನವರಿಗೆ ಮದಗದ ಕೆರೆಯಷ್ಟು ದೊಡ್ಡ ಕೆರೆಯನ್ನು ಕಟ್ಟಲು ಬರುತ್ತಿರಲಿಲ್ಲವೆಂದರ್ಥ. ಇದು ವಿಜಯನಗದವರಿಗೆ ೫೦೦ ವರ್ಷಗಳ ಹಿಂದೆ ಸಾಧ್ಯವಾಗಿತ್ತು. ವಿಜಯನಗರ ಅರಸರ ಸಾಧನೆ ಬಗ್ಗೆ, ವಿದ್ಯಾ ವಿಜಯನಗರ ಹಂಪಿ Heritage Trust ಮತ್ತು ಅಕಾದೆಮಿ ಕಳೆದ ಫೆಬ್ರವರಿಯಲ್ಲಿ ಒಂದು ವಿಚಾರ ಸಂಕಿರಣ ನಡೆಸಿದವು. ಅದರ ವರದಿ ಪ್ರಕಟಣೆಯ ಸಿದ್ಧತೆಯಲ್ಲಿದೆ.

ನಮ್ಮ ಕೆರೆಗಳ ಬಗೆಗೆ ಬ್ರಿಟಿಷರ ಧೋರಣೆಯನ್ನು ನಾವು ತಿಳಿದುಕೊಳ್ಳಬೇಕು. ಅವರು ಮದಗದಂತಹ ಭಾರೀ ಕೆರೆಗಳನ್ನು ಸಂರಕ್ಷಿಸಿದರು. ಕಾರಣವೇನೆಂದರೆ, ಅವುಗಳಿಂದ ಕಂದಾಯ ಬರುತ್ತಿತ್ತು; ಸಾವಿರಾರು ಸಣ್ಣ ಕೆರೆಗಳನ್ನು ಅಲಕ್ಷಿಸಿದರು. ಕಾರಣ ಇವುಗಳಿಂದ ವರಮಾನವಿರಲಿಲ್ಲ. ಈ ಕೆರೆಗಳನ್ನು ಹಿಂದೆ ಜನರೇ ದುರಸ್ತು ಮಾಡಿಕೊಳ್ಳುತ್ತಿದ್ದರು. ಆದರೆ ಬ್ರಿಟಿಷ್ ಸರ್ಕಾರವು ಹಿಂದಿನ ಸರ್ಕಾರಗಳಿಗಿಂತ ಕಂದಾಯ ಹೆಚ್ಚು ವಸೂಲ್ಮಾಡಿ ಜನರಲ್ಲಿ ಕೆರೆಗಳ ಮೇಲೆ ಖರ್ಚುಮಾಡಲು ಹಣವಿಲ್ಲದ ಹಾಗೆ ಮಾಡಿತು. ಈ ಕೆರೆಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಜನರಿಗೆ ಮುಖಂಡತ್ವ ಬೇಕು. ಈ ಮುಖಂಡತ್ವವನ್ನು ಊರಿನ ಗೌಡರು ಒದಗಿಸುತ್ತಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಗೌಡರ ಮಹತ್ವ ಕಡಿಮೆಯಾಯಿತು. ಇದರಿಂದ ಊರಿನಲ್ಲಿಯ ಒಗ್ಗಟ್ಟು ಹೋಯಿತು. ಜತೆಗೆ ಹಳ್ಳಿಯವರಲ್ಲಿ ತಮ್ಮ ಎಲ್ಲಾ ಅವಶ್ಯಕತೆಗಳಿಗೂ ಸರ್ಕಾರವನ್ನು ಅವಲಂಬಿಸುವ ಪ್ರವೃತ್ತಿ ಬೆಳೆಯಿತು. ಪ್ರಜಾತಂತ್ರವು ಈ ಪ್ರವೃತ್ತಿಯನ್ನು ಇನ್ನೂ ಹೆಚ್ಚುಮಾಡಿತು.

ನಮ್ಮ ಕೆರೆಗಳ ಈಗಿನ ದುರಸ್ಥಿಗೆ ಇನ್ನೂ ಎರಡು ಕಾರಣಗಳನ್ನು ಹೇಳಬಹುದು. ಒಂದು ಅವುಗಳ ಜಲಾನಯನ ಪ್ರದೇಶ ಕಡಿಮೆಯಾಗಿರುವುದು ಮತ್ತು ಎರಡನೆಯದು ಅವುಗಳ ಸುತ್ತಲೂ ಗಿಡಮರಗಳು ಇಲ್ಲದಿರುವುದು. ಜಲಾನಯನ ಪ್ರದೇಶವೆಂದರೆ ಕೆರೆಗೆ ನೀರು ಬರುವ ಪ್ರದೇಶ. ಈ ಪ್ರದೇಶವು ಸರ್ಕಾರಕ್ಕೆ ಸೇರಿದ್ದೆಂದು ಅದನ್ನು ಜಮೀನು ಇಲ್ಲದ ಬಡವರಿಗೆ ದಾನವಾಗಿ ಕೊಡಲಾಗಿದೆ. ಇನ್ನು ಕೆಲವು ಕಡೆ ಗಟ್ಟುಳ್ಳವರು ಈ ಪ್ರದೇಶವನ್ನು ಅಪಹರಿಸಿ ಉಪಯೋಗಿಸುತ್ತಿದ್ದಾರೆ. ಈ ಕ್ರಮಗಳಿಂದ ಕೆರೆಯಲ್ಲಿ ಜಲಸಂಗ್ರಹ

ಕಡಿಮೆಯಗಿದೆ. ಹಿಂದೆ ಎಲ್ಲಾ ಕೆರೆಗಳ ಸುತ್ತ ಮುತ್ತ ಗಿಡಗಳನ್ನು ನೆಟ್ಟಿರುವರು. ಈ ಗಿಡಗಳು ಮಳೆಯ ರಭಸವನ್ನು ತಡೆದು ಕೆರೆಗೆ ನಿಧಾನವಾಗಿ ನೀರು ಸಂಗ್ರಹವಾಗುವ ಹಾಗೆ ಮಾಡುತ್ತಿದ್ದವು ಮತ್ತು ಕೆರೆಯೊಳಗೆ ಹೂಳು ಸೇರುವುದನ್ನು ಕಡಿಮೆ ಮಾಡುತ್ತಿದ್ದವು. ಈಗ ಅವುಗಳಿಲ್ಲ.

ಗಿಡಗಳಿಗೂ ಅಥವಾ ಅರಣ್ಯಗಳಿಗೂ ನೀರಿಗೂ ನಿಕಟ ಸಂಬಂಧವಿದೆ. ಒಬ್ಬ ಪರಿಸರವಾದಿಯ ಪ್ರಕಾರ ಭಾರೀ ಅಣೆ ಕಟ್ಟುಗಳನ್ನು ಕಟ್ಟುವುದಕ್ಕಿಂತ ವಿಪುಲವಾಗಿ ಕಾಡುಗಳನ್ನು ಬೆಳಸುವುದು ಸೂಕ್ತ. ಅಣೆಕಟ್ಟುಗಳ ಕೆಲಸವನ್ನು ಕಾಡುಗಳು ಕಡಿಮೆ ಖರ್ಚಿನಲ್ಲಿ ಮಾಡುತ್ತವೆ. ಜತೆಗೆ ಜಲಜಂತು ಮತ್ತು ಪಕ್ಷಿಗಳ ಸುರಕ್ಷಣೆ, ಮೀನುಗಾರಿಕೆ ಬೆಳವಣಿಗೆ ಇವೆಲ್ಲಾ ಸಾಧ್ಯವಾಗುತ್ತದೆಂದು ಪರಿಸರವಾದಿಗಳು ಹೇಳುತ್ತಾರೆ. ಇದಲ್ಲದೆ ಅಂತರ್ಜಲವು ಹೆಚ್ಚಾಗುತ್ತದೆ ಎನ್ನುತ್ತಾರೆ.

ನಮ್ಮ ದೃಷ್ಟಿಕೋನ ಅಣೆಕಟ್ಟುಗಳಿಂದ ಅರಣ್ಯಗಳ ಬೆಳವಣಿಗೆ ಕಡೆ ಹೋಗಬೇಕೆಂದು ಇವರು ವಾದಿಸುತ್ತಾರೆ. ಕೆರೆಗಳ ಜೀರ್ಣೋದ್ಧಾರ ವಿಷಯದಲ್ಲಿ ನನ್ನ ಒಂದೆರಡು ಸೂಚನೆಗಳು ಹೀಗಿವೆ:

(೧) ದೊಡ್ಡ ದೊಡ್ಡ ಕೆರೆಗಳನ್ನು ಜೀರ್ಣೋದ್ಧಾರ ಮಾಡಲು ವಿಶ್ವಬ್ಯಾಂಕ್‌ನಿಂದ ನಮ್ಮ ಸರ್ಕಾರದವರು ಸಾಲವನ್ನು ತೆಗೆದು ಕೊಂಡಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ. ಆದರೆ ಈ ಕೆಲಸ ನಡೆದಾಗ ಮೊದಲಿನಿಂದಲೂ ಜಿಲ್ಲಾ ಪಂಚಾಯಿತ್ತಿಗಳಂತಹ ಸ್ಥಳೀಯ ಸಂಸ್ಥೆಗಳ ಸಹಕಾರವನ್ನು ಪಡೆಯಬೇಕು. ಕೆರೆಯ ಜೀರ್ಣೋದ್ಧಾರವಾದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಆ ಕೆರೆಗೆ ಸಂಬಂಧಪಟ್ಟ ಎಲ್ಲಾ ಜವಾಬ್ದಾರಿಯನ್ನು ವಹಿಸಬೇಕು. ಈ ಜವಾಬ್ದಾರಿಯನ್ನು ಸರ್ಕಾರವು ಹೊರಬಾರದು. ಇದನ್ನು ನಮ್ಮ ಕೆರೆಗಳ ಪೂರ್ವೇತಿಹಾಸದಿಂದ ಕಲಿಯಬೇಕು.

(೨) ಸಣ್ಣ ಪುಟ್ಟ ಕೆರೆಗಳನ್ನು ಮತ್ತು ಬಾವಿಗಳನ್ನು ಸ್ಥಳೀಯ ಅಧಿಕಾರಿಗಳು ಪುರ ಪ್ರಮುಖರ ಸಹಕಾರದಿಂದ ದುರಸ್ತು ಮಾಡಿಸಿ ಅವುಗಳ ನಿರ್ವಹಣೆಯನ್ನು ಸ್ಥಳೀಯರಿಗೇ ಬಿಡಬೇಕು. ಈ ದಿಶೆಯಲ್ಲಿ ಏನು ಸಾಧ್ಯ ಎನ್ನುವುದನ್ನು ಒಂದೆರಡು ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.

(೩) ಹೋದವರ್ಷ ಮಧುಗಿರಿಯಲ್ಲಿ ಸ್ಥಳೀಯ ತಹಶಿಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು ನಗರ ಪ್ರಮುಖರ ಸಹಕಾರದಿಂದ ಆ ಊರಿನಲ್ಲಿಯ ಒಂದು ಕಲ್ಯಾಣಿಯನ್ನು ಜೀರ್ಣೋದ್ಧಾರಮಾಡಿದರು. ಕಲ್ಯಾಣಿಯ ಸುತ್ತಲೂ ಬಡವರು ಗುಡಿಸಲುಗಳನ್ನು ಹಾಕಿಕೊಂಡಿದ್ದರು. ಅವರನ್ನು ಸ್ಥಳಾಂತರಿಸಿ, ಕಲ್ಯಾಣಿ ಸ್ವಚ್ಛ ಮಾಡಿದ್ದರಿಂದ ಜನರ ಉಪಯೋಗಕ್ಕೆ ಅದು ಯೋಗ್ಯವಾಯಿತು. ಈ ಕಲ್ಯಾಣಿಯು ೫೦ ಅಡಿ ಅಗಲ ೫೦ ಅಡಿ ಉದ್ದ ಮತ್ತು ೫೦ ಅಡಿ ಆಳವಿದೆ. ಊರ ಮಧ್ಯ ಇರುವ ಈ ಕಲ್ಯಾಣಿಯ ಮೇಲೆ ಗಿಡ ಗಂಟಿಗಳು ಬೆಳೆದು ಅದು ನಿರುಪಯೋಗವಾಗಿತ್ತು. ಗುಡಿಸಲುಗಳಿದ್ದುದರಿಂದ ಕೊಳಚೆ ಪ್ರದೇಶವಾಗಿತ್ತು. ಈಗ ಪ್ರವಾಸಿ ತಾಣವಾಗಿದೆ. ಮಧುಗಿರಿಯಲ್ಲಿ ಸಾಧ್ಯವಾದದ್ದು ಅದೇ ತರಹದ ಅಧಿಕಾರಿಗಳ ಮತ್ತು ಜನರ ಸಹಕಾರದಿಂದ ಇತರ ಕಡೆಗಳಲ್ಲಿಯೂ ಸಾಧ್ಯ.

(೪) ಒಬ್ಬ ವ್ಯಕ್ತಿಯಿಂದ ಎಷ್ಟು ಕೆಲಸವಾಗಬಹುದೆಂಬುದನ್ನು ಉಡುಪಿಯಲ್ಲಿ ಶ್ರೀ ಧನ್ಯವಂತ ಪೈ ಎನ್ನುವ ವ್ಯಾಪಾರೀ ಹವ್ಯಾಸಿ ಸಮಾಜಸೇವಕ ತೋರಿಸಿಕೊಟ್ಟಿದ್ದಾರೆ.

ತಮ್ಮೂರಿನ ಜನರು ನೀರಿಗಾಗಿ ಪರದಾಡುವುದನ್ನು ಕಡಿಮೆ ಮಾಡಲಿಕ್ಕೆ ನಿರುಪಯೋಗಿ ಬಾವಿಗಳನ್ನು ಉಪಯೋಗಿಸಲು ಬರುವಹಾಗೆ ಮಾಡುತ್ತಿದ್ದಾರೆ. ಇಂಥ ಬಾವಿಗಳನ್ನು ದುರಸ್ತು ಮಾಡಿದರೆ ದಿನಾ ೫೦೦ ಮನೆಗಳಿಗೆ ನೀರು ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ. ಈ ಮಹಾಶಯರು ಪ್ರತೀ ಭಾನುವಾರ ಕೆಲವು ಸ್ವಯಂ ಸೇವಕರ ಜತೆಗೆ ಬಾವಿಗಳನ್ನು ಸ್ವಚ್ಛಮಾಡಿ ಅವುಗಳಿಗೆ ಗಡೆಗಳನ್ನು ಕೂಡಿಸಿ ಹಗ್ಗವನ್ನು ಒದಗಿಸುತ್ತಿದ್ದಾರೆ. ಇವರ ಪ್ರಯತ್ನ ಸ್ತುತ್ಯ ಮತ್ತು ಅನುಕರಣೀಯ.

ನೀರಿನ ಸಮಸ್ಯೆ ಭೀಕರವಾಗಿದೆ. ಮೇಲೆ ಹೇಳಿದ ಪರಿಹಾರಕ್ರಮಗಳು ತೀರ ಚಿಕ್ಕವು. ಆದರೂ ಎಲ್ಲಿಂದಲಾದರೂ ಪರಿಹಾರಕ್ರಮವನ್ನು ಶುರುಮಾಡಬೇಕೆಂದು ಈ ನಾಲ್ಕು ಮಾತುಗಳನ್ನು ಹೇಳಿದ್ದೇನೆ.

ಇನ್ನು ಒಂದು ಮಾತು ಉಳಿದಿದೆ, ಹತ್ತು ವರ್ಷ ಕರ್ನಾಟಕ ಇತಿಹಾಸ ಅಕಾದೆಮಿಯ ಅಧ್ಯಕ್ಷನಾಗಿರುವ ಸುಯೋಗ ನನ್ನದಾಗಿತ್ತು. ಈ ಸಲದಿಂದ ಬೇರೆಯವರನ್ನು ಆರಿಸಿ ಎಂದು ಕೇಳಿಕೊಂಡಿದ್ದೇನೆ. ನಾನು ಅಧ್ಯಕ್ಷನೆಂದು ಉತ್ಸವ ಮೂರ್ತಿಯಾಗಿದ್ದೆ. ಕೆಲಸ ಮಾಡುತ್ತಿದ್ದವರು ಉಳಿದ ಪದಾಧಿಕಾರಿಗಳು. ಅವರ ಜತೆಗೆ ಕೆಲಸ ಮಾಡುವುದು ಎಷ್ಟು ಹಿತಕರವಾಗಿತ್ತೆಂದು ಹೇಳುವುದು ಸುಲಭವಲ್ಲ. ಇವರ ಸಂಖ್ಯೆ ಕೈಬೆರಳಿನಲ್ಲಿ ಎಣಿಸುವಷ್ಟು. ಇವರು ಇತಿಹಾಸದ ಉಜ್ವಲ ಪ್ರೇಮಿಗಳು. ಸೇವಾ ಮನೋಭಾವ ಉಳ್ಳವರು. ಈ ಸಂಸ್ಥೆಯನ್ನು ಹುಟ್ಟಿಹಾಕಿ ಬೆಳಸುವ ಸಂಕಲ್ಪಮಾಡಿದವರು. ಇವರ ಕೆಲಸ ರಾಜ್ಯದ ಇತರ ಇತಿಹಾಸ ಪ್ರೇಮಿಗಳ ಮತ್ತು ಸಂಶೋಧಕರ ಮೆಚ್ಚಿಗೆಯನ್ನು ಪಡೆದು ಅವರಿಂದ ಇವರಿಗೆ ಪ್ರೋತ್ಸಾಹ ಸಿಕ್ಕಿದೆ. ಇದರಿಂದ ಹತ್ತೇ ಹತ್ತು ವರ್ಷಗಳಲ್ಲಿ ಒಂದು ಅಪರೂಪದ ಸಂಸ್ಥೆ

ಸ್ಥಾಪಿತವಾಗಿದೆ. ನನಗೆ ಗೊತ್ತಿರುವ ಮಟ್ಟಿಗೆ ರಾಜ್ಯದಲ್ಲಿ ಇಷ್ಟು ಬೇಗನೆ ಇಷ್ಟು ಭದ್ರವಾದ ತಳಹದಿಯ ಮೇಲೆ ನಿಂತಿರುವ ಸಂಸ್ಥೆ ಇನ್ನೊಂದಿಲ್ಲ. ಇದರಲ್ಲಿಯ ಸ್ವಯಂಸೇವಕರ ನಿಸ್ವಾರ್ಥ ಸೇವೆಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಒಬ್ಬರಿಗೆ ನೀವು ಇಂಥ ಊರಿಗೆ ಹೋಗಿ ಬನ್ನಿ, ಹೋಗಿ ಬರುವ ಖರ್ಚನ್ನು ತೆಗೆದುಕೊಳ್ಳಿ ಎಂದರೆ, ಅವರ ಉತ್ತರ ಮರೆಯುವ ಹಾಗಿಲ್ಲ. ಅಲ್ಲಿಗೆ ಹೋಗಿಬರಲು ಆಗುವ ಖರ್ಚನ್ನು ಅಕಾದೆಮಿಯಿಂದ ಕೇಳುವಷ್ಟು ಬಡವ ನಾನಲ್ಲ. ಇಂಥವರು ಈ ಸಂಸ್ಥೆಯಲ್ಲಿ ಇರುವವರೆಗೂ ಈ ಸಂಸ್ಥೆಯ ಬೆಳವಣಿಗೆಯನ್ನು ಯಾರು ತಡೆಯಲಾಗುವುದಿಲ್ಲ.

ಕೆರೆಗಳ ರಕ್ಷಣೆಗೆ ಕರೆಕೊಟ್ಟಂತೆ ಐತಿಹಾಸಿಕ ಪರಂಪರೆಯ ರಕ್ಷಣೆಗೂ ಕರೆ ಕೊಡುತ್ತಿದ್ದೇನೆ. ನಮ್ಮ ಪ್ರಾಚೀನ ದೇಗುಲ, ಶಾಸನ, ಕೋಟೆ, ಮಸೀದಿ, ತಾಡೋಲೆ, ಕಾಗದ ಪತ್ರಗಳ ರಕ್ಷಣೆಗೆ ಚಳವಳಿಯನ್ನು ಅಕಾದೆಮಿ ನಡೆಸಿದೆ. '**ಐತಿಹಾಸಿಕ ಪರಂಪರೆ ಉಳಿಸಿ**' ಸಪ್ತಾಹ ಪ್ರತೀವರ್ಷ ಸಾಗುತ್ತಿದೆ. ಅಕಾದೆಮಿಯ ಸದಸ್ಯರು ಕರ್ನಾಟಕದ ಇತಿಹಾಸದ ಬಗ್ಗೆ ಅಭಿಮಾನ ತಳೆದು ರಾಜ್ಯದ ಎಲ್ಲ ತಾಲೂಕುಗಳಲ್ಲೂ ಜಾಗೃತಿ ನಡೆಸಿದ್ದಾರೆ. ಪಿ.ಯು.ಸಿ ಇತಿಹಾಸ ವಿದ್ಯಾರ್ಥಿಗಳಿಗೆ ಕರ್ನಾಟಕ ಇತಿಹಾಸ ಪ್ರಶಸ್ತಿ ಪರೀಕ್ಷೆ ನಡೆಸಿ, ರಾಜ್ಯದ ಮೂಲೆ ಮೂಲೆಗಳ ವಿದ್ಯಾರ್ಥಿಗಳಲ್ಲೂ ಅಧ್ಯಾಪಕರಲ್ಲೂ ನಾಡ ಇತಿಹಾಸ, ಪರಂಪರೆಗಳ ಬಗ್ಗೆ ಅಕಾದೆಮಿಯು ಲವಲವಿಕೆ ಮೂಡಿಸಿದೆ. ಇಂಥ ಹಿನ್ನೆಲೆಯಲ್ಲಿ ಪಿ.ಯು.ಸಿ. ಮಂಡಳಿ ಕರ್ನಾಟಕ ಇತಿಹಾಸವನ್ನು ಪಠ್ಯಕ್ರಮದಿಂದ ತೆಗೆದುಹಾಕಿ ನಾಡಿನ ಇತಿಹಾಸದ ಬಗ್ಗೆ ತರುಣ ಪೀಳಿಗೆಯಲ್ಲಿ ಮೂಡುತ್ತಿರುವ ಅಭಿಮಾನಕ್ಕೆ ಉತ್ಸಾಹಕ್ಕೆ ತಣ್ಣೀರೆರಚಿದೆ ಎಂದು ನಾನು ಇಲ್ಲಿ ಒತ್ತಿ ಹೇಳ ಬಯಸುತ್ತೇನೆ.* ಕರ್ನಾಟಕ ಇತಿಹಾಸವನ್ನು ಸಮಗ್ರವಾಗಿ ಕಲಿಸದೆ ಅಲ್ಲಿಷ್ಟು ಇಲ್ಲಿಷ್ಟು ಹೇಳಿದರೆ ಉದ್ದೇಶ ಸಾಧನೆಯಾಗದು.

ಮತ್ತೊಮ್ಮೆ ಅತಿಥೇಯರಾದ ಕುಲಪತಿ ಡಾ॥ ಎಸ್. ರಾಮೇಗೌಡರಿಗೂ ಮತ್ತು ಮುರುಘಾಮಠದ ಶ್ರೀ ಶ್ರೀ ಶಿವಯೋಗಿ ಸ್ವಾಮಿಗಳಿಗೂ, ಸಮಾರಂಭದಲ್ಲಿ ಭಾಗವಹಿಸಿದ ಮತ್ತು ವಹಿಸುತ್ತಿರುವ ಗಣ್ಯರಿಗೂ ಮತ್ತು ಶ್ರೋತೃಗಳಿಗೂ ನನ್ನ ವಂದನೆಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

---

* ಅಕಾದೆಮಿ ಮತ್ತು ಸಾರ್ವಜನಿಕರ ಕೋರಿಕೆಯ ಮೇರೆಗೆ ಪಿ.ಯು.ಸಿ. ಪಠ್ಯ ಕ್ರಮದಲ್ಲಿ 'ಕರ್ನಾಟಕ ಇತಿಹಾಸ'ವನ್ನು ಈಗ ಸರ್ಕಾರ ಮುಂದುವರಿಸಿದೆ.

ಇತಿಹಾಸ ದರ್ಶನ

ಡಾ|| ಎಸ್.ಕೆ. ಜೋಶಿ*

ಕಾಲರಿಂಗಣದಲ್ಲಿ ಕುಣಿವ ಪ್ರಾಚ್ಯ ಧಾರವಾಡದ ಪರಿಸರ

ಧಾರವಾಡ, ಪಶ್ಚಿಮದ ಮಲೆನಾಡಿನಿಂದ ಪೂರ್ವದ ಬೆಳವಲನಾಡಿನಲ್ಲಿ ಕಾಲಿಡುವ ಸಂಧಿ ಪ್ರದೇಶ. ಉತ್ತರದ ಎತ್ತರದಿಂದ ದಕ್ಷಿಣದ ತಪ್ಪಲಿಗೆ ಸಾಗುವಾಗ, ತಲುಪುವ ಮಹಾದ್ವಾರ. ಅದು ಬರಿಯ ದ್ವಾರವಲ್ಲ! ಉತ್ತರ ದಕ್ಷಿಣಗಳನ್ನು ಜೋಡಿಸುವ ಮಹಾದ್ವಾರ! 'ದ್ವಾರವಾಡ!, ಧಾರವಾಡ. 'ದ್ವಾರವಾಡವೆಂದು' ಶಿಲಾಲೇಖಗಳಲ್ಲಿ ಪ್ರಣೀತಗೊಂಡ ಈ ಪ್ರದೇಶವು, ತನ್ನ ಪ್ರಾಚೀನ ಪರಂಪರೆಯಿಂದ ಶತಶತಮಾನಗಳಲ್ಲಿ ನಡೆದುಬಂದಿದೆ. ಬೌದ್ಧಿಕ ಪರಂಪರೆಯ ವಾಟಿಕೆಯಾಗಿದೆ.

'ಧಾರವಾಡ' ಶಬ್ದಾರ್ಥ

ಶಾಬ್ದಿಕವಾಗಿ ಅರ್ಥೈಸುವದಾದರೆ, 'ಧಾರವಾಡ'ವು 'ವಾಟ', 'ವಾಡ', 'ವಾಡೆ' 'ವಾಟಿಕೆ' ಎಂಬ ಸ್ಥಳವೈಶಿಷ್ಟ್ಯವನ್ನು ವರ್ಣಿಸುವ ಶಬ್ದಗಳಿಗೆ 'ದ್ವಾರ'ವೆಂಬ ನಾಮದಿಂದ ಪ್ರತ್ಯಯ ಹೊಂದಿದೆ. 'ಬೀದಿ', 'ತೋಟ', 'ನೆಲೆ', 'ಇಳಿಜಾರು', 'ಊರಿನ ಒಂದು ಭಾಗ', 'ಬೀಡಾರ', 'ಭವ್ಯವಾದ ಗೃಹ' ಇತ್ಯಾದಿ ಅರ್ಥ ನೀಡುವ ಸ್ಥಳವಾಚಕ ಶಬ್ದಗಳಿಗೆ 'ದ್ವಾರ'ವಾಗಿದೆ; 'ಬಾಗಿಲು' ಆಗಿದೆ. ಆದಾಗಿ ಇಲ್ಲಿಯ ಇತಿಹಾಸದ ಪದರುಗಳನ್ನು ಒಂದೊಂದಾಗಿ ಬಿಡಿಸಿ, ಧಾರವಾಡದ ಸುತ್ತಲಿನ ಪ್ರಾಚೀನ ಸಭ್ಯತೆಯ ಸಿರಿಯನ್ನು ಇಲ್ಲಿ ನೋಡಲು ಪ್ರಯತ್ನಿಸಲಾಗಿದೆ. ಸ್ಥಳವಾಚಕ ನಾಮವಿಶೇಷತೆಯಲ್ಲಿಯೂ, (ಪ್ಲೇಸ್ ನೇಮ್ಸ್ ಸಾಯನ್ಸ್), 'ಧ್ವಾರವಾಡ'-'ಧಾರವಾಡ' ಎಂಬ ಶಬ್ದವನ್ನು ಮೇಲಿನಂತೆ ವಿಶ್ಲೇಷಿಸಬಹುದು.

ಈ ದಿಸೆಯಲ್ಲಿ, ಧಾರವಾಡದ ಸುತ್ತ ಮುತ್ತ, ಅಲ್ಲದೆ ಅದರಾಚೆಗೆ ನೂರಾರು ಚದುರ ಮೈಲಿಗಳಲ್ಲಿ ಹರಡಿದ ಅದರ ಸಾಂಸ್ಕೃತಿಕ ಹರವನ್ನು ನೋಡಬಯಸಿದ ಪ್ರಾಕ್ತನ ಪಂಡಿತರು ಬಹಳ. ಕಳೆದೊಂದು ಶತಮಾನದಿಂದ, ಇಂದಿನವರೆಗೂ, ಧಾರವಾಡದ ಪರಿಸರದಲ್ಲಿ ದಿಶೆದಿಶೆಗಳಲ್ಲಿ ಪುರಾತತ್ವವಿದರು ಮೂಡಿಸಿದ ಅವರ ಸಂಶೋಧನ ಹೆಜ್ಜೆಗಳು ಅಸಂಖ್ಯಾತ ಹಾಗೂ ಅಮೂಲ್ಯ. ಹೆಸರಿಸಬೇಕಾದಲ್ಲಿ, ಬ್ರೂಸ್‌ಫೂಟ್, ಫ್ರಿಮ್‌ರೋಜ್, ಫ್ಲೀಟ್, ರೀಸ್, ಮೆಡೋಸ್ ಟೇಲರ್, ಕೃಷ್ಣಸ್ವಾಮಿ ಐಯ್ಯಂಗಾರ್, ವ್ಹೀಲರ್, ಎಂ. ಶೇಷಾದ್ರಿ, ಆರ್. ಶಾಮಶಾಸ್ತ್ರಿ, ಶ್ರೀ ಕುಂದಣಗಾರ್, ಆರ್. ಎಸ್. ಪಂಚಮುಖಿ, ಬಿ. ಎ. ಸಾಲೇತೋರ್, ಪಿ. ಬಿ. ದೇಸಾಯಿ, ಜಿ. ಎಸ್. ದೀಕ್ಷಿತ, ಆರ್. ವ್ಹಿ. ಜೋಶಿ, ಎಸ್. ಎಚ್. ರಿತ್ತಿ, ಬಾ. ರಾ. ಗೋಪಾಲ್, ಎಸ್. ಶೆಟ್ಟರ್, ಅ. ಸುಂದರ, ಎಮ್.ಎಸ್.ನಾಗರಾಜರಾವ್, ಸೂರ್ಯನಾಥ ಕಾಮತ್, ಎಮ್.ಚಿದಾನಂದಮೂರ್ತಿ, ಎಸ್. ರಾಜಶೇಖರ್, ಎಮ್. ಎಮ್. ಕಲಬುರ್ಗಿ, ಎಸ್. ಆರ್. ರಾವ್, ಎ. ವ್ಹಿ. ನರಸಿಂಹ ಮೂರ್ತಿ, ಎಚ್. ಆರ್. ರಘುನಾಥ ಭಟ್ ಮತ್ತು ವಿನಮ್ರತೆಯಿಂದ ದಾಖಲಿಸುವಂತೆ ಈ ಲೇಖಕನೂ ಸೇರಿದಂತೆ, ಅಸಂಖ್ಯಾತ ಮಹನೀಯರ ಪರಿಶ್ರಮದ ಫಲವು ಧಾರವಾಡ ಜಿಲ್ಲೆಯ ಪ್ರಾಚ್ಯ ಸಂಪದವನ್ನು ಭೂಮಿಯಿಂದ ಹೊರತಂದಿದೆ.

ಧಾರವಾಡ ಶಿಲೆ

ಧಾರವಾಡ ಜಿಲ್ಲೆಯ ಪ್ರಾಚೀನತೆ ಹಾಗೂ ಪರಂಪರೆಗಳು ಅನಂತ ಹಾಗೂ ಅಮೂಲ್ಯ. ಪೃಥ್ವಿಯ ಉಗಮ ೫೦೦೦ ಮಿಲಿಯ ವರ್ಷಗಳಾದರೆ, ಧಾರವಾಡದ ಶಿಲೆಗಳು ೩೫೦೦ ಮಿಲಿಯ ವರುಷಗಳಷ್ಟು ಹಳೆಯವು. ಜಗತ್ತಿನ ಗರ್ಭದ ಎಲ್ಲ ಶಿಲೆಗಳಲ್ಲಿಯೇ ಅತೀ ಪ್ರಾಚೀನ ಶಿಲೆಗಳು ಧಾರವಾಡ ಶಿಲೆಗಳೆಂದು ಭೂಗರ್ಭಶಾಸ್ತ್ರಜ್ಞ ಪ್ರೊಫೆಸರ್ ಆರ್ಥರ ಹೋಮ್ಸ್ ಹೇಳುತ್ತಾರೆ. ಕಪ್ಪತಗುಡ್ಡ, ಚಿನ್ನಮುಳಗುಂದ, ಬನ್ನಿಕೊಪ್ಪ, ಡೋಣಿ, ಸುರಟೂರ, ಬೆಳವಡಿ, ಧಾರವಾಡ, ಡಂಬಳ ಮುಂತಾದ ಸ್ಥಳಗಳ ಭೂಗರ್ಭ ಸಂಪತ್ತು ಇದಕ್ಕೆ ಸಾಕ್ಷಿ.

ಪ್ರಾಗೈತಿಹಾಸ ಪರಿಸರ

ಇನ್ನು, ಪ್ರಾಕ್ತನ ದೃಷ್ಟಿಯಲ್ಲಿ ಧಾರವಾಡ ಜಿಲ್ಲೆಯನ್ನು ನೋಡಿದಾಗ, ಅದು ನಡೆದು ಬಂದ ದಾರಿ ದೀರ್ಘ ಹಾಗೂ

---

* ಪ್ರಾಕ್ತನ ವಿಮರ್ಶಕ, ಧಾರವಾಡ - ೫೮೦ ೦೦೧

ವಿಶಾಲ. ಪ್ರಾಚೀನ ಶಿಲಾಯುಗ, ಮಧ್ಯ ಪ್ರಾಚೀನ ಶಿಲಾಯುಗ, ಹಾಗೂ ಅಂತ್ಯ ಶಿಲಾಯುಗಗಳಲ್ಲಿ, ತದನಂತರ ನೂತನ ಶಿಲಾಯುಗ ಹಾಗೂ ಬೃಹತ್ ಶಿಲಾಯುಗಗಳಲ್ಲಿ ಹಾಯ್ದು, ಇತಿಹಾಸದ ಹೊಂಗಿರಣಗಳೊಂದಿಗೆ ಕಾಲಚಕ್ರದಲ್ಲಿ ಅನಂತ ತಿರುವುಗಳಲ್ಲಿ ನುಸುಳಿದೆ. ಸಂಸ್ಕೃತಿ ಹಾಗೂ ನಾಗರೀಕತೆಗಳನ್ನು ನಿರ್ಮಿಸಿದ ಧಾರವಾಡ ಜಿಲ್ಲೆಯ ಪರಿಸರವು ಕನ್ನಡ ನಾಡಿನಲ್ಲಿ ಮಹತ್ತಮ ಸ್ಥಾನ ಪಡೆದಿದೆ. ಪ್ರಾಗೈತಿಹಾಸಿಕ ಕಾಲದಲ್ಲಿ, ಶಿಲಾಯುಗದ ಮಾನವನು ಈ ಭಾಗದಲ್ಲಿ ವಸತಿ ಹೊಂದಿದ್ದ ಕುರುಹುಗಳು, ಈ ಕ್ಷೇತ್ರದಲ್ಲಿ ನಡೆಸಿದ ದೀರ್ಘ ಸಮೀಕ್ಷೆಯಿಂದ ಸಾಕಷ್ಟು ದೊರೆತಿವೆ. ಅವುಗಳಲ್ಲಿ ಸಿಸ್ಟ್, ಜಾಸ್ಪರ್, ಚರ್ಟ್, ಫ್ಲಿಂಟ್, ಕ್ವಾರ್ಟ್ಜ್, ಇತ್ಯಾದಿ ತರತರಹದ ಶಿಲೆಗಳಲ್ಲಿ ತಯಾರಿಸಿದ ಕೊಡಲಿ, ಬಾಚಿ, ಉಳಿ, ಕುಳ, ಬೆಣೆ, ಉಂಗುರುಕಲ್ಲು, ತೂತುಕೊರೆವ ಮೊನಚಾದ ಕಲ್ಲುಗಳು, ಬ್ಲೇಡ್, ಕವಣೆಗಲ್ಲುಗಳು, ಮುಂತಾದವುಗಳನ್ನು ಹೆಸರಿಸಬಹುದು.

ನದಿ ಕೊಳ್ಳಗಳು ಸಂಸ್ಕೃತಿ - ನಾಗರೀಕತೆ ಬೆಳೆದ ತೊಟ್ಟಿಲಗಳು. ಧಾರವಾಡ ನಾಡಿನ ಪ್ರದೇಶಗಳಲ್ಲಿ ಹರಿವ ನದಿಗಳಾದ ಶಾಲ್ಮಲೆ, ಮಲಪ್ರಭೆ, ಬೆಣ್ಣೆನದಿ, ವರದಾ, ತುಂಗಭದ್ರೆಯರು ಪ್ರಾಗೈತಿಹಾಸದ ನೆಲೆಗಳಿಗೆ ಆಸ್ಪದ ನೀಡಿದ್ದಾರೆ. ಇಲ್ಲಿ ನಡೆದ ಸತತ ಸಮೀಕ್ಷೆಯ ಮೇರೆಗೆ, ಚಿಕ್ಕಮೂಲಂಗಿ, ಹಳಕಂಡಿ, ಹಳ್ಳೂರು, ದೋಣಿ, ಧಾಣಶಿರೂರ, ಮುದೇನೂರ, ರಾಣಿಬೆನ್ನೂರು, ಚಿಳ್ಳಕೆರೆ, ಕಮಲಾಪುರ, ಗುಡ್ಡದ ಮಾದಾಪುರ, ಬೆಳ್ಳೂರು, ಕಪಿಲೂರು, ವೆಂಕಟಾಪುರ, ರಾಮಾಪುರ, ಗಜೇಂದ್ರ ಗಡ, ಹೊಳೆ ಆಲೂರು, ಬೂದಿಹಾಳ, ಕಲ್ಲಾಪುರ, ಕೊಣ್ಣೂರು ಮುಂತಾದ ನೂರೈವತ್ತಕ್ಕೂ ಮೇಲಾಗಿ ಇಡಿಯಾಗಿ ಪ್ರಾಗೈತಿಹಾಸಿಕ ತಾಣಗಳು ಇಲ್ಲಿ ದೊರೆತಿವೆ. ಇವುಗಳ ಇಡಿಯಾದ ಕಾಲವನ್ನು ಒಂದು ಲಕ್ಷದ ಐವತ್ತು ಸಾವಿರ ವರುಷಗಳ ಈಗಿನಿಂದ ಪೂರ್ವದಲ್ಲಿಯ ಸಮಯವೆಂದು ನಿರ್ಧರಿಸಲಾಗಿದೆ.

ಪೌರಾಣಿಕ ಸಂಬಂಧಗಳು

ತದನಂತರ, ರಾಮಾಯಣ, ಮಹಾಭಾರತ, ಸ್ಥಳ ಪುರಾಣಗಳು, ಸ್ಥಾನೀಯ ಐತಿಹ್ಯಗಳು, ಮುಖತಃ ಬಂದ ದಂತ ಕಥೆಗಳು, ಧಾರವಾಡ ನಾಡಿನ ಸಾಕಷ್ಟು ಸ್ಥಳಗಳು ಪೌರಾಣಿಕ ಯುಗದಲ್ಲಿ ನೆಲೆಯಾಗಿದ್ದವೆಂದು ತಿಳಿದು ಬಂದಿದೆ. ಪಾಂಡವರ ಅಜ್ಞಾತವಾಸದಲ್ಲಿ ವಿರಾಟರಾಜನ ರಾಜಧಾನಿ ವಿರಾಟನಗರಕ್ಕೆ ಈಗಿನ ಹಾನಗಲ್ಲನ್ನು ಜೋಡಿಸಲಾಗಿದೆ. ಹಾನಗಲ್ಲಿನಲ್ಲಿ ಪರಂಪರೆಯು ಹೇಳುವಂತೆ ಈಗಲೂ ಕೀಚಕನ ಗರಡಿಮನೆ ಹಾಗೂ ಅವನ ವಧಾಸ್ಥಾನವನ್ನು ತೋರಿಸಲಾಗುತ್ತಿದೆ. ಭೀಷ್ಮ ಪರ್ವದಲ್ಲಿ ಕರ್ನಾಟಕದ ಸಂಬಂಧವನ್ನು ನೆನೆಸಲಾಗಿದೆ. ರಾಮಾಯಣ, ಮಹಾಭಾರತ ಕಾಲಗಳಿಂದ ಆರ್ಯರು ವಿಂಧ್ಯಪರ್ವತವನ್ನು ದಾಟಿ ದಕ್ಷಿಣಕ್ಕೆ ಬರತೊಡಗಿದರು. ದಕ್ಷಿಣದ ದ್ರಾವಿಡ ಜನಸಂಕುಲ ತನ್ನ ಜೊತೆ ಬೆಳೆಸಿಕೊಂಡು ಬಂದಿದ್ದ ನಾಗರಿಕತೆಯೊಂದಿಗೆ ತಮ್ಮ ಆರ್ಯ ಸಂಸ್ಕೃತಿಯನ್ನೂ ಬೆಳೆಸಿದರು. ಈ ಮಿಲನ ಆದುದು ಕರ್ನಾಟಕದಲ್ಲಿ. ವಿಂಧ್ಯ ಶ್ರೇಣಿಯನ್ನು ದಾಟಿ ಬಂದರೆ ಮೊದಲು ಸಿಕ್ಕುವುದು ಗೋದಾವರಿಯ ಅಂಚಿನಿಂದ ಹಬ್ಬಿದ ಕರ್ನಾಟಕ ಪ್ರದೇಶ. ಅದರ ದಕ್ಷಿಣಕ್ಕೆ ತಮಿಳು ಪ್ರಾಂತ್ಯ, ದ್ರಾವಿಡದ ಗರಡಿ ಮನೆ. ಆದಾಗಿ, ಉತ್ತರ-ದಕ್ಷಿಣಗಳೆರಡನ್ನೂ ಜೋಡಿಸುವ ನಾಡು ಕರ್ನಾಟಕ ಪ್ರದೇಶ- ಕಾವೇರಿಯಿಂದ ಗೋದಾವರಿಯವರೆಗಿರ್ದ ನಾಡು. ಆರ್ಯ-ದ್ರಾವಿಡ ಸಂಸ್ಕೃತಿ ಗಳೆರಡರ ಸಂಗಮ ಪ್ರದೇಶ.

ಆರ್ಯ-ದ್ರಾವಿಡ ಸಂಸ್ಕೃತಿಗಳ ಸಂಗಮ

ಈ ಆರ್ಯಜೀವನ, ಆರ್ಯಧ್ಯೇಯ, ಆರ್ಯ ಸಂಪ್ರದಾಯಗಳು, ದ್ರಾವಿಡ ನಾಗರಿಕತೆಯೊಂದಿಗೆ ಬೆರೆತ ಐತಿಹಾಸಿಕ ಸಂಕೇತಗಳು ಧಾರವಾಡದ ಪರಿಸರದಲ್ಲಿವೆ. ಸಾಮಾಜಿಕ ನಡೆ-ನುಡಿ, ಆಚಾರ-ವಿಚಾರ, ಬಟ್ಟೆ-ಬರೆ, ಹಬ್ಬ-ಹುಣ್ಣಿಮೆಗಳು ಅರ್ಧ ಉತ್ತರದವು, ಅರ್ಧ ದಕ್ಷಿಣದವು. ಐತಿಹಾಸಿಕವಾಗಿ, ಈ ಪ್ರದೇಶ ಕುಂತಳದೇಶದ ಮಧ್ಯ-ಹೃದಯ ಭಾಗವಾಗಿದ್ದು, 'ಕರ್ನಾಟ', 'ಕರ್ನಾಡು', 'ಕರ್ನಾಟಕದೇಶಂ' ಗಳೆಂದು ಕರೆಯಿಸಿಕೊಂಡಿದ್ದ, ಕರಿನಾಡಿನ ಮಧ್ಯದ ನಾಡಾಗಿತ್ತೆಂದು ಈ ಭಾಗದ ಶಿಲಾಲೇಖಗಳು ಸಾರುತ್ತವೆ. ಡಾ|| ಆರ್.ಎಸ್. ಪಂಚಮುಖಿ, ಡಾ|| ಪಿ.ಬಿ. ದೇಸಾಯಿ, ಡಾ|| ಎಂ.ಎಂ. ಕಲಬುರ್ಗಿ ಮುಂತಾದ ಶಿಲಾಲೇಖಜ್ಞರಿಂದ ಕೈಕೊಂಡ ಸಮೀಕ್ಷೆಯ ರೀತ್ಯಾ ಪ್ರಾಚೀನ ಮಹತ್ವದ ತಾಣಗಳ ಹರವಿನ ಗಡಿಗುರುತುಗಳ ಮೂಲಕ, ಧಾರವಾಡ ನಾಡಿನ ಅಂದಿನ ಮೇರೆಗಳನ್ನು ಗುರುತಿಸಬಹುದು. ಬೆಳವಲ ೩೦: ನರಗುಂದ, ನವಲಗುಂದ ಹಾಗೂ ಗದಗ ತಾಲೂಕುಗಳು, ಪುಲಿಗೆರೆ ೩೦೦: ಲಕ್ಷ್ಮೇಶ್ವರದಿಂದ ಸೊರಟೂರು, ಮಾಸೆವಾಡಿ ೧೪೦: ಮುಂಡರಗಿ, ಡಂಬಳ, ಲಕ್ಕುಂಡಿ ಮುಂತಾದವು; ಬಾಸವೂರು ೧೪೦: ಹಾವೇರಿ ಕರ್ಜಗಿ ಮುಂತಾದವು; ಸಾಂಡಲಿಗೆ ೧೦೦: ಸತ್ತಲಿಗೆ, ರಾಣಿಬೆನ್ನೂರು ಹಾಗೂ ಹಿರೇಕೆರೂರು ಭಾಗಗಳು, ಪಾನುಂಗಲ್ಲ ೫೦೦: ಪಾಂಥಿಪುರ ಹಾನಗಲ್ಲಿನ ಪರಿಸರದ ಭಾಗ; ಕುಂದೂರು ೫೦೦: ನರೇಂದ್ರ ಹಾಗೂ ಧಾರವಾಡದ ಭಾಗಗಳು; ಮಹಾರಾಜವಾಡಿ ೧೨೦೦೦: ಮುಗದ, ನಿಗದಿ ಮುಂ. ಬನವಾಸಿ ೧೨೦೦೦: ಸಿರಸಿ, ಕಾರವಾರ ಜಿಲ್ಲೆ ಹಾಗೂ ಧಾರವಾಡ ಜಿಲ್ಲೆಯ ಮಧ್ಯಭಾಗ ಮುಂತಾದವು. ಇವು ಆಯಾ ಪ್ರದೇಶದ ಪರಿಸರದಲ್ಲಿ ಪಸರಿಸಿದ ಊರುಗಳ ಸಂಖ್ಯೆ, ಕ್ಷೇತ್ರವ್ಯಾಪ್ತಿ ಮುಂತಾದವುಗಳನ್ನು ತೋರಿಸುತ್ತವೆ.

ಐತಿಹಾಸಿಕ ಕಾಲದಿಂದ ಹಿಡಿದು, ಪ್ರಾಚೀನಯುಗ ಹಾಗೂ ಮಧ್ಯಯುಗಗಳಲ್ಲಿ ಹಾದು, ಶಾತವಾಹನ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಗಂಗ, ಹೊಯ್ಸಳ,

ವಿಜಯನಗರ, ಆದಿಲ್‌ಶಾಹಿ, ಮರಾಠ ಮುಂತಾದ ಅರಸು ಮನೆತನಗಳ ಆಳ್ವಿಕೆಯಲ್ಲಿ, ಅಂದರೆ ಕ್ರಿ.ಶ. ಎರಡನೆಯ ಶತಕದಿಂದ ಹದಿನೇಳನೆಯ ಶತಕದವರೆಗೆ- ಹದಿನೈದು ನೂರು ವರುಷಗಳ ಕನ್ನಡ ನಾಡಿನ ಅವಿಶ್ರಾಂತ ಮುನ್ನಡೆಯಲ್ಲಿ, ಧಾರವಾಡದ ನಾಡು ಕಲೆಯ ನಾಡಾಗಿ, ಸಂಸ್ಕೃತಿಯ ಬೀಡಾಗಿ ಬೆಳೆದು ಬಂದುದನ್ನು ಇಲ್ಲಿಯ ಪ್ರಾಚ್ಯನಿಧಿ ಸಾರುತ್ತಿದೆ. ಈ ನಾಡಿನ ಪ್ರತಿಯೊಂದು ಊರಲ್ಲಿ, ಪ್ರಾಚೀನ ಬಾವಿ, ಕೆರೆ, ಕಾಲುವೆ, ಗುಡಿಗೋಪುರ, ಶಿಲಾಲೇಖ, ವೀರಗಲ್ಲು, ಮಾಸ್ತಿಕಲ್ಲು, ಕೋಟೆ- ಕೊತ್ತಲಗಳು, ಹೂಡೆ, ಅರಮನೆ, ವಾಡೆ, ಗುಮ್ಮಟ, ಕಾರಂಜಿ, ಮಸೀದಿ- ಇವುಗಳಲ್ಲಿ ಒಂದಿಲ್ಲೊಂದು ಪ್ರಾಚ್ಯ ಸಂಪದದ ಕುರುಹುಗಳು ಅಲಲ್ಲಿ ದೊರೆಯುತ್ತವೆ.

ಶಿಲ್ಪಕಲಾ ತಾಣಗಳು

ಶಿಲ್ಪಕಲಾ-ದೇವಶಿರಿ ಹೊತ್ತ ದೇವಾಲಯಗಳ ತಾಣ ನೂರಾರು. ಈ ಧಾರವಾಡದ ಪ್ರದೇಶದಲ್ಲಿ ಹೆಸರಿಸಲು ಸ್ಥಳ ಸಾಲದು. ಅವುಗಳಲೊಂದೊಂದೂ ಆಮುಕ್ತಮಾಲ್ಯ. ಅಬ್ಬಿಗೆರೆ, ಹಿರೇಮಂಟೂರು, ಜಕ್ಕಲಿ, ಕೋಡಿಕೊಪ್ಪ, ಕುರುವತ್ತಿ, ನರೆಗಲ್ಲ, ರೋಣ, ಸವಡಿ, ಸೂಡಿ, ಬ್ಯಾಹಟ್ಟಿ, ಹೆಬ್ಬಳ್ಳಿ, ಹುಬ್ಬಳ್ಳಿ, ಸುಳ್ಳ, ಉಣಕಲ್ಲ, ಆಮರಗೋಳ, ಧಾರವಾಡ, ಯರಗುಪ್ಪಿ, ಅಬ್ಬಲೂರು, ಅರಳೀಕಟ್ಟಿ, ಬೆಟಕೆರೂರ, ಚಿಕ್ಕೆರೂರು, ಹಳ್ಳೂರು, ಹಂಸಭಾವಿ, ಹಿರೇಕೆರೂರ್, ಹೊಸಳ್ಳಿ, ಕೊಡೂರು, ಮಾಸೂರು, ಮಟ್ಟೂರು, ಮೆಣಸಗಿ, ಸಾತೇನಹಳ್ಳಿ, ಅಣ್ಣಿಗೇರಿ, ಹಿರೇಬಸೂರ, ಕಲಕೇರಿ, ಕನ್ನೇಶ್ವರ, ಆಡೂರು, ಬಾಳೂರು, ಗೆಜ್ಜಹಳ್ಳಿ, ಹಿರೂರ, ಕೂಡಲ, ಮುದೂರ, ರಾಮತೀರ್ಥ, ಸಾರಂಗಿ, ಸಿರಿಗೋಳ್, ತಿಳವಳ್ಳಿ, ಎಮ್ಮಿಗನೂರು, ಅಗಡಿ, ದೇವನೂರು, ಗುತ್ತಲ, ದಿಡನೂರ, ಕನವಳ್ಳಿ, ಕರ್ಜಗಿ, ಆಲೂರು, ಅಸುಂಡಿ, ಬಿಂಕದಕಟ್ಟಿ, ಡೋಣಿ, ದಂಡೂರ, ಗಾರವಾಡ, ಹುಯ್ಲಗೋಳ್, ಹರ್ತಿ, ಇಟಗಿ, ಕಲ್ಲೂರ, ಕುರ್ತಕೋಟಿ, ಮುಳಗುಂದ, ನಾಗಾವಿ, ಶಿರೂರ್, ಸೊರಟೂರ್, ಶಾರೋಟಿ, ಅಣಿವೇರಿ, ಬಿದರಕಟ್ಟಿ, ಹಿರೇಬಿದ್ರಿ, ಹೊಸ್ನತ್ತಿ, ರಾಣೆಬೆನ್ನೂರ, ವಕ್ಕುಂದ, ಆಲ್ವಂಡಿ, ಆಮ್ಮಿನಭಾವಿ, ಮನಗುಂಡಿ, ಬನ್ನಿಕೊಪ್ಪ, ನಿಡಗುಂದಿ, ಕಲ್ಯಾಣ, ತಡಸ, ವನಹಳ್ಳಿ, ಗದಗ ದಂಡಾಪುರ, ಕೋಣ್ಣೂರ, ನರಗುಂದ, ಲಕ್ಷ್ಮೇಶ್ವರ, ಶಿರಹಟ್ಟಿ, ಗುಂಡೂರ ಕಳಸ, ಕುಂದಗೋಳ್, ಬ್ಯಾಡಗಿ, ಕಾಗಿನೆಲ್ಲಿ, ಮೋಟೆಬೆನ್ನೂರ, ಸಿಡೇನೂರ, ಬೆಳವಟಗಿ, ನಾವಳ್ಳಿ, ಮಿಶ್ರಕೋಟಿ, ತಂಬೂರು, ಲಕ್ಕುಂಡಿ, ಡಂಬಳ ಹಾವೇರಿ, ಹಾರ್ಲಹಳ್ಳಿ, ಗಳಗನಾಥ, ಚೀಡದಾನಪುರ, ಬಂಕಾಪುರ ಹಾಗೂ ಹಾನಗಲ್ಲ ಮುಂತಾದ ಇನ್ನೂ ನೂರಾರು ಈ ಚೆಲುವ ಶಿಲ್ಪದ ನಾಡಲಿ.

ವಾಸ್ತುಶಿಲ್ಪದ ವೈಶೇಷಿಕತೆ

ಹಾಗೆ ನೋಡಿದಲ್ಲಿ, ಧಾರವಾಡ ಪ್ರದೇಶದ ಪೂರ್ವಕ್ಕೆ ಹಮ್ಮಿಕೊಂಡಂಥ 'ಐಯ್ಯಹೊಳೆ-೫೦೦' ನಾಡು- ಈ ಐಹೊಳೆಯು ಭಾರತೀಯ ವಾಸ್ತುಶಿಲ್ಪದ ಕಲೆಯ ವರ್ಧಿಸಿದ ತೊಟ್ಟಿಲು. ಬಾದಾಮಿ ಚಾಲುಕ್ಯರ ಶಿಲ್ಪಕಲೆಯ ಪ್ರಭಾವವು, ದಕ್ಷಿಣ ಭಾರತದ ಇನ್ನಿತರ ಬಹು ಪ್ರದೇಶಗಳಲ್ಲಿ ಬೀರಿದ್ದರೂ, ಸಾಮೀಪ್ಯದ ಲಾಭದಿಂದ, ಈ ಧಾರವಾಡ ಪ್ರದೇಶದಲ್ಲಿ ಅತೀವ ಗಾಢವಾದ ಪರಿಣಾಮವನ್ನುಂಟುಮಾಡಿದೆ. ಧಾರವಾಡ ನಾಡಿನ ದೇವಾಲಯ ಗಳಲ್ಲಿ ಹಾಗೂ ಶಿಲಾಮೂರ್ತಿಗಳಲ್ಲೂ ಪರಂಪರೆಯಾಗಿ ಬಂದ ಶತಾನುಶತಕಗಳ ಅನುಭವಿಕ ಬಾದಾಮಿ ಚಾಲುಕ್ಯರ ಕಲಾ ತಾಂತ್ರಿಕತೆ ಒಡಮೂಡಿದೆ. ತದನಂತರ, ನಾಗರ-ದ್ರಾವಿಡ ಕಲಾ ಸಂಗಮವಾದ 'ಕದಂಬನಾಗರ' ವಾಸ್ತುಶೈಲಿಯು ಧಾರವಾಡ ವಿಭಾಗದಲ್ಲಿ ಕಲ್ಯಾಣ ಚಾಲುಕ್ಯರ ಸಮಯದಲ್ಲಿ, (ಕ್ರಿ.ಶ. ೧೦ ರಿಂದ ೧೨ ಶತಕ), ವೃದ್ಧಿಗೊಂಡು, ತನ್ನ ನೆಲದಲ್ಲಿ ರಚನೆಗೊಂಡ ಎಲ್ಲ ದೇವಮಂದಿರಗಳಲ್ಲಿಯೂ, ಆ ಸಂಗಮದ ವಾಸ್ತು ಶೈಲಿಯನ್ನು ಅಳವಡಿಸಿಕೊಂಡಿತು. ದೇವಾಲಯಗಳ ರಚನೆಯಲ್ಲಿ ದೃಢತೆ, ಪೂರ್ಣತೆ, ಅಂದ-ಚೆಂದ, ಬೆಡಗು-ಬಿನ್ನಾಣಗಳು ಮೂಡಿ ಬಂದವು.

ಮುಖಮಂಟಪ, ದ್ವಿಮುಖ ಮಂಟಪ, ತ್ರಿಮುಖ ಮಂಟಪ, ಸಭಾಮಂಟಪ ರಂಗಮಂಟಪ, ಅಂತರಾಳ, ಗರ್ಭಗೃಹ, ಕೆಲ ಸಂದರ್ಭಗಳಲ್ಲಿ ಶಿಖರಗಳಲ್ಲಿ ತ್ರಿಕೂಟಾಚಲವಾಗಿಯೂ, ಈ ರೀತಿ ವಿವಿಧ ವಿನ್ಯಾಸಗಳ ವಿವಿಧಾಂಗಗಳನ್ನು ಈ ಭಾಗದ ದೇವಾಲಯಗಳು ಅಳವಡಿಸಿಕೊಂಡವು. ಶಿಖರದಲ್ಲಿ, ದಾಕ್ಷಿಣಾತ್ಯ ಶೈಲಿಯ ಕಟಕಟೆಯಾಕಾರದ ಪಿರಾಮಿಡ್‌ಗಳನ್ನು ಹೋಲುವ ಹಾಗೂ ಔತ್ತರೇಯ ಶೈಲಿಯ ಎರಡೂ ಬದಿಗೂ ಬಿಲ್ಲಿನಾಕಾರವಾಗಿ ಒಳಬದಿಗೆ ಬಾಗಿ ಮೇಲೇಳುವ ಏರಿಕೆಯ ಶಿಖರಗಳನ್ನು ಅಳವಡಿಸಲಾಯಿತು. ಹೀಗಾಗಿ ಸಮಾಂತರ ಹಾಗೂ ಲಂಬಕಗಳಲ್ಲಿ ಬೆಳೆದು, ಶಿಖರಗಳಲ್ಲಿ ಎತ್ತರ ಹಾಗೂ ವಿನ್ಯಾಸಗಳಲ್ಲಿ ವಿಸ್ತಾರವನ್ನೂ ತರಲಾಯಿತು. ಶಿಲ್ಪಗಳಲ್ಲಿ ನಯ, ನಾಜೂಕು, ನುಣುಪು, ಕುಸುರು, ಸೌಂದರ್ಯಗಳಿಗೆ ಹೆಚ್ಚು ಮಹತ್ವ ಕೊಡಲಾಯಿತು. ಇವು ಕಲ್ಯಾಣ ಚಾಲುಕ್ಯರ ವಾಸ್ತುವಿಶೇಷಗಳು.

ಈ ರೀತಿ ವಿಕಸನಗೊಂಡ ವಾಸ್ತುಶಿಲ್ಪದ ಪರಿಪಕ್ವತೆಯನ್ನು ಪಡೆದ ಕಲ್ಯಾಣ ಚಾಲುಕ್ಯರ ನೆಲೆಗಳು ಧಾರವಾಡ ಪರಿಸರದಲ್ಲಿ ಅಸಂಖ್ಯಾತ. ಲಕ್ಕುಂಡಿಯ ಜೈನಮಂದಿರ ಕಾಶೀವಿಶ್ವೇಶ್ವರ ದೇವಾಲಯ, ನನ್ನೇಶ್ವರ ದೇವಾಲಯ., ಗದುಗಿನ ಸರಸ್ವತಿ ಹಾಗೂ ತ್ರಿಕೂಟೇಶ್ವರ ದೇವಾಲಯಗಳು., ಹಾವೇರಿಯ ಸಿದ್ದೇಶ್ವರ ದೇವಾಲಯ, ಗಳಗನಾಥದ ಶ್ರೀಗಳಗೇಶ್ವರ ದೇವಾಲಯ, ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯ, ಅಮರಗೋಳದ ಬನಶಂಕರಿ ಹಾಗೂ ಶ್ರೀ ಅಮರೇಶ್ವರ ದೇವಾಲಯ. ಚೀಡದಾನಪುರದ ಮುಕ್ತೇಶ್ವರ ದೇವಾಲಯ, ಅಣ್ಣಿಗೇರಿಯ ಅಮೃತೇಶ್ವರ ದೇವಾಲಯ, ಲಕ್ಷ್ಮೇಶ್ವರದ


ಸೋಮೇಶ್ವರ ದೇವಾಲಯ ಬಂಕಾಪುರದ ಅರವತ್ತು ಕಂಬದ ದೇವಾಲಯ, ಧಾರವಾಡದ ಮೈಲಾರೇಶ್ವರ ದೇವಾಲಯ, ಮುಂತಾಗಿ ಇನ್ನೂ ನೂರಾರು ದೇವಾಲಯಗಳನ್ನು ಹೆಸರಿಸಬಹುದು.

ನಕ್ಷತ್ರಾಕೃತಿಯ ವಾಸ್ತು ವಿನ್ಯಾಸ ವಿಶೇಷತೆ

ನಕ್ಷತ್ರಾಕೃತಿಯ ದೇವಾಲಯಗಳ ವಿನ್ಯಾಸವು ಕೇವಲ ಹೊಯ್ಸಳರ(ಕ್ರಿ.ಶ. ೧೧-೧೩ ಶತಮಾನಗಳು) ಕೊಡುಗೆ ಎಂದು ಕೆಲವು ವಾಸ್ತು ಪಂಡಿತರ ಅಭಿಪ್ರಾಯ. ಆದರೆ ತತ್ಪೂರ್ವದಲ್ಲಿಯೇ ಕೊಣ್ಣೂರಿನ ಪರಮೇಶ್ವರ ದೇವಾಲಯ (ಕ್ರಿ.ಶ.೮೫೦), ಸವಡಿಯ ಬ್ರಹ್ಮೇಶ್ವರ ದೇವಾಲಯ (ಕ್ರಿ. ಶ. ೧೦ನೇ ಶತಮಾನ), ಡಂಬಳದ ದೊಡ್ಡ ಬಸಪ್ಪನ ದೇವಾಲಯ ಮುಂತಾದವು ಧಾರವಾಡದ ಈ ಪ್ರದೇಶಗಳಲ್ಲಿ ನಿರ್ಮಾಣಗೊಂಡಿದ್ದು, ಇದು ಕಲ್ಯಾಣ ಚಾಲುಕ್ಯರ ಕೊಡುಗೆಯಾಗಿದ್ದು, ಈ ನಕ್ಷತ್ರಾಕೃತಿಯ ವಿನ್ಯಾಸಗಳ ದೇವಾಲಯಗಳ ರಚನಾ ಅನುಕರಣೆಯನ್ನು ತದನಂತರದಲ್ಲಿ, ಹೊಯಸಳರು ಬೇಲೂರು ಹಳೆಬೀಡು ನಾಡುಗಳಲ್ಲಿ ಬಹಳವಾಗಿ ಉಪಯೋಗಿಸಿದರು. ಇದನ್ನು ಹಿರಿಯ ಪುರಾತತ್ವವಿದರಾದ ಡಾ|| ಅ. ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇದು ಧಾರವಾಡ ನಾಡು ನಿರ್ಮಿಸಿದ ವಾಸ್ತುಶಿಲ್ಪದ ಚಲನೆಯಲ್ಲಿ ಮೈಲುಗಲ್ಲು.

ಕೋಟೆ ಕೊತ್ತಲಗಳು

ಧಾರವಾಡ ನಾಡಿನ ಕೋಟೆಗಳು (ಕ್ರಿ.ಶ.೪-೫ನೆಯ ಶತಮಾನಗಳಿಂದ ಪ್ರಾರಂಭವಾದ ಹಾನಗಲ್ಲಿನ ಕೋಟೆ) ಕದಂಬರ ಕಾಲದಿಂದ ಪ್ರಾರಂಭವಾದವುಗಳೆಂದು ಕಂಡು ಬರುತ್ತದೆ. ಪಶ್ಚಿಮ ಮಲೆನಾಡಿನಲ್ಲಿ ಬರುವ ಇಳಿಜಾರಿನ ಪ್ರದೇಶದಲ್ಲಿ ಗಿರಿದುರ್ಗ-ಜಲದುರ್ಗಗಳಾದರೆ, ಪೂರ್ವದ ಬಯಲು ಸೀಮೆಯಲ್ಲಿ 'ಸ್ಥಲದುರ್ಗ'ಗಳು ಕಂಡು ಬರುತ್ತವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಮೂದಿಸಿದಂತೆ ಜಲದುರ್ಗ, ಸ್ಥಲದುರ್ಗ, ಗಿರಿದುರ್ಗ, ವನದುರ್ಗಗಳೆಂಬ ನಾಲ್ಕು ಪ್ರಭೇದಗಳು ಈ ಭಾಗದಲ್ಲಿ ಹೆಚ್ಚು ಕಡಿಮೆ ದೊರೆಯುತ್ತವೆ. ಉದ್ದಕ್ಕೂ ಕಾಲ ಸರಿದಂತೆ ಮಧ್ಯಯುಗದ



ಕೊನೆಯವರೆಗೂ ಈ ಭಾಗದಲ್ಲಿ ಕೋಟೆ ಕೊತ್ತಲಗಳ ಅಳವಡಿಕೆ, ಮರಾಠರ ಕಾಲದವರೆಗೂ, ನಡೆದಿದೆ. ಇವುಗಳಲ್ಲಿ ಹತ್ತಾರು ಹೆಸರಿಸಬಹುದು. ಹಾನಗಲ್‌ಕೋಟೆ, ಲಕ್ಕುಂಡಿ ಕೋಟೆ (ಶಿಥಿಲವಾದ ಕೆಲಭಾಗಗಳು ಮಾತ್ರ ಉಳಿದಿವೆ). ಲಕ್ಷ್ಮೇಶ್ವರ, ಸೌಂದತ್ತಿ, ಧಾರವಾಡ(ರಾಷ್ಟ್ರಕೂಟರಿಂದ-ಮರಾಠಾ ಕಾಲದವರೆಗೂ ಕೋಟೆಯ ಅವಶೇಷಗಳು ಕಥೆ ಹೇಳುತ್ತಿವೆ). ಹಳೇ-ಹುಬ್ಬಳ್ಳಿ, ಮಿಶ್ರಕೋಟೆ, ರಾಣೆಬೆನ್ನೂರ, ಹಾವೇರಿ (ಕೆಲ ಅವಶೇಷಗಳು ಮಾತ್ರ ಉಳಿದಿವೆ). ಲಕ್ಷ್ಮೇಶ್ವರ, ನರಗುಂದ, ನರೇಂದ್ರ, ಡಂಬಳ, ಮೋಟೆಬೆನ್ನೂರು, ಕುಂದಗೋಳ, ಮಾಸೂರು, ಕರ್ಜಗಿ, ಐರಣಿ, ಹಾವನೂರು, ಮುಂಡರಗಿ, ಮುಂತಾದ ಇನ್ನೂ ನೂರಾರು ಹೆಸರಿಸದ ಕೋಟೆಯ ತಾಣಗಳು.

ಮುಕ್ತಾಯ

ಆದಾಗಿ ಭೂತಲದಲ್ಲಿಯೇ ಅತೀ ಪ್ರಾಚೀನ ಶಿಲಾಸ್ತರಗಳನ್ನು ತನ್ನೊಡಲಲ್ಲಿ ಇರಿಸಿ, ಅಂದಿನ ಪ್ರಾಗೈತಿಹಾಸಿಕ ನೆಲೆಗಳ ಜೋಡಣೆಗಳೊಂದಿಗೆ ಐತಿಹಾಸಿಕ ಕಾಲೀನ ಸಾಂಸ್ಕೃತಿಕ ಓಟದಲ್ಲಿ ದೇವಾಲಯ, ಅರಮನೆ, ನಗರ, ಹಳ್ಳಿ-ಪಳ್ಳಿ, ಕೋಟೆ-ಕೊತ್ತಲು, ಮಾಸ್ತಿಕಲ್ಲು, ವೀರಗಲ್ಲು, ಶಿಲಾಲೇಖನಗಳು, ಕೆರೆಗಳು, ಬಾವಿಗಳು ಮುಂತಾದ ಪ್ರಾಚ್ಯ ಸಂಪದದ ಭಾರಹೊತ್ತು ನಿಂತ ಧಾರವಾಡದ ನಾಡು ತನ್ನದೇ ಆದ ಇತಿಹಾಸದ ಪುಟಗಳನ್ನು ನೀಡಿದೆ.

ಧಾರವಾಡ ನಾಡು ಪ್ರಾಚ್ಯ ಸಂಪದದ ಹಾಗೂ ನಿಸರ್ಗ ಸಂಪದದ ಸಿರಿಗಳ ಸಂಗಮ. ಅಂತೇ ವರಕವಿಯು ಹೇಳುವಂತೆ,

> "ಅಲ್ಲಿ ಸಂಪಿಗೆ ಇತ್ತು, ಪಾರಿಜಾತವಿತ್ತು ಮುಗಿಲ ಮಲ್ಲಿಗೆ ಇತ್ತು, ತೆಂಗಿತ್ತು, ಹಲಸಿತ್ತು, ನಿಂಬೆಯ ಇಂಬಿತ್ತು, ಎಲ್ಲೆಡೆಗೆ; ಹೊಂಗೆಯ ಸಾಲಿತ್ತು, ಕಣ್ಮುಂದೆ ಕೆರೆಯಿತ್ತು, ಗುಡ್ಡದ ನೆರೆಯಿತ್ತು ಅದರಾಚೆಗೆ; ಬನದೇವಿ ಎಡೆಯಾಟಕೆಡೆಗೊಡುವ ಗುಡ್ಡದ ಸಾಲುಂಟು ಪಡುವಣದೊಳು, ಋತುಗಳ ಏರಿಳಿತ ಕಾಲರಿಂಗಣಗುಣಿತ ಬಿಡಿಬಿಡಿಸಿ ಬರೆದಂತೆ ಚಿತ್ರದೊಳು" ಎಂದೆಲ್ಲ ಆಗಿ ಆಕರ್ಷಕವಾಗಿದ್ದುವು.

*

ಆಧಾರ ಗ್ರಂಥಗಳು

೧. ಡಾ।। ಸುಂದರ, ಅ : *ಪ್ರಾಚ್ಯವಸ್ತು ಸಂಶೋಧನೆ, ಕರ್ನಾಟಕದ ಪ್ರಾಗೈತಿಹಾಸ*

೨. ಡಾ।। ಕಾಮತ ಸೂರ್ಯನಾಥ (ಸಂ) : *ಧಾರವಾಡ ಜಿಲ್ಲಾ ಕರ್ನಾಟಕ ರಾಜ್ಯದ ಗ್ಯಾಝೆಟಿಯರ್*

3. Brown Percy : ***Indian Architecture Budhist & Hindu Period.***

೪. ರಾಮರಾವ್, ಎಸ್ : ***ಮೈಸೂರಿನ ಖನಿಜ ಸಂಶೋಧನೆ***

5. Dr. Rajsekhar S. : **Chalukyan Architecture.**

೬. ಡಾ।। ಬೇಂದ್ರೆ ಡಿ. ಆರ್ : ***ಸಖೀಗೀತ***

೭. ಡಾ।। ಎಸ್. ಕೆ. ಜೋಶಿ : *'ಪ್ರಾಚ್ಯ ಸಂಪದ ಸಿರಿ, ಧಾರವಾಡದ ವೈಖರಿ'*, ಕನ್ನಡಪ್ರಭ ೨.೧೨.೭೯.

೮. *ಲೇಖಕನ ಧಾರವಾಡ ಜಿಲ್ಲೆಯ ಪ್ರಾಚ್ಯ ಸಂಶೋಧನೆ.*

ಡಾ॥ ಅ. ಸುಂದರ*

ಹಿರೆಕೆರೂರು - ಹೊನ್ನಾಳಿ ಪ್ರದೇಶದಲ್ಲಿ ಬಿಲ್ಲುದೇವರು ಮತ್ತು ರಾಮಬಾಣ, ಒಂದು ವಿವೇಚನೆ

೧೯೮೮-೯೦ರ ಅವಧಿಯಲ್ಲಿ ಪುರಾತತ್ವ ಸರ್ವೇಕ್ಷಣ ಇಲಾಖೆ, (ಕೇಂದ್ರ ಸರ್ಕಾರ) ಬೆಂಗಳೂರು ವೃತ್ತದ ಶ್ರೀ ಟಿ.ಎಂ. ಕೇಶವ, ಸಹಾಯಕ ಪುರಾತತ್ವ ಅಧಿಕಾರಿ ಇವರು ಹಿರೆಕೆರೂರು ತಾಲೂಕಿನಲ್ಲಿ ಪುರಾತತ್ವ ಅನ್ವೇಷಣೆ ಮಾಡುತ್ತಿದ್ದಾಗ ಆ ತಾಲೂಕಿನ ಅರಳಿಕಟ್ಟೆ ಗ್ರಾಮದಲ್ಲಿಯ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಒಂದು ಅಪೂರ್ವ ಪ್ರಾಚೀನ ಬಿಲ್ಲನ್ನು** ನೋಡಿದ್ದಾರೆ. ಸ್ಥಳೀಕರು ಇದನ್ನು "ಶ್ರೀರಾಮದೇವರ ಬಿಲ್ಲು" ಎಂದು ಹೇಳುತ್ತಾರೆ. ೧೯೯೫ನೇ ಮೇ ತಿಂಗಳಲ್ಲಿ ನಾನು ನನ್ನ ಸ್ನೇಹಿತರಾದ ಶ್ರೀ ಸಿದ್ಧಯ್ಯ ಹಿರೇಮಠ, ಶ್ರೀ ಜಯದೇವ ಜೈನಕೇರಿ ಮತ್ತು ಶ್ರೀ ಎಸ್.ಜಿ. ಸಾಮಕ್ ಇವರೊಡನೆ ಕಮ್ಮಾರಗಟ್ಟೆ (ಹೊನ್ನಾಳಿ ತಾ. ಶಿವಮೊಗ್ಗ ಜಿ.)ಯಲ್ಲಿ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಅಷ್ಟೆ ಅಪೂರ್ವದ ಕಬ್ಬಿಣದ ಒಂದು ದೊಡ್ಡ ಬಾಣವನ್ನು ನೋಡಿದೆನು. ಸ್ಥಳೀಯರು ಇದನ್ನು 'ರಾಮಬಾಣ'ವೆಂದು ಕರೆಯುತ್ತಾರೆ. ಮತ್ತು ಇಂಥ ಅಪರೂಪದ ಬಾಣಗಳು ಹತ್ತಿರದ ಬೇರೆ, ಬೇರೆ ಗ್ರಾಮಗಳಲ್ಲಿಯು ಒಂದೊಂದು ಇದೆಯೆಂದು ತಿಳಿಸಿದರು. ಹಿಂದೆ, ಬನ್ನಿಕೊಪ್ಪ (ಶಿರಹಟ್ಟಿ ತಾ. ಧಾರವಾಡ ಜಿಲ್ಲೆ)ದಲ್ಲಿ ಒಂದು ಅಪೂರ್ವ ಹಾಗೂ ಬೃಹತ್ ಶ್ರೀರಾಮದೇವರ ಶಿಲ್ಪವನ್ನು[1] ನೋಡಿ ವರದಿ ಮಾಡಿದ್ದೆ. ಈ ಗ್ರಾಮವು ಅರಳಿಕಟ್ಟೆಯ ಉತ್ತರಕ್ಕೆ ಸುಮಾರು ೫೦ ಕಿ.ಮೀ. ದೂರದಲ್ಲಿದೆ. ಇದರಂತೆಯೇ ಕಮ್ಮಾರಗಟ್ಟೆಯು ಅರಳಿಕಟ್ಟೆಯ ದಕ್ಷಿಣಕ್ಕೆ ಸುಮಾರು ೬೦-೭೦ ಕಿ.ಮೀ. ದೂರದಲ್ಲಿದೆ. ಅರಳಿಕಟ್ಟೆಯ ಪಶ್ಚಿಮಕ್ಕೆ ಸುಮಾರು ೫೦ ಕಿ.ಮೀ. ದೂರದಲ್ಲಿ ಶಿರಸಂಗಿಯಿದೆ. ಇದು ಪ್ರಾಚೀನ ಕಾಲದಲ್ಲಿ ಋಷ್ಯಶೃಂಗ ಮುನಿವರ್ಯರ ಆಶ್ರಮವಾಗಿದ್ದು ಶ್ರೀರಾಮ-ಸೀತಾ-ಲಕ್ಷ್ಮಣ ಹನುಮಂತ ಇವರು ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗುತ್ತಿದ್ದಾಗ ಈ ಪವಿತ್ರ ಸ್ಥಳದಲ್ಲಿ ತಮ್ಮ ತಮ್ಮ ಹೆಸರಿನಲ್ಲಿ ರಾಮೇಶ್ವರ ಮೊದಲಾದ ಶಿವ ದೇವಾಲಯಗಳನ್ನು ಕಟ್ಟಿಸಿದರೆಂದು ಇಲ್ಲಿಯ ೧೨ನೇ ಶತಮಾನದ ಶಾಸನ[2]ದಲ್ಲಿ ಹೇಳಿದೆ. ಈ ಹಿನ್ನೆಲೆಯಲ್ಲಿ ಮೇಲೆ ಉಲ್ಲೇಖಿಸಿದ ಕುತೂಹಲಕಾರಿಯಾದ ರಾಮಬಾಣ ಮತ್ತು ಬಿಲ್ಲನ್ನು ವಿವೇಚಿಸಲಾಗಿದೆ.

ಬಿಲ್ಲುದೇವರು

ಅರಳೀಕಟ್ಟೆ ಗ್ರಾಮದಲ್ಲಿಯ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಒಂದು ಪ್ರಾಚೀನ ಗುಡಿ ಇದೆ. ಈ ಗುಡಿಯಲ್ಲಿ ಒಂದು ಬಹಳ ಎತ್ತರದ ಬಿಲ್ಲು ಇದೆ. ಇದು ಮರದ ಬಿಲ್ಲು. ಹೆಡೆ ಮಾತ್ರ ಕಬ್ಬಿಣದ ತಂತಿ, ಸುಮಾರು ೫.೬೮ಮೀ, ಎತ್ತರ. ಸಾಲುಕಲ್ಲು ಗೂಟಗಳ ಮೇಲೆ ಇದನ್ನು ಇಡಲಾಗಿದೆ. ಸ್ಥಳೀಯರು ಇದನ್ನು 'ಶ್ರೀರಾಮದೇವರ ಬಿಲ್ಲು' ಎಂದು ಪೂಜಿಸುತ್ತಾರೆ. ಇದರ ಪ್ರಾಚೀನತೆ ಬಗ್ಗೆ ಸ್ಥಳೀಯರಿಗೆ ಏನೂ ತಿಳಿದಿಲ್ಲ. **ಶ್ರೀರಾಮದೇವರ ಬಿಲ್ಲು** ಅದು. ಆದ್ದರಿಂದ ಅದು ಬಹಳ ಪ್ರಾಚೀನವೆಂದಷ್ಟೆ ಅವರ ನಂಬಿಕೆ.

ಕಮ್ಮಾರಗಟ್ಟೆ

ಇದು ಒಂದು ಸಣ್ಣ ಹಳ್ಳಿ. ತುಂಗಭದ್ರಾ ನದಿ ಎಡದಂಡೆಯ ಮೇಲಿದೆ. ಕನ್ನಡ ಸಾಹಿತ್ಯದಲ್ಲಿ ಹಾಗೂ ಸಾಧು - ಸಂತರ ಪರಂಪರೆಯಲ್ಲಿ ಹೆಸರುವಾಸಿಯಾದ ಆ ಭಾಗದ ಹೆಳವನಕಟ್ಟೆ ಗಿರಿಯಮ್ಮನು (ಸು. ೧೭೫೦ ಕ್ರಿ. ಶ.) ಇಲ್ಲಿಯೇ ಕೊನೆಯಲ್ಲಿ ಅದೃಶ್ಯಳಾದಳೆಂದು ಸ್ಥಳೀಯರು ಹೇಳುತ್ತಾರೆ. ಇವಳೊಬ್ಬಳು ಸಂತಳು ಮತ್ತು ಕವಯಿತ್ರಿ. **ಸೀತಾಕಲ್ಯಾಣ, ಚಂದ್ರಹಾಸನಕಥೆ** ಮೊದಲಾದ ಕಾವ್ಯಗಳನ್ನು ಇವಳು ರಚಿಸಿದಳೆಂದು ಪ್ರತೀತಿ. ಈಕೆ ಸಮೀಪದ ಮಲೆಬೆನ್ನೂರು ಗ್ರಾಮದ ಶ್ರೀ ರಂಗನಾಥ ಸ್ವಾಮಿಯ ಪರಮಭಕ್ತಳು, ಕಮ್ಮಾರಗಟ್ಟೆಯಲ್ಲಿಯ ಶ್ರೀ ಆಂಜನೇಯ ದೇವಸ್ಥಾನವನ್ನು ಮತ್ತು ಈ ಗ್ರಾಮದ ಪಕ್ಕದಲ್ಲಿಯ ತುಂಗಭದ್ರಾ ನದಿಗೆ ಮೆಟ್ಟಲುಗಳನ್ನು ಕಟ್ಟಿಸಿದಳೆಂದು ಹೇಳುತ್ತಾರೆ.

---

* ನಿರ್ದೇಶಕ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಬಿಜಾಪೂರ

ಈ ಊರಿನ ಹೆಸರಿನಲ್ಲಿಯ 'ಕಮ್ಮಾರ' ಸಂಸ್ಕೃತ ಶಬ್ದ ಕರ್ಮಹರ ಎಂಬ ಶಬ್ದದ ತದ್ಭವವೆಂದು ಹೇಳುತ್ತಾರೆ. ಈ ಊರಿಗೆ ಮೂಲತಃ ಇದ್ದ ಕರ್ಮಹರ ಎಂಬ ಹೆಸರು ಹೇಗೆ ಬಂತು ಎಂಬುದಕ್ಕೆ ಒಂದು ಕಥೆಯನ್ನು ಹೇಳುತ್ತಾರೆ.

ತನ್ನ ತಂದೆ ಮಹರ್ಷಿ ಜಮದಗ್ನಿಯ ಅಣತಿಯಂತೆ ತನ್ನ ತಾಯಿಯ ಶಿರಚ್ಛೇದನ ಮಾಡಿದ ಪರಶುರಾಮನು, ತನ್ನ ರಕ್ತಸಿಕ್ತ ಕೊಡಲಿಯನ್ನು ಹಲವಾರು ನದಿ ಕೊಳಗಳಲ್ಲಿ ತೊಳೆದರೂ ಕೂಡಾ ರಕ್ತದ ಕಲೆಗಳು ಹೋಗಲಿಲ್ಲವಂತೆ. ಇದರಿಂದ ದುಃಖಿತನಾದ ಪರಶುರಾಮನು ಸುತ್ತಾಡುತ್ತಾ ಇಲ್ಲಿಗೆ ಬಂದು ನದಿಯಲ್ಲಿ ಕೊಡಲಿಯನ್ನು ತೊಳೆದಾಗ ಅದು ಸ್ವಚ್ಛವಾಯಿತಂತೆ. ಅಂದರೆ ಅವನ ಕರ್ಮವು ಇಲ್ಲಿ ಹರಿದು ಹೋದದ್ದರಿಂದ ಈ ಸ್ಥಳಕ್ಕೆ ಕರ್ಮಹರ ಎಂದು ಪ್ರತೀತಿ, ಮತ್ತು ಈ ಸ್ಥಳವು ಮಹರ್ಷಿ ಕಣ್ವನ ಆಶ್ರಮವೂ ಆಗಿತ್ತಂತೆ.

ಕಮ್ಮಾರ ಎಂಬ ಕನ್ನಡ ಶಬ್ದವು ಕಬ್ಬಿಣ ತಂತ್ರಗಾರಿಕೆ ಗೊತ್ತಿರುವ ಮತ್ತು ಉಪಕರಣಗಳನ್ನು ಮಾಡುವ ತಾಂತ್ರಿಕನೆಂದು ಅರ್ಥವಾಗುತ್ತದೆ. ಪ್ರಾಯಶಃ ಬಹಳ ಹಿಂದೆ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬಿಣ ಲೋಹವನ್ನು ಮತ್ತು ಉಪಕರಣಗಳನ್ನು ತಯಾರು ಮಾಡುವ ದೊಡ್ಡ ದೊಡ್ಡ ಕುಲುಮೆಗಳಿದ್ದು ಇಲ್ಲಿ ಸಿದ್ಧವಾದ ಕಬ್ಬಿಣದ ಸಾಮಾನುಗಳು ಗುಣಮಟ್ಟಗಳಿಂದ ಪ್ರಸಿದ್ಧವಾಗಿದ್ದವೇನೋ! ಆದ್ದರಿಂದ ಕ್ರಮೇಣ ಈ ಸ್ಥಳಕ್ಕೆ ಕಮ್ಮಾರಗಟ್ಟೆ ಎಂದು ಹೆಸರು ಬಂದಿರಬಹುದು. ಇದು ಹೆಚ್ಚು ಸಮಂಜಸವಾಗಿ ಕಾಣುತ್ತದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಈಗ ಈ ಸ್ಥಳದಲ್ಲಿಯ ಪುರಾತತ್ವ ಅವಶೇಷಗಳನ್ನು, ಮುಖ್ಯವಾಗಿ ರಾಮ ಬಾಣವನ್ನು ಪರಿಶೀಲಿಸೋಣ.

ದೇವಾಲಯಗಳು ಮತ್ತು ಮೂರ್ತಿಶಿಲ್ಪಗಳು

ಈಗ ಒಂದು ತೀರ ಸಾಮಾನ್ಯ ಹಳ್ಳಿಯಾಗಿರುವ ಈ ಸ್ಥಳದಲ್ಲಿ ಒಂದು ತೀರ ದುಸ್ಥಿತಿಯಲ್ಲಿರುವ ಪ್ರಾಚೀನ ಇಟ್ಟಿಗೆ ಗುಡಿ, ಕಲ್ಯಾಣ ಚಾಲುಕ್ಯರ ಕಾಲದ ಎರಡು, ಕೆಳದಿ ನಾಯಕರ (ಸು. ೧೪೯೯-೧೭೬೩) ಕಾಲದ ಒಂದು ಒಟ್ಟು ಮೂರು ಶಿಲಾ ದೇವಾಲಯಗಳು ಮತ್ತು ಇಟ್ಟಿಗೆ ಗುಡಿಯೂ, ಹತ್ತಿರ ತೀರ ಸವೆದುಹೋದ ಒಂದು ಮಧ್ಯಯುಗೀನ ಶಿಲಾಶಾಸನವು, ಸುಮಾರು ೧೧-೧೨ನೇ ಶತಮಾನದ ಗಣೇಶ ಸಪ್ತಮಾತ್ರಿಕೆ, ಮಹಿಷಮರ್ದಿನಿ ಮತ್ತು ಯತಿಗಳ ಶಿಲಾಮೂರ್ತಿಗಳು ಹಾಗೂ ೧೭-೧೮ನೇ ಶತಮಾನದ ಬಹುಶಃ ಸ್ಥಳೀಯ ಆಡಳಿತವನ್ನು ನಿರ್ವಹಿಸುತ್ತಿದ್ದ ನಾಯಕರ ಮೂರ್ತಿಗಳು, ವೀರಗಲ್ಲು ಮತ್ತು ಮಹಾಸತಿ ಕಲ್ಲುಗಳು ಇವೆ. ಇವುಗಳಿಂದ ಸ್ಥೂಲವಾಗಿ ೯ ರಿಂದ ೧೮ನೇ ಶತಮಾನದವರೆಗೆ ಈ ಗ್ರಾಮವು ಪ್ರಾಮುಖ್ಯವನ್ನು ಪಡೆದಿದ್ದು ಕೆಳದಿ ಅರಸರ ಕಾಲದಲ್ಲಿ ಒಂದು ಆಡಳಿತ ಕೇಂದ್ರವೂ ಆಗಿತ್ತೆಂದು ತೋರುತ್ತದೆ.

ಇತ್ತೀಚೆಗೆ ಶ್ರೀ ನಾಗರಾಜರಾವ್ ಎಂಬ ಒಬ್ಬ ಅಭಿಯಂತರರು ಹೆಳವನಕಟ್ಟೆ ಗಿರಿಯಮ್ಮನು ಅದೃಶ್ಯಳಾದ ಸ್ಥಳದ ಹತ್ತಿರ ಒಂದು ಸಣ್ಣಗುಡಿಯನ್ನು ಕಟ್ಟಿಸಿ ಅದರಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಒಂದು ಕಾಲ್ಪನಿಕ ಶಿಲಾಮೂರ್ತಿಯನ್ನು ಮಾಡಿಸಿ ಸ್ಥಾಪಿಸಿದರು. ಇದು ಆ ಸಂತಳು ಕಟ್ಟಿಸಿದುದೆನ್ನಲಾದ ಮೆಟ್ಟಲುಗಳ ಹತ್ತಿರ ನದಿಯ ದಡದ ಮೇಲಿದೆ. ಇದರ ಹತ್ತಿರ ಮುರ್ಡೇಶ್ವರ ಎಂಬ ಇನ್ನೊಂದು ಗುಡಿ ಇದೆ. ಈ ಗುಡಿಯ ಒಳಗಿರುವ ಲಿಂಗವು ಪ್ರಾಚೀನ. ಸ್ವಲ್ಪ ದೂರದಲ್ಲಿಯೇ (ಮಹಿಷಾಸುರ ಮರ್ದಿನಿ) 'ಹೊನ್ನತ್ತವ್ವ' ಎಂಬ ಸ್ಥಳೀಯ ದೇವತೆಯ ಒಂದು ಸಣ್ಣ ಗುಡಿ ಇದೆ. ಆಂಜನೇಯ ದೇವಸ್ಥಾನವು ಬಹುಮಟ್ಟಿಗೆ ಕೆಳದಿ ಅರಸರ ಕಾಲದ್ದು. ಅನಂತರ ಇದು ಜೀರ್ಣೋದ್ಧಾರವಾಗಿದೆ. ಇದರ ಸಮೀಪ ಒಂದು ಹಳೆಯ ಹುಣಸೇಮರವಿದೆ. ಹಲವಾರು ಕವಲುಗಳುಳ್ಳ ಇದರ ಬೇರುಗಳು ಸುತ್ತಲೂ ಪ್ರಸರಿಸಿದ್ದು ನೆಲದ ಮೇಲೆ ಸ್ಪಷ್ಟವಾಗಿ ಚೆನ್ನಾಗಿ ಕಾಣುತ್ತದೆ. ನೋಡಿದರೆ ಮರವು ತಲೆ ಕೆಳಗಾಗಿ ಬಿದ್ದಂತೆ ಕಾಣುತ್ತದೆ. ಇದಕ್ಕೂ ಒಂದು ಕಥೆ ಇದೆ. ಶ್ರೀರಾಮ, ಲಕ್ಷ್ಮಣ, ಸೀತಾ ಹನುಮಂತಾದಿಗಳು ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗುವಾಗ ಈ ಸ್ಥಳದಲ್ಲಿ ಸ್ವಲ್ಪ ಸಮಯ ಬೀಡು ಬಿಟ್ಟಿದ್ದರಂತೆ. ಅಡಿಗೆ ಮಾಡುವ ಕಾಲದಲ್ಲಿ ಹುಣಸೇಹಣ್ಣನ್ನು ತರಲು ಸೀತೆಯು ಹನುಮಂತನಿಗೆ ಹೇಳಿದಳಂತೆ, ಯಥಾಪ್ರಕಾರ ಹಿಂದೆ ಯುದ್ಧದಲ್ಲಿ ಜ್ಞಾನತಪ್ಪಿ ಬಿದ್ದ ಲಕ್ಷ್ಮಣನಿಗೋಸ್ಕರ ಔಷಧಿ ತರಲು ಸಂಜೀವಿನಿ ಪರ್ವತವನ್ನೆ ತಂದಹಾಗೆ ಈಗಲೂ ಒಂದು ಹುಣಸೇಮರವನ್ನೆ ತಂದನಂತೆ.



ಯತಿಶಿಲ್ಪ


ಈಗ ಆಂಜನೇಯನ ದೇವಸ್ಥಾನದ ಹತ್ತಿರವಿರುವ ಮರವೆ ಹನುಮಂತನು ಎಸೆದ ಆ ಮರವೆಂದೂ ಅದು ತಲೆಕೆಳಗಾಗಿರುವುದೆಂದು ಜನರು ಹೇಳುತ್ತಾರೆ. ಬೇರುಗಳಿರುವ ಭಾಗವೆ ಕೊಂಬೆ ರೆಂಬೆಗಳಿರುವ ಭಾಗವೆಂದು ಅವರ ಭಾವನೆ.

ಶ್ರೀ ಆಂಜನೇಯ ದೇವಸ್ಥಾನವು ತುಂಬಾ ಕಾರ್ಣಿಕ ವಾದದ್ದೆಂದು ಸ್ಥಳೀಯರ ನಂಬಿಕೆ. ಒಳ್ಳೆ ವೈದ್ಯರಿಂದಲೂ ವಾಸಿ ಮಾಡಲಾಗದಂತಹ ರೋಗಗಳು ಈ ದೇವಸ್ಥಾನದಲ್ಲಿ ಆಂಜನೇಯ ನಿಗೆ ಸೇವೆ ಸಲ್ಲಿಸಿದರೆ ವಾಸಿಯಾಗುವುದೆಂದು ಜನರ ನಂಬಿಕೆ. ನಾನು ಅನ್ವೇಷಣೆ ಮಾಡಿದ ಸಮಯದಲ್ಲಿ ಸುಮಾರು ೮ ದಿನಗಳಿಂದ ಅಲ್ಲಿ ನೆಲೆಸಿ ಸೇವೆ ಮಾಡುತ್ತಿದ್ದ ಒಬ್ಬ ರೋಗಿಯನ್ನು ಮತ್ತು ಅವರ ಸಂಬಂಧಿಕರನ್ನು ನೋಡಿದೆ.

ರಾಮಬಾಣ

ಇದೇ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮೇಲೆ ಹೇಳಿದ ರಾಮಬಾಣವು ಇದೆ. ಇದು ಈಟಿಯಂತೆ ಇದೆ, ಸುಮಾರು ೨.೮೫ಮೀ ಎತ್ತರ, ಪೂರ್ಣ ಕಬ್ಬಿಣದ್ದು, ತುದಿಯ ಭಾಗ ಸ್ವಲ್ಪ ಚಪ್ಪಟೆಯಾಗಿದ್ದು ವಜ್ರಾಕೃತಿಯಲ್ಲಿದೆ. ಸುಮಾರು೦.೬೫ಮೀ ಉದ್ದವಿದೆ. ಉಳಿದ ವರ್ತುಲಾಕಾರದ ದಂಡದ ಭಾಗವು ೨.೨೦ಮೀ ಉದ್ದವಿದ್ದು ಮಧ್ಯೆ ಮಧ್ಯೆ ಉಬ್ಬಿದ್ದು ಕಟ್ಟುಗಳಂತೆ ಕಾಣುತ್ತದೆ. ದಂಡದ ವ್ಯಾಸ ಸುಮಾರು ೦.೧೫ಮೀ. ಬುಡದ ಭಾಗವು ದಂಡದ ಭಾಗಕ್ಕಿಂತ ಹೆಚ್ಚು ದಪ್ಪವಾಗಿದ್ದು ಚತುಷ್ಕೋಣವಾಗಿದೆ. ಬುಡದ ಕಡೆ ಸಪುರವಾಗುತ್ತಾ ಹೋಗಿದೆ. ಮೊಂಡು ತುದಿ ಇದ್ದು ಬುಡದಿಂದ ತುದಿಯವರೆಗೂ ಗಟ್ಟಿಯಾಗಿದೆ. ಆದ್ದರಿಂದ ಇದು ಹಲವಾರು ಕಿಲೋಗಳಷ್ಟು ತೂಕವಿದೆ.

ಕಮ್ಮಾರಗಟ್ಟೆ ರಾಮಬಾಣ



ಕಮ್ಮಾರಗಟ್ಟೆ-೧) ರಾಮಬಾಣ, ೨) ಬಾಣದ ಮೊನೆ ಒಂದು ಮೊಗ್ಗಲು ೩) ಬಾಣದ ಮೊನೆ ಇನ್ನೊಂದು ಮೊಗ್ಗಲು ೪) ಬಾಣದ ಕೆಳಗಿನ ಭಾಗ

ಈ ತರಹದ ಕಬ್ಬಿಣದ ಬಾಣವು (ಈಟಿ) ದೇವರ ಹೊಸ್ನಳ್ಳಿ ಮಲೇಕುಂಬಳೂರು, ಕಿಂದೂರು ಮತ್ತು ಬೆಲೆಮಲ್ಲೂರು, ಈ ಗ್ರಾಮಗಳಲ್ಲಿಯೂ ಇದೆಯೆಂದು ಗ್ರಾಮಸ್ಥರು ಹೇಳಿದರು. ಶ್ರಾವಣ ಮಾಸದ ಗರುಡಪಂಚಮಿ ದಿನ ಈ ಬಾಣವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆಗ ದೇವಾಲಯದ ಪೂಜಾರಿ ಇದರ ಮೇಲೆ ಹತ್ತಿ ಆ ವರ್ಷದಲ್ಲಿ ಆಗುವ ಮಳೆ-ಬೆಳೆಯ ಬಗ್ಗೆ ಭವಿಷ್ಯವನ್ನು ನುಡಿಯುತ್ತಾನೆ. ಇದೇ ರೀತಿ ಅರಳೀಕಟ್ಟೆಯಲ್ಲೂ ಕೂಡಾ ಬಿಲ್ಲು ದೇವರನ್ನು ಮೆರವಣಿಗೆಯಲ್ಲಿ ಕ್ಷೇತ್ರ ಸ್ಥಳವಾದ ಮೈಲಾದಗುಡ್ಡ (ರಾಣೆಬೆನ್ನೂರು ತಾ.)ಕ್ಕೆ ತೆಗೆದುಕೊಂಡು ಹೋಗುವರು. ಇಲ್ಲಿ ಅರ್ಚಕನು ಆ ಬಿಲ್ಲನ್ನು ಹಿಡಿದು ವಾರ್ಷಿಕ ಭವಿಷ್ಯವನ್ನು ಹೇಳುವನು.

ಈ ಸಂದರ್ಭದಲ್ಲಿ ರಾಮಾಯಣದ ಕಿಷ್ಕಿಂಧೆಯೆಂದೂ,[೮] ಮತ್ತು ಕಾರ್ತಿಕೇಯ ವನವೆಂದು ಪ್ರತೀತಿ ಇರುವ ಹಂಪಿ ಮತ್ತು (ಸೊಂಡೂರಿನ ಹತ್ತಿರದ) ಕುಮಾರಸ್ವಾಮಿ ಬೆಟ್ಟವು, (ಕಮ್ಮಾರಗಟ್ಟೆಗೆ ಸುಮಾರು ೧೦೦ ಕಿ.ಮೀ, ದೂರದಲ್ಲಿವೆ. ಬೇರೆಡೆಯಲ್ಲಿ ಈ ಲೇಖಕನು ಚರ್ಚಿಸಿದಂತೆ ಕುಮಾರಸ್ವಾಮಿ ಬೆಟ್ಟ[೯] ಹಾಗು ಹಂಪಿ ಪ್ರದೇಶದಲ್ಲಿ ಕಬ್ಬಿಣದ ಅದುರಿನ ನಿಕ್ಷೇಪವು ಅತ್ಯಂತ ಹೇರಳವಾಗಿದ್ದು, ಅತ್ಯಂತ ಗುಣಮಟ್ಟದ್ದೂ ಆಗಿದೆ. ರಾಮಾಯಣದ **"ಕಿಷ್ಕಿಂಧಾ ಕಾಂಡದಲ್ಲಿ"** ಹೇಳಿರುವಂತೆ ಕಿಷ್ಕಿಂಧೆಗೆ ಹೊರಟಿದ್ದ ಶ್ರೀರಾಮ ಲಕ್ಷ್ಮಣರು ಕುಮಾರಸ್ವಾಮಿ ಬೆಟ್ಟದ ಶ್ರೀ ಕಾರ್ತಿಕೇಯ ದೇವರ ದರ್ಶನವನ್ನು ಮಾಡಿದಾಗ ಪ್ರಬಲ ಶಸ್ತ್ರಾಸ್ತ್ರಗಳುಳ್ಳ ರಾವಣ-ಕುಂಭಕರ್ಣರನ್ನು ಗೆಲ್ಲಲು ಆ ಸ್ಥಳದಲ್ಲಿಯೇ ಶಸ್ತ್ರಗಳನ್ನು ಮಾಡಿಸಿಕೊಂಡು ಹೋಗಬೇಕೆಂದು ಶ್ರೀ ಕಾರ್ತಿಕೇಯ ಸ್ವಾಮಿಯು ಸೂಚಿಸಿದನು. ಅಂದರೆ ಬಹಳ ಹಿಂದಿನಿಂದಲೂ ಈ ಪ್ರದೇಶವು ಉತ್ತಮ ಗುಣಮಟ್ಟದ ಕಬ್ಬಿಣ ಹಾಗೂ ಉಕ್ಕಿನ ಶಸ್ತ್ರಗಳನ್ನು ಸಿದ್ಧಮಾಡುವ ಕಾರ್ಯಾಗಾರಕ್ಕೆ ವಿಶೇಷವಾಗಿ ಪ್ರಸಿದ್ಧವಾಗಿತ್ತೆಂದು ಕಾಣುತ್ತದೆ. ಈ ಪ್ರದೇಶದ ಸುಮಾರು ೫೦ ಕಿ.ಮೀ. ದಕ್ಷಿಣಕ್ಕಿರುವ, ಅಶೋಕ ಚಕ್ರವರ್ತಿ ಶಾಸನ ಉಳ್ಳ ಬ್ರಹ್ಮಗಿರಿಯಲ್ಲಿಯ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳಲ್ಲಿ ವಿವಿಧ ಪ್ರಕಾರಗಳ ಉಕ್ಕಿನ ಶಸ್ತ್ರಗಳು ಹೆಚ್ಚಾಗಿದ್ದುದು ಉತ್ಖನನಗಳಿಂದ ಕಂಡು ಬಂದಿದೆ. ಇಲ್ಲಿ ದೊರೆತ ಶಸ್ತ್ರಗಳನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ನಿತ್ಯ ಕೆಲಸಗಳಿಗೆ ಉಪಯೋಗವಾಗುವಂಥ ತೂತು ಕೊಡಲಿ, ಚಪ್ಪಟೆ ಕೊಡಲಿ, ಉಳಿ, ಕುಡುಗೋಲು ಮೊದಲಾದವು ಮೊದಲನೇ ವರ್ಗದವು. ಬಾಣದ ಮೊನೆ, ಚೂರಿ ಹಾಗೂ ಕಠಾರಿ, ಈಟಿ ಮತ್ತು ಕತ್ತಿ ಮೊದಲಾದ ಶಸ್ತ್ರಗಳು ಎರಡನೇ ವರ್ಗದವು. ಆ ನೆಲೆಯಲ್ಲಿ ಉತ್ಖನನ ಮಾಡಿದ ಎರಡನೇ, ಏಳನೇ ಮತ್ತು ಒಂಭತ್ತನೇ ದುಂಡು ವೃತ್ತ ಕಲ್ಗೋರಿಗಳಲ್ಲಿ ದೊರೆತ ನಾಲ್ಕು ಈಟಿ[೧೦]ಗಳು ವಿಶೇಷವಾಗಿ ಗಮನಾರ್ಹ.

೧. VIIನೇ ದುಂಡು ವೃತ್ತ ಕಲ್ಗೋರಿಯ ಈಟಿ (ಚಿತ್ರ ೩೫, ಸಂಖ್ಯೆ ೧), ಉದ್ದ ೧.೬೮ಮೀ. ಈಟಿ ಮೊನೆಯ ಉದ್ದ

೬೦ ಸೆಂ.ಮೀ. ಮಧ್ಯದಲ್ಲಿಯ ಅಗಲ ೬ ಸೆಂ.ಮೀ. ದಂಡದ ಭಾಗ ಉದ್ದ.

೨. IXನೇ ದುಂಡು ವೃತ್ತದಲ್ಲಿಯ ಈಟಿ (ಚಿತ್ರ ೩೯, ಸಂಖ್ಯೆ ೩೧) ಉದ್ದ ೫೦ ಸೆಂ.ಮೀ. ಈಟಿಯ ಮೊನೆ ೧೬.೫ ಸೆಂ.ಮೀ. ಉದ್ದ, ೩.೮ ಸೆಂ.ಮೀ. ಅಗಲ, ದಂಡದ ಭಾಗ ೨೬ ಸೆಂ.ಮೀ. ಉದ್ದ.

೩. VIIನೇ ವೃತ್ತ ಕಲ್ಗೋರಿಯ ಈಟಿ (ಚಿತ್ರ ೩೯, ಸಂಖ್ಯೆ ೩೨) ೬೦ ಸೆಂ.ಮೀ. ಉದ್ದ, ಮೊನೆ ೨೮ ಸೆಂ.ಮೀ. ಉದ್ದ, ೨ ಸೆಂ.ಮೀ. ಅಗಲ, ದಂಡದ ಭಾಗ ೩೮ ಸೆಂ.ಮೀ. ಉದ್ದ.

೪. IIನೇ ವೃತ್ತ ಕಲ್ಗೋರಿಯ ಅಪರೂಪ ಮಾದರಿಯ ಈಟಿ (ಚಿತ್ರ ೩೯, ಸಂಖ್ಯೆ ೩೪), ೮೪ ಸೆಂ.ಮೀ. ಉದ್ದ ಮೊನೆ ೨೦ ಸೆಂ.ಮೀ. ಉದ್ದ, ದಂಡದ ಭಾಗ ೫೬ ಸೆಂ.ಮೀ. ಉದ್ದ ೧೨ ಮಿ.ಮೀ. ವ್ಯಾಸ.

ಕುಮಾರಸ್ವಾಮಿ ಬೆಟ್ಟಕ್ಕೆ ಉತ್ತರಕ್ಕಿರುವ ಮಸ್ಕಿಯ (೧೯೫೪ರಲ್ಲಿಯ) ಉತ್ಖನನದಲ್ಲಿ ೫ನೇ ಪ್ರಕಾರದ ಒಂದು ಕಲ್ಗೋರಿಯಲ್ಲಿ ದೊರೆತ ಈಟಿಗಳು ಮತ್ತು ಕಠಾರಿಗಳಲ್ಲಿ ಒಂದು ಈಟಿಯು ಬ್ರಹ್ಮಗಿರಿಯ ಈಟಿಯಂತೆ ಇದೆ. ಇದರ ಅಳಿದುಳಿದ ಭಾಗದ ಉದ್ದ ೮೩ಸೆಂ.ಮೀ. ಇಲ್ಲಿಂದ ಮತ್ತೆ ಸುಮಾರು ೧೦೦ ಕಿ.ಮೀ. ಉತ್ತರಕ್ಕಿರುವ ಜೇವರಗಿ ಮತ್ತು ಅಂಡೋಲದಲ್ಲಿ ಮೆಡೋಸ್ ಟೇಲರ್‌ರವರು ಪರೀಕ್ಷಿಸಿದ ಕಲ್ಗೋರಿಗಳಲ್ಲಿ ಮೂರು ಕಾಲಿನ ಅಡ್ಡಣಿಗೆ ಮತ್ತು ತಾಮ್ರದ ನಾಲಿಗೆಯುಳ್ಳ ಕಬ್ಬಿಣದ ಗಂಟೆಯೊಡನೆ ಈಟಿಗಳು ಶೋಧವಾದವು. ಬ್ರಹ್ಮಗಿರಿ ಮತ್ತು ಮಸ್ಕಿಯ ಕಬ್ಬಿಣಯುಗದ ಕಲ್ಗೋರಿಗಳ ಕಾಲಮಾನ ಸು.ಕ್ರಿ. ಪೂ.೯೦೦-೨೦೦ರ ವರೆಗೆ.

ಹಂಪಿಯ ಹತ್ತಿರ ಉತ್ತರಕ್ಕೆ ಹಿರೆಬೆನಕಲ್‌ಗುಡ್ಡದಲ್ಲಿನ ಕಬ್ಬಿಣ ಯುಗದ ಬೃಹತ್‌ಶಿಲಾಸಂಸ್ಕೃತಿ ಕಲ್ಗೋರಿಗಳ ನೆಲೆಯ ಸಮೀಪದ ಮತ್ತು ಆ ಸಂಸ್ಕೃತಿ ಕಾಲದ ಗವಿ ವರ್ಣ ಚಿತ್ರಗಳಲ್ಲಿಯ ಕಬ್ಬಿಣದ ವಿವಿಧ ಆಯುಧಗಳನ್ನು ಹಿಡಿದಿರುವ ಕುದುರೆ ಸವಾರರ ಚಿತ್ರಗಳು ಗಮನಾರ್ಹ.

ಪ್ರಾದೇಶಿಕ ಅನ್ವೇಷಣೆಯು ತೋರಿಸಿಕೊಟ್ಟಂತೆ ಮಸ್ಕಿಯಿಂದ ಬ್ರಹ್ಮಗಿರಿಯ ಪ್ರದೇಶದಲ್ಲಿ ಕೆಲವು ಪ್ರಕಾರಗಳ ನೂರಾರು ಕಲ್ಗೋರಿಗಳುಳ್ಳ ಹಲವಾರು ಬೃಹತ್‌ಶಿಲಾಸಂಸ್ಕೃತಿಯ ನೆಲೆಗಳಿವೆ. ಇವುಗಳು ನಿರ್ಮಿಸಿದ ಜನವರ್ಗದಲ್ಲಿ ಕೆಲವು ಜನಸಮುದಾಯಗಳು ಉತ್ತಮ ಕಬ್ಬಿಣ ಲೋಹವನ್ನು ಸಿದ್ಧಮಾಡಿ ಅದರಿಂದ ಉತ್ತಮ ಉಕ್ಕಿನಶಸ್ತ್ರಗಳನ್ನು ತಯಾರುಮಾಡುವುದರಲ್ಲಿ ನಿಪುಣರಾಗಿದ್ದರು ಎಂಬುದು ಅನ್ವೇಷಣೆ, ಉತ್ಖನನ ಮತ್ತು ವೈಜ್ಞಾನಿಕ ಅನ್ವೇಷಣೆಗಳಿಂದ ಸಿದ್ಧವಾಗಿದೆ. ಮತ್ತು ಈ ಒಂದು ವಿಶಿಷ್ಟ ತಂತ್ರಗಾರಿಕೆಗೆ ಅವರು ಹೆಸರುವಾಸಿಗಳಾಗಿದ್ದರೆಂದು ಹೇಳಬಹುದು. ಬಹುಶಃ ಈ ಪ್ರದೇಶದ ಆರ್ಥಿಕ ಅಭಿವೃದ್ಧಿ ಕಾರಣದಿಂದಲೇ ಅಶೋಕ ಚಕ್ರವರ್ತಿಯು ತನ್ನ ಉಚ್ಚವರ್ಗದ ಅಧಿಕಾರಿಗಳನ್ನು ಅಂದರೆ ಮಹಾಮಾತ್ರರನ್ನು ಈ ಪ್ರದೇಶದಲ್ಲಿ ನೇಮಿಸಿ, ತನ್ನ ಅಧಿಕಾರವನ್ನು ಪರೋಕ್ಷವಾಗಿ, ಈ ಪ್ರದೇಶದ ಹಲವಾರು ಎಡೆಗಳಲ್ಲಿ ತನ್ನ ಶಾಸನವನ್ನು ಸ್ಥಾಪಿಸುವುದರ ಮೂಲಕ ಸೂಚಿಸಿದನೆಂದು ತೋರುತ್ತದೆ. ಈಗಾಗಲೇ ಗೊತ್ತಿರುವ ಹಾಗೆ ಬ್ರಹ್ಮಗಿರಿ ಸಿದ್ಧಾಪುರವಲ್ಲದೆ ಜಟ್ಟಿಂಗ ರಾಮೇಶ್ವರ (ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ) ಉದಗೊಳಂ, ನಿಟ್ಟೂರು (ಶಿರಗುಪ್ಪ ತಾ. ಬಳ್ಳಾರಿ ಜಿಲ್ಲೆ), ಕೊಪ್ಪಳ (ಎರಡು ಕಿರಿಯ ಶಾಸನಗಳು) ಮಸ್ಕಿ ಈ ಶಾಸನದಲ್ಲಿ ದೇವಾನಾಂ ಪ್ರಿಯದರ್ಶಿಯ ವೈಯಕ್ತಿಕ ಹೆಸರು ಅಶೋಕ ಎಂದೂ ಹೇಳಲಾಗಿದೆ). ಸನ್ನತಿ (ಎಳ್ಡು ಪ್ರಧಾನ ಶಾಸನಗಳು ಹಾಗೂ ಕಳಿಂಗದ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು) ಈ ಸ್ಥಳಗಳಲ್ಲಿ ಶಾಸನಗಳಿದ್ದು ಇವು ಸೀಮಿತ ಪ್ರದೇಶದಲ್ಲಿ ಅಧಿಕವಾಗಿ ಕೇಂದ್ರೀಕೃತವಾಗಿರುವುದು ಸ್ಪಷ್ಟ.

ಹೀಗೆ ವಿವಿಧ ಪ್ರಕಾರಗಳಿಂದ ಪುರಾತತ್ವ ಪ್ರಮಾಣಗಳು ಅಂದರೆ ಉತ್ಖನನಗಳಿಂದ ದೊರೆತ ಈಟಿ ಮತ್ತು ಖಡ್ಗಗಳು ಸಮಕಾಲೀನ ಗವಿವರ್ಣ ಚಿತ್ರಗಳು ಹಾಗೂ ಕಬ್ಬಿಣದ ಬೃಹತ್ ಶಿಲಾಸಂಸ್ಕೃತಿ ಘಟ್ಟದ ಕೊನೆಯ ಭಾಗದಲ್ಲಿ ಐತಿಹಾಸಿಕ ಸಂದರ್ಭಗಳು ಹಾಗೂ ರಾಮಾಯಣದಲ್ಲಿ ಉಲ್ಲೇಖಿಸಲ್ಪಟ್ಟ ಕಾರ್ತಿಕೇಯ ವನಕ್ಕೆ ಸಂಬಂಧಿಸಿದ ಪಾರಂಪರಿಕ ಕಥನಗಳು ಒಂದನ್ನೊಂದು ಎತ್ತಿ ಹಿಡಿಯುತ್ತವೆ.

ಈ ಕಮ್ಮಾರಗಟ್ಟೆಯ ರಾಮಬಾಣದ ವಿಷಯದ ಬಗ್ಗೆ ಚರ್ಚೆಯನ್ನು ಮುಂದುವರೆಸುವ, ಈ ಗ್ರಾಮ ಪ್ರದೇಶವು ಮೇಲೆ ವಿವರಿಸಿದ ಕಬ್ಬಿಣ ಹಾಗೂ ಉಕ್ಕಿನ ಸಾಮಾನುಗಳನ್ನು ಉಪಕರಣಗಳನ್ನು, ಶಸ್ತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರು ಮಾಡುತ್ತಿದ್ದ ಬ್ರಹ್ಮಗಿರಿ-ಹಂಪಿ-ಕುಮಾರಸ್ವಾಮಿಬೆಟ್ಟ-ಮಸ್ಕಿ ಪ್ರದೇಶದ ಪಶ್ಚಿಮ ಭಾಗವೆಂದೇ ಹೇಳಬಹುದು. ಆದರೆ ಇಲ್ಲಿಯೂ ಕಬ್ಬಿಣ ಹಾಗೂ ಉಕ್ಕಿನ ತಯಾರಿಕೆಯ ಚಟುವಟಿಕೆಗಳು ಬ್ರಹ್ಮಗಿರಿ-ಮಸ್ಕಿ ಪ್ರದೇಶದಲ್ಲಿಯಾದವುಗಳಷ್ಟೆ ಪ್ರಾಚೀನವೇ ಎಂಬುದನ್ನು ಸಂಶೋಧಿಸಬೇಕಾಗಿದೆ. ಆದರೂ ಸದ್ಯದ ಪರಿಸ್ಥಿತಿಯಲ್ಲಿ ಇಲ್ಲಿಯ ಈ ಚಟುವಟಿಕೆಯ ಪ್ರಾಚೀನತೆ ಬಗ್ಗೆ ಅಸ್ಪಷ್ಟವಾಗಿದ್ದರೂ ಕೂಡ ಕೆಲವು ಸೂಚನೆಗಳಿವೆ. ಈ ಭಾಗದ ತುಂಗಭದ್ರಾ ಪ್ರದೇಶದಲ್ಲಿ ಪ್ರಾಗೈತಿಹಾಸ ಕಾಲದ ವಿವಿಧ ಸಾಂಸ್ಕೃತಿಕ ಘಟ್ಟಗಳ ಮಾನವ ಸಂಸ್ಕೃತಿ ನೆಲೆಗಳಿವೆ. ಮಧ್ಯ ಮತ್ತು ಅಂತ್ಯ ಹಳೇ ಶಿಲಾಯುಗದ ಪುರಾತತ್ವ ಅವಶೇಷಗಳುಳ್ಳ ತಕ್ಕನಹಳ್ಳಿ ನೂತನ ಶಿಲಾಯುಗ-ಕಬ್ಬಿಣಯುಗದ ಬೃಹತ್‌ಶಿಲಾಸಂಸ್ಕೃತಿ- ಆದಿ ಇತಿಹಾಸ ಕಾಲದ ಪುರಾತತ್ವ ಸಂಸ್ಕೃತಿಗಳ ಅವಶೇಷಗಳುಳ್ಳ ನೆಲೆಗಳು ಕಮ್ಮಾರಗಟ್ಟೆಯ ಸುತ್ತುಮುತ್ತಲೂ ಇವೆ. ಉದಾಹರಣೆ: ದಕ್ಷಿಣಕ್ಕೆ ಅನವೇರಿ, ನಾಗಸಮುದ್ರ, ಉತ್ತರಕ್ಕೆ ಕೊದೂರನಹಳ್ಳಿ (ಹರಿಹರ ತಾ.

ಚಿತ್ರದುರ್ಗ ಜಿ.) ಮೊದಲಾದವು. ಆದ್ದರಿಂದ ಉತ್ತಮ ಗುಣಮಟ್ಟದ ಕಬ್ಬಿಣ ಆದುರಿನ ನಿಕ್ಷೇಪವುಳ್ಳ ಕಮ್ಮಾರಗಟ್ಟೆಯ ಪ್ರದೇಶದಲ್ಲಿಯೂ ಬಹಳ ಪ್ರಾಚೀನ ಕಾಲದಿಂದಲೇ ಕಬ್ಬಿಣ ಅದಿರು ನಿಕ್ಷೇಪವನ್ನು ಗುರುತಿಸಿ ಅದಿರನ್ನು ಸಂಗ್ರಹಿಸಿ ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುವ ಚಟುವಟಿಕೆ ಇದ್ದಿರುವ ಸಾಧ್ಯತೆ ಇದೆ. ಕೊಮಾರನಹಳ್ಳಿಯಲ್ಲಿಯ ಕಬ್ಬಣದ ಕಲ್ಗೋರಿಗಳ ಉತ್ಖನನದಿಂದ ದೊರೆತ ಕಬ್ಬಿಣದ ಸಾಮಾನುಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ಅವುಗಳು ಸ್ಥಳೀಯ ಅದುರಿನಿಂದಲೇ ತಯಾರಿಸಲ್ಪಟ್ಟಿವೆ ಎಂಬುದು ಖಚಿತವಾಗಿದೆ. (ಅಗ್ರವಾಲ ಒ.ಪಿ. ೧೯೯೦) ಕಲ್ಗೋರಿಗಳ ಕಾಲಮಾನವನ್ನು ಇವುಗಳಲ್ಲಿ ದೊರೆತ ·ಮೃತ್‌ಪಾತ್ರೆಗಳ, ಥರ್ಮೋಲೂಮಿನಿಸೆನ್ಸ್ ಎಂಬ ವೈಜ್ಞಾನಿಕ ವಿಶ್ಲೇಷಣೆಯಿಂದ[೧೦] ಸರಾಸರಿ ಕಾಲಮಾನವು ಕ್ರಿ.ಪೂ. ೧.೨೦೦ ಎಂದು ನಿರ್ಧರಿಸಲಾಗಿದೆ. ಎರಡನೆಯದಾಗಿ ಕಮ್ಮಾರಗಟ್ಟೆಯ ಕಬ್ಬಿಣ ತಂತ್ರಗಾರಿಕೆಯಿಂದ ಉಂಟಾದ, ನೆಲದ ಮೇಲೆ ಅಲ್ಲಲ್ಲಿ ದೊರೆಯುವ ಕಬ್ಬಿಣ ಕಿಟ್ಟದ ಭೌತಿಕ ಲಕ್ಷಣಗಳು ಮಧ್ಯಯುಗೀನ ಕಾಲದ ಕಬ್ಬಿಣದ ಲಕ್ಷಣಗಳಿಂದ ಸ್ವಲ್ಪಮಟ್ಟಿಗೆ ಭಿನ್ನವಾಗಿವೆ. ಮೂರನೆಯದಾಗಿ ರಾಮಬಾಣದ ಆಕೃತಿ ಮತ್ತು ಲಕ್ಷಣಗಳು ಅವು ಪ್ರಾಚೀನವೆಂದೇ ಸೂಚಿಸುವ ಹಾಗೆ ಕಾಣುತ್ತದೆ. ಈ ಸಂದರ್ಭದಲ್ಲಿ ಬ್ರಹ್ಮಗಿರಿಯ ಈಟಿಗಳನ್ನು ಇದರೊಡನೆ ತುಲನಾತ್ಮಕವಾಗಿ ನೋಡುವುದು ಅವಶ್ಯ. ಬ್ರಹ್ಮಗಿರಿಯ ಈಟಿ ಮೊನೆಗಳು ಎರಡೂ ಬದಿಗಳಲ್ಲಿ ಸ್ವಲ್ಪ ಉಬ್ಬಿದ್ದರೂ ಚಪ್ಪಟೆ ಎಂದೇ ಹೇಳಬೇಕು. ಇದು ವಜ್ರಾಕೃತಿಯಲ್ಲಿದ್ದು ಮೇಲಿನ ಮತ್ತು ಕೆಳಗಿನ ಬದಿಗಳು ಸ್ವಲ್ಪ ಮಟ್ಟಿಗೆ ಅಸಮ. ಬ್ರಹ್ಮಗಿರಿಯ ಒಂದು ಈಟಿಯ[೧೧] ಬುಡಭಾಗವು ದಪ್ಪವಾಗಿದ್ದು ತುದಿಯು ಗೋಲಿಯಂತೆ ಉಬ್ಬಿದೆ. ಈ ಎಲ್ಲ ಲಕ್ಷಣಗಳೂ ಕಮ್ಮಾರಗಟ್ಟೆಯ ರಾಮ ಬಾಣದಲ್ಲಿದೆ. ಬ್ರಹ್ಮಗಿರಿಯ ಈಟಿಗಳು ಸು. ೫೬ಸೆಂ.ಮೀ.ನಿಂದ ೧.೬೮ ಮೀ. ಉದ್ದವಾಗಿವೆ. ಇವುಗಳ ಮೊನೆಗಳು ಸ್ವಲ್ಪ ನೀಳವಾಗಿವೆ. ಆದ್ದರಿಂದ ಈ ಬೃಹತ್‌ಶಿಲಾಸಂಸ್ಕೃತಿಯ ಈಟಿಗಳು ಇತಿಹಾಸಕಾಲದ ಈ ರಾಮಬಾಣದ ಪೂರ್ವ ಭಾವಿ ಶಸ್ತ್ರಗಳೆಂದು ತಿಳಿಯಲಡ್ಡಿಯಿಲ್ಲ.

ಕ್ರಿಸ್ತಶಕೆ ಆರಂಭದ ಹೊತ್ತಿಗಾಗಲೇ ಈ ಪ್ರದೇಶದಲ್ಲೆಲ್ಲಾ ಶ್ರೀರಾಮನು ಮರ್ಯಾದಾ ಪುರುಷೋತ್ತಮನೆಂದೂ, ಪಾಂಡವರೂ ಧರ್ಮಭೀರುಗಳೆಂದೂ ಚೆನ್ನಾಗಿಯೇ ಪ್ರತೀತಿ ಇತ್ತು. ಆದಿ ಕದಂಬರ ತಾಮ್ರ ಶಾಸನಗಳ ಉದಾಹರಣೆಗೆ ವಿಜಯಶಿವ ಮೃಗೇಶ ವರ್ಮನ ಸುಮಾರು ಕ್ರಿ.ಶ. ೪೬೨ರ ಹಿಟ್ನಾಹಿಬ್ಬಾಗಿಲು ತಾಮ್ರ ಶಾಸನದಲ್ಲಿ[೧೨] **ರಾಮಗೀತೆ, ಭೀಷ್ಮಗೀತೆ, ವಿದುರಗೀತೆ** ಮೊದಲಾದ ಧರ್ಮ ನೀತಿ ಸಂಹಿತೆಗಳ ಉಲ್ಲೇಖಗಳಿವೆ. ಬಹುಶಃ ಇವು ಆಗಲೇ ರಾಜರು ಮಹಾರಾಜರುಗಳಿಗೆ ಧರ್ಮ ಮತ್ತು ನೀತಿಯ ಕೈಪಿಡಿಗಳಾಗಿದ್ದವು. ಮುಂದುವರೆದು ಕಮ್ಮಾರಗಟ್ಟೆಯ ಉತ್ತರಕ್ಕೆ ಸುಮಾರು ೧೦೦ ಕಿ.ಮೀ. ದೂರದಲ್ಲಿಯ ಬನ್ನಿಕೊಪ್ಪದಲ್ಲಿ (ಶಿರಹಟ್ಟಿ ತಾ. ಧಾರವಾಡ ಜಿಲ್ಲೆ) ಸುಮಾರು ೨ಮೀ. ಎತ್ತರದ ಮಹಾವಿಷ್ಣುವಿನ ಅವತಾರವೆಂದು ಸೂಚಿಸುವ ಶ್ರೀರಾಮನ ಒಂದು ಬೃಹತ್ ಶಿಲಾಮೂರ್ತಿ ಇದೆ. ಇದರ ಕಾಲಮಾನ ಸುಮಾರು ೯ನೇ ಶತಮಾನದ ಕೊನೆಯ ಭಾಗ. ಈ ಪ್ರಕಾರದ ಇಷ್ಟು ಪ್ರಾಚೀನ ಶಿಲಾಮೂರ್ತಿಯು ಕರ್ನಾಟಕದಲ್ಲಿ ಇದೊಂದೇ. ಇವೆಲ್ಲ ಅಂಶಗಳನ್ನು ಗಮನಿಸಿದಾಗ ಪೂರ್ವದಿಂದ ಪಶ್ಚಿಮಕ್ಕೆ ಹಂಪಿ-ಕಮ್ಮಾರಗಟ್ಟೆ ಉತ್ತರದಿಂದ-ದಕ್ಷಿಣಕ್ಕೆ ಬನ್ನಿಕೊಪ್ಪ-ಕಮ್ಮಾರಗಟ್ಟೆ ಈ ಪ್ರದೇಶವು ಬಹಳ ಪ್ರಾಚೀನ ಕಾಲದಿಂದಲೆ ರಾಮಕಥಾ ಪರಂಪರೆಗೆ ಸೇರಿದ್ದ ಪೀಳಿಗೆಯವರಿಂದ ನಿಬಿಡವಾಗಿತ್ತೇನೊ ಎಂಬ ಅನುಮಾನಕ್ಕೆ ಆಸ್ಪದವಿದೆ. ಕಮ್ಮಾರಗಟ್ಟೆಯ ಪ್ರಾಚೀನ ಕಬ್ಬಿಣ ತಯಾರಿಕೆಯ ನೆಲೆಯನ್ನು ಮತ್ತು ರಾಮಬಾಣವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅಧ್ಯಯನ ಮಾಡುವುದು ಅವಶ್ಯವಿದೆ. ಈ ಅಧ್ಯಯನಗಳಿಂದ ಈಗಾಗಲೇ ಸೂಚಿಸಿದ ರಾಮಬಾಣದ ಪ್ರಾಚೀನತೆಯು ಸಿದ್ಧವಾದಲ್ಲಿ ಆಗ ಈ ಪ್ರದೇಶಕ್ಕೆ ಶ್ರೀರಾಮನ ಆಗಮನ ಮತ್ತು ಶ್ರೀರಾಮನು ಈ ಪ್ರದೇಶದ ಕಬ್ಬಿಣದ ಶಸ್ತ್ರಗಳನ್ನು ಆಯ್ದುಕೊಂಡ ವಿಷಯಗಳುಳ್ಳ ಪಾರಂಪರಿಕ ಕಥೆಗಳಲ್ಲಿ ಸೂಚಿತ ಐತಿಹಾಸಿಕ ಅಂಶಗಳಿವೆ ಎಂದು ಹೇಳಬಹುದು. ಈ ಅಂಶಗಳ ಸತ್ಯಾ-ಸತ್ಯತೆಗಳನ್ನು ಮತ್ತು ವ್ಯಾಪ್ತಿಗಳನ್ನು ಕಂಡು ಹಿಡಿಯಬೇಕಾಗಿದೆ. ಪ್ರಾಯಶಃ ಇಂಥ ಕಬ್ಬಿಣ ಶಸ್ತ್ರಗಳನ್ನು ಸಿದ್ಧಮಾಡುತ್ತಿದ್ದ ಬೃಹತ್ ಶಿಲಾಸಂಸ್ಕೃತಿ ಜನ ವರ್ಗಗಳೇ ಈ ಶ್ರೀರಾಮ ಮತ್ತು ಪಾಂಡವರ ಕಥೆಗಳ ಪರಂಪರೆಗೆ ಸೇರಿದವರಾಗಿದ್ದು ತಾವು ಸಿದ್ಧ ಮಾಡಿದ ಈಟಿಗಳಿಗೆ, ಬಾಣಗಳಿಗೆ, ರಾಮಬಾಣ ಎಂದು ಹೆಸರು ಕೊಡುತ್ತಿದ್ದರೇನೋ! ಈಗಲೂ ಕೂಡ ನಮ್ಮ ವಿಜ್ಞಾನಿಗಳ ಮಹತ್ತರ ಸಾಧನೆಗಳಾದ ಇನ್‌ಸ್ಯಾಟ್‌ಗಳಿಗೆ ಆರ್ಯಭಟ ಭಾಸ್ಕರ ಮೊದಲಾದ ಹೆಸರುಗಳನ್ನು ಕೊಡುವುದು ನಮ್ಮ ಪರಂಪರೆಯಿಂದ ಬಂದಿರುವುದಾಗಿದೆ. ಹೀಗೆ ಇಂತಹ ಐತಿಹಾಸಿಕ ಅಂಶಗಳೂ ಬೆಳಕಿಗೆ ಬರಬಹುದು.

ಕಮ್ಮಾರಗಟ್ಟೆ ಪ್ರದೇಶದಲ್ಲಿ ಮುನಿ ಪರಶುರಾಮನ ಪಾಪವು ತೊಳೆಯಿತೆಂಬ ಹಾಗೂ ಅದು ಕಣ್ವಾಶ್ರಮ ಎಂಬ ಕಥೆಗಳನ್ನು ವಿಶಾಲವಾದ ಭೌಗೋಳಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಪರೀಕ್ಷಿಸಬೇಕಾಗಿದೆ. ಹಾಗೆ ಕಬ್ಬಿಣ ತಂತ್ರಗಾರಿಕೆಯೂ ಒಂದು ಸಿದ್ಧಿ. ಇಲ್ಲಿ ಸಿದ್ದೇಶ್ವರನೆಂಬ ದೇವಾಲಯವು ತತ್ಸಂಬಂಧ ಯತಿಗಳ ಶಿಲ್ಪಗಳನ್ನು ಇವೆಲ್ಲದರ ಹಿನ್ನೆಲೆಯಲ್ಲಿ ಗಂಭೀರವಾಗಿ ಪರಿಶೀಲಿಸಬೇಕಾಗಿದೆ. *



ಪಾರ್ವತಿಮೂರ್ತಿ ಶಿಲ್ಪ, ಹಳವನಕಟ್ಟೆ ಗಿರಿಯಮ್ಮನ ಗುಡಿ, ನಾಯಿಕಿತಿಯ ಶಿಲ್ಪ,

ಆಧಾರ ಸೂಚಿ ಮತ್ತು ಟಿಪ್ಪಣಿಗಳು

** ಅರಳಿಕಟ್ಟೆಯಲ್ಲಿಯ 'ಶ್ರೀರಾಮದೇವರ ಬಿಲ್ಲು' ಇದರ ಬಗ್ಗೆ ಮಾಹಿತಿಯನ್ನು ಒದಗಿಸಿದ ಶ್ರೀ ಟಿ. ಎಂ. ಕೇಶವ ಅವರಿಗೆ ನಾನು ಕೃತಜ್ಞ

೧. ಅ. ಸುಂದರ, ಅ: ೧೯೯೧ : 'ಹಿಡಿಂಬ ಪಟ್ಟಣ ಒಂದು ವಿವೇಚನ", **ಇತಿಹಾಸ ದರ್ಶನ ಸಂಪುಟ ೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪುಟ ೮೨ ಚಿತ್ರ ಪು.೨೦೧ ಎದುರಿನದು.**

೨. ಅಣ್ಣಿಗೇರಿ ಎ.ಎಂ. : **ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸಂ.೧, ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಶಾಸನ ಸಂಖ್ಯೆ ೨೫.**

೩. ಸುಂದರ, ಅ.೧೯೯೪ : ಹಂಪಿ, ದ ಏನ್‌ಶಿಯೆಂಟ್ ಕಿಷ್ಕಿಂಧ, **ವಿಶ್ವಂಭರ** (ಡಾ.ವಿ. ಎಸ್. ಪಾಠಕ್, ಅಭಿನಂದನ ಗ್ರಂಥ), ಹರ್ಮನ್ ಪಬ್ಲಿಷರ್ಸ್, ನವದೆಹಲಿ ಪುಟಗಳು

೪. ಸುಂದರ, ಅ. ೧೯೯೪ : "ಶ್ರೀ ಮದ್ರಾಮಾಯಣದ ಕಾರ್ತಿಕೇಯ ವನವು ಸೊಂಡೂರಿನ ಕುಮಾರಸ್ವಾಮಿ ಬೆಟ್ಟವೆ" **ಇತಿಹಾಸ ದರ್ಶನ** *ಸಂಪುಟ, ೯ (ಕ.ಇ.ಅ).* *ಪುಟಗಳು.*

೫. **ಏನ್‌ಶಿಯೆಂಟ್ ಇಂಡಿಯಾ** : *ನಂ.೪ (ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆ ಸಂಶೋಧನಾ ನಿಯತಕಾಲಿಕೆ, ಪುಟ ೧೮೧-೩೧೦)*

೬. **ಏನ್‌ಶಿಯೆಂಟ್ ಇಂಡಿಯಾ** : *ನಂ.೧೩, ಪುಟಗಳು ೧೩-೧೪೧.*

೭. ಸುಂದರ, ಅ.೧೯೭೩ : *"ಫರ್ದರ್ ನೋಟಿಸಸ್ ಆಫ್ ರಾಕ್ ಫೆಯಿಂಟಿಂಗ್ಸ್ ಇನ್ ಹಿರೆ ಬೆನಕಲ್ ರಾಯಚೂರು ಡಿಸ್ಟ್ರಿಕ್ಟ್, ಮೈಸೂರು ಸ್ಟೇಟ್"* **ಜರ್ನಲ್ ಆಫ್ ಇಂಡಿಯನ್ ಹಿಸ್ಟ್ರಿ** *ನಂ.೫೨ ಭಾಗ ೧-೨, ಕೇರಳ ವಿಶ್ವವಿದ್ಯಾಲಯ, ತಿರುವನಂತಪುರಂ.*

೮. ಅಗ್ರವಾಲ್ ಒ.ಪಿ. ಮತ್ತು ಇತರರು ೧೯೯೦ : *"ಐರನ್ ಆಬ್ಜಕ್ಟ್ಸ್ ಫ್ರಂ ಸೌತ್ ಇಂಡಿಯನ್ ಮೆಗಲಿಥ್ಸ್ (ಕರ್ನಾಟಕ) :ಎ* **ಟೆಕ್ನಲಾಜಿಕಲ್ ಸ್ಟಡಿ ಆ್ಯಂಡ್ ಸಿಗ್ನಿಫಿಕೆನ್ಸ್" ಆರ್ಕಿಯಾಲಜಿ ಆಫ್ ಕರ್ನಾಟಕ** *(ಸಂ.ಅ. ಸುಂದರ), ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಮೈಸೂರು, ಪುಟಗಳು ೨೧೯-೨೩೪.*

೯. ಸುಂದರ, ಅ. ೧೯೯೩ : *"ಶಿವಮೊಗ್ಗ ನಗರ ಪ್ರದೇಶದಲ್ಲಿಯ ಪ್ರಾಗೈತಿಹಾಸಿಕ ಕುರುಹುಗಳು"* **ವಜ್ರಪಥ,** *ಕರ್ನಾಟಕ ಸಾಹಿತ್ಯ ಸಂಘ, ಶಿವಮೊಗ್ಗ, ಪುಟಗಳು ೧೫೦-೧೬೩.*

೧೦. ನಾಗರಾಜರಾವ್ ಎಂ.ಎಸ್. ೧೯೯೦ : *"ಗ್ರೇವ್ಸ್ ಆಫ್ ದಿ ಅರ್ಲಿ ಐರನ್ ಯೂಸಿಂಗ್ ಪೀಪಲ್ ಆ್ಯಟ್ ಕೊಮಾರನ ಹಳ್ಳಿ"* **ಆರ್ಕಿಯಾಲಜಿ ಆಫ್ ಕರ್ನಾಟಕ,** *ಪುಟಗಳು ೩೧೧-೩೨೦.*

೧೧. **ಏನ್‌ಶಿಯೆಂಟ್ ಇಂಡಿಯಾ** : *ನಂ.೪, ಚಿತ್ರ ೩೫.*

೧೨. ಗೋಪಾಲ, ಬಿ.ಆರ್. ೧೯೯೫ : *ದಿ ಕದಂಬ ಇನ್‌ಸ್ಕ್ರಿಪ್ಷನ್ಸ್ ನಂ. ೧, ದಿ ಕದಂಬ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಲ್ ಸ್ಟಡೀಸ್, ಸಿರ್ಸಿ, ಶಾಸನ ಸಂಖ್ಯೆ ೧೧, ಪುಟಗಳು ೫೦-೧೬೩.*

ಎಸ್. ವೈ. ಸೋಮಶೇಖರ್*

ಆಕನೂರು ಗ್ರಾಮದ ಬಳಿ ಆದಿಇತಿಹಾಸ ಕಾಲದ ಕುರುಹುಗಳು

ಆಕನೂರು ಜಗಳೂರು ತಾಲ್ಲೂಕಿನ ದೊಣೆಹಳ್ಳಿಯ ಹತ್ತಿರವಿರುವ ಚಿಕ್ಕ ಗ್ರಾಮ. ಈ ಗ್ರಾಮಕ್ಕೆ ಅಂಟಿಕೊಂಡಂತೆ ದಕ್ಷಿಣ ದಿಕ್ಕಿಗೆ ಇರುವ ಹೊಲಗಳಲ್ಲಿ ಆದಿಇತಿಹಾಸ ಕಾಲಕ್ಕೆ ಸೇರಿದ ವಿವಿಧ ಮಡಕೆಗಳು, ಮಣಿಗಳು, ಎಲುಬಿನ ಅವಶೇಷಗಳು, ಇಟ್ಟಿಗೆಯ ಚೂರುಗಳು ದೊರೆತಿವೆ. ಇವುಗಳ ಜೊತೆಗೆ ಹೊಯ್ಸಳ ಮತ್ತು ಪಾಳೆಯಗಾರರ ಕಾಲಕ್ಕೆ ಸಂಬಂಧಿಸಿದ ವೀರಗಲ್ಲುಗಳು, ಭೈರವ ಮತ್ತಿತರ ಶಿಲ್ಪಾವಶೇಷಗಳು ಕಂಡುಬಂದಿವೆ.

ಈ ಅವಶೇಷಗಳು ದೊರೆತ ಸ್ಥಳವು ಚಿತ್ರದುರ್ಗದ ಕಡೆಯಿಂದ ಹರಿಯುವ ಜನಗಿಹಳ್ಳ ಮತ್ತು ಜಮಾಪುರದೆಡೆಯಿಂದ ಹರಿದು ಜನಗಿಹಳ್ಳಕ್ಕೆ ಸೇರುವ ಕಣಗಳಹಳ್ಳ ಅಥವಾ ಹುಲಿಗನಹಳ್ಳಗಳ ಸಂಗಮ ಸ್ಥಾನದಲ್ಲಿದೆ. ಕಣಗಳಹಳ್ಳದ ಎಡದಂಡೆಯ ಮೇಲೆ ವಸತಿನೆಲೆ ಕಂಡು ಬಂದರೆ, ವಸತಿನೆಲೆಯ ದಕ್ಷಿಣಕ್ಕೆ ಸಮಾಧಿನೆಲೆಯ ಲಕ್ಷಣಗಳು ಕಾಣಬರುತ್ತವೆ.

ಜನಗಿಹಳ್ಳದ ದಂಡೆಗಳ ಮೇಲೆ ಈಗಾಗಲೇ ಕೆಲವು ನೆಲೆಗಳು ಕಂಡು ಬಂದಿದ್ದು, ಅವುಗಳಲ್ಲಿ ಚಿಪ್ಪಿನಕೆರೆ ಮತ್ತು ಸಂಗೇನಹಳ್ಳಿಕೆರೆ ಬಳಿಯ ನೆಲೆಗಳ ವರದಿಗಳು ಪ್ರಕಟಗೊಂಡಿವೆ. ಚಿಕ್ಕಗೊಂಡನಹಳ್ಳಿ ಬಳಿಯಲ್ಲೂ ಇವುಗಳಿಗೆ ಸಂಬಂಧಿಸಿದ ನೆಲೆಯಿದೆ. ಇವುಗಳ ಸಾಲಿಗೆ ಸೇರಿದ ಆಕನೂರಿನ ನೆಲೆಯು ನಾಲ್ಕನೆಯದಾಗಿದೆ.

ನೆಲೆಯ ಮಣ್ಣು ಬೂದುಬಣ್ಣದಿಂದ ಕೂಡಿರುವುದರಿಂದ ಸ್ಥಳೀಯರು ಬೂದುಗಡ್ಡೆಯೆಂದು ಕರೆಯುವರು. ಪಾಳೆಯಗಾರರ ಕಾಲಕ್ಕೆ ಈ ಪ್ರದೇಶವನ್ನು ಕಗ್ಗಲ್ಲನಾಯಕನು ನೋಡಿಕೊಳ್ಳುತ್ತಿದ್ದು, ಆ ಕಾಲದ ಈ ನೆಲೆಯನ್ನು ದರೋಡೆ ಪಟ್ಟಣವೆಂತಲೂ ಕರೆಯುತ್ತಾರೆ.

ಸುಮಾರು ಹದಿನೈದು-ಇಪ್ಪತ್ತು ಎಕರೆಗಳಷ್ಟು ವಿಸ್ತಾರವಾದ ಈ ಬಯಲಿನಲ್ಲಿ ಕಂಡು ಬಂದಿರುವ ಅವಶೇಷಗಳೆಂದರೆ:

೧. ಕಪ್ಪು ಮತ್ತು ಕೆಂಪುಬಣ್ಣದ ಮಡಕೆಗಳು.

೨. ಕಪ್ಪು ಮಡಕೆಗಳು.

೩. ಕೆಂಪು ಮಡಕೆಗಳು.

೪. ಬಿಳಿವರ್ಣದ ರೇಖಾಚಿತ್ರಗಳನ್ನೊಳಗೊಂಡ ಮಡಕೆಗಳು.


೫. ಕುಂಭಗಳ ಮೇಲೆ ಮುಚ್ಚುತ್ತಿದ್ದ ಮುಚ್ಚಳಗಳು.

೬. ರಂಧ್ರವಿರುವ ಹೂಜಿಯ ಮತ್ತು ಜಾಡಿಯ ಚೂರುಗಳು.

೭. ಇಟ್ಟಿಗೆ, ಕಬ್ಬಿಣದ ಕಿಟ್ಟ ಹಾಗೂ ಮೂಳೆಗಳು.

೮. ಬಳಪದ ಕಲ್ಲಿನಲ್ಲಿ ಕೆತ್ತಿರುವ ಚಿಕ್ಕ ಚಿಕ್ಕ ಬಿಡಿ ಶಿಲ್ಪಗಳು.

೯. ವೀರಗಲ್ಲುಗಳು, ನಿಲುವುಗಲ್ಲು, ಭೈರವ ಶಿಲ್ಪಗಳು, ನಂದಿ, ಲಿಂಗ, ಗಣೇಶ ಶಿಲ್ಪಗಳು ಮತ್ತು ಕಟ್ಟಡ ಇವೇ ಮುಂತಾದ ಅವಶೇಷಗಳನ್ನು ಕಾಣಬಹುದು.



ಆಕನೂರು ನೆಲೆಯಲ್ಲಿ ದೊರೆತ ಮಡಕೆ ಮತ್ತಿತರ ಅವಶೇಷಗಳು

ಇವುಗಳಲ್ಲದೆ ಈ ನೆಲೆಯಲ್ಲಿ ಸೀಸದ ಹಾಗೂ ಚಿನ್ನದ ನಾಣ್ಯಗಳು ಕಂಡು ಬಂದಿದ್ದವೆಂದು ಕೃಷಿಕರು ಹೇಳುತ್ತಾರೆ.

* ಪಿಹೆಚ್.ಡಿ. ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಕಾಮಲಾಪುರ - ೫೮೩ ೨೨೧

ಜನಗಿಹಳ್ಳವು ಚಿತ್ರದುರ್ಗ ಜಿಲ್ಲೆಯ ಪ್ರಮುಖ ಹಳ್ಳಗಳಲ್ಲೊಂದಾಗಿದ್ದು, ಅನೇಕ ಪ್ರಾಕ್ಚಾರಿತ್ರಿಕ ನೆಲೆಗಳ ಅವಾಸಸ್ಥಾನವಾಗಿರುವುದು ತಿಳಿದುಬರುವ ಅಂಶ. ಚಿತ್ರದುರ್ಗ ಜಿಲ್ಲೆಯ ಪ್ರಮುಖ ಪ್ರಾಕ್ಚಾರಿತ್ರಿಕ ಎಡೆಯಾದ ಬ್ರಹ್ಮಗಿರಿಯು ನೆಲೆಗೊಂಡಿರುವುದು ಜನಗಿಹಳ್ಳದ ಮುಂದುವರಿದ ನದಿಯಾದ ಸಣ್ಣಹಗರಿ ಮೇಲೆಯೇ. ಬ್ರಹ್ಮಗಿರಿಯ ಉತ್ಖನನದಲ್ಲಿ ಕಂಡು ಬಂದಿರುವ ನೂತನ ಶಿಲಾಯುಗದಿಂದ ಚಾರಿತ್ರಿಕ ಕಾಲದವರೆಗಿನ ಅವಶೇಷಗಳು ಸಂಗೇನಹಳ್ಳಿ ಕೆರೆಯ ನಡುಗಡ್ಡೆಯಲ್ಲಿ ಕಂಡು ಬಂದಿವೆ. ಹಾಗೆಯೇ ಚಾರಿತ್ರಿಕ ಕುರುಹುಗಳು ಚಿಕ್ಕಗೊಂಡನಹಳ್ಳಿ, ಚಿಪ್ಪಿನಕೆರೆ ಮತ್ತು ಆಕನೂರುಗಳಲ್ಲಿ ದೊರೆತಿರುವುದರಿಂದ, ಈ ಎಲ್ಲ ನೆಲೆಗಳಿಗೂ ಸಂಬಂಧವಿದ್ದುದನ್ನು ಗುರುತಿಸಬಹುದಾಗಿದೆ.

ಆಕನೂರಿನಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ಈ ಪ್ರದೇಶವು ಆದಿಇತಿಹಾಸ ಕಾಲದಿಂದ ಪಾಳೆಯಗಾರರ ಕಾಲದವರೆಗೆ ಮಾನವನ ವಸತಿ ನೆಲೆಯಾಗಿದ್ದುದು ಕಾಣಬರುತ್ತದೆ. ಕಣಗಳಹಳ್ಳದ ಎಡದಂಡೆಯಲ್ಲಿ ವಸತಿನೆಲೆಗೆ ಸಂಬಂಧಿಸಿದ ಮಡಕೆಗಳು, ಇಟ್ಟಿಗೆ ಹಾಗೂ ಕಟ್ಟಡಾವಶೇಷಗಳು ಕಂಡು ಬಂದಿವೆ. ವಸತಿ ನೆಲೆಯ ದಕ್ಷಿಣಕ್ಕೆ ಹಳ್ಳದ ಬಲದಂಡೆಯ ಮೇಲೆ ಸಮಾಧಿ ನೆಲೆಯ ಅವಶೇಷಗಳಾದ ಮೂಳೆಗಳು ಮತ್ತು ಮಡಕೆಗಳು ಹೇರಳವಾಗಿ ದೊರೆಯುತ್ತಿದ್ದು, ಯಾವುದೇ ರೀತಿಯ ದೊಡ್ಡ ದೊಡ್ಡ ಕಲ್ಲುಗುಂಪುಗಳು ಕಂಡು ಬರುವುದಿಲ್ಲ. ಕಾರಣ ನೆಲೆಯನ್ನು ಕೃಷಿಗೆ ಒಳಪಡಿಸಿರುವುದರಿಂದ ತುಂಬಾ ಹಾನಿಯಾಗಿದೆ.

ಇದೇ ಪರಿಸರದಲ್ಲಿ ಆದಿಇತಿಹಾಸ ಕಾಲದ ಅವಶೇಷಗಳ ಜೊತೆಗೆ ಮೂರು ವೀರಗಲ್ಲುಗಳು ಕಂಡು ಬಂದಿವೆ. ಹೊಯ್ಸಳ ಕಾಲಕ್ಕೆ ಸೇರಿದ ವೀರಗಲ್ಲೊಂದರಲ್ಲಿ ಗೋವುಗಳ ರಕ್ಷಣೆಗಾಗಿ ಹೋರಾಡುತ್ತಿರುವ ವೀರನ ಚಿತ್ರಣವಿದೆ. ಈ ಬಗೆಯ ವೀರಗಲ್ಲುಗಳು ಕಲ್ಲೆದೇವರಪುರ ಮತ್ತು ಸಂಗೇನಹಳ್ಳಿಕೆರೆಗಳಲ್ಲೂ ಕಂಡುಬಂದಿವೆ. ಉಳಿದೆರಡು ವೀರಗಲ್ಲುಗಳು ಪಾಳೆಯಗಾರರ ಕಾಲಕ್ಕೆ ಸೇರಿದವು. ಇವುಗಳಲ್ಲಿ ಕುದುರೆ ಸವಾರಿಯಲ್ಲಿರುವ ಯೋಧ ಹಾಗೂ ಅವನ ಹಿಂಬದಿಯಲ್ಲಿ ಛತ್ರಿ ಚಾಮರವಿಡಿದು ನಿಂತಿರುವ ಪರಿಚಾರಕರಿದ್ದಾರೆ. ಗಮನಾರ್ಹ ಸಂಗತಿಯೆಂದರೆ ಈ ವೀರಗಲ್ಲುಗಳು ಪ್ರತ್ಯೇಕ ಕಟ್ಟಡಗಳಲ್ಲಿರುವುದು. ವೀರಗಲ್ಲುಗಳನ್ನೊಳಗೊಂಡ ಕಟ್ಟಡಗಳನ್ನು ಸ್ಥಳೀಯರು **ವೀರಗಾರಲು ಗುಡಿ**ಗಳೆಂದೇ ಕರೆಯುತ್ತಾರೆ. ಇದರರ್ಥ ವೀರಗಲ್ಲಿನ ಗುಡಿ, ವೀರರ ಗುಡಿಗಳೆಂಬುದು. ಕರ್ನಾಟಕದ ಹಲವು ಭಾಗಗಳಲ್ಲಿ ಈ ಬಗೆಯ ವೀರರ ಗುಡಿಗಳು ಕಂಡು ಬಂದಿವೆ. ಈ ವೀರರ ಗುಡಿಗಳನ್ನು ನಾಯಕ ಜನಾಂಗದ ಕೆಲವು ಮನೆತನಗಳು ಪೂಜಿಸುತ್ತಿದ್ದು, ಸ್ಥಳೀಯ ನಾಯಕರ ಸಮಾಧಿಗಳೆಂಬುದು ಅವರಿಂದ ತಿಳಿದುಬರುವ ಅಂಶ. ಮಹಾಸತಿಯ ಆಚರಣೆಯಲ್ಲಿ ಕಂಡು ಬಂದಿರುವ ಮಾಸ್ತಿ ಗುಡಿಗಳಂತೆ, ವೀರರ ನೆನಪಿಗಾಗಿ ವೀರಗುಡಿಗಳನ್ನು ಕಟ್ಟುತ್ತಿದ್ದುದು ಪದ್ಧತಿ.

ಜನಗಿಹಳ್ಳದ ಸಾಲಿನಲ್ಲಿ ದೊರೆತ ನಾಲ್ಕು ನೆಲೆಗಳು ಸುಮಾರು ಹತ್ತು ಕಿಲೋಮಿಟರ್‌ಗಳ ಅಂತರದಲ್ಲಿವೆ. ಇಷ್ಟೊಂದು ಹತ್ತಿರ ಹತ್ತಿರವಾಗಿರುವ ಈ ನೆಲೆಗಳಿಂದ ಅಂದಿನ ಜನಸಾಂದ್ರತೆಯನ್ನು, ನೆಲೆಗಳಿದ್ದ ಸಂಬಂಧಗಳನ್ನು ಗುರುತಿಸಬಹುದಾಗಿದೆ. ಮಾನವನ ಜೀವನಕ್ಕೆ ಯೋಗ್ಯವಾದ ಭೌಗೋಳಿಕ ವಾಯುಗುಣ, ಫಲವತ್ತಾದ ಭೂಮಿ ಹಾಗೂ ನೀರಿನ ಸೌಲಭ್ಯವಿದ್ದುದು ಇಲ್ಲಿ ಕಂಡು ಬರುತ್ತದೆ. ಅಲ್ಲದೆ ಇಷ್ಟೊಂದು ನೆಲೆಗಳಿಗೆ ಪೋಷಣೆಯಿತ್ತು ಜನಗಿಹಳ್ಳವು ಪ್ರಾಚೀನ ಕಾಲಾವಧಿಯಲ್ಲಿ ಸದಾಕಾಲವೂ ನೀರನ್ನು ಹೊಂದಿದ್ದುದಂತೂ ಸ್ಪಷ್ಟ. ಈ ಹಳ್ಳದ ದಂಡೆಯ ಮೇಲಿರುವ ಇನ್ನೂ ಅನೇಕ ಪ್ರಾಕ್ಚಾರಿತ್ರಿಕ ನೆಲೆಗಳು ಬೆಳಕಿಗೆ ಬರಬೇಕಾಗಿದೆ.

(ಕ್ಷೇತ್ರಕಾರ್ಯಕ್ಕೆ ಸ್ಫೂರ್ತಿ ತುಂಬಿದ ಪ್ರೊ. ಲಕ್ಷ್ಮಣ್ ತೆಲಗಾವಿಯವರಿಗೆ ಹಾಗೂ ಸಹೋದರ ರಮೇಶನಿಗೆ ಕೃತಜ್ಞತೆಗಳು)

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಡಾ॥ ಎಂ. ಚಿದಾನಂದಮೂರ್ತಿ. ೧೯೮೪: ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

೨. ಡಾ॥ ಎಂ. ಚಿದಾನಂದಮೂರ್ತಿ: ಮಾಸ್ತಮ್ಮನ ಮನೆ-ಕಠಾರಿ, ಕನ್ನಡಿ, ನಿಂಬೆಹಣ್ಣು ತಾಳಿ ಇತ್ಯಾದಿ (ಸಾಧನೆ, ಸಂಪುಟ-೧೪, ಸಂಚಿಕೆ-೪, ೧೯೮೭ ಪು. ೧೪೬-೧೪೯)

೩. **Ancient India** : *Bulletin of Archaeological Survey of India, November 4, July 1974 - Jan. 1948.*

ಮುತ್ತುರಾಜು*

ಮಾರನಾಯಕನಹಳ್ಳಿ ಮತ್ತು ವಿದ್ಯಾನಗರ : ಬೃಹತ್ ಶಿಲಾಯುಗದ ಸ್ಥಳಗಳು (ಕ್ರಿ.ಪೂ. ೮೦೦) ಒಂದು ಶೋಧ

ಬೆಂಗಳೂರು ಜಿಲ್ಲೆಯು ಪ್ರಾಗೈತಿಹಾಸಿಕ ಸ್ಥಳಗಳ ಬೀಡು. ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಚನ್ನಪಟ್ಟಣ ತಾಲೂಕಿನ ಬನವಳ್ಳಿ, ಹೊಸಕೋಟೆ ತಾಲೂಕಿನ ಜಡಿಗೇನಹಳ್ಳಿ, ಮಾಗಡಿ ತಾಲೂಕಿನ ಸಾವನದುರ್ಗ ಸ್ಥಳಗಳಲ್ಲಿ ಬೃಹತ್ ಶಿಲಾಯುಗದ (ಕಾಲ ಸುಮಾರು ಕ್ರಿ.ಪೂ. ೮೦೦) ಸಮಾಧಿಗಳ ಉತ್ಖನನ ಕಾರ್ಯ ತಕ್ಕಮಟ್ಟಿಗೆ ನಡೆದಿದ್ದು,[೧] ಬೆಂಗಳೂರು ನಗರ ಜಿಲ್ಲೆಯ ಚಿಕ್ಕಜಾಲ, ಕಣ್ಣೂರು ಮುಂತಾದ ಕಡೆಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಶೋಧಿಸಲ್ಪಟ್ಟಿವೆ. ಅಲ್ಲದೇ ಗವಿಪುರಂನ ಗವಿಗಂಗಾಧರೇಶ್ವರ ದೇವಾಲಯದ ಪರಿಸರ, ಜಾಲಹಳ್ಳಿಯ ಪ್ರದೇಶ, ಸೂಡಸಂದ್ರ, ಸಿದ್ಧಾಪುರಗಳ ಬಳಿ ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರೆಕಿವೆ.[೨] (ಕಾಲ ಸುಮಾರು ಕ್ರಿ.ಪೂ. ೧೦,೦೦೦ ವರ್ಷಗಳಿಂದ ೩,೦೦೦ ವರ್ಷಗಳವರೆವಿಗೆ)

ಮಾರನಾಯಕನಹಳ್ಳಿಯು ಬೆಂಗಳೂರು ನಗರದ ಉತ್ತರಕ್ಕೆ ೨೭ ಕಿ.ಮೀ. ದೂರದಲ್ಲಿದೆ. ಇಲ್ಲಿಂದ ಪಶ್ಚಿಮಕ್ಕೆ ಎರಡು ಕಿ.ಮೀ. ದೂರದಲ್ಲಿ ಬ್ರಾನ್‌ಫೀಲ್ ಎಂಬುವವನು ಕ್ರಿ.ಶ. ೧೮೮೧ರಲ್ಲಿಯೆ ಕೆಲವು ಕೋಣೆಗೋರಿಗಳ ಉತ್ಖನನವನ್ನು ನಡೆಸಿ ಅಲ್ಲಿ ದೊರೆತ ಮಣ್ಣಿನ ಪಾತ್ರೆಗಳು ಮತ್ತು ಕಬ್ಬಿಣದ ವಸ್ತುಗಳನ್ನು ಸಂಗ್ರಹಿಸಿದನು. ಅವುಗಳನ್ನು ಈಗ ಮದ್ರಾಸ್‌ಮ್ಯೂಸಿಯಂನಲ್ಲಿ ನೋಡಬಹುದಾಗಿದೆ. ಚಿಕ್ಕಜಾಲದಿಂದ ಪೂರ್ವಕ್ಕೆ ಎರಡು ಕಿ.ಮೀ. ದೂರದಲ್ಲಿರುವ ಮಾರನಾಯಕನಹಳ್ಳಿಯು ಹತ್ತಿರದಲ್ಲೆ ಇರುವ ಅಕ್ಕಯ್ಯಮ್ಮನ ಬೆಟ್ಟಕ್ಕೆ ಹೊಂದಿಕೊಂಡಿದಂತಿದ್ದು ಪ್ರಾಗೈತಿಹಾಸಿಕ ಮಾನವನ ವಾಸಸ್ಥಾನಕ್ಕೆ ಸೂಕ್ತವಾದ ಸ್ಥಳವಾಗಿದ್ದಿತೆಂದು ಹೇಳಬಹುದಾಗಿದೆ. ಬೆಟ್ಟದ ಇಳಿಜಾರಾದ ಭಾಗದ ಮೇಲೆ ವಿಸ್ತಾರವಾದ ಚಪ್ಪಡಿಯನ್ನು ಸಣ್ಣ ಸಣ್ಣ ಕಲ್ಲುಗಳ ಸಹಾಯದಿಂದ ಹಾಸಲಾಗಿದ್ದು ಅವು ಹಲವಾರು ಸಂಖ್ಯೆಯಲ್ಲಿ ಕಂಡು ಬರುತ್ತವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಇಲ್ಲಿದ್ದವರಲ್ಲಿ ಈ ಒಂದು ರೂಢಿ ಆಚರಣೆಯಲ್ಲಿತ್ತೆಂಬುದನ್ನು ಗಮನಿಸಬಹುದು.

ಮಾರನಾಯಕನಹಳ್ಳಿಯ ಪಶ್ಚಿಮಕ್ಕೆ ಹಲವಾರು ಶಿಲಾ ಸಮಾಧಿಗಳಿದ್ದು ಇವುಗಳಲ್ಲಿ ಹನ್ನೊಂದು ಸಮಾಧಿಗಳು ಸುಸ್ಥಿತಿಯಲ್ಲಿವೆ. ಇಲ್ಲಿರುವ ಕಿಂಡಿಕಲ್ಲುಗೋರಿಯೊಂದರ ಅಗಲ ಆರೂವರೆ ಅಡಿಗಳಾಗಿದ್ದು ಉದ್ದ ೮ ಅಡಿಗಳಾಗಿವೆ. ಭೂಮಿಯಿಂದ ಅಗೆದು ನಿರ್ಮಿಸಲಾಗಿರುವ ಈ ಸಮಾಧಿಯೊಳಗೆ ನೆಲದ ಮೇಲೆ ಹಾಸುಗಲ್ಲು ಇದ್ದು ಮೇಲೆ ನಾಲ್ಕು ಅಡಿಗಳ ಅಂತರದಲ್ಲಿ ಮುಚ್ಚಳಗಲ್ಲಿದೆ. ಅದು ಹನ್ನೊಂದು ಅಡಿ ಅಗಲ ಹದಿನಾಲ್ಕು ಅಡಿಗಳ ಉದ್ದವಿದ್ದು ಒಂದು ಅಡಿ ದಪ್ಪವಿದೆ. ಪೂರ್ವದಿಕ್ಕಿಗೆ ಮುಖ ಮಾಡಿರುವ ಈ ಕಲ್ಲುಗೋರಿಯಲ್ಲಿ ಎರಡೂವರೆ ಅಡಿಯ ವ್ಯಾಸವಿರುವ ವೃತ್ತಕಿಂಡಿ ಇದೆ. ಈ ಶಿಲಾಗೋರಿಯನ್ನು ಸ್ಥಳೀಯ ಜನರು ಆಗಿಂದಾಗ್ಗೆ ಶೋಧಿಸಿರುವರಾದ್ದರಿಂದ ಅವಶೇಷಗಳಾವುವೂ ಉಳಿದು ಬಂದಿಲ್ಲ. ಈ ಗೋರಿಯ ಪೂರ್ವಕ್ಕೆ ದುಂಡುಕಟ್ಟೆ ಒಳಗಿನ ಕಲ್ಲು ಗೋರಿಯೊಂದು ಉಳಿದು ಬಂದಿದ್ದು, ಬದಿಯಲ್ಲಿಯೇ ನಾಲ್ಕು ಅಡಿ ಅಗಲದ ಮೂರು ಅಡಿ ಉದ್ದದ ಎರಡು ಕಲ್ಲುಗಳು ಭೂಮಿಯಿಂದ ಮೇಲೆ ಇರುವ, ಭಾಗಶಃ ಹಾಳಾಗಿರುವ ಸಮಾಧಿ ಇದೆ. ಇದೇ ಬಗೆಯ ಮತ್ತೆರಡು ಸಮಾಧಿಗಳು ಬಳಿಯಲ್ಲಿಯೆ ಇವೆ. ಒಂದು ಕೋಣೆಗೋರಿಯನ್ನು ಅಗೆಯಲಾಗಿದ್ದು ಪೂರ್ವಭಾಗದ ಕಲ್ಲಿನಲ್ಲಿ ಕಿಂಡಿ ಇದೆ. ಎಡಭಾಗದ ಕಲ್ಲಿನ ಉದ್ದ ಎಂಟು ಅಡಿಗಳು ಎತ್ತರ ನಾಲ್ಕು ಅಡಿಗಳು. ಕೋಣೆಗೋರಿಯ ಅಗಲ ನಾಲ್ಕು ಅಡಿಗಳು ಉದ್ದ ಏಳು ಅಡಿಗಳು ಆಗಿದ್ದು, ಈ ಕಲ್ಲುಗೋರಿಯು ಭೂಮಿಯಿಂದ ಎರಡೂವರೆ ಅಡಿ ಮೇಲೆ ಇದೆ. ದುಂಡುಕಟ್ಟೆ ಇರುವ ಕಲ್ಲುಗೋರಿಯೊಂದು ಇದರ ಸಮೀಪದಲ್ಲೆ ಇದ್ದು ದೊಡ್ಡ, ದೊಡ್ಡ, ಕಲ್ಲುಗಳಿಂದ ನಿರ್ಮಿಸಲಾಗಿದೆ; ಇದು ಹನ್ನೆರಡು ಅಡಿಗಳ ವ್ಯಾಸದ ವೃತ್ತವನ್ನು ಹೊಂದಿದೆ.

---

* ನಂ. ೧, ೧೨ನೇ ರಸ್ತೆ, ಮಾರಪ್ಪ ಕಟ್ಟಡ, ಸಂಪಂಗಿರಾಮನಗರ, ಬೆಂಗಳೂರು - ೫೬೦ ೦೨೭



ಬೃಹತ್ ಶಿಲಾಯುಗದ ಕಲ್ಲುಕೋಣೆ-ಗೋರಿ(ಮಾರನಾಯಕನ ಹಳ್ಳಿ)



ದುಂಡುಕಟ್ಟೆಯ ಶಿಲಾಸಮಾಧಿ (ಮಾರನಾಯಕನಹಳ್ಳಿ)

ವಿದ್ಯಾನಗರವು, ಹೊಸಹಳ್ಳಿಗೆ ಹೋಗುವ ಮಾರ್ಗದಲ್ಲಿ ಅಕ್ಕಯ್ಯಮ್ಮನ ಬೆಟ್ಟದ ದಕ್ಷಿಣದ ಕಡೆಗೆ ಎರಡು ಕಿ.ಮೀ. ದೂರದಲ್ಲಿದೆ. ಇಲ್ಲಿ ಹತ್ತು ಶವಹೂಳುವ ಕುಣಿಗಳಿವೆ. ಇಪ್ಪತ್ತೈದು ಅಡಿಗಳ ಎರಡು ಸುತ್ತಿನ ಸಣ್ಣ ಸಣ್ಣ ಚಪ್ಪಡಿಗಳ ವೃತ್ತ ವ್ಯಾಸವಿರುವ ಕುಣಿಯೊಂದರ ಮಧ್ಯೆ ದಪ್ಪನಾದ ಒಂದು ಅಡಿಯ ಮುಚ್ಚಳಗಲ್ಲು ಇದೆ. ಈ ಶವದ ಕುಣಿಯ ಹಿಂಭಾಗದಲ್ಲಿ ಮತ್ತೊಂದು ಕುಣಿ ಇದ್ದು, ಒಂದು ಅಡಿ ದಪ್ಪನೆಯ ಮುಚ್ಚುಗಲ್ಲನ್ನು ಕಾಣಬಹುದಾಗಿದೆ. ಇದು ಶವದ ಕುಣಿಯಿಂದ ಸ್ವಲ್ಪ ದೂರಕ್ಕೆ ಈಗ ಸರಿಸಲ್ಪಟ್ಟಿದೆ. ಈ ಶವದ ಕುಣಿಯನ್ನು ಭೂಮಿಯಿಂದ ಚೌಕಾಕಾರವಾಗಿ ಅಗೆದು ಮೇಲೆ ಮುಚ್ಚಳಗಲ್ಲನ್ನು ಬಳಸುವ ವಿಧಾನವಾಗಿ ರಚಿಸಲಾಗಿದೆ. ಈ ಶವದ ಕುಣಿಯ ಒಳಭಾಗದ ನಾಲ್ಕು ಕಡೆಗಳಲ್ಲಿ ಇರಬೇಕಾದ ಚಪ್ಪಡಿಗಳು ಇಲ್ಲಿಲ್ಲ. ಹದಿನೈದು ಅಡಿ ವೃತ್ತ ವ್ಯಾಸವುಳ್ಳ ಐದು ಶವದ ಕುಣಿಗಳು ಹದಿನೆಂಟು ಅಡಿ ವೃತ್ತವ್ಯಾಸವುಳ್ಳ ಒಂದು ಶವದ ಕುಣಿ ಇಪ್ಪತ್ತು ಅಡಿಗಳ ವೃತ್ತವ್ಯಾಸವುಳ್ಳ ಮೂರು ಶವದ ಕುಣಿಗಳು ಇಪ್ಪತ್ತಮೂರು ಅಡಿಯ ವೃತ್ತ ವ್ಯಾಸವುಳ್ಳ ಒಂದು ಶವದ ಕುಣಿ, ಇದ್ದು ಇವುಗಳಲ್ಲಿ ಒಂದು ಅಡಿ ದಪ್ಪವಿರುವ ವಿಸ್ತಾರವಾದ ಮುಚ್ಚಳಗಳನ್ನು ಬಳಸಿರುವುದು ಸೋಜಿಗವೇ ಸರಿ. ಬಳಿಯಲ್ಲಿರುವ ಬೆಟ್ಟದಿಂದಲೇ ಈ ಕಲ್ಲುಗಳನ್ನು ಪೂರೈಸಿರಬೇಕು. ಕೆಲವು ಶವದ ಕುಣಿಗಳಲ್ಲಿ ಕಪ್ಪು, ಕೆಂಪು, ಬಣ್ಣದ ಮಡಕೆಯ ಚೂರುಗಳು, ವಾಡೆಯ ಭಾಗಗಳು ಕಂಡುಬಂದವು. ಈ ಒಂದು ಪರಿಸರದಲ್ಲಿ ಸಮಾಧಿಗಳ ರಚನೆಗೆ ಪ್ರಾಕ್ ಚಾರಿತ್ರಿಕ ಮಾನವರು ಅನುಕೂಲಕ್ಕೆ ತಕ್ಕಹಾಗೆ ಅಗತ್ಯವಾದ ಕಲ್ಲುಗಳನ್ನು ಬಳಸಿ ಕಿಂಡಿಕಲ್ಲು ಗೋರಿ ಮತ್ತು ಶವದ ಕುಣಿಗಳು ಎಂಬ ಎರಡೂ ಪ್ರಕಾರದ ಪದ್ಧತಿಯನ್ನು ರೂಢಿಯಲ್ಲಿ ಅನುಸರಿಸುತ್ತಿದ್ದರು ಎಂದು ತಿಳಿದು ಬರುತ್ತದೆ.

ಮೇಲಿನ ಎರಡೂ ಪ್ರದೇಶಗಳಲ್ಲೂ ಉತ್ಖನನವನ್ನು ಪುರಾತತ್ವ ಇಲಾಖೆಯವರು ನಡೆಸಿದರೆ ಪ್ರಾಕ್‌ಚಾರಿತ್ರಿಕತೆಯ ಮೇಲೆ ಹೆಚ್ಚಿನ ಬೆಳಕು ಬೀಳುವಂತಿದೆ.*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ರಿಪೋರ್ಟ್ ಆನ್‌ದಿ ಜಡಿಗೇನಹಳ್ಳಿ ಮೆಗಾಲಿಥ್ ಎಕ್ಸವೇಷನ್ಸ್ ಫಾರ್‌ದಿ ಇಯರ್ ೧೯೫೭. ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ ಇನ್ ಮೈಸೂರು. ಎಂ. ಶೇಷಾದ್ರಿ. ಪುಟ ೨. ೧೯೬೦

೨. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೭೯. ಪುಟ- ೧೦೫೮

* ಈ ಪ್ರಬಂಧವನ್ನು ರಚಿಸುವಲ್ಲಿ ಸಲಹೆ ಸೂಚನೆಗಳನ್ನು ಕೊಟ್ಟಿರುವ ಪ್ರೊ. ಲಕ್ಷ್ಮಣ್ ತೆಲಗಾವಿಯವರಿಗೆ ನನ್ನ ಕೃತಜ್ಞತೆಗಳು.

ಎಂ. ಲೋಕೇಶ್,* ಪಿ. ಗೋಪಿ,** ಎಂ. ಲೋಕೇಶ್***

ಗುತ್ತಲಹುಣಸೆ ಗ್ರಾಮದಲ್ಲಿ ಬೃಹತ್ ಶಿಲಾಯುಗದ ನೆಲೆ - ಒಂದು ಶೋಧ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕನಕಪುರ ತಾಲ್ಲೋಕು-ಮರಳವಾಡಿ ಹೋಬಳಿ, ಗುತ್ತಲಹುಣಸೆ ಗ್ರಾಮವು ಬೆಂಗಳೂರಿನಿಂದ ಸುಮಾರು ೫೬ ಕಿಲೋಮೀಟರ್‌ಗಳ ದೂರದಲ್ಲಿದ್ದು ಆ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಶ್ರೀ ಭೀಮಯ್ಯನವರ ಹೊಲದಲ್ಲಿ (ಸರ್ವೆ ನಂ. ೧೪೪) ಮತ್ತು ಶ್ರೀ ದೊಡ್ಡ ಹುಚ್ಚಯ್ಯನವರ ಹೊಲದಲ್ಲಿ (ಸರ್ವೆ ನಂ. ೧೪೫) ಬೃಹತ್ ಶಿಲಾಯುಗದ ಸಮಾಧಿಗಳು ಕಂಡುಬಂದಿವೆ.

ಈ ಹಳ್ಳಿಯ ಪಶ್ಚಿಮ ದಿಕ್ಕಿನಲ್ಲಿರುವ ಬೆಟ್ಟದ ಮೇಲ್ಭಾಗದ ಬಯಲಿನಲ್ಲಿ ಹೊಲವಿದ್ದು ಸುಮಾರು ೪೫ ಶಿಲಾಯುಗದ ಸಮಾಧಿಗಳು ಕಂಡು ಬಂದಿರುತ್ತವೆ. ೨೫ಕ್ಕೂ ಹೆಚ್ಚು ಸಮಾಧಿಗಳು ಸುಸ್ಥಿತಿಯಲ್ಲಿವೆ. ಕೆಲವನ್ನು ಹಾಳುಗೆಡವಿದ್ದಾರೆ. ಈ ಹೊಲದಲ್ಲಿ ಸುಮಾರು ನಾಲ್ಕು ಎಕರೆ ಭೂಮಿಯ ಮಣ್ಣು, ಬೂದಿ ಬಣ್ಣ ಹೊಂದಿದೆ. ಹಲವಾರು ರೀತಿಯ ಮಡಕೆ ಚೂರುಗಳನ್ನೂ ಇಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ಇಲ್ಲಿ ಕಂಡು ಬರುವ ಮಡಕೆಯ ಚೂರುಗಳು ಹೆಚ್ಚಾಗಿ ಕೆಂಪು ಬಣ್ಣದಲ್ಲಿವೆ. ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಯ ಚೂರುಗಳು ಸಹ ಇಲ್ಲಿವೆ. ಬ್ರೂಸ್‌ಫೂಟ್‌ರವರ ಪ್ರಕಾರ ಕಂದು, ಕೆಂಪು ಬಣ್ಣದ ಮಡಕೆಗಳು ನವಶಿಲಾಯುಗದ ಆದಿ ಭಾಗದಲ್ಲಿ ತಯಾರಾದವು. (ಎಂ.ಎ.ಆರ್ ೧೯೪೨ ಪು.೧೦೬)

ಶಿಲಾಗೋರಿಗಳ ಪಕ್ಕದಲ್ಲಿ ಸುಮಾರು ಅಂತರದಲ್ಲಿ ೩-೪ ಅಡಿಗಳ ಎತ್ತರವಿರುವ ಎರಡು ನಿಲುವು ಗಲ್ಲುಗಳಿವೆ. ಈ ಕಲ್ಲುಗಳ ಮೇಲೆ ಯಾವುದೇ ರೀತಿಯ ಕೆತ್ತನೆಗಳು ಕಂಡು ಬಂದಿರುವುದಿಲ್ಲ. ಈ ನಿಲುವು ಗಲ್ಲುಗಳು ಸಮೂಹ ಸಮಾಧಿಗಳನ್ನು ಗುರುತಿಸಲು ನೆಟ್ಟಿರುವ ಕಲ್ಲುಗಳಾಗಿವೆ. ಎಲ್ಲಿ ನಿಲುವುಗಳು ಕಂಡು ಬರುತ್ತವೆಯೋ ಅಲ್ಲಿ ಪಾಗೈತಿಹಾಸಿಕ ವಾಸಸ್ಥಳಗಳು ಇರಲೇಬೇಕು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. (ಎಂ.ಎ.ಆರ್ ೧೯೪೨ ಪು.೧೦೬.)

ಪ್ರಸ್ತುತ ಈ ಬಯಲಿನಲ್ಲಿ ಕಲ್ಲು ವೃತ್ತಗಳನ್ನೊಳಗೊಂಡ ೧೫ ಶಿಲಾಗೋರಿಗಳನ್ನು ಕಾಣಬಹುದಾಗಿದೆ. ಒಂದರಿಂದ ಮೂರು ಶಿಲಾವೃತ್ತಗಳುಳ್ಳ ಗೋರಿಗಳು ಇಲ್ಲಿವೆ. ಇವುಗಳ ವ್ಯಾಸ ಸುಮಾರು ೧೫-೨೦ ಅಡಿಗಳವರೆಗಿದೆ. ಇಲ್ಲಿಯ ಕೆಲವು ಶಿಲಾಗೋರಿಗಳ ಮುಚ್ಚು ಚಪ್ಪಡಿಗಳು [Capstones] ಮಾತ್ರ ಉಳಿದಿದ್ದು, ಈ ಭೂಮಿಯನ್ನು ಬೇಸಾಯಕ್ಕೆ ಬಳಸುತ್ತಿರುವ ಕಾರಣ, ಶಿಲಾವೃತ್ತಗಳು ಕಾಣೆಯಾಗಿವೆ.

ಚೌಕಾಕಾರದ ಈ ಸಮಾಧಿಗಳ ಮೇಲೆ ಮುಚ್ಚಿರುವ ಚಪ್ಪಡಿಗಳು ಸುಮಾರು ೧೨-೧೮ ಅಡಿಗಳಷ್ಟು ಉದ್ದ ಹಾಗೂ ೧೦-೧೨ ಅಡಿಗಳಷ್ಟು ಅಗಲವಾಗಿಯೂ ಅರ್ಧದಿಂದ ಒಂದು ಅಡಿಗಳಷ್ಟು ದಪ್ಪವಾಗಿವೆ. ಹಳ್ಳಿಗರು ಎಂದಿನಂತೆ ಈ ಶಿಲಾಯುಗದ ಗೋರಿಗಳನ್ನು ಪಾಂಡವರ ಗುಡಿಗಳು ಎಂದು ಕರೆಯುತ್ತಾರೆ. ಇವುಗಳಲ್ಲಿ ನಿಧಿ ಇರಬೇಕೆಂಬ ಕಲ್ಪನೆಯೂ ಕೂಡ ಅವರಲ್ಲಿದೆ. ಈ ಶಿಲಾ ಗೋರಿಗಳ ಬಳಿ ಹಾವುಗಳು ಹೇರಳವಾದ ಸಂಖ್ಯೆಯಲ್ಲಿವೆ. ಅದರಿಂದ ಜನ ಇವುಗಳ ಬಳಿಗೆ ಹೋಗದೆ ಈ ಶಿಲಾಗೋರಿಗಳು ಬಹುಪಾಲು ಸುಸ್ಥಿತಿಯಲ್ಲಿವೆ.

ಈ ಬಯಲಿನಲ್ಲಿ ಭೂಮಿಯ ಮೇಲ್ಭಾಗದಲ್ಲಿ ಕಲ್ಲು ಚಪ್ಪಡಿಗಳು ನಿಂತಿರುವ ಭಂಗಿಯಲ್ಲಿರುವುದು ಕಂಡು ಬರುತ್ತವೆ. ಕೆಲವು ಸಮಾಧಿಗಳ ಮೇಲಿದ್ದ ಮುಚ್ಚುಕಲ್ಲುಗಳು ಹಾಳಾಗಿವೆ.

ಈ ಹೊಲದಿಂದ ಇನ್ನೂ ಸ್ವಲ್ಪ ಮುಂದೆ ಹೋದರೆ ಬೆಟ್ಟ ಸಿಗುತ್ತದೆ. ಆ ಬೆಟ್ಟವನ್ನು ಹತ್ತಿದರೆ ಆ ಬೆಟ್ಟದ ಮೇಲೆ ಸುಮಾರು ೪೦ರಿಂದ ೫೦ ಸಮಾಧಿಗಳು ಸಿಗುತ್ತವೆ. ಇವೆಲ್ಲವೂ ದುಸ್ಥಿತಿಯಲ್ಲಿದ್ದು, ಸಮಾಧಿಗಳು ನಾಶವಾಗಿವೆ. ಆದರೆ ಈ ಎಲ್ಲ

* ಲೋಕೇಶ್. ಎಂ., ೧ನೇ ವರ್ಷದ ಬಿ.ಎ., ಬಸವೇಶ್ವರ ಪದವಿ ಕಾಲೇಜ್, ರಾಜಾಜಿನಗರ, ಬೆಂಗಳೂರು - ೫೬೦ ೦೧೦

** ಗೋಪಿ. ಪಿ., ೧ನೇ ವರ್ಷದ ಬಿ.ಎ., ವಿವೇಕಾನಂದ ಪದವಿ ಕಾಲೇಜ್, ಡಾ॥ ರಾಜ್‌ಕುಮಾರ್ ರಸ್ತೆ, ಬೆಂಗಳೂರು - ೫೬೦ ೦೫೫

*** ಲೋಕೇಶ್. ಎಂ. ೧ನೇ ವರ್ಷದ ಬಿ.ಎ., ವಾಸವಿ ಸಂಜೆ ಪದವಿ ಕಾಲೇಜ್, ವಿಜಯನಗರ, ಬೆಂಗಳೂರು - ೫೬೦ ೦೪೦

ಸಮಾಧಿಗಳು ಕಲ್ಲು ಚಪ್ಪಡಿಗಳಿಂದ ನಿರ್ಮಿತವಾದ ಶಿಲಾ ತೊಟ್ಟಿಗಳು (Stone cists) ಮತ್ತು ಕಿಂಡಿ ಕೋಣೆ ಗೋರಿಗಳು (Port-hole cists). ಈ ಶಿಲಾತೊಟ್ಟಿಗಳಲ್ಲಿ ನಾವು ಒಂದು ರಂಧ್ರವನ್ನು ಕಾಣಬಹುದು. ಈ ರಂಧ್ರ ಸಮಾಧಿಯ ಪೂರ್ವದಿಕ್ಕಿಗೆ ಇರುತ್ತದೆ- ಈ ಸಮಾಧಿಗಳು ಬೃಹತ್ ಶಿಲಾಯುಗದ ಕಾಲದವು. ವಿದ್ವಾಂಸರ ಪ್ರಕಾರ ಕ್ರಿ.ಪೂ. ೧೨೦೦ರಿಂದ ಕ್ರಿ.ಪೂ.೩೦೦.

ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯು ಕ್ರಿ.ಪೂ. ನಾಲ್ಕು ಶತಮಾನಗಳಷ್ಟು ಪ್ರಾಚೀನವಾದದ್ದು ಎಂಬುದಾಗಿ ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಈ ಸಂಸ್ಕೃತಿಯಲ್ಲಿ ಕಬ್ಬಿಣದ ಉಪಯೋಗದ ಜೊತೆಗೆ ಕಪ್ಪು ಬಣ್ಣದ ಮತ್ತು ಕೆಂಪು ಬಣ್ಣದ ಮಡಕೆಗಳು ಮತ್ತು ಮಡಕೆಗಳ ಮೇಲೆ ರೇಖಾಚಿತ್ರಗಳು ಇರುವುದು ವಿಶೇಷ ಅಂಶವಾಗಿದೆ. ಆದರೆ ಈ ಸ್ಥಳದಲ್ಲಿ ಕಬ್ಬಿಣದ ಯಾವುದೇ ವಸ್ತುಗಳು ನಮಗೆ ದೊರೆತಿಲ್ಲ. ಬದಲು ಮಡಕೆಯ ಚೂರುಗಳು ಹೆಚ್ಚಾಗಿ ಕಂಡುಬಂದಿದೆ. ಈ ಎಲ್ಲಾ ವಿಷಯಗಳ ಆಧಾರದ ಮೇಲೆ ಈ ಸ್ಥಳವು ಪ್ರಾಗೈತಿಹಾಸಿಕ ನೆಲೆಯಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ.

(ನಮ್ಮ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಶ್ರೀರಾಜು ಮತ್ತು ಮಾಸ್ಟರ್ ಗಂಗಾಧರ್ ಇವರಿಗೆ ಹಾಗೂ ಸ್ಥಳದ ಬಗ್ಗೆ ಮಾಹಿತಿ ನೀಡಿದ ದುಂಡು ಮಾದಯ್ಯ ಗುತ್ತಲಹುಣಸೆ ಇವರಿಗೂ ನಮ್ಮ ಧನ್ಯವಾದಗಳು ಮತ್ತು ಲೇಖನವನ್ನು ಸಿದ್ಧಪಡಿಸಲು ಮಾರ್ಗದರ್ಶನ ನೀಡಿದ ಗುರುಗಳಾದ ಶ್ರೀ ಜೆ.ಟಿ. ಜಯರಾಮಯ್ಯನವರಿಗೆ ನಾವು ಕೃತಜ್ಞರು.)

*

ಜೆ. ಟಿ. ಜಯರಾಮಯ್ಯ* ವೈ. ನಿರ್ಮಲ,** ಇ. ಆರ್. ಸವಿತಾ***

ಅರೇಹಳ್ಳಿ ಮತ್ತು ಕೂನಮುದ್ದನಹಳ್ಳಿಯ ಕೆಲವು ಬೃಹತ್ ಶಿಲಾಯುಗದ ಶಿಲಾಗೋರಿಗಳು-ಹೊಸ ಶೋಧನೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾ॥ನಲ್ಲಿ ನಾವುಗಳು ಇತ್ತೀಚೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಈ ಎರಡು ಹಳ್ಳಿಗಳ ಹತ್ತಿರ ಬೃಹತ್ ಶಿಲಾಯುಗದ ಸಮಾಧಿಗಳನ್ನು ಗುರುತಿಸಿರುತ್ತೇವೆ. ಇಲ್ಲಿ ಕಂಡುಬಂದಿರುವ ಬೃಹತ್ ಶಿಲಾಯುಗದ ಸಮಾಧಿಗಳ ವಿವರಗಳನ್ನು ಈ ಲೇಖನದಲ್ಲಿ ವಿವರಿಸಲು ಪ್ರಯತ್ನಿಸಿರುತ್ತೇವೆ.

ಶಿಲಾಯುಗವನ್ನು ಪುರಾತನ ಶಿಲಾಯುಗ, ಮಧ್ಯಶಿಲಾಯುಗ ಮತ್ತು ನೂತನ ಶಿಲಾಯುಗ ಎಂದು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ನವಶಿಲಾಯುಗದಲ್ಲಿ ಶಿಲಾಯುಧಗಳ ಜೊತೆಯಲ್ಲಿ ಕಬ್ಬಿಣದ ಆಯುಧಗಳು ಕೂಡ ದೊರೆತಿರುವುದು ಕಂಡು ಬರುತ್ತದೆ. ಈ ಯುಗದ ಜನರು ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಸಿ ಅಂದಿನ ಕಾಲದ ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ಆದ್ದರಿಂದ ಆ ಯುಗವನ್ನು ಬೃಹತ್ ಶಿಲಾಯುಗವೆಂದು ಕರೆಯುತ್ತಾರೆ.

ರಾಮನಗರ ತಾ॥ನ ಕೂಟಗಲ್ಲು ಹೋಬಳಿಯ ಅರೇಹಳ್ಳಿಯಲ್ಲಿರುವ ಬೈರೇಗೌಡರ ಹೊಲದಲ್ಲಿ ಎರಡು ಬೃಹತ್ ಶಿಲಾಯುಗದ ಸಮಾಧಿಗಳು ಕಂಡು ಬರುತ್ತವೆ. ಗ್ರಾಮದ ರಸ್ತೆ ಬದಿಯಲ್ಲಿರುವ ಅತ್ತಿಮರದ ಕೆಳಗೆ ಸುಸ್ಥಿತಿಯಲ್ಲಿರುವ ಒಂದು ಸಮಾಧಿಯಿದೆ. ಸಮಾಧಿಯ ಮೇಲಿರುವ ಚಪ್ಪಡಿಯು (Capstone)೧೦ ಅಡಿ ಅಗಲ ಮತ್ತು ೧೮ ಅಡಿ ಉದ್ದವಾಗಿರುತ್ತದೆ. ಈ ಚಪ್ಪಡಿ ೧ ಅಡಿ ದಪ್ಪವಾಗಿದೆ. ನಾಲ್ಕು ಕಡೆಗಳಲ್ಲಿರುವ ಚಪ್ಪಡಿಗಳು ೦.೫ ಅಡಿಗಾತ್ರವುಳ್ಳದ್ದಾಗಿದ್ದು ೫ ಅಡಿ ಉದ್ದ ಮತ್ತು ೪.೫ ಅಡಿಗಳಷ್ಟು ಎತ್ತರವಾಗಿವೆ. ಈ ಸಮಾಧಿಗೆ ಉತ್ತರ ದಿಕ್ಕಿನಲ್ಲಿ ಕಿಂಡಿಯಿರುವುದು ಕಂಡು ಬರುತ್ತದೆ. ಹಾಳಾಗದೆ ಇರುವ ಈ ಸಮಾಧಿಯು ಸಂಶೋಧಕರಿಗೆ ಉತ್ತಮ ಉದಾಹರಣೆಯಾಗಿ ಕಂಡುಬರುತ್ತದೆ. ರಸ್ತೆಯ ಬಲಭಾಗದಲ್ಲಿ ಸ್ವಸ್ತಿಕ್ ಆಕಾರದ ಶಿಲಾಯುಗದ ಸಮಾಧಿಯ ಅವಶೇಷಗಳು ಕಂಡು ಬರುತ್ತವೆ. ಸುಮಾರು ೫.೫ ಅಡಿ ಎತ್ತರ ೬.೫ ಅಡಿಗಳಷ್ಟು ಉದ್ದವಿರುವ ಈ ಸಮಾಧಿಗಳು ವಿರೂಪಗೊಂಡಿವೆ. ಈ ಸ್ಥಳವನ್ನು ತಿಪ್ಪೆಗುಂಡಿಯಾಗಿ ಬಳಸಲಾಗುತ್ತಿದೆ. ಇದರ ಪಕ್ಕದಲ್ಲಿ ಒಂದು ಸಣ್ಣ ಗುಡ್ಡವಿದ್ದು ಹಿಂಭಾಗದಲ್ಲಿ ೧ ರಿಂದ ೩ ಶಿಲಾ ವೃತ್ತಗಳುಳ್ಳ ಗೋರಿಗಳು ಕಂಡುಬರುತ್ತವೆ.

ಹೆಚ್ಚಿನ ಕಡೆಗಳಲ್ಲಿ ಜನರು ನಂಬಿರುವಂತೆ, ಇಂತಹ ಸ್ಥಳಗಳನ್ನು ಪಾಂಡವರ ಗುಡಿಗಳೆಂದು ಕರೆಯುವಂತೆ, ಇಲ್ಲಿಯೂ ಸಹ ಇದೇ ರೀತಿಯಲ್ಲಿ ಗುರುತಿಸುತ್ತಾರೆ. ಮೊದಲನೆ ಸಮಾಧಿಯ ಪಕ್ಕದಲ್ಲಿ ಹುತ್ತ ಬೃಹದಾಕಾರವಾಗಿ ನಿರ್ಮಾಣಗೊಂಡಿರುವುದರಿಂದ ಇದರಲ್ಲಿ ನಿಧಿಯಿದೆ ಎಂಬ ನಂಬಿಕೆಯು ಬಲವಾಗಿದೆ. ಆದುದರಿಂದ ಹೊಲದ ಯಜಮಾನ ಪ್ರಾರಂಭದಲ್ಲಿ ನಮಗೆ ಸಹಕರಿಸಲಿಲ್ಲ.

ಅರೇಹಳ್ಳಿಯಿಂದ ಸುಮಾರು ೩. ಕಿ.ಮೀ. ದೂರದಲ್ಲಿ ಉತ್ತರಕ್ಕೆ ಕೂನಮುದ್ದನಹಳ್ಳಿಯಿದೆ. ಈ ಹಳ್ಳಿಯ ಪಶ್ಚಿಮ ದಿಕ್ಕಿಗೆ ಬೆಟ್ಟವಿದೆ. ಈ ಬೆಟ್ಟದ ಮಧ್ಯದಲ್ಲಿ ಸುಮಾರು ೧೦ ಎಕರೆಯಷ್ಟು ವಿಶಾಲವಾದ ಬಯಲಿದೆ. ಈ ಬಯಲಿನಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನು ಜೋಡಿಸಿ ಅದರ ಮೇಲೆ ಚಪ್ಪಡಿ ಕಲ್ಲನ್ನಿಟ್ಟು ಗೋರಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇಂತಹ ೧೦ ಗೋರಿಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ಸ್ಥಳದಲ್ಲಿ ಬೃಹತ್ ಶಿಲಾಯುಗದ ತೊಟ್ಟಿಯಾಕಾರದ ಗೋರಿಗಳಿದ್ದು ಅವುಗಳನ್ನು ಹಾಳುಗೆಡುವಿದ್ದಾರೆ. ಕೆಲವು ಗೋರಿಗಳನ್ನು ನೆಲಸಮ ಮಾಡಿ ಬೇಸಾಯಕ್ಕೆ ಜಮೀನನ್ನು

* ಜೆ. ಟಿ. ಜಯರಾಮಯ್ಯ, ವಿವೇಕಾನಂದ ಕಾಲೇಜ್, ಬೆಂಗಳೂರು

** ವೈ. ನಿರ್ಮಲ, ನಂ.೩, ಮಹಡಿ, ನರಸಿಂಹಯ್ಯ ಗಾರ್ಡನ್, ೮ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು - ೩

*** ಇ. ಆರ್. ಸವಿತಾ, ನಂ.೧೧೧, ೧೦ನೇ ಮುಖ್ಯರಸ್ತೆ, ತ್ಯಾಗರಾಜನಗರ, ಬೆಂಗಳೂರು.

ಬಳಸಿಕೊಂಡಿರುವುದು ಕಂಡುಬರುತ್ತದೆ. ಈ ಜಮೀನಿನಲ್ಲಿ ಕಪ್ಪುಬಣ್ಣದ, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಯ ಚೂರುಗಳು ಹೆಚ್ಚಾಗಿ ಕಂಡುಬರುತ್ತವೆ.

ಈ ಬಯಲಿನ ಪಕ್ಕದಲ್ಲಿ ೧೦೦ ಗಜಗಳ ಅಂತರದಲ್ಲಿ ನೈಸರ್ಗಿಕವಾದ ಕಲ್ಲಾಸರೆಯಿದೆ(Rock Shelter). ಈ ಕಲ್ಲಾಸರೆಯು ೧೦೦ ಅಡಿಗಳಷ್ಟು ಉದ್ದವಾಗಿಯೂ, ೧೦-೧೨ ಅಡಿಗಳಷ್ಟು ಅಗಲವಾಗಿಯೂ ಮತ್ತು ೨-೪ ಅಡಿಗಳಷ್ಟು ಎತ್ತರವಾಗಿದೆ. ಆದರೆ ಈ ಕಲ್ಲಾಸರೆಯಲ್ಲಿ ವರ್ಣಚಿತ್ರವಾಗಲಿ, ಇಲ್ಲವೆ ಮಡಕೆಯ ಚೂರುಗಳಾಗಲಿ ನಮಗೆ ದೊರೆಯಲಿಲ್ಲ. ಪಕ್ಕದಲ್ಲಿರುವ ಎರಡು ಸಣ್ಣ ಸಣ್ಣ ಗುಹೆಗಳಲ್ಲಿಯೂ ಯಾವುದೇ ಪ್ರಮುಖ ಮಾಹಿತಿಗಳು ನಮಗೆ ಲಭ್ಯವಾಗಲಿಲ್ಲ. ಕಾರಣ ದನಕಾಯುವ ಜನರು ಇದನ್ನು ಹೆಚ್ಚಾಗಿ ಉಪಯೋಗಿಸಿ ಕೊಂಡಿರುವುದರಿಂದ ಅಲ್ಲಿನ ವಸ್ತುಗಳು ಕಾಣೆಯಾಗಿರಬಹುದು. ಈ ಮೇಲ್ಕಂಡ ಸ್ಥಳಗಳಲ್ಲಿ ಮತ್ತಷ್ಟು ಕ್ಷೇತ್ರಕಾರ್ಯ ನಡೆದರೆ ಹೆಚ್ಚಿನ ಮಾಹಿತಿಗಳು ದೊರೆತು ಸಂಶೋಧಕರಿಗೆ ಸಹಾಯವಾಗುತ್ತದೆ.

(ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಯಾದವ್ ಮತ್ತು ಕೂನ ಮುದ್ದನಹಳ್ಳಿಯ ಶಿವರಾಮಯ್ಯನವರಿಗೆ ನಮ್ಮ ಕೃತಜ್ಞತೆಗಳು)

*

ವಿರೂಪಾಕ್ಷಿ*

ಚಿನ್ನಹಗರಿ ನದಿ ಪರಿಸರದ ಪ್ರಾಚ್ಯಾವಶೇಷಗಳು: ಒಂದು ಶೋಧನೆ

ಇಲ್ಲಿ ಸಂಕ್ಷಿಪ್ತವಾಗಿ ಚಿನ್ನಹಗರಿ ನದಿ ಬಯಲಿನ ಅಥವಾ ಪರಿಸರದ ನಾಗರಿಕತೆ ಮತ್ತು ಸಂಸ್ಕೃತಿಯನ್ನು, ಭಗ್ನಗೊಂಡಿರುವ ಪ್ರಾಚ್ಯಾವಶೇಷಗಳ ಮತ್ತು ಸಾಹಿತ್ಯ ಆಧಾರಗಳ ನೆರವಿನೊಂದಿಗೆ ಶೋಧಿಸಲಾಗುತ್ತದೆ. ಪ್ರಧಾನವಾಗಿ ಸಾಂಸ್ಕೃತಿಕ ಚರಿತ್ರೆ, ಜನಪದ ಚರಿತ್ರೆ ಮತ್ತು ಜನಪದಪ್ರಾಕ್ತನಶಾಸ್ತ್ರಕ್ಕೆ ಸಂಬಂಧಿಸಿದಂತೆ ಅಗತ್ಯವೆನಿಸಿದ ಕೆಲವು ಸಂಗತಿಗಳನ್ನು ವಿವರಿಸಲಾಗುತ್ತದೆ. ಈ ಪ್ರಬಂಧದ ಮಿತಿಯು; ನದಿಯ ಉಗಮ, ಯೌವನ, ವಾರ್ಧಿಕ್ಯದ ವರೆಗಿದ್ದರೂ, ಅಧ್ಯಯನದಲ್ಲಿ ತಳೆದ ನಿಲುವುಗಳ ಬಗೆಗೆ ಸಂಕ್ಷಿಪ್ತಗೊಳಿಸಿ ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿನ ಚಳ್ಳಕೆರೆ, ಮೊಳಕಾಲ್ಮೂರು, ಜಗಳೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿರುವ ಪ್ರಾಚ್ಯಾವಶೇಷಗಳಿಗೆ ಮಹತ್ವ ಕೊಡಲಾಗಿದೆ.

‘ಚಿನ್ನಹಗರಿ’ ಎನ್ನುವುದು ಅಪರೂಪದ, ಕಿರಿದಾದ ಬಡ ನದಿ. ತನ್ನ ಪ್ರಾಕೃತಿಕ ಸೌಂದರ್ಯವನ್ನು ನಗ್ನಗೊಳಿಸುವುದು ಮಳೆಗಾಲದಲ್ಲಿ ಮಾತ್ರ. ಈ ನದಿಗೆ ಕನ್ನಡದಲ್ಲಿ ಹಗರಿ, ಚಿಕ್ಕಹಗರಿ, ಸಣ್ಣಹಗರಿ ಮತ್ತು ಜನ್ನಿಗೆಹಳ್ಳವೆಂದು ಕರೆಯುವರು. ದಿವಂಗತ ಹುಲ್ಲೂರು ಶ್ರೀನಿವಾಸಜೋಯಿಸರು ಈ ನದಿಯನ್ನು ‘ಪಾಪವಿನಾಶಿನಿ’ ಎಂದು ಕರೆದಿದ್ದಾರೆ. ಕೆಲವರು ಚಿನ್ನಹಗರಿ ನದಿಗೆ ಸ್ತ್ರೀ ದೇವತೆಯ ಸ್ಥಾನವನ್ನು ಕಲ್ಪಿಸಿದ್ದಾರೆ. ಚಿನ್ನ ಎಂದು ಭಾಷಿಕವಾಗಿ ಕನ್ನಡದಲ್ಲಿ ಹೊನ್ನು, ಬಂಗಾರವೆನಿಸಿದರೂ ಪ್ರಸ್ತುತ ಅದಲ್ಲವಾಗಿದೆ. ‘ಚೆನ್ನಮ್ಮ’ ಎಂಬ ಬುಡಕಟ್ಟು ದೇವತೆ ಈ ಭಾಗದಲ್ಲಿ ಪೂಜಾರ್ಹಳಾಗಿದ್ದು, ಜನರು ಕ್ರಮೇಣ ಆ ಹೆಸರನ್ನಳವಡಿಸಿ ವಾಸಿಸಿರಬಹುದು. ಹಿರಿ ಜೊನ್ನಮ್ಮ> ಹಿರಿಜಿನ್ನಮ್ಮ> ಇರಿಚಿನ್ನಮ್ಮ ಆಗಿರಬಹುದು. ಜೊನ್ನಮ್ಮ ಆಂಧ್ರದಲ್ಲಿ ಪ್ರಸಿದ್ಧವಾದ ದೇವತೆಯಾಗಿದ್ದಾಳೆ. ಈಕೆ ೧೨ ಮತ್ತು ೧೩ನೇ ಶತಮಾನದ ವಚನಕಾರ ಜೊನ್ನಯ್ಯನ ಸಹೋದರಿ ಎನ್ನಲಾಗಿದೆ. ಕನ್ನಡದ ಶ್ರೇಷ್ಠ ವಚನಕಾರ ಮಗ್ಗೆಯ ಮಾಯಿದೇವರು ‘ಮೂರು ನದಿಗಳ ಮಧ್ಯೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆ’ ಎಂದಿರುವುದನ್ನು ಅವರ ಬಗ್ಗೆ ಸಂಶೋಧನೆ ಮಾಡಿದ ವಿದ್ಯಾರ್ಥಿ ಹೇಳಿದ್ದಾರೆ. ಆ ಮೂರು ನದಿಗಳಲ್ಲಿ ಚಿನ್ನಹಗರಿ ನದಿ ಒಂದೆಂದು ಹೇಳಬಹುದು. ಆದರೆ ಭೂಗರ್ಭ ಶಾಸ್ತ್ರಜ್ಞರು ಚಿನ್ನದ ನಿಕ್ಷೇಪ(ಗಣಿ)ಗಳಿದ್ದವೆಂದು, ಅದಕ್ಕಾಗಿ ಚಿನ್ನಹಗರಿ ಎಂದು ಕರೆದಿರಬಹುದು ಎಂದಿದ್ದಾರೆ.

ಈ ನದಿಗೆ ಜಲಮೂಲ ಜನ್ನಿಗೆಹಳ್ಳ. ಜನ್ನಿಗೆಹಳ್ಳವು ಭೌಗೋಳಿಕವಾಗಿ ಚಿತ್ರದುರ್ಗದ ಪಶ್ಚಿಮ ಬೆಟ್ಟಗಳಲ್ಲಿ ಹುಟ್ಟಿ ಚಿತ್ರಹಳ್ಳಿಯಿಂದ ಕಾತ್ರಾಳುಕೆರೆ ಮೂಲಕ ಹರಿದು ಜಗಳೂರು ತಾಲೂಕಿನ ಸಂಗೇನಹಳ್ಳಿ ಕೆರೆಯನ್ನು ತಲುಪುತ್ತದೆ. ತರುವಾಯ ಅಲ್ಲಿಂದ ಚಿಕ್ಕಗೊಂಡನಹಳ್ಳಿ, ತುರುವನೂರು, ಮುಸ್ಟೂರು, ದೊಣೆಹಳ್ಳ, ಚಿಕ್ಕಮಲ್ಲನ ಹೊಳೆ ಮೂಲಕ ಬಳ್ಳಾರಿ ಜಿಲ್ಲೆಯ ಗಡಿಪ್ರದೇಶವಾದ ಕಲ್ಲಹಳ್ಳಿಯನ್ನು ಪ್ರವೇಶಿಸುತ್ತದೆ. ಅಲ್ಲಿಂದ ಹರಿಯುವಾಗ ಕೆಲವು ಉಪಹಳ್ಳಗಳು ಬಂದು ಸೇರುತ್ತವೆ. ಅವುಗಳೆಂದರೆ ಕಳ್ಳರಹಳ್ಳ, ಹೆಂಡಕಟ್ಟುವರಹಳ್ಳ, ಕುರಿಬೋರಯ್ಯನ ಹಳ್ಳ, ತಿಪ್ಪೇಹಳ್ಳಿಹಳ್ಳ, ಹೂಡೇಂಹಳ್ಳ, ಕುಯತಿಹಳ್ಳ ಮತ್ತು ಪೆದ್ದವಂಕ(ದೊಡ್ಡಹಳ್ಳ) ಎಂಬಿತ್ಯಾದಿ ಉಪಹಳ್ಳಗಳಿವೆ. ಕಾನಾಮಡುಗು, ಹುಲಿಕೆರೆ, ಹೂಡೇಂ, ಕುಮತಿ, ಗುಡೇಕೋಟೆ, ಜರಿಮಲೆಯಿಂದ ಹರಿದು ಬಂದ ಹಳ್ಳಗಳು ಈ ನದಿಯನ್ನು ಸೇರುತ್ತವೆ. ಕುಮತಿಯವರೆಗೆ ಈ ಹಳ್ಳಕ್ಕೆ ಜನ್ನಿಗೆಹಳ್ಳವೆಂದು, ಮುಂದುವರೆದು ಚಿನ್ನಹಗರಿ ಎಂದು ಕರೆಯಲಾಗುತ್ತದೆ. ಇಲ್ಲಿ ಬಹು ದೊಡ್ಡದಾಗಿ ಹರಿಯುವುದು ಜನ್ನಿಗೆಹಳ್ಳ. ಜನಗಿ ಎಂದರೆ ನೀರು ಬಸಿಯುವುದು, ಜಿನುಗು, ಜೋಗು ಎಂದು ಅಭಿಪ್ರಾಯ ಪಡುತ್ತಾರೆ.

ಇದರ ನಾಮ ನಿಷ್ಪತ್ತಿ ಬಹುಶಃ ಈ ರೀತಿ ಇರಬಹುದು: ಬುಡಕಟ್ಟುಜನರು ಬೇಟೆಯಿಂದ ಸ್ಥಿತ್ಯಂತರಗೊಂಡು ಪಶುಪಾಲನೆಯನ್ನು ಕೈಗೊಂಡಾಗ ಕೆಲವು ಪಶುಗಳ ನಾಮಗಳನ್ನೇ ಬಳಸಿರುವುದುಂಟು. ಉದಾ: ಎತ್ತಿನಹಟ್ಟಿ, ಕುರಿಹಟ್ಟಿ ಪೆಯಿಲಾರಹಟ್ಟಿ, ಇತ್ಯಾದಿ. ಇಲ್ಲಿ ಜನ್ನಿಗೆ ಎಂದರೆ ಗೋವುಗಳ ಒಂದು ತಳಿ ಎಂದರ್ಥ.

---

* ಸಂಶೋಧನ ಸಹಾಯಕ, ಚರಿತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಮಲಾಪುರ - ೫೮೩ ೨೨೧

ಇವು ನೀಳವಾದ, ಸೊಗಸಾದ ಮೈಕಟ್ಟನ್ನು ಹೊಂದಿ, ಶ್ರೇಷ್ಟಮಟ್ಟದ್ದಾಗಿದ್ದವು. ಇವು ನೋಡಲು ಸುಂದರವಾಗಿದ್ದು, ಆಕರ್ಷಕವಾಗಿರುತ್ತವೆ. ಹಾಗಾಗಿ ಜನ್ನಿಗೆ ಎಂದರೆ ದೇವರಿಗೆ ಮೀಸಲಾಗಿ ಬಿಟ್ಟ ಗೋವು ಮತ್ತು ಅದರ ಹಾಲು ಎನ್ನಬಹುದು.

ಚಿನ್ನಹಗರಿ ಪರಿಸರದ ಪ್ರಾಚ್ಯಾವಶೇಷಗಳು

ಈ ನದಿಯ ಇಕ್ಕೆಲಗಳಲ್ಲಿ ಮರೆಯಾದ ಚಾರಿತ್ರಿಕ-ಎಡೆಗಳನ್ನು, ಮಾನವನು ಆದಿಕಾಲದಿಂದ ವಾಸಿಸಿದ ಆವಾಸ ಸ್ಥಾನಗಳನ್ನು ಬೆಳಕಿಗೆ ತರುವ ಪ್ರಯತ್ನವಾಗಿದೆ. ಇಲ್ಲಿ ಮಾನವನ ವಸತಿನೆಲೆ, ಹಾಳೂರು, ರಕ್ಕಸಕಲ್ಲು, ದೇವಾಲಯಗಳು, ವೀರಗಲ್ಲು- ಮಾಸ್ತಿಕಲ್ಲುಗಳು, ಬುಡ್ಡೆಕಲ್ಲು, ಗಿರಿಧಾಮಗಳಲ್ಲದೆ ಇತರ ಸಾಂಸ್ಕೃತಿಕ ನೆಲೆಗಳನ್ನು ಪರಿಚಯಿಸಲಾಗುತ್ತದೆ. ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಹುಟ್ಟಿ ಬಳ್ಳಾರಿ ಮತ್ತು ಅದೇ ಜಿಲ್ಲೆಯ ಮೂಲಕ ಹರಿದು, ವೇದಾವತಿ ಜೊತೆಗೆ ಆಂಧ್ರದಲ್ಲಿ ಹರಿದು ತುಂಗಾಭದ್ರಾ ನದಿಯನ್ನು ಸೇರುತ್ತದೆ. ಆಗ ಇದು ಅಲ್ಲಲ್ಲಿ ವಿಶಿಷ್ಟವಾದ ಐತಿಹಾಸಿಕ ಮಹತ್ವ ಪಡೆದ ಸ್ಥಳಗಳನ್ನು ಸೃಷ್ಟಿಸಿದೆ.

ಬೂದಿದಿಬ್ಬ : ವಸತಿ ನೆಲೆಯ ಶೋಧನೆ

ಚಿನ್ನಹಗರಿ ನದಿಯ ಉಗಮದಿಂದ ಅಂತ್ಯದವರೆಗೂ ಇಕ್ಕೆಲಗಳಲ್ಲಿ ಕೆಲವು ವಿಶಿಷ್ಟವಾದ ಇತಿಹಾಸಪೂರ್ವ, ಐತಿಹಾಸಿಕ, ಧಾರ್ಮಿಕ ನೆಲೆಗಳನ್ನು ಕಾಣಬಹುದಾಗಿವೆ. ಅವು ಒಂದೇ ರೀತಿಯಾಗಿಲ್ಲ. ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಚಿಕ್ಕಮಲ್ಲನಹೊಳೆ ನವಶಿಲಾಯುಗದ ನಿರ್ದೇಶನವಾದರೆ ಅದರ ಮೇಲ್ಭಾಗದಲ್ಲಿರುವ ಸಂಗೇನಹಳ್ಳಿ ಚಿಪ್ಪಿನ ಕೆರೆಗಳು ಶಾತವಾಹನರ ಕಾಲದ ನಿವೇಶನಗಳಾಗಿದ್ದುದು ಗಮನಾರ್ಹ. ಇವುಗಳನ್ನು ಪ್ರೊ. ಲಕ್ಷ್ಮಣ್ ತೆಲಗಾವಿ ನೇತೃತ್ವದ ಚಿತ್ರದುರ್ಗ ಸಂಶೋಧನ ತಂಡ ಬೆಳಕಿಗೆ ತಂದಿದೆ.

ಇದೇ ಜಿಲ್ಲೆಯ ಜಗಳೂರು ತಾಲೂಕಿನ ಚಿಕ್ಕಮಲ್ಲನಹೊಳೆ ಹತ್ತಿರವಿರುವುದೇ ಈ ವಸತಿ ದಿಬ್ಬ ಅಥವಾ ಬೂದಿದಿಬ್ಬ. ಇದನ್ನು ಅಲ್ಲಿನ ಗ್ರಾಮೀಣರು **ಮುತ್ತಿಗಾರರಬೊಟ್ಟು** ಎಂದು ಸಹ ಕರೆಯುವರು. ಈ ನಿವೇಶನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕಲ್ಲಹಳ್ಳಿಗೆ ಸಮೀಪದಲ್ಲಿರುತ್ತದೆ. ಬೂದಿದಿಬ್ಬ ಚಿಕ್ಕಮಲ್ಲನ ಹೊಳೆಯ ನಾಯಕ ಜನಾಂಗದ ಕಾಟಯ್ಯನವರ ನಿಜಲಿಂಗಪ್ಪನ ಹೊಲದಲ್ಲಿದೆ. ಸುಮಾರು ೪ ಎಕರೆ ವಿಸ್ತೀರ್ಣ ಹೊಂದಿದ್ದು, ೪ ಅಡಿ ಎತ್ತರ, ೯೫ ಅಡಿ ಉದ್ದ, ಮತ್ತು ೧೦೫ ಅಡಿ ಉತ್ತರ-ದಕ್ಷಿಣವಾಗಿ ಅಗಲವನ್ನು ಹೊಂದಿದೆ. ಇಲ್ಲಿ ಸುಮಾರು ೫ ಸ್ತರಗಳು ಬಾಹ್ಯವಾಗಿ ಕಂಡುಬಂದಿದ್ದು, ಮೊದಲನೆ ಸ್ತರದಲ್ಲಿ ಬಿಳಿಯ ಬಣ್ಣದ ಬೂದಿ, ಎರಡನೇ ಸ್ತರದಲ್ಲಿ ಬೂದಿ ಮಿಶ್ರಿತ ಮಣ್ಣು ಮತ್ತು ಹೆಚ್ಚಾಗಿ ಸಗಣಿ ಕಂಡುಬರುತ್ತದೆ. ಉಳಿದ ೩-೪ ಸ್ತರಗಳಲ್ಲಿ ಪಶುಗಳ ಮೂಳೆಗಳು ಹೇರಳವಾಗಿ ದೊರಕಿವೆ. ಕೆಂಪು ಮತ್ತು ಬೂದು ಬಣ್ಣದ ಮಡಕೆ ಚೂರುಗಳು, ಕಲ್ಲಿನ ಕೊಡಲಿ, ಬಳೆ, ಮೊನಚಾದ ಕಲ್ಲುಗಳಲ್ಲದೆ, ಇನ್ನಿತರ ಶಿಲಾಯುಧಗಳನ್ನು ನೋಡಬಹುದು.

ಸ್ಥಳೀಯವಾಗಿ ಈ ಬೂದಿದಿಬ್ಬದ ಮಣ್ಣನ್ನು ಮನೆಗಳ ಮೇಲೆ ಹಾಕಲು ಮತ್ತು ಫಲವತ್ತತೆಗಾಗಿ ಹೊಲಗಳಿಗೆ ಎತ್ತಿನ ಗಾಡಿಗಳ ಮೂಲಕ ಏರಿಕೊಂಡು ಹೋಗುತ್ತಿದ್ದುದರಿಂದ ಸುಲಭವಾಗಿ ಮೇಲಿನಿಂದ ತಳಭಾಗದವರೆಗೆ ಸ್ತರಗಳನ್ನು ಗುರುತಿಸಲು ಅವಶೇಷಗಳನ್ನು ಪತ್ತೆ ಹಚ್ಚಲು ಸಹಾಯಕವಾಯಿತು. ಯಾತ್ರಿಕರು ರೊಪ್ಪದ ಬಟ್ಟು, ಮುತ್ತಿಗಾರದೇವರೆತ್ತುಗಳು ಐಕ್ಯಗೊಂಡ ಸ್ಥಳವೆಂದು, ಇಲ್ಲಿನ ಬೂದಿಯನ್ನು ಹಣೆಗಿಟ್ಟು ಕೊಳ್ಳುವುದರ ಜೊತೆಗೆ ಗರ್ಭಿಣಿ ಸ್ತ್ರೀಯರು ಬಾಯಿ ಚಪಲಕ್ಕಾಗಿ ಚೂರ್ಣದಂತೆ ತಿನ್ನುವರು. ಮುತ್ತಿಗಾರ ಎತ್ತುಗಳು ಎಂದರೆ ಬೇಡರ ಬೆಡಗುಗಳಲ್ಲೊಂದಾದ ಮಲ್ಲಿನಾಯಕ ಬೆಡಗಿಗೆ ಮುತ್ತಿಗಾರರ ಎತ್ತುಗಳೇ ಆರಾಧ್ಯ ದೈವಶಕ್ತಿ. ಇಲ್ಲಿ ಮೂಳೆಗಳು ಸಾಕಷ್ಟು ಪ್ರಮಾಣದಲ್ಲಿ ದೊರೆತಿರುವುದರಿಂದ ಇದು ಸ್ಮಶಾನ ನಿವೇಶನವೆಂದು (Burial site) ಕರೆಯುವುದು ಚರ್ಚಾವಿಷಯ. ಈ ಬೂದಿ ದಿಬ್ಬಗಳಿಗೆ (Ash mounds) ನೂತನ ಶಿಲಾಯುಗದ ಪಶು ಸಂಗೋಪನೆಯೇ ಕಾರಣವೆಂದು ಅಭಿಪ್ರಾಯಿಸಿದ್ದಾರೆ. ಇದು ಆ ವಾದಕ್ಕೆ ಹೊರತಾಗಿಲ್ಲ. ಬೇಟೆಯಿಂದ ಅಲ್ಪವಾಗಿ ಒಂದು ಬುಡಕಟ್ಟು ವರ್ಗ ಸ್ಥಿತ್ಯಂತರ ಗೊಂಡು ಈ ರೀತಿ ನದಿ ಮುಖಜ ಭೂಮಿಯಿಂದ ಅಭಿಮುಖವಾಗಿ ಅಂದರೆ ಆಂಧ್ರದಿಂದ ವಲಸೆ ಬಂದರೆಂಬ ವಿಷಯ ತಿಳಿಯುತ್ತದೆ.

ಬೂದಿದಿಬ್ಬ (Ash mound) ಕುರಿತು ಅನೇಕ ಪುರಾತತ್ವ ಶಾಸ್ತ್ರಜ್ಞರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವರುಗಳಲ್ಲಿ ಕೆ.ಪದ್ದಯ್ಯ ಅವರು ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾಂ ಜಿಲ್ಲೆಗಳಲ್ಲಿ ಇವು ಹೇರಳವಾಗಿವೆಂದು ಅನ್ವೇಷಣೆ ಮಾಡಿ ತಿಳಿಸಿದ್ದಾರೆ. ಅ. ಸುಂದರ ಕರ್ನಾಟಕದಲ್ಲಿರುವ ನವಶಿಲಾಯುಗದ ನೆಲೆಗಳು, ಬೂದಿದಿಬ್ಬಗಳ ಬಗ್ಗೆ ಬ್ರಹ್ಮಗಿರಿ, ಬೂದಿಹಾಳು ಕುಪ್ಪಗಲ್ ಮುಂತಾದವುಗಳಲ್ಲಿನ ಮರೆಯಾದ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ.

ಇದಕ್ಕೆ ಹೋಲುವಂತೆ ಬೂದಿದಿಬ್ಬಗಳು ಆಂಧ್ರದ ಕರ್ನೂಲು, ಅನಂತಪುರದಲ್ಲಿ ಕಾಣಸಿಗುತ್ತವೆ. ಹಾಗಾಗಿ ಈ ಬೂದಿದಿಬ್ಬದ ಸಂಸ್ಕೃತಿ ಹೋಲಿಕೆಯಲ್ಲಿ ಆಂಧ್ರದ ಸಂಸ್ಕೃತಿಯನ್ನು ಪ್ರತಿನಿಧಿಸಿದೆ. ಇದಕ್ಕೆ ಬಲವಾದ ಅಭಿಪ್ರಾಯವನ್ನು ರಾಬರ್ಟ್ ಬ್ರೂಸ್‌ಫುಟನು ವ್ಯಕ್ತಪಡಿಸಿದ್ದನ್ನು ಕೆ. ಪದ್ದಯ್ಯ ಅವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. "Neolithic Settlements and the Predominantly pastoral charactor of the present day rural way of life in South India in which cattle and their dung play a dominant role, Foote concluded that the ash deposits represent nothing but burnt cow-dung and date back to the Neolithic phase."[1]

ದಕ್ಷಿಣ ಭಾರತದಲ್ಲಿ ಗ್ರಾಮೀಣ ಪರಿಸರದಿಂದ ಪಶುಪಾಲನೆಗೆ ಹೆಚ್ಚಿನ ಸಮುದಾಯಗಳು ಒಳಗಾಗಿದ್ದು, ನವಶಿಲಾಯುಗಕ್ಕೆ ಸೇರಿದ ಪ್ರಧಾನ ನಿವೇಶಗಳನ್ನು ನೋಡಬಹುದು. ಅವು ಪಶುಗಳ ಸಗಣೆ, ಮೂಳೆಗಳಿಂದ ಕೂಡಿದ ನವಶಿಲಾಯುಗದ ನಿವೇಶನಗಳಾಗಿವೆ.

ಬೂದಿದಿಬ್ಬ ಉಂಟಾದ ಬಗೆ, ಅದರ ಹಿನ್ನೆಲೆ ಬಗ್ಗೆ ಫುಟ್ ಮತ್ತು ಅಲ್ಚಿನ್ ಅವರುಗಳ ಅಭಿಪ್ರಾಯವನ್ನು ಇಲ್ಲಿ ಸ್ಮರಿಸಬಹುದು. "Ash mounds where cattle Penning took place and the resultant cowdung deposits where being periodically burnt. They were regular pastoral accupation sites, with evidence pertaining to various kinds of Settlement activity"[2] ಈ ರೀತಿಯಾಗಿ ಬೂದಿದಿಬ್ಬಗಳು ಉದ್ಭವಗೊಳ್ಳುವುದು ಪಶುಪಾಲನೆಯಿಂದ ಎಂಬುದು ನಿಶ್ಚಿತ ಎಂದಾಗ ಇಲ್ಲಿನ ನಿವೇಶನ ಕಾಲಾನುಕ್ರಮದಲ್ಲಿ ವಿವರಿಸಲು ವೈವಿಧ್ಯಗಳಿವೆ. ಇದರ ಅಗತ್ಯ, ಮಹತ್ವವನ್ನು ಪೆದ್ದಯ್ಯ ಅವರು ಈ ಪರಿಸರವನ್ನು ಕುರಿತು "Pastoralism continues to be an important of the rural way a life in the region"[3] ಎಂದಿದ್ದಾರೆ.

ಮಧ್ಯಕಾಲೀನ ನಗರ: ಚನ್ನಪಟ್ಟಣ

ಜನಿಗೆ ಹಳ್ಳಕ್ಕೆ ಉಪಹಳ್ಳವಾಗಿ ಹರಿದು ಬರುವ ಕೇದಿಗೆ ಪಳೆಹಳ್ಳ ಅಥವಾ ಕುರಿಬೋರಯ್ಯನಹಳ್ಳದ ದಡದ ಮೇಲ್ಭಾಗ ದಲ್ಲಿದೆ. ಅಂದರೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಪೂಜಾರಿ ಹಳ್ಳಿ ಗ್ರಾಮದ ಸಮೀಪದಲ್ಲಿ ಈ ನಿವೇಶನವಿದೆ. ಇದು ಪೂಜಾರಿ ಹಳ್ಳಿಗೆ ದಕ್ಷಿಣದಿಂದ ೨ ಕಿ.ಮೀ. ಮತ್ತು ಕಲ್ಲಹಳ್ಳಿಯಿಂದ ಉತ್ತರಕ್ಕೆ ೩ ಕಿ.ಮೀ. ದೂರದಲ್ಲಿದೆ.

ಈ ಚನ್ನಪಟ್ಟಣವನ್ನು ಇಲ್ಲಿನ ಜನರು ತೆಲುಗಿನಲ್ಲಿ ಸಲ ಪಟ್ಣಮು > ಸನ್ನಪಟ್ಣಮು > ಚಲಪಟ್ಣಮು ಎಂದು ನಾನಾ ವಿಧದಲ್ಲಿ ಕರೆಯುತ್ತಾರೆ. ಕನ್ನಡದಲ್ಲಿ ಮಾತ್ರ ಚನ್ನಪಟ್ಟಣವೆಂದೇ ಕರೆಯಲಾಗುತ್ತದೆ. ಇಂದು ಅಳಿದುಳಿದ ಭಗ್ನಾವಶೇಷಗಳು ಮಾತ್ರ ಕಂಡು ಬರುತ್ತವೆ. ಸಿಕ್ಕಂತಹ ಕೆಲವು ಕಂಚಿನ, ತಾಳೆಗರಿ ಪ್ರತಿಗಳನ್ನು ಇಲ್ಲಿಂದ ಸ್ಥಳಾಂತರಿಸಲಾಗಿದೆ. ಹಾಗಾಗಿ ಈ ಪಟ್ಟಣದ ಬಗ್ಗೆ ಬೆಳಕು ಚೆಲ್ಲುವ ಪ್ರಬಲ ಆಧಾರದ ಕೊರತೆಯಿದೆ.

ಚನ್ನಪಟ್ಟಣವು ಚಚ್ಚೌಕಾರವಾಗಿದ್ದು, ಸುಮಾರು ಹತ್ತು ಎಕರೆ ಭೂಮಿಯಲ್ಲಿ ಇರುವುದುಂಟು. ಪಟ್ಟಣದ ಸುತ್ತಲೂ ಕಂದಕ ತೋಡಲಾಗಿದ್ದು, ಸುತ್ತಲೂ ಆಯಾತಾಕಾರವಾಗಿ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಈ ರಕ್ಷಣಾಕೋಟೆ ಗೋಡೆಯನ್ನು ಹೊಂದಿ, ಸ್ಥಳೀಯ ಕಚ್ಚಾವಸ್ತುಗಳಿಂದ ನಿರ್ಮಿಸಲಾಗಿದ್ದು, ನಾಲ್ಕು ಕಡೆ ಪ್ರವೇಶದ್ವಾರಗಳಿವೆ. ಅನುಕೂಲಕ್ಕೆ ತಕ್ಕಂತೆ ಭದ್ರತೆ, ಆಂತರಿಕ ವ್ಯವಸ್ಥೆಯ ಹಿತದೃಷ್ಟಿಯಿಂದ ಮೂರು ದ್ವಾರಗಳನ್ನು ಅರ್ಧಭಾಗಕ್ಕೆ ಮುಚ್ಚಲಾಗಿದೆ. ಕಲ್ಲು, ಮಣ್ಣಿನಿಂದ ನಿರ್ಮಿಸಿದ ಈ ಕೋಟೆ ಬಹು ಸುಂದರವಾಗಿದ್ದು, ಅಪೂರ್ವವೆನಿಸಿದೆ. ಮಧ್ಯಕಾಲೀನ ನಗರವೆಂದು ಗುರುತಿಸಲು ನೆರವಾದ ಲಕ್ಷಣಗಳು ಅಪಾರ. ರಕ್ಷಣಾ ಕೋಟೆಯ ಗೋಡೆ, ಕಂದಕ, ಬಾವಿ, ಸುಟ್ಟ ಇಟ್ಟಿಗೆ, ಕಂಚಿನ ಬಾಗಿಲು, ಬೆಳ್ಳಿ ನಾಣ್ಯ ವ್ಯಾಪಾರ ,ಮಾರ್ಗಗಳು ಇತ್ಯಾದಿ. ಹೀಗಾಗಿ ಪ್ರಾಕೃತಿಕ ಮತ್ತು ಕೃತಕ ಅವಶೇಷಗಳಿಂದ ಇದನ್ನು ಮಧ್ಯಕಾಲೀನ ನಗರವೆಂದು ಕರೆಯಲು ಶಕ್ಯವಿಲ್ಲ.

ನಾಯಕನಹಟ್ಟಿಯಲ್ಲಿ ಜೀವೈಕ್ಯ ಸಮಾಧಿಯಾಗಿರುವ ಶ್ರೀ ಗುರುತಿಪ್ಪೇರುದ್ರ ಸ್ವಾಮಿಗಳು ಮೊದಲಿಗೆ ನೆಲಸಿದ್ದು ಇಲ್ಲಿಯೆ. ಇವರು ಆಂಧ್ರದಿಂದ ಪಶ್ಚಿಮಾಭಿಮುಖವಾಗಿ ಪ್ರಯಾಣಿಸಿ, ಕೊನೆಗೆ ಪೂಜಾರಹಳ್ಳಿಯ ಹತ್ತಿರ ಚನ್ನಪಟ್ಟಣದಲ್ಲಿ ನೆಲಸಿ ಅನಂತರ ನಾಯಕನಹಟ್ಟಿಗೆ ಪ್ರಯಾಣಿಸಿದರೆಂಬ ಪ್ರತೀತಿಗಳಿವೆ. ನಂತರ ಚಿತ್ರದುರ್ಗದ ಅರಸ, ನಾಯಕ ಶಿರೋಮಣಿಯಾದ ಮದಕರಿ ನಾಯಕನ ಸಹೋದರಿಯನ್ನು ಈ ಚನ್ನಪಟ್ಟಣದ ನಾಯಕ ಅರಸನಿಗೆ ವಿವಾಹ ಮಾಡಿಕೊಟ್ಟು ಸಂಬಂಧ ಬೆಳೆಸಿದರೆಂದು ತಿಳಿದು ಬರುತ್ತದೆ. ತರುವಾಯ ಈ ಚನ್ನಪಟ್ಟಣಕ್ಕೂ ಮತ್ತು ಗುಂಡೇಕೋಟೆ ಅರಸರಿಗೂ ರಾಜಕೀಯ ಸಂಬಂಧವಿತ್ತೆಂದು ಊಹಿಸಲಾಗಿದೆ.

ಚನ್ನಪಟ್ಟಣ ಹಾಳಾಗಿದ್ದು ಕನಿಷ್ಠ ಮೂರು ಬಾರಿ ಎಂದು ಜನಪದರು ನಂಬಿದ್ದಾರೆ. ವಿಜಯನಗರದ ನಿಯೋಜಿತ ಅಧಿಕಾರಿ ಇಲ್ಲಿ ಆಡಳಿತ ನಡೆಸಿದ ನಂತರ, ಪಾಳೆಯಗಾರರಿಗೆ ಸೇರಿತು. ಹೈದರ್ ಅಲಿ ಅವನ ಮಗ ಟಿಪ್ಪು ಸುಲ್ತಾನರು ಗುತ್ತಿ, ಬಳ್ಳಾರಿ, ಹರಪನಹಳ್ಳಿ ರಾಯದುರ್ಗವನ್ನು ವಶಪಡಿಸಿಕೊಂಡು ಮರಳಿ ಬರುವಾಗ ಅವನ ದಂಡು ಚನ್ನಪಟ್ಟಣಕ್ಕೆ ನುಗ್ಗಿ ನಾಶಪಡಿಸಿತೆಂಬ ದಂತಕತೆಗಳಿವೆ. ಇದಕ್ಕೂ ಮೊದಲೆಂದರೆ ಅಲ್ಲಾವುದ್ದೀನ್-ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್‌ನಿಂದ, ಬಿಜಾಪುರದ ಸುಲ್ತಾನರಿಂದ ಇದು ನಾಶವಾಯಿತೆಂದು ಜನಪದ ಗೀತೆಗಳಿಂದ ತಿಳಿಯುತ್ತದೆ. ಇವರ ಸಮಕಾಲೀನ ಅರಸರು ಚನ್ನಪಟ್ಟಣವನ್ನು ನಾಶಪಡಿಸಿದ ರಲ್ಲದೆ, ನೂರಾರು ಬಾಲಕರನ್ನು ಶಿರಚ್ಛೇದನಗೊಳಿಸಿದರೆಂದು ಜನಪದ ಕಥೆಗಳಿಂದ ವೇದ್ಯವಾಗುತ್ತದೆ. ಕಾರಣ, ತಪ್ಪಿಸಿಕೊಂಡು ಓಡಿಹೋದ ಬಾಲಕರನ್ನು ಕಡಿದಾಗ ರಕ್ತ ಸೋರಿ ಹಳ್ಳವಾಗಿ ಹರಿಯುತ್ತಿದ್ದನ್ನು ಕಂಡು ರಕ್ತವು ಹೊರಹೋಗಬಾರದೆಂದು ಕಟ್ಟೆಯನ್ನು ಕಟ್ಟಲಾಯಿತಂತೆ. ಇಂದಿಗೂ ಕೂಡ ಅದನ್ನು ರಕ್ತದ ಕಟ್ಟೆಯೆಂದು ಕರೆಯಲಾಗುತ್ತದೆ. ಹುಡುಗರನ್ನು ಕಡಿದ ಜಾಗ ಮೊರಡಿ(ಮಟ್ಟಿ)ಯಾಗಿದ್ದರಿಂದ ಹುಡುಗರನ್ನು ಕಡಿದ ಜಾಗಕ್ಕೆ **ಹುಡುಗರನ್ನು ಕಡಿದ ಮೊರಡಿ** ಎಂಬ ಹೆಸರು ಪ್ರಸಿದ್ಧವಾಗಿದೆ.

ಅಕ್ಕಮ್ಮನ ಗುಂಡುಗಳು

ಸಂಸ್ಕೃತೀಕರಣಗೊಂಡ ಬುಡಕಟ್ಟು ಜನರು ೧೨ನೇ ಶತಮಾನದ ವಚನಕಾರ್ತಿ ಅಕ್ಕಮಹಾದೇವಿಯನ್ನು ಉದಾತ್ತೀಕರಿಸಿ ಬುಡಕಟ್ಟು ದೇವತೆಯನ್ನಾಗಿ ಪೂಜಿಸುವ ಪದ್ಧತಿ ಬೆಳೆದುಬಂದಿದೆ. ಈ ಗುಂಡುಗಳು ಜನ್ನಿಗೆಹಳ್ಳದ ಮಧ್ಯಭಾಗದಲ್ಲಿವೆ. ಅಬ್ಬೇನಹಳ್ಳಿ

ಸಮೀಪದಲ್ಲಿದ್ದು, ಪುರಾತನ ಕಾಲದಿಂದಲೂ ಇವುಗಳಿಗೆ ಪೂಜಾರ್ಹಸ್ಥಾನ ಕೊಟ್ಟಿದ್ದಾರೆ. ಈ ಗುಂಡುಗಳಿಗೆ ಸು. ೧ ಕಿ.ಮೀ. ದೂರದಲ್ಲಿ ಎರಡು ವೀರಗಲ್ಲುಗಳಿವೆ. ಇವುಗಳ ಬಗ್ಗೆ ಐತಿಹಾಸಿಕ ವಲಯದಲ್ಲಿ ತೀವ್ರವಾದ ಭಿನ್ನಪ್ರಾಯಗಳಿವೆ.

ದವನಪ್ಪನ ಗುಂಡುಗಳು

ಜನಿಗೆಹಳ್ಳದ ಉತ್ತರ ದಿಕ್ಕಿಗೆ ಮಾಳೇನಹಳ್ಳಿ ಸಮೀಪದಲ್ಲಿ ಈ ಗುಂಡುಗಳಿದ್ದು, ಇವುಗಳು ಬೃಹತ್‌ಶಿಲಾ ಸಂಸ್ಕೃತಿಗೆ ಸೇರಿವೆ. ಒಬ್ಬ ವ್ಯಕ್ತಿಯ ಹೆಸರಿನಿಂದ ಈ ಗುಂಡುಗಳಿಗೆ ದವನಪ್ಪನ ಗುಂಡುಗಳೆಂದು ಕರೆಯುವರು. ಹೆಚ್ಚಿನ ಮಾಹಿತಿ ಲಭ್ಯವಿಲ್ಲ.

ಚಿನ್ನಹಗರಿ ಅಥವಾ ಬೇಡರನಾಡಿನ ವಿಶಿಷ್ಟವಾದ ಬುಡ್ಡೆಕಲ್ಲುಗಳು

ಯಾವುದೇ ಒಂದು ಗ್ರಾಮ, ಹಳ್ಳಿ, ಪಟ್ಟಣ, ನಗರಗಳಿಗೆ ಒಂದು ಮಹಾದ್ವಾರವಿದ್ದಂತೆ, ಊರಿಗೊಂದು ಬುಡ್ಡೆಕಲ್ಲು ಇದ್ದೇ ಇರುತ್ತದೆ. ಊರಿಗೆ ಬುಡ್ಡೆಕಲ್ಲು ಪ್ರಧಾನವಾಗಿರುತ್ತದೆ ಮತ್ತು ಇಡೀ ಗ್ರಾಮಕ್ಕೆ ಅದು ಭೂಷಣಪ್ರಾಯವಾಗಿ ಪರಿಣಮಿಸುತ್ತದೆ. ಊರಿನ ಅನಿಷ್ಟತೆಗಳನ್ನು ತೊಲಗಿಸಲು ಸಹಾಯಕಾರಿಯಾಗುತ್ತದೆಂಬ ನಂಬಿಕೆ ದಟ್ಟವಾಗಿ ಬೇರೂರಿದೆ.

ಇಲ್ಲಿ ಊರಿನ ಒಬ್ಬ ಸಾಂಸ್ಕೃತಿಕ ವೀರನಿಂದ, ತುರುಕರು ಗಳು ನೆಲೆನಿಂತ ಸ್ಥಳಕ್ಕೆ ಸದ್ಗುಣ ಸಂಪನ್ನ, ಧೈರ್ಯಶಾಲಿ, ಅಪ್ರತಿಮ ವೀರ ಮುಂತಾದ ಗುಣಗಳುಳ್ಳ ಸ್ಹಾಹಸಿಗನ ನಾಮಾಂಕಿತದಿಂದ ಅವರು ನೆಲೆನಿಂತ ಸ್ಥಳಕ್ಕೆ ಬುಡ್ಡೆಕಲ್ಲನ್ನು ನೆಡುತ್ತಾರೆ. ನೆಟ್ಟಾದ ಮೇಲೆ ಆ ಸ್ಥಳಕ್ಕೆ ಅಥವಾ ಹಟ್ಟಿಗೆ ನೆಟ್ಟ ವ್ಯಕ್ತಿಯ ಹೆಸರನ್ನು ಇಡಲಾಗುತ್ತದೆ. ಜರಿಮಲೆ ಸಂಸ್ಥಾನದ* ವಂಶಾವಳಿಯಲ್ಲಿ ಒಂದು ಉಲ್ಲೇಖ ಈ ರೀತಿ ಬರುತ್ತದೆ. ''ಮೂರು ದೇಶದ ಸಮುಸ್ಥಾನೀಕರೂ ಮೂವತ್ತು ಸಾವಿರ ಪೇಟೆಸ್ತರೂ ಕಲಿತೂ ಯಿಾ ಸಿಂಹಾಸನವನ್ನು ನಿರ್ಮಾಣ ಮಾಡಿ ಪಾದಕಾಣಿಕೆಯಿಟ್ಟು ಯಿಾ ದೇವಸ್ಥಾನ ಮರುಳಾದ್ಯನ ಭಾರ ತಮ್ಮದೇಯಿರುತ್ತದೆಯೆಂದು ಹೊರಟು ಹೋಗುತ್ತಾರೆ. ಯಿತ್ತಲಾಗಿ ಭೂಮರಾಜರು ದೇಶಸಾಧನೆ ಮಾಡಿಕೊಂಡು ಬಂದೂ ಕಲಿಗದ್ದಿಯಾ ಹೊತ್ತು ಮರಿಯಾದಿ ಜನಗಳಿಗೆ ಮರಿಯಾದಿ ನಡಶಿ ಮಹಾಸ್ವಾಮಿಯಾಕೆ... ದೊಡನೆಯಿದ್ದರೂ. ಆರು ಮಂದಿ ಅಂಣ ತಂಮ್ಮಗ್ಗಳೂ ಹೋಗಿ ತಂಮ ತಂದಿಯ ಮುಂದೆ ಯಿಾ ವೃತ್ತಾಂತವಂ ಹೇಳಿ ಭೂಸಮುದ್ರ ವನ್ನು ಬಿಟ್ಟು ಬೇಂಟೆಯಾಡಿದ ಜಾಗಕ್ಕೆ ಬಂದೂ ಮಾಯದ ಗುರುಗಳೂ ಚಿತ್ತದಿಂದಾ ಮಂಡಲವಂ ಬಂದು ಯಿದ್ದಷ್ಟು ವುಗ್ಗಿಯನ್ನು ವಯಿಸಿ ಬುಡ್ಡೆಕಲ್ಲು ನಿರ್ಮಾಣ ಮಾಡಿದ್ದು ಚಿತ್ರಭಾನು ಸಂ॥ ಕಾರ್ತಿಕ ಶುದ್ಧ ಬುಧವಾರ ಜರಿಮಲೆಯೆಂದು ಭಟ್ಟಗಿಯವನ ಕೂಡಾ ೩ ಸಾರಿ ಕೂಗಿಸಿ ಮುಂದೆ ಕೋಟೆ ಕೊತ್ತಳಾ. ಭಾವಿಕೆರೆ ಗ್ರಾಮಭಕ್ತಿಗೆ ೪೮ ಲಕ್ಷ ವರಹಂ ತರಿಸಿ ಪಟ್ಣ ತಯಾರು ಮಾಡಿದ ೧೦ ವರುಷಕ್ಕೆ ವುಲ್ಲು ರೈತರಿಗೆ ಕೊಡಿಸಿ ರಾಜ್ಯವನ್ನು ಸಾರಾನೆ ಮಾಡಿದ್ದೂ''[೪] ಎಂದು ತಿಳಿಸಲಾಗಿದೆ.

ಇದಲ್ಲದೆ ''ವಿಕ್ರಮ ನಾಮ ಕಾರ್ತಿಕ ಶುದ್ದ ೧೦ ಗುರುವಾರ ಮುಹೂರ್ತ ದಶನಾಮ ವರ್ತಿಯಲ್ಲಿ---- ವುಬೇಯನಿ ಯಂಬ ನಾಮ ಮಾ- ಹನ್ನೆರಡು ಮಂದಿ ಆಯಗಾರರನ್ನು ನಿರ್ಣಯವಂ ಮಾಡಿ ವುತ್ತರ ದಿಕ್ಕಿನಲ್ಲಿ ಬುರ್ಜು ಕಟ್ಟಿಸಿ ಆ ಸ್ಥಳದಲ್ಲಿ ವುಗ್ಗಿ ಮನೆಯಂದೂ ಹೆಸರು ಕರೆದೂ ವುಗ್ಗಿಶಾಸ್ತವಂ ಮಾಡಿ ಶಾಸ್ತ್ರೀಕರಿಂದ ಬುಡ್ಡೆಕಲ್ಲು ಪೂಜರಿಂದ ನಿರ್ಣಯವಂ ಮಾಡಿ ಮಾಯದ ಸ್ವಾಮಿಯಾದ ಕಂಚಿ ದೇಶದಿಂದ ತಂದ ಮಳೆ ಬಗೆ ಚನ್ನಬಸವ ಸ್ವಾಮಿಗಳನ್ನು ಪಟ್ಟಾಭಿಷೇಕ ಮಾಡುವುದಕ್ಕೆ ಹರಪನಹಳ್ಳಿ, ಚಿತ್ರದುರ್ಗ, ಜರಿಮಲೆ ಸಂಸ್ಥಾನದವರು ಭಾಗವಹಿಸಿದ್ದು''[೫] ತಿಳಿದು ಬರುತ್ತದೆ.

ಬುಡ್ಡೆಕಲ್ಲಿನ ವಿಶಿಷ್ಟ ರೂಢಿ-ಸಂಪ್ರದಾಯಗಳೊಂದಿಗೆ ಅಂದಿನ ಚರಿತ್ರೆಯ ಘಟನೆಗಳು ಕೂಡ ಸಹಾಯಕವಾಗಬಲ್ಲವು. ಚಿನ್ನಹಗರಿ ನದಿ ದಂಡೆಯ ಮೇಲಿರುವ ಹುಡೇಂ(ಉರೆವು)ನಲ್ಲಿ ವಿಶಿಷ್ಟವಾದ ಬುಡ್ಡೆಕಲ್ಲೊಂದಿದೆ. ಇದನ್ನು ಯಂತ್ರದ ಕಲ್ಲು ಎನ್ನುತ್ತಾರೆ. ಭೂತದ ಲಕ್ಷಣವಿರುವ ಶಿಲ್ಪವನ್ನು ಕೆತ್ತಿ ಊರಿನ ದ್ವಾರ ಬಾಗಿಲಿನ (ಕಮಾನುದ್ವಾರ) ಎಡಭಾಗಕ್ಕೆ ನಿಲ್ಲಿಸಲಾಗಿದೆ. ಬುಡ್ಡೆಕಲ್ಲು ನೆಲದಲ್ಲಿದ್ದು ಊರಿನ ಮಹಾದ್ವಾರ ಅಥವಾ ಮುಂಭಾಗದಲ್ಲಿರುತ್ತದೆ. ಈ ಭಾಗದಲ್ಲಿ ಇಂತಹ ಕಲ್ಲುಗಳಿಗೆ ಪ್ರಾಚೀನ ಕಾಲದಿಂದ ಮನ್ನಣೆ ದೊರಕಿದ್ದು; ಕರ್ನಾಟಕದ ಕೆಲವು ರಾಜ ಸಂತತಿಗಳು ಸ್ಥಾಪನೆಯಾಗಿದ್ದು; ಸ್ವಾಮಿಗಳು ಬುಡ್ಡೆಕಲ್ಲನ್ನು ಹೂಳಿದ್ದರಿಂದ ಎಂಬ ಮಾತು ಆಗಾಗ ಪುನರಾವರ್ತನೆಯಾಗುತ್ತದೆ. ನೂರಾರು ಗ್ರಾಮ ಗಳಲ್ಲಿರುವ ಬುಡ್ಡೆಕಲ್ಲುಗಳು ದುಂಡಾಗಿದ್ದು, ಉದ್ದ, ಒರೆಯಾಗಿದ್ದು ಕಂಡುಬರುತ್ತದೆ. ಇವುಗಳನ್ನು ಊರಿಗೆ ಕಷ್ಟ-ನಷ್ಟಗಳು ಬಾಧಿಸದಿರಲೆಂಬ ನಂಬಿಕೆಯಿಂದ ಇಟ್ಟಿರಬೇಕು. ಗ್ರಾಮದ ಶ್ರೇಷ್ಠ ವ್ಯಕ್ತಿಯಿಂದ ಬುಡ್ಡೆಕಲ್ಲನ್ನು ಹಾಕಿಸುತ್ತಾರೆ. ಆನೆಗೊಂದಿಯಿಂದ ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿಯ ನಡುವಿನ ಪ್ರದೇಶವನ್ನು ಬೇಡರನಾಡು ಎಂದು ಕರೆಯುತ್ತಾರೆ. ಇಲ್ಲಿನ ಬುಡ್ಡೆಕಲ್ಲುಗಳು ಆ ಹಟ್ಟಿಯ ಸ್ಥಾಪಕನಿಂದ ನಿರ್ಮಾಣಗೊಂಡು ವಿಶಿಷ್ಟ ಸ್ಥಾನ ಪಡೆದಿವೆ.

ಎಪ್ಪತ್ತೇಳು ಹಟ್ಟಿಗಳು(೭೭ ಹಟ್ಟಿಗಳು)

ಈ ೭೭ ಹಟ್ಟಿಗಳಿದ್ದವೆಂದು ಕೆಲವು ಆಧಾರಗಳಿಂದ ಗುರುತಿಸಿದ್ದಾರೆ. ಆದರೆ ೭, ೭೦, ೭೭, ೭೦೦, ೭ಸಾವಿರ, ೭೭ಸಾವಿರ, ೭೦ ಕೋಟಿ, ೭೭ ಕೋಟಿ ಎಂದು ಉತ್ಪ್ರೇಕ್ಷೆಗೆ ಕರೆಯುವುದುಂಟು. ನಿಖರವಾಗಿ ಶೋಧಿಸಿದಾಗ ಸಿಗುವುದು ಅತೀ ವಿರಳ. ವೈಭಯುತವಾಗಿ, ಉದಾತ್ತೀಕರಿಸುವ ನಿಟ್ಟಿನಲ್ಲಿ ಅಂದಾಜು ಹೇಳುವ ಹಾಗೆ ೭೭ ಎಂದು ಹೇಳಿರಬಹುದು.

ಸಾಂಸ್ಕೃತಿಕವಾಗಿ ಬುಡಕಟ್ಟು ಜನರು ನಿರ್ದಿಷ್ಟ ಭೂ ಪ್ರದೇಶದಲ್ಲಿ ನೆಲೆ ನಿಲ್ಲುವುದಿಲ್ಲ. ಹಾಗಾಗಿ ತಾವು ಕಟ್ಟಿಕೊಳ್ಳುವ

ಕೊಟ್ಟಿಗೆ, ಗುಡಿಸಲುಗಳು ಸರಳವಾಗಿರುತ್ತವೆ. ಮಣ್ಣು, ಕಲ್ಲು, ಬಿದರಿನ, ತುಗ್ಲಿ, ನೀಲಗಿರಿ, ವೂಲಿ ಕಟ್ಟಿಗೆಗಳನ್ನಲ್ಲದೆ, ಬೇವು, ಜಾಲಿ, ಉಣಿಸೆ ಮರಗಳನ್ನು ಮನೆಕಟ್ಟಲು ಬಳಸುತ್ತಾರೆ. ನೆಲೆಗಿಂತ ಸ್ಥಳಗಳಲ್ಲಿ ತಮ್ಮ ಬುಡಕಟ್ಟಿನ ನಾಯಕ ಸಾಂಸ್ಕೃತಿಕವೀರ ಅಥವಾ ಆ ಹಟ್ಟಿಯ ಹಿರಿಯವನ ಹೆಸರನ್ನು ಇಡುತ್ತಾರೆ. ಅಂತಹ ಹಟ್ಟಿಗಳ ಹೆಸರುಗಳು ಕರ್ನಾಟಕದಲ್ಲಿ ನೂರಾರು ಕಾಣಸಿಗುತ್ತವೆ. ಚಿನ್ನಹಗರಿ ನದಿ ಪರಿಸರದಲ್ಲಿ ಅಥವಾ ತುಂಗಾಭದ್ರಾ ಮತ್ತು ವೇದಾವತಿ ನದಿ ಮಧ್ಯೆ ಇರುವ ಭಾಗವನ್ನು **"ಬೇಡರ ನಾಡು"**[೬] ಎಂದು ಕರೆಯಲಾಗುತ್ತದೆ. ಈ ಪ್ರದೇಶದಲ್ಲಿ ಸುಮಾರು ೭೭ ವಿಶಿಷ್ಟವಾದ ಹಟ್ಟಿಗಳಿದ್ದು, ಕೆಲವು ಹಾಳಾಗಿ, ನಾಮಗಳು ಬದಲಾಗಿವೆ. ಮರುನಾಮಗಳನ್ನು ಕೆಲವು ಸ್ಥಳಗಳು ಪಡೆದುಕೊಂಡಿರುವುದರಿಂದ ನಿಖರವಾಗಿ ೭೭ ಹಟ್ಟಿಗಳನ್ನು ಪಟ್ಟಿ ಮಾಡುವುದು ಕಷ್ಟ. ಲಭ್ಯವಿರುವ ಮಾಹಿತಿಯ ಪ್ರಕಾರ: ಮ್ಯಾಸರಹಟ್ಟಿ, ಗಿರಿಜಯ್ಯನ ಹಟ್ಟಿ, ಕನಕಯ್ಯನಹಟ್ಟಿ, ತಿಪ್ಪೀರಯ್ಯನಹಟ್ಟಿ, ಹೊಸಹಟ್ಟಿ, ಎದ್ದಲುಬೊಮ್ಮಯ್ಯನಹಟ್ಟಿ, ಪುಡಗೇಸಿತಿಮ್ಮಯ್ಯನಹಟ್ಟಿ, ಸಾಸಲಹಟ್ಟಿ, ಮುತ್ತೈಯ್ಯನಹಟ್ಟಿ, ನಲಜಾಮನಹಟ್ಟಿ, ಬಂಗಾರ ದೇವರಹಟ್ಟಿ, ತೊಡಲಾರಹಟ್ಟಿ, ಪೆತ್ತಮಾರಹಟ್ಟಿ, ಬೋರಪ್ಪನ ಹಟ್ಟಿ, ನಕ್ಕಲಾರಹಟ್ಟಿ, ಕರೆಕಾಟ್ಲಟ್ಟಿ, ದೊರೆಗಳಟ್ಟಿ, ಕಳಚೂರಿ ಪಾಪಯ್ಯನಹಟ್ಟಿ, ನಿಂಗಾವಾರಹಟ್ಟಿ, ಚಿತ್ರೈಯ್ಯನಹಟ್ಟಿ, ನಾಯಕನಹಟ್ಟಿ, ಬೋಸೆದೇವರಹಟ್ಟಿ, ನಲಗೇತಲಹಟ್ಟಿ, ದೊಣಮಂಡ್ಲಹಟ್ಟಿ, ಮನವ್ವೆನಹಟ್ಟಿ, ಓಬಯ್ಯನಹಟ್ಟಿ, ಚನ್ನಬಸಯ್ಯನಹಟ್ಟಿ, ಸುಳ್ಳಹಟ್ಟಿ, ಜಾಗನೋರಹಟ್ಟಿ, ಎತ್ತಿನಹಟ್ಟಿ, ಗಂಗಯ್ಯನಹಟ್ಟಿ, ಬೈಯನಾಯಕನಹಟ್ಟಿ, ಕಾತ್ರಿಕೇನಹಟ್ಟಿ, ಮಲ್ಲೂರಹಳ್ಳ ಮ್ಯಾಸರಹಟ್ಟಿ, ಮಲೆಬೋರನಹಟ್ಟಿ, ಕಾವಲರು ಹಟ್ಟಿ, ಚಿತ್ರಯ್ಯನಹಟ್ಟಿ, ಮುಗೋಬಯ್ಯನಹಟ್ಟಿ, ಬಲ್ಲನಾಯಕನ ಹಟ್ಟಿ, ಕರ್ನಾರಹಟ್ಟಿ (ಕರ್ನಾರಹಟ್ಟಿ (ಹುಡೇಂಹತ್ತಿರ) ಕನ್ನಿಬೋಗಯ್ಯನಹಟ್ಟಿ, ಬುಡ್ನಹಟ್ಟಿ, ಕಾಟಪ್ಪನ ಹಟ್ಟಿ, ಗಡ್ಡದವರ ಹಟ್ಟಿ, ಗುಗ್ಗರಿಹಟ್ಟಿ, ಬತ್ತಯ್ಯನಹಟ್ಟಿ, ಚಿನ್ನನಾಯ್ಕನ ಹಟ್ಟಿ, ಕಡಬನಕಟ್ಟೆ, ಮ್ಯಾಸರಹಟ್ಟಿ, ಚಪ್ಪಡಿ ಬಂಡಟ್ಟಿ, ಕುಂಟೋಬಯ್ಯನ ಹಟ್ಟಿ, ಕೋಟೆಹಳ್ಳಿ, ಕರಿನಾರಹಟ್ಟಿ, ಪರಿವಾರದೇವರಹಟ್ಟಿ, ಕುರಿಹಟ್ಟಿ, ಹೊಸಹಟ್ಟಿ, ಕಂಪಳದೇವರ ಹಟ್ಟಿ, ಸಕಲಾಪುರದಹಟ್ಟಿ, ಗುಡ್ಡದಹಟ್ಟಿ, ದೊಡ್ಡಹಟ್ಟಿ, ಜುಮ್ಮೋಬನಹಳ್ಳಿ ಮ್ಯಾಸರಹಟ್ಟಿ, ಇನ್ನು ಮುಂತಾದ ಹಟ್ಟಿಗಳು ಈ ನದಿ ಪರಿಸರದಲ್ಲಿ ಮತ್ತು ಬೇಡರ ನಾಡಿನಲ್ಲಿ ಖ್ಯಾತಿ ಪಡೆದಿವೆ. ಒಂದೊಂದು ಹಟ್ಟಿಗೆ ಒಂದೊಂದು ವಿಧವಾದ ಚರಿತ್ರೆ ಇರುವುದನ್ನು ಮರೆಯುವಂತಿಲ್ಲ. ಇವು ವ್ಯಕ್ತಿಯ, ದೇವರ, ಪ್ರಾಣಿಗಳ, ಪ್ರಾಕೃತಿಕ ವಸ್ತುಗಳ ಹಿನ್ನೆಲೆಯಿಂದ ಕೂಡಿವೆ. ಇಲ್ಲಿ ಸ್ಥಳನಾಮ ಶೋಧನೆಗೆ ಸುಧೀರ್ಘವಾದ ಮಾಹಿತಿ ಲಭಿಸುತ್ತದೆ.

ಮಾಸ್ತಮ್ಮನ ಕಲ್ಲು (ಕಾನಾಮಡಗು)

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕಾನಾಮಡಗು ಎಂಬ ಗ್ರಾಮದಲ್ಲಿ ಈ ಮಹಾಸತಿ ಕಲ್ಲಿದೆ. ಇದು ಧಾರ್ಮಿಕ ಸ್ಥಳವಾಗಿದ್ದು, ಚಿನ್ನಹಗರಿ ನದಿಯ ಉಪನದಿಯಾದ ಕಲ್ಲುಕೊಟ್ಲ ವಂಕ (ಹೆಂಡಕಟ್ಟುವರ ಹಳ್ಳ)ದ ಬಲದಂಡೆ ಮೇಲಿದೆ. ಒಂದು ಕಾಲಕ್ಕೆ ಈ ಪ್ರದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಡು ಇತ್ತೆಂದು, ಕಾಡಿನ ಪೊದೆಗಳ ಮತ್ತು ಮಡವುಗಳ ನಡುವಿನ ಗ್ರಾಮಕ್ಕೆ ಕಾನಾನಮಡುವು > ಕಾನಮಡುವು>ಕಾನಾಮಡುವು ಎಂಬ ಹೆಸರು ರೂಢಿಗತವಾಗಿರಬೇಕು. ಈ ಗ್ರಾಮದ ಬಸ್‌ನಿಲ್ದಾಣದಿಂದ ಪೂರ್ವದ ಬೇವಿನ ಮರವಿರುವ ಕಟ್ಟೆಯ ಮೇಲೆ ಮೂರು ವೈಶಿಷ್ಟ್ಯ ಪೂರ್ಣವಾದ ಮಾಸ್ತಿಕಲ್ಲುಗಳನ್ನು ನಿಲ್ಲಿಸಲಾಗಿದೆ.

ದೊಡ್ಡಗಾತ್ರದಲ್ಲಿರುವ ಮಾಸ್ತಿಕಲ್ಲಿನ ವಿವರ: ಪ್ರಧಾನವಾದ ಮಾಸ್ತಿಕಲ್ಲು ಕಟ್ಟೆಯ ಮೇಲ್ಭಾಗದ ಮಧ್ಯದಲ್ಲಿ ನಿಲ್ಲಿಸಲಾಗಿದೆ. ಇದು ಪೂರ್ವಾಭಿಮುಖವಾಗಿದೆ. ಇದರಲ್ಲಿ ದೊಡ್ಡ ಗಾತ್ರದಲ್ಲಿ ಮಹಾಸತಿಯನ್ನು ಕೆತ್ತಲಾಗಿದೆ. ೬ ಅಡಿ ಎತ್ತರ ೩.೫ ಅಡಿ ಅಗಲವಿದ್ದು ಸ್ಥಳೀಯ ಕಾಡುಕಲ್ಲಿನಿಂದ ಕೆತ್ತಲಾಗಿದೆ. ಇದರಲ್ಲಿ ಮಹಾಸತಿಯಾದವಳು ನಿಂತಿದ್ದು, ತನ್ನ ಬಲಗೈಯನ್ನು ಶುಭಾಶಯ ದಂತೆ ತೋರಿಸುವ ಚಿಹ್ನೆ ಅಪೂರ್ವವೆನಿಸಿದೆ. ಮೇಲ್ಪಂಕ್ತಿಯಲ್ಲಿ ಅವಳು ಮೋಕ್ಷ ಪಡೆಯುವ ದೃಶ್ಯ ಕಂಡು ಬರುತ್ತದೆ. ಶಿವಲಿಂಗ ನಂದಿ ವಿಗ್ರಹದ ಜತೆ ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಇಂತಹ ದೊಡ್ಡಗಾತ್ರದ ಮಾಸ್ತಿಕಲ್ಲು ಈ ಭಾಗದಲ್ಲಿರುವುದು ಅಪರೂಪವಾಗಿದೆ. ಇದು ಅನೇಕ ಸಂಶೋಧಕರಿಗೆ ರೋಮಾಂಚನ ವನ್ನುಂಟುಮಾಡಿದ (ಕಥಾ ಸ್ವರೂಪದಲ್ಲಿ) ಮಾಸ್ತಿಕಲ್ಲಾಗಿದೆ.

ದೊಡ್ಡ ಗಾತ್ರದ ಮಾಸ್ತಿಕಲ್ಲಿನ ಪಕ್ಕದಲ್ಲಿರುವ ಈ ವೀರ ಮಾಸ್ತಿಕಲ್ಲು, ಅದ್ಭುತವಾದ ಕೆತ್ತನೆಯಿಂದ, ಸುಂದರವಾಗಿದೆ. ಯಾವ ಲೋಪವೂ, ಪ್ರಾಲೋಭನೆಯಿಲ್ಲದೆ ಶಿಲ್ಪ ಸೌಂದರ್ಯದ ಉತ್ಕೃಷ್ಟ ನಾಜೂಕುತನ ಎದ್ದು ಕಾಣೆಸುತ್ತದೆ. ಇದರ ಕೆಳಭಾಗದಲ್ಲಿ ಐದು ಜನ ಸ್ತ್ರೀಯರು, ಎರಡನೇ ಭಾಗದಲ್ಲಿ ಇಬ್ಬರು, ಮೊದಲ ಮೇಲಿನ ಸ್ತರದಲ್ಲಿ ಶಿವಲಿಂಗ ನಂದಿ ಸೂರ್ಯ ಚಂದ್ರರನ್ನು ಕೆತ್ತಲಾಗಿದ್ದು, ೩ ಅಡಿ ಎತ್ತರ, ೨.೫ ಅಡಿ ಅಗಲ ಹೊಂದಿದೆ. ಮಾಸ್ತಿಕಲ್ಲಿನ (ವಿವರ) ಮೇಲ್ಭಾಗದಲ್ಲಿ ಸ್ವರ್ಗದ ಕಲ್ಪನೆಯಿದ್ದು, ಹಸುಗಳೊಂದಿಗೆ ನಿಂತಿರುವುದು ನೋಡಿದರೆ ಪಶುಪಾಲನೆ ಮಾಡುವ ಬುಡಕಟ್ಟು ಜನಾಂಗದ ಪ್ರಭಾವಿ ಮಹಿಳೆ ಅಥವಾ ಮಹಾಸತಿ ಎಂಬುದು ಸ್ಪಷ್ಟ.

ಕಟ್ಟೆಯ ಕೆಳಭಾಗದಲ್ಲಿರುವ ವೀರ ಮಾಸ್ತಿಕಲ್ಲು: ವೀರಮಾಸ್ತಿಯಾಗುವ ಮುನ್ನ ಅವಳು ಬಿಲ್ಲಿಡಿದು ಎದುರಾಳಿಗಳನ್ನು ಸೆಣಸಾಡಿ ಸಾಯಿಸಿದ್ದಾಳೆ. ಅದರ ಮೇಲ್ಭಾಗದಲ್ಲಿ ತುರುಗಳ ಮಂದೆ ಎದ್ದು ಕಾಣುತ್ತದೆ. ಇದರ ಕುಸರಿ ಕೆಲಸ ಸಂಪೂರ್ಣವಾಗಿಲ್ಲ. ಬಳಪದಕಲ್ಲನ್ನು ಬಳಸಿದ್ದಾರೆ. ಅಶ್ವಾರೋಹಿಗಳಾಗಿ ಹೋರಾಡು ತ್ತಿರುವ ಸನ್ನಿವೇಶವನ್ನು ಮನಮೋಹಕವಾಗಿ ಕೆತ್ತಲಾಗಿದೆ. ತಳಭಾಗದಲ್ಲಿ ಸತ್ತ ಹೆಣಗಳ ರಾಶಿಯಂತಿದ್ದು, ಇಲ್ಲಿರುವ ತುರುಗಳನ್ನು ದೂರದಿಂದ ನೋಡಿದರೆ ಕುರಿಗಳಂತೆ ಕಾಣುತ್ತವೆ.

ಈ ಮಹಾಸತಿಯ ವಿವರಗಳು, ಕಥೆಗಳು ಭಿನ್ನವಾಗಿವೆ. ಒಮ್ಮತವಾಗಿ ಹೇಳಬೇಕಾದರೆ ಮಾಸ್ತಮ್ಮ ಗೊಲ್ಲರ ಹೆಣ್ಣು. ಅಪೂರ್ವ ಸುಂದರಿ. ಗೋವುಗಳನ್ನು ಕಾಯುತ್ತಿರುವಾಗ ಗಂಡ ಮನೆಯಲ್ಲಿ ಇರುತ್ತಿರಲಿಲ್ಲವಂತೆ, ಅವನು ಪ್ರತಿದಿನ ತನ್ನ ಪ್ರೇಯಸಿಯ ಮನೆಗೆ ಹೋಗುತ್ತಿದ್ದನು. ಒಂದು ದಿನ ಹುಲಿ ಬಂದು ಕಾಮಧೇನು ಆಕಳನ್ನು ತಿಂದು ಹಾಕಿತು. ಕ್ರೋಧಗೊಂಡ ಹೆಂಡತಿ (ಮಾಸ್ತಮ್ಮ) ಭಾವಾವೇಷದಿಂದ ಗಂಡನೊಡನೆ ಸೇಡು ತೀರಿಸಿಕೊಳ್ಳಲು ಸರ್ವಯತ್ನ ನಡೆಸಿದಳಂತೆ. ಕೊನೆಗೆ ಗಂಡ ಮನೆಗೆ ಬಂದಾಗ ಮಜ್ಜಿಗೆ ಮಾಡುವ ಕಡಗೋಲಿನಿಂದ ಅವನನ್ನು ತಿವಿದು ಸಾಯಿಸಿದಳು. ಇದು ಪಕ್ಕದ ಅಣಬೂರು ಗ್ರಾಮದಲ್ಲಿ ನಡೆದ ಕಥೆ. ಅಲ್ಲಿಂದ ಮಾಸ್ತಮ್ಮ ಇಲ್ಲಿಗೆ ಬಂದಳಂತೆ. ಗಂಡನ ಕಡೆಯ ದಂಡು ದಂಡೆತ್ತಿ ಬಂದಾಗ, ಈ ಊರಿನ ಗೌಡರ ಹತ್ತಿರ ಬಂದಳು. ಗೌಡ ಅವಳನ್ನು ವ್ಯಾಪಕವಾಗಿ ಆವರಿಸಿಕೊಂಡಿರುವ ಕಾಡಿನ ಮಧ್ಯೆ, ತೋಟವಿದ್ದು ಅಲ್ಲಿನ ಸಕ್ಕರೆ ಚೀಲಗಳಲ್ಲಿ ಅವಳನ್ನು ಬಚ್ಚಿಟ್ಟಿದ್ದನಂತೆ. ಗೌಡರ ಸ್ವಪ್ನದಲ್ಲಿ ಕಾಡಿ, ನನಗೆ ರಕ್ಷಣೆ ಕೊಡಿ ಅಂದಳಂತೆ. ಆಗ ಅವನು ರಕ್ಷಿಸಿದನೆಂದು ಜನಪದರು ನಂಬಿದ್ದಾರೆ. ಆಗ ಅವಳು ಪಕ್ಕದಲ್ಲಿದ್ದ ಹೊಂಡವನ್ನು ಹಾರಿ ಶತ್ರು ಸೈನ್ಯವನ್ನು ಎದುರಿಸಲು ಸನ್ನದ್ಧಳಾದಳು.

ಕಾನುವನ್ನು ಕಡಿದು ಹಟ್ಟಿಯನ್ನು ಕಟ್ಟಿದವರು ಆದಿವಾಸಿ ಜನಾಂಗ. ಅವರು ಬುಡಕಟ್ಟು ಜನರಾಗಿದ್ದಾರೆ. ಕಾನನಕಟ್ಟೆ, ಕಾನಾಹೊಸಹಳ್ಳಿ ಇವುಗಳ ಮಧ್ಯೆ ಇರುವುದೇ ಕಾನಾಮಡುಗು. ಮಾಸ್ತಮ್ಮ ಕಲ್ಲಿನ ವಿವರ ಮೇಲಿನಂತೆ ತಿಳಿದು ಬಂದರೂ, ಮಹಾಸತಿ ಅಮ್ಮ> ಮಹಾಸತಿಯಮ್ಮ >ಮಹಾಸತಮ್ಮ >ಮಾಸ್ತಮ್ಮ ಆಗಿರಬೇಕು. ಇವಳ ತೌರುಮನೆ ತುಂಬರಗುದ್ದಿ, ಗಂಡನ ಮನೆ ಮಾಲಂಗಿ. ರಂಡೆಯಾದ ಇವಳನ್ನು ಶತ್ರುಗಳು ಅಪಹರಿಸಲೆತ್ನಿಸಿದಾಗ ಸೈನಿಕರಿಗೆ ಭೇದಿಕಿತ್ತುಕೊಳ್ಳುವಂತೆ ಮಾಡಿದ್ದಳೆಂದು ಪ್ರತೀತಿ ಇದೆ. ಅವರನ್ನು ಅಣಬೂರಿನವರೆಗೂ ಹಿಮ್ಮೆಟ್ಟಿದಳಂತೆ. ಅಲ್ಲಿ ಅವರನ್ನು ಕೊಂದು ತಾನು ಸಹಾ ಪ್ರಾಣತ್ಯಾಗ ಮಾಡಿದಳೆಂದು ಐತಿಹ್ಯವಿದೆ.

ಮಾಸ್ತಮ್ಮ ಜನರಲ್ಲಿ ಪರಿಣಾಮಕಾರಿ ಕಥೆಯಾಗಿ ಉಳಿದಿದ್ದಾಳೆ. ಸಂಸಾರಿಕ ಕಾರಣಕ್ಕಾಗಿಯೋ ಅಥವಾ ಸಾಮಾಜಿಕ ಕಾರಣಕ್ಕಾಗಿಯೋ ತನ್ನ ಜೀವನವನ್ನು ತ್ಯಾಗ ಮಾಡಿದ ಹೆಣ್ಣೊಬ್ಬಳ ಕಥೆ ಇದರ ಹಿಂದೆ ಸುಪ್ತವಾಗಿ ಹಲವು ರೂಪದಲ್ಲಿ ಹುಟ್ಟಿಕೊಂಡಿದೆ. ಉತ್ತರ ಕರ್ನಾಟಕಕ್ಕೂ ಮತ್ತು ದಕ್ಷಿಣ ಕರ್ನಾಟಕಕ್ಕೂ ಈ ಮಾಸ್ತಮ್ಮನ ಕಥೆಗಳು ಭಿನ್ನವಾಗಿವೆ. ದಕ್ಷಿಣ ಕರ್ನಾಟಕದಲ್ಲಿ ಜನಪದರು ನಂಬಿರುವಂತೆ: ಮಾಸ್ತಮ್ಮ ಮಂಡ್ಯ ತಾಲೂಕಿನ ಹುಲಿವಾಹನದಲ್ಲಿ ಹುಟ್ಟಿ, ಮದ್ದೂರು ತಾಲೂಕಿನ ಈರೇಗೌಡ ದೊಡ್ಡಿಗೆ ದತ್ತುಮಗಳಾಗಿ ಬಂದು, ಅದೇ ತಾಲೂಕಿನಲ್ಲಿ ಹೊಸಕೆರೆಗೆ ವಿವಾಹವಾಗಿದ್ದಂತೆ ತಿಳಿದುಬರುತ್ತದೆ. ಗಂಡನ ಮನೆಯಲ್ಲಿ ನಡೆದ ಒಂದು ಘಟನೆ ಅವಳು ಸತಿ ಹೋದುದಕ್ಕೆ ಕಾರಣವಾಗಿದೆ ಎನ್ನುತ್ತಾರೆ. ಕ್ಷುಲ್ಲಕ ಕಾರಣಗಳಿಗಾಗಿ ಮನೆ ತೊರೆದು ಸಹಗಮನವನ್ನು ಮಾಡಿದವರೇ ಅನೇಕ. ಇಂತಹ ಕತೆಗಳು ಸಹಸ್ರಾರು ಹುಟ್ಟಿಕೊಂಡಿವೆ. ಗೆರೆ ಹೊಡೆದಂತೆ ಹೇಳುವುದು ಕಷ್ಟ.

ಪೂಜಾರಹಳ್ಳಿಯ ವೀರಮಾಸ್ತಿಕಲ್ಲು: ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲೂಕಿನ, ಕಾನಾಹೊಸಹಳ್ಳಿ ಹೋಬಳಿಗೆ ಸೇರಿದ ಕುಗ್ರಾಮ. ಜನ್ನಿಗೆಹಳ್ಳದ ಉಪಹಳ್ಳವಾದ ಕುರಿಬೋರಯ್ಯನ ಮಡುವು ಹತ್ತಿರವಿದೆ. ಸ್ಥಳೀಯ ಕಚ್ಚಾ ಕಲ್ಲಿನಿಂದ ವೀರಮಾಸ್ತಿಕಲ್ಲನ್ನು ಕೆತ್ತಲಾಗಿದೆ. ಇದು ವಿಜಯನಗರದ ಸಾಮಂತರಿಗೆ ಸಂಬಂಧಿಸಿದ್ದೆಂದು ಹೇಳಲಾಗಿದೆ. ಊರಿನ ಮಧ್ಯೆ ಇದ್ದು, ಏಕಶಿಲಾ ಕಲ್ಲಿನಲ್ಲಿ ಮಹಾಸತಿ ನಿಂತಿದ್ದಾಳೆ. ವೀರಯೋಧ ಅಶ್ವಾರೋಹಿಯಾಗಿದ್ದು ಯುದ್ಧದಲ್ಲಿ ಮಡಿದುದರಿಂದ, ತಾನೂ ಸಹ ಹಿಂಬಾಲಿಸಿ ಮಡಿದಿರಬಹುದೆಂಬ ಕೌತುಕಮಯದ ಕಥೆಗಳು ಬೆಳಕು ಚೆಲ್ಲುತ್ತವೆ. ಸ್ಥಳೀಯರು ಇದನ್ನು ಈರಗಾರರ ಗುಡಿ ಎನ್ನುತ್ತಾರೆ. ಇದರಲ್ಲಿ ವೀರವನಿತೆಯೊಬ್ಬಳು ತೃತೀಯಳಾಗಿ ಮುಕ್ತಿ ಪಡೆಯಲು ಕೈಮುಗಿದು ನಿಂತಿದ್ದಾಳೆ. ಯಾವ ಅರಸನಿಗೆ, ಮಡದಿಗೆ ಸೇರಿದ್ದೆಂದು ತಿಳಿದುಬಂದಿಲ್ಲ. ಆದರೆ ಪಕ್ಕದಲ್ಲಿದ್ದ ಮಧ್ಯಕಾಲೀನ ನಗರ ಚನ್ನಪಟ್ಟಣ ವಿಜಯನಗರದ ಅಧೀನದಲ್ಲಿದ್ದು, ಪಾಳೆಯ ಗಾರರ ಕಾಲಕ್ಕೆ ಪ್ರಾಬಲ್ಯ ಹೊಂದಿತ್ತು.

ಕಂಚವ್ವ ಕಾಮವ್ವರ ವೀರಮಾಸ್ತಿಕಲ್ಲು: ಚಿತ್ರದುರ್ಗ ಜಿಲ್ಲೆಯ, ಚಳ್ಳಕೆರೆ ತಾಲೂಕಿನ ನಾಯ್ಕನಹಟ್ಟಿಗೆ ಸೇರಿದ ಗ್ರಾಮವೇ ಚನ್ನಬಸಯ್ಯನಹಟ್ಟಿ. ಊರಿನ ಹೊರಗೆ ಪೂರ್ವಭಾಗಕ್ಕಿರುವ ಶಿಥಿಲಗೊಂಡ ಗುಡಿಯೊಳಗಿರುವ ಮಾಸ್ತಿಕಲ್ಲು ಕಂಚವ್ವ ಕಾಮವ್ವರದ್ದು ಆಗಿದೆ. ಸಹೋದರಿಯರಿಬ್ಬರೂ ಖಡ್ಗಹಿಡಿದು ನಿಂತಿರುವುದು ನೋಡಿದರೆ ವೀರಮಾಸ್ತಿಯ ಲಕ್ಷಣವನ್ನು ತೋರ್ಪ ಡಿಸುತ್ತದೆ. ಇಬ್ಬರ ನಡುವೆ ವೃತ್ತಕಾರದ ಚಕ್ರವಿದೆ. [⊗] ಒಬ್ಬರು ಕೆಳಗೆ ಇನ್ನೊಬ್ಬರು ಮೇಲ್ಭಾಗದಲ್ಲಿ ನಿಂತಿರುವುದು ಗಮನಾರ್ಹವಾಗಿದೆ.

ಅಕ್ಕ-ತಂಗಿಯರಿಬ್ಬರು ಸಹಗಮನ ಅನುಸರಿಸಿರುವುದು ಕಂಡುಬರುತ್ತದೆ. ಸ್ಥಳೀಯವಾಗಿ, ಇತರ ಎಲ್ಲ ಐತಿಹಾಸಿಕ ಆಕರಗಳಿಂದ ಹೇಳುವುದಾದರೆ, ಈ ಮಾಸ್ತಿಕಲ್ಲು ಮ್ಯಾಸಬೇಡರ ಮಹಾಪುರುಷ ಗಾದ್ರಿಪಾಲನಾಯಕನ ಪತ್ನಿಯರಾದ ಕಂಚವ್ವ ಮತ್ತು ಕಾಮವ್ವರದು. ಇದರ ಕಾಲಮಾನ ಸ್ವ॥ಶ್ರೀ॥ವಿ॥ ಶಾಲಿವಾಹನಕ ಶಕ ೫೨೫ ಸಾ॥ (೬೦೩) ಮಾ॥ ಶುದ್ಧ ೨ರಲ್ಲಿ ಇರಬಹುದೆಂದು ಊಹಿಸಲಾಗಿದೆ. ಗಾದ್ರಿಪಾಲನಾಯಕ ಶುಕ್ಲಮಲಿನಾಯಕ, ಯರಮಂಚಿನಾಯಕರ ಸಮಕಾಲೀನ ವ್ಯಕ್ತಿ. ಹೀಗಾಗಿ ಅವರ ಕಾಲಮಾನ ಹೆಚ್ಚು ಕಡಿಮೆ ಒಂದೇ ಆಗಿರಬಹುದು.

ಜಗಳೂರಿನ ಮಾಸ್ತಿಕಲ್ಲು: ಜಗಳೂರು ಪಟ್ಟಣದ ಹೊರಕೆರೆ ಯಲ್ಲಿರುವ ಆಂಜನೇಯ ದೇವಾಲಯದ ಕಟ್ಟೆಯ ಮೇಲೆ

ಅರಳಿಮರದ ಬುಡಕ್ಕೆ ಈ ಕಲ್ಲನ್ನು ನಿಲ್ಲಿಸಲಾಗಿದೆ. ಮರ ಬೆಳೆದಂತೆ ಈ ಕಲ್ಲನ್ನು ಆವರಿಸಿಕೊಂಡಿದೆ. ಮಾಸ್ತಿ ಕಲ್ಲಿನಲ್ಲಿ ಎಳೆಯ ಬಾಲಕಿ ಮೊಣಕಾಲಿನವರೆಗೆ ವಸ್ತ್ರವನ್ನು ಧರಿಸಿದ್ದು, ಕೈಯಲ್ಲಿ ಪಾಣಿ ಪೀಠವಿದೆ. ವೈರಾಗ್ಯ ಹೊಂದಿದ ಚಿತ್ರಣ ಇದಾಗಿದೆ.

ವಿಶಿಷ್ಟವಾದ ವೀರಗಲ್ಲುಗಳು: ನದಿ ಪರಿಸರದಲ್ಲಿ ಅಥವಾ ಬೇಡರ ನಾಡಿನಲ್ಲಿ ಅತೀ ಹೆಚ್ಚಾಗಿ ದೊರೆಯುವ ಪ್ರಾಚ್ಯಾವ ಶೇಷಗಳೆಂದರೆ: ವೀರಗಲ್ಲುಗಳು. ಕೂಡ್ಲಿಗಿ ತಾಲೂಕಿನ ಲೋಕಿಕೆರೆಯಲ್ಲಿರುವ ವೀರಗಲ್ಲಿನಲ್ಲಿ ಅರಸನು ಅಶ್ವಾರೂಢ ನಾಗಿದ್ದು, ಪರಿವಾರದವರು ಛತ್ರಿ-ಚಾಮರ ಹಿಡಿದು ಅರಸನನ್ನು ಹಿಂಬಾಲಿಸುತ್ತಾರೆ. ರಾಯಪುರದಲ್ಲಿರುವ ವೀರಗಲ್ಲು ವಿಜಯನಗರ ಕಾಲದ್ದಾಗಿದೆ. ಮೊಳಕಾಲ್ಮೂರು ನುಂಕೆಮಲೆ ಪರ್ವತದಲ್ಲಿ ಅರಸ ಯುದ್ಧದಲ್ಲಿ ಮಡಿದುದ್ದನ್ನು ಸತಿ ಸಹಗಮನ ಅನುಸರಿಸುತ್ತಿರುವುದು ಗಮನಾರ್ಹ. ಮೊಳಕಾಲ್ಮೂರು ತಾಲೂಕಿನ ಕೋನಸಾಗರದಲ್ಲಿ ಯರಮಂಚಿನಾಯಕನು ಹುಲಿಕೊಲ್ಲುವ ವೀರಗಲ್ಲು ಅದ್ಭುತವಾಗಿದೆ. ಹೂಡೇಂನಲ್ಲಿರುವ ನಡುಗಡ್ಡೆನಾಯಕನ ವೀರಗಲ್ಲು ಮಹತ್ವ ಪಡೆದಿದೆ.

ನದಿಯ ಉಗಮ ಸ್ಥಳವಾದ ಚಿತ್ರದುರ್ಗ ಪರಿಸರದಿಂದ ಅಂತ್ಯದವರೆಗೆ ಅನೇಕ ವೀರಗಲ್ಲುಗಳು ಖ್ಯಾತಿ ಪಡೆದಿವೆ. ಸಿರಿಗೆರೆಯ ಸಮೀಪ ಗಾದರಿಮಲೆಗುಡ್ಡ, ಮತ್ತು ಗಂಜಿಗಟ್ಟೆಯಲ್ಲಿ ಗಾದರಿ ಪಾಲನಾಯಕನ ವೀರಗಲ್ಲು, ಕಂಚವ್ವ ಕಾಮವ್ವರ ಮಾಸ್ತಿ ಕಲ್ಲು ಅದ್ಭುತವಾಗಿವೆ. ನದಿಯ ಅಂತ್ಯದ ಸ್ಥಳಗಳಾದ ಅಶೋಕ ಸಿದ್ಧಾಪುರ, ಬ್ರಹ್ಮಗಿರಿ, ಜಟಂಗರಾಮೇಶ್ವರ ಮುಂತಾದೆಡೆಗಳಲ್ಲಿ ನಾವು ಕಾಣಬಹುದು.

ಪ್ರಮುಖ ದೇವಾಲಯಗಳು: ಚಿನ್ನಹಗರಿ ನದಿ ದಂಡೆಯು ತನ್ನ ಮೂಲದಿಂದ ಅಂತ್ಯದವರೆಗೆ ಅನೇಕ ದೇವಾಲಯಗಳನ್ನು ಹೊಂದಿದೆ. ಸಿರಿಗೆರೆ ಸಮೀಪ ಮಿಂಚೇರಿಹಳ್ಳದ ಹತ್ತಿರ ಗಂಜಿ ಗಟ್ಟೆಯಲ್ಲಿ ಮ್ಯಾಸನಾಯಕರ ಧಾರ್ಮಿಕ ಮಹಾಪುರುಷ ಗಾದ್ರಿಪಾಲನಾಯಕನ ವೀರಗಲ್ಲು, ದೇವಾಲಯವಿದೆ. ಪಕ್ಕದಲ್ಲಿ ಸಿರಿಗೆರೆಮಠ, ಸ್ವಲ್ಪ ದೂರದಲ್ಲಿ ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳ ಆಶ್ರಮ, ಮುಸ್ಟೂರಿನ ಮುಸ್ಟೂರೇಶ್ವರ ಸ್ವಾಮಿಗಳ ಮಠ, ಜಗಳೂರಿನ ಪಾಪಯ್ಯನಗುಡಿ, ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ ದೇವಾಲಯ, ಕಾನಾಮಡುಗು, ಶರಣ ಬಸವೇಶ್ವರ ದೇವಾಲಯ, ಹುಲಿಕೆರೆಯ ಕಲ್ಯಾಣಿ ಚಾಲುಕ್ಯರ ದೇವಾಲಯ. ನಂತರ ಕಲ್ಲಹಳ್ಳಿಯಲ್ಲಿ ಕಲ್ಲೇಶ್ವರ ದೇವಾಲಯವಿದೆ. ನಂತರ ಹೂಡೇಂ ಪಕ್ಕದಲ್ಲಿ ಬೋರೆ ದೇವರಿದ್ದು, ಸರ್ವರೂ ಪೂಜಿಸುವ ಗುಡಿಯಾಗಿದ್ದು, ಅಪೂರ್ವವಾದ ಸೂರ್ಯವಿಗ್ರಹ, ವಿಷ್ಣುವಿನ ವಿಗ್ರಹ ಭೈರವ ವಿಗ್ರಹಗಳಿವೆ. ಕಂಪಳದೇವರಹಟ್ಟಿ, ನುಂಕಮಲೆ, ಸಿದ್ಧಾಪುರ ಇತ್ಯಾದಿ ಸ್ಥಳಗಳಲ್ಲಿ ಪ್ರಮುಖ ದೇವಾಲಯಗಳು ಕಂಡುಬರುತ್ತವೆ.

ರಾಕ್ಷಸ ಕಲ್ಲು: ಪ್ರಾಚೀನತೆ ಪಡೆದ ಹಾಯ್ಕಲ್ ಗ್ರಾಮದ ದೇವಾಲಯದಲ್ಲಿ ರಾಕ್ಷಸ ಬಂಡೆ ಇದೆ. ಇದರ ಬಗ್ಗೆ ಸೊಗಸಾದ ಕಥೆ ಹುಟ್ಟಿಕೊಂಡಿದೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚಿನ್ನಹಗರಿ ನದಿ ಎಡದಂಡೆ ಮೇಲಿರುವ ಕುಮತಿ ಮತ್ತು ವಲಸೆ ಎಂಬ ಗ್ರಾಮಗಳ ಮಧ್ಯೆ ಅಪೂರ್ವ ಎರಡು ರಾಕ್ಷಸ ಕಲ್ಲುಗಳಿವೆ. ಇವು ಬೃಹತ್‌ಶಿಲಾಸಂಸ್ಕೃತಿಗೆ ಸೇರಿವೆ. ಇವುಗಳ ಬಗ್ಗೆ ಜನಾಂಗಿಕ ಕಥೆಗಳು ಅಪಾರವಾಗಿ ಹುಟ್ಟಿಕೊಂಡಿವೆ. ನುಂಕಪ್ಪನು ಬಿಲ್ಲಿಡಿದು ಬಾಣ ಹೊಡೆದುದರಿಂದ ದುಷ್ಟರು ಅಲ್ಲಿ ನಿಂತರೆಂದು, ಕುಮತಿ ಸಿದ್ದೇಶ್ವರನ ಭಕ್ತರೆಂದು ಕತೆಗಳು ಹೇಳುತ್ತಿವೆ. ಸುಮಾರು ೧೨ ಅಡಿ ಎತ್ತರ, ೪ ಅಡಿ ಅಗಲವಿದ್ದು, ಏಕಶಿಲಾ ಗೋರಿಗಳಂತೆ ಕಾಣಸಿಗುತ್ತವೆ.

ನುಂಕಮಲೆ ಗಿರಿಧಾಮ: ಇದು ಸಮುದ್ರ ಮಟ್ಟದಿಂದ ೯೨೧ ಮೀಟರ್ ಎತ್ತರವಾಗಿದೆ. ಇದನ್ನು ನುಂಕಪ್ಪನ ಗುಡ್ಡವೆಂತಲೂ ಕರೆಯುತ್ತಾರೆ. ಈ ಪರಿಸರದಲ್ಲಿ ನುಂಕಮಲೆ ಸಿದ್ದೇಶ್ವರನ ದೇವಾಲಯವಿದೆ. "ಇದು ಕಾಪಾಲಿಕ ಪರಂಪರೆಯ ಬೈರಾಗಿಗಳ ಮಠವಾಗಿದ್ದು, ವೀರಶೈವ ಪೂಜಾರಿಗಳು ಸ್ವಾಮಿಯ ಪೂಜಾ ಮಾಡುತ್ತಿರುವರು."[೬] ತರುವಾಯ ನುಂಕಮಲೆ ಬೆಟ್ಟದ ಮೇಲೆ ಅಭೇದ್ಯವಾದ ಕೋಟೆ ನಿರ್ಮಿಸಿದ್ದಾರೆ. ಇದರ ಉತ್ತರದ ಕೆಳಭಾಗದಲ್ಲಿ ಪ್ರಾಚೀನ ಕಾಲದ ಮಲ್ಲಿಕಾರ್ಜುನ ದೇವಾಲಯವಿದ್ದು, ಏಕಶಿಲಾ ಬಂಡೆಯ ಮೇಲೆ ಶಾಸನವಿದೆ. "ಕದಂಬರ ಕಾಲದಲ್ಲಿ ಶ್ರೀನುಂಕಮಲೆ ಸಿದ್ದೇಶ್ವರಸ್ವಾಮಿಯ ಪೂಜೆಗೆ ದತ್ತಿ ಬಿಟ್ಟ ಭೂಮಿಯ ಬಗ್ಗೆ ತಿಳಿಸಿರುತ್ತದೆ."[೭] ಇನ್ನು ಹಲವಾರು ಅವಶೇಷಗಳಿದ್ದು, ನುಂಕಮಲೆ ಸಿದ್ದೇಶ್ವರ ದೇವಾಲಯ, ಭೈರವ, ತುಪ್ಪದಮ್ಮನ ದೇವಾಲಯಗಳಲ್ಲದೆ, ಹೊಂಡ ಇತ್ಯಾದಿಗಳು ಗಮನಾರ್ಹವಾಗಿವೆ.

ಬ್ರಹ್ಮಗಿರಿ ಮಹಲ್: ಮೌರ್ಯರ ಖ್ಯಾತ ಅರಸ ಅಶೋಕನ ಕಾಲದಲ್ಲಿ ಪ್ರಸಿದ್ಧಿ ಪಡೆದ ಸ್ಥಳ ಇದಾಗಿದೆ. ಅವನ ಶಾಸನಗಳಿಲ್ಲಿ ಲಭ್ಯವಿದ್ದು, ಅಂತರರಾಷ್ಟ್ರೀಯ ಖ್ಯಾತಿ ಪಡೆದಿವೆ. ಪುರಾತನ ನಿವೇಶನಗಳು, ಗುಡಿಗಳು, ಕೆರೆ-ಕಟ್ಟೆ ಇತ್ಯಾದಿಗಳು ಲಭ್ಯವಿರುತ್ತವೆ. ಈ ಬೆಟ್ಟದ ಮೇಲೊಂದು ಮಹಲಿದ್ದು ಚಿಕ್ಕ ಅರಮನೆಯಂತಿದೆ. ಪಕ್ಕದ ಸಿದ್ದೇಶ್ವರ ಗುಡಿಯಲ್ಲಿ ಲಿಂಗವಿದೆ. ಇದರ ಸಮೀಪ ಶಂಕರನ ದೇವಾಲಯ ಅತೀ ಸುಂದರವಾಗಿದೆ. ಮಧ್ಯಕಾಲೀನ ಭಾರತೀಯ ಚರಿತ್ರೆಯಲ್ಲಿ ಅಪ್ರತಿಮ ಸಾಹಸಿ ಪರನಾರಿಗೆ ಸಹೋದರನೆಂದು ಖ್ಯಾತನಾದ "ಶ್ರೀ ಕುಮಾರರಾಮನ ಐತಿಹಾಸಿಕ ರೊಪ್ಪ ಕೋಟೆ ಇದ್ದು ಕುಮಾರರಾಮನ ಗರಡಿಮನೆ ಅಲ್ಲಿದೆ."[೮] ಇದರ ಇಕ್ಕೆಲಗಳಲ್ಲಿ ಜೈನ, ಬೌದ್ಧ ದೇವಾಲಯಗಳಿವೆ. ಇಲ್ಲಿನ ಶಿಲ್ಪ, ಬೆಟ್ಟ, ಗುಡಿ, ಗೋಪುರಗಳಲ್ಲದೆ ಇತರ ಪ್ರಾಚ್ಯಾವಶೇಷಗಳು ಗಮನಾರ್ಹವಾಗಿವೆ.

ಜಟಂಗಿರಾಮೇಶ್ವರ: ಚಿನ್ನಹಗರಿ ನದಿಯ ಕೊನೆ ಭಾಗ ದೇವಸಮುದ್ರದ ಬಳಿ ಇದೆ. ಇಲ್ಲಿ ಜಟಾಯು ವಾಸಿಸಿದ್ದ ಪ್ರತೀತಿಗಳಿವೆ. ಭೈರವ, ಸೂರ್ಯನಾರಾಯಣ, ವೀರಭದ್ರ,

ಚಾಮುಂಡಿ ವಿಗ್ರಹಗಳಲ್ಲದೆ, ಪಂಪಾಪತಿ, ಜಂಬುಕೇಶ್ವರ, ಜನಾರ್ಧನ, ಅರ್ಕೇಶ್ವರ, ತಪೋಲಿಂಗ ಮುಂತಾದ ದೇವಾಲಯಗಳಿವೆ. ಇಲ್ಲಿ ಅಶೋಕನ ಒಂದು ಶಾಸನವು ಸಹ ಇದೆ.

ಇಲ್ಲಿ ಜಟಂಗಿರಾಮೇಶ್ವರ ದೇವಾಲಯ ಖ್ಯಾತಿ ಪಡೆದಿದೆ. ಕ್ರಿ.ಶ. ೯೬೧ರ ಶಾಸನ ಸೇರಿದಂತೆ ಕೃತಕವಲ್ಲದ ಗವಿಗಳು, ನೊಳಂಬರ, ಚಾಲುಕ್ಯರ, ವಿಜಯನಗರ, ಪಾಳೆಗಾರರ ಕಾಲದ ಗುಡಿ-ಗೋಪುರಗಳು ಅವಿಸ್ಮರಣೀಯ ನೆಲೆಗಳಾಗಿವೆ. ಇಲ್ಲಿಂದ ಬ್ರಹ್ಮಗಿರಿ ೩ ಕಿ.ಮೀ. ದೂರದಲ್ಲಿದೆ.

ಒಟ್ಟಾರೆ ನದಿಯ ಉಗಮಸ್ಥಾನದಿಂದ ಅಂತ್ಯದವರೆಗೆ ಚಾರಿತ್ರಿಕ, ಧಾರ್ಮಿಕ ಯಾತ್ರಾ ಸ್ಥಳಗಳನ್ನು ನಾವು ನೋಡಬಹುದು. ಗಾದಿರಿಮಲೆ, ಸಿರಿಗೆರೆ, ಬೊಗ್ಗಳೆರಹಟ್ಟಿ, ಮುಸ್ಟೂರು, ಕಲ್ಲೆ ದೇವಪುರ, ಜಗಳೂರು, ಕಾನಾಮಡುಗು, ನಾಯಕನಹಟ್ಟಿ, ಚನ್ನಪಟ್ಟಣ, ಪೂಜಾರಹಳ್ಳಿ, ಕಂಪಳದೇವರಹಟ್ಟಿ, ಪೆದಾರ ಕೊಂಡ, ನುಂಕಮಲೆ, ಬ್ರಹ್ಮಗಿರಿ, ಜಟಂಗಿರಾಮೇಶ್ವರ ಮತ್ತು ಸಿದ್ದಾಪುರ ಮುಂತಾದವುಗಳು ಅತೀ ಮಹತ್ವ ಪಡೆದ ನೆಲೆಗಳಾಗಿವೆ. ಇದು ನದಿ ಪರಿಸರದ ಪ್ರಾಚ್ಯ ಅವಶೇಷಗಳ ಪರಿಚಯವಾಗಿದೆ. ಇವುಗಳನ್ನು ಕುರಿತು ಆಳವಾಗಿ ಸಂಶೋಧನೆ ನಡೆಸಬೇಕಾಗಿದೆ.

*

ಆಧಾರಸೂಚಿ ಮತ್ತು ಟಿಪ್ಪಣಿಗಳು

1. K. Paddaiah, 1995: '**Ancient Andra History and Archaeology, New light on the Early Agropastoral communities of South India,**' Andra Pradesh History congress, Anantapur, p-6.
೨. ಅದೇ, ಪು. ೬
೩. ಅದೇ, ಪು. ೬
* ಜರಿಮಲೆ: ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಕುಗ್ರಾಮ. ೧೬ ರಿಂದ ೧೮ನೇ ಶತಮಾನಗಳಲ್ಲಿ ಇಲ್ಲಿ ನಾಯಕ ಜನಾಂಗದ ಪಾಳೆಯಗಾರರು ಆಳ್ವಿಕೆ ನಡೆಸಿದ್ದು ಸ್ಮರಣೀಯ.
೪. ಡಾ. ಎಂ. ವಿ. ಶ್ರೀನಿವಾಸ್ ಮತ್ತು ಲಕ್ಷ್ಮಣ್ ತೆಲಗಾವಿ (ಸಂ) '**ಚಂದ್ರವಳ್ಳಿ**' ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ, ಚಿತ್ರದುರ್ಗ, ೧೯೭೬, ಪು. ೪೨
೫. ಅದೇ, ಪು.೪೨
೬. ನೋಡಿ: Diwan Bahadur L.K. Anantha Krishna Iyer,1935, The Mysore Tribes and castes vol-1, p-104.
೭. ಎ. ಆರ್. ವೀರಭದ್ರಪ್ಪ, ೧೯೯೧: **ಮೊಳಕಾಲ್ಮೂರು ತಾಲ್ಲೂಕಿನ ಬೆಟ್ಟದ ಮೇಲಿನ ಯಾತ್ರಾಸ್ಥಳಗಳು. ಮೊಳಕಾಲ್ಮೂರು**, ಸಂಯುಕ್ತ ಕರ್ನಾಟಕ (ಪ್ರಕಟಿತ ಲೇಖನ) ಪು.೮.
೮. ಅದೇ, ಪು-೮
೯. ಅದೇ, ಪು-೮

ಶ್ರೀಮತಿ ಹನುಮಾಕ್ಷಿ ಗೋಗಿ*

ಕಲ್ಬುರ್ಗಿ ಜಿಲ್ಲೆಯಲ್ಲಿ ಇತ್ತೀಚೆಗೆ ದೊರೆತ ಬ್ರಾಹ್ಮಿ ಶಿಲಾಫಲಕಗಳು

ಕಲ್ಬುರ್ಗಿ ಜಿಲ್ಲೆಯ ಸುರಪುರ, ಶಹಪುರ ಮತ್ತು ಜೇವರ್ಗಿ ತಾಲೂಕುಗಳಲ್ಲಿ ಇತ್ತೀಚೆಗೆ ನಾನು ಶಾಸನಗಳ ಪರಿವೀಕ್ಷಣೆಯನ್ನು ಕೈಕೊಂಡಿದ್ದೆನು. ಈ ಪರಿವೀಕ್ಷಣೆಯ ಸಂದರ್ಭದಲ್ಲಿ ನಾನು ಗಮನಿಸಿದ ಶಾತವಾಹನ ಕಾಲದ ಶಿಲಾಫಲಕಗಳಲ್ಲಿ ಸುಮಾರು ೧೦ ಉತ್ತಮ ಸ್ಥಿತಿಯಲ್ಲಿ ದೊರೆತಿದ್ದು, ನೂರಾರು ತುಕಡಿಗಳನ್ನು ಗಮನಿಸಿರುತ್ತೇನೆ. ಅವುಗಳಲ್ಲಿ ಮೂರು ಶಿಲಾಫಲಕಗಳು ಲಿಪಿಸಹಿತ ಇವೆಯೆಂಬುದು ಗಮನಾರ್ಹ ಸಂಗತಿ. ಅವುಗಳ ವಿವರ ಮತ್ತು ಶಾಸನದ ಪಾಠ ಕೆಳಗಿನಂತಿವೆ.

ಜೇವರ್ಗಿಯ ಶಿಲಾಫಲಕಗಳು

ಶ್ರೀ ಎಂ.ಎಸ್. ನಾಗರಾಜರಾವ್ ಅವರು ೧೯೮೫ರಲ್ಲಿ ಜೇವರ್ಗಿಯ ಶಾತವಾಹನ ಶಿಲಾಫಲಕವೊಂದನ್ನು ಕಂಡು ಹಿಡಿದು ಲಿಪಿಯನ್ನು ಫೋಟೋ ಸಹಿತ ಈಗಾಗಲೇ ಪ್ರಕಟಿಸಿದ್ದಾರೆ. ಅದೇ ಊರಿನ ಹೊರ ವಲಯದಲ್ಲಿರುವ ಶಾಸ್ತ್ರೀ ಚೌಕದಲ್ಲಿ ಇನ್ನೊಂದು ಶಾತವಾಹನ ಕಾಲದ ಶಿಲಾಫಲಕವಿರುವುದು ನನ್ನ ಗಮನಕ್ಕೆ ಬಂದಿದೆ.

೬'x೨.೫'x೬" ಗಾತ್ರದ ತಿಳಿಹಳದಿ ಬಣ್ಣದ ಸೇದಿಬಂಡೆ ಇದಾಗಿದೆ. ಮೇಲ್ಭಾಗದ ೨ ಭಾಗದಲ್ಲಿ ಮೂರು ಕುಡುಗಳ ಮಧ್ಯೆ ಬಲದಲ್ಲಿ ಸ್ತ್ರೀ ಎಡಭಾಗದಲ್ಲಿ ಪುರುಷ, ಪೀಠದ ಮೇಲೆ ಕುಳಿತು ಸರಸ ಸಂಭಾಷಣೆಯಲ್ಲಿ ತೊಡಗಿದಂತಿದೆ. ಸ್ತ್ರೀ ಬಲಗೈಯನ್ನು ಕಲಾತ್ಮಕವಾಗಿ ಹಿಂದೆ ಊರಿ ಎಡಗೈಯನ್ನು ಪುರುಷನ ಬಲ ತೋಳಿನ ಮೇಲೆ ಇಟ್ಟಿದ್ದಾಳೆ. ಆತ ಎದೆಯ ಹತ್ತಿರ ಬಲಗೈ ಹಿಡಿದು ಎಡಗೈಯನ್ನು ಪೀಠದ ಮೇಲೆ ಊರಿ ಕುಳಿತಿದ್ದಾನೆ. ಆಕೆ ಪುರುಷನಿಗಭಿಮುಖವಾಗಿ ಎರಡೂ ಕಾಲು ಇಳಿಬಿಟ್ಟು ಕುಳಿತಿದ್ದರೆ ಆತ ಎಡಗಾಲು ಮಡಚಿ ಬಲಗಾಲು ಇಳಿಬಿಟ್ಟು ಕುಳಿತಿದ್ದಾನೆ. ನಂತರ ೨ ಅಂಗುಲ ಪಟ್ಟೆ ಖಾಲಿಯಿದ್ದು ಅದರ ಕೆಳಗಿನ ೨ ಅಂಗುಲ ಪಟ್ಟಿಯಲ್ಲಿ ಬ್ರಾಹ್ಮಿ ಅಕ್ಷರಗಳಿವೆ.

ಎರಡನೆಯ ಸ್ತರದಲ್ಲಿ ಪುರುಷನೊಬ್ಬ ಬಲಗಾಲು ಮಡಚಿ ಎಡಗಾಲು ಇಳಿಬಿಟ್ಟು ಕುಳಿತಿದ್ದಾನೆ. ಅವನ ಹಿಂದೆ ಸ್ತ್ರೀಯೊಬ್ಬಳು ಬೀಸಣಿಕೆ, ಚಾಮರ ಹಿಡಿದು ನಿಂತಿದ್ದಾಳೆ. ಅವನ ಪಕ್ಕದಲ್ಲಿ ಅವನಿಗಿಂತ ದೊಡ್ಡ ಆಕೃತಿಯ ಸ್ತ್ರೀಯೊಬ್ಬಳು ಬಲಗಾಲು ಇಳಿಬಿಟ್ಟು ಎಡಗಾಲು ಮಡಚಿ ಕುಳಿತಿದ್ದಾಳೆ. ಎಡತೊಡೆಯ ಮೇಲೆ ಮಗುವಿದೆ. ಸಿಂಹಕಟಿ, ಪೀನಸ್ತನಗಳ ಈಕೆ ಕರ್ಣಕುಂಡಲಧಾರಿ. ಬಲಗೈಯಲ್ಲಿ ಏನನ್ನೋ ಹಿಡಿದಿದ್ದು (ಪಾನಪಾತ್ರೆ?) ಒಡೆದು ಹೋಗಿದೆ. ಅವಳ ಹಿಂದೆ ಚಾಮರ, ಪಾನಪಾತ್ರಾಧಾರಿಣಿಯಾದ ಪರಿಚಾರಿಕೆಯೊಬ್ಬಳಿದ್ದಾಳೆ.

ಮೂರನೆಯ ಸ್ತರದಲ್ಲಿ ನೊಗಹಾರಿದ ಚಕ್ಕಡಿಯಿದ್ದು ಒಂದು ಎತ್ತು ಮಲಗಿ ಇನ್ನೊಂದು ನಿಂತಿದೆ. ಮೂಕಿಯ ಮೇಲೆ ಚಕ್ಕಡಿ ಹೊಡೆಯುವವ ಕುಳಿತಿದ್ದಾನೆ. ಚಕ್ಕಡಿಯಲ್ಲಿ ಯಾರೂ ಇಲ್ಲ.

ಎರಡನೆಯ ಸ್ತರದ ಪುರುಷಾಕೃತಿಯ ಮೇಲಿರುವ ಅಕ್ಷರಗಳನ್ನು **"ನಾಸಮಸ"** ಎಂದು, ಸ್ತ್ರೀಯ ಮೇಲಿರುವ ಬ್ರಾಹ್ಮಿ ಅಕ್ಷರಗಳನ್ನು **'ಸಂಘನಿಯ'** ಎಂದೂ ಓದಬಹುದಾಗಿದೆ. ಪ್ರಾಕೃತಭಾಷೆಯಲ್ಲಿರುವ ಇವುಗಳ ಅರ್ಥ 'ನಾಸಮನದು' ಮತ್ತು 'ಸಂಘನಿಯದು' ಎಂದಾಗುತ್ತದೆ. ಕಾರಣ ಹೆಸರುಗಳ ಕೆಳಗಿರುವ ಚಿತ್ರಗಳಲ್ಲಿರುವವರ ಹೆಸರುಗಳಿವು ಎಂದು ಊಹಿಸಬಹುದಾಗಿದೆ. ಅವರಿಬ್ಬರ ಸ್ಮರಣಾರ್ಥವಾಗಿ ಈ ಶಿಲಾಫಲಕವನ್ನು ನಿಲ್ಲಿಸಿ ಹೆಸರುಗಳನ್ನು ಸೂಚಿಸಲಾಗಿದೆ; ಎನ್ನಬಹುದು.

ಒಟ್ಟಿನಲ್ಲಿ ಶಾತವಾಹನ ಕಾಲದ ಉಬ್ಬು ಶಿಲ್ಪ ಕಲಾಕೃತಿಗಳ ಒಂದು ಸುಂದರ ಮಾದರಿಯನ್ನಾಗಿ ಈ ಶಿಲಾಫಲಕವನ್ನು ಗಮನಿಸಬಹುದಾಗಿದೆ.

ಹುರಸಗುಂಡಗಿಯ ಶಿಲಾಫಲಕಗಳು

೧) ಕುರುಬರ ಪೂಜಾರರ ಹೊಲದಲ್ಲಿ ಶಾತವಾಹನರ ಶಿಲಾಫಕವಿದ್ದು ೬' x ೨' x ೮" ಅಡಿ ಗಾತ್ರದ ಸೇದಿಬಂಡೆಯ (ಶಹಬಾದ ಕಲ್ಲು - Lime stone) ಕೆನೆ ಬಣ್ಣದ ಕಲ್ಲು ಇದಾಗಿದೆ. ಮೂರು ಪಟ್ಟಿಕೆಗಳಲ್ಲಿ ಉಬ್ಬು ಶಿಲ್ಪದ ಚಿತ್ರಗಳನ್ನು ಕೆತ್ತಲಾಗಿದೆ. ಕೆಳಭಾಗ ಚೌಕಾಕಾರವಾಗಿದ್ದು ಮೇಲ್ಭಾಗವು ಗೋಲಾಕಾರವಾಗಿದೆ.

---

* ನವನಗರ, ಹುಬ್ಬಳ್ಳಿ - ೫೮೦ ೦೨೫

ಕೆಳಪಟ್ಟಿಯಲ್ಲಿ ನೊಗ ಹಾರಿಸಿದ ಬಂಡಿಯ (ಚಕ್ಕಡಿ) ಚಿತ್ರವಿದ್ದು ಒಂದು ಎತ್ತು ಮಲಗಿದೆ. ಇನ್ನೊಂದು ಎತ್ತು ನಿಂತಿದೆ. ಮುಕಿಯ ಮೇಲೆ ಒಬ್ಬ ಮನುಷ್ಯ ಕುಳಿತಿದ್ದು ಒಂದು ಎತ್ತು ಚಕ್ಕಡಿಯ ಪಕ್ಕದಲ್ಲಿ ನಿಂತಿದೆ. ಮಧ್ಯದ ಪಟ್ಟಿಕೆಯಲ್ಲಿ ಇಬ್ಬರು ಕುಳಿತಿದ್ದು ಮಹಿಳೆಯ ಎಡತೊಡೆಯ ಮೇಲೆ ಮಗುವಿದೆ. ಪುರುಷ ಕೈಯಲ್ಲಿ ಪಾನಪಾತ್ರೆ ಹಿಡಿದಿದ್ದು ಇವರ ಹಿಂದೆ ಇಬ್ಬರು ಮಹಿಳೆಯರಿದ್ದಾರೆ. ಇಲ್ಲಿಯ ಸ್ತ್ರೀ ಮತ್ತು ಪುರುಷರು ಕುಳಿತಿರುವ ಪೀಠ ಒಂದು ಕಾಲು ಮಡಚಿ ಇನ್ನೊಂದು ಇಳಿಬಿಟ್ಟುಕೊಂಡು ಕುಳಿತಿರುವ ರೀತಿಗಳನ್ನು ಗಮನಿಸಿದಾಗ ಮೇಲ್ವರ್ಗದ ಶ್ರೀಮಂತ ದಂಪತಿಗಳೆಂದು ಸೂಚಿಸುತ್ತದೆ. ಹಿಂದೆ ನಿಂತಿರುವ ಮಹಿಳೆಯರು ಅವರ ಪರಿಚಾರಿಕೆಯರಿರಬಹುದು. ಮೇಲ್ಭಾಗದ ಪಟ್ಟಿಕೆಯಲ್ಲಿ ಮಹಡಿಯ ಕಿಟಕಿಯಿಂದ ಇಬ್ಬರು ಇಣುಕುತ್ತಿರುವಂತಿದೆ. ಮೇಲ್ಭಾಗದ ಮೂರು ಭಾಗಗಳಲ್ಲಿ ಬೌದ್ಧ ಚೈತ್ಯಾಲಯಗಳಲ್ಲಿ ತೋರಿಸುವ ೩ ಕುಡುಗಳಿವೆ.

೨) ಇದೇ ಫಲಕದ ಮುಂಭಾಗದಲ್ಲಿ ಇದೇ ಮಾದರಿಯ ಶಿಲಾಫಲಕದ ಎರಡು ತುಣುಕುಗಳು ಬಿದ್ದಿವೆ. ಅವುಗಳನ್ನು ಜೋಡಿಸಿ ನೋಡಲಾಗಿ ಪೀಠದ ಮೇಲೆ ಸ್ತ್ರೀಯೊಬ್ಬಳು ಕುಳಿತಂತಿದ್ದು ಒಬ್ಬ ಪರಿಚಾರಿಕೆ ಪಕ್ಕದಲ್ಲಿ ನಿಂತಿದ್ದು ಇನ್ನಿಬ್ಬರು ಕಾಲಹತ್ತಿರ ಕುಳಿತು ಸೇವೆ ಮಾಡುವಂತೆ ತೋರುತ್ತದೆ.

ಈ ಶಿಲಾಫಲಕವಿರುವ ಸ್ಥಾನ ಭೀಮಾನದಿಯ ಬಲದಂಡೆಯ ಮೇಲೆ ನದಿಯ ಪಾತ್ರದಿಂದ ಎರಡು ಫರ್ಲಾಂಗ್ ದೂರವಿದೆ. ಶಿಲಾಫಲಕದ ಎದುರಿಗೆ ನದಿಯ ಎಡದಂಡೆಯ ಮೇಲಿರುವ ಸನ್ನತಿಯ ಚಂದ್ರಲಾಪರಮೇಶ್ವರಿ ದೇವಸ್ಥಾನದ ಶಿಖರ ಸುಂದರವಾಗಿ ಕಾಣಿಸುತ್ತದೆ. ಬಹುಶಃ ನಡುವಿನ ಅಂತರ ೩ ಕಿಲೋಮೀಟರ್‌ಗಳಾಗಬಹುದು.


೩) ಹುರಸಗುಂಡಗಿ ಊರಿನಿಂದ ದಕ್ಷಿಣಕ್ಕೆ ೧ ಕಿ.ಮೀ. ಅಂತರದಲ್ಲಿ ಹಳೆಯ ಜನವಸತಿಯ ನೆಲೆಯಿದೆ. ಬಹುಶಃ ಇದು ಬೃಹತ್ ಶಿಲಾಯುಗದ ನೆಲೆಯಾಗಿರಬಹುದೆಂದು ಅಲ್ಲಿ ದೊರೆಯುವ ಮಡಿಕೆ - ಕುಡಿಕೆ ಚೂರುಗಳು, ಕಬ್ಬಿಣದ ಕಿಟ್ಟಗಳಿಂದ ಊಹಿಸಬಹುದು. ಇಲ್ಲಿಯೇ ಪರಮಾನಂದಗುಡಿ ಎಂದು ಕರೆಸಿಕೊಳ್ಳುವ ದೇಗುಲವಿದೆ. ಹೊರನೋಟಕ್ಕೆ ೧೮-೧೯ನೇ ಶತಮಾನದಲ್ಲಿ ಕಟ್ಟಿದ ನಾಲ್ಕು ಕಂಬಗಳ ನವರಂಗ ಮಂಟಪ ಮಾತ್ರವಿದ್ದು ನಮಗೆ ತೀವ್ರ ನಿರಾಸೆಯನ್ನುಂಟು ಮಾಡಿತು. ಆದರೆ ಗರ್ಭಗುಡಿಯಲ್ಲಿ ಇಣುಕಿದಾಗ ಒಂದೆಡೆ ಬೇಸರ, ತೀವ್ರ ಅಸಮಾಧಾನಗಳಾದರೆ ಇನ್ನೊಂದೆಡೆ ಖುಷಿಯಾಯಿತು. ನಮ್ಮೊಂದಿಗೆ ತೋರಿಸಲು ಬಂದಿದ್ದ ವ್ಯಕ್ತಿ ಸುಮಾರು ೪೦-೫೦ ವರ್ಷದವರು. ಆತ ಸುಮಾರು ೧೦-೧೨ ವರ್ಷದವನಿದ್ದಾಗ ಒಳಗಿರುವ ವಿಗ್ರಹ ಭಿನ್ನವಾಗಿರಲಿಲ್ಲವಂತೆ. ಇತ್ತೀಚೆಗೆ ಸುಮಾರು ೨೦-೨೫ ವರ್ಷಗಳ ಹಿಂದೆ ನಿಧಿ ಶೋಧಕ್ಕಾಗಿ ಬಂದವರು ಗರ್ಭಗೃಹದಲ್ಲಿಯ ವಿಗ್ರಹವನ್ನು ಎತ್ತಲು ಹೋಗಿ ಒಡೆದು ಹಾಕಿದ್ದಾರೆ. ಈಗ ಅಲ್ಲಿರುವ ತಗ್ಗಿನಲ್ಲಿ ಎರಡು ತುಣುಕುಗಳನ್ನು ಜೋಡಿಸಿ ಇಡಲಾಗಿದೆ. ಇವು ವಿಗ್ರಹಗಳಲ್ಲ; ಶಾತವಾಹನ ಶಿಲಾಫಲಕದ ಪಟ್ಟಿಕೆಗಳು. ಮೊದಲ ಪಟ್ಟಿಕೆ ಗರ್ಭಗೃಹದಲ್ಲಿಲ್ಲ. ಎರಡನೆಯ ಪಟ್ಟಿಕೆಯಲ್ಲಿ ಮುನಿಯೊಬ್ಬ ಯೋಗಪಟ್ಟಿಗೆ (ಯೋಗದಂಡ)ಯ ಮೇಲೆ ಬಲಗೈಯೂರಿ ಎಡಗೈಯನ್ನು ತೊಡೆಯ ಮೇಲಿಟ್ಟುಕೊಂಡು ಕುಳಿತಿದ್ದಾನೆ. ಸುತ್ತಲೂ ೪ ಜನ ಪರಿಚಾರಿಕೆಯರಿದ್ದಾರೆ. ಮೂರನೆಯ ಪಟ್ಟಿಕೆಯಲ್ಲಿ ಉಪ್ಪರಿಗೆಯ ಕಿಟಕಿಯಿಂದ ಇಬ್ಬರು ಇಣುಕುವಂತಿದೆ. ಅದರ ಮೂರು ಭಾಗಗಳಲ್ಲಿ ಚೈತ್ಯಾಲಯದ ಒಂದೊಂದು ಕುಡುಗಳಿವೆ. ಬಹುಶಃ ಒಂದನೆಯ ಪಟ್ಟಿಕೆ ಎಂದು ಊಹಿಸಬಹುದಾದ ನವರಂಗದಲ್ಲಿ ಇಡಲಾದ ತುಂಡಿನಲ್ಲಿ ಎರಡು ಕುದುರೆಗಳಿದ್ದು ಇಬ್ಬರು ಸವಾರಿ ಮಾಡುತ್ತಿದ್ದಾರೆ.

ದೇವಸ್ಥಾನದ ಎಡಭಾಗದಲ್ಲಿ ಶಿಲಾಫಲಕದ ತುಂಡೊಂದು ಬಿದ್ದಿದ್ದು ಅದರಲ್ಲಿ ಸ್ತ್ರೀಯೊಬ್ಬಳು ಆಸನದಲ್ಲಿ ಕುಳಿತಿರುವ ಉಬ್ಬು ಚಿತ್ರವಿದೆ. ಇಬ್ಬರು ಪರಿಚಾರಿಕೆಯರಿದ್ದಾರೆ. ದೇವಸ್ಥಾನದ ಬಲಭಾಗದ ಚಿಕ್ಕ ಗುಡಿಯಲ್ಲಿ (ಕುಳಿತು ಹೋಗುವಂತಹದು ಗುಡಿಯಲ್ಲಿ ಎದ್ದು ನಿಲ್ಲುವಂತಿಲ್ಲ) ಮುಂಗಾಲುಗಳನ್ನು ಎತ್ತಿನಿಂತ ಸಪ್ತಾಶ್ವಗಳುಳ್ಳ ಸೇದಿಬಂಡಿಯ ಪೀಠವಿದೆ, ಸೂರ್ಯವಿಗ್ರಹವಿಲ್ಲ. ಇದು ಕೂಡಾ ಬಹುಶಃ ಶಾತವಾಹನರ ಕಾಲದ್ದಾಗಿದ್ದು ಮೇಲಿಟ್ಟ ಒಡಕು ತುಂಡು ಶಾತವಾಹನ ಶಿಲಾಫಲಕದ ತುಣುಕಾಗಿದ್ದು ಮಹಡಿಯ ಕಿಟಕಿಯಿಂದ ನೋಡುವ ವ್ಯಕ್ತಿಯೊಬ್ಬನ ಉಬ್ಬು ಶಿಲ್ಪವಾಗಿದೆ.

ವಜ್ಜಲದ ಶಾತವಾಹನ ಶಿಲಾಫಲಕ

ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಇತ್ತೀಚೆಗೆ ಶಾಸನಗಳ ಪರಿವೀಕ್ಷಣೆ ಕೈಕೊಂಡಾಗ ಶಾತವಾಹನರ ಕಾಲದ ಶಿಲಾಫಲಕವೊಂದು ವಜ್ಜಲ ಗ್ರಾಮದಲ್ಲಿ ಪತ್ತೆಯಾಗಿದೆ.

ಸುರಪುರದಿಂದ ಪಶ್ಚಿಮಕ್ಕೆ ಸುಮಾರು ೨೫ ಕಿ.ಮೀ. ಅಂತರದಲ್ಲಿರುವ ಹಳ್ಳಿ ವಜ್ಜಲ. ಈ ಹಳ್ಳಿಯ ಉತ್ತರಕ್ಕೆ ಹಳ್ಳವೊಂದು



ಹರಿಯುತ್ತಿದ್ದು ಅದನ್ನು ದಾಟಿ ನೀರಿನ ಬುಗ್ಗೆಯನ್ನು ದಾಟಿ ರಾಮಲಿಂಗೇಶ್ವರ ದೇವಸ್ಥಾನವನ್ನೂ ದಾಟಿ ಹೋದರೆ ಊರ ಗೌಡರಾದ ದ್ಯಾಮಗೊಂಡರ ಹೊಲ ದೊರೆಯುತ್ತದೆ. ಹೊಲದ ದಕ್ಷಿಣಭಾಗದ ಸರಕಾರಿ ಜಾಲಿಯ ಕಂಟಿಗಳ ಮಧ್ಯೆ ಈ ಫಲಕ ಬಿದ್ದಿದೆ. ಸುಮಾರು ೩'x೩'x ೧೦" ಗಾತ್ರದ ತಿಳಿನೀಲ ವರ್ಣದ ಸೇದಿಬಂಡಿ ಇದಾಗಿದೆ. ಫಲಕದಲ್ಲಿ ಎರಡು ಸ್ತರಗಳಿದ್ದು ಮೇಲ್ಭಾಗದಲ್ಲಿ ಮೂರು ಕಡುಗಳಿವೆ. ಕೆಳಭಾಗದಲ್ಲಿ ಪುರುಷ ಮತ್ತು ಸ್ತ್ರೀಯರ ಉಬ್ಬು ಶಿಲ್ಪಗಳಿದ್ದು ಪಕ್ಕದಲ್ಲಿ ಪಾನಪಾತ್ರೆ ಹಿಡಿದ ಸ್ತ್ರೀಯೊಬ್ಬಳು (ಪರಿಚಾರಿಕೆ) ಇದ್ದಾಳೆ. ಅಲ್ಲದೆ ಕಲ್ಲು ಒಡೆದು ಹೋಗಿದ್ದು ಕೆಳಭಾಗದ ಕಲ್ಲಿನ ತುಂಡುಗಳು ದೊರೆಯದೇ ಇದ್ದುದರಿಂದ ವಿವರಗಳು ತಿಳಿದು ಬರುವದಿಲ್ಲ. ಈ ಎರಡು ಸ್ತರಗಳ ಮಧ್ಯದ ೪" ಭಾಗದಲ್ಲಿ ಬ್ರಾಹ್ಮಿಲಿಪಿಯ ೧೪ ಅಕ್ಷರಗಳಿವೆ. ಕೆಳಭಾಗದಲ್ಲಿ ಎತ್ತು ಚಕ್ಕಡಿಗಳಿದ್ದವೆಂದು ಗೌಡರ ಹೇಳಿಕೆ.

ಪ್ರಾಕೃತ ಭಾಷೆ ಬ್ರಾಹ್ಮಿಲಿಪಿಯಲ್ಲಿರುವ ಈ ಅಕ್ಷರಗಳನ್ನು **"ಮುಕುಲಿಯಾನ ಕಠಿನೀಯ ಸೇಬನಿಕಾಯ"** ಎಂದು ಓದಬಹುದಾಗಿದೆ. ಇದರ ಅರ್ಥ ಮುಕುಲಿ ಗ್ರಾಮ ಅಥವಾ ವಂಶಕ್ಕೆ ಸೇರಿದ ರಠಿನೀ (ಅಧಿಕಾರಿಣಿ ಅಥವಾ ಅಧಿಕಾರಿಯ ಪತ್ನಿ) ಯಾದ ಸೇಬನಿಕಾ ಎನ್ನುವವರದು. ಇಲ್ಲಿ ಮುಕುಲಿ ಎನ್ನುವ ಪದ ದ್ರಾವಿಡ ಪದವಾಗಿರುವಂತಿದೆ. ಆಂಧ್ರಪ್ರದೇಶದ ಭಾಗದಲ್ಲಿ ಆಳಿದ ಶಾತವಾಹನರ ಅಧಿಕಾರಿಗಳಾಗಿ ಅಥವಾ ಮಾಂಡಲೀಕರಾಗಿ ರಠೀ, ಮಹಾರಠೀ ಎನ್ನುವವರು ಆಳಿದರೆಂಬುದನ್ನು ಈಗಾಗಲೇ ಗುರುತಿಸಿದ್ದಾರೆ. ಅಂತಹ ರಠಿಯ ಪತ್ನಿ ಅಥವಾ ಅಧಿಕಾರಿಣಿ (ರಠಿನೀ)ಯಾದ ಸೇಬನಿಕಾ ಎನ್ನುವ ಮಹಿಳೆಯ ಸ್ಮರಣಾರ್ಥವಾಗಿ ಈ ಕಲ್ಲನ್ನು ನಿಲ್ಲಿಸಿರಬಹುದಾಗಿದೆ. ಲಿಪಿಸ್ವರೂಪದ ಆಧಾರದಿಂದ ಈ ಶಿಲಾಫಲಕವನ್ನು ಕ್ರಿ.ಶ. ೨ನೆಯ ಶತಮಾನದ್ದೆಂದು ಹೇಳಬಹುದು. ಈ ಶಾಸನದ ಆಧಾರದಿಂದ ಕೆಳಗಿನ ತೀರ್ಮಾನಗಳಿಗೆ ಬರಬಹುದಾಗಿದೆ.

೧) ಸುರಪುರ ತಾಲೂಕಿನಲ್ಲಿ ದೊರೆತ ಮೊತ್ತಮೊದಲ ಶಾತವಾಹನ ಕಾಲದ ಶಿಲಾಫಲಕ ಇದಾಗಿರುವದರಿಂದ ಈ ಭಾಗವನ್ನು ಶಾತವಾಹನರು ಆಳುತ್ತಿದ್ದರು.

೨) ರಠಿಯ ಪತ್ನಿ ಎಂದು ಉಲ್ಲೇಖಿಸುವ ಬದಲು ರಠಿನೀ ಎಂಬ ಪದ ಪ್ರಯೋಗ ಇರುವದರಿಂದ ಮಹಿಳೆಯರೂ ಆ ಕಾಲದಲ್ಲಿ ಅಧಿಕಾರ ಸ್ಥಾನಗಳಲ್ಲಿದ್ದರು.

ಅಣಬಿಯ ಶಿಲಾಫಲಕಗಳು

೧) ಗುಡುಸಾಬ ಗೋಲಕೊಂಡೆಯವರ ಹೊಲದ ಕಲ್ಲಿನ ಒಡ್ಡಿನಲ್ಲಿ ಬೂದು ಬಣ್ಣದ ಸೇದಿಬಂಡಿಯ ಕಲ್ಲಿನಲ್ಲಿ ಕೆತ್ತಿದ ಶಿಲಾಫಲಕವೊಂದಿದೆ. ೪.೫' x ೨' x ೭" ಗಾತ್ರದ ಕಲ್ಲು ಇದಾಗಿದ್ದು ಕೆಳಭಾಗ ಚೌಕಾಕಾರವಾಗಿದ್ದು ಮೇಲ್ಭಾಗ ಗೋಲಾಕಾರವಾಗಿದೆ. ಮೊದಲ ಪಟ್ಟಿಕೆಯಲ್ಲಿ ನೊಗಹಾರಿದ ಚಕ್ಕಡಿಯಿದ್ದು ಒಂದು ಎತ್ತು ಮಲಗಿದೆ. ಇನ್ನೊಂದು ಎತ್ತು ನಿಂತಿದೆ. ಎರಡನೆಯ ಪಟ್ಟಿಕೆಯಲ್ಲಿ ದಂಪತಿಗಳಿದ್ದು ಪೀಠದ ಮೇಲೆ ಕುಳಿತ ಇವರಿಬ್ಬರಲ್ಲಿ ಪುರುಷನು ಎಡಗಾಲನ್ನು ಮಡಚಿ ಬಲಗಾಲನ್ನು ಇಳಿಬಿಟ್ಟಿದ್ದಾನೆ. ಸ್ತ್ರೀ ತುರುಬು ಕಟ್ಟಿದ್ದು ಎರಡೂ ಕಾಲುಗಳನ್ನು ಪಕ್ಕದಲ್ಲಿ ಇಳಿಬಿಟ್ಟಿದ್ದಾಳೆ. ಪಾನಪಾತ್ರೆ ಹಿಡಿದ ಪುರುಷನ ಕಾಲಿನ ಹತ್ತಿರ ಪರಿಚಾರಕನೊಬ್ಬ ಕುಳಿತಿದ್ದಾನೆ. ಹಿಂದೆ ಇಬ್ಬರು ಪರಿಚಾರಕಿಯರು ನಿಂತಿದ್ದಾರೆ. ಮೂರನೆಯ ಪಟ್ಟಿಕೆಯಲ್ಲಿ ಕಿಂಡಿಯಿಂದ ಇಬ್ಬರು ನೋಡುವಂತಿದ್ದು ಮೂರು ಭಾಗಗಳಲ್ಲಿ ಕುಡುಗಳಿವೆ.


೨) ಮೇಲಿನ ಶಿಲಾಫಲಕದಿಂದ ಉತ್ತರಕ್ಕೆ ೨-೩ ಫರ್ಲಾಂಗ್ ದೂರದಲ್ಲಿ ಹಳ್ಳವೊಂದಿದ್ದು ಇದನ್ನು ಜೇನಹಳ್ಳವೆಂದು ಕರೆಯುತ್ತಾರೆ. ಈ ಹಳ್ಳದ ದಂಡೆಯ ಬಂಡೆಗಲ್ಲಿನ ಮೇಲೆ ಶಿಲಾಫಲಕವೊಂದನ್ನು ಕೆತ್ತಲಾಗಿದೆ. ೬' x ೩' x ೧೦" ಗಾತ್ರದ ಸೇದಿಬಂಡಿ ಇದಾಗಿದೆ. ಇದರಲ್ಲಿಯೂ ಮೂರು ಪಟ್ಟಿಕೆಗಳಿವೆ. ಮೊದಲ ಪಟ್ಟಿಕೆಯಲ್ಲಿ ಎತ್ತುಚಕ್ಕಡಿಗಳಿದ್ದು ಎತ್ತುಗಳ ಭಾಗ ಒಡೆದಿದೆ. ಎರಡನೆಯ ಪಟ್ಟಿಕೆಯಲ್ಲಿ ಯೋಗಿಯೊಬ್ಬ ಪೀಠದ ಮೇಲೆ ಕುಳಿತಿದ್ದು ಬಲಗಾಲನ್ನು ಇಳಿಬಿಟ್ಟು ಎಡಗೈಯನ್ನು ಯೋಗ ದಂಡದ ಮೇಲೆ ಊರಿ ಬಲಗೈಯನ್ನು ಸೊಂಟದ ಮೇಲಿಟ್ಟು ಕೊಂಡು ಕುಳಿತಿದ್ದಾನೆ. ಬಲಭಾಗದಲ್ಲಿ ಒಬ್ಬ ಪುರುಷ ಮತ್ತು ಎಡಭಾಗದಲ್ಲಿ ಸ್ತ್ರೀಯೊಬ್ಬಳು ಪೀಠದ ಮೇಲೆ ಕುಳಿತಿದ್ದಾಳೆ. ಮೂರನೆಯ ಪಟ್ಟಿಕೆಯಲ್ಲಿ ೩ ಕುಡುಗಳಿದ್ದು ಮಧ್ಯಭಾಗ ಖಾಲಿಯಾಗಿದೆ. ಇದನ್ನು ಗಮನಿಸಿದರೆ ಈ ಫಲಕ ಅಪೂರ್ಣವಾಗಿರುವುದು ಸ್ಪಷ್ಟವಾಗಿದೆ ಮತ್ತು ಇದನ್ನು ಬಂಡೆಯಿಂದ ಬೇರ್ಪಡಿಸಿಲ್ಲ.

ಈ ಶಿಲಾಫಲಕದ ಪಕ್ಕದಲ್ಲಿಯೇ ಕ್ವಾರಿ ಕೆಲಸ ನಡೆದಿದ್ದು ಅಲ್ಲಿಯ ಕೆಲಸಗಾರರನ್ನು ವಿಚಾರಿಸಿದಾಗ ಇಂತಹ ಸಾಕಷ್ಟು ಸಂಖ್ಯೆಯ ಶಿಲಾಫಲಕಗಳು ಅಲ್ಲಿದ್ದವೆಂದು ಒಡೆದು ಹಾಕಿದೆವೆಂದು ತಿಳಿಸಿದರು. ಇನ್ನು ಕೆಲವು ಶಿಲಾಫಲಕಗಳನ್ನು ಗುಲ್ಬರ್ಗಕ್ಕೆ ಸಾಗಿಸಿದ್ದಾಗಿಯೂ ಹೇಳಿದರು.

೩) ಅಣಬಿಯ ನಾಗಪ್ಪಯ್ಯನ ಗುಡಿಯ ಪಕ್ಕದಲ್ಲಿ ಜೀವಣಜಿಫೆ, ಕಟ್ಟಿಗೆಜಿಫೆಗಳೆಂದು ಕರೆಸಿಕೊಳ್ಳುವ ಹೊಲಗಳ ಡೋಣಗಳಲ್ಲಿ ಶಾತವಾಹನರ ಶಿಲಾಫಲಕದ ೫೦-೬೦ ತುಕಡಿಗಳು ಕಣ್ಣಿಗೆ ಬೀಳುತ್ತವೆ. ಒಂದೊಂದು ತುಕಡಿಯಲ್ಲಿ ಕೈ ಕಾಲು ಕುಳಿತ, ನಿಂತ ಪುರುಷ-ಸ್ತ್ರೀ ವಿಗ್ರಹಗಳು, ಎತ್ತು ಬಂಡಿಗಳ ಚಿತ್ರಗಳಿವೆ. ಈ ಸಂಖ್ಯೆಯನ್ನು ಗಮನಿಸಿದಾಗ ಸುಮಾರು ೮-೧೦ ಶಿಲಾಫಲಕಗಳನ್ನು ಒಡೆದು ಹಾಕಿದಂತೆ ತೋರುತ್ತದೆ. ಇವುಗಳನ್ನು ನಿಧಾನವಾಗಿ ಶೋಧಿಸಿದರೆ ಬ್ರಾಹ್ಮಿ ಅಕ್ಷರಗಳು ದೊರೆಯುವ ಸಾಧ್ಯತೆಯಿದೆ.


೪) ಅಣಬಿಯ ಮಠದ ಮುಂದಿನ ಕಟ್ಟೆಗೆ ಆನಿಸಿಟ್ಟ ಶಿಲಾಫಲಕವೊಂದು ಶಾತವಾಹನರ ಕಾಲದ್ದಾಗಿದೆ. ೭' ಉದ್ದ ೨' ಅಗಲ ೮" ದಪ್ಪ ಗಾತ್ರದ ಕೆನೆಬಣ್ಣದ ಶಹಬಾದ್ ಕಲ್ಲು (ಸೇದಿ ಬಂಡಿ-) ಇದಾಗಿದ್ದು ಕೆಳಭಾಗ ಚೌಕಾಕಾರವಾಗಿದ್ದು ಮೇಲ್ಭಾಗ ಗೋಲಾಕಾರವಾಗಿದೆ. ಈ ಫಲಕದಲ್ಲಿಯೂ ೩

ಪಟ್ಟಿಕೆಗಳಿವೆ. ಮೊದಲ ಸ್ತರದಲ್ಲಿ ನೊಗಹಾರಿದ ಬಂಡಿಯಿದ್ದು ಒಂದು ಎತ್ತು ಮಲಗಿದೆ. ಇನ್ನೊಂದು ನಿಂತಿದೆ. ಮೂಕಿಯ ಮೇಲೆ ವ್ಯಕ್ತಿಯೊಬ್ಬ ಕುಳಿತಿದ್ದಾನೆ. ಎರಡನೆಯ ಸ್ತರದಲ್ಲಿ ಪೀಠದ ಮೇಲೆ ಕುಳಿತ ದಂಪತಿಗಳ ವಿಗ್ರಹಗಳಿವೆ. ಸ್ತ್ರೀ ತುರುಬು ಕಟ್ಟಿದ್ದು ಕರ್ಣಾಭರಣ, ಕಂಠಾಭರಣಗಳನ್ನು ಧರಿಸಿ, ಪುರುಷನಿಗೆ ಮುಖ ಮಾಡಿ ಬಲಗಾಲನ್ನು ಇಳಿಬಿಟ್ಟು ಕುಳಿತಿದ್ದಾಳೆ. ಕಾಲನ್ನಿಡಲೂ ಪೀಠವಿದೆ. ಪುರುಷ ಬಲಗೈಯಲ್ಲಿ ಪಾನಪಾತ್ರೆ ಹಿಡಿದು ಎಡಗೈಯನ್ನು ಎಡತೊಡೆಯ ಮೇಲಿಟ್ಟು, ಎಡಗಾಲು ಮಡಚಿ ಬಲಗಾಲನ್ನು ಇಳಿಬಿಟ್ಟು ಕುಳಿತಿದ್ದಾನೆ. ಕಾಲಿನ ಹತ್ತಿರ ಒಬ್ಬ ಪರಿಚಾರಕ ಬಗ್ಗಿ ಕುಳಿತು ಸೇವೆ ಮಾಡುವಂತಿದೆ. ಹಿಂದೆ ಇಬ್ಬರು ಪರಿಚಾರಕರಿದ್ದಾರೆ. ಪುರುಷ ಶಿರಸ್ತ್ರಾಣವನ್ನು ಧರಿಸಿದ್ದು ಮೈ ಮೇಲೆ ಉತ್ತರೀಯ ಹೊದ್ದಿದ್ದಾನೆ. ಇಬ್ಬರ ಕೈಯಲ್ಲಿ ಕಂಕಣಗಳಿವೆ. ಮೂರನೆಯ ಸ್ತರದಲ್ಲಿ ಮಹಡಿಯಿಂದ ಇಬ್ಬರು ಇಣುಕುತ್ತಿರುವಂತಿದೆ. ಈ ಉಬ್ಬು ಶಿಲ್ಪದ ಮೂರು ಭಾಗಗಳಲ್ಲಿ ಕುಡುಗಳಿವೆ.



ಎರಡನೆಯ ಪಟ್ಟಿಕೆಯ ಸ್ತ್ರೀಯ ಉಬ್ಬುಶಿಲ್ಪದ ಹಿಂದೆ ಬ್ರಾಹ್ಮೀ ಲಿಪಿಯಿದೆ. **'ಘರ(ತ) ಯಶೋಪಾಲಾಯ'** ಎಂದು ಓದಿದ್ದೇನೆ. ಪ್ರಾಕೃತ ಭಾಷೆಯಲ್ಲಿರುವ ಇದನ್ನು 'ಗೃಹಸ್ಥನಾದ ಯಶೋಪಾಲನಿಗೆ' ಎಂದು ಅರ್ಥೈಸಬಹುದು. ಇಲ್ಲಿ ಯಶೋಪಾಲನಿಗೆ ಎಂದು ಚತುರ್ಥೀ ವಿಭಕ್ತಿ ಪ್ರತ್ಯಯವಿರುವುದರಿಂದ ಇಂಥಹ ಶಿಲಾಫಲಕಗಳನ್ನು ಸ್ಮಾರಕ ಶಿಲೆಗಳೆಂದು ಕರೆದಿರುವುದರಿಂದ ಬಹುಶಃ ಯಶೋಪಾಲನೆಂಬುವನ ಸ್ಮರಣೆಗಾಗಿ ಈ ಫಲಕವನ್ನು ನಿಲ್ಲಿಸಿರಬಹುದಾಗಿದೆ.

ಬಹುತೇಕ ಎಲ್ಲ ಶಾತವಾಹನ ಶಿಲಾಫಲಕಗಳ ಮೇಲೆ ಎತ್ತು ಬಂಡಿಯ ಚಿತ್ರಗಳಿವೆ. ಇವು ಏನನ್ನು ಸಂಕೇತಿಸುವವೆಂಬುದನ್ನು ಖಚಿತವಾಗಿ ಗುರುತಿಸಲು ಆಧಾರಗಳಿಲ್ಲ. ಸಾರ್ಥ ಎಂದರೆ ಸರಕುಗಳ ಬಂಡವಲನ್ನು ಒಯ್ದು ಮಾರಾಟ ಮಾಡುವವರು ಎಂಬ ಅರ್ಥವನ್ನು ಸೂಚಿಸಿ ಈ ವ್ಯಾಪಾರಿಗಳ ಮುಖಂಡನೇ 'ಸಾರ್ಥವಾಹ'ನೆಂದು ಹೇಳುತ್ತಾರೆ. ಇವರೇ ಮುಂದೆ ಸಾತವಾಹನ ವಂಶದ ಸ್ಥಾಪಕರಿರಬಹುದೇ ? ಎನ್ನುವದೂ ಸ್ಪಷ್ಟವಿಲ್ಲ. ಆ ಕಾಲದಲ್ಲಿ ಜನ ಮತ್ತು ಸರಕು ಸಾರಿಗೆಗಾಗಿ ಸಾಗಣೆ ಬಂಡಿಗಳನ್ನೇ ಉಪಯೋಗಿಸುತ್ತಿದ್ದರು. ಇಲ್ಲಿ ಶೂದ್ರಕ ಮಹಾರಾಜನ ಮೃಚ್ಛಕಟಿಕ (ಮಣ್ಣಿನ ಬಂಡಿ) ನಾಟಕವನ್ನು ಜ್ಞಾಪಿಸಿಕೊಳ್ಳಬಹುದು. ಕಾರಣ ಇಲ್ಲಿರುವ ದಂಪತಿಗಳು ಅಧಿಕಾರಿ ವರ್ಗಕ್ಕೆ ಅಥವಾ ವ್ಯಾಪಾರಿ ವರ್ಗಕ್ಕೆ ಸೇರಿದವರಾದುದರಿಂದ ಈ ಚಿತ್ರಗಳಿರಬಹುದು. ನೊಗ ಹಾರಿದ ಬಂಡಿ ವಿಶ್ರಾಂತಿಯನ್ನು ಸೂಚಿಸುವುದರಿಂದ ಜೀವನ ವಿಶ್ರಾಂತಿಯನ್ನು ಪಡೆದ ಅಥವಾ ಜೀವನ ಪ್ರಯಾಣ ಮುಗಿಸಿದ ವ್ಯಕ್ತಿಯ ಸಂಕೇತವಾಗಿ ಹೀಗೆ ಚಿತ್ರಿಸಬಹುದು. ಶ್ರೀ ಕೆ.ವಿ. ರಮೇಶ ಅವರೂ ಹೀಗೆಯೇ ಅಭಿಪ್ರಾಯ ಪಡುತ್ತಾರೆ. ಐ.ಕೆ. ಶರ್ಮಾ ಮತ್ತು ಜೆ. ವರಪ್ರಸಾದರಾವ ಅವರು ಸಂಪಾದಿಸಿದ "Early Brahmi Inscriptions from Sannati" ಎಂಬ ಕೃತಿಯಲ್ಲಿ ೮೧ ಬ್ರಾಹ್ಮಿ ಶಾಸನಗಳನ್ನು ಫೋಟೋ ಸಹಿತ ನೀಡಲಾಗಿದೆ. ಇದರಲ್ಲಿ ಅಶೋಕನ ೪ ಶಿಲಾ ಶಾಸನಗಳೂ ಸೇರಿದೆ. ಇವುಗಳಲ್ಲಿ ಕ್ರಿ.ಶ. ೨ನೆಯ ಶತಮಾನದ ಕಾಲದವೆಂದು ಗುರುತಿಸಲಾದ ಬ್ರಾಹ್ಮಿಲಿಪಿಗೆ ಈ ಶಿಲಾಫಲಕದ ಲಿಪಿಯು ಸಂವಾದಿಯಾಗಿರುವದರಿಂದ ಈ ಲಿಪಿಯನ್ನು ಅದೇ ಕಾಲಘಟ್ಟದ್ದೆಂದು ಗುರುತಿಸಬಹುದಾಗಿದೆ. ಇಂಥಹದೇ ಶಿಲಾ ಫಲಕಗಳಲ್ಲಿ ಒಂದನ್ನು ಫೆಡ್ರಿಕ್ ಎಂ. ಐಶರ ಮತ್ತು ಜೆ.ಎಸ್. ಗಾಯಿ ಅವರು ಸೇರಿ ಸಂಪಾದಿಸಿದ "Epigraphy its bearing on Art" ಕೃತಿಯಲ್ಲಿ ವೀರನ ಸ್ಮಾರಕಕ್ಕಾಗಿ ನಿಲ್ಲಿಸಿದ ಜೇವರ್ಗಿಯಲ್ಲಿನ ಶಾಸನವನ್ನು ಗುರುತಿಸಿ ಫೋಟೋ ಸಹಿತ ಪ್ರಕಟಿಸಲಾಗಿದೆ. ಇಂಥಹದೇ ಇನ್ನೊಂದು ಶಿಲಾಫಲಕ ಜೇವರ್ಗಿ ತಾಲೂಕು ಅವರಾದ ಗ್ರಾಮದಲ್ಲಿದ್ದು ಅದರ ಪಠ್ಯ ಪ್ರಕಟವಾಗಿಲ್ಲ. ಅದನ್ನು **ರಕಸ ಬೋವುಣಸ ವಿಜಲಯ** ಎಂದು ಓದಬಹುದಾಗಿದೆ. ಈ ಎಲ್ಲ ಶಿಲಾಫಲಕಗಳ ಮಾದರಿಗಳನ್ನು ಗಮನಿಸಿದಾಗ ಬಂಡೆಯ ಮಾದರಿಯನ್ನು ಪರಿಶೀಲಿಸಿದಾಗ ಹೆಚ್ಚಿನ ಶಿಲಾಫಲಕಗಳು ಕೆನೆ ಬಣ್ಣದ ಸೇದಿಬಂಡೆಯಾಗಿದ್ದು ಜೇನಹಳ್ಳದ ದಂಡೆಯಲ್ಲಿರುವ ಬಂಡೆ ಮೇಲ್ನೋಟಕ್ಕೆ ಹೀಗೆಯೇ ಇರುವುದರಿಂದ ಅಣಜಿ ಈ ಶಾತವಾಹನ ಶಿಲಾಫಲಕಗಳ ನಿರ್ಮಾಣದ ಕೇಂದ್ರವಾಗಿರಬಹುದಾದ ಸಾಧ್ಯತೆಗಳಿವೆ. ಎಂದು ಊಹಿಸಬಹುದಾಗಿದೆ. ಭೂಗರ್ಭ ಶಾಸ್ತ್ರಜ್ಞರಿಂದ ಪರಿಶೋಧಿಸಿ ಇದನ್ನು ಖಚಿತಪಡಿಸಿಕೊಳ್ಳಬಹುದು.



ಜೇವರ್ಗಿ ಮತ್ತು ಅಣಬಿಯ ಶಿಲಾಫಲಕಗಳು

*

ವೀಣಾ ಎಂ. ಪಿ.*

ಹೂವಿನಹಡಗಲಿಯಲ್ಲಿ ದೊರೆತ ಕಲ್ಯಾಣ ಚಾಲುಕ್ಯರ ಇನ್ನೊಂದು ಅಪ್ರಕಟಿತ ಶಿಲಾಶಾಸನ

ಬಳ್ಳಾರಿ ಜಿಲ್ಲೆಯ ಹಡಗಲಿಯು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಪ್ರಮುಖ ಅಗ್ರಹಾರವಾಗಿತ್ತು. ಹಡಗಲಿಯಲ್ಲಿ ಇಂದಿಗೂ ಚಾಲುಕ್ಯರ ಆಳ್ವಿಕೆಗೆ ಸಂಬಂಧಿಸಿದ ಐತಿಹಾಸಿಕ ಅವಶೇಷಗಳು ಕಂಡುಬರುತ್ತವೆ. ಚಾಲುಕ್ಯ ವಾಸ್ತುಶೈಲಿಯ ದೇವಾಲಯಗಳು, ಆ ಕಾಲದ ಶಾಸನಗಳು ಕಾಣದೊರೆಯುತ್ತವೆ. ಇದೇ ಕಾಲಕ್ಕೆ ಸಂಬಂಧಿಸಿದ ಇನ್ನೊಂದು ಅಪ್ರಕಟಿತ ಶಾಸನ ಇತ್ತೀಚೆಗೆ ಹಡಗಲಿಯಲ್ಲಿ ದೊರೆತಿದೆ. ಶಾಸನವು ಕಲ್ಲೇಶ್ವರ ದೇವಾಲಯದ ನೈರುತ್ಯ ದಿಕ್ಕಿನಲ್ಲಿರುವ ಪಾಂಡುರಂಗ ದೇವಾಲಯದಲ್ಲಿ ದೊರೆತಿದೆ. ಪಾಂಡುರಂಗ ದೇವಾಲಯವು ಇತ್ತೀಚಿನ ದಿನಗಳಲ್ಲಿ ನಿರ್ಮಾಣವಾಗಿದೆ. ಪಾಂಡುರಂಗ ದೇವಾಲಯದ ಪಕ್ಕದಲ್ಲಿರುವ ಕೋಣೆಯ ಬಚ್ಚಲು ಮೋರೆಯನ್ನು ಮುಚ್ಚಲು ಶಾಸನದ ಕಲ್ಲನ್ನು ಬಳಸಿಕೊಳ್ಳಲಾಗಿತ್ತು. ಆ ಕಲ್ಲನ್ನು ಮಗುಚಿ ಹಾಕಿದಾಗ ಶಾಸನವಿರುವುದು ತಿಳಿದು ಬಂದಿತು.

ಪ್ರಸ್ತುತ ಶಾಸನವು ಸುಮಾರು ೪ ಅಡಿ ಉದ್ದ, ೨.೫ ಅಡಿ ಅಗಲವಿದ್ದು ೩೯ ಸಾಲುಗಳನ್ನು ಒಳಗೊಂಡಿದೆ. ಆರಂಭದ ಎರಡು ಸಾಲುಗಳನ್ನು ಶಾಸನದ ಮೇಲೆ ಪಟ್ಟಿಯಲ್ಲಿಯೂ ಕೊನೆಯ ಮೂರು ಸಾಲುಗಳನ್ನು ಕೆಳಪಟ್ಟಿಯ ಮೇಲೂ ಕೊರೆಯಲಾಗಿದೆ. ಮೊದಲ ಎರಡು ಸಾಲುಗಳ ಮಧ್ಯದಲ್ಲಿ ನಂದಿ ಚಿತ್ರವನ್ನು ಕೆತ್ತಲಾಗಿದೆ. ಶಾಸನದ ಲಿಪಿಗಳು ಸುಂದರವಾಗಿವೆಯಾದರೂ ಅವು ಅನೇಕ ಕಡೆ ನಾಶವಾಗಿದೆ. ಶಾಸನದ ಎಡಭಾಗವು ತುಂಡಾಗಿರುವುದರಿಂದ ಆರಂಭದ ೧೨ ಸಾಲುಗಳ ಕೊನೆಯ ಅಕ್ಷರಗಳು ತ್ರುಟಿತವಾಗಿವೆ.

ಪ್ರಸ್ತುತ ಶಾಸನವು ದಾನ ಶಾಸನವಾಗಿದ್ದು ಮುದ್ದರಸ ಎಂಬ ವ್ಯಕ್ತಿಯು ತನ್ನ ಸುಂಕದ ಆದಾಯವನ್ನು ಸೋಮೇಶ್ವರ ದೇವರಿಗೆ ದಾನ ಮಾಡಿದ ಉಲ್ಲೇಖವಿದೆ. ಚಾಲುಕ್ಯ ದೊರೆ ತ್ರಿಭುವನಮಲ್ಲನು ಕಲ್ಯಾಣದಲ್ಲಿ ಆಳುತ್ತಿದ್ದಾಗ ಅವನ ಕೈಕೆಳಗೆ ಮಹಾಮಂಡಲೇಶ್ವರ ತ್ರಿಭುವನಮಲ್ಲಪಾಂಡ್ಯದೇವನು ನೊಳಂಬವಾಡಿ ೩೨,೦೦೦ದಲ್ಲಿ ಕುಮಾರವೃತ್ತಿಯಿಂದ ಆಳ್ವಿಕೆ ನಡೆಸಿದ್ದನು. ಇವನೂ ಸುಂಕಾಧಿಕಾರಿ. ಮಹಾಮಾತ್ಯ ದಂಡನಾಯಕ ಮುದ್ದರಸನು ನೊಳಂಬವಾಡಿ ೩೨,೦೦೦ದ ಪನ್ನಾಯದ ಸುಂಕಾಧಿಕಾರಿಯಾಗಿದ್ದನು. ಈ ಮುದ್ದರಸನು ಚಾಲುಕ್ಯವಿಕ್ರಮ ವರ್ಷದ ೩೫ನೆಯ ವಿಕೃತ ಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದು ಅಗ್ರಹಾರ ಪೂವಿನಪಡಂಗಲಿಯ ೧೨೦ ಮಹಾಜನರ ಸನ್ನಿಧಾನದಲ್ಲಿ ತುಂಗಭದ್ರೆಯ ದಕ್ಷಿಣದಂಡೆಯ ಮೇಲಿರುವ ಸೋಮೇಶ್ವರದೇವರ ರಂಗಭೋಗಕ್ಕಾಗಿ, ನಿವೇದ್ಯಕ್ಕಾಗಿ ಶ್ರೀ ಕಲಿದೇವಸ್ವಾಮಿದೇವರ ಸ್ಥಾನದಾಚಾರ್ಯರಾದ ಖಳೇಶ್ವರ ಪಂಡಿತ ದೇವರ ಕಾಲನ್ನು ತೊಳೆದು ತಿಂಗಳಿಗೊಂದು ಎಲೆಯ ಹೇರು ಬಿಟ್ಟುಕೊಟ್ಟನು. ಶಾಸನದಲ್ಲಿ ಮುದ್ದರಸನ ಧರ್ಮಕಾರ್ಯವನ್ನು ಮತ್ತು ಖಳೇಶ್ವರಪಂಡಿತರ ಗುಣವನ್ನು ಹೊಗಳಲಾಗಿದೆ. ಗುಡಿ ದೇವಾಲಯಗಳನ್ನು, ಕೆರೆಗಳನ್ನು, ಕಟ್ಟಿಸಿದ ಹಾಗೂ ಜೀರ್ಣೋದ್ಧಾರ ಮಾಡಿದಂಥ ಮುದ್ದರಸನನ್ನು ಹೋಲುವ ವ್ಯಕ್ತಿ ಮತ್ತೊಬ್ಬನಿಲ್ಲ ಎಂದು ಶಾಸನ ವಿವರಿಸಿದೆ. ಅಂತೆಯೇ ಖಳೇಶ್ವರಪಂಡಿತನನ್ನು ಬ್ರಹ್ಮಚರ್ಯದಲ್ಲಿ ಭೀಷ್ಮನಿಗೆ ಹೋಲಿಸಲಾಗಿದೆ.

ಶಾಸನದಲ್ಲಿ ಉಲ್ಲೇಖಿತ ಮುದ್ದರಸನ ವಿವರಣೆ ಬಾಗಳಿ, ಸೋಗಿ ಮತ್ತು ನೀಲಗುಂದದ ಶಾಸನಗಳಲ್ಲಿ ದೊರೆಯುತ್ತದೆ. ಇದುವರೆಗೂ ಶಾಸನಗಳ ಆಧಾರದಿಂದ ಮುದ್ದರಸನ ಕಾಲವನ್ನು ಕ್ರಿ.ಶ. ೧೧೦೩ರಿಂದ ಕ್ರಿ.ಶ. ೧೧೧೦ರ ವರೆಗೆ ಎಂದು ನಿರ್ಧರಿಸಲಾಗಿತ್ತು. ಹಡಗಲಿಯ ಶಾಸನದಿಂದ ಮುದ್ದರಸನು ಕ್ರಿ.ಶ. ೧೧೧೩ರವರೆಗೆ ಸುಂಕಾಧಿಕಾರಿಯಾಗಿದ್ದ ಎಂಬುದು ತಿಳಿದು ಬರುತ್ತದೆ. ಬಾಗಳಿಯ ಶಾಸನದಲ್ಲಿ ಮುದ್ದರಸನು ತಾನು ಚಕ್ರವರ್ತಿ ವಿಕ್ರಮಾದಿತ್ಯನ ಪಾದಪದ್ಮೋಪಜೀವಿ ಎಂದು ಹೇಳಿ ಕೊಂಡಿದ್ದಾನೆ. ಶಾಸನ

* ಸಂಶೋಧನ ವಿದ್ಯಾರ್ಥಿ, ಚರಿತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ - ೫೮೩ ೨೭೬

ವಲ್ಲಿ ಇವನನ್ನು 'ಶ್ರೀ ಮದಚ್ಚುಪನ್ನಾಯದಧಿಷ್ಠಾಯಕಂ ದಣ್ಣನಾಯಕಂ ಮುದ್ದರಸನು' ಎಂದು ಕರೆಯಲಾಗಿದೆ. ಕ್ರಿ. ಶ. ೧೧೧೧ ರ ಸೋಗಿಯ ಶಾಸನದಲ್ಲಿ ಇವನ ಉಲ್ಲೇಖವಿದ್ದರೂ ಶಾಸನ ಹೆಚ್ಚು ಸ್ಪಷ್ಟವಾಗಿಲ್ಲವಾದ್ದರಿಂದ ಮಾಹಿತಿ ದೊರೆಯುವುದಿಲ್ಲ. ನೀಲಗುಂದದ ಕ್ರಿ.ಶ. ೧೧೧೦ರ ಶಾಸನದಲ್ಲಿ ಕಿರ್ಬಟ್ಟೆಯ ಸುಂಕದ ಅಧಿಕಾರಿಯಾಗಿದ್ದ ಬಗ್ಗೆ ಮತ್ತು ನೀರ್ಗುಂದದ ಸ್ವಯಂಭೂ ಭೀಮೇಶ್ವರದೇವರಿಗೆ ಬಿಟ್ಟ ದಾನದ ವಿವರಣೆ ಇದೆ. ಹಡಗಲಿಯ ಶಾಸನವು ಮುದ್ದರಸನು ಕ್ರಿ. ಶ. ೧೧೧೩ರಲ್ಲಿ ನೊಳಂಬವಾಡಿ ೩೨,೦೦೦ದ ಸುಂಕಾಧಿಕಾರಿಯಾಗಿದ್ದ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಹಡಗಲಿ ಪರಿಸರದ ಕೆಲವು ಹಳ್ಳಿಗಳಲ್ಲಿರುವ ಶಾಸನಗಳ ಆಧಾರದಿಂದ ಖಳೇಶ್ವರಪಂಡಿತರ ಅಂದರೆ ಶ್ರೀಕಲಿದೇವಸ್ವಾಮಿ ದೇವರ ಸ್ಥಾನದಾಚಾರ್ರ್ಯರ ಪರಂಪರೆ ತಿಳಿದು ಬರುತ್ತದೆ. ಲಕುಳ ಪಂಥಕ್ಕೆ ಸೇರಿದ ಮಲಯಾಳಿಪಂಡಿತ ಪರಂಪರೆಯ ಮಾದಿನೀರು ತೀರ್ಥದ ಶ್ರೀ ಸೋಮೇಶ್ವರದೇವಪಂಡಿತರಿಂದ ಸುಂತಿರಾಶಿ ಪಂಡಿತ, ಖಳೇಶ್ವರ ಪಂಡಿತರ ಉಲ್ಲೇಖ ದೊರೆಯುತ್ತದೆ. ಪ್ರಸ್ತುತ ಶಾಸನ ಖಳೇಶ್ವರ ಪಂಡಿತರ ತಪೋನಿಷ್ಠೆ, ಶೀಲಗುಣ ಸಂಪನ್ನತೆ, ಕಟ್ಟುನಿಟ್ಟಾದ ಬ್ರಹ್ಮಚರ್ಯ ಪರಿಪಾಲನೆ ಮುಂತಾದವುಗಳನ್ನು ಕುರಿತು ವಿವರಣೆ ನೀಡುತ್ತದೆ. ಈ ಶಾಸನವನ್ನು ಬರೆದ ಕವಿ ಕಂಠಾಭರಣ ಎಂದು ಉಲ್ಲೇಖಿತವಾಗಿದೆ.

ಶಾಸನ ಪಾಠ

೧ . . . . . . ನಮಸ್ತುಂಗ ಶಿರಶ್ಚುಂಬಿಚನ್ದ್ರ. . . . ಚಾರವೇ. . . .

೨ . . . . . . ಕ್ಯನಗರಾರಂಭ ಮೂಲಸ್ತಂಭಾಯಶ( ). .

೩ ಸ್ವಸ್ತಿಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾ.

೪ ಶ್ವರ ಪರಮಭಟ್ಟಾರಕಂ ಸತ್ಯಾಶ್ರಕುಳ ತಿಳಕಂ ಚಾಳು. . .

೫ . . . .ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ . . . .

೬ ಮಾಚನ್ದ್ರಾರ್ಕತಾರಂ ಸಲುತ್ತಂ ಕಲ್ಯಾಣದನೆಲವೀಡಿನೊಳ್. . . . .

೭ ವಿಸದ್ಧೃಡದಿಂರಾಜ್ಯಂಗೆಯ್ಯುತ್ತಮಿರೆ ತತ್ಪಾದ ಪದ್ಮೋಪ ಜೀವಿಸಮಸ್ತಪ್ರಶ[ಸ್ತಿ]. . .

೮ ಮನ್ಮಹಾಮಣ್ಡಳೇಶ್ವರಂ ತ್ರಿಭುವನಮಲ್ಲ ಪಾಡ್ಯದೇವನ್ನೊಳಂಬವಾಡಿಮೂ. . . .

೯ ರಮುಮಂ ಕುಮಾರವೃತ್ತಿಯಿನ್ದಂ ಸುಖದಿನಾಳುತ್ತಮಿರೆ ಸ್ವಸ್ತಿಸಮಸ್ತ ರಾಜ್ಯ. . . .

೧೦ . . . . ಮಹಾಮಾತಪಿಡವೀವಿರಾಜು ಮಾನಮಾನೊನ್ನತ ಪ್ರಭುಮನ್ತ್ರೋತ್ಸಾ. . . .

೧೧ ತ್ರಯ ಸಂಪನ್ನರಪ್ಪ ಶ್ರೀ ಮದಚ್ಚುಪನ್ನಾಯದಧಿಷ್ಟಾಯ ಕಂದಣ್ಣ ನಾಯಕ. . . .

೧೨ ರಸರು ನೊಳಂಬವಾಡಿ ಮೂವತ್ತಿರ್ಚ್ಛಾಸಿರದ ಪನ್ನಾಯದ ಸುಂಕಮಂನು. . . .

೧೩ ತ್ರಮಿಮ್ದಿ ಶ್ರೀ ಚಾಳುಕ್ಯವಿಕ್ರಮ ವರಿಷದ ೩೫ನೆಯ ವಿಕೃತಸಂವತ್ಸರದ. . . .

೧೪ ಉತ್ತರಾಯಣ ಸಂಕ್ರಾಂತಿಯನ್ದು ಶ್ರೀ ಮದಗ್ರಹಾರ ಪೂವಿನಪಡಂಗಲಿಯ ಮ

೧೫ ಹಾಜನಂ ನೂಱುರ್ಪ್ಪದಿಂಬರಂಸನ್ನಿಧಾನದಲು ಶ್ರೀ ತುಂಗಭದ್ರೆಯ ತೆಂಕದಡಿಯ ಸೋಮೇ

೧೬ ಶ್ವರದೇವರ ರಂಗಭೋಗಕ್ಕಂ ನಿವೇದ್ಯಕ್ಕಂ ಪನ್ನಾಯದ ಸುಂಕದೊಳಲ್ಲಿಯಾಚಾರ್ಯರಪ್ಪ

೧೭ ಸ್ವಸ್ತಿ ಯಮನಿಯಮಸ್ವಾಧ್ಯಾಯ ಧ್ಯಾನಧಾರಣಮೋನಾನುಷ್ಠಾಣಜಪಸಮಾ

೧೮ ಧಿಶೀಳಗುಣ ಸಂಪನ್ನರುಂ ಶ್ರೀ ಕಲಿದೇವಸ್ವಾಮಿ ದೇವರ ಸ್ಥಾನದಾಚಾರ್ಯ್ಯ

೧೯ ರುಮಪ್ಪ ಖಳೇಶ್ವರಪಣ್ಡಿತದೇವರ ಕಾಲಂಕಳ್ಚಿ ಧಾರಪೂರ್ವಕಂ ಮಾಡಿ

೨೦ ತಿಂಗಳಿಂಗೊನ್ದೆಲೆಯ ಹೇನಸುಂಕಮಂ ಬಿಟ್ಟರು ಈ ಧರ್ಮ್ಮಮಂನುಜಿ‌ರ್ಪ್ಪದಿಂಬ

೨೧ ರುಂ ಪತಿಪಾಳಿಸುವರ್ ಈ ಧರ್ಮ್ಮಮನಾರೊರ್ವ್ವರು ನಡೆಯಿಸಿದವರ್ಗ್ಗೆ ವಾರಣಾಸಿ ಕು

೨೨ ರುಕ್ಷೇತ್ರಂ ಪ್ರಯಾಗೆಯಘ್ರ್ಯವೆಂಬೀ ಪುಣ್ಯಕ್ಷೇತ್ರಂಗಳೊಳ್ ಸಾಯಿರ ಕವಿಲೆಯ

೨೩ ಕೋಡುಂಕೊಳಗುಮಂ ಪೊನ್ನಳಂ ಪಂಚರತ್ನದೊಳ್ ಕಟ್ಟಿಸಿ ಚತುರ್ವ್ವೇದ ಪಾರಗರಪ್ಪ ಸಾ

೨೪ ಸಿರ್ವ್ವರು ಬ್ರಾಹ್ಮಣರ್ಗ್ಗೆ ಸೂರ್ಯ್ಯಗ್ರಹಣದೊಳುಭಯಮುಖಿಗೊಟ್ಟ ಫಲ

೨೫ ಮಕ್ಕುಮಿದನಳಿದವರ್ಗ್ಗೆವಳಿವವರೊಡಂಬಟ್ಟವರ್ಗ್ಗವಾತೀರ್ತ್ಥಂಗಳೊಳಾಕವಿಲೆಗ[ಳ]

೨೬ ನಾಬ್ರಾಹ್ಮಣರುಮನಾಕಾಲದೊಳ್ಳಿದಮಹಾಪಾತಕನಕ್ಕಂ॥ ಸ್ವದತ್ತಂ ಪರದತ್ತಂ

೨೭ ಯೋಹರೇತ್ತು ವಸುನ್ಧರಾ ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ॥ ಸಾಮಾ

೨೮ ನ್ಯೋಯಂ ಧರ್ಮಸೇತು ನೃಪಾಣಾಂ ಕಾಲೇ ಕಾಲೇ ಪಾಲನೀಯೊಭವದ್ಭಿಃ ಸರ್ವನೇತಾನ್‌ಭಾ

೨೯ ವಿನಃ ಪಾರ್ತ್ಥಿವೇನ್ದ್ರಾಯ ನ್ಭೂಯೋಯಾಚತೇರಾಮಭದ್ರ॥ ಕೆಱೆಯಂ

೩೦ ಕಟ್ಟಿಸುತಿರ್ಪ್ಪದೇಗುಲಮನಾರೆದೆತ್ತಿಸುತ್ತಿಸುತಿರ್ಪ್ಪಾಮನ್ಸೋಯುಂಬಾರದು

೩೧ ರ್ಮಾನಸರ್ವ್ವದೆನಿರಾಭಾರಂಗಳಂ ಮಾರ್ಪ್ಪನಿರ್ವ್ವಾಹಾದಲ್ಲಿ ಜಲಂಗಳಂ ಪಡೆದು ಧ

೩೨ ರ್ಮತಂಗಳಂ ಮಾರ್ಪ್ಪಕೂಳ್ವನಂ ಬಾರಿಸುತಿರ್ಪ್ಪ ಮುದ್ದರಸನಂ ಪೋಲ್ಪನ್ನನಾ

೩೩ ವೊನ್ನರಂ ಸನ್ದನಾರದನನ್ನೊವಂಸನ್ದ. . . .ಕಂ. . . . ಭೀಷ್ಮ ನೀಖಳೇಶ್ವರ ಮುನಿಪಂಕು

೩೪ ನ್ದದಿನಿಬಸ್ಸೆದಾಂಶು ಬೆಯೆದ್ದವರ್ ಬ್ರಹ್ಮಚಾರಿಗಳನೆಲೆ ಪೊಗಳ್ಗುಂ ವ್ಯಸನಂಗಳೊ

೩೫ ಳುಮಾ ಪಸರರಿಷಡ್ವರ್ಗ್ಗ ಮೂಜಗಮ ಯಲೆಸೆವ ಖಳೇಶ್ವರ ಪಂಡಿ

೩೬ ತರಸಮೀಪದೊಳಂತ್ರಿಶುದ್ಧಿಯೊಳ್ ಮಿಜರವಿನ್ದು॥ ಬರೆದಂ ಕವಿಕಂಠಾಭರಣ

೩೭ ಅಸದೃಶಯೆನೆವಾಗ್ವಿಷಯನೆಸೆವ ಖಳೇಶ್ವರ ಮುನೀಂದ್ರರಾದದದಿಂ. . . .

೩೮ ಮಾಡಿಸಿದೊಡೆದೇವಿಪಡಂಗಿಲೆಗೊಸೆವಿತ್ತಳ್ ವಿದ್ದೆ ಸಹಿತ

೩೯ ಮಾಯುಂಶ್ರೀಯುಂ॥

(ಈ ಲೇಖನವನ್ನು ಸಿದ್ಧಪಡಿಸಲು ಸಹಾಯಮಾಡಿದ ಶ್ರೀ ಕಲ್ವೀರ ಮನ್ಸಾಚಾರ್, ಡಾ। ದೇವರಕೊಂಡಾರೆಡ್ಡಿ ಮತ್ತು ಪ್ರೊ। ಲಕ್ಷ್ಮಣ್ ತೆಲಗಾವಿಯವರಿಗೆ ಕೃತಜ್ಞಳಾಗಿದ್ದೇನೆ.)

*

ಡಾ॥ ಚನ್ನಬಸಪ್ಪ ಎಸ್. ಪಾಟೀಲ್*

ಆರನೆಯ ವಿಕ್ರಮಾದಿತ್ಯನ ಜಲದುರ್ಗದ ಶಾಸನ

ಕಲ್ಯಾಣಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಶಾಸನಗಳ ಅಧ್ಯಯನವನ್ನು ಡಾ.ಜೆ.ಎಂ. ನಾಗಯ್ಯ ಅವರು ಈಗಾಗಲೇ ಕೈಗೊಂಡಿದ್ದು, ಅವರ ಸಂಶೋಧನೆಯನ್ನು ಪ್ರಕಟಿಸಿದ್ದಾರೆ.[೧] ತದನಂತರ ರಾಯಚೂರು ಜಿಲ್ಲೆಯ ಲಿಂಗ ಸುಗೂರು ತಾಲೂಕಿನ ಜಲದುರ್ಗದಲ್ಲಿರುವ ಶಾಸನವು ಬೆಳಕಿಗೆ ಬಂದಿದೆ.

ಜಲದುರ್ಗ, ಕೃಷ್ಣಾ ನದಿಯ ಮಧ್ಯದಲ್ಲಿದೆ. ಇಲ್ಲಿ ನದಿಯು ಕವಲೊಡೆದು ಮುಂದೆ ಸಾಗಿ ಮತ್ತೆ ಒಂದುಗೂಡುವಾಗ ಒಂದು ನಡುಗಡ್ಡೆಯು ನಿರ್ಮಾಣವಾಗಿದೆ. ಇಲ್ಲಿರುವ ಕೋಟೆಯಿಂದ ಊರಿಗೆ ಜಲದುರ್ಗವೆಂಬ ಹೆಸರು ಬಂದಿದೆ. ಶಾಸನವಿರುವ ಕಲ್ಲನ್ನು ನಂತರದ ಕಾಲದಲ್ಲಿ ಆಂಜನೇಯನ ಶಿಲ್ಪವನ್ನು ಕೆತ್ತಲು ಉಪಯೋಗಿಸಲಾಗಿದೆ. ಶಾಸನದ ಹಿಂಬದಿಯಲ್ಲಿ ಶಿಲ್ಪವನ್ನು ಕೆತ್ತಿದೆ. ಶಾಸನ ಮತ್ತು ಶಿಲ್ಪ ಒಡೆದು ತುಂಡಾಗಿವೆ.

ಶಾಸನದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗವು ಚಾಳುಕ್ಯ ವಿಕ್ರಮ ವರ್ಷದ ೧೨ನೆಯ ಪ್ರಭವ ಸಂವತ್ಸರದ ಆಷಾಢ ಶುದ್ಧ ಆದಿತ್ಯವಾರ ದಕ್ಷಿಣಾಯಣ ಸಂಕ್ರಾಂತಿಯ ಪರ್ವದಂದು, ಅಂದರೆ ಕ್ರಿ.ಶ. ೧೦೮೭ ಜೂನ್ ೬ ಅಥವಾ ೧೩ರಂದು ಕುಡುಗುಂದೆಯ ಮಹಾಜನಗಳು ಶ್ರೀ ಧನಂಜಯೇ(ಶ್ವರ) ದೇವರಿಗೆ ಭೂಮಿ ಮತ್ತು ನಿವೇಶನವನ್ನು ದಾನವಾಗಿ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.

ಎರಡನೆಯ ಭಾಗವು ಚಾಳುಕ್ಯ ವಿಕ್ರಮ ವರ್ಷದ ೪೫ನೆಯ ಶಾರ್ವರಿ ಸಂವತ್ಸರದ ಶ್ರಾವಣ ಶುದ್ಧ ೧೦ ಬುಧವಾರದಂದು, ಅಂದರೆ ಕ್ರಿ.ಶ. ೧೧೨೦, ಜುಲೈ ೭ರಂದು ಅನೇಕ ವ್ಯಕ್ತಿಗಳು ಅದೇ ದೇವರಿಗೆ ದಾನ ಕೊಟ್ಟಿದ್ದನ್ನು ದಾಖಲಿಸುತ್ತದೆ. ಮಹಾಪ್ರಧಾನ ಮನೆವೆರ್ಗಡೆ ದಂಡನಾಯಕ ಗೋವಿಂದಮಯ್ಯನ ಆದೇಶದ ಮೇರೆಗೆ ಕರಡಿಕಲುನಾಡ ವಡ್ಡರಾವುಳದ ಸುಂಕವೆರ್ಗ್ಗಡೆ ಬಾಚಿಮಯ್ಯನಾಯಕ ಕುಡುಗುಂದೆಯ ಸ್ಥಳದ ಒಂದೊಕ್ಕಲು ತೆರೆಯ ೫ ಪಣಗಳನ್ನು ಬಿಟ್ಟನು. ನಾಡ ಮೇಲಾಳ್ಕೆಯ ಮಂಡಳಿಕ ಚೇತರಸನ ಆದೇಶದ ಮೇರೆಗೆ ನಾಡ ಹೆಜ್ಜುಂಕದ ಸುಂಕವೆಗ್ಗಡೆ ವಿಟ್ಟಭಟ್ಟ ಆ ಊರಿನ ಒಕ್ಕಲು ತೆರೆಯನ್ನು ಬಿಟ್ಟನು. ನಾಡ ಮನ್ನೆಯ ಮಂಡಳಿಕ ಭೂತರಸನ ಆದೇಶದ ಮೇರೆಗೆ ಊರೊಡೆಯ ಧನಂಜರಸ ಬಿಲ್ಕೊಡೆ, ಬೀರವಣ, ಸೇಸೆ, ಒಕ್ಕಲುತೆರೆ ಬಿಟ್ಟನು. ಪೊನ್ನಕಣೆಯ ದಂಡನಾಯಕ ಬಿಟ್ಟರಸನ ಆದೇಶದ ಮೇರೆಗೆ ಹೆಗ್ಗಡೆ ಕಾವಣಭಟ್ಟನು ತಿಂಗಳುದೆರೆ, ಸೇಸೆ ಬಿಟ್ಟನು. ಕರಡಿಕಲು ೩೦೦ರ ಸೆಟ್ಟಿಗುತ್ತ ನಾಮಿಸೆಟ್ಟಿ, ಕೇಸವಸೆಟ್ಟಿ ಮುಂತಾದವರು, ಗವರೆಯವರು, ಗಾತ್ರಿಗರು, ಬೀರರು, ಜೀರವಣಿಗರು, ಒಕ್ಕಲು ಮಕ್ಕಳು ತಾವು ಕೊಂಡ ಮತ್ತು ಮಾರಿದ ವಸ್ತುಗಳ ಮೇಲೆ ಒಂದು ಭಾಗವನ್ನು ದೇವರಿಗೆ ಕೊಟ್ಟರು. ತೆಲ್ಲಿಗರು ಗಿದ್ದ ಸೊಲ್ಲಗೆ ಎಣ್ಣೆಯನ್ನು ಮತ್ತು ಹೊನ್ನಕಣೆಯ ತಳದಬೋವರಾದ ಚೆಣ್ಣಬೋವ ಮುಂತಾದವರು ಮತ್ತು ಬಿಲ್ಲ ಮುನ್ನೂರ್ವರು ದೇವರ ನಂದಾದೀವಿಗೆಗೆ ೨ ಗಾಣಗಳನ್ನು ಬಿಟ್ಟರು.

ಶಾಸನದ ಕಲ್ಲನ್ನು ನಂತರದ ಕಾಲದಲ್ಲಿ ಶಿಲ್ಪವನ್ನು ಕೆತ್ತಲು ಉಪಯೋಗಿಸಿರುವುದರಿಂದ ಅದು ಮೊದಲಿದ್ದ ಸ್ಥಳದಲ್ಲಿದೆಯೋ ಅಥವಾ ಬೇರೆಕಡೆಯಿಂದ ತರಲಾಗಿದೆಯೋ ಎಂದು ಹೇಳುವುದು ಕಷ್ಟ. ಮೊದಲಿದ್ದ ಸ್ಥಳದಲ್ಲಿಯೇ ಇದ್ದರೆ ಶಾಸನವಿರುವ ಊರಾದ ಜಲದುರ್ಗವನ್ನು ಕುಡುಗುಂದೆಯೆಂದು ಕರೆಯುತ್ತಿದ್ದರೆಂದು ಹೇಳಬಹುದು.

ಶಾಸನದಲ್ಲಿ ಉಲ್ಲೇಖಗೊಂಡ ಕರಡಿಕಲು ೩೦೦ ಎಡದೊರೆನಾಡಿನ ಉಪ ವಿಭಾಗವಾಗಿತ್ತು. ಇದು ಲಿಂಗ ಸೂಗೂರು ತಾಲೂಕಿನ ಕರಡಕಲ್ ಸುತ್ತಮುತ್ತಲ ಪ್ರದೇಶವನ್ನೊಳಗೊಂಡಿತ್ತು. ಶಾಸನದಲ್ಲಿ ಉಲ್ಲೇಖಗೊಂಡ ಮಂಡಳಿಕ ಭೂತರಸನು ಕದಂಬ ವಂಶದವನು. ಇವನು ಕರಡಿಕಲು ೩೦೦ರನ್ನು ಆಳುತ್ತಿದ್ದನು. ಭೂತರಸನ ಉಲ್ಲೇಖ ಲಿಂಗಸುಗೂರು[೨] ಮತ್ತು ನವಲಿಯ[೩] ಶಾಸನಗಳಲ್ಲಿಯೂ ಇದೆ.

---

* ಉಪ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು-೫೭೦ ೦೦೧

ಪ್ರಸ್ತುತ ಶಾಸನದಲ್ಲಿ ಅನೇಕ ಅಧಿಕಾರಿಗಳ ಉಲ್ಲೇಖವಿದೆ: ಮಹಾಪ್ರಧಾನ ಮನೆವೆರ್ಗ್ಗಡೆ ದಂಡನಾಯಕ ಗೋವಿಂದಮಯ್ಯ, ಕರಡಿಕಲುನಾಡ ವಡ್ಡರಾವುಳದ ಸುಂಕವೆರ್ಗ್ಗಡೆ ಬಾಚಿಮಯ್ಯ ನಾಯಕ, ನಾಡ ಮೇಲಾಳ್ಕೆಯ ಮಂಡಳಿಕ ಬೇತರಸ, ನಾಡ ಹೆಜ್ಜುಂಕದ ಸುಂಕವೆಗ್ಗಡೆ ವಿಟ್ಟಭಟ್ಟ, ಪೊನ್ನಕಣೆಯ ದಂಡನಾಯಕ ಬಿಟ್ಟರಸ, ಊರೊಡೆಯ ಧನಂಜರಸ ಮತ್ತು ಹೆಗ್ಗಡೆ ಕಾವಣಭಟ್ಟ. ಇವರಲ್ಲಿ ಮಹಾಪ್ರಧಾನ ಮನೆವೆರ್ಗ್ಗಡೆ ದಂಡನಾಯಕ ಗೋವಿಂದಮಯ್ಯನ ಉಲ್ಲೇಖ ಗುಲ್ಬರ್ಗ ಜಿಲ್ಲೆಯ ಅಫ್ಜಲಪುರ ತಾಲೂಕಿನ ಮಾಶಾಳದಲ್ಲಿಯ ಶಾಸನದಲ್ಲಿದೆ[೪]. ಉಳಿದ ಅಧಿಕಾರಿಗಳ ಹೆಸರುಗಳು ಪ್ರಸ್ತುತ ಶಾಸನದಿಂದ ಮೊದಲಬಾರಿಗೆ ಬೆಳಕಿಗೆ ಬಂದಿವೆ.

ಶಾಸನದಲ್ಲಿ ಚಿನ್ನದಗಣಿಯ ಪ್ರಸ್ತಾಪವಿದೆ. ಬಿಟ್ಟರಸನು ಪೊನ್ನಕಣೆಯ ದಂಡನಾಯಕನಾಗಿದ್ದನು. ಹೊನ್ನಕಣಿಯ ತಳದ ಬೋವರು ದೇವರಿಗೆ ದಾನವನ್ನು ಮಾಡಿದರು. ಹಟ್ಟಿಯಲ್ಲಿರುವ ಚಿನ್ನದ ಗಣಿಯು ಪ್ರಾಚೀನವಾದದ್ದು. ಸರಳ ರೇಖೆಯಲ್ಲಿ ಇದು ಜಲದುರ್ಗದಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಶಾಸನದ ಪೊನ್ನಕಣೆ ಅಥವಾ ಹೊನ್ನಕಣೆ ಹಟ್ಟಿಯ ಚಿನ್ನದ ಗಣಿಯೇ ಆಗಿರಬಹುದು.

ಶಾಸನದ ಪಾಠ

೧ ಶ್ರೀ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ[ಮ]
ಹಾರಾಜಾಧಿರಾಜ ರಾಜ ಪರಮೇಶ್ವರಂ ಪರಮಭಟ್ಟಾ

೨ ರಕ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣ[ಂ]
ಶ್ರೀಮತ್ರಿಭುವನ ಮಲ್ಲದೇವರ ವಿಜಯ

೩ [ರಾ]ಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾ
ಚಂದ್ರಾರ್ಕತಾರಂ ಕಲ್ಯಾಣಪುರದ ನೆಲೆವೀಡಿನೊಳು

೪ [ಸು]ಖಸಂಕಥಾ ವಿನೋದದಿಂ ರಾಜ್ಯಂಗೆಯುತ್ತಮಿರೆ
ಶ್ರೀಮಚ್ಚಾಳುಕ್ಯ ವಿಕ್ರಮ ವರ್ಷದ ೧೨ನೆ

೫ ಯ ಪ್ರಭವ ಸಂವತ್ಸರದ ಆಷಾಢ ಶುದ್ಧ[ಆ]ದಿತ್ಯವಾರದನ್ದು
ದಕ್ಷಿಣಾಯಣ ಸಂಕ್ರಾ

೬ ನ್ತಿಯ ಪರ್ವದನ್ದು ಶ್ರೀಮತ್ರಿಭುವನಮ. . . . . ಕ
ಕುಡುಗಂ . .

೭ ಶೇಷಮಹಾಜನಂಗಳು ಶ್ರೀಧನಂಜಯೇ. . . . .
[ಪುನ] ಸ್ಕಾರಕ್ಕಂ ಬಿಟ್ಟ ಕೆಯಿ. . .

೮ ಪುರದ ಯಿಂದಲಾದ ಸೊಲಗೆ. . . . [ಮಾ]ಣಿಕೇಶ್ವರದ
ಬೆಂಕೊಳ್ವನ ಗಡಿಂಬದ ಮತ್ತರು ೧೨ ಮತ್ತು

೯ ಹತ್ತು ಹು. ಸೆಜುಂ ಮೂ[ಗ]. . . ೧೨ ಆ ದೇವಾಲಯಂದಿ
ತೆಂಕ ಹನ್ನಿಕ್ಕಯ್ಯಗಲದ ಮೂವತ್ತ ಕೆಯ್ಯಿ

೧೦ ಳದ ಮನೆಯ ನಿವೇಶನಂ . ಹಳ್ಳದಿಂ ಮೂಡ ಭಳಾರಿ
ಮಾರಕಬ್ಬೆಯಿಂ ಪಡುವ ತೋಂಟ ಮತ್ತರು ೧ ಮತ್ತಂ
ಶ್ರೀಮ

೧೧ ಚ್ಚಾಳುಕ್ಯ ವಿಕ್ರಮ ವರ್ಷದ ೪೫ನೆಯ ಶಾರ್ವರಿ ಸಂವತ್ಸರದ
ಶ್ರಾವಣ ಸುದ್ಧ ೧೦ ಬುಧವಾರದನ್ದು

೧೨ ಶ್ರೀಮನ್ಮಹಾಪ್ರಧಾನ ಮನೆವೆರ್ಗ್ಗಡೆ ದಣ್ಣನಾಯಕಂ ಗೋವಿನ್ದ
ಮಯ್ಯಗಳ ಬೆಸದಿಂ ಕರಡಿಕ

೧೩ ಲುನಾಡ ವಡ್ಡರಾವುಳದ ಸುಂಕವೆರ್ಗ್ಗಡೆ ಬಾಚಿಮಯ್ಯ
ನಾಯಕಂ ಕುಡುಗುಂದೆಯ ಸ್ಥಳದ ೭೦

೧೪ ದೊಕ್ಕಲು ತೆರೆಮೆನ್ದು ಬಿಟ್ಟ ಪಣ ೫ ನಾಡಮೇಲಾಳ್ಕೆಯ
ಮಣ್ಡಳಿಕಂ ಬೇತರಸನ ಬೆಸದಿಂದಾನಾ

೧೫ ಡ ಹೆಜ್ಜುಂಕದ ಸುಂಕವೆಗ್ಗಡೆ ವಿಟ್ಟಭಟ್ಟನಾಯೂರಲುತ್ತಮಕ್ಕೆ
ತಿರುವೊಕ್ಕಲತೆರೆ ೧ ಮತ್ತವಾ

೧೬ ನಾಡ ಮನ್ನೆಯ ಮಣ್ಡಳಿಕ ಬೂತರಸನ ಬೆಸದಿಂದಾ
ಯೂರೂವೊಡೆಯಂ ಧನಂಜರಸ ಬೆಲ್ಕೊಡೆ

೧೭ ಬೀರವಣ ಸೇಸೆ ಬಿಡುಗೊಳೊಳಗಾಗಿ ಬಿಟ್ಟ ತೆರೆಯುತ್ತಮ
ದೊಕ್ಕಲು ೧ ಪೊನ್ನಕಣೆಯ ದಣ್ಡನಾ

೧೮ ಯಕಂ ಬಿಟ್ಟರಸನ ಬೆಸದಿಂ ಹೆಗ್ಗಡೆ ಕಾವಣಭಟ್ಟರು
ತಿಂಗಳುದೆರೆ ಸೇಸೆ ಬೆಡುಂಗೊಳೊಳಗಾ

೧೯ ಗಿ ಬಿಟ್ಟ . ಣೆ ೨ ಮತ್ತು . ಶೇಷಮಹಾಜನಂಗಳ
ಸನ್ನಿಧಾನದಲು ತಳದ ಬಣಂಜ ಕರಡಿಕಲು

೨೦ ೩೦೦ರರ ಸೆಟ್ಟಿಗುತ್ತ ನಾಮಿಸೆಟ್ಟಿಯುಂ ಕೇಸವಸೆಟ್ಟಿಯುಂ
ಅಡಕೆಯ ರೇವಿಸೆಟ್ಟಿಯುಂ

೨೧ ಸೆಟ್ಟಿಯುಂ ಅಡಿಯಮಸೆಟ್ಟಿಯು ಮುಪ್ಪಿಸೆಟ್ಟಿಯುಂ
ಜಮಿಸೆಟ್ಟಿಯುಂ

೨೨ . . ಹಿಸೆಟ್ಟಿಯುಂ ಬಿದೊರೆ ಭಾ . . ರ ಸೆಟ್ಟಿಯುಂ
ಮುಂಜೆ ಸೆಟ್ಟಿಯುಂ ಸ

೨೩ ಗವರೆಯುಂ ಗಾತ್ರಿಗರುಂ ಬೀರರು ಬೀರವಣೆಗರುಂ ನಾಗ
. . . ಪಸೆಟ್ಟಿ ಇನ್ತಿವರೇಕಮತ್ಯರಾಗಿ ತಾವು

೨೪ ಬಿಟ್ಟ ಧಮ್ಮಂ ಹೇರಿಬನ್ದು ಮಾರಿ. ಭಣ್ಡಕೆ ಹೊಂನವ ೧
. . ತಮ್ಮ ಕೊಣ್ಡ ಭಣ್ಡಕ್ಕೆ ಪೆ

೨೫ ಗೆ ಕೊಟ್ಟ ದೇವಮಾನ ೧ ಹನ್ನವಣ ಮಾರುಗೊಣ್ಡ
ಹೇರಿಂಗೆ ಕೊಟ್ಟ ಎಲೆ ೨೫ ಹೇರಿಗೆ ೧೨

೨೬. ಅಲ್ಲಿಯಶೇಷವೊಕ್ಕಲ ಮಕ್ಕಳು ಮಹಾಜನಂಗಳ
ಸನ್ನಿಧಾನದಲು ತಮ್ಮ ಮಾರಿದ ಭಂಡಕೆ ಹೊಂ

೨೭. ಗೆ ಬಿಟ್ಟ ದೇವಮಾನ ೧ ಅಲ್ಲಿಯಶೇಷ ತೆಲ್ಲಿಗರು ದೇವರ ನನ್ದಾದೀವಿಗೆಗೆಯಾಡಿದ ಗಾಣ

೨೮. ದಲು ಕೊಟ್ಟ ಎಣ್ಣೆ ಗಿದ್ದ ಸೊಲ್ಲಗೆ ಅಲ್ಲಿಯ ಹೊನ್ನಕಣೆಯ ತಳದ ಬೋವರು ಚಿಣ್ಣಬೋವ ಆ

೨೯. ನೆಯ ಕೇತಬೋವ ದೊಡ್ಡಬಮ್ಮಬೋವ ಹಾಲಬೋವ ಕೊಂಕಬೋವ ಯಿನ್ತಿವರು ಪ್ರಮು

೩೦. ಖವೆನಿಸು ಕುಳಿಯ ಬೋವುಗಳಾದರನಿಬರುಂ ಬಿಲ್ಲ ೩೦೦ರ್ವ್ವರುಂ ಬಿಟ್ಟ ಧರ್ಮ್ಮಂ ಬೋವರಲರೆ

೩೧. ಭಾಗ ಮಹಾಜನಂಗಳು ದೇವರ ನನ್ದಾದೀವಿಗೆಗೆ ಬಿಟ್ಟ ಗಾಣ ೨ ಯಿಂನ್ತಿ ಸಮಸ್ತ ಪ್ರಜೆ ಬಿ

೩೨. ಟ್ಟನ್ತಹ ಧರ್ಮ್ಮಮಂ ಜೀರ್ಣ್ನೋದ್ಧಾರ . ಮಾಡಿ ದೇವಾಲಯಮಂ ಸೊತೆಯಿಕ್ಕಿಸಿದ ಪಾಣೆಯ ಬೆಗಿನ

೩೩. ಬೆಬಗೊಲದ ಭಂಡಸಾಲೆಯ ಮಾರಹ(ಪ)ಸೆಟ್ಟಿಯುಂ ಕಯ್ಯಿಸೆಟ್ಟಿಯ ಮಹಾದೇವಸೆಟ್ಟಿ

೩೪. ಯು ಮುಖ್ಯವಾಗಿ ನಡೆಯಿಸುವರು ಯಿನ್ತೀ ಧರ್ಮವಾಂಕಿ ಡಲ್ಲಿಯದೆ ಪ್ರತಿಪಾಳಿಸಿದವರ್ಗ್ಗೆ

೩೫. ವಾರಣಾಸಿಯಲು ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರ್ಗೆ ಹ(ಪ)ನ್ನಿಛ್ಛಾಸಿರ ಕವಿಲೆಯಂ ದಾನಗೆಯ್ದ ಫಲ ಇನ್ತೀ

೩೬. ಧರ್ಮ್ಮಕ್ಕಾವನಾನುವನ್ಯಾಯ . . . . ನಪ್ಪಡೆ . . . . ಮಣ ಕವಿಲೆಯುಮಂ

೩೭. ಕೊನ್ದ ಮಹಾಪಾತಕ ಸಾರ್ಗ್ಗುಂ ॥ ಸ್ವದತ್ತಂ ಪರದತ್ತಂ ವಾಯೋಹರೇತಿ ವಸುನ್ಧರಾ ಷಷಿ(ಷ್ಟಿ) ವಷ[ರ್*] ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ॥

*

ಆಧಾರ ಸೂಚಿಗಳು ಮತ್ತು ಟಿಪ್ಪಣಿಗಳು

೧. ನಾಗಯ್ಯ ಜಿ.ಎಂ., ೧೯೯೨: ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ (ಆಡಳಿತಕ್ಕೆ ಸಂಬಂಧಿಸಿದಂತೆ), ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೨. ಆ್ಯನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ, ೧೯೫೩-೫೪, ಸಂ. ಬಿ ೨೪೯

೩. ಅದೇ, ೧೯೫೮-೫೯, ಸಂ. ಬಿ ೭೧೧.

೪. ಕುಲಕರ್ಣಿ ವಿ.ಎಸ್., ಹಿಸ್ಟಾರಿಕಲ್ ಅಂಡ್ ಕಲ್ಚರಲ್ ಸ್ಟಡೀಸ್ ಆಫ್ ದಿ ರೀಜನ್ ಅರೌಂಡ್ ಬಸವಕಲ್ಯಾಣ: ಬೇಸ್ಡ್ ಆನ್ ಇನ್‌ಸ್ಕ್ರಿಪ್‌ಶನ್ಸ್, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಪ್ರಬಂಧ, ಶಾಸನ ಸಂ.೫೪.

ಡಾ॥ ಎಂ. ಬಿ. ನೇಗಿನಹಾಳ*

ಕನ್ನೇಶ್ವರದ ಶಾಸನಗಳು

ಈಗಿನ ಹಾನಗಲ್ ತಾಲೂಕಿನ ಒಂದು ಕುಗ್ರಾಮ ಕನ್ನೇಶ್ವರ. ಹಾವೇರಿಯಿಂದ ಸಂಗೂರಿನ ಮೇಲೆ ಹಾಯ್ದು ತಿಳುವಳ್ಳಿಯನ್ನು ಸೇರುವ ಒಂದು ದೀರ್ಘ ಕಚ್ಚಾರಸ್ತೆಯಿದೆ. ಕಲಕೇರಿ, ಬ್ಯಾತನಾಳ ಮುಂತಾದ ಶಾಸನ-ಪ್ರಾಚ್ಯವಸ್ತುಗಳಿರುವ ಊರುಗಳು ಈ ರಸ್ತೆಯಲ್ಲಿ ಸಿಕ್ಕುತ್ತವೆ. ಬ್ಯಾತನಾಳದಿಂದ ಮುಂದುವರಿದರೆ ಈ ದಾರಿಯಲ್ಲಿ ಕೂಸಲೂರ ಎಂಬ ಹಳ್ಳಿಯಿದೆ. ಇದರ ಪಶ್ಚಿಮಕ್ಕೆ ಸು. ೨.೫ ಕಿಲೋಮೀಟರ ಕಾಲುದಾರಿಯಲ್ಲಿ ಹೋದರೆ ಕನ್ನೇಶ್ವರ ಎಂಬ ಕುಗ್ರಾಮವಿದೆ. ವರದಾ ನದಿಯ ಪೂರ್ವಬದಿಯಲ್ಲಿರುವ ಈ ಚಿಕ್ಕ ಊರು ಇತಿಹಾಸ ಕಾಲದಲ್ಲಿ ಒಂದು ಮಹತ್ವದ ಸ್ಥಾನವಾಗಿರುವ ಸಾಧ್ಯತೆಯಿದೆ. ಬ್ರಿಟಿಷರ ವಿರುದ್ಧ ಹೋರಾಡಿದ ಕೊರಗ ಜಾತಿಯ ಕನ್ನೇಶ್ವರರಾಮ ಇದೇ ಊರಿನವ.

ಊರಿಂದ ಪಶ್ಚಿಮ ಬದಿಗೆ ವರದಾ ನದಿಗೆ ಹೋಗುವ ಕಾಲುದಾರಿಯ ಬಲಬದಿಯ ದಿನ್ನೆಯೊಂದರ ಮೇಲೆ ಕನ್ನೇಶ್ವರ ದೇವಸ್ಥಾನವಿದೆ. ಇದರ ಪರಿಸರದಲ್ಲಿ ದೊಡ್ಡ ಗಾತ್ರದ ಸು.೧೨ ಇಂಚು ಉದ್ದದ ಇಟ್ಟಿಗೆಗಳಿರುವ ಪ್ರಾಚೀನ ಕಾಲದ ರಚನೆಗಳಿರುವಂತೆ ತೋರುತ್ತದೆ. ಇಲ್ಲಿ ಇಡಿಯಾದ ಇಟ್ಟಿಗೆಗಳು ನನಗೆ ದೊರೆಯಲಿಲ್ಲ. ಆದರೆ ಸ್ಥಳೀಯರ ಹೇಳಿಕೆಯಂತೆ ಅಲ್ಲಿ ಇಟ್ಟಿಗೆಯ ರಚನೆ ಮೊದಲು ಇದ್ದುದಾಗಿ ತಿಳಿದುಬರುತ್ತದೆ. ಸಾತವಾಹನರ ಕಾಲದ ಇಟ್ಟಿಗೆಗಳಿರಬಹುದೇ ಎನ್ನುವ ಸಂಶಯ ಉಂಟಾಗುವಂತಿದೆ.

ಮೇಲೆ ತಿಳಿಸಿದ ಕನ್ನೇಶ್ವರದೇವಾಲಯ ಮುಂಚೆ ಇಟ್ಟಿಗೆಯಿಂದ ಕಟ್ಟಿದ್ದು ತರುವಾಯ ಕಲ್ಲಿನ ಕಟ್ಟಡವಾಗಿ ಅದನ್ನು ಪರಿವರ್ತಿಸಲಾಗಿದೆ. ದೇವಾಲಯಕ್ಕೆ ಶಿಖರ ಕಳಸ ಇತ್ಯಾದಿಗಳಿಲ್ಲ. ಬದಿಯಲ್ಲಿ ದೊಡ್ಡ ಕಲ್ಯಾಣಿಯಿದೆ. ದೇವಾಲಯದ ಮುಂಭಾಗದ ದಕ್ಷಿಣ ಬದಿಯಲ್ಲಿ ಎರಡು ಮತ್ತು ಕಲ್ಯಾಣಿ ಅಥವಾ ಹೊಂಡದ ಪಶ್ಚಿಮ ಬದಿಯಲ್ಲಿ ಒಂದು, ಹೀಗೆ ಮೂರು ಶಿಲಾಶಾಸನಗಳನ್ನು ನಿಲ್ಲಿಸಿದೆ.

ಇವುಗಳಲ್ಲಿ ಮೊದಲನೆಯದು ಕ್ರಿ.ಶ. ೧೦೦೫ನೆಯ ವರ್ಷಕ್ಕೆ ಸರಿಹೋಗುವ ಶಾ. ಶ. ೯೦೫ನೆಯ ಶುಭಕೃತ್ ಸಂವತ್ಸರ ಉತ್ತರಾಯಣ ಸಂಕ್ರಾಂತಿ ವ್ಯತಿಪಾತ, ಆದಿತ್ಯವಾರ ಎಂಬ ವಿವರವಾದ ಮಿತಿಯುಳ್ಳದ್ದಾಗಿದೆ. ೨೪ ಸಾಲುಗಳ ಬರಹವುಳ್ಳ ಇದರ ಕೆಳಭಾಗ ನೆಲದಲ್ಲಿ ಹೂಳಿದೆ.

ಮೇಲಿನ ಶಾಸನದ ಎಡಬದಿಯಲ್ಲಿ ನಿಲ್ಲಿಸಿರುವ ಎರಡನೆಯ ಶಾಸನ ಚಾ.ವಿ. ವರ್ಷದ ೯ನೆಯ ಕ್ರೋಧನ ಸಂವತ್ಸರ ಆಶ್ವಯುಜ ಅಮವಾಸ್ಯೆ ಆದಿತ್ಯವಾರ ವ್ಯತಿಪಾತ ಎಂದು (ಕ್ರಿ.ಶ. ೧೦೮೫-೮೬ಕ್ಕೆ ಹೊಂದುವ) ಮಿತಿ ಹೇಳಿದೆ. ೫೨ ಸಾಲುಗಳ ಈ ಶಾಸನ ಮೇಲ್ಭಾಗದಲ್ಲಿ ೯ ಸಾಲುಗಳಷ್ಟು ಭಾಗದ ಪಾಠ ನಷ್ಟವಾಗಿದೆ.

ಹೊಂಡದ ಏರಿಯ ಮೇಲೆ ನಿಲ್ಲಿಸಿದ ೩ನೆಯ ಶಾಸನ ೩೨ ಸಾಲು ಬರಹವುಳ್ಳದ್ದಾಗಿದ್ದು ಮೇಲ್ಭಾಗದ ೭ರಿಂದ ೧೦ನೆಯ ಸಾಲಿನಷ್ಟು ಎಡಭಾಗ ಸವೆದು ಹೋಗಿದೆ. ಇದರಲ್ಲಿ ಚಾ.ವಿ. ವರ್ಷದ ೪೭ನೆಯ ಶುಭಕೃತು ಸಂವತ್ಸರದ ಮಾಘ. ಶು.೧೧ ಆದಿತ್ಯವಾರ ಎಂದು ಮಿತಿ ಹೇಳಿದೆ. ಒಟ್ಟು ೩೨ ಸಾಲುಗಳ ಬರಹವಿದೆ.

ಕ್ರಿ.ಶ. ೧೦೦೫ರ ಮೊದಲ ಶಾಸನವನ್ನು ಗಮನಿಸಿರುವ ಫ್ಲೀಟ್. ತಮ್ಮ ಡೈನ್ಯಾಸ್ಟೀಸ್ ಆಫ್ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್ ಕೃತಿಯಲ್ಲಿ ಕೆಲವು ವಿವರಗಳನ್ನು ನಮೂದಿಸಿದ್ದಾರೆ. ಇನ್ನೆರಡು ಶಾಸನಗಳನ್ನು ಕುರಿತು ಹೇಳಿಲ್ಲ, ಶಾಸನಗಳ ಪಠ್ಯ ಇದೇ ಮೊದಲು ಬಾರಿ ಪ್ರಕಟವಾಗುತ್ತಿದೆ.

ಕ್ರಿ.ಶ. ೧೦೦೫ರಲ್ಲಿ ಕಲ್ಯಾಣ ಚಾಲುಕ್ಯ ದೊರೆ ಇಜಿವ ಬೆಡಂಗ ಸತ್ಯಾಶ್ರಯ ಚಾಲುಕ್ಯ ಚಕ್ರವರ್ತಿಯಾಗಿ ಆಳುತ್ತಿದ್ದ. ಈತನ ಕಾಲಾವಧಿಯ ಶಾಸನಗಳು ದೊರೆತಿರುವುದು ಬಹಳ ಕಡಿಮೆ ಯಾಗಿರುವುದರಿಂದ ಪ್ರಸ್ತುತ ಶಾಸನಕ್ಕೆ ವಿಶೇಷ ಮಹತ್ವವಿದೆಯೆಂದು

* ಕಲಾನಿಕಾಯದ ಡೀನರು ಮತ್ತು ಅಧ್ಯಕ್ಷರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಬೇರೆ ಹೇಳಬೇಕಾಗಿಲ್ಲ. S.I.I. ಸಂ.೯ರಲ್ಲಿ- ಸಂ. ೪೮೮ರಿಂದ ೫೪೮ರವರೆಗೆ, ೭ ಶಾಸನಗಳು ಹೊಟ್ಟೂರು ಶಾಸನ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಬೇಡರಹಾಳ ತಾಮ್ರಪಟ (ಕ.ಭಾ.) ಮೊದಲಾದವು ಆತನ ಇತರ ಕೆಲವು ಶಾಸನಗಳು.

ಇರಿವಬೆಡಂಗ ಸತ್ಯಾಶ್ರಯನನ್ನು ಕುರಿತಂತೆ ರನ್ನಕವಿಯ ಗದಾಯುದ್ಧದಲ್ಲಿ ಮುಂದಿನ ಒಂದು ಮಹತ್ವದ ವೃತ್ತ ಕಂಡು ಬರುತ್ತದೆ.

> ಬರೆಗರ್ಭಕ್ಕರಿ ವಸ್ತು ವಾಹನ ಚಯಂ ಕೆಯ್ಗೆಯ್ದೆ ವಂದತ್ತು ಪು
> ಟ್ಟೆರಣೋತ್ಸಾಹದೆ ಚಕ್ರವರ್ತಿ ವಿಭವಂ ಪುಟ್ಟಿತ್ತು ಕೆಯ್ವತ್ತಿನಿಂ
> ದಿರೆ ಪತ್ತಿತ್ತು ಸಮಸ್ತಧಾತ್ರಿ [ಬಳೆಯಲ್ಕೆಂತುಂ] ದಿಶಾದಂತಿಗ
> ಳ್ಬರೆಗಂ ತಂದೆಯ ಕೀರ್ತಿಯುಂ ಬಳೆದುದೇಂ ಸತ್ಯಾಶ್ರಯಂ
> ಧನ್ಯನೋ (ಗ. ಯು. ಪ್ರಥಮಾಶ್ವಾಸ)

ಇರಿವಬೆಡಂಗ ಜನಿಸಿದ ಕೂಡಲೆ ತೈಲಪನಿಗೆ ಚಕ್ರವರ್ತಿ ಪದವಿ ಪ್ರಾಪ್ತವಾಯಿತೆಂದು ರನ್ನ ಇಲ್ಲಿ ಹೇಳಿದ್ದಾನೆ. ಎಂದರೆ ಕ್ರಿ.ಶ. ೯೭೩ರಲ್ಲಿ ಸತ್ಯಾಶ್ರಯ ಜನಿಸಿದ ವರ್ಷವೆಂದಾಯಿತು. ಪಟ್ಟಕ್ಕೆ ಬಂದುದು, ಕ್ರಿ.ಶ. ೯೯೭ರಲ್ಲಿ. ತೀರಿಕೊಂಡದ್ದು ಕ್ರಿ.ಶ. ೧೦೦೮ರಲ್ಲಿ. ಒಟ್ಟು ೩೫ ವರ್ಷ ಆತ ಬಾಳಿದ್ದಾನೆ.

ಈ ಶಾಸನದಲ್ಲಿ ಇರಿವ ಬೆಡಂಗನನ್ನು ಕುರಿತಾಗಿ ಇತರ ಮಹತ್ವದ ಸಂಗತಿಗಳಾವವೂ ಉಲ್ಲೇಖಗೊಂಡಿಲ್ಲ. ಆದರೆ ಬೇರೆ ಕೆಲವು ಮಹತ್ವದ ಸಂಗತಿಗಳು ಇದರಿಂದ ತಿಳಿದು ಬರುತ್ತವೆ. ತೈಲಪನಂಕಕಾರ, ಸಾಮಂತಕೇಸರಿ ಎಂಬ ಬಿರುದುಗಳನ್ನು ಹೊಂದಿದ್ದ ಭೀಮದೇವ ಎಂಬುವನು ಬನವಾಸಿ ೧೨ ಸಾವಿರ, ಸಾಂತಳಿಗೆ ಸಾವಿರ ಹಾಗೂ ಕಿಸುಕಾಡೆಪ್ಪತ್ತು ಪ್ರದೇಶಗಳನ್ನು ಬೀಳ ವೃತ್ತಿಯಿಂದ ಆಳುತ್ತಿದ್ದನೆಂದು ಪ್ರಸ್ತುತ ಶಾಸನ ಹೇಳುತ್ತದೆ. ಕ್ರಿ.ಶ. ೧೦೧೯ನೆಯ ವರ್ಷದ ಬಾದಾಮಿ ಬನಶಂಕರಿ ಗುಡಿಯ ಶಾಸನ (SII-IX-i. ನಂ.೫೭) ಕೂಡ ಮೇಲೆ ಹೇಳಿದ ಪ್ರದೇಶಗಳನ್ನು ಕ.ಚಾ. ಜಗದೇಕಮಲ್ಲನ ಅಧೀನನಾಗಿ ಭೀಮದೇವ ಆಳುತ್ತಿದ್ದುದಾಗಿ ತಿಳಿಸುತ್ತದೆ. ಬನಶಂಕರಿ ಗುಡಿಯ ಶಾಸನದಲ್ಲಿ ಭೀಮದೇವನಿಗೆ ಆಹವಮಲ್ಲದೇವರ ಪಾದಪಂಕಜಭ್ರಮರ. ಮಾವನಗಂಧವಾರಣ, ಭಾವನಸಿಂಗ, ಪರಬಳಾಂಕುಶ, ಕುಮಾರತಳಪ್ರಹಾರಿ, ಸಿಂಘನ ಹಣುಮ, ಕಾರ್ಯ ಸೌಪರ್ಣ, ಮಂಡಳಿಕ ನಾರಾಯಣ ಎಂದು ಮುಂತಾಗಿ ಬಿರುದುಗಳನ್ನು ಕೊಟ್ಟಿದೆ. ಎಂದರೆ ಈ ಭೀಮದೇವ ರಾಷ್ಟ್ರಕೂಟ ವಂಶದವನಾಗಿದ್ದು ಆಹವಮಲ್ಲ ತೈಲಪನ ನಚ್ಚಿನ ಬಂಟನೂ ಸಮೀಪದ ಸಂಬಂಧಿಯೂ ಆಗಿದ್ದನೆಂದು ತಿಳಿಯುತ್ತದೆ. ಮಾವನಗಂಧವಾರಣ ಎಂದರೆ ತೈಲಪ ಅಥವಾ ಇರಿವಬೆಡಂಗ ಇವರ ಸಮೀಪ ಸಂಬಂಧಿ ಎಂದಾಗುತ್ತದೆ. ಸಿಂಘನ ಹಣುಮ ಎಂಬುದು ಈತ ಜಗದೇಕಮಲ್ಲ ಜಯಸಿಂಹನ ಕಾಲದಲ್ಲೂ ಕ.ಚಾ. ಮನೆತನಕ್ಕೆ ನಿಷ್ಠನಾಗಿದ್ದ ಸಂಗತಿಯನ್ನು ಖಚಿತ ಪಡಿಸುತ್ತದೆ. ಒಟ್ಟಿನಲ್ಲಿ ಭೀಮದೇವ ಇಮ್ಮಡಿತೈಲಪನ ಕಾಲದಿಂದ ಕನಿಷ್ಠ ಕ್ರಿ.ಶ. ೧೦೨೦ರವರೆಗೆ ಕ.ಚಾಳುಕ್ಯರ ಕೈಕೆಳಗೆ ಮಂಡಲೇಶ್ವರನಾಗಿದ್ದನೆಂದು ಹೇಳಬಹುದು. ಈ ಅವಧಿಯಲ್ಲಿ ತೈಲಪ ಮತ್ತು ಇರಿವಬೆಡಂಗರ ತರುವಾಯ ೫ನೆಯ ವಿಕ್ರಮಾದಿತ್ಯ, ಅಯ್ಯಣ ಮತ್ತು ಜಯಸಿಂಹ-ಜಗದೇಕಮಲ್ಲರ ಕಾಲಾವಧಿಯಲ್ಲೂ ಭೀಮದೇವ ಮಂಡಲೇಶ್ವರನಾಗಿದ್ದ.

ನಾನು ಪ್ರಕಟಿಸಿರುವ ತುರಮರಿಯ ಶಾಸನ (ಬೈಲಹೊಂಗಲ ತಾ.)ದಲ್ಲಿ ಕೂಡ ಭೀಮದೇವನ ಹೆಸರು ಬಂದಿದೆ. ಇದರ ಕಾಲ ಕ್ರಿ.ಶ. ೧೦೫೧. ಈ ಅವಧಿಯಲ್ಲಿ ಕಲ್ಯಾಣ ಚಾಲುಕ್ಯ ದೊರೆ ೧ನೆಯ ಸೋಮೇಶ್ವರ ಪಟ್ಟದ ಮೇಲಿದ್ದ. ಭೀಮದೇವ ಈ ಅವಧಿಯಲ್ಲಿ ಜೀವಿಸಿರಲಿಲ್ಲ. ತುರಮರಿ ಶಾಸನದ ಪ್ರಕಾರ ರಾಷ್ಟ್ರಕೂಟ ವಂಶದ ಭೀಮದೇವನ ರಾಣಿ ದೇಯಿಬ್ಬೆ ಎಂಬವಳು ಪಟ್ಟ ಕುರುಗುಂದ ಕೆರೆಯೊಂದಕ್ಕೆ ಕೆಲವು ದತ್ತಿಗಳನ್ನು ಬಿಟ್ಟಳು. (ಕ.ಭಾ. ೧೦-೪) ಇವಳನ್ನು ವಸ್ತ್ರಪುರದವಳೆಂದು ಶಾಸನ ಹೇಳುವಂತೆ ಕಾಣುತ್ತದೆ. ಆದರೆ ಶಾಸನದ ಆ ಭಾಗ ಒಡೆದು ಹೋಗಿದೆ. ತೈಲಪನ ಮರಣಾನಂತರ (ಕ್ರಿ.ಶ. ೯೯೭) ಸು. ೫೫ ವರ್ಷಗಳ ಮೇಲೆ ತುರಮರಿಯ ಶಾಸನ ಭೀಮದೇವನನ್ನು ಹೆಸರಿಸಿರುವುದರಿಂದ ಹಾಗೂ ಈ ಅವಧಿಯಲ್ಲಿ ಎಂದರೆ ಕ್ರಿ.ಶ. ಸು.೧೦೨೦ರ ತರುವಾಯ ಬನವಾಸಿ ಪ್ರಾಂತಕ್ಕೆ ಬೇರೆ ಮಂಡಲೇಶ್ವರರು ಅಧಿಕಾರಿಗಳಾಗಿದ್ದುದರಿಂದ ಭೀಮದೇವ ಈ ಅವಧಿಯಲ್ಲಿ ಜೀವಿಸಿರಲಿಲ್ಲವೆಂಬುದು ಖಚಿತವಾಗಿದೆ. ಅವನ ಮರಣಾನಂತರ ದೇಯಿಬ್ಬೆ ರಾಣಿ ಬಿಟ್ಟಿರುವ ದತ್ತಿ ಕಾರಣವಾಗಿ ಅವನ ಹೆಸರು ತುರಮರಿ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ ಅಷ್ಟೆ. ಬೆಳಗಾವಿ ಜಿಲ್ಲೆಯಲ್ಲಿ ಈಗಾಗಲೆ ರಾಷ್ಟ್ರದೆಜ್ಜಮಹಾರಾಜನ ಮನೆತನವಿದ್ದ ಬಗ್ಗೆ ಗೋಕಾಕ ತಾಮ್ರಪಟ ಮಾಹಿತಿ ನೀಡುತ್ತದೆ. ಸವದತ್ತಿಯ ರಟ್ಟರು ತಾವು ರಾಷ್ಟ್ರಕೂಟರ ವಂಶದವರೇ ಎಂದು ಹೇಳಿಕೊಳ್ಳುತ್ತಾರೆ. ಬಹುಶಃ ಸವದತ್ತಿಯ ಮನೆತನಕ್ಕೇ ಸೇರಿದವಳಾದ ದೇಯಿಬ್ಬೆರಾಣಿ ಕುರುಗುಂದದಲ್ಲಿದ್ದಳೆಂದು ತುರಮರಿಯ ಶಾಸನದಿಂದ ಊಹಿಸಬಹುದಾಗಿದೆ. ಸವದತ್ತಿಯ ರಟ್ಟರಿಗೆ ಈ ಮನೆತನ ಸಮೀಪದ್ದಾಗಿರಬಹುದು.

ತುರಮರಿಯ ಶಾಸನ ಮತ್ತು ಅದರ ಸಮೀಪದ ಕಲಭಾವಿ ಶಾಸನಗಳಲ್ಲಿ ಗಂಗದೊರೆ ಕಂಚರಸನೆಂಬವನ ಉಲ್ಲೇಖ ಬಂದಿದೆ. ಈ ಕಂಚರಸ ಕಾದಲವಳ್ಳೀ ಈಗಿನ ಕಾದರವಳ್ಳಿ- (ಬೈಲಹೊಂಗಲ. ತಾ.) ಪ್ರದೇಶದಲ್ಲಿ ಸಾಮಂತನಾಗಿ ಆಳುತ್ತಿದ್ದು ಕೊಂಗುಣಿವರ್ಮ ನಂದಗಿರಿನಾಥ ಇತ್ಯಾದಿ ಆ ಮನೆತನದ ಬಿರುದುಗಳನ್ನು ಹೇಳಿಕೊಂಡಿದ್ದಾನೆ. ಪ್ರಸ್ತುತ ಕನ್ನೇಶ್ವರ ಶಾಸನದಲ್ಲಿ ಕೂಡ ಒಂದು ಚಿಕ್ಕ ಗಂಗಮನೆತನದ ಉಲ್ಲೇಖ ಬಂದಿದೆ. ಭೀಮದೇವನ ಅಧೀನನಾಗಿ ಕೂಸಲೂರನ್ನು ಆಳುತ್ತಿದ್ದ ಗಂಗರ ಕನ್ನಯ್ಯನೆಂಬುವನು ದೇವಾಲಯವನ್ನು ಕಲ್ಲುವೆಸದಿಂದ ಕಟ್ಟಲು ಪ್ರಾರಂಭಿಸಿದನು. ಈ ಕಣ್ಣನ ಮಗ ಚೌಡ ಹಾಗೂ ಚೌಡನ ಮಗ ಬೊಪ್ಪ ಎನ್ನುವವನು ಕ್ರಿ.ಶ. ೧೦೮೬ರಲ್ಲಿ ಪ್ರಸ್ತುತ ದೇವಾಲಯದ ಕಾರ್ಯವನ್ನು ಪೂರ್ತಿಗೊಳಿಸಿದನೆಂದು ಕನ್ನೇಶ್ವರದ ಎರಡನೆಯ

ಶಾಸನ ತಿಳಿಸುತ್ತದೆ. ಎಂದರೆ ಸು. ಒಂದು ಶತಮಾನ ಈ ಗಂಗರ ಮನೆತನ ತಿಳವಳ್ಳಿ ಪ್ರದೇಶದಲ್ಲಿ ನೆಲೆಸಿತ್ತೆಂದು ಹೇಳಬಹುದು. ತರುವಾಯದ ಕ್ರಿ.ಶ.೧೧೨೩ ವರ್ಷದ ೩ನೆಯ ಶಾಸನದಲ್ಲಿ ಗಂಗರ ಬದಲು ಬೇರೆ ಹೆಸರುಗಳು ಕಂಡುಬರುತ್ತವೆ.

ಕ್ರಿ.ಶ. ೧೦೦೪ರ ಮೊದಲ ಶಾಸನದಲ್ಲಿ ಬಾಸವೂರ ನೂರ ನಾಲ್ವತ್ತರ ನಾಳ್ಗಾವುಂಡ ಸೇನಮಲ್ಲರ ವಜ್ಜಯ್ಯನೆಂಬುವನ ಹೆಸರು ಬಂದಿದೆ. ಅಂದು ಕನ್ನೇಶ್ವರ ಬಾಸವೂರ ೧೪೦ಕ್ಕೆ ಸೇರಿತ್ತು. ಈ ಸೇನಮಲ್ಲರ ಮನೆತನ ಈ ಭಾಗದ ಹಲವು ಶಾಸನಗಳಲ್ಲಿ ಕಂಡುಬರುತ್ತದೆ. ರಾಷ್ಟ್ರಕೂಟ ೩ನೆಯ ಕೃಷ್ಣನ ಹಾವೇರಿ ಶಾಸನದಲ್ಲಿ (SII-XVIII-ನಂ. ೩೦) ಸೇನಮಲ್ಲರ ಮಲ್ಲಪನ ಹೆಸರು ಬಂದಿದೆ. ಮಿತಿ ನಿರ್ದೇಶನವಿಲ್ಲದ ಬಿದರಗಡ್ಡಿ ಶಾಸನ (ಅದೇ. ಸಂ.೫೨)ದಲ್ಲಿ ಇರಿವ ಬೆಡಂಗನ ಮಗ ಕುಂದರಾಜನು ಬನವಾಸಿ, ೧೨೦೦೦ವನ್ನು ಮಂಡಲೇಶ್ವರನಾಗಿ ಆಳುತ್ತಿದ್ದಾಗ ಅವನ ಅಧೀನನಾಗಿ ಸೇನಮಲ್ಲರ ಕಣ್ಣ ಬಾಸವೂರ ನಾಳ್ಗಾವುಂಡ ನಾಗಿದ್ದನೆಂದಿದೆ. ಅದೇ ರೀತಿ ಕ್ರಿ.ಶ. ೧೦೨೫ರಲ್ಲಿ ಜಗದೇಕಮಲ್ಲ ಜಯಸಿಂಹನ ಕೈಕೆಳಗೆ ಈ ಕಣ್ಣಮ್ಮ ಕುಂದರಾಜನ ಕೈಕೆಳಗೆ ಬಾಸವೂರು ನಾಡಿನ ನಾಳ್ಗಾವುಂಡನಾಗಿದ್ದನೆಂದು ಇನ್ನೊಂದು ಶಾಸನ(ಅದೇ. ನಂ.೪೫) ಹೇಳಿದೆ. **ಸೇನಮಲ್ಲರ** ಈ ವಂಶನಾಮ **ಸೇನವಲ್ಲ** ಎಂದು ಕೂಡ ಬಂದಿರುವುದನ್ನು (SII-18ರ ಮುನ್ನುಡಿ) ನೋಡಿದರೆ ಇದು ಸೇನವಾರ/ಸೇನಾವರ/ಸೇನವ ಎಂದು ಪ್ರಸಿದ್ಧವಾಗಿದ್ದ ಪ್ರಾಚೀನ ಮಂಡಳೇಶ್ವರರ ಮನೆತನವೇ ಎಂದು ನಾನು ಈಗಾಗಲೇ ಬೇರೊಂದು ಕಡೆಗೆ ತೋರಿಸಿದ್ದೇನೆ. ಈ ರೀತಿ ಕನ್ನೇಶ್ವರದ ಈ ಮೂರು ಶಾಸನಗಳು ಕಲ್ಯಾಣ ಚಾಳುಕ್ಯ ರಾಷ್ಟ್ರಕೂಟ ಗಂಗ ಮತ್ತು ಸೇನವಾರ ಮನೆತನಗಳ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ.

ತಿಳವಳ್ಳಿಯ ಬ್ರಾಹ್ಮಣರನ್ನು ಕುರಿತು ಹೇಳುವಾಗ ಅವರು ಸಪ್ತ ಸೋಮಸಂಸ್ಥಾವಭೃತ ಅವಗಾಹನ ಪವಿತ್ರೀಕೃತ ಶರೀರರು ಎಂಬಿತ್ಯಾದಿಯಾಗಿ ಹೊಗಳುತ್ತ 'ಪದಾರ್ಥ ವಾಕ್ಯಾರ್ಥ', ಕೋವಿದರು ಎಂದೂ ತಿಳಿಸುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಬರುವ 'ಪದವಾಕ್ಯ ಪ್ರಮಾಣಜ್ಞ' ಎಂಬ ಪ್ರಯೋಗಕ್ಕೆ ಇದು ಪರ್ಯಾಯ ವಾಗಿರುವುದು ಸ್ಪಷ್ಟ. ಆದ್ದರಿಂದ ಪದ-ವಾಕ್ಯ ಪ್ರಮಾಣಜ್ಞ ಎಂಬುದಕ್ಕೆ ಶಬ್ದಾರ್ಥ ಮತ್ತು ವಾಕ್ಯಾರ್ಥಗಳನ್ನು ಚೆನ್ನಾಗಿ ಅನ್ವಯಿಸಿ ಹೇಳಬಲ್ಲ ಸಾಮರ್ಥ್ಯವುಳ್ಳವರು ಎಂದು ಮಾತ್ರ ಅರ್ಥವೇ ಹೊರತು. ಇತರ ಯಾವ ಅರ್ಥವೂ ಇರಲಿಲ್ಲವೆಂಬುದನ್ನು ಇಲ್ಲಿ ಗಮನಿಸಬಹುದು.

ಶಾಸನಗಳ ಪಾಠ

೧ನೇ ಶಾಸನ

ದೇವಾಲಯದ ಮುಂದೆ ನಿಲ್ಲಿಸಿರುವ ದಕ್ಷಿಣ ಬದಿಯ ಕಲ್ಲು :

ಶಾ.ಶ. ೯೨೫ನೆಯ ಶುಭಕೃತ್ ಸಂವತ್ಸರ, ಉತ್ತರಾಯಣ ಸಂಕ್ರಾಂತಿ ಕಲ್ಯಾಣ ಚಾಳುಕ್ಯ ದೊರೆ ಇಱಿವ ಬೆಡಂಗ ಸತ್ಯಾಶ್ರಯ

೧ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರಂ ಪರಮ ಭಟ್ಟಾರಕಂ ಸ
೨ ತ್ಯಾಶ್ರಯ ಕುಳತಿಳಕನಕಳಂಕ ಚರಿತ ನಿಱಿವ ಬೆಡಂಗಂ ಶ್ರೀಮತ್ ಸತ್ಯಾಶ್ರಯ ದೇವರ ರಾಜ್ಯಮು
೩ ತ್ತರೋತ್ತರಾಭಿವೃದ್ಧಿಗೆ ಸಲುತ್ತಮಿರೆ [11*] ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಂ ಬಾಳರೇವನ್ತ[ಂ]ತು
೪ ರಗ ವಿದ್ಯಾಧರಂ ಗಜಕೆ ಬಲ್ಗಣ್ಡಂ ರಣರಂಗಮಲ್ಲಂ ತೈಲಪನಂಕಕಾರಂ ಸಾಮನ್ತ ಕೇಸರಿ ಶ್ರೀಭೀಮರಾಜಂ
೫ ಕಿಸುಕಾಡೆಳ್ಪತ್ತುಂ ಬನವಾಸಿ ಪನ್ನಿರ್ಚ್ಛಾಸಿರಮುಂ ಸಾನ್ತಳಿಗೆ ಸಾಯಿರಮುಮಂ ಬೀಳವೃತ್ತಿಯೊಳಾಳು
೬ ತ್ತಮಿರೆ ಸಮಸ್ತ ಭರರಾಜ್ಯ ನಿರೂಪಿತ ಮಹಾಮಾತ್ಯ ಪದವೀ ವಿರಾಜಮಾನಂ ನಾರಾಚವರ್ಷಂ ಕಾಯ್ವರ ಗ
೭ ರುಡನಚಳಿತ ಮಲ್ಲನುಪಶಮ ಯುಧಿಷ್ಠಿರಂ ಮನುನೀತಿ ಮಾರ್ಗಂ ವ್ಯವಹಾರ ಚತುರ್ಮ್ಮುಖಂ ಮಲೆರಾಜ ಸರ್ಪಂ
೮ ಗಂಡರ ಸಿಂಗಂ ಶ್ರೀಮತ್ಪೆರ್ಗ್ಗಡೆ ಕಾಡಿಮಯ್ಯಂ. . . . ಬನವಾಸಿ ದೇಶಮಂ ದುಷ್ಟನಿಗ್ರಹ ವಿಶಿಷ್ಟ ಪ್ರತಿ ಪಾಳದಿಂ
೯ ಶ್ರೀ ಭೀಮರಾಜಂಗೇಕಾಯತಂ ಮಾಡಿ ಸುಖಸಂಕಥಾ ವಿನೋದದೊಳಿಬ್ದು ।ಕಂ। ಕಲಿಯುಗಭೀಮನ ಬೆಸದಿಂ ಮಲೆ
೧೦ ಪರನಾಟನ್ದು ಪಶ್ಚಿಮಾಬ್ಧಿವರಂ ಮಂಡಲಮಂ ನಿಮಿರ್ಚಿದಂ ನಿರ್ಮ್ಮಳಯಶನಧಿಕ ಪ್ರತಾಪಿ ಕಾಯ್ವರ ಗರುಡಂ
೧೧ ಸ್ವಸ್ತಿ ಸಮಸ್ತ ಗುಣ ಪೂರ್ಣ್ಣಮೇರು ಮಾವ[ನ] ಪಿಣ್ಡಂ ಮನದೊಳ್ಗೋ (ಳ್ಗ?) ಣ್ಡ [ಂ] ಶ್ರೀಮತ್ಸೇನ ಮಲ್ಲರ ವಜ್ಜಯ್ಯಂ ಬಾಸವೂನ್ನೂಱ
೧೨ ನಾಲ್ವತ್ತರ್ಕ್ಕಂ ನಾಲ್ಗಾವುಣ್ಡುಗೆಯ್ಯೆ ।।ಕನ್ದ।। ಕಡೆಗಣಿಸದೆ ಕಣ್ದು ಗಳಪಿದವರ್ಗ್ಗುದಾರಮಾಗಿ ಗಂಗರ ಕನ್ನಂ[ಕನ್ದ]ನು... ವೊ[ಡಾ]
೧೩ ಱಿನ್ದಮಶೇಷಂ ಪೊಡವಿಯೊಳೆಸೆದಪುದು ಬ[ಡ]ವರಾಶ್ರಯನಾ[ದಂ] ಈ ಸಕಳ ವಸುಮತೀ ತಳವಾಸಿಗಳಯ್ಯೂ
೧೪ ರ್ಬ್ಬರವರ್ಗ್ಗೀಂ ಬೆಸಕೆಯ್ದಿ ಕೋಪಿಂ ಪಾಸಕಲ ಮೆಸೆಯೆ ಸಮಯದ ದಾಸಿಯೆನಲ್ನೆಗೞ್ದನತ್ತಿಗಂಗರ ಕನ್ನಂ ಸ್ವಸ್ತಿ ಸ
೧೫ ಮಸ್ತ ಗುಣಗಣಾಧಾರಂ ಪರಾಂಗನಾದೂರಂ ನಿಜಕುಳ ಪವಿತ್ರಂ ಸುಜನೈಕ ಮಿತ್ರಂ ಸಮಯದ ದಾಸಿ ದು [ಷ್ಟಾ]ರಿ ತಾಪಹರ[ಂ]
೧೬ ಶ್ರೀ ಮತ್ಗಂಗರ ಕನ್ನಮಯ್ಯಂ ಕೂಸಲೂರೊಳೇಕ ಭೋಗಂಗಾವುಣ್ದುಗೆಯ್ಯುತ್ತ ಮಿಬ್ದು ಧರ್ಮ್ಮಾನುರಾಗದಿಂ ದೇಗುಲಮಂ ಮಾಡಿ
೧೭ ಸಕವರ್ಷ ೯೨೫ನೆಯ ಶೋಭಕೃತ್ ಸಂವತ್ಸರದುತ್ತರಾಯಣ ಸಂಕ್ರಾಂತಿ ವ್ಯತಿಪಾತಮಾದಿತ್ಯವಾರ. .ನ
೧೮ ಗ್ಗೆ–ದೆ[ಕಾ]ಡಿಮಯ್ಯಂಗಳ್ದೇಗುಲಮಂ ನೋಡಿ ಕನ್ನೇಶ್ವರ ದೇವರ್ಗ್ಗೆ ತೆಂಕಣ ನಿಡುಗೆಱೆಯ ಕೆಬಗೆ ಕೊಟ್ಟ . . . .
೧೯ ಬಿಟ್ಟ ಗಱ್ದೆಯ ಮತ್ತರಾಱು ಸರ್ವ್ವಬಾಧಾಪರಿಹಾರ ಮಿದಱ್ೊಳಗೆ ದೇಗುಲದ ಖಣ್ಡಸ್ಫುಟಿತಕ್ಕೆ ಮತ್ತರೊನ್ದು. . . . .
೨೦ [ಕಂ] ಮತ್ತರೊನ್ದು ಸ್ಥಾನಪತಿ ಚಾಮುಣ್ಡಭಟಾರರ್ಗ್ಗೆ ಮತ್ತರೊನ್ದು ಪಱ್ಕಾಱರ್ಗ್ಗೆ. . . . . ಸೂಳೆಯರ್ಗ್ಗೆ ಮತ್ತರೇ. . . .
೨೧ [ಹಿ]ರ ಖಣ್ಡಿಯ ಜದು. . ಪಂ ಕಾದುನಡೆಯಿಸಿದಾತಂ ವಾರಣಾಸಿ ಪ್ರಯಾಗ್ಗೆ(ಗೆ) ಕುರು. . . . .

೨೨ ರ್ಪ್ವಾರ್ವ್ವರ್ಗ್ಗೆ ಸಾಸಿರ ಕವಿಲೆಯನುಭಯ ಮುಖಿಗೊಟ್ಟ ಪಲಮಕ್ಕುಂ. . . . .
೨೩ ಸಾಸಿರ ಕವಿಲೆಯುಮನಟಿದ ಪಂಚಮಹಾಪಾತಕನಕ್ಕುಂ। ಸ್ವದತ್ತಾ. . . . . .
೨೪ ಹಶ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ।। ಬಹುಭಿರ್ವಸುಧಾ. . . . .
೨೫ . . .ತದಾಫಲಂ।। ಸಾಮಾನ್ಯೋಯಂ. . . . .

ಶಾಸನದ ಮೇಲ್ಭಾಗದಲ್ಲಿ ಕೆಳಗಿನ ಒಂದು ಸಾಲು ಬರಹವಿದೆ : ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನಾನುಷ್ಠಾನ ಪರಾಯಣರಪ್ಪ ಶ್ರೀಮತ್ ರಾಮರಾಸಿ ಭಟಾರರೀ ಮಟಕ್ಕೆ ಮುಖ್ಯರ್.

೨ನೆಯ ಶಾಸನ: ಗುಡಿಯ ಮುಂದೆ ನಿಲ್ಲಿಸಿದ ಬಲಗಡೆಯ ಕಲ್ಲು:

ಚಾಳುಕ್ಯ ವಿಕ್ರಮ ವರ್ಷ ೯ನೆಯ ಕ್ರೋಧನ ಸಂವತ್ಸರ ಆಶ್ವಯುಜದಮಾವಾಸ್ಯೆ. ವ್ಯತಿಪಾತ ಆದಿತ್ಯವಾರ.

೧ [ಶ್ರೀ] ಗಣಪತಯೇ ನಮಃ ನಮಸ್ತುಂಗ ಚಿ(ಶಿ)ರ. . . . .
೨ [ನ] ಗರಾರಂಭ ಮೂಲಸ್ತಂಭಾಯ ಶಂಭ. . . . .
೩ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರ. . .
೪ ಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ. . .
೫ ಮಲ್ಲದೇವನು ಪೃಥ್ವೀರಾಜ್ಯಂಗೆಯ್ಯುತ್ತಮಿರೆ
೬ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮಂತಾ. . .
೭ ಯಕಂನಾಸ್ಥಾನ. . .ಸ್ತು ನಾಯಕಂ ನಿಯೋಗ ಯೌಗಧ[ರಾ]
೮ [ಯ]ಣಂ ವಿವೇಕ ವಿದ್ಯಾಧರಂನಸಹಾಯ ಸಿಂಗಂ ಪರಬಳ[ಸಾದ]
೯ ಕಂ ಕಂನ್ನಡ ಸಂಧಿವಿಗ್ರಹಿ ಸೇನಾಧಿಪತಿ ಮನೆವೆರ್ಗ್ಗಡೆ ಪಡಪ. . . . . .
೧೦ ಚಿನ್ನದೇವಿಯರಸರ ತಮ್ಮಂ।। ಸ್ವಸ್ತಿ ಸಮಸ್ತ ಪ್ರಶಸ್ತಿಗುಣಸಂಪನ್ನರಪ್ಪ
೧೧ ಪ್ರಧಾನಸೇನಾಧಿಪತಿ ಮನೆವೆರ್ಗ್ಗಡೆ ಪಡಪವಳ ದಂಣ್ಣನಾಯಕಂ ಮಾಧವ[ರಸ]
೧೨ ರ್ ಬನವಾಸಿ ಪನ್ನಿರ್ಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂ ಸುಖದಿಂ...
೧೩ ರ ತತ್ಪಾದ ಪದ್ಮೋಪಜೀವಿ।। ಸಮಸ್ತ ಪ್ರಶಸ್ತಿ ಗುಣ ಸಂಪನ್ನರಪ್ಪ ಶ್ರೀಮತು ನಾಚಯ್ಯ
೧೪ ಚಿಟ್ಟಯ್ಯಗಳು ತಿಳುವಳ್ಳಿಯ ನಾಡಾಳುತ್ತಮಿರೆ।। ಸ್ವಸ್ತ್ಯನೇಕ ಗುಣಗಣಾಧಾರ
೧೫ ಶೌಚಾಚಾರರುಂ ಪಿತಾಮಹ ಮಹಿಮಾಸ್ಪದಂ ಪದಾರ್ಥವಾಕ್ಯಾರ್ಥ ಕೋವಿದರುಂ ತಿ
೧೬ . . ಕಳಂಕ ಗುಪ್ತೋಸ. . . . ಲಾಂಛಿತರುಂ ಬಾಲಾಗ್ನಿಹೋತ್ರಿಗಳುಂ ಸಪ್ತಸೋಮ ಸಂಸ್ಥಾವಭೃತಾವಗಾ
೧೭ ಹನ ಪವಿತ್ರೀಕೃತ ಶರೀರರುಂ ಚತುರ್ವೇದ ವೇದಾಂಗೋಪಾಂಗ ಸ್ಮೃತಿ ಪುರಾಣ ಕಾವ್ಯ ನಾಟಕ ಭರತಷ
೧೮ ಟ್ತರ್ಕ್ಕ ಮೀಮಾಂಸಾದಿ ಸರ್ವಶಾಸ್ತ್ರ ವಿಶಾರದರುಂ ಸಾರದಚಂದ್ರೋಜ್ವಳ ಧರ್ಮ್ಮಾಖಿಳ ಕೀರ್ತಿ
೧೯ ಸಾಗರ ಪರಿವೃತ ವಸುಧಾ ರಕ್ಷದಕ್ಷದಕ್ಷಿಣ ಭುಜಾವಷ್ಟಂಭ ಶುಭದು. . ರಾಜಾಧಿರಾಜ ಸೇಬಾ
೨೦ ಜಿತರೇಕವಾಕ್ಯರ್ದ್ವಾತ್ರಿಂಶತು ಸಮಸ್ತ ಸಮಯಾಗ್ರಗಣ್ಯರ ಗಣ್ಯಪುಣ್ಯ ಮೂರ್ತ್ತಿಗಳ್ ದಕ್ಷಿಣ ದ. . .[ವ]
೨೧ ಶಿಷ್ಟ ಗೌತಮ. . .ಥೇ ಸನಕ ಸನಂದ ಸನತ್ಕುಮಾರಾದಿ ಕಾರುಣ್ಯ. ಮುನಿ ಸಮಾನರೇಕ ವಾಕ್ಯ.
೨೨ ರಣಾಗತ ವಜ್ರಪಂಜರರುಮಪ್ಪ ಶ್ರೀಮದಗ್ರಹಾರಂ ತಿಳುವಳ್ಳಿಯ ಮಹಾಜನ ಸಾ(ಸಿ)
೨೩ ರ್ವ್ವರ ಮಗಂ ಗಂಗರ ಕಣ್ಣಯ್ಯಂ ಬಾಸವೂರ ನೂಜಿನಾಲ್ವತ್ತರ್ಕ್ಕಂ ನಾಳ್ಗಾವುಂಡು ಗೆಯ್ವ ಪೆಂಪನೇವರ್ಣ್ಣಿಪೆಂ
೨೪ ಕಡೆಗಣಿಸದೆ ಕಂಡುಗಂಳುಪಿದವರ್ಗ್ಗುದಾರ ಮಾಗೆ ಗಂಗರ ಕಂಣಂ ಕೋಪ. . ದರಿಂದೇಂ ಕಾ. . . . .
೨೫ . . . ಸೆದಪುದಾ. . .ರಾಶ್ರಯ ನಾಮಂ।। ಈ ಸಕಲ ವಸುಮತೀ ತಳವಾಸಿಗಳ್ಗೆನೂರ್ವ್ವರ ವರ್ಗ್ಗೆ ಬೆಸ
೨೬ ಕೆಯ್ಯಲೆ. . . . ಕಲ . . . ಸೆಯೆ ಸಮಯದ ದಾಸಿಯೆನಲ್ಲೆಗಟ್ಟಿನಲ್ತೆ ಗಂಗರ ಕಂಣಂ।। ಶ್ರೀಮತು ಗಂಗರಕನ್ನ
೨೭ ಯ[ಂ] ಕೂಸಲೂರನೇಕ ಭೋಗದಿಂ ಗಾಮುಣ್ಡುಗೆಯ್ಯುತ್ತಮಿರ್ಪ್ಪಂ।। ಧರ್ಮ್ಮಾನುರಾಗದಿಂ ದೇಗುಲಮಂ ಮಾ
೨೮ ಡಿಸಿದನೂನ. . . . ಮುದ್ದಿಯ ಚಿನ್ತಾಮಣಿಗಂ ಪುಟ್ಟಿದ ಮಗನ ಮಹಿಮೆಯೆಂತೆಂದಡೆ ಸ್ವಸ್ತಿ
೨೯ ಸಮಸ್ತೋರ್ವ್ವೀತಳ ವಿನೂತ ಪ್ರತಾಪ ಮಕರಧ್ವಜ ವೈರಿಗರುಡಧ್ವಜಂ ಶರಣಾಯಾತಪಭೀತಾಪ ಮ
೩೦ ತನುತ್ರಾಣ ತತ್ವಪ್ರವೀಣ ಬಾಣ ಸೌಜನ್ಯ ವನಕೇಳೀವಸನ್ತಂ ವಿನಯ ಲಕ್ಷ್ಮೀಕಾಂತಂ ಸುಜನ ಪ್ರಸಂನ್ನ ಮದನಪಚರಣ
೩೧ ಸರಸೀರುಹ ಪರಿಮಳಾಮೋದ ಶ್ರೀಗಣಸ್ಥಾನ ರಂಗ ಶೋಭಾಕರ ವಿನಯ ರತ್ನಾಕರಂ ಗಂಗರ ಸಿಂಘನಾಮಾದಿ ಸಮಸ್ತ ಪ್ರಶಸ್ತಿ
೩೨ ಸಹಿತಂ ಶ್ರೀಮತು ಕೂಸಲೂರ ಚೌಡಗಾಮುಣ್ಡಂ ಕನ್ನೇಶ್ವರ ದೇವರ ದೇಗುಲಕ್ಕೀಕಲುವೆಸಕ್ಕೆ ಪ್ರಾರಂಭ ಮುಖನಾದ
೩೩ ನಾ ಪುಣ್ಯಪುರುಷಂಗಂ ಕಾಳಿಯಬ್ಬೆ ಗಾಮುಣ್ಡಿಗಂ ಪುಟ್ಟಿದಮಗನಾತನ ಪೆರ್ಮ್ಮೆಯೆನ್ತದಡೆ।। ಸ್ವಸ್ತಿ ಸಮಸ್ತ ವಸ್ತುಗು
೩೪ ಣ ಮಿಸ್ತೀರ್ಣ್ನ ಘೂರ್ಣ್ನಿತಾರ್ಣ್ನವ ನಿನಾದನಿಶಿತ ನಿಸ್ತ್ರಿಂಶ ರೌಕ್ಷೇಯ [ಕಾಸಿ] ಮುಶಲ ಕನಾಯಕಂ ಪಣ ಮುಶುಣ್ಡಿ.
೩೫ ಭಿಂಣ್ಡವಾಳಾದಿ ನಾನಾಸ್ತ್ರ ಪ್ರವೀಣ[ಂ] ಗೋತ್ರಪವಿತ್ರಂ ಪರಾಂಗನಾಪುತ ಕಾನ್ತಾಮನೋಜ ಮನುನೀತಿ ಮಾರ್ಗನುಪಾ
೩೬ ಯ ಚಾಣಕ್ಯನ್ನೆನೂರ್ವ್ವರ ಸಮಯ ಸಮುದ್ಧರಣ ದಾಸನ್ವೆಯ್ಯನ ಸಿಂಹ ಗಂಗಕುಟಿಕಮಳ
೩೭ ಮುತ್ತಣ್ಣನಸಹಾಯ ಸೌರ್ಯ್ಯ ಗಂಗಕುಳ ಕುಮುದಿನೀ ಚಂದ್ರಂ ಥಿಬ್ರಿದ ಚಿನ್ತಾಮಣಿ ಸಾಸಿರ್ವ್ವರ ಪಾ
೩೮ ದಾರಾಧಕಂ ಶ್ರೀ ಕನ್ನೇಶ್ವರದೇವಲಬ್ಧವರ ಪ್ರಸಾದ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತು ಕೂಸಲೂರ

೩೯ ಬೊಪ್ಪಗ್ರಾಮುಮಂ ತಮ್ಮ ಪಿತೃಪಿತಾಮಹರು ಮಾಡಿಸಿದ ಕನ್ನೇಶ್ವರ ದೇವರ ದೇಗುಲಮಂ ಕಲುವೆಸ[ದಿಂ]
೪೦ ಮಾಡಿಸಿ ಸಾಸಿರ್ವ್ವರಂ ತನ್ನು ತೋಜಿಲವರುಂ ಪ್ರಸನ್ನರಾಗಿ ಶ್ರೀಮಚ್ಚಾಳುಕ್ಯ ವಿಕ್ರಮ ಪ್ರತಾಪ ಚಕ್ರವರ್ತಿ ಜಗದೇಕಮ. . .
೪೧ ರಿಷದ ೯ನೆಯ ಕ್ರೋಧನ ಸಂವತ್ಸರದಾಶ್ವಯುಜದಮವಾಸ್ಯೆಯುಮಾದಿತ್ಯವಾರಮುಂ ವ್ಯತಿಪಾತಮುಂ ಕೂಡಿ
೪೨ ಪುಣ್ಯದಿನದಂದು ಶ್ರೀ ಕನ್ನೇಶ್ವರ ದೇವರ್ಗ್ಗೆ ನಿವೇದ್ಯಕ್ಕೆ ತಿಳುವಳ್ಳಿಯ ವಿಷ್ಣುವರ್ಧನನ ಕೋಲಲು ಗೋಳಿಕೊಳದ ಕೆಲಗೆ ಕೋ
೪೩ ೫ ಮಾನಂ ಗರ್ದ್ದೆ ಮತ್ತಲೊನ್ನುವಂ ಸರ್ವ್ವಬಾಧಾಪರಿಹಾರವಾಗಿ ಬಿಟ್ಟರು॥ ಅಜುವತ್ತೊಕ್ಕಲುಂ ದೇವಗೊಳಗವಂ ಬಿಟ್ಟರು.
೪೪ ಇ ಧರ್ಮ್ಮಮನ್ನಾವನೊರ್ವ್ವಂ ಪ್ರತಿಪಾಳಿಸಿದಾತಂ ವಾರಣಾಸಿ ಕುರುಕ್ಷೇತ್ರ ಪ್ರಯಾಗೆ ಕುರುಕ್ಷೇತ್ರವ ಮೈತಿಷ್ಯ[ಪ್ರಯಾಗೆ?]
೪೫ ನದಲು ಸಾಸಿರ ಕವಿಲೆಯಂ ಕೋಡುಂಕೊಳಗುವಂ ಪಂಚರತ್ನಂಗಳಿಂ ಕಂಟ್ಟಿಸಿ ಸಾಸಿರ್ವರು ವ್ವೇದಪಾರಗರಪ್ಪಬ್ರಾಹ್ಮಣ. . .
೪೬ ಭಯ ಮುಖಿ ದಾನಮಂ ಕೊಟ್ಟ ಫಲಮಕ್ಕುಂ॥ ಈ ಧರ್ಮ್ಮಂನಾವನೊರ್ವ್ವಂನಳಿದಾತಂ ವಾರಣಾಸಿ ಕುರುಕ್ಷೇತ್ರ ಪ್ರಯಾಗೆ. . . .
೪೭ ತ್ಯಮೆಂಬೀ ತೀರ್ತ್ಥಸ್ಥಾನದಲು ಸಾಸಿರಕವಿಲೆಯುಮಂ ಸಾಸಿರ್ವ್ವರು ವೇದ ಪಾರಗರಪ್ಪ ಬ್ರಾಹ್ಮಣರಂ ಕೊಂದ ಪಂಚಮಹಾಪಾತಕನಕ್ಕುಂ॥
೪೮ ಸ್ವದತಂ ಪರದತ್ತಂ ವಾಯೋ ಹರೇತಿ ವಸುಂಧರಾ ಷಷ್ಠಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ। ಬಹುಭಿಃವಸುಧಾ
೪೯ ದತ್ತಾರಾಜಭಿಃ ಸ್ಸಗರಾಧಿ ಭಿಃ ಯಸ್ಯಯಸ್ಯ ಯದಾಭೂಮಿಸ್ತಸ್ಯತಸ್ಯ ತದಾಫಲಂ॥ ಸಾಮಾನ್ಯೋಯಂ ಧರ್ಮ್ಮಸೇತುರ್ನೃ
೫೦ ಪಾಣಾಂ ಕಾಲೇ ಕಾಲೇ ಪಾಲನಿಯೋಭವದ್ಭಿಸ್ಸ. . .ನೇತಾನು ಭಾವಿನಃ ಪಾರ್ಥಿವೇಂದ್ರಾ. . . ಯಾಚತೇರಾಮಚಂದ್ರಃ॥
೫೧ ದೇವರಿಗೆ ಗೆ.·. ಟ್ಟಿಗೆಯ ಮಣ. .ದೇಮ. . .ಮಂಗಳಮಹಾ ಶ್ರೀ॥ ಪಾಂಚಜನ್ಯದ ವಾದೇನಿರ. . . . .
೫೨ ತೀ ಸಮುಖ್ಯ. . ತಾಸರ್ವ್ವಪಾಪ ಪ್ರನಾಶಿನಿ॥

೩ನೆಯ ಶಾಸನ: ಹೊಂಡದ ಏರಿಯ ಕಲ್ಲು

ಚಾ.ವಿ. ೪೭ನೆಯ ಶುಭಕೃತು ಮಾಘ. ಶು. ೧೧. ಆದಿತ್ಯವಾರ ಕ್ರಿ.ಶ. ೧೧೨೩.

೧ ಶ್ರೀ ಗಣಪತ್ಯಾಯನಮಃ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋ[ಕ್ಯ]
೨ ನಗರಾರಂಭ ಮೂಳಸ್ತಂಭಾಯ ಶಂಭವೇ॥ [ಸ್ವಸ್ತಿ] ಸಮಸ್ತಭುವನಾ
೩ ಶ್ರಯಂ ಶ್ರೀಪ್ರಥ್ವೀವಲ್ಲ[ಭ]ಂ [ಮಹಾ]ರಾಜಾಧಿರಾಜ ಪರಮೇಶ್ವರಂ ಪರಮ[ಭ]
೪ ಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ರಿಭು
೫ ವನ ಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಗೆ
೬ ಸಲುತ್ತಮಿರೆ॥ ತತ್ಪಾದ ಪ[ದ್ಮೋ]ಪ[ಜೀವಿ]ಸಮಸ್ತ ರಾಜ್ಯಭರ
೭ ನಿರೂಪಿತ ಮಹಾಮಾತ್ಯ ಪದವೀ ವಿರಾಜ . . . .
೮ ಮಂತ್ರೋತ್ಸಾಹ ಶಕ್ತಿತ್ರಯ . . . .
೯ ಧಾನಂ ಮನೆವೆರ್ಗ್ಗಡೆ ಸೇನಾಪತಿ ಮಣ್ಣ. . . . .
೧೦ ಳ ತಮ್ಮಂ ಸಾವಿಮಯ್ಯ ದಣ್ಡನಾಯಕಂ ಬನವಾ[ಸಿ]. . . .
೧೧ [ಪ]ನೆರಡಜುನೂಜುಮಂ ಸುಖದಿನಾಳುತ್ತಮಿರೆ. . . ತತ್ಪಾದಪದ್ಮೋ
೧೨ ಪಜೀವಿ॥ ಸಮಸ್ತ ಗುಣೋನ್ನತ[ರ]ಪ್ಪ ಶ್ರೀಮ[ನ್ಮಾ]ಹಾದೇವಯ್ಯ ನಾಯಕರು ನಾ
೧೩ ಗರಖಿಣ್ಡಮೆರ್ಪ್ಪತ್ತಮ. . . . . . ವ. . . ಮನಾಳುತ್ತ
೧೪ ಮಿರಲು॥ ಚಾಳುಕ್ಯ ವಿಕ್ರಮ ವರ್ಷದ ೪೭ನೆಯ ಶುಭಕೃತು ಸಂ
೧೫ ವತ್ಸರದ ಮಾಘ ಸು। ೧೧ ಆದಿತ್ಯವಾರಮುಂಮುತ್ತರಾಯಣ ಸಂಕ್ರಾನ್ತಿ
೧೬ ಯುಂ ವ್ಯತಿಪಾತಮುಂ ಕೂಡಿದ ಪುಣ್ಯ. . [ದಿನ]ದೊಳ. . . . . ದಗ್ರಹಾರ ತಿಳ
೧೭ ವಳ್ಳಿಯ ಸಾಸಿರ್ವ್ವರ ಮಕ್ಕಳು ಕಿಜುವಡಿಯ ಬಸವ. . .ಯ
೧೮ ನಾಗಗೋಸಿಯ ಕಟ್ಟಿಂದೆ ಕುಸಲಾವತಿ ವೇಣಗೌಡ ಮುಗಳಿಯ ಬಾಚಿ
೧೯ ಮಯ್ಯನಾ ಕಟ್ಟಿನ ಧರ್ಮ್ಮಕ್ಕಂ ಕಚ್ಚವಿಯ ಗಳೆಯಲು ಸರ್ವಬಾಧಾಪರಿ
೨೦ ಹಾರವಾಗಾ ಕೆಜು'ಯ ಕೆಳಗೆ ನಿರ್ಬಾಧ್ಯಂ ಮಾಡಿ ಬಿಟ್ಟಗರ್ದ್ದೆಕಮ್ಮ ಐ
೨೧ ವತ್ತು ೫೦ ಮತ್ತ ವಾ ಕೂಸಲೂರೆಪ್ಪತ್ತೊಕ್ಕಲುಂ ವಲ್ಲಿಯ
೨೨ ಚಾಮುಣ್ಡಗೌಣ್ಡನು ಮುಗಳಿಯ ಬಾಚಿಮಯ್ಯನುಂವಿರ್ದ್ದಾಕಟ್ಟಿನ ನೀರುವರಿ
೨೩ ಎನಿತುಕೆಯುಂಟನಿತಕ್ಕ[ೆ]ಂ ಮತ್ತಲಿಂಗೊನ್ದು. . . ನೋವಂ ಬಿಟ್ಟರೀಧರ್ಮ್ಮಮ
೨೪ ನಾವನೊರ್ವ್ವಂ ಪ್ರತಿಪಾಳಿಸುವರ ಧರ್ಮ್ಮ॥ ನೆರೆಮೂಜು ಲೋಕದೊಳಗೀ ಕೆಜ'ಯಿಂದೆ ಸಮ
೨೫ ನೆಗರ್ತ್ತೆಯುಂ ಕೀರ್ತ್ತಿಯುಂ ಮೀಕಿಜುವಡೆಯ ನಾಗಗೋಸಿಗೆ ನೆರೆಯಾಯುಂ ಶ್ರೀಯಮಂ
೨೬ ಮಾಚನ್ನಾರ್ಕ್ಕ[ಂ]॥ ಇನ್ತೀಧರ್ಮ್ಮನಾರ್ವೊಂ ಪ್ರತಿಪಾಳಿಸಿದಂ ವಾರಣಾಸಿ ಕುರುಕ್ಷೇತ್ರ ಪ್ರಯಾ
೨೭ ಗೆ ಯರ್ಘ್ಯ ತೀರ್ಥಸ್ಥಾನದೊಳಗಾ. . . . . ಯಂ ಕೋಡುಂಕೊಳಗು ವಂ ಪಂಚರತ್ನಂಗಳಿಂ ಕಟ್ಟಿಸಿ
೨೮ ಬ್ರಾಹ್ಮಣರ್ಗುಭಯ. . . . ದಾನಮಂ ಕೊಟ್ಟಫಳಮಕ್ಕೆ॥ ಈ ಧರ್ಮ್ಮವಂ ಕಾದು.
೨೯ ತೀರ್ತ್ಥಸ್ಥಾನದಲಿನಿತು ಕವಿಲೆಯ್ನ[?]ಗನಿತು ಬ್ರಾಹ್ಮಣರುಮನಳಿದ ಪಾಪವ. . . .
೩೦ ಕು॥ ಸ್ವದತ್ತಂ ಪರದತ್ತಂ ವಾಯೋಹರೇತಿ ವಸುನ್ಧರಾ . ಷಷ್ಠಿವ[ಣ]ರ್ಷ ಸಹಸ್ರಾಣಿ ವಿಷ್ಠಾ
೩೧ ಯಾಂ ಜಾಯತೇ ಕ್ರಿಮಿಃ॥ ಸಾಮಾನ್ಯೋಯಂ ಧರ್ಮ್ಮಸೇತು ನೃಪಾಣಾಂ ಕಾಲೇಕಾಲೇ
೩೨ ಪಾಲನಿಯೋ ಭವ . ಸಕ್ತಿನೇತಾಂ ಭಾವಿನಃ ಪಾರ್ತ್ಥಿವೇನ್ದ್ರ್ಭೂಂಯೋ ಭೂಂಯೇ
೩೩ ಯಾಚತೇ ರಾಮಚಂದ್ರ॥ ಖಣ್ಡರಿಸಿದಂ ತಿಪ್ಪೋಜನಮಗ ಸಿಂಗೋಜ.

*

ಡಾ|| ಎ.ಕೆ. ಶಾಸ್ತ್ರಿ*

ಸ್ವರ್ಣವಲ್ಲೀ ಮಠಕ್ಕೆ ಸೋದೆಯ ಇಮ್ಮಡಿ ಅರಸಪ್ಪನಾಯಕನ ಧರ್ಮಶಾಸನಗಳು

ಇಂದಿನ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಸ್ವಾದಿ, ಹಿಂದೊಮ್ಮೆ ಸ್ವಾದಿಅರಸರ ರಾಜಧಾನಿಯಾಗಿತ್ತು. ಸುಧಾಪುರ, ಸೊದೆ, ಸೋಮದಾಪುರ, ಸೋವದೆ, ಸೋದೆ, ಸೋಂದಾಭಿದಾನ (ಸೋಂದಾನಗರ), ಸೋಂದಾ, ಸೂಂದಾ, ಸ್ವಾದಿ ಇತ್ಯಾದಿ ಹೆಸರುಗಳಿಂದ ಪೂರ್ವದಲ್ಲಿ ಈ ಸ್ಥಳ ಗುರುತಿಸಲ್ಪಟ್ಟಿದೆ. ಹದಿನಾರನೆಯ ಶತಮಾನದ ಮಧ್ಯಕಾಲದಿಂದ ಹದಿನೆಂಟನೆಯ ಶತಮಾನದ ಮಧ್ಯಕಾಲದವರೆಗೆ ಸೋದೆ ರಾಜ್ಯದ ಉಚ್ಛ್ರಾಯಕಾಲ ಎಂದು ಪರಿಗಣಿಸಬಹುದು. ಉಚ್ಛ್ರಾಯ ಕಾಲದಲ್ಲಿ ಸೋದೆ ರಾಜ್ಯವನ್ನು, ಕ್ರಮವಾಗಿ, ಇಮ್ಮಡಿ ಅರಸಪ್ಪ, ರಾಮಚಂದ್ರ, ರಘುನಾಥ, ಮಧುಲಿಂಗ, ಸವಾಯಿ ರಾಮಚಂದ್ರ, ಇಮ್ಮಡಿಸದಾಶಿವ, ಇಮ್ಮಡಿ ಬಸವಲಿಂಗ ಮತ್ತು ಮುಮ್ಮಡಿ ಸದಾಶಿವನಾಯಕರು ಆಳಿದರು.[೧] ಪ್ರಸ್ತುತ ಲೇಖನವು ಇಮ್ಮಡಿ ಅರಸಪ್ಪನಾಯಕನು (ಕ್ರಿ.ಶ. ೧೫೫೫-೧೬೦೩) ಸೋದೆ ರಾಜ್ಯದ ಹೊನ್ನೇಹಳ್ಳಿ ಗ್ರಾಮದ ಸ್ವರ್ಣವಲ್ಲೀಮಠದೊಂದಿಗೆ ಇರಿಸಿಕೊಂಡ ಸಂಬಂಧ ಕುರಿತು ವಿವೇಚಿಸುವದರಿಂದ, ಸ್ವರ್ಣವಲ್ಲೀಮಠಕ್ಕೆ ಇಮ್ಮಡಿ ಅರಸಪ್ಪನಾಯಕನು ಕೊಟ್ಟ ದಾನಶಾಸನಗಳ ಕಿರುಪರಿಚಯ ವನ್ನಷ್ಟೇ ಲೇಖನದಲ್ಲಿ ಮಾಡಿಕೊಡಲಾಗಿದೆ.[೨]

ಸ್ವರ್ಣವಲ್ಲೀಮಠ ಆದಿಶಂಕರರಷ್ಟೇ ಪುರಾತನವಾಗಿದ್ದರೂ, ಮಠ ಸ್ವರ್ಣವಲ್ಲಿಗೆ ಸ್ಥಳಾಂತರಗೊಂಡಿದ್ದು ಕ್ರಿ.ಶ. ೧೫೫೬ರಲ್ಲಿ. ಕಾಶಿಯಲ್ಲಿ ೯ನೆಯ ಶತಮಾನದಲ್ಲಿ ಸ್ಥಾಪಿತವಾದ ಶ್ರೀಮಠ, ಕ್ರಮೇಣ ಉಜ್ಜಯಿನಿ, ಗೋಕರ್ಣ, ಕಡತೋಕೆ, ಸಹಸ್ರಲಿಂಗ, ನಂತರ ಸ್ವರ್ಣವಲ್ಲಿಗೆ ಸ್ಥಳಾಂತರಗೊಂಡಿತು. ಅದ್ವೈತ ಸಂಪ್ರದಾಯದ ಸ್ವರ್ಣವಲ್ಲೀ ಮಠದ ಗುರುಪರಂಪರೆ ಅವಿಚ್ಛಿನ್ನವಾಗಿ ಇಂದಿಗೂ ಸಾಗಿ ಬಂದಿದೆ.[೩] ಗುರು ಪರಂಪರೆಯಲ್ಲಿ ೩೪ನೆಯವರಾದ ಹಿರೇ(ಹಿರಿಯ) ಶ್ರೀ ಚಂದ್ರಶೇಖರ ಸರಸ್ವತೀ (ಕ್ರಿ.ಶ. ೧೫೫೬- ಕ್ರಿ.ಶ.ಸು. ೧೫೯೭), ಮತ್ತು ೩೫ನೆಯವರಾದ ಶ್ರೀ ಸರ್ವಜ್ಞೇಂದ್ರ ಸರಸ್ವತಿಗಳು (ಕ್ರಿ.ಶ.ಸು. ೧೫೯೭- ಕ್ರಿ.ಶ.ಸು. ೧೬೨೦) ಇಮ್ಮಡಿ ಅರಸಪ್ಪನಾಯಕನ ಸಮಕಾಲೀನರು. ಮಠಗಳಿಗೆ ಭೂದಾನ ಮಾಡುವ ವಿಜಯನಗರ ಸಾಮ್ರಾಜ್ಯದ ಸಂಪ್ರದಾಯವನ್ನು ಸೋದೆಯ ಅರಸರು ಮುಂದುವರಿಸಿಕೊಂಡು ಬಂದರೆಂಬುದು ಅವರ ದಾನಶಾಸನಗಳಿಂದ ಖಚಿತವಾಗುತ್ತದೆ.

ತಮ್ಮ ವಂಶಸ್ಥರಿಗೆಲ್ಲ ಶಿವಸಾಯುಜ್ಯ ಮೋಕ್ಷಪದವಿ ಸ್ಥಿರವಾಗಬೇಕೆಂದು ಶಾ.ಶ. ೧೪೭೮ನೆಯ ರಾಕ್ಷಸ ಸಂವತ್ಸರದ ಮಾಘ ಬ.೧೪ (೧೦-೨-೧೫೫೬), ಸೋಮವಾರದಂದು, ಇಮ್ಮಡಿ ಅರಸಪ್ಪನು ಶ್ರೀಸೋದೆ ಸಹಸ್ರಲಿಂಗ[೪] ಮಠದ ಶ್ರೀ ಚಂದ್ರಶೇಖರ ಸರಸ್ವತೀ ಶ್ರೀಪಾದಂಗಳಿಗೆ, ಗೋಸೂರು ಎಂಬ ಅಡವಿಯನ್ನು ಕಡಿಸಿ, ಪೂಗಾರಾಮವನ್ನು ಮಾಡಿಸಿ, ಅಲ್ಲಿ ಯೋಗ್ಯವಾಗಿದ್ದ ಸ್ಥಳದಲ್ಲಿ ಮಠವನ್ನು ಕಟ್ಟಿಸಿ, ತನ್ಮಧ್ಯದಲ್ಲಿ ಶ್ರೀನರಸಿಂಹದೇವರಿಗೆ ಒಂದು ಮತ್ತು ಶ್ರೀಕಾಶಿ ವಿಶ್ವೇಶ್ವರ ಮತ್ತು ಶ್ರೀ ಶಂಕರಾಚಾರ್ಯರಿಗೆ ಒಂದು, ಹೀಗೆ ಎರಡು ಶಿಲಾಮಯ ದೇವಾಲಯಗಳನ್ನು ನಿರ್ಮಿಸಿ,[೫] ಈ ಮಠಕ್ಕೆ 'ಸ್ವರ್ನವಲ್ಲಿ'[೬] (ಸ್ವರ್ಣವಲ್ಲೀ) ಮಠವೆಂದು ನಾಮಧೇಯವಿಟ್ಟು, ಪೂಜೆ ವಿನಿಯೋಗ ಪ್ರತಿನಿತ್ಯ ನಿಯಮದಂತೆ ನಡೆಯಬೇಕೆಂದು, ಪೂಗಾರಾಮಕ್ಕೆ 'ಹೊಂನೆಹಳ್ಳಿ'[೭] (ಹೊನ್ನೇಹಳ್ಳಿ) ಗ್ರಾಮವೆಂದು ಹೆಸರಿಟ್ಟು, ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ಸಮರ್ಪಿಸಿದನೆಂದು ಧರ್ಮಸಾಧನವು ತಿಳಿಸುತ್ತದೆ.[೮] ಸೋದೆ ಅರಸರ ವಂಶ ವೃದ್ಧಿಯಾಗಲೆಂದು,[೯] ಸೋದೆಯರಸರಿಂದಲೇ ನಿರ್ಮಾಣವಾಗಿದ್ದ ಸಹಸ್ರಲಿಂಗಮಠದಲ್ಲಿ ಶ್ರೀ ನರಸಿಂಹ ಮತ್ತು ಶ್ರೀ ಚಂದ್ರಮೌಳೀಶ್ವರ ದೇವರನ್ನು ಸ್ವಾಮಿಗಳು ಆರಾಧಿಸುತ್ತಿರುವಾಗ, ಆ ಸಹಸ್ರಲಿಂಗಮಠಕ್ಕೆ ಕಳ್ಳರ ಉಪದ್ರವಾಗಿದ್ದರಿಂದ, ಗುರುಗಳ ತಪೋಯೋಗಾನುಷ್ಠಾನ ಸರಾಗದಿಂದ ನಡೆಯಬೇಕೆಂದು, ಇಮ್ಮಡಿ ಅರಸಪ್ಪನಾಯಕನು ಹೊನ್ನೇಹಳ್ಳಿಮಠದಲ್ಲಿ ಸ್ವರ್ಣವಲ್ಲೀ ಮಠವನ್ನು ನಿರ್ಮಾಣ ಮಾಡಿಸಿದನೆಂದೂ ಧರ್ಮಶಾಸನವು ತಿಳಿಸುತ್ತದೆ. ಹೊನ್ನೇಹಳ್ಳಿ ಎಂಬ ತೋಟಗ್ರಾಮವನ್ನು ಪೂಜಾವಿನಿಯೋಗದಲ್ಲಿ ನಿರ್ವಹಿಸಿಕೊಳ್ಳುತ್ತ, ಸರ್ವಮಾನ್ಯವಾಗಿ, ಸರ್ವಬಾಧಾಪರಿಹಾರವಾಗಿ, ಪೂರ್ವ ಮರ್ಯಾದೆ ಪ್ರಕಾರ ಶಿಬಿಕ

* ಭವಾನಿ ಬಿಲ್ಡಿಂಗ್ಸ್, ಹೊಸಮಾರ್ಕೆಟ್ ಯಾರ್ಡ್ ಹತ್ತಿರ, ಶಿರಸಿ-೫೮೧೪೦೨, ಉ.ಕ.

ಮುಂತಾದ ಬಿರುದುಗಳನ್ನು[೧೦] ಕೂಡಾ ಆಳಿ ಅನುಭವಿಸಿಕೊಂಡು, ನಿರುಪದ್ರವದಿಂದ ತಪೋಯೋಗಾನುಷ್ಠಾನವನ್ನು ಮಾಡಿಕೊಳ್ಳುತ್ತ ಇಚ್ಛಾನುಸಾರವಾಗಿ ಶ್ರೀಗಳವರು ಇರಬೇಕೆಂಬ ಅಂಶವನ್ನೂ ಶಾಸನದ ಪಾಠದ ಕೊನೆಯಲ್ಲಿ ನಮೂದಿಸಲಾಗಿದೆ. ಶಾಸನದ ಪಾಠದ ಕೊನೆಯಲ್ಲಿ ಸಾಕ್ಷಿಗ್ರಂಥಗಳನ್ನೂ ಉಲ್ಲೇಖಿಸಲಾಗಿದೆ. ಶಾಸನದಲ್ಲಿ ಇಮ್ಮಡಿ ಅರಸಪ್ಪನನ್ನು, "ಶ್ರೀಮನ್ನಾಳ್ವ ಮಹಾಪ್ರಭು ಸೋದೆ ಸಧರ್ಮಸಿಂಹಾಸನಾಧಿಶ್ವರರಾದ ಶ್ರೀ ಅರಸಪ್ಪನಾಯ್ಕರವರು" ಎಂದು ಸಂಬೋಧಿಸಲಾಗಿದೆ. ಶಾಸನದ ಪ್ರಾರ್ಥನಾ ಶ್ಲೋಕದಲ್ಲಿ ಸೋದೆಯನ್ನು, 'ಸೋಮದಾಪುರಿ' ಎಂದು ಉಲ್ಲೇಖಿಸಲಾಗಿದೆ.

ಶಾ. ಶ. ೧೪೭೮ನೆಯ (ಕ್ರಿ.ಶ. ೧೫೫೬)ರಾಕ್ಷಸ ಸಂವತ್ಸರದಲ್ಲಿ ಇಮ್ಮಡಿ ಅರಸಪ್ಪನಾಯಕನು, ದೇವಾಲಯ ನಿರ್ಮಿಸಿಕೊಟ್ಟು, 'ಸ್ವರ್ಣವಲ್ಲೀ' ಎಂಬ ಹೆಸರನ್ನಿಟ್ಟು, ಅಲ್ಲಿರುವ ಜಗತ್ಪತಿಯಾದ ನೃಸಿಂಹ ದೇವರಿಗೆ, ಈ ದೇವರನ್ನು ಪೂಜಿಸುವ ಯತಿವರ್ಯರಿಗೆ (ಚಂದ್ರಶೇಖರ ಸರಸ್ವತೀ) ನೈವೇದ್ಯ-ಭಿಕ್ಷೆ ಗೋಸ್ಕರವಾಗಿ ಅಡಿಕೆ ತೋಟ ಸಹಿತವಾದ ಹೊನ್ನೇಹಳ್ಳಿಗ್ರಾಮ, ಅಡಿಕೆ ತೋಟದಿಂದ ಕಂಗೊಳಿಸುವ ದೊಡ್ಡದಾದ ಗೊಣಸರ ಗ್ರಾಮ, ಮುಕ್ಕಿಗ್ರಾಮ, ಘಟ್ಟದ ಮೇಲಿನ ಮೊದೂರು, ಓಣೇಕೆರೆ, ಭತ್ತದಿಂದ ಶೋಭಿಸುವ ನೆಕ್ಕಾರು ಜೋಡಿಗ್ರಾಮ, ಕಕ್ಕೋಡು, ಗೋಳಗೋಡು, ಅಡಕಳ್ಳಿ ದೋಣಗಾರು, ಪಡುನಬಯಲು, ಶಿಂಗನಹಳ್ಳಿ, ಮುಂಡಿಗೇಸರ, ಅರಸಾಪುರ, ಗೋಳಿಕೊಪ್ಪ, ಕಾಳಮೆಣಸು ಮತ್ತು ಅಡಕೆ ಬೆಳೆಗಳಿಂದ ಸಮೃದ್ಧವಾದ, ಕೋಟೆಮನೆ, ಶೀಗೆಮನೆ, ಮಂಚಿಗೆ, ಹಲಸುಕೊಪ್ಪ, ಹುಳಸೆ, ವನಿಕೆಮನೆ, ಜಡ್ಡಿಗದ್ದೆ, ಮಲ್ಲಳ್ಳಿ, ಕವಡಿಕೆರೆ, ಬೆಳಖಂಡ, ಗರಾಸ, ಸಹಸ್ರಳ್ಳಿ, ಮುಂತಾದ ಗ್ರಾಮಗಳನ್ನು ಸಮರ್ಪಿಸಿದನೆಂದು ಹೊನ್ನೇಹಳ್ಳಿಮಠದ ಶಿಲಾಶಾಸನವು ತಿಳಿಸುತ್ತದೆ.[೧೧] "ಭೂಲೋಕದಲ್ಲಿ ಆಳುತ್ತಿರುವ ಎಲ್ಲ ಅರಸರಿಗೆ ಮತ್ತು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಭೂಮಿಯು ಅನುಭವಿಸಲೂ, ಕಸಿಯಲೂ ಆಗದು. ತನ್ನಿಂದ ದಾನವಾಗಿ ಕೊಡಲ್ಪಟ್ಟದ್ದು ಎರಡು ಪಟ್ಟು ಪುಣ್ಯವನ್ನೀಯುವದು. ಬೇರೆಯವರು ದಾನ ಕೊಟ್ಟಿದ್ದರೂ ಅದನ್ನು ರಕ್ಷಿಸಬೇಕು. ಪರದತ್ತಾಪಹಾರದಿಂದ ಸ್ವದತ್ತ ದಾನವೂ ನಿಷ್ಫಲವಾಗುತ್ತದೆ. ದಾನಪಾಲನೆಗಳ ಮಧ್ಯ ಪಾಲನೆಯೇ ವಿಶೇಷ ಫಲ ನೀಡುತ್ತದೆ. ದಾನದಿಂದ ಸ್ವರ್ಗವನ್ನು ಪಡೆಯುತ್ತಾನೆ ಮತ್ತು ಪಾಲನೆಯಿಂದ ಶಾಶ್ವತ ಸ್ಥಾನ ಪಡೆಯುತ್ತಾನೆ. ಸೂರ್ಯ, ಚಂದ್ರ, ಅಗ್ನಿ, ಗಾಳಿ, ಆಕಾಶ, ಭೂಮಿ, ನೀರು, ಹೃದಯ, ಯಮನು, ಹಗಲು-ರಾತ್ರಿಗಳೆರಡೂ, ಸಂಧ್ಯಾಕಾಲ, ಧರ್ಮವೂ ಕೂಡ, ಮನುಷ್ಯನ ನಡತೆಗೆ ಸಾಕ್ಷಿಯಾಗಿರುತ್ತವೆ," ಎಂಬುದಾಗಿ ಅದೇ ಹೊನ್ನೇಹಳ್ಳಿ ಶಾಸನದ ಪಾಠದ ಕೊನೆಯಲ್ಲಿ ನಮೂದಿಸಲಾಗಿದೆ.[೧೨] ಶಾಸನದಲ್ಲಿ ಸ್ವರ್ಣವಲ್ಲೀಮಠದ ಸ್ವಾಮಿಗಳ ಹೆಸರನ್ನು ನಮೂದಿಸಿಲ್ಲವಾದರೂ, ಶಾ.ಶ. ೧೪೭೮ (ಕ್ರಿ.ಶ. ೧೫೫೬)ರಲ್ಲಿ ಸ್ವರ್ಣವಲ್ಲೀಮಠದಸ್ವಾಮಿಗಳು ಹಿರೇಚಂದ್ರಶೇಖರ ಸರಸ್ವತಿಗಳಾಗಿದ್ದರೆಂದು ಈ ಹಿಂದೆ ನಮೂದಿಸಲಾದ ಶಾಸನವು ಖಚಿತಪಡಿಸುವದರಿಂದ, ಹೊನ್ನೇಹಳ್ಳಿ ಶಿಲಾಶಾಸನವೂ ಶ್ರೀ ಚಂದ್ರಶೇಖರ ಸರಸ್ವತಿಗಳಿಗೇ ಸಂಬಂಧಿಸಿದ್ದೆಂದು ಖಂಡಿತವಾಗಿ ಹೇಳಬಹುದು.

ಹಿಂದಿನಿಂದಲೂ ತಾನು ಆಳಿ ಬರುತ್ತಲಿದ್ದ ಭರ್ತನಹಳ್ಳಿ ಸೀಮೆಯೊಳಗಿನ ಉಮ್ಮಚಗಿ ಮಠದ ಕಾಲುಮಠಗಳು ಮತ್ತು ಅದಕ್ಕೆ ಸಲ್ಲುವ ಸ್ವಾಸ್ಥಿ(ಸ್ವಾಸ್ಥ್ಯ)ಗಳನ್ನೆಲ್ಲ ಹೊನ್ನೇಹಳ್ಳಿಯ ಚಂದ್ರಶೇಖರ ಸರಸ್ವತಿಗಳ ಶಿಷ್ಯರಾದ ಸರ್ವಜ್ಞೇಂದ್ರಸರಸ್ವತಿಗಳಿಗೆ, ಉಮ್ಮಚಗಿ ಮಠದ ನರಸಿಂಹ ದೇವರಿಗೆ ನಂದಾದೀಪ್ತಿ, ನೈವೇದ್ಯ ಮತ್ತು ಭಿಕ್ಷೆ ಮಾಡಿಕೊಂಡಿರಲೆಂದು, ಶಿಷ್ಯ ಪಾರಂಪರ್ಯವಾಗಿ ಆ ಭೂಮಿಗಳನ್ನು ಅನುಭವಿಸಿಕೊಂಡು ಬರುವಂತೆ, ಇಮ್ಮಡಿ ಅರಸಪ್ಪನಾಯಕನು ಕ್ರಿ.ಶ.ಸು. ೧೫೯೫ರಲ್ಲಿ ಧರ್ಮಸಾಧನ ನೀಡಿದನು.[೧೩] ಉಮ್ಮಚಗಿ ಮಠ ಪೂರ್ವದಿಂದಲೂ ಸ್ವರ್ಣವಲ್ಲೀ ಮಠದ ಕಾಲುಮಠವಾಗಿತ್ತೆಂಬುದೂ, ಪ್ರಸ್ತುತ ಶಾಸನದಿಂದ ತಿಳಿದುಬರುತ್ತದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಇಮ್ಮಡಿ ಅರಸಪ್ಪನಾಯಕನ ಇನ್ನೊಂದು ಶಾಸನವನ್ನು ಉಲ್ಲೇಖಿಸಬಹುದು. ಶಾ.ಶ. ೧೫೧೯ನೆಯ ದುರ್ಮುಖಿ ಸಂವತ್ಸರದ ಫಾಲ್ಗುಣ ಬ.೩೦ (೭-೩-೧೫೯೭) ರಂದು ಸ್ವರ್ಣವಲ್ಲೀಮಠದ ಹಿರೇಚಂದ್ರ ಶೇಖರ ಸರಸ್ವತಿಗಳಿಗೆ ಇಮ್ಮಡಿ ಅರಸಪ್ಪನು, ಪೂರ್ವದಲ್ಲಿ ಬಿಟ್ಟ ರಾಯದತ್ತಧರ್ಮ, ರಾಜದತ್ತಧರ್ಮ, ಪ್ರಭುದತ್ತಧರ್ಮ, ನಾಡಸೀಮೆಯವರು ಬಿಟ್ಟಧರ್ಮ, ಬ್ರಹ್ಮದತ್ತ ಧರ್ಮ, ತುಂಡುಧರ್ಮ ಮುಂತಾದ ಬಿಟ್ಟಧರ್ಮಸ್ಥಳಗಳನ್ನು ನೀಡಿದನೆಂದು ಧರ್ಮಸಾಧನದ ಮೂಲಪಟ್ಟೆಯು ಅರುಹುತ್ತದೆ.[೧೪] ಹೊನ್ನೇಹಳ್ಳಿ ಗ್ರಾಮ, ಹಶಿಹುಲ್ಲಮನೆ, ಹುಲ್ಲುದೇವರಸರುಹು, ಡಬಕುಳಿ, ಹಾಸಗದ್ದೆಪುರ, ಕೋಣೆಸರು, ಹೂಗುಂಡಿಗದ್ದೆ, ಶಿವದ(ಲ?) ಮನೆ, ಅರಸಾಪುರ, ಗೋಳಿಕೊಪ್ಪ, ಮೊದೂರು, ಓಣಿಕೆರೆ, ಮೊದೂರು ಗ್ರಾಮದೊಳಗಿನ ದವಸದಗ್ರಾಮ, ತಟ್ಟಿಸರುಹು, ಮೂರಡೆಗೆರೆ, ಶೀಗೆಹಳ್ಳಿ, ಹೆಗಡೆಕಟ್ಟು, ಶಿರಳಿ, ಹೆಗ್ಗಾರು, ದೋಣಿಗಾಮನೆ, ಕಾರಿಕನಮನೆ, ಗೊಣಸರ, ಮುಶಿಕೆಗ್ರಾಮ, ಕಕ್ಕೋಡ ಗ್ರಾಮ, ಅಡಕಳ್ಳಿ, ಕೊಡಲ್ಲಿಗದ್ದೆ, ಶಿಂಗನಮನೆ, ಮುಂಡಿಗೆಸರುಹು, ನೆರೂರು, ಕರುಮನೆ, ಬಾಳಗಾರು, ತೋಟಿಕೊಪ್ಪ, ಕವಡಿಕೆರೆ, ಬೆಳಖಂಡ, ಗರಾಸಾ, ಸಬಗೆರೆ, ಹಲ್ಲಸಖಂಡ, ಜಡ್ಡಿಗದ್ದೆ, ಘಾಂಡೆಮನೆ, ಕುಂಗಗದ್ದೆ, ಕಡವಿನಕೆರಿ, ಅರಗಡಿ, ಬೊಮ್ಮನಕಟ್ಟಾ, ಅಣಲಗಾರು, ಲಿಂಗದಬೈಲು, ಗೋಪನಮನೆ, ಗದ್ದೆನಕುಳಿ, ಗದ್ದೆಮಠ, ಕೊನಸಗುಳಿ, ಶಿಂಗದಮನೆ, ಬಿಗಾರು, ಅರಗೋಡು, ನಾಗರಕುರಾ, ಹಿತ್ತಲಕೊಪ್ಪ, ಜಂಬೆಕೊಪ್ಪ, ಕೋಟೆಮನೆ, ಮಣ್ಣಕುಳಿ, ಶೀಗೆಮನೆ, ಉಮ್ಮಚಿಗೆ, ವೊತ್ತಿಸರುಹು, ಹಲ್ಲಸಿನಕಟ್ಟಾ, ಹುಣಸೆಮನೆ, ವನಿಕೆಮನೆ, ಸಂಪೆಸರುಹು,

ಓರಸರುಹು, ಹಾಸಣಗೆಮಠ, ಆಗರೊಳಿ, ಹಿಂಡಸಿ, ಕುಂಬರಾಳು, ದಡಸಕ, ಚರಿಕೆ, ಚಿಲ್ಲುಗದ್ದೆ, ಚಿಕರೂಮನ ಮನೆ, ಮಂತಕುಳಿಯೊಳಗೆ ಉತಾರವಾದ ದವಸದಗದ್ದೆ ಮತ್ತು ತನ್ನ ಸೀಮೆಯಲ್ಲಿರುವ ಕಾಲುಮಠಗಳನ್ನು, ಪೂರ್ವ ಮರ್ಯಾದೆಯಲ್ಲಿ ನಡೆದು ಬರುವಂಥ ಆಚಾರ- ವ್ಯವಹಾರ, ಪ್ರಾಯಶ್ಚಿತ್ತ, ಪೌರೋಹಿತ್ತಿಕೆ, ಪುರಾಣ, ತೇಜಪೂಜೆ, ಸರತೆ, ಸಾಮ್ಯ, ಮುಂತಾದವುಗಳನ್ನೆಲ್ಲ ಅನುಭವಿಸಿಕೊಂಡು ಇರುವಂತೆ, ಇಮ್ಮಡಿ ಅರಸಪ್ಪನಾಯಕನು ಹಿರೇಚಂದ್ರಶೇಖರ ಸರಸ್ವತೀ ಶ್ರೀಪಾದಂಗಳ ದಿವ್ಯ ಪಾದಪದ್ಮಂಗಳಿಗೆ ಧರ್ಮಸಾಧನವನ್ನು ಅರ್ಪಿಸಿದನೆಂದು ತಿಳಿದುಬರುತ್ತದೆ.[೧೫] ಶ್ವೇತಛತ್ರ, ಉಭಯಚಾಮರ, ತಾಳ, ಶಂಖ, ದಿವಾಜ್ಯೋತಿ, ಸಿಂಹಮುಖ, ಶಿಬಿಕ(ಮೇನೆ), ಮುಂತಾದ ಸಕಲ ಬಿರುದುಗಳನ್ನೂ ಶ್ರೀಗಳವರು ಶಿಷ್ಯ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ಅರಸಪ್ಪನು ಧರ್ಮಶಾಸನ ನೀಡಿದನು. ಶಾ.ಶ. ೧೫೧೭(ಕ್ರಿ.ಶ. ೧೫೯೭)ರ ಈ ಧರ್ಮ ಶಾಸನವು ಇಮ್ಮಡಿ ಅರಸಪ್ಪನಾಯಕನ ಕಾಲಕ್ಕೆ ಸೇರಿದ, ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ದೊರೆತ ಕೊನೆಯ ದಾಖಲೆಯಾಗಿದೆ. ಅದರಂತೆ, ಹಿರೇಚಂದ್ರಶೇಖರ ಸರಸ್ವತಿಗಳ ಹೆಸರನ್ನು ಉಲ್ಲೇಖಿಸುವ ಕೊನೆಯ ಧರ್ಮಶಾಸನವೂ ಇದೇ ಆಗಿದೆ.

ಇಮ್ಮಡಿ ಅರಸಪ್ಪನಾಯಕನಿಗೆ ಸ್ವರ್ಣವಲ್ಲೀ ಮಠದ ಗುರುಗಳ ಬಗ್ಗೆ ಎಷ್ಟೊಂದು ಗೌರವವಿತ್ತೆಂಬುದು ಮೇಲ್ಕಾಣಿಸಿದ ಧರ್ಮಶಾಸನಗಳಿಂದ ಸ್ಪಷ್ಟವಾಗುತ್ತದೆ. ಮಠಕ್ಕೆ ಪೂರ್ವದಲ್ಲಿ ಬಿಟ್ಟ ಧರ್ಮಸಾಧನಗಳನ್ನೂ ಅರಸಪ್ಪನು ಗೌರವಿಸಿದನು. ಅರಸಪ್ಪನ ಉತ್ತರಾಧಿಕಾರಿಗಳೂ, ಮಠಕ್ಕೆ ದತ್ತಿ ಬಿಡುವ ಸತ್‌ಸಂಪ್ರದಾಯ ವನ್ನು ಮುಂದುವರೆಸಿಕೊಂಡು ಬಂದುದು ಗಮನಾರ್ಹವಾಗಿದೆ.[೧೬]

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. i. ಹೆಚ್ಚಿನ ಮಾಹಿತಿಗಾಗಿ ಲೇಖಕರ **'ಶಿರಸಿ ತಾಲೂಕಿನ ಇತಿಹಾಸ'**, ಎಂ.ಇ. ಸೊಸೈಟಿ, ಶಿರಸಿ, ೧೯೮೮, ಪು.೬೪-೯೨.
ii. **'ಸ್ವಾದಿ ಅರಸು ಮನೆತನ'**, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೫

೨. ಸ್ವರ್ಣವಲ್ಲೀ ಮಠದೊಂದಿಗೆ ಸ್ವಾದಿ ಅರಸರು ಇರಿಸಿಕೊಂಡ ಸಂಬಂಧದ ಮೇಲೆ ಬೆಳಕು ಬೀರುವ ೪೬ (೫-೫೦) ದಾಖಲೆಗಳನ್ನು ಲೇಖಕರು ತಮ್ಮ **'ಶ್ರೀಸೋಂದಾಸ್ವರ್ಣವಲ್ಲೀ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು'**, ಸಂ.I (ಸ್ವ.ದಾ. ೫-೫೦)ರಲ್ಲಿ ಉಲ್ಲೇಖಿಸಿದ್ದಾರೆ.

೩. ಸ್ವರ್ಣವಲ್ಲೀಮಠದ ಗುರುಪರಂಪರೆಯಲ್ಲಿ ಒಂಬತ್ತನೆಯವರಾದ ಶ್ರೀ ಗಂಗಾಧರೇಂದ್ರ ಸರಸ್ವತಿಗಳು ರಚಿಸಿದ **'ಜ್ಞಾನದೀಪಿಕಾ'**ದ ಎರಡನೆಯ ಅಧ್ಯಾಯದಲ್ಲಿ, ವಿಶ್ವಪತಿ ದೀಕ್ಷಿತರ ಮಗ, ಗುಣನಿಧಿಯು ಕಾಶಿಯಲ್ಲಿ ಆದಿಶಂಕರಾಚಾರ್ಯರನ್ನು ಕಂಡು, ಅವರ ಶಿಷ್ಯರಾದ ಭಾಸ್ಕರೇಂದ್ರ ಸರಸ್ವತಿಗಳಿಂದ ಸನ್ಯಾಸ ಪಡೆದು, ದಶಾಶ್ವಮೇಧ ಘಾಟನಲ್ಲಿ ನಿರ್ಮಿತವಾದ ಮಠಕ್ಕೆ ಪ್ರಥಮ ಗುರುಗಳಾಗಿ 'ವಿಶ್ವವಂದ್ಯಸರಸ್ವತೀ'ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದರು. ಕಾಶಿಯಿಂದ ಕ್ರಮೇಣ ಬೇರೆ ಬೇರೆ ಸ್ಥಳಗಳಿಗೆ ಶ್ರೀಮಠ ಸ್ಥಳಾಂತರಗೊಂಡ ಚಾರಿತ್ರಿಕ ಘಟನೆಗಳನ್ನು 'ಜ್ಞಾನದೀಪಿಕಾ'ದಲ್ಲಿಯ ೫ ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

೪. ಸ್ವರ್ಣವಲ್ಲಿಗೆ ಸಮೀಪವಿರುವ, ಸಹಸ್ರಲಿಂಗದಲ್ಲಿ, ಶಾಲ್ಮಲಾ ನದಿಯ ದಂಡೆಯ ಮೇಲೆ, ಸ್ವರ್ಣವಲ್ಲಿಗೆ ಸ್ಥಳಾಂತರಗೊಳ್ಳುವ ಪೂರ್ವದಲ್ಲಿ, ಶ್ರೀಮಠವಿತ್ತು. ಆದರೆ ಇಂದು ಅಲ್ಲಿ ಮಠದ ಕುರುಹುಗಳಾವುವೂ ಗೋಚರಿಸುವದಿಲ್ಲ.

೫. ಸ್ವರ್ಣವಲ್ಲಿಯಲ್ಲಿ ಇಂದಿಗೂ ಈ ದೇವಾಲಯಗಳಿದ್ದು, ನಿತ್ಯಪೂಜೆ ನಡೆಯುತ್ತದೆ.

೬. ಹೆಚ್ಚಿನ ಶಾಸನಗಳಲ್ಲಿ ಮತ್ತು ದಾಖಲೆಗಳಲ್ಲಿ ಸ್ವರ್ಣವಲ್ಲಿಯನ್ನು **'ಸ್ವರ್ನವಲ್ಲಿ'** ಎಂದೇ ಉಲ್ಲೇಖಿಸಲಾಗಿದೆ.

೭. ಗ್ರಾಮೀಣ ಜನರು ಇಂದಿಗೂ 'ಹೊನ್ನಳ್ಳೀಮಠ' ಎಂದೇ ಕರೆಯುತ್ತಾರೆ.

೮. ಸ್ವ.ದಾ. ೬

೯. ಆದ್ದರಿಂದಲೇ, ಪುತ್ರಸಂತತಿ ಇಲ್ಲದವರು ಶ್ರದ್ಧೆಯಿಂದ ಸ್ವರ್ಣವಲ್ಲೀ ಮಠದಲ್ಲಿ ಪೂಜೆ ಮಾಡಿಸಿದರೆ ಪುತ್ರಸಂತತಿ ಆಗುವದೆಂದು ಭಕ್ತರಲ್ಲಿ ಗಾಢ ನಂಬಿಕೆಯಿದೆ.

೧೦. ಉಜ್ಜಯಿನಿಯ ವಿಕ್ರಮಾರ್ಕರಸನು ಗುರುಪರಂಪರೆಯಲ್ಲಿ ದ್ವಿತೀಯರಾದ ಶ್ರೀ ನಾರಾಯಣೇಂದ್ರ ಸರಸ್ವತಿಗಳಿಗೆ ಕ್ರಿ.ಶ. ೯೦೫ರಲ್ಲಿ ಕೊಟ್ಟ ಶಾಸನದಲ್ಲಿ, ಮೇನೆ, ಶ್ವೇತಛತ್ರ, ಉಭಯಚಾಮರ, ಮಕರ ತೋರಣ, ಹಗಲು ದೀವಟಿಗೆ, ಸಿಂಹಮುಖ, ಪೂರ್ಣಕುಂಭ, ಶಂಖಚಕ್ರ ಚಂದ್ರ ಸೂರ್ಯ ಶ್ವೇತಶಂಖ ಚಿಹ್ನಿತ ಪತಾಕೆಗಳು, ನಾನಾ ವಿಧ ವಾದ್ಯಗಳು, ಯತಿಗಳ ಭಿಕ್ಷೆಗಾಗಿ ಗ್ರಾಮಗಳು ಮತ್ತು ಅನೇಕ ಬಿರುದುಗಳನ್ನು ಮಹಾಜನರಿಂದ ತುಂಬಿದ ಸಭೆಯಲ್ಲಿ ಶಾಸನ ಮಾಡಿಕೊಟ್ಟಿರುವುದಾಗಿ ನಮೂದಿಸಲಾಗಿದೆ. ಅಂದಿನಿಂದ ಇಂದಿನವರಗೂ ಸ್ವರ್ಣವಲ್ಲೀ ಪೀಠಕ್ಕೆ ಬಂದ ಗುರುಗಳು ಮೇಲ್ಕಾಣಿಸಿದ ಬಿರುದಾವಳಿಗೆಲ್ಲ ಅರ್ಹರಾಗಿರುತ್ತಾರೆ.

೧೧ ಸ್ವ. ದಾ. ೭

೧೨. ಶಾಸನದ ಭಾಷೆ, ಸಂಸ್ಕೃತ ಮತ್ತು ಲಿಪಿ ಕನ್ನಡ. ಸಂಸ್ಕೃತದಲ್ಲಿರುವ ಶಾಸನದ ಪಾಠವನ್ನು ಸ್ವರ್ಣವಲ್ಲೀ ಮಠದ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರಾದ ವಿದ್ವಾನ್ ಭಾಲಚಂದ್ರ ಶಾಸ್ತ್ರಿಗಳು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿದ್ದಾರೆ.

೧೩. ಸ್ವ.ದಾ. ೧೪
ಕ್ರಿ.ಶ. ೧೫೯೭ರ ವರೆಗೂ ಹಿರೇಚಂದ್ರಶೇಖರಸರಸ್ವತಿಗಳು ಸ್ವರ್ಣವಲ್ಲೀ ಪೀಠದಲ್ಲಿದ್ದರು. ಆದರೆ ಕ್ರಿ.ಶ. ೧೫೯೨ ಮತ್ತು ೧೫೯೫ರಲ್ಲಿ ಹಿರೇಚಂದ್ರಶೇಖರ ಸರಸ್ವತಿಗಳ ಶಿಷ್ಯರಾದ ಸರ್ವಜ್ಞೇಂದ್ರ ಸರಸ್ವತಿಗಳಿಗೆ ಧರ್ಮಸಾಧನಗಳನ್ನು ನೀಡಲಾಗಿರುವದರಿಂದ, ಹಿರೇಚಂದ್ರಶೇಖರ ಸರಸ್ವತಿಗಳು ಕ್ರಿ.ಶ. ೧೫೯೨ರ ಅವಧಿಯಲ್ಲಿ, ಅಥವಾ ಅದಕ್ಕೂ ಸ್ವಲ್ಪ ಪೂರ್ವದಲ್ಲಿ ಸರ್ವಜ್ಞೇಂದ್ರರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು, ಮಠದ ಕಾರ್ಯಭಾರವನ್ನು ಅವರಿಗೆ ಒಪ್ಪಿಸಿರಲು ಸಾಕು.

೧೪. ಸ್ವ. ದಾ. ೧೬

೧೫. ಧರ್ಮಸಾಧನದಲ್ಲಿ ನಮೂದಿತವಾದ ಗ್ರಾಮಗಳ ಹೆಸರುಗಳನ್ನು ಅಲ್ಲಿ ಇದ್ದಂತೆಯೇ ಬರೆಯಲಾಗಿದ್ದು, ಕಾಲ ಸರಿದಂತೆ, ಹೆಸರುಗಳನ್ನು ಉಚ್ಚರಿಸುವಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದನ್ನು ಇಂದು ನಾವು ಗಮನಿಸಬಹುದು. ಧರ್ಮಸಾಧನದ ಲಿಪಿಕಾರರು ವಿದ್ವಾಂಸರಾಗಿರದೆ ಸಾಮಾನ್ಯರಾಗಿದ್ದರಿಂದ, ಲಿಪಿ ಮತ್ತು ಭಾಷಾ ದೋಷಗಳನ್ನು (ಕರ್ನಾಟಕದಲ್ಲಿಯ ಇನ್ನಿತರ ಶಾಸನಗಳಲ್ಲಿ ಕಂಡು ಬರುವ ದೋಷಗಳಂತೆ) ಇಲ್ಲಿಯೂ ಕಾಣಬಹುದು.

೧೬. ಇಮ್ಮಡಿ ಅರಸಪ್ಪನು ವೈಷ್ಣವ ಸಿದ್ಧಾಂತವನ್ನೂ ಪೋಷಿಸಿದನೆಂಬುದಕ್ಕೆ ಸೋದೆಯ ತ್ರಿವಿಕ್ರಮ ದೇವಾಲಯದ ಕ್ರಿ.ಶ. ೧೫೯೩ರ ಶಾಸನವೇ ಸಾಕ್ಷಿ. ಸೋದೆಯರಸರು ಜೈನ, ಅದ್ವೈತ(ಹವ್ಯಕ), ದ್ವೈತ, ವಿಶಿಷ್ಟಾದ್ವೈತ, ಮತ್ತು ವೀರಶೈವ ಮತಧರ್ಮಗಳನ್ನು ಪೋಷಿಸಿ, ಧರ್ಮಸಮನ್ವಯತೆಯನ್ನು ಕಾಪಾಡಿಕೊಂಡು ಬಂದರೆಂಬುದನ್ನು ಅಂದಿನ ಶಾಸನಗಳ ಅಧ್ಯಯನದಿಂದ ಅರಿಯಬಹುದು. (ಹೆಚ್ಚಿನ ಮಾಹಿತಿಗಾಗಿ, ಪೂರ್ವೋಕ್ತ **'ಸ್ವಾದಿ ಅರಸುಮನೆತನ'** ಓದಿರಿ.

ಶರಣಬಸಪ್ಪ ಕೋಲ್ಕಾರ*

ವಿಜಯನಗರದ ಅಚ್ಯುತದೇವರಾಯನ ಹನುಮನಹಾಳ ಶಾಸನ

ಗಂಗಾವತಿ ತಾಲೂಕಿನಲ್ಲಿರುವ ಹನುಮನಹಾಳ ಕನಕಗಿರಿಯಿಂದ ಉತ್ತರಕ್ಕೆ ಎರಡು ಕಿಲೋಮೀಟರ್ ಅಂತರದಲ್ಲಿದೆ. ಗ್ರಾಮದ ಮಧ್ಯದಲ್ಲಿರುವ ಇತ್ತೀಚಿನ ಆಂಜನೇಯ ದೇವಾಲಯದ ಮುಂದಿನ ಆವರಣದಲ್ಲಿ ಈ ಶಾಸನಶಿಲೆ ಇದೆ.

ಶಾಸನ ಮೇಲ್ಭಾಗದಲ್ಲಿ ಶಂಖ, ತ್ರಿನಾಮ ಮತ್ತು ಚಕ್ರ ಚಿಹ್ನೆಗಳಿವೆ. ಲಿಪಿ, ೧೬ನೇ ಶತಮಾನದ ಕನ್ನಡ, ಭಾಷೆ ಕೂಡ ಕನ್ನಡ. ಇದರಲ್ಲಿ ಒಟ್ಟು ೨೩ ಸಾಲುಗಳಿದ್ದು, ಅವುಗಳಲ್ಲಿ ಮೊದಲ ೯ ಸಾಲುಗಳು ಸ್ಪಷ್ಟವಾಗಿವೆ. ಆದರೆ ಶಾಸನದ ಮಧ್ಯಭಾಗ ಬಹುಮಟ್ಟಿಗೆ ಸವೆದು ಹೋಗಿದ್ದು ಅಲ್ಲದೆ ಮಧ್ಯಭಾಗದಿಂದ ಕೆಳಭಾಗದವರೆಗೆ ⊐ ಅಕಾರದಲ್ಲಿ ಕುಳಿಗಳನ್ನು ಹಾಕಿರುವುದರಿಂದ ಶಾಸನದ ವಿಷಯವನ್ನು ಸಂಪೂರ್ಣವಾಗಿ ಅರ್ಥೈಸುವುದು ಕಷ್ಟವಾಗಿದೆ.

ಕಾಲ: ಶಾಸನದಲ್ಲಿ ಉಲ್ಲೇಖಿತ ಕಾಲ ಇಂತಿದೆ. ಶ್ರೀ ಯಾದ್ಯುದಯ ಶಾಲಿವಾಹನ ಸಕ ವರುಷಂಗಳ ೧೪೫೮ನೇ ದುರ್ಮುಖಿ ಸಂವತ್ಸರದ ಮಾರ್ಗಶಿರ ಶು. ೧೫ ಸಮಕ್ರಹಣ ಅಂದರೆ ಕ್ರಿ.ಶ. ೧೫೩೬ ಕಾಲದ್ದು ಈ ಶಾಸನ.

ವಿಷಯ: ಇದು ದಾನ ಶಾಸನವಾಗಿದ್ದು, ಮಹಾರಾಜಾಧಿರಾಜ, ಪರಮೇಶ್ವರ, ಶ್ರೀ ವೀರಪ್ರತಾಪ ಅಚ್ಯುತದೇವರಾಯ ಮಲಪಂನವರು ನರಸಿಂಹದೇವರಿಗೆ ಅಮೃತಪಡಿಗೆ ಹನುಮನ ಹಾಳ ಗ್ರಾಮವನ್ನು ಸಮರ್ಪಿಸಿದ್ದು ಶಾಸನದ ವಿಷಯವಾಗಿದೆ.

ಶಾಸನದ ಮೊದಲ ೯ ಸಾಲುಗಳಿಂದ ಈ ಎಲ್ಲಾ ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಆದರೆ ಮುಂದಿನ ಸಾಲುಗಳಲ್ಲಿಯ (೧೧ ರಿಂದ ೧೭) ವಿಷಯ ಸ್ಪಷ್ಟವಾಗುವುದಿಲ್ಲ. ಆದರೂ ಈ ಭಾಗದಲ್ಲಿ ಶ್ರೀ ಮನ್ನಾಪುರಗ್ರಾಮದ ಉಲ್ಲೇಖ ಮತ್ತು ರಾಯಮಾರಾಯರಿಗೆ ಪುಣ್ಯವಾಗಬೇಕೆಂದು ಇತ್ಯಾದಿ ಶಬ್ದಗಳನ್ನು ಗುರುತಿಸಬಹುದು. ಈ ಉಲ್ಲೇಖಗಳನ್ವಯ ಕೆಲವರಿಗೆ (ರಾಯಮಾರಾಯರಿಗೆ) ಪುಣ್ಯವಾಗಬೇಕೆಂದು ಅಚ್ಯುತ ದೇವರಾಯರು ನರಸಿಂಹದೇವರಿಗೆ ಈ ಗ್ರಾಮವನ್ನು ದಾನ ಮಾಡಿದ್ದೆಂದು ಗುರುತಿಸಬಹುದು.

ಶಾಸನದಲ್ಲಿ ಉಲ್ಲೇಖಿತ ನರಸಿಂಹದೇವರು ಯಾವ ಗ್ರಾಮದ್ದು ಎಂಬ ಉಲ್ಲೇಖವಿಲ್ಲ. ಬಹುಶಃ ನರಸಿಂಹ ಕನಕಗಿರಿಯ ಪ್ರಸಿದ್ಧ ನರಸಿಂಹದೇವರೇ ಇರಬೇಕು. ಏಕೆಂದರೆ ಹನುಮನ ಹಾಳದಲ್ಲಿ ಯಾವುದೇ ನರಸಿಂಹ ದೇವಾಲಯವಿಲ್ಲ. ಅಲ್ಲದೇ ಇದೇ ಅಚ್ಯುತದೇವರಾಯರು ಕನಕಗಿರಿಯ ಲಕ್ಷ್ಮಿನರಸಿಂಹದೇವರ ಅಮೃತಪಡಿ, ನೈವೇದ್ಯ, ಪೂಜೆ ಮುಂತಾದ ಕಾರ್ಯಗಳಿಗಾಗಿ ನಾಲ್ಕು ಗ್ರಾಮಗಳನ್ನು ದಾನ ಮಾಡಿದ ಬಗ್ಗೆ ಕನಕಗಿರಿಯ ನರಸಿಂಹ ದೇವಾಲಯ ಪ್ರಾಂಗಣದಲ್ಲಿ ಒಂದು ಶಾಸನವಿದೆ.[೧] ಹೀಗಾಗಿ ಇಲ್ಲಿಯ ನರಸಿಂಹದೇವರು ಕನಕಗಿರಿಯ ಲಕ್ಷ್ಮಿನರಸಿಂಹ ದೇವರೆನ್ನುವುದು ನಿಸ್ಸಂಶಯ.

ಶಾಸನದ ಕೊನೆಯಲ್ಲಿ (೧೮ ರಿಂದ ೨೩ ಸಾಲು) ದಾನವನ್ನು ನೀಡಿದ ವಿಧ ಮತ್ತು ದಾನದ ಭೂಮಿಯಲ್ಲಿಯ ಎಲ್ಲಾ ವಿಧವಾದ ಸಂಪತ್ತು ಅನುಭೋಗಿಗೆ ಸಲ್ಲುತ್ತದೆನ್ನುವುದರ ಉಲ್ಲೇಖವಿದೆ. ಹೀಗೆ ಈ ಶಾಸನ ಅಷ್ಟು ಮಹತ್ವದ ಶಾಸನವಾಗಿರದಿದ್ದರೂ ವಿಜಯನಗರಕ್ಕೆ ಸಂಬಂಧಿಸಿದಂತೆ ಸಮಕಾಲೀನ ಐತಿಹಾಸಿಕ ಮಹತ್ವವನ್ನು ಹೊಂದಿದ್ದಂತು ನಿಜ.

ಶಾಸನಪಾಠ

೧ ಸುಬಮಸ್ತು ಶ್ರೀ ನರಸಿಂಹ
೨ ನಗತಿ ೧ ಶ್ರೀ ಯಾದ್ಯುದಯ ಶಾಲಿವಾ
೩ ಹನ ಸತವರಷಂಗಳ ೧೪೫೮ನೆ
೪ ೧ ದುರ್ಮುಖಿ ಸಂವತ್ಸರದ ಮಾರ್ಗ
೫ ಶಿರ ಶು ೧೫ ಸಮಕ್ರಹಣ ಪುಂ
೬ ಣ್ಯ ಕಾಲದ. . . . .

---

* ಇತಿಹಾಸ ಉಪನ್ಯಾಸಕ, ಕಲ್ಮಠ ಶ್ರೀ ಚನ್ನಬಸವಸ್ವಾಮಿ ಮಹಿಳಾ ಮಹಾವಿದ್ಯಾಲಯ, ಗಂಗಾವತಿ - ೫೮೩ ೨೨೭

೭ ನರಸಿಂಹದೆವರಿಗೆ ಅಮೃತಪಡಿಗೆ ಸಮಪಿಸಿ
೮ ದ ಹನುಮನಹಾಳ ಗ್ರಾಮದ ದರ್ಮಶಾಸನ
೯ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರ ಪ್ರತಾಪ
೧೦ ಅಚ್ಯುತ. . . . .
೧೧ ಅಚ್ಯುತರಾಯ ಮಲಪಂ. ನವರು ನಾರಸಿಂಹ
೧೨ ದೆವರಿಗೆ ಶ್ರೀ ಮಂನ್ನಾಪುರ. . . . . ಪ
೧೩ ನ ಖಾನವೊಡೆಯ. . . . . ರಾಯಮಾರಾಯರಿಗೆ
೧೪ ಪುಂಣ್ಯವಾಗಬೇಕೆಂದು ಮಗ ಪುಣ್ಯ ಪಲ
೧೫ ದ. . . . .
೧೬ . . . . . . ಯಜಮಾನ ನಿಂನವೊಡೆಯರು
೧೭ . . . . . . .ಯ ನರಸಿಂಹ ದೆವರಿ
೧೮ . . . . . .ಸ್ಯೊಧಕ ದಾನಾದಾರಾ ಪೂರ್ವಕವಾ
೧೯ . . . . ಸಿಮೆವಳ. . . . . .
೨೦ ಗಣ. . . . . . . ಸಲ್ಲುವ ನಿಧಿ ನಿ. . . .
೨೧ ಕ್ಷೇಪ ಜಲ ಪಾವಾಷಣ (ಅ) ಕ್ಷಿಣಿ ಅಗಾಮಿ ಸಿಧ ಸಾ
೨೨ ದ. . . . . . ಗಳೆಂಬ. . . .ಅಷ್ಟಭೋಗ ತೇಜ ಸಾಮ್ಯ.
೨೩ . . . . *

(ಈ ಶಾಸನದ ಶೋಧನೆ ಮತ್ತು ಪ್ರತಿಮಾಡಿಕೊಳ್ಳುವಲ್ಲಿ ನೆರವಾದ ಸಹೋದರ ಚಂದ್ರಶೇಖರ ಕೋಲ್ಕಾರ್ ಮತ್ತು ಕನಕಗಿರಿಯ ಗ್ರಾಮ ಪಂಚಾಯತಿಯ ಶ್ರೀ ಅಶೋಕ ಬಾಂಢಗೆರವರಿಗೆ ನನ್ನ ಕೃತಜ್ಞತೆಗಳು.)

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಎ.ಆರ್.ಐ.ಇ. ೧೯೭೨-೭೩. ನಂ.ಬಿ ೧೩೨
೨. ಮೂಲ ಶಾಸನ ಫಲಕದಿಂದ ತೆಗೆದ ಪ್ರತಿಯ ಸಹಾಯದಿಂದ ಈ ಶಾಸನ ಪಾಠವನ್ನು ಸಿದ್ಧಪಡಿಸಲಾಗಿದೆ.

ಶ್ರೀಮತಿ ಚಂದನಾ ವೈ. ನೀಲಪ್ಪ*

ಜಿಗಳಿಯ ಅಪ್ರಕಟಿತ ದೇಗುಲಶಾಸನ-ಶಿಲ್ಪ

ಹರಿಹರದಿಂದ ಸುಮಾರು ಹನ್ನೊಂದು ಕಿಲೋಮೀಟರು ದೂರದಲ್ಲಿ ದಕ್ಷಿಣ ದಿಕ್ಕಿನಲ್ಲಿರುವ ಒಂದು ಪುಟ್ಟ ಹಳ್ಳಿ 'ಜಿಗಳಿ'. ಈ ಹಳ್ಳಿಯಲ್ಲಿ ಪುರಾತನವಾದ ಒಂದು ದೇವಾಲಯವಿದೆ. ಇದೇ ಜಿಗಳಿಯ ಪ್ರಸಿದ್ಧ ರಂಗನಾಥ ದೇವಾಲಯ. ದೇವಾಲಯದಲ್ಲಿ ಎರಡು ಗರ್ಭಗುಡಿಗಳಿವೆ ಮತ್ತು ಒಂದು ದೊಡ್ಡ ಸುಮಾರು ಇಪ್ಪತ್ತು ಅಂಕಣಗಳ ಪ್ರಾಂಗಣವಿದೆ. ದೇವಾಲಯಕ್ಕೆ ಎರಡು ಬಾಗಿಲುಗಳಿದ್ದು ಉತ್ತರದ ಬಾಗಿಲಿಗೆ ದಾವಣಗೆರೆ ೧೨೨ನೇ ಸಂಖ್ಯೆಯ ಶಾಸನವನ್ನು ಗೋಡೆಯಲ್ಲಿ ಸೇರಿಸಿದ್ದಾರೆ. ಈ ಶಾಸನ ಈಗಾಗಲೇ ಪ್ರಕಟಿತವಾಗಿದ್ದು ಎಲವಟ್ಟಿಯ ಸೋಮೇಶ್ವರ ಮತ್ತು ನಾರಾಯಣ ದೇವಾಲಯಕ್ಕೆ ನೀಡಿರುವ ದಾನದತ್ತಿಗಳ ವಿವರ ನೀಡುತ್ತಿದೆ. ಈ ಶಾಸನವು ಚಾಳುಕ್ಯ ವಿಕ್ರಮನ ಆಳ್ವಿಕೆಯ ೪೯ನೇ ವರ್ಷಕ್ಕೆ ಸಂಬಂಧಿಸಿದ್ದು ಎಂದು ಶಾಸನದಲ್ಲಿ ಉಲ್ಲೇಖವಿದೆ.

ಎಲವಟ್ಟಿ-ಜಿಗಳಿ ಈ ಎರಡೂ ಹಳ್ಳಿಗಳು ಪರಸ್ಪರ ಎರಡು ಕಿಲೋಮೀಟರು ದೂರದಲ್ಲಿವೆ. ದಾವಣಗೆರೆ ೧೨೨ನೇ ಶಾಸನ ಕಾಲಕ್ಕೆ ಈಗ ಜಿಗಳಿಯಲ್ಲಿರುವ ಶ್ರೀರಂಗನಾಥದೇವರು ಮತ್ತು ಗುಡಿಯ ಸುಕನಾಸಿಯಲ್ಲಿರುವ ಸೂರ್ಯದೇವರು ಎರಡೂ ಎಲವಟ್ಟಿಗೆ ಸೇರಿದವು ಎಂದು ಸ್ಪಷ್ಟವಾಗುತ್ತದೆ. ಹರಿಹರದಲ್ಲಿ ನಡೆಯುವ ಕಾರಣೀಕದಲ್ಲಿ ಜಿಗಳಿಯ ಶ್ರೀ ರಂಗನಾಥ ದೇವಾಲಯದವರೇ ಹೆಚ್ಚಿನ ಪಾತ್ರ ವಹಿಸುತ್ತಾರೆ.

ದೇವಾಲಯದ ವೀಕ್ಷಣೆ ಮಾಡುತ್ತಿರುವಾಗ ಇದರ ಛಾವಣಿಯ ಕಂಬದ ನಗಂದಿಯ ಒಂದು ಕಲ್ಲಿಗೆ ಬಳಿದ ಸುಣ್ಣದ ಹಿನ್ನೆಲೆಯಲ್ಲಿ ಅಕ್ಷರಗಳಿರುವಂತೆ ಕಂಡುಬಂತು. ಈ ಸುಣ್ಣವನ್ನು ಕೆರೆದು, ತೆಗೆದು ನೋಡಿದಾಗ ಅಲ್ಲಿ ಎಂಟು ಸಾಲಿನ ಒಂದು ಶಾಸನ ದೊರಕಿತು.

ಶಾಸನ ಪಾಠ

೧ ಯಿಕರಿನಾಮಾಸಂ
೨ ವಚರ ಚೈತ್ರ ಮ
೩ ಸರರಲು ಗುಡಿ ಕಚಕೂ
೪ ಜಿಗಳಿ ಗಉಡಿ ಮಲಪ
೫ ನ ಮಾಗ ಮಂಟಪ
೬ ಗಲುರವ ಪೂಜರಿ ಮ
೭ ಗ ಮಗ ಬಸವ ಒಜಿ
೮ ಒಪ್ಪ ದಗರ ಮುವವಾ

ಶಾಸನದ ಯಥಾ ಪ್ರತಿ ತೆಗೆಯಲು ಅನಾನುಕೂಲವಾದ ಕಾರಣ ಶಾಸನದ ಪಾಠವನ್ನು ಕಣ್ಣೋದುವಿಕೆಯಲ್ಲಿ ಕಂಡ ಹಾಗೆ ಇಲ್ಲಿ ನೀಡಲಾಗಿದೆ. ಶಾಸನವು ಕನ್ನಡ ಅಕ್ಷರಗಳಲ್ಲಿದ್ದು ಸುಮಾರು ೧೯ನೇ ಶತಮಾನದ ಮಧ್ಯಕಾಲಕ್ಕೆ ಸೇರಿದ ಲಿಪಿ ಸ್ವರೂಪದಲ್ಲಿದೆ. ಶಾಸನದ ವಿವರ ಈ ರೀತಿ ಇದೆ:

ಶಕವರ್ಷ ವಿಕಾರಿ ನಾಮ ಸಂವತ್ಸರದ ಚೈತ್ರ ಮಾಸದಲ್ಲಿ ಜಿಗಳಿಯ ಗೌಡಿ ಮನೆತನದ ಮಲ್ಲಪ್ಪನ ಮಗ ಈ ಮಂಟಪವನ್ನು ಕಟ್ಟಿಸಿರುವ ಉಲ್ಲೇಖವಿದೆ. ಈ ಮಂಟಪದ ಪೂಜಾರಿಯ ಮಗ ಬಸವಪ್ಪಾಜಿ ಇದ್ದನು ಎಂಬಂತೆ ತಿಳಿದುಬರುತ್ತದೆ. ಶಾಸನದ ಅಕ್ಷರಗಳು ಸ್ಫುಟವಾಗಿದ್ದು ಎಲ್ಲಿಯೂ ಮುಕ್ಕಾಗಿಲ್ಲ. ಆದ್ದರಿಂದ ಅಕ್ಷರಗಳನ್ನು ಗುರುತಿಸುವುದು ಕಷ್ಟವಾಗಿಲ್ಲ. ಅಕ್ಷರಗಳು ಚಿಕ್ಕವಾಗಿರದೆ ಸ್ವಲ್ಪ ದೊಡ್ಡವಾಗಿಯೇ ಇರುವುದರಿಂದ ಬರೆದುಕೊಂಡು ತರುವುದಕ್ಕೆ ಅನುಕೂಲವಾಗಿದೆ.

ದೇಗುಲ ವಾಸ್ತುಶಿಲ್ಪ: ಈ ಶಾಸನವಿರುವ ಮಂಟಪದಲ್ಲಿ ಒಟ್ಟು ಉದ್ದಕ್ಕೆ ಐದು ಕಲ್ಲಿನ ಕಂಬಗಳು ಮತ್ತು ಅಡ್ಡಕ್ಕೆ ನಾಲ್ಕು ಕಲ್ಲಿನ ಕಂಬಗಳಿದ್ದು ಒಟ್ಟು ೨೦ ಅಂಕಣಗಳಿವೆ. ಇದರಲ್ಲಿರುವ ಎರಡು ಅಂಕಣಗಳಿಗೆ ಪ್ರತ್ಯೇಕ ಗೋಡೆ ಕಟ್ಟಿ ದೇವಾಲಯಕ್ಕೆ ಸಂಬಂಧಿಸಿದ ಸಾಮಾನುಗಳ ದಾಸ್ತಾನು ಕೋಣೆಯಾಗಿ ಪರಿವರ್ತಿಸಿದ್ದಾರೆ. ಇಲ್ಲಿಯ ಕಲ್ಲು ಕಂಬಗಳು ಕೆಳಭಾಗದಲ್ಲಿ ಚತುರ್ಮುಖ ಹೊಂದಿದ್ದು ಮೇಲಿನ ಅರ್ಧವು ಅಷ್ಟಮುಖವಾಗಿದೆ. ಕಂಬದ ಮೇಲ್ಭಾಗದಲ್ಲಿ ನಗಂದಿಗಳನ್ನು

* ಶ್ರಾವಣ ಟ್ಯುಟೋರಿಯಲ್ಸ್, ನಡುವಲ್‌ಪೇಟೆ, ಹರಿಹರ - ೫೭೭ ೬೦೧

ಹೊಂದಿಸಿದ ಸ್ಥಾನದಲ್ಲಿ ಕೆಳಮುಖವಾಗಿ ಅರಳಿದ ಕಮಲ ದಳಗಳಿದ್ದಂತಿದೆ. ಛಾವಣಿಗೆಗೆ ಕಲ್ಲುಗಳನ್ನು ಹೊಂದಿಸಲಾಗಿದೆ. ಹೊರ ಮುಖದ ಕಂಬಗಳ ಸಾಲುಗಳನ್ನು ಗಾರೆಯ ಗೋಡೆಯನ್ನು ನಿರ್ಮಿಸಿ, ಜೋಡಿಸಿ ದೇವಾಲಯವನ್ನು ನಿರ್ಮಿಸಲಾಗಿದೆ. ಈ ಕಂಬಗಳಲ್ಲಿ ಅಲ್ಲಲ್ಲಿ ಕುದುರೆ ಸವಾರಿ ಮಾಡುವ ಯೋಧರ, ಆನೆ ಮೇಲೆ ಸವಾರಿ ಮಾಡುತ್ತಿರುವ ಯೋಧರ, ಕುಳಿತಿರುವ ಭಂಗಿಯಲ್ಲಿರುವ ಜಟ್ಟಿಗಳ, ಮಲ್ಲಯುದ್ಧನಿರತ ಜಟ್ಟಿಗಳ ಉಬ್ಬು ಚಿತ್ರಗಳಿವೆ. ಛಾವಣಿಯ ಹಾಸುಗಲ್ಲುಗಳಲ್ಲಿ ಒಂದೆಡೆ ಗಂಡ ಭೇರುಂಡ, ಇನ್ನೊಂದೆಡೆ ಆಮೆ, ಎರಡು ಮೀನುಗಳು, ಅರಳಿದ ನಾಲ್ಕು ಸುತ್ತಿನ ಕಮಲದಳಗಳು, ನಾಗಮಂಡಲದ ಉಬ್ಬು ಚಿತ್ರಣಗಳೂ ಇವೆ. ಒಂದುಕಡೆ ಕುದುರೆಯ ಹಿಂದೆ ಮುಂದೆ ಖಡ್ಗಧಾರಿಯಾದ ಯೋಧರು ನಡೆದು ಹೋಗುತ್ತಿರುವ ಉಬ್ಬು ಚಿತ್ರವಿದೆ. ಈ ಮಂಟಪದ ದೇವಾಲಯಕ್ಕೆ ಹೊಂದಿಕೊಂಡ ಕಂಬದಲ್ಲಿ ಆನೆಯ ಮೇಲೆ ಅಂಬಾರಿ ಮೆರವಣಿಗೆ ಮಾಡುತ್ತಿರುವ ಉಬ್ಬು ಶಿಲಾಕೃತಿಯು-ಇದು ಮೈಸೂರು ಒಡೆಯರ ಕಾಲದ ವೈಭವವನ್ನು ಪ್ರತಿಪಾದಿಸುವಂತೆ ಕಾಣುತ್ತದೆ. ಕೆಲವು ಚಿತ್ರಗಳಲ್ಲಿ ಕತ್ತಿ ಗುರಾಣಿಗಳ ಪ್ರದರ್ಶನ ಕೂಡ ಆಗಿದೆ.

ಈ ಸಭಾಂಗಣಕ್ಕೆ ಹೊಂದಿಕೊಂಡೇ ದೇವಾಲಯವಿದೆ. ನಡುವೆ ಉಭಯ ಸಾಮಾನ್ಯವಾದ ಗೋಡೆಯಿಂದ ಸಭಾಂಗಣವನ್ನೂ, ದೇವಾಲಯವನ್ನೂ ಪ್ರತ್ಯೇಕಿಸಲಾಗಿದೆ. ದೇವಾಲಯದಲ್ಲಿ ಎರಡು ಗರ್ಭಗುಡಿಗಳಿವೆ. ಪಶ್ಚಿಮಾಭಿ ಮುಖವಾಗಿರುವ ಮೂಲ ಗರ್ಭಗುಡಿಯಲ್ಲಿ ಶಂಖ, ಚಕ್ರ, ಕಮಲ, ಗದಾಧಾರಿಯಾದ ವಿಷ್ಣುವಿನ ನಿಂತಿರುವ ಭಂಗಿಯಲ್ಲಿರುವ ಮೂರ್ತಿ ಬಹು ಆಕರ್ಷಕವಾಗಿದೆ. ಇದರ ಅಕ್ಕಪಕ್ಕಗಳಲ್ಲಿ ಶ್ರೀದೇವಿ, ಭೂದೇವಿಯರಿದ್ದಾರೆ. ಮಕರ ತೋರಣವು ಸೂಕ್ಷ್ಮ ಕುಸುರಿ ಕೆಲಸದಿಂದ ಬಲು ಸುಂದರವಾಗಿದೆ. ಮಕರ ತೋರಣದಲ್ಲಿ ಅತೀ ಸೂಕ್ಷ್ಮವಾಗಿ ಕೆತ್ತಿರುವ ಸಪ್ತ ಮಾತೃಕೆಯರ ಶಿಲ್ಪವು ಈ ಸುಂದರ ಶಿಲ್ಪಾಕೃತಿಯ ಸೌಂದರ್ಯಕ್ಕೆ ಹೆಚ್ಚಿನ ಕಳೆಯನ್ನು ತಂದಿದೆ. ಇದು ಚಾಳುಕ್ಯರ ಕಾಲದ ಕಲಾ-ಕೌಶಲ್ಯವನ್ನು ಪ್ರದರ್ಶಿಸುತ್ತದೆ. ಇನ್ನೊಂದು ಗರ್ಭಗುಡಿಯು ಉತ್ತರಾಭಿ ಮುಖವಾಗಿದ್ದು ಇದರಲ್ಲಿ ಪಾಣೀಪೀಠದ ಮೇಲೆ ಶಿವಲಿಂಗವಿದೆ. ಹೊರಗೆ ವೃಷಭ ವಿಗ್ರಹವಿದೆ. ಮೂಲತಃ ಇಲ್ಲಿ ಸೂರ್ಯದೇವನ ಮೂರ್ತಿ ಇದ್ದಿರಬೇಕೆಂದೆನಿಸುತ್ತದೆ. ದಾವಣಗೆರೆ ೧೨೨ನೇ ಶಾಸನದಲ್ಲಿ ಇದರ ಉಲ್ಲೇಖವಿದೆ. ಕಪ್ಪುಶಿಲೆಯಲ್ಲಿ ಕೆತ್ತಲಾಗಿರುವ ಸೂರ್ಯದೇವರ ಸುಂದರ ಶಿಲ್ಪಾಕೃತಿಯು ಈಗ ಗರ್ಭಗುಡಿಯ ಹೊರಗೆ ದೇವಾಲಯದ ಒಳಗೆ ಹೋಗುವಾಗ ಬಲಬದಿಯಲ್ಲಿರುವುದು ಕಂಡುಬರುತ್ತದೆ. ಇವುಗಳಲ್ಲದೆ ಅರ್ಧ ಮಂಟಪದಲ್ಲಿ ಗಣೇಶ, ಕಾರ್ತಿಕೇಯ ವರಾಹ, ವೀರಭದ್ರನ ವಿಗ್ರಹಗಳೂ ಇವೆ. ಮೂಲ ಗರ್ಭಗುಡಿಯ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಇನ್ನೊಂದೆಡೆ ನಾಗದೇವರಮೂರ್ತಿ ಕಂಡು ಬರುತ್ತದೆ. ಲಲಾಟದಲ್ಲಿ ಗಜಲಕ್ಷ್ಮಿಯು ವಿರಾಜಮಾನವಾಗಿದ್ದಾಳೆ.

ದೇವಾಲಯದ ಮೂರ್ತಿ ಲಕ್ಷಣಗಳು ೧೧ ಅಥವಾ ೧೨ನೇ ಶತಮಾನದ ಕಾಲದವಾಗಿದ್ದರೂ ದೇವಾಲಯ ಮಂಟಪ ಸುಮಾರು ೧೯ನೇ ಶತಮಾನದ್ದಾಗಿದೆ. ಮೂಲ ದೇವಾಲಯ ನಾಶವಾಗಿರುವ ಕಾರಣದಿಂದಲೋ ಅಥವಾ ದೇವಾಲಯದ ಜೀರ್ಣೋದ್ಧಾರ ಕಾಲದಲ್ಲಿ ಈಗಿರುವ ವಾಸ್ತು ನಿರ್ಮಾಣವಾಗಿದ್ದು ಈ ಮಂಟಪವನ್ನು ಕಟ್ಟಿಸಿದವರ ಬಗ್ಗೆ ಈಗ ದೊರೆತಿರುವ ಶಾಸನ ವಿವರ ನೀಡುತ್ತದೆ. *

ಎಂ. ಎನ್. ಕಡಪಟ್ಟಿ*

ಕಮತಗಿಯ ತಾಮ್ರಶಾಸನ

ವಿಜಾಪೂರ ಜಿಲ್ಲೆಯಲ್ಲಿನ ಆನಗುಂದ ತಾಲೂಕಿನಲ್ಲಿ ಹರಿಯುವ ಮಲಪ್ರಭಾ ನದಿಯ ಎಡದಂಡೆಯ ಮೇಲೆ ಕಮತಗಿ ಗ್ರಾಮವಿದೆ. ಈ ಊರಿನ ಮಧ್ಯ ಇರುವ ಶ್ರೀ ಹೊಳೆ-ಹುಚ್ಚೇಶ್ವರ ಮಠದಲ್ಲಿ ಈ ತಾಮ್ರಶಾಸನವಿದೆ. ಹುನಗುಂದ ತಾಲೂಕಿನ ಸರ್ವೆಯ ಸಂದರ್ಭದಲ್ಲಿ ಶಾಸನವನ್ನು ಪಡೆಯಲಾಗಿದೆ.

ಈ ಶಾಸನ ಭಾಷೆ ಕನ್ನಡ, ಲಿಪಿಯು ಕನ್ನಡ. ಇದು ಎರಡು ಪಟ್ಟಿಯನ್ನು ಹೊಂದಿದ್ದು ಒಂದು ರಿಂಗಿನಿಂದ ಜೋಡಿಸಲಾಗಿದೆ. ಪಟ್ಟಿಯ ಎರಡು ಬದಿಗೂ ಬರೆಯಲಾಗಿದೆ. ಒಟ್ಟು ೧೨೯ ಸಾಲುಗಳು. ಮೊದಲಿನ ಪಟ್ಟಿಯ ಮುಂಭಾಗದಲ್ಲಿ ೩೨ ಸಾಲುಗಳು ಅದರ ಹಿಂಭಾಗದಲ್ಲಿ ೩೧ ಸಾಲುಗಳು. ಎರಡನೆ ಪಟ್ಟಿಯ ಮುಂಭಾಗದಲ್ಲಿ ೩೦ ಸಾಲುಗಳು ಹಿಂಭಾಗದಲ್ಲಿ ೩೬ ಸಾಲುಗಳು.

ಈ ಶಾಸನದ ಆಧಾರದಿಂದ ಹಾಗೂ ಇದಕ್ಕೆ ಸಂಬಂಧಪಟ್ಟ ಪುರಾಣದ ಅಧಾರದಿಂದ ಇದರ ಕಾಲಮಾನವನ್ನು ಸುಮಾರು ೧೭ನೇ ಶತಮಾನ ಎಂದು ಹೇಳಬಹುದು.

ಶಾಸನದ ವಿಷಯ: ಒಬ್ಬ ಸನ್ಯಾಸಿ ದೇಶವನ್ನು ಸಂಚರಿಸುತ್ತ ಕಮತಗಿಯ ಸಮೀಪದಲ್ಲಿ ಹರಿಯುವ ಮಲಪ್ರಭಾ ನದಿಯ ದಂಡೆಯ ಮೇಲೆ ಯೋಗ ಸಾಧನೆಗೆ ಕುಳಿತುಕೊಂಡರು (ಸ್ವಾಮಿಗಳು ಧರಿಸಿಕೊಂಡ ಆಭರಣಗಳ ಉಲ್ಲೇಖವಿದೆ). ಆ ಸಮಯದಲ್ಲಿ ಪುನರ್ವಸುವಿನ ಮಳೆ ಧಾರಾಕಾರವಾಗಿ ಸುರಿದದ್ದರಿಂದ ಹೊಳೆ ತುಂಬಿ ಹರಿಯಲು ಸ್ವಾಮಿಗಳು ಯೋಗ ಸಾಧನ ಬಿಟ್ಟು ಬರಲು ನಿರಾಕರಿಸಿದರು. ಅಲ್ಲಿರುವ ಜನರು ಎಷ್ಟು ವಿನಂತಿಸಿದರೂ ಸಾಧ್ಯವಾಗಲಿಲ್ಲ. ಹೊಳೆಯನೀರು ಅವರ ಮೇಲೆ ಹರಿಯಿತು. ಈ ವಿಷಯ ದೊರೆಯಾದ ಶಿವನಪ್ಪ ದೇಸಾಯಿಯವರಿಗೆ ತಿಳಿಯಿತು. ಅವರು ಸ್ವಾಮಿಗಳನ್ನು ಹುಡುಕಿಸಲು ಈಜುಗಾರರನ್ನು ಕರೆದೊಯ್ದರು. ಎರಡು ದಿವಸ ಹುಡುಕಿದರೂ ಸಿಗಲಿಲ್ಲ. ೩ನೇ ದಿವಸ ಹೊಳೆಯ ನೀರು ಕಡಿಮೆಯಾದಾಗ ಅವರು ಕುಳಿತ ಸ್ಥಳದಲ್ಲಿ ಮಣ್ಣಿನ ದಿಬ್ಬವಾಗಿತ್ತು. ತೆಗೆದು ನೋಡಲು ಅಲ್ಲಿ ಸ್ವಾಮಿಗಳಿದ್ದರು. ಅವರನ್ನು ತಿಳಿನೀರಿನಲ್ಲಿ ತೊಳೆಯಲು ಸ್ವಾಮಿಗಳು ಎದ್ದು ಕುಳಿತು "ಓಂ ನಮಃ ಶಿವಾಯ" ಎಂದರು. ನಂತರ ಅವರನ್ನು ಊರಿಗೆ ಕರೆತಂದು ಅಲ್ಲಿಯೇ ಇರಲು ಅವಕಾಶ ಮಾಡಿಕೊಟ್ಟು ಭೂಮಿಯನ್ನು ದಾನವಾಗಿ ಕೊಟ್ಟರೆಂದು ತಿಳಿಸುತ್ತಾರೆ. ಈ ಶಾಸನಕ್ಕೆ ಸಾಕ್ಷಿಯಾಗಿ ಶಿವನಪ್ಪದೇಸಾಯಿವರು ಮನೆದೇವರಾದ ಯಲಗೂರಲ್ಲಿರುವ ಹನುಮಂತದೇವರ ಗುಡಿಯಲ್ಲಿನ ಗೋಡೆಯ ಮೇಲೆ ಶಾಸನವಿದೆ ಎಂದು ಉಲ್ಲೇಖಿಸುತ್ತದೆ.

ಈ ಶಾಸನದಲ್ಲಿ ಶಿವನಪ್ಪನಾಯಕರ ಬಗ್ಗೆ ವಿವರಣೆ ಇದೆ. ಇವರ ಆದಿ ತುಂಬಳಗೋವಿ ಬಸವಶಂಕರ. ನಂತರದವರು ಕಾಳಗಿ ಹಾಗೂ ನಿಡಗುಂದಿಯನ್ನು ಗಳಿಸಿದರು. ನಂತರ ಕಮತಗಿಯನ್ನು ಗಳಿಸಿದರೆಂದು ತಿಳಿಸುತ್ತದೆ. ಹಾಗೂ ಕೆಲವೂರಿನ ತಿಮ್ಮನಾಯಕಒಡೆಯರು, ಕೋಸಲ ಕೋಮರಒಡೆಯರು ಅವರ ಮಗ ನಿಂಗಪ್ಪಒಡೆಯರು ಮಗ ನಾಗಪ್ಪ ಎಂದು ಉಲ್ಲೇಖಿಸುತ್ತದೆ.

ಸ್ವಾಮಿಗಳಿಗೆ ಭೂದಾನ ಮಾಡುವಾಗ ಅದಕ್ಕೆ ಸಾಕ್ಷಿಯಾಗಿ ಎಲ್ಲ ಜಾತಿಯ ಜನರನ್ನು ಸಾಕ್ಷಿಯಾಗಿ ಬಳಸಿಕೊಂಡಂತಿದೆ. ಬಹಳಷ್ಟು ಹೆಸರನ್ನು ಇಲ್ಲಿ ಕಾಣಬಹುದು. ಗೋಸಲ ನಿಂಗಪ್ಪ, ಯಳಯಳ ದೇಸಾಯಿ, ಮಾವ ಮುದಿನಾಗಪ್ಪ, ದಳವಾಯಿ ಮಲ್ಲಣ್ಣ, ಕಟ್ಟಕಿನಹೊಳೆ ತಿಮ್ಮನಗೌಡ, ಪಾಲಿಕೆಯ ತಿಮ್ಮಿಬೋವಿ, ಬಾಗಡಿ ಕೊಟ್ಟನಾಡ ತಳವಾರ ಮಾಕೂತಿಬಾನ, ನಾಡದಳವರ ಹೊಟ್ಟಿಕೆಂಪಣ್ಣ, ಬೇಡರ ಕರಿಮಲ್ಲಣ್ಣ, ಬಸವಿಕಟ್ಟಿ ಜಕ್ಕನಗೌಡ, ಹಗಲದೀವಲಿಗೆ ಕೃಷ್ಣಪ್ಪ, ಕಮ್ಮತದ ಸಕ್ರಿಸಂಗಯ್ಯ, ನಿಡಗುಂದಿ ದೇಸಾಯಿ ಬಿಷ್ಟಪ್ಪ, ಅಕ್ಕಸಾಲೇರ ಕರಿನಿಂಗಣ್ಣ. ಕೋಟಿಕಲ್ ನರಸಿಂಗ ದಾಸಯ್ಯ, ಇನ್ನೂ ಅನೇಕರ ಹೆಸರುಗಳು ಉಲ್ಲೇಖವಾಗಿದೆ.

ಈ ಶಾಸನದಲ್ಲಿ ಅನೇಕ ಊರುಗಳ ಹೆಸರುಗಳಿವೆ. ಅವು

* ಇತಿಹಾಸ ಅಧ್ಯಾಪಕರು, ಎಸ್.ಕೆ.ವಿ.ಪಿ. ಕಲಾ ಕಾಲೇಜು, ಹೊಳೆಆಲೂರು, ರೋಣ ತಾ॥, ಧಾರವಾಡ ಜಿಲ್ಲೆ

ಇಂದಿಗೂ ಇದೆ ಎಂದು ಗುರುತಿಸಬಹುದು. ಕಮತಗಿ, ಕೆಲವೂರು, ಎತ್ತಿನಹಟ್ಟಿ, ಬಸರಿಕಟ್ಟಿ, ಇವು ಹುನಗುಂದ ತಾಲೂಕಿನಲ್ಲಿವೆ. ಗುಳೇದಗುಡ್ಡ, ಕೋವಿಕಲ್ ಬದಾಮಿ ತಾಲೂಕಿನಲ್ಲಿ ಬರುತ್ತವೆ. ಬಾಗಲಕೋಟೆ ಬಾಗಲಕೋಟೆ ತಾಲೂಕಿನಲ್ಲಿದೆ.

ಈ ಶಾಸನಕ್ಕೆ ಸಂಬಂಧಪಟ್ಟಂತೆ ಇಂದಿಗೂ ಕೆಲವು ಹೋಲಿಕೆಗಳನ್ನು ಕೊಡಬಹುದು. ಶಿವನಪ್ಪನಾಯಕರ ವಂಶ ಇನ್ನೂ ಇದೆ. ಹಾಗೂ ಶಾಸನದಲ್ಲಿ ಉಲ್ಲೇಖಿತ ಮನೆದೇವರಾದ ಯಲಗೂರಿನ ಹನಮಂತದೇವರ ಆರಾಧನೆ ಇನ್ನೂ ಇದೆ. ಸ್ವಾಮಿಗಳ ವಂಶ ಇಂದಿಗೂ ಮುಂದುವರಿದಿದ್ದು ಈಗ ೧೩ನೇ ಸ್ವಾಮಿಗಳು ಮಠಕ್ಕೆ ಪಟ್ಟಾಧೀಶರಾಗಿದ್ದಾರೆ. ಅಲ್ಲದೆ ಸೋಮವಾರ ಅವರ ವಾರದ ದಿನವಾಗಿದೆ.

*

ಕುಂ. ಬಾ. ಸದಾಶಿವಪ್ಪ*

ಹರಪನಹಳ್ಳಿ ಪಾಳೇಗಾರರಿಗೆ ಸಂಬಂಧಿಸಿದ ನಕ್ಷೆ ಮತ್ತು ಪತ್ರಗಳ ಪರಿಶೀಲನೆ

ಶಾಲಿವಾಹನ ಶಕೆ ೧೪೮೮ ರಿಂದ ೧೭೦೪ರ ವರೆಗೂ ಅನಧಿಕೃತ ಮತ್ತು ಅಧಿಕೃತವಾಗಿ ಸುಮಾರು ೨೧೬ ವರ್ಷಕ್ಕೂ ಹೆಚ್ಚು ಕಾಲ ರಾಜ್ಯವಾಳಿದ ಹರಪನಹಳ್ಳಿ ಪಾಳೇಗಾರರು ಬಳ್ಳಾರಿ ಜಿಲ್ಲೆಯಲ್ಲಿ ಅತ್ಯಂತ ಪ್ರಬಲರಾಗಿದ್ದರು ಎಂಬುದು ಈಗಾಗಲೇ ತಿಳಿದು ಬಂದ ಸಂಗತಿಯಾಗಿದೆ.

ಈ ಅರಸರು ಅನೇಕ ಸೇನಾನಿಗಳನ್ನು ಸಾಮಂತರನ್ನು ಹೊಂದಿದ್ದರಲ್ಲದೇ ನೆರೆಹೊರೆಯ ಅರಸರುಗಳ ಸ್ನೇಹ ಸಂಬಂಧವನ್ನು ಇಟ್ಟುಕೊಂಡಿದ್ದರು. ಹೀಗಿರುವುದರಿಂದ ಅವರಿಗೂ ಅವರ ಸಾಮಂತರಿಗೂ ಇತರ ಅರಸರ ಮಧ್ಯೆ ಪತ್ರ ವ್ಯವಹಾರ ಜರುಗಿದ್ದು ಗೊತ್ತಾಗುವುದು. ಈಗ ಲಭ್ಯವಿರುವ ಕೆಲವು ಪತ್ರಗಳನ್ನು ಇಲ್ಲಿ ಸಾದರಪಡಿಸಿ ಪರಿಶೀಲಿಸಲಾಗಿದೆ.

೧) ಸೋದೆ ಸಂಸ್ಥಾನದ ಸವಾಯಿ ಬಸವಲಿಂಗರಾಜೇಂದ್ರರ ಪತ್ರ

೨) ಕಲಕೇರಿ ದೇಸಾಯಿ ಮಲ್ಲಪ್ಪನವರ ಪತ್ರ.

೩) ಕುರದಗಡ್ಡಿ ಭರಮಗೌಡರ ಒಂದು ಟಿಪ್ಪಣಿ ಎರಡು ಪತ್ರ

೪) ಕುರದಗಡ್ಡಿ ಕೋಟೆ ನಕ್ಷೆ ಮತ್ತು ಕಂಚಿನ ಪತ್ರದ ಸತ್ಯಾಂಶ

೫) ಹರಪನಹಳ್ಳಿ ಗೌಡರು ದತ್ತು ಪಡೆದದ್ದರ ಪತ್ರ.

೬) ಹರಪನಹಳ್ಳಿ ಸೋಮಶೇಖರನಾಯಕರ ನಿರೂಪಣೆಗಳು

೧) ಸೋದೆ ಅರಸರ ಪತ್ರ ಅಪೂರ್ಣ ದೊರೆತಿದೆ. ಅದರಲ್ಲಿ ಕಾಲವಿಲ್ಲ. ಹರಪನಹಳ್ಳಿ ಅರಸರನ್ನು ಸಕಲ ಗುಣ ಸಂಪನ್ನ ಮಿತ್ರಜನ ಮನಃಕುಮುದ ಪೂರ್ಣಖಡ್ಗ ಪ್ರವೀಣ ಎಂಬುದಾಗಿ ಸಂಬೋಧಿಸಿದೆ.

೨) ಕಲಕೇರಿ ದೇಸಾಯಿ ಮಲ್ಲಪ್ಪನ ಪತ್ರದಲ್ಲಿ ಕಾಲದ ಉಲ್ಲೇಖವಿಲ್ಲ. "ಬೈಲಿ ಬಂಡಿ" ಮತ್ತು ಸ್ವಾರಿ(ಸವಾರಿ)ಗಳನ್ನು ಹರಪನಹಳ್ಳಿ ನಾಯಕರಿಗೆ ಕಳಿಸಿಕೊಟ್ಟ ವಿಷಯವಿದೆ.

೩) ಕುರದಗಡ್ಡಿ ಭರಮಗೌಡನ ಒಂದು ಟಿಪ್ಪಣಿ ಮತ್ತು ಎರಡು ಪತ್ರಗಳಲ್ಲಿ ಅವನನ್ನು ಕೆಲಸದಿಂದ ಅರಸ ವಜಾಮಾಡಿದ ಮೇಲೆ ಹಿಂದೆ ಸಂಸ್ಥಾನಕ್ಕೆ ತಾನೂ ಸೇವೆ ಸಲ್ಲಿಸಿದ್ದನ್ನು ಅರಸರ ಗಮನಕ್ಕೆ ತಂದು ತಾನು ನಿರಪರಾಧಿ ಎಂದು ಪ್ರಾರ್ಥಿಸಿಕೊಂಡಿರುವನು.

೪) ಭರಮನಗೌಡನು ಕುದರಗಡ್ಡಿ ಜಲದುರ್ಗವನ್ನು ಅರಸರ ಆದೇಶದ ಮೇರೆಗೆ ಕಟ್ಟಿಸಿದ್ದು ಅದರ ನಕ್ಷೆಯನ್ನು ಕೊಡುವನು. ಕಂಚಿನ ಪತ್ರದ ಸಾರಾಂಶವನ್ನೂ ನೀಡಿರುವನು.

೫) ಇದು ಹರಪನಹಳ್ಳಿ ಅರಸ ಬೆಟ್ಟನಗೌಡರಿಗೆ ದತ್ತು ಸ್ವೀಕರಿಸಲು ಒಪ್ಪಿಗೆ ಕೊಟ್ಟ ನಿರೂಪ.

೬) ಹರಪನಹಳ್ಳಿ ಅರಸ ತನ್ನ ತಪ್ಪನ್ನು ಒಪ್ಪಿಕೊಂಡು ಮರಳಿ ಭರಮನಗೌಡನನ್ನು ಕುರದಗಡ್ಡಿ ಜಲದುರ್ಗಕ್ಕೆ ಸಾಮಂತನನ್ನಾಗಿ ನೇಮಿಸಿ ಆದೇಶ ಹೊರಡಿಸಿದ ವಿವರ.

ವಿಮರ್ಶೆ

೧) ಅರಸ ತಾನು ತಪ್ಪು ಮಾಡಿದರೂ ಇತರರೆದುರು ತನ್ನ ತಪ್ಪನ್ನು ಒಪ್ಪಿಕೊಳ್ಳುವುದು ಕಡಿಮೆ. ಆದರೆ ಈ ಅರಸ ತನ್ನ ಸಾಮಂತ ಅರಸನಲ್ಲಿ ತಾನೂ ಮಾಡಿದ ತಪ್ಪು ಒಪ್ಪಿಕೊಂಡು ಕ್ಷಮೆ ಕೋರಿದನು.

೨) ಭರಮನಗೌಡನ ಪತ್ರಗಳು ಉರ್ದು ಮಿಶ್ರಿತ ಪದಗಳ ಕನ್ನಡ ಭಾಷೆಯಲ್ಲಿವೆ.

೩) ಹರಪನಹಳ್ಳಿ ಹದಿನೈದುನೂರು ನಾಣ್ಯಗಳನ್ನು ಕುರದಗಡ್ಡಿ ಜಲದುರ್ಗ ನಿರ್ಮಾಣಕ್ಕೆ ಬಳಸಿದ್ದು ಗೊತ್ತಾಗುವದು. ಹರಪನ ಹಳ್ಳಿಯಲ್ಲಿ ಟಂಕಸಾಲೆ ಇದ್ದು ಹತ್ತುವರೆ ಆಣೆ ಬಂಗಾರದ ನಾಣ್ಯ ಚಲಾವಣೆಯಲ್ಲಿದ್ದಿತ್ತು.

೪) ಹರಪನಹಳ್ಳಿ ನಾಯಕರ ಬಿರುದುಗಳು ಅವರ ಮೊಹರುಗಳಿಂದ ತಿಳಿದು ಬರುವವು.


೫) ಪತ್ರಗಳಿಂದ ಅರಸರ ಸೇನೆ ಎಷ್ಟಿತ್ತು? ಹೇಗಿತ್ತು? ಎಂಬುದು ಗೊತ್ತಾಗುವದು.

೬) ಈ ಪತ್ರಗಳಿಂದ ಟಿಪ್ಪುಸುಲ್ತಾನನ ಸೇನಾನಿಗಳ ಹೆಸರು ಗೊತ್ತಾಗುವದು.

೭) ಈ ಅರಸರು ಶಾಲಿವಾಹನ ಶಕೆ ಫಸಲಿ ಕಾಲ ಮಾನಗಳನ್ನು ಬಳಸಿರುವದು ತಿಳಿಯುವುದು.

೮) ಪತ್ರದ ಕೊನೆಯಲ್ಲಿ 'ಬಸವ' ಮೊಹರು ಮತ್ತು 'ಜಾಣಿಜ' ಎಂಬ ಶಬ್ದವು ಕಂಡು ಬರುವವು. ಬಸವ

* ನಾರಾಯಣಭಟ್ಟರ ವಠಾರ, ಶಂಕರಮಠದ ಹತ್ತಿರ, ಹೊಸಪೇಟೆ ರಸ್ತೆ, ಹರಪನಹಳ್ಳಿ - ೫೮೩ ೧೧೩




ಮೊಹರಿನಿಂದ ಈ ಅರಸರು ಕೊಟ್ಟೂರಿನ ಶ್ರೀ ಗುರುಬಸವರಾಜ ಸ್ವಾಮಿಗಳ ಶಿಷ್ಯರೆಂಬುದು, ಈ ಪತ್ರಗಳನ್ನು ಬರೆಯುವ 'ಜಾಣೆಜರು' ಹರಪನಹಳ್ಳಿಯ ರಾಯಸ ಮನೆತನದವರೆಂದು ತಿಳಿದು ಬಂದಿದೆ.

೯) 'ಛೈಲಿ ಬಂಡಿ' ರಾಜರನ್ನು ಮೆರವಣಿಗೆಯಲ್ಲಿ ಕರೆದು ಕೊಂಡು ಹೋಗುವ ಮೇಣೆಯಂತೆ (ಪಲ್ಲಕ್ಕಿ) ಇದ್ದಿತು. ಇದರ ಮುರಿದ ಭಾಗಗಳನ್ನು ಹರಪನಹಳ್ಳಿ ಗೌಡರ ಮನೆಯಲ್ಲಿ ಸುಮಾರು ೫೦ ವರ್ಷಗಳ ಹಿಂದೆ ಜನರು ಕಂಡಿರುವುದಾಗಿ ಹೇಳುವರು. ಅದನ್ನು ಗೌಡರ ವಂಶಜರೂ ಒಪ್ಪುವರು.

೧೦) ಹರಪನಹಳ್ಳಿಯಲ್ಲಿ ಈಗಲೂ ಒಂದು ಮನೆತನ ವಿದೆ. ಅವರಿಗೆ ಈಗಲೂ ಕಾಲೇರು ಎಂದು ಕರೆಯುವರು. ನಾಯಕರ ಪತ್ರಗಳನ್ನು ಕಾಲುನಡಿಗೆಯಲ್ಲಿ ಕೊಂಡೊಯ್ದು ನೆರೆಯ ಅರಸರಿಗೆ ತಲುಪಿಸುತ್ತಿದ್ದರು. ಹರಪನಹಳ್ಳಿ ಜನರು ಕೋಲುಪದದಲ್ಲಿ ಈಗಲೂ ಹೀಗೆ ಹಾಡುವರು.

"ಕಾಲೇರ ಕರಿಸೀರಿ, ಸುರುಪುರಕೆ, ಕಳಿಸೀರಿ
ರನ್ನದ, ಕೋಲು ಕೋಲೆನ್ನ ಕೋಲೆ"

*

ಅನುಬಂಧ

ಝೆರಾಕ್ಸ್ ಪ್ರತಿಯ ಮುಂಬದಿ

ಪರಿದಾವಿ ಸಂ।ರದ ಮಾರ್ಗಶಿರ ಶು ೫ಲ್ಲು ಗಡಾದ ಬರಮಪ್ಪನ ಜಹಗಿರ್‍ರಿ ಮಿರಕೋರನಪಳ್ಳಿ ಗ್ರಾಮದ ವುತ್ರ ಧಿಕಿನ ಹುಣಿಸಿ ಮರ ೨ ಯರಡು ಯಿರುವ ಮಾಧಿಗೇರ್‍ರಿ ವಳಗಣ ದೊಡ್ಡ ಪಗೆಕ್ಕೆ ಹಾಕಿಯಿಪ ಜೋಳ ಸೆ ೧೨ಗಿದ್ಧನದಲ್ಲೂ ಖ ೧॥ ೪।।। ೪॥ ಖಂಡಗದ ಹಧಿನಾಲ್ಕು ಕೊಳಗದ ಹತ್ತೊಂಬತ್ತುವರ್‍ರಿ ಗಿದನ ಪಗೆಕ್ಕೆ ತುಂಬಿಸಿ ಯೀ ಗ್ರಾಮದ ಗೌಡಿಕೆ ಕೆಲಸವಂನ್ನು ಅಗಸರ ಕಲ್ಯಾಣಿಗೆ ನೇಮಿಸಿ ಕೊಟ್ಟು ಯೀ ಹಗೇವಂನ್ನು ಯೀ ಕಲ್ಯಾಣಿಗೆ ಗೌಡರ ಮುಧಿಮಲ್ಲಂಣ ವಡವಟ್ಟಿ ಬಸಂಣ ಹುಲಿಕಟೆ ಲಿಂಗಂಣ್ಣ ತಳವಾರ ನಾಗ ಸಹಾ ಯಿವರ ತಾಬೆ ಮಾಡಿ ಯಿದಕ್ಕೆ ಟೀಪುಸುಲತಾನನ ಮೇಲೆ ಶರರತ್ತು ರಾಜಖಾವಂದರ ತಂದೆ ಅ್ಯೆಯಪ್ಪನಾಯಕ ಆುಾಲೆಖಾರ ಹಂಪರಸಪ್ಪ ಶಾ॥ ಚಿಂತಾಮಣಿಯಪ್ಪ ನಂಮ ಅಂಣ ಗಡಾದ ಭೀಮಪ್ಪ ೧೦೦೦ ಕುದರ್‍ರೆ ಫವಜು ೩೦೦೦ ಪಾಯಿದಳ ಸಪ ಕೊಟೂರವಳಗೆ ಯಿರಲ್ಲೂ ಟೀಪುಸುಲತಾನನ ಕಡಿಯಿಂದ ಮೀರಕಮರ್ಧಿಖಾನನ ಪವುಜು ಸೈದಗಪೂರನ ಪವುಜು ತೋಪುಗಳು ಸಪ ಬಂದು ಕೊಟೂರಿಗೆ ತ್ರಿಂಗಳು ಮುತ್ತಿಗೆ ಹಾಕಿ ತೋಪುಗಳ ಹಚ್ಚಿ ಹೋದದರ್‍ರಿಂದ ಅವರ ಮೇಲೆ ಧಿನಚರ್‍ರಿ ಲಡಾಯ ಮಾಡಿ॥ ಪ್ರಮಾಥಿ ಸಂ।ರದ ಮಾಘ ಶು ೬ಲ್ಲೂ ನಂಮ ದೊರ್‍ರೆ ಆುಾಲೆಖಾರ ಹಂಪರಸಪ್ಪ ಚಿಂತಾಮಣಿಯಪ್ಪ ನಂಮ್ಮ ಅಣ್ಣ ಗಡಾದ ಭೀಮಪ್ಪ ಯಾಹೊತ್ತು ಪವುಜು ವರಟು ಹೊರಬಿದ್ದು ಮೋರ್ಚಿಗಳ ಮೇಲೆ ಹೊಡೆದೊತ್ತಿಗೆ ನತ್ತೆರವಾಗಿ ಹಾಗೆ ಹೊಳಿಯಾಚ್ಚಿಗೆ ಹೋದ ಬಳಿಕೆ ಹೂವಿನ ಹಡಗಲಿ ಶು॥ ಸೈದ ರುಸ್ತುಮನ ಮೇಲೆ ಧಿನ ಬೆಳಗು ಲಡಾಯ ಮಾಡಿಕೊಳುತ ನಾನು ಹೊಳಗುಂಧಿ ಭಾವಿಹಳಿ ವಳಗೇ ಯಿದ್ದು ಕೊಟ್ಟೂರು ಹೋದ ಆುಾರು ಧಿವಸದ ಮೇಲೆ ಮಾಘ ಶು ೧೨ಲ್ಲೂ ನಂನ್ನ ಪೌಜು ಮಂಧಿ ಸಪ ತ್ರಕೊಂಡು ನಾನು ಹೊಳಿಯಾಚಿಗೆ ಹೋದ ಬಳಿಕ ಪುವಿನಹಡಗಲಿ ಸುಂಕದ ಚನವೀರಪ್ಪನು ಯೀ ಬ ೧೪೨. . . . . (ಮುಂದಿನ ಸಾಲು ಗೆರೆಬಿಟ್ಟು ಏನೂ ಕಾಣಿಸದು).

ಹಿಂಬದಿ

ತಾಲೊಕು ಹರಪನಹಳಿ ಪೈಕಿ ಮಿರಾಕೋರನಪಳ್ಳಿ ಗೌಡಗದಾದ ಭರಮಪ್ಪನು ಮಾಡಿಕೊಂಬುವ ವಿಗ್ನಾಪನೆ ಅನೇಕ ಸಹಸ್ರ ಬಿಂನ್ನಹಾ ಯೇನೆಂದರೇ ದುರ್ಮುಕಿ ಸಂ।ರದ ಮಾರ್ಗಶಿರ ಬ ೩೦ ಸುಕ್ರವಾರ ಲಾಗಾಯಿತ್ತು ಪುಷ್ಯ ಶು ೧೫ ಶನಿವಾರದ ಒಳಗೆ ಖಾವಂದವರಕೃಪೆಗಳವರು ವಾಯಿಧಿ ಅಪ್ಪಣೆ ದಯಪಾಲಿಸಿದ ಪ್ರಕಾರಕ್ಕೆ ಯೀ ಪುಷ್ಯ ಶು ೫ ಬುದವಾರ ನಂಮ್ಮ ಮೀರಾಕೋರನಹಳ್ಳಿ ಸ್ತಳ ಜಂಮೀನುದಾರ ರೈತರಂನ್ನು ಯೀ ಜಂಮೀನುದಾರ . ವಗಿ ಗ ಸಾಕ್ಷಿ ಜನರಂನ್ನು ಸಿದ್ದಮಾಡಿಸಿ। ವರದ ದೊರೆಗಳವರ ಸಂನ್ನದಾನಕ್ಕೆ ಹೊರಟು ಬರೋದಾವಳಗೇ ಹನಕನಹಳಿವಳಗೆಯಿರುವ ವಾಧಿಸುಂಕದ ಮಡವಾಳಗೌಡನ ತಕ್ಕವ. . ಂಕೃತ [ಕೆಂಚಿ]ನ ಗೌಡನು ದಾಯ ೧ತ್ತೂಕಡಿ ಕೊಟ್ಟೂರೆಯಿಂದ ಅರ್ಜಿ ಶಮನು ನಂಮ್ಮ ಮೀರಾಕೋರನಹಳ್ಳಿ ಆ ತಾ(ಲೂಕಿ)ನ ರೈತ ತಳವಾರ ಕೆಂಚಯ್ಯ ಯಂಬವನಿಗೆ ಅರ್ಜಿ [ಹುಕುಮಿನಿಂದ] ಬರಬೇಕೆಂದರೆ ಅರ್ಜಿ ಬರೆದು . . . ಗೆ ಪೂರ್ವತ್ತ್ರಕ್ಕೆ ಅನ್ತ ಹಣ ಕಾಣೆ ಫವನು ಅಣ್ಣ ತಾನು ಹಣ ತಂದೂ ನನ್ನ ಅಣ್ಣಾ ನಿರ್ನಿಮಿತ್ಯ ನಂನ್ನ ಮೇಲೆ ಅರ್ಜಿಹಾಕಿ ನಂನ್ನ ಮನೆ ಹಾಳುಮಾಡಲಿ(ಕೈ).

(ಲೇಖಕರು ಕೊಟ್ಟಿದ್ದ ಮೂಲಪತ್ರದ ಝೆರಾಕ್ಸ್ ಪ್ರತಿಯೊಡನೆ, ಬರೆದಿದ್ದ ಅಪೂರ್ಣ ಬರೆಹವನ್ನು ತಾಳೆನೋಡಿ ಅದರಲ್ಲಿ ಆಗಿದ್ದ ವ್ಯತ್ಯಾಸಗಳನ್ನು ಪರಿಷ್ಕರಿಸಿ, ಪೂರ್ಣ ಪಾಠವನ್ನು ಅಳಿಸಿ ಹೋಗಿರುವ ಅಕ್ಷರ ವಿನಾ ಇಲ್ಲಿ ನೀಡಿದೆ. ಸಂ.)

ಕೆಳದಿ ಗುಂಡಾಜೋಯಿಸ್*

ಉಡುಪಿ ಜಂಗಮಮಠದ ಕೆಳದಿ ಸೋಮಶೇಖರನಾಯಕನ ಅಪ್ರಕಟಿತ ಚಾರಿತ್ರಿಕ ದಾಖಲೆ

ಕ್ರಿ.ಶ. ೧೩ನೆಯ ಶತಮಾನದಲ್ಲಿ ದ್ವೈತಮತ ಸ್ಥಾಪಕ ಮಧ್ವಾಚಾರ್ಯರ ಕ್ಷೇತ್ರ ಉಡುಪಿ. ದಕ್ಷಿಣ ಭಾರತದಲ್ಲಿಯೇ ಪ್ರಮುಖ ಧಾರ್ಮಿಕ ಕ್ಷೇತ್ರ. ೧೫ನೆಯ ಶತಮಾನದ ಅನಂತರ ೧೭೬೩ರ ವರೆಗೂ ಈ ಭಾಗಗಳೆಲ್ಲವೂ ಕೆಳದಿ ರಾಜ್ಯಕ್ಕೆ ಸೇರಿತ್ತು. ಈ ಅರಸರು ವೀರಶೈವರಾಗಿದ್ದರೂ ಸರ್ವಧರ್ಮ ರಕ್ಷಣೆಯನ್ನು ಪರಿಪಾಲಿಸಿಕೊಂಡು ಬಂದರು. ಗಣಪತಿಐಗಳ್‌ರವರೇ ನಿರೂಪಿಸಿದಂತೆ ಉಡುಪಿಯ ಅಷ್ಟಮಠಗಳಿಗೂ ಉಂಬಳಿ ಉತ್ತಾರಗಳನ್ನು ನೀಡಿದರು. ಕ್ರಿ.ಶ. ೧೬೩೯ರಲ್ಲಿ ಕೆಳದಿ ವೀರಭದ್ರನಾಯಕನು ಹಾಗೂ ೧೬೭೨-೧೬೯೭ರಲ್ಲಿ ಆಳಿದ ರಾಣಿ ಚೆನ್ನಮ್ಮಾಜಿಯು ಉಡುಪಿ ಶ್ರೀಕೃಷ್ಣನಿಗೆ ಹಾಗೂ ಕೃಷ್ಣಪುರ ಮಠಕ್ಕೆ ಭೂದಾನವಿತ್ತ ಬಗ್ಗೆ ಶಾಸನಗಳಿವೆ.[೧] ಸೊರಬ ತಾಲ್ಲೂಕಿನ ೫೫ನೇ ಶಾಸನ ದ್ವೈತಮಠಕ್ಕೆ ಕಂತನಹಳ್ಳಿಗ್ರಾಮ ನೀಡಿರುವುದನ್ನು ಹೇಳಿದೆ. ಉಡುಪಿ ಶ್ರೀಕೃಷ್ಣದೇವಾಲಯದ ೨೯೭ನೇ ಶಿಲಾ ಶಾಸನದಲ್ಲಿ ಪರ್ಯಾಯೋತ್ಸವದಲ್ಲಿ ದೇವರಿಗೆ ಹಾಗೂ ಮಠಕ್ಕೆ ಹೂವಿನಕೆರೆ ಗ್ರಾಮವನ್ನು ಹಾಗೂ ೧೫೯೨ರಿಂದ ೧೬೨೯ರಲ್ಲಿ ಈ ಅರಸರು ಶ್ರೀವೇದವೇದ್ಯತೀರ್ಥ ಶ್ರೀಪಾದಂಗಳವರು ಪರ್ಯಾಯದಲ್ಲಿದ್ದಾಗ ಕೃಷ್ಣದೇವರ ಗರ್ಭಗುಡಿ ಮುಂದಿನ ಭಾಗವನ್ನು ಶಿಲಾಮಯವಾಗಿ ನಿರ್ಮಿಸಿ ಎರಡು ನೆಲೆಯಾಗಿ ತಾಮ್ರದ ಹೊದ್ದಿಕೆಯನ್ನು ಮಾಡಿಸಿದರು.[೨] ನಂತರ ಕೃಷ್ಣದೇವರ ಪುನಃ ಪ್ರತಿಷ್ಠಾಪನೆಯೂ ಜರುಗಿದ್ದು ಅಮೃತಪಡಿಗೆಂದು ಹೂವಿನಕೆರೆ ಗ್ರಾಮವೂ ನೀಡಲ್ಪಟ್ಟಿತು. ಮೆಕಂಜೀ ಸಂಗ್ರಹ ನಂ. ೨೩೫ ಕಡತ ೧೦೫, ನಂ. ೩೫೧ನೆಯ ಫಲಿಮಾರುಮಠದ ಕೈಫಿಯತ್ತು ಮುಂತಾದ ದಾಖಲೆಗಳಲ್ಲಿ ರಘುವರ್ಯತೀರ್ಥ ಶ್ರೀಪಾದಂಗಳವರಿಗೆ ಹಂಸಾಶ್ರಮ ನೀಡಿದ್ದು, ಭದ್ರಪ್ಪ ನಾಯಕನಿಂದ ೧೬೭೦ರಲ್ಲಿ ಶ್ರೀರಾಮಭದ್ರತೀರ್ಥ ಶ್ರೀಪಾದಂಗಳವರು ಸನ್ಯಾಸಿಸಲ್ಪಟ್ಟ ವಿವರಗಳು ವಿಪುಲವಾಗಿ ಉಪಲಬ್ಧವಿದೆ. ಶ್ರೀ ಪುರಂದರದಾಸರಾದಿಯಾಗಿ ಧರ್ಮ ಸುಧಾರಕರು ಈ ರಾಜ್ಯದಲ್ಲಿ ಧಾರ್ಮಿಕ ಕ್ರಾಂತಿಯುಂಟು ಮಾಡಿದರು.[೩] ಕೆಳದಿ ಸಂಸ್ಥಾನಕ್ಕೆ ಸೇರಿದ್ದ ಉಡುಪಿಯಲ್ಲಿ ಮಂತ್ರಾಲಯದ ಶ್ರೀ ಶ್ರೀ ರಾಘವೇಂದ್ರ ಯತಿ ಸಾರ್ವಭೌಮರು (ಕ್ರಿ.ಶ. ೧೬೨೩-೭೧) ಭೇಟಿ ನೀಡಿದ್ದು ಗಮನಾರ್ಹವಾದುದು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ವೀರಶೈವ ಧರ್ಮ

ಕೆಳದಿನೃಪವಿಜಯದಲ್ಲಿ ಲಿಂಗಣ್ಣ ಕವಿಯು

ಬಾರಕೂರ ಬೆಣ್ಣೆವಳ್ಳಿಯ
ಮಾರಗ ಶಂಕರನಾರಾಯಣ ಸಾಗರ ಬೋ
ಳೂರು ಕೊಡಿಯಾಲಗಳೊಳ ಮು
ದಾರ ಮಹತ್ತಿನ ಮಠಗಳಂ ಕಟ್ಟಿಸಿದಂ॥

ಎಂದು ಉಲ್ಲೇಖಿಸಿದ್ದಾನೆ. ಗಣಪತಿರಾವ್ ಐಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬೪ ವೀರಶೈವ ಮಠಗಳಿದ್ದ ಊರುಗಳನ್ನು ಕೆಳಕಂಡಂತೆ ತಮ್ಮ ಕೃತಿಯಲ್ಲಿ ಪಟ್ಟಿಮಾಡಿದ್ದಾರೆ. ಅವಿಂತಿವೆ:

ಬಸರೂರು, ಕೋಟೇಶ್ವರ, ಸಿದ್ಧಾಪುರ, ಮಣಿಗ, ಬಾಳೆಕುದುರು, ಬೆಣ್ಣೆಕುದುರು, ಶಂಕನಾರಾಯಣ, (ಸಾಗರ?) ಬಾರಕೂರು, ಕಂಡ್ಲೂರು,[೪] ಉಪ್ಪೂರು, ಕಲ್ಯಾಣಪುರ, ಕೊಂಡಾಡಿ, ಉಡುಪಿ, ನಾಳ, ಕೆರೆವಾನೆ, ನಾರಾವಿ, ಕಾರ್ಕಳ, ಸಾಣೂರು, ಮೂಡಬಿದಿರೆ, ವೇಣೂರು, ಪುಚ್ಚೆ ಮೊಗರು, ಗುರುವಾಕೆರೆ, ಬೆಳ್ತಂಗಡಿ, ಉಪ್ಪಿನಂಗಡಿ, ಹೊಸಮಠ, ಬೆಳ್ಳಾರೆ, ವಿಟ್ಲ, ಉಳ್ಳಾಲ, ಮಂಜೇಶ್ವರ (ಕಾಸರಗೋಡು) ಚಂದ್ರಗಿರಿ, ಪಳ್ಳಿಕೆರೆ, ಹೊಸದುರ್ಗ, ಬೋಳೂರು, ಕೊಡೆಯಾಲ, ಬಂಟವಾಳ ಮತ್ತು ಗುರುಪುರ ಈ ಊರುಗಳಲ್ಲಿ ಒಂದೊಂದು ಮಠಗಳು.

ಶಾಸನಗಳಲ್ಲಿ ಉಲ್ಲೇಖನಗೊಂಡಂತೆ

ಕೊಲ್ಲೂರಿನ ಸಿದ್ಧೇಶ್ವರ ಮಠ (೧೪೪೫), ಬಸರೂರಿನ ರುದ್ರಾಕ್ಷಿ ಒಡೆಯರ ಮಠ (೧೪೪೭) ಶಂಕರನಾರಾಯಣ ವಿರೂಪಾಕ್ಷ ದೇವರ ಮಠ (೧೫೬೨), ಬಾರಕೂರಿನ ಮಹತ್ತಿನ ಮಠ (೧೬೨೧), ಸೋಮೇಶ್ವರದಲ್ಲಿ ಸಿದ್ಧಮ್ಮಾಜಿ ಕಟ್ಟಿಸಿದ ಮಠ(೧೬೪೧) ಬಸರೂರು-ಬಸವಪ್ಪ ಕಟ್ಟಿಸಿದ ಮಠ (೧೬೪೧), ಹೊಸಂಗಡಿಯಲ್ಲಿ ಚೆನ್ನಣ್ಣ ಕಟ್ಟಿಸಿದ ಮಠ (೧೬೫೯)

* ಕೆಳದಿ ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ - ೫೭೭ ೪೩೧,

ಕೋಟೇಶ್ವರದಲ್ಲಿ ಪರಮೇಶ ಅಯ್ಯ ಕಟ್ಟಿಸಿದ ಮಠ(೧೬೬೫) ಸೂರಾಲಿನ ರೇವಣಸಿದ್ಧದೇವರ ಶಿಷ್ಯ ಮಹಂತರದೇವರು ಕಟ್ಟಿಸಿದ ಮಠ (೧೬೭೬), ಮಹಾಲ ವೀರಣ್ಣನು ಮಳಲಿಗ್ರಾಮದಲ್ಲಿ ಕಟ್ಟಿಸಿದ ಮಠ (೧೬೪೯), ಕಲ್ಯಾಣಪುರದಲ್ಲಿ ಬಸವಯ್ಯ ಕಟ್ಟಿಸಿದ ಮಠ (೧೭೦೪)ಗಳು ಇವೆ. ಸೂರಾಲಿನ ಶಾಸನದಲ್ಲಿ ಮಲ್ಲಿಕಾರ್ಜುನದೇವರ ಶಿಷ್ಯ ಚನ್ನವೀರದೇವರ ಶಿಷ್ಯ ಪರ್ವತದೇವರು ಎಂದಿದೆ.[೫]

ತಾಮ್ರ ಶಾಸನವೊಂದು ೧೭೧೦ರಲ್ಲಿ ವೇಣೂರಿನ ನಿರ್ವಾಣಸ್ವಾಮಿ ಮಠದ ಚನ್ನವೀರದೇವರಿಗೆ ಅಲ್ಲಿಯ ಅಜಲ ಅರಸರು ದತ್ತಿ ಬಿಟ್ಟಿರುವುದನ್ನು ತಿಳಿಸುವುದಲ್ಲದೆ ಬ್ರಹ್ಮಾವರ, ಎಣ್ಣೆಹೊಳೆ, ಸುರತ್ಕಲ್ಲು, ಮಂಗಳೂರು ಮಂತಾದಡೆಗಳಲ್ಲಿಯೂ ವೀರಶೈವದ ನೆಲೆಗಳಿದ್ದುದರ ಉಲ್ಲೇಖವನ್ನು ಒದಗಿಸುತ್ತದೆ.[೬]

ಉಡುಪಿ ಜಂಗಮಮಠದ ಚಾರಿತ್ರಿಕ ದಾಖಲೆ

೧೪ ಸಾಲುಗಳು ಹಾಗೂ ೨೦ ಅಕ್ಷರಗಳಿಂದ ಕೂಡಿದ ಈ ದಾಖಲೆಯ ಅಂತ್ಯದಲ್ಲಿ ಮೊಹರು ಇದೆ, ಕಾಲ ಅಸ್ಪಷ್ಟವಾಗಿದ್ದು (ತ್ರುಟಿತ) "ಸಂವತ್ಸರದ ಭಾದ್ರಪದ ಶು.೨ಲು ಎಂಬ ಉಲ್ಲೇಖವಿದೆ." ಡಾಕ್ಟರ್ ವಸಂತ ಮಾಧವರ Religions in Coastal Karnatakaದಲ್ಲಿ ಇದು ಕೈಬಿಟ್ಟು ಹೋಗಿದ್ದುದು ಕಂಡು ಬರುತ್ತದೆ. ಈ ದಾಖಲೆಯು ಹಲವು ಬಾರಿ ನ್ಯಾಯಾಲಯಗಳಿಗೆ ಹಾಜರು ಮಾಡಿರುವ ಉಲ್ಲೇಖಗಳನ್ನು ಸೂಚಿಸುತ್ತದೆ.

ದಾಖಲೆಯ ಪಾಠ ನಂ ೩

೧ ....ಸಂವತ್ಸರದ ಭಾದ್ರಪದ ಶು. ೨ಲ್ಲು ಶ್ರೀಮತ್ಕೆಳದಿ ಸೋಮಶೇಖರ ನಾಯಕರು

೨ ....ಪ್ಪಗೆ ಬರಸಿ ಕಳುಹಿದ ಪ್ರಯೋಜನ। ಉಡುಪಿನಲ್ಲೂ

೩ ....ಸರಲ್ಲೂ ವಿರಾಪುರವೆಂದು ನಾಲು ಕಟಿಸ್ತ ಮಹತ್ತಿನ

೪ (ಮಟದ) ಧರ್ಮಕ್ಕೆ ಸ್ವಾಸ್ಥೆಯಿಲ್ಲ ಸ್ವಾಸ್ಥೆ ಉತ್ತಾರಾ ಕೊಡಬೇಕೆಂದು ನಿವಾ(ೞ)

೫ ಣ್ಯೆಯ ಮಾವನವರೂ ಹೇಳಿದ ಸಂಮಂಧ ಉತ್ತಾರವ ಕೊಟ್ಟುದು ಬಾರ

೬ (ಕೂರ) ಹೊಬಳಿ ಶಿವಳ್ಳಿ ಮಾಗಣೆ ಸಗ(ಲಿ) ಗ್ರಾಮದಿಂದ ಸಿಸ್ತನಿಂ(ದ)-

೭ - ಪ್ರಾಕು ನಿಲಿಸ್ತ ನಷ್ಟದಿಂದ ಗ ೬೩॥೨॥ ಉಭಯಂಗ ೧೨೩॥೨॥

೮ ಯಿಪ್ಪತ್ತಮೂರು ವರಹಾನ್ನು ಯೆಳು ಹಣ ವಡ್ಡದ ಸ್ವಾಸ್ಥೆಯನ್ನೂ

೯ ಮಹತ್ತಿನ ಮಠದ ಧರ್ಮಕ್ಕೆ ಶಿವಾರ್ಪಿತವಾಗಿ ಕೊಟ್ಟು ಮೀ ಭೂ


೧೦ - ಮುದ್ರಾ ಶಿಲಾಸ್ತಾಪಕವ ಮಾಡಿಸುವಲ್ಲಿಗೆ ಹುಜುರಿಂದ

೧೧ (ಊಳಿ)ಗದ ಮಲ್ಲನ ಕಳುಹಿಸಿಥವೆ ಚಲು ಗ್ರಾಮದವರ ಕರಸಿಕೊಂ

೧೨ ಡು ಗಡಿ ತಕ್ರಾರ ಬಾರದ ರಿತ್ತಿ ಯಿವನ ಮುಂದಿಟ್ಟು ರಪೆ ಪ್ರಮಾಣ

೧೩ (ಡಗೆ) ಶಿಲಾಸ್ತಾಪಿತಾ ಮಾಡಿಸಿಕೊಟ್ಟು ಯಿಾ ಕಾಗದವ ಸೆನಬ(ವನ)

೧೪ ಕಡಿತಕ್ಕೆ ಬರಸಿ ತಿರಿಗಿ ಕೊಡುವ ಹಾಂಗೆ ಕಟ್ಟು ಮಾಡಿಸುವದಾಗಿ



(ಮುಂದಿನ ಹಲವು ಸಾಲುಗಳು ಇಂಗ್ಲೀಷಿನಲ್ಲಿದ್ದು ನ್ಯಾಯಾಲಯದ ಅಧಿಕಾರಿಗಳ ಸಹಿಗಳೂ ಮೊಹರುಗಳೂ ಇವೆ.)

ವಿವರ

ಈ ದಾಖಲೆಯಲ್ಲಿ ಕೆಳದಿ ಸೋಮಶೇಖರ ನಾಯಕರು (ಇಮ್ಮಡಿ) ನಿರ್ಮಿಸಿದ ವೀರಾಪುರ ಮಹತ್ತಿನ ಮಠಕ್ಕೆ ಸ್ವಾಸ್ಥೆಯಿಲ್ಲ ದಿರುವ ಸಂಗತಿ, ಮಾವ ನಿರ್ವಾಣ್ಯೆಯನವರಿಂದ ವಿನಂತಿ ಮಾಡಿ ಕೊಂಡ ಮೇರೆಗೆ ಶಿವಳ್ಳಿ ಮಾಗಣೆಯಲ್ಲಿರುವ ಗ್ರಾಮ (ಹೆಸರು ಅಸ್ಪಷ್ಟವಾಗಿದೆ)ವೊಂದನ್ನು ಮಠಧರ್ಮಕ್ಕೆ ಶಿವಾರ್ಪಿತವಾಗಿ ಕೊಟ್ಟು, ಇದಕ್ಕೆ ಗ್ರಾಮದವರನ್ನು ಮುಂದಿಟ್ಟುಕೊಂಡು ಗಡಿತಕರಾರು ಬರದಂತೆ ಶಿಲಾಸ್ಥಾಪಿತ ಮಾಡಿಸಿಕೊಡಲು ಊಳಿಗದ ಮಲ್ಲನನ್ನು ಕಳಿಸಿದ ಸಂಗತಿಯನ್ನೊಳಗೊಂಡಿದೆ. ಈ ದಾಖಲೆಯಲ್ಲಿರುವ ಮೊಹರೂ ಗಮನಾರ್ಹವಾಗಿದೆ. ನಿರ್ವಾಣ್ಯೆಯ ಮಾವನವರು ಎಂಬ ಉಲ್ಲೇಖವು ಹಿಂದೆಯೇ ತಿಳಿಸಿದಂತೆ ಇಮ್ಮಡಿ ಸೋಮಶೇಖರ ನಾಯಕನ ಕಾಲವಾಗುತ್ತದೆ. ಇದಕ್ಕೆ ಹೊಂದಿಕೊಂಡಂತೆ ಉಡುಪಿಯಲ್ಲಿರುವ ಜಂಗಮಮಠದ ಪ್ರಾಚೀನ ಅವಶೇಷಗಳೂ ಗಮನಾರ್ಹವಾಗಿವೆ.

ನಿರ್ವಾಣಯ್ಯನವರು

ಮೌನಪ್ಪಶೆಟ್ಟರ ಮಗನೇ ನಿರ್ಮಾಣಯ್ಯ; ಈತನಿಗೆ ನಿರ್ವಾಣಾರ್ಯನೆಂದೂ ಹೆಸರುಂಟು. ಹಿರಿಯ ಬಸಪ್ಪ ನಾಯಕನ ಆಡಳಿತದಲ್ಲಿ ಈತನು ಸಹಾಯಕನಾಗಿದ್ದುಕೊಂಡು, ಅರಸು ಮನೆತನದಲ್ಲಿ ಬಾಂಧವ್ಯ ಬೆಳೆಸಿದನು. ಅಪುತ್ರವತಿ ರಾಣಿ ಚೆನ್ನಮ್ಮಾಜಿ ಹಿರಿಯ ಬಸವಪ್ಪನನ್ನು ದತ್ತುಪಡೆದಂತೆ, ತನ್ನ ತಂಗಿ ಮರಿಯಮ್ಮಾಜಿಯೆಂಬವಳನ್ನು ಸಾಕಿ, ಸಲಹಿ ನಿರ್ವಾಣಯ್ಯನಿಗೆ ವಿವಾಹವಾಗಿತ್ತಳು. ಈತನು ತನ್ನ ಕುಮಾರಿ ನೀಲಮ್ಮಾಜಿಯನ್ನು ಹಿರಿಯ ಬಸವಪ್ಪನ ಅನಂತರ ಪಟ್ಟಕ್ಕೆ ಬಂದ ಕಿರಿಯ ಸೋಮಶೇಖರ ನಾಯಕನಿಗಿತ್ತು ಮದುವೆ ಮಾಡಿದನು. ಅರಸನಿಗೆ ಮಾವನಾದ ನಿರ್ವಾಣಯ್ಯನಿಗೆ ರಾಜ್ಯದಲ್ಲಿ ವಿಶೇಷ ಮನ್ನಣೆಯಿತ್ತು. ಈತನು ಅಳಿಯ ಸೋಮಶೇಖರನ ತರುವಾಯ ಕಿರಿಯ ಬಸವಪ್ಪನಾಯಕನ ಕಾಲದಲ್ಲೂ ಇರುವುದು ಕಂಡು ಬರುತ್ತದೆ. ಕಿರಿಯ ಬಸವಪ್ಪನಾಯಕನಿಗೆ ಮಕ್ಕಳಿಲ್ಲದ್ದರಿಂದ ನಿರ್ವಾಣಯ್ಯನ ಮೊಮ್ಮಗ ಗುರುವಪ್ಪನ ಮಗ ಚೆನ್ನಪ್ಪನನ್ನು "ಚೆನ್ನಬಸವನಾಯಕ"ನೆಂದು ನಾಮಕರಣ ಮಾಡಿ ಕ್ರಿ.ಶ. ೧೭೫೫ರಲ್ಲಿ ಪಟ್ಟಾಭಿಷೇಕವಾಗುತ್ತದೆ.[೭] ನಿರ್ವಾಣಯ್ಯನು ಪ್ರಖ್ಯಾತ ವಿದ್ವಾಂಸನಾಗಿದ್ದು "ಶಿವಪೂಜಾವಿಧಾನ", ಸಂಸ್ಕೃತದಲ್ಲಿ ಕ್ರಿಯಾಸಾರದ ಕೆಲವು ಭೇದಗಳಿಗೆ ವ್ಯಾಖ್ಯಾನ, ನಿಜಗುಣ ಶಿವಯೋಗಿಗಳ ಕನ್ನಡ ವಿವೇಕ ಚಿಂತಾಮಣಿಯ ಸ್ವಲ್ಪ ಭಾಗವನ್ನು ಸಂಸ್ಕೃತಕ್ಕೆ ಪರಿವರ್ತಿಸಿರುವುದಾಗಿಯೂ ತಿಳಿಯುತ್ತದೆ.[೮]

ವಿಟ್ಲ ರಾಜ್ಯದ ಕಾಡುಮಠದ ವೀರಶೈವ ರಾಮಯ್ಯ ಶೆಟ್ರಲ್ಲಿರುವ ಶಾ.ಶ ೧೬೪೧ (ಕ್ರಿ.ಶ. ೧೭೧೯)ನೆಯ ಶಾಸನದಲ್ಲಿ ವಿಟ್ಲದ ದೊಂಬ ಹೆಗ್ಗಡೆಯು ಕೆಳದಿ ರಾಜ್ಯಕ್ಕೆ ನೀಡಬೇಕಾದ ಕಪ್ಪವನ್ನು ಕೊಡದೇ ಇದ್ದುದಕ್ಕಾಗಿ ಆ ಹೆಗ್ಗಡೆಯನ್ನು

ಸೆರೆಯಲ್ಲಿರಿಸಲಾಯಿತು. ಆಗ ಪ್ರಧಾನಿಯಾಗಿದ್ದ ನಿರ್ವಾಣಯ್ಯನು ಆ ಹಣಕ್ಕೆ ಜಾಮೀನು ನಿಂತಿದ್ದಕ್ಕಾಗಿ ನರಸಿಂಹರಸ ದೊಂಬ ಹೆಗಡೆಯು ನಿರ್ವಾಣಶೆಟ್ಟಿಗೆ ಕೊಲ್ನಾಡು ಮತ್ತು ವಿಟ್ಲ ಗ್ರಾಮಗಳಲ್ಲಿ ಚಂದಪ್ಪಾಡಿ, ಕಾಡುಮಠ, ನರ್ಕಳ ಗ್ರಾಮವನ್ನು ಉಂಬಳಿಯಾಗಿತ್ತನು. ಆ ಆಸ್ತಿಯನ್ನು ಈಗಲೂ ಕಾಡು ಮಠದವರು ಅನುಭವಿಸಿಕೊಂಡು ಬರುತ್ತಿದ್ದಾರೆ.[೯] ನಿರ್ವಾಣಯ್ಯನ ವಂಶೀಕರು ಈಗಲೂ ಕಾಡುಮಠದಲ್ಲಿರುವುದು ವ್ಯಕ್ತಪಡುತ್ತದೆ.[೧೦]

ಉಪಸಂಹಾರ

ಪ್ರಸಿದ್ಧ ದ್ವೈತ ಧರ್ಮಕ್ಷೇತ್ರವಾದ ಉಡುಪಿಯಲ್ಲಿ ಕೆಳದಿ ಅರಸರು ನಿರ್ಮಿಸಿದ ಜಂಗಮಮಠವೂ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸದಲ್ಲಿ ಈವರೆಗೆ ಗೋಚರಿಸದಿರುವುದು ಅಚ್ಚರಿಯೇ ಸರಿ. ಕೆಳದಿ ಇತಿಹಾಸೋತ್ತರ ಕಾಲದಲ್ಲಿ ಪಳೆಯುಳಿಕೆಯೋ ಪಾದಿಯಲ್ಲಿ ಅಲ್ಲಲ್ಲಿಯೇ ಪಾಳು ಬಿದ್ದಿರುವ ವೀರಶೈವ ಮಠಗಳು ಆರ್ಥಿಕ ಹಾಗೂ ಇತರೆ ದೌರ್ಬಲ್ಯಗಳಿಂದ ತಮ್ಮ ಅಸ್ಥಿತ್ವವನ್ನೇ ಕಳೆದು ಕೊಂಡುವು. ಡಾ|| ವಸಂತಮಾಧವರು ನಿರೂಪಿಸಿದಂತೆ ಡೊಂಗರ ಕೇರಿಯಲ್ಲಿರುವ ಜಂಗಮಮಠವು ಕಣ್ಮರೆಯಾಗಿ ಅದರ ಪ್ರದೇಶದಲ್ಲಿ ಮಸೀದಿಯಿರುವುದು ವ್ಯಕ್ತಪಡುತ್ತದೆ.[೧೧] ಈ ದೃಷ್ಟಿಯಿಂದ ಶಾಸ್ತ್ರೀಯಬದ್ಧವಾದ ಯೋಜನೆಯೊಂದನ್ನು ಹಮ್ಮಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವೀರಶೈವ ಮಠಗಳ ಸಮೀಕ್ಷಾ ಕಾರ್ಯ ಕೈಗೊಂಡು ಮುಂದಿನ ಇತಿಹಾಸಕ್ಕೆ ಸೂಚಿಯನ್ನು ಸಿದ್ಧಪಡಿಸುವುದು ಅಗತ್ಯ. ಇದೇ ನಿಟ್ಟಿನಲ್ಲಿ ಪೂರ್ವಾಗ್ರಹಪೀಡಿತರಾಗದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧ ಮಠ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿರುವ ಚಾರಿತ್ರಿಕ ದಾಖಲೆಗಳನ್ನು ಅನ್ವೇಷಿಸಿ ಸೂಚಿಯನ್ನು (Catalogue) ಪ್ರಕಟಿಸುವುದು ಅತ್ಯಗತ್ಯ.

ಈ ಬಗ್ಗೆ ಈಗಾಗಲೇ ಚಾರಿತ್ರಿಕ ದಾಖಲೆಯನ್ನು ಸಿದ್ಧಮಾಡಿಸಿಟ್ಟುಕೊಂಡಿರುವ ಸಂಸ್ಥೆಯು ಬೇಗ ಪ್ರಕಟಿಸಿದರೆ ಅನುಕೂಲ, ಅಗತ್ಯ, ಸೂಕ್ತ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ದ.ಕ. ಜಿಲ್ಲೆಯ ಪ್ರಾಚೀನ ಇತಿಹಾಸ**: ಗಣಪತಿ ಐಗಳ್, ಪು. ೧೯೫, ೨೦೦-೨೦೧.

೨. ಈಗ ಇದು ಕಣ್ಮರೆಯಾಗಿದೆ. (ದಿ ೨೦-೧೨-೧೯೮೭ರ ಉದಯವಾಣಿ ದಿನಪತ್ರಿಕೆಯಲ್ಲಿ ನನ್ನ ಲೇಖನ ನೋಡಿರಿ)

೩. ಪುರಂದರ ದಾಸರ ಮೂಲ ಸಾಗರ ತಾಲ್ಲೂಕಿನ ವರದಾಮೂಲವೆಂಬುದಾಗಿ ಬೆಂಗಳೂರಿನ ಪ್ರಸಿದ್ಧ ವಿದ್ವಾಂಸ ಶ್ರೀ ಆದ್ಯ ರಾಮಾಚಾರ್ಯರು ತರ್ಕಿಸಿ ಲೇಖನ ಬರೆದಿದ್ದಾರೆ.

೪. ಕುಂದೂರಿನಲ್ಲಿ ಕೆಳದಿ ವೀರಭದ್ರನಾಯಕ ಹಾಗೂ ಪತ್ನಿ ಕೊಲ್ಲೂರಮ್ಮಾಜಿಯ ಸಮಾಧಿಯಾಗುತ್ತದೆ. (ಕೆ.ನೃ.ವಿ. VI ಆಶ್ವಾಸ)

೫. ಡಾ|| ಕೆ.ಜಿ. ವಸಂತಮಾಧವ. **Religion in coastal Karnataka,**

೬. **ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೀರಶೈವಧರ್ಮ**: ಪು. ಶ್ರೀನಿವಾಸಭಟ್ಟ ಕಟೀಲು "ಪರಂಜ್ಯೋತಿ" ಆಗಸ್ಟ್ ೧೯೯೩ರ ಸಂಚಿಕೆ ಪು. ೩೫-೩೬.

೭. **ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ**: ಡಾ.ಸಾ.ಶಿ. ಮರುಳಯ್ಯ ನೋಡಿರಿ, (ಕ.ವಿ.ಣೆ. (ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಾಂಗ) ೧೯೮೦.

೮. "ಶಿವಪೂಜಾವಿಧಾನ" ಓಲೆ ಪ್ರತಿ ಹುಬ್ಬಳ್ಳಿ ಶ್ರೀ ಜಗದ್ಗುರು ೩೦೦೦ ಮಠದಲ್ಲಿದೆ. "ಹಸ್ತಪ್ರತಿ ಸೂಚಿ" (೧೯೮೯) ಸಂ: ಕೆಳದಿ ಗುಂಡಾಜೋಯಿಸ್, ಪು. ೩೧೮ ಮತ್ತು ೩೧೯ ನೋಡಿರಿ.

೯. **ದ.ಕ. ಜಿಲ್ಲೆಯ ಪ್ರಾಚೀನ ಇತಿಹಾಸ**: ಗಣಪತಿ ಐಗಳ್, ಪು. ೩೬೨;

೧೦. **ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ**: ಪು. ೨೦೨.

೧೧. ಗೋವಿಂದ ಪೈರವರ **ತುಳು ನಾಡು, ತೆಂಕನಾಡು** (ಕಾಸರಗೋಡು, ೧೯೪೭) ಪು. ೪೮.

ಡಾ|| ಕೆಳದಿ ವೆಂಕಟೇಶ್ ಜೋಯಿಸ್*

ಚಿನ್ನಭಂಡಾರದ ಅನಂತಯ್ಯನ ಕುರಿತು ಚಾರಿತ್ರಿಕ ದಾಖಲೆ

ದೇಶೀಯ ಸಂಸ್ಥಾನದ ಇತಿಹಾಸದಲ್ಲಿ ಪ್ರಧಾನರು, ಸೇನಾಧಿಪತಿಗಳು, ಉಚ್ಚ ಅಧಿಕಾರಿವರ್ಗದವರ ಇತಿಹಾಸಗಳೂ ಪ್ರಮುಖ ಸ್ಥಾನ ಪಡೆಯುತ್ತವೆ. ಇವುಗಳು ಕಡತಗಳಲ್ಲಿ, ಕಾಗದ ಹಸ್ತಪ್ರತಿಗಳಲ್ಲಿ ಅಲ್ಲಲ್ಲಿ ದೊರೆಯುವುದಿದೆ. ಅವುಗಳ ಶಾಸ್ತ್ರೀಯ ಅಧ್ಯಯನ ಕೈಗೊಳ್ಳುವ ಅಗತ್ಯತೆ ಈಗ ಬಹಳವಾಗಿದೆ. ಈ ನಿಟ್ಟಿನಲ್ಲಿ ಈಗ ದೊರೆತಿರುವ ಚಿನ್ನಭಂಡಾರದ ಅನಂತಯ್ಯನ ಕುರಿತ ಚಾರಿತ್ರಿಕ ದಾಖಲೆಯು ಗಮನ ಸೆಳೆಯುತ್ತದೆ.

> ಕೆಳದಿ ನೃಪ ವಿಜಯದಲ್ಲಿ ಕವಿ ಲಿಂಗಣ್ಣನು .... ಮನವಾರ್ತೆ ಬೊಕ್ಕಸದ ಸೇನಬೋವ ಚಿನ್ನಭಂಡಾರದ ನಾರಣಪ್ಪಯ್ಯನೆಂಬಾತನಲ್ಲಿ ನಿತ್ತರಿಸಲಮ್ಮದೆ ಕುಟುಂಬ ಸಹಿತಂ ತೆರಳ್ದೈತಂದು ಚಿಕ್ಕಸಂಕಣ್ಣನಾಯಕರ ಪಾದಾರವಿಂದವನಾಶ್ರಯಿಸಲವರ್ಗೆ ಪರಮಾಧಿಕಾರ ಭಾಗ್ಯಂಗಳನಿತ್ತು ಪೋಷಿಸಿದಂತು ಮಲ್ಲದೆಯುಂ .... ಎಂಬುದಾಗಿ ಚಿನ್ನಭಂಡಾರದ ನಾರಣಪ್ಪಯ್ಯನ ಕುರಿತು ಉಲ್ಲೇಖ ದೊರೆಯುತ್ತದೆ.[೧]

ಕೆಳದಿ ಕಾಲದಲ್ಲಿ ಕಂಡುಬರುವ ಚಿನ್ನಭಂಡಾರದವರುಗಳಲ್ಲಿ ಪ್ರಮುಖವಾಗಿ ಚಿನ್ನಭಂಡಾರದ ರಾಮಕೃಷ್ಣಯ್ಯ, ಪುರುಷೋತ್ತಮಯ್ಯ ಇವರುಗಳನ್ನು ಹೆಸರಿಸಬಹುದು. ಇದೇ ಮನೆತನದವರಾದ ಶ್ರೀ ಪುರುಷೋತ್ತಮರಾಯರ ವಂಶಿಕರ ಕುರಿತು ತೀರ್ಥಹಳ್ಳಿಯ ಹತ್ತಿರದ ಕುರುವಳ್ಳಿಯಲ್ಲಿರುವ ಶ್ರೀ ಶಾಮಾಚಾರಿ ಎಂಬುವವರಲ್ಲಿ ದೊರೆತ ದಾಖಲೆಯನ್ನಾಧರಿಸಿ ಮಿಥಿಕ್ ಸೊಸೈಟಿಯ ಪತ್ರಿಕೆಯಲ್ಲಿ ಲೇಖನವೊಂದನ್ನು ಪ್ರಕಟಿಸಲಾಗಿದೆ.[೨]

ಈಗ ದೊರೆತಿರುವ ಎರಡು ದಾಖಲೆಗಳು ಸಾಗರದ ಶ್ರೀ ಮಹಾಗಣಪತಿ ದೇವಾಲಯದ ಪ್ರಧಾನ ಅರ್ಚಕರೂ, ಸಾಗರದ ಪ್ರಮುಖ ಪುರೋಹಿತರೂ ಆಗಿರುವ ಶ್ರೀ ಸೂರ್ಯನಾರಾಯಣ ಜೋಯಿಸರವರಲ್ಲಿ ದೊರೆತಿರುವಂತಹುದು. ಮೊದಲ ದಾಖಲೆಯು ೩೦ ಸೆಂ ಮೀ ಉದ್ದ, ೨೦.೬ ಸೆಂ. ಮೀ. ಅಗಲ ಉಳ್ಳದ್ದಾಗಿದ್ದು ೪೫ ಸಾಲುಗಳನ್ನು ಒಳಗೊಂಡಿದೆ. ದಾಖಲೆಯ ಕೊನೆಯಲ್ಲಿ ಮೊಹರಿದೆ. ಅಕ್ಷರಗಳು ಪ್ರತಿ ಸಾಲಿನಲ್ಲಿ ೨೫ ಇದೆ. ದಾಖಲೆಯು ಸಿಧಾರ್ತಿ ಸಂ|| ದ ಶ್ರಾವಣ ಶುದ್ಧ ೩ರದ್ದಾಗಿದೆ.

ಇದು ಯಿಕೆರಿ ಹೋಬಳಿ ಪ್ರಧಾನರು ಚಿಂನಭಂಡಾರದ ಅನಂತಯ್ಯನವರು ಬರೆಸಿದ ಶಾಸನ ಮುಂತಾಗಿ ಸಾಬಕ್ಕು ಸರಕಾರದಲು ಉತ್ತಾರ ಜಪ್ತಿ ಆದ ಬಗ್ಗೆ ದಾಖಲೆ ಇದಾಗಿದೆ. ದಾಖಲೆಯು ಯಿಕ್ಕೇರಿ ಹೋಬಳಿ ಅನಂತಯ್ಯನ ಧರ್ಮ. ದೇವಾದಾಯ, ಬ್ರಹ್ಮಾದಾಯ, ಅಗ್ರಹಾರ, ಭಟ್ಟಿಮಾನ್ಯ ಮುಂತಾಗಿ ಸಾಬಕ್ಕು ಸರಕಾರದಲು ಉತ್ತಾರ ಜಪ್ತಿ ಆಗಿ ಅದೆಯಂಬದಾಗಿ ಉತ್ತಾರದವರ್ರು ದೆವರ ಕಾಲದಲು ಅಭಿವೃದ್ಧಿ ಆಗುವಂತೆ ಶ್ರೇಯಸ್ಸು ಹಾರೈಸಿಕೊಂಡು ಇದ್ದೇವೆ, ಎಂದು ಬಂದು ಹೇಳಿದ ಪ್ರಕಾರ ಉತ್ತಾರದವರಿಗೆ ಸಾಬಿತು ದಾಖಲಾದ ಅರೆವಾಸಿ ಹಾರಿಕೆಗದೆ ಜಪ್ತಿ ಸಹಾ ಸರ್ವಮಾನ್ಯವಾಗಿ ಉತ್ತಾರದ ಭೂಮಿ ವಿಂಗಡಿಸಿಕೊಟ್ಟು ಬಿಲಿ ಬೆನಾರ್ರಿ ಸಹಾ ಸರಕಾರದವರು ಕೆಳದ ಹಾಗೆ ಹಾಗೂ ಯೀ ಜನರಿಂದ ಸಾಬಿತು ಬಾಕಿ ಸಹ ಮಾಫುಮಾಡ್ಡಿ ನಡಸುವಹಾಗೆ ಈ ಸಂವತ್ಸರದಲ್ಲಿ ಆಗುಮಾಡಿದ ವಿವರವನ್ನು ತಿಳಿಸುತ್ತದೆ. ದಾಖಲೆಯ ಕೊನೆಯಲ್ಲಿ ರುಜು ಸುಬಾ ಪಂಡಿತ್ತನ ದಫ್ತರ ದಾಖಲೆ ಎಂಬುದಾಗಿಯೂ ದಾಖಲು ದಫ್ತರ ಶಿರಸ್ತಾರ ಚಿಂ| ಅನಂತೈನ ಮಗ ಸುಬ್ಬೈಯನ ರುಜು ಎಂಬುದಾಗಿ ಮರಾಠಿಯಲ್ಲಿ ಇದೆ. ಅಂತ್ಯದಲ್ಲಿ ಎರಡು ಸಾಲುಗಳಲ್ಲಿ 'ಇಂತಿ ನಮಸ್ಕಾರಾ' ಎಂಬುದಾಗಿದೆ. ಅಕ್ಷರಗಳು ಬದಲಾಗಿರುವಂತೆ ಕಂಡುಬರುತ್ತದೆ. ಈ ದಾಖಲೆಯು ಅಂದಿನ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಬೆಳಕನ್ನು ಚೆಲ್ಲಲು ಪ್ರಮುಖ ಆಕರವಾಗಿದೆ.

ದೊರೆತಿರುವ ಎರಡನೆಯ ದಾಖಲೆಯು ೩೦ ಸೆಂ. ಮೀ. ಉದ್ದ ೨೦. ೬ ಸೆಂ.ಮೀ. ಅಗಲವಿದ್ದು ೩೧ ಸಾಲುಗಳನ್ನು ಒಳಗೊಂಡಿದೆ. ಮೋಡಿ ಲಿಪಿಯಲ್ಲಿರುವ ಇವು ೨೫ ಅಕ್ಷರಗಳನ್ನು ಪ್ರತಿ ಸಾಲಿನಲ್ಲಿ ಹೊಂದಿದೆ. ದಾಖಲೆಯ ಮೊದಲಲ್ಲಿ ಮೊಹರಿದೆ. ದಾಖಲೆಯ ಕೊನೆಯಲ್ಲಿ ಏಳು ಸಾಲುಗಳಲ್ಲಿ ದೇವನಾಗರಿ

* ಕೆಳದಿ - ೫೭೭ ೪೦೧, ಸಾಗರ-ಶಿವಮೊಗ್ಗ ಜಿಲ್ಲೆ.

ಲಿಪಿಯಲ್ಲಿ ಸಹಿ ಮಾಡಲಾಗಿದೆ. ಇದರ ಕಾಲ ದಾಖಲೆಯಲ್ಲಿ ಸೂಚಿತವಾಗಿರುವಂತೆ ಶಾ.ಶ ೧೭೩೫ (ಕ್ರಿ. ಶ. ೧೮೧೩)

ಈ ದಾಖಲೆಯು ಯಿಕ್ಕೇರಿ ಸಾಗರದಲ್ಲಿ ಇರುವ ವೇದಮೂರ್ತಿ ಅಪ್ಪಜೋಯಿಸರವರಿಗೆ ಸವಾರಕಛೇರಿ ಅಂಣ್ಣಪ್ಪನವರು, ಅಜಿಮಾಟರರು, ಕಡಶಿ ಶ್ರೀನಿವಾಸರಾಯರವರು ಷಿಷಕಾರ್ರು ಶೇಷಗಿರಿರಾಯರ್ರು ಬರಸಿಕೊಟ್ಟ ಶ್ರೀ ನಂಜುಂಡೇಶ್ವರ ದೇವರ ಪೂಜಾ ಧರ್ಮಸಾಧನವಾಗಿದೆ. ಈ ದೇವಸ್ಥಾನವನ್ನು ದಾನಿವಾಸ್ತ ನಾಡಿಗ ಸುಬ್ಬೈಯ್ಯನು ಕಟ್ಟಿಸಿ ಪ್ರತಿಷ್ಟೆಯು ಮಾಡಿಸಿದ್ದಾಗಿ ದಾಖಲೆಯಿಂದ ವ್ಯಕ್ತವಾಗುತ್ತದೆ. ಹಾಗೂ ಈ ದೇವರ ಪೂಜೆಯನ್ನು ವೇದಮೂರ್ತಿ ಅಪ್ಪಜೋಯಿಸರವರ್ರಿಗೆ ಮಾಡಿ ಕೊಟ್ಟಿದ್ದಾಗಿಯೂ ಈಗ ದೇವಾಲಯವು ಶಿಥಿಲವಾಗಿರುವುದರಿಂದ ಅದನ್ನು ಪುನಃ ಜೀರ್ಣೋದ್ಧಾರ ಮಾಡಿಕೊಡಬೇಕೆಂಬುದಾಗಿ ಕೇಳಿಕೊಂಡ ಮೇರೆಗೆ ಮತ್ತೊಮ್ಮೆ ಜೀರ್ಣೋದ್ಧಾರ ಮಾಡಿ ಕೊಟ್ಟಿರುವುದನ್ನು ದಾಖಲೆ ಪ್ರಸ್ತಾಪಿಸುತ್ತದೆ.

ಮೊದಲ ದಾಖಲೆಯ ೧೫ನೆಯ ಸಾಲಿನಲ್ಲಿ ಕಂಡುಬರುವ ಶ್ರೀ ನಂಜುಂಡೇಶ್ವರ ದೇವರಿಗೆ ಪ್ರಾಕಾರಾಬ್ಯಾ ಯಿಾ ಶಿಮೆಯಲು ನಡದು ಬರುವ ಭೂ ವಿವರ- ಎಂಬ ವಿವರವನ್ನು ಗಮನಿಸಿದಾಗ ಎರಡನೆಯ ದಾಖಲೆಯಲ್ಲಿ ಕಂಡುಬರುವ ನಂಜುಂಡೇಶ್ವರ ದೇವಾಲಯದ ಜೀರ್ಣೋದ್ಧಾರ ಕೈಗೊಂಡ ವಿವರವನ್ನು ಗಮನಿಸಿದಾಗ ಈ ಎರಡೂ ದಾಖಲೆಗಳು ಸಾಗರದಲ್ಲಿರುವ ಶ್ರೀ ನಂಜುಂಡೇಶ್ವರ ದೇವಾಲಯಕ್ಕೆ ಸಂಬಂಧಿಸಿದುದಾಗಿರುವುದನ್ನು ಪ್ರತಿಪಾದಿಸಬಹುದಾಗಿದೆ. ಈಗ ಈ ದೇವಾಲಯವು ತನ್ನ ಹಿಂದಿನತನವನ್ನು ಕಳೆದುಕೊಂಡು ಹೊಸ ನಿರ್ಮಾಣವನ್ನು ಹೊಂದಿದೆ.[೩]

ಸಣ್ಣ ಪುಟ್ಟ ಸಂಸ್ಥಾನಗಳ ಇತಿಹಾಸದಲ್ಲಿ ಕಾಣಬರುವ ಅಧಿಕಾರಿವರ್ಗದವರ ದಾಖಲೆಗಳು ಇಂದೂ ಸಹ ಅಲ್ಲಲ್ಲಿ ಕಂಡುಬರುತ್ತಿದೆ. ಇವುಗಳು ಆ ಕಾಲದಲ್ಲಿದ್ದ ದೇಶೀಯ ಅರಸರ ಕುರಿತು ಹೊಸ ಬೆಳಕನ್ನು ಚೆಲ್ಲಲು ಸಹಕಾರಿಯಾಗಿರುತ್ತವೆ. ಕೆಳದಿ ಕಾಲದ ಬೊಕ್ಕಸದ ಅಧಿಕಾರಿಗಳ ಮನೆತನಕ್ಕೆ ಸಂಬಂಧಿಸಿದ ದಾಖಲೆಗಳು. ಮೂಲ ಸಾಮಗ್ರಿಗಳು ಕಡತಗಳಲ್ಲಿ ಕಾಗದಗಳಲ್ಲಿ ಮೋಡಿ ಲಿಪಿಯಲ್ಲಿ ದೊರೆತಿವೆ.[೪] ಇಂತಹ ಸಾಮಗ್ರಿಗಳು ಮುಂದಿನ ಅಧ್ಯಯನಕ್ಕೆ ಹೆಚ್ಚು ಪ್ರಯೋಜನಕರವಾಗಬಹುದು.

ನಿರೂಪ ೧

ಮುಂಭಾಗ

ಶ್ರೀರಾಮ

ಸಿಧಾರ್ತಿ ಸಂವತ್ಸರದ ಶ್ರಾವಣ ಶು. ೩ಲು ಶ್ರೀಮತ್ತು ಯಿಕೇರ್ರಿ ಹೊಬಳಿ ಪ್ರಧಾ।
ನರು ಚಿಂನಭಂಡಾರದ ಅನಂತ್ಯೆಯನ ಧರ್ಮ ಯಿಕ್ಕೆರ್ರಿ ಯಲಗಳಲೆ ಅತ್ತು
ವಾಡ್ದಿ ಕಲುಸಿ ಮಂತಸಾಲೆ ಮಳಲಿ ಶಿರವಂತ್ತೆ ಆವಿನಹಳಿ ಮುಂತಾದ ಶಿಮೆಮಣಿ।
ಹೈಗಾರ್ರು ಶ್ಯಾನುಬಾಗರ್ರಿಗೆ ಸಹಾ ನಮಸ್ಕಾರ ಆದಾಗಿ ದೆವಾಯ ಬ್ರಂಹ್ಮಾದಾಯ।
ಅಗ್ರಹಾರ ಬಟ್ಟಿಮಾಂನ್ಯ। ಸತ್ರ ಬೊವಿ ಜಂಗಮ। ಪಖಿರ ಫಖಿರಾ ವಗ್ಯೆರ್ರೆ ಯಿನಾಮವರ್ರು।
ಶಾಸನ ಮುಂತ್ತಾಗಿ। ಸಾಬಕ್ಕು ಸರಕಾರದಲು ಉತ್ತಾರ ಜಪ್ತಿ ಆಗಿ ಅಧೆಯಂಬದಾಗಿ ಉ।
ತ್ತಾರದವರ್ರು ದೆವರ ಕಾಲದಲು ಸರ್ವಮಾಂನ್ಯ ಉತಾರ್ರಕ್ಕೆ ಪೂರ್ವ ಪ್ರಕಾರ। ಅಪ್ಪಣೆ ಕ್ಯೊ।
ಡ್ಡಿಶಿದಲ್ಲಿ ಸರಕಾರದ ದಲುಲತ್ತು ಅಭಿವೃದ್ಧಿ ಆಗುವಂತ್ತೆ ಶ್ರೆಯಸು ಹಾರ್ರೈಶಿಕೊಂ।
ಡು ಯಿದೆಲು ಯಂತ್ತಾ ಹಜೂರ್ರಿಗೆ ಬಂದು ಅರ್ರಿಕೆ ಮಾಡ್ದಿಕೊಂಡದರ್ರಿಂದ ಸ*ರ।
ಹು। ಉತಾರದವರ್ರಿಗೆ ಸಾಬಿತು ದಾಖಲಾದ ಅರೆವಾಶಿ ಹಾರಿಕೆಗದ ಜಪ್ತಿ ಸ।
ಹಾ ಸರ್ವಮಾಂನ್ಯವಾಗಿ ಉತ್ತಾರದ ಭೂಮಿವಿಂಗಡ್ದಿಶಿ ಕೊಟ್ಟುಬಿಟಿ ಬೆಗಾರ್ರಿಸ।
ಹಾ ಸರಕಾರದವರು ಕೆಳದ ಹಾಗೂ ಯೀ ಜನರ್ರಿಂದ ಸಾಬೀತು ಬಾಕ್ಕಿ ಸಹ ಮಾಡು
ಮಾಡ್ದಿ ನಡಸುವಹಾಗೆ ಯೀ ಸಂವತ್ಸರದಲೂ ಆಷಾಡ ಶು ೯ ದಿವಸದ ಪರವಾನೆ ಸಾ।
ದರಾದರ್ರಿಂದ ಬರಶಿಕಳುಹಿಧಿತ್ತು. ಆ ಬಗ್ಯೆ। ಯೀ ಸಾಗರದ ಪ್ಯಾಠೆವಳಗೆಯಿರ್ರು।
ವ ನಂಜುಂಡೆಶ್ವರ ದೆವರ್ರಿಗೆ ಪ್ರಾಕಾರಬ್ಯಾ ಯೀ ಶಿಮೆಯಲು ನಡದು ಬರ್ರುವ ಭೂ।
ಸ್ವಾಸ್ತೆ ಗ ೫೦ ಕೆ ವಿವರ. ಗದೆಯಿಂದ ಗ ೨೭ ತೊಟ್ಟದಿಂದ ಗ ೨೩ ಉಭಯಂ ಗ ೫೦ ಕ್ಕೆ
ವಿವರ್ರ ಯಿಕ್ಕೆರ್ರಿ ಶಿಮೆ ನಿರಕೊಡು ಗ್ರಾಮದಲು ಗದೆಗಳಿ ಯಲಗಳಲೆ ಶಿಮೆ ಶೆಡ।
ತ್ರಿಕೆರೆ ಗ್ರಾಮದಲು ತ್ತೊಟ್ಟ ಗ೬ ಅತ್ತುವಾಡಿ ಶಿಮೆಯಲು। ಹೆಗೊಡು ಗ್ರಾಮದಲು।
ತೊಟ್ಟ ಗ ೧ ಕೊಡನಕಟಿ ಗ್ರಾಮದಲು ತ್ತೊಟ ಗ ೪ ಉಭಯಂ ಗ ೫ ಕಲುಸಿ ಗ್ರಾಮ।
ಕೆರವರ್ರಿ ಗದೆ ಗ ೨ ಬಾಳಗೊಡು ಗ್ರಾಮ ಗದೆ ಗ ೪ ಉಭಯಂ ಗ ೬ ಮಂತಸಾಲೆ ಶಿಮೆ।
ಯಲು ಗದೆ ಬಿಳ್ಳಗೊಡಲು ಗ ೩ ನಾದ್ರುಗೊಡಲು (ಗ ೪) ಗ೩ ಉಭಯಂ ಗ ೬ ಶಿರವಂ।
ತ್ತೆ ಶಿಮೆ ಗಿಜುಗಾರ್ರು ಗ್ರಾಮದಲು ತೊಟಗ ೨ ಆವಿನಹಳಿ ಶಿಮೆಯಲು ಮಲವ।

೨೩ ಬೆಂಕಟವಳಿ ಗ್ರಾಮದಲು ಗ ೮ ಮಳಲಿ ಶಿಮೆ ಹಳೆತೊಟದ ಗ್ರಾಮದಲು ಗದೆ ಗ ೩ ಅಂತು
೨೪ ಸ್ಥಳ ೧೧ ಲು ಗ ೫೦ ಕೆ ವಿವರ್ರ। ಕಟಲೆ ಬಗ್ಯೆ ಗ ೨೦ ಕೆ ವಿವರ। ಅಮ್ರುತಪಡ್ಡಿ ನೈವೆದ್ಯ ಹಂ
೨೫ ಣುಕಾಯಿ ವಗ್ಯೆರ್ರೆ ೬ ನಂದಾದಿಪಯಂಣೆ ಬತ್ತಿ ಹತ್ತಿ ಸರ್ಹ ೬ ಸೊಮವಾರ ಪ್ರ।
೨೬ ದೊಷ ಮುಂತ್ತಾದ ವಿಶೆಷದಿವ್ಸ ಪಂಚಾಮ್ರುತ ಗ ೨ ಪಂಚಪರ್ವ ಶ್ರಾವಣ ಕಾರ್ತ್ತಿಕ ದಿಪೊ।
೨೭ ತ್ಸಹ ಮುಂತ್ತಾಗಿ ಗ ೨ ಮಾಘ ಶು ೨ ಲು ವದಂ(೯)ತ್ತಿ ಸಂಮಂಧ ಬ್ರಾಹ್ಮರ ಸಂತರ್ಪಣೆ ಸ।
೨೮ ಹ ಗ ೪ ಅಂತೂ ಗ ೨೦ ಸ್ಥಾನಿಕ ಉಪಾದಿವಂತ್ತರ ಮಹಾಜನ ೫ ಕ್ಕೆ ಜೊಯಿಸ ಶೆಷಭಟರ ಮು।
೨೯ ಖಾಂತ್ರ ಗ ೩೦ ಕೆ ವಿವರ್ರ ಪೂಜೆ ಮಾಡುವ ಶೆಷಭಟರ್ರಿಗೆ ಗ ೯ ಸಹಸ್ರನಾಮ ಪೂಜೆ ಉ।
೩೦ ಪಾದಿ ಅಪೂಭಟರ್ರಿಗೆ ಗ ೩ ರುದ್ರಾಭಿಶೆಕ ಜನ ೩ ಕೆ ಗ ೧೮ ಕೆ ವಿವರ್ರ ಅಗ್ರಹಾರದ।
೩೧ ಹರ್ರಿಭಟರ್ರಿಗೆ ಗ ೬ ನಗರದ ವೆಂಕುಭಟರ್ರಿಗೆ ಗ ೬ ಸಾಗರದ ಕನಕಭಟ್ರು ಫಣೆ ಭ।
೩೨ ಟರ್ರಿಗೆ ಗ ೬ ಅಂತು ಗ ೧೮ ಉಭಯಂ ಬ್ರಾಂಹ್ಮರ್ರಿಗೆ ಸಲುವದು ಗ ೩೦ ಉಭಯಂ।
೩೩ ಗ ೫೦ ದ ಭೂಮಿವಕಲುಗಳ ಸಹ ವಿಂಗಡ್ಡಿಶಿ ಕೊಟು ನಡ್ಸುವಂತ್ತೆ ಕಟು ಮಾಡ್ಡಿಶಿಧಿತ್ತು।
೩೪ ಆ ಪ್ರಕಾರ। ಲ್ಯವತ್ತು ವರಹಾದ ಭೂಮಿ।ವಳಗೆ ಬರದ ಪ್ರಕಾರ ಅ ವಕಲುಗಳ ಸಹಾ
೩೫ ಯೀ ಶೆಷಭಟರ ಹವಾಲೆ ಮಾಡಿಶಿ ಕೊಟ್ಟು। ಯೀ ಭೂಸ್ವಾಸ್ತೆಯಂನ್ನು ಸರ್ವಮಾಂನ್ಯ।
೩೬ ಉತ್ತಾರವಾಗಿ ಸಂತಾನ ಪಾರಂಪರ್ರಿಯಲು ಸುಖದಿಂದಲಿ ಅನುಭವಿಶಿ ಕೊಂಡ್ದು ದೆವ।
೩೭ ತಾ ಕಟಲೆ ಕಾಲಕಾಲದ ಪೂಜೆ ಮಾಡ್ಡಿ ಅಮ್ರುತಪಡಿ ನಂದಾದಿಪ ಪಂಚಾಮ್ರುತ ಪಂಚ।
೩೮ ಪರ್ವ ದಿಪೊತ್ಸಹ ಮುಂತ್ತಾದ ಉತ್ಸಹಗಳನ್ನು ಸಾಂಗವಾಗಿ ನಡಶಿಕೊಳ್ಳುತ್ತ ಸರಕಾರ
೩೯ ದ ದಲುಲತ್ತಿಗೆ ಶ್ರೆಯೋಬಿಲ್ರುಧಿ ಆಗುವಂತ್ತೆ ಹಿತಚಿಂತ್ತೆಯಿಂದಾ ಜಪತಪ ಅ।
೪೦ ನುಷ್ಟಾನ ಸಾಂಗವಾಗಿ ಮಾಡಿಕೊಂಡು ಸಂತೋಷದಲು ಯಿರ್ರುವಂತ್ತೆ ಹೆಳಿಶಿ ವಕಲುಗಳಿ।
೪೧ ಗೆ ಸರಕಾರದ ಬಿಟಿ ಬೆಗಾರ್ರಿ ಸಹಾ ಕೆಳದೆ ಸಾಬಕುಬಾಕ್ಕಿ ಸಾಕಯಿದಾಗ್ಯು ಮ್ಮಾಫಿ ಮಾಡ್ಡಿ।
೪೨ ಶಿ ಸುಖದಲಿ ಯಿರುವಂತ್ತೆ ಸರಾಗದಲ್ಲಿ ನಡ್ಸುವದಾಗಿ ಯೀ ಸನದು ಲೆಖಕ್ಕೆ ಬ।
೪೩ ರಕೊಂಡು ಪುನಹಾ ಯೀ ದೆವಸ್ತಾನ ಶೆಷಭಟರ ಹವಾಲೆ ಕೊಡಿಸುವದಾಗಿ ೯೦
೪೪ ತ್ತಿ ನಮಸ್ಕಾರಾ.

ರುಜು ಸುಬಾಪಂಡ್ಡಿತನ ದಪ್ತ ದಾಖಲು

ದಾಖಲುದಪ್ತರ ಶಿರಸ್ತಾರ ಚಿಂ। ಅನಂತ್ಯನ ಮಗ ಸುಬ್ಬಯನ ರುಜು

ನಿರೂಪ ೨

ಮುಂಛಾಗ

೧ ಶುಭಮಸ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರ್ರವೇ। ತ್ರೈಲೋ
೨ ಕ್ಯ ನಗರಾರಂಭ ಮೂಲಂಬಾಯ ಶಂಭುವೆ ಸ್ವಸ್ತಿ ಶ್ರೀ ವಿಜಯಾಭ್ಯುದಯ
೩ ಶಾಲಿವಾಹನ ಶಕ ವರ್ರುಷ ೧೭೫೩ನೆ ಪರ್ರಿವರ್ತ್ತಮಾನಕೆ ಸಲುವ ಖರ ಸಂವತ್ಸ
೪ ರದ ಆಶ್ವಿಜ ಶು ೧೦ ಲು ಶ್ರೀಮತ್ತು ಯಿಕೆರ್ರಿ ಸಾಗರದಲು ಯಿರ್ರುವ
೫ ವೇದಮೂರ್ತ್ತಿ ಅಪ್ಪಜೋಯಿಸರವರ್ರಿಗೆ ಹಜೂರ್ರು ಸವಾರ ಕಚೆರ್ರಿಯಿಲಾ ಕೆ ಅಂ
೬ ಣಪ್ಪನವರ್ರು ಆಜಿಮಾಟರರ್ರು ಕಡಶಿ ಶ್ರೀನಿವಾಸರಾಯರವರ್ರು ಪಿಷಕಾರ್ರು ಶೆಷ
೭ ಗಿರಿರಾಯರ್ರು ಸಹಾ ಬರಶಿಕೊಟ ಶ್ರೀ ನಂಜುಂಡೇಶ್ವರ ದೆವರ ಪೂಜಾ ಧರ್ಮಸಾಧನ
೮ ಅದಾಗಿ। ನಿಂಮ ಮನೆಗೆ ಪಶ್ಚಿಮ ದಿಕಿನಲ್ಲು ಯಿರ್ರುವ ನಂಜುಂಡೇಶ್ವರ ದೆವರ
೯ ದೆವಸ್ಥಾನವಂನ್ನು ಯೀಸ್ತಳದ ನಾಡಿಗ ದಾನಿವಾಸ್ತ ಸುಬ್ಬೈಯನ್ನು ಪ್ರಾಶುಕಟಿಶಿ
೧೦ ದೆವರ ಪ್ರತಿಷ್ಟೆ ಮುಂತಾಗಿ ಮಾಡಿ ಯೀದೆವರ ಪೂಜೆಯಂನ್ನು ನಿವು ಮಾಡಿಕೊಂಡು
೧೧ ಬರ್ರುವಂತ್ತೆ ಗೊತ್ತುಮಾಡಿಕೊಟುಯಿದದರ್ರಿಂದಾಗಿಲು ಆದೆ ಮೆರ್ರೆಗೆ ದೆವರಪೂ
೧೨ ಜೆ ಮಾಡಿಕೊಂಡು ಬರ್ರುತ್ತಯಿದಲ್ಲಿ ಯಿಾಚೆಗೆ ಸದರ್ರಿ ದೆವಸ್ತಾನವು ಶಿಥಿಲವಾಗಿ
೧೩ ಬಿದ್ದುಹೊದರ್ರಿಂದಾಗಿಲು ನಿವು ನಂಮಲ್ಲಿಗೆ ಬಂದು ಯೀ ದೆವಸ್ತಾನವಂನ್ನು ಕಟಿಶಿಕೊಟು
೧೪ ದೆವರ ಪ್ರತಿಷ್ಟೆ ಮುಂತ್ತಾಗಿ। ಮಾಡ್ಡಿಕೊಟರ್ರಿ।। ।। ಪ್ರಭುಗಳವರ ಶ್ರ
೧೫ ಯಃ ಪ್ರಾರ್ಥನೆ ಮಾಡಿಕೊಂಡು ದೆವರ ಪೂಜೆಯಂನ್ನು ಸಾಂಗೊಪರವಾಗಿ
೧೬ ಮಾಡಿಕೊಂಡು ಬರ್ರುತ್ತೆವೆಂಬದಾಗಿ ಹೆಳಿಕೊಂಡದರ್ರಿಂದಾ। ಆದೆ ಮೆರ್ರಿಗೆ ಯೀಗ
೧೭ ಸದರ್ರಿ ದೆವಸ್ತಾನವನ್ನು ಹೊಸ್ತಾಗಿ ಕಟಿಶಿ ದೆವರ ಪ್ರತಿಷ್ಟೆ। ಅಷ್ಟಬಂಧನ ಬ್ರಾಂ
೧೮ ಹ್ಮರ ಸಂತರ್ಪಣೆ ಮುಂತಾಗಿ ಮಾಡ್ಡಿದೆವಾಲಯವಂನ್ನು ನಿಂಮ ಸ್ವಾಧಿನ

ಹಿಂಭಾಗ

೧೯ ಮಾಡಿಕೊಟ್ಟುಯಿರ್‍ರುವದರ್‍ರಿಂದಾ। ಯೀ ಹೊತ್ತಿನಾರಭ್ಯ ಮುಂದೆ ನಿಂಮ ಸಂ
೨೦ ತಾನ ಪಾರಂಪರ್‍ಯರಾಗಿಯೂ ಯೀ ದೇವರ ಪೂಜೆಯನ್ನು ನಿವು ಮಾಡಿಕೊಂಡು
೨೧ ॥ ॥ ನಂಮ ಪ್ರಭುಗಳವರ ಶ್ರೆಯ ಪ್ರಾರ್ಥನೆಯಂನ್ನು ನಿತ್ಯಪ್ರತಿ
೨೨ ಯಲು ಮಾಡಿಕೊಂಡು ಬರುವದೆಂಬದಾಗಿ। ನಂಜುಂಡೇಶ್ವವರ ದೇವರ ಪೂಜಾ ಸಾಧ
೨೩ ನ ಸ್ವದತ್ತಾದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ। ಪರದತ್ತಾಪಹಾರೇಣ
೨೪ ಸ್ವದತ್ತಂ ನಿಶ್ಫಲಂಭವೆತ್ತು। ದಾನ ಪಾಲನಯೊರ್ಮಧ್ಯೆ ಧಾನಾಂ ಶ್ರೆಯಾನ್ನು
೨೫ ಪಾಲನಂ। ದಾನಾಂ ಸ್ವರ್ಗಮವಾಪ್ನೊತಿ ಪಾಲನಾದಚ್ಯುತಂ ಪದಂ॥

ಈ ದಾಖಲೆಯಲ್ಲಿ ಕಂಡುಬರುವ ಸ್ಥಳ ಹಾಗೂ ವ್ಯಕ್ತಿನಾಮಗಳು

ಸ್ಥಳನಾಮ:

ಯಿಕರಿ, ಯಲಗಳಲೆ, ಅತ್ತುವಾಡಿ, ಕಲುಸೆ, ಮಂತಸಾಲೆ, ಮಳಲಿ, ಶಿರವಂತ್ತೆ, ಆವಿನಹಳಿ, ಸಾಗರಪುರ, ಗಿರಕೊಡು, ಶೆಡತ್ತಿಸರ, ಹೆಗೊಡು, ಕೊಡನಕಚಟ್ಟೆ, ಬಾಳಗೋಡು, ಬಿಳ್ಳಗೊಡು, ಗೊಡು, ನಿರ್‍ರುಗೊಡು, ಗಿಜಗಾರ್‍ರು, ಬೆಂಕಟವಳಿ, ಮಳಲಿ, ಹಳೆಕೊಟೆ

ವ್ಯಕ್ತಿನಾಮಗಳು:

ಪ್ರಧಾನ ಚಿನ್ನಭಂಡಾರದ ಅನಂತಯ್ಯ, ಶೆಷಭಟರ್‍ರು, ಅಪೂಭಟರ್‍ರು, ಅಗ್ರಹಾರದ ಹರಿಭಟರ್‍ರು, ನಗರದ ವೆಂಕುಭಟರ್‍ರು, ಸಾಗರದ ಫಣಿಭಟರ್‍ರು, ಸುಬಾಪಂಡಿತ, ಶಿರಸ್ತೆದಾರ ಚಿಂ:ಅನಂತಯ್ಯ, ಸುಬ್ಬಯ್ಯ, ನಂಜುಂಡೇಶ್ವರ

ಅನುಬಂಧ

ಕೆಳದಿಯ ರಾಜರು ಮತ್ತು ಪ್ರಧಾನಿಗಳು

	ರಾಜರು	ಕಾಲ	ಪ್ರಧಾನಿಗಳು	ಆಕರ
೧	ಚೌಡಪ್ಪನಾಯಕ	೧೪೯೮-೧೫೦೬	--	--
೨	ಸದಾಶಿವನಾಯಕ	೧೫೦೯-೧೫೬೫	--	--
೩	ದೊಡ್ಡ ಸಂಕಣ್ಣ ನಾಯಕ	೧೫೬೭-೧೫೭೦	ಆರಗದ ಕಳಸಪ್ಪಯ್ಯ	ಕೆನೃವಿ ೬೪
೪	ಚಿಕ್ಕ ಸಂಕಣ್ಣನಾಯಕ	೧೫೭೨-೧೫೮೬	ಪ್ರಧಾನಿ ನಾರಣಪ್ಪ ಯ್ಯ	ಕೆನೃವಿ ೬೯
೫	ರಾಮರಾಜನಾಯಕ	೧೫೭೧-೧೬೮೬	ಪ್ರಧಾನಿ ಆರಗದ ಕಳಸಪ್ಪಯ್ಯ	ಕೆನೃವಿ ೬೯
೬	ಹಿರಿಯ ವೆಂಕಟಪ್ಪನಾಯಕ	೧೫೯೨-೧೬೨೯	ಪ್ರಧಾನಿ ಚೌಡಪ್ಪಯ್ಯ	ಕೆನೃವಿ ೯೦
೭	ವೀರಭದ್ರನಾಯಕ	೧೬೨೯-೧೬೪೬	ಪ್ರಧಾನಿ ಹಾರೋವೆಂಕಟಯ್ಯ	ಕೆನೃವಿ ೧೦೫
೮	ಶಿವಪ್ಪನಾಯಕ	೧೬೪೬-೧೬೬೦	ಪ್ರಧಾನಿ ದೊಡ್ಡ ತಮ್ಮರಸಯ್ಯ	ಕೆನೃವಿ ೧೧೬
೯	ಚಿಕ್ಕ ವೆಂಕಟಪ್ಪನಾಯಕ	೧೬೬೧	ಪ್ರಧಾನಿ ದೊಡ್ಡ ತಮ್ಮರಸಯ್ಯ	ಕೆನೃವಿ ೧೧೬
೧೦	ಭದ್ರಪ್ಪನಾಯಕ	೧೬೬೧-೧೬೬೩	ಪ್ರಧಾನಿ ಚೌಡಪ್ಪಯ್ಯ	ಕೆನೃವಿ ೧೨೫
೧೧	ಹಿರಿಯ ಸೋಮಶೇಖರ ನಾಯಕ	೧೬೬೩-೭೨	ಆವಿನಹಳ್ಳಿ ನರಸಪ್ಪಯ್ಯ	ಕೆನೃವಿ ೧೩೦
೧೨	ಚನ್ನಮ್ಮಾಜಿ	೧೬೭೨-೧೬೯೭	-	-
೧೩	ಹಿರಿಯ ಬಸವಪ್ಪನಾಯಕ	೧೬೭೯-೧೭೧೪	ಗುರುಬಸವಪ್ಪದೇವರು	ಕೆನೃವಿ ೧೭೭
೧೪	ಹಿರಿಯ ಸೋಮಶೇಖರ ನಾಯಕ	೧೭೧೪-೩೯	-	
೧೫	ಕಿರಿಯ ಬಸವಪ್ಪನಾಯಕ	೧೭೩೯-೧೭೫೪	-	
೧೬	ಚನ್ನಬಸಪ್ಪನಾಯಕ	೧೭೫೪-೧೭೫೭	-	
೧೭	ವೀರಮ್ಮಾಜಿ ಸೋಮಶೇಖರನಾಯಕ	೧೭೫೮-೧೭೬೩	-	

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ಕೆಳದಿನೃಪವಿಜಯಃ** ಆಶ್ವಾಸ. ೪, ಪು.೧೦೬
೨. QJMS: Vol. No. LXXXIII issue No. 4, Oct- Dec 1992
೩. ಈ ದೇವಾಲಯಕ್ಕೆ ಹೊಂದಿಕೊಂಡು ಶ್ರೀ ವೇದಮೂರ್ತಿ ಅಪ್ಪಜೋಯಿಸರ ವಂಶಿಕರಾದ ಶ್ರೀ ವೇದಬ್ರಹ್ಮ ಚಂದ್ರಶೇಖರ ಜೋಯಿಸರ ಮನೆ ಇದೆ. ಅವರೇ ದೇವಾಲಯದ ಪೂಜಾ ಕೈಂಕರ್ಯಗಳನ್ನು ಈಗ ನೋಡಿಕೊಳ್ಳುತ್ತಿದ್ದಾರೆ. ಕೆಲವು ಕಾಲ ಮುಜರಾಯಿ ಆಡಳಿತಕ್ಕೂ ಒಳಪಟ್ಟಿದ್ದ ಈ ದೇವಾಲಯವು ಈಗ ಶ್ರೀ ಜೋಯಿಸರ ಸ್ವಂತ ಆಸ್ತಿಯಾಗಿದೆ.
೪. ಅವುಗಳನ್ನು ಸಂಕಲಿಸಿ ಸಶಾಸ್ತ್ರೀಯವಾಗಿ ಪ್ರಕಟಿಸುವ ಪ್ರಯತ್ನವನ್ನು ಕೆಳದಿ ವಸ್ತು ಸಂಗ್ರಹಾಲಯ ಮಾಡುತ್ತಿದೆ.

ಡಾ|| ರಾಧಾ ಕೃಷ್ಣಮೂರ್ತಿ*

ವಿಜಯನಗರ ಸಂಸ್ಕೃತಿಯ ಆಕರ ಗ್ರಂಥ "ಸಾಮ್ರಾಜ್ಯಲಕ್ಷ್ಮೀ ಪೀಠಿಕಾ"

"ಸಾಮ್ರಾಜ್ಯಲಕ್ಷ್ಮೀಪೀಠಿಕಾ", ತಂತ್ರ ವಾಙ್ಮಯದ ಒಂದು ಭಾಗವಾಗಿದೆ. ಇದು ಮಹಾಶಿವತಂತ್ರದ ಆಕಾಶ ಭೈರವಕಲ್ಪದ ಒಂದು ಭಾಗವೂ ಆಗಿದೆ. ಸಂಸ್ಕೃತದ ಈ ಮೂಲಗ್ರಂಥದಲ್ಲಿ ಒಟ್ಟು ೧೩೯ ಅಧ್ಯಾಯಗಳಿವೆ ಮತ್ತು ಒಂದೇ ರೀತಿಯ ಛಂದಸ್ಸುಳ್ಳ ಸುಮಾರು ೪೦೦೦ ಶ್ಲೋಕಗಳಿವೆ. ಈ ಶ್ಲೋಕಗಳಲ್ಲಿ ಒಬ್ಬ ರಾಜಕುಮಾರನು ತನ್ನ ಎಲ್ಲಾ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಕಲಿಯಬೇಕಾದ ಎಲ್ಲಾ ವಿಷಯಗಳು ಕೂಲಂಕಷವಾಗಿ ನಿವೇದಿಸಲ್ಪಟ್ಟಿವೆ. ಆದ್ದರಿಂದ ಇದು ರಾಜ್ಯದ ರಾಜರುಗಳು ಹಾಗೂ ಅನ್ಯ ಅಧಿಕಾರಿಗಳು ಅಧ್ಯಯನ ಮಾಡಬಹುದಾದಂತಹ ಚಕ್ರವರ್ತಿಗಳ ಕೈಪಿಡಿ ಎಂದು ಲೋಕ ಪ್ರಿಯವಾಗಿದೆ. ರಾಜ್ಯದ ಶಕ್ತಿ ಮತ್ತು ಕೀರ್ತಿಯನ್ನು ಪ್ರತಿನಿಧಿಸುವ ದೇವಿ ಸಾಮ್ರಾಜ್ಯಲಕ್ಷ್ಮಿಯ ಪೂಜಾತಂತ್ರ ವಿಧಾನ ಇದರಲ್ಲಿ ಹೇಳಲ್ಪಟ್ಟಿದೆ. ಮೊದಲ ಕೆಲವು ಅಧ್ಯಾಯಗಳಲ್ಲಿ ದೇವಿ ಸಾಮ್ರಾಜ್ಯಲಕ್ಷ್ಮೀಯ ಪ್ರಖ್ಯಾತರಾದ ನಿವಾಸಸ್ಥಾನದ ವಿವರಣೆ ಹಾಗೂ ಆಕೆಯ ಪರಿವಾರ, ಅರ್ಚನಾವಿಧಾನ, ಜಪ, ಹೋಮ ಮುಂತಾದ ವಿವರಣೆಗಳಿವೆ. ಇದಾದ ಮೇಲೆ ಮುಂದಿನ ಅಧ್ಯಾಯಗಳಲ್ಲಿ ರಾಜನ ಪಟ್ಟಾಭಿಷೇಕ, ರಾಜನ ನಿತ್ಯನೈಮಿತ್ತಿಕ ಕಾರ್ಯಗಳು, ಯುದ್ಧಸ್ಥಿತಿ, ಧನುರ್ವಿದ್ಯೆ, ಅಶ್ವವಿದ್ಯೆ, ಗಜವಿದ್ಯೆ, ರಥಗಳು, ಹಬ್ಬಗಳು, ಹರಕೆಗಳು, ಉಪಾಸನೆ, ಯಾತ್ರಾ ಸ್ಥಳಗಳು, ಅಶುಭ ಸೂಚನೆಗಳು, ಅರಣ್ಯಗಳು, ಅರಮನೆಗಳು, ಬೇಟೆ, ರಾಜ್ಯದ ಅಧಿಕಾರಿಗಳು ಹೀಗೆ ಮುಂತಾದ ವಿಷಯಗಳು ವಿಸ್ತಾರವಾಗಿವೆ ಮತ್ತು ಒಬ್ಬ ರಾಜಕುಮಾರನು ತಿಳಿಯಲೇ ಬೇಕಾದ ಅನೇಕ ಸುದ್ದಿ ಸಮಾಚಾರಗಳಿವೆ.

'ಸಾಮ್ರಾಜ್ಯಲಕ್ಷ್ಮೀ ಪೀಠಿಕಾ' ತಂತ್ರ ರಚನೆಯಲ್ಲಿ ಒಬ್ಬ ಹಿಂದು ಚಕ್ರವರ್ತಿಗೆ ಸಂಬಂಧಪಟ್ಟ ಅನೇಕ ಚಿತ್ತಾಕರ್ಷಕ ಹಾಗೂ ರಾಜಯೋಗ್ಯ ಗುರು ಸಂಪ್ರದಾಯದ ಉಪಯುಕ್ತ ಸೂಚನೆಗಳು ಅಂತರ್ಗತವಾಗಿವೆ ಮತ್ತು ಈ ಗ್ರಂಥ ಯಾವ ಸಮಯದಲ್ಲಿ ರಚಿಸಲ್ಪಟ್ಟಿತೋ ಆ ಸಮಯದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳ ಜ್ಞಾನ ಓದುಗರಿಗೆ ಮಾಡಿಕೊಡುತ್ತದೆ. ಗ್ರಂಥಕರ್ತರ ಹೆಸರು ಪುಸ್ತಕದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಹಾಗೂ ಈ ಸಾಹಿತ್ಯ ಕೃತಿಯ ಕೊನೆಯಲ್ಲಿ ಸ್ಥಳ, ದಿನಾಂಕ, ಲೇಖಕರ ಹೆಸರು ಯಾವುದೂ ಸೂಚಿತವಾಗಿಲ್ಲ. ಆದರೆ ಗ್ರಂಥದ ಒಳ ಹೊಕ್ಕು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ ದಕ್ಷಿಣ ಭಾರತದಲ್ಲಿ ವಿಜಯನಗರ ಆಳ್ವಿಕೆಯ ಸುವರ್ಣಯುಗದಲ್ಲಿ ಈ ಗ್ರಂಥವು ಬರೆಯಲ್ಪಟ್ಟಿರಬಹುದೆಂದು ಹೇಳಬಹುದು. ವಿಜಯನಗರದ ರಾಜ ಕೃಷ್ಣ ದೇವರಾಯರ (ಕ್ರಿ.ಶ. ೧೫೦೯-೧೫೨೯) ನಿಕಟ ಸಂಪರ್ಕ ಹೊಂದಿದ್ದ ವಿದ್ವಾಂಸರೊಬ್ಬರಿಂದ ಈ ಗ್ರಂಥ ಬರೆಯಲ್ಪಟ್ಟಿರಬಹುದೆಂದು ಪಂಡಿತರು ಅಭಿಪ್ರಾಯ ಪಡುತ್ತಾರೆ.

ಮೊದಲೇ ತಿಳಿಸಿದಂತೆ ಸಾಮ್ರಾಜ್ಯಲಕ್ಷ್ಮೀಯು, ಶಕ್ತಿ ಹಾಗೂ ಕೀರ್ತಿಯ ದ್ಯೋತಕವಾಗಿರುವ ದೇವತೆ. ಬೇರೆ ತಾಂತ್ರಿಕ ಅಥವಾ ಪೌರಾಣಿಕ ಗ್ರಂಥಗಳ ರಚನೆಯಲ್ಲಿರುವಂತೆ ಇದರ ರಚನೆಯೂ ಸಹ ಶಿವ ಮತ್ತು ಪಾರ್ವತಿಯರ ಸಂವಾದ ರೂಪದಲ್ಲಿದೆ. ಮೊದಲ ಐದು ಅಧ್ಯಾಯಗಳು ಸಾಮ್ರಾಜ್ಯಲಕ್ಷ್ಮೀಯ ದಿವ್ಯವಾದ ನಿವಾಸಸ್ಥಾನದ ಹಾಗೂ ಆಕೆಯ ಪರಿವಾರದ ವಿವರಣೆಗಳನ್ನು ನೀಡುತ್ತವೆ. ಮೂರನೆಯ ಅಧ್ಯಾಯದಲ್ಲಿ ದೇವಿಯನ್ನು ಮಾನವ ರೂಪದಲ್ಲಿ ಪರಿಚಯಿಸಿದ್ದಾರೆ. ಆಕೆಯನ್ನು *'ಕ್ಷೀರಸಾಗರದಿಂದ ಆವೃತ್ತವಾಗಿರುವ ಶ್ವೇತದ್ವೀಪದಲ್ಲಿ ಇರುವ ವಿಜಯ ಎಂಬ ನಗರದಲ್ಲಿ ಚಿಂತಾಮಣಿಯ ಅರಮನೆ ಮುಂದೆ ಹಾಗೂ ಕಲ್ಪವೃಕ್ಷದ ಕೆಳಗೆ ಅತ್ಯಮೂಲ್ಯವಾದ ಹರಳುಗಳಿಂದ ಮಾಡಿದ ಪಾದಪೀಠದ ಮೇಲೆ ಇರುವ ರತ್ನಖಚಿತವಾದ ಸಿಂಹಾಸನದ ಮೇಲೆ ಸಹಸ್ರದಳದ ಕಮಲಪುಷ್ಪದ ಮಧ್ಯೆ ದಿವ್ಯ ಹಾಗೂ ಮಂಗಳಕರ ರೂಪದ ಸಾಮ್ರಾಜ್ಯಲಕ್ಷ್ಮೀ ಪದ್ಮಾಸನಸ್ಥಿತಳಾಗಿದ್ದಾಳೆ'* ಎಂದು ವರ್ಣಿಸಲ್ಪಟ್ಟಿದೆ. ಆಕೆಯು ಸದಾಕಾಲವೂ ಧನಲಕ್ಷ್ಮೀ ಮುಂತಾದ ಅಷ್ಟಲಕ್ಷ್ಮೀಗಳಿಂದಲೂ ಪೂಜೆ ಹಾಗೂ ವಿಜಯ ಮುಂತಾದ ಶಕ್ತಿಗಳಿಂದ ಸೇವೆ ಕೈಗೊಳ್ಳುತ್ತಿರುತ್ತಾಳೆ. ಈ ಶಕ್ತಿ

* 'ಶುಭೋದಯ', ೩೮, ೧೧ನೇ ಮುಖ್ಯರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು ೫೬೦ ೦೫೫

ದೇವತೆಗಳು ಶಂಖ-ಕಹಳೆಗಳನ್ನು ಊದುತ್ತಿರುತ್ತಾರೆ. ವಿಜಯ ಘೋಷಣೆ ಮಾಡುತ್ತಾ ಯುದ್ಧನಗಾರಿಯನ್ನು ಬಾರಿಸುತ್ತಿರುತ್ತಾರೆ. ಅಂದವಾಗಿ ಶೃಂಗರಿಸಲ್ಪಟ್ಟ, ವೈಭವಯುಕ್ತ ಆನೆ, ಕುದುರೆ ಮತ್ತು ವೀರಯೋಧರಿಂದ ಸಾಮ್ರಾಜ್ಯಲಕ್ಷ್ಮಿ ಸೇವೆ ಸ್ವೀಕರಿಸುತ್ತಿರುತ್ತಾಳೆ. ಈ ರೀತಿ ದೇವಿಯು ಧರಿಸಿದ ಆ ಭೂಷಣಗಳು ಹಾಗೂ ಆಕೆಯ ಸಂಬಂಧಪಟ್ಟ ವಿವರಣೆಗಳು ಈ ಅಧ್ಯಾಯಗಳಲ್ಲಿ ಅಡಗಿವೆ. ಮುಂದಿನ ನಾಲ್ಕು ಅಧ್ಯಾಯಗಳಲ್ಲಿ ಜಪ ಮತ್ತು ಹೋಮ ಮಾಡುವ ವಿಧಾನದ ವಿವರಣೆ ಹಾಗೂ ದೇವಿಯ ಯಂತ್ರರೂಪದ ವಿವರಣೆ ಇದೆ. ಈ ಎಲ್ಲಾ ಧಾರ್ಮಿಕ ಅನುಷ್ಠಾನಗಳು ಮತ್ತು ಶಾಸ್ತ್ರೋಕ್ತ ಪದ್ಧತಿಗಳು ರಾಜ್ಯದ ಸುಖ ಹಾಗೂ ಸಮೃದ್ಧಿಗೆ ಕಾರಣಗಳಾಗಿರುತ್ತವೆ. ಮುಂದಿನ ಹದಿನೆಂಟು ಅಧ್ಯಾಯಗಳಲ್ಲಿ ವಿಶೇಷ ಅರ್ಚನೆಯ ವಿವರಗಳು ಮತ್ತು ದೇಶದಲ್ಲಿ ಒದಗಬಹುದಾದ ಕ್ಷಾಮ, ಸಾಂಕ್ರಾಮಿಕ ರೋಗಗಳು, ವೈರಿಗಳ ಆಕ್ರಮಣ, ಅನಾವೃಷ್ಟಿ, ಪ್ರವಾಹ ಮುಂತಾದ ದುರ್ಘಟನೆಗಳನ್ನು ತಡೆಗಟ್ಟಲು ಮಾಡಬಹುದಾದ ಆಚರಣೆಗಳು ಇವೆ. ಈ ರೀತಿ ಈ ಗ್ರಂಥದ ಮೊದಲ ಮೂವತ್ತು ಅಧ್ಯಾಯಗಳಲ್ಲಿ ದೇವಿ ಸಾಮ್ರಾಜ್ಯಲಕ್ಷ್ಮಿಗೆ ಸಂಬಂಧಪಟ್ಟ ವಿಷಯಗಳು ಮತ್ತು ವೃತ್ತಾಂತಗಳು, ಆಕೆಯ ಸ್ತುತಿ, ಶಾಂತಿಗಾಗಿ ಪ್ರಾರ್ಥನೆ, ಅನುಷ್ಠಾನ, ಮಂತ್ರ, ಯಂತ್ರ ಜಪ, ಹೋಮ ಉಪಾಸನೆ ಮುಂತಾದ ಶಾಸ್ತ್ರವಿಧಿಗಳಿಗೆ ಸಂಬಂಧಿಸಿದ ಸಕಲ ವಿವರಗಳೂ ಇವೆ.

ಈ ದೇವಿಯನ್ನು ಗುರುತಿಸುವುದಕ್ಕಾಗಿ ಮಾನವ ರೂಪ ಕೊಟ್ಟಿರುವರೆಂದು ವಿವರಣೆಯಿಂದ ತಿಳಿದು ಬರುತ್ತದೆ. ದಿವ್ಯಳಾದ ಈ ದೇವಿ ಆ ದೇಶದ ಉಚ್ಛ್ರಾಯ ಸ್ಥಿತಿ, ಸಂಪತ್ತು ಹಾಗೂ ಸಂತೋಷಕ್ಕೆ ಕಾರಣಳೆಂದು ಇಲ್ಲಿ ವರ್ಣಿಸಲ್ಪಟ್ಟಿದೆ ಮತ್ತು ಈ ದೇವಿ ಶ್ವೇತದ್ವೀಪದ ವಿಜಯ ಎಂಬ ಪಟ್ಟಣದಲ್ಲಿ ವಾಸವಾಗಿ ಇರುವಳೆಂದು ಹೇಳಲ್ಪಟ್ಟಿದೆ. ಲೇಖಕರು "ವಿಜಯಾಖ್ಯ ಪುರೇರಮ್ಯೆ" ಎಂಬ ಶಬ್ದವನ್ನು ಉಪಯೋಗಿಸಿರುವುದರಿಂದ ಲೇಖಕರ ಮನಸ್ಸಿನಲ್ಲಿ ವಿಜಯನಗರ ಚಕ್ರವರ್ತಿಯು ಇದ್ದಿರಬಹುದೆಂದು ನಾವು ನಂಬಬಹುದು. ಅದೂ ಅಲ್ಲದೆ ವಿಜಯನಗರದ ಚಕ್ರಾಧಿಪತ್ಯ ಹೆಚ್ಚು ಕಡಿಮೆ ದಕ್ಷಿಣ ಭಾರತದಲ್ಲೆಲ್ಲಾ ವ್ಯಾಪಿಸಿತ್ತು ಮತ್ತು ವಿಜಯನಗರ ಸಾಮ್ರಾಜ್ಯ ಎಂಬ ಹೆಸರಿನಿಂದ ಬಹಳ ಪ್ರಖ್ಯಾತವಾಗಿತ್ತು. ಸಾಮಾನ್ಯವಾಗಿ ಯಾವುದೇ ಒಂದು ದೇಶದ ಸಮೃದ್ಧಿಯನ್ನು ಸೂಚಿಸಲು "ಸಾಮ್ರಾಜ್ಯಲಕ್ಷ್ಮಿ" ಎಂಬ ಶಬ್ದವನ್ನು ಉಪಯೋಗಿಸಬಹುದು. ಆದರೆ ಈ ಪುಸ್ತಕದಲ್ಲಿ ವಿಜಯನಗರದ ಸಮೃದ್ಧಿಯನ್ನು ಸೂಚಿಸುವ ಸಲುವಾಗಿಯೇ ಈ ಶಬ್ದ ಉಪಯೋಗಿಸಲ್ಪಟ್ಟಿದೆ. ವಿಜಯನಗರ ಆಳ್ವಿಕೆಯ ಸಮಯದಲ್ಲಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಚರಣೆಗಳ ವಿಷಯ ತಿಳಿಯಲು ಈ ಗ್ರಂಥ ನಿಸ್ಸಂದೇಹವಾಗಿ ಬಹಳ ಸಹಾಯಕವಾಗಿದೆ.

ಬೇರೆ ತಾಂತ್ರಿಕ ರಚನೆಗಳಲ್ಲಿರುವಂತೆ ಈ ಮೂವತ್ತು ಅಧ್ಯಾಯಗಳಲ್ಲಿಯೂ ದೇವಿ ಸಾಮ್ರಾಜ್ಯಲಕ್ಷ್ಮಿಯ ಪೂಜಾ ಅನುಷ್ಠಾನ ಹಾಗೂ ಧರ್ಮಾಚರಣೆಗೆ ಸಂಬಂಧಪಟ್ಟ ಸಾಮಾನ್ಯ ವಿವರಣೆಗಳು ಇರುವುದು ಕಂಡುಬರುತ್ತದೆ. ಆದರೆ ಲೇಖಕರು ರಾಜ್ಯದ ವೈಭವವನ್ನು ತಮ್ಮ ಕಲ್ಪನೆಯಿಂದ ಸಾಕಾರ ಸದೃಶರೂಪದಲ್ಲಿ ವರ್ಣಿಸಲು ಪ್ರಯತ್ನಿಸಿದ್ದಾರೆ. ಇಂತಹ ದೇವಿಯನ್ನು ರಾಜ ಅಥವಾ ರಾಜ್ಯವನ್ನಾಳುವ ವ್ಯಕ್ತಿ, ಸಮರ್ಪಕವಾದ ರೀತಿಯಲ್ಲಿ ಆರಾಧಿಸಿದರೆ ಆತನ ಆಶೆ-ಆಕಾಂಕ್ಷೆಗಳು ಪೂರ್ಣಗೊಳ್ಳುತ್ತವೆ.

ಈ ರೀತಿ ದೇವಿಗೆ ಸಂಬಂಧಪಟ್ಟ ಸೂಕ್ಷ್ಮ ಪೂಜಾ ನಿಯಮಗಳನ್ನು ನಿಯಮಿಸಿದ ನಂತರ ಲೇಖಕರು ದೇವಿ ಸಾಮ್ರಾಜ್ಯಲಕ್ಷ್ಮಿಗೆ ಹಿಂದೂ ದೇವಿಯರ (ಬಾನಿನಲ್ಲಿ) ಆಕಾಶ ಗಂಗೆಯಲ್ಲಿ ಗೌರವಾರ್ಹಸ್ಥಾನ ದೊರಕಿಸಿಕೊಟ್ಟರೆಂದು ಮತ್ತು ಆಕೆಯ ಪೂಜೆಗೆ ಸಂಬಂಧಿಸಿದಂತೆ ಪರಂಪರಾಗತ ಧಾರ್ಮಿಕ ಆಚರಣೆಗಳನ್ನೂ ಸಹ ನೆಲೆಗೊಳಿಸಿದರೆಂದು ಹೇಳಬಹುದು. ಆದ್ದರಿಂದ ಸಾಮ್ರಾಜ್ಯಲಕ್ಷ್ಮಿಯ ಮಹತ್ವ ಹಾಗೂ ಆಕೆಯ ಪೂಜೆಯ ಧಾರ್ಮಿಕ ಆಚರಣೆಯಲ್ಲಿ ನವೀನತೆಯನ್ನು ಸ್ಥಾಪಿಸುವಲ್ಲಿ ಲೇಖಕರ ಕೊಡುಗೆ ಏನಿದೆಯೋ ಅದೇ ವಿಜಯನಗರ ರಾಜರ ಆಡಳಿತದ ಕೊಡುಗೆಯೂ ಆಗಿದೆ. ಲೇಖಕರು ನೀಡಿರುವ ಆ ದೇವಿಯ ರೂಪದ ವಿವರಣೆ, ಶಿಲ್ಪಿಗಳಿಗೆ, ವರ್ಣ-ಚಿತ್ರಕಾರರಿಗೆ ಮತ್ತು ಆ ದೇವಿಯ ಚಿತ್ರವನ್ನು ತಮ್ಮ ಮನಸ್ಸಿನಲ್ಲಿ ತಂದು ವಿಗ್ರಹವನ್ನು ಕೆತ್ತುವವರಿಗೆ ಹಾಗೂ ಅದೇ ರೀತಿಯ ಸುಂದರ ಕಲೆಯನ್ನು ನಿರೂಪಿಸುವವರಿಗೆ ಸಾಕಷ್ಟು ಸದಾವಕಾಶವನ್ನು ನೀಡುತ್ತದೆ.

೩೧ನೆಯ ಅಧ್ಯಾಯದಿಂದ ಮುಂದಿನ ಅಧ್ಯಾಯಗಳಲ್ಲಿ ರಾಜ್ಯ ಅಥವಾ ರಾಜಧಾನಿಯ ಅನೇಕ ವಿಭಾಗಗಳ ವಿಸ್ತೃತ ವರ್ಣನೆಗಳನ್ನು ನಾವು ಕಾಣಬಹುದು. ಸುಮಾರು ಏಳು ಅಧ್ಯಾಯಗಳಲ್ಲಿ ಕೋಟೆಗಳ ವಿಸ್ತಾರವಾದ ವರ್ಣನೆಗಳಿವೆ. ಕೋಟೆಗಳೇ ಚಕ್ರವರ್ತಿಗಳ ಮಹತ್ತರ ಶಕ್ತಿಗೆ ಕಾರಣವಾಗಿವುದರಿಂದ ಮತ್ತು ಕೋಟೆಗಳಿಲ್ಲದ ರಾಜ್ಯಗಳನ್ನು ಶತ್ರುಗಳು ಅತಿ ಸುಲಭವಾಗಿ ಆಕ್ರಮಿಸಿಕೊಳ್ಳಬಹುದಾದುದರಿಂದ ಕೋಟೆಗಳ ರಚನೆಗೆ ಪ್ರಾಮುಖ್ಯತೆ ನೀಡಲಾಗಿದೆ. ತನ್ನ ರಾಜ್ಯದ ಸುತ್ತ ಕೋಟೆಗಳನ್ನು ಕಟ್ಟಿಸಿ ಶತ್ರುಗಳ ಆಕ್ರಮಣದಿಂದ ರಾಜ್ಯವನ್ನು ರಕ್ಷಿಸುವುದು ಒಬ್ಬ ನಿಷ್ಠಾವಂತ ರಾಜನ ಮುಖ್ಯ ಕರ್ತವ್ಯವಾಗಿರುತ್ತದೆ. ಕೋಟೆಗಳನ್ನು ಕಟ್ಟಲು ಬೇಕಾದ ಜಾಗಗಳನ್ನು ಆರಿಸುವ, ಯೋಜನೆಗಳನ್ನು ರೂಪಿಸುವ, ಮುಂತಾದ ವಿಷಯಗಳ ಬಗ್ಗೆ ವಿಸ್ತೃತ ಮಾನಗಳನ್ನು ನಾವು ಪಡೆಯಬಹುದು. ಎಂಟು ಪ್ರಕಾರದ ಕೋಟೆಗಳ ಹೆಸರು ಹಾಗೂ ಅವುಗಳ ವಿಷಯ ಹೇಳಲ್ಪಟ್ಟಿದೆ. ಗಿರಿದುರ್ಗ, ವನದುರ್ಗ, ಗಹ್ವರ ದುರ್ಗ, ಮಿಶ್ರದುರ್ಗ, ನರದುರ್ಗ, ಜಲದುರ್ಗ, ನೆಲದುರ್ಗ ಮತ್ತು

ಕಾಷ್ಠದುರ್ಗಗಳೆಂದು ಎಂಟು ಕೋಟೆಗಳಿವೆ. ವನದುರ್ಗ ಅಥವಾ ಗುಡ್ಡದ ಕೋಟೆ ಅತ್ಯುತ್ತಮವಾದದ್ದೆಂದು ಹೇಳಲಾಗಿದೆ ಮತ್ತು ವಿವಿಧ ಆಕಾರದ ಎಂಟು ಪ್ರಕಾರದ ಗಿರಿದುರ್ಗಗಳ ಬಗ್ಗೆ ಸಲಹೆ ಕೊಡಲ್ಪಟ್ಟಿದೆ. ಗ್ರಂಥದಲ್ಲಿ ಇನ್ನೂ ಎಂಟು ಪ್ರಕಾರದ ಅನಿಷ್ಟಕರವಾದ ಕೋಟೆಗಳ ವಿಷಯ ತಿಳಿಸಲ್ಪಟ್ಟಿದೆ. ಅಂತಹ ಕೋಟೆಗಳನ್ನು ಕಟ್ಟಲೇಬಾರದು. ಹೊರಗಿನ ಮತ್ತು ಒಳಗಿನ ರಕ್ಷಕ ಗೋಡೆಗಳು ಹಾಗೂ ಅವುಗಳನ್ನು ರಕ್ಷಿಸುವ ವಿಧಾನಗಳು ಈ ಗ್ರಂಥದಲ್ಲಿವೆ. ವಿವಿಧ ಇಲಾಖೆಗಳಿಗೆ ಜಾಗಗಳನ್ನು ಮತ್ತು ವಿವಿಧ ಉದ್ಯೋಗಗಳನ್ನು ಮಾಡುವ ಜನಗಳಿಗೆ ಬೇರೆಬೇರೆ ವಸತಿ ಸ್ಥಾನಗಳನ್ನು ಯೋಜನಾಪೂರ್ವಕವಾಗಿ ನಿರ್ಮಿಸಿ ಒಂದು ರಾಜಧಾನಿಯನ್ನು ನಿಯೋಜಿಸುವ ವಿಧಾನಗಳನ್ನು ತಿಳಿಸುವುದಕ್ಕಾಗಿಯೇ ಒಂದು ಅಧ್ಯಾಯ ಮೀಸಲಾಗಿದೆ. ಇದರಲ್ಲಿ ರಾಜನ ಅರಮನೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದವುಗಳನ್ನು ಕಟ್ಟಲು ಬೇಕಾದ ವಿವರಣೆಗಳನ್ನೂ ಸಹ ನಾವು ಪಡೆಯಬಹುದು. ನವರಂಗ ಮಂಟಪವೆಂದು ಹೆಸರಾದ ಪಟ್ಟಾಭಿಷೇಕದ ಸಭಾಂಗಣವನ್ನು ರಚಿಸಲು ಹಾಗೂ ಅಲಂಕರಿಸಲು ಬೇಕಾದ ವಿಸ್ತೃತ ವಿವರಣೆಯನ್ನು, ಸಿಂಹಾಸನ ಮತ್ತು ಪಟ್ಟಾಭಿಷೇಕ ಸಂಸ್ಕಾರದ ವಿಸ್ತೃತ ವಿವರಣೆಯನ್ನು ಕಾಣಬಹುದು. ಚಕ್ರವರ್ತಿಯ ಜನ್ಮದಿನದಂದು ಅಥವಾ ವಿಜಯಿಯಾದ ವಿಶೇಷ ಸಂದರ್ಭದಲ್ಲಿ ಪಟ್ಟಾಭಿಷೇಕ ಮಹೋತ್ಸವವನ್ನು ನಡೆಸುವ ರೂಢಿ ಉಂಟು. ಈ ಮಹೋತ್ಸವ ಆಗಿಂದಾಗ್ಗೆ ವಿಶೇಷ ಸಂದರ್ಭಗಳಲ್ಲಿ ನಡೆಯುತ್ತಿರುತ್ತದೆ. ದೇಶವು ಆಪತ್ತಿನ ದವಡೆಗೆ ಸಿಕ್ಕಿದಾಗ ಈ ನೈಮಿತ್ತಿಕ ಅಭಿಷೇಕ ನಡೆಯಲ್ಪಡುತ್ತದೆ.

ಎಪ್ಪತ್ತೆರಡು ಸಮೂಹದ ಸೇವಕರ ತಂಡಗಳೊಂದಿಗೆ ಚಕ್ರರ್ತಿಯು ನಗರಪ್ರವೇಶ ಅಥವಾ ರಾಜ್ಯಪ್ರವೇಶ ಮಾಡುತ್ತಾನೆಂದು ವಿವರಿಸಲಾಗಿದೆ. ತಮ್ಮ ಸಮಯದಲ್ಲಿ ರಾಜರು ವಿವಿಧ ವಿಭಾಗಗಳನ್ನು ನೋಡಿಕೊಳ್ಳಲು ೭೨ ಮುಖ್ಯ ಅಧಿಕಾರಿಗಳನ್ನು ನೇಮಿಸುತ್ತಿದ್ದರೆಂಬುದು ಇದರಿಂದ ತಿಳಿದುಬರುತ್ತದೆ. ಇವುಗಳಲ್ಲಿ ಮಂತ್ರಿ, ಸೇನಾಧಿಪತಿ, ಉಪಾಧ್ಯಾಯ, ಪುರೋಹಿತ, ಜ್ಯೋತಿಷಿ, ಪೌರನಾಯಕ, ಕವಾಯತ, ವೈಣಿಕ, ಗಾಯಕ, ನಟ, ಧನಕೋಶಾಧಿಪ, ವಸ್ತ್ರಕೋಶಾಧಿಪ, ಆಯುಧ ಶಾಲಾಧಿಪ, ರುಕ್ಮಕಾರ, ತಾಮ್ರಕಾರ, ವೈದ್ಯ ಮುಂತಾದವರನ್ನು ಹೆಸರಿಸಿದ್ದಾರೆ. ಈ ರೀತಿ ಅಧಿಕಾರಿಗಳ ಹಾಗೂ ಅವರಿಗೆ ಸಂಬಂಧಿಸಿದ ವಿವಿಧ ಉದ್ಯೋಗಗಳ ಉದ್ದವಾದ ಒಂದು ಪಟ್ಟಿಯನ್ನೇ ಕೊಟ್ಟಿರುವುದನ್ನು ನಾವು ಕಾಣಬಹುದು. ರಾಜನು ರಾಜ್ಯಪ್ರವೇಶ ಮಾಡುವಾಗ, ಇವರೆಲ್ಲ ಯಾವಾಗಲೂ ರಾಜನ ಸುತ್ತುವರೆದು ಬರುತ್ತಿದ್ದುದರಿಂದ, ಈ ಅಧಿಕಾರಿಗಳು ಹಾಗೂ ಅನ್ಯರು ಬಹಳ ಮರ್ಯಾದೆಯಿಂದ ಕಾಣಲ್ಪಡುತ್ತಿದ್ದರೆಂದು ಹಾಗೂ ಗೌರವಿಸಲ್ಪಡುತ್ತಿದ್ದರೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸಾಮ್ರಾಜ್ಯ ಲಕ್ಷ್ಮಿಯ ಅನುಗ್ರಹ ಸಂಪಾದಿಸಲು ರಾಜಕುಮಾರನು ಅರವತ್ನಾಲ್ಕು ಕಲೆ ಹಾಗೂ ವಿಜ್ಞಾನಗಳಲ್ಲಿ ನಿಪುಣತೆ ಪಡೆಯಬೇಕಾಗಿತ್ತು. ಈ ಅರವತ್ನಾಲ್ಕು ಕಲೆ ಮತ್ತು ವಿಜ್ಞಾನಗಳ ಪಟ್ಟಿಯನ್ನು ಸಹ ಇಲ್ಲಿ ಕೊಡಲಾಗಿದೆ.

ಮಧ್ಯಕಾಲೀನ ಭಾರತದಲ್ಲಿ ಹೆಚ್ಚು ಕಡಿಮೆ ಭಾರತದ ಎಲ್ಲಾ ಭಾಗಗಳಲ್ಲಿಯೂ ರಾಜ ಪ್ರಭುತ್ವದ ಸರ್ಕಾರ ಪ್ರಚಲಿತವಾಗಿದ್ದುದರಿಂದ, ಈ ಸರ್ಕಾರದ ಕೇಂದ್ರ ಬಿಂದುವಾಗಿದ್ದ ರಾಜ ವೈಭವಯುತನಾಗಿ ಹಾಗೂ ಸದಾಕಾಲ ಘನತೆ ಗಾಂಭೀರ್ಯದಿಂದ ಕೂಡಿದವನಾಗಿ ಇರಬೇಕಾಗಿತ್ತು ಮತ್ತು ಆತನ ಯೋಗ್ಯತೆ ಹಾಗೂ ಸದ್ಗುಣಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗುತ್ತಿತ್ತು. ನಮ್ಮ ಪ್ರಾಚೀನ ಋಷಿಗಳಾದ ಶುಕ್ರ, ಕಮಂಡಕ ಮತ್ತು ಕೌಂಟಿಲ್ಯರಂತಹ ಮುನಿಗಳ ಆದರ್ಶದಲ್ಲಿ ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿದ್ದರು ಮತ್ತು ಅದರಂತೆ ನಡೆದುಕೊಳ್ಳುತ್ತಿದ್ದರು. 'ಸಾಮ್ರಾಜ್ಯಲಕ್ಷ್ಮಿ ಪೀಠಿಕಾ' ಗ್ರಂಥದ ಕೆಲವು ಅಧ್ಯಾಯಗಳಲ್ಲಿ ರಾಜನ ದೈವೀಲಕ್ಷಣಗಳ, ಗುಣಗಳ, ಕರ್ತವ್ಯಗಳ ಮತ್ತು ಜವಾಬ್ದಾರಿಗಳ ವರ್ಣನೆ ಇದೆ. ರಾಜನು ನಿತ್ಯ ಮಾಡುವ ಹಾಗೂ ಅನ್ಯ ಕರ್ತವ್ಯಗಳ ವಿವರಣೆಗಳೂ ಇವೆ. ರಾಜನ ನಿತ್ಯದ ಕಾರ್ಯ ಪೂಜೆಯಿಂದ ಪ್ರಾರಂಭವಾಗುತ್ತಿತ್ತು. ನಂತರ ಧರ್ಮಾಚರಣೆ, ಆಡಳಿತದ ಕಾರ್ಯಾಚರಣೆ ಮತ್ತು ಚರ್ಚೆಗಳು ರಾಜನ ಸಭೆಯಲ್ಲಿ ನಡೆಯುತ್ತಿದ್ದವು. ಆನಂತರ ರಾಜಕುಟುಂಬದವರೊಂದಿಗೆ ಮಧ್ಯಾಹ್ನದ ಭೋಜನದಲ್ಲಿ ಭಾಗವಹಿಸಲಾಗುತ್ತಿತ್ತು. ಸಂಜೆ ಗರಡಿ ಸಾಧನೆಯ ಅಭ್ಯಾಸ ಮತ್ತು ಪಂಡಿತರು, ಕವಿಗಳು, ಸಂಗೀತಗಾರರು ಹಾಗೂ ನರ್ತಕ-ನರ್ತಕಿಯರೊಂದಿಗೆ ಮನೋರಂಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಾಗುತ್ತಿತ್ತು. ರಾಜನ ವೈಯಕ್ತಿಕ ಸಂತೋಷ, ವಿನೋದ ಮತ್ತು ಕಾಲಕ್ಷೇಪಗಳಿಗೆ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಈ ಅಧ್ಯಾಯಗಳು ಕೇವಲ ರಾಜಪರಿವಾರದವರ ಜೀವನ ರೀತಿ ಹಾಗೂ ಧನ ಸಮೃದ್ಧಿಯನ್ನು ತಿಳಿಸುವುದಲ್ಲದೆ ಸಮಾಜದಲ್ಲಿ ಸಾಮಾನ್ಯ ಹಾಗೂ ಸಾಮಾಜಿಕ ಸಂಬಂಧವನ್ನು ತಿಳಿಸುತ್ತದೆ.

'ಸಾಮ್ರಾಜ್ಯಲಕ್ಷ್ಮಿ ಪೀಠಿಕಾ'ದಲ್ಲಿ ಬೇಟೆಗೆ ಸಂಬಂಧಪಟ್ಟ ಒಂದು ಅಧ್ಯಾಯವೂ ಇದೆ. ರಾಜನು ಬೇಟೆಯ ಅಭ್ಯಾಸ ಮಾಡಬೇಕೆಂದೂ ಮತ್ತು ನಗರ ಹಾಗೂ ಪಟ್ಟಣಗಳನ್ನು ಕ್ರೂರ ಮೃಗಗಳ ಹಾವಳಿಯಿಂದ ರಕ್ಷಿಸಲು ಆಗಿಂದಾಗ್ಗೆ ಬೇಟೆಗೆ ಹೊರಡುತ್ತಿರಬೇಕೆಂದೂ ಈ ಅಧ್ಯಾಯ ರಾಜನಿಗೆ ಉಪದೇಶಿಸುತ್ತದೆ. ಇದರಿಂದ ಆತನ ಶಕ್ತಿ ಹೆಚ್ಚುತ್ತದಲ್ಲದೆ ಬೇರೆ ದೇಶಗಳಲ್ಲಿ ಪ್ರಖ್ಯಾತನೂ ಆಗ ಬಹುದು. ಈ ಅಧ್ಯಾಯದಲ್ಲಿ ಬೇಟೆಯ ಬಗೆಗೆ ಕುತೂಹಲ ಕಾರಿಯಾದ ವರ್ಣನೆಗಳಿವೆ. ಕೇವಲ ಕಾಲಕಳೆಯಲು ಬೇಟೆಯ ಶಿಫಾರಸ್ಸು ಮಾಡಿಲ್ಲ. ಅದು ಒಂದು ಅತಿ ಅವಶ್ಯಕವಾದ ಕಲೆ. ಇದರಿಂದ ಯುದ್ಧ ವಿಜ್ಞಾನ ಹಾಗೂ ರಾಜನೀತಿ ವಿಜ್ಞಾನದ ಜ್ಞಾನ ಉಂಟಾಗುತ್ತದೆ. ಸಂಪೂರ್ಣ ಮಲ್ಲಿಕಾರ್ಜುನ ಮರಗಳಿರುವ ಶ್ರೀಶೈಲದಂತಹ ಅರಣ್ಯಗಳನ್ನು

ಬೇಟೆಯಾಡಲು ಆಯ್ದುಕೊಳ್ಳಲು (**ಶ್ರೀಶೈಲ ತಟವತ್ ಉಲ್ಲಸನ್ ಮಲ್ಲಿಕಾರ್ಜುನವಮ್**) ಗ್ರಂಥದಲ್ಲಿ ತಿಳಿಸಿರುವುದನ್ನು ನಾವು ಗಮನಿಸಬಹುದು. ಪ್ರಸಿದ್ಧ ಯಾತ್ರಾಸ್ಥಳವಾದ ಶ್ರೀಶೈಲ ಮತ್ತು ಬಹಳಷ್ಟು ಜನಗಳಿಂದ, ವಿಶೇಷವಾಗಿ ವೀರಶೈವರಿಂದ ಪೂಜಿಸಲ್ಪಡುವ ಪ್ರಖ್ಯಾತ ದೈವ ಮಲ್ಲಿಕಾರ್ಜುನ ಕರ್ನಾಟಕ ದಲ್ಲಿಯೂ ಇರುವದರಿಂದ ಈ ಗ್ರಂಥದ ಲೇಖಕರು ಕರ್ನಾಟಕ ದವರಿರಬಹುದೆಂದು ಮತ್ತು ವೀರಶೈವರಿರಬಹುದೆಂದು ಊಹಿಸ ಬಹುದು.

'ಸಾಮ್ರಾಜ್ಯಲಕ್ಷ್ಮಿ ಪೀಠಿಕಾ'ದಲ್ಲಿ ಪ್ರಜಾರಾಜ್ಯ ಪದ್ಧತಿ ಮತ್ತು ರಾಜನೀತಿಜ್ಞತೆಯನ್ನು ಲೇಖಕರು ಕೆಲವು ಅಧ್ಯಾಯಗಳಲ್ಲಿ ವರ್ಣಿಸಿದ್ದಾರೆ. ಮಂತ್ರಿ, ಸೇನಾಧಿಪತಿ, ಪುರೋಹಿತರು, ಗೂಢಚಾರರು ಮುಂತಾದ, ರಾಜ್ಯದ ಹಲವು ಅಧಿಕಾರಿಗಳ ಅರ್ಹತೆಯನ್ನು ನಿಗದಿಗೊಳಿಸಿದ್ದಾರೆ. ತನ್ನ ಆಡಳಿತ ಜವಾಬ್ದಾರಿ ಯನ್ನು ಸಮರ್ಪಕವಾಗಿ ನಿರೂಪಿಸಲು ಈ ಎಲ್ಲಾ ಅಧಿಕಾರಿಗಳ ಸಹಾಯ ಪಡೆಯಬಹುದೆಂದು ರಾಜನಿಗೆ ಸಲಹೆ ನೀಡಲ್ಪಟ್ಟಿದೆ.

ರಾಜಮಹಿಷಿ ಪಟ್ಟದರಾಣಿಯ ಗುಣಗಳನ್ನು ತಿಳಿಸುವ ಒಂದು ಅಧ್ಯಾಯ ಈ ಗ್ರಂಥದಲ್ಲಿದೆ. ಚಕ್ರಾಧಿಪತ್ಯದ ಆಡಳಿತದಲ್ಲಿ ಚಕ್ರವರ್ತಿಗಳೊಂದಿಗೆ ಮಹಾರಾಣಿಯು ಆಗಿಂದಾಗ್ಗೆ ಭಾಗವಹಿಸು ತ್ತಿದ್ದರು. ಧಾರ್ಮಿಕ ಸಮಾರಂಭಗಳಲ್ಲಿ ಹಾಗೂ ಸಾಮಾಜಿಕ ಕೂಟಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದರು. ರಾಜನು ರಾಣಿಯೊಡಗೂಡಿ ಎಲ್ಲಾ ಸಮಾರಂಭಗಳನ್ನು ನಡೆಸಿದರೆ ಸಾಮ್ರಾಜ್ಯಲಕ್ಷ್ಮಿಯು ಸಂತೋಷಗೊಂಡು ರಾಜ್ಯದಲ್ಲಿ ಸ್ಥಿರವಾಗಿ ನೆಲೆಸುವಳೆಂದು ಲೇಖಕರು ಗ್ರಂಥದಲ್ಲಿ ತಿಳಿಸಿದ್ದಾರೆ.

ಈ ಗ್ರಂಥದಲ್ಲಿ ರಾಜನೀತಿಜ್ಞತೆ ಮತ್ತು ಸರ್ಕಾರಕ್ಕೆ ಸಂಬಂಧ ಪಟ್ಟ ಕೆಲವು ಅಧ್ಯಾಯಗಳನ್ನು ಒಂದು ಗುಂಪಾಗಿ ವಿಂಗಡಿಸ ಬಹುದು. ರಾಜ್ಯದ ಏಳು ಘಟಕಗಳು, ರಾಜನ ಏಳು ಅಂಗಗಳು ಆರು ವಿಧದ ತತ್ವಗಳು, ಚತುರೋಪಾಯಗಳು, ಯುದ್ಧಸ್ಥಿತಿ, ಚತುರಂಗ ಸೇನೆ, ಕೋಟೆಗಳು, ಆಯುಧಗಳು, ಧನುರ್ವಿದ್ಯೆ, ವಿವಿಧ ಪ್ರಕಾರದ ಸೇನಾವ್ಯೂಹಗಳು, ದಂಡಯಾತ್ರೆ ಗಜವಿದ್ಯೆ, ಅಶ್ವವಿದ್ಯೆ, ರಥಗಳು, ಪದಾತಿಗಳು ಇತ್ಯಾದಿ. ಅಷ್ಟ ಕೋಣಾಕೃತಿಯು ಮತ್ತು ವರ್ಗಾಕಾರದ ರಥಗಳನ್ನು ತಯಾರಿಸುವುದರ ಬಗ್ಗೆ ಕುತೂಹಲ ಕೆರಳಿಸುವ ಒಂದು ಅಧ್ಯಾಯವಿದೆ. ವಿಜಯನಗರ ರಾಜರ ಕಾಲದಲ್ಲಿ ಸೇನೆಗಳ ಬಲವನ್ನು ಹೆಚ್ಚಿಸಲು, ಹಾಗೂ ಸೇನೆಗಳ ಕ್ಷೇಮವನ್ನು ನೋಡಿಕೊಳ್ಳಲು ಮತ್ತು ಆನೆ, ಕುದುರೆಯಂತಹ ಪ್ರಾಣಿಗಳ ಕ್ಷೇಮವನ್ನು ನೋಡಿಕೊಳ್ಳಲು ರಾಜರೇ ವೈಯಕ್ತಿಕವಾಗಿ ಆಸಕ್ತಿಯನ್ನು ತೋರಿಸಿ, ರಾಜಧರ್ಮವನ್ನು ಪಾಲಿಸುತ್ತಿದ್ದರೆಂಬ ಅಂಶಗಳ ಮೇಲೆ ಈ ಅಧ್ಯಾಯಗಳು ಬೆಳಕು ಬೀರುತ್ತವೆ. ರಥವನ್ನು ಸಿದ್ಧಪಡಿಸುವುದು ಒಂದು ಉದ್ಯಮವನ್ನಾಗಿ ಮಾಡಿಕೊಂಡು ರಥಗಳನ್ನು ತಯಾರಿಸಲು ಅಭ್ಯಾಸ ಮಾಡಲಾಗುತ್ತಿತ್ತು. ವಿವಿಧ ಉಪಯೋಗಕ್ಕಾಗಿ ವಿವಿಧ ರೀತಿಯ ರಥಗಳನ್ನು ತಯಾರಿಸಲಾಗುತ್ತಿತ್ತು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಪಲ್ಲಕ್ಕಿಗಳನ್ನು ಉಪಯೋಗಿಸ ಲಾಗುತ್ತಿತ್ತು. ಈ ಸಮಯದಲ್ಲಿ ಸೈನಿಕ ಸಂಘಟನೆಯಲ್ಲಿ ಕೋಟೆಗಳು ಪ್ರಮುಖಪಾತ್ರ ವಹಿಸುತ್ತಿದ್ದವು. ಕೋಟೆಗಳು ಕಟ್ಟಲ್ಪಡುತ್ತಿದ್ದವು. ಹಾಗೂ ರಾಜ್ಯದ ಜನ ಮತ್ತು ಕೋಶಾಗಾರಗಳನ್ನು ರಕ್ಷಿಸಲು ಪಟ್ಟಣಗಳನ್ನು ಕೋಟೆಗಳಿಂದ ಭದ್ರ ಪಡಿಸಲಾಗುತ್ತಿತ್ತು. ಈ ರೀತಿ "ಸಾಮ್ರಾಜ್ಯಲಕ್ಷ್ಮಿ ಪೀಠಿಕಾ" ವಿಜಯನಗರ ಆಳ್ವಿಕೆಯ ಸಮಯದಲ್ಲಿದ್ದಂತಹ ಅನೇಕ ವಿಷಯಗಳನ್ನು ಪ್ರಕಾಶ ಪಡಿಸುತ್ತದೆ.

ಹೊಸವರ್ಷದ ಆಚರಣೆಯಿಂದ ಆರಂಭಗೊಂಡು ರಾಜ ಮತ್ತು ರಾಜ ಕುಟುಂಬದವರಿಂದ ಧಾರ್ಮಿಕ ವ್ರತ ಮತ್ತು ಉತ್ಸವ ರೂಪದಲ್ಲಿ ಆಚರಿಸಲ್ಪಡುವ ಸುಮಾರು ೨೪ ಹಬ್ಬಗಳ ವರ್ಣನೆ ಹಾಗೂ ಅವುಗಳನ್ನು ಆಚರಿಸುವ ವಿಧಾನಗಳ ವಿಸ್ತಾರವಾದ ವಿವರಣೆ "ಸಾಮ್ರಾಜ್ಯಲಕ್ಷ್ಮಿ ಪೀಠಿಕಾ"ದಲ್ಲಿದೆ. ಚೈತ್ರ ಮಾಸದಿಂದ ಫಾಲ್ಗುಣ ಮಾಸದವರೆಗೆ ಆಚರಿಸಲ್ಪಡುವ ಮುಖ್ಯವಾದ ಎಲ್ಲಾ ಹಬ್ಬಗಳು ವರ್ಣಿಸಲ್ಪಟ್ಟಿವೆ. ವೈಶಾಖ ಮಾಸದಲ್ಲಿ ಶ್ರೀರಾಮ ನವಮಿ, ಅಕ್ಷಯ ತೃತೀಯ ಮತ್ತು ನರಸಿಂಹ ಜಯಂತಿ, ಜ್ಯೇಷ್ಠ ಮಾಸದಲ್ಲಿ ವೃಷಭ ವ್ರತ, ಶ್ರಾವಣ ಮಾಸದಲ್ಲಿ ವರಲಕ್ಷ್ಮಿ ವ್ರತ ಖಿರಲಿ ವ್ರತ, ಶ್ರೀ ಕೃಷ್ಣಜಯಂತಿ ಮುಂತಾದವುಗಳು, ಭಾದ್ರಪದ ಮಾಸದಲ್ಲಿ ಸಿದ್ಧಿ ವಿನಾಯಕ ಪೂಜಾ, ವಾಮನ ವ್ರತ, ನವರಾತ್ರಿ ಆಚರಣೆ, ದೀಪಾವಳಿ ಹಬ್ಬ ಮತ್ತು ಬಲಿಪೂಜಾ, ಶಿವರಾತ್ರಿ ವ್ರತ, ಫಾಲ್ಗುಣದಲ್ಲಿ ಹೋಳಿಹಬ್ಬ ಹೀಗೆ ಇನ್ನೂ ಅನೇಕ ವ್ರತಗಳು ಹಾಗೂ ಹಬ್ಬಗಳು ಆಚರಿಸಲ್ಪಡುತ್ತವೆ. ಆಯಾ ಕಾಲಕ್ಕೆ ತಕ್ಕಂತೆ ಧಾರ್ಮಿಕ ಹಾಗೂ ಸಾಮಾಜಿಕ ದೇವತೆಗಳನ್ನು ಪೂಜಿಸುವ ಪದ್ಧತಿ ಸಂಪೂರ್ಣ ಕರ್ನಾಟಕದಲ್ಲಿ ಇಂದಿಗೂ ಇದೆ. ಉದಾಹರಣೆಗಾಗಿ, ಹೊಸವರ್ಷದ ಮೊದಲ ದಿನ ಬೆಳಗ್ಗೆ ಅಶ್ವತ್ಥಾಮ, ಬಲಿ, ವ್ಯಾಸ ಮುಂತಾದ ಹೆಸರುಗಳನ್ನುಚ್ಚರಿಸುತ್ತಾ, ಎಣ್ಣೆ ಹಚ್ಚಿಕೊಂಡು ಅಭ್ಯಂಜನ ಮಾಡಿ, ಹೊಸವರ್ಷದ ಸಂವತ್ಸರ ಫಲವನ್ನು ಕೇಳಿ ನಂತರ ಊಟಕ್ಕೆ ಮೊದಲು ಬೇವು-ಬೆಲ್ಲವನ್ನು ಪ್ರಾಶನ ಮಾಡುವ ಪದ್ಧತಿ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ನವರಾತ್ರಿಯ ಸಮಯದಲ್ಲಿ ನಡೆಯುವ ರಾಜವೈಭವದ ೨೫ ಪ್ರಕಾರದ ಮನೋರಂಜನೆಗಳು ವರ್ಣಿಸಲ್ಪಟ್ಟಿವೆ. ಭಾರತದಲ್ಲಿ ನವರಾತ್ರಿಯ ಸಮಯದಲ್ಲಿ ಮನೋರಂಜನೆಗಾಗಿ, ಬೆಳಕು ಹಾಗೂ ಧ್ವನಿಯನ್ನು ಉಂಟು ಮಾಡುವ ಬಾಣ-ಬಿರುಸುಗಳು ಹಚ್ಚಲ್ಪಡುತ್ತವೆ. ಇಲ್ಲಿ ವರ್ಣಿಸ ಲ್ಪಟ್ಟಿರುವ ರಾಜ ವೈಭವದ ವಿನೋದ, ಆಡಂಬರ ಮುಂತಾದವು ಗಳು, ಮೈಸೂರಿನಲ್ಲಿ ನಡೆಯುವ ಇದೇ ರೀತಿಯ ಸೈನಿಕ ಕವಾಯತ್ತು ಹಾಗೂ ದಸರಾ ಮೆರವಣಿಗೆಯನ್ನು ನೆನಪಿಗೆ ತರುತ್ತವೆ.

"ಸಾಮ್ರಾಜ್ಯಲಕ್ಷ್ಮೀಪೀಠಿಕಾ" ಖುರಳೀ ಪೂಜೆಯನ್ನು ವರ್ಣಿಸುತ್ತದೆ. ಖುರಳಿ ಪೂಜೆ ಎಂದರೆ ರಾಜನು ತನ್ನ ಗರಡಿ ಮನೆಯಲ್ಲಿ ಆಯುಧ ಮುಂತಾದವುಗಳನ್ನು ಇಟ್ಟು ಮಾಡುವ ಆಯುಧಗಳ ಪೂಜೆ. ಅಪೂರ್ವ ರೀತಿಯಲ್ಲಿ ಆಚರಿಸಲ್ಪಡುವ ಖುರಳೀವ್ರತ ಗ್ರಂಥದಲ್ಲಿ ಮಾತ್ರ ವರ್ಣಿಸಲ್ಪಟ್ಟಿದೆ ಎಂದು ಹೇಳಲಾಗಿದೆ. ನರ್ತನ ಸಂಗೀತ, ರತ್ನಾಭರಣಗಳು ವಿಧವಿಧವಾದ ಆಹಾರಗಳು, ರಾಜರ ಮಂಗಳಕರವಾದ ದೈಹಿಕ ಗುಣಗಳು, ಪುಷ್ಪಗುಚ್ಛ, ಪ್ರಾಣಿಗಳ ಸಮೂಹ ಮುಂತಾದವುಗಳು ಪ್ರಾಸಂಗಿಕವಾಗಿ ಉಲ್ಲೇಖವಾಗಿರುವುದನ್ನು ನಾವು ಕಾಣಬಹುದು. ಅನೇಕ ಸಂದರ್ಭಗಳಲ್ಲಿ ರಾಜನನ್ನು ಸಾರ್ವಭೌಮನೆಂದು ಮತ್ತು ವಿಷ್ಣು ಭಕ್ತನೆಂದು ವರ್ಣಿಸಲ್ಪಟ್ಟಿದೆ. 'ಸಾಮ್ರಾಜ್ಯ ಲಕ್ಷ್ಮೀಪೀಠಿಕಾ' ವಿಜಯನಗರ ಕಾಲದ ಒಂದು ಗ್ರಂಥ ಎಂದು ಈ ಎಲ್ಲಾ ವಿವರಣೆಗಳಿಂದ ನಿರ್ಣಯಿಸಬಹುದು.

ಈ ಗ್ರಂಥದ ಮುಕ್ತಾಯದ ಅಧ್ಯಾಯದಲ್ಲಿ ದೇವಿ ಸಾಮ್ರಾಜ್ಯ ಲಕ್ಷ್ಮಿಯ ಮಹಿಮೆಯನ್ನು ಮತ್ತೊಮ್ಮೆ ಕಾಣಬಹುದು. ಈ ಗ್ರಂಥದ ಹಸ್ತಪ್ರತಿ ಅಪೂರ್ಣವಾಗಿದೆಯೆಂದೂ, ಮುಂದಿನ ಇನ್ನೂ ಅನೇಕ ವಿಷಯಗಳು ಲಭ್ಯವಾಗಿಲ್ಲವೆಂದೂ ಈ ಗ್ರಂಥದ ಸಹ-ಸಂಪಾದಕರಾದ ಶ್ರೀ ಕೆ. ವಾಸುದೇವ ಶಾಸ್ತ್ರಿಯವರು ಅಭಿಪ್ರಾಯ ಪಡುತ್ತಾರೆ. ಅದೇನೇ ಇರಲಿ ರಾಜ್ಯದ ಒಬ್ಬ ಮುಖ್ಯಸ್ಥನು ತಿಳಿಯಲೇಬೇಕಾದ ರಾಜತಂತ್ರ; ಸಿದ್ಧಾಂತಗಳು, ಕರ್ತವ್ಯಗಳು ಹಾಗೂ ಆತನ ವಿಹಾರವನ್ನು ವಿವರಿಸುವ ಈ ಗ್ರಂಥ ಸಂಸ್ಕೃತದ ಇಂಪಾದ ಕಾವ್ಯರೂಪದಲ್ಲಿದ್ದು ಬಹಳ ವಿನೋದಪ್ರದ ಹಾಗೂ ಬೋಧಪ್ರದ ಗ್ರಂಥವಾಗಿದೆ. ಅದೂ ಅಲ್ಲದೆ ಈ ಗ್ರಂಥವು ಪ್ರತಿಯೊಬ್ಬರೂ ತಮ್ಮ ಜೀವನದ ಕರ್ತವ್ಯಗಳನ್ನು ನಿರ್ವಹಿಸಲು ಉಪಯೋಗಿಸಬಹುದಾದ 'ಮಾರ್ಗದರ್ಶಿ'ಯಂತಿದೆ.

ತಂಜಾವೂರಿನ ಸರಸ್ವತಿ ಮಹಾಲ್ ಪುಸ್ತಕಾಲಯದಲ್ಲಿ ಕೆಲವು ರಾಜಕುಮಾರರ ಹೆಸರುಗಳು ಅಂಕಿತವಾಗಿರುವ ಈ ಗ್ರಂಥದ ವೈಯಕ್ತಿಕ ನಕಲುಗಳು ಇವೆ. ತಂಜಾವೂರಿನ ಪ್ರತಿಯೊಬ್ಬ ಅರಸರು ಈ ಗ್ರಂಥವನ್ನು ನಿಯಮಿತವಾಗಿ ಅಭ್ಯಸಿಸಿ ಅನುಷ್ಠಾನಕ್ಕೆ ತರುತ್ತಿದ್ದರೆಂದು ಇದರಿಂದ ಸ್ಪಷ್ಟವಾಗುತ್ತದೆ. ವಿಜಯನಗರ ರಾಜರ ಕಾಲಾನಂತರ ಈ ಗ್ರಂಥವನ್ನು ರಾಜಕುಮಾರರುಗಳಿಗೆ ಪಠ್ಯ ಪುಸ್ತಕವಾಗಿ ಇಟ್ಟಿರಬಹುದೆಂದು ಊಹಿಸಬಹುದು.

ಈ ಬೃಹತ್ ಗ್ರಂಥದ ಹೆಚ್ಚು ಕಡಿಮೆ ಎಲ್ಲಾ ಅಧ್ಯಾಯಗಳಲ್ಲಿಯೂ ಆ ಸಮಯದ ರಾಜಕೀಯ ಸೈನಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ದೃಷ್ಟಿ ತಾತ್ಪರ್ಯಗಳಿವೆ. ಹಾಗೂ ಅವುಗಳ ಮೇಲೆ ಪ್ರಕಾಶ ಬೀರಿದೆ. ಪ್ರಾಮಾಣಿಕ ರಾಜರ ಸಮರ್ಥ ಆಳ್ವಿಕೆ ಶಾಂತಿ ಹಾಗೂ ಉತ್ಕರ್ಷತೆ ಆತನ ವಶವಾಗುತ್ತಿದ್ದವೆಂದು ಅಮೋಘವಾಗಿ ವರ್ಣಿಸಲ್ಪಟ್ಟಿದೆ.

ಈ ಸಾಮ್ರಾಜ್ಯಲಕ್ಷ್ಮೀಪೀಠಿಕಾ, ವಿಜಯನಗರದ ಪ್ರಖ್ಯಾತ ರಾಜರ ರಾಜಯೋಗ್ಯ ಉಪದೇಶದ ಸತ್ಯವಾದ ಒಂದು ಉಗಮ ಗ್ರಂಥ ಎನ್ನುವುದರಲ್ಲಿ ಸಂದೇಹವೇ ಇಲ್ಲ.

*

ಡಾ|| ಕೆ.ಜಿ. ವಸಂತಮಾಧವ*

ಕರಾವಳಿಕರ್ನಾಟಕ ಇತಿಹಾಸ ಅಧ್ಯಯನದಲ್ಲಿ ವಿದೇಶಿ ದಿನಚರಿಗಳ ಮಹತ್ವ (೧೫೮೮-೧೮೦೦)

ಇತಿಹಾಸ ಅಧ್ಯಯನದಲ್ಲಿ ಪ್ರಮುಖ ವ್ಯಕ್ತಿಗಳ ದಿನಚರಿಗಳ ವರದಿಗಳು ಪ್ರಮುಖ ಆಕರಗಳಾಗಿ ಪರಿಣಮಿಸುತ್ತವೆ. ಇಂತಹ ದಿನಚರಿಗಳು ಮಧ್ಯಕಾಲೀನ ಕರಾವಳಿ ಕರ್ನಾಟಕದ ಇತಿಹಾಸ (೧೫೮೮-೧೮೦೦) ಅಧ್ಯಯನಕ್ಕೆ ಹೇಗೆ ಉಪಕಾರಿಗಳಾಗಿವೆ ಎಂಬುದನ್ನು ಇಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ದೂ ಆರ್ತೆ ಮಿನೆಜಿಯಸ್‌ನ ದಿನಚರಿ

ಇವನು ಪೋರ್ಚುಗೀಸ್ ವೈಸರಾಯಾಗಿದ್ದನು. ಇವನ ವರದಿಯ ಕೆಲವು ಅಂಶಗಳನ್ನು ನಾಗೇಗೌಡರು ತಮ್ಮ ಪ್ರವಾಸಿ ಕಂಡ ವರದಿಯಲ್ಲಿ ಪ್ರಕಟಿಸಿದ್ದಾರೆ.[೧] ಈ ವರದಿಯಲ್ಲಿ ಹೆಚ್ಚಾಗಿ ಗೋವಾಕ್ಕೆ ಸಂಬಂಧಿಸಿದ್ದು ಇದ್ದರೂ, ಅಲ್ಲಲ್ಲಿ ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳು ಇವೆ. ಗೋವಾಕ್ಕೆ ತಾಗಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಪ್ರದೇಶದ ಕೃಷಿ ಪದ್ಧತಿಗಳನ್ನು ಈ ವರದಿಯಲ್ಲಿ ತಿಳಿಸಲಾಗಿದೆ. ಕೃಷಿಯಲ್ಲಿ ಗೇಣಿ ನಿರ್ಣಯಿಸಿದ್ದು ಮತ್ತು ತೆಂಗಿನ ತೋಟಕ್ಕೆ ನಗದು ಗೇಣಿ ಕೊಡುವ ಪದ್ಧತಿ ಬಂಜರು ಬಿದ್ದಿರುವ ಭೂಮಿಯನ್ನು ತೆಂಗಿನ ತೋಟಗಳನ್ನಾಗಿ ಮಾಡಲು ಪ್ರೋತ್ಸಾಹ ನೀಡುತ್ತಿದ್ದ ಬಗ್ಗೆ ಈ ವರದಿಯಲ್ಲಿ ತಿಳಿಸಿರುವುದು ಗಮನಾರ್ಹ. ಗೇಣಿ ವಂಶ ಪಾರಂಪರ್ಯವಾಗಿ ಮುಂದುವರಿಯುತ್ತಿದ್ದದ್ದು ಮತ್ತು ಗೇಣಿಬಿಟ್ಟ ಭೂಮಿಯನ್ನು ಹಿಂದೆ ಪಡೆಯುವಂತಿರಲಿಲ್ಲ.

ಅಕ್ಕಸಾಲಿಗ, ಕಮ್ಮಾರ ಚಮ್ಮಗಾರ ಜಾತಿಯವರು ಪ್ರತಿ ಊರುಗಳಲ್ಲಿದ್ದು ಅವರು ನೀಡುವ ಸೇವೆಗಳಿಗೆ ಜಮೀನು ಮುಫತ್ತಾಗಿ ಕೊಡುವ ಕ್ರಮ ಇದ್ದದ್ದನ್ನು ಈ ವರದಿ ಉಲ್ಲೇಖಿಸುತ್ತದೆ. ಕೃಷಿ ಸೇವೆಯಲ್ಲಿ ಬಿಟ್ಟಿ ಆಳುಗಳ ಸೇವೆ ಇದ್ದದ್ದು ಇಲ್ಲಿ ತಿಳಿಸಿದೆ.

ಸ್ತ್ರೀಯರಿಗೆ ಚರಾಸ್ತಿಗಳ ಮೇಲೆ ಹಕ್ಕಿಲ್ಲ, ಇಷ್ಟಲ್ಲದೆ ಆಸ್ತಿಯ ಹಕ್ಕು ತಂದೆಯಿಂದ ಮಗನಿಗೆ ವಾರೀಸುಹಕ್ಕಾಗಿ ನಡೆದುಬರುತ್ತದೆ. ಕರಾವಳಿ ಕರ್ನಾಟಕ ಮತ್ತು ಗೋವಾ ವ್ಯಾಪಾರ ಕುರಿತಾಗಿ ಕೆಲವು ಸಂಗತಿಗಳು ಈ ವರದಿಯಲ್ಲಿ ಉಲ್ಲೇಖಿಸಿದ್ದು ಗಮನಾರ್ಹ. ವಿಜಯನಗರದ ಇಳಿಮುಖದ ನಂತರ (೧೫೬೫) ಬಿರ್ಮಜನಿಂದ ಬರುವ ಕುದುರೆ ಮೇಲಿನ ಸುಂಕ ಬಹಳ ಕಡಿಮೆಯಾದದ್ದು ಇಲ್ಲಿ ತಿಳಿಸಿದೆ. ಆದರೆ ಇನ್ನಿತರ ವ್ಯಾಪಾರ ಪ್ರಗತಿಮುಖದಲ್ಲಿ ನಡೆದದ್ದು ಮಿನೆಜಿಯಸ್ ಅವಲೋಕಿಸಿದ್ದಾನೆ. ಮುಖ್ಯವಾಗಿ ಕರಿಮೆಣಸು ಮತ್ತು ಅಕ್ಕಿ ವ್ಯಾಪಾರ ಕರಾವಳಿ ರೇವುಗಳಲ್ಲಿ; ಅದರಲ್ಲೂ ಮುಖ್ಯವಾಗಿ ಬಸ್ರೂರು, ಭಟ್ಕಳ ಮತ್ತು ಹೊನ್ನಾವರಗಳಲ್ಲಿ ರಭಸದಿಂದ ನಡೆಯುತ್ತಿದೆ ಎಂದು ಅದೇ ಕಾಲೀನ ದಾಖಲೆಗಳು ತಿಳಿಸಿದ್ದನ್ನು ಮಿನೆಜಿಯಸ್ ತನ್ನ ವರದಿಯಲ್ಲೂ ತಿಳಿಸಿದ್ದಾನೆ. ಗೇರಸೊಪ್ಪೆ ರಾಣಿ ಹೊನ್ನಾವರದಿಂದ ೫೦೦ ಕಡಿಲ ಮೆಣಸು ಮತ್ತು ಇಲ್ಲಿರುವ ಕೋಟೆಯಲ್ಲಿರುವ ಜಮೀನುಗಳಿಂದ ೨೦ ಪರ್ದಾಂಗ ಅಕ್ಕಿ ಗೋವಾಗೆ ಬರುತ್ತದೆ. ಇಲ್ಲಿರುವ ಭೂಮಿಗಳು ಎರಡು ರೀತಿಯಲ್ಲಿ ವರ್ಗೀಕರಿಸಿ ಜನರು ಬೇಸಾಯ ಮಾಡುತ್ತಿದ್ದರು. ಬಸ್ರೂರಿನ ಚೆಟ್ಟಿಗಳು (ಶೆಟ್ಟಿಗಳು) ೫೦೦ ಪಾರಾಂವಗಳ ಬೆಲೆಯುಳ್ಳ ಅಕ್ಕಿಯನ್ನು ಕಾಣಿಕೆಯಾಗಿ ಗೋವಾಕ್ಕೆ ಕಳುಹಿಸುತ್ತಾರೆ. ಮಂಗಳೂರಿನ ಕೋಟೆಯು ಸುಂಕದ ಕಟ್ಟೆಯಾಗಿದ್ದು ಇಲ್ಲಿಂದ ೪೦೦ ಪಗೋಡಾ ೧೬೨ ಪಾರ್ದಾಂಗ್ ಅಕ್ಕಿಯನ್ನು ಗೋವಾದ ಅಧಿಕಾರಿಗಳು ಪೊಗದಿಯಾಗಿ ಪಡೆಯುತ್ತಾರೆ. ಇದನ್ನು ಬಂಗರಾಜ ವಸೂಲಿಮಾಡಿ ಪೋರ್ಚುಗೀಸ್ ವೈಸರಾಯಿಗೆ ಪ್ರತಿವರ್ಷ ಸಲ್ಲಿಸುತ್ತಾನೆ. ಇಲ್ಲಿಯೂ ಬೇಸಾಯ ಭೂಮಿಯ ವರ್ಗೀಕರಣವಾಗಿದ್ದು ಒಕ್ಕಲುತನ ಬೇಸಾಯ ನಡೆಯುತ್ತಿದ್ದದನ್ನು ಈ ದಿನಚರಿ ತಿಳಿಸಿದೆ. ತೆಂಗು, ಮಾವು, ಗೇರು ಮರಗಳ ಬೇಸಾಯಕ್ಕೆ ಸ್ಥಳೀಯರು ಆಸಕ್ತಿ ನೀಡುತ್ತಿದ್ದಾರೆ.

ಕರಾವಳಿಯ ಕ್ರೈಸ್ತ ಧಾರ್ಮಿಕ ಸಂಸ್ಥೆಗಳು ಮತ್ತು ಅವುಗಳು ಯಾವ ರೀತಿಯಲ್ಲಿ ಪೋರ್ಚುಗೀಸರ ಹಿತಾಸಕ್ತಿಯೊಂದಿಗೆ ಸಂಪರ್ಕವನ್ನು ಹೊಂದಿದ್ದವು ಎಂಬುದನ್ನು ಮಿನೆಜಿಯಸ್ ತಿಳಿಸಿದ್ದಾನೆ. ಹೊನ್ನಾವರ, ಬಾರಲೋರ(ಬಸ್ರೂರು)

* 'ಆರಾಧನಾ', ಪಾವಂಜೆ, ಹಳೆಯಂಗಡಿ - ೫೭೪ ೧೪೬

ಮಂಗಳೂರುಗಳ ಕೋಟೆಗಳಲ್ಲಿ ಚರ್ಚುಗಳು ಇದ್ದು, ಅವುಗಳಲ್ಲಿ ವೈಸರಾಯರು ಇದ್ದು ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದು ಅವರಿಗೆ ನೀಡುವ ಸಂಬಳದ ವಿವರಗಳು ಈ ವರದಿಯಲ್ಲಿ ಉಲ್ಲೇಖವಾಗಿವೆ. ಇಷ್ಟಲ್ಲದೆ ಈ ಪ್ರದೇಶಗಳ ಕೋಟೆಗಳನ್ನು ಬಲಿಷ್ಠಪಡಿಸಿ ಅದರಿಂದಾದ ವೆಚ್ಚ ಲೆಖ್ಖ ಪತ್ರಗಳನ್ನು ಮಿನೆಜಿಯಸ್ ತನ್ನ ವರದಿಯಲ್ಲಿ ನಮೂದಿಸಿದ್ದಾನೆ.

ಕರಾವಳಿ ಕರ್ನಾಟಕದಲ್ಲಿ ಸ್ಥಳೀಯ ನಾಣ್ಯಗಳೊಂದಿಗೆ ಪೋರ್ಚುಗೀಸರ ಚಿನ್ನದ ನಾಣ್ಯಗಳಾದ ಪೇಸಾ, ಕ್ವಿಯ್ನ ಮೀಯಾಡೆಸ್, ಸೇರಾಫಿಂ ಅಥವಾ ಪಾರ್ಡ್ಡಾಂವ ಮತ್ತು ತಾಂಬ್ರದ ನಾಣ್ಯಗಳಾದ ಟ್ಯಾಂಗರ್ ಚಲಾವಣೆಯಲ್ಲಿದ್ದವು ಎಂಬ ಸಂಗತಿ ಇದೇ ವರದಿಯಿಂದ ತಿಳಿದು ಬರುತ್ತದೆ.

ಕೊಂಡಿ ನೂರೋನಾ ಅನ್ವಾರೆಯ ದಿನಚರಿಯು ಕರಾವಳಿ ಕರ್ನಾಟಕ ಇತಿಹಾಸದ ಕೆಲವು ಕುತೂಹಲಕಾರಿ ಸಂಗತಿಗಳನ್ನು ಬೆಳಕಿಗೆ ತಂದಿದೆ. ಈ ದಿನಚರಿ ನೂರಕ್ಕಿಂತ ಹೆಚ್ಚು ಪತ್ರಗಳು ಸಲಹಾಸಮಿತಿ ನಿರ್ಣಯ ಮತ್ತು ೩೪ ರಿಂದ ೭೨ ತಿಂಗಳ ಘಟನೆಗಳನ್ನು ಒಳಗೊಂಡಿದೆ. ೧೬೩೧-೧೬೩೨ರ ಅವಧಿಯ ಹೆಚ್ಚಿನ ಘಟನೆಗಳನ್ನು ಅನ್ವಾರೆ ತನ್ನ ದಿನಚರಿಯಲ್ಲಿ ದಾಖಲಿಸಿದ್ದಾನೆ. ಘಟನೆಗಳನ್ನು ಸರಿಯಾದ ರೀತಿಯಲ್ಲಿ ತಿಳಿಸಿದ್ದಾನೆ.[೯] ಈ ದಿನಚರಿಯನ್ನು ೧ ಬೊಥೆಲೊ ದಾ ಕೊಸ್ಟ ವಿಗಾ ಸಂಗ್ರಹಿಸಿದ ಎರಡು ಸಂಪುಟಗಳನ್ನು ನ್ಯಾಶನಲ್ ಲೈಬ್ರರಿ ೧೯೩೭ರಲ್ಲಿ ಪ್ರಕಟಿಸಿದೆ. ಈ ದಿನಚರಿಯನ್ನು ದಿ। ಬಿ.ಎಸ್. ಶಾಸ್ತ್ರಿಯವರು ತಮ್ಮ ಗ್ರಂಥಗಳಲ್ಲಿ ಉಪಯೋಗಿಸಿಕೊಂಡಿದ್ದಾರೆ. ಈ ದಿನಚರಿ ಕರಾವಳಿ ಪ್ರದೇಶ ಮತ್ತು ಪೋರ್ಚುಗೀಸರ ಸಾಗರೋತ್ತರ ಪ್ರದೇಶಗಳ ಮುಖ್ಯವಾಗಿ ಅರೇಬಿಯಾ, ಪೂರ್ವ ಆಫ್ರಿಕಾ ವಾಣಿಜ್ಯ ಸಂಪರ್ಕ, ವೈಸರಾಯನ ದಿನಚರಿ ಮತ್ತು ಇವರ ಧಾರ್ಮಿಕ ಧೋರಣೆಗಳನ್ನು ತಿಳಿಯಲು ಬಹಳ ಉಪಯುಕ್ತವಾಗಿದೆ.[೧೦] ಕರಾವಳಿ ಕರ್ನಾಟಕದ ರಾಜಕೀಯ ಧಾರ್ಮಿಕ ಮತ್ತು ವಾಣಿಜ್ಯ ಇತಿಹಾಸದ ಕೆಲವು ನೋಟಗಳನ್ನು ಈ ದಿನಚರಿ ತಿಳಿಸಿದೆ. ಗಂಗೊಳ್ಳಿ ಪರ್ಯಾಯ ದ್ವೀಪದಲ್ಲಿ ಕೋಟೆ ಕಟ್ಟಿಸಿದ್ದು ಇಲ್ಲಿನ ವಾಣಿಜ್ಯ ಸಂಪತ್ತುಗಳಾದ ಅಕ್ಕಿ ಕರಿಮೆಣಸು ತೆಂಗಿನಕಾಯಿ ಇತ್ಯಾದಿಗಳ ವಿವರ ಮತ್ತು ಇವುಗಳ ವ್ಯಾಪಾರ ಹಿಡಿತ ಹೇಗೆ ಸಾಧಿಸಿಕೊಳ್ಳಬಹುದು, ಸ್ಥಳೀಯ ನಾವಿಕರನ್ನು ಪೋರ್ಚುಗೀಸನೌಕೆಗೆ ಸೇರಿಸಿಕೊಳ್ಳುವ ನಿರ್ಧಾರ ಇತ್ಯಾದಿ ವಿವರಗಳು ಈ ದಿನಚರಿಯಲ್ಲಿ ಸವಿಸ್ತಾರವಾಗಿ ದಾಖಲಿಸಲಾಗಿದೆ. ಗಂಗೊಳ್ಳಿಯನ್ನು ದ್ವೀಪವಾಗಿ ಮಾಡಲು ಪೋರ್ಚುಗೀಸ ತಜ್ಞರು ವಿಫಲರಾದದ್ದು ಮತ್ತು ಈ ದ್ವೀಪದಲ್ಲಿ ಕ್ರೈಸ್ತ ಜನಸಂಖ್ಯೆಯನ್ನು ಹೆಚ್ಚಿಸುವ ಪೋರ್ಚುಗೀಸ ವೈಸರಾಯನ ಇಂಗಿತಗಳೂ ಇಲ್ಲಿ ವ್ಯಕ್ತವಾಗಿದೆ. ಗಂಗೊಳ್ಳಿಯಲ್ಲಿದ್ದ ಕ್ರಾಸ್‌ನ್ನು ಸ್ಥಳೀಯ ತಂಡೆಲರು ಹಾಳು ಮಾಡಿದ್ದು, ಹಾಳುಮಾಡಿದ ವ್ಯಕ್ತಿಗಳು, ರಕ್ತಕಾರಿ ಸತ್ತದ್ದು, ಇದು ವೀರಭದ್ರನಾಯಕನಿಗೆ ತಿಳಿದು, ಇವನು ಕ್ರಾಸನ್ನು ಪುನಃ ಸ್ಥಾಪಿಸಿದ್ದು ಮತ್ತು ಈ ಕ್ರಾಸನ್ನು ಸ್ಥಳೀಯ ಹಿಂದುಗಳು ಪುಷ್ಪ ಅರ್ಚನೆಯಿಂದ ಪ್ರಾರ್ಥನೆ ಮಾಡಿದ ಘಟನೆಗಳ ವಿವರಗಳು ಈ ದಿನಚರಿಯಲ್ಲಿವೆ.[೧೧] ಆಗಿಂದಾಗ್ಗೆ ಸ್ಥಳೀಯ ಕ್ರೈಸ್ತರು ನಡೆಸುತ್ತಿರುವ ಮೆರವಣಿಗೆಯ ಉತ್ಸವ, ಮಳೆ ಬರುವಂತೆ ನಡೆಸುವ ಸಾಮೂಹಿಕ ಪ್ರಾರ್ಥನೆ, ವೈಸರಾಯ ನಡೆಸುತ್ತಿರುವ ಧಾರ್ಮಿಕ ಕಟ್ಟು ಕಟ್ಟಳೆಗಳು ಇತ್ಯಾದಿಗಳ ಇಣುಕು ನೋಟಗಳನ್ನು ಈ ದಿನಚರಿ ಒಳಗೊಂಡಿದೆ.[೧೨] ವಿವಿಧ ರೀತಿಯ ಕುಶಲ ಕಲೆಗಾರರು ಬಂಗರಾಜ್ಯದಲ್ಲಿದ್ದದ್ದನ್ನು ಇವನು ತಿಳಿಸಿದ್ದಾನೆ. ಅಲ್ಲದೆ ಇವರ ಸೇವೆಯನ್ನು ಉಪಯೋಗಿಸಿಕೊಳ್ಳುವ ಮಹತ್ವವನ್ನು ಇವನು ತಿಳಿದಿದ್ದನು.

ಕೆಳದಿ ವೀರಭದ್ರನಾಯಕ ಮತ್ತು ಪೋರ್ಚುಗೀಸರ ವ್ಯಾಪಾರದ ಕುರಿತಾಗಿ ಕೆಲವು ಸಂಗತಿಗಳನ್ನು ಈ ದಿನಚರಿ ಬೆಳಕಿಗೆ ತಂದಿದೆ. ಉದಾ: ಕ್ರಿ. ಶ. ೧೬೩೪ರ ಸಮಯಲ್ಲಿ ಕೆಳದಿ ನಾಯಕ ತನ್ನ ವ್ಯಾಪಾರದ ಹಿಡಿತವನ್ನು ಸಾಧಿಸಿ ಪೋರ್ಚುಗೀಸರ ವ್ಯಾಪಾರಿಗಳು ಅವನ ನಿರ್ಣಯಗಳನ್ನು ಒಪ್ಪಿಕೊಳ್ಳುವಂತೆ ಮಾಡುವಲ್ಲಿ ಸಮರ್ಥನಾಗಿದ್ದನು.[೧೩] ಆದರೆ ಈ ದಿನಚರಿಯಲ್ಲಿ ಕೆಲವು ಕುಂದು ಕೊರತೆಗಳಿವೆ. ಮುಖ್ಯವಾಗಿ ಇದು ಅಧಿಕಾರಿಗಳ ದಾಖಲೆ (Official Document). ವೈಸರಾಯನಿಗೆ ಸರಿ ಕಂಡದ್ದನ್ನು ಮತ್ತು ಅರಸನು ತಿಳಿಸಿದ್ದನ್ನು ಇಲ್ಲಿ ದಾಖಲಿಸಲಾಗಿದ್ದು ಇದಕ್ಕೆ ವ್ಯತಿರಿಕ್ತವಾಗುವ ಸಂಗತಿಗಳನ್ನು ಹೊರತುಪಡಿಸಲಾಗಿವೆ. ಇದು ಸ್ವತಂತ್ರವಾದ ನಿಷ್ಪಕ್ಷವಾದ ದಿನಚರಿಯಲ್ಲ. ಇಷ್ಟಲ್ಲದೆ ಈ ದಿನಚರಿ ಅಪೂರ್ಣ ಮತ್ತು ಹಲವಾರು ಪುಟಗಳು ಕಾಣೆಯಾಗಿವೆ.[೧೪]

ಮಾರ್ಕ್ವಿಸ್ ಆಲೊರನಾರ ವರದಿಯು ಮುಖ್ಯವಾಗಿ ಪೋರ್ಚುಗೀಸ ಮತ್ತು ಹತ್ತಿರದ ರಾಜ್ಯಗಳ ವ್ಯಾವಹಾರಿಕ ಸಂಬಂಧಗಳನ್ನು ತಿಳಿಸುತ್ತದೆ. ಇದರ ಕೆಲವು ಅಂಶಗಳು ಡಾನವರಸ್ ಮತ್ತು ಸುರೇಂದ್ರನಾಥ ಸೇನರ ಗ್ರಂಥಗಳಲ್ಲಿವೆ.[೧೫] ಈ ದಿನಚರಿ ಆದೇಶ ಸ್ವರೂಪದ್ದಾಗಿದೆ (Instruction). ಆದರೂ ಕರಾವಳಿ ಕರ್ನಾಟಕದ ರಾಜಕೀಯ, ವಾಣಿಜ್ಯ ಮತ್ತು ಧಾರ್ಮಿಕ ಇತಿಹಾಸದ ಕೆಲವು ಸಂಗತಿಗಳು ಇದರಲ್ಲಿ ಒಳಗೊಂಡಿವೆ. ಈ ವರದಿಯಂತೆ ಕೆನರಾ ರಾಜ್ಯ (ಕೆಳದಿ ರಾಜ್ಯ)ದ ರೇವುಗಳಾದ ಹೊನ್ನಾವರ, ಭಟ್ಕಳ, ಬಸ್ರೂರು, ಮಂಗಳೂರು, ಕುಂಬಳ, ಕಾಸರಗೋಡುಗಳಲ್ಲಿ ರಭಸದಿಂದ ಮಸ್ಕತ್ ಮತ್ತು ಅರಬರೊಂದಿಗೆ ಅಕ್ಕಿ ವ್ಯಾಪಾರ ನಡೆಯುತ್ತದೆ. ಸ್ಥಳೀಯ ಮಚ್ಚಿವೆ ಗುರಾಬಿ, ಹಾಯಿ ದೋಣಿಗಳ ಉಲ್ಲೇಖವಿದೆ. ಇದರಿಂದಲೇ ಈ ರಾಜ್ಯಕ್ಕೆ ಹೆಚ್ಚಿನ ಲಾಭವಾಗಿ ರಾಜ್ಯ ಐಶ್ವರ್ಯಭರಿತವಾಗಿದೆ. ಆದರೆ ರಾಜ ಅಷ್ಟು ಬಲಿಷ್ಠನಲ್ಲ. ಈ ರಾಜನು ಪ್ರಬಲನಾಗಿರುವುದಕ್ಕಿಂತ ಹೆಚ್ಚಾಗಿ ಧನಿಕನಾಗಿರುವನು. ರಾಜ್ಯದಲ್ಲಿ ಕೋಟೆಗಳಿದ್ದರೂ, ಅವು ಬಲಿಷ್ಠವಾಗಿಲ್ಲ. ವಸೂಲಿಯಾದ ಹಣ ಯಾವುದಕ್ಕೂ ಉಪಯೋಗಿಸದೆ ಖಜಾನೆಯಲ್ಲಿ ಸಂಗ್ರಹಿಸಲ್ಪಡುತ್ತದೆ. ಹೊನ್ನಾವರ ಮತ್ತು ಮಂಗಳೂರು ರೇವುಗಳ ಮೇಲೆ ಆಗಿಂದಾಗ್ಗೆ ತುಳಾಜಿ ಆಂಗ್ರಿಯ ಆಕ್ರಮಣ ನಡೆಯುತ್ತಾ ಇರುತ್ತದೆ. ಈ ಆಕ್ರಮಣ ತಡೆಯಲು ಕೆನರಾ ಅರಸ ಒಂದು ನೌಕಾ ದಳವನ್ನು ತಯಾರು ಮಾಡುವ ಇರಾದೆಯಲ್ಲಿದ್ದಾನೆಂದು ತಿಳಿದಿದೆ.[೧೬]

ಈ ರಾಜ್ಯದ ಪಕ್ಕದಲ್ಲಿರುವ ಸುಂದಾ (ಸ್ವಾದಿ) ರಾಜ ಪ್ರಬಲನಲ್ಲ ಮತ್ತು ಹೇಡಿಯಾಗಿದ್ದಾನೆ. ಅವನ ರಾಜ್ಯದಲ್ಲಿ ಕೆಲವು ಆಯಕಟ್ಟಿನ ಸ್ಥಳಗಳಿವೆ. ಈ ರಾಜ್ಯದಲ್ಲಿ ಉತ್ತಮ ರೀತಿಯ ಕರಿಮೆಣಸು ಬೆಳೆಯುತ್ತದೆ. ಇಷ್ಟಲ್ಲದೆ ಆಹಾರ ಸಾಮಗ್ರಿಗಳು ಮರಮಟ್ಟುಗಳು ಮತ್ತು ಅಕ್ಕಿ ಹೇರಳವಾಗಿ ಕಾರವಾರ ರೇವುನಿಂದ ರಫ್ತಾಗುತ್ತದೆ. ಬ್ರಿಟಿಷರು ಇಲ್ಲಿ ತಮ್ಮ ವ್ಯಾಪಾರ ಕೇಂದ್ರ ಸ್ಥಾಪಿಸಿ, ಇಲ್ಲಿನ ವ್ಯಾಪಾರದ ಹಿಡಿತವನ್ನು ಸ್ಥಾಪಿಸುವುದರಲ್ಲಿದ್ದಾರೆ. ಕಾರವಾರದ ವ್ಯಾಪಾರದಲ್ಲಿ ಶೆಣೈ, ಪ್ರಭು, ಕಮಟಿಗಳು ಹೆಚ್ಚು ಪ್ರಾಮುಖ್ಯ ಹೊಂದಿದ್ದರು ಎಂದೂ · ಹಾಗೂ ಇವರೊಂದಿಗೆ ಪೋರ್ಚುಗೀಸರು ನಿಕಟ ವಾಣಿಜ್ಯ ಸಂಪರ್ಕವನ್ನು ಇಟ್ಟುಕೊಳ್ಳುವ ಅವಶ್ಯಕತೆಯನ್ನೂ ಈ ವರದಿಯಲ್ಲಿ ಹೇಳಿದೆ.[೧೬]

ಸ್ಥಳೀಯ ಕ್ರೈಸ್ತರು ತಮ್ಮ ವೈರಿಗಳಿಗೆ ಹೆಚ್ಚು ನಿಷ್ಠರಾಗಿದ್ದಾರೆ. ಇವರ ಚರ್ಚುಗಳು ಕರಾವಳಿಯ ರೇವುಗಳಲ್ಲಿವೆ[೧೮] ಆದರೆ ಇವರಲ್ಲಿ ಧಾರ್ಮಿಕ ಶಿಥಿಲತೆ ಆಗಿಂದಾಗ್ಗೆ ತೋರಿಬರುತ್ತದೆ.

ಆಂಗ್ಲಭಾಷೆಯ ಪಬ್ಲಿಕ್ ಡಿಪಾರ್ಟ್‌ಮೆಂಟ್‌ಡೈಯರಿ ಹಲವಾರು ಸಂಪುಟಗಳಲ್ಲಿರುವ ಅಪ್ರಕಟಿತ ದಾಖಲೆ. ಈ ಸಂಪುಟಗಳ ಕೆಲವು ಪುಟಗಳಲ್ಲಿ ಕರಾವಳಿ ಕರ್ನಾಟಕದ ರೇವುಗಳಾದ ಅಂಕೋಲಾ, ಮಿರ್ಜನ, ಕುಮಟಾ ಹೊನ್ನಾವರ, ಭಟ್ಕಳ, ಗಂಗೊಳ್ಳಿ ಬಸ್ರೂರು, ಮಂಗಳೂರು ಮಂಜೇಶ್ವರ ಕಾಸರಗೋಡು ಇತ್ಯಾದಿ ರೇವುಗಳ ಸ್ವರೂಪ ತಿಳಿಸಿದೆ; ಅಲ್ಲಿರುವ ಪ್ರಮುಖ ವ್ಯಾಪಾರಿಗಳು ಮತ್ತು ಅವರು ನಡೆಸುತ್ತಿರುವ ವ್ಯಾಪಾರ ಕ್ರಮಗಳು, ರೂಢಿಯಲ್ಲಿರುವ ನಾಣ್ಯ ಪದ್ಧತಿಗಳ ವಿವರಗಳಿವೆ. ಆದರೆ ಮರಾಠರ ಆಕ್ರಮಣದಿಂದ ವಾಣಿಜ್ಯ ಅಸ್ತವ್ಯಸ್ತವಾದುದನ್ನು ಈ ಡೈಯರಿ ತಿಳಿಸುತ್ತದೆ. ಇಲ್ಲಿನ ಕೆಲವು ಕೋಟೆಗಳ ಮಾಹಿತಿ, ಮತ್ತು ಇಲ್ಲಿನ ಜನರ ಜಲವ್ಯಾಪಾರಗಳ ಕ್ರಮಗಳ ವಿವರಗಳನ್ನು ಈ ದಿನಚರಿಯ ಪುಟಗಳಲ್ಲಿ ನೋಡಬಹುದು.

ಉಪಸಂಹಾರ

i) **ದುಆರ್ತೆ ಮೆನೆಜಿಯಸ್‌ನ ದಿನಚರಿಯು ಪೋರ್ಚುಗೀಸರ ಕರಾವಳಿಯ ವ್ಯಾಪಾರ, ಇಲ್ಲಿನ ಸಮಾಜಿಕ ಮತ್ತು ಆರ್ಥಿಕ ಸ್ಥಿತಿ, ಕೋಟೆಗಳ ರಚನೆ, ಕ್ರೈಸ್ತ ಚರ್ಚುಗಳ ಮಾಹಿತಿಯನ್ನು ತಿಳಿಸುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಈ ವರದಿ ಏಕಪಕ್ಷೀಯ ಅಭಿಪ್ರಾಯ ತಿಳಿಸುತ್ತದೆ.**

ii) **ಅಪೂರ್ವ ಮತ್ತು ಅಧಿಕಾರ ದಾಖಲೆಯಾದ ಅಸ್ಸಾರೆ ದಿನಚರಿಯು ಕರಾವಳಿಯ ರಾಜಕೀಯ ಮತ್ತು ವಾಣಿಜ್ಯ ಇತಿಹಾಸ ತಿಳಿಸುವುದಲ್ಲದೆ ಗಂಗೊಳ್ಳಿಯ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. ಕ್ರೈಸ್ತಮತದ ಇತಿಹಾಸ ತಿಳಿದುಕೊಳ್ಳುವಲ್ಲಿ ಈ ದಿನಚರಿಯ ಅಧ್ಯಯನವು ಬಹಳ ಉಪಯುಕ್ತವಾಗಿದೆ.**

iii) **ಹದಿನೆಂಟನೆಯ ಶತಮಾನದ ಮಧ್ಯಾವಧಿಯ ಕೆಲವು ವಾಣಿಜ್ಯ ಮತ್ತು ರಾಜಕೀಯ ಇತಿಹಾಸದ ಅಧ್ಯಯನದ ದೃಷ್ಟಿಯಲ್ಲಿ ಆಲೋರನಾನ ದಿನಚರಿಗೆ ಪ್ರಾಮುಖ್ಯ ಇದೆ. ಆದರೆ ಇದು ಅಣತಿಯುಕ್ತವಾಗಿದೆ.**

iv) **ಆಂಗ್ಲಭಾಷೆಯ ಪಬ್ಲಿಕ್ ಡಿಪಾರ್ಟ್ ಮೆಂಟ್ ಡೈಯರಿ ಬ್ರಿಟಿಷರ ಹಿತಾಸಕ್ತಿಯ ದೃಷ್ಟಿಯಿಂದ ಕರಾವಳಿಯ ವಾಣಿಜ್ಯ ಇತಿಹಾಸ ತಿಳಿಸುತ್ತದೆ.**

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ನಾಗೇಗೌಡ: **ಪ್ರವಾಸಿ ಕಂಡ ಇಂಡಿಯಾ**, ಭಾಗ ೨, ಮೈಸೂರು, ಪುಟ. ೪೭೫-೪೮೫

೨. ಅದೇ ಗ್ರಂಥ, ಪು.೪೭೫-೪೭೭ ಸ್ಥಳೀಯ ದಾಖಲೆಗಳು. ಗೇಣಿ ಕೊಟ್ಟ ಭೂಮಿಯನ್ನು ಭೂ ಮಾಲೀಕರು ಹಿಂದಕ್ಕೆ ಪಡೆದದ್ದನ್ನು ಎಲ್ಲೂ ಉಲ್ಲೇಖಿಸಲಿಲ್ಲ. ಒಂದು ವೇಳೆ ಗೇಣಿಕೊಡಲು ಒಕ್ಕಲಿಗರು ಅಸಮರ್ಥರಾದರೆ, ಅವರಿಗೆ ಭೂ ಮಾಲೀಕರು ಗೇಣಿಯನ್ನು ಪುನಃ ನಿರ್ಧರಿಸುತ್ತಿದ್ದರು ಅಥವಾ ಗೇಣಿಯನ್ನು ಮಾಫಿ ಮಾಡುತ್ತಿದ್ದರು. ನೋಡಿ Buchanan - A Journey from Madras, through Mysore Canar Malabar (Madras 1870) II ಪು. 225-6, 240, 2199-326.

3. ಅದೇ, p. 180. ಆದರೆ ಮಿನೆಜಿಯಸ್ ಕೆಳ ಜಾತಿಗಳ ಆಸ್ತಿಯ ಹಕ್ಕುಗಳನ್ನು ಗಮನಿಸಲಿಲ್ಲ.

೪. ಫಿಲಿಪ್ II, 12th Jan 1591ರಲ್ಲಿ ಬರೆದ ಪತ್ರ. Heras- Aravidu dynasty p.427.

೫. ಕ್ರಿ.ಶ. ೧೫೬೮ರಲ್ಲಿ ಬಂಗರಾಜ ವೀರನರಸಿಂಹ ಲಕ್ಷ್ಮಪ್ಪರಸ ಬಂಗ III ಉಳ್ಳಾಳ ಚೌಟರಾಣಿ ಅಬ್ಬಕ್ಕ ದೇವಿಯ ಆಕ್ರಮಣ ಭೀತಿಯನ್ನು ಎದುರಿಸಲು ಪೋರ್ಚುಗೀಸ್ ವೈಸರಾಯಿಯೊಡನೆ ಒಪ್ಪಂದ ಮಾಡಿಕೊಂಡು ಪೋರ್ಚುಗೀಸರಿಗೆ ಕೋಟೆ ಕಟ್ಟಲು ಮಂಗಳೂರಿನಲ್ಲಿ ಸ್ಥಳ ನೀಡಿದ್ದನು. ನೋಡಿ: Darven - The Portugues in India Vol I. p. 542-548. B.S. Sastry.: The Portugues in Kanara ಅಪ್ರಕಟಿತ Ph.D ಪ್ರಬಂಧ ಬೊಂಬಾಯಿ ವಿಶ್ವವಿದ್ಯಾಲಯ 1969 p.92. 93

೬. ನಾಗೇಗೌಡ: ಅದೇ ಗ್ರಂಥ ಮತ್ತು ಪು. ೪೮೫
ಅದೇ - ಈ ಕೋಟೆಗಳಲ್ಲಿ, ಬಸ್ರೂರು ಕೋಟೆಯ ರಕ್ಷಣೆಗೆ ಹೆಚ್ಚು ಮಹತ್ವ ನೀಡಿದ್ದಾನೆ. ಏಕೆಂದರೆ ಇಲ್ಲಿಂದ ಹೆಚ್ಚು ಪ್ರಮಾಣದಲ್ಲಿ ಕರಿಮೆಣಸು ಮತ್ತು ಅಕ್ಕಿ ಗೋವಾಕ್ಕೆ ರಫ್ತಾಗುತ್ತದೆ. ಹೆಚ್ಚಿನ ವಿವರಕ್ಕೆ ನೋಡಿ ಹೆರಾಸ್: ಅದೇ ಗ್ರಂಥ, ಪು. ೪, ೪೨೯-೩೧

೯. Anthony disney On attempting to write an early Modern Biography my incounter with the life of Dom miguit DE Nczohana. Linerarls (1588-1656 India (Bombay Vol 29 No.2 September 1992) pp. 94, 10HO2

೧೦. B.S Shastry, Studies in India Portugues History (Bangalore 1981), p.32

೧೧. ಅದೇ ಗ್ರಂಥ, ಪು. ೨೩೦ ನೋಡಿ- ಇದೇ ಗ್ರಂಥಕರ್ತರ ಇನ್ನೊಂದು ಗ್ರಂಥ **ಕೆಳದಿಯ ಅರಸರೂ ಹಾಗೂ ಪೋರ್ಚುಗೀಸರು** (ಧಾರವಾಡ ೧೯೭೦), ಪು. ೫೧-೬೬

೧೨. **Indica**, p.103

೧೩. ಬಿ. ಎಸ್. ಶಾಸ್ತ್ರಿ, **ಕೆಳದಿ ಅರಸರೂ ಹಾಗೂ ಪೋರ್ಚುಗೀಸರು**, p.66-67

೧೪. **Indica** p.101, ಶಾಸ್ತ್ರಿ: Studies p.32

೧೫. **The Portugues in India** II, ಪುಟ. 423-24 . **Studies in Indian History** (Delhi 1993) p, 192-201

೧೬. ಬಿ.ಎಸ್. ಶಾಸ್ತ್ರಿ: **ಕೆಳದಿ ಅರಸರೂ ಹಾಗೂ ಪೋರ್ಚುಗೀಸರು**, p. 167-168

೧೭. S.N. Sen: ಅದೇ ಗ್ರಂಥ. 198-201, 228-2P ಇದನು ಪೆಲಿಟನ್ ಎಂಬ ಆಂಗ್ಲ ಪ್ರವಾಸಿ ೧೭೨೦ರಲ್ಲಿ ತಿಳಿಸಿದ್ದಾನೆ.

೧೮. Alexander Hamilton: **A New Account of the East Indies** (1930) I, p. 159

ಡಾ|| ಕೋ. ವಸಂತಲಕ್ಷ್ಮಿ*

ಹಾಸನದ ಸಿದ್ಧೇಶ್ವರ ಶಿಲ್ಪ - ಮೈಲಾರ ಶಿಲ್ಪ

ಹಾಸನದ ಪ್ರಾಚೀನತೆಯನ್ನು ಗಮನಿಸಿದರೆ, ಹಾಸನವನ್ನು ಸು. ೧೧ನೇ ಶತಮಾನದಲ್ಲಿ ಬುಕ್ಕಣ್ಣನಾಯಕ ಎಂಬ ಚೋಳ ಅಧಿಕಾರಿಯು ನಿರ್ಮಿಸುತ್ತಾನೆ.[೧] 'ಹಾಸನದಮ್ಮ'ನಿಂದ 'ಹಾಸನ' ಎಂಬ ಹೆಸರು ಬಂದಿದ್ದು- ೧೨ನೇ ಶತಮಾನ ಎಂದಿದೆ. ಹಾಸನದಲ್ಲಿ ದೊರೆತಿರುವ ಶಾಸನಗಳು ೧೫ನೇ ಶತಮಾನದ ನಂತರದ್ದಾಗಿದ್ದು, ಪ್ರಾಚೀನ ಶಾಸನಗಳಾವುವೂ ಲಭ್ಯವಿರುವುದಿಲ್ಲ. ಆದರೆ ಹಾಸನದ ಊರನ್ನು ಮತ್ತು ಅದರ ಸುತ್ತಮುತ್ತಲ ಪ್ರದೇಶವನ್ನು ಒಳಹೊಕ್ಕು ಗಮನಿಸಿದರೆ, ಸು. ೮ನೇ ಶತಮಾನ ದಿಂದ ೧೪ನೇ ಶತಮಾನದ ವರೆಗಿದ್ದ ಹಲವಾರು ಅವಶೇಷಗಳು ಗೋಚರಿಸುತ್ತವೆ. ಈ ಹಿನ್ನೆಲೆಯಲ್ಲಿ ಸಿದ್ಧೇಶ್ವರ ದೇವಾಲಯವನ್ನು, ಅಲ್ಲಿಯ ಶಿಲ್ಪವನ್ನು ಇಲ್ಲಿ ಗಮನಿಸಲಾಗಿದೆ.

ಸಿದ್ಧೇಶ್ವರದೇವಾಲಯವು ಪ್ರಸಿದ್ಧವಾದ ಹಾಸನಾಂಬಾ ದೇವಾಲಯದ ಪ್ರಾಕಾರದಲ್ಲಿದೆ. ಸಾಮಾನ್ಯವಾಗಿ ಸಿದ್ಧೇಶ್ವರ ಎಂದು ಕರೆಯಲಾಗುತ್ತಿರುವ ದೇವಾಲಯಗಳ ಗರ್ಭಗೃಹದಲ್ಲಿ ಶಿವಲಿಂಗವನ್ನು ಕಾಣುತ್ತೇವೆ. ಆದರೆ ಹಾಸನದ ಈ ದೇವಾಲಯುದ ಗರ್ಭಗೃಹದಲ್ಲಿ ಶಿವಲಿಂಗಕ್ಕೆ ಬದಲಾಗಿ ವಿಶೇಷವಾದ ಭೈರವನ (?) ಶಿಲ್ಪವೊಂದು ಕಾಣಬರುತ್ತಿದೆ. ಇದು ಹಿಂದೆ ಹಾಸನಾಂಬಾ ದೇವಿಯ ಗುಡಿಯ ಮುಂಭಾಗದಲ್ಲಿ ಇದ್ದಿರ ಬಹುದಾದ ಶಿಲ್ಪವಾಗಿದ್ದು, ಇದಕ್ಕೆ ಹೊಯ್ಸಳರ ಕಾಲದಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯದ ನವರಂಗದ ಕಂಬಗಳು ಮತ್ತು ವಿತಾನ, ಅಂತರಾಳದ ವಿತಾನಗಳು ಹೊಯ್ಸಳರ ಶೈಲಿಯಲ್ಲಿವೆ. ಹೀಗೆ ಸಿದ್ಧೇಶ್ವರ ದೇವಾಲಯವು ಸು.೧೨ನೇ ಶತಮಾನದ ಒಂದು ರಚನೆಯಾಗಿದೆ. ಈ ದೇವಾಲಯದಲ್ಲಿ ಮಾಸಿಹೋಗಿರುವ ಬಣ್ಣದ ಚಿತ್ರಗಳು ಮತ್ತು ಮಡಿವಾಳ ಮಾಚಯ್ಯ ಮತ್ತು ಕುಂಬಾರ ಕೂಚಯ್ಯನ ಪ್ರತಿಮೆಗಳೂ ಇವೆ. ಇದು ವೆಂಕಟಪ್ಪನಾಯಕ ಮತ್ತು ಕೃಷ್ಣಪ್ಪನಾಯಕರ ಕಾಲದಲ್ಲಿ ಜೀರ್ಣೋದ್ಧಾರವಾಯಿತೆಂದು ತಿಳಿದು ಬರುತ್ತದೆ.[೨]

ಹಾಸನ ಜಿಲ್ಲೆಯಲ್ಲಿ ಹಲವೆಡೆ ಸಿದ್ಧೇಶ್ವರ ದೇವಾಲಯ ಗಳಿವೆ. ಸಾಮಾನ್ಯವಾಗಿ ಕಾಳಾಮುಖ ಪಂಥಕ್ಕೆ ಸೇರಿದ ನಾಥಪಂಥದವರು, ಸಿದ್ಧರು ಪೂಜಿಸುತ್ತಿದ್ದ ಈಶ್ವರನನ್ನು 'ಸಿದ್ಧರ ಈಶ್ವರ'ಸಿದ್ಧೇಶ್ವರ ಎಂದು ಕರೆಯಲಾಗಿದೆ. ಈ ಪಂಥದವರು ವಿಶೇಷವಾಗಿ ಭೈರವನನ್ನು ಆರಾಧಿಸುತ್ತಿದ್ದರು. ಇವರ ದೇವಾಲಯಗಳಲ್ಲಿ ಮುಂಭಾಗದಲ್ಲಿ ಬಲಿಪೀಠದಂತಹ ಒಂದು ಪೀಠವಿದ್ದು, ಪೀಠದ ನಡುವೆ ಪಾದುಕೆಗಳಿರುತ್ತವೆ. ಪಾದುಕೆಗಳನ್ನು



ಹಾಸನದ ಸಿದ್ಧೇಶ್ವರ-ಮೈಲಾರ ಶಿಲ್ಪ

ನಾಗಬಂಧವು ಸುತ್ತುವರಿದಿದ್ದು, ನಾಗಫಣೆಯು ಮಕುಟ ದಂತಿರುತ್ತದೆ. ಕೆಲವೆಡೆ ಪಾದುಕೆಗಳ ಮುಂದೆ, ಪಕ್ಕದಲ್ಲಿ ರುಂಡ-ಮುಂಡಗಳ ಶಿಲ್ಪಗಳನ್ನು ಕಾಣುತ್ತೇವೆ. ಇಂತಹ ಪೀಠವೊಂದನ್ನು ಈ ದೇವಾಲಯದ ಪರಿಸರದಲ್ಲೂ ಕಾಣುತ್ತೇವೆ.

ಪೂರ್ವಾಭಿಮುಖವಾದ ಸಿದ್ಧೇಶ್ವರ ದೇವಾಲಯದ ಗರ್ಭಗೃಹದಲ್ಲಿ (ಸು. ೩' x ೫') ಅಗಲವಾದ ಬಂಡೆಯೊಂದಿದ್ದು,

---

* ನಂ. ೧೬೪೩, ೧೭ನೇ ಮುಖ್ಯಸ್ತೆ, ಬನಶಂಕರಿ ೧ನೇ ಹಂತ, ಬೆಂಗಳೂರು - ೫೬೦ ೦೫೦

ಇದರಲ್ಲಿ ಸು.೨/೩ರಷ್ಟು ಅಗಲವಾದ ಆಯತಾಕಾರವಾದ ಸ್ಥಳದಲ್ಲಿ ಕೆತ್ತಲಾಗಿರುವ ಉಬ್ಬು ಶಿಲ್ಪವಿದೆ. ಶಿಲ್ಪದ ಮೇಲ್ಭಾಗದಲ್ಲಿ ಸ್ವಲ್ಪ ಜಾಗವನ್ನು ಅಂಚಿನಂತೆ ಬಿಡಲಾಗಿದೆ.

ಶಿಲ್ಪದ ವಿವರಗಳನ್ನು ಗಮನಿಸಿದರೆ, ಪ್ರಧಾನ ಶಿಲ್ಪವಾದ ಸಿದ್ಧೇಶ್ವರ ಶಿವನನ್ನು ಶಿಲ್ಪದ ಮಧ್ಯದಲ್ಲಿ ದೊಡ್ಡದಾಗಿ ಬಿಡಿಸಲಾಗಿದೆ. ಅವನ ಎರಡೂ ಬದಿಯಲ್ಲಿ ಪರಿವಾರದವರನ್ನು, ಸ್ವಲ್ಪ ಕೆಳಗೆ ಪಕ್ಕದಲ್ಲಿ ಅವನ ವಾಹನಗಳಾದ ನಾಯಿ ಮತ್ತು ಕುದುರೆಯುನ್ನು ಬಿಡಿಸಿದೆ. ಶಿವನು ಪೀಠದ ಮೇಲೆ ಲೀಲಾಮಗ್ನನಾಗಿ ದರ್ಪದಿಂದ ಕುಳಿತಿದ್ದಾನೆ. ಶಿವನ ಅಗಲವಾದ ಜಟಾಭಾರ ಸುತ್ತಲೂ ಹರಡಿದೆ. ಕಿವಿಯಲ್ಲಿ ಅಗಲವಾದ ಕುಂಡಲಗಳಿವೆ. ಕೊರಳಿನಲ್ಲಿ ಒಂದು ಕಂಠಿಕೆ, ಒಂದು (ರುದ್ರಾಕ್ಷಿಯ?) ಪದಕದ ಹಾರಗಳಿವೆ. ದ್ವಿಭುಜ ಮೂರ್ತಿಯಾದ ಶಿವನು ಬಲಗೈಯಲ್ಲಿ ಪಾನಪಾತ್ರೆಯನ್ನು ಹಿಡಿದಿದ್ದು, ಅದನ್ನು ತುಂಬಿಸಲೆಂಬಂತೆ ಮುಂಚಾಚಿದ್ದಾನೆ. ಎಡಗೈ ತೊಡೆಯನ್ನಾಧರಿಸಿ ಚಾಚಿರುವ ಗಜಹಸ್ತವಾಗಿದೆ. ನಗ್ನ ದೇಹಿಯಾದ ಶಿವನಿಗೆ ಪಟ್ಟಿಯಂತಹ ಕಟಿಸೂತ್ರವಿದೆ. ಶಿವನು ತೋಳುಗಳಲ್ಲಿ ರುಂಡವುಳ್ಳ ತೋಳ್ಬಂದಿಯನ್ನೂ, ಕೈಗಳಲ್ಲಿ ಎರಡೆರಡು ಕಡಗಗಳನ್ನೂ ಧರಿಸಿದ್ದಾನೆ. ಬೇರಾವ ಆಭರಣಗಳೂ ಶಿಲ್ಪದಲ್ಲಿ ಕಾಣಬರುತ್ತಿಲ್ಲ. ಶಿವನ ಬಲಪಾದವು ಅರ್ಧ ಪದ್ಮಾಸನದಂತೆ ಮಡಿಚಿದ್ದು, ಎಡಗಾಲು ಕೆಳಚಾಚಿದೆ. ಶಿವನ ಬಲಭಾಗದಲ್ಲಿ ಶಿವನ ಕಡೆಗೆ ಮುಖಮಾಡಿದಂತೆ ನಾಯಿಯೊಂದನ್ನು ಬಿಡಿಸಿದೆ. ಇದರ ಮೇಲ್ಭಾಗದಲ್ಲಿ ಕುಬ್ಜ ಸ್ತ್ರೀಯೊಬ್ಬಳು ಶಿವನ ಪಾನಪಾತ್ರೆಯನ್ನು ತುಂಬಲು ಹೂಜಿಯೊಂದನ್ನು ಬಗ್ಗಿಸಿ ಹಿಡಿದುಕೊಂಡು ಬಾಗಿ ನಿಂತಿದ್ದಾಳೆ. ಅಗಲವಾದ ಮುಖವುಳ್ಳ ಈ ಸ್ತ್ರೀಯ ಬಿಂಬದಲ್ಲಿ ಹೆಚ್ಚಿನ ವಿಶೇಷಗಳಾವುವೂ ಕಾಣಬರುತ್ತಿಲ್ಲ. ಶಿವ ಮತ್ತು ಸ್ತ್ರೀಯ ನಡುವಿನ ಭಾಗದಲ್ಲಿ ಮತ್ತೊಂದು ಪುರುಷನ ಶಿಲ್ಪವನ್ನು ಬಿಡಿಸಿದೆ. ಇವನು ಕೋಲನ್ನು (ಶೂಲವನ್ನು?) ಎರಡೂ ಭುಜಗಳನ್ನಾಧರಿಸಿ ಹಿಡಿದಿದ್ದು, ಅದರಿಂದ ಪ್ರಾಣಿಯ ದೇಹವೊಂದು ನೇತಾಡುತ್ತಿದೆ. ನೀಳಕಾಯವುಳ್ಳ ಸಾಮಾನ್ಯ ಮನುಷ್ಯನಂತಿರುವ ಈ ಶಿಲ್ಪವೂ ಕಂಕಾಳವನ್ನು ಹಿಡಿದಿರುವ ಕಿರಾತನಂತೆಯೂ, ಕುರುಬನಂತೆಯೂ (-ಗೊರವನಂತೆ) ಕಾಣಬರುತ್ತಿದೆ. ಈ ಶಿಲ್ಪದ ಮುಖವನ್ನು ಸ್ಪಷ್ಟವಾಗಿ ಕೆತ್ತಿಲ್ಲ. ಇವನ ಹಿಂಭಾಗದಲ್ಲಿ ಅರಣ್ಯವನ್ನು ಸೂಚಿಸಲೆಂಬಂತೆ ಮರವನ್ನು ಕೆತ್ತಲಾಗಿದೆ. ಶಿವನ ಎಡಭಾಗದಲ್ಲಿ ಇವನಂತೆಯೇ (ಶಿವನಂತೆಯೇ) ನೀಳಕಾಯವುಳ್ಳ ನಗ್ನ ಸ್ತ್ರೀಯೊಬ್ಬಳನ್ನು ಶಿವನಿಗೆ ಸಮೀಪವಾಗಿರುವಂತೆ ಬಿಡಿಸಲಾಗಿದೆ. ಇವಳ ಮುಖವು ಸ್ಪಷ್ಟವಾಗಿದ್ದು, ಮುಡಿಕಟ್ಟಿದೆ. ಅಗಲವಾದ ವೋಲೆಗಳನ್ನು ಧರಿಸಿದ್ದಾಳೆ. ಕೊರಳಿನಲ್ಲಿ ಕಂಠಿಕೆಯೂ ಕೈಗಳಲ್ಲಿ ಬಾಹುಪೂರ ಮತ್ತು ಕಂಕಣಗಳಿವೆ; ಕಟಿವಸ್ತ್ರವನ್ನುಳಿದು, ವಿಶೇಷವಾಗಿ ಬೇರಾವ ಆಭರಣಗಳಾಗಲೀ, ಉಡಿಗೆಯಾಗಲೀ ಕಾಣಬರುತ್ತಿಲ್ಲ. ಇವಳು ಬಲಗೈಯಲ್ಲಿ ಹೂವೊಂದನ್ನು ಹಿಡಿದಿದ್ದು, ಎಡಗೈಯನ್ನು ಶಿವನಂತೆಯೇ ಕೆಳಚಾಚಿದ್ದಾಳೆ. ಎಡಗೈಯಲ್ಲಿರುವ ವಸ್ತು ಸ್ಪಷ್ಟವಾಗಿಲ್ಲ. ಇದು ದೇವಿಯ ಶಿಲ್ಪವಾಗಿದೆ. ಈ ಕೈಗೆ ಸಮೀಪವಾಗಿ, ಬಲಭಾಗದಲ್ಲಿರುವಂತೆಯೇ, ಸ್ತ್ರೀಯೊಬ್ಬಳು ಪಾನಪಾತ್ರೆಯನ್ನು ಹಿಡಿದು ನಿಂತಿದ್ದಾಳೆ. ಇವಳ ಪಕ್ಕದಲ್ಲಿಯೇ ಶಿವನೆಡೆಗೆ ಮುಖ ಮಾಡಿರುವಂತೆ ಕುದುರೆಯೊಂದನ್ನು ಬಿಡಿಸಿದೆ. ಈ ಸಪರಿವಾರಯುಕ್ತ ಶಿವನ ಶಿಲ್ಪದ ಮೇಲ್ಭಾಗದಲ್ಲಿ ಇಬ್ಬರು ಚಾಮರ ಧಾರಿಣಿಯರನ್ನು ಬಿಡಿಸಲಾಗಿದೆ. ಇಷ್ಟೊಂದು ವಿವರಗಳನ್ನು ಒಂದೇ ಶಿಲ್ಪದಲ್ಲಿ ತುಂಬಿರುವ ಶಿಲ್ಪಿಯು ಕಲ್ಪಿಸಿರುವ ಶಿವನ ರೂಪವನ್ನು ಸ್ಪಷ್ಟವಾಗಿ ಗುರುತಿಸಲಾಗುತ್ತಿಲ್ಲ. ಜನರು ಈ ಶಿಲ್ಪವನ್ನು 'ಸಿದ್ಧೇಶ್ವರ' ಎಂಬ ಹೆಸರಿನಿಂದ ಪೂಜಿಸುತ್ತಿದ್ದಾರೆ. ಇದು ಗಂಗರಕಾಲದ ಶಿಲ್ಪದ ಲಕ್ಷಣಗಳನ್ನು ಹೊಂದಿದ್ದು, ಸು.೮-೯ನೇ ಶತಮಾನದಲ್ಲಿ ರೂಪಿಸಿರಬಹುದಾದ ಅಪರೂಪದ ಶಿಲ್ಪವಾಗಿದೆ. ಈ ಸಿದ್ಧೇಶ್ವರ ಶಿಲ್ಪವನ್ನು ಮೂರ್ತಿಶಿಲ್ಪ ಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಿ, ಈ ಶಿಲ್ಪವು ಯಾವುದೆಂದು ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಪ್ರಾಚೀನ ಕಾಲದ ಶಿವನ ಶಿಲ್ಪಗಳನ್ನು ಗಮನಿಸುವಾಗ, ಗುಡಿಮಲ್ಲಂನ ಶಿವಲಿಂಗವು ಮೊದಲಿಗೆ ನೆನಪಾಗುತ್ತದೆ. ಈ ಲಿಂಗದಲ್ಲಿರುವ ಪುರುಷಾಕಾರವು, ಧರಿಸಿರುವ ಆಭರಣಗಳು ಸ್ಪಷ್ಟವಾಗಿವೆ, ಇವು, ವೈದಿಕ ಕಾಲದ ರುದ್ರನನ್ನು ಶಿವನೆಂದು ಭಾವಿಸಿ ಕಲ್ಪಿಸಿರುವ ಬಿಂಬವಾಗಿದೆ. ಇದರಂತೆ, ಶಿವನನ್ನು ಮಾನವಾಕಾರದಲ್ಲಿಯೂ ರೂಪಿಸಲಾಗಿರುವ ಮತ್ತೊಂದು ಶಿಲ್ಪವನ್ನು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಭಿತ್ತಿ ವೊಂದರಲ್ಲಿ ಕಾಣಬಹುದು. ಇದರಿಂದ ಸಿದ್ಧೇಶ್ವರ ಶಿಲ್ಪವು ಶಿವನ ಒಂದು ರೂಪವೆಂದು ಭಾವಿಸಬಹುದಾಗಿದೆ.

ಶಿವಪುರಾಣವು ಶಿವನ ಭೈರವರೂಪವನ್ನು ಶಂಕರನ ಪೂರ್ಣರೂಪವೆಂದು ತಿಳಿಸುತ್ತದೆ. ಈ ದೇವನು ಸಂಕಟ ಹರಣನು, ಭುಕ್ತಿ ಮುಕ್ತಿದಾಯಕನೂ ಆಗಿದ್ದು, ಆಪದುದ್ಧಾರಕ ನೆನಿಸಿದ್ದಾನೆ. ವಿಶೇಷವಾಗಿ ಭೂತಪ್ರೇತಗಳ ಉಚ್ಚಾಟನೆಗಾಗಿ ಇವನನ್ನು ಪೂಜಿಸುತ್ತಾರೆ. ಭೈರವನು ಭರಣನೂ, ಭೀಷಣನೂ, ಯಮ ಸ್ವರೂಪಿಯೂ ಹೌದು. ಶಿವನು ಬ್ರಹ್ಮಕಪಾಲವನ್ನು ಧರಿಸಿ ಭೂತಗಣದೊಂದಿಗೆ ಕಾಶಿಯಲ್ಲಿ ಭಿಕ್ಷೆ ಬೇಡುತ್ತಾನೆ. ಆ ಸಮಯದಲ್ಲಿ ಭಿಕ್ಷೆ ನೀಡಲು ಬಂದ ಮುನಿಪತ್ನಿಯರು ಕಾಮ ಪೀಡಿತರಾಗಿ ಇವನ ಸುತ್ತ ನೆರೆದಿರುತ್ತಾರೆ. ಇಂತಹ ರೂಪವನ್ನು ಹೊಂದಿದ ಶಿವನನ್ನು ಭೈರವನೆಂದು ಕರೆಯಲಾಗಿದೆ. ಈ ಸಂದರ್ಭದಲ್ಲಿಯೇ ವೈಕುಂಠಕ್ಕೆ ಹೋದ ಶಿವನು ತನ್ನನ್ನು ತಡೆದ ವಿಶ್ವಕ್ಸೇನನ್ನು ಸಂಹರಿಸುತ್ತಾನೆ. ಇದಕ್ಕಾಗಿ ವಿಷ್ಣುವಿನ ಶಾಪವನ್ನು ಪಡೆದು, ಅದರಂತೆ ವಿಶ್ವಕ್ಸೇನನ ದೇಹವನ್ನು ಹೊತ್ತಿರುವ ಕಂಕಾಳವನ್ನು ಧರಿಸಿ, ರಕ್ತವನ್ನೇ ಆಹಾರವಾಗಿ ಸೇವಿಸುತ್ತಾ ಸುತ್ತುವ

ಶಿವನ ರೂಪವನ್ನು 'ಕಂಕಾಳಧರ' ಎಂದು ಕರೆಯಲಾಗಿದೆ. ಇವೆರಡೂ ಶಿವನ ಘೋರರೂಪಗಳಾಗಿವೆ. ಕಾಶಿಯ ಸ್ಥಳದ ಮಹತ್ವದಿಂದ ಶಾಪವಿಮೋಚನೆಯಾಗಿ ಪರಿಶುದ್ಧನಾದ ಭೈರವನು ಜಗದ್ರಕ್ಷಕನಾಗುತ್ತಾನೆ.[೨]

ಸು. ೭ನೇ ಶತಮಾನದಿಂದಲೂ ಕರ್ನಾಟಕದಲ್ಲಿ ಕೌಳ ಮತ್ತು ಕಾಪಾಲಿಕ ಮತಗಳು ಪ್ರಚಲಿತದಲ್ಲಿದ್ದವು. ಶಿವನ ಕಾಪಾಲಿಕ ರೂಪವನ್ನು ವೈದಿಕ ರುದ್ರನೊಡನೆ ಹೋಲಿಸಿ ಹೇಳಲಾಗುತ್ತದೆ. ಈ ಭೈರವನನ್ನು ವಿಶೇಷವಾಗಿ ಕೌಳರೂ, ಕಾಪಾಲಿಕರೂ ಪೂಜಿಸುತ್ತಿದ್ದು, ಇವರು ತಾಂತ್ರಿಕ ಪದ್ಧತಿಯ ಆಚಾರಗಳನ್ನು ಅನುಸರಿಸುತ್ತಿದ್ದರು. ಮಹಾಭಾರತದಲ್ಲಿ, ಶಿವನು ಹಸ್ತದಲ್ಲಿ ಕಪಾಲವನ್ನು ಹಿಡಿದು ರಾಕ್ಷಸ ಬೇತಾಳಗಳೊಡನೆ ಸ್ಮಶಾನದಲ್ಲಿ ವಿಹರಿಸುತ್ತಿದ್ದನೆಂದು ಉಲ್ಲೇಖಿಸಲಾಗಿದೆ.[೩] ಇದರಂತೆ, ಪುಷ್ಪದತ್ತನ 'ಮಹಾಪುರಾಣ'ದಲ್ಲೂ ಹಲವೆಡೆ ಕಾಪಾಲಿಕರ ಹಾಗೂ ಕೌಲಾಚಾರ್ಯರ ಉಲ್ಲೇಖಗಳಿದ್ದು, ಇವರು ಮದ್ಯ ಸೇವಕರಾಗಿದ್ದರೆಂದು ತಿಳಿಸಲಾಗಿದೆ.[೪] ಆನಂದಗಿರಿಯ 'ಶಂಕರ ವಿಜಯ'ದಲ್ಲೂ, ಕೈಯಲ್ಲಿ ಕಪಾಲ, ಕಮಂಡಲಗಳನ್ನು ಧರಿಸಿದ್ದು, ಮದ್ಯ ಮಾಂಸಗಳನ್ನು ಸೇವಿಸುತ್ತಾ ಶಿವನ ಭೈರವರೂಪವನ್ನು ಉಪಾಸಿಸುತ್ತಿದ್ದ ಜಟಾಧಾರಿಗಳಾದ ಕಾಪಾಲಿಕರ ಬಗ್ಗೆ ತಿಳಿಯುತ್ತದೆ.[೫] ಶಂಕರಾಚಾರ್ಯರು ಕಾಲಭೈರವಾಷ್ಟಕದಲ್ಲಿ **'ಅಷ್ಟಸಿದ್ಧಿದಾಯಕಂ ಕಪಾಲ ಮಾಲಿಕಾಧರಂ ಕಾಶಿಕಾಪುರಾಧಿನಾಥ ಕಾಲಭೈರವಂ ಭಜೇ'** ಎಂದಿದ್ದಾರೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಮೇಲಿನ ಶಿಲ್ಪವು ಭೈರವನ ಶಿಲ್ಪದಂತೆ ತೋರುತ್ತದೆ.

ವಿಷ್ಣುಧರ್ಮೋತ್ತರ ಪುರಾಣವು, ಭೈರವನ ಲಕ್ಷಣಗಳನ್ನು ತಿಳಿಸುತ್ತಾ, ಲಂಬೋದರವು, ಕೋರೆಯ ಹಲ್ಲುಗಳು, ಹಳದಿಯ ದುಂಡಾದ ಕಣ್ಣುಗಳು, ಮೂಗಿನ ಅಗಲವಾದ ಹೊಳ್ಳೆಗಳನ್ನು ಹೊಂದಿರುವನೆಂದು ಹೇಳಿದೆ. ರುಂಡಮಾಲೆ, ನಾಗಾಭರಣ ಗಳಿಂದಲೂ ಅಲಂಕೃತನಾದ ಭೈರವನು ವಿವಿಧ ಆಭರಣಗಳನ್ನು ಧರಿಸಿರುತ್ತಾನೆ. ಕಾಳಮೇಘವರ್ಣದ, ಗಜಚರ್ಮಧಾರಿಯಾದ ಭೈರವನು ಕೈಗಳಲ್ಲಿ ವಿವಿಧ ಆಯುಧಗಳನ್ನು ಧರಿಸುತ್ತಾನೆ' ಎಂದು ತಿಳಿಸಿದೆ. 'ರೂಪಮಂಡನ'ವು 'ವಟುಕ ಭೈರವ'ನ ಬಗ್ಗೆ ತಿಳಿಸುತ್ತಾ, ಎಂಟು ಅಥವಾ ಆರು ಕೈಗಳುಳ್ಳ ಭೈರವನ ಕೈಗಳಲ್ಲಿ ಕ್ರಮವಾಗಿ ಖಟ್ವಾಂಗ, ಪಾಶ, ಶೂಲ, ಡಮರು, ಕಪಾಲ ಮತ್ತು ಸರ್ಪಗಳಿರುತ್ತವೆ; ಮತ್ತೊಂದು ಕೈಯಲ್ಲಿ ಮಾಂಸದ ತುಂಡನ್ನು ಹಿಡಿದಿದ್ದು, ಇನ್ನೊಂದು ಕೈ ಅಭಯಹಸ್ತವಾಗಿರುತ್ತದೆ; ಇವನ ಬಳಿ ಕಪ್ಪು ನಾಯಿಯು ಇರುತ್ತದೆ ಎಂದು ತಿಳಿಸುತ್ತದೆ. 'ವಟುಕ ಭೈರವಕಲ್ಪ'ವು 'ಕೆಂಪು ಜಟಾಭಾರವುಳ್ಳ ತ್ರಿನೇತ್ರನು ಚತುರ್ಭುಜ ಗಳಲ್ಲಿ ಶೂಲ, ಪಾಶ ಡಮರು ಮತ್ತು ಕಪಾಲಗಳನ್ನು ಹಿಡಿದಿದ್ದು, ನಾಯಿಯ ಮೇಲೆ ಕುಳಿತಿರುತ್ತಾನೆ. ರಕ್ತವರ್ಣದ ನಗ್ನದೇಹಿಯಾದ ಇವನ ಬಳಿ ಭೂತಗಣಗಳಿರುತ್ತವೆ' ಎಂದು ತಿಳಿಸುತ್ತದೆ.[೭] ಈ ಶಿಲ್ಪಗ್ರಂಥಗಳಲ್ಲದೆ, ತಾಂತ್ರಿಕ ಪದ್ಧತಿಯ 'ಕುಲಾರ್ಣವ ತಂತ್ರ'ವು, 'ಸುರಾಶಕ್ತಿಃ ಶಿವೋ ಮಾಂಸಃ ತದ್ಭೋಕ್ತಾ ಭೈರವಃ ಸ್ವಯಂ' ಎಂದಿದೆ.[೮] 'ಶಾರದಾತಿಲಕತಂತ್ರ'ದಲ್ಲಿ ಭೈರವನಿಗೆ ಸಾತ್ವಿಕ, ರಾಜಸ ಮತ್ತು ತಾಮಸ ರೂಪಗಳನ್ನು ತಿಳಿಸಿದೆ. ಎಸ್.ಕೆ. ರಾಮಚಂದ್ರ ರಾಯರು, 'ದಕ್ಷಿಣ ದೇಶದಲ್ಲಿ ಸಾತ್ವಿಕ ರೂಪವೇ ಹೆಚ್ಚು ಬಳಕೆಯಲ್ಲಿದೆ; ನಗುವುಖದ ದ್ವಿಭುಜಮೂರ್ತಿ ಬೆತ್ತಲೆ ಯಾಗಿದ್ದು, ನಾಯಿಯೊಂದಿಗೆ ಇರುತ್ತಾನೆ' ಎಂದು ಹೇಳುತ್ತಾರೆ.[೯] ಈ ಲಕ್ಷಣಗಳಿಗೆ ಅನ್ವಯಿಸಿ ನೋಡಿದರೆ, ಹಾಸನದ ಸಿದ್ಧೇಶ್ವರ ಶಿಲ್ಪವು ತಾಂತ್ರಿಕ ಹಿನ್ನೆಲೆಯಲ್ಲಿ ರೂಪಿಸಿರುವ ಪ್ರಾಚೀನವಾದ ಭೈರವನ ಶಿಲ್ಪವೆಂದು ಹೇಳಬಹುದು.

ಶೈವಮತದ ಪಾಶುಪತ ಸಂಪ್ರದಾಯದ ಉಪಪ್ರಭೇದ ಗಳಾಗಿ ಲಾಕುಲೀಶ, ಕಾಪಾಲಿಕ ಮತ್ತು ನಾಥಪಂಥಗಳು ರೂಪುಗೊಂಡವು. ನಾಥಪಂಥವನ್ನು ಸಿದ್ಧಮತ, ಸಿದ್ಧಮಾರ್ಗ, ಅವಧೂತ ಮತ ಎಂದು ಕರೆಯುತ್ತಾರೆ. 'ಸಿದ್ಧಸಿದ್ಧಾಂತ ಪದ್ಧತಿ'ಯಲ್ಲಿ 'ಯೋಗಿಗಳ ವ್ಯವಹಾರವು ನಿಯತವಾದದ್ದಲ್ಲ. ಒಂದೆಡೆ ಭೋಗಿಯಾಗಿಯೂ, ಮತ್ತೊಂದೆಡೆ ತ್ಯಾಗಿಯಾಗಿಯೂ, ಮಗದೊಂದೆಡೆ ನಗ್ನನಾಗಿ, ಇನ್ನೊಂದೆಡೆ ರಾಜನಂತೆ ಆಚಾರವಂತನಾಗಿರುವವನೇ ಅವಧೂತ' ಎನಿಸುತ್ತಾನೆ. ನಾಥಪಂಥದ ವಾಮಾಚಾರ ಮಾರ್ಗದಲ್ಲಿ ಪಂಚ'ಮ'ಗಳ ಸಹಯೋಗವಿರುತ್ತದೆ. ಪಂಚೇಂದ್ರಿಯಗಳ ಮೇಲೆ ಹತೋಟಿ ಇರುವವನೇ 'ಸಿದ್ಧ' ನೆನಿಸುತ್ತಾನೆ. ಈ ನಾಥಪಂಥದ ಪ್ರಸಿದ್ಧ ಕೇಂದ್ರಗಳಲ್ಲಿ ಒಂದಾದ ಆದಿಚುಂಚನಗಿರಿಯು ಹಾಸನಕ್ಕೆ ಸಮೀಪವಾಗಿದೆ. ಹಾಸನ ಜಿಲ್ಲೆಯ ಅರಸೀಕೆರೆಯ ಸಿದ್ಧರ ಬೆಟ್ಟ, ಬೆಂಡೆಕೆರೆ, ಗೊರೂರು ಗ್ರಾಮಗಳಲ್ಲಿರುವ ಸಿದ್ಧೇಶ್ವರ ದೇವಾಲಯಗಳು, ಹಳೇಬೀಡಿನ ಭೈರವನ ಗುಡ್ಡ- ಇವೆಲ್ಲಾ ಸಿದ್ಧರ ಕೇಂದ್ರಗಳಾಗಿದ್ದಂತೆ ತಿಳಿದುಬರುತ್ತದೆ.

ಹಾಸನದ ಈ ಸಿದ್ಧೇಶ್ವರ ಶಿಲ್ಪದ ಚರ್ಚೆಯ ಸಂದರ್ಭದಲ್ಲಿ ವಿದ್ವಾಂಸರು, 'ಈ ಶಿಲ್ಪವು ಸಿದ್ಧನದೇ ಇರಬಹುದೇ?' ಎಂದು ಸಂದೇಹಿಸಿದರು. ಈ ನಿಟ್ಟಿನಲ್ಲಿ ಗಮನಿಸಿದಾಗ, ಪ್ರಾಚೀನವಾದ ಶಿವಯೋಗಿ ಆವನಿಭಟಾರಕನ ಶಿಲ್ಪವನ್ನೂ ಆಲಂಪುರದ ಕಾಳಾಮುಖ ಮುನಿಗಳ ಶಿಲ್ಪವನ್ನೂ ಆಧರಿಸಿ ನೋಡಿದಾಗ, ಸಂಪೂರ್ಣವಾಗಿ ವಿಭಿನ್ನ ಲಕ್ಷಣಗಳಿಂದ ಕೂಡಿದೆ. ಮುನಿಯ ಶಿಲ್ಪಗಳಲ್ಲಿ ಸಾಮಾನ್ಯರಾಗಿ ಕಾಣುವಂತೆ, ಅಭಯಮುದ್ರೆ ಯಾಗಲೀ, ಚಿನ್ಮುದ್ರೆಯಾಗಲೀ, ಕಮಂಡಲ, ಜಪಮಾಲೆಗಳು, ಯೋಗಿಕಭಂಗಿ- ಇವಾವುವೂ ಈ ಸಿದ್ಧೇಶ್ವರ ಶಿಲ್ಪದಲ್ಲಿ ಕಾಣಬರುವುದಿಲ್ಲ. ನಂತರದ ಕಾಲದಲ್ಲಿ ರೂಪಿಸಿರುವ ಮತ್ಸ್ಯೇಂದ್ರನಾಥನ ಶಿಲ್ಪದಂತೆಯೂ ಈ ಶಿಲ್ಪವಿಲ್ಲ. ತಾಂತ್ರಿಕ ಹಿನ್ನೆಲೆಯಲ್ಲಿ ರೂಪಿಸಿರುವ ಬೇರಾವ ಮುನಿಗಳ ಶಿಲ್ಪವೂ ಇದುವರೆಗೆ ದೊರೆತಿಲ್ಲ. ಅಲ್ಲದೆ, ಸಿದ್ಧೇಶ್ವರ ಶಿಲ್ಪದ ಮೇಲ್ಭಾಗದಲ್ಲಿ ಚಿತ್ರಿಸಿರುವ ಚಾಮರಧಾರಿಗಳು, ವಾಹನಗಳು ಈ ಶಿಲ್ಪವು ಮಾನವನ ಶಿಲ್ಪವಲ್ಲ, ಇದು ದೈವಶಿಲ್ಪ ಎಂಬುದನ್ನು ದೃಢ

ಪಡಿಸುತ್ತಿವೆ. ಇದರಿಂದಾಗಿ ಈ ಸಿದ್ಧೇಶ್ವರ ಶಿಲ್ಪವನ್ನು, ಸಿದ್ಧ ಮುನಿಯೊಬ್ಬನ ಶಿಲ್ಪವೆಂದು ಖಚಿತವಾಗಿ ಹೇಳಲಾಗುವುದಿಲ್ಲ.

ಸಿದ್ಧೇಶ್ವರನ ಶಿಲ್ಪವು ಮೈಲಾರದೇವನ ಶಿಲ್ಪವಿರಬಹುದೇ? ಎಂದು ಚಿಂತಿಸಲಾಗಿ- ದೇವರಗುಡ್ಡದ ಮೈಲಾರದೇವನನ್ನು 'ಮಣ್-ಮೈಲಾರಲಿಂಗ', 'ಮಾರ್ತಾಂಡ ಭೈರವ', 'ಮಲ್ಲಯ್ಯ' ಮುಂತಾಗಿ ಕರೆಯುವರೆಂದು ನೇಗಿನಹಾಳ ಅವರು ತಿಳಿಸಿದ್ದಾರೆ.[11] ಮೈಲಾರದೇವ ಮತ್ತು ಮಾಳಚಾದೇವಿಯನ್ನು ಉಲ್ಲೇಖಿಸುವ ಶಾಸನಗಳು ಕ್ರಿ.ಶ. ಸು. ಹತ್ತನೇ ಶತಮಾನದಿಂದ ದೊರೆಯುತ್ತದೆ. ಆನಂದಗಿರಿಯ 'ಶಂಕರವಿಜಯ'ದಿಂದ ಶಂಕರಾಚಾರ್ಯರ ಕಾಲದಿಂದಲೂ ಮೈಲಾರದೇವನ ಆರಾಧನೆ ಇತ್ತೆಂದು ತಿಳಿದುಬರುತ್ತದೆ. ಡಾ॥ ರಿತ್ತಿಯವರು, 'ಐತಿಹಾಸಿಕವಾಗಿ ಮೊದಲು ಚಿಕ್ಕಗ್ರಾಮದೇವತೆಯಾಗಿದ್ದ ಮೈಲಾರ, ಶಾಕ್ತ ಮತದ ಪ್ರಭಾವದಿಂದ ಈಶ್ವರನ ಅವತಾರವೆನಿಸಿದನು' ಎಂದಿರುತ್ತಾರೆ.[12] ಆದಿಚುಂಚನ ಗಿರಿಯಲ್ಲಿ ಭೈರವನೇ ಆರಾಧ್ಯ ದೈವನಾಗಿದ್ದರೂ, ಇಲ್ಲಿಯ ದೇವಿಯನ್ನು 'ಕೆಂಪಿಮಾಳವ್ವೆ' ಎಂದು ಕರೆಯುತ್ತಿದ್ದು, ಈ ದೈವವು ಮೈಲಾರದೇವರೇ ಇರಬಹುದೆನಿಸುತ್ತದೆ.

ಶಂಕರದಾಸಿಮಯ್ಯನ ಪುರಾಣದಲ್ಲಿ ಮೈಲಾರದೇವರಿಗೆ ಸಂಬಂಧಿಸಿದಂತೆ ಉಕ್ತವಾಗಿರುವ ಕಥೆಯೊಂದಿದೆ. ಪರಶಿವನೇ ಇಲ್ಲಿ ಕಥೆಯನ್ನು ತಿಳಿಸಿದಂತೆ ನಿರೂಪಿತವಾಗಿದೆ. ಮಲ್ಲ ಎಂಬ ಹೆಸರಿನ ರಾಕ್ಷಸನು ಕ್ರೂರವ್ಯಗವಾಗಿ ಲೋಕವನ್ನು ಹಿಂಸಿಸುತ್ತಿರಲು, ಶಿವನು ಪಾಶುಪತಾಸ್ತ್ರವನ್ನು ಹಿಡಿದು ಶಬರನ ವೇಷದಲ್ಲಿ ಬಂದನು. ಅವನಿಗೆ ನಾಲ್ಕು ವೇದಗಳೇ ನಾಯಿಗಳಾದವು. ಗಂಗೆ- ಪಾರ್ವತಿಯರು, ಗಂಗೆ ಮಾಳಾದೇವಿಯಾದರು, ಮಲ್ಲನನ್ನು ಶಿವನು ಕೊಂದ ಮೇಲೆ ಅವನ ಹೊಸ ಕರುಳಿನ ಮಾಲೆ ಧರಿಸಿ, ಚರ್ಮಉಟ್ಟು, ರಕ್ತಪಾನ ಮಾಡುತ್ತಾ, ಅರಣ್ಯದಲ್ಲಿ ಕುರುಬರ ಬೀಡಿಗೆ ಬರುತ್ತಾನೆ. ಅಲ್ಲಿಯ ಹೆಗ್ಗಡೆ ಕೃತಕ ಬೇಡನಿಗೆ ನಮಸ್ಕರಿಸಿ, 'ತೋಳ ನನ್ನ ಕುರಿಗಳನ್ನು ಕಾಡುತ್ತಿದೆ . . . . ಕಾಪಾಡಬೇಕೆಂದು' ಕೇಳಿಕೊಳ್ಳುತ್ತಾನೆ. ಶಿವನು ತೋಳನನ್ನು ಕೊಂದು ಅವನ ಮಗಳನ್ನು ಮದುವೆಯಾಗುತ್ತಾನೆ. ಈ ಶಿವನೇ **'ಮೈಲಾರ ದೇವ'** ಎಂದು ತಿಳಿಸುತ್ತದೆ.[13]

ಮೈಲಾರದೇವರ ಮೂರ್ತಿಲಕ್ಷಣದ ಬಗೆಗೆ ನೇಗಿನಹಾಳ ಅವರು, 'ದೇವರಗುಡ್ಡದ ಮೈಲಾರಮೂರ್ತಿಯು ನಾಲ್ಕು ಕೈಗಳಲ್ಲಿ ಕ್ರಮವಾಗಿ, ಖಡ್ಗ, ತ್ರಿಶೂಲ, ಡಮರು ಮತ್ತು ಬಟ್ಟಲುಗಳನ್ನು ಧರಿಸಿದೆ. ಆನಂದಾಸನದಲ್ಲಿ ಕುಳಿತಿರುವ ಮೈಲಾರನ ಹಣೆಯಲ್ಲಿ ಉರಿಗಣ್ಣನ್ನು ರೂಪಿಸಲಾಗಿದೆ ಎಂದಿದ್ದಾರೆ.[14] ಮೈಲಾರ ದೇವನ ಸ್ವರೂಪದಲ್ಲಿ ಶಿವನು ಕುಬೇರನ 'ಗಹಿರ' ಎಂಬ ಕುದುರೆಯನ್ನೇರಿ ಬಂದಿದ್ದನೆಂದು ತಿಳಿಯುತ್ತದೆ. ಇದರಂತೆ, ಮೈಲಾರದೇವನ ಶಿಲ್ಪಗಳಲ್ಲಿ ಶಿವನು ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳನ್ನು ಹಿಡಿದು ಕುದುರೆಯನ್ನೇರಿ ಕುಳಿತಿರುವಂತೆ ಬಿಡಿಸಲಾಗಿದೆ. ಕೆಲವೆಡೆ ಶಿವನು, ಭದ್ರಪೀಠದಲ್ಲಿ ಸುಖಾಸೀನನಾಗಿ ಕುಳಿತಿದ್ದಾಗ, ಕುದುರೆಯನ್ನು ವಾಹನದಂತೆ ಬಿಡಿಸಲಾಗಿರುತ್ತದೆ. ಮೈಲಾರ ದೇವನು ಭೈರವನೇ ಆದುದರಿಂದ ಈ ಶಿಲ್ಪದೊಂದಿಗೆ ನಾಯಿಯೂ ಇರುತ್ತದೆ.

ಈ ಹಿನ್ನೆಲೆಯಲ್ಲಿ, ಸಿದ್ಧೇಶ್ವರನ ಶಿಲ್ಪವನ್ನು ಗಮನಿಸಿದರೆ, ಅರಣ್ಯದಲ್ಲಿ ಆನಂದಾಸನದಲ್ಲಿ ಕುಳಿತಿರುವ ಜಟಾಧಾರಿ ಭೈರವನನ್ನೂ, ಅವನ ಎಡಭಾಗದಲ್ಲಿ ಹೂವನ್ನು ಹಿಡಿದು ನಿಂತಿರುವ ದೇವಿಯನ್ನು (ಮಾಳಚಾದೇವಿ?)ಯನ್ನು ಬಿಡಿಸಲಾಗಿದೆ. ಶಿವನ ಬಲಭಾಗದಲ್ಲಿ ಕಿರಾತನನ್ನು (ಹೆಗ್ಗಡೆ?) ಬಿಡಿಸಿದ್ದು, ಈ ಶಿಲ್ಪದಲ್ಲಿ ಮೇಲ್ಭಾಗದಲ್ಲಿ ಬಿಡಿಸಿರುವ ಚಾಮರಧಾರಿಯರೂ, ಕಾಲಬಳಿ ಬಿಡಿಸಿರುವ ನಾಯಿ ಮತ್ತು ಕುದುರೆಯ ಲಾಂಛನಗಳೂ ಶಿಲ್ಪವು ಪ್ರಾಚೀನವಾದ ಮೈಲಾರದೇವನ ಶಿಲ್ಪವೆಂದು ನಿರ್ಧರಿಸುತ್ತಿವೆ. ಸು.೧೦ನೇ ಶತಮಾನದಲ್ಲೂ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಮೈಲಾರದೇವನ ಆರಾಧನೆ ಇತ್ತೆಂದು ಇದರಿಂದಾಗಿ ತಿಳಿದುಬರುತ್ತದೆ. ಹೀಗಾಗಿ, ಹಾಸನದ ಈ ಸಿದ್ಧೇಶ್ವರ ಶಿಲ್ಪವು ಮೈಲಾರದೇವನ ಶಿಲ್ಪವೇ ಎಂದು ದೃಢವಾಗಿ ಹೇಳಬಹುದಾಗಿದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. Hassan Gazetteer, p.643

೨. ಅದೇ

೩. T.A. Gopinatha Rao- **The Elements of Hindu Iconography**- p.92-93

೪. **ನಾಥ ಸಂದೇಶ**- ಸಂಚಿಕೆ ೧-೨, ಏಪ್ರಿಲ್, ೧೯೯೧, ಪು.೨೪

೫. ಅದೇ

೬. ಅದೇ

೭. T.A. Gopinatha Rao- op. cit., Vol. II, Pt. 1. p.176]

೮. ಕುಲಾರ್ಣವತಂತ್ರ, ೫, ೭೯.

೯. ಎಸ್.ಕೆ. ರಾಮಚಂದ್ರರಾವ್: **ಮೂರ್ತಿಶಿಲ್ಪ- ನೆಲೆ ಹಿನ್ನೆಲೆ**, ಪು. ೧೩೪.

೧೦. ಎಂ. ಬಿ. ನೇಗಿನಹಾಳ: **ಮೈಲಾರಲಿಂಗ - ಖಂಡೋಬಾ**-ಪು. ೧೪

೧೧. ಸೂರ್ಯನಾಥಕಾಮತ್: **'ಮೈಲಾರದೇವರು'**, ಲೋಚನ(ಶ್ರೀ ವಿಶೇಷಾಂಕ)- ೧೯೮೪, ಡಿಸೆಂಬರ್- ಪು.೧೮೬.

೧೨. ಎಂ. ಚಿದಾನಂದಮೂರ್ತಿ: **ಸಂಶೋಧನ ತರಂಗ**, ಭಾಗ-೨, ಪು.೨೧೬

೧೩. ಎಂ.ಬಿ. ನೇಗಿನಹಾಳ: ಅದೇ, ಪು. ೧೮

ಡಾ|| ಜ್ಯೋತ್ಸ್ನ ಕಾಮತ್*

ಕೊರಡಿನಲ್ಲಿ ಕೊರೆದ ಚಿತ್ರಗಳಲ್ಲಿ ಸಾಮಾಜಿಕ ಜೀವನ

ಪುರಾತನ ಕಾಲದ ಕರ್ನಾಟಕದ ಕಲಾಕಾರರು ಇತಿಹಾಸ ಸಂಶೋಧಕರಿಗೆ ಮಹದುಪಕಾರ ಮಾಡಿದ್ದಾರೆ. ಅವರು ಖಾಸಗಿ, ಧಾರ್ಮಿಕ ಮತ್ತು ಸಾರ್ವಜನಿಕವಾಗಿದ್ದ ಕಟ್ಟಡಗಳನ್ನು ಶಿಲ್ಪ, ಭಿತ್ತಿಚಿತ್ರ ಮತ್ತು ಕೊರಡುಗಳಲ್ಲಿ ಕೊರೆದ ಕೆಲಸಗಳಿಂದ ಅಲಂಕರಿಸಿದರು. ಇವುಗಳಲ್ಲೆಲ್ಲ ಸಮಕಾಲೀನ ಸಾಮಾಜಿಕ ಜೀವನದ ಇಣುಕು ನೋಟಗಳನ್ನು ವಿಪುಲವಾಗಿಯೇ ಸೇರ್ಪಡೆ ಮಾಡಿದ್ದಾರೆ. ಆದರೆ ಚರಿತ್ರೆಯ ವಿದ್ವಾಂಸರು, ಸಂಶೋಧಕರು ಇಂಥವುಗಳತ್ತ ಸಾಕಷ್ಟು ಲಕ್ಷ್ಯ ಪೂರೈಸಿಲ್ಲ. ಶಿಲಾಲೇಖಗಳು, ತಾಮ್ರಫಲಕಗಳು, ತಾಳೇಗರಿ ಗ್ರಂಥಗಳು ಮತ್ತು ಉತ್ಖನನದ ಸಾಮಗ್ರಿಗಳ ಮಹತ್ವವನ್ನು ಯಾರೂ ಪ್ರಶ್ನಿಸುವಂತಿಲ್ಲ. ಆದರೆ ಶಿಲ್ಪಚಿತ್ರ, ಭಿತ್ತಿಚಿತ್ರಗಳನ್ನು ಆಕರಗಳಾಗಿ ಬಳಸುವ ಶಾಸ್ತ್ರೀಯ ಪದ್ಧತಿ, ಚರಿತ್ರೆಯ ಅಧ್ಯಯನದಲ್ಲಿ ಇನ್ನೂ ರೂಪುಗೊಂಡಿಲ್ಲ. ಇಂಥ ಕೆಲವು ಕಾಷ್ಠ ಶಿಲ್ಪಗಳನ್ನು ಅಥವಾ ಕೊರಡಿನಲ್ಲಿ ಕೊರೆದ, ಹಿಂದಿನಿಂದ ಉಳಿದು ಬಂದ ಕೊರಡು ಚಿತ್ರ ಕೃತಿಗಳನ್ನು, ಸಂಶೋಧನಾ ಆಕರವಾಗಿ ಬಳಸಬಹುದಾದ ಸಾಧ್ಯತೆಯನ್ನು, ಈ ಪ್ರಬಂಧದಲ್ಲಿ ಪ್ರಾಸ್ತಾವಿಕವಾಗಿ ಚರ್ಚಿಸಲಾಗಿದೆ.

ಪಶ್ಚಿಮ ಕರಾವಳಿಯ ಉದ್ದಕ್ಕೂ ನಿತ್ಯ ಹರಿತ್(ಸದಾ ಹಸಿರು) ದಟ್ಟಕಾಡುಗಳು ಇದ್ದು ಉತ್ತಮ ಜಾತಿಯ ಇಮಾರತಿಯ ಮರಗಳು ಬೆಳೆಯುತ್ತಿದ್ದುದರಿಂದ ಕಟ್ಟಿಗೆಯ ಕೆತ್ತನೆಯ, ಕುಸುರಿಯ ಕಲಾಕೃತಿಗಳು ಈ ಪ್ರದೇಶದಲ್ಲಿ ಮತ್ತು ಮಲೆನಾಡಿನಲ್ಲಿ ಕಾಣಸಿಗುತ್ತವೆ. ಹಿಂದೊಮ್ಮೆ ಇವು ಉಳ್ಳವರ ಮನೆಗಳಲ್ಲಿ, ಮಠಗಳಲ್ಲಿ ವಿಪುಲವಾಗಿದ್ದಿರಬೇಕು. ಆದರೆ ತುಂಬ ಮಳೆ, ಅತ್ಯಧಿಕ ಆರ್ದ್ರತೆಗಳೊಂದಿಗೆ ಜನರ ಅಲಕ್ಷ್ಯಗಳೂ ಸೇರಿ ಅಪೂರ್ವ ಕಲಾಕೃತಿಗಳೆಲ್ಲ ಹುಳ-ಹುಪ್ಪಡಿಗಳಿಗೆ ಆಹುತಿ ಯಾಗಿರಬೇಕು. ಅಲ್ಲದೇ ಜನ, ಹೆಚ್ಚೆಚ್ಚಾಗಿ ಪಾಶ್ಚಾತ್ಯ ಅಭಿರುಚಿಗಳಿಗೆ ಮಾರುಹೋಗಿ, ಉಕ್ಕು, ಸಿಮೆಂಟ್, ವಾರ್ನಿಶ್, ಡಿಸ್ಟೆಂಪರ್‌ಗಳನ್ನು ತಮ್ಮವನ್ನಾಗಿಸಿ ಕೊಂಡಿದ್ದಾರೆ. ಅನಿಯಂತ್ರಿತವಾಗಿ ಕಾಡನ್ನು ಕಡಿದುಹಾಕಿ ಉತ್ತಮ ಕೊರಡುಗಳು ಕಣ್ಮರೆಯಾಗುತ್ತ ಬಂದಂತೆ, ಆಶ್ರಯ-ಅವಕಾಶಗಳ ಕೊರತೆ ಯಿಂದಾಗಿ ಕಾಷ್ಠಕಲೆಯೂ ಸಾಕಷ್ಟು ಮಣ್ಣುಗೂಡಿದೆ. ಪುಣ್ಯಕ್ಕೆ ಕೊಂಚ ಧಾರ್ಮಿಕ ಬುದ್ಧಿ ಉಳಿದುಕೊಂಡಿದ್ದರಿಂದ ಕೆಲವೇ ದೇವಾಲಯಗಳಲ್ಲಿದ್ದ ಇಂಥ ಕಲಾಕೃತಿಗಳನ್ನು ಭಕ್ತಾದಿಗಳು, ಪೂಜಾರಿ-ಮೊಖ್ತೇಸರರು, ಆಡಳಿತ ವರ್ಗದವರು ಸಂರಕ್ಷಿಸಿ ಕೊಂಡು ಬಂದಿದ್ದಾರೆ.

ವಾತಾವರಣದ ಪ್ರಕೋಪ ಮತ್ತು ಕ್ರಿಮಿಕೀಟಗಳ ಬಾಧೆಯನ್ನು ಶತಶತಕಗಳವರೆಗೆ ತಾಳಿಕೊಳ್ಳುವ ಮರದ ದಿಂಡನ್ನು ಪಡೆಯುವದು ಸುಲಭವಲ್ಲ. ಹಿಂದೊಮ್ಮೆ ದೇವರ ಸೇವೆಗೆಂದೇ ಮೀಸಲಾದ ಕಾಡುಗಳಿಂದ ಇವನ್ನು ಪಡೆದರೆ, ಬ್ರಿಟಿಷ್ ಆಡಳಿತಗಾರರು ತಮ್ಮ ಪ್ರಜೆಗಳ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಲೆಂದು ಉತ್ತಮ ಕೊರಡನ್ನು ಪ್ರತ್ಯೇಕವಾಗಿ ಪೂರೈಸುವ ವ್ಯವಸ್ಥೆ ಮಾಡಿದ್ದರು. ಇಂದು ಆ ವ್ಯವಸ್ಥೆ ಮುಂದುವರಿಯುತ್ತಿಲ್ಲ. ಹಿಂದೆ ಪರಿಪಕ್ವವಾಗಿ ಬೆಳೆದ ಸಾಗವಾನಿ ಅಥವಾ ತೇಗ, ನಂದಿಯ ದಿಂಡುಗಳನ್ನು ಆರಿಸಿ ತಂದು, ಅವನ್ನು ಅನುಕೂಲವಾದ ಉದ್ದಗಲಳತೆಗಳಲ್ಲಿ ಕೊಯಿಸಿ ಕಲಾಕಾರರಿಗೆ ಒಪ್ಪಿಸಲಾಗುತ್ತಿತ್ತು.

ಉತ್ಕೃಷ್ಟ ಹೊಯ್ಸಳ ದೇವಾಲಯಾದಿಗಳನ್ನು ಕಟ್ಟಲು ಸಕ್ರಿಯವಾಗಿ ನೆರವು ನೀಡಿದ ಗುಡಿಗಾರರು, ಸುತಾರ ಆದಿ ವಂಶಜರೇ ಈ ಕಲೆಯನ್ನು ತಮ್ಮದನ್ನಾಗಿಸಿದ್ದರು. ಸುತಾರರು, ಬಾಚಿ-ಗರಗಸಾದಿಗಳನ್ನು ಬಳಸಿ, ಬೃಹದಾಕಾರದ ಚೌಕಟ್ಟುಗಳನ್ನು ಸಿದ್ಧ ಮಾಡಿದರೆ, ಮೇಸ್ತ್ರಿಗಳು, ಉಳಿ-ಸುತ್ತಿಗಳಿಂದ ಕರಡು ಪ್ರತಿಮೆಗಳನ್ನು ಕಟೆಯುತ್ತಾರೆ. ವಿವಿಧ ಆಕಾರದ ಸೂಕ್ಷ್ಮ ಚಾಣಗಳನ್ನು ಬಳಸಿ, ನಯ-ನಾಜೂಕಿನ ಕುಸುರಿ ಕೆಲಸ ಮಾಡುವದರಲ್ಲಿ ಗುಡಿಗಾರರೇ ಹೆಸರುವಾಸಿ! ಈ ಎಲ್ಲ ಕಲಾಕಾರರು ಕೊರಡನ್ನು ಆಮೂಲಾಗ್ರವಾಗಿ ಪರೀಕ್ಷಿಸಿ, ತಾವು ಮೂಡಿಸಬೇಕಾದ ಆಕೃತಿಗಳನ್ನು ಇದ್ದಲಿನಿಂದ ಗುರುತು

* ೧೧೦, ಶಶಿಕಿರಣ್, ೧೮ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು - ೫೬೦ ೦೫೫

ಹಾಕಿಕೊಳ್ಳುತ್ತಾರೆ. ಆನಂತರ ಹಂತ-ಹಂತವಾಗಿ ಕೊರೆಯುತ್ತ ಕೃತಿಗಳನ್ನು ಸಿದ್ಧಪಡಿಸುತ್ತಾರೆ. ಒರಟಾದ, ಹುರಬರಕಾದ ಆಕೃತಿಗಳನ್ನು ರೇವೆಕಾಗದ (Sand Paper) ತಿಕ್ಕಿ ಪರಿಶೀಲಿಸುತ್ತಾರೆ. ಅದಕ್ಕೆ ಹೊಳಪು ಬರಲು ಒಂದು ಜಾತಿಯ ಬೆಂದುರ್ಲಿ (Epiphyte, ಸೀತಾದಂಡೆ) ಪರ್ಣಗಳಿಂದ ಉಜ್ಜುತ್ತಾರೆ. ದಶಕಗಳು, ಶತಕಗಳು ಕಳೆದರೂ ಕೆಡಬಾರದೆಂದು 'ಸೌದೆ ಎಣ್ಣೆ' (ಬೆಲ್‌ತೇಲ್) ಗೋಡಂಬಿ ಕವಚದ ಎಣ್ಣೆಗಳನ್ನು ಲೇಪಿಸುತ್ತಾರೆ. ಪ್ರತಿ ಮಳೆಗಾಲದ ನಂತರವೂ ಈ ಲೇಪನ ಕಾರ್ಯ ಕೈಕೊಳ್ಳಬೇಕಾಗುತ್ತದೆ.

ಪ್ರತಿಗ್ರಾಮ, ಊರುಗಳಲ್ಲಿ ವರ್ಷದಲ್ಲೊಮ್ಮೆ ರಥೋತ್ಸವ ಜಾತ್ರೆ ನಡೆಸಿ, ಆರಾಧ್ಯ ದೇವತೆಯ ಉತ್ಸವಮೂರ್ತಿಯನ್ನು ತೇರಿಗೆ ಸ್ಥಳಾಂತರಿಸಿ ಮುಖ್ಯಬೀದಿಗಳಲ್ಲಿ ಮೆರವಣಿಗೆ ಮಾಡುವದು, ಪರಂಪರಾಗತವಾದ ಪದ್ಧತಿ. ಕೆಲವು ದೇವಾಲಯಗಳಲ್ಲಿ, ಅದರಲ್ಲೂ ಕರಾವಳಿಯಲ್ಲಿ ಅತ್ಯಂತ ಕಲಾತ್ಮಕ ತೇರುಗಳಿವೆ. ವರ್ಷದಲ್ಲಿ ಹೆಚ್ಚಿನ ಸಮಯವನ್ನು ಈ ತೇರುಗಳು ಇವಕ್ಕಾಗಿಯೇ ಕಟ್ಟಿಸಿದ 'ವಿಶ್ರಾಂತಿ ಗೃಹ'(ಎತ್ತರವಾದ ಗೂಡು)ಕ್ಕೆ ಸೇರಿಸುವದರಿಂದ ಜಾತ್ರೆಯ ದಿನಗಳಲ್ಲಿ ಮಾತ್ರ ಅವುಗಳ ದರ್ಶನವನ್ನು ಯಥೇಚ್ಛವಾಗಿ ಪಡೆಯಬಹುದಾಗಿದೆ. ಉಕ್ಕಿನ ಕಂಬಿಗಳನ್ನು ಬಿಗಿದುಕೊಂಡ ನಾಲ್ಕು ಗಾಲಿಗಳು, ಭಾರವಾದ ತೇರನ್ನು ಹೊತ್ತು ನಿಂತಿರುತ್ತವೆ. ತೇರಿನ ನಾಲ್ಕು ದಿಕ್ಕುಗಳಲ್ಲಿಯೂ ಕೊರಡನ್ನು ಕೊರೆದು ನಿರ್ಮಿಸಿದ ಚಿತ್ರಪಟ್ಟಿಕೆಗಳನ್ನು ಜೋಡಿಸಿದ್ದು ಇರುತ್ತದೆ. ಹೆಚ್ಚಿನವು ರಾಮಾಯಣ, ಮಹಾಭಾರತಗಳಲ್ಲಿಯ ಕಥಾನಕಗಳನ್ನು ಪ್ರತಿನಿಧಿಸಿದರೆ, ಅಲ್ಲೊಂದು ಇಲ್ಲೊಂದು ದೈನಂದಿನ ಜೀವನವನ್ನು-ಚಿತ್ರಿಸಿದ್ದೂ ಉಂಟು. ಇಂಥ ತೇರುಗಳು ದಕ್ಷಿಣಕನ್ನಡದ ಮಂಗಳೂರು, ಬೈಂದೂರು, ಬಪ್ಪನಾಡು, ಮುಲ್ಕಿ, ಉಡುಪಿ, ಕುಂದಾಪುರಗಳಲ್ಲಿ, ಉತ್ತರಕನ್ನಡದಲ್ಲಿ ಶಿರಾಲಿ, ಇಡಗುಂಜಿ, ಗುಣವಂತೆ, ಕಾಸರಕೋಡು, ಹೊನ್ನಾವರ ಮಾವಿನಕುರ್ವೆ, ಹೊಸಾಡ, ಅಗ್ರಹಾರ, ಹಳದೀಪುರ, ಹೆಗ್ಡೆ, ಅಂಕೋಲೆಗಳಲ್ಲಿವೆ. ಒಳನಾಡಿನ ನಂಜನಗೂಡು, ಶ್ರೀರಂಗ ಪಟ್ಟಣ ಮತ್ತು ಗೋವಾದ ಪರ್ತಕಾಳಿಯ ದೇವಾಲಯಗಳಲ್ಲೂ ಇಂಥವುಗಳನ್ನು ಕಾಣಬಹುದಾಗಿದೆ. ಮೈಸೂರಿನ ಜಾನಪದ ವಸ್ತು ಸಂಗ್ರಹಾಲಯದಲ್ಲಿಯೂ ಕಾಷ್ಠಶಿಲ್ಪಗಳುಳ್ಳ ತೇರೊಂದನ್ನು ಮಾದರಿಗಾಗಿ ಸಂರಕ್ಷಿಸಿ ಇಡಲಾಗಿದೆ.

ಶಿಲ್ಪಿ, ಚಿತ್ರಕಾರ, ಕೊರಡಿನ ಕಲಾಕಾರರು ಒಂದೇ ಬಗೆಯ ಸನ್ನಿವೇಶಗಳನ್ನು ಆಯ್ದುಕೊಂಡರೂ ಅವನ್ನು ತಮ್ಮದೇ ಆದ ರೀತಿಯಲ್ಲಿ ಆಯಾ ಕೃತಿಯನ್ನು ರೂಪಿಸುವದು ಸಾಮಾನ್ಯ. ತೇರಿನ ಚಿತ್ರಗಳಲ್ಲಿ ಮಗುವಿನ ಜನನ, ಲಾಲನೆ-ಪಾಲನೆ, ತಾಯಿ ಮಗುವನ್ನು ಮುದ್ದಿಸುವದು, ಅಲಂಕಾರದಲ್ಲಿ ತೊಡಗಿದ ಲಲನೆಯರು, ಗೃಹಕೃತ್ಯದಲ್ಲಿ ತೊಡಗಿದ ಗರತಿಯರು, ಪಶು-ಪಕ್ಷಿಗಳನ್ನು ಸಾಕುವವರು, ವಾದ್ಯಗಾರರು, ನರ್ತಕಿಯರು, ಮುಂತಾದವರನ್ನು ಗುರುತಿಸಬಹುದು. ರಸಿಕತೆ, ಸರಸ-ಸಲ್ಲಾಪ, ರತಿ-ಕ್ರೀಡೆಗಳಿಗೂ ಪ್ರಾಧಾನ್ಯ ಕೊಡಲಾಗಿದೆ. ಈ ಉಬ್ಬು ಚಿತ್ರಗಳಲ್ಲಿ ಕಂಡುಬರುವ ಕೇಶಾಲಂಕಾರ, ಸೀರೆಗಳ ವೈವಿಧ್ಯ, ಉಡುವ ರೀತಿ, ಕಿರುಸೀರೆ, ಕಿವಿ ಕೊರಳು ಕೈ-ಕಾಲುಗಳ ಆಭರಣಗಳು ಇವುಗಳೆಲ್ಲ ನಿತ್ಯಜೀವನದ ಹಲವಾರು ಹೊಳಹುಗಳನ್ನು ಬಿಂಬಿಸುತ್ತವೆ. ಸಂಶೋಧನೆಗೆ ಉತ್ತಮ ಸಾಮಗ್ರಿ ಒದಗಿಸಬಲ್ಲವು.

ಪ್ರಸವವೇದನೆಯಲ್ಲಿರುವ ಮಹಿಳೆಯೋರ್ವಳು, ಕಿರಿಯ ವಯಸ್ಕರ ಭುಜಗಳ ಮೇಲೆ ಶರೀರದ ಭಾರ ಹಾಕಿದ್ದಾಳೆ. ಅವರು ಉದರವನ್ನು ನೇವರಿಸಿ ಸಾಂತ್ವನಗೊಳಿಸುತ್ತಿದ್ದಾರೆ. ಕಾಲುಮಣೆಯ ಮೇಲೆ ಕುಳಿತ ಸೂಲಗಿತ್ತಿ, ಅವತರಿಸಿ ಬರುತ್ತಲಿರುವ ಶಿಶುವನ್ನು ಸ್ವಾಗತಿಸುತ್ತಿದ್ದಾಳೆ. ಉತ್ತರ ಕನ್ನಡ ಜಿಲ್ಲೆಯ ಭಟಕಳದ ಕೇತಪ್ಪಯ್ಯ ನಾರಾಯಣ ದೇವಸ್ಥಾನದಲ್ಲಿ ಇದೇ ವಿಷಯದ ಕುರಿತಾದ ಸುಂದರ ಶಿಲ್ಪವಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಇನ್ನೊಂದು ಚಿತ್ರದಲ್ಲಿ ತಾಯ ಭುಜದ ಸವಾರನಾಗಬಯಸುವ ಮಗುವನ್ನು ಆಕೆ ಎರಡೂ ಕೈಗಳಿಂದ ಎತ್ತಿಕೊಳ್ಳುವದರಲ್ಲಿ ಇದ್ದಾಳೆ. ಒಂಟಿ ಕಾಲಿನ ಮೇಲೆ ಓರಣವಾಗಿ ನಿಂತ ತಾಯಿಯ ತೊಡೆಯ ಮೇಲೆ ಸುಖಾಸೀನನಾದ ಮಗು, ತಾಯೊಡನೆ ತೊದಲು ಮಾತಾಡುತ್ತಿರುವಂತೆ ರೂಪಿಸಿದ ಚಿತ್ರ ಮೋಹಕವಾಗಿದೆ. ಕನ್ನಡಿಯಲ್ಲಿ ತನ್ನ ರೂಪ ನೋಡಿಕೊಳ್ಳುತ್ತಿರುವ ಬೇಲೂರಿನ ಶಿಲಾಬಾಲಿಕೆ ವಿಶ್ವಖ್ಯಾತಿ ಪಡೆದರೂ ತೇರಿನ ಚಿತ್ರಪಟ್ಟಿಕೆಯ ಅಲಂಕಾರಪ್ರಿಯೆ, ವೀಕ್ಷಕರೇ ಇಲ್ಲದೇ ಪೇಚಾಡುತ್ತಿದ್ದಾಳೆ! ಮೊಳಕಾಲು ಉದ್ದದ ಜಡೆ ಹೆಣೆದುಕೊಂಡು, ಮೈತುಂಬ ಆಭರಣ ಧರಿಸಿ, ಎಡಗೈಯಲ್ಲಿ ವರ್ತುಲಾಕಾರದ ಕನ್ನಡಿ ಹಿಡಿದು, ಬಲಗೈಯಿಂದ ಒಬ್ಬಾಕೆ ಕುಂಕುಮ ಇಟ್ಟುಕೊಳ್ಳುತ್ತಿದ್ದಾಳೆ. ಇಂಥದೇ ಇನ್ನೊಂದು ಚಿತ್ರದಲ್ಲಿ ಮಹಿಳೆ, ನರೆಕೂದಲೊಂದರ ಹುಡುಕಾಟದಲ್ಲಿ ಇದ್ದಂತಿದೆ.

ಮಹಿಳೆಯೋರ್ವಳು ಪಾತ್ರೆ ಬೆಳಗುತ್ತಿರುವಾಗ ಅವಳ ಗೆಣೆಯನು ಕೀಟಲೆಯಲ್ಲಿ ತೊಡಗಿದ್ದಾನೆ! ಇನ್ನೊಂದು ಚಿತ್ರದಲ್ಲಿ ಗಡಿಗೆ ತುಂಬ ಮೊಸರನ್ನು ಕಡೆಯುತ್ತ ಮೈಮರೆತವಳನ್ನು ಕೊರೆಯಲಾಗಿದೆ. ಮೈ-ಕೈ ತುಂಬಿಕೊಂಡ ಯುವತಿಯೊಬ್ಬಳು ಎಡಗೈ ಬೆರಳ ಮೇಲೆ ನಿಂತ ಗಿಳಿಯೊಡನೆ ಮಾತನಾಡುತ್ತಿದ್ದಾಳೆ. ಬಿಗಿಯಾದ ಕಚ್ಚೆತೊಟ್ಟು, ಎಡಗೈಯಿಂದ ನೀರಿನ ಹೂಜಿ ಇಳಿಬಿಟ್ಟ, ಹಕ್ಕಿಹಿಡುಕ(ಬೇಟೆಗಾರ)ನು, ಇದಾಗಲೇ ತನ್ನದಾಗಿಸಿದ ಹಕ್ಕಿ ಜೋಡಿಯನ್ನು ಬಲಗೈ ತೋಳತೆಕ್ಕೆಯ ನೆರೆಯಲ್ಲಿಟ್ಟು ವೃಕ್ಷದ ಪೊಟರೆಯಲ್ಲಿದ್ದ ಮರಿಹಕ್ಕಿಗಳತ್ತ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಭಂಗಿ ಮನೋಹರವಾಗಿದೆ. ಅಚ್ಚುಕಟ್ಟಾಗಿ ಕಿರಿಬಟ್ಟೆ, ರುಮಾಲು ಧರಿಸಿದ ಪ್ರಾಣಿಪ್ರೇಮಿ, ತಾನು ಸಾಕಿದ ಹಾವನ್ನು ಮಂತ್ರಮುಗ್ಧ

ವಾಗಿಸಿ ಮುದ್ದಿಸುತ್ತಿರುವ ದೃಶ್ಯ ಅಪೂರ್ವವಾಗಿದೆ. ಇನ್ನೊಂದು ಚಿತ್ರದಲ್ಲಿ ಹನುಮತ್ ಆಸನದಲ್ಲಿದ್ದ ಹಾವಾಡಿಗ, ಓರಣವಾಗಿ ರುಮಾಲು ಕಟ್ಟಿಕೊಂಡು ಪುಂಗಿಯೂದುತ್ತ ಹಾವನ್ನು ಬರಮಾಡಿಕೊಳ್ಳುತ್ತಿದ್ದಾನೆ. ವಾದ್ಯ ಬಾರಿಸುವ ಬಜಂತ್ರಿಗಳು, ಮುಹರಿ ನುಡಿಸುವವ, ಒಬ್ಬರೊಬ್ಬರ ನುಡಿಸುವಿಕೆ ಮೆಚ್ಚಿ ಕೊಂಡವರಂತೆ ಕೊರೆಯಲ್ಪಟ್ಟರೆ, ಮುಖವೀಣೆ, ಡೋಲು ಬಾರಿಸುವರೂ ಕಾಣಿಸಿಕೊಂಡಿದ್ದಾರೆ. ಈ ಮೈಮರೆತ ಕಲಾವಿದರ ಹಿಮ್ಮೇಳಕ್ಕೆ ತಾನು ನರ್ತಿಸುವದು ಹೇಗೆ? ಎಂದು ಅರಿಯದ ಯುವತಿ ತಬ್ಬಿಬ್ಬಾಗಿ ನಿಂತುಬಿಟ್ಟಿದ್ದಾಳೆ!

ಈ ಕಾಷ್ಠಶಿಲ್ಪದಲ್ಲಿ ಬಹಳಷ್ಟು ಮಿಥುನ ಚಿತ್ರಗಳನ್ನು ಗುರುತಿಸಬಹುದು. ಶೃಂಗಾರಕಲೆಯಲ್ಲಿ ನಮ್ಮ ಪೂರ್ವಜರ ಸಾಧನೆಯನ್ನು ಅವು ಸಾರುತ್ತವೆ. ಒಂದು ಚಿತ್ರದಲ್ಲಿ ಕುಲಾವಿ ಧರಿಸಿ ಮೆತ್ತಗಿನ ದಿಂಬುಗಳಿಗೆ ಆತು ಕುಳಿತವ, ಪ್ರೇಮಿಯ ಆಗಮನದ ನಿರೀಕ್ಷೆಯಲ್ಲಿರುವ ಹರಯದ ಹೆಣ್ಣೊಬ್ಬಳು, ಇನ್ನೊಂದರಲ್ಲಿ ಪಾತ್ರೆಯಲ್ಲಿಯ ಮೋದಕಗಳನ್ನು ಯುವಕನಿಗೆ ನೀಡುತ್ತಿದ್ದಾಳೆ. ಇನ್ನೊಂದು ಚಿತ್ರದಲ್ಲಿ, ಮಂಚದ ಮೇಲೆ ನಾಚಿಕೆಯಿಂದ ಮುದುಡಿ ಕುಳಿತಾಕೆಯ ವಶೀಕರಣದಲ್ಲಿ ರಸಿಕನೋರ್ವನು ತೊಡಗಿದ್ದಾನೆ. ಮಗುದೊಂದು ದೃಶ್ಯದಲ್ಲಿ ಕಾಮಾತುರ ವ್ಯಕ್ತಿ, ಮದ್ಯದ ಬಟ್ಟಲನ್ನು ಬರಿದು ಮಾಡುವದ ರಲ್ಲಿದ್ದಾನೆ. ಮಿಥುನ ಚಿತ್ರಗಳ ವೈವಿಧ್ಯ ಎಷ್ಟಿದೆ ಎಂದರೆ ಈ ಕಲಾಪ್ರಕಾರದಲ್ಲಿ ಕರ್ನಾಟಕವು ಖಜುರಾಹೋವನ್ನು ಹಿಂದೆ ಹಾಕುತ್ತಿದೆಯೇ ಎನಿಸುವಷ್ಟು!

ಕಟ್ಟಡದ ಅಂಗವಾಗಿಯೇ ಬಳಸಿದ ಕೊರಡು ಚಿತ್ರಗಳನ್ನು ಹಲವಾರು ದೇವಾಲಯಗಳಲ್ಲಿ ಕಾಣಬಹುದಾಗಿದೆ. ಬೃಹದಾಕಾರದ ಕಂಬಗಳ ಮೇಲೆ ಜಂತಿ, ಮುಚ್ಚಿಗೆಗಳಲ್ಲಿ ಇವು ಹೆಚ್ಚಾಗಿ ಕಂಡು ಬಂದರೂ ಕೆಲವೆಡೆ ಚೌಕಟ್ಟು ಹಾಕಿ ಅಲಂಕಾರ ಸಾಧನವಾಗಿಯೂ ಬಳಸಲಾಗಿದೆ. ಉತ್ತರಕನ್ನಡ ಜಿಲ್ಲೆಯ ಭಟಕಳ ಬಳಿಯ ಸೋಡಿಗದ್ದೆಯಲ್ಲಿ ಸತಿ ದೇವಸ್ಥಾನ ಒಂದು ಇದೆ. ಅಲ್ಲಿ ಹರಕೆ ಹೊತ್ತವರು ಕೊರಡಿನಲ್ಲಿ ಸ್ತ್ರೀ ವಿಗ್ರಹ ಕೊರೆಯಿಸಿ, ಬಣ್ಣ ಬಳಿದು ದೇವಿಗೆ ಅರ್ಪಿಸುವ ಪದ್ಧತಿ ಶತಕಗಳಿಂದಲೂ ನಡೆದು ಬಂದಿದೆ. ಈ ಗೊಂಬೆಗಳ ಸೀರೆ ಕುಪ್ಪಸ, ಅಲಂಕಾರಗಳು ಹಿಂದಿನಯುಗದ ಜನಸಾಮಾನ್ಯ ಹೆಂಗಳೆಯರವೇ ಆಗಿವೆ. ಗೋವಾದ ಪರ್ತಗಾಳಿ ಗೋಕರ್ಣ ಜೀವೋತ್ತಮ ಮಠದ ಹಿಂದಿನ ಹಲವು ವೃಂದಾವನಸ್ಥ ಗುರುಗಳ ಸಮಾಧಿಗಳ ಕೊಠಡಿಯ ಜಂತಿಗಳ ಮೇಲೆ ಹಲವಾರು ಭಾಗವತದ ಸನ್ನಿವೇಶಗಳನ್ನು ಕೊರೆಯಲಾಗಿದೆ. ತೆಂಗಿನಕಾಯಿ ಮಾರುವವ, ಸ್ಥಳೀಯ ವೇಷದಲ್ಲಿದ್ದರೆ, ಗೌಳಿಗನು ಕಂಬಳಿಕೊಪ್ಪೆ ಹೊದ್ದು ಬಿದಿರಿನಿಂದ ಕಟ್ಟಿದ ಕಾವಡಿಗಳಲ್ಲಿ ಹಾಲಿನ ಪಾತ್ರೆಗಳನ್ನು ಹೊತ್ತು ಹೊರಟಿರುವ ಗೌಳಗಿತ್ತಿ ತಲೆಯ ಮೇಲೆ ಮೊಸರಿನ ಗಡಿಗೆಗಳನ್ನೂ ಹೊತ್ತಿದ್ದಾಳೆ. ಇವರಿಬ್ಬರ ಹಿಂದೆ ದನ-ಕರುಗಳ ಹಿಂಡು ಹೊರಟಿದೆ. ಆಳುಗಳು ಹೊತ್ತ ಮೇಣೆಯಲ್ಲಿ ಧನಿಕನೋರ್ವನು ಸುಖಾಸೀನನಾಗಿದ್ದಾನೆ. ಆತನ ಎದುರಿಗೆ ಪಂಜರವೊಂದರಲ್ಲಿ ಗಿಳಿಯೂ ಇದೆ. ಢೋಲು ಬಾರಿಸುವವರು ಎದುರು ಹೊರಟಿದ್ದಾರೆ. ಬಾಂದೋಡೆಯ ಮಹಾಲಕ್ಷ್ಮಿ ದೇವಾಲಯದ ಹೊರಗೋಡೆಯಲ್ಲಿ ಕೊರಡಿನ ಚಿತ್ರ ಪಟ್ಟಿಕೆಗಳನ್ನು ಜೋಡಿಸಲಾಗಿದೆ. ಇವುಗಳಲ್ಲಿ ಭಕ್ತಾದಿಗಳು ಗಂಟೆ ಬಾರಿಸುತ್ತ ತಮ್ಮ ಇಷ್ಟದೇವತೆಗೆ ಮಂಗಳಾರತಿ ಬೆಳಗುವ ದೃಶ್ಯವಿದೆ. ಭಜನಾಮಂಡಳಿ ಹಾಡುತ್ತ ಹೊರಟ ಚಿತ್ರವಿದೆ. ವೇಲಿಂಗದ ಲಕ್ಷ್ಮೀನರಸಿಂಹ ದೇವುಳದ ಒಳಾಂಗಣದ ಕಂಬಗಳ ಮೇಲೆ, ಪೂಜೆಗೆ ಹೊರಟ ಹೆಂಗಸು, ಹಾಲು-ನೀರು ಹೊತ್ತ ಮಹಿಳೆಯರು ಕಾಣಿಸಿಕೊಂಡಿದ್ದಾರೆ. ಪರ್ತಕಾಳಿಮಠ, ಶಿರಾಲಿಯ ಚಿತ್ರಾಪುರಮಠ, ಶಿವಮೊಗ್ಗೆಯ ಶಿವಪ್ಪನಾಯಕ ವಸ್ತು ಸಂಗ್ರಹಾಲಯಗಳಲ್ಲಿ ಅನೇಕ ಅಪೂರ್ವ ಕೊರಡು ಚಿತ್ರಗಳಿವೆ. ಗೋವಾ ರಾಮನಾಥಿ ದೇವಾಲಯದ ಕೊರಡು ಚಿತ್ರಗಳಿಗೆ ರಬ್ಬಾದ ಬಣ್ಣ ಬಳಿಯಲಾಗಿದೆ. ಹಳೇಗೋವಾದ ಚರ್ಚುಗಳಲ್ಲಿ ಪಾದ್ರಿಗಳ ವಿಶೇಷ ಭಕ್ತಾದಿಗಳ ಕೊರಡು ಚಿತ್ರಗಳಿದ್ದು ಅವುಗಳಿಗೆ ಬಣ್ಣ ಬಳಿಯಲಾಗಿದೆ.

ದೂರದ ಗ್ರಾಮಗಳಲ್ಲಿ ಅಲ್ಲಲ್ಲಿ ಕಂಡುಬರುವ ಹೆಚ್ಚಿನ ಕೊರಡು ಚಿತ್ರಗಳಿಗೆ ಸರಿಯಾದ ಸಂರಕ್ಷಣೆ ಇಲ್ಲದೇ ಹುಳ-ಹುಪ್ಪಡಿಗಳಿಗೆ ಆಹುತಿಯಾಗುತ್ತಲಿವೆ. ಮನಸ್ವಿ ಎಣ್ಣೆ ಬಣ್ಣ ಬಳಿದು ಹಾಳುಗೆಡವಿದ ಚಿತ್ರಗಳಿಗೂ ಕೊರತೆ ಇಲ್ಲ. ಈ ಅಳಿದುಳಿದವು ಗಳೂ ಸಂಪೂರ್ಣ ನಾಶಹೊಂದುವ ಪೂರ್ವದಲ್ಲಿಯೇ ಅವನ್ನು ಸಂರಕ್ಷಿಸಿ, ಚಿತ್ರೀಕರಿಸಿ, ಅಭ್ಯಸಿಸುವ ಪ್ರಯತ್ನವನ್ನು ಚರಿತ್ರಾಸಕ್ತರು ಕೈಕೊಳ್ಳುವದು ಅತಿ ಮುಖ್ಯವಾಗಿದೆ.

ಕೊರಡು ಚಿತ್ರಗಳ ಚಾರಿತ್ರಿಕತೆ: ಈ ಕೊರಡು ಚಿತ್ರಗಳಲ್ಲಿ ಒಂದರಿಂದ ಐದು ಶತಕಗಳಷ್ಟು ಹಿಂದಿನವು ಇರಲು ಸಾಧ್ಯ. ದೇವಾಲಯದ ಆಡಳಿತ ವರ್ಗದ ಅಧೀನದಲ್ಲಿದ್ದ ಕಾಗದ ಪತ್ರಗಳ ಕಡತಗಳ ಪರಿಶೀಲನೆಯಿಂದ, ಇವುಗಳ ಪ್ರಾಚೀನತೆ ನಿರ್ಧರಿಸಲು ಸಾಧ್ಯ. ಜೊತೆಗೆ ಆಯಾ ಕಲಾಕಾರರಿಗೆ ನೀಡಿದ ಧನ-ಧಾನ್ಯಗಳ ವಿವರಗಳು, ಕೊಡಮಾಡಿದ ಗೌರವ ಪುರಸ್ಕಾರಗಳು ಇವುಗಳ ಕುರಿತು ದೇವಾಲಯಗಳಲ್ಲಿ ದಾಖಲೆಗಳಿರುತ್ತವೆ. ದಾಖಲೆಗಳ ಅಭಾವದಲ್ಲಿ, ವೈಜ್ಞಾನಿಕ ರೀತಿಯಲ್ಲಿ ಕಾಲಮಾನವನ್ನು ನಿರ್ಧರಿಸಬಹುದು. ಬಳಸಿದ ದಿಂಡುಗಳ ಜಾತಿ, ವಯೋಮಾನ ಗಳನ್ನು ಅವುಗಳ ಒಳವರ್ತುಲಗಳ (Concentric growth circles)ಗಳಿಂದ ನಿರ್ಧರಿಸಲು ಸಾಧ್ಯವಿದೆ. ಈ ವೈಜ್ಞಾನಿಕ ಹಿನ್ನೆಲೆಯಲ್ಲಿ ಕಾಷ್ಠಶಿಲ್ಪಗಳು ಇತಿಹಾಸದ ಅಧ್ಯಯನಕ್ಕೆ ಹೊಸ ಆಯಾಮ ನೀಡಬಲ್ಲವು.

ಕಲೆಯ ಬಗ್ಗೆ ಏನೂ ಗೊತ್ತಿಲ್ಲದ ಆಳುಗಳಿಂದ ಈ ಕೊರಡು ಚಿತ್ರಗಳಿಗೆ ಎಣ್ಣೆ-ಬಣ್ಣಗಳನ್ನು ಪ್ರತಿವರ್ಷ

ಲೇಪಿಸುತ್ತಿರುವದರಿಂದ ಅವು ತಮ್ಮ ಮೂಲ ಸ್ವರೂಪವನ್ನು ಅಂದಚಂದವನ್ನು ಕಳೆದುಕೊಂಡಿವೆ. ಪುರಾತನ ಕಟ್ಟಡಗಳ ಕಪ್ಪಿಟ್ಟ ಹಾವಸೆ, ಬೂಷ್ಟು (ಬೂರಸು) ಹೋಗಲಾಡಿಸುವಂತೆ, ಈ ಚಿತ್ರಗಳನ್ನು ಸಹ, ತಜ್ಞರಿಂದ ಶುಭ್ರಗೊಳಿಸಿ, ಅವುಗಳ ಮೂಲ ಜೀವಕಳೆಯನ್ನು ಪುನಃ ಪಡೆಯಬಹುದು. ಈ ಪ್ರಯತ್ನ, ಇತಿಹಾಸ ಅಧ್ಯಯನಕ್ಕೆ ಹೊಸ ಆಯಾಮ/ಆಕರ ನೀಡುವ ಭರವಸೆ ಇದೆ.

*

ಕೊರಡಿನಲ್ಲಿ ಕೊರೆದ ಚಿತ್ರಗಳಲ್ಲಿ ಸಾಮಾಜಿಕ ಜೀವನ



ಹಿಮ್ಮೇಳದ ವಾದ್ಯಗಾರರು




ಕೈ ಕಡಗೋಲಿನಿಂದ ಮೊಸರು ಕಡೆಯುತ್ತಿರುವವಳು.



ಮಗುವನ್ನು ಮುದ್ದಿಸುವವಳು




ಮಗುವನ್ನು ಎತ್ತಿಕೊಳ್ಳುವವಳು




ಪುಂಗಿ ನುಡಿಸುವ ಹಾವಾಡಿಗ




ಪಾತ್ರೆ ಬೆಳಗುವವಳು



ಪಕ್ಷಿಯ ಪ್ರೇಮಿ



ವಿಸ್ಮಯಗಾರ್ತಿ



ಸಕಲ ಅಲಂಕಾರದೊಂದಿಗೆ



ಕುಂಕುಮ ಬೊಟ್ಟು ಇಟ್ಟುಕೊಳ್ಳುವವಳು



ಕನ್ನಡಿಯಲ್ಲಿ ನೋಡಿಕೊಳ್ಳುವವಳು



ಸಾಕಿದ ಹಾವನ್ನು ಮುದ್ದಿಸುವವ



ಪಕ್ಕಿ ಹಿಡುಕ



ವೈರಾಗ್ಯ ಬರಿಸುವ ಪ್ರಸೂತಿ

ಆರ್.ಎಚ್. ಕುಲಕರ್ಣಿ*

ಗಣೇಶನ ಶಿಲಾವಿಗ್ರಹ

ಈ ಕಿರು ಲೇಖನದಲ್ಲಿ ನನ್ನ ಇತ್ತೀಚಿನ, ಕ್ಷೇತ್ರ ಕಾರ್ಯದಲ್ಲಿ ಶೋಧಿಸಿದ ಗಣೇಶನ ಶಿಲಾವಿಗ್ರಹ ಮತ್ತು ಅದಕ್ಕೆ ಸಂಬಂಧ ಪಟ್ಟಿರಬಹುದಾದ ಒಂದು ಕಟ್ಟಡದ ಅವಶೇಷವನ್ನು ಕುರಿತು ಚರ್ಚಿಸಿದೆ.



ನಿಲೋಗಲ್ ಗಣೇಶ ಶಿಲ್ಪ

ಗಣೇಶನ ಶಿಲಾವಿಗ್ರಹವನ್ನು ಇತ್ತೀಚೆಗೆ ನಿಲೋಗಲ್ ಗ್ರಾಮದಲ್ಲಿ (ತಾ: ಕುಷ್ಟಗಿ, ಜಿಲ್ಲೆ: ರಾಯಚೂರು) ಶೋಧಿಸಲಾಯಿತು. ನಿಲೋಗಲ್ ಗ್ರಾಮವು ಬಾದಾಮಿಯಿಂದ ಪೂರ್ವಕ್ಕೆ ೨೫ ಕಿ.ಮೀ. ದೂರದಲ್ಲಿ ಬಾದಾಮಿ-ಕುಷ್ಟಗಿ ರಸ್ತೆಯ ಮೇಲೆ ಇದೆ.

ಸ್ಥಳೀಯವಾಗಿ "ಕಪ್ಪೇರಾಯ", "ಕಪ್ಪತ್ತರಾಯ" ಎಂದು ಕರೆಯುತ್ತಿದ್ದ ಈ ವಿಗ್ರಹ ಇಲ್ಲಿನ ಪ್ರಸಿದ್ಧ ಅಚನೂರು ಶ್ರೀ ಮಲ್ಲಿಕಾರ್ಜುನ ದೇವಾಲಯದಿಂದ, ಸುಮಾರು ಅರ್ಧ ಕಿ.ಮೀ. ದೂರದಲ್ಲಿದೆ.[೧] ತಲೆಯ ಭಾಗ ಮಾತ್ರ ಗೋಚರಿಸುತ್ತಿದ್ದ ಈ ವಿಗ್ರಹ ಮಣ್ಣಲ್ಲಿ ಸಂಪೂರ್ಣವಾಗಿ ಹೂತುಹೋಗಿತ್ತು. ವಿಶೇಷವಾಗಿ ಮೇಲೆ ಕಾಣುತ್ತಿದ್ದ ಮುಖದ ಭಾಗ ಮತ್ತು ಶಿರಸ್ಚಕ್ರವನ್ನು ಗಮನಿಸಿ, ಅಧ್ಯಯನದ ದೃಷ್ಟಿಯಿಂದ ಮೇಲೆ ತೆಗೆದಾಗ ಅತ್ಯಂತ ಅಪರೂಪದ ಗಣೇಶನ ವಿಗ್ರಹ ಇದಾಗಿತ್ತು.

"ಮಹಾಕಾಯ" ಎಂಬ ಹೆಸರಿಗೆ ತಕ್ಕಂತೆ ಇರುವ ಈ ವಿಗ್ರಹದ ಸಂಪೂರ್ಣ ಎತ್ತರ ೧೪೫ ಸೆಂ.ಮೀ. ಮತ್ತು ಅಗಲ ೩೫ ಸೆಂ.ಮೀ.

ಈ ಶಿಲ್ಪದಲ್ಲಿ ಗಣೇಶನನ್ನು ಸುಖಾಸನದಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. (ಎಡಗಾಲನ್ನು ಅಡ್ಡಲಾಗಿ ಚಪ್ಪಟೆಯಾಗಿ ಮಡಿಸಿ ಮತ್ತು ಬಲಗಾಲನ್ನು ಲಂಬವಾಗಿ ಮಡಿಸಿ ಚಪ್ಪಟೆಯಾದ ಆಸನದ ಮೇಲೆ ಕುಳಿತಿರುವಂತೆ ಇರುವುದು). ಈ ವಿಗ್ರಹವು ಒಂದು ಮಂಡುಶಿಲ್ಪ. ಇದರ ಹಿಂಭಾಗ ಮತ್ತು ಮುಂಭಾಗವನ್ನು ಸಂಪೂರ್ಣವಾಗಿ ಕೆತ್ತಲಾಗಿದೆ. ವಿಗ್ರಹದ ಆಸನದ ಕೆಳಗೆ ಅಡಿಗೂಟ (bottom shaft)ವಿದೆ. ಇದರಿಂದ ಪ್ರಾಯಶಃ ಅಂದು ಇದನ್ನು ಇಲ್ಲಿನ ಯಾವುದಾದರೊಂದು ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಿರಬಹುದೆಂದು ಊಹಿಸಬಹುದಾಗಿದೆ.

ಶಿಲ್ಪದಲ್ಲಿ, ಗಣೇಶನ ಸೊಂಡಿಲು, ಕೈಗಳು ಹಾಗೂ

* ಯು.ಜಿ.ಸಿ. ಹಿರಿಯ ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಎರಡೂ ಕಾಲುಗಳ ಮೊಳಕಾಲು ಮುಂಡೆಗಳು ಒಡೆದು ಹೋಗಿವೆ. ಆದಾಗ್ಯೂ ಕೂಡಾ ಭುಜಗಳು ಸಂಪೂರ್ಣವಾಗಿ ಕಾಣುತ್ತವೆ. ಗಣೇಶ ಚತುರ್ಭುಜಗಳನ್ನು ಹೊಂದಿದ್ದಾನೆ. ಇದು ಈಗ ಉಳಿದಿರುವ ಭುಜಗಳಿಂದ ತಿಳಿದು ಬರುತ್ತದೆ.



ಗಣೇಶ ಶಿಲ್ಪದ ಹಿಂಭಾಗ

ತಲೆಯ ಹಿಂಭಾಗದಲ್ಲಿ ತುಸು ದೊಡ್ಡದು ಎನಿಸುವಂತಹ ಶಿರಸ್ಚಕ್ರವಿದೆ. ಇದು ಭುಜಗಳನ್ನು ಹಿಂದಿನಿಂದ ಅರ್ಧ ಮುಚ್ಚಿದೆ. ವಿಗ್ರಹದಲ್ಲಿ, ಹಾರ, ಕೇಯೂರ, ಉದರಬಂಧ, ನಾಗಯಜ್ಞೋಪ ವೀತ, ಅಲ್ಲದೆ ಕರಬಂಧಗಳಿಂದ ಅಲಂಕರಣವಿದೆ. ತಲೆಯ ಮೇಲ್ಭಾಗದಲ್ಲಿ ಆಕೃತಿಗೆ ಕೊಂಚ ಚಿಕ್ಕದೆನಿಸುವ ಕಿರೀಟವಿದೆ. ಇದರ ಕೆಳಗೆ ಬೋರಲಾಗಿ ಹಾಕಿದಾಗ ಹರಡಿಕೊಂಡಂತೆ ಕಾಣುವ ಕಮಲದ ಪಕಳೆಗಳೂ ಇವೆ.

ಗಣೇಶ ಧೋತ್ರವನ್ನು ಉಟ್ಟುಕೊಂಡಿದ್ದು - ಹಿಂಭಾಗದಲ್ಲಿ ಕಚ್ಚೆಯನ್ನು ಹಾಕಿದ್ದಾನೆ, ಅದನ್ನು ಸಿಕ್ಕಿಸಿಕೊಂಡಿರುವ ರೀತಿ ಶಿಲ್ಪಿಯ ಸಮಯಪ್ರಜ್ಞೆ ಮತ್ತು ಅವನ ನೈಜ ಕೆತ್ತನೆಯನ್ನು ಎತ್ತಿತೋರಿ ಸುತ್ತದೆ. ಅಂಗಾಂಗದ, ಪ್ರತಿಯೊಂದು ಭಾಗವನ್ನು ಅತ್ಯಂತ ಸುಂದರವಾಗಿ ಮತ್ತು ನೈಜವಾಗಿ ಕಾಣುವಂತೆ ಕೆತ್ತಿದ್ದಾನೆ. ಉದಾಹರಣೆಗೆ, ಅಗಲವಾದ ಚೂಪಾಗಿರುವ ದುಂಡನೆಯ ಗಜ ಕಿವಿಗಳು, ದೊಡ್ಡ ಮುಖ, ದಪ್ಪನಾದ ಉದರ ಭಾಗ ಅಲ್ಲದೇ ಅತ್ಯಂತ ಸುಂದರವಾಗಿ ಕೆತ್ತಿರುವ ಕಾಲುಗಳು ಮತ್ತು ಪಾದಗಳು, ಶಿಲ್ಪಿಯ ಕರಕೌಶಲತೆಯನ್ನು ರುಜುವಾತುಪಡಿಸುತ್ತದೆ.

ಈ ಶಿಲ್ಪದಲ್ಲಿ ಕಂಡುಬರುವ ಮುಖ್ಯ ಅಂಶವೆಂದರೆ ನಾಗ ಯಜ್ಞೋಪವೀತ.[೨] ನಾಗನನ್ನು ಸಾಮಾನ್ಯವಾಗಿ ಗಣೇಶ ಉದರ ಬಂಧದ ಹಾಗೆ ಸುತ್ತಿಕೊಂಡಿರುತ್ತಾನೆ. ಇದು ಹಲವಾರು ಶಿಲ್ಪಗಳಲ್ಲಿ ಕಂಡುಬಂದಿದೆ. ಆದರೆ, ಇಲ್ಲಿ ಗಣೇಶನ ನಾಗನನ್ನು ಉದರ ಬಂಧವಾಗಿ ಬಳಸಿಕೊಳ್ಳದೇ ಯಜ್ಞೋಪವೀತವನ್ನಾಗಿ ಮಾಡಿಕೊಂಡಿದ್ದಾನೆ. ಈ ರೀತಿಯ ಶಿಲ್ಪಗಳು ಅತಿ ಕಡಿಮೆ. ಅದರಲ್ಲೂ ಬಾದಾಮಿ ಚಾಲುಕ್ಯರ ಮುಖ್ಯ ಸ್ಥಳಗಳಲ್ಲಿ ಇಂತಹವು ಅಂದರೆ ನಾಗನನ್ನು ಉದರಬಂಧದಂತೆ ಕಟ್ಟಿಕೊಂಡಿರುವ ಉದಾ ಹರಣೆಗಳು ಇದ್ದರೂ ಯಜ್ಞೋಪವೀತದಂತೆ ಕಟ್ಟಿಕೊಂಡಿರುವ ವಿಗ್ರಹಗಳು ದೊರೆತಿಲ್ಲವೆಂದೇ ಹೇಳಬೇಕು.

ಶೈಲಿಯ ದೃಷ್ಟಿಯಿಂದ ಇದನ್ನು ನಾವು ಚಾಲುಕ್ಯಶೈಲಿಯ ಚೌಕಟ್ಟಿನೊಳಗೇ ಚರ್ಚಿಸಬೇಕಾಗುತ್ತದೆ. ಏಕೆಂದರೆ- ನಿಲೋಗಲ್ ಭೌಗೋಳಿಕವಾಗಿ ಚಾಲುಕ್ಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆ. ಚಾಲುಕ್ಯರ ಬಾದಾಮಿಯಲ್ಲಿನ ಮೊದಲನೆಯ ಗುಹೆಯಲ್ಲಿರುವ ಗಣೇಶನ ಶಿಲ್ಪಗಳನ್ನು ಬಿಟ್ಟರೆ ನಮಗೆ ಅಷ್ಟು ಪ್ರಮುಖವಾದ ಶಿಲ್ಪಗಳು ಈ ಭಾಗದಲ್ಲಿ ದೊರೆಯುವುದಿಲ್ಲ. ಬಾದಾಮಿಯ ವಸ್ತುಸಂಗ್ರಹಾಲಯದಲ್ಲಿನ ಗಣೇಶನ ಶಿಲ್ಪಗಳು ಮತ್ತು ಐಹೊಳೆಯ ವಸ್ತು ಸಂಗ್ರಹಾಲಯದಲ್ಲಿನ ಗಣೇಶನ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಪ್ರಸ್ತುತ ಶಿಲ್ಪಕ್ಕೂ ನಂತರದ ಕಾಲದವು ಎನಿಸುತ್ತದೆ. ಬಾದಾಮಿಯ ಮೊದಲನೆಯ ಗುಹೆಯಲ್ಲಿನ- ಮಹಿಷಾಸುರಮರ್ದಿನಿಯ ಗುಹೆಯಲ್ಲಿನ ಕುಳಿತ ಭಂಗಿಯಲ್ಲಿರುವ ಗಣೇಶನ ವಿಗ್ರಹಕ್ಕೆ ಪ್ರಸ್ತುತ ವಿಗ್ರಹ ಸಾಮ್ಯತೆಯನ್ನು ಹೊಂದಿದೆ. ಕಾಲಮಾನದ ದೃಷ್ಟಿಯಿಂದ ಬಾದಾಮಿಯ ವಿಗ್ರಹ ತುಂಬಾ ಹಳೆಯದಾಗುತ್ತದೆ. ಇದೇ ಗುಹಾಂತರ್ದೇವಾಲಯದ ಮತ್ತೊಂದು ಉದಾಹರಣೆಯಾದ ನಟರಾಜನ ಉಬ್ಬು ಶಿಲ್ಪದಲ್ಲಿಯ ನೃತ್ಯ ಭಂಗಿಯಲ್ಲಿರುವ ಗಣೇಶನ ಶಿರಸ್ಚಕ್ರಕ್ಕೆ ನಿಲೋಗಲ್ ಗಣೇಶನ ಶಿರಸ್ಚಕ್ರವು ತಕ್ಕಮಟ್ಟಿಗೆ ಹೋಲುತ್ತದೆ. ಆದರೆ ಬಾದಾಮಿಯ ಶಿಲ್ಪವು ಉಬ್ಬು ಶಿಲ್ಪವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

ಮಧ್ಯ ಪ್ರದೇಶದಲ್ಲಿಯ ಗುಪ್ತರ ಕಾಲದ ಭುಮರಾದಲ್ಲಿನ ಶಿವದೇವಸ್ಥಾನದಲ್ಲಿ ದೊರೆತಿರುವ ಗಣೇಶನ ವಿಗ್ರಹವನ್ನು[೩] ಗಮನಿಸಬಹುದು. (ಕ್ರಿ.ಶ. ಸು. ೬ನೇ ಶತಮಾನ) ಇದು ಶಿರಸ್ಚಕ್ರದಲ್ಲಿ ಮತ್ತು ಕುಳಿತ ಭಂಗಿಯಲ್ಲಿ ಹೆಚ್ಚು ಕಡಿಮೆ ನಿಲೋಗಲ್‌ನ ಶಿಲ್ಪದಂತೆಯೇ ಇದೆ. ಆದರೆ ಭುಮರಾದಲ್ಲಿನ ಗಣೇಶನಿಗೆ ಗಂಟಾಯಜ್ಞೋಪವೀತ ಇರುವುದು ವಿಶೇಷವಾದರೆ ಇಲ್ಲಿಯಾದರೋ ನಾಗಯಜ್ಞೋಪವೀತವಿದೆ. ಪ್ರಸ್ತುತ ವಿಗ್ರಹ

ಶೈಲಿಯ ದೃಷ್ಟಿಯಿಂದ ಮೇಲಿನ ವಿಗ್ರಹದಷ್ಟು ಹಳೆಯದಲ್ಲ. ಇನ್ನು ಎಲ್ಲೋರದ (ಮಹಾರಾಷ್ಟ್ರ) ರಾಷ್ಟ್ರಕೂಟರ ಕಾಲದಲ್ಲಿಯ ಕೆಲವು ಗಣೇಶನ ಶಿಲ್ಪಗಳನ್ನು ಗಮನಿಸಬಹುದು. ಅಲ್ಲಿನ ಪ್ರಸಿದ್ಧ ಕೈಲಾಸನಾಥ ದೇವಾಲಯದ ಯಜ್ಞಶಾಲೆಯಲ್ಲಿರುವ ಸಪ್ತ ಮಾತೃಕೆಯರ ಶಿಲ್ಪಗಳ ಗುಂಪಿನಲ್ಲಿರುವ ಗಣೇಶ, ಮತ್ತು ರಾವಣ-ಕಿ-ಖಾಯ್ ಎಂಬ ಗುಹಾಂತರ್ದೇವಾಲಯದಲ್ಲಿನ ಮತ್ತು ರಾಮೇಶ್ವರ ಗುಹಾಂತರ್ದೇವಾಲಯಗಳಲ್ಲಿನ[೪] ಗಣೇಶ ವಿಗ್ರಹಗಳು ಚಿಕ್ಕ ಕಿರೀಟ, ಅಗಲವಾದ ಶಿರಸ್ಚಕ್ರ ಮತ್ತು ಅನುರೂಪವಾದ ದೇಹಾಕೃತಿಗಳನ್ನು ಹೊಂದಿದೆ. ಇವುಗಳು ಪ್ರಸ್ತುತ ವಿಗ್ರಹಕ್ಕೆ ಶೈಲಿಯ ದೃಷ್ಟಿಯಿಂದ ತೀರ ಸನಿಹವಾದವುಗಳು. ಆದುದರಿಂದ, ನಿಲೋಗಲ್‌ನ ಗಣೇಶನ ಶಿಲಾವಿಗ್ರಹವನ್ನು ಕ್ರಿ.ಶ. ಸು. ಆನೇ ಶತಮಾನದ್ದೆಂದು ಗುರುತಿಸಬಹುದಾಗಿದೆ.

ಈ ಭಾಗದಲ್ಲಿ ಇದುವರೆಗೂ ದೊರೆತ, ಅದರಲ್ಲೂ ವಿಶೇಷವಾಗಿ ನಿಲೋಗಲ್‌ನಲ್ಲಿ ದೊರೆತ ಚಾಲುಕ್ಯಪೂರ್ವ ಕಾಲದ ಸುಡಾವೆ ಮಣ್ಣಿನ ದ್ವಿಬಾಹು ನರಸಿಂಹ ವಿಗ್ರಹ[೫] ಮತ್ತು ನಾನು ತೀರ ಇತ್ತೀಚಿಗೆ ಸಂಶೋಧಿಸಿದ ಸೂರ್ಯನ[೬] ಶಿಲ್ಪದ ಜೊತೆಗೆ ಗಣೇಶನಶಿಲ್ಪವೂ ಅತ್ಯಂತ ಮುಖ್ಯ ಉದಾಹರಣೆಯಾಗಿದೆ. ಇವುಗಳು ಈ ಭಾಗದಲ್ಲಿನ ಅಂದಿನ ಕಲಾ ಚಟುವಟಿಕೆಗಳನ್ನು ಎತ್ತಿ ತೋರಿಸುತ್ತವೆ.

ಕಟ್ಟಡದ ಅವಶೇಷ:

ಈ ಕಟ್ಟಡದ ಅವಶೇಷ, ಮೇಲೆ ಚರ್ಚಿಸಿದ ವಿಗ್ರಹದಿಂದ ಕೇವಲ ೧೦ಅಡಿ ದೂರದಲ್ಲಿದೆ. ಆಯತಾಕಾರದಲ್ಲಿರುವ ಈ ಕಟ್ಟಡದ ತಳಪಾಯದ ಅವಶೇಷ ಮಾತ್ರ ಈಗ ಕಂಡು ಬರುತ್ತದೆ. ಇದು ಮೂಲತಃ ದೇವಾಲಯವಾಗಿತ್ತೇ ಎಂಬ ಪ್ರಶ್ನೆಗೆ ತಕ್ಷಣ ಉತ್ತರಿಸುವುದು ಕಷ್ಟವಾದರೂ, ಪಕ್ಕದಲ್ಲಿಯೇ ಇರುವ ವಿಗ್ರಹವನ್ನು ಗಮನಿಸಿ, ಬಹುಶಃ ಇದು ಒಂದು ಮಂಟಪದ ಹಾಗೆ ಇರುವ ತೆರೆದ ದೇವಾಲಯವಾಗಿದ್ದು, ನಂತರದ ಕಾಲದಲ್ಲಿ ಹಾಳಾಗಿರುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಪ್ರಸ್ತುತ, ಗಣೇಶನ ಶಿಲ್ಪವನ್ನು ಪ್ರತಿಷ್ಠಾಪಿಸಲು ಉಪಯೋಗಿಸಿದ್ದಿರಬಹುದಾದ ಪೀಠದ ಯಾವುದೇ ತರಹದ ಅವಶೇಷಗಳೂ ಇಲ್ಲಿ ದೊರೆತಿಲ್ಲ. ಹಾಗಾದರೆ, ಯಾವುದೋ ಕಾರಣಗಳಿಂದ ನಿರ್ಮಾಣದ ಪ್ರಾರಂಭದ ಹಂತದಲ್ಲೇ ಕಟ್ಟಡದ ಕೆಲಸ ಸ್ಥಗಿತವಾಗಿ, ಪ್ರಸ್ತುತ ವಿಗ್ರಹ ಸ್ಥಾಪನೆಯಾಗದೇ ಹಾಗೆ ಉಳಿದಿರಲೂಬಹುದು. ಒಟ್ಟಿನಲ್ಲಿ, ಕಟ್ಟಡದ ಮತ್ತು ವಿಗ್ರಹದ ಸಂಬಂಧವನ್ನು ಕುರಿತಂತೆ ಹೆಚ್ಚಿನ ಸಂಶೋಧನೆ ಮುಂಬರುವ ದಿನಗಳಲ್ಲಿ ಬೆಳಕು ಚೆಲ್ಲುವುದು ಸಾಧ್ಯವಾಗಿದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧ ಈ ವಿಗ್ರಹ, ಇಲ್ಲಿನ 'ಮದಗದ ಕಂಚವ್ವ' ಎಂಬ ಜಾಗದಲ್ಲಿಯ ಗುಡ್ಡದ ಇಳಿಜಾರಿನಲ್ಲಿದೆ. ಅಲ್ಲದೆ ಇದು ನಮ್ಮ ಚಿಕ್ಕಪ್ಪ, ಶ್ರೀ ಪ್ರಹ್ಲಾದರಾವ್ ಕೃ. ಕುಲಕರ್ಣಿ ಇವರ ಸರ್ವೇ ನಂಬರಿನಲ್ಲಿ ಬರುತ್ತದೆ.

೨ ನಾಗನನ್ನು ಯಜ್ಞೋಪವೀತದಂತೆ ಧರಿಸುವುದನ್ನು ಕುರಿತಂತೆ, ನನ್ನ ತಿಳುವಳಿಕೆ ಪ್ರಕಾರ ಯಾವ ಪ್ರತಿಮಾ ಲಕ್ಷಣ ಗ್ರಂಥಗಳು ಹೇಳುವುದಿಲ್ಲ. ಡಾ॥ ಸುಂದರ ಅವರು ನಾಗನನ್ನು ಇದೆ ರೀತಿಯಲ್ಲಿ ಧರಿಸಿರುವ ಶಿಲ್ಪಗಳು 'ಎಲ್ಲೋರ'ದಲ್ಲಿವೆ ಎಂದು ನಾನು ಅವರೊಂದಿಗೆ, ಇದನ್ನು ಕುರಿತಂತೆ ಚರ್ಚಿಸುತ್ತಿದ್ದಾಗ ತಿಳಿಸಿದ್ದಾರೆ. ಆದರೆ ನಾನು ಮುಂದೆ ಉದಾಹರಿಸಿರುವ ಎಲ್ಲೋರಾದ ಗಣೇಶನ ವಿಗ್ರಹಗಳಲ್ಲಿ ನಾಗಯಜ್ಞೋಪವೀತ ಇರುವ ಶಿಲ್ಪಗಳು ನನ್ನ ಗಮನಕ್ಕೆ ಬಂದಿಲ್ಲ.

೩ ಬ್ಯಾನರ್ಜಿ ಆರ್.ಡಿ. ೧೯೨೪, **ದಿ ಟೆಂಪಲ್ ಆಫ್ ದಿ ಶಿವಾ ಅಟ್ ಬುಮರಾ**, ಚಿತ್ರ ೧೫ ಎ, ಬಿ. **ಮೆಮೊಯರ್ಸ್ ಆಫ್ ದಿ ಆರ್ಕಿಯಾಲಜಿಕಲ್ ಸರ್ವೆ ಆಫ್** ಇಂಡಿಯಾ ನಂ. ೧೬.

೪ ಆಲೈಸ್, ಗಟ್ಟಿ, ೧೯೭೭: **ಗಣೇಶ** (ಎರಡನೇ ಮುದ್ರಣ, ದಿಲ್ಲಿ) ಇದರಲ್ಲಿ, ಭಾರತದ ಹಲವಾರು ಪ್ರಮುಖ ಗಣೇಶನ ಶಿಲ್ಪಗಳನ್ನು ಕುರಿತು ಚರ್ಚಿಸಿದ್ದಾರೆ. ಅದರಲ್ಲಿ ನಾನು ಉದಾಹರಿಸಿದ ವಿಗ್ರಹಗಳ ಬಗ್ಗೆಯೂ ವಿವರವಾದ ಚರ್ಚೆ ಇದೆ.

೫ ಕುಲಕರ್ಣಿ, ಆರ್.ಎಚ್. ೧೯೯೬: **ಚಾಲುಕ್ಯಪೂರ್ವ ಕಾಲದ ಸೂಡಾವೆ ಮಣ್ಣಿನ ದ್ವಿಬಾಹು ನರಸಿಂಹ ವಿಗ್ರಹ**, ಪು. ೬೯-೭೧, ಇತಿಹಾಸ ದರ್ಶನ, ಸಂ.೧೧, ಬೆಂಗಳೂರು.

೬ ಕುಲಕರ್ಣಿ, ಆರ್.ಎಚ್. ೧೯೯೬(ಅಚ್ಚಿನಲ್ಲಿ): **ಗಣೇಶ ಆ್ಯಂಡ ಸೂರ್ಯ ಸ್ಕಲ್ಪಚರ್ಸ್ ಫ್ರಂ ನಿಲೋಗಲ್**, ಡಾ॥ ಎಸ್.ಶಂಕರನಾರಾಯಣನ್ ಅಭಿನಂದನ ಗ್ರಂಥ, ಸಂ.ಡಾ॥ ಕಿರಣಕಾಂತ್ ಚೌದುರಿ ಮತ್ತು ಇತರರು ದಿಲ್ಲಿ.

ಕೃತಜ್ಞತೆಗಳು

(ಈ ಗಣೇಶನ ವಿಗ್ರಹವನ್ನು ಹೊರತೆಗೆಯಲು ಸಹಾಯ ಮಾಡಿದ ಶ್ರೀ ಮಲ್ಲಪ್ಪ ಲೆಕ್ಕಹಾಳ, ಹಾಗೂ ಚಿರಂಜೀವಿಗಳಾದ ಅರವಿಂದ ಪಾಟೀಲ್, ಶ್ರೀಕಾಂತ ಕುಲಕರ್ಣಿ ಇವರಿಗೆ ಮತ್ತು ಇದನ್ನು ಕುರಿತಂತೆ ಹೆಚ್ಚಿನ ಆಸಕ್ತಿ ಹುಟ್ಟುವಂತೆ ವಿವರಿಸಿದ ಡಾ. ಅ. ಸುಂದರ ಅವರಿಗೆ ಮತ್ತು ನನ್ನ ಪಿಹೆಚ್ ಡಿ. ಮಾರ್ಗದರ್ಶಿಗಳಾದ ಡಾ॥ ಎಂ.ಎಸ್. ಕೃಷ್ಣಮೂರ್ತಿಯವರಿಗೆ ಧನ್ಯವಾದಗಳು.)

ಶಿವಪ್ಪ ಎನ್. ನೀರಲಗಿ*

ಮುನಿಯರಬೊಮ್ಮನಹಳ್ಳಿಯ ಜೈನ ಶಿಲ್ಪಗಳು ಹಾಗೂ ಇತರ ಅವಶೇಷಗಳು

ಭೌಗೋಳಿಕ ನೆಲೆ

ಗುಲ್ಬರ್ಗಾ ಜಿಲ್ಲೆಯ ಶೋರಾಪುರದಿಂದ ಪಶ್ಚಿಮಾಭಿಮುಖವಾಗಿ ಕೆಂಭಾವಿಯ ಮೂಲಕ ತಾಳಿಯಕೋಟೆಯತ್ತ** ಕ್ರಮಿಸುವಾಗ, ಕೆಂಭಾವಿಯಿಂದ ಸುಮಾರು ೧೫ ಕಿ.ಮೀ.ಗಳ ನಂತರ ದಾರಿಯ ಬಲಭಾಗಕ್ಕೆ ತಿರುವಿಕೊಂಡರೆ ಅಲ್ಲಿ ವಿಜಯನಗರದ ಉತ್ತರಾರ್ಧ ಕಾಲದ ಗುತ್ತಿಯಬಸವಣ್ಣನ ಗುಡಿಯು ಸಿಗುತ್ತದೆ. ಅಲ್ಲಿಂದ ೧ ಕಿ.ಮೀ. ಅಂತರದಲ್ಲಿ ಪಶ್ಚಿಮಕ್ಕೆ ಕಿರಿದಾದ ಒಂದು ಕಣಿವೆ ಇದೆ. ಕೆಮ್ಮಣ್ಣಿನಿಂದ ಕೂಡಿದ ತುಂಬಾ ಫಲವತ್ತಾದ ಈ ಕಣಿವೆಯು, ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗುತ್ತ ಅನೇಕ ಸಣ್ಣ ಸಣ್ಣ ತೊರೆಗಳಿಂದೊಡಗೂಡಿ ಮುಂದೆ ದೊಡ್ಡ ಹಳ್ಳವಾಗುತ್ತಾ, ಆನೆಮಡು ಹಾಗೂ ಕುಳಗೇರಿಗಳ ಮೂಲಕ ಯಡ್ರಾಮಿಯ ಹತ್ತಿರ ಭೀಮಾನದಿಯನ್ನು ಸೇರುತ್ತದೆ. ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳ ಸರಹದ್ದಿನಲ್ಲಿ ಹಾಗೂ ಈ ಕಣಿವೆಯ ಪ್ರಾರಂಭದ ಹಂತದಲ್ಲಿ ಇರುವ ಊರೇ "ಮುನಿಯರ ಬೊಮ್ಮನಹಳ್ಳಿ". ಬಹುಶಃ ಪ್ರಾಚೀನ ಕರ್ನಾಟಕದ ಪ್ರಸಿದ್ಧ ಜೈನ ಕೇಂದ್ರಗಳಲ್ಲಿ ಇದೂ ಒಂದು ಎಂಬುದಕ್ಕೆ ಈ ಊರಿನಲ್ಲಿರುವ ಅಳಿದುಳಿದ ಜೈನಾವಶೇಷಗಳಿಂದಲೂ ಹಾಗೂ ಇತರ ಪಳೆಯುಳಿಕೆಗಳಿಂದಲೂ ನಾವು ಊಹಿಸಬಹುದಾಗಿದೆ. ಈ ಊರಿಗೆ ಮಹನೀಯರ ಬೊಮ್ಮನಹಳ್ಳಿ, ಮೋರೇರ (ಮೌರ್ಯರ?) ಬೊಮ್ಮನಹಳ್ಳಿ ಹಾಗೂ ಮುನಿಯರ ಬೊಮ್ಮನಹಳ್ಳಿ ಎಂದು ಕರೆಯುತ್ತಿದ್ದರೂ ಕಂದಾಯ ಇಲಾಖೆಯ ದಾಖಲೆಯಲ್ಲಿ ಮುನಿಯರ ಬೊಮ್ಮನಹಳ್ಳಿ (ಎಂ. ಬೊಮ್ಮನಹಳ್ಳಿ) ಎಂದು ದಾಖಲಾಗಿದೆ. ಹಿಂದೆ ಹಲವಾರು ಜೈನಮುನಿಗಳು ಇಲ್ಲಿ ವಾಸವಾಗಿದ್ದಿರಬಹುದು. ಈ ಮುನಿಯರ ಬೊಮ್ಮನಹಳ್ಳಿಯ ಜೈನ ನಿವೇಶನಗಳು ಹಾಗೂ ಈ ಊರಿನ ಸುತ್ತಲಿನ ಚಾರಿತ್ರಿಕ ಪರಿಸರವನ್ನು ಪರಿಚಯಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.



ಪಾರ್ಶ್ವನಾಥ

ಪಾರ್ಶ್ವನಾಥನ ವಿಗ್ರಹ

ಈ ವಿಗ್ರಹವು ೨೩ನೇ ತೀರ್ಥಂಕರನಾದ ಪಾರ್ಶ್ವನಾಥನದಾಗಿದ್ದು, ಕಪ್ಪು ಕಣಶಿಲೆಯಲ್ಲಿ ಕೆತ್ತಲಾಗಿದೆ. ವಿಗ್ರಹವು ಸುಮಾರು ೪ ಅಡಿ ಎತ್ತರ ಹಾಗೂ ೩ ಅಡಿ ಅಗಲವಾಗಿದೆ. ಮೂರ್ತಿಯು ಪ್ರತಿಮಾ-ಯೋಗದಲ್ಲಿದ್ದು ಅಡಿಯಿಂದ ಮುಡಿಯವರೆಗೆ ೭ ಹೆಡೆಯ ಸರ್ಪವನ್ನು ಸುಂದರವಾದ ಪ್ರಮಾಣಬದ್ಧವಾಗಿ ಕೆತ್ತಲಾಗಿದೆ. ತಲೆಯ ಮೇಲೆ ಗುಂಗುರು ಕೂದಲುಗಳನ್ನು ಬಿಡಿಸಲಾಗಿದ್ದು, ತೋಳುಗಳು ನೀಳವಾಗಿವೆ. ಈ ಪಾರ್ಶ್ವನಾಥನ ವಿಗ್ರಹವು ಆಜಾನುಬಾಹುವಾಗಿದ್ದು, ನಿರಾಭರಣ ಸುಂದರವಾಗಿದೆ. ಸ್ಥಳೀಯರು ಈ ವಿಗ್ರಹವನ್ನು **ಬಾಣಂತಿಕಲ್ಲು** ಎಂದು ಕರೆಯುತ್ತಾರೆ. ಆ ಊರಿನ ಸ್ತ್ರೀಯರಿಗೆ ಪ್ರಸವ ವೇದನೆಯಾಗಿ ಹೆರಿಗೆಯಾಗದಿದ್ದಾಗ, ಈ ಬಾಣಂತಿಕಲ್ಲನ್ನು ಕಾಯಿ

---

* ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ನಾಲ್ಕನೇ ಅಂತಸ್ತು, ಕೆ.ಆರ್.ವೃತ್ತ, ಬೆಂಗಳೂರು - ೫೬೦ ೦೦೧

** ತಾಳಿಕೋಟೆ - ಶಾಸನಗಳಲ್ಲಿ ತಾಳಿಯಕೋಟೆ ಎಂದೇ ಉಲ್ಲೇಖಿತ.

ಕರ್ಪೂರದಿಂದ ಪೂಜಿಸಿ ಮೇಲಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲೆ ಹಲವಾರು ಬಾರಿ ಬೀಳಿಸುವುದರಿಂದ ಪ್ರಸವವೇದನೆಯಿಂದ ನರಳುವ ಸ್ತ್ರೀಯರಿಗೆ ಬೇಗನೆ ಪ್ರಸವವಾಗುವುದೆಂದು ಹೇಳುತ್ತಾರೆ. ಅದೆಷ್ಟೋ ಕಾಲದಿಂದ ಹೀಗೆ ಉಲ್ಬಾಪಲ್ಪಿಯಾಗಿ ಈ ವಿಗ್ರಹವನ್ನು ಬೀಳಿಸಿದ್ದಾರೋ? ಈ ಮೂಢ ನಂಬಿಕೆಗೆ ಒಳಪಟ್ಟ ಈ ವಿಗ್ರಹದ ಮಂದಸ್ಮಿತ ಮುಖವು ಹಾಳಾಗಿದ್ದು, ಮೂರ್ತಿಯ ಎಡಗೈ ಮುಕ್ಕಾಗಿದೆ.

ಮುಕ್ಕೊಡೆಯ ಜಿನಬಿಂಬ

ಪಾರ್ಶ್ವನಾಥ ವಿಗ್ರಹದ ಪಕ್ಕದ ಚಿಕ್ಕ ದೇವಾಲಯದ



ಮುಕ್ಕೊಡೆಯ ಜಿನಬಿಂಬ

ವರಾಂಡದಲ್ಲಿ ಗೋಡೆಗೆ ಅಡ್ಡಲಾಗಿ ಈ ಮುಕ್ಕೊಡೆಯ ಜಿನಬಿಂಬವನ್ನು ನಿಲ್ಲಿಸಲಾಗಿದ್ದು, ವಿಗ್ರಹವು ಪದ್ಮಾಸನಾರೂಢವಾಗಿದ್ದು, ಧ್ಯಾನಭಂಗಿಯಲ್ಲಿದೆ. ಶಿರೋಭಾಗದಲ್ಲಿ ಕುಲಾವಿ ತರಹದ ಗುಂಗುರು ಕೇಶವನ್ನೊಳಗೊಂಡಿದೆ. ಈ ದೇವಾಲಯವು ಹಿಂದೆ ಜೈನ ಬಸದಿಯಾಗಿತ್ತೆಂಬುದಕ್ಕೆ ಅಲ್ಲಿ ದೊರಕುವ ಅನೇಕ ಜೈನಾವಶೇಷಗಳಿಂದ ನಮಗೆ ತಿಳಿದು ಬರುವುದು. ಈ ಮುಕ್ಕೊಡೆಯ ಜಿನಬಿಂಬವನ್ನು ಕೆಂಪುಗಲ್ಲಿನಲ್ಲಿ ಕೆತ್ತಲಾಗಿದ್ದು, ಪಾರ್ಶ್ವನಾಥನ ವಿಗ್ರಹಕ್ಕಿಂತಲೂ ತುಂಬಾ ಸುಂದರವಾಗಿದೆಯಲ್ಲದೆ, ಸುಸ್ಥಿತಿಯಲ್ಲಿಯೂ ಇದೆ. ಈ ಉಬ್ಬು ಶಿಲ್ಪದ ಶಿರೋಭಾಗದಲ್ಲಿ ಹಂತ ಹಂತವಾಗಿ ಮೂರು ಸ್ತರದಲ್ಲಿ ಮುಕ್ಕೊಡೆಯನ್ನು ಕೆತ್ತಲಾಗಿದ್ದು, ಮೇಲ್ಗಡೆ ಎಡ ಹಾಗೂ ಬಲಕ್ಕೆ ಹಸನ್ಮುಖಿಗಳಾದ ಇಬ್ಬರು ಚಾಮರಧಾರಿಗಳನ್ನು ಕೆತ್ತಲಾಗಿದೆ. ಮೂರ್ತಿಯ ಪಕ್ಕಕ್ಕೆ ಎಡ ಹಾಗೂ ಬಲಕ್ಕೆ ನೆಗೆಯುವ ಭಂಗಿಯಲ್ಲಿರುವ ಸಿಂಹಗಳನ್ನು ಕೆತ್ತಲಾಗಿದೆ. ಇವುಗಳನ್ನು ಸಿಂಹ ಲಾಂಛನವೆಂದಿಟ್ಟುಕೊಂಡರೆ, ಈ ಜಿನಬಿಂಬವು ೨೪ನೇ ತೀರ್ಥಂಕರನಾದ ವರ್ಧಮಾನ ಮಹಾವೀರನ ವಿಗ್ರಹ ವಾಗುತ್ತದೆ. ಈ ಜಿನ ಬಿಂಬವು ಈ ಕ್ಷೇತ್ರದಲ್ಲಿರುವ ಎಲ್ಲಾ ಮೂರ್ತಿಗಳಿಗಿಂತಲೂ ಪ್ರಾಚೀನವಾಗಿದ್ದು, ಮೂರ್ತಿಶಿಲ್ಪ ಲಕ್ಷಣಗಳಿಂದ ಇದನ್ನು ರಾಷ್ಟ್ರಕೂಟರ ಕಾಲದ ಪೂರ್ವಾರ್ಧಕ್ಕೆ ಸೇರಿಸಬಹುದಾಗಿದೆ.

ಮೂರು ತುರುಗೋಳ ವೀರಗಲ್ಲುಗಳು

ಈ ಜೈನ ವಿಗ್ರಹಗಳ ಸಮುಚ್ಚಯದಲ್ಲಿಯೇ ಮೂರು ಸುಂದರವಾದ ತುರುಗೋಳ ವೀರಗಲ್ಲುಗಳಿವೆ. ಈ ವೀರಗಲ್ಲುಗಳು ಮಾಮೂಲಾಗಿ ಮೂರು ಹಂತಗಳನ್ನು ಒಳಗೊಂಡಿದ್ದು, ವೀರನು ವೀರಮುಡಿಯನ್ನು ಕಟ್ಟಿದ್ದಾನೆ. ಬಲಗೈಯಲ್ಲಿ ಕಠಾರಿಯಿಂದ ಶತ್ರುವಿನ ಎದೆಗೆ ಇರಿಯುವ ಭಂಗಿಯಿದ್ದು ಶತ್ರುವು ಭರ್ಚಿಯಿಂದ ವೀರನ ಮುಖಕ್ಕೆ ಘಾಸಿಗೊಳಿಸುವಂತೆ ಕೆತ್ತಲಾಗಿದೆ. ವೀರಗಲ್ಲಿನ ಬಲಕ್ಕೆ ಸುಂದರವಾಗಿ ಹಸುಗಳನ್ನು ಚಿತ್ರಿಸಲಾಗಿದೆ. ೨ನೇ ಹಂತದಲ್ಲಿ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವ ಸನ್ನಿವೇಶವನ್ನು ಹಾಗೂ ೩ನೇ ಹಂತದಲ್ಲಿ ವೀರನು ಸ್ವರ್ಗದಲ್ಲಿ



ತುರುಗೋಳ ವೀರಗಲ್ಲು

ತನ್ನ ದೈವದ ಮುಂದೆ ಪದ್ಮಾಸನ ಭಂಗಿಯಲ್ಲಿರುವುದನ್ನು ಬಿಡಿಸಲಾಗಿದೆ. ತ್ರಿಭುಜಾಕಾರದಲ್ಲಿರುವ ಈ ವೀರಗಲ್ಲನ್ನು ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬಹುದಾಗಿದೆ. ಇನ್ನೊಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲಿರುವ ತನ್ನ ಶತ್ರುವಿನೊಡನೆ ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ೩ನೇ ವೀರಗಲ್ಲು ಕೂಡ ಇದೇ ರೀತಿ ೩ ಹಂತಗಳನ್ನೊಳಗೊಂಡಿದೆ.

ಕುಬ್ಜಮಾನವಾಕಾರದ ಮೂರ್ತಿ

ಈ ಮೂರ್ತಿಯು ಟೆರ್ರಾಕೋಟ ಗೊಂಬೆಯಂತಿದ್ದು ತಲೆಯ ಕೂದಲನ್ನು ನೀಳವಾಗಿ ಹಿಂದಕ್ಕೆ ಬಾಚಿದಂತಿದೆ. ಮೂರ್ತಿಯ ಕೊರಳಲ್ಲಿ ಜನಿವಾರ ಧರಿಸಿದ್ದು, ಬಲಗೈಯಲ್ಲಿ ಸ್ತ್ರೀಗೊಂಬೆಯನ್ನು ಎತ್ತಿಕೊಂಡಿರುವಂತೆ ಕೆತ್ತಲಾಗಿದೆ. ಈ ಲಕ್ಷಣಗಳನ್ನು ನೋಡಿದಾಗ ಇದೊಂದು ಕಾಳಾಮುಖ ಸನ್ಯಾಸಿಯದೆಂದು ಗುರುತಿಸಬಹುದಾದರೂ ವಿದ್ವಾಂಸರು ಇದೊಂದು ಜೈನಯಕ್ಷನ ವಿಗ್ರಹವೆಂದು ಹೇಳುವುದುಂಟು.

ಗುಂಡುಕಲ್ಲುಗಳ ಗುಡ್ಡೆ

ಕರಿ ಗುಂಡುಕಲ್ಲುಗಳಿಂದ ಕೂಡಿದ ಈ ಗುಡ್ಡವು ಊರಿನಿಂದ ಪಶ್ಚಿಮಕ್ಕೆ ೨ ಕಿ.ಮೀ. ಅಂತರದಲ್ಲಿದೆ. ಸುಮಾರು ೨೫ರಿಂದ ೩೦ ಅಡಿ ಎತ್ತರವಾದ ಕರಿಗುಂಡುಕಲ್ಲುಗಳ ರಾಶಿ ಇದಾಗಿದ್ದು ನಿಧಿಶೋಧಕರು ಮೇಲಿನಿಂದ ಗುಂಡುಕಲ್ಲುಗಳನ್ನು ಎಬ್ಬಿಸಿದ್ದರಿಂದ ಮೇಲೆ ಬೃಹತ್ತಾದ ಅಡ್ಡಡ್ಡಲಾಗಿ ಜೋಡಿಸಲಾದ ಕರಿಕಲ್ಲುಗಳಿಂದ ನಿರ್ಮಿಸಿದ ದೇಗುಲವೊಂದರ ವಿಮಾನವಿದೆಂದು ಊಹಿಸಬಹುದಾಗಿದೆ. ದೇಗುಲವನ್ನು ಗುಂಡುಕಲ್ಲುಗಳಿಂದ ಬೇರೆಗೊಳಿಸಿದರೆ, ಅದರಲ್ಲಿ ಯಾವುದಾದರೂ ವಿಗ್ರಹವನ್ನು ನಾವು ಕಾಣುವ ಸಾಧ್ಯತೆಯಿದೆ. ಆದರೆ ಈ ಕಲ್ಲುಗುಡ್ಡೆಯಲ್ಲಿ ೭ ರಂಜಣಿಗೆ ಬಂಗಾರವಿದೆಯೆಂದು ಸ್ಥಳೀಯರ ನಂಬಿಕೆ. ಅವರ ಪ್ರಕಾರ ಅಲ್ಲಿ ೭ರಂಜಣಿಗೆ ಬಂಗಾರವಿರದಿದ್ದರೂ ಅದಕ್ಕೆ ಸಮಾನವಾದ ನಮ್ಮ ಸಂಸ್ಕೃತಿಯ ಕುರುಹುಗಳು ಇರುವುದಂತೂ ನಿಜ.

ತ್ರಿಕೂಟಾಚಲ ದೇವಸ್ಥಾನ

ಊರಿನ ಪೂರ್ವ ದಿಕ್ಕಿನಲ್ಲೊಂದು ಸುಂದರವಾದ ಕಲ್ಯಾಣಿ ಚಾಲುಕ್ಯರ ತ್ರಿಕೂಟಾಚಲ ದೇವಾಲಯವಿದ್ದು, ಸ್ವಲ್ಪ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ದೇವಾಲಯವು ತುಂಬಾ ಜೀರ್ಣೋದ್ಧಾರಗೊಂಡಿದ್ದು ಬಾಗಿಲುವಾಡದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ದೇವಾಲಯದ ಭುವನೇಶ್ವರಿಯಲ್ಲಿ ಕಾಳಿಂಗ ಮರ್ದನದ ಸುಂದರವಾದ ಶ್ರೀ ಕೃಷ್ಣನ ನೃತ್ಯಭಂಗಿಯ ಶಿಲ್ಪವಿದೆ. ಮಧ್ಯದ ಗರ್ಭಗುಡಿಯಲ್ಲಿ ಇತ್ತೀಚೆಗೆ ಸ್ಥಾಪಿಸಲಾದ ಶಿವಲಿಂಗವಿದೆ. ಆದರೆ ದೇವಸ್ಥಾನದ ಅಧಿಷ್ಠಾನವು ನಕ್ಷತ್ರಾಕಾರವಾಗಿದ್ದು, ವಾಸ್ತು ಶಿಲ್ಪದೃಷ್ಟಿಯಿಂದ ಇದೊಂದು ಕಲ್ಯಾಣಿ ಚಾಳುಕ್ಯರ ವಿಷ್ಣುದೇವಾಲಯವಿರಬಹುದೆಂದು ಊಹಿಸಬಹುದಾಗಿದೆ.

ಗುತ್ತಿಯ ಬಸವಣ್ಣನ ಗುಡಿ

ಗುತ್ತಿಯ ಬಸವಣ್ಣನ ಗುಡಿಯು ಎಂ.ಬೊಮ್ಮನಹಳ್ಳಿಯಿಂದ ಪೂರ್ವಕ್ಕೆ ೨ ಕಿ.ಮೀ. ಅಂತರದಲ್ಲಿದೆ. ಈ ದೇವಸ್ಥಾನವು ವಿಜಯನಗರ ಉತ್ತರಾರ್ಧ ಕಾಲದ್ದಾಗಿದ್ದು ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಕಂಬಗಳು, ಬೋದಿಗೆಗಳು ಸಣ್ಣದಾದ ಮಾನಸ್ಥಂಭ ಮುಂತಾದವು ವಿಜಯನಗರ ಕಾಲದ ದೇವಾಲಯಗಳ ಲಕ್ಷಣಗಳನ್ನೊಳಗೊಂಡಿವೆ. ದೇವಸ್ಥಾನದಲ್ಲಿ ಕೆಲವು ಕಡೆ ಸುಂದರವಾದ ಮಿಥುನಶಿಲ್ಪಗಳನ್ನು ಕೊರೆಯಲಾಗಿದ್ದು, ಅವೆಲ್ಲ ಈಗ ಅವನತಿಯ ಹಂತದಲ್ಲಿವೆ. ದೇವಸ್ಥಾನದಿಂದ ಪೂರ್ವಕ್ಕೆ ೨ ಕಿ.ಮೀ. ದೂರದಲ್ಲಿ ೩ ಹಂತಗಳ ವೀರಗಲ್ಲೊಂದು ಇದ್ದು, ಸ್ಥಳೀಯರು ಈ ವೀರಗಲ್ಲನ್ನು **ರಾಮಸೀತೆಯರಕಲ್ಲು** ಎಂದೂ, **ಬಾಲಗಲ್ಲೆಂದು** ಕರೆಯುತ್ತಾರೆ. ಬಾಲಕಲ್, ಬಾಳ್‌ಗಲ್, "ಬಾಳ್ಗಚ್ಚು" ಆಗಿರಬಹುದು. ದೇವಸ್ಥಾನದಿಂದ ದಕ್ಷಿಣಕ್ಕೆ ೨ ಕಿ.ಮೀ. ಅಂತರದಲ್ಲಿ ಲಿಂಗಮುದ್ರೆ ಕಲ್ಲೊಂದು ಇತ್ತೀಚೆಗೆ ದೊರಕಿದ್ದು, ಅದರ ಮೇಲ್ಗಡೆ ಸೂರ್ಯ ಚಂದ್ರರ ನಡುವೆ ಶಿವಲಿಂಗ ಹಾಗೂ ಕೆಳಗಡೆ ಸುಂದರವಾದ ನಂದಿಯನ್ನು ಕೆತ್ತಲಾಗಿದೆ.

ಐನಾಪುರ

ಮುನಿಯರಬೊಮ್ಮನಹಳ್ಳಿಯಿಂದ ಪೂರ್ವಕ್ಕೆ ೩ ಕಿ.ಮೀ. ಅಂತರದಲ್ಲಿ ಅಯ್ಯನಪುರ ಗ್ರಾಮವಿದೆ. ಗ್ರಾಮದ ಹನುಮಂತ ದೇವರ ಗುಡಿಯ ಮುಂದೆ ತುಂಬಾ ಸವಕಳಿಯಾದ ೨ ಸಾಲಿನ ಅಪ್ರಕಟಿತ ಶಾಸನವೊಂದಿದ್ದು, ಲಿಪಿಯ ದೃಷ್ಟಿಯಿಂದ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದಾಗಿದೆ. ಲಿಪಿಯೂ ಅಸ್ಪಷ್ಟವಾಗಿದ್ದು, ಕೊನೆಯಲ್ಲಿ **ಮರುಘರ** ಎಂದು ಗುರುತಿಸಬಹುದಾಗಿದ್ದು, ಪಡಿಯಚ್ಚು ತೆಗೆದರೆ ಬರಬಹುದು.

ಬೊಮ್ಮನಹಳ್ಳಿಯಲ್ಲಿ ಹಿಂದೆ ಹಲವಾರು ಬಸದಿಗಳಿದ್ದುದರ ಕುರುಹಾಗಿ ಈ ಊರಿನಲ್ಲಿ ಬಸದಿಗಳ ಅಡಿಪಾಯಗಳು, ಜಿನ ಬಿಂಬಗಳ ಅವಶೇಷಗಳು, ತೀರ್ಥಂಕರರು, ಚಾಮರಧಾರಿಗಳು, ಯಕ್ಷ-ಯಕ್ಷಿಯರ ವಿಗ್ರಹಗಳು ಮುಂತಾದವುಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಒಟ್ಟಿನಲ್ಲಿ ಬೊಮ್ಮನಹಳ್ಳಿ ಪರಿಸರವು ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ ಹಾಗೂ ದೇವಗಿರಿ ಯಾದವರ ಆಳ್ವಿಕೆಯ ಕುರುಹುಗಳನ್ನೊಳಗೊಂಡಿದ್ದು, ಈ ಊರು ಹಿಂದೆ ಪ್ರಾಚೀನ ಕರ್ನಾಟಕದ ಪ್ರಬಲ ಜೈನ ಕೇಂದ್ರವಾಗಿತ್ತೆನ್ನುವುದು ನಿಸ್ಸಂಶಯ. ಮುಖ್ಯವಾಗಿ ಈ ಊರಿನಲ್ಲಿ ಪಾರ್ಶ್ವನಾಥ ಹಾಗೂ ವರ್ಧಮಾನ ಮಹಾವೀರನ ಎರಡು ಬಸದಿಗಳಿದ್ದವೆಂದು ಇಲ್ಲಿ ದೊರೆತಿರುವ ಜಿನಬಿಂಬಗಳಿಂದಲೂ ಬಸದಿಗಳ ಬುನಾದಿಗಳಿಂದಲೂ, ಮುಂತಾದ ಜೈನಾವಶೇಷಗಳಿಂದಲೂ ಗುರುತಿಸಬಹುದಾಗಿದೆ. ಈ ಊರಿನ ಪರಿಸರದ ಸುತ್ತಮುತ್ತಲಿನ ಶಾಸನಗಳಿಂದಲೂ ಉತ್ಖನನದಿಂದಲೂ ಜಾನಪದೀಯ ಆಕರಗಳಿಂದಲೂ ಹಾಗೂ ಐತಿಹ್ಯಗಳಿಂದಲೂ ದೊರಕುವ ಮಾಹಿತಿಯನ್ನು ಸಂಗ್ರಹಿಸಿ ಈ ಊರಿನ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಮಾಡಬೇಕಿದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಶ್ರೀ ಎಸ್.ಕೆ. ರಾಮಚಂದ್ರರಾವ್ : **ಮೂರ್ತಿಶಿಲ್ಪ ನೆಲೆ- ಹಿನ್ನೆಲೆ**, ಬೆಂಗಳೂರು ವಿಶ್ವವಿದ್ಯಾಲಯ

೨. ಶ್ರೀ ಎಂ.ಜಿ. ನಾಗರಾಜ್ : **ಕೊಡಗಿನ ಎರಡು ಅಪೂರ್ವ ಜೈನ ಮತ್ತು ಬೌದ್ಧ(!) ಶಿಲಾಶಿಲ್ಪ ಫಲಕಗಳು**, ಇತಿಹಾಸ ದರ್ಶನ, ಸಂ.೧೧/೧೯೯೬

3. Dr. S.B. Rao **Canons of Architecture & Jaina monument**

ಮೋಹನ ಗ. ಹೆಗಡೆ*

ಈ ವಿಚಿತ್ರ ಶಿಲ್ಪ ರಚನೆಗಳ ಉದ್ದೇಶ ಏನು?

ದೇವಾಲಯಗಳಲ್ಲಿ ಮೂಲ ವಿಗ್ರಹಗಳು ನಿಶ್ಚಿತ ಸ್ವರೂಪಗಳಲ್ಲಿರುವುದು ಸಹಜ. ಇತರ ಅಲಂಕಾರಿಕ ಶಿಲ್ಪಗಳು, ವಿಗ್ರಹಗಳು ಗರ್ಭಗೃಹದಲ್ಲಿಯ ಮೂಲದೇವತೆಯ ಸ್ವರೂಪವನ್ನು ಸೂಚಿಸುವಂಥ ಲಕ್ಷಣಗಳನ್ನು ಹೊಂದಿರುತ್ತದೆ. ಆದರೆ ಈ ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿ ಕೆತ್ತಿದ ಕೆಲವು ವಿಗ್ರಹಗಳು ಊಹಾತೀತ, ಕಲ್ಪನಾತೀತ ಸ್ವರೂಪದವುಗಳಾಗಿವೆ. ಇಂಥ ವಿಗ್ರಹಗಳು ವಿವಿಧ ವಿಚಿತ್ರ ಸ್ವರೂಪದಲ್ಲಿ ಏಕಿವೆ? ಅಂಥವುಗಳ ಕೆತ್ತನೆಯಲ್ಲಿ ಯಾವ ಉದ್ದೇಶವಿದೆ ? ಈ ವಿಚಿತ್ರ ಶಿಲ್ಪಾಕಾರಗಳು ಏನನ್ನು ಹೇಳಬಯಸಿವೆ? ಎಂಬುದರ ಕುರಿತಾದ ವಿಶ್ಲೇಷಣೆ ಪ್ರಸ್ತುತವಾಗಿದೆ.

ಈ ವಿಚಿತ್ರ ಸ್ವರೂಪಗಳಿಗೆ ನಿಶ್ಚಿತ ಪುರಾಣ-ವಾಸ್ತು ಶಿಲ್ಪಗಳ ಯಾವ ಆಧಾರಗಳೂ ಕಂಡು ಬರುತ್ತಿಲ್ಲ. ಇದಮಿತ್ಥಂ ಎಂದು ಹೇಳಲೂ ಸಾಧ್ಯವಾಗದಿರುವದು ಇವುಗಳ ನಿಗೂಢತೆಯನ್ನು ಹೆಚ್ಚಿಸಿವೆ. ಅಂತೇ ಗಮನಿಸಿದ ಕೆಲವೇ ವಿಚಿತ್ರ ಶಿಲ್ಪಗಳ ಬಗ್ಗೆ ಈ ಮುಂದಿನಂತೆ ವಿಶ್ಲೇಷಣೆ:

ಕೆಳದಿಯ ಭೃಂಗಿ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಪ್ರಸಿದ್ಧ ಕೆಳದಿಯಲ್ಲಿ ಒಂದು ದೇವಾಲಯ ಸಂಕೀರ್ಣವಿದೆ. ಪೂರ್ವಕ್ಕೆ ಮುಖವಾಗಿರುವ ಈ ಸಂಕೀರ್ಣದಲ್ಲಿ ಮೊದಲನೆಯದು ಪಾರ್ವತಮ್ಮ, ಎರಡನೆಯದು ರಾಮೇಶ್ವರ ಹಾಗೂ ಮೂರನೆಯದು ವೀರಭದ್ರನ ದೇವಾಲಯಗಳು. ಇವುಗಳ ಶಿಖರಗಳು ತೀರ ಕಡಿಮೆ ಎತ್ತರದವಾಗಿದ್ದು, ಹೊಯ್ಸಳ ಶಿಲ್ಪ ಮಾದರಿಯನ್ನು ಹೋಲುತ್ತವೆ. ಮಂದಿರ ಪ್ರವೇಶದ ಮೇಲ್‌ಭಾವಣಿಯ ಸುತ್ತ ಸುಮಾರು ೧.೫ ಅಡಿ ಎತ್ತರದ ಶಿಲ್ಪಗಳ ಸಾಲು ಇರುವ ಪಟ್ಟಿಕೆ ಇದೆ. ಹಿಂದೆ ಇದರಲ್ಲಿ ಸಾಲಾಗಿ ಅನೇಕ ವಿಗ್ರಹಗಳಿದ್ದ ಗುರುತು ಕಂಡುಬರುತ್ತದೆ. ಪ್ರವೇಶ ಬಾಗಿಲ ಮೇಲ್ಗಡೆ ಪಟ್ಟಿಕೆಯಲ್ಲಿ ಈಗಿರುವ ಕೈಬೆರಳೆಣಿಕೆಯ ವಿಗ್ರಹಗಳಲ್ಲಿ ಭೃಂಗಿಯೂ ಒಂದು, ಇದನ್ನು ಭೃಂಗಿರಿಟಿ ಎಂದೂ ಕರೆಯುತ್ತಾರೆ. ಇದಕ್ಕೆ ಮೂರು ಡೊಂಕಾದ ಕಾಲುಗಳಿವೆ. ದೇಹ ಕೇವಲ ಅಸ್ಥಿಪಂಜರದಂತಿದೆ. ಎಲುವಿನ ತಲೆಬುರುಡೆಯಂತೆ ಕಿರಿದ ಹಲ್ಲುಗಳ ಮೋರೆಯ ವಿಗ್ರಹ ಇದು. ಕೈಗಳೂ ಕೂಡ ಸೊಟ್ಟವಾಗಿವೆ. ಡೊಂಕಾದ ಕಾಲುಗಳು ಆಚೆ ಈಚೆ ಚಾಚಿಕೊಂಡಿವೆ.

ಇದು ಶಿವನ (ರಾಮೇಶ್ವರನ) ಭೂತಗಣಗಳಲ್ಲಿ ಒಂದು ಎಂದು ಪುರಾಣನಾಮ ಚೂಡಾಮಣಿ ಹೇಳುತ್ತದೆ. ಮನುಷ್ಯನ ಮೂಲಸ್ವರೂಪವೇ ಇದು. ಅಸ್ಥಿ-ಮಜ್ಜೆಗಳಿಂದ ನಿರ್ಮಿತವಾದ ಈ ಆಕಾರಕ್ಕೆ ಆತ್ಮನ ಶಕ್ತಿಯೇ ಮೂಲ. ಆತ್ಮಶಕ್ತಿಗಳಿಸಲು ದೇವರನ್ನು ಆರಾಧಿಸುವಾಗ ಬಹಿರಂಗ ಅಲಂಕಾರ ಸೌಂದರ್ಯ ಅನಗತ್ಯ. ನಿರಾಕರ್ಷಕವಾದ ವಿಕಾರವಾದ ನಮ್ಮ ಸ್ವರೂಪವನ್ನು ನೆನಪಿಸಿ ಕೊಳ್ಳಲಿ ಎಂಬುದನ್ನು ಸೂಚಿಸಲು ಈ ವಿಗ್ರಹವನ್ನು ಈ ಸ್ವರೂಪದಲ್ಲಿಟ್ಟಿರಬೇಕು.

ಕ್ಷೇತ್ರಪಾಲನೆನ್ನಲಾದ ಶಿಲ್ಪ

ಶ್ರೀರಾಮೇಶ್ವರ ಮಂದಿರಕ್ಕೆ ತಾಗಿರುವ ಬಲದ ವೀರಭದ್ರ ದೇವಾಲಯದ ಗರ್ಭಗುಡಿಯ ಹಿಂಭಾಗದ ಗೋಡೆಯ ಮಧ್ಯದ ಉಬ್ಬುತಗ್ಗಿನ ಶಿಲ್ಪ ಸುಮಾರು ೪' ಎತ್ತರ ೩' ಅಗಲದ್ದಾಗಿದೆ. ಈ ವಿಗ್ರಹದ ತಲೆ ರಾಕ್ಷಸ ಸ್ವರೂಪದಂತಿದೆ. ಸಿಂಹಕ್ಕಿರುವಂಥ ಎದೆಯ ಭಾಗದವರೆಗೆ ಗಡ್ಡ, ಮೊಳಕಾಲವರೆಗೆ ಸೊಂಡಿಲಾಕಾರದ ವಿಶಾಲ ಭುಜದ ಕೈಗಳು ಚಾಚಿಕೊಂಡಿವೆ. ಎರಡೂ ಕಾಲುಗಳು ಆನೆಯದರಂತಿದ್ದು, ಹಿಮ್ಮಡಿಯವರೆಗೆ ಒಂದು ಬಾಲ ಇಳಿಬಿದ್ದಿದೆ.

ಈ ಶಿಲ್ಪ ಕ್ಷೇತ್ರಪಾಲನೂ ಅಲ್ಲ; ಇನ್ನು ಕೆಲವು ಆಗಮಿಕರು ಹೇಳುವಂತೆ ವಾಸ್ತುಪುರುಷನೂ ಅಲ್ಲ. ಈಗಾಗಲೇ ಈ ಶಿಲ್ಪದ ಬಗ್ಗೆ ಹೆಚ್ಚಿನ ವಿವರಗಳನ್ನು ಸಚಿತ್ರವಾಗಿ ಇತಿಹಾಸ ದರ್ಶನದ ಸಂ. ೧೧/೧೯೯೬ರಲ್ಲಿ ಬರೆಯಲಾಗಿದೆ.

---

* ಭಾರತಿ ಪ್ರೌಢಶಾಲೆ, ಅಂಚೆ: ಕೆಳದಿ, ತಾ: ಸಾಗರ - ೧, ಶಿವಮೊಗ್ಗ ಜಿಲ್ಲೆ.

ಸಿಂಹ ಪ್ರಾಣಿವರ್ಗದಲ್ಲಿ ಶ್ರೇಷ್ಠವಾದುದು. ಅಂಥ ಮಸ್ತಿಷ್ಕವು ಮಾನವನಿಗೆ ಬೇಕು. ಶಕ್ತಿ ಸಾಮರ್ಥ್ಯಕ್ಕೆ ದ್ಯೋತಕವಾದುದು ಆನೆ. ಆದರ ಬಲ ಶಕ್ತಿಯುತವಾದ ಸೊಂಡಿಲು. ಹಾಗೂ ಕಾಲುಗಳು ಈ ಎಲ್ಲ ಪ್ರಾಣಿಬಲ ಪಡೆದುಕೊಂಡು ಎಲ್ಲ ಪ್ರಾಣಿಗಳಿಗಿಂತ ತನ್ನ ಬೌದ್ಧಿಕ ಸಾಮರ್ಥ್ಯದಿಂದ ಶ್ರೇಷ್ಠವೆನಿಸಿ ಮೋಕ್ಷಗಳಿಸಲಿ ಜನ್ಮ ಸಾರ್ಥಕಪಡಿಸಿಕೊಳ್ಳಲಿ ಎಂಬ ಉದ್ದೇಶವಿರಬೇಕು. ವಿಚಿತ್ರ ಸಂಗತಿಗಳು ಮನುಷ್ಯನನ್ನು ಕೂಡಲೇ ಆಕರ್ಷಿಸುತ್ತವೆ. ಕಾರಣ ದೇವಾಲಯದ ಹೊರಭಾಗದಲ್ಲಿ ಈ ವಿಚಿತ್ರ ಶಿಲ್ಪವು ನಿಂತು ಸಂದೇಶವನ್ನು ಬೀರುತ್ತಿರಬೇಕು.

ಚಾಮುಂಡೇಶ್ವರಿ

ವಿಶ್ವವಿಖ್ಯಾತ ಜಲಪಾತದ ಜೋಗದ ಊರಿನ ಮಧ್ಯ ಮೋಟರು ನಿಲ್ದಾಣಕ್ಕೆ ಹೋಗುವ ಮಾರ್ಗದ ಎಡಕ್ಕೆ ಗುಡ್ಡದ ಮೇಲೆ ಇತ್ತೀಚೆಗೆ ಸ್ಥಾಪಿತವಾದ (ಸುಮಾರು ೫೦ ವರ್ಷದ ಈಚೆ) ಕರಿಕಲ್ಲಿನಲ್ಲಿ ಕೆತ್ತಿದ ಸುಂದರವಾದ ಚಾಮುಂಡೇಶ್ವರಿ ವಿಗ್ರಹವಿದೆ. ಯಾವುದೇ ಐತಿಹಾಸಿಕ ಪ್ರಾಮುಖ್ಯವಿಲ್ಲದ ಈ ಮಂದಿರದ ದೇವಿಯ ಪ್ರತಿಮೆಯೇ ಒಂದು ಆಕರ್ಷಕ ಕೇಂದ್ರವಾಗಿದೆ. ಸುಮಾರು ೩' ಎತ್ತರದ ಈ ಚಾಮುಂಡೇಶ್ವರಿ ಎದುರಿನಿಂದ ನಮಗೆ ಸುಂದರವಾಗಿ ಕಾಣುವಂತೆ ಗರ್ಭಗುಡಿಯ ಹಿಂಭಾಗದ ಕಿಂಡಿಯಿಂದಲೂ ಅದೇ ರೂಪ ಕಂಡುಬರುತ್ತದೆ. ಒಂದೇ ಶಿಲೆಯ ಎರಡೂ ಭಾಗಗಳಲ್ಲಿ ಹಿಂದೆ-ಮುಂದೆ ಒಂದೇ ಶಿಲ್ಪವನ್ನು ಆಕರ್ಷಕವಾಗಿ ಕುತೂಹಲಕಾರಿಯಾಗಿ ಕೆತ್ತಿರುವ ಶಿಲ್ಪಿಯ ಜಾಣತನವನ್ನು ಮೆಚ್ಚಬೇಕಾದ್ದೇ. ಎರಡು ವಿಗ್ರಹಗಳಂತೆ ಕಂಡುಬಂದರೂ ಶಿಲೆಯೊಂದೇ. ಇಂಥ ಪ್ರತಿಮೆಗಳು ಕರ್ನಾಟಕ ದಲ್ಲಿ ಕಂಡುಬಂದರೂ ತುಂಬ ವಿರಳ.

ಹರಿಹರೇಶ್ವರ

ಚಿತ್ರದುರ್ಗ ಜಿಲ್ಲೆಯ ಹರಿಹರ, ಹರಿಹರೇಶ್ವರ ದೇವಾಲಯದಿಂದ ಪ್ರಸಿದ್ಧಿ ಪಡೆದ ಔದ್ಯೋಗಿಕ ನಗರವಾಗಿದೆ. ಕೆಲವು ಶತಮಾನಗಳಷ್ಟು ಹಳೆಯದಾದ, ವಿಸ್ತಾರವಾದ ಜಾಗೆಯಲ್ಲಿ ಹರಡಿಕೊಂಡ ಹರಿಹರೇಶ್ವರಮಂದಿರ ತೀರ ಎತ್ತರವಲ್ಲದ ಶಿಖರವನ್ನು ಹೊಂದಿದೆ. ಇಲ್ಲಿ ಹರಿ-ಹರ ಎರಡೂ ಸ್ವರೂಪವನ್ನು ಬಿಂಬಿಸುವ ಪೂಜಾವಿಗ್ರಹವಿದೆ. ಕರಿಕಲ್ಲಿನ ನಿಂತ ವಿಗ್ರಹದ ಬಲಭಾಗ ಈಶ್ವರನದಾಗಿದೆ. ಊರ್ಧ್ವಮುಖವಾದ ಬಲಗೈಯಲ್ಲಿ ತ್ರಿಶೂಲವಿದೆ. ಉಳಿದ ಅಂಗೋಪಾಂಗಗಳು ಈಶ್ವರನ ಲಕ್ಷಣವನ್ನು ಹೊಂದಿದೆ.


ಇನ್ನು ಎಡಭಾಗ ಹರಿ-ವಿಷ್ಣುವಿನ ಸ್ವರೂಪದ್ದು, ಎಡ ಊರ್ಧ್ವ ಕೈಯಲ್ಲಿ ಪದ್ಮವಿದೆ. ಉಳಿದ ಅಂಗೋಪಾಂಗಗಳು ವಿಷ್ಣುವಿನ ಲಕ್ಷಣಗಳನ್ನು ಹೊಂದಿವೆ. ಇಡಿಯ ವಿಗ್ರಹ ಹರ-ಹರೀಶ್ವರ ರೂಪದ್ದಾಗಿದೆ. ಹರ+ಹರಿ ಇಬ್ಬರೂ ಒಂದೇ. ಅವರಲ್ಲಿ ಭೇದವಿಲ್ಲ. ಮಾನವ ಮಾತ್ರ ಭೇದ ಸ್ವರೂಪವನ್ನು ಮಾಡುವವನಾಗಿದ್ದಾನೆ ಎಂಬುದನ್ನು ಸೂಚಿಸಲು ಈ ವಿಗ್ರಹವನ್ನು ಕಡೆದಿರಬೇಕೆಂದು ಅನಿಸುತ್ತದೆ. ಅದ್ವೈತ ತತ್ವದ ಸಂದೇಶವನ್ನು ಇದು ಸೂಚಿಸುತ್ತಿರಬಹುದೇ ?

ಇದೇ ರೀತಿ ಅರ್ಧನಾರೀನಟೇಶ್ವರ ಮೂರ್ತಿಯೂ ಇದೆ ಎಂದು ಕೇಳಿದ್ದೇನೆ. ಇದೂ ಕೂಡ ಎರಡೂ ದೇಹಗಳಾದರೂ ಆತ್ಮನ ಸ್ವರೂಪ ದೇವರ ಸ್ವರೂಪ ಒಂದೇ ಎಂಬ ಸಾರ್ವಕಾಲಿಕ ತತ್ವ ಸಾರುತ್ತಿದೆ ಎಂದು ನನ್ನ ಅನಿಸಿಕೆ.

ತಲಕಾಡಿನ ದ್ವಾರಪಾಲಕರು

ಮೈಸೂರಿಗೆ ಸುಮಾರು ೪೦ ಕಿ.ಮೀಟರು ದೂರದ ತಲಕಾಡು ಗಂಗರಸರಿಗೆ ಸೇರಿದ್ದಾಗಿತ್ತು. ಶೈವರಾದ ಗಂಗರು ಹಲವಾರು ಶಿಲಾಮಂದಿರಗಳನ್ನು ಕಟ್ಟಿಸಿದ್ದಾರೆ. ಪಾತಾಳೇಶ್ವರ ದೇವಾಲಯಕ್ಕೆ ಹೋಗುವ ಮುನ್ನ ನಮಗೆ ದಾರಿಯ ಪಕ್ಕದಲ್ಲಿ ಬಲಕ್ಕೆ ಕೀರ್ತಿನಾರಾಯಣನ ಮಂದಿರ ಕಾಣುತ್ತದೆ. ಗಂಗರ ನಂತರ ಹೊಯ್ಸಳರು ಇಲ್ಲಿ ಸ್ಥಾಪಿಸಿದ ಒಂದು ಮಂದಿರವಿದೆ. ಹೊರಪ್ರವೇಶದ್ವಾರದ ಅಕ್ಕಪಕ್ಕಗಳಲ್ಲಿ ಪುರುಷ ಪ್ರಮಾಣದ ನಿಂತ ದ್ವಾರಪಾಲಕರ ಪ್ರತಿಮೆಗಳಿವೆ. ಎರಡು ಊರ್ಧ್ವಹಸ್ತಗಳು, ಎರಡು ಅಭಯ ಹಸ್ತಗಳು ಹಾಗೂ ವರದ ಹಸ್ತ(ಬಲ)ಗಳಿವೆ.

ಬಲ ಊರ್ಧ್ವಹಸ್ತ ತ್ರಿಶೂಲವನ್ನು ಹಿಡಿದಿದೆ. ವಿಚಿತ್ರ ಎಂದರೆ ತ್ರಿಶೂಲದ ಮಧ್ಯ ಶೂಲದ ಜಾಗೆಯಲ್ಲಿ ತಲೆಬುರುಡೆ



ಇದೆ. ಎಡ ಊರ್ಧ್ವಹಸ್ತದಲ್ಲಿ ಡಮರುಗವಿದೆ. ಅದನ್ನು ಸುತ್ತಿ ಹಿಡಿದ ಸರ್ಪವು ಅಂಗೈ ಮೂಲಕ ಇಳಿ ಬಿದ್ದಿದೆ.

ಕೆಳ-ಬಲ ಮಣಿಕಟ್ಟು ನಿಂತ ಗದೆಯ ಮೇಲೆ ಇದೆ. ವರದ ಹಸ್ತವಾಗಿದೆ. ಅಂಗೈ ಅಲಂಕೃತವಾಗಿದೆ. ಎಡ ಹಸ್ತ ಅಭಯವನ್ನು

ಸೂಚಿಸುತ್ತದೆ. ದೃಷ್ಟಿ ಉಗ್ರವಾಗಿದೆ. ಕುತ್ತಿಗೆ ವಿವಿಧ ಆಭರಣಗಳಿಂದ ಅಲಂಕೃತವಾಗಿದೆ. ಲಕ್ಷಿಸಿ ನೋಡಿದರೆ ಎದೆಯ ಎರಡೂ ಭಾಗಗಳು ಬಸವಣ್ಣನ ಕಿವಿ, ಕಣ್ಣುಗಳಂತೆ ಕಂಡು ಬರುತ್ತವೆ. ಹೊಕ್ಕುಳ ಭಾಗದವರೆಗಿನ ಭಾಗ, ಬಸವನ ಮೂಗು ಬಾಯಿಗಳಂತೆ ಕಾಣಬರುತ್ತವೆ. ಅಲ್ಲಿಂದ ಮೊಳಕಾಲವರೆಗಿನ ಉಟ್ಟ ಅಲಂಕೃತ ಬಟ್ಟೆ ಬಸವಣ್ಣನ ಕುತ್ತಿಗೆಯ ಭಾಗವನ್ನು ಅಲಂಕರಿಸಿದಂತೆ ಕಾಣುತ್ತದೆ.

ಬಹುಶಃ ಇಂಥ ವಿಚಿತ್ರ ವಿನ್ಯಾಸದ ಅದ್ಭುತ ಕೆತ್ತನೆಯ ಶಿಲ್ಪಗಳು ಕರ್ನಾಟಕದಲ್ಲಿ ಇನ್ನು ಎಲ್ಲೆಲ್ಲಿ ಅಡಗಿವೆಯೋ ಏನೋ? ಇವುಗಳಲ್ಲಿ ಶಿಲ್ಪಿಯ ಚಾತುರ್ಯದ ಕೆತ್ತನೆಯ ಉದ್ದೇಶವೇನೋ ತಿಳಿಯದು. ಆದರೆ ಅದು ಯಾವುದೋ ಒಂದು ಶ್ರೇಷ್ಠ ಸಂದೇಶವನ್ನು ವಿಶ್ವಕ್ಕೇ ಸಾರುವುದಕ್ಕಾಗಿ ಸೃಷ್ಟಿಯಾದುದೆಂಬುದಂತೂ ನಿಜ. ಅದನ್ನು ಮಾನವನು ಪರಿಶ್ರಮದಿಂದ ಅರ್ಥೈಸಿಕೊಂಡು ತನ್ನ ನಿತ್ಯಜೀವನದಲ್ಲಿ ಅಳವಡಿಸಿಕೊಂಡಲ್ಲಿ ಶಿಲ್ಪಿಯ ಸಾಧನೆಯ ಉದ್ದೇಶ ಸಾರ್ಥಕವಾದೀತು. ಇಂಥ ಶಿಲ್ಪದ ಕೆತ್ತನೆಯ ಹಿಂದೆ ಪರಂಪರೆಯ ಶಿಲ್ಪಶೈಲಿಯನ್ನು ಬದಲಾಯಿಸುವ ಶಿಲ್ಪಿಯ ಧಾರ್ಷ್ಟ್ಯತೆ ಇರಬಹುದೇ? ಅಥವಾ ಸಮಕಾಲೀನ ಯಾವುದೇ ಸಾಮಾಜಿಕ ಪ್ರಭಾವವೇ ? ಅಥವಾ ನಿಗೂಢತೆಯನ್ನು ಕುರಿತು ಚಿಂತನೆ ನಡೆಯಲಿ! ಎಂಬ ದ್ಯೋತಕವೇ? ಎಂಬುದು ವಿಚಾರಾರ್ಹ ಅಂಶವಾಗಿದೆ.

*

ಪ್ರೊ|| ಕ. ವೆಂ. ರಾಜಗೋಪಾಲ*

ಹೊಯ್ಸಳ ವಿನಯಾದಿತ್ಯನ ಸೂರ್ಯ

ಹಳೇಬೀಡು ಪ್ರಾಮುಖ್ಯವನ್ನು ಪಡೆದುದು ಹೊಯ್ಸಳ ರಾಜರು ಕ್ರಿ.ಶ. ೧೧ನೆಯ ಶತಮಾನದಲ್ಲಿ ಪಟ್ಟಣವನ್ನು ಕಟ್ಟಿ ವಿಸ್ತರಿಸಿ, ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಮೇಲೆ. ಅವರು ಕಟ್ಟಿದ ೧. ಹೊಯ್ಸಳೇಶ್ವರ ದೇವಾಲಯ ೨. ಕೇದಾರೇಶ್ವರ ದೇವಾಲಯ ಮತ್ತು ೩. ಜೈನ ಬಸದಿಗಳು- ಮುಖ್ಯವಾಗಿ ಪಾರ್ಶ್ವನಾಥಬಸ್ತಿ- ಇವು ಮೂರನ್ನು ಹಳೇ ಬೀಡಿನಲ್ಲಿ ದೇವಾಲಯಗಳಲ್ಲೆಲ್ಲಾ ಮುಖ್ಯವೆಂದು ಹೇಳಲಾಗಿದೆ. ಪ್ರಸ್ತುತದಲ್ಲಿ ಹೊಯ್ಸಳೇಶ್ವರ ದೇಗುಲಕ್ಕೆ ಸೇರಿಕೊಂಡಂತಿರುವ ಸೂರ್ಯದೇಗುಲವನ್ನು ಪರಿಶೀಲಿಸಬೇಕಾಗಿದೆ.

ಈಗ ಪ್ರಸಿದ್ಧಿಯಲ್ಲಿರುವ ಹೊಯ್ಸಳೇಶ್ವರ ಎಂಬ ಎರಡು ಶಿವಲಿಂಗಗಳಿಂದ ಕೂಡಿದ ಎರಡೊಂದಾದ ದೇವಸ್ಥಾನಕ್ಕೆ ಶ್ರೀಚಕ್ರವನ್ನು ಅಳವಡಿಸಿ ಕಟ್ಟಿದೆ. ಶ್ರೀಚಕ್ರಕ್ಕೆ ಪ್ರತಿ ಮೂಲೆಯೂ ಪ್ರತಿಕಂಭವೂ ಮೂರು ಮೂಲೆಗಳಿಂದಲೇ ಶಿಲ್ಪಶಾಸ್ತ್ರ ಮರ್ಯಾದಾನುಸಾರವಾಗಿ ನಿರ್ಮಿಸಿದೆ.

ಇದರಲ್ಲಿ ೧ನೇ ಕರಿಗಳ ಸಾಲು ೨ನೇ ಸಿಂಹಗಳ ಸಾಲು ೩ನೇ ದಂಡಾವಳಿಯ ಸಾಲು ೪ನೇ ಅಶ್ವಗಳ ಸಾಲು ೫ನೇ ಲತೆಯ ಸಾಲು ೬ನೇ ಸಣ್ಣ ವಿಗ್ರಹಗಳ ಸಾಲು ೭ನೇ ಮಕರಗಳ ಸಾಲು ೮ನೇ ಹಂಸ ಮತ್ತು ಮಯೂರ ಪಕ್ಷಿಗಳ ಸಾಲು ೯ನೇ ಉತ್ತರ ಬಾಗಿಲಿಂದ ನವ್ಯವಾಗಿ ದಕ್ಷಿಣ ಬಾಗಿಲವರೆಗೆ ಅಷ್ಟಜಾತಿ ಸ್ತ್ರೀಯರು-ಹರಿಣಿ ಇತ್ಯಾದಿ, ಸ್ತ್ರೀ ವಿಗ್ರಹಗಳು; ಭ್ರಾಂತುಪಟ್ಟು ಕುಳಿತಿರುವ ಧೀರೋದ್ಧತ ಇತ್ಯಾದಿ ಅಷ್ಟ ಜಾತಿ ಪುರುಷ ನಾಯಕರ ವಿಗ್ರಹಗಳು- ಮುಖದ ವರ್ಚಸ್ಸಿನಿಂದ ವಿಟಗಾರಿಕೆ ಲಕ್ಷಣ ತೋರುವಂತೆ ಮಾಡಿರುವ ಶಿಲ್ಪ ಚಮತ್ಕಾರ ೧೦ನೇ ಉತ್ತರ ಬಾಗಿಲಿಂದ ದಕ್ಷಿಣ ಬಾಗಿಲವರೆಗೆ ನವ್ಯವಾಗಿ ಇಟ್ಟಿರುವ ಗವಾಕ್ಷಗಳ ತಗ್ಗಿನಲ್ಲಿರುವ ಸಣ್ಣ ವಿಗ್ರಹಗಳು- ಭರತಶಾಸ್ತ್ರ ರೀತ್ಯಾ ಅಭಿನಯದ ನರ್ತಕೀ ನರ್ತಕರೂ ಕಳಾಶಾಸ್ತ್ರಾನುಸಾರವಾದ ಪ್ರತಿಮೆಗಳು ದೂತಿಯಿಂದ ಕೂಡಿದ ನವರಸಯುಕ್ತವಾದ ಸ್ತ್ರೀ ಪುರುಷ ವಿಗ್ರಹಗಳು. ಈ ದೇಗುಲವನ್ನು ವಿಷ್ಣುವರ್ಧನನ ಅಧಿಕಾರಿಯಾಗಿದ್ದ ಕೇತಮಲ್ಲನು ಕ್ರಿ.ಶ. ೧೧೨೦-೧೧೪೧ರ ಅವಧಿಯಲ್ಲಿ ರಚಿಸಲು ಕಾರಣನಾಗಿದ್ದಾನೆ.

ಹಳೇಬೀಡಿನಲ್ಲಿ ಕಂಡುಬರುವ ಬಸತಿಗಳು ಹೊಯ್ಸಳೇಶ್ವರ ದೇಗುಲಕ್ಕೂ ಮುಂಚಿನವು- ಅದರಲ್ಲೂ ಪಾರ್ಶ್ವನಾಥ ಬಸದಿ, ಕೇವಲ ಎರಡು ಫರ್ಲಾಂಗು ದೂರದಲ್ಲಿ 'ಬಸ್ತಿಹಳ್ಳಿ'ಯಲ್ಲಿ ಈ ಬಸತಿಯ ಹೊರ ಗೋಡೆಗೆ ನೆಟ್ಟಿರುವ ೧೨೪ನೆ ಶಾಸನದಿಂದ **"ವಿಜಯ ಪಾರ್ಶ್ವ ತೀರ್ಥೇಶ್ವರಃ ಸಿದ್ಧಂ ನಮಃ - ಹೊಯ್ಸಳೋರ್ವೀಶವಂಶಾಯ"** ಎಂದಿದೆ. ಹೀಗೆಯೆ ಅಂಗಡಿಯ ಮಲ್ಲಿನಾಥ ಬಸದಿಯುನ್ನು ಕ್ರಿ.ಶ. ೧೦೫೦ರಲ್ಲಿ ವಿನಯಾದಿತ್ಯನು ಕಟ್ಟಿಸಿದನೆಂಬುದು ಗಮನಾರ್ಹ.

ಇತ್ತೀಚಿನ ಶೋಧನೆಯಲ್ಲಿ ಕಂಡುಬಂದಿರುವ ಒಂದು ಮುಖ್ಯ ವಿಚಾರವೆಂದರೆ ವಿನಯಾದಿತ್ಯನಿಗೆ ಸಂಬಂಧಿಸಿದುದು- ಆತನ ಹೆಸರಿನಲ್ಲೇ ಸೂಚಿತವಾಗಿದೆ. ಆರನೆಯ ವಿಕ್ರಮಾದಿತ್ಯನು ಕ್ರಿ.ಶ. ೧೦೭೬ರಲ್ಲಿ ಪಟ್ಟಾಭಿಷೇಕಕ್ಕೆ ಮೊದಲು ಒಂದು ಸೂರ್ಯದೇವಸ್ಥಾನವನ್ನು ಕಲ್ಯಾಣದಲ್ಲಿ ನಿರ್ಮಿಸಿದ್ದಾನೆಂದು ಅದಕ್ಕೆ ಆತನ ರಾಣಿ ಮಾಳಲದೇವಿಯೂ ಕಾರಣಳೆಂಬುದನ್ನು ಗುರುತಿಸಲಾಗಿದೆ. ಎಲ್ಲಾ ವಿಕ್ರಮಾದಿತ್ಯರೂ ಒಂದೊಂದು ಸೂರ್ಯ ದೇಗುಲದ ನಿರ್ಮಾಣಕ್ಕೆ ಕಾರಣರಾಗಿದ್ದಾರೆ ಇದು ಇತಿಹಾಸ.

ಆದುದರಿಂದ ವಿನಯಾದಿತ್ಯನ ಸೂರ್ಯದೇಗುಲವು ದೋರಸಮುದ್ರದಲ್ಲಿರಬೇಕಷ್ಟೆ- ಹಳೇಬೀಡಿನ ಹೊಯ್ಸಳೇಶ್ವರ ದೇಗುಲದ ಮೂರನೆಯ ಬಾಗಿಲಿನೆದುರಿನ ದೊಡ್ಡ ಬಸವಣ್ಣನ ಹಿಂಬದಿಗೆ ಈ ದೇಗುಲವು ಮೂಕಸಾಕ್ಷಿಯಾಗಿದೆ. ಗರ್ಭ ಗುಡಿಯನ್ನು ನಾಶಪಡಿಸಲಾಗಿದೆ. ಆದರೆ ಅದರ ತಳಮಟ್ಟು 'ಪೀಠ' ಹಾಗೆಯೇ ಉಳಿದಿದೆ. ಅಂತರಾಳದಲ್ಲಿ ಈಗ ಸೂರ್ಯನ ಪ್ರತಿಮೆಯಿದೆ. ಅದರ ಹಿಂದಕ್ಕೆ ಗೋಡೆ ಹಾಕಿ ಮುಚ್ಚಿದ್ದಾರೆ.

---

* ಎಂ.ಐ.ಜಿ. ೪೧, ಎಂಬತ್ತಡಿ ರಸ್ತೆ, ಕೆಂಗೇರಿ ಉಪನಗರ, ೨ನೇ ಹಂತ, ಬೆಂಗಳೂರು-೫೬೦ ೦೫೬

ಅಂತರಾಳದಿಂದ ಮುಖಮಂಟಪಕ್ಕೆ ಬಂದರೆ ದೊಡ್ಡ ಬಸವಣ್ಣನು ರಂಗಮಂಟಪವನ್ನು ಆಕ್ರಮಿಸಿಕೊಂಡಂತೆ ಕಂಡುಬರುತ್ತಾನೆ. ಈ ರಂಗಮಂಟಪವು ಸೂರ್ಯನ ದೇಗುಲಕ್ಕೆ ಸೇರಿದುದೇ ಹೊರತು ಹೊಯ್ಸಳೇಶ್ವರನಿಗೆ ಸೇರಿದುದಲ್ಲ. ಏಕೆಂದರೆ ಅದೇ ದೇಗುಲದಲ್ಲಿ ಎರಡೂ ಗರ್ಭಗುಡಿಗಳ ಮುಂದೆ ರಂಗಮಂಟಪಗಳು ಬೇಲೂರಿನ ಚೆನ್ನಕೇಶವ ದೇಗುಲವನ್ನು ನೆನಪಿಸುವಂತೆ ಇವೆ. ಹಳೇಬೀಡಿನ ಸೂರ್ಯನನ್ನು ಕಡೆಗಣಿಸಿರುವ ವಿಚಾರವು ಶಿವನಂಜೇಗೌಡರ ಹಳೇಬೀಡು ಪುರಾತನ ಚರಿತ್ರೆ- ಎಂಬುದರಲ್ಲಿ ವಿಷದವಾಗಿಯೇ ಬರುತ್ತದೆ. ಕಾಲ ಕ್ರಿ.ಶ. ೧೯೦೯.

ಈ ಸೂರ್ಯನಿರುವ ಅಂತರಾಳದ ತಳಕ್ಕೂ ರಂಗ ಮಂಟಪದ ತಳಕ್ಕೂ ಯಾವುದೇ ಅಂತರ ವೆತ್ಯಾಸವಿಲ್ಲ. ಹೊಯ್ಸಳೇಶ್ವರ ದೇಗುಲದ ಆರನೆಯ ಹಂತದ ರಂಗಮಂಟಪದ ಹಂತವೂ ಹೊಂದಿದಂತೆ ಆದರೆ ಪ್ರತ್ಯೇಕವಾದ ಸೂರ್ಯದೇಗುಲದ ಭಾಗದಂತೆಯೇ ರಚಿತವಾಗಿದೆ.

ಈ ಮಂಟಪದಲ್ಲಿ ಎಂಟುಕಡೆ ಕಂಭಗಳು ಹೆಚ್ಚಾಗಿ ಪ್ರೌಢದೇವರಾಯನ ಹೆಸರಿನಲ್ಲಿ ಸೇರಿಸಲಾಗಿದೆಯಷ್ಟೆ. ಇದರಲ್ಲಿ ಒಂದೆಡೆ ಕ್ರಿ.ಶ. ೧೪೦೬ರ ಗುರುತಿದೆ- (ಹಳೇಬೀಡು ಪುರಾತನ ಚರಿತ್ರೆ, ಶಿ. ಗೌಡರು). ಈ ರಂಗಮಂಟಪವನ್ನು ಎಚ್ಚರಿಕೆಯಿಂದಲೂ ಪರಿಶೀಲಿಸಬಹುದು. ಬಸವಣ್ಣನನ್ನು (ಚಿಕ್ಕ ಬಸವಣ್ಣನಿಗಿಂತಲೂ ಮೂರು ಅಡಿ ಹೆಚ್ಚಿನ ಸುತ್ತಳತೆಯದನ್ನು) ಇರಿಸಿ ಸೂರ್ಯನ ಆರಾಧನೆಯನ್ನು ತಪ್ಪಿಸುವ ಪ್ರಯತ್ನವು ಪ್ರೌಢ ದೇವರಾಯನ ಕಾಲದಿಂದಲೇ ಆದಂತಿದೆ.

ಸೂರ್ಯನ ಸೇವೆಗೆ ವೀರರ ಕ್ರೀಡಾಸೇವೆ ಹಾಗೂ ದೇವದಾಸಿಯರ ಅಥವಾ ವೀರರ ಪ್ರೇಯಸಿಯರ ನೃತ್ಯ ಸೇವೆಯೂ ಇರುತ್ತಿದ್ದಿತು. ಒಂದು ಉದಾಹರಣೆಯಾಗಿ ಬಾಗಳಿಯ ದೇಗುಲಕ್ಕೆ ದೇವದಾಸಿಯನ್ನು ನೀಡಿದ ಶಾಸನವೊಂದಿದೆ. ಅಲ್ಲಿ ನರಸಿಂಹ ಮತ್ತು ಸೂರ್ಯರ ಗರ್ಭಗುಡಿಗಳ ಮುಂದೆ ರಂಗಮಂಟಪವಿದೆ. (ಇಡೀ ಭಾರತದಲ್ಲಿಯೇ ಸೂರ್ಯನ ಸೇವೆಗೆ ರಂಗಮಂಟಪಗಳು ಸೇರಿರುವುದೂ ಕಂಡು ಬರುತ್ತಿದೆ.)

ಇಲ್ಲಿ ಮುಖ್ಯವಾಗಿ ಈ ಸೂರ್ಯ ದೇಗುಲವು ಹೊಯ್ಸಳೇಶ್ವರದೇಗುಲಕ್ಕಿಂತಲೂ ಅಂದರೆ ಕ್ರಿ.ಶ. ೧೧೧೦ಕ್ಕಿಂತಲೂ ಮುಂಚಿನದಾಗಿರಬೇಕು. ಪ್ರತಿಮೆಯ ಪಕ್ಕಗಳಲ್ಲಿರುವ ಶಾಸನಗಳನ್ನು ನಾಶಮಾಡಿರುವುದರಿಂದ ಕಾಲವನ್ನು ನಿರ್ಧರಿಸಲು ಕಷ್ಟವಾಗಿದೆ.

ರಂಗಮಂಟಪ ಮತ್ತು ಸೂರ್ಯ ಪ್ರತಿಮೆಯಿರುವ ಅಂತರಾಳದ ಮೇಲುಗಡೆಗೆ ಇರುವ ಅಲಂಕಾರದ ಕೆತ್ತನೆಗಳಲ್ಲಿ ನೃತ್ಯಕ್ಕೆ ಸಂಬಂಧಿಸಿದ ಹಾಗೂ ದ್ವಾದಶ ಆದಿತ್ಯರು ಮೊದಲಾದ ಕೆತ್ತನೆಗಳಿವೆ. ರಂಗಮಂಟಪದ ಛತ್ತಿನಲ್ಲಂತೂ ವೀರರ ನೃತ್ಯದ ಕೆತ್ತನೆಗಳಿವೆ, ಅಷ್ಟದಿಕ್ಪಾಲಕರ ಕೆತ್ತನೆಗಳಿವೆ. ಇವುಗಳೆಲ್ಲಾ ಆಗಿನ ಕಾಲದ ವೀರಕ್ರೀಡೆಗೆ ಸಂಬಂಧಿಸಿದ ಆಚರಣೆಗಳಲ್ಲಿ ಗುರುತಿಸಬಹುದಾಗಿದೆ.

ಪ್ರಸ್ತುತದಲ್ಲಿ ಚಾಲುಕ್ಯ ಸೋಮೇಶ್ವರ II ರಚಿಸಿರುವ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ **'ವೀರಕ್ರೀಡೆ'**ಯ ಒಂದು ಭಾಗದ ವಿವರಣೆಗಳಿವೆ. ಅಧ್ಯಾಯ ೧೮ ಮಾನಸೋಲ್ಲಾಸ (ಸಂ ೧೩೮, ಗಾಯಕವಾಡ್ ಓರಿಯಂಟಲ್ ಸೀರಿಸ್, ೧೯೬೧) ಕತ್ತಿವರಸೆ, ಗುರಾಣಿ, ಮುಷ್ಠಿಯುದ್ಧ ಮೊದಲಾದ ಹಲವು ಬಗೆಯ ಆಯುಧಗಳನ್ನು ಬಳಸುವ ಸಿದ್ಧಿಯನ್ನು ಇದರಲ್ಲಿ ಸೂಚಿಸಲಾಗಿದೆ. (ನಮ್ಮ ಸಂಕ್ರಾಂತಿಯ ವೇಳೆಗೆ ಇಂದಿಗೂ ಹಾಸನ ಜಿಲ್ಲೆಯ ಜನಪದರು ಕತ್ತಿವರಸೆ ಕುಸ್ತಿ ಮುಂತಾದ ಪ್ರದರ್ಶನಗಳನ್ನು ಮಾಡುವ ಪದ್ಧತಿಯಿದೆ. ಇದು ಶ್ರವಣಬೆಳ್ಗೊಳದಲ್ಲಿ ಕಂಡ ವಿಷಯ ಬೇರೆಡೆಗಳಲ್ಲೂ ಗರಡಿಯವರ ಕಸರತ್ತುಗಳು ಕಂಡು ಬರುತ್ತವೆ.)

ಒಂದೇ ಜಗಲಿಯಲ್ಲಿ, ನೆಲದಿಂದ ಸುಮಾರು ಆರು ಅಡಿಗಳ ಎತ್ತರದಲ್ಲಿ ಸೂರ್ಯ ದೇಗುಲದ **'ಆಯದಪೀಠ'**ವನ್ನು (Foundation platform) ರಚಿಸುವುದಕ್ಕೆ ಸೂರ್ಯನ ಕಿರಣಗಳು ಉದಯಕ್ಕೆ ಸರಿಯಾಗಿ ಸೂರ್ಯ ವಿಗ್ರಹದ ಮೇಲೆ ಬೀಳಿಸಬೇಕೆಂಬುದೇ ಆಗಿದೆ. ಹೊಯ್ಸಳೇಶ್ವರ ದೇಗುಲಕ್ಕೆ ಪೂರ್ವದಿಕ್ಕಿನಲ್ಲಿ ಮಹಾದ್ವಾರಗಳಿರುವುದೂ ಬೆಳಕಿನ ಸೌಕರ್ಯಕ್ಕಾಗಿ ಎನ್ನಬಹುದು. (ಇದು ಗುಹಾಂತರ ದೇವಾಲಯಗಳಿಂದ ಹಿಡಿದು ದೇಗುಲಗಳಲ್ಲಿ ಕಂಡುಬರುವ ಪದ್ಧತಿಯಾಗಿದೆ.)

ಹೊಯ್ಸಳರ ಕಾಲದಲ್ಲಿ ವೀರರು ಸೂರ್ಯಾರಾಧಕರಾಗಿದ್ದರೆಂಬುದಕ್ಕೆ ಈ ದೇಗುಲದ ರಂಗಮಂಟಪದ ಛತ್ತಿನ ಕೆತ್ತನೆಗಳು ಆಧಾರವಾಗುತ್ತಿವೆ. ಅಲ್ಲದೆ ಸೂರ್ಯ ದೇಗುಲವು ಎಲ್ಲಿಯೇ ಇರಲಿ (ಇಡೀ ಭಾರತದಲ್ಲಿ) ಅದಕ್ಕೆ ಸಂಬಂಧಿಸಿದಂತೆ ಒಂದು ಸಿದೌಷಧದ ಕೊಳವಿರುತ್ತದೆ. ಅಥವಾ ತಾವರೆಯ ಕೆರೆಯಿರುತ್ತದೆ.

ಸೂರ್ಯನ ಆರಾಧನೆಯನ್ನು ಸಂತಾನ ಪ್ರಾಪ್ತಿಗಾಗಿ ಮಾಡಿಸುವ ಪದ್ಧತಿಯು ಸೂರ್ಯ ದೇಗುಲಗಳಿಗೆ ಸೇರಿದೆ. ಇದಕ್ಕಾಗಿ ಬಂಗಾರದ ಕಣ್ಣುಕಂಗಳ ಮೊದಲಾದ ಆಭರಣಗಳನ್ನು ಮಾಡಿಸಿಕೊಡುತ್ತಾರೆ. ಉದಾ: ಮಂಗಳೂರಿನ ಮದೋಳಿಯ ಸೂರ್ಯ ದೇಗುಲದಲ್ಲಿದೆ- ಬೇರೆಡೆಯೂ ಇದೇ ರೂಢಿಯಿದೆ.

ಸೂರ್ಯ ದೇಗುಲಗಳಿಗೆ ವೀರಗಲ್ಲುಗಳು ಅಭಿಮುಖವಾಗಿರುತ್ತವೆ. ಉದಾ: ಹಲಸಿಯಲ್ಲಿದೆ. ಬೇರೆಡೆಗಳಲ್ಲಿ ವೀರಗಲ್ಲುಗಳ ಬಳಿ ಸೂರ್ಯನ ದೇಗುಲಗಳಿವೆ. ಉದಾ.

ಮೈಸೂರಿನಲ್ಲಿ ಸಮೀಪದಲ್ಲಿ ಅಥವಾ ಫಿಲೋಮಿನಾ ಚರ್ಚ್ ಸಮೀಪದಲ್ಲಿ ಕೆಸರೆಗೆ ಬೆಂಗಳೂರಿಗೆ ಹೋಗುವ ಹಾದಿಯ ಕಡೆಗೆ ನೂರಾರು, ವೀರಗಲ್ಲುಗಳು ಉಳಿದಿವೆ. ಅದಕ್ಕೆ ಸೇರಿದ್ದ ತಾವರೆ ಕೆರೆಯು ಈಗ 'ಮೊಹಲ್ಲಾ'ಆಗಿದೆ. ಅದರ ಸೂರ್ಯ ಪ್ರತಿಮೆಯು ಮತ್ತೆ ಪಕ್ಕದ ತಾವರೆಕೆರೆಯ ದಂಡೆಯ ಮೇಲಿದೆ.

ವೈದ್ಯ, ಸಂತಾನ, ಕಾಲಮಾನ, ಯುದ್ಧ ಮೊದಲಾದ ವಿಷಯಗಳಿಗೆ ಪ್ರಮುಖ ದೇವತೆಯಾಗಿ ಸೂರ್ಯನಿದ್ದಂತೆ ಇತಿಹಾಸವಾಗಿದೆ. ಆದುದರಿಂದ ರಾಜಮಹಾರಾಜರಿಂದ ಮೊದಲಾಗಿ ವೀರರು ಅವರ ಪ್ರೇಯಸಿಯರೂ (ಮಾಸ್ತಿಯಾಗುವವರು) ಸೂರ್ಯನ ಆರಾಧನೆಯಲ್ಲಿ ತೊಡಗುತ್ತಿದ್ದಿರಬೇಕೆಂಬುದಕ್ಕೆ ಹೊಯ್ಸಳರ ಕಾಲದ ಇತಿಹಾಸವು ಉದಾ: ಗರುಡ ಪದ್ಧತಿ ಮತ್ತು ಮಾಸ್ತೀ ಪದ್ಧತಿಗಳಿಂದ ಪ್ರಸಿದ್ಧವಾಗಿದೆ.

ಕರ್ನಾಟಕದಲ್ಲಿ ರಥಸಪ್ತಮಿಯಲ್ಲಿ ಶೃಂಗೇರಿಯ ಸ್ವಾಮಿಗಳು ಮೊದಲಾಗಿ ಜಾನಪದರು- ಸೂರ್ಯಾರಾಧನೆಯನ್ನು ವಿಶೇಷವಾಗಿ ಆಚರಿಸುವ ಸ್ಥಳಗಳಿವೆ. ಉದಾ: ಶೃಂಗೇರಿ, ಹೇಮಗಿರಿ, ನಾಗಮಂಗಲ.

ಆದುದರಿಂದ ವಿನಯಾದಿತ್ಯನು ತನ್ನ ಪಟ್ಟಾಭಿಷೇಕದ ವೇಳೆಗೆ ಹಳೇಬೀಡಿನ ಸೂರ್ಯ ದೇಗುಲವನ್ನು ಕಟ್ಟಿಸಿ, ಆರಾಧಿಸಿರಬಹುದಾಗಿದೆ. ಅಲ್ಲದೆ ಆತನ ಮಗನಿಗೆ ಒಬ್ಬ 'ಉದಯಾದಿತ್ಯ' ಎಂಬ ಮೂರನೆಯ ಮಗನೂ ಇದ್ದುದು ಕಂಡುಬರುತ್ತದೆ. ಈ ಇಬ್ಬರಿಗೂ ಸೂರ್ಯಾರಾಧನೆಯ ಸಂಬಂಧವಿದ್ದು ಹೊಯ್ಸಳ ವೀರರ-ಮಾಸ್ತಿಗಳ ಹಾಗೂ ದೇವದಾಸಿಗಳ ಆರಾಧನೆಗೆ ನ್ಯಾಯವಾದ ಅವಕಾಶಗಳಿದ್ದಂತೆ ಗುರುತಿಸಬಹುದಾಗಿದೆ.

ವೀರನಿಲ್ಲದೆ ಮಾಸ್ತಿಯಿಲ್ಲ: ರಾಜಮಹಾರಾಜರು 'ಆದಿತ್ಯ' ರಾಗುವುದೂ ಇಲ್ಲ. 'ಸಂತಾನದ' ವಿಷಯದಲ್ಲಿ ಸೂರ್ಯ ಕೇಂದ್ರಗಳು- ಮಿಥುನ ಶಿಲ್ಪಗಳನ್ನು ಒಳಗೊಳ್ಳುವುದರಿಂದ (ಇವು ಸಾಮಾನ್ಯವಾಗಿ ಗರ್ಭಗೃಹದಲ್ಲಿರುತ್ತಿದ್ದವು) ದೇಗುಲದ ಪೂಜಾರಿಗೆ ಒಂದು ಕಾಲದಲ್ಲಿ Sex-education ಕೊಡುವ ಅಧಿಕಾರವೂ ಇದ್ದಿರಬಹುದಾಗಿದೆ.

ಉಪಸಂಹಾರ

೧. ಹಳೇಬೀಡಿನ ಸೂರ್ಯ ದೇಗುಲವನ್ನು ವಿನಯಾದಿತ್ಯನು ಕಟ್ಟಿಸಿದ್ದಾನೆ ಮತ್ತು ಅಂದಿನ ವೀರರ ಆರಾಧನೆಗೆ ಅವನಿಂದಲೂ ಪ್ರೋತ್ಸಾಹ ದೊರಕುತ್ತಿದ್ದಿತು.

೨. ದೇವರುಗಳಲ್ಲೆಲ್ಲಾ ಹೆಚ್ಚಾದ ಧನ, ಸಂಪತ್ತು, ದೌಲತ್ತು ಕೂಡ, ಸೂರ್ಯ ದೇಗುಲಗಳಿಗೆ ಸೇರಿದ್ದಿತು. ಆದುದರಿಂದ ಮಲ್ಲಿಕಾಫರನು ಕ್ರಿ.ಶ. ೧೩೧೦-೧೧ರ ವೇಳೆಗೆ ಹಳೇಬೀಡಿನ 'ಲೂಟಿ' ಮಾಡಿರುವುದಾದರೂ ಸೂರ್ಯ ದೇಗುಲದ ಐಶ್ವರ್ಯವೇ ಮುಖ್ಯ ಕಾರಣವಾಗಿದ್ದಿರಬೇಕು. ಆತನೂ ಸೂರ್ಯ ಪ್ರತಿಮೆಯನ್ನು ಹಾಳುಮಾಡದೇ ಉಳಿಸಿರುವುದನ್ನೂ ಗಮನಿಸಬಹುದು. ಮತ್ತೊಂದು ಬಾರಿಯೂ (ತುಘಲಕ್‌ನ ಕಾಲವಿರಬಹುದು) ಹಳೇಬೀಡಿನ ದೇಗುಲಗಳ ಐಸಿರಿಯನ್ನು ಲೂಟಿ ಮಾಡಿದ್ದಾರೆ- ಎಂಬುದೂ ಇತಿಹಾಸವಾಗಿದೆ.

೩. ಹಳೇಬೀಡಿನ ಸೂರ್ಯ ದೇಗುಲಕ್ಕೆ ೬- ೭ ಅಡಿಗಳ ಪೀಠ-ಜಗಲಿಯ ಅವಶ್ಯಕತೆಯಲ್ಲಿ ಸೂರ್ಯೋದಯದ ಕಿರಣಗಳು ಪ್ರತಿಮೆಯ ಮೇಲೆ ಬೀಳಬೇಕೆಂಬುದಾಗಿದ್ದು ಹೊಯ್ಸಳರ ಕಾಲದ ಎಲ್ಲಾ ದೇಗುಲಗಳಿಗೂ ಒಂದು ಪಾಠ ಅಥವಾ ಅವಶ್ಯಕತೆಯಾಗಿ ಪರಿಣಮಿಸಿದಂತಾಗಿದೆ. ಉದಾ: ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ ಇರುವ ಜಗಲಿಯ ಎತ್ತರ, ಇತ್ಯಾದಿ.

೪. ಪ್ರೌಢ ದೇವರಾಯನ ಕಾಲದವರೆಗೂ ಸೂರ್ಯಾರಾಧನೆಯು ಜೀವಂತವಾಗಿರಲು ಸಾಧ್ಯ- ಆದುದರಿಂದ ದೊಡ್ಡ (ಸಣ್ಣದೂ ಕೂಡ) ಬಸವಣ್ಣನನ್ನು ಆತನು ನಿಯೋಜಿಸಿ ರಂಗಮಂಟಪದಲ್ಲಿ ಕೂಡಿಸಿದ್ದಾಗಿರಬಹುದು.

೫. ಈ ದೇಗುಲಕ್ಕೆ ಸಂಬಂಧಪಟ್ಟಿರಬಹುದಾದ ಅವಶೇಷಗಳನ್ನು ಹಳೇಬೀಡಿನ ದೇಗುಲಗಳ ಮ್ಯೂಸಿಯಂನ ಮುಂದೆ ಜೋಡಿಸಲಾಗಿದೆ. ಇದರಲ್ಲಿ ಬೇರೆ ಬೇರೆ ಪ್ರತಿಮೆಗಳಲ್ಲದೆ ಉದಾ: ಯಕ್ಷಿಯರು, ಮಿಥುನಕ್ಕೆ ಸಂಬಂಧಿಸಿದ ಎರಡು ಪಟ್ಟಿಕೆಗಳೂ ಇವೆ.

೬. ಒಟ್ಟಿನಲ್ಲಿ ಬಸತಿಗಳನ್ನುಳಿದು ಹೊಯ್ಸಳರ ಕಾಲದ ದೇಗುಲಗಳಿಗೆ ಮೊಟ್ಟ ಮೊದಲಿನದಾಗಿ ಈ ಸೂರ್ಯ ದೇಗುಲವು ಮೂಕಸಾಕ್ಷಿಯಾಗಿ ಉಳಿದುಬಂದಿದೆ.

*

ಡಾ|| ರು. ಮ. ಷಡಕ್ಷರಯ್ಯ*

ಸೇಡಂ ತಾಲೂಕಿನಲ್ಲಿ ಪ್ರಾಚ್ಯಾವಶೇಷಗಳು (ಶೋಧನೆ)

ಈ ಮೊದಲು ಈ ತಾಲೂಕಿನ ಮೊದಲ ಹಂತದ ಅನ್ವೇಷಣೆಯಲ್ಲಿ ದೊರೆತ ದೇವಾಲಯ, ಶಿಲ್ಪ, ಪ್ರಾಚೀನ ಜನವಸತಿನೆಲೆಗಳ ಶೋಧನೆ ಬಗ್ಗೆ ಪ್ರಕಟಿಸಲಾಗಿದೆ. ಎರಡನೇ ಹಂತದಲ್ಲಿ ಅನ್ವೇಷಣೆ ಮಾಡಿದ ಈ ತಾಲೂಕಿನ ೨೭ ಹಳ್ಳಿಗಳಾದ ಉಡಗಿ, ಅಳ್ಳಳ್ಳಿ, ಕಲ್ಕಂಭ, ಕೊಡ್ಲ, ಬೆನಕನಹಳ್ಳಿ, ಬೆಟಗೇರ(ಬಿ), ಬೆಟಗೇರ (ಕೆ), ಮಾದಾವರ, ಕಾಚಾವರ, ರಂಜೊಳ್ಳಿ, ಸಿಂದನಮಡು, ಹನುಮನಹಳ್ಳಿ, ರುದ್ರಾವರ, ಭೂತನೂರು, ಹುಲಗೊಳ, ಗೌನಳ್ಳಿ, ನಾಮವರ, ಮೈಲ್ವಾರ, ಮುಸ್ತಳ್ಳಿ, ನಾಚಾವರ, ದುಗನೂರ, ದೇವನೂರು, ಕೊಳಕುಂದ, ತುರನೂರ, ಕೊಣಾಪುರ, ರಾಘಾಪುರ ಮತ್ತು ಜಕನಳ್ಳಿಗಳನ್ನು ಅನ್ವೇಷಣೆ ಮಾಡಲಾಗಿದೆ. ಈ ಸ್ಥಳಗಳಲ್ಲಿ ಶೋಧಿಸಿದ ಶಿಲ್ಪ ಸ್ಮಾರಕಗಳು ಹಿಂದೂ ಮತ್ತು ಮುಸ್ಲಿಂ ಧರ್ಮಕ್ಕೆ ಸೀಮಿತವಾಗಿವೆ. ಈ ಭಾಗದ ಪ್ರತಿಯೊಂದು ಹಳ್ಳಿ, ಗ್ರಾಮ, ಪಟ್ಟಣಗಳಿಗೆ ಸಾಮಾನ್ಯವಾಗಿ ಊರ ಅಗಸಿ, ಬುರ್ಜ, ಕೋಟೆಗಳಿವೆ.

ಸೇಡಂ ತಾಲೂಕಿನ ದಕ್ಷಿಣ ಭಾಗದ ಭೌಗೋಳಿಕ ಪರಿಸರವು ವಿಭಿನ್ನವಾಗಿದೆ. ಹಂದರಕಿ ಗ್ರಾಮ ದಕ್ಷಿಣಕ್ಕೆ ಸುಮಾರು ೪-೫ ಕಿ.ಮೀ.ಅಂತರಕ್ಕೆ ಪೂರ್ವ-ಪಶ್ಚಿಮಕ್ಕೆ ಹರಿದ ಎತ್ತರದ ಕೆಂಪುಮಣ್ಣಿನ ಗುಡ್ಡವಿದೆ. ಸುಣ್ಣದಶಿಲೆ ಪ್ರದೇಶ ಅಂತ್ಯಗೊಂಡು ಗ್ರಾನೈಟ್ ಪ್ರದೇಶ ಕಾಣುವುದು. ಅದು ಈ ತಾಲೂಕಿನ ದಕ್ಷಿಣದ ನಾಜವಾರ, ದೇವನೂರ, ದಂಗನೂರ, ಕೊಲ್ಕಂಡ, ಕೋನಾಪುರ ಮತ್ತು ರಾಘಾಪುರ ಗ್ರಾಮಗಳಿಂದ ದಕ್ಷಿಣ ಕಡೆ ಹರಿದಿದೆ. ನಾಚಾವರ ಈಶಾನ್ಯಕ್ಕೆ ಸುಣ್ಣದಶಿಲೆಯ ಎತ್ತರದ ಗುಡ್ಡವಿದ್ದು, ಅದು ದಕ್ಷಿಣಕ್ಕೆ ಸುಮಾರು ದೂರ ಹರಿದಿದೆ. ಈ ಪ್ರದೇಶವು ಅಲ್ಲಿಂದ ದಕ್ಷಿಣಕ್ಕಿರುವ ಹುಲಗೋಳ ಗ್ರಾಮದ ಹತ್ತಿರವಿದೆ. ಈ ಭಾಗದಲ್ಲಿ ಕಮಲವತಿ ನದಿ ಹಾಗೂ ಅದರ ಉಪನದಿ ಬಯಲುಗಳಲ್ಲಿ ಹಳ್ಳಿಗಳಿವೆ.

ಪ್ರಾಚೀನ ಜನವಸತಿಯ ನೆಲೆಗಳು

ಆದಿ ಹಳೇಶಿಲಾಯುಗದ ಉಪಕರಣಗಳು ಬೆಟಗೇರ (ಬಿ) ಮತ್ತು ಬೆಟಗೇರ (ಕೆ) ಬದಿಯ ಹಳ್ಳದ ದಂಡೆಯಲ್ಲಿ, ಆದಿ ಮಧ್ಯಶಿಲಾಯುಗದ ಉಪಕರಣಗಳು ಬೆಟಗೇರ (ಕೆ) ತುರನೂರ ಮತ್ತು ಮಾಧವರ ಬದಿಗಿನ ಹಳ್ಳದ ಪ್ರದೇಶದಲ್ಲಿ ದೊರೆತಿವೆ. ಅಂತ್ಯ ಶಿಲಾಯುಗದ ಒಂದು ಬೃಹತ್ ತಾಣವೇ ತುರನೂರದಿಂದ ಪೂರ್ವಕ್ಕೆ ಬಯಲು ಪ್ರದೇಶವನ್ನು ಆವರಿಸಿದೆ. ಈ ನೆಲೆಗಳಲ್ಲಿ ಕೈಕೊಡಲಿಗಳು (ಆದಿ ಹಳೇ ಶಿಲಾಯುಗ), ಚಕ್ಕೆ ಉಪಕರಣಗಳು (ಮಧ್ಯಶಿಲಾಯುಗ), ಮತ್ತು ಹರಿತವಾದ ವಿವಿಧ ಚಿಕ್ಕ ಚಿಕ್ಕ ಉಪಕರಣಗಳು (ಅಂತ್ಯ ಶಿಲಾಯುಗ) ದೊರೆತಿವೆ. ನೂತನ ತಾಮ್ರಯುಗ ಮತ್ತು ಪ್ರಾಚೀನ ಇತಿಹಾಸ ಯುಗದ ನೆಲೆಗಳು ಸೇಡಂ, ಅಳ್ಳಳ್ಳಿ, ಮುಸ್ತಳ್ಳಿ, ಕೊಳ್ಳೂರು, ಕೊಡ್ಲ, ಹುಳಗೊಳ, ಬೆಟಗೇರ (ಬಿ), ಉಡ್ಗಿ ಇತ್ಯಾದಿ ಗ್ರಾಮಗಳಲ್ಲಿ ಕಂಡುಬಂದಿವೆ. ಬೆಟಗೇರ (ಬಿ) ಸ್ಥಳದ ಇಟ್ಟಂಗೇಶ್ವರ ದೇವಾಲಯದ ಪರಿಸರದಲ್ಲಿ ಇಟ್ಟಿಗೆ ಕಟ್ಟಡದ ಕುರುಹುಗಳಿವೆ. ಈ ನೆಲೆಗಳು ಪ್ರಥಮ ಬಾರಿಗೆ ಕಾಗಿನ ಉಪನದಿಯಾದ ಕಮಲವತಿ ನದಿ ಪ್ರದೇಶದಲ್ಲಿ ಶೋಧವಾಗಿವೆ.

ದೇವಾಲಯಗಳು

ಈ ಭಾಗದಲ್ಲಿ ಉಡ್ಗಿ, ಕೊಡ್ಲ ಮತ್ತು ಬೆಟಗೇರ (ಬಿ) ಗ್ರಾಮಗಳ ದೇವಾಲಯಗಳು ಪ್ರಾಚೀನವಾಗಿವೆ. ಈ ಪ್ರದೇಶದಲ್ಲೇ ಉಡ್ಗಿಯ ಲೋಕೇಶ್ವರ ದೇವಾಲಯ ಪ್ರಮುಖವೆನಿಸಿದೆ. ಉತ್ತರ ಕರ್ನಾಟಕದಲ್ಲೇ ಹೆಚ್ಚಿನ ಸಂಖ್ಯೆಯ ರಾಷ್ಟ್ರಕೂಟರ ಕಾಲದ ಶಿಲ್ಪಗಳು ಪ್ರಥಮ ಬಾರಿಗೆ ಈ ಗ್ರಾಮದಲ್ಲಿ ಕಂಡುಬಂದಿವೆ.

ಲೋಕೇಶ್ವರ ದೇವಾಲಯ (ಹುಡ್ಗಿ): ಈ ದೇವಾಲಯಕ್ಕೆ ಒಂದು ಆಯತಾಕಾರದ ಗರ್ಭಗೃಹ, ಒಂದು ಅರ್ಧಮಂಟಪ ಮತ್ತು ಒಂದು ನವರಂಗಗಳಿವೆ. ಗರ್ಭಗೃಹದಲ್ಲಿ ಎತ್ತರದ ಶಿವಲಿಂಗವಿದೆ. ಅದರ ಛತ್ತಿನಲ್ಲಿ ಪದ್ಮದ ಅಲಂಕಾರ. ಈ ಲಿಂಗ ಸು.ಕ್ರಿ.ಶ. ೧೧ನೇ ಶತಮಾನದ್ದು, ಗರ್ಭಗೃಹ ಬಾಗಿಲು ಚೌಕಟ್ಟಿನ ೫ ಶಾಖೆಗಳಲ್ಲಿ ಲತಾಬಳ್ಳಿ, ಕಬ್ಬಿನಾಕಾರದ ಅರ್ಧಗಂಬ, ಮನುಷ್ಯರ ಸಾಲು, ಬಹುಮುಖ ಅರ್ಧಗಂಬ ಮತ್ತು ಪತ್ರವಿವೆ.

* ರೀಡರ್ ಮತ್ತು ನಿರ್ದೇಶಕರು, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ದ್ವಾರಪಾಲಕರ ಕೈಗಳಲ್ಲಿ ವಿಸ್ಮಯ ಚಿಹ್ನೆ, ಅಭಯಮುದ್ರೆ, ನಾಗ ಮತ್ತು ಗದೆ. ಇವರ ಬದಿಗೆ ಚೌರಿ ಹಿಡಿದು ನಿಂತ ಸೇವಕಿಯರಿದ್ದಾರೆ. ಲಲಾಟದಲ್ಲಿ ಮಕರತೋರಣ, ಮಧ್ಯ ಕೀರ್ತಿಮುಖ, ಬದಿಗಳಲ್ಲಿ ಮಂಗ-ಗಂಧರ್ವರು. ಈ ಕೀರ್ತಿ ಮುಖದಿಂದ ಕೆಳಗಡೆ ಸಾಲಾಗಿ ಇಳಿದ ಆರು ಹಾರಗಳು. ಈ ಪಟ್ಟಿಕೆಯ ಮೇಲಿನ ಕಪೋತದ ಕೆಳಭಾಗದಲ್ಲಿ ಹಂಸಪಕ್ಷಿಗಳ ಸಾಲು. ಅದರ ಮುಂಭಾಗದಲ್ಲಿ ಚೈತ್ಯಾಕಾರ. ಉತ್ತರಾಂಗದ ಮಧ್ಯ ಗಜಲಕ್ಷ್ಮಿ ತಲಾ ಒಂದು ಕಡೆ, ಒಂದು ಗಜಲಕ್ಷ್ಮಿ ಇನ್ನೊಂದು ವಿರುದ್ಧ ದಿಕ್ಕಿನ ಕಡೆ ನಿಂತಿವೆ. ಬದಿಗಳಲ್ಲಿ ಗಂಧರ್ವರಿದ್ದಾರೆ. ಈ ಬಾಗಿಲು ಚೌಕಟ್ಟಿನ ಬದಿಗಳಲ್ಲಿ ಚೌರಿ ಹಿಡಿದು ನಿಂತ ಸೇವಕಿಯರಿದ್ದಾರೆ. ಇವರನ್ನು ಪೂರ್ಣಪ್ರಮಾಣದ ಶಿಲ್ಪಗಳಲ್ಲಿ ಬಹು ಸುಂದರವಾಗಿ ನಿರ್ಮಿಸಲಾಗಿದೆ. ಅರ್ಧಮಂಟಪದ ಛತ್ತಿನಲ್ಲಿ ಅರಳಿದ ಮೂರು ಕಮಲಗಳನ್ನು, ಚಿತ್ರಿಸಲಾಗಿದೆ. ಅರ್ಧಮಂಟಪದ ಕಂಬ ಭಾಗದಲ್ಲಿ ಪೀಠ, ಕಾಂಡ, ಕುಂಭ, ಕಳಸ ಮತ್ತು ಬೋದಿಗೆಗಳಿವೆ. ಕಾಂಡ ಭಾಗದಲ್ಲಿ ಕ್ರಮವಾಗಿ ಕೆಳಗಡೆಯಿಂದ ಚೌಕಪಟ್ಟಿ, ನಾಲ್ಕು ಅಷ್ಟಪಟ್ಟಿಕೆಗಳ ಮಧ್ಯ ಬಹುಮುಖ ಪಟ್ಟಿಕೆಗಳು, ಚೌಕಪಟ್ಟಿಯಲ್ಲಿ ಚೈತ್ಯಾಕಾರಗಳು, ದಿಂಬಿನಂತ ಹೂ, ಬಹುಮುಖದ ಕುಂಭ, ಕಳಸ ನಂತರ ಬೋದಿಗೆ ಇವೆ.

ಅರ್ಧಮಂಟಪ ಬದಿಗಿನ ಗೋಡೆಗಳಲ್ಲಿ ಆಳವಾದ ಚಿಕ್ಕ ಎರಡು ಗರ್ಭಗೃಹಗಳಿವೆ. ಅವುಗಳ ಬಾಗಿಲು ಚೌಕಟ್ಟು ವೈವಿಧ್ಯಮಯವಾಗಿವೆ. ಒಂದರಲ್ಲಿ ೫ ಅಶ್ವವುಳ್ಳ ಸೂರ್ಯನ ಪೀಠ, ಇನ್ನೊಂದರಲ್ಲಿ ಶಿವಲಿಂಗವಿದೆ. ಬಾಗಿಲು ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರಿದ್ದಾರೆ. ಅದರ ಫಲಕದಲ್ಲಿ ೫ ಶಾಖೆಗಳಾದ ಲತಾ ಸುರುಳಿ, ಬಹುಮುಖ ಅರ್ಧಗಂಬ, ಸಿಂಹಗಳ ಸಾಲು, ಅರ್ಧಗಂಬ, ಸಿಂಹ ಮತ್ತು ಪತ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಕಪೋತದ ಕೆಳಭಾಗದಲ್ಲಿ ಹಂಸಪಕ್ಷಿಗಳ ಸಾಲು. ಮೇಲೆ ಚೈತ್ಯಾಕಾರಗಳು. ದ್ವಾರಪಾಲಕರ ಕೈಗಳಲ್ಲಿ ಅಭಯ, ತ್ರಿಶೂಲ, ನಾಗ ಮತ್ತು ಗದೆ. ಈ ಫಲಕಗಳ ಕೆಳಗಡೆ ಶ್ರೀನಿಧಿ ಮತ್ತು ಪದ್ಮನಿಧಿಗಳು ಕುಳಿತಿರುವರು.

ವಿಶಾಲ ನವರಂಗದ ಛತ್ತುಗಳಲ್ಲಿ ಪದ್ಮಗಳಿವೆ. ಮಧ್ಯ ೪ ಕಂಬಗಳಿದ್ದು ಅವುಗಳಿಗೆ ಪೀಠ, ಕಾಂಡ ಭಾಗದಲ್ಲಿ ಎರಡು ಚೌಕ ಪಟ್ಟಿ, ಇವುಗಳ ಮಧ್ಯ ನಾಲ್ಕು ಕಿರಿದಾದ ಹದಿನಾರು ಮುಖಗಳ ಪಟ್ಟಿ, ಮೇಲಿನ ಚೌಕಪಟ್ಟಿ ಮೇಲೆ ಅನೇಕ ಮುಖ, ಅದರ ಮೇಲ್ಗಡೆ ದಿಂಬಿನಾಕಾರದ ಅನೇಕ ಮುಖಗಳುಳ್ಳ ಕುಂಭ ಮತ್ತು ಬೋದಿಗೆಗಳನ್ನು ಹೊಂದಿವೆ. ಈ ನಾಲ್ಕು ಕಂಬಗಳ ಕಾಂಡ ಭಾಗದ ಮೇಲಿನ ಚೌಕಪಟ್ಟಿಗಳ ನಾಲ್ಕೂ ಮುಖಗಳಲ್ಲಿ ಒಂದೊಂದು ಚಿತ್ರಗಳಿವೆ. ತಲಾ ಒಂದರ ಮೇಲೆ ಅಲಂಕಾರ ಪಟ್ಟಿಗಳಿವೆ. ನವರಂಗದ ಛತ್ತಿನಲ್ಲಿ ಮಧ್ಯ ಕಮಲ ಫಲಕಗಳಿವೆ. ಅದರ ಬಾಗಿಲು ಚೌಕಟ್ಟಿನಲ್ಲಿ ಐದು ಶಾಖೆಗಳಿದ್ದು ಅವು ಲತಾ, ಸುರುಳಿ, ದುಂಡು ಅರ್ಧಗಂಬ, ರತ್ನಸಾಲು, ಅನೇಕ ಮುಖವುಳ್ಳ ಅರ್ಧಗಂಬ ಮತ್ತು ಪತ್ರಗಳಿವೆ.

ಕಂಬ - ೧: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ೨ ಆನೆ, ೨ ಯಕ್ಷರು (ಶ್ರೀನಿಧಿ-ಪದ್ಮನಿಧಿ), ಕಬ್ಬಿನ ಬಿಲ್ಲು-ಬಾಣ ಹಿಡಿದು ನಿಂತ ಕಾಮ-ರತಿ ಮತ್ತು ಲತಾಬಳ್ಳಿ ಸುರುಳಿಗಳಿವೆ.

ಕಂಬ-೨: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ವಾಲಿ-ಸುಗ್ರೀವ, ಯೋಧ-ಜಿಂಕೆ, ಅರ್ಧಮನುಷ್ಯ- ಅರ್ಧ ಪ್ರಾಣಿರೂಪದ ನಾಗನ ಕೈಯಲ್ಲಿ ಕತ್ತಿ-ನಾಗಿಣಿ ಕೈಯಲ್ಲಿ ಕಮಲ ಮತ್ತು ಲತಾಬಳ್ಳಿಗಳು (?)

ಕಂಬ-೩: ಈ ಕಂಬದಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ನಿಂತ ೨ ಅಶ್ವಾರೂಢ ಯಕ್ಷ-ಯಕ್ಷಿ ೨ ಹಂಸಗಳು, ೨ ಕುದುರೆಸವಾರರು ಮತ್ತು ಹನುಮ ನಾಗರಾಜ (?).

ಕಂಬ-೪: ಈ ಕಂಬದಲ್ಲಿ ತ್ರಿವಿಕ್ರಮ-ಬಲಿ (?) ಶಿವ-ಪಾರ್ವತಿ, ಸೂರ್ಯ-ಕೇಶವ ಮತ್ತು ರತಿ-ಮನ್ಮಥ.

ನವರಂಗದ ಎಡಗೋಡೆಗೆ ನಿಲ್ಲಿಸಿದ ಏಳು ಶಿಲ್ಪಗಳು-ಕಾಮ, ರತಿ, ಶೈವಯತಿ, ನಟರಾಜ. ವೃಷಭಾರೂಢ ಉಮಾ ಮಹೇಶ್ವರ, ಕಾಲಭೈರವಿ ಮತ್ತು ಕಾರ್ತಿಕೇಯ. ನವರಂಗದ ಬಾಗಿಲು ಚೌಕಟ್ಟಿನ ಪಂಚ ಶಾಖೆಗಳಲ್ಲಿ ಲತಾಸುರುಳಿ, ಒಂದು ಸಾಲಿನಲ್ಲಿ ನಿಂತ ಹುಡುಗರು, ಅರ್ಧಗಂಬ, ಲತಾ ಸುರುಳಿ ಮತ್ತು ಪತ್ರಗಳಿವೆ. ಶೈವ ದ್ವಾರಪಾಲಕನ ನಾಲ್ಕು ಕೈಗಳಲ್ಲಿ ಗದೆ, ತ್ರಿಶೂಲ, ನಾಗ ಮತ್ತು ಹಸ್ತ ಮುದ್ರೆ ಇವೆ, ಹಾಗೂ ಸೇವಕಿ ಇರುವಳು. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಬದಿಗೆ ಪೂರ್ಣ ಪ್ರಮಾಣದ ಎತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ರೀತಿಯ ಬಾಗಿಲು ಚೌಕಟ್ಟು ಈ ಭಾಗದ ಹಂದರಕಿಯ ಲೋಕೇಶ್ವರ ದೇವಾಲಯ ಗುಂಪುಗಳ ಬಾಗಿಲು ಚೌಕಟ್ಟುಗಳನ್ನು ಹೋಲುವುದು.

ಲಲಾಟದಲ್ಲಿ ಮಕರತೋರಣದ ಮಧ್ಯ ಕೆಳಗಡೆ ಗಜಲಕ್ಷ್ಮಿ ಅದರ ಕಪೋತದ ಕೆಳಗಡೆ ಹಂಸಪಕ್ಷಿಗಳ ಸಾಲಿದೆ. ಈ ಬಾಗಿಲು ಫಲಕಗಳ ಕೆಳಗಡೆ ಮುಂದಕ್ಕೆ ಮುಖ ಮಾಡಿದ ಆನೆಗಳಿವೆ ಹಾಗೂ ಫಲಕದಲ್ಲಿ ಶೈವ ದ್ವಾರಪಾಲಕರು ಮತ್ತು ಸೇವಕರಿದ್ದಾರೆ.

ಈ ದೇವಾಲಯದ ಸಂಕೀರ್ಣದಲ್ಲಿ ಭೃಂಗಿ, ಭೈರವ, ಕಾಮ, ರತಿ, ಅರ್ಧನಾರೀಶ್ವರ, ಶಿವ, ಶಿವ-ಪಾರ್ವತಿ, ಗಣೇಶ ಇತ್ಯಾದಿ ಶಿಲ್ಪಾವಶೇಷಗಳಿವೆ. ಈ ದೇವಾಲಯದ ಬಲಗಡೆ ಹೊರಗಡೆ ಸುಮಾರು ೨ ಮೀ. ಆಳದಲ್ಲಿ ಈ ಹಿಂದೆ ಅಗೆದಾಗ ಈ ಕಟ್ಟಡದ ಹಲವಾರು ಕುರುಹುಗಳು ಬೆಳಕಿಗೆ ಬಂದವೆಂದು

ವದಂತಿ ಗಮನೀಯ. ಈ ದೇವಾಲಯದ ಎಡಗಡೆ ಒಂದು ಹಾಳು ಬಾವಿಯಿದೆ.

ಈ ದೇವಾಲಯದ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗದ ಅರ್ಧಭಾಗದವರೆಗೆ ಅಧಿಷ್ಠಾನದ ಮೂಲಭಾಗಗಳು ಉಪಾನ, ಜಗತಿ, ತ್ರಿಪಟ್ಟಕುಮುದ, ಕಂಪ, ಕಂಠಪತ್ರ, ಕಂಪದ ಆರು ತರ ಹೊಂದಿದೆ. ಅದರ ನವರಂಗದ ಮುಂದೆ ಮತ್ತು ಬದಿಯ ಅಧಿಷ್ಠಾನವು ಭಿನ್ನವಾಗಿದೆ ಹಾಗೂ ಎರಡು ರೀತಿಯಲ್ಲಿದೆ. ಅದರ ಭಿತ್ತಿ ಭಾಗವು ಜೀರ್ಣೋದ್ಧಾರಗೊಂಡಿದೆ. ಈಗ ಶಿಖರವಿಲ್ಲ.

ಶಂಭುಲಿಂಗ ದೇವಾಲಯ(ಕೊಡ್ಲ): ಈ ದೇವಾಲಯ ಕೊಡ್ಲ ಗ್ರಾಮದ ಉತ್ತರಕ್ಕಿದೆ. ಇದಕ್ಕೆ ಒಂದು ಚೌಕ ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗವಿದೆ. ನವರಂಗದ ೪ ಕಂಬಗಳು ರಾಷ್ಟ್ರಕೂಟರ ಕಾಲದ ಶೈಲಿಯಲ್ಲಿವೆ. ಗರ್ಭಗೃಹ ದ್ವಾರಪಟ್ಟಿಯಲ್ಲಿ ಮೂರು ಶಾಖೆಗಳಿವೆ. ಕೆಳಗಡೆ ಪೂರ್ಣ ಕುಂಭಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ಈ ದೇವಾಲಯ ಸಂಕೀರ್ಣದಲ್ಲಿ ಚತುರ್ಭುಜ ಗಣೇಶ, ಭೈರವ, ಏಳುಹೆಡೆ ನಾಗ, ಸರಸ್ವತಿ, ಸಪ್ತಮಾತೃಕೆ (ವೀರಭದ್ರ, ಗಣೇಶರಿಲ್ಲ), ಎರಡು ಶಿವಲಿಂಗಗಳು ಇತ್ಯಾದಿ ಇವೆ.

ಬಸ್ತಿಗುಡಿ(ಬೆಟಗೇರ-ಬ): ಇದೊಂದು ಹಾಳಾದ ಪ್ರಾಚೀನ ಜೈನ ಬಸದಿ. ಇದರಲ್ಲಿ ಒಂದು ಗರ್ಭಗೃಹ, ಒಂದು ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಮಹಿಷಾಸುರಮರ್ದಿನಿ ಮತ್ತು ತೀರ್ಥಂಕರನ ಶಿಲ್ಪಗಳಿವೆ.

ಪಂಚಲಿಂಗೇಶ್ವರ ಗುಡಿ(ಬೆಟಗೇರ-ಬ): ಈ ದೇವಾಲಯ ಸಂಪೂರ್ಣ ಶಿಥಿಲಗೊಂಡಿದ್ದು ಅದರ ಮೂಲ ಭಾಗದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳಿವೆ. ಒಂದರ ಗರ್ಭಗೃಹಕ್ಕೆ ಒಂದು ಅರ್ಧಮಂಟಪ ಮತ್ತು ತೆರೆದ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬಾಗಿಲು ಪಟ್ಟಿಯಲ್ಲಿ ನಾಲ್ಕು ಶಾಖೆಗಳಿದ್ದು ಅಲ್ಲಿ ಸರಳ, ರತ್ನ, ಅರ್ಧಗಂಬ ಮತ್ತು ಪತ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ಉತ್ತರಾಂಗದಲ್ಲಿ ಕಚ್ಚುಗಳು, ಕಪೋತದಲ್ಲಿ ಚೈತ್ಯ ಮಾದರಿಗಳಿವೆ. ಅರ್ಧಗಂಬದಲ್ಲಿ ಚತುರ್ಭುಜೆ ಮಹಿಷಾಸುರಮರ್ದಿನಿ, ಇನ್ನೊಂದರಲ್ಲಿ ಈ ದೇವತೆ ಚಿತ್ರ, ಕಂಬಗಳಲ್ಲಿ ಹಾರಗಳು ಮತ್ತು ಚೈತ್ಯಗಳಿವೆ.

ಇಟ್ಟಂಗೇಶ್ವರ ಗುಡಿ(ಬೆಟಗೇರ-ಬ): ಈ ಗುಡಿ ಹಾಳಾಗಿದ್ದು ಇದರ ಮುಂದಿನ ಭಾಗದಲ್ಲಿ ಇಟ್ಟಿಗೆ ಕಟ್ಟಡದ ಅವಶೇಷಗಳಿವೆ. ಇಟ್ಟಿಗೆ ಇಲ್ಲಿ ದೊರೆಯುತ್ತಿರುವುದರಿಂದ ಈ ಚಿಕ್ಕ ಗುಡಿಯನ್ನು ಇಟ್ಟಿಗೇಶ್ವರನೆಂದು ಕರೆದಿರಬೇಕು. ಈ ಗುಡಿಯಲ್ಲಿ ಇತ್ತೀಚಿನ ಶಿವಲಿಂಗವಿದೆ.

ಈಶ್ವರ ಗುಡಿ(ಬೆಟಗೇರ-ಕೆ): ಇದೊಂದು ಇತ್ತೀಚಿನ ಚಿಕ್ಕ ಗುಡಿಯಿದ್ದು, ಇದರಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ಕುತೂಹಲದ್ದಾಗಿದೆ. ಇಲ್ಲಿ ಚತುರ್ಭುಜ ಗಣೇಶನ ಶಿಲ್ಪವಿದ್ದು ಅದಕ್ಕೆ ಗಂಟೆಗಳ ಸರವಿದೆ. ಹಾಗೂ ಈ ಗುಡಿ ಬದಿಗಿನ ಮಾರುತಿ ಗುಡಿಯ ಬಾಗಿಲು ಚೌಕಟ್ಟಿಗೆ ನಾಲ್ಕು ಶಾಖೆಗಳಿವೆ. ಇವು ಸು. ಕ್ರಿ.ಶ. ೧೧ನೇ ಶತಮಾನದವು.

ಹಿಂದು-ಮುಸ್ಲಿಂ ಸ್ಮಾರಕಗಳು

ಹಿಂದು-ಮುಸ್ಲಿಂ ಭಾವೈಕ್ಯ ಸಾರುವ ಪ್ರಮುಖ ಸ್ಮಾರಕಗಳು ಈ ಭಾಗದ ರಂಜೋಳ ಮತ್ತು ಕೋಳಕುಂದದಲ್ಲಿವೆ. ರಂಜೋಳ ಗ್ರಾಮದಲ್ಲಿ ಒಂದು ವಿಶಾಲವಾದ ಕಟ್ಟಡವಿದೆ. ಇದನ್ನು ಬಾರಾ ಇಮಾಮ್ ಎಂದು ಕರೆಯುವರು. ಈ ಸ್ಥಳಕ್ಕೆ ದೂರ ಪ್ರದೇಶದಿಂದ ಮೊದಲು ಮಾಡಿ ಹಿಂದು-ಮುಸ್ಲಿಂ ಭಕ್ತರು ಜನವರಿಯಿಂದ ಜೂನ್ ತಿಂಗಳಲ್ಲಿ ಪ್ರತಿವರ್ಷ ಪ್ರತಿ ಸೋಮವಾರ ಮತ್ತು ಗುರುವಾರ ಸೇರುತ್ತಾರೆ. ಮಡಿಉಡಿಯಿಂದ ಭಕ್ತರು ಮೇಕೆಯನ್ನು ತಂದು ಆಹುತಿ ನೀಡಿ ಆ ದಿನ ಅಲ್ಲಿ ತಂಗಿ ಮರಳುವುದು ಸಾಮಾನ್ಯವಾಗಿದೆ. ಸಂಭ್ರಮ-ಸಡಗರ ಈ ಎರಡೂ ಜನಾಂಗದವರಲ್ಲಿ ಕಾಣುತ್ತದೆ. ಅದಕ್ಕೆ ಮೂಲ ದ್ವಾರವು ದಕ್ಷಿಣಕ್ಕೆ ಇದೆ. ವಿಶಾಲ ಕಟ್ಟಡವು ಉತ್ತರಕ್ಕೆ ಮುಖ ಮಾಡಿದೆ. ಉಳಿದ ಎದುರುಬದಿಗಳಲ್ಲಿ ಕಟ್ಟಡದ ಗೋಡೆಯಿದೆ.

ಕೋಳಕುಂದ ಗ್ರಾಮದ ಮಧ್ಯ ಹಿಂದೂ-ಮುಸ್ಲಿಂ ಬಾಂಧವರು ಸೇರುವ ಭವ್ಯ ಸ್ಮಾರಕವಿದೆ. ಇದನ್ನು ಹುಸೇನಸಾಬ್ ಮಸೀದಿ ಎಂದು ಕರೆಯುತ್ತಾರೆ. ಅಲ್ಲಿ ಮೂರು ಪೀರರನ್ನು ಕೂಡಿಸುವರಂತೆ. ರಂಜಾನ ಆದಮೇಲೆ ಮೂರು ತಿಂಗಳ ನಂತರ ಮೊಹರಂನಲ್ಲಿ ಭಕ್ತರು ಸಂಭ್ರಮ ಸಡಗರದಿಂದ ಸೇರಿ ಅಲ್ಲಿ ಸುಮಾರು ಎರಡು ಸಾವಿರ ಕುರಿಗಳನ್ನು ಆಹುತಿ ಕೊಡುವುದು ವಿಶೇಷವೆನ್ನುತ್ತಾರೆ. ಈ ಸ್ಮಾರಕಗಳ ಪ್ರತ್ಯೇಕ ಅಧ್ಯಯನ ನಡೆಸುವ ಅವಶ್ಯಕತೆಯಿದೆ.

ಕೋಟೆಗಳು

ಈ ಭಾಗದಲ್ಲಿ ಹಲವಾರು ಗ್ರಾಮಗಳಲ್ಲಿ ಕೋಟೆಗಳಿವೆ. ಕೆಲವು ಮನೆಗಳು ಬೃಹತ್ತರವಾದ ಗೋಡೆಗಳನ್ನು ಮತ್ತು ಉಪ್ಪರಿಗೆಗಳನ್ನು ಹೊಂದಿವೆ. ಕೆಲವು ಗ್ರಾಮಗಳು, ಸುತ್ತಲೂ ಕೋಟೆ ಗೋಡೆಗಳನ್ನು ಮತ್ತು ಹೆಬ್ಬಾಗಿಲುಗಳನ್ನು ಹೊಂದಿವೆ. ಈ ಗೋಡೆಗಳಿಗೆ ಅಲ್ಲಲ್ಲಿ ಬುರ್ಜಗಳಿವೆ. ಹಳ್ಳೊಗ ಗ್ರಾಮದ ಸುತ್ತ ಕೋಟೆ ಗೋಡೆಯಿದ್ದು ಅದಕ್ಕೆ ಆರು ಬುರ್ಜುಗಳಿವೆ. ರಂಜೋಳ ಮತ್ತು ಸಿಂದನಮಡು ಗ್ರಾಮಗಳ ಕೋಟೆ ಗೋಡೆ, ಊರಗಸಿಯ ಹೆಬ್ಬಾಗಿಲುಗಳು ಮತ್ತು ಬುರ್ಜುಗಳು ಭದ್ರವಾಗಿ ಮತ್ತು ಭವ್ಯವಾಗಿ ನಿರ್ಮಿಸಲಾಗಿದೆ. ಕೆಲವು ಗ್ರಾಮಗಳಲ್ಲಿ ಕೇವಲ ಒಂದೆರಡು ಬುರ್ಜುಗಳಿವೆ. ಉದಾಹರಣೆಗೆ ಮೈಲ್ವಾರ ಇನ್ನಿತರ ಗ್ರಾಮಗಳಲ್ಲಿ ಉಡಗಳನ್ನು ಕಾಣಬಹುದು. ಇವುಗಳು ಬುರ್ಜ

ಗಳಂತೆ ದುಂಡಾದ ಎತ್ತರ ಗೋಡೆಗಳನ್ನು ಹೊಂದಿರುತ್ತವೆ. ಊರಗಸಿಗಳು ಪ್ರತಿಯೊಂದು ಗ್ರಾಮಕ್ಕಿರುತ್ತವೆ. ಅವುಗಳಲ್ಲಿ ಬೆಟಗೇರಿ(ಬಿ), ಕಾಚವಾರ, ಉಡ್ಲಿ, ರಂಜೋಳ, ಸಿಂದನಮಡು, ನಾಮಾವಾರ, ಮೈಲ್ವಾರ ಪ್ರಮುಖವೆನಿಸಿವೆ.

ಶಿಲ್ಪಗಳು

ಈ ಭಾಗದ ಶಿಲ್ಪಗಳು ಜೈನ, ಶೈವ, ಶಾಕ್ತ ಮತ್ತು ವೈಷ್ಣವ ಸಂಪ್ರದಾಯಕ್ಕೆ ಸೀಮಿತವಾಗಿದ್ದು ಅವುಗಳಲ್ಲಿ ಹೆಚ್ಚಿನ ಸಂಖ್ಯೆಯ ಶಿಲ್ಪಗಳು ಶೈವಕ್ಕೆ ಸೇರಿವೆ. ಕಡಿಮೆ ಪ್ರಮಾಣದಲ್ಲಿ ವೀರಗಲ್ಲು ಸತಿಕಲ್ಲುಗಳಿವೆ.

ಶಿವಲಿಂಗದ ಮೇಲೆ ಚಿತ್ರಿಸಿದ ಈ ಭಾಗದ ಬ್ರಹ್ಮ ಸೂತ್ರಗಳು ವಿಶಿಷ್ಟವೆನಿಸಿವೆ. ಅವುಗಳಲ್ಲಿ ಸೇಡಂ ಮತ್ತು ಕೊಡ್ಲ ಗ್ರಾಮಗಳ ಲಿಂಗಗಳು ಮಹತ್ವವೆನಿಸಿವೆ. ಮಹಿಷಾಸುರಮರ್ದಿನಿ ಮತ್ತು ಚಾಮುಂಡಿ ಶಿಲ್ಪಗಳಲ್ಲಿ ಬೆಟಗೇರ(ಬಿ) ಮತ್ತು ಮುಸ್ತಳ್ಳಿಯ ಶಿಲ್ಪಗಳು ಕ್ರಿ.ಶ. ೧೬-೧೭ನೇ ಶತಮಾನಕ್ಕೆ ಸೇರಿವೆ. ಆದರೆ ಕೊಡ್ಲ ಗ್ರಾಮದಿಂದ ೧ ಕಿ.ಮೀ. ಉತ್ತರಕ್ಕಿರುವ ಚೌಡಮ್ಮದೇವಿ ಶಿಲ್ಪವು ವೈಷ್ಣವಿಯದಾಗಿದ್ದು ತುರನೂರಿನ ರಾಮಲಿಂಗ ಗುಡಿಯ ಬದಿಗಿನ ಮಹಿಷಾಸುರಮರ್ದಿನಿ, ಇವು ಕ್ರಿ.ಶ. ೧೦ನೇ ಶತಮಾನ ದ್ದಾಗಿವೆ; ಮತ್ತು ಈ ಭಾಗದಲ್ಲಿ ಅವು ಅಪರೂಪದ್ದೆನಿಸಿವೆ. ಗಣೇಶ, ಭೈರವ, ಸರಸ್ವತಿ, ವೀರಭದ್ರ, ನಾಗ, ನಾಗಿನಿ, ವಿಷ್ಣು, ಸೂರ್ಯ, ಪಾರ್ಶ್ವನಾಥ, ವಿಠಲ, ಪಾಂಡುರಂಗ, ಗಜಲಕ್ಷ್ಮಿ, ನಂದಿ ಶಿಲ್ಪಗಳು ಅಲ್ಲಲ್ಲಿವೆ. ಇವುಗಳಲ್ಲಿ ಕೊಳಕುಂದ, ಬೆಟಗೇರ(ಬಿ)ದ ತೀರ್ಥಂಕರ ಶಿಲ್ಪ ಶಿಥಿಲಗೊಂಡಿದ್ದು ಅದು ಕ್ರಿ.ಶ. ೧೨-೧೩ನೇ ಶತಮಾನದ್ದಾಗಿದೆ. ಪ್ರಾಣಿರೂಪದ ನಾಗನ ವೈವಿಧ್ಯಮಯ ಶಿಲ್ಪಗಳು ಕೊಡ್ಲದ ಶಂಭುಲಿಂಗ ದೇವಾಲಯ ಪರಿಸರದಲ್ಲಿರುವುದು ಗಮನೀಯ. ಈ ಸ್ಥಳದ ಮಾರುತಿ ಮಂದಿರದ ಗಣೇಶನಿಗೆ ನಾಗಯಜ್ಞೋಪವೀತ ಧರಿಸಿರುವುದು ಮಹತ್ವವೆನಿಸಿದೆ ಮತ್ತು ಈ ಸ್ಥಳದ ಒಂದು ನಂದಿ ಶಿಲ್ಪದಲ್ಲಿ ವಸ್ತ್ರಾಭರಣಗಳ ಅಲಂಕರಣ ವಿಶಿಷ್ಟವೆನಿಸಿದೆ. ಬೆಟಗೇರ (ಕೆ)ಯ ಈಶ್ವರ ಗುಡಿಯ ಗಣೇಶನ ಒಂದು ಕೈಯಲ್ಲಿ ರುದ್ರಾಕ್ಷಿಸರ ಇರುವುದು.

ವೀರಗಲ್ಲುಗಳು ಕಡಿಮೆ. ಮೂರು ಕೊಡ್ಲದಲ್ಲಿ ಒಂದು ಹನುಮನಹಳ್ಳಿಯಲ್ಲಿ ಎರಡು ಬೆಟಗೇರ(ಬಿ), ಕೊಳಕುಂದ ಮತ್ತು ಸಿಂದನಮಡುಗಳಲ್ಲಿವೆ. ಇವುಗಳಲ್ಲಿ ಸು.ಕ್ರಿ.ಶ.೧೬-೧೭ನೇ ಶತಮಾನದ ಶಿಲ್ಪಗಳು ಹೆಚ್ಚು. ಅವುಗಳಲ್ಲಿ ಒಬ್ಬ ವೀರ ಖಡ್ಗ ಹಿಡಿದು ನಿಂತಿರುವುದು ಸಾಮಾನ್ಯ. ಬೆಟಗೇರ(ಬಿ)ಯ ಮಾರುತಿ ಮಂದಿರದ ಒಂದು ವೀರಗಲ್ಲಿನಲ್ಲಿ ಗೋಗ್ರಹಣ ದೃಶ್ಯವಿದ್ದು, ಅದು ಕ್ರಿ.ಶ. ೧೨ನೇ ಶತಮಾನದ್ದಾಗಿದೆ. ಕೊಳಕುಂದದ ಮಾರುತಿ ಗುಡಿ ಗೋಡೆಯಲ್ಲಿವೆ ಎರಡು ವೀರಗಲ್ಲುಗಳಿದ್ದು ಅವು ಕ್ರಿ.ಶ. ೧೦ನೇ ಶತಮಾನದ್ದಾಗಿವೆ. ಅವುಗಳಲ್ಲಿ ಇಬ್ಬರು ವೀರರು ಬಿಲ್ಲನ್ನಿಡಿದು ಹೋರಾಡುವ ದೃಶ್ಯವಿದೆ. ಮೇಲೆ ಮಡಿದ ವೀರನನ್ನು ಒಯ್ಯುತ್ತಿರುವರು. ಇನ್ನೊಂದರಲ್ಲಿ ವೀರನು ಉದ್ದ ಈಟಿಯನ್ನು ವೈರಿಗೆ ತಿವಿದಿದ್ದು ಅದರ ಮೇಲಿನ ಫಲಕದಲ್ಲಿ ಅಪ್ಸರೆಯರು ಮಡಿದವನನ್ನು ಒಯ್ಯುತ್ತಿರುವರು. ಇವಲ್ಲದೆ ಉಡ್ಲಿ ಗ್ರಾಮದ ಶಿಲ್ಪಗಳು ವಿಶಿಷ್ಟವೆನಿಸಿವೆ.

ಕಾಮ : - ದ್ವಿಭಂಗ, ದ್ವಿಭುಜ, ಕೈಗಳಲ್ಲಿ ಬಾಣ ಮತ್ತು ಕಬ್ಬಿನ ಬಿಲ್ಲು, ಉದ್ದ ಕಿರೀಟ ಮಕುಟ, ಕರ್ಣಕುಂಡಲ, ಗೆಜ್ಜೆ ಸರಗಳು, ಯಜ್ಞೋಪವೀತ, ಉದರಪಟ್ಟಿ, ಸೊಂಟಪಟ್ಟಿ, ಭುಜಪಟ್ಟಿ ಇತ್ಯಾದಿ.

ರತಿ : ತ್ರಿಭಂಗಿ, ದ್ವಿಭುಜೆ, ಬಾಣ ಮತ್ತು ಕಬ್ಬಿನ ಬಿಲ್ಲು, ಕರಂಡ ಮುಕುಟ, ಕುಂಡಲ, ಹಾರ, ಕುಚಹಾರ ಹೊಂದಿ ಸೀರೆಯನ್ನು ಸೊಂಟಕ್ಕೆ ಕಟ್ಟಿರುವಳು.

ಯತಿ : ತ್ರಿಭಂಗ, ಬಲಗೈ ಶಿಥಿಲ, ಎಡಗೈಯಲ್ಲಿ ಕಮಂಡಲವಿದ್ದು, ಅದು ಹೆಂಗಸರು ಹಿಡಿದಂತೆ ಬಗ್ಗಿಸಲಾಗಿದೆ. ಉದ್ದವಾದ ಗಡ್ಡ, ಕೇಶರಾಶಿ, ತಲೆಬದಿಗೆ ಹಂಡಿಲೆ, ಯಜ್ಞೋಪವೀತ, ಸರಳ ವಸ್ತ್ರದ ಕಚ್ಚೆಯಿದೆ. ತೊಡೆ ಭಾಗದಲ್ಲಿ ಈ ಶಿಲ್ಪ ಭಿನ್ನಗೊಂಡಿದೆ.

ಕಾಲಾರಿ ಶಿವ: ಶಿವನು ಅಪಸ್ಮಾರನ ಮೇಲೆ ನಿಂತು ತಾಂಡವ ವಾಡುತ್ತಿರುವನು. ಚತುರ್ಭುಜಧಾರಿ ಶಿವನು ಕೆಳ ಬಲಗೈ ಮತ್ತು ಮೇಲಿನ ಎಡಗೈಯಲ್ಲಿ ಹಿಡಿದ ತ್ರಿಶೂಲದಿಂದ ತನ್ನ ತಲೆ ಎದುರಿಗಿರುವ ಕಾಲಾರಿಯ ಹೊಟ್ಟೆಗೆ ತಿವಿದು ಮೇಲಕ್ಕೆ ಚಿಮ್ಮುತ್ತಿರುವನು. ಮೇಲಿನ ಬಲಗೈಯಲ್ಲಿ ಡಮರು ಮತ್ತು ಕೆಳಗಿನ ಎಡಗೈಯಲ್ಲಿ ಕಪಾಲವನ್ನಿಡಿದಿರುವನು. ಉದ್ದ ಜಟಾಮಕುಟದಿಂದ ಅದರ ಕೇಶದ ಉಂಗುರ ಗುಚ್ಛಗಳು ಮೇಲಿಂದ ಭುಜದ ಮೇಲೆ ಬಿದ್ದಿವೆ. ಕುಂಡಲ, ಯಜ್ಞೋಪವೀತ, ಬಳೆ, ತೋಳಬಳೆ, ಸೊಂಟಕ್ಕೆ ಪಟ್ಟಿ, ವಸ್ತ್ರದ ಹಾರ, ಕಡಗಗಳನ್ನು ಧರಿಸಿರುವನು. ಕಾಲಾರಿಯ ಬಲಗೈಯಲ್ಲಿ ಖಡ್ಗವಿದೆ. ತನ್ನ ಎಡಗಾಲನ್ನು ಮುಂದಕ್ಕೆ ಬಗ್ಗಿಸಿ ಮೇಲಕ್ಕೆ ಎತ್ತಿದ್ದಾನೆ.

ವೃಷಭಾರೂಢ ಉಮಾ ಮಹೇಶ್ವರ : ತ್ರಿಭಂಗಿಯ ಉಮೆ ಸಂಗಡ ನಿಂತಿರುವನು. ನಾಲ್ಕು ಕೈಗಳಿವೆ. ಮೂರು ಕೈಗಳು ಮತ್ತು ವೃಷಭನ ಶಿರೋಭಾಗ ಮುರಿದಿವೆ. ಉಳಿದ ಮೇಲಿನ ಎಡಗೈಯನ್ನು ಉಮೆಯ ಎಡ ಭುಜದ ಮೇಲೆ ಹಾಕಿರುವನು. ಬಲಗಾಲಿನ ಹಿಂಬದಿಗೆ ವೃಷಭ ಮತ್ತು ಎಡಗಾಲನ್ನು ಕುಳಿತ ಅಪಸ್ಮಾರನ ತಲೆಮೇಲಿಟ್ಟಿರುವನು. ಉಮೆಯು ಎಡಕ್ಕೆ ಕೈಜೋಡಿಸಿಕೊಂಡು ಒಬ್ಬ ಋಷಿ ನಿಂತಿದ್ದಾನೆ. ಶಿವನ ತಲೆಯ ಎಡಕ್ಕೆ ನವಿಲನ್ನು ಸವಾರಿ ಮಾಡುತ್ತಿರುವ ಕಾರ್ತಿಕೇಯನಿದ್ದಾನೆ. ಮಹೇಶ್ವರನು ಜಟಾಮಕುಟ, ಕುಂಡಲ, ವಿವಿಧ ಹಾರ, ಯಜ್ಞೋಪವೀತ, ವಸ್ತ್ರದ ಹಾರಗಳನ್ನು ಧರಿಸಿರುವನು. ಉಮೆಯು ತುರುಬನ್ನು ಕಟ್ಟಿದ್ದಾಳೆ. ಕುಂಡಲ, ಹಾರ, ಪಟ್ಟಿ,

ಕಡಗಗಳನ್ನು ಧರಿಸಿದ್ದಾಳೆ. ಸೊಂಟಕ್ಕೆ ಕಟ್ಟಿದ ವಸ್ತ್ರದ ನಿರಿಗೆ ಎಡ ತೊಡೆಯ ಮೇಲೆ ಇಳಿಬಿಟ್ಟಿರುವಳು. ಈ ದೃಶ್ಯವು ಅಲ್ಪ ಆಯುಷಿಯಾಗಿದ್ದ ಕಾರ್ತಿಕೇಯನನ್ನು ಉಳಿಸಲು ಅಪಸ್ಮಾರನನ್ನು ತಡೆಹಿಡಿದಿರುವುದನ್ನು ಸೂಚಿಸುತ್ತದೆ.

ಕಾಲಭೈರವಿ: ಅಪಸ್ಮಾರನ ತಲೆಯ ಮೇಲೆ ನಿಂತು ತಾಂಡವ ವಾಡುತ್ತ ಮೇಲಿನ ಬಲಗೈ ಮತ್ತು ಎಡಗೈಗಳಲ್ಲಿ ಹಿಡಿದ ತ್ರಿಶೂಲದಿಂದ ಕಾಲಾರಿಯನ್ನು ಚಿಮ್ಮುತ್ತಿರುವಳು. ಈಕೆಯ ಎಡಬದಿಗೆ ಪ್ರೇತ ನೃತ್ಯ ಮಾಡುತ್ತಿರುವನು. ಚತುರ್ಭುಜಳಾದ ಈಕೆಯ ಕೆಳ ಬಲಗೈಯಲ್ಲಿ ಡಮರು ಮತ್ತು ಕೆಳ ಎಡಗೈಯಲ್ಲಿ ಕಪಾಲವಿದೆ. ಕರಂಡ ಮಕುಟ, ಕುಂಡಲ, ಹಾರ, ರುಂಡಮಾಲ, ವಸ್ತ್ರದ ಹಾರ, ಸೊಂಟಕ್ಕೆ ಬಳೆ, ಕಡಗಗಳನ್ನು ಧರಿಸಿರುವಳು.

ಕಾರ್ತಿಕೇಯ : ಸಮಭಂಗದಲ್ಲಿ ನಿಂತ ಈತನು ಚತುರ್ಭುಜಧಾರಿಯಾಗಿದ್ದಾನೆ. ಬಲಗಾಲು ಬದಿಗೆ ನವಿಲುಗಳಿವೆ. ಪಂಚಮುಖಗಳುಳ್ಳ ಈತನ ಕೈಗಳಲ್ಲಿ ಅಭಯಹಸ್ತದಲ್ಲಿ ಜಪಮಾಲೆ, ಪಾಶ, ಅಂಕುಶ ಮತ್ತು ಶಿಥಿಲ ಹಸ್ತಗಳಿವೆ. ಜಟಾಮಕುಟ, ಹಾರ, ಬಳೆ, ಕಡಗ, ಉದರಪಟ್ಟಿ, ಸೊಂಟಪಟ್ಟಿ, ವಸ್ತ್ರದ ಪಟ್ಟಿಗಳನ್ನು ಧರಿಸಿರುವನು. ಸೊಂಟದ ಬದಿಗೆ ಕಟ್ಟಿದ ವಸ್ತ್ರ ಕೆಳಗಡೆ ಇಳಿಬಿಡಲಾಗಿದೆ.

ಕಾರ್ತಿಕೇಯ: ತ್ರಿಭಂಗಿಯಲ್ಲಿ ನಿಂತ ಈ ದೇವರಿಗೆ ಮೂರು ಮುಖಗಳಿವೆ; ಚತುರ್ಭುಜ. ಕೆಳಗಿನ ಕೈಗಳು ಅಂಜಲಿಮುದ್ರೆಯಲ್ಲಿವೆ. ಮೇಲಿನ ಕೈಗಳಲ್ಲಿ ಪಾಶ ಮತ್ತು ಕುಂಭಗಳಿರುವುದು ಗಮನೀಯ. ಈ ಶಿಲ್ಪವನ್ನು ಗುರುತಿಸಬೇಕಾಗಿದೆ. ಜಟಾಮಕುಟ, ಕುಂಡಲ, ಹಾರ, ಬಳೆ, ತೋಳುಬಳೆ, ಸೊಂಟಕ್ಕೆ ವಸ್ತ್ರ, ಕಡಗಗಳನ್ನು ಧರಿಸಿರುವನು.

ಶಿಲಾಬಾಲಕಿ : ಈಕೆಯು ತ್ರಿಭಂಗಿ ಯಲ್ಲಿದ್ದು ದ್ವಿಭುಜಧಾರಿಣಿ. ಬಲಗೈಯಲ್ಲಿ ಚೌರಿ(?) ಇದೆ. ತುರುಬನ್ನು ಕಟ್ಟಿರುವಳು. ಕುಂಡಲ, ಹಾರ, ಯಜ್ಞೋಪವೀತ, ಪಟ್ಟಿ, ಬಳೆ, ಕಡಗ, ಸೀರೆಗಳನ್ನು ಧರಿಸಿದ್ದಾಳೆ.

ಭೃಂಗಿ: ಈತನು ಸಮಭಂಗದಲ್ಲಿ ಅಂಜಲಿ ಮುದ್ರೆಯಲ್ಲಿರುವನು. ದೇಹಾಂಗವು ಅಸ್ಥಿಪಂಜರ ದಿಂದಿದೆ. ಜಟಾಧಾರಿ, ಕುಂಡಲ, ಹಾರ, ಕಚ್ಚೆಗಳನ್ನು ಕಟ್ಟಿದ್ದಾನೆ. ಮೊಣಕಾಲ ಭಾಗದ ಕೆಳಭಾಗ ಮುರಿದುಹೋಗಿದೆ.

ಕಾಮ: ದ್ವಿಭುಜ. ಈತನು ತ್ರಿಭಂಗಿಯಲ್ಲಿದ್ದಾನೆ. ಕುತ್ತಿಗೆ ಭಾಗವು ಮುರಿದು ಎರಡು ಭಾಗವಾಗಿದೆ. ಪಾದಗಳು, ಬಲಗೈ ಮತ್ತು ಬಿಲ್ಲು ಮುರಿದಿವೆ. ಎಡಗೈಯಲ್ಲಿ ಬಿಲ್ಲಿದೆ. ಕಿರೀಟ ಮಕುಟ, ಕುಂಡಲ, ಹಾರ, ಉದರಪಟ್ಟಿ, ಯಜ್ಞೋಪವೀತ, ಪಟ್ಟಿ, ವಸ್ತ್ರ ಧರಿಸಿದ್ದಾನೆ.

ಕಾಮ (?) : ಈತನ ದೇಹಾಂಗದ ಸುತ್ತ ಕೊರೆದಿದ್ದು ಅದರ ತುದಿಯಿಂದ ಹೂಗಳ ಅಲಂಕರಣವಿದೆ. ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಕಬ್ಬಿನ ಬಿಲ್ಲಿದ್ದಹಾಗಿದೆ. ಕಾಲುಗಳು ಮುರಿದು ಹೋಗಿವೆ. ಮುಖ, ದೇಹಾಂಗ ಮುಕ್ಕಾಗಿದೆ. ಕಿರೀಟ ಮಕುಟ, ಮಂಡಲ, ಉದರ ಪಟ್ಟಿ, ವಸ್ತ್ರ ಪಟ್ಟಿ ಧರಿಸಿರುವನು.

ಕಾಮ (?): ಈ ಶಿಲ್ಪ ಬದಿಯ ಬಾವಿಯಲ್ಲಿದೆ. ಈತನು ಸಮಭಂಗದಲ್ಲಿ ನಿಂತಿದ್ದು ದ್ವಿಭುಜಗಳಿವೆ. ಕೈಗಳಲ್ಲಿ ಬಲಗಡೆಯದು ಶಿಥಿಲಗೊಂಡಿದೆ. ಎಡಗೈಯಲ್ಲಿ ಬಿಲ್ಲಿದೆ. ತಲೆಯ ಬದಿಗೆ ಬೆನ್ನಿಗೆ ಕಟ್ಟಿದ ಬತ್ತಳಿಕೆ ಗಳಿವೆ. ಕಿರೀಟ ಮಕುಟ, ಕುಂಡಲ, ಹಾರ, ಯಜ್ಞೋಪವೀತ, ಬಳೆ, ತೋಳ್ಬಳೆ, ಪಟ್ಟಿ, ವಸ್ತ್ರ ಧರಿಸಿದ್ದಾನೆ.

ಅರ್ಧನಾರೀಶ್ವರ: ಈ ಶಿಲ್ಪದ ಮಧ್ಯಭಾಗ ಮುರಿದಿದೆ. ಇದರ ಬಲಕ್ಕೆ ಶಿವನ ರೂಪ, ಎಡಕ್ಕೆ ಪಾರ್ವತಿಯ ರೂಪವಿದೆ. ಚತುರ್ಭುಜಗಳಲ್ಲಿ ಬಲಗೈಗಳಲ್ಲಿ ಜಪಮಾಲೆ, ತ್ರಿಶೂಲ, ಹಿಂ ಎಡಗೈ ಕಮಲ ಹಿಡಿದಿದೆ; ಮುಂ ಎಡಗೈ ತೊಡೆಯ ಮೇಲಿದೆ. ದೇಹದ ಎಡಭಾಗದಲ್ಲಿ ಒಂದು ಕುಚವಿದೆ. ಜಟಾ ಕರಂಡ ಮುಕುಟ ಮಂಡಲ ಹಾರ, ಉದರ ಪಟ್ಟಿ, ವಸ್ತ್ರಪಟ್ಟಿ, ಬಳೆ, ಕಡಗ ಧಾರಣೆ ಇದೆ. ಪ್ರಭಾವಳಿಯಿದೆ.

ದೇವತೆ: ಈ ದೇವಾಲಯದ ಸಂಕೀರ್ಣದ ಗೋಡೆಯಲ್ಲಿದೆ. ಚತುರ್ಭುಜಗಳು ಮೇಲಿನ ಕೈಗಳಲ್ಲಿ ಕಮಲ ಮತ್ತು ಕುಂಭಗಳಿದ್ದು ಕೆಳಗಿನ ಕೈಗಳು ಮುರಿದಿವೆ. ಬಹುಶಃ ಅಂಜಲಿ ಮುದ್ರೆಯಿರಬಹುದು.

ಶಿವ (?): ಈತನು ಸಮಭಂಗ ದಲ್ಲಿರುವನು; ದ್ವಿಭುಜ. ಎಡಗೈಯಲ್ಲಿ ಕಮಂಡಲ, ಬದಿಗೆ ಸೇವಕ ನಿಂತಿದ್ದು ಆತನಿಗೆ ಜಟಾಮಕುಟವಿದೆ.

ಗಣೇಶ: ಚತುರ್ಭುಜನಾದ ಈತನು ಕುಳಿತ ಭಂಗಿಯಲ್ಲಿರುವನು. ಶಿಲ್ಪ ಅಲ್ಲಲ್ಲಿ ಮುಕ್ಕಾಗಿದೆ.

ಭೈರವ : ತುಂಬಾ ಸುಂದರವಾದ ಈ ದುಂಡು ಶಿಲ್ಪದಲ್ಲಿ ಬೆತ್ತಲೆಯ ಭೈರವನು ಸನ್ಯಲಲಿತಾಸನ ದಲ್ಲಿದ್ದಾನೆ. ಮೂರು ಕೈಗಳು ಮುರಿದುಹೋಗಿವೆ. ತ್ರಿಶೂಲ ಬಲಗೈಯಲ್ಲಿದೆ. ಕೇಶವನ್ನು ಉಂಗುರ ಉಂಗುರವಾಗಿ ಹೆಣೆದು ತಲೆಯ ಎರಡೂ ಬದಿಗೆ ಹಿಂಬದಿಯಿಂದ ಭುಜದವರೆಗೆ ಇಳಿಬಿಟ್ಟಿರುವನು. ಕೋರೆಹಲ್ಲುಗಳಿವೆ. ಉಬ್ಬಿದ ಕಣ್ಣುಗಳಿವೆ. ಎರಡು ರೀತಿಯ ಕುಂಡಲಗಳಿವೆ. ಮೂರು ರೀತಿಯ ಹಾರಗಳಿವೆ. ನಾಗನನ್ನು ಯಜ್ಞೋಪವೀತದಂತೆ ಧರಿಸಿರುವನು. ಗೆಜ್ಜೆ ಪಟ್ಟಿಯನ್ನು ಸೊಂಟಕ್ಕೆ ಕಟ್ಟಿರುವನು. ತೋಳಲ್ಲಿ, ಎದೆ ಮೇಲೆ ನಾಗಬಂಧಗಳಿವೆ.

ಉಮಾ-ಮಹೇಶ್ವರ: ನಂದಿ ಮೇಲೆ ಕುಳಿತಿದ್ದಾರೆ. ಮಹೇಶ್ವರನ ತೊಡೆಯ ಮೇಲೆ ಉಮೆ ಕುಳಿತಿರುವಳು. ಇದಕ್ಕೆ ಬಣ್ಣ ಲೇಪನ ಮಾಡಲಾಗಿದೆ.

ಕಾಮ: ಈ ಶಿಲ್ಪದಲ್ಲಿ ಈತನು ಸಮಭಂಗದಲ್ಲಿದ್ದಾನೆ. ಹಾಗೂ



ಅರ್ಧ ನಾರೀಶ್ವರ, ಮೂರು ಕಾಮನ ಶಿಲ್ಪಗಳು



ಕಂಬದಲ್ಲಿ ಅಶ್ವರೂಢ (ಮುಖಿ?) ಯಕ್ಷಯಕ್ಷಿ ——>



ಭೈರವ



ಗರ್ಭಗೃಹ ದ್ವಾರ ಪಟ್ಟಿ ——>



ಕಾರ್ತಿಕೇಯ ಮತ್ತು ಶಿಲಾಬಾಲಿಕೆ



ಕಾಮ ರತಿ

ದ್ವಿಭುಜ. ಒಂದು ಕೈ ಮುರಿದಿದೆ. ಇನ್ನೊಂದು ಕೈಯಲ್ಲಿ ಕಮಂಡಲವಿದೆ. ಕೆಳಗೆ ಬಲಕ್ಕೆ ಸೇವಕನಿದ್ದಾನೆ. ಜಟಾಮಕುಟ, ಕುಂಡಲ, ಹಾರ, ವಸ್ತ್ರ, ಕಡಗ ಧರಿಸಿದ್ದಾನೆ.

ಶಿವ: ಈ ಶಿಲ್ಪವು ಹೆಚ್ಚು ಶಿಥಿಲಗೊಂಡಿದ್ದು ಕೇವಲ ತಲೆಯಿಂದ ಎದೆ ಭಾಗದವರೆಗೆ ಉಳಿದಿದೆ. ಜಟಾಮಕುಟ, ಕುಂಡಲ, ಹಾರಗಳು ಉಳಿದಿವೆ.

ಉಡ್ಲಿಗಿಯ ಈ ಶಿಲ್ಪಗಳನ್ನು ಶೈಲಿಯ ದೃಷ್ಟಿಯಿಂದ ಎರಡು ಕಾಲಗಳನ್ನಾಗಿ ವಿಂಗಡಿಸಬಹುದು. ಮೇಲೆ ತಿಳಿಸಿದ ಕಾಮ, ರತಿ, ಯತಿ, ಕಾಲಾರಿಶಿವ, ಕಾಲಾರಿ ಭೈರವಿ, ಕಾರ್ತಿಕೇಯ, ಭೈರವ ಶಿಲ್ಪಗಳು ಸು.ಕ್ರಿ. ಶ. ೯ನೇ ಶತಮಾನದ ಆದಿಭಾಗ; ಉಳಿದ ಶಿಲ್ಪಗಳಲ್ಲಿ ನಾಲ್ಕು ಕಾಮ, ಭೃಂಗಿ, ಅರ್ಧನಾರೀಶ್ವರ, ದೇವ ದೇವತೆ, ಶಿಲಾಬಾಲಿಕೆ ಇತ್ಯಾದಿಗಳು ಕ್ರಿ.ಶ. ೯ನೇ ಶತಮಾನದ ಅಂತ್ಯಕ್ಕೆ ಸೇರಿವೆ. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಈ ಶಿಲ್ಪಗಳ ಸ್ಥಳ ಉಡ್ಲಿ ಗ್ರಾಮವು, ರಾಷ್ಟ್ರಕೂಟರ ಕಾಲದಲ್ಲಿ ರಾಜಧಾನಿಯಾಗಿದ್ದ ಮಳಖೇಡಕ್ಕೆ ಕೇವಲ ೧೦ ಕಿ.ಮೀ. ಅಂತರದಲ್ಲಿರುವುದು ಗಮನೀಯ. ಉತ್ತರ ಕರ್ನಾಟಕದಲ್ಲೇ ಇಷ್ಟೊಂದು ಸಂಖ್ಯೆಯ ಈ ಕಾಲದ ಶಿಲ್ಪಗಳು ಒಂದೆಡೆ ಪ್ರಥಮ ಬಾರಿಗೆ ಶೋಧವಾಗಿರುವುದು ಗಮನಾರ್ಹವಾಗಿದೆ. ಇಲ್ಲಿ ಕಾಮನ ಶಿಲ್ಪಗಳು ವಿವಿಧ ರೀತಿಯಿಂದ ಇರುವುದು ಗಮನೀಯ. ಶೈವ ಶಿಲ್ಪಗಳು ಅಧಿಕವಾಗಿವೆ. ಇದರಿಂದ ಈ ಕಾಲದಲ್ಲಿ ಇದೊಂದು ಖ್ಯಾತ ಶೈವ ಕೇಂದ್ರವಾಗಿದ್ದಿತು. ತುಲನಾತ್ಮಕವಾಗಿ ಹೇಳಬೇಕೆಂದರೆ ಈ ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದ ಐಹೊಳೆ, ಪಟ್ಟದಕಲ್ಲು ಮತ್ತು ಬಾದಾಮಿಯ ಕೆಲ ಶಿಲ್ಪಗಳನ್ನು ಶೈಲಿಯಿಂದ ಸಾಮೀಪ್ಯವನ್ನು ಪಡೆದಿರುವುದನ್ನು ನೆನಪಿಸಬಹುದು.

*

ಡಾ॥ ಎಸ್. ವಿ. ಪ್ರಭಾವತಿ*

ಹೊಸಹೊಳಲಿನ ದೇವಸ್ಥಾನ, ಬಸದಿ ಮತ್ತು ಶಾಸನಗಳು

ದೇಗುಲ: ಮೇಲುನೋಟದ ಶೋಧನೆಯಿಂದಲೇ ಹಳೆಯ ಮೈಸೂರು ಸಂಸ್ಥಾನದ ಬೇರೆ ಬೇರೆ ಜಿಲ್ಲೆಗಳಲ್ಲಿ ಎಂಭತ್ತರಿಂದ ತೊಂಭತ್ತರಷ್ಟು ಹೊಯ್ಸಳ ದೇವಾಲಯಗಳಿವೆ ಎಂದು ಕಂಡುಬಂದಿದೆ. ಇಂಥ ದೇವಾಲಯಗಳಲ್ಲಿ ಒಂದು, ಮಂಡ್ಯ ಜಿಲ್ಲೆಯ ತಾಲೂಕು ಕೇಂದ್ರ ಕೃಷ್ಣರಾಜಪೇಟೆಯ ಪೂರ್ವಕ್ಕೆ ಎರಡು ಮೈಲಿ ದೂರದ ಹೊಸ ಹೊಳಲಿನ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯ. ಇದು ಅಗ್ರಹಾರವಾಗಿಯೂ ಗುರುತಿಸಲ್ಪಟ್ಟಿದೆ. ಹದಿಮೂರನೇ ಶತಮಾನದಲ್ಲಿ ನಿರ್ಮಿತವಾದ ಈ ದೇವಾಲಯ ಹೊಯ್ಸಳ ವಾಸ್ತುಶಿಲ್ಪದ ಸುಂದರ ಸ್ಮಾರಕ. ಇದು ತ್ರಿಕೂಟಾಚಲ ದೇವಾಲಯು. ಇಲ್ಲಿ ಮೂರು ಗರ್ಭಗೃಹಗಳು, ಒಂದು ನವರಂಗ, ಮುಖ್ಯಗೃಹದ ಮುಂದೆ ಒಂದು ಸುಖನಾಸಿ, ಅದರ ಮೇಲೆ ಒಂದು ಗೋಪುರ. ಜಗತಿಯ ಮಾಲೆಗಳನ್ನು ಆನೆಗಳು ಧರಿಸಿವೆ. ದೇವಸ್ಥಾನದ ಸುತ್ತಲೂ ಮತ್ತು ನವರಂಗದ ಮುಂದಣ ಜಗತಿಗೂ ಚಿತ್ರಪಟ್ಟಿಕೆಗಳಿವೆ. ಹೊರಭಾಗದ ವಿಗ್ರಹಗಳು ಎರಡೂವರೆ ಅಡಿ ಎತ್ತರವಾಗಿ ಸ್ಫುಟವಾಗಿ ತುಂಬಿಕೊಂಡಿವೆ. ಪಾಂಡುರಂಗ, ಗೋವರ್ಧನಧಾರಿ, ಸರಸ್ವತಿ, ಯೋಗಮಾಧವ, ಧನ್ವಂತರಿ, ದಕ್ಷಿಣಾಮೂರ್ತಿ, ಮೋಹಿನಿ - ಇವು ಗಮನಾರ್ಹವಾದುವು. ನವರಂಗದ ಒಳಭಾಗವು ಬಹು ಸೂಕ್ಷ್ಮವಾದ ಮತ್ತು ಸೊಗಸಾದ ಕೆತ್ತನೆಯ ಕೆಲಸವುಳ್ಳದ್ದಾಗಿದೆ. ಭುವನೇಶ್ವರಿಗಳು, ಬಹು ತೊಡಕಾದ ರೇಖಾ ವಿನ್ಯಾಸವುಳ್ಳವಾಗಿವೆ. ಇಲ್ಲಿಯ ಒಂದು ಕಂಭದ ಬಳ್ಳಿಯ ಕೆಲಸದೊಳಗೆ ಒಂದು ಸಣ್ಣ ಕಪಿಯು ಒಂದು ಮರದ ಕೊಂಬೆಯ ಮೇಲೆ ಕುಳಿತಿರುವಂತೆ ಕೆತ್ತಲ್ಪಟ್ಟಿದೆ.

ಮುಖ್ಯ ಗೃಹದಲ್ಲಿ ನಾರಾಯಣ ವಿಗ್ರಹವೂ ಉತ್ತರ ಗೃಹದಲ್ಲಿ ಲಕ್ಷ್ಮೀನರಸಿಂಹ ವಿಗ್ರಹವೂ ಇವೆ. ದಕ್ಷಿಣ ಗೃಹ ಬರಿದಾಗಿದೆ.[೧] ಈ ದೇವಾಲಯವು ಹೊಯ್ಸಳರ ಕಾಲದ್ದೇ ಎಂಬುದು ನಿರ್ವಿವಾದವಾದರೂ ಇದನ್ನು ಕಟ್ಟಿದ ಇಸವಿಯ ಬಗ್ಗೆ ಯಾವ ಶಾಸನಗಳೂ ಇಲ್ಲದಿರುವುದರಿಂದ ಸದ್ಯಕ್ಕೆ ಇದರ ಕಾಲವನ್ನು ಕ್ರಿ.ಶ. ೧೨೪೬ ಎಂದು ವಿದ್ವಾಂಸರು ಗುರುತಿಸಿದ್ದಾರೆ.[೨]

ಹೊಯ್ಸಳ ದೇವಾಲಯಗಳನ್ನು ಜಕಣಾಚಾರಿ, ಅವನ ಮಗ ಡಂಕಣಾಚಾರಿಯೇ ಕಟ್ಟಿದರೆಂಬ ತಪ್ಪು ತಿಳುವಳಿಕೆಯಿದೆ. ಆದರೆ ಒಂದು ದೇವಾಲಯ ನಿರ್ಮಾಣಕ್ಕೆ ಸುಮಾರು ಇಪ್ಪತ್ತು ವರ್ಷ ಹಿಡಿಯುವಲ್ಲಿ ಮತ್ತು ಅನೇಕ ತಲೆಮಾರುಗಳಲ್ಲಿ ಕಟ್ಟಿದ ಈ ದೇವಾಲಯಗಳಿಗೆ ಅನೇಕ ಶಿಲ್ಪಿಗಳು ದುಡಿದಿರಬೇಕು. ಅವರಲ್ಲಿ ಮುಖ್ಯರಾದವರಲ್ಲಿ ಕೆಲವರೆಂದರೆ ದಾಸೋಜ, ಅವನ ಮಗ ಚವನ, ಪಾದರಿ ಮಲ್ಲೋಜ, ಮಲ್ಲಿಯಣ್ಣ, ಚಿಕ್ಕಹಂಸ ಕಾಲಿದಾಸಿ, ಮಬ, ಹಂಪ ಇತ್ಯಾದಿ. ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನದ ಕೆಲವು ವಿಗ್ರಹಗಳ ಕೆಳಗೆ "ಮಲ್ಲಿತಮ್ಮ" ಎಂದು ಕೊರೆದಿದೆ ಮತ್ತು ಮೆಟ್ಟಿಲ ಮೇಲೆ "ನಂಜಮ್ಮನರಸಪ್ಪರ ಸೇವೆ" ಎಂದಿದೆ.

ಬಸದಿ: ಹೊಸಹೊಳಲಿನ ಪಾರ್ಶ್ವನಾಥ ಬಸದಿಯು ತ್ರಿಕೂಟ ಜಿನಾಲಯವಾಗಿದ್ದು, ಇದೇ ರೀತಿಯ ಇನ್ನೊಂದು ತ್ರಿಕೂಟ ಜಿನಾಲಯವನ್ನು ಕತ್ತರಿಘಟ್ಟದಲ್ಲಿ ಕಟ್ಟಿಸಿದ್ದು ಮತ್ತು ಅಲ್ಲಿನ ಪೂಜಾದಿಗಳಿಗಾಗಿ ದಾನ ಮಾಡಿದ್ದು ಇವುಗಳ ವಿವರವು. ಬಸದಿಯ ದಕ್ಷಿಣಕ್ಕಿರುವ ಶಾಸನದಿಂದ ತಿಳಿಯುತ್ತದೆ. ಕತ್ತರಿ ಘಟ್ಟವೇ ಹೊಸಹೊಳಲು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಉಳಿದ ಶಾಸನಗಳಲ್ಲಿ **ಹೊಸಬಳಲು** ಎಂಬ ಹೆಸರಿದೆ. ಈ ದಾನ ಕರ್ತೃವಾದ ನೊಳಂಬಿಸೆಟ್ಟಿಯು ಪೊಯ್ಸಳಸೆಟ್ಟಿ ಎನಿಸಿಕೊಂಡು ದೋರಸಮುದ್ರದ ಪಟ್ಟಣಸ್ವಾಮಿಯಾಗಿದ್ದನೆಂದು ತಿಳಿಯುತ್ತದೆ. ಚವುಂಡಾಂಡಿ ಎಂಬುದು ಅವನ ಇನ್ನೊಂದು ಹೆಸರು. ಕೊಂಡ ಕುಂದಾನ್ವಯದ ಮೂಲಸಂಘ, ದೇಸಿಗಗಣ, ಪೊಸ್ತಕಗಚ್ಛಕ್ಕೆ ಸೇರಿದ ಶುಭಚಂದ್ರ ಸಿದ್ಧಾಂತ ದೇವರಲ್ಲದೆ, ವಿಜಯಕೀರ್ತಿ ದೇವರು ಸಮನ್ತಭದ್ರರ ಪ್ರಸ್ತಾಪವೂ ಉಳಿದ ಶಾಸನಗಳಲ್ಲಿ ಇದೆ.

---

* ಕನ್ನಡ ಉಪನ್ಯಾಸಕಿ, ಭಾರತೀಯ ಸಂಸ್ಕೃತಿ ವಿದ್ಯಾಪೀಠ, ವಿಜಯನಗರ, ಬೆಂಗಳೂರು.

ಶಾಸನಗಳು: ಪಾರ್ಶ್ವನಾಥ ಬಸದಿಗೆ ದಕ್ಷಿಣಕ್ಕಿರುವ(ಕಲ್ಲು) ಶಾಸನವು ಹೊಯ್ಸಳರು ಗಂಗವಾಡಿ ತೊಂಭತ್ತಾರು ಸಾವಿರವನ್ನು ಆಳುತ್ತಿರುವಾಗ (ಕ್ರಿ.ಶ. ೧೧೧೮)[೫] ಅವರ ಆಧಿಪತ್ಯದಲ್ಲಿ ನೊಳಂಬಿಸೆಟ್ಟಿ ಮತ್ತು ಆತನ ಪತ್ನಿ ದೇಮಿಕಬ್ಬೆ ಸೆಟ್ಟಿತಿಯು, ಎರಡು ಹಳ್ಳಿ, ಎರಡು ಗಾಣ, ಎರಡು ತೋಟ, ಎರಡು ಮನೆಗಳನ್ನು ಬಸದಿಗೆ ದಾನ ಕೊಟ್ಟಂಥದು.

ಇದರ ಜೊತೆಗೆ ಬೆಟ್ಟನಾಯ್ಕನ ಮಗ, ಗಂಡ ನಾರಾಯಣ ಶೆಟ್ಟಿಯು ಕತ್ತರಿಘಟ್ಟದ ಗದ್ದೆ ಬೆದ್ದಲು, ಇವಿಷ್ಟನ್ನೂ ಸೆಟ್ಟಿ ದಂಪತಿಗಳು ಕುಕ್ಕುದಾಸನ ಮಲಧಾರಿ ದೇವರ ಶಿಷ್ಯರಾದ ಶುಭಚನ್ದ್ರದೇವರಿಗೆ ಧಾರಾಪೂರ್ವಕ ದಾನ ಮಾಡಿದರು.

ಹೊಸಹೊಳಲಿನ ತೆಂಗಿನ ತೋಟದಲ್ಲಿ ಬಿದ್ದಿರುವ ಬಾಗಿಲ ವಾಡದ (ಕಲ್ಲು)[೬] ಶಾಸನ ಮತ್ತು ತುಂಡು (ಕಲ್ಲು)[೭] ಶಾಸನಗಳು ಇನ್ನೆರಡು ದಾನ ಶಾಸನಗಳು. (ಕ್ರಿ.ಶ. ೧೩೦೬) ಸೋಮನಾಥನ ಪೂಜೆಗಾಗಿ, ಮಹಾ ಪ್ರಧಾನರ ಸೇನಬೋವನಾದ ಪದುಮಣ್ಣ, ಶಿವದಣ್ಣಾಯಕ, ದೇಕಣ್ಣ ಮತ್ತು ಮಹಾಜನಗಳ ಎದುರಿಗೆ, ಹೊಸಹೊಳಲಿನ ಅಧಿಕಾರಿ ಪಾಂಡಲದೇವನ ಒಪ್ಪಿಗೆಯ ಮೇರೆಗೆ, ಈಶ್ವರಪೆದ್ದಿಯು ಮಾಸವೆಗ್ಗಡೆಯಾಗಿದ್ದಾಗ, ಸಪ್ಪೆಯ ಕೇತಯ್ಯನ ಮಗನು, ಸೋಮಯ್ಯನಿಗೆ, ಕೆರೆಯ ಪಕ್ಕದ ಕಲ್ಲನ್ನು ಕೊಟ್ಟಿದ್ದು ಒಂದಾದರೆ[೮] ಹರಿಹರಿದಾಸರ ದೇವದಾನ ಎಂಬುದು ಇನ್ನೊಂದು[೯] (ಇದು ತ್ರುಟಿತವಾಗಿದೆ). ಇನ್ನೆರಡು ವೀರಗಲ್ಲುಗಳು.[೧೦] (ಕ್ರಿ.ಶ. ೧೨ನೇ ಶತಮಾನ) ತುಂಬಾ ತ್ರುಟಿತವಾಗಿವೆ. ತೆಂಗಿನ ತೋಟದಲ್ಲಿ ನಿಂತಿರುವುದು, ಹೊಯ್ಸಳರಾಜ ನರಸಿಂಘದೇವನ ಕಾಲದ್ದಾಗಿದೆ. ಇದರಲ್ಲಿ ಭೀಮಯ್ಯ ಎಂಬ ವೀರ ಮಡಿದ ವಿಷಯವಿದೆ. ಇನ್ನೊಂದು ಕೆರೆಯ ಪಕ್ಕದ ಬಸವಣ್ಣನ ಗುಡಿಗೆ ಒರಗಿಸಿರುವುದರಲ್ಲಿ ಹೊಯ್ಸಳ ನರಸಿಂಹನ ಕಾಲದಲ್ಲಿ ಬಬ್ಬೆಯ ನಾಯಕನು ಮಡಿದ ವಿವರವಿದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಇದರಲ್ಲಿ ವೇಣುಗೋಪಾಲ ವಿಗ್ರಹವಿತ್ತೆಂದೂ ಕೆಲವು ವರ್ಷಗಳ ಹಿಂದೆ (ಅಂದರೆ ೧೯೨೮ರಲ್ಲಿ) ಅದನ್ನು ಕನ್ನಂಬಾಡಿಗೆ ತೆಗೆದುಕೊಂಡು ಹೋದರೆಂದೂ ಹೇಳುತ್ತಾರೆ. (ಕನ್ನಂಬಾಡಿಯ ಗೋಪಾಲಕೃಷ್ಣ ದೇವಸ್ಥಾನವು ಕೃಷ್ಣರಾಜಸಾಗರದ ಮುಳುಗಡೆಗೆ ಸಿಕ್ಕಿದ್ದರಿಂದ ಅದನ್ನು ತಿರುಗಿ ಅಲ್ಲಿಂದ ಕಿತ್ತು ಉತ್ತರ ತೀರದಲ್ಲಿ ಒಂದು ಕೊಟಡಿಯಲ್ಲಿ ಹಾಕಿದ್ದಾರೆ).

೨. ಆದರೆ ದೇವಾಲಯದ ಹೊರ ಜಗಲಿಯನ್ನೆಲ್ಲಾ ಊರವರು ಆಕ್ರಮಿಸಿಕೊಂಡು ಜಗಲಿಯ ಅಂಚಿನವರೆಗೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಒಬ್ಬ ಭಕ್ತನು ಈಚೆಗೆ (ಅಂದರೆ ೧೯೨೮ರ ಸುಮಾರಿಗೆ) ಒಂದು ಸಾಧಾರಣವಾದ ಮುಖ ಮಂಟಪವನ್ನೂ, ಅದರ ಪಕ್ಕದಲ್ಲಿ ಪಾಕಶಾಲೆಗಾಗಿ ಒಂದು ಕೊಟಡಿಯನ್ನೂ ಕಟ್ಟಿಸಿದ್ದಾನೆ. ಈ ವಿಕಾರವಾದ ಕಟ್ಟಡವು ಸೊಗಸಾಗಿದ್ದ ಎಷ್ಟೋ ಕೆತ್ತನೆಯ ಕೆಲಸವನ್ನು ಮುಚ್ಚಿಕೊಂಡಿರುವುದಲ್ಲದೇ ದೇವಸ್ಥಾನದ ಮುಖ ಸೌಂದರ್ಯವನ್ನೇ ಕೆಡಿಸಿಬಿಟ್ಟಿದೆ.

೩. ಈಗ ದಕ್ಷಿಣದ ಗರ್ಭಗುಡಿಯಲ್ಲಿ ಒಂದು ವೇಣುಗೋಪಾಲನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದ್ದು ಪೂಜೆ ನಡೆಯುತ್ತಿದೆ. ಇದು ಬಹುಶಃ ಹೊಸದಾಗಿ ಕೆತ್ತಿದ ಒಂದು ವಿಗ್ರಹವಿರಬೇಕು. ತಲೆಮಾರುಗಳು ಕಳೆದಂತೆಲ್ಲಾ. ದೇವಾಲಯದ ಹಳೆಯ ಚರಿತ್ರೆ ಮಾಸಿಹೋಗಿ ಹೊಸ ಹೊಸ ಕಲ್ಪನೆಗಳು ಹುಟ್ಟಿಕೊಂಡಿವೆ.

೪. ದೇವಸ್ಥಾನದ ಮೆಟ್ಟಿಲ ಮೇಲೆ "ನಂಜಮ್ಮ ನರಸಪ್ಪರ ಸೇವೆ" ಎಂದು ಮಾತ್ರ ಇದೆ.

೫. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ-೬ (ಪ:ಆ) ಕೃಷ್ಣರಾಜಪೇಟೆ ೩

೬. ಅದೇ ೮

೭. ಅದೇ ೭

೮. ಅದೇ ೮

೯. ಅದೇ ೭

೧೦. ಅದೇ ೬ ಮತ್ತು ೯

ಕೊಟ್ರಪ್ಪ. ಲಕ್ಕಪ್ಪ.*

ಹಗರಿಗುಡಿಹಳ್ಳಿ ಈಶ್ವರ ದೇವಾಲಯ - ಒಂದು ಅಧ್ಯಯನ

ಹಗರಿಗುಡಿಹಳ್ಳಿ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕಿನ ಒಂದು ಗ್ರಾಮವಾಗಿದ್ದು ಅದು ಹರಪನಹಳ್ಳಿಯಿಂದ ಸುಮಾರು ೨೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಪ್ರಾಚೀನ ಕಾಲದಲ್ಲಿ ಕೊಗಳಿ ೫೦೦ ನಾಡಿನ ಒಂದು ಹಳ್ಳಿಯಾಗಿದ್ದಿತು. ಈ ಗ್ರಾಮದಲ್ಲಿ ಪ್ರಾಚೀನ ಕಾಲದ ಎರಡು ದೇವಾಲಯಗಳಿವೆ. ಜನವಸತಿ ಹಾಗೂ ಗುಡಿಗಳು ಹಳ್ಳದ ದಂಡೆಯ ಮೇಲಿರುವುದರಿಂದ ಈ ಗ್ರಾಮಕ್ಕೆ ಹಗರಿಗುಡಿಹಳ್ಳಿ (ಹಗರಿ+ಗುಡಿ) ಎಂಬ ಹೆಸರು ಬಂದಿರಬಹುದು. ಈ ಗ್ರಾಮದಲ್ಲಿ ಇತ್ತೀಚಿನ ಕಾಲದ ಬಸವೇಶ್ವರ, ಹಾಲಸಿದ್ಧೇಶ್ವರ, ಕರಿಯಮ್ಮ, ದುರುಗಮ್ಮ ಮೊದಲಾದ ದೇವಾಲಯಗಳಿವೆ. ಈ ಗ್ರಾಮದಲ್ಲಿಯ ಈಶ್ವರ ಮತ್ತು ಕಲ್ಲೇಶ್ವರ ದೇವಾಲಯಗಳು ಸಮಕಾಲೀನ ಪ್ರಾಚೀನ ಕಾಲದ ದೇವಾಲಯಗಳಾಗಿದ್ದು ಇಲ್ಲಿ ಈಶ್ವರ ದೇವಾಲಯವನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೧೯೯೩ರ ಲಘು ಭೂಕಂಪನದಿಂದ ಇಲ್ಲಿಯ ಈಶ್ವರ ದೇವಾಲಯದ ಪೂರ್ವದಿಕ್ಕಿನ ಹೊರ ಗೋಡೆಯು ಕುಸಿದು ಬಿದ್ದಿತು. ಆದರೆ ಶಿಖರ ಓರೆಯಾಗಿ ಬಾಗಿದೆ ಹಾಗೂ ಈ ದೇವಾಲಯ ಒಂದು ದ್ವಾರವನ್ನು ಮತ್ತು ಶಿಖರ ಭಾಗವನ್ನು ಚಿಗಟೇರಿಯ (ಪಾಳೇಗಾರ) ಶಿವಪ್ಪನಾಯಕನು ಚಿಗಟೇರಿಗೆ ತೆಗೆದುಕೊಂಡು ಹೋದನೆಂದು ಸ್ಥಳೀಯರೇ ಹೇಳುತ್ತಾರೆ. ಬಹುಶಃ ಈ ಕಾರಣದಿಂದಲೇ ಅಂತರಾಳದ ಒಂದು ಬಾಗಿಲು ಪಟ್ಟಿ ಮತ್ತು ಇನ್ನೊಂದು ಗರ್ಭಗೃಹದ ಶಿಖರಭಾಗ ಕಂಡುಬರುವುದಿಲ್ಲ.

ಈ ಈಶ್ವರ ದೇವಾಲಯ ದಕ್ಷಿಣಕ್ಕೆ ಮುಖ ಮಾಡಿದೆ. ಇದರ ಒಳಗಡೆ ಒಂದು ಶಿಲಾಶಾಸನವಿದೆ. ಈ ದೇವಾಲಯವನ್ನು ಈಶ್ವರ ಅಥವಾ ಸೂರ್ಯನಾರಾಯಣ ಅಥವಾ ತ್ರಿಯಂಬಕೇಶ್ವರ ಎಂಬ ಹೆಸರುಗಳಿಂದ ಕರೆಯುವರು. ಈ ದೇವಾಲಯವು ಮೂರು ಗರ್ಭಗೃಹಗಳು, ಮೂರು ಅಂತರಾಳಗಳು, ಒಂದು ನವರಂಗ ಹಾಗೂ ಒಂದು ಮುಖಮಂಟಪ ಹೊಂದಿದೆ. ಇದರಿಂದಾಗಿ ಇದು ತ್ರಿಕೂಟ ಮಾದರಿಯ ಒಂದು ದೇವಾಲಯ. ಎರಡು ಗರ್ಭಗೃಹಗಳಿಗೆ ಮಾತ್ರ ಮೂಲ ಶಿಖರಗಳು ಉಳಿದುಕೊಂಡಿವೆ. ಈ ಗರ್ಭಗೃಹಗಳಲ್ಲಿ ಶಿವಲಿಂಗಗಳು ಮತ್ತು ಸೂರ್ಯನಾರಾಯಣ ವಿಗ್ರಹಗಳಿವೆ.

ದಕ್ಷಿಣಕ್ಕೆ ಮುಖಮಾಡಿದ ಮೂಲ ಗರ್ಭಗೃಹದ ಮಧ್ಯ ಶಿವಲಿಂಗವಿದೆ. ಈ ಲಿಂಗದ ಅರ್ಧಭಾಗವನ್ನು ಕೊರೆಯಲಾಗಿದೆ. ಇದರಿಂದಾಗಿ ಸ್ಥಳೀಯರು ಈ ಲಿಂಗಕ್ಕೆ ಅರ್ಧನಾರೀಶ್ವರನೆಂದು ಕರೆಯುತ್ತಾರೆ. ಗರ್ಭಗೃಹ ಚೌಕಾಕಾರವಾಗಿದ್ದು ಸರಳ ರೀತಿಯದ್ದಾಗಿದ್ದು ಶಿಖರವನ್ನು ಹೊಂದಿದೆ. ಗರ್ಭಗೃಹದ ಮುಂದಿನ ಭಾಗವೇ ಅಂತರಾಳ. ಇದು ಕೂಡಾ ಚೌಕಾಕಾರ ವಾಗಿದ್ದು ಇದರ ದ್ವಾರದ ಲಲಾಟದಲ್ಲಿ ಉಗ್ರನರಸಿಂಹನು ಹಿರಣ್ಯಕಶ್ಯಪನನ್ನು ಸಂಹಾರ ಮಾಡುವ ದೃಶ್ಯವಿದೆ. ಇದರ ಬಲಭಾಗದಲ್ಲಿ ವರಾಹ, ಎಡಭಾಗದಲ್ಲಿ ಕೊಳಲನ್ನು ನುಡಿಸುತ್ತಿರುವ ಗೋಪಾಲಕೃಷ್ಣನ ಚಿತ್ರಗಳಿವೆ. ಲಲಾಟದ ಕೆಳಗೆ ಗಜಲಕ್ಷ್ಮಿ ಚಿತ್ರವಿದೆ. ದ್ವಾರಫಲಕಗಳಲ್ಲಿ ದ್ವಾರಪಾಲಕರಿದ್ದು ಕೈಯಲ್ಲಿ ಗದೆ, ಚಕ್ರ ಹಿಡಿದ ವಿಗ್ರಹಗಳಿವೆ. ಬಾಗಿಲು ಪಟ್ಟಿಗಳ ಬದಿಗೆ ಜಾಲಂಧರಗಳನ್ನು ಕೂಡಿಸಲಾಗಿದೆ.

ಪೂರ್ವಕ್ಕೆ ಮುಖ ಮಾಡಿದ ಗರ್ಭಗೃಹದಲ್ಲಿ ಶಿವ ಲಿಂಗವಿದೆ. ಈ ಗರ್ಭಗೃಹ ಚೌಕಾಕಾರದ್ದಾಗಿದ್ದು, ಶಿಖರವನ್ನು ಕಳೆದುಕೊಂಡಿದೆ. ಅಂತರಾಳ ಸರಳವಾಗಿದ್ದು ಅಂತರಾಳದ ಬಾಗಿಲ ಪಟ್ಟಿಯಲ್ಲಿ ಶಿವನು ನೃತ್ಯ ಭಂಗಿಯಲ್ಲಿರುವನು. ಅವನ ಪಕ್ಕದಲ್ಲಿ ವಾದ್ಯ ಬಾರಿಸುತ್ತಾ ನರ್ತಿಸುತ್ತಿರುವ ವಾದ್ಯಕಾರರ ಚಿತ್ರಗಳಿದ್ದರೆ ನಟೇಶ್ವರನ ಪಕ್ಕದಲ್ಲಿ ಋಷಿಗಳಿರುವ ಚಿತ್ರಗಳಿವೆ. ಲಲಾಟದ ಕೆಳಭಾಗದಲ್ಲಿ ಗಜಲಕ್ಷ್ಮಿಯ ಚಿತ್ರವಿದೆ. ದ್ವಾರಪಟ್ಟಿಯ ಕೆಳಗಡೆ ಶೈವದ್ವಾರ ಪಾಲಕರಿದ್ದಾರೆ ಇದರಿಂದ ಇದೊಂದು ಶೈವಗುಡಿ ಎಂದು ತಿಳಿದು ಬರುತ್ತದೆ.

---

* ಇತಿಹಾಸ ಉಪನ್ಯಾಸಕರು, ರವೀಂದ್ರ ಕಾಲೇಜ್, ಚಳ್ಳಕೆರೆ-೫೭೭ ೫೨೨, ಚಿತ್ರದುರ್ಗ ಜಿಲ್ಲೆ

ಪಶ್ಚಿಮಕ್ಕೆ ಮುಖ ಮಾಡಿರುವ ಗರ್ಭಗೃಹದಲ್ಲಿ ಸೂರ್ಯ ನಾರಾಯಣ ವಿಗ್ರಹವಿದ್ದು ಇದು ಚೌಕಾಕಾರವಾಗಿದೆ ಮತ್ತು ಶಿಖರವನ್ನು ಹೊಂದಿದೆ. ಪೂರ್ವದ ಗೋಡೆಯಲ್ಲಿ ಒಂದು ಕಿಂಡಿಯನ್ನು ಮಾಡಲಾಗಿದೆ. ಅಂತರಾಳದಲ್ಲಿ ಒಂದು ನಂದಿಯ ವಿಗ್ರಹವನ್ನು ಸ್ಥಾಪಿಸಲಾಗಿದೆ. ಇದು ತನ್ನ ದ್ವಾರವನ್ನು ಕಳೆದು ಕೊಂಡಿದೆ.

ನವರಂಗದಲ್ಲಿ ನಾಲ್ಕು ಕಂಬಗಳು ಸ್ವಲ್ಪ ಎತ್ತರದ ಕಟ್ಟೆಯ ಮೇಲಿವೆ. ಅದರ ಭುವನೇಶ್ವರಿಯಲ್ಲಿ ಕಮಲವಿದೆ. ನವರಂಗದ ಪಕ್ಕದಲ್ಲಿ ಪಥವಿದ್ದು ಇದರ ಬಲಭಾಗದಲ್ಲಿಯೇ ಶಾಸನವಿದೆ. ನವರಂಗದ ದ್ವಾರ ಸರಳವಾಗಿದೆ. ಅದರ ಮುಂದಿನ ಮುಖ ಮಂಟಪ ಕಕ್ಷಾಸನವನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಮುಖಮಂಟಪ ಒಳಗೆ ಮಾಡಿ ಎರಡು ಕಡೆ ಗೋಡೆ ನಿರ್ಮಿಸಲಾಗಿದೆ. ಕಾರಣ ಮಳೆ ನೀರಿನಿಂದ, ಗಾಳಿಯಿಂದ ಸಂರಕ್ಷಿಸುವ ಹಾಗೂ ದೇವಾಲಯದ ಪಕ್ಕದಲ್ಲಿಯೇ ಹಳ್ಳವಿರುವುದರಿಂದ ನೀರು ಮತ್ತು ಹಳ್ಳದ ಉಸುಕು ದೇವಾಲಯದ ಒಳಗೆ ಬರದಿರಲೆಂಬ ಉದ್ದೇಶದಿಂದ. ಈ ದೇವಾಲಯದ ಶಿಖರಗಳು ಕದಂಬನಾಗರ ಶೈಲಿಯಲ್ಲಿವೆ. ಒಟ್ಟಾರೆ ಈ ದೇವಾಲಯ ಒಂದು ತ್ರೈಪುರುಷ ಮಾದರಿಯದೆಂದು ಸ್ಪಷ್ಟವಾಗುತ್ತದೆ.

(ಈ ಲೇಖನ ಮಾಡಲು ಪ್ರೋತ್ಸಾಹ ಮತ್ತು ಸಹಾಯ ನೀಡಿದ ನನ್ನ ಪೂಜ್ಯ ಗುರುಗಳಾದ ಡಾ॥ ಆರ್. ಎಂ. ಷಡಕ್ಷರಯ್ಯನವರಿಗೆ ಕೃತಜ್ಞತೆಗಳು.)

*

ಡಾ॥ ಚೆನ್ನಕ್ಕ ಪಾವಟೆ*

ಹಾನಗಲ್ಲ ಪರಿಸರದಲ್ಲಿ ಕದಂಬರ ಕಾಲದ ಪ್ರಾಚ್ಯ ಅವಶೇಷಗಳ ಶೋಧ

ಹಾನಗಲ್ಲ ಪರಿಸರ ಐತಿಹಾಸಿಕ ಮಹತಿ ಮೆರೆದ ಪ್ರದೇಶ. ಈ ಭಾಗದ ಸಂಪೂರ್ಣ ಸರ್ವೇ ಅಗದೇ ಹೋದರೂ ಅಲ್ಲಲ್ಲಿ ಕೆಲ ಶಾಸನಗಳು ಪ್ರಕಟವಾಗಿವೆ. ಆದಿಕದಂಬರ ಕಾಲದಿಂದ ಮೊದಲ್ಗೊಂಡು ವಿಜಯನಗರದ ಅರಸುಮನೆತನದವರೆಗಿನ ಇತಿಹಾಸ ಈ ಪ್ರದೇಶದಲ್ಲಿ ದೊರಕುತ್ತದೆ. ೧೯೭೭ರಲ್ಲಿ ಇದೇ ತಾಲೂಕಿನ ಅಕ್ಕಿ ಆಲೂರಿನಲ್ಲಿ ಸುಮಾರು ೪೫ ಚಿನ್ನದ ನಾಣ್ಯಗಳು ದೊರಕಿವೆ. ಇವು ರೋಮ ಚಕ್ರಾಧಿಪತ್ಯದ ಅರಸುಗಳಾದ ಅಗಸ್ಟಸ್, ಟೈಬೇರಿಯಸ್, ಜೆನೂ ಚಕ್ರವರ್ತಿಗಳ ಕಾಲಕ್ಕೆ ಸಂಬಂಧಿಸಿದವುಗಳು. ಈಗಾಗಲೆ ಸ್ಪಷ್ಟವಾಗಿ ತಿಳಿದಂತೆ ಕ್ರಿ.ಶ. ೧-೨ ಶತಮಾನಗಳಲ್ಲಿ ದಕ್ಷಿಣ ಭಾರತ ಮತ್ತು ರೋಮ ಚಕ್ರಾಧಿಪತಿಗಳ ನಡುವೆ ಉತ್ತಮ ವ್ಯಾಪಾರ ಅಭಿವೃದ್ಧಿ ಹೊಂದಿದ ಕಾರಣ, ತತ್ಪರಿಣಾಮವಾಗಿ ರೋಮನ್ ಚಕ್ರವರ್ತಿಗಳ ಚಿನ್ನ ಮತ್ತು ಬೆಳ್ಳಿಗುಂಡಿಗಳು ದಕ್ಷಿಣದಲ್ಲಿ ಅಲ್ಲಲ್ಲಿ ಸಿಕ್ಕಿವೆ. ಅಕ್ಕಿಆಲೂರ ವೈಶಿಷ್ಟ್ಯವೇನೆಂದರೆ ಇಲ್ಲಿ ಇತರೆಡೆ ದೊರಕಿದಂತೆ ಟೈಬೇರಿಯಸ್ ಮತ್ತು ಅಗಸ್ಟಸ್ ದೊರೆಗಳದ್ದಲ್ಲದೆ ತರುವಾಯದ ಅರಸರ ಮೂರು ನಾಣ್ಯಗಳು ಸಿಕ್ಕಿವೆಯೆಂಬುದು ಗಮನಾರ್ಹ. ಅಂದರೆ ಆದಿಕದಂಬರ ಕಾಲದಲ್ಲಿ ರೋಮ ದೇಶದಲ್ಲಿ ಈ ಪ್ರದೇಶದ ವ್ಯಾಪಾರ ಸಂಬಂಧ ಉತ್ತಮ ಸ್ಥಿತಿಯಲ್ಲಿತ್ತು ಎಂದು ತಿಳಿಯ ಬೇಕಾಗುತ್ತದೆ.

ಆದಿಕದಂಬರ ಕಾಲದ ಇಮ್ಮಡಿ ಕೃಷ್ಣವರ್ಮನ ತಾಮ್ರಪಟ ಇಲ್ಲಿ ದೊರಕಿದ್ದು ಹಾನಗಲ್ಲು ಪಾಂಕ್ತಿಪುರವೆಂದು ಹೆಸರು ಪಡೆದಿದೆ. ಹಾನಗಲ್ಲಿನಲ್ಲಿಯ ಶಾತವಾಹನ ಕದಂಬರ ಕಾಲದ ಇಟ್ಟಿಗೆ, ಕೋಟೆ ಗೋಡೆಗಳ ಅವಶೇಷಗಳಿರುವುದನ್ನು ಕೆಲವು ವರ್ಷಗಳ ಹಿಂದೆ ಡಾ॥ ಸುಂದರ ಅವರು ಪತ್ತೆ ಹಚ್ಚಿರುವರು. ಸ್ಥಳೀಯ ಕಥೆ ಪ್ರಕಾರ ಈ ಸ್ಥಳವು ಮಹಾಭಾರತದ ವಿರಾಟ ನಗರವೆಂದು ಪ್ರತೀತಿ. ಆದ್ದರಿಂದ ಈ ಪ್ರದೇಶಕ್ಕೆ ಕನಿಷ್ಟ ಕ್ರಿ.ಪೂ. ೨-೧ ಶತಮಾನದಿಂದ ನಿರಂತರವಾದ ಉಜ್ವಲ ಸಾಂಸ್ಕೃತಿಕ ಪರಂಪರೆ ಇದೆ. ಇದೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಇತ್ತೀಚೆಗೆ ನಾನು ಕೂಲಂಕಷವಾಗಿ ಈ ಪ್ರದೇಶದಲ್ಲಿ ಪುರಾತತ್ವ ಅನ್ವೇಷಣೆ ಕೈಕೊಂಡೆ. ಈ ಕ್ಷೇತ್ರಕಾರ್ಯದಲ್ಲಿ ಹಲವಾರು ದೇವಾಲಯಗಳು, ಮೂರ್ತಿಶಿಲ್ಪಗಳು, ಗೋಸಾಸ ಶಿಲ್ಪಗಳು, ವೀರಗಲ್ಲುಗಳು ವಿಶೇಷವಾಗಿ ಕುಮಾರರಾಮನ ಶಿಲ್ಪಗಳು ಹಾಗೂ ಸೂರ್ಯೋಪಾಸನೆಯ, ಸೂರ್ಯಗ್ರಹಣದ ಅಗ್ನಿಪ್ರವೇಶದ ಶಿಲ್ಪಗಳು ದೊರಕಿವೆ. ಈ ಪ್ರದೇಶದಲ್ಲಿ ಇತ್ತೀಚೆಗೆ ಕ್ಷೇತ್ರಕಾರ್ಯ ಕೈಕೊಂಡ ರು.ಮ.ಷಡಕ್ಷರಯ್ಯ, ಮಂತಗಿಯಲ್ಲಿ ಅಪರೂಪದ ಕಾರ್ತಿಕೇಯ ವಿಗ್ರಹ ಪತ್ತೆ ಹಚ್ಚಿದ್ದು ಗಮನಿಸಬೇಕು. ನಾನು ಅನ್ವೇಷಣೆ ಕೈಕೊಂಡ ಪ್ರದೇಶದಲ್ಲಿ ಗಮನಕ್ಕೆ ಬಂದ ಕೆಲವು ಗಮನಾರ್ಹ ಸಂಗತಿಗಳನ್ನು ಸದ್ಯಕ್ಕೆ ಇಲ್ಲಿ ಪ್ರಸ್ತುತಪಡಿಸುವೆ.


ಮೂರ್ತಿ ಶಿಲ್ಪಗಳು: ಬಾಳೇಹಳ್ಳಿಯ ಕೇಶವ, ಸರಸ್ವತಿ, ಭೈರವ, ಸಾವೀಕೆರೆಯ ಅಪರೂಪದ ದೇವದೇವತೆಯರ ಶಿಲ್ಪಗಳು. ಇವುಗಳೊಂದಿಗೆ ಇನ್ನೊಂದು ಅತ್ಯಂತ ಅಪರೂಪದ ೭ ಬಿಲ್ಲುಧಾರಿಗಳ ಉಬ್ಬು ಶಿಲ್ಪವಿಗ್ರಹ ತುಂಬ ಗಮನಾರ್ಹ ವಾಗಿವೆ. ಬೇರೆಡೆಯಲ್ಲಿ ದೊರೆಯುವಂತೆ ವಿವಿಧ ಪ್ರಕಾರದ ವೀರಗಲ್ಲು, ಗೋಸಾಸಕಲ್ಲುಗಳು ಈ ಪರಿಸರದಲ್ಲಿವೆ. ಸದ್ಯಕ್ಕೆ ಬಾಳೇಹಳ್ಳಿ ಸಾವಿಕೇರಿ ಶಿಲ್ಪಗಳನ್ನು ಇಲ್ಲಿ ವಿವರಿಸಲಾಗಿದೆ.

ಬಾಳೇಹಳ್ಳಿ ಕೇಶವಶಿಲ್ಪ: ಕೇಶವನ ರೂಪದಲ್ಲಿ ಇರುವ ಸುಂದರವಾದ ಒಂದು ಶಿಲ್ಪವಿದು. ಕಲ್ಯಾಣ ಚಾಲುಕ್ಯ ಶೈಲಿಯನ್ನೊಳಗೊಂಡುದು, ಸುಮಾರು ೧೨ನೆಯ ಶತಮಾನಕ್ಕೆ ಸಂಬಂಧಿಸಿದ ಶಿಲ್ಪ. ಕೇಶವನ ಎಡಗೈ ಮತ್ತು ಮೇಲಿನ ಬಲಗೈ ಹಾಗೂ ಮೇಲಿನ ಎಡಗೈಯಲ್ಲಿಯ ಚಕ್ರವು ಸ್ವಲ್ಪ ಮಟ್ಟಿಗೆ ಮುಕ್ಕಾಗಿದೆ. ಬೇರೆಡೆಯಲ್ಲಿರುವಂತೆ ಈ ಕೇಶವ ಶಿಲ್ಪ ಸಮಭಂಗದಲ್ಲಿದೆ. ಕ್ರಮವಾಗಿ ಮುಂದಿನ ಬಲಗೈಯಲ್ಲಿ ಕಮಲ, ಶಂಖ, ಚಕ್ರ ಮತ್ತು ಗದೆಯ ಚಿತ್ರವಿದೆ. ಕರಂಡಮಕುಟ, ಮಕರಕುಂಡಲ, ರತ್ನಹಾರ, ಮೇಖಲಾ, ವೈಜಯಂತಿಮಾಲೆ ಹಾಗೂ ಉಂಗುರಗಳು, ಕೈಬಳೆ, ಕಾಲಿಗೆ ತೊಡಿಸಿದ ತೋಡೆಗಳು, ನೂಪುರ ಮೊದಲಾದ ಆಭರಣಗಳಿಂದ ವಿಶೇಷ ಅಲಂಕೃತ

* ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-೫೮೦ ೦೦೩

ವಾಗಿದೆ. ತಲೆಯ ಹಿಂಬದಿಯಲ್ಲಿ ಪ್ರಭಾಮಂಡಲವಿದೆ. ಹಸನ್ಮುಖಿಯಾಗಿದ್ದು ಆಧ್ಯಾತ್ಮಿಕ ತೇಜಸ್ಸು, ಏಕಾಗ್ರದೃಷ್ಟಿಯ ಮೂಲಕ ಮುಖಮಂಡಲ ಸೂಚಿಸಲಾಗಿದೆ. ಎಡಬಲ ಬದಿಯಲ್ಲಿ ಭೂದೇವಿ ಮತ್ತು ಶ್ರೀದೇವಿಯರು ಕಮಲಪುಷ್ಪ ಹಿಡಿದು ನಿಂತಿರುವರು. ಮಕರ ತೋರಣವಿದ್ದು ತುದಿಯಲ್ಲಿ ಸಿಂಹಲಲಾಟವಿದೆ. ಇಂಥ ಶಿಲ್ಪಗಳು ಈ ಪ್ರದೇಶದಲ್ಲಿ ಹಲವಾರು ಕಡೆಗಳಲ್ಲಿವೆ.

ಗಜಲಕ್ಷ್ಮಿಯ ಶಿಲ್ಪ: ಸಾವಿಕೇರಿಯ ಗಜಲಕ್ಷ್ಮಿಯ ಶಿಲ್ಪ ಅಪರೂಪದ್ದಾಗಿದೆ. ಲಕ್ಷ್ಮಿಯು ಸಿದ್ಧಾಸನದಲ್ಲಿ ಕುಳಿತಿರುವುದು ಗಮನಾರ್ಹ. ಸಾಮಾನ್ಯವಾಗಿ ಗಜಲಕ್ಷ್ಮಿ ಶಿಲ್ಪವು ಲಕ್ಷ್ಮಿಯು ಸವ್ಯಲಲಿತಾಸನ, ಪದ್ಮಾಸನದಲ್ಲಿ ಕುಳಿತಂತೆ ತೋರಿಸಲಾಗಿರುತ್ತದೆ. ಆದರೆ ಇಲ್ಲಿಯದು ಸಿದ್ಧಾಸನ ಅಥವಾ ಮುಕ್ತಾಸನ. ತಕ್ಕಮಟ್ಟಿಗೆ ಮೈಮಾಟ ಪ್ರಮಾಣಬದ್ಧವಾಗಿದೆ. ಆಭರಣಗಳು ಹಿಂದಿನ ಶಿಷ್ಟ ಸಂಪ್ರದಾಯದ ಕರ್ಣಮಕುಟ, ಚಕ್ರಕುಂಡಲ ಮತ್ತು ಹಾರಗಳಿವೆ. ಆದರೆ ಕೈಗಳಲ್ಲಿರುವ ಕಮಲದ ಮೊಗ್ಗುಗಳು ಮಾತ್ರ ಗಡಸಾಗಿವೆ. ಅದರಂತೆ ಪಾದಗಳು ಕೂಡ ವಿಶಿಷ್ಟ ಆಸನವನ್ನೊಳಗೊಂಡಿವೆ. ಅಕ್ಕಪಕ್ಕದಲ್ಲಿ ಕ್ಷೀರಾಭಿಷೇಕ ಮಾಡುತ್ತಿರುವ ಆನೆಗಳನ್ನು ಭವ್ಯವಾಗಿ ತೋರಿಸಲಾಗಿದೆ. ಲಕ್ಷ್ಮಿಶಿಲ್ಪಕ್ಕೂ ಆನೆಗಳಿಗೂ ಆಕೃತಿ ವ್ಯತ್ಯಾಸವನ್ನು



ಸಾವಿಕೇರಿ ಗಜಲಕ್ಷ್ಮಿ

ಒಡೆದೆದ್ದು ಕಾಣುವಂತೆ ಮಾಡಲಾಗಿದೆ. ಆದರೆ ವಿಗ್ರಹ ಪ್ರಮಾಣಬದ್ಧವಾಗಿಲ್ಲ.

ಸರಸ್ವತಿ: ಸರಸ್ವತಿ ವಿಗ್ರಹ ಸಿದ್ಧಾಸನದಲ್ಲಿ ಅಲಂಕರಿಸಿದ್ದು ಎಲ್ಲ ಶಿಲ್ಪಗಳಲ್ಲಿರುವಂತೆ ಮುಂದಿನ ಬಲಗೈಯಲ್ಲಿ ಕ್ರಮವಾಗಿ ಜಪಮಾಲೆ, ಅಂಕುಶ, ಪಾಶ ಮತ್ತು ಪುಸ್ತಕವಿದೆ. ಮೈಮಾಟವು ತಕ್ಕಮಟ್ಟಿಗೆ ಪ್ರಮಾಣಬದ್ಧವಾಗಿದೆ. ಆದರೆ ಅಂಗಾಲನ್ನು ಮಾತ್ರ ಅಷ್ಟಾಗಿ ಸರಿಹೊಂದುವಂತೆ ಕಂಡರಿಸಿಲ್ಲ. ಆಭರಣಗಳಲ್ಲಿ ಅಡ್ಡಿಗೆ ಹಾರ, ಯಜ್ಞೋಪವೀತ ಹಾಗೂ ದೊಡ್ಡಹಾರ ಇವೆಲ್ಲವಿವೆ. ವಿಶೇಷವಾಗಿ ಕೊರಳ ಅಡ್ಡಿಗೆಯ ಪ್ರಾದೇಶಿಕ ಆಭರಣದ ಮಾದರಿಯಂತಿದೆ. ಹಾಗೆಯೆ ಜಪಮಾಲೆ ಅಂಕುಶ ಪಾಶ ಕೂಡ ಸ್ಥಳೀಯ ಶೈಲಿಯಲ್ಲಿವೆ. ಪ್ರಭಾಮಂಡಲವನ್ನು ಸ್ವಲ್ಪಮಟ್ಟಿಗೆ ಚೌಕೋನವಾಗಿ ತೋರಿಸಲಾಗಿದ್ದು, ಇದು ಕೂಡ ಗಮನಾರ್ಹ ಶಿಲ್ಪವಾಗಿದೆ.



ಬಾಳೇಹಳ್ಳಿ ಸರಸ್ವತಿ

ಭೈರವ: ಬಾಳೇಹಳ್ಳಿಯ ಭೈರವನ ವಿಗ್ರಹದಲ್ಲಿ ಜಟಾಮಕುಟದ ರೀತಿ ಕೈಯಲ್ಲಿರುವ ಖಡ್ಗ, ತ್ರಿಶೂಲ (ಎರಡೂ ಮುಕ್ಕಾಗಿವೆ). ಡಮರು, ಪಾನಪಾತ್ರೆ ಹಾಗೂ ಮನುಷ್ಯನ ತಲೆ ವಿಶಿಷ್ಟ ಮಾದರಿಯಲ್ಲಿವೆ. ಬಲಗಡೆಯಲ್ಲಿ ೨ ಪ್ರೇತಗಳ ಚಿತ್ರವಿದ್ದು, ಎಡಗಡೆಯಲ್ಲಿ ನಾಯಿಯು ಭೈರವನ ಕೈಯಲ್ಲಿ ಹಿಡಿದ ತಲೆಯಿಂದ ತೊಟ್ಟಿಕ್ಕುತ್ತಿರುವ ರಕ್ತವನ್ನು ನೆಕ್ಕುತ್ತಿರುವಂತೆ ಚಿತ್ರಿಸಲಾಗಿದೆ. ಮೈಮಾಟ ತಕ್ಕಮಟ್ಟಿಗೆ ಪ್ರಮಾಣಬದ್ಧವಾಗಿದ್ದು ಮೇಲೆ ಹೇಳಿದ ಹಾಗೆ ಈ ನಾಲ್ಕು ಶಿಲ್ಪಗಳು ಸ್ಥಳೀಯ-ಪ್ರಾದೇಶಿಕ ಶೈಲಿಯನ್ನು ವ್ಯಕ್ತಪಡಿಸಿವೆ. ಭೈರವನನ್ನು ಬಾಲಕನಂತೆ ತೋರಿಸಿರುವುದು ಇನ್ನೊಂದು ಗಮನಾರ್ಹ ಸಂಗತಿ. ಹಣೆಯಲ್ಲಿ ಮೂರನೆಯ ಕಣ್ಣು ಸ್ಪಷ್ಟವಾಗಿದೆ.

ಸಾವಿಕೇರಿಯ ದೇವ ದೇವತೆಯರು: ಸಾವಿಕೇರಿಯ ಪುರುಷ ಸ್ತ್ರೀ ದೇವತೆಯರ ಶಿಲ್ಪಗಳು ಶೈಲಿಯ ದೃಷ್ಟಿಯಿಂದ




ಬಾಳೇಹಳ್ಳಿ ಭೈರವ

ಸು. ೧೪-೧೫ನೆಯ ಶತಮಾನಕ್ಕೆ ಸರಿಹೊಂದುತ್ತವೆ. ಪುರುಷದೇವತೆಯ ವಿಗ್ರಹದಲ್ಲಿ ದೇವತೆಯು ಚತುರ್ಭುಜನಾಗಿದ್ದು ಮುಂದಿನ ಬಲಗೈಯಲ್ಲಿ ಇನ್ನೂ ಗುರುತಿಸಬೇಕಾದ ಆಯುಧದ ಚಿತ್ರಣವಿದೆ. ಹಿಂದಿನ ಬಲಗೈಯಲ್ಲಿ ಅಂಕುಶ, ಹಿಂದಿನ ಎಡಗೈಯಲ್ಲಿ ಪಾಶ ಮುಂದಿನ ಎಡಗೈಯಲ್ಲಿ ಬಹುಬೀಜಫಲ, ತಲೆಯ ಕೂದಲಿನ ಮಾಟವು ಜೈನತೀರ್ಥಂಕರ ಶಿಲ್ಪದಲ್ಲಿರುವಂತೆ ಇದೆ. ಆಭರಣಗಳು ಸ್ಥಳೀಯ ಸಂಪ್ರದಾಯ ತೋರಿಸುತ್ತವೆ. ಬಲಗಡೆಯಲ್ಲಿ ಇನ್ನೂ ಗುರುತಿಸಬೇಕಾದ ಒಂದು ವಾಹನವೋ ಆಯುಧವೋ ಎಂದು ಸಂಶೋಧಕರು ಗಮನಿಸಬೇಕು.

ಇದರಂತೆ ಸ್ತ್ರೀದೇವತೆಯ ಶಿಲ್ಪವು ದ್ವಿಭುಜೆಯಾಗಿ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಹುಬೀಜಫಲ ಹೊಂದಿದೆ. ಪ್ರಭಾವಳಿಯು ರೂಢಿಬದ್ಧ ಶೈಲಿಯಲ್ಲಿದೆ. ಇವೆರಡೂ ಶಿಲ್ಪಗಳು ಬಾಳೇಹಳ್ಳಿಯ ನಾಲ್ಕು ಶಿಲ್ಪಗಳಂತೆ ಸ್ಥಳೀಯ ಇಲ್ಲವೆ ಪ್ರಾದೇಶಿಕ ಶೈಲಿಯಲ್ಲಿವೆ. ಆದರೆ ಬಾಳೇಹಳ್ಳಿಯ ಶಿಲ್ಪಕ್ಕೂ ಸಾವಿಕೇರಿಯ ಶಿಲ್ಪಕ್ಕೂ ಶಿಲ್ಪಶೈಲಿಯಲ್ಲಿ ತುಂಬ ಭಿನ್ನತೆ ಇದೆ. ಆದರೆ ಸಮಕಾಲೀನ ಶಿಲ್ಪಸಂಪ್ರದಾಯದಲ್ಲಿ ಭಿನ್ನ ಭಿನ್ನ ಶೈಲಿಗಳಿರುವದು ಈ ಪ್ರದೇಶದಲ್ಲಿ ಬಳಕೆಯಲ್ಲಿರುವುದು ತಿಳಿದುಬರುತ್ತದೆ.

ಪುರುಷದೇವತೆಯ ಬಲಗೈಯ ವಸ್ತುವು ಗಂಗಾವತಿ ತಾ॥ ಸಾಣಾಪುರದ ಒಂದು ದೇವತೆಯ ಶಿಲ್ಪದಲ್ಲಿಯು ಮುಂದಿನ ವಸ್ತುವಿನಂತಿದೆ. ಈ ವಿಶಿಷ್ಟ ಪ್ರಕಾರದ ವಸ್ತು ಸಾಮಾನ್ಯವಾಗಿ ವಿಜಯನಗರಕಾಲದ ಆದಿಭಾಗದ ಶಿಲ್ಪಗಳಲ್ಲಿ ಕಂಡುಬರುತ್ತಿವೆ. ಇವುಗಳ ಕಾಲವನ್ನು ಸದ್ಯಕ್ಕೆ ಕ್ರಿ.ಶ. ೧೪-೧೫ನೇ ಶತಮಾನವೆಂದು ನಿರ್ಧರಿಸಬಹುದು.

ಬೇಡಪಡೆ: ಸಾವಿಕೇರಿಯ ಮೂರು ಶಿಲ್ಪಗಳು ಬಾಳೇಹಳ್ಳಿಯ ಶಿಲ್ಪಗಳಂತೆ ಗಮನಾರ್ಹವಾಗಿವೆಯಷ್ಟೆ, ಅವುಗಳಲ್ಲಿ ಸಪ್ತಬಿಲ್ಲುಧಾರಿಗಳ ಬೇಡರಪಡೆಯ ಫಲಕವು ಅನುಪಮವೆಂದೇ ಹೇಳಬೇಕು. ಇದುವರೆಗೆ ನನಗೆ ತಿಳಿದಮಟ್ಟಿಗೆ ಇಂಥ ಶಿಲ್ಪ ಕರ್ನಾಟಕದಲ್ಲಿ ಮತ್ತೊಂದು ದೊರೆತಿಲ್ಲ. ಈ ಶಿಲಾಫಲಕವು ಅಜಮಾಸು ೨.೫ ಅಡಿ ಎತ್ತರ ೪ ಅಡಿ ಉದ್ದವಾಗಿದೆ. ಎಡಗಡೆಯಿಂದ ಏಳುಜನ ವಿಶೇಷ ವಿನ್ಯಾಸದ



ಮೂಲಕ ನಿಂತಭಂಗಿಯ ಬಿಲ್ಲುಧಾರಿಗಳು ಮತ್ತು ನಾಯಿಯ ಉಬ್ಬುಶಿಲ್ಪಗಳಿವೆ. ಬಿಲ್ಲುಧಾರಿಗಳೆಲ್ಲರೂ ತೋರುಗಾಣಿಕೆಗೆ ಒಂದೇ ರೀತಿಯಲ್ಲಿದ್ದರೂ ಸ್ವಲ್ಪಮಟ್ಟಿಗೆ ದ್ವಿಭಂಗದಲ್ಲಿ ಇದ್ದಾರೆ. ಮಧ್ಯದಲ್ಲಿರುವ ೫ ಶಿಲ್ಪಗಳು ಎತ್ತರದಲ್ಲಿ ಒಂದೇ ಪ್ರಕಾರವಾಗಿದ್ದರೆ, ಎಡಬದಿಯ ಶಿಲ್ಪಗಳು ಎತ್ತರದಲ್ಲಿ ಸ್ವಲ್ಪ ಕಡಿಮೆ ಇವೆ. ಎಡಗಡೆಯಿಂದ ಒಂದನೆಯ ಎರಡನೆಯ ಬಿಲ್ಲುಧಾರಿಯ ಜಟಾಮಕುಟ ಒಂದು ರೀತಿಯಲ್ಲಿದ್ದರೆ, ಉಳಿದ ಬಿಲ್ಲುಗಾರರ ಜಟಾಮುಕುಟ ಇನ್ನೊಂದು ರೀತಿಯಲ್ಲಿವೆ. ಎಲ್ಲರೂ ಆಳೆತ್ತರದ ಬಿಲ್ಲನ್ನು ಎಡಗೈಯಲ್ಲಿ, ಬಲಗೈಯಲ್ಲಿ ಬಾಣಗಳನ್ನು ಹಿಡಿದಿದ್ದಾರೆ. ಸೊಂಟಕ್ಕೆ ಕಠಾರಿ ಬಿಗಿಯಲಾಗಿದೆ. ಇವರ ವೇಷಭೂಷಣ ಒಂದೇ ಮಾದರಿಯಲ್ಲಿವೆ. ಎರಡೂ ನಾಯಿಗಳು ಇಕ್ಕೆಲ್ಲಗಳಲ್ಲಿ ಒಂದೇ ರೀತಿಯಲ್ಲಿದ್ದು ಓಡುವ ಭಂಗಿಯಲ್ಲಿವೆ. ಶೈಲಿಯ ದೃಷ್ಟಿಯಿಂದ ಇದು ೧೩-೧೪ನೆಯ ಶತಮಾನಕ್ಕೆ ಸಂಬಂಧಪಡುವಂತಿದೆ.

ಸ್ಥಳೀಯರು ಈ ಮೂರ್ತಿಯನ್ನು ಬೇಟೆಗಾರರ ಶಿಲ್ಪವೆಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಇತ್ತೀಚಿಗೆ ಹಾನಗಲ್ಲು ತಾಲೂಕಿಗೆ ಹೊಂದಿರುವ ಹಿರೇಕೆರೂರ ತಾ॥ ಹೊನ್ನಾಳಿಯಲ್ಲಿನ ಪುರಾತತ್ವ ಸರ್ವೇಕ್ಷಣ ಇಲಾಖೆಯ ಸಹಾಯಕ ಪುರಾತತ್ವ ಸರ್ವೇಕ್ಷಣಾಧಿಕಾರಿಯಾದ ಶ್ರೀ ಕೇಶವ ಅವರು ತಮ್ಮ ಪ್ರಾದೇಶಿಕ ಅನ್ವೇಷಣೆಯಲ್ಲಿ ಅರಳಿಕಟ್ಟೆ ಮೊದಲಾದ ೩ ಸ್ಥಳಗಳಲ್ಲಿಯ

ದೇವಾಲಯಗಳಲ್ಲಿ ಬೃಹತ್ ಬಿಲ್ಲುಬಾಣಗಳಿರುವದನ್ನು ಶೋಧಿಸಿರುವರು. ಜನರು ಈ ಬಿಲ್ಲುಬಾಣಗಳು ತುಂಬ ಪ್ರಾಚೀನವೆಂದು ಇವುಗಳನ್ನು ಬಿಲ್ಲು ದೇವರುಗಳೆಂದು ಪೂಜಿಸುವರು. ಡಾ॥ ಸುಂದರ ಅವರು ೧೯೯೪ರಲ್ಲಿ ಶಿವಮೊಗ್ಗ ಜಿಲ್ಲೆಯ ಕಮ್ಮಾರಗಟ್ಟೆಯಲ್ಲಿಯ ಕೆಳದಿ ಅರಸರ ಕಾಲದ ಹನುಮಂತದೇವರ ದೇವಾಲಯದಲ್ಲಿ ಸುಮಾರು ೨.೫ ಮೀಟರ ಎತ್ತರದ ಗಟ್ಟಿಮುಟ್ಟಾದ ಕಬ್ಬಿಣದ ಬಾಣವನ್ನು ಶೋಧಿಸಿರುವರು. ಸ್ಥಳೀಯರಲ್ಲಿ ಶ್ರೀರಾಮನು ಲಕ್ಷ್ಮಣ ಸೀತಾದೇವಿಯರೊಡನೆ ಲಂಕೆಯಿಂದ ಅಯೋಧ್ಯೆಗೆ ಹಿಂತಿರುಗುವಾಗ ಇಲ್ಲಿ ಸ್ವಲ್ಪಕಾಲ ತಂಗಿದ್ದು ಆ ಬಾಣವನ್ನು ಇಲ್ಲಿ ಬಿಟ್ಟುಹೋದನೆಂದು ಪ್ರತೀತಿ ಇದೆ. ಆದರೆ ಕಬ್ಬಿಣದ ಬಾಣ ನೋಡಿದರೆ ಅದು ಪ್ರಾಚೀನ ವೆನಿಸುವುದಿಲ್ಲ. ಆದರೂ ಅದರ ಮಾದರಿ ಮತ್ತು ತಾಂತ್ರಿಕ ಲಕ್ಷಣಗಳನ್ನು ನೋಡಿದರೆ ಅವು ಇತ್ತೀಚಿನವೆಂದು ಅಭಿಪ್ರಾಯ ಪಟ್ಟಿರುವರು. ಇಂಥ ಬಾಣಗಳು ಸಮೀಪದ ೨-೩ ಹಳ್ಳಿಗಳಲ್ಲಿರುವದನ್ನು ಸ್ಥಳೀಯರು ತಿಳಿಸಿರುವರು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಕಮ್ಮಾರಗಟ್ಟೆಯಲ್ಲಿ ಪ್ರಾಚೀನಕಾಲದ ಕಬ್ಬಿಣದ ಅದಿರಿನಿಂದ ಲೋಹಮಾಡುವ ತಂತ್ರಗಾರಿಕೆಯ ಕುರುಹು ಶೋಧಿಸಿದ್ದಾರೆ. ಈ ಊರಿನ ಹೆಸರು ಕೂಡ ಈ ಸಂದರ್ಭದಲ್ಲಿ ಅರ್ಥಗರ್ಭಿತವಾಗಿದೆ.

ಒಟ್ಟಿನಲ್ಲಿ ಕೇಶವ, ಗಜಲಕ್ಷ್ಮಿ, ಸರಸ್ವತಿ ಮತ್ತು ಭೈರವ ಈ ನಾಲ್ಕು ಶಿಲ್ಪಗಳು ಶಿಲ್ಪಶೈಲಿಯ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾಗಿವೆ. ಇವೆಲ್ಲವೂ ಹೆಚ್ಚು ಕಡಿಮೆ ಒಂದೇ ಕಾಲದವು. ಬಹುಮಟ್ಟಿಗೆ ೧೩-೧೪ ಶತಮಾನಕ್ಕೆ ಸರಿ ಹೊಂದುವಂಥವು. ಇವು ಶಿಷ್ಟ ಸಂಪ್ರದಾಯದ ಕಲಾಪರಂಪರೆಗೆ ಸೇರದೆ ಸ್ಥಳೀಯ ಅಥವಾ ಪ್ರಾದೇಶಿಕ ಸಂಪ್ರದಾಯಕ್ಕೆ ಸೇರಿದಂತಿವೆ. ಹಾನುಗಲ್ಲ ಪರಿಸರದ ಸಾಮಾಜಿಕ ಇತಿಹಾಸಕ್ಕೆ ಸಂಬಂಧಪಟ್ಟಂತೆ ಪ್ರಾದೇಶಿಕ ಆಭರಣಗಳಿಗೆ ಸಂಬಂಧಪಟ್ಟಂತೆ ಹೊಸ ಹೊಸ ವಿನ್ಯಾಸಗಳು ಇಲ್ಲಿ ಗೋಚರವಾಗಿದೆ. ಈ ಪ್ರಕಾರದ ಶಿಲ್ಪಗಳು ಇನ್ನೂ ಹೆಚ್ಚೆಚ್ಚು ದೊರಕಿದಾಗ ಇವೆಲ್ಲವು ಸ್ಥಳೀಯ ಇಲ್ಲವೆ ಪ್ರಾದೇಶಿಕ ಶೈಲಿಯನ್ನು ಪ್ರತಿನಿಧಿಸುತ್ತವೆಯೆಂದು ಹೇಳಬಹುದು.

ಮೈಮಾಟದಲ್ಲಿ ಗಡಸುತನ ಹೊಂದಿದ ಈ ಮೂರ್ತಿ ಶಿಲ್ಪಗಳೆಲ್ಲವೂ ರೂಢಿಬದ್ಧ ಮಾದರಿಗಳನ್ನು ಅನುಸರಿಸಿದಂತೆ ಕಾಣುತ್ತವೆ. ಮೈಮಾಟದಲ್ಲಿ ಅಷ್ಟಾಗಿ ಪ್ರಮಾಣಬದ್ಧತೆ ಕಂಡು ಬರುವುದಿಲ್ಲ. ಆದರೂ ದೇಹದ ಉಬ್ಬು ತಗ್ಗುಗಳನ್ನು ಸಾಧ್ಯವಾದ ಮಟ್ಟಿಗೆ ಸ್ವಾಭಾವಿಕವಾಗಿ ಕಾಣುವಂತೆ ಮಾಡುವಲ್ಲಿ ಶಿಲ್ಪಿಯ ಪ್ರಯತ್ನ ಸಫಲಗೊಂಡಿದೆ.

ಎರಡನೆಯದಾಗಿ ಈ ಶಿಲ್ಪಗಳಲ್ಲಿ ಕಂಡುಬರುವದು, ಧರಿಸಿದ ಆಭರಣಗಳ ವೈಖರಿ. ಇಲ್ಲಿಯ ಆಭರಣಗಳೆಲ್ಲವೂ ಸಮಕಾಲೀನ ಪ್ರಾದೇಶಿಕ ಆಭರಣಗಳ ಪ್ರತಿರೂಪ. ಶಿಲ್ಪಿಗಳು ಪ್ರಾದೇಶಿಕ ಪರಿಸರದವರಾದುದರಿಂದ ಸಮಕಾಲೀನ ಸಮಾಜದ ಜೀವನ, ಶಿಲ್ಪಗಳಲ್ಲಿ ಎರಕ ಹೊಯ್ದಿದ್ದಾರೆ. ಅಂದ ಮಾತ್ರಕ್ಕೆ ಹಿಂದಿನ ಶಿಷ್ಟಸಂಪ್ರದಾಯದ ಆಭರಣಗಳನ್ನು ಶಿಲ್ಪಿಗಳು ಕೈಬಿಟ್ಟಿರುವರೆಂದು ಹೇಳಲಾಗದು. ಉದಾಹರಣೆಗೆ ಕೇಶವನ ಶಿಲ್ಪದಲ್ಲಿ ವೈಜಯಂತಿಯನ್ನು ನೋಡಬಹುದು. ಇದನ್ನು ಈ ಸ್ಥಳದಲ್ಲಿ ದೊರಕಿದ ಕೇಶವಶಿಲ್ಪದ ವೈಜಯಂತಿಮಾಲೆಗೆ ಹೋಲಿಸಿದರೆ ಸ್ಪಷ್ಟವಾಗುತ್ತದೆ.

ಮೂರನೆಯದಾಗಿ ಕೈಯಲ್ಲಿ ದೇವದೇವತೆಗಳು ಧರಿಸಿದ ಗದಾ ಶಂಖ ಚಕ್ರ ಪದ್ಮಗಳು ಇವುಗಳನ್ನು ಹಿಂದಿನ ಶಿಷ್ಟ ಸಂಪ್ರದಾಯದ ಮಾದರಿಗಳಂತೆ ತೋರಿಸಲು ಪ್ರಯತ್ನಿಸಿದರೂ ಶಿಲ್ಪಿಯ ಸ್ವಂತಿಕೆಯ ಕೈಚಳಕ ಸ್ಪಷ್ಟವಾಗಿ ಇವುಗಳಲ್ಲಿ ನಮೂದಿಸಲ್ಪಟ್ಟಿದೆ. ಇಲ್ಲಿಯ ಮತ್ತೊಂದು ಗಮನಾರ್ಹ ಅಂಶವೆಂದರೆ ಮಾಧವನ ಜೋಡಿಯಾದ ಶ್ರೀದೇವಿ ಭೂದೇವಿಯರನ್ನು ತೋರಿಸದೇ ಗರುಡನನ್ನು ಮಾತ್ರ ತೋರಿಸಿದ್ದು ಅದೂ ಕೂಡ ಮಾಧವನ ಎಡಬದಿಯಲ್ಲಿ ತೋರಿಸಲಾಗಿದೆ. ಶಿಷ್ಟ ಸಂಪ್ರ ದಾಯದ ಶಿಲ್ಪಗಳಲ್ಲಿ ಗರುಡನನ್ನು ಸಾಮಾನ್ಯವಾಗಿ ಬಲಬದಿಯಲ್ಲಿ ತೋರಿಸಲಾಗುತ್ತದೆ.

ಈ ಪ್ರದೇಶದ ಶಿಲ್ಪಶೈಲಿಯಲ್ಲಿ ಪ್ರಾದೇಶಿಕತೆ ಪ್ರಧಾನ ಹಂತದಲ್ಲಿದೆ. ಹಾನಗಲ್ಲ ಕದಂಬರ ಇತಿಹಾಸದ ಅಧ್ಯಯನದಲ್ಲಿ ಇದೊಂದು ಪ್ರಧಾನ ವಿಷಯವೆಂದು ಹೇಳಬಹುದಾಗಿದೆ.

*

ಕಲ್ಲನಗೌಡ ತಿಪ್ಪನಗೌಡ ಪಾಟೀಲ*

ಅಮೀನಗಡದ ಅವಶೇಷಗಳು

ಅಮೀನಗಡವು ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಸಂತೆಯಾಗುವ ಸ್ಥಳ ಹಾಗೂ ದೊಡ್ಡ ಗ್ರಾಮ. ಇದು ಹಿಂದಿನಿಂದಲೂ ಪ್ರಸಿದ್ಧಿ. ರೇಷ್ಮೆಸೀರೆ ತಯಾರಾಗುವ ನೇಕಾರರ ಜನ್ಮಸ್ಥಳ. ಬಾದಾಮಿ ಚಾಲುಕ್ಯರಿಂದ ಕಲ್ಯಾಣ ಚಾಲುಕ್ಯರವರೆಗೆ ಮೆರೆದ ಗಂಡುಮೆಟ್ಟಿನ ತಾಣ. ಇಂಥ ಭೂಮಿಯನ್ನು ೧೬ನೇ ಶತಮಾನದಲ್ಲಿ ವಿಜಾಪುರದ ಆದಿಲ್‌ಷಾಹಿಗಳು ತಮ್ಮ ವಶದಲ್ಲಿ ಇಟ್ಟುಕೊಂಡು ಇರುವಾಗ್ಗೆ ಮೂರುನೂರಾ ಅರವತ್ತು ಹಳ್ಳಿಗಳನ್ನು ರಕ್ಕಸಗಿಯ ನಿಷ್ಠಾವಂತ ರೈತ ಮನೆತನದಲ್ಲಿ ಹುಟ್ಟಿದ, ಸಂಗಪ್ಪ ಉರ್ಫ್‌ಕೆಂಚನ ಗೌಡನೆಂಬ ವೀರಯೋಧನಿಗೆ ಉಂಬಳಿಯನ್ನಾಗಿ, ಈ ಗ್ರಾಮ ಸಮೇತವಾಗಿ ಅಲಿ ಆದಿಲ್‌ಷಾಹಿಗಳು ಕೊಟ್ಟು, ಈತನಿಗೆ ಅಮೀನ ಎಂದು ಆಶೀರ್ವದಿಸಿ, ಅಮೀನಪ್ಪದೇಶಾಯಿ ಎಂದು ಕರೆಯಲಾಯಿತು.

ಮುಂದೆ ಇದೆ ಅಮೀನಪ್ಪ ದೇಶಾಯಿಯು ಹಳ್ಳಿಯ ಪಕ್ಕಕ್ಕೆ ಹೊಂದಿಕೊಂಡು ಸಾಲುಗುಡ್ಡದ ಮೇಲೆ, ಕೋಟೆ ಕಟ್ಟುವ ವಿಚಾರ ಮಾಡಿ, ಈಗಿರುವ ಅಮೀನಗಡದ ಗುಡ್ಡದ ಮೇಲೆ ಕೋಟೆ ಕಟ್ಟಿಸಿದ.

ಕೋಟೆಯ ವಿವರ: ೨೦ ಎಕರೆ ಪ್ರದೇಶವನ್ನು ಗುಡ್ಡದ ಮೇಲೆ ವಿಶಾಲಗೊಳಿಸಲಾಯಿತು. ಚೌಕಾಕಾರವಾಗಿ ಕೋಟೆಯನ್ನು ಕಟ್ಟಲು ಪ್ರಾರಂಭಿಸಿ ನಾಲ್ಕು ದಿಕ್ಕಿನ ಕಡೆ ಅಂದರೆ ಈಶಾನ್ಯ ಆಗ್ನೇಯ ವಾಯುವ್ಯ ನೈರುತ್ಯಗಳಿಗೆ ನಾಲ್ಕು ದೊಡ್ಡ ಪ್ರಮಾಣದ ಹುಡೆವು ಮಾಡಲಾಯಿತು. ಕೋಟೆಯ ಗೋಡೆಗಳನ್ನು ೧೦ ಅಡಿಗಳಷ್ಟು ಅಗಲವಾಗಿ ಕಾಡುಗಲ್ಲಿನಿಂದ ಶುದ್ಧವಾಗಿ ಕಟ್ಟಿ ಪೂರ್ವಕ್ಕೆ ದ್ವಾರವನ್ನು ಹಾಗೂ, ದಕ್ಷಿಣಕ್ಕೆ ಚಿಕ್ಕ ದ್ವಾರವನ್ನು ಮಾಡಿಸಿ ವಳಗಡೆ, ಮಾರುತಿ, ಸಂಗಮನಾಥ, ಕೆಂಚಮ್ಮ ದೇವಸ್ಥಾನಗಳನ್ನು ಕಟ್ಟಿಸಲಾಗಿದೆ.

ಹಾಗೂ ಈಗಿರುವ ಊರ ಮಧ್ಯದಲ್ಲಿ ಜುಮ್ಮಾ ಮಸೀದಿಯನ್ನು ಬನಶಂಕರಿ ದೇವಸ್ಥಾನಗಳನ್ನು ಕಟ್ಟಲಾಗಿದೆ. ಇವು ಭಕ್ತರಿಂದ ಆಗಿರಬಹುದು.

ಕೋಟೆ ಮಧ್ಯದಲ್ಲಿ ನೆಲಮಾಳಿಗೆಗಳು, ಚಿಕ್ಕ ಅರಮನೆ, ಸೈನಿಕರ ವಾಸದ ಮನೆಗಳು, ಮದ್ದು, ಶಸ್ತ್ರಗಳನ್ನು ಬಚ್ಚಿಡಲು ಗವಿ ಗೂಡುಗಳನ್ನು ಹಾಗೂ ಕಣಜ ತುಂಬಲು ಗುದಾಮಗಳನ್ನು ನೀರಿಗಾಗಿ ಚಿಕ್ಕ ಚಿಕ್ಕ ಡೊಣೆಗಳನ್ನು ಮಾಡಿಸಿದ ಅವಶೇಷಗಳು ಕಂಡುಬರುತ್ತವೆ. ಅಮೀನಪ್ಪ ದೇಶಾಯಿ ರೈತರಿಗೆ ಹೊಲಗಳನ್ನು ಕಂದಾಯಕ್ಕೆ ಬಂದ ಆದಾಯದಲ್ಲಿ ಮೂರರಿಂದ ನಾಲ್ಕರವರೆಗೆ, ಭಾಗ ಮಾಡಿ ಒಂದು ಭಾಗವನ್ನು ಅರಸರಿಗೆ, ಒಂದು ಭಾಗವನ್ನು ತಮ್ಮ ಊರಿನ ಆಗುಹೋಗಿನ ವೆಚ್ಚಕ್ಕೆಂದು ತೆಗೆದಿರಿಸುತ್ತಿದ್ದರು. ಆದಿಲ್‌ಷಾಹಿಗಳಿಗೆ ಬಂದ ಆದಾಯದಲ್ಲಿ ಒಂದು ಭಾಗವನ್ನು ಮುಟ್ಟಿಸಿ, ಅಮೀನ ದೇಶಾಯರು ಮನ್ನಣೆ ಪಡೆಯುತ್ತಿದ್ದರು. ಒಮ್ಮೊಮ್ಮೆ ದೇಶಾಯರೇ ಕಂದಾಯವನ್ನು ತಮ್ಮ ಪುರದ ಸಂರಕ್ಷಣೆ ಸಲುವಾಗಿ ಬಳಸುತ್ತಿದ್ದರು. ಬರಗಾಲ ಬಿದ್ದ ವೇಳೆಯಲ್ಲಿ ಅಮೀನಪ್ಪ ದೇಶಾಯರು ತಮ್ಮಲ್ಲಿ ಇದ್ದಂತಾ ಕಣಜವನ್ನು ರೈತರಿಗೂ ಕೂಲಿಜನರಿಗೂ ಹಾಗೂ ತಮ್ಮ ಸಹಾಯಕರಿಗೂ ಕೊಟ್ಟು ಸಲುಹುತ್ತಿದ್ದರು. ಹೀಗಾಗಿ ಈ ಪುರವನ್ನು ಅಮೀನ ದೇಶಾಯರ ಹೆಸರಿನಲ್ಲಿ ಅಮೀನಪುರವೆಂದು ಕರೆಯಲ್ಪಟ್ಟಿತು. ಮುಂದೆ ಆದಿಲ್‌ಷಾಹಿಗಳು ಎಲ್ಲ ಜಮೀನುಗಳನ್ನು ಅಮೀನಪ್ಪ ದೇಶಾಯರಿಗೆ ಒಪ್ಪಿಸಿ ಅವರಿಂದ ಕಂದಾಯವನ್ನು ಪಡೆಯಲು ನಿರ್ಧರಿಸಿದರು.

ಕೆಲವು ದಿನಗಳ ನಂತರ ಛತ್ರಪತಿ ಶಿವಾಜಿಯು ವಿಜಾಪುರವನ್ನು ಗೆದ್ದುಕೊಂಡು ಈ ಅಮೀನಪುರವನ್ನು ತನ್ನ ಸ್ವಾಧೀನ ಪಡೆದುಕೊಂಡು, ಬರತಕ್ಕ ಆದಾಯದಲ್ಲಿ ಸಮಭಾಗ ಮಾಡಿ ಚೌಥಾಯಿ ವಸೂಲು ಮಾಡಿಕೊಳ್ಳಹತ್ತಿದನು. ಹಾಗೂ ಈ ಅಮೀನಪುರವನ್ನು ತನ್ನ ಸ್ವಾಧೀನ ಪಡೆದುಕೊಂಡ ಮೇಲೆ ತನ್ನ ಸೈನಿಕರ ಬಿಡಾರವನ್ನಾಗಿ ಮಾಡಿ ಅದನ್ನೇ ಅಮೀನಗಡವೆಂದು ಕರೆಯತೊಡಗಿದ. ಅದರಂತೆ ಮತ್ತೊಂದು ಗೂಡೂರಿನ ಪಕ್ಕದಲ್ಲಿ ಭೀಮನಾಯಕನಹಳ್ಳಿಯನ್ನು ಶಿವಾಜಿಯು ತನ್ನ ಸೈನಿಕರ ಠಾಣೆಯನ್ನಾಗಿ ಮಾಡಿ ಭೀಮಗಡೆಯೆಂದೆ ಹೆಸರಿಟ್ಟನು.

---

* ಬೆಳಧಡಿ, ಗದಗ ತಾಲೂಕು, ಧಾರವಾಡ ಜಿಲ್ಲೆ.

ಇದೂ ಕೂಡ ಕೋಟೆ ಕೊತ್ತಲಗಳಿಂದ ಶೋಭಿಸುತ್ತಿತ್ತು. ಇಲ್ಲಿ ಅಧಿಕಾರಿಗಳಿಗೆ ಚಾವಡಿ, ಸೈನಿಕರಿಗೆ ವಾಸದ ಮನೆಗಳು ಇದ್ದವು. ಈಗ ಇವು ನೆಲಸಮವಾಗಿ ಕೋಟೆ ಬಿದ್ದು ಹೋಗಿದೆ. ಇದೇ ಕೋಟೆಗೋಡೆಯ ಕಲ್ಲುಗಳನ್ನು ಕಿತ್ತು ಇದೇ ಜಾಗದಲ್ಲಿ ದೊಡ್ಡ ಪ್ರಮಾಣದ ಮಾಗಣಿ ಕೆರೆಯನ್ನಾಗಿ ಮಾಡಲಾಗಿದೆ.

ಸಿಂಧೂರಲಕ್ಷ್ಮಣ ಎಂಬ ಪೈಲವಾನನು ಬ್ರಿಟಿಷ್ ಸೆರೆಯಾಳಗಿದ್ದನು. ಒಮ್ಮೆ ಜೈಲಿನಿಂದ ತಪ್ಪಿಸಿಕೊಂಡು ಬಂದು ಇದೇ ಅಮೀನಗಡದ ಹಾಳಾದ ಕೋಟೆಯೊಳಗೆ ಮಾರುತಿ ದೇವಾಲಯದಲ್ಲಿ ತಲೆಮರೆಸಿಕೊಂಡನೆಂಬ ವದಂತಿ ಇದೆ.

ಅಮೀನಗಡವು ಇಂದಿಗೂ ನೇಕಾರರ ನೆಲೆಯಾಗಿದೆ. ಇಲ್ಲಿ ಸುಪ್ರಸಿದ್ಧವಾದ ಇಳಕಲ್ಲ ಕುಪ್ಪಸಗಳು, ಸೀರೆಗಳು ತಯಾರಿಸುತ್ತಾರೆ. ರಾಯದುರ್ಗದಿಂದ ಇಳಕಲ್ಲವರೆಗೆ ನೇರವಾದ ದಾರಿ ಇದೆ. ಇದು ಹಿಂದಿನ ರಾಜ ಮಾರ್ಗವೆಂದೆ ಹೇಳಬಹುದು. ಹತ್ತಿರದಲ್ಲಿ ಮಲಪ್ರಭಾ ಹೊಳೆ ಹರಿದಿದೆ ಹಾಗೂ ಶಿಲ್ಪಕಲಾ ಸಿರಿಯು ಇಲ್ಲಿ ಕೈಮಾಡಿ ಕರೆಯುತ್ತಿದೆ. ಐಹೊಳೆ ಪಟ್ಟದಕಲ್ಲು ಸೂಲಿಬಾವಿ ಇವು ಸಮೀಪದಲ್ಲಿ ಇವೆ. ಫಲವತ್ತಾದ ಭೂಮಿ ಸಾಕಷ್ಟು ಗುಡ್ಡ ಪ್ರದೇಶ ಕುರಿ ಸಾಕುವುದಕ್ಕೆ ವಿಶೇಷ ಆಶ್ರಯವಾಗಿದೆ. ದೊಡ್ಡ ಪ್ರಮಾಣದ ಸಂತೆ- ದನಗಳ ಹಾಗೂ ಕುರಿಗಳ ಸಂತೆ ನಡೆಯುತ್ತದೆ. ಇಲ್ಲಿಂದ ಗಜೇಂದ್ರಗಡದವರೆಗೂ ವ್ಯಾಪಾರಗಳ ಸಂಬಂಧ ಹೊಂದಿದೆ. ಆದರೆ ಈಗ ಅಮೀನಗಡ ಊರಿನಲ್ಲಿ ಮನೆ ಮತ್ತು ಗುಡಿಗಳಷ್ಟೆ ನೋಡಲು ಸಿಗುತ್ತವೆ. ಕೋಟೆ ಮಾತ್ರ ಬಿದ್ದುಹೋಗಿ ಅದರ ಅವಶೇಷ ಮಾತ್ರ ಕಂಡುಬರುತ್ತದೆ. ಅದರಂತೆ ಈಶ್ವರ ದೇವಾಲಯದ ಮುಂದೆ ಒಂದು ಶಿಲಾಶಾಸನ ಮಾತ್ರ ಇದೆ. ಅದರ ಬಗ್ಗೆ ಶೋಧನೆ ಆಗಬೇಕಾಗಿದೆ.

*

ಡಾ॥ ಹೆಚ್. ಚಂದ್ರಶೇಖರ*

ಕಿತ್ತೂರು ರಾಣಿ ಚೆನ್ನಮ್ಮನ ಸಂಬಂಧಿತ ಸ್ಮಾರಕಗಳು

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮವೆಂದರೆ ೧೮೫೭ರ ಸಿಪಾಯಿದಂಗೆಯೇ, ಪ್ರಥಮ ಹೋರಾಟವೆಂದು ಹೇಳುವ ಕಾಲವೊಂದಿತ್ತು. ಬ್ರಿಟಿಷರ ವಿರುದ್ಧ ಹೋರಾಡಿದ ಮೊದಲ ಮಹಿಳೆ ಝಾಂಸಿಯ ರಾಣಿ ಲಕ್ಷ್ಮೀಬಾಯಿ ಎಂದು ಕನ್ನಡಿಗರೂ ನಂಬಿದ ಕಾಲವೊಂದಿತ್ತು. ಆದರೆ ೧೮೨೪ರಲ್ಲಿಯೇ ಬ್ರಿಟೀಷರ ವಿರುದ್ಧ ಹೋರಾಡಿ, ಒಂದು ಸಲ ಅವರನ್ನು ಸೋಲಿಸಿದ ವೀರಮಹಿಳೆ ಕಿತ್ತೂರು ರಾಣಿಚೆನ್ನಮ್ಮ ಎಂಬುದು ಇಂದಿಗೂ ಉತ್ತರ ಭಾರತದ ಬಹುಪಾಲು ಸಾಮಾನ್ಯರಿಗೆ ಗೊತ್ತಿಲ್ಲ. ಅಂತೆಯೇ ಕನ್ನಡಿಗರಲ್ಲಿಯೂ ಬಹುಪಾಲು ಜನರು ಈ ಸ್ಫೂರ್ತಿದಾಯಕ ಚರಿತ್ರೆಯ ವಿವರಗಳನ್ನು ತಿಳಿದಿಲ್ಲ. ಇಂಥ ವೀರವನಿತೆ ಹುಟ್ಟಿ ಬೆಳೆದ ಬೆಳಗಿದ ಸ್ಥಳಗಳಲ್ಲಿ ಇರುವ ಸ್ಮಾರಕಗಳ ಪರಿಚಯವಂತೂ ಬಹುಪಾಲು ಕನ್ನಡಿಗರಿಗೆ ಗೊತ್ತಿಲ್ಲ. ಕಿತ್ತೂರು ರಾಣಿಚೆನ್ನಮ್ಮನಿಗೆ ಪ್ರತ್ಯಕ್ಷವಾಗಿ ಹಾಗೂ ಅಪ್ರತ್ಯಕ್ಷವಾಗಿ ಸಂಬಂಧಿಸಿದ ಸ್ಮಾರಕಗಳು ಇಂದಿನ ಧಾರವಾಡ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿವೆ. ಅವುಗಳ ಸ್ಥೂಲ ಪರಿಚಯವೇ ಈ ಲೇಖನದ ಉದ್ದೇಶ.

ಕಾಕತಿಯ ಸ್ಮಾರಕಗಳು

ಚೆನ್ನಮ್ಮನು ಕಾಕತಿ ದೇಸಾಯಿ ಧೂಳಪ್ಪಗೌಡ ಮತ್ತು ಪದ್ಮಾವತಿಯವರ ಮಗಳಾಗಿ ೧೭೭೮ರಲ್ಲಿ ಜನಿಸಿದಳು. ಈಕೆ ಹುಟ್ಟಿದ ಸ್ಥಳವಿಂದು ಬೆಳಗಾಂವಿ ನಗರದ ಹೊರವಲಯದಿಂದ ಕೇವಲ ೪-೫ ಕಿ.ಮೀ. ಅಂತರದಲ್ಲಿದೆ. ಈ ಹಳ್ಳಿಯ ಮಧ್ಯದಲ್ಲಿ ಒಂದು ಹಾಳು ಗೋಡೆಗಳಿರುವ ಮತ್ತು ಒಂದು ಶೆಡ್ ಇರುವ ಸ್ಥಳವನ್ನು ಕಾಕತಿ ದೇಸಾಯರ ವಾಡೇವು ಎಂದು ನಂಬುವದು ಕಷ್ಟ. ಆದರೆ ಅದೇ ಕಟುಸತ್ಯ. ಅಲ್ಲಿ ಇರುವ ಬಾವಿ, ದನಗಳು ನೀರುಕುಡಿಯುವ ಕಲ್ಲಿನ ದೊಡ್ಡ ದೋಣಿ ಮತ್ತು ಸೂಕ್ಷ್ಮವಾಗಿ ಗಮನಿಸಿದರೆ ಕಾಣುವ ವಾಡೆಯ ಗೋಡೆಗಳ ಅಧಿಷ್ಠಾನ (Basement) ಮತ್ತು ಮಣ್ಣಿನ ಮೋಟುಗೋಡೆ ಇವಿಷ್ಟು ವಾಡೆಯ ಪಳೆಯುಳಿಕೆಗಳು. ಸುಮಾರು ೧೦೦' ಅಗಲ ೨೦೦' ಉದ್ದದ ನಿವೇಶನದಲ್ಲಿ ವಾಡೆಯ ಗುರ್ತುಗಳು ಕಾಣಸಿಗುತ್ತವೆ.

ಈ ಹಳ್ಳಿಯ ಇನ್ನೊಂದು ಬದಿಯಲ್ಲಿ ಸಿದ್ಧೇಶ್ವರ ಗುಡಿಯ ಸಮೀಪದಲ್ಲಿ ಕೆಲ ಸಮಾಧಿಗಳಿವೆ. ಈ ಸಮಾಧಿಗಳ ರಚನೆ ಮತ್ತು ಚಿಹ್ನೆಗಳನ್ನು ನೋಡಿದರೆ ಲಿಂಗಾಯತರ ಸಮಾಧಿಗಳು ಎಂಬುದರಲ್ಲಿ ಸಂಶಯವಿಲ್ಲ. ಅವುಗಳಲ್ಲಿ ಒಂದು ಸಮಾಧಿ ಸುಮಾರು ೧೦' ಎತ್ತರವಿದೆ. ಚೌಕಾಕಾರವಾಗಿದೆ. ಸಮಾಧಿಯ ಗೋಡೆಯೊಂದರ ಮಾಡದಲ್ಲಿ ಕುದುರೆಯ ಮೇಲೆ ಕುಳಿತ ಸರ್ದಾರನ ಉಬ್ಬುಶಿಲ್ಪವಿದೆ. ಸಮಾಧಿಯ ಮೇಲೆ ಹೆಸರನ್ನು ಕೆತ್ತಿಲ್ಲ. ಬಹುಶಃ ಕಾಕತಿ ದೇಸಾಯರಲ್ಲಿ ಅತ್ಯಂತ ಮುಖ್ಯನಾದ ಧೂಳಪ್ಪಗೌಡನ ಸಮಾಧಿ ಇದು. ಇದಲ್ಲದೆ ಈ ಸಮಾಧಿಯ ಸುತ್ತಮುತ್ತ ಚಾಲುಕ್ಯ ಶೈಲಿಯ ಶಿಲ್ಪಗಳು ಮತ್ತು ಮಾಸ್ತಿಕಲ್ಲುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಈ ಸಮಾಧಿ ಪ್ರದೇಶದಿಂದ ಕೊಂಚ ದೂರದಲ್ಲಿಯೇ ಬೆಣಚುಕಲ್ಲಿನ (Quartzite) ಬೆಟ್ಟವಿದೆ. ಇದು ಸುತ್ತಲಿರುವ ಪ್ರದೇಶದಿಂದ ಎಲ್ಲಾ ದಿಕ್ಕುಗಳಲ್ಲೂ ಎತ್ತರವಾಗಿದೆ. ಇದನ್ನು ಪ್ರಸ್ಥಭೂಮಿ (Plateau) ಎಂದು ಕರೆಯಲಾಗುತ್ತದೆ. ಈ ಬೆಟ್ಟದ ಮೇಲೆ ಧೂಳಪ್ಪಗೌಡ ಕಟ್ಟಿಸಿದ ಕೋಟೆ ಇದೆ. ಈ ಕೋಟೆಯ ಗೋಡೆಗಳಲ್ಲಿ ಬೆಣಚುಕಲ್ಲು ಮತ್ತು ಪೆಂಟೆಕಲ್ಲುಗಳ (Conglomerate) ಸೈಜುಗಲ್ಲುಗಳಿಂದ ಕಟ್ಟಲಾಗಿದೆ. ಕೋಟೆಯ ನಿವೇಶನ ತುಂಬಾ ಆಯಕಟ್ಟಿನ ಸ್ಥಳ. ಮೇಲೆ ನಿಂತು ನೋಡಿದರೆ ಬಹುದೂರದವರೆಗೂ ಸುತ್ತಲೂ ನಿರಾತಂಕವಾಗಿ ದೃಷ್ಟಿ ಹಾಯಿಸಬಹುದು. ಸೈನ್ಯದ ಚಲನವಲನವನ್ನು ವೀಕ್ಷಿಸಲು ಇದರಿಂದ ಅನುಕೂಲ. ಧೂಳಪ್ಪಗೌಡನ ಕುಶಲ ಬುದ್ಧಿಗೆ ಸಾಕ್ಷಿಯಾಗಿ ನಿಂತಿದೆ ಈ ಕೋಟೆ. ಕೋಟೆಯ ಗೋಡೆಗಳು, ಉಡೇವು ಕಾಲನ ಹೊಡೆತಕ್ಕೆ ಸಿಕ್ಕಿ ಜೀರ್ಣಿಸುತ್ತಲಿವೆ.

* 'ಸಂಗಮ', ಎಂ.ಐ.ಜಿ. ನಂ. ೭೭, ಕೆ.ಹೆಚ್.ಬಿ. ಕಾಲೋನಿ, ಬಸವನಗರ, ಬೆಂಗಳೂರು - ೫೬೦ ೦೭೯

ಕಿತ್ತೂರು ಕೋಟೆ ಮತ್ತು ಅರಮನೆ

ಕಿತ್ತೂರು, ರಾಣಿಚೆನ್ನಮ್ಮನಿಗೆ ಸಂಬಂಧಿಸಿದ ಸ್ಮಾರಕಗಳ ಅತ್ಯಂತ ಪ್ರಮುಖ ಸ್ಥಳ. ಕಿತ್ತೂರು ಬೆಳಗಾಂವಿ ಜಿಲ್ಲೆಗೆ ಸೇರಿದೆಯಾದರೂ ಧಾರವಾಡದಿಂದ ಕೇವಲ ಸುಮಾರು ೩೦ ಕಿ.ಮೀ. ದೂರದಲ್ಲಿರುವ ಒಂದು ಸಣ್ಣಹಳ್ಳಿ. ಇದು ಅಂದು ತುಂಬಾ ಸುಂದರವಾದ ಹಾಗೂ ವ್ಯವಸ್ಥಿತವಾದ ಕೇಂದ್ರ ಸ್ಥಳವಾಗಿತ್ತು ಎಂದು ಊಹಿಸಲು ಇಲ್ಲಿ ಹಲವಾರು ಸ್ಮಾರಕಗಳಿವೆ.

ಕಿತ್ತೂರು ಕೋಟೆ ತನ್ನ ಕಾಲಕ್ಕೆ ಅತ್ಯಂತ ಸುಭದ್ರವಾದ ಕೋಟೆಯಾಗಿತ್ತು. ಇಂದು ಅದು ಹಲವಾರು ಕಡೆ ಬಿದ್ದು ಹಾಳಾಗಿದೆ. ಆದರೆ ಇತ್ತೀಚೆಗೆ ಇದರ ಹೆಬ್ಬಾಗಿಲಿನ ಕಡೆ ಇರುವ ಕೋಟೆಯ ಭಾಗವನ್ನು ಪುನರುತ್ಥಾನಗೊಳಿಸಲಾಗಿದೆ. ಈ ಕಾರ್ಯ ಇನ್ನೂ ಮುಂದುವರೆಯಬೇಕು. ಕೋಟೆಯ ಗೋಡೆಗಳ ಮೇಲೆ ಮರಗಿಡಗಳು ಬೆಳೆಯದಂತೆ ನೋಡಿಕೊಳ್ಳಬೇಕು. ಮರಗಿಡಗಳ ಬೇರುಗಳು ಗೋಡೆಗಳಲ್ಲಿ ಬಿರುಕುಗಳನ್ನುಂಟುಮಾಡುತ್ತವೆ.



ಕಿತ್ತೂರಿನ ಅರಮನೆ ಮತ್ತು ನೀರಿನ ಕಾರಂಜಿ

ಕೋಟೆಯೊಳಗಿರುವ ಅರಮನೆಯು ಇಂದು ಕೇವಲ ಹಾಳುಗೋಡೆಗಳಾಗಿ ನಿಂತಿದ್ದರೂ ತನ್ನ ವೈಭವದ ಕುರುಹುಗಳನ್ನು ಹೊಂದಿದೆ. ಇಂಡೋ ಸಾರ್ಸನಿಕ ಶೈಲಿಯಲ್ಲಿ ರಚಿತವಾಗಿದ್ದ ಈ ಅರಮನೆಯನ್ನು, ಸ್ಥಳೀಯವಾಗಿ ಸಿಗುವ ಕಬ್ಬಿಣದ ಬೆಣಚುಕಲ್ಲಿನ ಚಪ್ಪಡಿಗಳನ್ನು (Banded Ferruinous quartzite) ಜಾಣ್ಮೆಯಿಂದ ಇಟ್ಟಿಗೆಗಳಂತೆ ಉಪಯೋಗಿಸಿ ಗಚ್ಚನ್ನು (Mortar) ಬಂಧಕವನ್ನಾಗಿ ಉಪಯೋಗಿಸಿ ಕಟ್ಟಲಾಗಿದೆ. ಅಳಿದುಳಿದಿರುವ ಭಾಗಗಳನ್ನು ರಾಜ್ಯ ಪುರಾತತ್ವ ಇಲಾಖೆ ಕೆಲವರ್ಷಗಳ ಹಿಂದೆ ಸಂರಕ್ಷಿಸಲು ಕ್ರಮ ಕೈಗೊಂಡು ಶ್ಲಾಘನೀಯ ಕೆಲಸಮಾಡಿದೆ. ಅರಮನೆಯಲ್ಲಿ ನೀರಿನ ಸರಬರಾಜಿನ ವ್ಯವಸ್ಥೆ, ಬಾವಿ, ಅಡುಗೆಮನೆ, ಕಾರಂಜಿ, ಸುಂದರ ಕಲಾಕುಸುರಿಯ ಕೆಲ ಭಾಗಗಳನ್ನು ಉಳಿಸಿಕೊಂಡಿರುವ ಮಾಡಗಳು ಕಿತ್ತೂರು ಅರಸರ ಕಲಾಪ್ರಿಯತೆಯನ್ನು ಸೂಚಿಸುತ್ತವೆ ಮತ್ತು ಆ ಕಾಲದ ಅನಾಮಧೇಯ ಎಂಜಿನಿಯರುಗಳ ನೈಪುಣ್ಯತೆ ಮತ್ತು ಕುಶಲ ಕರ್ಮಿಗಳ ಕೌಶಲ್ಯತನಕ್ಕೆ ಸಾಕ್ಷಿಯಾಗಿವೆ. ದರ್ಬಾರು ಪಟಾಂಗಣವು ಬಹು ಸುಂದರವಾಗಿತ್ತೆಂದು ದಾಖಲೆಗಳಿಂದ ತಿಳಿದು ಬರುತ್ತದೆ. ೧೦೦ ಅಡಿ ಉದ್ದ ಮತ್ತು ೩೦ ಅಡಿಗಳಷ್ಟು ಅಗಲವಾಗಿದ್ದ ಈ ಪಟಾಂಗ್ಣವು ಸುಂದರ ಕೆತ್ತನೆಗಳುಳ್ಳ ಸಾಗವಾನಿ ಮರದ ಸ್ತಂಭ ರಾಜಿಗಳಿಂದಲೂ ಸಭಾ ಮಂಟಪದ ವೇದಿಕೆಯಿಂದಲೂ ಶೋಭಿಸುತ್ತಿತ್ತು. ಅಂದಿನ ಗುಡಿಕಾರರು ಅರಮನೆಯ ಬಾಗಿಲುಗಳನ್ನು ಮತ್ತು ಕಿಟಕಿಗಳನ್ನು ತಮ್ಮ ಕಾಷ್ಟಕಲೆಯಿಂದ ಸಿಂಗರಿಸಿದ್ದರು. ಅಂಥ ಮರದ ಕೆಲವು ಕಲಾಕೃತಿಗಳು ಕೋಟೆಯೊಳಗಿರುವ ಮ್ಯೂಜಿಯಂನಲ್ಲಿವೆ. ಧಾರವಾಡದ ಡೆಪ್ಯುಟಿ ಕಮೀಷನರರ ನಿವಾಸದ ಕಿಟಕಿಗಳು, ಈ ಅರಮನೆಯ ಕಿಟಕಿಗಳೆಂದು ಲಿಂ. ಎಸ್.ಎಸ್. ಒಡೆಯರ ಅವರು ನನ್ನೊಡನೆ ಹೇಳಿದ್ದರು. ಅದರಂತೆ ಹುಬ್ಬಳಿಯ ಮೂರುಸಾವಿರ ಮಠದ ದರ್ಬಾರಹಾಲ್‌ನ ಕಂಬಗಳು ಮತ್ತು ಕಿಟಕಿಗಳು ಕಿತ್ತೂರು ಅರಮನೆಯಿಂದ ತಂದು ಊರಿದ



ಕಿತ್ತೂರು ಅರಸು ಮನೆತನದವರ ಸಮಾಧಿಗಳು (ವೀರಪ್ಪ ದೇಸಾಯಿ, ಮುದಿಮಲ್ಲಪ್ಪ ದೇಸಾಯಿ)

ಕಲಾಕೃತಿಗಳು. ಇವುಗಳನ್ನು ತಂದು ಸಂರಕ್ಷಿಸಿದ ಅಂದಿನ ಮಠಾಧಿಪತಿಗಳ ದೂರದೃಷ್ಟಿಯನ್ನು ಶ್ಲಾಘಿಸಬೇಕು. ಅವುಗಳನ್ನು ಹುಬ್ಬಳ್ಳಿಗೆ ತಂದು ಶ್ರೀಮಠದಲ್ಲಿ ನಿಲ್ಲಿಸಿರದಿದ್ದರೆ ಇಂಥ ಅಪರೂಪದ ಐತಿಹಾಸಿಕ ಮಹತ್ವದ ಕಲಾಕೃತಿಗಳು ಮರೆಯಾಗುತ್ತಿದ್ದವು. ಕಿತ್ತೂರು ಅರಮನೆಯ ವೈಭವವನ್ನು ಜಾನಪದ ಕವಿಯೊಬ್ಬನ ಬಾಯಲ್ಲಿ ಕೇಳೋಣ:

"ನಟ್ಟ ನಡುವೆ ಉತ್ಕೃಷ್ಟವಾದ ಅರಮನೆ
ಭಟ್ಟಂಗಿ ಹೊಗಳುವಂಥ ದರ್ಬಾರ
ರತ್ನಖಚಿತ ಸಿಂಹಾಸನ, ಸುತ್ತು ತಡೆ"
ಮುತ್ತಿನ ತೋರಣ ಭರಪೂರ!

ಕಿತ್ತೂರು ಅರಸರ ಸಮಾಧಿಗಳ ದುಸ್ಥಿತಿ

ಕಿತ್ತೂರು ಅರಸುಮನೆತನದವರ ಒಟ್ಟು ಆರು ಸಮಾಧಿಗಳು ಕಲ್ಮಠ ಅಥವಾ ರಾಜಗುರು ಮಠದ ಆವರಣ ದಲ್ಲಿವೆ. ಇವು ಸಾಧಾರಣ ಕಟ್ಟಡಗಳು. ಮುದಿಮಲ್ಲಪ್ಪ ದೇಸಾಯರ ಸಮಾಧಿಯ ಮೇಲೆ ಇರುವ ನಂದಿ ವಿಗ್ರಹವು ಚಿಕ್ಕದಾದರೂ ಸುಂದರವಾಗಿದೆ. ಆದರೆ ಆಧುನಿಕ ಕಲಾಕಾರರ (?) ಕಲ್ಲುಗಳಿಗೆ ಬಲಿಯಾಗಿ ಇನ್ನು ಸ್ವಲ್ಪ ವರ್ಷಗಳಲ್ಲಿ, ರಕ್ಷಣೆ ನೀಡದಿದ್ದರೆ ವಿರೂಪವಾಗುವದರಲ್ಲಿ ಸಂದೇಹವಿಲ್ಲ. ವೀರಪ್ಪ ದೇಸಾಯಿಯ ಸಮಾಧಿಯು ಎಲ್ಲ ಸಮಾಧಿಗಳಿಗಿಂತ ಕೊಂಚ ಭಿನ್ನವಾಗಿದೆ. ಸಮಾಧಿಯು ನೆಲಮಾಳಿಗೆಯಲ್ಲಿದೆ. ನೆಲದ ಮೇಲೆ ಇರುವ ಕೋಣೆಯಿಂದ ನೆಲಮಾಳಿಗೆಗೆ ಇಳಿಯಲು ಮೆಟ್ಟಲುಗಳಿವೆ. ಕೋಣೆಯ ಬಾಗಿಲಿನ ಚೌಕಟ್ಟು ಚಾಲುಕ್ಯ ಶೈಲಿಯ ಅನುಕರಣೆಯಾಗಿದೆ. ತಲೆಪಟ್ಟಿಯಲ್ಲಿ ಕಿತ್ತೂರು ಅರಸರ ರಾಜಲಾಂಛನ ನಂದಿಯ ಉಬ್ಬುಶಿಲ್ಪವಿದೆ. ಈ ಬಾಗಿಲು ಚೌಕಟ್ಟು ಮತ್ತು ನಂದಿಯ ವಿಗ್ರಹಕ್ಕೆ ಬಳಸಲಾದ ಗಟ್ಟಿಯಾದ ಫಿಲೈಟ (Massive Phyllite) ಶಿಲೆಯನ್ನು ಬಹುಶಃ ಧಾರವಾಡದ ಬಳಿಯಿಂದ ಅಥವಾ ರಾಣೆಬೆನ್ನೂರಿನ ಬಳಿಯಿಂದ ತಂದಿರಬೇಕು. ಕಿತ್ತೂರು ಅರಸರಲ್ಲಿಯೇ ಅತ್ಯಂತ ಶೂರನೂ, ಧೀರನೂ, ಕಲಾಪ್ರೇಮಿಯೂ ಮತ್ತು ರಾಣಿ ಚೆನ್ನಮ್ಮನ ಪತಿಯೂ ಆದ ಮಲ್ಲಸರ್ಜನ ಸಮಾಧಿಯು ಇಂದು ಸಲಿಕೆ, ಗುದ್ದಲಿ, ಹಳೇಪೇಪರು ಇತ್ಯಾದಿ ನಿರುಪಯುಕ್ತ ವಸ್ತುಗಳ ಉಗ್ರಾಣ ವಾಗಿದೆ! ಫಕೀರ ರುದ್ರಸರ್ಜ ಮತ್ತು ಅವನ ಎರಡನೇ ಹೆಂಡತಿ ನಿರಂಜನಿಯ ಸಮಾಧಿಗಳು ಕಲ್ಮಠದ ಹೆಬ್ಬಾಗಿಲಿನ ಬದಿಗೆ ಇವೆ. ಅವುಗಳಿಂದು ಸೈಕಲ್ ಸ್ಟ್ಯಾಂಡ್‌ಗಳಾಗಿವೆ!! ಹೇಗಿದೆ ನೋಡಿ ನಮ್ಮ ಐತಿಹಾಸಿಕ ಪ್ರಜ್ಞೆ!!! ಚೆನ್ನಮ್ಮನ ಮಗ ಬಾಳಪ್ಪದೇಸಾಯಿ ಮತ್ತು ಶಿವಲಿಂಗ ರುದ್ರಸರ್ಜನ ಸಮಾಧಿಗಳು ಮಲ್ಲಸರ್ಜನ ಸಮಾಧಿಯ ಬಳಿಯಲ್ಲಿಯೇ ಇವೆ. ಎಲ್ಲಾ ಸಮಾಧಿಯ ಕಟ್ಟಡದ ಗೋಡೆಗಳ ಮೇಲೆ, ಪಕ್ಕದಲ್ಲಿರುವ ಶಾಲೆಯ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಕೆತ್ತಿ ಅಮರರಾಗಿದ್ದಾರೆ. ನೆಲಗಟ್ಟಿನ ಮೇಲೆ ಹುಲಿಮನೆಯನ್ನು ಗೀಚಿದ್ದಾರೆ ಸೋಮಾರಿಗಳು. ನಾನು ಹೋದಾಗ ಧೂಳು ಮುಚ್ಚಿದ ನೆಲಗಟ್ಟಿನ ಮೇಲೆಯೇ ಕುಳಿತು ಹುಲಿಮನೆಯಾಟ ಆಡುವದನ್ನು ನೋಡಿದ್ದೇನೆ. ನಾವು ನಮ್ಮ ಐತಿಹಾಸಿಕ ಸ್ಮಾರಕಗಳತ್ತ ತೋರುತ್ತಿರುವ ದಿವ್ಯ ನಿರ್ಲಕ್ಷ್ಯತನಕ್ಕೆ




ಬೈಲಹೊಂಗಲಿನ ರಾಣಿ ಚೆನ್ನಮ್ಮ ಸಮಾಧಿಯ ಮೇಲಿನ ರಾಣಿಯ ಶಿಲ್ಪ

ಇವು ಸಾಕ್ಷಿಯಾಗಿವೆ.

ರಾಣಿ ಚೆನ್ನಮ್ಮಾಜಿ ಸಮಾಧಿ

ಕಿತ್ತೂರಿನ ಎರಡನೆಯ ಯುದ್ಧದಲ್ಲಿ (ಡಿಸೆಂಬರ ೩ರಿಂದ ೫, ೧೮೨೪) ಸೋತು ಸೆರೆಯಾದ ವೀರರಾಣಿ ಚೆನ್ನಮ್ಮನನ್ನು ಬೈಲಹೊಂಗಲದಲ್ಲಿ ಬಂದಿಯನ್ನಾಗಿಡಲಾಯಿತು. ಅಲ್ಲಿಯೇ ಕಿತ್ತೂರು ಪುನಃ ಸ್ವಾತಂತ್ರ್ಯ ಪಡೆಯುವ ಕನಸನ್ನೇ ಕಾಣುತ್ತಾ ಚೆನ್ನಮ್ಮ ಫೆಬ್ರುವರಿ, ೨, ೧೮೨೯ರಂದು ಲಿಂಗೈಕ್ಯಳಾದಳು. ಆಕೆಯ ಸಮಾಧಿ, ಇಂದು ಬೈಲಹೊಂಗಲದಲ್ಲಿ, ಚಿಕ್ಕ ಆದರೆ



ನಿರಂಜನೀ ಮಹಲಿನ ಛತ್ತಿನ ನಕಾಶೆ

ಚೊಕ್ಕಟವಾದ ಉದ್ಯಾನವನದ ಮಧ್ಯ ಇದೆ. ಸಮಾಧಿಯ ಮೇಲೆ ಲಿಂಗಪೂಜೆಯಲ್ಲಿ ನಿರತಳಾದ ಚೆನ್ನಮ್ಮನ ಪ್ರತಿಮೆ ನೋಡುಗರ ಮನದಲ್ಲಿ ಭಕ್ತಿಯನ್ನುಂಟುಮಾಡುತ್ತದೆ. ಈ ಪರಿಸರ ನಿಜಕ್ಕೂ ನಾವೆಲ್ಲ ಹೆಮ್ಮೆ ಪಡುವಂತಿದೆ.

ನಿರಂಜನಿ ಮಹಲ್

ಬೈಲಹೊಂಗಲದಿಂದ ಸುಮಾರು ೧೫-೨೦ಕಿ.ಮೀ. ದೂರದಲ್ಲಿ ದೇಸನೂರು ಎಂಬ ಚಿಕ್ಕ ಹಳ್ಳಿ ಇದೆ. ಈ ಹಳ್ಳಿಯಲ್ಲಿ ಕಿತ್ತೂರು ಅರಸುಮನೆತನದ ಒಂದು ಅಮರ ಪ್ರೇಮಗಾಥೆಯ ಕುರುಹುಗಳಿವೆ. ಈ ಅರಸು ಮನೆತನದಲ್ಲಿ ಮಾಳವರುದ್ರಗೌಡ ಅಥವಾ ಫಕೀರ ರುದ್ರಸರ್ಜ ವಿಶಿಷ್ಟ ಮಹತ್ವದ ವ್ಯಕ್ತಿ. ಈತನ ಮೊದಲ ಹೆಂಡತಿ ಮಲ್ಲಮ್ಮ ಧೀರೆ ಮತ್ತು ರಾಜಕಾರಣ ಚತುರೆ. ಫಕೀರ ರುದ್ರಸರ್ಜನು ಮುಸ್ಲಿಂ ಸುಂದರ ತರುಣಿಯನ್ನು ಪ್ರೇಮಿಸಿ, ಲಿಂಗದೀಕ್ಷೆ ಕೊಡಿಸಿ ಮದುವೆಯಾದನು. ಆದರೆ ಇದು ರುದ್ರಸರ್ಜನ ಸೋದರ ಮಲ್ಲಪ್ಪನೂ ಸೇರಿದಂತೆ ಸಂಪ್ರದಾಯ ಶರಣರಿಗೆ ಸರಿದೋರಲಿಲ್ಲ. ಅವರೆಲ್ಲರೂ ವಿರೋಧಿಸಿದರು. ಈ ವಿರೋಧದ ಪರಿಣಾಮವಾಗಿ ರಾಜ್ಯಭಾರದ ಮತ್ತು ಅಧಿಕಾರದ ಆಸೆ ಬಿಟ್ಟು ತನ್ನ ಪ್ರೇಯಸಿಯೊಂದಿಗೆ ದೇಸನೂರನ್ನು ಈ ಅರಸು ಸೇರಿದನು. ಇವನನ್ನು ಇಂಗ್ಲೆಂಡಿನ ದೊರೆ ಎಂಟನೇ ಎಡ್ವರ್ಡನಿಗೆ ಕೆಲವರು ಹೋಲಿಸುತ್ತಾರೆ. ಇಲ್ಲಿ ಫಕೀರ ರುದ್ರಸರ್ಜನು ತನ್ನ ಪ್ರೇಯಸಿಗಾಗಿ ಸುಂದರ ಮಹಲನ್ನು ಕಟ್ಟಿಸಿದನು. ಊರಿನ ಪೂರ್ವಕ್ಕೆ ಇರುವ ಗುಡ್ಡದ ಮೇಲೆ ಭದ್ರವಾದ ಕೋಟೆಯನ್ನು ಕಟ್ಟಿಸಿದನು. ದೇಸನೂರು ಇಂದು ಅತಿ ಚಿಕ್ಕಹಳ್ಳಿ. ಬಹು ಜನರಿಗೆ ಅಪರಿಚಿತ. ಬಹುತೇಕ ಇತಿಹಾಸಕಾರರೂ ಈ ಹಳ್ಳಿಯಲ್ಲಿ ಇಲ್ಲಿರುವ ಸ್ಮಾರಕವನ್ನು ನೋಡಿಲ್ಲವೆಂದು ತೋರುತ್ತದೆ. ನನಗೆ ತಿಳಿದ ಮಟ್ಟಿಗೆ ಇಲ್ಲಿರುವ ನಿರಂಜನಿ ಮಹಲಿನ ಬಗ್ಗೆ ಇದೇ ಮೊದಲ ವಿವರಣೆ. ಈ ಊರು ತುಂಬಾ ಫಲವತ್ತಾದ ಭೂಮಿ. ಅಂತರ್ಜಲ ಸಮೃದ್ಧಿಯಾಗಿರುವದರಿಂದ ಬಾವಿ ನೀರಾವರಿಯಿಂದಾಗಿ ನೆಲ ಸದಾ ಹಸಿರುಡುಗೆಯನ್ನುಟ್ಟಿರುತ್ತದೆ. ಸೆಪ್ಟೆಂಬರ್-ಅಕ್ಟೋಬರ ಅವಧಿಯಲ್ಲಂತೂ ಪರಿಸರ ಸುಂದರ. ಬಹುಶಃ ಇಲ್ಲಿಯ ಸುಂದರ ಪರಿಸರ ಮತ್ತು ಕಿತ್ತೂರಿನಿಂದ ಇರುವ ಭೌಗೋಳಿಕ ಅಂತರ ಫಕೀರ ರುದ್ರಸರ್ಜ ಮತ್ತು ನಿರಂಜನಿಯನ್ನು ಆಕರ್ಷಿಸಿರಬೇಕು. ಊರಿನ ಉತ್ತರದ ಕೊನೆಯಲ್ಲಿ ಒಂದು ಬಯಲು. ಅಲ್ಲೆಲ್ಲಾ ಕುರುಚಲು ಗಿಡಗಳು ಮತ್ತು ಕಾಂಗ್ರೆಸ್‌ಹುಲ್ಲು ಹುಲುಸಾಗಿ ಬೆಳೆದಿವೆ. ಈ ಬಯಲಿನ ಒಂದು ಕೊನೆಯಲ್ಲಿ ಒಂದು ಬಿಳಿ ಸುಣ್ಣ ಬಳಿದ ಹಲವಾರು ಕಡೆ ಬಿರುಕು ಬಿಟ್ಟ, ಗಚ್ಚಿನ ಪ್ಲಾಸ್ಟರ್ ಹೊಂದಿರುವ ಚೌಕಾಕಾರದ ಕಟ್ಟಡವಿದೆ. ಹೊರಗಿನಿಂದ ನೋಡಲು ವಿಶೇಷತೆ ಕಾಣದು. ಕಮಾನುಗಳು ಮಾತ್ರ ವಿಶೇಷ. ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕು. ಇಲ್ಲವಾದರೆ ಹೊಲಸಿನ ಮೇಲೆ ಕಾಲಿಡುತ್ತೀರಿ. ಒಳಹೊಕ್ಕಾಗ ಇದೊಂದು ಸ್ನಾನಗೃಹ ಎಂಬ ಭಾವನೆ ಬರುತ್ತದೆ. ಈ ಕಟ್ಟಡದ ಒಳಗಣ ಛತ್ತು ಸುಂದರ ಕುಸುರಿ ಕೆಲಸದ ಗಿಲಾವಿನಿಂದ ಸಿಂಗರಿಸಲ್ಪಟ್ಟಿದೆ. ಬಹುಶಃ ಇಲ್ಲಿ ಕನ್ನಡಿಗಳನ್ನು ಅಂಟಿಸಿದ್ದಿರಬಹುದು. ಇದನ್ನು ನೋಡಿದಾಗ ನನಗೆ ಆಗ್ರಾದ ಶೀಷಮಹಲ್ ನೆನಪಾಯಿತು. ಕಮಾನುಗಳಿಂದ ಕೆಳಕ್ಕೆ ಇಳಿದರೆ ಮಧ್ಯದಲ್ಲಿ ಒಂದು ಚಿಕ್ಕ ಅಗಲದ ಬಾವಿ ಇದೆ. ಈ ಕಟ್ಟಡದ ಸುತ್ತಲಿನ ಪರಿಸರವನ್ನು ಶುಚಿಗೊಳಿಸಿ, ಉತ್ಖನನ ಮಾಡಿದರೆ ಈ ಮಹಲಿನ ಉಳಿದ ಭಾಗದ ಕುರುಹುಗಳು ಸಿಗಬಹುದು. ಈಗ ಉಳಿದಿರುವ ಕಟ್ಟಡ ತಕ್ಷಣದಲ್ಲಿ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ಒಂದೆರಡು ವರ್ಷಗಳಲ್ಲಿ ನೆಲಸಮ ವಾದೀತು.

ವಿಜಯದ ಪತಾಕೆಗಳು

ವೀರರಾಣಿ ಚೆನ್ನಮ್ಮನ, ವೀರ ಅಮಟೂರು ಬಾಳಪ್ಪನ ಮತ್ತು ಕಿತ್ತೂರು ವೀರರ ವಿಜಯದ ಪತಾಕೆಗಳಂತಿರುವ ಹಲವು ಸ್ಮಾರಕಗಳು ಧಾರವಾಡದಲ್ಲಿವೆ. ಧಾರವಾಡ ಬೆಳಗಾಂವಿಯ ಹೆದ್ದಾರಿಯ ಪಕ್ಕದಲ್ಲಿ ಕಿತ್ತೂರು ಯುದ್ಧದಲ್ಲಿ ಮಡಿದ ಬ್ರಿಟಿಷ್ ಸೈನಿಕರಿಗಾಗಿ ಬ್ರಿಟಿಷ್ ಸರ್ಕಾರ ಕಟ್ಟಿಸಿರುವ ಸ್ಮಾರಕ ಸ್ತಂಭವಿದೆ. ಅದರ ಅಡಿಯಲ್ಲಿ ಕಿತ್ತೂರು ಸೈನಿಕರನ್ನು ತೆಗಳುವ ಮತ್ತು ಬ್ರಿಟಿಷ್ ಸೈನಿಕರನ್ನು ಹೊಗಳುವ ಶಿಲಾಫಲಕವೊಂದು ಇತ್ತಂತೆ. ಆದರೆ ೧೯೪೭ರ ನಂತರ ಆ ಫಲಕವನ್ನು ಕಾಣದಂತೆ ಸಿಮೆಂಟ ಮೆತ್ತಲಾಯಿತೆಂದು ಲಿಂ.ಎಸ್.ಎಸ್. ಒಡೆಯರರು ನನಗೆ ಹೇಳಿದ್ದರು. ಈ ಸ್ತಂಭದ ಸುತ್ತಲೂ "ಕಿತ್ತೂರು ಚೆನ್ನಮ್ಮ ಪಾರ್ಕ್" ಎಂಬ ಹೆಸರಿನ ಸುಂದರ ಹೂದೋಟ ಇದೆ. ಆಗಸ್ಟ್-ಸೆಪ್ಟೆಂಬರ್ ತಿಂಗಳಿನ ಅವಧಿಯಲ್ಲಿ ಈ ಸುಂದರ ಹೂದೋಟ ಕಂಗಳನ್ನು ತುಂಬುತ್ತದೆ.

ಧಾರವಾಡ- ನವಲಗುಂದ ರಸ್ತೆಯ ಬಳಿ, ನಗರದ ಪಶ್ಚಿಮ ಭಾಗದಲ್ಲಿ ಒಂದು ಅತ್ಯಂತ ಮಹತ್ವದ ಸ್ಥಳ, ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಜನರೂ, ಹಂದಿಗಳೂ ಈ ಪ್ರದೇಶವನ್ನು ಬಯಲು ಹೊಲಸುಗೇರಿಯನ್ನಾಗಿ ಬಳಸುತ್ತಾರೆ. ಕಣ್ಣುಗಳನ್ನು ತೆರೆದು, ಮೂಗನ್ನು ಮುಚ್ಚಿಕೊಂಡು ಸಣ್ಣ ದಾರಿಯಿಂದ ಒಳಗೆ ಕಾಲನ್ನು ಎಚ್ಚರಿಕೆಯಿಂದ ಇಡಿರಿ. ಇದೇ ಯೂರೋಪಿಯನ್ ಸ್ಮಶಾನ ಭೂಮಿ. ಬಹುಶಃ ಅಂದು, ಈ ಭಾಗವು ಊರ ಹೊರಗಿದ್ದು ಸುಂದರವಾಗಿದ್ದಿರಬೇಕು. ಇಂದು ಇಲ್ಲಿ ಹೊಲಸು ರಾಜ್ಯ ವಾಳುತ್ತಿದೆ. ಪಕ್ಕದಲ್ಲಿ ದನಗಳನ್ನು, ಕುರಿಗಳನ್ನು ಕೊಯ್ಯುವ ಕಸಾಯಿಖಾನೆ ಮತ್ತು ಮಾಂಸಮಾರಾಟದ ಅಂಗಡಿಗಳಿವೆ. ಇವೆಲ್ಲವನ್ನು ಭಂಡತನದಿಂದ ದಾಟಿ ಹೋದರೆ, ಕಿತ್ತೂರಿನ ಮೊದಲ ಯುದ್ಧದಲ್ಲಿ ಸತ್ತ ಥ್ಯಾಕರೆಯ ಗೋರಿ ಇದೆ. ಇದರ ಪಕ್ಕದಲ್ಲಿಯೇ, ಅದೇ ಯುದ್ಧದಲ್ಲಿ ಸತ್ತ ಕ್ಯಾಪ್ಟನ್ ಬ್ಲ್ಯಾಕ್, ಲೆ.ಸಿವೆಲ್ ಮತ್ತು ಡೇಟನ್ ಮೂವರ ದೇಹದ ಅವಶೇಷಗಳನ್ನು ಹೂತಿಟ್ಟ ಒಂದು ಗೋರಿ ಇದೆ. ಈ ಗೋರಿಗಳ ಮೇಲೆ ಫಿಲ್ಸೈಟ ಶಿಲೆಯ ಫಲಕಗಳಲ್ಲಿ ಇಂಗ್ಲೀಷಿನಲ್ಲಿ ಈ ಕೆಳಗಿನಂತೆ ಕೆತ್ತಲಾಗಿದೆ.

The Remains of
St. John Thackeray, Esq.
Principal Collector & Political Agent
Southern Maratha Doab
Killed in the Insurrection of Kittoor
October 23rd 1824
Are Interrod here

To the Memory of
Captain Black and of
Lt. Sewell and Deighton
Of the Madras Horse
Artillery
Who Lost Their Lives
In Gallantly Attempting
To Quell the Insurection
At Kittoor
On the 23rd of Oct 1824
x x x
Erected by their friends
Who witnessed their devoted
Conduct In that Unfortunate
Affair

ಈ ಗೋರಿಗಳಲ್ಲದೆ ಇತರ ಯೂರೋಪಿಯನ್‌ರ ಗೋರಿಗಳು ಇಲ್ಲಿವೆ. ಈ ಶಿಲಾಫಲಕಗಳನ್ನು ನಾನು ೧೯೮೯ ಮತ್ತು ೯೦ರ ಅವಧಿಯಲ್ಲಿ ನೋಡಿ ಚಿತ್ರಗಳನ್ನು ತೆಗೆದಿದ್ದೆ. ಆದರೆ ಇತ್ತೀಚೆಗೆ ಅಂದ್ರರೆ ೧೯೯೪ರಲ್ಲಿ ಫೋಟೋ ತೆಗೆಯಲು ಹೋದಾಗ ಈ ಶಿಲಾಫಲಕಗಳನ್ನು ಯಾರೋ ಕಿತ್ತುಕೊಂಡು ಹೋಗಿದ್ದಾರೆ. ಅಂದರೆ ಈ ಗೋರಿಗಳನ್ನು ನಾನು ತೆಗೆದಿರುವ ಚಿತ್ರಗಳ ಸಹಾಯದಿಂದಲೂ ಮತ್ತು ನೋಟುಬುಕ್ಕಿನಲ್ಲಿ ಬರೆದುಕೊಂಡಿರುವ ಕರಡು ವಿನ್ಯಾಸದಿಂದಲೂ ಮಾತ್ರ ಗುರ್ತಿಸಲು ಸಾಧ್ಯ.

ಕೆಲ ಸೂಚನೆಗಳು

ಕೊನೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ನೆನಪು. ನಮಗೆ ಸದಾ ಸ್ಫೂರ್ತಿ ನೀಡಲೆಂದು ಈ ಕೆಲವು ಸೂಚನೆಗಳು.

i) ಕಿತ್ತೂರು ಕೋಟೆ, ಅರಮನೆಯ ಆವರಣವನ್ನು ಶುಚಿಗೊಳಿಸಿ, ಪುನರುತ್ಥಾನಗೊಳಿಸಬೇಕು. ಈ ಆವರಣದಲ್ಲಿ ದೆಹಲಿಯ ಕೆಂಪುಕೋಟೆಯಲ್ಲಿ ಮತ್ತು ಹೈದ್ರಾಬಾದ ಬಳಿ ಇರುವ ಗೋಲ್ಕೊಂಡಾ ಕೋಟೆಯೊಳಗೆ ಯೋಜಿಸಿ ಕಾರ್ಯಗತಗೊಳಿಸಿರುವ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮವನ್ನು ಕಿತ್ತೂರಿನ ಎರಡು ಯುದ್ಧಗಳನ್ನು ಆಧರಿಸಿ ರೂಪಿಸಬೇಕು. ಇದು ನಮಗೆ ಸ್ಫೂರ್ತಿದಾಯಕವಾಗುವಂತಿರಬೇಕು.

ii) ಕಿತ್ತೂರು ಅರಸರ ಸಮಾಧಿಗಳಿಗೆ ಸೂಕ್ತ ರಕ್ಷಣೆ ನೀಡಿ ಅವುಗಳ ಸುತ್ತಲೂ ಸುಂದರ ಹೂದೋಟವನ್ನು ಬೆಳೆಸಿ ಅಭಿವೃದ್ಧಿಪಡಿಸಬೇಕು.

iii) ಕಾಕತಿಯಲ್ಲಿರುವ ಚನ್ನಮ್ಮನ ಜನ್ಮಸ್ಥಳವಾದ ವಾಡೆಯನ್ನು ಸರ್ಕಾರ ವಶಪಡಿಸಿಕೊಂಡು ಒಂದು ಸೂಕ್ತ ಸ್ಮಾರಕವನ್ನು ಕಟ್ಟಬೇಕು.

iv) ದೇಶನೂರಿನಲ್ಲಿರುವ ನಿರಂಜನಿ ಮಹಲಿಗೆ ಕೂಡಲೇ ರಕ್ಷಣೆ ಒದಗಿಸಬೇಕು. ಅದನ್ನು ಅಭಿವೃದ್ಧಿಪಡಿಸಬೇಕು.

v) ದೆಹಲಿಯ ಪ್ರಮುಖ ವೃತ್ತವೊಂದರಲ್ಲಿ ಚೆನ್ನಮ್ಮನ ಪ್ರತಿಮೆ ನಿಲ್ಲಿಸಿ ಆ ವರ್ತುಲಕ್ಕೆ ವೀರರಾಣಿಯ ಹೆಸರನ್ನಿಡಬೇಕು. ಆಗ ಮಾತ್ರ ಉತ್ತರದವರಿಗೆ ಝಾಂಸಿ ರಾಣಿಗಿಂತ ೩೪ ವರ್ಷಗಳಿಗೆ ಪೂರ್ವದಲ್ಲಿ ಕರ್ನಾಟಕದಲ್ಲಿ ಬ್ರಿಟಿಶರಿಗೆ ಕನ್ನಡದ ವೀರಮಹಿಳೆ ಸೋಲನ್ನುಣ್ಣಿಸಿದಳೆಂದು ತಿಳಿಯುತ್ತದೆ.

vi) ಧಾರವಾಡದಲ್ಲಿರುವ ಯೂರೋಪಿಯನ್ ಸ್ಮಶಾನ ಮತ್ತು ಸುತ್ತಮುತ್ತಲಿರುವ ಪ್ರದೇಶವನ್ನು ಸರ್ಕಾರ ವಹಿಸಿಕೊಂಡು ಅದನ್ನೊಂದು ಸುಂದರ ಸ್ಮಾರಕವನ್ನಾಗಿ ಪರಿವರ್ತಿಸಬೇಕು.

vii) ಕಿತ್ತೂರಿನ ಮ್ಯೂಜಿಯಂನ್ನು ಅಭಿವೃದ್ಧಿಪಡಿಸಬೇಕು. ಇಲ್ಲವಾದರೆ ಅದನ್ನು ಬೆಳಗಾಂವಿ ಅಥವಾ ಧಾರವಾಡಕ್ಕೆ ಸ್ಥಳಾಂತರಿಸಿ ಒಂದು ದೊಡ್ಡ ಮ್ಯೂಜಿಯಮ್ಮನ್ನು ರೂಪಿಸಬೇಕು. ಅದರಲ್ಲಿ ಕಿತ್ತೂರು ಅರಸರ, ಕಿತ್ತೂರು ಚೆನ್ನಮ್ಮಳ ಮತ್ತು ಅವಳ ನಂತರ ಹೋರಾಟ ನಡೆಸಿದ ಸಂಗೊಳ್ಳಿ ರಾಯಣ್ಣನಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನೂ, ಸ್ಮಾರಕಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ಕಲಾತ್ಮಕವಾಗಿ ಪ್ರದರ್ಶಿಸಬೇಕು.

viii) ಬೆಂಗಳೂರಿನ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ರಾಣಿಯ ಪ್ರತಿಮೆಯೊಂದನ್ನು ಸ್ಥಾಪಿಸಬೇಕು.

(ಕೃತಜ್ಞತೆಗಳು: ನನಗೆ ಧಾರವಾಡದಲ್ಲಿರುವ ಇಂದಿಗೂ ಧಾರವಾಡದ ಬಹುಪಾಲು ನಾಗರಿಕರಿಗೂ ಅಪರಿಚಿತವಿರುವ ಥ್ಯಾಕರೆ ಮತ್ತಿತರ ಗೋರಿಗಳನ್ನು ತೋರಿಸಿದ ಸೌಜನ್ಯಮೂರ್ತಿ ಲಿಂ. ಎಸ್.ಎಸ್. ಒಡೆಯರ್ ಅವರನ್ನು ಕೃತಜ್ಞಪೂರ್ವಕವಾಗಿ ಸ್ಮರಿಸುತ್ತೇನೆ.)

*

ಕೇಶವ ಉಮರ್ಜಿ*

ಹುನ್ನೂರಿನ ಹುಲಿಕೆರೆ - ಒಂದು ವಿವೇಚನೆ

ಬಿಜಾಪುರ ಜಿಲ್ಲೆಯಲ್ಲಿ ಹುನ್ನೂರು ಎಂಬುದು ಒಂದು ದೊಡ್ಡ ಗ್ರಾಮ. ಇದು ಜಮಖಂಡಿ ತಾಲೂಕಿನಲ್ಲಿದೆ. ಈ ಗ್ರಾಮದ ಪಶ್ಚಿಮಕ್ಕೆ ಏರಿಯ ಮೇಲೆ ಇರುವ ಒಂದು ಬೃಹತ್ ಕೆರೆಯೇ ಈ ಹುಲಿಕೆರೆ. ಸುಮಾರು ೫೦೦ ವರ್ಷಗಳ ಹಿಂದೆ ಈ ಗ್ರಾಮವನ್ನಾಳುತ್ತಿದ್ದ **'ನಾಗರಸ'** ಎಂಬ ದೊರೆ ಈ ಕೆರೆಯನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಇದಕ್ಕೆ ಆಧಾರವಾಗಿ ಈ ಕೆರೆಯ ನೀರು ಬಿಡುವ ಒಂದು ಶಿಲೆಯ ಮೇಲೆ 'ನಾಗರಸ' ಎಂಬ ಹೆಸರು ಇದೆ.

ಇದಕ್ಕೆ ಹುಲಿಕೆರೆ ಎಂಬ ಹೆಸರು ಬರಲು ಮುಖ್ಯ ಕಾರಣವೆಂದರೆ, ಈ ಕೆರೆ ನಿರ್ಮಾಣಗೊಂಡಾಗ ಇದು ಗ್ರಾಮದಿಂದ ಹೊರಗೆ ಸ್ವಲ್ಪ ದೂರದಲ್ಲಿತ್ತು. ಇದಕ್ಕೆ ಹೊಂದಿಕೊಂಡು ದಟ್ಟ ಅರಣ್ಯವೂ, ಗುಡ್ಡವೂ ಇದ್ದು ಆ ಗುಡ್ಡದ ಕೊರಕಲಿನಿಂದ ಹರಿದು ಬರುವ ನೀರು ಒಂದು ಹಳ್ಳದ ಮೂಲಕ ಈ ಕೆರೆಗೆ ಬಂದು ಸೇರುತ್ತದೆ. ಈ ಹಳ್ಳದಗುಂಟ ಹಬ್ಬಿಕೊಂಡ ಅರಣ್ಯದಲ್ಲಿ ಹುಲಿಗಳು ವಾಸವಾಗಿದ್ದವೆಂಬುದಕ್ಕೆ ಆಧಾರವಿದೆ. ಆಗಿನ ಅರಸರು ಇಲ್ಲಿ ಹುಲಿಬೇಟೆಯಾಡುತ್ತಿದ್ದರು ಎಂಬುದರಿಂದ ಇದು ತಿಳಿದು ಬರುತ್ತದೆ. ಹೀಗಾಗಿ ಇದಕ್ಕೆ ಹುಲಿಕೆರೆ ಎಂತಲೂ ಇದಕ್ಕೆ ಬಂದು ಸೇರುವ ಹಳ್ಳಕ್ಕೆ **ಹುಲಿಕೋಡಿ** ಎಂತಲೂ ಹೆಸರು ಬಂದಿದೆ.

ಈ ಕೆರೆಯು ಸುಮಾರು ೫೦ ಅಡಿ ಆಳವಾಗಿಯೂ ಮುನ್ನೂರು ಅಡಿ ವ್ಯಾಸ ಉಳ್ಳದ್ದೂ ಇದ್ದು ಈಗಿನ ಅಂದಾಜು ಸುಮಾರು ಎರಡು ಟಿ.ಎಂ.ಸಿ. ನೀರು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಈ ಕೆರೆಯಿಂದ ನೂರು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿತ್ತು. ಅಂದರೆ ಈ ಕೆರೆಯು ಗ್ರಾಮಕ್ಕಿಂತ ಎತ್ತರವಾಗಿ ಏರಿಯ ಮೇಲೆ ಇರುವುದರಿಂದ ಈ ಕೆರೆಯಲ್ಲಿ ಸಂಗ್ರಹವಾದ ನೀರನ್ನು ಬೇಸಿಗೆಯಲ್ಲಿ ಇಳುಕಲಿನ ಚಿಕ್ಕ ಕಾಲುವೆಯ ಮೂಲಕ ಜಮೀನುಗಳಿಗೆ ಹಾಯಿಸಿ (ಎರಡನೆಯ ಪೀಕು ಎಂದು ಕರೆಯುವ) ಬೇಸಿಗೆ ಬೆಳೆಯನ್ನು ಬೆಳೆಯುವ ಪದ್ಧತಿ ರೂಢಿಯಲ್ಲಿತ್ತು. ಹೀಗಾಗಿ ಹುನ್ನೂರು ಗ್ರಾಮವು ಆಹಾರ ಧಾನ್ಯಗಳ ಕೊರತೆಯನ್ನೆದುರಿಸದೇ ಸಂಪದ್ಭರಿತವಾಗಿತ್ತು. ಆದರೆ ಇಂದು ಕೆರೆಯ ನೆರೆಯ ರೈತರು ತಮ್ಮ ಜಮೀನುಗಳಿಗೆ ಬಾವಿ ತೋಡಿಕೊಂಡು ಸ್ವಂತ ನೀರಾವರಿ ಮಾಡಿಕೊಂಡಿದ್ದರಿಂದ ಈ ಕೆರೆಯನ್ನು ಹೆಚ್ಚಿನ ರೈತರು ಅವಲಂಬಿಸಿಲ್ಲ. ಆದರೆ ಇಂದಿಗೂ ತುಂಬಿಕೊಳ್ಳುವ ಈ ಕೆರೆಯ ನೀರು ಮಾತ್ರ ಗ್ರಾಮದ ನೀರಿನ ಕೊರತೆಯನ್ನು ನೀಗಿಸಿ ನಿತ್ಯ ಗ್ರಾಮೀಣ ಬದುಕಿಗೆ ಆಸರೆಯಾಗಿ ಆವಶ್ಯಕವೆನಿಸಿದೆ ಎಂದರೆ ತಪ್ಪಾಗಲಾರದು.

ಆದರೆ ಈಗ ಮೊದಲಿನ ಆ ಅರಣ್ಯವೂ ಇಲ್ಲ ಮತ್ತು ಹುಲಿಗಳೂ ಇಲ್ಲ. ಅರಣ್ಯವಿಲ್ಲದ್ದರಿಂದ ಮಳೆಯೂ ಕಡಿಮೆಯಾಗಿ ಹುಲಿಕೋಡಿಯು ತುಂಬಿ ಹರಿಯುವದೂ ಇಲ್ಲ. ಆದರೆ ಗುಡ್ಡದ ದಂಡೆಗುಂಟ ನಿರ್ಮಿಸಿರುವ ಮಲಪ್ರಭಾ ಎಡದಂಡೆ ಕಾಲುವೆಯ ನೀರನ್ನು ಹಳ್ಳದ ಮೂಲಕ ಬಿಟ್ಟುಕೊಂಡು ಗ್ರಾಮಸ್ಥರು ಹುಲಿಕೆರೆಯನ್ನು ತುಂಬಿಕೊಳ್ಳುತ್ತಾರೆ. ಮಳೆಗಾಲ ಪೂರ್ತಿ ಮಳೆ ಮತ್ತು ಕಾಲುವೆಯ ನೀರು ಹರಿದು ಬಂದು ತುಂಬಿದ ಕೆರೆ ಬೇಸಿಗೆಯ ಪೂರ್ತಿ ಬತ್ತದೆ ಗ್ರಾಮಸ್ಥರ ವರ್ಷ ಪೂರ್ತಿ ಬಳಕೆಗೆ ಸಹಾಯಕಾರಿಯಾಗಿದೆ.

*

* ಸಿಂಡಿಕೇಟ್ ಬ್ಯಾಂಕ್, ಜಮಖಂಡಿ-೫೮೭ ೩೦೧, ಬಿಜಾಪುರ ಜಿಲ್ಲೆ.

ಡಾ॥ ಕೆ.ಎಂ. ಸುರೇಶ್ *

ತಿಮ್ಮಲಾಪುರದ ಗಂಗಾಧರ ಶಿವಮೂರ್ತಿ

ತಿಮ್ಮಲಾಪುರವು, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಒಂದು ಗ್ರಾಮ. ಚಾರಿತ್ರಕ, ಪುರಾತತ್ತ್ವ ದೃಷ್ಟಿಯಿಂದ ಬಹು ಮುಖ್ಯವಾಗಿದೆ. ಇಲ್ಲಿಯ ದೇವಾಲಯಗಳು, ಬುರುಜುಗಳು, ಶಿಲ್ಪಗಳು ಶಾಸನಗಳು ನಮ್ಮ ಗಮನವನ್ನು ಸೆಳೆಯುತ್ತವೆ.

ಸ್ಥಳ ಪುರಾಣದ ಪ್ರಕಾರ ತಿಮ್ಮಲಾಪುರವು ಹಂಪೆಯ ಶ್ರೀ ವಿರೂಪಾಕ್ಷನ ಪತ್ನಿ ಪಂಪಾದೇವಿಯ ತವರಾಗಿತ್ತೆಂದು ತಿಳಿಯುತ್ತದೆ.

ಚಾರಿತ್ರಿಕ ಹಿನ್ನಲೆ

ಶಾಸನಾಧಾರಗಳಿಂದ ಈ ಗ್ರಾಮನಿರ್ಮಾಣ ಕುರಿತಂತೆ ಸ್ಪಷ್ಟವಾದ ಸಂಗತಿ ತಿಳಿದುಬರುತ್ತದೆ. ಕೂಡ್ಲಿಗಿ ತಾಲ್ಲೂಕಿನ ಚಿಕ್ಕ ಕೆರಿಯಗಿನಹಳ್ಳಿಯ ಕ್ರಿ.ಶ. ೧೫೩೯ ರ ಶಾಸನದ ಪ್ರಕಾರ ಅಚ್ಯುತ ರಾಯನ ಅಧಿಕಾರಿ ಮತ್ತು ಕೊಂಡವೀಡು ಪ್ರದೇಶದ ಅಧಿಕಾರಿಯಾದ ಬಯಕಾರ ರಾಮಪ್ಪಯ್ಯನು ತನ್ನ ತಂದೆ ಹಿರಿಯ ತಿಮ್ಮರಸಯ್ಯ ಅಥವಾ ಪೆದ್ದತಿಮ್ಮಯ್ಯನಿಗೆ ಪುಣ್ಯವಾಗಲೆಂದು ತಿಮ್ಮಲಾಪುರವೆಂಬ ಹೆಸರಿನಲ್ಲಿ ಅಗ್ರಹಾರವನ್ನು ಸ್ಥಾಪಿಸುತ್ತಾನೆ, ಮತ್ತು ಇಲ್ಲಿ ಗೋಪಿನಾಥ, ಬಾಚೇಶ್ವರ ಅಮ್ಮೇಶ್ವರ - ಕೃಷ್ಣೇಶ್ವರ ಎಂಬ ತ್ರಿಕೂಟ ದೇವಾಲಯ ಹಾಗೂ ಇತರೆ ದೇವಾಲಯಗಳನ್ನು ನಿರ್ಮಿಸಿ, ಹೊಳಗುಂದಿ ಎಂಬ ಗ್ರಾಮವನ್ನು ಪೂಜೆ ಪುನಸ್ಕಾರಕ್ಕಾಗಿ ದತ್ತಿಬಿಟ್ಟುಕೊಡುತ್ತಾನೆ. ತ್ರಿಕೂಟ ದೇವಾಲಯದ ಈಶ್ವರ ಲಿಂಗಗಳ ಹೆಸರುಗಳು, ಬಯಕಾರ ರಾಮಪ್ಪಯ್ಯನು ತನ್ನ ಚಿಕ್ಕಪ್ಪ ಬಾಚರಸ, ಚಿಕ್ಕಮ್ಮ ಅಮ್ಮಾಜಮ್ಮ ಹಾಗೂ ಸಹೋದರ ಕೃಷ್ಣಪ್ಪನವರ ಹೆಸರಿನಲ್ಲಿ ಕಟ್ಟಿಸಿದ ಲಿಂಗಗಳಾಗಿವೆ. ಬಯಕಾರ ರಾಮಪ್ಪನು ವಿಜಯನಗರದ ದೊರೆಗಳಾದ ಅಚ್ಯುತರಾಯ ಹಾಗೂ ಸದಾಶಿವರಾಯರ ನಿಷ್ಠಾವಂತ ಅಧಿಕಾರಿಯಾಗಿ, ಕೊಂಡವೀಡು ಪ್ರದೇಶವನ್ನು ಆಳುತ್ತಿದ್ದ.

ಪೌರಾಣಿಕ ಪರಂಪರೆ :

ಶಿವನ ಸೌಮ್ಯರೂಪಗಳಲ್ಲಿ ಒಂದಾದ ಗಂಗಾಧರ ಮೂರ್ತಿಯು ಪ್ರಮುಖವಾದದ್ದು. ಈ ಗಂಗಾಧರಮೂರ್ತಿಯ ಹುಟ್ಟು ಬೆಳವಣಿಗೆಯ ಅಧ್ಯಯನವು ಚಾರಿತ್ರ್ಯಕವಾಗಿ ನಡೆಯ ಬೇಕಾಗಿದೆ. ಅತ್ಯಂತ ಸುಂದರ ಹಾಗೂ ಮನಸ್ಸೆಳೆಯುವ ಈ ಮೂರ್ತಿಯ ಉಗಮದ ಕತೆ ಮಹಾಭಾರತದ ವನಪರ್ವದ ೧೦೭ನೆಯ ಅಧ್ಯಾಯದಲ್ಲಿ[೧] ಹೀಗಿದೆ:



'ಸಗರನ ಮಕ್ಕಳು ಸುಟ್ಟುಬೂದಿಯಾಗಿದ್ದು, ಅವರ

* ನಿರ್ದೇಶಕರು, ವಸ್ತುಸಂಗ್ರಹಾಲಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಮಲಾಪುರ - ೫೮೩ ೨೨೧

ಪಾಪವನ್ನು ಹೋಗಲಾಡಿಸಲು ಸ್ವರ್ಗದಿಂದ ಧರೆಗೆ ಗಂಗೆಯನ್ನು ಭಗೀರಥನು ತರಲು ತಪಸ್ಸುಮಾಡಿ ಅವಳನ್ನು ಒಲಿಸಿ ಭೂಮಿಗೆ ಬರುವಂತೆ ಕೋರುತ್ತಾನೆ. ಅವನ ಕೋರಿಕೆಯನ್ನು ಪುರಸ್ಕರಿಸಿದ ಗಂಗೆಯು, ಅವಳ ಬರುವ ವೇಗವನ್ನು ತಡೆಯುವ ಶಕ್ತಿ ಯಾರಿಗಿದೆ ಎನ್ನಲು, ಭಗೀರಥನು ಶಿವನನ್ನು ಮೊರೆಹೋಗುತ್ತಾನೆ. ಶಿವನು ಭಗೀರಥನ ಬೇಡಿಕೆಯಂತೆ ಗಂಗೆಯನ್ನು ನೆಲಕ್ಕೆ ಬೀಳುವ ಮುನ್ನವೇ ತನ್ನ ಜಟೆಯಲ್ಲಿ ಬಂಧಿಸುತ್ತಾನೆ. ಅವಳ ಕೋರಿಕೆಯಂತೆ ಒಂದೇ ಒಂದು ತೊರೆಯನ್ನು ಹೊರ ಬಿಡುತ್ತಾನೆ. ಆ ತೊರೆಯೇ ಗಂಗೆಯಾಗಿ ಹರಿದು ಸಗರನ ಮಕ್ಕಳ ಪಾಪವನ್ನು ತೊಳೆಯುತ್ತಾಳೆ. ಅಂದಿನಿಂದ ಗಂಗೆಯು ಶಿವನ ಮತ್ತೊಬ್ಬ ಸತಿಯಾಗಿದ್ದಾಳೆ.

ಸೌಮ್ಯಕರವಾದ ಗಂಗಾಧರಮೂರ್ತಿಯಾದ ಶಿವನ ಈ ಕತೆಯು ರಾಮಾಯಣ,[2] ಪುರಾಣ[3] ಹಾಗೂ ಆಗಮ ಸಾಹಿತ್ಯದಲ್ಲಿ[4] ಕಂಡುಬರುತ್ತದೆ. ರಾಮಾಯಣ, ವಿಷ್ಣುಪುರಾಣ ಮತ್ತು ಭಾರತದಲ್ಲಿ ಈ ಕತೆಯು ಹೀಗಿದೆ:

'ಇಕ್ಷ್ವಾಕು ವಂಶದ ಸಗರನು ಅಶ್ವಮೇಧ ಯಾಗವನ್ನು ಮಾಡಲು ಉದ್ಯುಕ್ತನಾಗಿ ಅಶ್ವವನ್ನು ದೇಶಸಂಚಾರಕ್ಕೆ ಬಿಡುತ್ತಾನೆ. ಈ ಕುದುರೆಯನ್ನು ಇಂದ್ರನು ಅಪಹರಿಸಿ, ಪಾತಾಳಲೋಕದಲ್ಲಿ ಕಪಿಲಮುನಿಯ ಆಶ್ರಮದಲ್ಲಿ ಬಚ್ಚಿಡುತ್ತಾನೆ. ಕುದುರೆಯ ಪಾದದ ಗುರುತನ್ನರಸಿ ಬಂದ ಸಗರನ ೬೦,೦೦೦ ಮಕ್ಕಳು ಕಪಿಲಮುನಿಯ ಆಶ್ರಮದಲ್ಲಿ ಕುದುರೆಯನ್ನು ಕಾಣುತ್ತಾರೆ. ಹಿನ್ನೆಲೆಯನ್ನರಿಯದೆ ಕಪಿಲಮುನಿಯನ್ನು ಕೊಲ್ಲಲು ಮುಂದಾಗುತ್ತಾರೆ. ಕಪಿಲನು ಅವರನ್ನು ಸುಟ್ಟು ಭಸ್ಮ ಮಾಡುತ್ತಾನೆ. ಅನಂತರ ಸಗರನು ಅಂಶುಮತನನ್ನು ಕುದುರೆಯನ್ನು ಹುಡುಕಲು ಕಳುಹಿಸುತ್ತಾನೆ. ಅವನು ಕಪಿಲಮುನಿಯ ಆಶ್ರಮದಲ್ಲಿ ಕುದುರೆಯನ್ನು ಕಂಡು, ಕ್ಷಮೆಯಾಚಿಸಿ ಕುದುರೆಯನ್ನು ಪಡೆಯುತ್ತಾನೆ. ಕಪಿಲಮುನಿಯು ಕುದುರೆಯನ್ನಿತ್ತು ಭಸ್ಮವಾದ ೬೦ ಸಾವಿರ ಸಗರನ ಮಕ್ಕಳು ಭಗೀರಥನ ಕಾಲದಲ್ಲಿ ಮೋಕ್ಷ ಪಡೆಯುವರೆಂದು ತಿಳಿಸುತ್ತಾನೆ.

ಅಂಶುಮತನ ಮಗ ದಿಲೀಪ. ಅವನ ಪುತ್ರ ಭಗೀರಥನು ಗಂಗೆಯನ್ನು ಧರೆಗೆ ತರಲು ತಪಸ್ಸು ಮಾಡಿ ಗಂಗೆಯನ್ನು ಒಲಿಸುತ್ತಾನೆ. ಗಂಗೆಯು ತನ್ನ ವೇಗವನ್ನು ತಡೆಯಲು ಭೂಮಿಯಲ್ಲಿ ಯಾರೂ ಇಲ್ಲ ಎನ್ನಲು, ಭಗೀರಥನು ಮತ್ತೆ ಶಿವನನ್ನು ಕುರಿತು ತಪಸ್ಸುಮಾಡಿ ಗಂಗೆಯ ವೇಗವನ್ನು ತಡೆಯಲು ಕೇಳುತ್ತಾನೆ. ಅಂತೆಯೇ ಶಿವನು ಗಂಗೆಯನ್ನು ತಡೆಯಲು ನಿರ್ಧರಿಸುತ್ತಾನೆ. ಶಿವನು ತನ್ನ ವೇಗವನ್ನು ತಡೆಯಲು ಶಕ್ತನಲ್ಲ ಎಂದುಕೊಂಡ ಗಂಗೆ ಮಹಾಪ್ರಳಯದಂತೆ ಹಿಮಾಲಯದಲ್ಲಿ ಧರೆಗಿಳಿಯುತ್ತಾಳೆ. ಶಿವನು ಗಂಗೆಯನ್ನು ತನ್ನ ಅಲ್ಲಿಂದ ಸಂಪೂರ್ಣವಾಗಿ ಬಂಧಿಸಬಿಡುತ್ತಾನೆ. ಗಂಗೆ ಶಿವನ ಜಟೆಯಲ್ಲಿ ಬಂಧಿತಳಾಗಿ ಅಲ್ಲಿಂದ ಹೊರಬರದೇ ಇದ್ದಾಗ ಮತ್ತೆ ಭಗೀರಥನು ಶಿವನನ್ನು ಮೊರೆಹೊಕ್ಕು ಗಂಗೆಯನ್ನು ಧರೆಗೆ ಬಿಡುವಂತೆ ಬೇಡುತ್ತಾನೆ. ಗಂಗೆ ಧರೆಗಿಳಿದು ಅವನ ತಾತಂದಿರ ಬೂದಿಯ ಮೇಲೆ ಹರಿದು ಅವರಿಗೆ ಮೋಕ್ಷ ನೀಡುತ್ತಾಳೆ. ಅಂದಿನಿಂದ ಶಿವನು ಗಂಗಾಧರಮೂರ್ತಿಯಾದ.

ಮೂರ್ತಿ ಲಕ್ಷಣ:

ಶಿವನ ಗಂಗಾಧರಮೂರ್ತಿಯ ಪ್ರತಿಮಾ ಲಕ್ಷಣಗಳು, ಅಂಶುಮದ್ಭೇದಾಗಮ, ಕಾಮಿಕಾಗಮ, ಕಾರಣಾಗಮ, ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ಕಂಡುಬರುತ್ತದೆ. ಈ ಮೂರ್ತಿಯ ಪ್ರತಿಮಾ ಲಕ್ಷಣವನ್ನು 'ಶಿಲ್ಪರತ್ನವು' ಈ ರೀತಿ ತಿಳಿಸುತ್ತದೆ: 'ಶಿವನು ಸ್ಥಾನಿಕದಲ್ಲಿದ್ದು (ಆಲೀಢಾಸನದಲ್ಲಿ) ಬಲಗಾಲ ಮೇಲೆ ದೇಹದ ಪೂರ್ಣಭಾರವನ್ನು ಹೊತ್ತಿದ್ದು, ಎಡಗಾಲನ್ನು ಮುಂದಿಟ್ಟು, ಬಾಗಿಸಲಾಗಿದೆ. ಚತುರ್ಬಾಹುಗಳಿಂದ ಕೂಡಿರುವ ಈ ಮೂರ್ತಿಯು ಬಲಗೈ ಉಮೆಯ ಗದ್ದವನ್ನು ಹಿಡಿದಿದ್ದು, ಎಡಗೈ ದೇವಿಯನ್ನು ಆಲಂಗಿಸಿದೆ. ಹಿಂದಿನ ಬಲಗೈಯು ಜಟೆಯನ್ನು ಹಿಡಿದಿದ್ದು, ಎಡಗೈಯು ಮೃಗವನ್ನು ಹಿಡಿದಿರುತ್ತದೆ. ದೇವಿಯು ಪಕ್ಕದಲ್ಲಿದ್ದು ಕೊಂಚ ಅಸೂಯಾಪರಳಾಗಿದ್ದಾಳೆ. (ತನಗೆ ಮತ್ತೊಬ್ಬ ಸವತಿ ಬರುವಳೆಂಬ ಭಾವ) ಅವಳು ಶಿವನ ಪಕ್ಕದಲ್ಲಿದ್ದು (ವಾಮಭಾಗ) ಎಡಗಾಲ ಮೇಲೆ ನಿಂತು, ಬಲಗಾಲನ್ನು ಮುಂದಿಟ್ಟು ನಿಂತಿದ್ದಾಳೆ (ಪ್ರತ್ಯಾಲೀಢಾಸನ). ದ್ವಿಭುಜೆಯಾದ ಅವಳ, ಬಲಗೈಯು ಕೆಳಗೆ ಇಳಿಬಿಟ್ಟಿದೆ. (ಗಜಹಸ್ತ ಅಥವಾ ಡೋಲಹಸ್ತ) ಎಡಗೈಯಲ್ಲಿ ಪದ್ಮವನ್ನು ಹಿಡಿದಿರುತ್ತಾಳೆ.

ಗೋಪಿನಾಥರಾವ್ ಅವರು ತಮ್ಮ ಗ್ರಂಥದಲ್ಲಿ ಗಂಗಾಧರ ಮೂರ್ತಿಯು ಕಂಡುಬರುವ ಸ್ಥಳಗಳನ್ನು ಗುರುತಿಸುತ್ತಾರೆ: ಎಲಿಫೆಂಟಾ, ಕೈಲಾಸನಾಥ ದೇವಾಲಯ, ತಿರುಚನಾಪಳ್ಳಿಯ ಗುಹೆಗಳಲ್ಲಿ, ತಾರಮಂಗಲಮ್‌ದ ಕೈಲಾಸನಾಥಸ್ವಾಮಿ ದೇವಾಲಯಗಳಲ್ಲಿ ಕಂಡುಬರುವ ಮೂರ್ತಿಗಳು.

ತಿಮ್ಮಲಾಪುರದ ತ್ರಿಕೂಟ ಶಿವಾಲಯದ ನವರಂಗ ಮಂಟಪದ ಎಡಕಂಬದಲ್ಲಿ ಗಂಗಾಧರಮೂರ್ತಿಯ ಉಬ್ಬುಶಿಲ್ಪ ಕಂಡುಬರುತ್ತದೆ. ಆ ಮೂರ್ತಿಯ ವಿವರ: ಇಲ್ಲಿ ಶಿವನು ಉಮಾ

ಸಹಿತನಾಗಿದ್ದು, ದ್ವಿಭಂಗಿಯಲ್ಲಿದ್ದಾನೆ. ಷಡ್ಬಾಹುಗಳಿಂದ ಕೂಡಿರುವ ಮೂರ್ತಿಯು ಕಿರೀಟಮಕುಟಧಾರಿಯಾಗಿದ್ದು, ಜಟೆಗಳು ಮಕುಟದಿಂದ ಹೊರಚಾಚಿವೆ. ಬಲಭಾಗದ ಕೈಗಳಲ್ಲಿ ಒಂದು ಉಮೆಯ ಗದ್ದವನ್ನು, ಎರಡನೆಯದು ಡಮರು, ಮೂರನೆಯದು ಜಟೆಯನ್ನು ಬಂಧಿಸುತ್ತಿರುವ ಹಾಗಿದೆ. ಎಡಭಾಗದ ಕೈಗಳಲ್ಲಿ (ನಾಲ್ಕನೆಯ) ಮೃಗವಿದ್ದು, (ಐದನೆಯ) ಉಮೆಯ ಕಂಠವನ್ನು (ಆರನೆಯ ಕೈ) ಸೊಂಟವನ್ನು ಬಳಸಿದೆ. ಜಟೆಯಿಂದ ಗಂಗೆಯು ಹರಿದುಬರುತ್ತಿರುವ ಹಾಗೆ ಚಿತ್ರಿಸಲಾಗಿದೆ. ಉಮೆಯು ದ್ವಿಭಂಗಿಯಲ್ಲಿದ್ದು ಕರಂಡಮಕುಟಧಾರಿಯಾಗಿದ್ದಾಳೆ. ಒಂದು ಕೈ ಶಿವನನ್ನು ಬಳಸಿದ್ದು - ಎಡಕೈಯಲ್ಲಿ - ಪದ್ಮವನ್ನು ಹಿಡಿದಿದ್ದಾಳೆ.

ಶಿವನು ನಾಗಕುಂಡಲ, ಕಂಠಹಾರ, ತೋಳಬಂಧಿ, ಕಂಕಣ,

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ಮಹಾಭಾರತ**, ವನಪರ್ವ, ಅಧ್ಯಾಯ ೧೧೭-೧೧೯, ಪುಟ. ೩೩೭-೩೪೦

೨. **ರಾಮಾಯಣ**, ಭಾಗ ಒಂದು, ಪುಟ. ೩೮-೪೪

೩. **ಭಾಗವತ ಪುರಾಣ**, ೯,೯ **ಭವಿಷ್ಯ ಪುರಾಣ** ೩, ೧, ೪, ೨, **ಮಾರ್ಕಂಡೇಯ ಪುರಾಣ** ೫೭, ೧, ೧೨

೪. **ಪ್ರತಿಮಾ ವಿಲಕ್ಷಣ ವಾಸ್ತುಶಾಸ್ತ್ರ**, ಸಂಪುಟ ೨, ಪುಟ. ೧೪೦-೧೪೧

೫. ಗೋಪಿನಾಥರಾವ್ ಟಿ.ಎ., **ಎಲಿಮೆಂಟ್ಸ್ ಆಫ್ ಹಿಂದು ಐಕನೋಗ್ರಾಫಿ**, ಸಂಪುಟ ಎರಡು, ಭಾಗ ಒಂದು, ಛಾಯಾ ಚಿತ್ರಗಳು XC, XCI, XCIIX, XCIII

ಶೀಲಾಕಾಂತ ಪತ್ತಾರ*

ಕೆಂದೂರಿನ ಕೆಲವು ಗಮನಾರ್ಹ ಶಿಲ್ಪಗಳು

ಬಾದಾಮಿಯಿಂದ ಪಟ್ಟದಕಲ್ಲಿಗೆ ಸ್ಟೇಶನ್ ಮಾರ್ಗವಾಗಿ ಹೋಗುವ ದಾರಿಯಲ್ಲಿ ಬಾದಾಮಿಯಿಂದ ಸುಮಾರು ೮.ಕಿ.ಮೀ. ದೂರದಲ್ಲಿ ಕೆಂದೂರು ಎಂಬ ಗ್ರಾಮವಿದೆ. ಇಲ್ಲಿಂದ ಪೂರ್ವಕ್ಕೆ ಸುಮಾರು ಎರಡು ಕಿ.ಮೀ. ದೂರ ಕ್ರಮಿಸಿದರೆ ಕೆಂದೂರಿನ ಕೆರೆ ಸಿಗುತ್ತದೆ. ಅಲ್ಲಿಂದ ಇನ್ನೂ ಒಂದು ಕಿ.ಮೀ. ಹೋದರೆ ರಸ್ತೆಯ ಎಡಭಾಗದಲ್ಲಿ ಹಾದಿ ಹಣಮಪ್ಪನ ಕಟ್ಟೆ ಕಣ್ಣಿಗೆ ಬೀಳುತ್ತದೆ. ಈ ಹನುಮನ ಶಿಲ್ಪ ಆತುಕೊಂಡಿರುವ ಕಟ್ಟೆ ಪ್ರಾಚೀನ ಗುಡಿಯೊಂದರ ಅಧಿಷ್ಠಾನವಿರಬಹುದೆಂಬುದು ತಿಳಿದು ಬರುತ್ತದೆ. ಈ ಆಧುನಿಕ ಮೂರ್ತಿಯ ಎಡಬದಿಗೆ ಪುಟ್ಟದಾದ ಬಿಡಿ ಶಿಲ್ಪವೊಂದು ಬಿದ್ದುಕೊಂಡಿದೆ. ಅದರ ಇಕ್ಕೆಡೆಗಳಲ್ಲಿ ಬಿಲ್ಲು ಬಾಣಗಳೊಂದಿಗೆ ಇರುವ ಉಷೆ ಪ್ರತ್ಯುಷೆಯರು, ಅದು ಸೂರ್ಯ ಶಿಲ್ಪವೆಂದು ಗುರುತಿಸಲು ನೆರವಾಗುತ್ತದೆ. ಆತನು ತನ್ನೆರಡು ಕೈಗಳಲ್ಲಿ ಹಿಡಿದಿರುವ, ಅಷ್ಟು ಸ್ಪಷ್ಟವಲ್ಲದ, ವಸ್ತುಗಳು ಕಮಲಗಳಾಗಿರಬೇಕು. ಶಿಲ್ಪಕ್ಕೆ ಪ್ರಭಾವಳಿ ಇಲ್ಲ. ಅದರ ಕೆಳಭಾಗದಲ್ಲಿ ಇದ್ದಿರಬಹುದಾದ ಸಪ್ತಾಶ್ವ ಹಾಗೂ ರಥ ಈಗ ಅದರೊಂದಿಗೆ ಕಾಣಸಿಗುತ್ತಿಲ್ಲ. ಈ ಶಿಲ್ಪದ ಭಾವಚಿತ್ರವನ್ನು ನೋಡಿದ ಡಾ॥ ಸುಂದರ ಅವರು ರಾಷ್ಟ್ರಕೂಟರ ಶಿಲ್ಪವಾಗಿರಬೇಕೆಂದು ಊಹಿಸುತ್ತಾರೆ.


ಹನುಮಾನ ಶಿಲ್ಪದ ಮುಂದೆ ಇತ್ತೀಚೆಗೆ ಕಟ್ಟಿದ ಒಂದು ಹೊಂಡದ ಕಟ್ಟೆ ಇದೆ. ಅದನ್ನು ಕಟ್ಟಲು ಪಕ್ಕದಲ್ಲಿಯೇ ದೊರೆತ ಪ್ರಾಚೀನ ಗುಡಿಯೊಂದರ ಕಂಬಗಳನ್ನೇ ಬಳಸಿ ಕಟ್ಟಿದಂತಿದೆ. ಈ ಕಟ್ಟೆಯಲ್ಲಿ ಸುಮಾರು ೫ ಅಡಿ ಉದ್ದವಿರುವ ವೀರಗಲ್ಲೊಂದು ಸಿಲುಕಿಕೊಂಡಿದೆ. ವೀರಗಲ್ಲಿನ ಎರಡು ಚೌಕಟ್ಟುಗಳಲ್ಲಿ ಕೆಳಗಿನದರಲ್ಲಿ ಯೋಧನೊಬ್ಬ ವೈರಿಗಳೊಂದಿಗೆ ಕಾದಾಡುವ ದೃಶ್ಯವಿದೆ. ಆದರೆ ಸುರಾಂಗನೆಯರೊಂದಿಗೆ ವಿಹರಿಸುವ ದೃಶ್ಯ ಸ್ಪಷ್ಟವಿಲ್ಲ. ಮೇಲಿನ ಶಿಲ್ಪಚೌಕಟ್ಟು ಗೋಡೆಯಲ್ಲಿ ಸಿಲುಕಿಕೊಂಡಿರಬಹುದು.

ಈ ಹನುಮನ ಕಟ್ಟೆಯ ಹಿಂದೆ, ದಟ್ಟವಾಗಿ ಮುಳ್ಳು ಪೊದೆಗಳು ಬೆಳೆದುಕೊಂಡಿವೆ. ಸುತ್ತು ಬಳಸಿ ಹಿಂಭಾಗಕ್ಕೆ ಹೋದರೆ ಅಲ್ಲಿ ಕಲ್ಲುಗಳು ಚದುರಿಬಿದ್ದಿವೆ. ಅವುಗಳಲ್ಲಿ ಕೆಲವು ತುಂಡು ತುಂಡಾಗಿರುವ ಶಿಲ್ಪಭಾಗಗಳೂ ಇವೆ. ಮೂರು ತುಂಡಾಗಿ ಅತ್ತಿತ್ತ ಬಿದ್ದ ಭಾಗಗಳನ್ನು ಒಂದೆಡೆ ಕೂಡಿಸಿದಾಗ ಅದೊಂದು ಗಣೇಶ ಶಿಲ್ಪವಾಯಿತು. ಸುಮಾರು ಎರಡು ಅಡಿ ಎತ್ತರದ ಈ ಗಣೇಶನ ಹೊಟ್ಟೆಗೆ ಹಾವಿನ ಕಟ್ಟು ಇದೆ. ಮುಖದಳತೆಯಷ್ಟೇ ದಪ್ಪನಾದ ಸೊಂಡಿಲು ಶಿಲ್ಪ ವಿಶೇಷವೆನಿಸುತ್ತದೆ. ತಲೆ ಭುಜಗಳಲ್ಲಿ ಕುಸಿದು ಕುಳಿತಂತೆ ಭಾಸವಾಗುತ್ತದೆ. ಗಂಟೆಗಳ ಹಾರವೊಂದು ಕಂಠಮಾಲೆಯಾಗಿದೆ. ಅದನ್ನು ಬಿಟ್ಟರೆ ವಿಶೇಷ ಅಲಂಕಾರವಿಲ್ಲದ ದ್ವಿಬಾಹು ಗಣಪತಿ ಈತ. ತಲೆಯ ಮೇಲೆ ಕಿರೀಟ ಇಲ್ಲ. ಮಹಾಕೂಟದ ಮಂಟಪದ ಮುಂದಿರುವ ಬಾದಾಮಿ ಚಾಲುಕ್ಯರ ಗಣಪತಿಯನ್ನು ಗಾತ್ರದಲ್ಲಿ ಹೋಲುವ ಈತ ಆಕಾರದಲ್ಲಿ ಭಿನ್ನನಾಗಿದ್ದಾನೆ. ಇದು ಕೂಡ ರಾಷ್ಟ್ರಕೂಟರ ಕಾಲದ ಶಿಲ್ಪವಾಗಿರಬಹುದೆಂಬ ಅಭಿಪ್ರಾಯ ಡಾ॥ ಸುಂದರ ಅವರದು.

ಸುತ್ತಲಿನ ಜಾಗವನ್ನು ನೋಡಿದ ಯಾವನಿಗೂ ಹಿಂದೊಮ್ಮೆ ಅಲ್ಲಿ ಗುಡಿ ರಚಿಸಲ್ಪಟ್ಟಿರಬೇಕೆಂಬುದು ತಿಳಿಯುತ್ತದೆ. ಈ ಗಣೇಶನ ಹತ್ತಿರವೇ ತುಂಡಾಗಿ ಬಿದ್ದ ಮಹಿಷಮರ್ದಿನಿಯ ಮೂರ್ತಿ ಮುಳ್ಳಿನ ಪೊದೆಯಲ್ಲಿ ಮರೆಯಾಗಿದೆ. ಅದರ ಜೊತೆಗೆ ಇನ್ನೂ ೪-೫ ಶಿಲ್ಪಗಳ ತುಂಡುಗಳು ಕಂಟಿಯಲ್ಲಿ ಅವಿತುಕೊಂಡಿದ್ದುದರಿಂದ ಅವುಗಳ ಚಿತ್ರವನ್ನು ಕ್ಯಾಮೆರಾದಲ್ಲಿ ಹಿಡಿಯಲು ಸಾಧ್ಯವಾಗಲಿಲ್ಲ.

ಈ ಅವಶೇಷಗಳಲ್ಲಿ ಎದ್ದು ಕಾಣುವ ಶಿಲ್ಪವೆಂದರೆ ಎರಡು ತುಂಡಾಗಿ ಬಿದ್ದುಕೊಂಡಿರುವ ಸಪ್ತಮಾತೃಕೆಯರದು. ಒಂದು ತುಂಡಿನಲ್ಲಿ ವೀರಭದ್ರನನ್ನೊಳಗೊಂಡು ನಾಲ್ಕು ಮೂರ್ತಿಗಳಿದ್ದರೆ

* ಆಂಗ್ಲಭಾಷಾ ಉಪನ್ಯಾಸಕರು, ಶ್ರೀ ಜೆ.ಎಂ. ಕಾಲ್ಯಾಣಶೆಟ್ಟಿ ಪದವಿ ಪೂರ್ವ ಮಹಾವಿದ್ಯಾಲಯ, ಬಾದಾಮಿ - ೫೮೭ ೨೦೧



ಸಪ್ತಮಾತೃಕೆಯರು

ಇನ್ನೊಂದರಲ್ಲಿ ಗಣೇಶನನ್ನೊಳಗೊಂಡು ಐದು ಮೂರ್ತಿಗಳಿವೆ. ಈ ಸಪ್ತಮಾತೃಕೆಯರ ವಾಹನಗಳನ್ನು ಶಿಲ್ಪಿಯು ಮಾತೆಯರ ಅಡಿಯಲ್ಲಿಯೇ ಕಂಡರಿಸಿದ್ದಾನೆ. ಶಿಲ್ಪದ ಕೆಳಗಿನ ಪಟ್ಟಿಯಲ್ಲಿ ಪ್ರತ್ಯೇಕವಾಗಿ ಕೆತ್ತಿಲ್ಲದಿರುವುದು ಒಂದು ವಿಶೇಷವೆನಿಸುತ್ತದೆ.

ಹೀಗೆ ಗಣೇಶ ಮಹಿಷಮರ್ದಿನಿ ಹಾಗೂ ಸಪ್ತಮಾತೃಕೆಯರ ಶಿಲ್ಪಗಳನ್ನೊಳಗೊಂಡು ಒಂದು ಶಿವಾಲಯವು ಇಲ್ಲಿದ್ದಿರ ಬಹುದೆಂದು ಊಹಿಸಬಹುದು. ಆದರೆ ಯಾವ ಕಾಲದ್ದಿರಬಹುದು?



ಸಪ್ತಮಾತೃಕೆಯರು

ಇದಕ್ಕೆ ನಿಚ್ಚಳವಾಗಿ ಉತ್ತರಿಸುವ ಶಿಲಾಶಾಸನ ಅಕ್ಕ ಪಕ್ಕದಲ್ಲಿ ಅಡಗಿದ್ದರೆ ಆಶ್ಚರ್ಯವಿಲ್ಲ. ಈ ನಿಟ್ಟಿನಲ್ಲಿ ಇನ್ನೂ ಶೋಧಿಸಬೇಕಾದ ಅವಶ್ಯಕತೆ ಇದೆ. ಈ ಶಿಲ್ಪ ಸಮೂಹದ ಹತ್ತಿರದಲ್ಲಿರುವ ಆಕರ್ಷಕವಾದ ಕಂಬವೊಂದು ಶಿವಾಲಯದ ಕಾಲವನ್ನು ರಾಷ್ಟ್ರಕೂಟ ಹಾಗೂ ಕಲ್ಯಾಣಚಾಲುಕ್ಯರ ಸಂಧಿಕಾಲದ್ದೆಂದು ಸೂಚಿಸುತ್ತದೆನ್ನಬಹುದು.

ಈ ಕಂಬದ ಕೆಳಭಾಗ ಚೌಕಘನಾಕೃತಿ (Cubical) ಆಗಿದ್ದು ಮೇಲ್ಭಾಗ ವೃತ್ತಾಕಾರವಾಗಿದೆ. ಈ ವೃತ್ತದ ವ್ಯಾಸ ಚೌಕದ



ಕಂಬ ಮತ್ತು ಭೈರವ ಶಿಲ್ಪದ ತುಂಡು

ಉದ್ದಳತೆಯಷ್ಟೇ ಇದೆ. ಹೆಚ್ಚಿನ ಅನ್ವೇಷಣೆ ಉಳಿದ ಕಂಬಗಳನ್ನು ಬೆಳಕಿಗೆ ತರಬಹುದಾಗಿದೆ.

ಈ ಕಂಬದ ಹತ್ತಿರ ಚೌಕಾಕಾರದ ಪೀಠವೊಂದಿದೆ. ಅದರ ಮೇಲೆ ಶಿಲ್ಪವೊಂದರ ಕೆಳಭಾಗ ಮಾತ್ರ ಉಳಿದುಕೊಂಡಿದೆ. ಈ ಭಾಗದಲ್ಲಿ ಪಾದಗಳು, ಅವುಗಳ ಬಳಿ ಶವ, ಒಂದೆಡೆ ಭೂತಾಕೃತಿಗಳು ಇನ್ನೊಂದೆಡೆಯಲ್ಲಿ ತಲೆ ಎತ್ತಿ ಚಾಚಿ ನಿಂತ ನಾಯಿ ಕಾಣಬರುತ್ತವೆ. ಈ ಭೈರವ ಶಿಲ್ಪದ ಉಳಿದೆಲ್ಲ ಭಾಗ ಮಾಯವಾಗಿದೆ.

ಈ ಜಾಗೆಯಲ್ಲಿ ಮುಕ್ಕಾಗದೆ ಉಳಿದಿರುವ ಶಿಲ್ಪವೆಂದರೆ ಒಂದು ವೀರಗಲ್ಲು. ಒಂದೇ ಚೌಕಟ್ಟಿನಲ್ಲಿ ಕಂಡರಿಸಲಾದ ಈ ವೀರ ಯೋಧ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ; ಬಲಗೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಹಾದಿ ಹಣಮಪ್ಪನ ಎದುರಿಗೆ ಅಂದರೆ ರಸ್ತೆಯ ಇನ್ನೊಂದು ಬದಿಗೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಇನ್ನೊಂದು ಹನುಮಂತನ ಗುಡಿ ಇದೆ. ಈ ಗುಡಿಯ ಹಿಂಭಾಗದಲ್ಲಿ ಬೇವಿನ ಮರದ ಕಟ್ಟೆ ಇದೆ; ಮುಂಭಾಗದಲ್ಲಿ ಅರಳಿಮರದ ಕಟ್ಟೆ ಇದೆ.

ನಮಗೆ ಮೊದಲು ಗೋಚರವಾಗುವುದು ಬೇವಿನ ಮರದ ಕಟ್ಟೆ. ಈ ಕಟ್ಟೆಯ ಮೇಲೆ ಮರಕ್ಕೆ ಆತುಕೊಂಡಿರುವ ಶಿಲ್ಪ ಮಹಿಷಮರ್ದಿನಿಯದು. ಕಪ್ಪು ಶಿಲೆಯಲ್ಲಿ ಕೊರೆಯಲಾದದ್ದು. ಜನರ ಬಾಯಲ್ಲಿ ಇವಳು ಕೋಣವ್ವ; ಕೋಣನನ್ನು ಕೊಂದ ಅವ್ವ. ಈ ಮೂರ್ತಿಯ ಎಡಕ್ಕೆ ಉಸುಕುಗಲ್ಲಿನಲ್ಲಿ ಕಂಡರಿಸಲಾದ, ಬಹಳಷ್ಟು ಜೀರ್ಣವಾದ ವಿಷ್ಣುವಿಗ್ರಹವಿದೆ. ವಿಷ್ಣುವಿನ ಶಂಖ ಚಕ್ರ ಗದೆಗಳ ಬಹು ಭಾಗ ಮುಕ್ಕಾಗಿದ್ದರೂ ಗುರುತಿಸುವಲ್ಲಿ ತೊಂದರೆಯಾಗದು. ಪ್ರಭಾವಳಿಯ ಅಲಂಕಾರವಿಲ್ಲ. ಈ ಶಿಲ್ಪದ ಕೆಳಗಿರುವ ಪೀಠ ಇದಕ್ಕೆಂದೇ ನಿರ್ಮಿತವಾದುದಲ್ಲ. ಬೇರೊಂದರ ಪೀಠದ ಮೇಲೆ ಅದನ್ನು ಇರಿಸಲಾಗಿದೆ. ಇದರ ಹತ್ತಿರ ಬಹಳಷ್ಟು ಭಗ್ನವಾದ ನಂದಿ ವಿಗ್ರಹವಿದೆ.

ಈ ಹನುಮಂತನ ಗುಡಿಯ ಎದುರಿಗೆ ಇರುವ ಅರಳಿ ಮರದ ಕಟ್ಟೆಯ ಮೇಲೆ ಕೆಲವು ಬಿಡಿಶಿಲ್ಪಗಳಿವೆ. ಅವುಗಳಲ್ಲಿ ನಮ್ಮ ಗಮನ ಸೆಳೆಯುವ ಮಹತ್ವದ ಶಿಲ್ಪವೆಂದರೆ ಕಪ್ಪು ಹಸಿರು



ನಂದಿ, ವಿಷ್ಣು, ಮಹಿಷಮರ್ದಿನಿ

ಬಣ್ಣದ 'ಸಿಸ್ಟ್' ಕಲ್ಲಿನಲ್ಲಿ ನಿರ್ಮಿಸಲಾದ ಪೀಠ, ಅದರಲ್ಲಿ ಕಲಾತ್ಮಕವಾದ ಕೆತ್ತನೆ ಇದೆ. ಪೀಠದಲ್ಲಿ ಮೂರು ಸಿಂಹಗಳ ಉಬ್ಬುಗೆತ್ತನೆ ಇದೆ. ಇದು ಜಿನಬಿಂಬದ ಪೀಠ ವಾಗಿರಬೇಕು. ಜಿನಶಿಲ್ಪ ಪಕ್ಕದ ಪೊದೆ, ದಿನ್ನೆಗಳಲ್ಲಿ ಮರೆಯಾಗಿದ್ದರೆ ಆಶ್ಚರ್ಯವೇನಿಲ್ಲ. ಈ ಪೀಠದ ಮೇಲೆ ಶಾಸನವೊಂದಿದೆ. ಶಾಸನ ತಜ್ಞರು ಅದನ್ನು ಗಮನಿಸಿದರೆ ಹೆಚ್ಚಿನ ವಿವರ ಸಿಗಬಹುದಾಗಿದೆ. ಆಗ ಕಾಲದ ಬಗ್ಗೆ, ನಿಖರವಾಗಿ ಹೇಳಲು ಸಾಧ್ಯವಾದೀತು.

ಸದ್ಯ ಜಿನಬಿಂಬದ ಬದಲು ನಾಲ್ಕು ಮುಖಗಳುಳ್ಳ ಭರಮಪ್ಪನ ರುಂಡ ಭಾಗ ನೋಡಲು ಸಿಗುತ್ತದೆ.

ಈ ಸಿಂಹಪೀಠದ ಹತ್ತಿರದಲ್ಲಿ ಉಸುಕುಗಲ್ಲಿನಲ್ಲಿ ಕಂಡರಿಸಲಾದ ಕಾರ್ತಿಕೇಯನ ಉಬ್ಬುಶಿಲ್ಪವು ಈ ಸಮೂಹದ ಶಿಲ್ಪ ವೈವಿಧ್ಯವನ್ನು ಹೆಚ್ಚಿಸಿದೆ. ಕಾರ್ತಿಕೇಯ ನವಿಲಿನ ಮೇಲೆ ಆಸೀನನಾಗಿದ್ದಾನೆ – ಶಿಲ್ಪದ ಉಳಿದ ಭಾಗದಲ್ಲಿ ಯಾವ ಬಗೆಯ ಅಲಂಕಾರವೂ ಇಲ್ಲದೆ ಸರಳವಾಗಿದೆ.

ಈ ಮೂರ್ತಿಯ ಹತ್ತಿರ ಬಿದ್ದಿರುವ ತುಂಡು ಶಿಲ್ಪದಲ್ಲಿ ಸಪ್ತಾಶ್ವಗಳು, ರಥದ ಗಾಲಿ ಸ್ಪಷ್ಟವಾಗಿ ಚಿತ್ರಿತವಾಗಿವೆ. ಈ ಹಿಂದಿನ ಜಾಗೆಯಲ್ಲಿ ನೋಡಿದ ಸೂರ್ಯಶಿಲ್ಪದ ಪೀಠ ಇದೇ ಆಗಿರಬಹುದಾಗಿದೆ.

ಅರಳಿಮರದ ಕಟ್ಟೆಯ ಮೇಲೆ ಭಾಗಶಃ ಅಷ್ಟಭುಜಾಕೃತಿಯ ಮತ್ತು ಭಾಗಶಃ ಚೌಕಘನಾಕೃತಿ (Cubical)ಯ ವಿನ್ಯಾಸದ ಕಂಬವೊಂದಿದೆ. ಇಂತಹ ಅನೇಕ ಕಂಬಗಳು ಇಲ್ಲಿದ್ದವೆಂದೂ ಅವೇ ಕಂಬಗಳನ್ನು ಬಳಸಿಕೊಂಡು ಈಗ ಹೊಸ ಗುಡಿಯನ್ನು ಕಟ್ಟಲಾಗಿದೆ ಎಂದು ತಿಳಿದು ಬರುತ್ತದೆ.

ಈಗಿರುವ ಗುಡಿಯ ಮುಂದೆ ಎರಡು ವೀರಗಲ್ಲುಗಳು ಕಾಣಬರುತ್ತವೆ. ಇವೆರಡೂ ಮಧ್ಯಕಾಲೀನ ಸ್ಮಾರಕಗಳಿದ್ದಂತೆ ತೋರುತ್ತವೆ. ಎಡಕ್ಕಿರುವ ವೀರಗಲ್ಲಿನಲ್ಲಿ ಚಿತ್ರಿತನಾದ ವೀರನು ಕಾದಾಡುವ ದೃಶ್ಯದ ಭಾಗ ಒಡೆದು ಹೋಗಿದೆ. ಮೇಲಿನ ಎರಡು ಪಟ್ಟಿಕೆಗಳು ಉಳಿದಿವೆ. ಅದರ ಮೇಲ್ಭಾಗದಲ್ಲಿ ಗುಡಿಯ ಶಿಖರ, ಕಲಶವನ್ನು ಹೋಲುವ ರಚನೆ ಇದೆ. ಪಕ್ಕದ ವೀರಗಲ್ಲಿನ ಮೇಲ್ಭಾಗ ಒಡೆದು ಹೋಗಿದೆ. ಕೆಳಗಿನ ಚೌಕಟ್ಟಿನಲ್ಲಿ ಯೋಧನೊಬ್ಬ ವೈರಿಗಳೊಡನೆ ಕಾದಾಡುವ ಸನ್ನಿವೇಶವನ್ನು ಕಂಡರಿಸಲಾಗಿದೆ.

ಈ ಜಾಗೆಯಲ್ಲಿ, ಮೇಲ್ಕಂಡ ಬೇವಿನ ಮರದ ಕಟ್ಟೆಗೆ ಸಮೀಪದಲ್ಲಿ ಶಾಸನವೊಂದು ಬಿದ್ದಿದೆ. ಅಕ್ಷರಗಳನ್ನು ಗಮನಿಸಿದರೆ ಪ್ರಾಯಶಃ ೧೨ನೆಯ ಶತಮಾನದ್ದಾಗಿರಬಹುದೆನಿಸುತ್ತದೆ. ಶಾಸನದ ಬಹುಭಾಗದ ಅಕ್ಷರಗಳು ನಶಿಸಿವೆಯಾದರೂ ಕೆಲವು ಸಾಲುಗಳನ್ನಾದರೂ ಶಾಸನತಜ್ಞರು ಓದಬಹುದಾಗಿದೆ. ಈ ಶಾಸನದ ಮೇಲ್ಭಾಗದಲ್ಲಿ ಲಿಂಗ, ನಂದಿ, ಸೂರ್ಯ ಚಂದ್ರರನ್ನು ಕೆತ್ತಲಾಗಿದೆ. ಶಿವಲಿಂಗದ ಮುಂದೆ ಭಕ್ತನ ಶಿಲ್ಪವಿದೆ.

ಮಂಗಲೀಶನು ಮಹಾಕೂಟೇಶ್ವರನಿಗೆ ಹತ್ತು ಗ್ರಾಮಗಳನ್ನು ಬಿಟ್ಟು ಕೊಟ್ಟ ಸಂಗತಿ ಆತನ ಮಹಾಕೂಟ ಸ್ತಂಭಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದ್ದು, ಆ ಹತ್ತು ಗ್ರಾಮಗಳಲ್ಲಿ ಕೆಂದೂರು ಕೂಡ ಒಂದು. ಚಾಲುಕ್ಯರ ಕಾಲದಿಂದಲೂ ಅದು ಸಾಂಸ್ಕೃತಿಕ ತಾಣವಾಗಿದ್ದಂತೆ ತೋರುತ್ತದೆ. ಈಗ ಕಾಣ ಬಂದ ಅವಶೇಷಗಳು ಚಾಲುಕ್ಯೋತ್ತರ ಕಾಲದಲ್ಲಿ ಕೂಡ ಅಲ್ಲಿ ವಾಸ್ತು ಮತ್ತು ಶಿಲ್ಪ ನಿರ್ಮಾಣ ಚಟುವಟಿಕೆಗಳು ನಡೆದ ಬಗ್ಗೆ ಪುರಾವೆ ನೀಡುತ್ತವೆ ಎಂದು ಹೇಳಬಹುದು. *

ಡಾ || ಬೆಂ.ಶಾ. ಶ್ಯಾಮಲಾ ರತ್ನಕುಮಾರಿ *

ಗಮನ ಸೆಳೆವ ಸೂರ್ಯಶಿಲ್ಪ

ಬೆಳಗಾವಿನಗರ ಮಧ್ಯಭಾಗದಲ್ಲಿನ ಮಾರುತಿಗಲ್ಲಿಯಲ್ಲಿರುವ ಹನುಮಾನ್ ಗುಡಿಯ ಆವರಣದಲ್ಲಿ ಪ್ರವೇಶದ್ವಾರದ ಎಡಮಗ್ಗುಲಲ್ಲಿರುವ ಶಿವಾಯತನದಲ್ಲಿ ಒಂದು ಗಮನಾರ್ಹ ಸೂರ್ಯಶಿಲ್ಪವು ಇದೆ. ಇದೊಂದು ವೈಶಿಷ್ಟ್ಯಪೂರ್ಣ ಶಿಲ್ಪವಾಗಿದೆ.

ಸೂರ್ಯಾರಾಧನೆಯನ್ನು ಭಾರತದಲ್ಲಿ ಕುಶಾನರು ಅಥವಾ ಸಿಥಿಯನ್ನರು (ಶಕರು) ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ 'ಮಾಗಿ' (Magi) ಎಂಬ ಬುಡಕಟ್ಟು ಜನಾಂಗದವರು ಬಳಕೆಗೆ ತಂದರೆಂದು ಡಾ || ಆರ್.ಸಿ.ಹಜ್ರಾ ಅಭಿಪ್ರಾಯಪಟ್ಟಿದ್ದಾರೆ. ಇವರೇ ಸೂರ್ಯ ಪ್ರತಿಮಾಶಿಲ್ಪದ ಕಾರಣಕರ್ತರೂ ಆಗಿದ್ದರೆಂದು ಹೇಳಲಾಗಿದೆ.[೧]

ಮೇಲೆ ಉಲ್ಲೇಖಿಸಿರುವಂತೆ ಸೂರ್ಯಶಿಲ್ಪವು ಶಿವಪಂಚಾಯತನದಲ್ಲಿ ಕಂಡುಬಂದಿರುವುದು. ದಕ್ಷಿಣಭಾರತದಲ್ಲಿ ಶೈವಪಂಚಾಯತನದಲ್ಲಿ ಸೂರ್ಯನನ್ನು ಸೇರಿಸಿ ಪ್ರಚುರ ಪಡಿಸಿದವರು ಶ್ರೀ ಶಂಕರಾಚಾರ್ಯರು. ಗಣೇಶ, ಅಂಬಿಕೆ, ವಿಷ್ಣು ಶಿವ ಮತ್ತು ಸೂರ್ಯರನ್ನು ಪಂಚಾಯತನ ಮೂರ್ತಿಗಳೆಂದು ಪರಿಗಣಿಸಲಾಗುತ್ತದೆ. ಪಂಚಾಯತನದಲ್ಲಿ ಸೇರಿದ್ದರೂ ಉಳಿದ ನಾಲ್ವರಂತೆ ಸೂರ್ಯನು ಮುಕ್ತಿದಾಯಕನಾದ ಆಧ್ಯಾತ್ಮಿಕ ದೇವತೆಯಲ್ಲ. ಇವನು ಶತ್ರುವಿನಾಶಕ, ಕಾಲಗತಿಸೂಚಕ, ರೋಗನಿವಾರಕ ಹಾಗೂ ಸಂತಾನದಾಯಕನಾಗಿ ಲೌಕಿಕ ದೇವತೆಯೆನಿಸಿದ್ದಾನೆ.

ಸೂರ್ಯಶಿಲ್ಪದ ಲಕ್ಷಣಗಳನ್ನು ಶಾಸ್ತ್ರಗ್ರಂಥಗಳು ವೈವಿಧ್ಯಪೂರ್ಣವಾಗಿ ವಿವರಿಸುತ್ತವೆ. ಪ್ರಸ್ತುತವೆನಿಸುವ ಕೆಲವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಸೂರ್ಯ ಪ್ರತಿಮಾಲಕ್ಷಣವನ್ನು ಗಮನಿಸೋಣ.

'ವಿಶ್ವಕರ್ಮ ಶಿಲ್ಪ' ದಲ್ಲಿ ಸೂರ್ಯ ಮತ್ತು ಸೂರ್ಯ ಪ್ರಭಾಮಂಡಲದ ವಿವರಗಳು ಹೀಗೆ ಹೇಳಲ್ಪಟ್ಟಿವೆ.

ಏಕಚಕ್ರಂ ಸಸಪ್ತಾಶ್ವ ಸಸಾರಥಿಂ ಮಹಾರಥಂ ।
ಹಸ್ತದ್ವಯಂ ಪದ್ಮಧರಂ ಕಂಚುಕಶ್ಚರ್ಮ ವಕ್ಷಸಂ ॥

ಅಕುಂಚಿತಕೇಶಸ್ತು ಪ್ರಭಾಮಂಡಲಮಂಡಿತಮ್ ।
ಕೇಶವೇಶಸಮಾಯುಕ್ತ ಸ್ವರ್ಣರತ್ನಭೂಷಿತಮ್ ॥

....

....

ಏವಮುಕ್ತರಥಸ್ತಸ್ಯ ಮಕರಧ್ವಜ ಇಷ್ಯತೇ ।
ಮಕುಟಶ್ಚಾಪಿ ದಾತವ್ಯಮನ್ಯತ್ ಸರ್ವಸಮಂಡಲಂ ॥

ಏಕವಕ್ತ್ರಾಂಕಿತೋ ದಂಡಸ್ಕಂಧ ತೇಜೋಕರಾಂಬುಜಂ ಟ
ಕೃತ್ವಾ ತು ಸ್ಥಾಪಯೇತ್ ಪೂರ್ವಂ ಪುರುಷಾಕೃತಿರೂಪಿಣೌ ॥

ಹಯಾರೂಢಸ್ತು ಕುರ್ವೀತ ಪದ್ಮಸ್ಥಂ ವಾರ್ಚನಾಮಕಂ ।
ಸದೀವ್ಯಮಾನವಪುಷಂ ಸರ್ವಲೋಕೈಕದೀಪಕಂ ॥
ಜಾತಿ ಹಿಂಗುಲ್ಯ ಸಂಸ್ಥಾಪ್ಯ ಕಾರಯೇತ್ ಸೂರ್ಯಮಂಡಲಂ ॥

ಅಂಶುಮದ್‌ಭೇದಾಗಮ ಹಾಗೂ ಸುಪ್ರಭೇದಾಗಮಗಳಲ್ಲಿ ಸೂರ್ಯಶಿಲ್ಪವು ಎರಡು ಕೈಗಳನ್ನು ಹೊಂದಿರಬೇಕೆಂದೂ, ಎರಡೂ ಕೈಗಳಲ್ಲಿ ಒಂದೊಂದು ಕಮಲ ಪುಷ್ಪವನ್ನು ಹಿಡಿದಿರಬೇಕೆಂದೂ, ಮುಂಗೈಗಳನ್ನು ಭುಜತಾಕುವಂತೆ ಮೇಲಕ್ಕೆತ್ತಿರಬೇಕೆಂದೂ, ಶಿರವು ಕಾಂತಿಮಂಡಲದಿಂದ ಪರಿವೃತವಾಗಿರಬೇಕೆಂದೂ, ಆಭರಣಭೂಷಿತನಾಗಿರಬೇಕೆಂದೂ ಹೇಳಿದೆ.

ಮತ್ಸ್ಯಪುರಾಣದಲ್ಲಿ ಹೇಳಲ್ಪಟ್ಟ ಲಕ್ಷಣಗಳೆಂದರೆ ಸೂರ್ಯನಿಗೆ ಚೆನ್ನಾದ ಮೀಸೆಯಿರಬೇಕು, ಉತ್ತರಭಾರತದಲ್ಲಿನ ಪುರುಷರ ಉಡುಗೆಯಂತೆ ಉಡುಪಿರಬೇಕು, ಸೂಕ್ತ ಆಭರಣಗಳಿಂದ ಭೂಷಿತನಾಗಿರಬೇಕು, ಸೊಂಟದ ಸುತ್ತಲೂ ಫಣಿಯಾಂಗ ಅಥವಾ ಅಹ್ಯಂಗವೆಂಬ ಮೇಖಲೆಯನ್ನು ಧರಿಸಿರಬೇಕು ಎಂಬುವಾಗಿವೆ.

ಈ ಮೇಲಿನ ಶಾಸ್ತ್ರಗ್ರಂಥಗಳಲ್ಲಿ ಹೇಳಲ್ಪಟ್ಟ ಲಕ್ಷಣಗಳ ಹಿನ್ನೆಲೆಯಲ್ಲಿ ಬೆಳಗಾವಿಯ ಹನುಮಾನ್ ಗುಡಿಯ ಶಿವ ಪಂಚಾಯತನ ಸೂರ್ಯಶಿಲ್ಪದ ಲಕ್ಷಣಗಳನ್ನು ಗಮನಿಸ ಬಹುದಾಗಿದೆ. ಈ ಸೂರ್ಯಶಿಲ್ಪದ ವಿವರಗಳು ಹೀಗಿವೆ:

ಶೈವಪಂಚಾಯತನದ ಪೂರ್ವದಿಕ್ಕಿನ ಭಿತ್ತಿಯಲ್ಲಿ ಉಬ್ಬು

* ಪ್ರವಾಚಕರು, ಬಸವೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಬೆಂಗಳೂರು - ೫೬೦೦೧೦



ಶಿಲ್ಪವಾಗಿರುವ ಸೂರ್ಯನ ಶಿಲ್ಪವು ಸು. ೧.೨೫ ಅಡಿ ಅಗಲ ೨ ಅಡಿ ಎತ್ತರವಿದೆ. ಸಪ್ತಾಶ್ವಗಳಿಂದೆಳೆಯಲ್ಪಡುತ್ತಿರುವ ಏಕಚಕ್ರ ರಥದಲ್ಲಿ ದ್ವಾದಶಕೋನಮಂಡಲಾಂತರ್ಗತನಾಗಿ ಸೂರ್ಯನು ಆಸೀನನಾಗಿದ್ದಾನೆ. ಸೂರ್ಯನೂ ಒಂದು ನಕ್ಷತ್ರ ಎಂಬ ವೈಜ್ಞಾನಿಕ ಕಲ್ಪನೆಗೂ ಹೊಂದುವಂತೆ ಈ ದ್ವಾದಶ ತ್ರಿಕೋನಾಗ್ರಗಳು ಕಿರಣಗಳ ಸಂಕೇತವಾಗಿರುವಂತಿವೆ. ಬಲಗಾಲು ಅರ್ಧಪದ್ಮಾಸನದ ಭಂಗಿಯಲ್ಲು ಎಡಗಾಲು ಅರ್ಧವೀರಾಸನದ ಭಂಗಿಯಲ್ಲು ಕಂಡುಬರುತ್ತವೆ. ಶಿರೋಮುಕುಟ ಭೂಷಿತನಾಗಿದ್ದಾನೆ. ಎದೆಯಲ್ಲಿ ಕವಚ ಧರಿಸಿದ್ದಾನೆ. ಮೇಖಲೆಯನ್ನೂ ಕೈಗಳಲ್ಲಿ ಕಂಕಣವನ್ನೂ ಧರಿಸಿದ್ದಾನೆ. ತನ್ನೆರಡೂ ಕೈಗಳಲ್ಲಿ ಕಮಲಪುಷ್ಪವನ್ನು ಹೊಂದಿದ್ದು ಭುಜಪಾರ್ಶ್ವಕ್ಕೆ ತಾಗುವಂತೆ ಮುಂಗೈಯನ್ನು ಎತ್ತಿ ಹಿಡಿದಿದ್ದಾನೆ. ಬಲಗೈಯಲ್ಲಿನ ಕಮಲಪುಷ್ಪ ವಿಕಸಿತಗೊಂಡಂತಿದ್ದರೆ ಎಡಗೈಯಲ್ಲಿನ ಪುಷ್ಪವು ಮೊಗ್ಗಿನಂತಿದೆ. ಮೀಸೆಯನ್ನೂ ಹೊಂದಿದ್ದಾನೆ. ಬಿಗಿಸೊಂಟಪಟ್ಟಿಯನ್ನು ಧರಿಸಿದ್ದಾನೆ. ರಥದ ಮುಂಭಾಗದ ಕಟ್ಟು ಪ್ರಧಾನವಾಗಿ ಗೋಚರಿಸುತ್ತಿದ್ದು ಅದರ ಎಡತುದಿಯಲ್ಲಿ ಅಂದರೆ ಸೂರ್ಯನಿಗೆ ಕೆಳಭಾಗದಲ್ಲಿ ಬಲಗಡೆಗೆ ಅರುಣನೂ ಕಂಡು ಬರುತ್ತಾನೆ. ರಥದ ಹಿಂಭಾಗದಲ್ಲಿ ಚಕ್ರವೂ ಸ್ಪಷ್ಟವಾಗಿ ಕಂಡುಬರುತ್ತದೆ.

ಈ ಶಿಲ್ಪದ ಬಹುಪಾಲು ಲಕ್ಷಣಗಳು 'ವಿಶ್ವಕರ್ಮಶಿಲ್ಪ' ದಲ್ಲಿ ಹೇಳಲ್ಪಟ್ಟಿರುವ ಸೂರ್ಯಶಿಲ್ಪದ ಲಕ್ಷಣಗಳೊಂದಿಗೆ ಸರಿಹೊಂದುತ್ತದೆ ಎಂಬುದನ್ನು ಗಮನಿಸಬಹುದಾಗಿದೆ. ಅವುಗಳನ್ನು ರೇಖಾಂಕಿತದೊಂದಿಗೆ ಸೂಚಿಸಲಾಗಿದೆ.

ಶೈವಪಂಚಾಯತನ ಗುಡಿಗಳ ನಿರ್ಮಾಣವು ಸೂರ್ಯಾರಾಧನೆ ಹೆಚ್ಚಿದಂತೆಲ್ಲ ಬೆಳೆದುಬಂದಿತು. ಚಾಲುಕ್ಯ, ರಾಷ್ಟ್ರಕೂಟ ಹಾಗೂ ಕಳಚೂರ್ಯರ ಕಾಲದಲ್ಲಿ ಸೂರ್ಯಾರಾಧನೆ ಪ್ರಾಮುಖ್ಯತೆ ಪಡೆದುಕೊಂಡಿತು. ಅಂತೆಯೇ ಸೂರ್ಯದೇಗುಲಗಳ ಸಂಖ್ಯೆಯೂ ಏರಿತು. ಮಾಗಳದ ಸೂರ್ಯದೇಗುಲ, ಬಾಗಳಿಯ ಕಲ್ಲೇಶ್ವರ-ನರಸಿಂಹ ಕಲಿದೇವ – ಸೂರ್ಯದೇಗುಲಗಳ ಸಂಕೀರ್ಣ, ಅಬ್ಬಲೂರು, ಹಾವೇರಿ ಮುಂತಾದೆಡೆಗಳಲ್ಲಿನ ಸೂರ್ಯ ದೇಗುಲಗಳನ್ನು ಈ ನಿಟ್ಟಿನಲ್ಲಿ ಉದಾಹರಿಸಬಹುದಾಗಿದೆ. ಮುಂದೆ ಮರಾಠರ ಕಾಲದಲ್ಲಿಯೂ ಶೈವಪಂಚಾಯತನ ನಿರ್ಮಾಣ ಕಾರ್ಯ ಮುಂದುವರೆದದ್ದನ್ನು ಕಾಣಬಹುದಾಗಿದೆ. ಈ ಹೇಳಿಕೆಗೆ ಇಂದಿನ ಮುಂಬೈಯಲ್ಲಿನ ಮಹಾಲಕ್ಷ್ಮಿ ದೇವಾಲಯದ ಬಳಿ ಇರುವ ದಾಕಲೇಶ್ವರ ದೇವಾಲಯವು ಶೈವ ಪಂಚಾಯತನ ಗುಡಿಯಾಗಿದ್ದು ಸಾಕ್ಷಿಯಾಗಿ ನಿಲ್ಲುತ್ತದೆ. ಇಲ್ಲಿ ಪಂಚಾಯತನಮೂರ್ತಿಗಳು ಒಂದೇ ಸಾಲಿನಲ್ಲಿದ್ದು ಮಧ್ಯದ ಗರ್ಭಗುಡಿಯಲ್ಲಿ ಶಿವಲಿಂಗವೂ ಅದರ ಬಲಭಾಗದಲ್ಲಿನ ಕೊನೆಯ ಗರ್ಭಗುಡಿಯಲ್ಲಿ ರಥದ ಮುಂಭಾಗದಲ್ಲಿ ನಿಂತ ಭಂಗಿಯಲ್ಲಿರುವ ಸೂರ್ಯಶಿಲ್ಪವನ್ನೂ ಕಾಣಬಹುದಾಗಿದೆ.

ಇನ್ನು ಈ ಸೂರ್ಯಶಿಲ್ಪದ ಶೈಲಿಯ ಬಗ್ಗೆ ಪರಿಶೀಲಿಸೋಣ. ಸೂರ್ಯನ ರಥದ (ಮಕರಧ್ವಜ) ಸಪ್ತಾಶ್ವಗಳು ವಾರದಲ್ಲಿನ ಏಳುದಿನಗಳನ್ನೂ ಸೂರ್ಯನ ಬಲಗೈಯಲ್ಲಿರುವ ವಿಕಸಿತ ಕಮಲಪುಷ್ಪವು ದಿನದ ಹಗಲುಹೊತ್ತನ್ನೂ ಹಾಗೂ ಎಡಗೈಯಲ್ಲಿರುವ ಮೊಗ್ಗಾಗಿರುವ ಕಮಲವು ರಾತ್ರಿಹೊತ್ತನ್ನೂ ಸೂಚಿಸುತ್ತದೆ. ಸೂರ್ಯನನ್ನು ಆವರಿಸಿರುವ ದ್ವಾದಶ ತ್ರಿಕೋನವು ವರ್ಷದ ೧೨ ತಿಂಗಳುಗಳನ್ನೂ ದ್ವಾದಶಕೋನ ಚಕ್ರಾಂತರ್ಗತವಾದ ವೃತ್ತವು ವರ್ಷ ಚಕ್ರವನ್ನೂ ಸಂಕೇತಿಸುತ್ತಿರುವುದರಿಂದ ಸೂರ್ಯನು ಕಾಲಸೂಚಕ ದೇವತೆಯಾಗಿ ಈ ಶಿಲ್ಪದಲ್ಲಿ ಕಾಣಿಸಲ್ಪಟ್ಟಿದ್ದಾನೆ. ಅಂತೆಯೇ ಈ ಸೂರ್ಯಶಿಲ್ಪವನ್ನು ಗಮನಿಸಿದಾಗ ಸೂರ್ಯನಷ್ಟೇ ಪ್ರಧಾನವಾಗಿ ಕಂಡುಬರುವುದು ಸೂರ್ಯರಥವನ್ನೆಳೆಯುತ್ತಿರುವ ಸಪ್ತಾಶ್ವಗಳ ಶಿಲ್ಪ. ಅವು ಲವಲವಿಕೆಯ ಉತ್ಸಾಹದ ಮುಖ ಭಾವವನ್ನು ವ್ಯಕ್ತಗೊಳಿಸುತ್ತಿವೆ. ನಾಗಾಲೋಟ ದಿಂದೋಡಲು ಕಾಲುಗಳನ್ನು ಮೇಲೆತ್ತಿವೆ. ಅವುಗಳ ಬಾಲವೂ ಕೂಡ ನಿಮಿರಿ ಮೇಲೆದ್ದಿವೆ. ಯುದ್ಧಕ್ಕೆ ಹೊರಡುವಾಗಿನ ಕವಚ-ರಿಕಾಪುಗಳಿಂದ ಸಜ್ಜುಗೊಂಡಿವೆ. ಆಭರಣಭೂಷಿತವೂ ಆಗಿವೆ. ಸೂರ್ಯನ ಮುಖಭಾವ ಚಿತ್ತಾಕರ್ಷಕವಾಗಿರದಿದ್ದರೂ ಯುದ್ಧದ ಬಿಗಿ ಉಡುಪನ್ನು ಧರಿಸಿದ್ದಾನೆ. ಎದೆಯ ಭಾಗದಲ್ಲಿ ಕವಚವನ್ನೂ

ಧರಿಸಿದ್ದಾನೆ. ರಥದಲ್ಲಿ ಆಸೀನನಾಗಿ ಹೊರಡಲುದ್ಯುಕ್ತನಾಗಿದ್ದಾನೆ. ಈ ಎಲ್ಲ ಲಕ್ಷಣಗಳೂ ಈ ಸೂರ್ಯನನ್ನು ವೈರಿನಾಶಕ ಯುದ್ಧ ದೇವತೆಯೆಂದು ಸಾಬೀತುಪಡಿಸುತ್ತವೆ.

ಈ ಸೂರ್ಯವಿಗ್ರಹದ ಕಾಲವನ್ನು ಕುರಿತಂತೆ ನಿಶ್ಚಿತವಾಗಿ ಹೇಳುವುದಕ್ಕೆ ಸಾಧ್ಯವಾಗದಿದ್ದರೂ ವಿಗ್ರಹದ ಬಗ್ಗೆ ಮೇಲೆ ತಿಳಿಸಿರುವ ಲಕ್ಷಣಗಳಿಂದಲೂ ಮತ್ತು ಸ್ಥಳೀಯ ಜನರ ಹೇಳಿಕೆಯಾಧಾರದಿಂದಲೂ ಕಾಲದ ಬಗ್ಗೆ ನಿರ್ಧಾರ ಕೈಗೊಳ್ಳಲು ಪ್ರಯತ್ನಿಸಬಹುದಾಗಿದೆ.

ಸ್ಥಳೀಯರ ಅಭಿಪ್ರಾಯದಂತೆ ಈ ಹನುಮಾನ್ ದೇವಾಲಯವನ್ನು ಬಿಜಾಪುರದಲ್ಲಿ ಮುಸ್ಲಿಮರು (ನಿಜಾಮ) ಆಳ್ವಿಕೆ ನಡೆಸುತ್ತಿದ್ದಾಗ ನಿರ್ಮಿಸಲಾಯಿತು. ಬೆಳಗಾಂ ಜಿಲ್ಲಾ ಗೆಜೆಟಿಯರ್‌ನಲ್ಲಿ ಈ ಹನುಮಾನ್ ದೇವಾಲಯದ ಬಗ್ಗೆ ಪ್ರಸ್ತಾಪಿಸಿ ಈ ದೇವಾಲಯದ ಆವರಣದಲ್ಲಿ ಕೆಲವು ಕಲ್ಯಾಣಿ ಚಾಳುಕ್ಯರ ಕಾಲದ ವಿಗ್ರಹಗಳಿವೆಯೆಂದು ಹೇಳಿದೆ. ಆದರೆ ಸೂರ್ಯಶಿಲ್ಪವು ಕಾಲ್ಯಣ ಚಾಳುಕ್ಯರ ಕಲಾಶೈಲಿಯಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಕಲ್ಯಾಣ ಚಾಳುಕ್ಯರ ಕಲಾಶೈಲಿಯಲ್ಲಿ ಮೂರ್ತಿಶಿಲ್ಪವು ಪ್ರಮಾಣಬದ್ಧವಾಗಿಯೂ, ಸುಂದರವಾಗಿಯೂ ನಯಗಾರಿಕೆ ಯಿಂದಲೂ ಕೂಡಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಸೂರ್ಯ ಶಿಲ್ಪವು ತೀರ ಒರಟಾಗಿ ಮೊದ್ದುಮೊದ್ದಾಗಿ ಮೂಡಿಬಂದಿದೆ, ಭಾವಹೀನವಾಗಿದೆ. ಆದರೆ ಕುದುರೆಗಳನ್ನು ಮಾತ್ರ ಪ್ರಧಾನವಾಗಿಯೂ ಭಾವಪೂರ್ಣವಾಗಿಯೂ ಕುಶಲತೆಯಿಂದ ಕಡೆಯಲಾಗಿದೆ; ಯುದ್ಧಾಶ್ವಗಳೆಂದು ಹೇಳಬಹುದಾಗಿದೆ. ಆದುದರಿಂದ ಸ್ಥಳೀಯರ ಹೇಳಿಕೆಯು ಪರಿಶೀಲನಾರ್ಹವಾಗಿದೆ.

ಈ ಹಿನ್ನೆಲೆಯಲ್ಲಿ ಬೆಳಗಾವಿಯ ಸೂರ್ಯಶಿಲ್ಪವನ್ನು ವಿಜಯನಗರ ಪತನಾನಂತರದ ಹಾಗೂ ಮರಾಠರ ಏಳಿಗೆಯ ಅವಧಿಯಲ್ಲಿ ಬಿಜಾಪುರ, ಬೆಳಗಾವಿ ಮುಂತಾದ ಉತ್ತರ ಕರ್ನಾಟಕದ ಭಾಗಗಳು ಮುಸ್ಲಿಮರ (ಅದಿಲ್‌ಷಾಹಿ, ನಿಜಾಮ) ಆಳ್ವಿಕೆಗೊಳಗಾಗಿದ್ದಾಗ ನಿರ್ಮಿಸಿದರೆಂದು ಹೇಳಬಹುದಾಗಿದೆ. ಮುಸ್ಲಿಮರಿಂದ ಆಕ್ರಮಿತಗೊಂಡ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳುವ ಅವಸರದ ಸಂದರ್ಭದಲ್ಲಿ ಮರಾಠರು ಶತ್ರುವಿನಾಶಕ ಯುದ್ಧದೇವತೆಯಾದ ಸೂರ್ಯನ ಈ ಶಿಲ್ಪವನ್ನು ಮೂಡಿಸಿರಬಹುದೆಂದು ಏನ್ನಿಸುತ್ತದೆ. *

ಕೃ. ಸು. ಸುಬ್ರಹ್ಮಣ್ಯ*

ಶ್ರೀರಂಗಪಟ್ಟಣ ಮತ್ತು ಗಂಜಾಂಗಳ ಕೆಲವು ಐತಿಹಾಸಿಕ ಸ್ಮಾರಕಗಳು

ಶ್ರೀರಂಗಪಟ್ಟಣಕ್ಕೆ ಸುಮಾರು ೧೦೦೦ ವರ್ಷಗಳ ಇತಿಹಾಸವಿದೆ. ಗಂಗರ ಕಾಲದಲ್ಲಿ ಕ್ರಿ.ಶ. ೮೯೪ರಲ್ಲಿ ಇಂದಿನ ಶ್ರೀರಂಗನಾಥ ದೇವಾಲಯವನ್ನು ತಿಮ್ಮಣ್ಣ ಅಥವಾ ತಿರುಮಲ ನೆಂಬಾತ ಕಟ್ಟಿದನೆಂಬುದು ಸಂಪ್ರದಾಯದ ಕಥೆ. ವಾಸ್ತವವಾಗಿ ಇದಕ್ಕೂ ಹಿಂದೆ ಕ್ರಿ.ಶ. ೬೮೪ ಅಥವಾ ಕ್ರಿ.ಶ. ೬೯೪ ರ ವೇಳೆಗಾಗಲೇ ಅಲ್ಲೊಂದು ರಂಗನಾಥನ ಚಿಕ್ಕಗುಡಿಯಿತ್ತೆಂದೂ ಕ್ರಿ.ಶ. ೮೧೭ ರ ವೇಳೆಗೆ 'ಹಂಬಿ' ಎನ್ನುವ ಮಹಿಳೆ ಆ ಗುಡಿಯನ್ನು ವಿಸ್ತರಿಸಿ ಕಟ್ಟಿದಳೆಂದು ಡಾ॥ಎಂ.ಎಚ್. ಕೃಷ್ಣರವರು ಹೇಳುತ್ತಾರೆ. ಮುಂದೆ ತಿರುಮಲಯ್ಯನೆಂಬಾತ ದೇವಾಲಯಕ್ಕೊಂದು ನವರಂಗವನ್ನು ಸೇರಿಸಿದನೆಂದು, ವಿಜಯನಗರದ ರಾಜಪ್ರತಿನಿಧಿಯಾಗಿದ್ದ ಶ್ರೀರಂಗರಾಯನು ದೇವಾಲಯದ ಒಳಪ್ರಾಕಾರವನ್ನೂ ಕಟ್ಟಿಸಿ, ದೇವಾಲಯವನ್ನು ವಿಸ್ತರಿಸಿದನೆಂದೂ ತಿಳಿದು ಬರುತ್ತದೆ.

ಹೊಯ್ಸಳರ ವಿಷ್ಣುವರ್ಧನನ ತಮ್ಮ ಉದಯಾದಿತ್ಯ ಕ್ರಿ.ಶ. ೧೧೨೦ರ ವೇಳೆಗೆ ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೧೧೩೩ ರ ವೇಳೆಗೆ ಜನ ವಸತಿ ಹೆಚ್ಚುವಂತೆ ಮಾಡಿದ. ಅಂದಿನಿಂದ ಶ್ರೀರಂಗಪಟ್ಟಣಕ್ಕೆ ಒಂದು ಪ್ರಮುಖ ಕ್ಷೇತ್ರದ ಸ್ವರೂಪ ಬಂದಿತು. ಈ ಕಾಲದಲ್ಲೇ ಕಿರಿರಂಗನೂರು, (ಅಥವಾ ಚಿಕ್ಕ ಶ್ರೀರಂಗ ಪಟ್ಟಣ), ಅಗರವು ರಾಜಧಾನಿಯ ಹರವಾಗಿ ಮಾರ್ಪಟ್ಟವು. ಅದೇ ಇಂದಿನ ಕಿರಂಗೂರು. ಕಿರಂಗೂರಿಗೂ ಶ್ರೀರಂಗಪಟ್ಟಣಕ್ಕೂ ನಡುವೆ ಜನವಸತಿ ಇದ್ದ ಬಗೆಗೆ ನಿದರ್ಶನವಾಗಿ ಬೆಂಗಳೂರಿನಿಂದ ಹಳೆಯ ವೆಲ್ಲೆಸ್ಲಿ ಸೇತುವೆಯ ರಸ್ತೆ ಕಡೆ ಬರುವಾಗ ಬಲಭಾಗದಲ್ಲಿ ಹಳ್ಳಿಯೊಂದು ಇಂದಿಗೂ ನಿಂತಿದೆ. ನಾಗಮಂಗಲದ ಪಾಳೆಯಗಾರ ತಿಮ್ಮಣ್ಣ ದಣನಾಯಕ ಕ್ರಿ.ಶ. ೧೪೫೪ ರ ವೇಳೆಗೆ ನಗರದ ಸುತ್ತ ಒಂದು ಸಾಧಾರಣವಾದ ಇಟ್ಟಿಗೆ - ಮಣ್ಣಿನ ಕೋಟೆ ಕಟ್ಟಿಸಿದ. ವಿಜಯನಗರದ ರಾಜಪ್ರತಿನಿಧಿಯ ಕೇಂದ್ರ ಶ್ರೀರಂಗಪಟ್ಟಣವಾದಾಗ ಕ್ರಿ.ಶ. ೧೫೧೦ ರಲ್ಲಿ ಕೋಟೆಯನ್ನು ಮತ್ತೂ ಬಲಪಡಿಸಿ ವಿಸ್ತರಿಸಿದ. ಕ್ರಿ.ಶ. ೧೬೧೦ರ ಅನಂತರ ರಾಜಒಡೆಯರು ಕೋಟೆಯನ್ನು ಇನ್ನೂ ಬಲಪಡಿಸಿದರು. ರಣದುಲ್‌ಖಾನನ ಧಾಳಿಯ ವೇಳೆಗೆ ಸುಮಾರು ಕ್ರಿ.ಶ. ೧೬೩೮ ರಲ್ಲಿ ಕಂಠೀರವ ನರಸರಾಜ ಒಡೆಯರು ಕೋಟೆಯ ಎರಡೂ ಬದಿಗೆ ಕಲ್ಲು ಕಟ್ಟಡ ಕಟ್ಟಿಸಿ ವಜ್ರಗಾರೆಯಿಂದ ಕಟ್ಟಡವನ್ನು ಬಲಪಡಿಸಿದರು. ಸುಮಾರು ೪೪ ಕೊತ್ತಲಗಳನ್ನು ೧೦ ಅಗಳಿಗಳನ್ನು ಮಾಡಿಸಿದರು. ಪ್ರಾರಂಭದಲ್ಲಿ ಕೇವಲ ಎರಡು ಸುತ್ತಿನ ಕೋಟೆಯಾಗಿದ್ದುದು, ಮೂರು ಸುತ್ತಿನ ಕೋಟೆಯಾಗಿ ಟೀಪುವಿನ ಕಾಲಕ್ಕೆ ಈಶಾನ್ಯ ಹಾಗೂ ಆಗ್ನೇಯ ಭಾಗಗಳಲ್ಲಿ ನಾಲ್ಕು ಸುತ್ತಿನ ಕೋಟೆಯಾಗಿ ಮಾರ್ಪಟ್ಟಿತು. ಕೋಟೆಯ ಮೇಲೆ ಸುಮಾರು ೮೦೦ ಫಿರಂಗಿಗಳನ್ನು ನಿಲ್ಲಿಸಲಾಗಿತ್ತೆಂದು ರಾಜ ವಂಶಾವಳಿ ತಿಳಿಸುತ್ತದೆ. ಕೊತ್ತಲಗಳ ಹೆಸರಿನ ದೊಡ್ಡ ಪಟ್ಟಿಯೇ ಲಭ್ಯವಿದೆ.

ಕೋಟೆಗೆ ಪ್ರಧಾನವಾಗಿ ೪ ಬಾಗಿಲುಗಳು, ೬ ದಿಡ್ಡೀ ಬಾಗಿಲುಗಳು ಇದ್ದವಲ್ಲದೆ ಸುಮಾರು ೮ ಗುಪ್ತ ಬಾಗಿಲು ಗಳಿದ್ದವೆಂದು ತಿಳಿದು ಬರುತ್ತದೆ.

ಪೂರ್ವದಿಂದಲೂ ಕೋಟೆಯ ಒಳಹೋಗಲು ಗಂಜಾಂ ಬಾಗಿಲನ್ನೇ ಉಪಯೋಗಿಸುತ್ತಿದ್ದರೂ ಪ್ರಧಾನ ಮಹಾದ್ವಾರ ದಕ್ಷಿಣದ ಆನೆಯ ಬಾಗಿಲೇ.

ಮುಖ್ಯವಾದ ಬಾಗಿಲುಗಳ ಹೆಸರುಗಳು ಹೀಗಿವೆ:

೧. ಸೋಮಲಿಂಗನ ಕಟ್ಟೆ ಬಾಗಿಲು (ರಾಜರ ಕಾಲದ ಗುಪ್ತದ್ವಾರ ಇಲ್ಲಿತ್ತಂತೆ)

೨. ದೆಹಲಿಯ ಬಾಗಿಲು (ಇಲ್ಲಿ ಈಗ ರೈಲು ಹಾದಿ ಇದೆ.)

೩. ಆನೆಯ ಅಗಸೆ ಬಾಗಿಲು (ಪಿರಿಯಾಪಟ್ಟಣದ ಸೇತುವೆಯ ಕಡೆ ಹೋಗಲು)

೪. ಚೆನ್ನಯ್ಯನ ದಿಡ್ಡಿ ಬಾಗಿಲು

೫. ಸಿದ್ದೇಶ್ವರ ದೇವಾಲಯದ ಬಳಿಯ ಬೆಂಗಳೂರು ಹೆಬ್ಬಾಗಿಲು (ಇದಕ್ಕೆ ಬಿದ್ದ ಬಾಗಿಲೆಂಬ ಹೆಸರಿದೆ)

* ನಂ. ೫, ೧ನೇ ತಿರುವು, ಶ್ರೀರಾಮಪುರಂ, ಬೆಂಗಳೂರು ೫೬೦ ೦೨೧

೬. ವಾಡೆ ದಿಡ್ಡಿ ಬಾಗಿಲು

೭. ಕೃಷ್ಣ ದಿಡ್ಡಿ ಬಾಗಿಲು (ದೇವರ ಅಭಿಷೇಕಕ್ಕಾಗಿ ಅಗ್ರೋದಕ ತರುತ್ತಿದ್ದ ಬಾಗಿಲು)

೮. ಹೊಳೆಯ ದಿಡ್ಡಿ ಬಾಗಿಲು

೯. ಬ್ರಹ್ಮಪುರಿ ದಿಡ್ಡಿ ಬಾಗಿಲು ....ಇತ್ಯಾದಿ.

ಪಟ್ಟಣಕ್ಕೆ ಬರಲು ಕೇವಲ ಕೋಟೆ ಬಾಗಿಲುಗಳಲ್ಲದೆ, ನದಿಯ ಕಡೆಯಿಂದ ಬರಲು ಉತ್ತರದ ಕಡೆ ೨ ಕಡಸುಗಳೂ, ದಕ್ಷಿಣದ ಕಡೆ ೩ ಕಡಸುಗಳೂ ಇದ್ದವು. ಅವುಗಳ ಹೆಸರುಗಳು ಹೀಗಿವೆ:

೧. ಚಂದಾಗಾಲದ ಕಡಸು (ಇಲ್ಲಿ ಕಾವಲು ಅಶ್ವಸೈನ್ಯವಿತ್ತು)

೨. ಕಾಶೀವಿಶ್ವನಾಥ ಕಡಸು.

೩. ಕರೀಘಟ್ಟದ ಕಡಸು (ಗಂಜಾಂ ಸ್ನಾನಘಟ್ಟದ ಬಳಿ)

೪. ಸಂಗಮ ಅಥವಾ ಲಾಲ್‌ಬಾಗ್ ಕಡಸು.

ಶ್ರೀರಂಗಪಟ್ಟಣದ ಹೆಸರು ಹೇಳುವಾಗ ಅದರೊಂದಿಗೆ ಬರುವ ಅಂದಿನ ನಗರದ ಕೆಲವು ಹರವುಗಳನ್ನೂ ಸೂಚಿಸಲೇ ಬೇಕಾಗುತ್ತದೆ. ಇವುಗಳಲ್ಲಿ ಮುಖ್ಯವಾದುವು ಕಿರಂಗೂರು, ಬಾಬೂರಾಯನಕೊಪ್ಪಲು, ಶ್ರೀನಿವಾಸಪುರ, ಬಮ್ಮೂರು ಅಗ್ರಹಾರ (ಸುಲ್ತಾನ್‌ಪೇಟೆ), ಅಗರ, ಪಶ್ಚಿಮವಾಹಿನಿ, ಪಾಲಹಳ್ಳಿ ಮತ್ತು ಪ್ರಮುಖವಾಗಿ ಗಂಜಾಂ. ಒಟ್ಟು ೮ ವಿಸ್ತರಣಗಳನ್ನೂ, ೫ ಲಕ್ಷ ಪ್ರಜಾಸಂಖ್ಯೆಯನ್ನೂ ಹೊಂದಿತ್ತು. ನಾಲ್ಕನೆಯ ಮೈಸೂರು ಯುದ್ಧಾನಂತರವೂ, ಅನೇಕ ಹರವುಗಳು ನಿರ್ನಾಮವಾದುವು. ಲೂಟಿಯ ಅನಂತರವೂ ಫ್ರಾನ್ಸಿಸ್ ಬುಕಾನನ್ ೧೮೦೦ರಲ್ಲಿ ಶ್ರೀರಂಗ ಪಟ್ಟಣಕ್ಕೆ ಬಂದಾಗ ಈ ನಗರದ ಜನಸಂಖ್ಯೆ ೧ ಲಕ್ಷ ೫೦ ಸಾವಿರದಿಂದ ೧ ಲಕ್ಷ ೮೦ ಸಾವಿರವಿತ್ತೆಂದು ದಾಖಲಿಸಿದ್ದಾನೆ.

ಶ್ರೀರಂಗಪಟ್ಟಣದ ವಿಸ್ತಾರ ಪೂರ್ವದಿಂದ ಪಶ್ಚಿಮಕ್ಕೆ ೩ ಮೈಲಿ. ಉತ್ತರದಿಂದ ದಕ್ಷಿಣಕ್ಕೆ ೪ ಮೈಲಿಗಳಿಗೆ ಮೇಲ್ಪಟ್ಟಿತ್ತು ಎಂದು ಕರ್ನಲ್ ಪಾರ್ಸನ್ ಮತ್ತು ಇರ್ವಿನ್ ಬರೋರವರು ತಮ್ಮ ನೆನಪುಗಳಲ್ಲಿ ದಾಖಲಿಸಿದ್ದಾರೆ. ಇಂದಿಗೂ ಶ್ರೀರಂಗಪಟ್ಟಣದ ಮೇಲೆ ೪೫ ಪುಸ್ತಕಗಳು ೨೦೦ಕ್ಕೆ ಮೇಲ್ಪಟ್ಟು ಚದುರಿದ ಲೇಖನಗಳೂ ದೊರೆಯುತ್ತದೆಯಾದರೂ ಈ ಪ್ರಾಚೀನ ರಾಜಧಾನಿಯ ಐತಿಹಾಸಿಕ ಸ್ಮಾರಕಗಳ ವಿವರಗಳೆಲ್ಲವೂ ಸಮಗ್ರವಾಗಿ ಒಂದೆಡೆ ಲಭ್ಯವಾಗುತ್ತಿಲ್ಲ. ಭಾವೀ ಪೀಳಿಗೆಯವರಿಗೆ ಈ ಬಗೆಗೆ ಆದಷ್ಟು ವಿವರ ದಾಖಲಿಸಿಡಬೇಕೆಂಬುದೇ ಈ ಪ್ರಬಂಧದ ಉದ್ದೇಶ.

ಶ್ರೀರಂಗಪಟ್ಟಣಕ್ಕೆ ಪೂರ್ವದ ಕಡೆ ಇರುವುದೇ ಗಂಜಾಂ. ಇದಕ್ಕೆ "**ಷಹರ್‌ಗಂಜಾಂ**" ಎಂದೇ ಹೆಸರಿತ್ತು. ಇದೊಂದು ವಾಣಿಜ್ಯ ಕೈಗಾರಿಕಾ ಕೇಂದ್ರವಾಗಿತ್ತು[?]. ವಿಸ್ತಾರವಾದ ರಸ್ತೆಗಳಿಂದಲೂ, ಉತ್ತಮವಾದ ಪ್ರಾಸಾದಗಳಿಂದ ಕೂಡಿದ್ದ ಗಂಜಾಂನ ಸುತ್ತಲೂ ಜೇಡಿಮಣ್ಣು ಮತ್ತು ಇಟ್ಟಿಗೆಯಿಂದ ಕಟ್ಟಿದ ಕೋಟೆಯಿತ್ತು. ಮೈಸೂರಿನ ೩ನೇ ಯುದ್ಧಾನಂತರ (ಕ್ರಿ.ಶ. ೧೭೯೨) ಇಂಗ್ಲೀಷರು ಮತ್ತೆ ಇಲ್ಲಿಗೆ ಬಂದು ತಮ್ಮ ಸೈನ್ಯದ ನೆಲೆ ಮಾಡಿಕೊಳ್ಳದಿರಲೆಂದು ಟೀಪು ಗಂಜಾಂ ಕೋಟೆಯನ್ನೂ, ಕರೀಘಟ್ಟದಲ್ಲಿದ್ದ ಕೋಟೆಯನ್ನೂ ನೆಲಸಮ ಮಾಡಿಸಿದ [?]. ಕ್ರಿ.ಶ. ೧೮೦೦ ರ ವೇಳೆಗೆ ಗಂಜಾಂನ ಮುಕ್ಕಾಲು ಭಾಗ ನಾಶವಾಗಿದ್ದಾಗಲೂ ಸುಮಾರು ೨೫೦೦ ಅಥವಾ ೩೦೦೦ ಮನೆಗಳಿಂದ ಕೂಡಿತ್ತು. ೨೦೦ ಕೈಮಗ್ಗದ ಸಂಸಾರದವರಿದ್ದರು.

ಈಗ್ಗೆ ೬೦ ವರ್ಷಗಳ ಹಿಂದೆಯೂ ಶ್ರೀರಂಗಪಟ್ಟಣದ ಹಿರಿಯರು ನಗರದ ರಸ್ತೆಗಳನ್ನು ಸೂರ್ಯಬೀದಿ (ಮುಖ್ಯರಸ್ತೆ) ಚಂದ್ರಬೀದಿ (ಆನೆಬಾಗಿಲುರಸ್ತೆ), ಸಂತೇಪೇಟೆ (ಈಶಾನ್ಯಭಾಗ), ಕಾವಲು ಪೇಟೆ, ಗಾಣಿಗರ ಪೇಟೆ ಎಂದು ನಿರ್ದೇಶಿಸುತ್ತಿದ್ದರು. ಈಗಿನ ಪಟ್ಟಾಭಿರಾಮ ದೇವಾಲಯದ ಸಮೀಪ ಒಂದು ದೊಡ್ಡ ಮನೆಯನ್ನು ತೋರಿಸಿ ಇದು ದಿವಾನ್ ಪೂರ್ಣಯ್ಯನವರ ಮನೆಯೆಂದು ಹೇಳುತ್ತಿದ್ದರು. ನಮ್ಮ ಹಿರಿಯರಿಂದಲೂ ತಿಳಿದುಬರುವ ವಿಷಯಗಳು ಹೀಗಿವೆ:

ಶ್ರೀ ರಂಗನಾಥಸ್ವಾಮಿ ದೇವಾಲಯದ ಎದುರಿನಲ್ಲಿ ಇಂದು ಮುಮ್ಮಡಿ ಕೃಷ್ಣರಾಜರು ಜನಿಸಿದ '**ಜನನ ಮಂಟಪ**' ವಿದೆ. ಈ ಜಾಗದಲ್ಲೇ ಮೈಸೂರು ಅರಸರ ಅರಮನೆ ಇದ್ದುದು ನಿಜವಾದರೂ ಅದಕ್ಕೆ ಸೇರಿದ ಕೆಲವು ಕಟ್ಟಡಗಳ ಬಗ್ಗೆ ಮಾಹಿತಿಯು ತಿಳಿದು ಬರುತ್ತಿಲ್ಲ.

ವಿಜಯನಗರದ ರಾಜಪ್ರತಿನಿಧಿ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದಾಗ ಆತನ ರಾಜ ಪ್ರಾಸಾದ ಪೂರ್ವಾಭಿಮುಖವಾಗಿದ್ದು, ಇಂದಿನ ನರಸಿಂಹಸ್ವಾಮಿ ದೇವಾಲಯ ಇರುವ ಜಾಗ ಮೈದಾನವಾಗಿತ್ತು. ರಾಜ ವಂಶಾವಳಿಯಲ್ಲಿ ತಿಳಿಸುವಂತೆ "**ರಾಜ ಪ್ರಾಸಾದವಂ ಉತ್ತರ ದಿಶೆಯೋಳ್ ನೇರ್ಪಡಿಸಿ**" ಎಂಬ ಉಲ್ಲೇಖ ಇದಕ್ಕೆ ಪುಷ್ಟಿ ಕೊಡುತ್ತದೆ. ರಾಜ ಒಡೆಯರ ಕಾಲದಲ್ಲಿ ಅರಮನೆಯ ದರ್ಬಾರ್ ಸಜ್ಜೆಯನ್ನು ಉತ್ತರದಕಡೆ ಮುಖ ಮಾಡಿದಂತೆ ಪುನಾರಚಿಸಿದರಂತೆ. ಅರಮನೆಯ ಪೂರ್ವ ಭಾಗದಲ್ಲಿ ರಾಜ್ಯ ಕಛೇರಿಗಳೂ, ಹಾಗೂ ಹಲವು ಚಾವಡಿಗಳಿಗೆ ಎಡೆಮಾಡಿ ಕೊಟ್ಟಿದ್ದರಂತೆ. ಶ್ರೀರಂಗನಾಥದೇವಾಲಯದ ಬಲ ಭಾಗಕ್ಕೆ ಎಂದರೆ ಇಂದಿನ ರೈಲ್ವೆ ನಿಲ್ದಾಣದ ಹಿಂದೆ ರಾಣೀ ವಾಸದ ಕೆಲವು ಕಟ್ಟಡಗಳೂ ಅರಮನೆಯ ತೋಪ್ ಖಾನೆಯೂ ಇದ್ದಿತೆಂದು ನಮ್ಮ ಹಿರಿಯರ

ಹೇಳಿಕೆ. ಅರಮನೆ ಹೇಗಿದ್ದಿತು ಎಂಬುದನ್ನು ತೋರಿಸುವ ಸುಂದರ ತೈಲಚಿತ್ರ ಇಂದಿನ ಜನನ ಮಂಟಪದ ಪಶ್ಚಿಮ ಗೋಡೆಗೆ ತಗುಲಿ ಹಾಕಿರುವುದನ್ನೂ ನಾನು ಕಂಡಿದ್ದೇನೆ. ಶ್ರೀ ರಘುಪತಿಭಟ್ಟರು ನಡೆಸುತ್ತಿರುವ ''ಗಂಜೀಫಾ'' ಪ್ರದರ್ಶನ ಜನನ ಮಂಟಪದಲ್ಲಿ ನಡೆಯುತ್ತಿತ್ತು. ಇದೇ ರೀತಿಯ ಪರಿಪೂರ್ಣ ಚಿತ್ರ ಅಂದರೆ ರಾಣೀ ವಾಸವೂ ಸೇರಿದಂತಹ ತೈಲಚಿತ್ರ ಮೈಸೂರಿನ ಜಗನ್‌ಮೋಹನ್ ಅರಮನೆಯ ಚಿತ್ರಶಾಲೆಯಲ್ಲಿ ಕಾಣಸಿಗುತ್ತದೆ.

ಶ್ರೀ ರಂಗನಾಥಸ್ವಾಮಿ ದೇವಾಲಯದ ಉತ್ತರಕ್ಕೆ ಕೃಷ್ಣದಿಡ್ಡಿ ಬಾಗಿಲು ದಾಟಿ ನದಿ ದಡದಲ್ಲಿ ಒಂದು ಅಣೆಕಟ್ಟನಂತೆ ಕಟ್ಟಿ ಅಲ್ಲಿ ಒಂದು ಸುಂದರ ಕೊಳ ನಿರ್ಮಿಸಿ ಅದನ್ನು ಶುಕತೀರ್ಥವೆಂದು ಕರೆಯುತ್ತಿದ್ದರೆಂದೂ, ಅಲ್ಲಿ ವರ್ಷಕ್ಕೊಮ್ಮೆ ಗಜೇಂದ್ರ ಮೋಕ್ಷವೆಂಬ ಉತ್ಸವ ನಡೆಯುತ್ತಿತ್ತೆಂದೂ ರಾಜವಂಶಾವಳಿ ಮತ್ತಿತರ ದಾಖಲೆಗಳು ತಿಳಿಸುತ್ತವೆ. ಕಾವೇರಿಯ ಸ್ನಾನ ಘಟ್ಟಕ್ಕೆ ಮಣಿಕರ್ಣಿಕಾ ಘಟ್ಟವೆಂದು ಕರೆಯುತ್ತಿದ್ದರೆಂದೂ, ಆ ಘಟ್ಟದ ಸಮೀಪವೇ ರಾಜಮನೆತನದವರು ಜಲಕೇಳಿಯಾಡಲು ಕೊಳದಂತಹ ಕಲ್ಯಾಣಿಯೊಂದನ್ನು ದೊಡ್ಡದೇವರಾಜರ ಕಾಲದಲ್ಲಿ ನಿರ್ಮಿಸಲಾಯಿತೆಂದೂ ತಿಳಿದು ಬರುತ್ತದೆ. ಅಲ್ಲೊಂದು ವಿಹಾರದ ಕಟ್ಟಡವಿತ್ತೆಂದೂ ಹೇಳುತ್ತಾರೆ. ಕೋಟೆಯೊಳಗೆ ದಕ್ಷಿಣ ಹಾಗೂ ವಾಯುವ್ಯ ಭಾಗದ ನೆಲದಲ್ಲಿ ಭಾರೀ ನೆಲಮನೆಗಳನ್ನು ಮಾಡಿ, ಅವುಗಳಲ್ಲಿ ಧಾನ್ಯವನ್ನು ಸಂರಕ್ಷಿಸುತ್ತಿದ್ದಂತಹ ಎರಡು ಹಗೇವುಗಳನ್ನು ಈಗ ರೈಲು ನಿಲ್ದಾಣ ರಸ್ತೆಯಲ್ಲಿ ಪಿ.ಡಬ್ಲ್ಯು.ಡಿ. ಮತ್ತಿತರ ಕೆಲವು ಕಟ್ಟಡಗಳು ಬಂದಿರುವ ಕಟ್ಟಡಗಳ ಹಿಂದೆ ಇದ್ದುದನ್ನು ನಾನೇ ಸ್ವತಃ ಕಂಡಿದ್ದೆ. ಕೆಳಕ್ಕೆ ಇಳಿಯಲು ಗಾರೆಯ ಮೆಟ್ಟಿಲುಗಳಿದ್ದವು. ಇವನ್ನೆಲ್ಲಾ ಈಗ ಮುಚ್ಚಲಾಗಿದೆ.

ಗಂಜಾಂ ಬಾಗಿಲಿನಿಂದ ಬರುತ್ತಿದ್ದಂತೆಯೇ ಎಡಬಲ ಭಾಗಗಳಲ್ಲಿ ಸೈನಿಕರ ನೆಲೆಗಳೂ, ಕುದುರೆ ಲಾಯಗಳೂ ಇದ್ದುವೆಂದು ಕ॥ಕಾನ್‌ಸ್ಟೇನ್ ಪಾರ್ಸನ್‌ರವರು ತಮ್ಮ ಗ್ರಂಥದಲ್ಲಿ ತಿಳಿಸಿದ್ದಾರೆ.

ಕೃಷ್ಣ ದಿಡ್ಡಿ ಬಾಗಿಲಿಗೆ ಸ್ವಲ್ಪ ಪಶ್ಚಿಮಕ್ಕೆ, ದೆಹಲಿ ಗೇಟಿನಿಂದ ಪೂರ್ವಕ್ಕೆ ಕೋಟೆಯ ಭಾಗದಲ್ಲಿ ಇಂದಿಗೂ ಕೆಲವು ಹಳೆಯ ಮನೆಗಳಿದ್ದ ಗುರುತುಗಳಿವೆ. ಆ ಜಾಗದಲ್ಲಿ ಓಡಾಡಲೂ ಸಾಧ್ಯವಾಗದಷ್ಟು ದುರ್ನಾತವಿದೆ. ಈ ಜಾಗದಲ್ಲಿದ್ದ ಒಂದು ಮನೆಯಲ್ಲಿ ಮೈಸೂರು ರಾಜವಂಶೀಯರನ್ನು ಅರಮನೆಯಿಂದ ಕರೆತಂದು ಬಂಧನದಲ್ಲಿಡಲಾಗಿತ್ತೆಂದು ಜನ ಆ ಮನೆಯಿದ್ದ ಗುರುತನ್ನು ತೋರಿಸುತ್ತಿದ್ದರು. ಈಗ ಅಲ್ಲಿ ಯಾರೋ ತಾತ್ಕಾಲಿಕ ಮನೆ ಕಟ್ಟಿಕೊಂಡಿದ್ದಾರೆ.

ಸೋಮಲಿಂಗಕಟ್ಟೆಯ ಬಳಿ ರಾಜ್ಯದ ದೌತಿಚಾವಡಿ ಅಂದರೆ ದಫ್ತಾಗಾರವಿದ್ದುದನ್ನೇ ಬ್ರಿಟಿಷರು GARRISON HOSPITAL ಆಗಿ ಪರಿವರ್ತಿಸಿದರು. ಇದು ಒಂದು ಅಂತಸ್ತಿನ ಕಟ್ಟಡ. ಈ ಆಸ್ಪತ್ರೆಗೆ ಉತ್ತರದ ಕಡೆ ಮೀರ್‌ಸಾಧಕನ ಮನೆಯಿದ್ದು, ಅದರ ಸಮೀಪವೇ ಆತ ಕಟ್ಟಿಸಿದ ಮಸೀದಿಯೊಂದು ಇಂದಿಗೂ ಉಳಿದು ಬಂದಿದೆ. ಅದಕ್ಕೆ ಎದುರಾಗಿ ದಕ್ಷಿಣದ ಕಡೆ ಇದ್ದ ಊರ ಮಾರಮ್ಮನ ದೇವಾಲಯ ಯುದ್ಧಕಾಲದಲ್ಲೇ ನಾಶವಾಗಿ, ಈಗ ಗಂಜಾಂನ ಒಂದು ಮೂಲೆ ಸೇರಿದೆ. ರೈಲುನಿಲ್ದಾಣದಿಂದ ಊರ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ನಿಲ್ದಾಣಕ್ಕೆ ಸಮೀಪವೇ ೧೯೪೫ರ ವರೆವಿಗೂ ೫ ರೂಂಗಳುಳ್ಳ ಧರ್ಮಛತ್ರವಿತ್ತು. ಅದಕ್ಕೆ ಸ್ವಲ್ಪ ಆಗ್ನೇಯ ಭಾಗದಲ್ಲಿ ಡಿ. ಹ್ಯಾವಿಲ್ಯಾಂಡ್ ಎಂಬಾತ ೧೮೦೮ರಲ್ಲಿ ಕಟ್ಟಿದ ೧೧೨ ಅಡಿಉದ್ದ, ೪೬ ಅಡಿ ಅಗಲ, ೫೬ ಅಡಿ ದಪ್ಪ ಮಧ್ಯದಲ್ಲಿ ೩ ಅಡಿ ೧೦ ಅಂಗುಲ ದಪ್ಪವಿದ್ದ ಕಮಾನು ತೂಗುಸೇತುವೆಯನ್ನು ಹತ್ತಿ ಸೇತುವೆಯ ಮಧ್ಯದಲ್ಲಿ ಜಗ್ಗಿದಾಗ ಅದು ತೂಗುತ್ತಿದ್ದುದನ್ನು ಕಂಡು ನಾನು ಅನೇಕ ಬಾರಿ ಆನಂದ ಪಟ್ಟಿದ್ದೇನೆ. ಅದರ ಅವಶೇಷ ಇಂದಿಗೂ ನಿರ್ಲಕ್ಷಿತವಾಗಿ ಬಿದ್ದಿದೆ.

ಈಗ ಬೆಂಗಳೂರು ಕಡೆಯಿಂದ ಬರುವ ಹಳೆಯ ಮೀಟರ್‌ಗೇಜ್ ಸೇತುವೆಗೆ ಸಮೀಪ 'ದೆಹಲಿ' ಕೋಟೆ ಬಾಗಲಿತ್ತು. ಆ ಬಾಗಿಲಿನಿಂದ ಉತ್ತರ ದಡಕ್ಕೆ ನದಿ ಮಾರ್ಗ ಹೋಗಲು ಇದ್ದ ಸೇತುವೆಯೊಂದನ್ನು ಟೀಪು ನಾಶಗೊಳಿಸಿದನಾದರೂ ಸೇತುವೆಗೆ ಆಸರೆಯಾಗಿದ್ದ ಕಲ್ಲಿನ ಕಂಬಗಳನ್ನು ನಾನು ಚಿಕ್ಕವನಾಗಿದ್ದಾಗ ಕಂಡಿದ್ದೆ. ಈ ಸೇತುವೆ ಸುಮಾರು ೩೦೦-೪೦೦ ವರ್ಷಗಳಷ್ಟು ಹಳೆಯದು.

ಟೀಪುವಿನ ಲಾಲ್ ಮಹಲ್ ಅರಮನೆಯ ಬಗ್ಗೆ ಅನೇಕರು ಈಗಾಗಲೇ ಸಾಕಷ್ಟು ಹೇಳಿದ್ದಾರೆ. ಹಿಂದಿನ ಅರಸರ ಅರಮನೆಯ ವರ್ಣನೆಯನ್ನೂ ಅನೇಕರು ತಿಳಿಸಿದ್ದಾರೆ. ಆ ಬಗೆಗೆ ಹೆಚ್ಚೇನೂ ಹೇಳಬೇಕಿಲ್ಲ. ಆದರೆ, ಲಾಲ್‌ಮಹಲ್‌ನ ಎಡಪಾರ್ಶ್ವದಲ್ಲಿ ಪರಊರಿನ ಜನ ಉಳಿದುಕೊಳ್ಳಲು ಛತ್ರಗಳಂತು ಇದ್ದುವು. ಹೊಳೆಯ ದಿಡ್ಡಿ ಬಾಗಿಲಿಗೆ ಸೇರಿದಂತೆ ಕಳ್ಳ ದಿಡ್ಡಿ ಬಾಗಿಲೊಂದಿದ್ದುದು ಬಿದ್ದು ಹೋಗಿ ಅದನ್ನು ಮುಚ್ಚಲಾಗಿದೆ. ಇಂತಹವು ೪-೫ ಇದ್ದವು ಇಂದು ಕಾಣಸಿಗುವುದಿಲ್ಲ.

ರಂಗನಾಥನ ದೇವಾಲಯದ ಉತ್ತರಕ್ಕೆ ಈಗ ಡಂಜನ್ ಎಂದು ಕರೆಯುವ ಕೋಟೆಯೊಳಗಿನ ಬಂದೀಖಾನೆಯಂತಹುದೇ ಮತ್ತೊಂದು ಡಂಜನ್ ಕೋಟೆಯ ಈಶಾನ್ಯಭಾಗದಲ್ಲಿ ಅಂದರೆ ಬೆಂಗಳೂರು ಕಡೆಯ ಕೋಟೆಯ ಬಾಗಿಲ ಬಳಿ ಇಂದಿಗೂ ಇದೆ. ಈ ಬಂದೀಖಾನೆಯಲ್ಲೇ ಮಾಗಡಿಯ ಕೊನೆಯ ಪಾಳೆಯಗಾರ ಮುಮ್ಮಡಿ ಕೆಂಪ ವೀರಪ್ಪ ಗೌಡನನ್ನೂ ದೋಂಡೀವಾಘನನ್ನೂ ಸೆರೆ ಯಲ್ಲಿಟ್ಟಿದ್ದರೆಂದು ನಮ್ಮ ವಿದ್ಯಾಗುರುಗಳು ತಿಳಿಸಿದ್ದರು.

ದಕ್ಷಿಣ ಕೋಟೆ ಬಾಗಿಲಿಗೆ ಸಮೀಪ ಶ್ರೀರಂಗಪಟ್ಟಣದ ಏಕಮಾತ್ರ ದಿಗಂಬರ ಪಂಥದ ಜೈನದೇವಾಲಯವೂ ಅದಕ್ಕೆ ಬಲಭಾಗದಲ್ಲಿ ಸ್ವಲ್ಪ ದೂರದಲ್ಲೇ ಚರ್ಚು ಮತ್ತು ಸಿಮೆಟ್ರಿ ಇತ್ತು. ಹಿಂದೆ ತಿಳಿಸಿದ ನದಿಯ ಸಮೀಪದ, ರಾಜವಿಹಾರ ಮಂದಿರದ ಹಿಂಬದಿಗೆ ಎರಡು ಕೋಟೆಗಳ ನಡುವಿನ ಜಾಗದಲ್ಲೇ ಟೀಪುವಿಗೆ ಗುಂಡೇಟು ಬಿತ್ತೆಂದೂ ಅವನನ್ನು ಕೊಂದ ಬ್ರಿಟಿಷ್ ಸೈನಿಕನ ಹೆಸರನ್ನು ಮದರಾಸಿನ ಸೇಂಟ್‌ಜಾರ್ಜ್ ಕೆಥಿಡ್ರಿಲ್ ನಲ್ಲಿರುವ ಫಲಕದಲ್ಲಿ ನಿರ್ದೇಶಿಸಲಾಗಿದೆಯೆಂದೂ ಈ ಜಾಗವೇ ಟೀಪು ನಿರ್ದಿಷ್ಟವಾಗಿ ಏಟು ತಗುಲಿ ಬಿದ್ದ ಜಾಗವೆಂದೂ ಡಾ॥ಕೃಷ್ಣರವರು ಹೇಳುತ್ತಿದ್ದರು.

ಶ್ರೀರಂಗಪಟ್ಟಣದ ದೊಡ್ಡ ಮಸೀದಿ ಇದ್ದ ಸ್ಥಳದಲ್ಲಿ ವೀರಾಂಜನೇಯ ದೇವಾಲಯವಿದ್ದುದನ್ನು ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಮಸೀದಿಯಿಂದ ದಕ್ಷಿಣದ ಕಡೆ ಹೋಗುವ ರಸ್ತೆಯಲ್ಲಿ ಟೀಪುವಿನ ಸೈನ್ಯಾಧಿಕಾರಿಯೂ ಕೋಟೆಗಳ ಪ್ರಧಾನ ಮೇಲ್ವಿಚಾರಕನೂ ಆಗಿದ್ದ ಗುಲಾಂ ಆಲೀಖಾನನ ಸಮಾಧಿಯ ಕಟ್ಟಡವಿದೆ (ಝುಂಡಾ ಬತೇರಿಗೆ ಹೋಗುವ ದಾರಿ). ಕೋಟೆ ಬಾಗಿಲ ಬಳಿಯೇ ಮೀರ್ ಸಾಧಕನನ್ನು ಕೊಲೆ ಮಾಡಲಾಯಿತು.

ಅರಮನೆಯ ರಾಜಬೊಕ್ಕಸ ಅರಮನೆಗೆ ಸೇರಿದಂತೆಯೇ ಶ್ರೀರಂಗನಾಥದೇವಾಲಯದ ಬಲಭಾಗದಲ್ಲಿತ್ತೆಂದೂ, ಅದಕ್ಕೆ ಅರಮನೆಯಿಂದ ಹೋಗಿಬರಲು ಗುಪ್ತಮಾರ್ಗವಿತ್ತೆಂದೂ, ರಾಜವಂಶದವರಿಂದ ಅವರ ಸರ್ವಸ್ವವನ್ನೂ ಟೀಪು ಸುಲಿಗೆ ಮಾಡಲು ಪ್ರಯತ್ನಿಸಿದಾಗ, ಈ ಗುಪ್ತಮಾರ್ಗವಾಗಿಯೇ ರಾಜಭಂಡಾರದ ಬಹುಪಾಲನ್ನು ಸಾಗಿಸಿ ಸೋಮಲಿಂಗೇಶ್ವರ ದಿಡ್ಡಿ ಬಾಗಿಲ ಮೂಲಕ ಮೊದಲು ಚಂದ್ರವನದ ಈಶ್ವರದೇವಾಲಯದ ಬಳಿ ಇದ್ದ ಕಟ್ಟಡಕ್ಕೂ ಅನಂತರ ಮೈಸೂರಿಗೂ ಸಾಗಿಸಲಾಯಿತೆಂದು ನಮ್ಮ ಹಿರಿಯರೂ ಹೇಳುತ್ತಿದ್ದರು.

ಕೋಟೆಯೊಳಗೆ ಗಂಗಾಧರೇಶ್ವರ ದೇವಾಲಯ, ನರಸಿಂಹ ಸ್ವಾಮಿ ದೇವಾಲಯ, ಮತ್ತು ಶ್ರೀರಂಗನಾಥ ದೇವಾಲಯಗಳು ಪ್ರಧಾನವಾದುವು.

ಗಂಜಾಂ ಬಾಗಿಲಿಗೂ ಆನೇ ಬಾಗಿಲಿಗೂ ಮಧ್ಯೆ ಬ್ರಹ್ಮಪುರಿ ದಿಡ್ಡಿ ಬಾಗಿಲೊಂದಿದ್ದು ಅದು ಪಶ್ಚಿಮವಾಹಿನಿಗೂ, ಅಲ್ಲಿಂದ ಸುಲ್ತಾನ್‌ಪೇಟೆಗೂ ಹೋಗುತ್ತಿತ್ತು. ಹಿಂದಿನ ಸುಲ್ತಾನ್‌ಪೇಟೆ ಹಾಳಾಗಿ ಇಂದು ಬಮ್ಮೂರಅಗ್ರಹಾರವಾಗಿದೆ. ಸ್ಥಳವೂ ಸ್ವಲ್ಪ ಬದಲಾಯಿಸಿದೆ. ಅದರ ಪೂರ್ವದ ನೆಲೆಯ ಗುರುತನ್ನು ಈಗಲೂ ಪಶ್ಚಿಮವಾಹಿನಿಯಿಂದ ಮೈಸೂರಿಗೆ ಹೋಗುವ ೨-೨.೫ ಕಿ.ಮೀ ದೂರದಲ್ಲಿ ಹೊಲವೊಂದರಲ್ಲಿ ಏಕಾಂಗಿಯಾಗಿ ನಿಂತಿರುವ ಪಾಳುಮನೆಯೊಂದರಿಂದ ಗುರ್ತಿಸಬಹುದಾಗಿದೆ. ಆ ಮನೆಗೆ ಬಳಿದಿದ್ದ ನೀಲಿ, ಕೆಂಪು ಇತ್ಯಾದಿ ಬಣ್ಣಗಳನ್ನು ಈಗಲೂ ಕಾಣಬಹುದಾಗಿದೆ. ಈ ಮನೆಗೆ ಅನತಿದೂರದಲ್ಲಿಯೇ ಹರಿಯುವ ವಿರಜಾಕಾಲುವೆಯ ಬಳಿಯೇ ಕರ್ನಲ್ ವೆಲ್ಲೆಸ್ಲಿಯ ಸೈನ್ಯ ರಾತ್ರಿ ಕಾಲದಲ್ಲಿ ಕಾಲುವೆಯೊಳಗೆ ಬಿದ್ದು, ಒದ್ದಾಡಿ, ಟೀಪು ಸೈನಿಕರಿಂದ ಪೆಟ್ಟು ತಿಂದು ಜೀವ ಉಳಿಸಿಕೊಂಡು ಓಡಿದ್ದು.

ಬೆಂಗಳೂರು ರಸ್ತೆಯ ಕಡೆ ಕೋಟೆಯ ಈಶಾನ್ಯಭಾಗದಲ್ಲಿ ಸಿದ್ಧೇಶ್ವರ ದೇವಾಲಯವಿದೆ. ಆ ದೇವಾಲಯದಿಂದ ಇಂದಿನ ಬಸ್ ನಿಲ್ದಾಣದ ಸ್ವಲ್ಪ ದೂರದವರೆವಿಗೂ ಇದ್ದ ಪ್ರದೇಶವನ್ನು **'ಕೌಲ್ ಬಜಾರ್'** ಎಂದು ಕರೆಯಲಾಗುತ್ತಿತ್ತು. ಸದಾ ಜನರಿಂದ ಗಿಜಿಗಿಜಿಗುಡುತ್ತಿದ್ದು, ಸುಂಕದಚಾವಡಿ, ಪೊಮ್ಮಿನಚಾವಡಿ ಹಾಗೂ ಪಟ್ಟಣದಚಾವಡಿಗಳನ್ನು ಹೊಂದಿದ್ದ ಈ ಜಾಗ ವ್ಯವಸ್ಥಿತ ಮಾರು ಕಟ್ಟೆ ಪ್ರದೇಶವಾಗಿದ್ದು ಅನೇಕ ಅಂಗಡಿಗಳಿಂದ ಕೂಡಿತ್ತು. ಮೇಲೆ ಹೇಳಿದ ಚಾವಡಿಗಳ ಪೈಕಿ ಒಂದರಲ್ಲಿ ಮೈಸೂರು ಮೂರನೇ ಯುದ್ಧದ ಕಾಲದಲ್ಲಿ (೧೭೯೨) ಟೀಪುವಿಗೂ, ಬ್ರಿಟಿಷರಿಗೂ ಆದ ಅವಮಾನಕರ ಒಪ್ಪಂದಕ್ಕೆ ಸಹಿ ಬಿದ್ದುದು ಈ ಜಾಗದಲ್ಲಿಯೇ. ಈ ಅವಮಾನದ ಕೋಪದಿಂದ ಟೀಪು ಇಡೀ ಬೀದಿಯನ್ನೇ ನೆಲಸಮ ಮಾಡಿದ.

೧೭೬೬ ರಲ್ಲಿ ನಿಧನರಾದ ಇಮ್ಮಡಿ ಕೃಷ್ಣರಾಜರು, ೧೭೭೦ ರಲ್ಲಿ ನಿಧರಾದ ನಂಜರಾಜರು, ೧೭೮೦ ರಲ್ಲಿ ನಿಧನರಾದ ಖಾಸಾ ಚಾಮರಾಜರು ಹಾಗೂ ೧೭೯೬ ರಲ್ಲಿ ನಿಧನರಾದ ಚಾಮರಾಜರು ಮತ್ತು ಅವರ ಪತ್ನಿಯವರುಗಳ ಸಮಾಧಿಗಳು ಪಶ್ಚಿಮವಾಹಿನಿ ಸಮೀಪದ ಚಂದ್ರವನದಲ್ಲಿ ಹರಡಿಕೊಂಡಿವೆ. ಈ ಸ್ಥಳಗಳಲ್ಲಿ ಮುಳ್ಳಿನ ಗಿಡಗಳು ಬೆಳೆದಿದ್ದು ಒಳಗೆ ಹೋಗಿಬರುವುದೂ ಅಸಾಧ್ಯವಾಗಿದೆ.

ಚಂದ್ರವನದಲ್ಲಿ ಈಶ್ವರನ ಗುಡಿ ಸಮೀಪದಲ್ಲಿ ಪ್ರತಿ ವರ್ಷವೂ ಧಾತ್ರೀಹವನ ನಡೆಯುತ್ತಿತ್ತು. ನಾನು ೩ ಬಾರಿ ಈ ಉತ್ಸವಕ್ಕೆ ಹೋಗಿದ್ದೆ. ಪಶ್ಚಿಮ ವಾಹಿನಿಯ ನದೀ ತೀರದ ಅರಮನೆಗಳು, ಛತ್ರಗಳು ಮುಮ್ಮಡಿ ಕೃಷ್ಣರಾಜರ ಕಾಲದವು.

ಬಬ್ಬೂರಿಗೆ (ಬಮ್ಮೂರು) ಟೀಪು ಇಟ್ಟ ಹೆಸರು ಸುಲ್ತಾನ್‌ಪೇಟೆ. ಈ ಜಾಗದಲ್ಲಿ ಸೈನ್ಯಠಾಣೆಯೂ, ಆನೆಕರೋಟಿಯೂ ಇತ್ತಂತೆ. ಪಾಲಹಳ್ಳಿಯ ಸಮೀಪ ಅಶ್ವದಳದ ನೆಲೆಯಿತ್ತು.

ಅರಮನೆಗೆ ಸೇರಿದ ನಿರೂಪದ ಚಾವಡಿ, ಹೋಬಳಿ ಚಾವಡಿ, ಬಾಗಿಲ ಕಂದಾಚಾರದ ಚಾವಡಿಗಳಲ್ಲಿ ಕೆಲವು ಬಬ್ಬೂರು ದಿಡ್ಡಿ ಬಾಗಿಲ ಬಳಿಯೂ, ಸೋಮನಕಟ್ಟೆಬಾಗಿಲ ಬಳಿಯೂ ಇದ್ದುವು. ಚಂದ್ರವನದ ಬಳಿ ಹಾಗೂ ಗಂಜಾಂಗಳಲ್ಲಿ ತೋಪಿನ ಖಾನೆ ಹಾಗೂ ಮದ್ದು ಅರೆಯುವ ಮನೆಗಳಿದ್ದವು. ಬೃಹದಾಕಾರದ ಬೀಸುವ ಕಲ್ಲುಗಳೂ ಇದ್ದುವು. ಅಲ್ಲಿ ಅರೆದ ಮದ್ದನ್ನು ತಂದು

ಈಗಿನ ಬೆಂಗಳೂರು - ಮೈಸೂರು ರೈಲು ಹಳಿಯ ಸಮೀಪ ಕಾಣಸಿಗುವ ಗಾರೆಯಲ್ಲಿ ಕಟ್ಟಿದ ನೆಲಮಾಳಿಗೆಯ ಮದ್ದಿನ ಕೋಠಿಗಳಲ್ಲೂ, ಕರೀಘಟ್ಟದ ಠಾಣೆಯಲ್ಲೂ, ಗಂಜಾಂನಲ್ಲೂ ಶೇಖರಿಸಿಡುತ್ತಿದ್ದರು.

ನಾನು ಬಾಲ್ಯದಲ್ಲಿ ನೋಡಿದ್ದ ಶ್ರೀರಂಗಪಟ್ಟಣದ ಕೋಟೆಯ ಪೂರ್ವಭಾಗದ ಕೆಲವು ಕಟ್ಟಡಗಳ ಅವಶೇಷಗಳನ್ನು ನಮ್ಮ ಹಿರಿಯರು ದವತಿಖಾನೆ (ಅಂದರೆ ಆಡಳಿತ ಕಛೇರಿ) ಎಂದು ಕರೆಯುತ್ತಿದ್ದರು.

ಹೋಬಳಿ ಚಾವಡಿಯ ಆಗ್ನೇಯಕ್ಕೆ ಈಗ ಅನೇಕ ಸೈನಿಕರ ಸಮಾಧಿಗಳಿರುವ ಕಡೆ ಕಾಣುವ ಎತ್ತರದ ಜಾಗಕ್ಕೆ 'ಸಬ್ಬಳದ ತಿಟ್ಟು' ಎಂದು ಕರೆಯುತ್ತಿದ್ದರು. ತಪ್ಪು ಮಾಡಿದವರಿಗೆ ಕಾದ ಸಲಾಕಿಗಳಿಂದ ಕಣ್ಣು ಕಳೆಯುವುದು ಮತ್ತು ಮರಣದಂಡನೆಗೆ ಗುರಿಯಾದವರ ತಲೆ ಕಡಿಯುತ್ತಿದ್ದ ಜಾಗ ಇದೆಂದು ಹೇಳುತ್ತಿದ್ದರು. (ಹಳೇಬೀಡಿನ ಶೂಲದ ಮರಬೈಲಿನ ರೀತಿ.)

ಕರೀಘಟ್ಟದಲ್ಲೂ ಫಿರಂಗಿ ತಯಾರಿಸುವ ಕಾರ್ಖಾನೆಗಳಿದ್ದು ಅಲ್ಲಿ ತಯಾರಿಸಿದ ಯುದ್ಧೋಪಕರಣಗಳನ್ನು ಗರುಡನಗಿರಿ ಉಕ್ಕಡದ ಬಳಿ ಇದ್ದ ಸೇನಾಠಾಣೆಗೆ ಕಳುಹಿಸುತ್ತಿದ್ದರಂತೆ.

ಚಂದ್ರವನದ ಬಳಿ ದೊಡ್ಡ ಕಾಲುವೆಯಿಂದ ನೀರು ತಂದು ಬೆಳೆಸಿದ ತೋಟವೂ, ಅದರಲ್ಲೊಂದು ಕಾರಂಜಿಯೂ, ವಿಹಾರ ಗೃಹವೂ ಇತ್ತಂತೆ.

ಇಂದು 'ದರಿಯಾದವಲತ್' ಎಂದು ಕರೆಯುವ ಬೇಸಿಗೆ ಅರಮನೆ ಬಳಿ ಹಿಂದೆ ಮೈಸೂರರಸರ ಕಾಲದಲ್ಲಿ ದಸರೆಯ ವಿಜಯದಶಮಿಯಂದು ನಡೆಯುತ್ತಿದ್ದ ಶಮೀಪೂಜೆಯ ಕಾಲದಲ್ಲಿ ರಾಜರು ಬಂದು ತಂಗುತ್ತಿದ್ದ ವಿಶ್ರಾಂತಿ ಗೃಹವೂ, ಪೂಜೆ ನಡೆಸುತ್ತಿದ್ದ ಮಂಟಪವೂ ಇದ್ದಿತು. ದರಿಯಾದೌಲತ್‌ನ ಇಂದಿನ ಪೂರ್ವ ಪಶ್ಚಿಮ ಫೌಂಟನ್‌ಗಳ ನೆಲೆಯಲ್ಲಿ ಒಂದು ರಾಜರು ಅವಭೃತ ಸ್ನಾನ ಮಾಡುತ್ತಿದ್ದ ಕೊಳವಿತ್ತು. ವಿಶ್ರಾಂತಿಗೃಹವನ್ನು ನೆಲಸಮಮಾಡಿ ದರಿಯಾದೌಲತ್ ಕಟ್ಟಲಾಯಿತು. ಮಹಾನವಮಿ ಮಂಟಪ Water Tank ಆಯಿತು.

ಗಂಜಾಂನಲ್ಲಿ ಪ್ರಧಾನವಾದ ೪ ರಾಜ ಬೀದಿಗಳಿದ್ದುವು. ಪೂರ್ವದಿಂದ ಪಶ್ಚಿಮಕ್ಕೆ ಎರಡು, ಮತ್ತು ಉತ್ತರದಿಂದ ದಕ್ಷಿಣಕ್ಕೆ ಎರಡು. ಗಂಜಾಂನಲ್ಲೊಂದು ಇಗರ್ಜಿ ಇದೆ. ಅದರ ಸಮೀಪವೇ ಕರ್ನಲ್ ಗ್ರಿಂಸ್ಟೋನನ ಸಮಾಧಿಯಿದೆ. ದಕ್ಷಿಣದ ಕಡೆ ನದೀತೀರದಲ್ಲಿ ಗೋಸಾವಿಘಟ್ಟವಿದೆ. ಘಟ್ಟದಲ್ಲೇ ಈಶ್ವರ, ಹನುಮಂತ, ವಿಶ್ವೇಶ್ವರ ದೇವಾಲಯಗಳಿವೆ. ಊರ ನಡುವೆ ಶ್ರೀನಿವಾಸದೇವರ ದೇವಾಲಯವೂ ಉತ್ತರದ ನದೀತೀರದಲ್ಲಿ ನಿಮಿಷಾಂಬಾದೇವಾಲಯವೂ ಇವೆ. ಬಸ್ತೀಪಾಳು ಎನ್ನುವ ಕಡೆ ಪುರಾತನ ಪಾರ್ಶ್ವನಾಥ ದೇವಾಲಯವಿತ್ತು.

ಗಿರಿಣಿ ಇರುವೆಡೆ ರಾಜಬಂದೀಖಾನೆ ಇತ್ತು. ಕೊಡಗು ಮತ್ತು ಮದರಾಸಿನ ಬಳಿ ನಡೆದ ಯುದ್ಧಗಳಲ್ಲಿ ಸೆರೆಸಿಕ್ಕ ಮಲಬಾರ್ ಹಾಗೂ ಇಂಗ್ಲಿಷ್ ಸೈನಿಕರನ್ನು ಈ ಸೆರೆಮನೆಯಲ್ಲಿ ಕೂಡಿಹಾಕಲಾಗಿತ್ತು.

ಗಂಜಾಂನ ಈಗಿನ ಅಂಜೂರ ಬೆಳೆಗಾರರ ಸಹಕಾರ ಸಂಘ ಇರುವ ಕಟ್ಟಡದ ಪೂರ್ವ ಕಡೆಯ ರಸ್ತೆಯಿಂದ ನದಿ ಬದಿಯಲ್ಲೇ ಸಂಗಮದ ಕಡೆ ನಡೆದರೆ ಅರ್ಧದಾರಿಯಲ್ಲಿ ನದೀ ತೀರಕ್ಕೆ ತಾಕಿದಂತೆ, ಟೀಪುವಿನ ಸುಂದರವಾದ ಮತ್ತೊಂದು ಅರಮನೆ ೧೮೫೯ ರ ವರೆವಿಗೂ ಇತ್ತು. ಇದರಲ್ಲಿ ಕೆಲಕಾಲ ಇಂಗ್ಲಿಷ್ ಸೈನ್ಯಾಧಿಕಾರಿಗಳೂ ವಾಸಮಾಡುತ್ತಿದ್ದರು. ಅರಮನೆಯನ್ನು ಮಣ್ಣು ಮತ್ತು ಇಟ್ಟಿಗೆಯಿಂದಲೂ, ಮರದ ಹಲಗೆ, ತೊಲೆಗಳಿಂದ ಕಟ್ಟಲಾಗಿತ್ತಾದರೂ ಕೋಟೆಯೊಳಗಿದ್ದ ಅರಮನೆಗಿಂತ ಸುಂದರವೂ ವಿಶಾಲವೂ ಆಗಿತ್ತೆಂದು ಪಾರ್ಸನ್ ತಿಳಿಸುತ್ತಾನೆ. ಪೂರ್ವ ಪಶ್ಚಿಮಗಳ ಎರಡೂ ಕಡೆ ಉಪ್ಪರಿಗೆಯ ಮೊಗಸಾಲೆಗಳಿದ್ದು ಸುಂದರ ಬಣ್ಣಗಳಿಂದ ಚಿತ್ರಗಳನ್ನು ಗೋಡೆಯಲ್ಲಿ ಬಿಡಿಸಲಾಗಿತ್ತಂತೆ. ಕರ್ನಲ್ ಕ್ಲೋಸ್ ಎಂಬಾತ ಈ ಅರಮನೆ ತ್ಯಜಿಸಿದ ಅನಂತರ ಈ ಕಟ್ಟಡ ದಿನದಿನಕ್ಕೆ ಭಗ್ನವಾಗುತ್ತಾ ಬಂತು. ೧೮೫೯ರ ಫೆಬ್ರುವರಿ ೨೮ ರಂದು ಮದರಾಸಿನ ಗೌರ್‍ನರ್ ಈ ಅರಮನೆಯನ್ನು ಪೂರ್ಣವಾಗಿ ಕೆಡವಬೇಕೆಂದು ಆಜ್ಞೆ ಹೊರಡಿಸಿದ. ಅದರಂತೆ ೨ ತಿಂಗಳ ಕಾಲ ಅರಮನೆಯನ್ನು ಭಗ್ನಗೊಳಿಸುವ ಕೆಲಸ ನಡೆಯಿತು. ಕಟ್ಟಡಕ್ಕೆ ಉಪಯೋಗಿಸಿದ್ದ ಮರ ಮುಟ್ಟುಗಳನ್ನು ಹತ್ತಾರು ಆನೆಗಳಿಂದ ಎಳೆಸಿ ಉದಕಮಂಡಲಕ್ಕೆ ಕಳುಹಿಸಲಾಯಿತು. ಅಲ್ಲಿಯ ಸೇಂಟ್ ಸ್ಟೆಫನ್ ಚರ್ಚ್ ಕಟ್ಟಡಕ್ಕೆ ಈ ಅರಮನೆಯ ಜಂತಿಗೆಗಳನ್ನು, ಬಾಗಿಲು - ಬಾಗಿಲು ವಾಡಗಳನ್ನೂ ಉಪಯೋಗಿಸಲಾಯಿತು. ಏಪ್ರಿಲ್ ಕೊನೆಯ ವೇಳೆಗೆ ಅರಮನೆಯನ್ನು ನೆಲಸಮ ಮಾಡಲಾಯಿತು. ಈ ಬಗೆಗೆ ಊಟಿಯ ಚರ್ಚಿನಲ್ಲಿ ಇಂದಿಗೂ ಶಾಸನವಿದೆ.

ದಿವಾನ್ ಪೂರ್ಣಯ್ಯನವರ ಮನೆ ಹಿಂದೆ ಕೋಟೆಯೊಳಗೇ ಇದ್ದಿತಾದರೂ, ಟೀಪು ಅವರನ್ನು ಮತಾಂತರ ಮಾಡಿ, ಅವರ ಹೆಣ್ಣು ಮಕ್ಕಳನ್ನು ಈರ್ವರು ಮುಸ್ಲಿಂ ಸರದಾರರಿಗೆ ಮದುವೆ ಮಾಡಿಕೊಡುವ ಬಗೆಗೆ ಪ್ರಸ್ತಾಪ ಮಾಡಿದ ಅನಂತರ,

ಪೂರ್ಣಯ್ಯನವರು ಹೈದರಾಲಿಯ ಪತ್ನಿಯವರ ಸಹಾಯದಿಂದ ಪಾರಾದರೂ ಕೋಟೆಯೊಳಗೆ ವಾಸಮಾಡಲು ಬಯಸಲಿಲ್ಲ. ಈಗ ಕಾವೇರಿಯ ದಕ್ಷಿಣ ವಾಹಿನಿ ತೀರದ ಬಳಿ 'ಡಾಕ್ಟರ್ ಹೌಸ್' ಎಂದು ಕರೆಯಲ್ಪಡುವ ಮನೆಗೆ ಸ್ಥಳಾಂತರಿಸಿದರು. ಮೈಸೂರಿನಲ್ಲಿ ಕೆಲಕಾಲವಿದ್ದು ಮತ್ತೆ ಇದೇ ಮನೆಗೆ ಬಂದು ೧೮೧೨ ರ ಮಾರ್ಚ್ ೨೯ ರಂದು ನಿಧನರಾದರೆಂದು ಅಲ್ಲಿರುವ ಶಿಲಾಶಾಸನ ತಿಳಿಸುತ್ತದೆ.

ಗಂಜಾಂ ಸ್ನಾನಘಟ್ಟ ಅತ್ಯಂತ ಸುಂದರವಾಗಿತ್ತು. ಕೆತ್ತಿದ ಕಲ್ಲುಗಳನ್ನಳವಡಿಸಿ ಘಟ್ಟ ಕಟ್ಟಿದ್ದರು. ಘಟ್ಟದ ಎರಡೂ ಕಡೆ ಮಂಟಪಗಳಿದ್ದು ಸ್ತ್ರೀ ಪುರುಷರು ಬಟ್ಟೆ ಬದಲಾಯಿಸಲು ಅವಕಾಶವಿತ್ತು. ಅದರ ಸಮೀಪವೇ ಗಂಗಾಧರೇಶ್ವರಗುಡಿಯಿತ್ತು. ಇಂದು ಗಂಜಾಂ ಸುಬ್ಬಯ್ಯನವರ ಮನೆ ಎಂದು ಹೇಳುವ ಹಾಗೂ ಅದರ ಮುಂದಲ ಎರಡೂ ಸಾಲು ಮನೆಗಳೂ ನಮ್ಮ ಹಿರಿಯರ ಸ್ವತ್ತಾಗಿದ್ದುವು. ಅಂದಿನ ವೈಭವ ದಿನಗಳನ್ನು ನಮ್ಮ ಹಿರಿಯರು ವರ್ಣಿಸುತ್ತಿದ್ದುದನ್ನು ನೆನೆಸಿಕೊಂಡರೆ ಇಂದಿಗೂ ಮೈ, ಮನ ಪುಳಕಿತವಾಗುತ್ತದೆ. ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವ ಸ್ಮಾರಕಗಳನ್ನು ವಿವರಿಸದೆ, ಮುಖ್ಯವಾಗಿದ್ದರೂ ಅಷ್ಟು ಗಮನ ಸೆಳೆದಿಲ್ಲದ ಇತರ ಸ್ಮಾರಕ ನೆಲೆಗಳ ಬಗ್ಗೆ ಇಲ್ಲಿ ನನಗೆ ತಿಳಿದಷ್ಟು ದಾಖಲಿಸಲಾಗಿದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಇದೇ ನಮ್ಮ ಹಿರಿಯರ ಪೂರ್ವ ವಾಸಸ್ಥಾನ. ನನ್ನ ತಂದೆಯವರು ಕಿರಂಗೂರಿನವರು, ತಾಯಿ ಗಂಜಾಂಗೆ ಸೇರಿದವರು.

೨. ನಾನು ೮-೧೦ ವರ್ಷದ ಹುಡುಗನಾಗಿದ್ದಾಗಲೂ ನಮ್ಮ ಹಿರಿಯರು ನದಿಯ ತಡಿಗೆ ಕರೆದುಕೊಂಡುಹೋಗಿ ಅಂದಿನ ಕೋಟೆಯ ಅವಶೇಷವಾದ ಮಣ್ಣಿನ ಗುಪ್ಪೆಗಳನ್ನು ತೋರಿಸಿ ವರ್ಣಿಸುತ್ತಿದ್ದುದು ನನಗೆ ನೆನಪಿದೆ.

ಕು|| ಸುಜಾತಾ ಮಲ್ಲನಗೌಡ *

ಮಲಯಬಾದ್ ಕೋಟೆ

ಹಿನ್ನೆಲೆ

ಐತಿಹಾಸಿಕ ದೃಷ್ಟಿಯಿಂದ ಮಹತ್ವ ಪಡೆದ ಮಲಯಬಾದ್ ಇಂದು ಜಿಲ್ಲಾ ಕೇಂದ್ರವಾದ ರಾಯಚೂರಿನಿಂದ ಸುಮಾರು ೬ ಕಿ.ಮೀ. ದೂರದಲ್ಲಿದೆ. ಈ ಊರಿನ ಪ್ರಮುಖ ಆಕರ್ಷಣೆ ಎಂದರೆ ಇಲ್ಲಿ ನಿರ್ಮಿಸಿರುವಂತ ಬಲಿಷ್ಠವಾದ ಕೋಟೆ ಎಂದರೆ ತಪ್ಪಾಗಲಾರದು. ಏಕೆಂದರೆ ಕರ್ನಾಟಕದ ಅನೇಕ ಕೋಟೆ - ಕೊತ್ತಳಗಳಲ್ಲಿ ಈ ಮಲಯಬಾದ್ ಕೋಟೆಯು ಮಹತ್ವದಾಗಿದ್ದು, ತನ್ನದೇ ಆದ ವೈಶಿಷ್ಟ್ಯಗಳಿಂದ ಪ್ರಸಿದ್ಧಿ ಪಡೆದಿದೆ. ಇಲ್ಲಿ ದೊರೆತಿರುವ ಪ್ರಕಟಿತ ಶಾಸನಗಳಲ್ಲಿ ಕೋಟೆಯ ಕಾಲಮಾನ ಉಲ್ಲೇಖವಾಗಿಲ್ಲ. ಅಲ್ಲದೆ ಇನ್ನೂ ಅಪ್ರಕಟಿತ ಶಾಸನಗಳು ಅಲ್ಲಲ್ಲಿ ಕಂಡು ಬಂದಿರುವುದರಿಂದ ಇನ್ನೂ ಆಳವಾದ ಅಧ್ಯಯನ ನಡೆಸಬೇಕಾಗಿದೆ. ಆದ್ದರಿಂದ ಕೋಟೆಯ ರಚನೆ, ವಿನ್ಯಾಸ, ದಪ್ಪನೆಯ ಕಲ್ಲುಗಳ ಬಳಕೆ ಇವುಗಳಿಂದ ಈ ಕೋಟೆಯು ಹೆಚ್ಚಾಗಿ ರಾಯಚೂರು ಕೋಟೆಯನ್ನು ಹೋಲುವುದರಿಂದ ಈ ಕೋಟೆಯನ್ನು ಸುಮಾರು ಕ್ರಿ.ಶ. ೧೩ನೇ ಶತಮಾನದ ಕೊನೆಭಾಗದಲ್ಲಿ ಕಾಕತೀಯರು ನಿರ್ಮಿಸಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಒಟ್ಟಿನಲ್ಲಿ ಮಲಯಬಾದ್ ಗ್ರಾಮವನ್ನು ರಕ್ಷಣೆ ಮಾಡಿದ ಇಲ್ಲಿನ ಕೋಟೆಯಲ್ಲಿ ಅನೇಕ ಮಹತ್ವದ ಅವಶೇಷಗಳನ್ನು ಕಾಣಬಹುದಾಗಿದೆ.

ಕೋಟೆಯ ಮಾದರಿ

ಪ್ರಾಚೀನ ಕಾಲದ ನಮ್ಮ ರಾಜಕೀಯ ವ್ಯವಸ್ಥೆಗೆ ಅಂದು ಪಟ್ಟಣ ಗ್ರಾಮಗಳ ಸಂರಕ್ಷಣೆಯ ಸಾಧನಗಳಾಗಿದ್ದ ಕೋಟೆ - ಕೊತ್ತಳಗಳು ಬಹಳ ಅವಶ್ಯವಾಗಿದ್ದು, ಯುದ್ಧ ತಂತ್ರದ ದೃಷ್ಟಿಯಿಂದ ಇಂತಹ ಕೋಟೆಯನ್ನು ಸೈನಿಕ ವಾಸ್ತುಮಾದರಿಯಲ್ಲಿ ನಿರ್ಮಿಸಲಾಗುತ್ತಿತ್ತು. ಹೆಸರೇ ಸೂಚಿಸುವಂತೆ ಇಲ್ಲಿ ಮಲಯಬಾದ್ ಬೆಟ್ಟ - ಗುಡ್ಡಗಳ ತಾಣವಾಗಿದ್ದು, ಕೋಟೆ ಕಟ್ಟಲು ಅಂದು ಈ ಪ್ರದೇಶ ಪ್ರಶಸ್ತವೆನಿಸಿದ್ದರಿಂದ ಅಂದರೆ ದಕ್ಷಿಣ, ಪೂರ್ವ, ಪಶ್ಚಿಮ ಭಾಗವೆಲ್ಲವೂ ಬೆಟ್ಟಗುಡ್ಡಗಳಿಂದ ಆವರಿಸಿರುವುದರಿಂದ ವೈರಿ ಆಕ್ರಮಣವನ್ನು ತಡೆಗಟ್ಟಲು ಇಲ್ಲಿ ನಿರ್ಮಾಣಕಾರನಿಗೆ ನೆಲದ ಮೇಲೆ ಬೆಟ್ಟದ ಮಧ್ಯದಲ್ಲಿ ಹಾಗೂ ಬೆಟ್ಟದ ಮೇಲೆ ಈ ಕೋಟೆ ಕಟ್ಟುವುದಕ್ಕೆ ಬಹಳ ಸುಲಭವಾಯಿತು. ಇಲ್ಲಿನ ಕೋಟೆಯನ್ನು ಎರಡು ಸುತ್ತಿನಲ್ಲಿ ಕಟ್ಟಲಾಗಿದೆ. ಕೋಟೆ - ರಚನೆಯ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಿರ್ಮಾಣಕಾರನ ದೂರದೃಷ್ಟಿ ಬುದ್ಧಿ ಚಾತುರ್ಯವು ಸ್ಪಷ್ಟವಾಗಿ ಗೋಚರಿಸುತ್ತದೆ. ಒಟ್ಟಿನಲ್ಲಿ ಈ ಪಟ್ಟಣದ ರಕ್ಷಣೆಯ ಸಾಧನವಾಗಿದ್ದ ಇಲ್ಲಿನ ಕೋಟೆಯಲ್ಲಿ ಬಾಗಿಲುಗಳು, ಕೊತ್ತಳಗಳು, ಗುಪ್ತಮಾರ್ಗಗಳು, ಕೆರೆ-ಕೊಳಗಳು ಇತರ ಅವಶೇಷಗಳು ಕಂಡು ಬಂದಿವೆ.

ಕೋಟೆಗೋಡೆ ಮತ್ತು ಕೊತ್ತಳಗಳು

ಮಲಯಬಾದ್ ಕೋಟೆಗೋಡೆಗೆ ವಿವಿಧ ರೀತಿಯ ಕಲ್ಲುಗಳನ್ನು ಬಳಸಲಾಗಿದೆ. ಒಳಕೋಟೆ ಗೋಡೆಗೆ ದೊಡ್ಡದಾದ ದಪ್ಪನೆಯ ಕಲ್ಲುಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ಆದ್ದರಿಂದ ಈ ಗೋಡೆಯು ಕಾಕತೀಯರ ಕಾಲದಲ್ಲಿ ಆದದ್ದು. ಇಂತಹದೇ ಕಲ್ಲುಗಳನ್ನು ರಾಯಚೂರಿನ ಒಳಕೋಟೆಗೆ ಬಳಸಲಾಗಿದೆ. ಈ ಕಲ್ಲುಗಳನ್ನು ಯಾವ ರೀತಿ ಈ ಸ್ಥಳಕ್ಕೆ ತಂದು ಕೋಟೆಗೋಡೆ ನಿರ್ಮಿಸಿದ್ದಾರೆ ಎನ್ನುವ ವಿಷಯ ಬಹಳ ಸೋಜಿಗವೆನಿಸುತ್ತದೆ. ಅದಕ್ಕೆ ಪುಷ್ಟೀಕರಿಸುವಂತೆ ಈ ಗೋಡೆಯ ಕಲ್ಲುಗಳ ಮೇಲೆ ಅಂದು ಕಲ್ಲುಗಳನ್ನು ಸಾಗಿಸುತ್ತಿದ್ದ ಚಿತ್ರ ಕೆತ್ತನೆಯು ಕಂಡು ಬಂದಿದೆ. ಕಲ್ಲನ್ನು ನಾಲ್ಕು ಚಕ್ರಗಳಿರುವ ಬಂಡಿಯಲ್ಲೆ ಸಾಗಿಸಲಾಗುತ್ತಿದೆ. ಬಂಡಿಯನ್ನು ನಾಲ್ಕು ಜೊತೆ ಕೋಣಗಳು ಎಳೆಯುತ್ತಿವೆ. ಮುಂದೆ ಒಬ್ಬನು ಮುಂದಿನ ನೊಗಕ್ಕೆ ಕಟ್ಟಿದ ಹಗ್ಗವನ್ನು ಹಿಡಿದುಕೊಂಡು ಹೋಗುತ್ತಿದ್ದಾನೆ. ಒಂದೊಂದು ಜೊತೆ ಕೋಣಗಳನ್ನು ಒಬ್ಬೊಬ್ಬರು ನಿಯಂತ್ರಿಸುತ್ತಿದ್ದಾರೆ. ಕೊನೆಯ ಜೊತೆಯ ನಿಯಂತ್ರಿಕ, ಬಂಡಿಯಲ್ಲಿ ಮುಂದೆ ಚಾಚಿಕೊಂಡಿರುವ

* ಆಶ್ರಯ ಬಿ. ಹಂಪನಗೌಡ, ಮಾಜಿ ಶಾಸಕರು, ಸಿಂಧನೂರು, ರಾಯಚೂರು ಜಿಲ್ಲೆ

ಕಲ್ಲಿನ ಮೇಲೆ ಕುಳಿತಿದ್ದಾನೆ. ಕಲ್ಲಿನ ಭಾರದಿಂದ ಕೋಣಗಳ ಮೇಲೆ ಬಿದ್ದಿರುವ ಒತ್ತಡವನ್ನು ಚಿತ್ರಕಾರನು ನೈಜವಾಗಿ ಚಿತ್ರಿಸಿದ್ದಾನೆ. ತಲೆ ಮತ್ತು ನಡು ಬಗ್ಗಿಸಿ ಮುಂದಕ್ಕೆ ಎಳೆಯುವಾಗ ಅವುಗಳ ನಾಲಗೆಯು ಹೊರಗೆ ಬಂದು ಬಾಲವು ಮಡಚಿಕೊಂಡಿದೆ. ಕಲ್ಲಿನ ಮಧ್ಯದಲ್ಲಿ ಹಿಮ್ಮುಖವಾಗಿ ಕುಳಿತಿರುವ ಒಬ್ಬ ವ್ಯಕ್ತಿ ಹಿಂದೆ ಸನ್ನೆಕೋಲಿನಿಂದ ಬಂಡಿಯನ್ನು ಮುಂದೆ ತಳ್ಳುವುದನ್ನು ನಿಯಂತ್ರಿಸುತ್ತಿದ್ದಾನೆ. ಬಹಳ ದೊಡ್ಡ ಸನ್ನೆಕೋಲನ್ನು ಬಂಡಿಯ ಹಿಂದಿನ ಚಕ್ರದಡಿಯಲ್ಲಿಟ್ಟು ಮೀಟುತ್ತಿದ್ದಾರೆ. ಕೋಲನ್ನು ಕೆಳಗಿನಿಂದ ಮೂವರು ಕೆಳಗೆ ಎಳೆದರೆ ಮೂವರು ಕೋಲಿನ ಮೇಲೆ ಕೂತು ತಮ್ಮ ಭಾರದಿಂದ ಅದನ್ನು ಕೆಳಗೆ ತಳ್ಳುತ್ತಿದ್ದಾರೆ. ಪ್ರಾಚೀನ ಕಾಲದಲ್ಲಿ ದೊಡ್ಡ ಕಲ್ಲುಗಳನ್ನು ಸಾಗಿಸುವುದನ್ನು ತೋರಿಸುವ ಈ ಚಿತ್ರ ಬಹಳ ಮಹತ್ವದ್ದಾಗಿದೆ. ಹೊರಕೋಟೆ ಗೋಡೆಗೆ ಚೌಕಾಕಾರದ ಚಿಕ್ಕಚಿಕ್ಕ ಕಲ್ಲುಗಳನ್ನು ಬಳಸಿರುವುದರಿಂದ ಇದನ್ನು ವಿಜಯನಗರದ ಪ್ರಾರಂಭ ಕಾಲದಲ್ಲಿ ನಿರ್ಮಿಸಲಾಗಿದೆ.

ಕೊತ್ತಳಗಳು

ಮಲಯಬಾದ್ ಕೋಟೆಯಲ್ಲಿ ನಾವು ಚೌಕಾಕಾರದ



ಕೊತ್ತಳಗಳನ್ನು ನೋಡಬಹುದು. ಕೋಟೆಗೋಡೆಗೆ ಹೊಂದಿಕೊಂಡು ಈ ಕೊತ್ತಳಗಳು ಇವೆ.

ಬಾಗಿಲುಗಳು

ಆಗಿನ ಗ್ರಾಮವನ್ನು ಸುತ್ತುವರೆದ ಈ ಕೋಟೆಯಲ್ಲಿ ಅನೇಕ ರೀತಿಯ ಹೆಬ್ಬಾಗಿಲುಗಳು ಕಿರಿದಾದ ಬಾಗಿಲುಗಳು ಕಂಡು ಬರುತ್ತವೆ. ಈ ಒಳಕೋಟೆಯಲ್ಲಿ ಮೂರು ಹೆಬ್ಬಾಗಿಲುಗಳಿವೆ. ಪೂರ್ವಕ್ಕೆ, ಉತ್ತರಕ್ಕೆ, ಮತ್ತು ಪಶ್ಚಿಮಕ್ಕೆ ಇದ್ದು ದಕ್ಷಿಣಕ್ಕೆ ಬರೀ ಬಾಗಿಲು ಇದೆ. ಪೂರ್ವಮುಖದ ಹೆಬ್ಬಾಗಿಲಿನ ಮೇಲೆ ಗಣೇಶನ ಶಿಲ್ಪವನ್ನು ಕಾಣಬಹುದು. ಆದರೆ ಕಂಬ, ಭಾವಣಿ, ಯಾವುದೂ ಸದ್ಯದ ಸ್ಥಿತಿಯಲ್ಲಿ ಹೆಬ್ಬಾಗಿಲುಗಳಲ್ಲಿ ಕಂಡು ಬರುವುದಿಲ್ಲ. ಮುಂದೆ ಬೆಟ್ಟದ ಮೇಲೆ ಹೋದಂತೆ ಅಲ್ಲಲ್ಲಿ ಕಿರಿದಾದ ಬಾಗಿಲುಗಳು ಸಿಗುತ್ತವೆ.

ಗುಪ್ತಮಾರ್ಗಗಳು

ಈ ಮಲಯಬಾದ್ ಕೋಟೆಯಲ್ಲಿ ಕೆಲವು ಗುಪ್ತಮಾರ್ಗಗಳು ಕಂಡು ಬರುತ್ತವೆ. ಗುಹೆಗಳಂತೆ ಗೋಚರಿಸುವ ಕಲ್ಲು - ಬಂಡೆಗಳ ನಡುವೆ ಈ ರಹಸ್ಯ ದಾರಿಗಳು ಮೂರು ಕಡೆ ಟಿಸಿಲಾಗಿ ಹೊಡೆದು ಮುಂದೆ ಸಾಗುವ ವಿಷಯವು ಸ್ಥಳೀಕರಿಂದ ತಿಳಿದು ಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ತೀರ ಕತ್ತಲು, ಶಿಥಿಲಭಿತ್ತಿಗಳು ಇರುವುದರಿಂದ ಇಲ್ಲಿನ ಮಾರ್ಗವು ಬಹಳ ದುರ್ಗಮಯವಾಗಿದೆ.


ಕೆರೆ - ಕೊಳಗಳು

ಈ ಕೋಟೆಯಲ್ಲಿ ಅನೇಕ ಕೆರೆ-ಕೊಳಗಳು ನೋಡಲು ಸಿಗುತ್ತವೆ. ಅದರಲ್ಲಿ ಕೋಟೆಯ ದಕ್ಷಿಣಕ್ಕೆ ಸಣ್ಣಅರಗಿದ್ದಕೆರೆ ಎಂಬ ಮತ್ತು ಅದೇ ಹೆಸರಿನ ದೊಡ್ಡಕೆರೆ ಇದೆ. ಹಾಗೆಯೆ ಕೋಟೆಯ ಪೂರ್ವಭಾಗದಲ್ಲಿ ಮತ್ತೊಂದು ಕೆರೆ ಇರುವುದು. ಅದೇ ರೀತಿ ಊರಿನ ಕೋಟೆಯ ದಕ್ಷಿಣ ಭಾಗದ ಬೆಟ್ಟದ ಮೇಲೆ ರಾಮಲಿಂಗೇಶ್ವರನ ಗುಡಿ ಪೂರ್ವಾಭಿಮುಖವಾಗಿದ್ದು, ಅದರ ಮುಂದಿನ ಕಲ್ಲಿನ ಬಂಡೆಯಲ್ಲಿ ಒಂದು ಕೊಳ ಇದೆ. ಹಿಂದೆ ಇಂತಹ ಕೆರೆ - ಕೊಳಗಳಲ್ಲಿ ನೀರು ಸಂಗ್ರಹವಾಗುತ್ತಿದ್ದು ಜನಸಾಮಾನ್ಯ ಬಳಕೆಗೆ ಕೃಷಿ ಸಾಗುವಳಿಗೆ ಉಪಯೋಗಿಸಲಾಗುತ್ತಿತ್ತು.

ಇತರ ಅವಶೇಷಗಳು

ಮಲಯಬಾದ್ ಕೋಟೆಯಲ್ಲಿ ಇವುಗಳಲ್ಲದೆ ಇತರ ಅವಶೇಷಗಳನ್ನು ಕಾಣಬಹುದಾಗಿದೆ. ಕೋಟೆಯ ಪೂರ್ವಭಾಗದಲ್ಲಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಿರುವ ಆರು ಅಡಿ ಉದ್ದ, ನಾಲ್ಕು ಅಡಿ ಅಗಲವಿರುವ ಎರಡು ಆನೆಗಳು ದಕ್ಷಿಣಾಭಿಮುಖವಾಗಿವೆ. ಇವುಗಳ ಮೇಲೆ ಸುಂದರ ಕೆತ್ತನೆ ನೋಡಬಹುದು. ಈ ಆನೆಗಳು ಒಂದರ ಹಿಂದೆ ಒಂದು ಹೋಗುತ್ತಿವೆ ಎನ್ನುವಂತೆ ಭಾಸವಾಗುತ್ತದೆ. ಅಂದು ಆನೆಗಳನ್ನು ಯಥೇಚ್ಛವಾಗಿ ಯುದ್ಧ ಸಂದರ್ಭಗಳಲ್ಲಿ ಇತರ ಕಾರ್ಯಗಳಲ್ಲಿ ಬಳಸುತ್ತಿದ್ದರು, ಅನ್ನುವುದರ ದ್ಯೋತಕವಾಗಿ





ಅವುಗಳನ್ನು ನಿಲ್ಲಿಸಿರಬೇಕು. ರಾಮಲಿಂಗೇಶ್ವರ ದೇವಾಲಯದ ಮುಂಭಾಗದ ಗುಹೆಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿನ ಕಲ್ಲುಬಂಡೆಯ ಮೇಲೆ ಎರಡು ಶಾಸನಗಳು ಇವೆ. ಕೋಟೆಯ ಒಳಗಡೆ ಒಂದು ಗೋಶಾಲೆ ಇದ್ದು ಇದರ ನೈರುತ್ಯ ಭಾಗಕ್ಕೆ ಬಂದರೆ ಅಲ್ಲಿ ಒಂದು ನೆಟ್ಟಕಲ್ಲಿನ ಮೇಲೆ ಶಾಸನವಿದೆ. ಈ ಕೋಟೆಯ ಪೂರ್ವಭಾಗದಲ್ಲಿ ಹಲವು ಸಮಾಧಿಗಳು ಕಂಡು ಬಂದಿದ್ದು, ಅಲ್ಲಿ ಒಂದು ಶಾಸನವಿದೆ. ಹಾಗೆಯೆ ಹೊರಕೋಟೆಯಲ್ಲಿ ಚೌಡಮ್ಮದೇವಿಯ ಗುಡಿಯ ಕಂಬದ ಬಳಿ ಒಂದು ಶಾಸನವಿದೆ. ಗುಡಿಯ ಮುಂದೆ ಒಂದು ಕಲ್ಲುಬಂಡೆಯಲ್ಲಿ ಮೂರು ಶಾಸನಗಳು ಇವೆ.

ಮೇಲಿನ ಎಲ್ಲಾ ಸಂಗತಿಗಳನ್ನು ಅವಲೋಕನ ಮಾಡಿದಾಗ ಈ ಕೋಟೆಯನ್ನು ಇತರ ಕೋಟೆಗೆ ಹೋಲಿಸಿದಾಗ ರಚನೆ, ವಿನ್ಯಾಸದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಹಿಂದ ಒಂದು ಕಾಲದಲ್ಲಿ ಗ್ರಾಮ ರಕ್ಷಣೆ ಮಾಡಿದಂಥ ಈ ಕೋಟೆ ಬಗ್ಗೆ ಆಳವಾದ ಅಧ್ಯಯನ ನಡೆಸುವುದು ಅಗತ್ಯವಾಗಿದೆ. ಇಲ್ಲಿ ಸಂಶೋಧನೆ ಕೈಗೊಂಡಾಗಲಿ ಕಾಲಗರ್ಭದಲ್ಲಿ ಹುದುಗಿ ಹೋಗಿರುವ ಶಾಸನಗಳ ಶೋಧದಿಂದ ಇತರ ಅವಶೇಷಗಳಿಂದ ಕೋಟೆಯ ಇತಿಹಾಸದ ಮೇಲೆ ಇನ್ನೂ ಹೆಚ್ಚಿನ ಬೆಳಕು ಬೀರಲು ಸಾಧ್ಯವಾಗುತ್ತದೆ.

*

ಆಧಾರ ಗ್ರಂಥಗಳು

೧. **ಕರ್ನಾಟಕದ ಜನಜೀವನ, ಬೆಟಗೇರಿ ಕೃಷ್ಣಶರ್ಮ.**

೨. **ರಾಯಚೂರು ಗ್ಯಾಝೆಟಿಯರ್.**

೩. **Defence Architecture in Early Karnataka-** S.K. Joshi.

ಶಿವಕುಮಾರ್ ಸುಬ್ಬಯ್ಯ *

ಕೋಟೇಶ್ವರದ ಪೋರ್ಚುಗೀಸ್ ಶಿಲ್ಪಗಳು: ಒಂದು ಅಧ್ಯಯನ

ದಕ್ಷಿಣ ಕನ್ನಡದ ಕೋಟೇಶ್ವರ ದೇವಸ್ಥಾನ ಕುಂದಾಪುರ ತಾಲ್ಲೂಕಿನಲ್ಲಿದೆ. ಸಾಕಷ್ಟು ವಿಶಾಲವಾದ ಈ ದೇವಸ್ಥಾನದ ಗರ್ಭಗುಡಿಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಅರ್ಥಾತ್ ಯೂರೋಪಿಯನ್ ಶೈಲಿಯ ವಾಸ್ತುಶಿಲ್ಪ ಮತ್ತು ಉಬ್ಬುಶಿಲ್ಪಗಳು ಕಣ್ಣಿಗೆ ಬೀಳುತ್ತವೆ. ಒಂದೇ ದೇವಸ್ಥಾನದಲ್ಲಿ ಈ ಮೂರೂ ಶೈಲಿಗಳು ಕಾಣಸಿಗುವುದು ನಿಜಕ್ಕೂ ಒಂದು ವಿಶೇಷ. ಗ್ಯಾಜೆಟಿಯರ್‌ಗಳಲ್ಲಾಗಲೀ, ತುಳುನಾಡ ಸಂಸ್ಕೃತಿಯನ್ನು ಆಮೂಲಾಗ್ರವಾಗಿ ಪರಿಚಯಿಸಿದ ಡಾ॥ ಪಿ. ಗುರುರಾಜ ಭಟ್ಟರ ಪುಸ್ತಕದಲ್ಲಾಗಲಿ ಈ ಅಂಶವನ್ನು ಈವರೆಗೆ ಪ್ರಸ್ತಾಪಿಸಿಲ್ಲ.

– ೧ –

ದೇವಸ್ಥಾನದ ಗರ್ಭಗುಡಿ, ಅದರ ಸುತ್ತಿನ ಚಂದ್ರಶಾಲೆ, ಪ್ರಾಕಾರ ಮೊದಲಾದವು ನೀರು ಬೀಳುವ ಇಳಿಜಾರಾದ ಕಟ್ಟೋಣದಿಂದ ಕೂಡಿದ್ದು ಮಜಬೂತಾಗಿವೆ. ಗರ್ಭಗುಡಿಯ ಹಿಂದುಗಡೆ, ಅಕ್ಕ ಪಕ್ಕ, ಹೊರ ಮೇಲುಭಾಗ ಗಾರೆಯ ಕೆಲಸದಿಂದ ಅಲಂಕೃತವಾಗಿದ್ದು ಗರ್ಭಗುಡಿಯ ಮುಕ್ಕಾಲು ಭಾಗವನ್ನು ಆವರಿಸಿಕೊಂಡಿದೆ. ಸಿಂಹಗಳು ಗಾರೆಯ ಕಲಾತ್ಮಕವಾದ ಕಂಭಗಳನ್ನು ಹೊತ್ತಂತೆ ರೂಪಿಸಿದೆ. ಇವುಗಳ ಮೇಲೇ ಇಡೀ ಉಪ್ಪರಿಗೆ ನಿಂತಿರುವಂತೆ ನಿರ್ಮಿಸಲಾಗಿದೆ. ಕೃತಕ ವಿಮಾನಗಳು, ಕಲಾತ್ಮಕವಾದ ಮಕರ ತೋರಣಗಳು ಮಧ್ಯೆ ಮಧ್ಯೆ ದೇವ – ದೇವಿಯರ ಪ್ರತಿಮೆಗಳಿಂದ ಈ ಇಡೀ ಭಾಗ ಸುಂದರವಾಗಿ ಕಾಣುವಂತೆ ವಿನ್ಯಾಸ ಮಾಡಲಾಗಿದೆ.

ಈ ನಯನ ಮನೋಹರ ಅಲಂಕಾರ ವಿನ್ಯಾಸ ಗರ್ಭ ಗುಡಿಯ ಮೇಲುಭಾಗದ ಸುತ್ತಲೂ ಸುತ್ತುವರಿದಿದ್ದು ಥಟ್ಟನೆ ವಿಜಯನಗರ ಶೈಲಿಯನ್ನು ನೆನಪಿಸುತ್ತದೆ. ಗರ್ಭಗುಡಿಯ ಮೇಲೆ ಮಳೆನೀರಿನ ರಕ್ಷಣೆಗೆ ತಾಮ್ರದ ಛಾವಣಿ ಇದ್ದು ಕಳಸವಿದೆ. ಹಳೆಯ ವಾಸ್ತುಶೈಲಿಯನ್ನು ಇಡಿಯ ದೇವಸ್ಥಾನದಲ್ಲಿ ಹೊಂದಿರುವುದು ಈ ಭಾಗ ಮಾತ್ರ. ಪ್ರಾಯಶಃ ವಿಜಯನಗರ ಕಾಲದ ಉತ್ತರಾರ್ಧದ ಶಿಲ್ಪಶೈಲಿಗೆ ಇದೊಂದು ಉದಾಹರಣೆ ಆಗುವ ಸಾಧ್ಯತೆ ಇದೆ.

ಇಡಿಯ ಗರ್ಭಗುಡಿಯನ್ನು ಆವರಿಸಿಕೊಳ್ಳುವಂತೆ ಮೇಲ್ಭಾಗದಲ್ಲಿ ಜಾಲಂಧ್ರಗಳಿಂದ ಪೌಳಿಗೋಡೆಯನ್ನು ನಿರ್ಮಿಸಲಾಗಿದೆ. ಇಲ್ಲಿ ಅಲ್ಲಲ್ಲಿ ಗಾರೆಯನ್ನು ಬಳಸಲಾಗಿದೆ. ಗರ್ಭಗುಡಿಯ ಮೇಲೆ ನಾಲ್ಕು ಮೂಲೆಗೂ ನಾಲ್ಕು ಕಿರುಮಂಟಪಗಳನ್ನು ನಿರ್ಮಿಸಿ ಆಯತಾಕಾರದ ಗುಮ್ಮಟಗಳಿಂದ ಅಲಂಕರಿಸಿದೆ. ಈ ಕಿರು ಮಂಟಪಗಳು ಖಾಲಿ ಇದ್ದು ಇವುಗಳ ಕಮಾನುಗಳು ಆಕರ್ಷಕವಾಗಿವೆ. ಗರ್ಭಗುಡಿಯ ಮುಂದುಗಡೆ ಮೇಲ್ಭಾಗದಲ್ಲಿ ೧೨ ಕಮಾನುಗಳ ವಿಶಾಲವಾದ ಮಂಟಪ ವೊಂದನ್ನು ನಿರ್ಮಿಸಿದ್ದು ಇದರಲ್ಲೂ ನಾಲ್ಕು ಮೂಲೆಗೆ ನಾಲ್ಕು ಗುಮ್ಮಟಗಳಿವೆ ಹಾಗೂ ಮಧ್ಯದಲ್ಲಿ ದೊಡ್ಡ ಗುಮ್ಮಟವಿದೆ. ಇದನ್ನು ಸುತ್ತುವರಿದಿರುವ ಜಾಲಂಧ್ರಗಳ ಪ್ರಕಾರದಲ್ಲಿ ಜ್ಯಾಮಿತಿಯ ನಕ್ಷೆಯಿರುವಂತೆ ಮತ್ತು ಬಟ್ಟೆಗಳ ನಿರಿಗೆಗಳಂತೆ ವಿನ್ಯಾಸಮಾಡಿ ಅಲಂಕರಿಸಿದೆ. ಮೊದಲ ನೋಟಕ್ಕೇ ಇದು ಇಸ್ಲಾಂ ಮಾದರಿ ವಾಸ್ತುಶೈಲಿ ಎನ್ನುವುದು ಖಚಿತ ಪಡುತ್ತದೆ.

ಇಲ್ಲೆಲ್ಲ ಗಮನ ಸೆಳೆವ ರಚನೆಗಳೆಂದರೆ ಗರ್ಭಗುಡಿಯ ಮುಖಭಾಗದ ಮೇಲುಗಡೆ ಕಂಡುಬರುವ ೨೨ ಉಬ್ಬುಶಿಲ್ಪಗಳು. ಮೊದಲ ನೋಟಕ್ಕೆ ಇವೆಲ್ಲವೂ ಒಂದೇ ರೀತಿಯಾಗಿವೆ ಎಂದೆನ್ನಿಸಿದರೂ ಸೂಕ್ಷ್ಮವಾಗಿ ಗಮನಿಸಿದರೆ ಪ್ರತಿಯೊಂದು ಶಿಲ್ಪವೂ ಸಹಾ ತನ್ನದೇ ಆದ ಸೌಂದರ್ಯ ಹಾಗೂ ವೈಶಿಷ್ಟ್ಯವನ್ನು ಹೊಂದಿದೆ. ಹಿಂದೂ ಸಂಪ್ರದಾಯದ ದೇವ ದೇವಿಯರನ್ನು ರಚಿಸಬೇಕೆಂದು ಪ್ರಯತ್ನಿಸಿದ್ದರೂ ಹಾಗಾಗದೆ ಯೂರೋಪಿಯನ್ ಶೈಲಿಯಲ್ಲಿಯೇ ಇವು ಮೂಡಿವೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಗ್ರೀಕ್–ರೋಮನ್ ಹಾಗೂ ನಂತರದ ಇಟಾಲಿಯನ್ ಶಿಲ್ಪಗಳನ್ನು ತಟ್ಟನೆ ನೆನಪಿಗೆ ತರುತ್ತವೆ. ಅಥವಾ ರಿನೇಸಾನ್ಸ್ ಅವಧಿಯ ನಂತರದ

* ಅಧ್ಯಾಪಕರು, ನಂ. ೧೧೩ (ಬಿ) ಮುನಿಸಂಜೀವಪ್ಪ ಲೇ-ಔಟ್, ಜೆ.ಪಿ.ನಗರ ಬೆಂಗಳೂರು ೫೬೦ ೦೭೮

ಬೆಳವಣಿಗೆಗೆ ಇವು ಸಾಕ್ಷಿಯಾಗುತ್ತವೆ. ಪ್ರತಿಯೊಂದು ಪ್ರತಿಮೆಯನ್ನು ಕಮಾನು ಮಂಟಪಗಳಿಂದ ವಿಭಜಿಸಿ ಪ್ರತ್ಯೇಕ ಪ್ರತ್ಯೇಕವಾಗಿ ರಚಿಸಿದೆ. ಈ ಕಂಭಗಳನ್ನು ಮೈಸೂರು ಅರಮನೆಯ ಕಂಭಗಳ ವಿನ್ಯಾಸದಂತೆ ರಚಿಸಿದೆ. ಆದರೆ ಆ ಸೊಬಗು, ಗಾಂಭೀರ್ಯ, ಕಲಾತ್ಮಕತೆ ಇಲ್ಲಿಲ್ಲ. ಕಂಭಗಳ ಮೇಲುಭಾಗದಲ್ಲಿ ಹೂವು ಮತ್ತು ಎಲೆಯನ್ನು ಕೆತ್ತಿದ್ದು, ಕೆಳಭಾಗದಲ್ಲಿ ಮೂಲೆಗಳ ನಡುವಿನಿಂದ ಇಡೀ ಕಂಭ ಎದ್ದು ನಿಂತಂತೆ ತೋರುತ್ತದೆ.

ಎಲ್ಲಾ ಪ್ರತಿಮೆಗಳೂ ಏದೆ ಪ್ರಮಾಣದವಾಗಿದ್ದು ಯುರೋಪಿಯನ್ ಪ್ರತಿಮೆಗಳ ಕಳಪೆಯ ನಕಲಿನಂತಿವೆ. ಅಲ್ಲಿನ ಭಾವತೀವ್ರತೆ, ಸ್ನಿಗ್ಧ ಸೌಂದರ್ಯ ಇಲ್ಲಿ ಕಾಣಸಿಗದು. ಯೂರೋಪಿಯನ್ ಮಾದರಿಯ ಶಿಲ್ಪಗಳನ್ನು ಮನಸಾರೆ ನೋಡಿ ಆನಂದಿಸಿದವರಿಗೆ ಇಲ್ಲಿ ಖಂಡಿತಾ ಸಂಕಟವಾಗುತ್ತದೆ. ಆದರೆ ಆ ಛಾಪು ಇಲ್ಲಿ ಎದ್ದು ಕಾಣುವುದರಿಂದ ಇದೆಲ್ಲವನ್ನು ಗಮನಿಸಬಹುದು. ಪ್ರತಿಯೊಂದು ಪ್ರತಿಮೆಯೂ ಹೂವಿನ ಗೊಂಚಲಿನಿಂದ ಅರಳಿವೆ. ಎಲ್ಲಾ ಪ್ರತಿಮೆಗಳಲ್ಲೂ ಇಟಾಲಿಯನ್ ಪ್ರತಿಮೆಗಳಿಗೆ ಸಾಮಾನ್ಯವಾದ ನೀಳನಾಸಿಕ, ವಿಶಾಲವಾದ ಹಣೆ, ಸುಂದರವಾದ ಕಣ್ಣುಗಳು, ಪ್ರಮಾಣಬದ್ಧವಾದ ಬಾಯಿ ಉದ್ದವಾದ ಕಿವಿಗಳು ಇಲ್ಲೂ ಇವೆ. ಮೈಕಲೇಂಜಲೋನ ಡೇವಿಡ್ ಶೈಲಿಯ ಸುರುಳಿ - ಸುರುಳಿಯಾದ ಕೂದಲಿಲ್ಲಿದೆ. ಇಲ್ಲಿರುವ ಕೆಲವು ಸ್ತ್ರೀ ಪ್ರತಿಮೆಗಳಂತೂ ಕಿರೀಟವಿಲ್ಲದ ಕ್ವೀನ್ ವಿಕ್ಟೋರಿಯಾಳನ್ನೇ ಅಥವಾ ಯಾರೋ ಯೂರೋಪಿಯನ್ ಶ್ರೀಮಂತ ಮಹಿಳೆಯನ್ನೋ ನೆನಪಿಗೆ ತಂದೇ ಬಿಡುತ್ತವೆ. ಈ ಎಲ್ಲಾ ಸಮೂಹ ಶಿಲ್ಪಗಳು ಒಬ್ಬನೇ ವ್ಯಕ್ತಿಯಿಂದ ಅಥವಾ ಅವನ ಗುಂಪಿನವರಿಂದ ನಿರ್ಮಾಣವಾಗಿರುವ ಸಾಧ್ಯತೆಗಳೇ ಜಾಸ್ತಿ. ಹಾಗೇ ಇದನ್ನು ನಿರ್ಮಿಸಿದ ವ್ಯಕ್ತಿ ತೀರಾ ಪಳಗಿದವನೇನೂ ಅಲ್ಲ ಎನ್ನುವುದೂ ಸಾಬೀತಾಗುತ್ತದೆ. ಗ್ರೀಕೋ - ರೋಮನ್ ಶೈಲಿಯ ನೆರಿಗೆ ನೆರಿಗೆಯ ವಸ್ತ್ರವಿನ್ಯಾಸ, ಕಂಠಾಹಾರಗಳು, ಕಿವಿಯಲ್ಲಿ ತೂಗಾಡುವ ಬೆಲೆಬಾಳುವ ರತ್ನ, ವಜ್ರದ ದೊಡ್ಡ ಯೂರೋಪಿಯನ್ ಶೈಲಿಯ ಕಿರೀಟಗಳು ಇಲ್ಲಿನ ವಿಭಿನ್ನ ಆಕರ್ಷಣೆ.

ಗಮನಿಸಲೇಬೇಕಾದ ಅಂಶವೆಂದರೆ ಈ ಪ್ರತಿಮೆಗಳ ಭಾರತೀಯತ್ವ. ಭಾರತೀಯ ಸಾಂಪ್ರದಾಯಿಕ ವ್ಯಕ್ತಿ - ದೇವರುಗಳ ಚಿತ್ರಣ ಇಲ್ಲಿದ್ದರೂ ಕೆಲವಾರು ತಮಾಷೆಯ ವೈರುಧ್ಯಗಳಿವೆ. ಇಲ್ಲಿನ ಗಣೇಶನನ್ನು ನೋಡಿದವರು ಯಾರೂ ಗಣೇಶ ಎಂದು ಅಂದುಕೊಳ್ಳಲಾಗದಷ್ಟು ವಿಭಿನ್ನ. ಶಿವನೂ ಅಷ್ಟೇ. ಶಿವಶರಣರನ್ನು ರೂಪಿಸ ಹೊರಟ ಈ ಶಿಲ್ಪಿ ಅವರಿಗೆ ಕೊರಳಲ್ಲಿ ಲಿಂಗಕಟ್ಟಿ ಹಣೆಗೆ ವಿಷ್ಣುವಿನ ಭಕ್ತರು ಉದ್ದ ನಾಮ ಇಡುವಂತೆ ನಾಮಹಾಕಿದ್ದಾನೆ. ಯಾರೋ ಸನ್ಯಾಸಿಯೇ ಎಂದು ನೋಡಿದರೆ ಅದು ನಾಲಿಗೆ ಹೊರಚಾಚಿದ ರಾಕ್ಷಸ. ಹೀಗೆ ರಾಜ, ರಾಣಿ, ಪುರೋಹಿತ, ಆಭರಣ ಧರಿಸಿದ ಸನ್ಯಾಸಿ, ನಾರದನಂತೆ ನೆತ್ತಿಯಲ್ಲಿ ಗಂಟು ಹಾಕಿಕೊಂಡ ಮಹಿಳೆ, ವೈಷ್ಣವ ಗಣೇಶ ಹೀಗೆ ವಿಭಿನ್ನ ಪ್ರಕಾರವಿದೆ. ಹಳದಿ, ಕಪ್ಪು ನೀಲಿ ಮತ್ತು ಹಸಿರು ಮಿಶ್ರಿತ ಬಣ್ಣವನ್ನು ಇದಕ್ಕೆ ಬಳಸಿದ್ದು ಅದನ್ನೇ ಇಂದಿಗೂ ಉಳಿಸಿಕೊಂಡು ಬರಲಾಗುತ್ತಿದೆ. ಪ್ರತಿಮೆಗಳ ಸರಾಸರಿ ಎತ್ತರ ೧೯ ಇಂಚುಗಳು, ಸರಾಸರಿ ಅಗಲ ೧೧.೫ ಇಂಚುಗಳು, ದಪ್ಪ ೧ ಇಂಚು. ದೇವಸ್ಥಾನವನ್ನು ಗರ್ಭಗುಡಿಯ ಹಿಂದಿನಿಂದ ನೋಡಿದರೆ ಅಂಬಲ ಹೊಂದಿರುವ ಕೇರಳ ಶೈಲಿಯ ದೇವಸ್ಥಾನದಂತೆಯೂ ಮುಂದುಗಡೆಯಿಂದ ಮಸೀದಿಯಂತೆಯೂ ಕಾಣುತ್ತದೆ. ಈ ಎಲ್ಲಾ ಸಂಗತಿಗಳ ನೆಲೆಯಿಂದ ಯೋಚಿಸಿದರೆ ಈ ದೇವಸ್ಥಾನದಲ್ಲಿ ಯೂರೋಪಿಯನ್ ಮಾದರಿಯ ಶಿಲ್ಪಗಳು ಬಂದುವಾದರೂ ಹೇಗೆ ಎಂಬ ಜಿಜ್ಞಾಸೆ ಉಂಟಾಗುತ್ತದೆ.

- ೨ -

ಇದಕ್ಕೆ ಸಾಂದರ್ಭಿಕವಾಗಿ ಕೆಲವಾರು ಆಧಾರಗಳನ್ನು ಪರಿಶೀಲಿಸಬಹುದು. ಐತಿಹಾಸಿಕವಾಗಿ ಕೋಟೇಶ್ವರ ದೇವಸ್ಥಾನ



೧೨ ನೇ ಶತಮಾನದಷ್ಟು ಹಳೆಯದು. ಸಿಕ್ಕಿರುವ ಶಾಸನಗಳಲ್ಲಿ ಶಕ ೧೧೮೩ ಅಂದರೆ ಕ್ರಿ.ಶ. ೧೨೬೧ ನವೆಂಬರ್ ೨೯ ರಲ್ಲಿ ವೀರ ಪಾಂಡ್ಯದೇವನು ಹಾಕಿಸಿದ ತೆರಿಗೆ ಶಾಸನವೇ ಹಳೆಯದು. ಆದರೆ ಇದಕ್ಕೂ ಹಿಂದೆ ಈ ದೇವಾಲಯದ ಬಗ್ಗೆ ಮೌಖಿಕ ದಾಖಲೆ ಇದೆ. ಹಲವಾರು ರಾಜರ – ಮಾಂಡಳಿಕರ ಕಾಲದಲ್ಲಿ ಈ ದೇವಾಲಯ ವಿಪುಲವಾಗಿ ಜೀರ್ಣೋದ್ಧಾರವಾಗಿದೆ. ವಿಜಯನಗರ ಕಾಲದ **'ಯಕಥಳ ಖಾನನ'** ಬಗೆಗಿನ ಶಾಸನವಂತೂ ತೀರಾ ಪ್ರಖ್ಯಾತವಾಗಿದ್ದು ಇವನಿಗೆ ಗೌರವ ಸೂಚಿಸಲು ಇಂದಿಗೂ ಪ್ರತಿದಿನ ರಾತ್ರಿ ಮಹಾ ಮಂಗಳಾರತಿಗೆ ಮುಂದೆ ಇವನ ಪರವಾಗಿ ದೇವರಿಗೆ **ದೀವಟಿಗೆ ಸಲಾಂ** ಹಾಕಲಾಗುತ್ತಿದೆ (ಕ್ರಿ.ಶ. ೧೫೫೧ – ಏಪ್ರಿಲ್ ೧೧, ಸೌತ್ ಇಂಡಿಯನ್ ಇನ್ಸ್‌ಸ್ಕ್ರಿಪ್ಶನ್ಸ್. ಸಂಪುಟ ೯, ಭಾಗ ೨. ೯೪೧, ಶಾಮಾಶಾಸ್ತ್ರಿ ಮತ್ತು ಲಕ್ಷ್ಮಿನಾರಾಯಣರಾವ್). ಇಂದಿಗೂ ಇದನ್ನು ಯಾರೇ ಕಾಣಬಹುದು.

ಪಶ್ಚಿಮ ಕರಾವಳಿಗೆ ಪೋರ್ಚುಗೀಸರ ಪ್ರವೇಶವಾದಾಗಿನಿಂದ ಈ ದೇವಸ್ಥಾನದ ಎರಡನೆಯ ಮತ್ತು ಕುತೂಹಲಕಾರಿ ಅಧ್ಯಾಯ ಪ್ರಾರಂಭವಾಗುತ್ತದೆ.

೧೫೧೦ ರಲ್ಲಿ ವಿಜಾಪುರದ ಅದಿಲಶಾಹನಿಂದ ಗೋವಾವನ್ನು ಆಲ್ಬುಕರ್ಕ್ ವಶಪಡಿಸಿಕೊಂಡು ತನ್ನ ಪೋರ್ತುಗಾಲಿ ಸೈನಿಕರಿಗೆ ಸ್ಥಳೀಯ ಸ್ತ್ರೀಯರನ್ನು ಮದುವೆಯಾಗಲು ಅಣತಿ ಇತ್ತ. ಸುಮಾರು ೫೦೦ಕ್ಕೂ ಜಾಸ್ತಿ ಈ ಮದುವೆಗಳಾದಾಗ ಇವರ ಜೀವನೋಪಾಯಕ್ಕೆ ಮೂರ್ ಜನಾಂಗದವರ ಮಸೀದಿ ಮನೆಗಳು, ಹಿಂದೂಗಳ ದೇವಸ್ಥಾನ – ಅವರ ಆಸ್ತಿ ಪಾಸ್ತಿ ಇತ್ಯಾದಿಗಳನ್ನು 'ಸಾಂಟಾ ಕ್ಯಾಥರೀನಳ' ಹೆಸರಿನಲ್ಲಿ ದಾನಮಾಡಿದ. ಆದರೆ ಈ ಕಾರ್ಯಕ್ಕೆ ಕೊಚ್ಚಿಯಲ್ಲಿ ಪೋರ್ಚುಗೀಸರ ದಂಡನಾಯಕನಾಗಿದ್ದ 'ಲೋರೆಂಕೋ ಮೊರೇನೋ' ಬಲವಾಗಿ ಆಕ್ಷೇಪವೆತ್ತಿ ನಿಲ್ಲಿಸಿದ. ಗಮನಿಸಿ: ಈ ವೇಳೆಗಾಗಲೇ ಕೇರಳದಲ್ಲಿ ಪೋರ್ಚುಗೀಸರು ಬಲವಾಗಿ ತಳವೂರಿದ್ದರು.

೧೫೬೭ರಲ್ಲಿ : ಗೋವೆಯ ಪ್ರಾವಿನ್ಸಿಯಲ್ ಕೌನ್ಸಿಲ್ ಜೆಂಟೈಲರು (ಹಿಂದೂ) ಕಲಾವಿದರು (ಬಡಗಿ, ಕೆತ್ತನೆ ಕಲಾವಿದರು, ಮಣ್ಣಿನ ಮೂರ್ತಿಗಳ ತಯಾರಕರು, ಚಿತ್ರಗಾರರು) ಬೈಬಲ್ಲನ್ನು ಆಧರಿಸಿ ಪಾಶ್ಚಾತ್ಯ ಶೈಲಿಯಲ್ಲಿ ವಿಗ್ರಹ ತಯಾರಿಸುವುದು, ಚಿತ್ರಿಸುವುದನ್ನು ತೀವ್ರವಾಗಿ ನಿಷೇಧಿಸಿತು. ಇದರಿಂದ ಈ ವೃತ್ತಿಯನ್ನೇ ನಂಬಿದ್ದ ಹಿಂದೂಗಳು ಜೀವ ಭಯದಿಂದ ದಿಕ್ಕಾಪಾಲಾಗಿ ವಲಸೆ ಹೊರಟು ಹೋದರು.

೧೫೬೯ರ: ನವೆಂಬರ್‌ನಲ್ಲಿ ಹೊನ್ನಾವರದ ಪತನದ ನಂತರ ಆಗ ಗೋವಾದ ವೈಸರಾಯ್ ಆಗಿದ್ದ ಡಾಂ ಲೂಯಿಸ್ – ಡಿ – ಅತಾಯ್ದೆ – ಕೊಂಡೆ – ಡಿ – ಅತಾಯ್ ಗುವಾ, ಬಾರ್ಸೆಲೋರ್ ಮತ್ತು ಗಂಗೊಳ್ಳಿಯನ್ನು ಉಗ್ರವಾದ ಮತ್ತು ಕ್ರೂರವಾದ ಹಿಂಸಾಚಾರದ ನಂತರ ಆಕ್ರಮಿಸಿಕೊಂಡ. ಜೊತೆಗೆ ಅಕ್ಕ ಪಕ್ಕದ ಊರುಗಳ ದೇವಾಲಯ – ಕೋಟೆಗಳನ್ನು ಸುಟ್ಟ. ಅನಿವಾರ್ಯವಾಗಿ ಗಂಗೊಳ್ಳಿ – ಬಾರ್ಸೆಲೋರಿನ (ಬಸ್ರೂರು) ಅರಸರು ಸಂಧಿಗೆ ಒಪ್ಪಿ ವೈಸರಾಯ್‌ನನ್ನು ಭೇಟಿ ಮಾಡಿದರು. ಅವರ ಕರುಣಾಜನಕ ಸ್ಥಿತಿಯನ್ನು ಕಂಡ ವೈಸರಾಯ್ ಅವರ ಕೋಟೆಗಳನ್ನು – ದೇವಸ್ಥಾನಗಳನ್ನು ಪುನಃ ಕಟ್ಟಿಸಿಕೊಟ್ಟ. ಇದನ್ನು ಕಟ್ಟಿದವರು ಗೋವೆಯಿಂದ ಬಂದ ಕಲಾವಿದರು. ಇದರಿಂದ ಹೊಸ ವಿನ್ಯಾಸ ಇವುಗಳಿಗೆ ಪ್ರಾಪ್ತಿಯಾಯಿತು. ಹಾಗೂ ಇಲ್ಲಿ ಅಂತೋನಿಯೋ ಬೊಥೆಲೋ ಎಂಬ ದಂಡನಾಯಕ ನೇಮಕವಾದ. (ಅಧ್ಯಾಯ ೨೦ ಪುಟ ೫೪೭ ಪೋರ್ಚುಗೀಸ್ ಇನ್ ಇಂಡಿಯಾ.)

೧೮ ನೇ ಶತಮಾನದ ನಂತರ ವಾತಾವರಣ ತಿಳಿಯಾಗುತ್ತಾ ಇಂಡೋ – ಪೋರ್ಚುಗೀಸ್ ಶೈಲಿಯ ಪ್ರಯೋಗ ಪ್ರಾರಂಭ ವಾಯಿತು. ಈ ಹಂತದಲ್ಲೇ ಹಿಂದೂಗಳು – ಮುಸ್ಲಿಮರು – ಭಾರತೀಯ ಕ್ರೈಸ್ತರು ಪ್ರಯೋಗಗಳನ್ನು ಪ್ರಾರಂಭಿಸಿದರು. ಕಾಳಿಯನ್ನು ಸೈತಾನನಿಗೂ, ಲಕ್ಷ್ಮಿಯನ್ನು ಮಡೋನ್ನಾಳಿಗೂ ಹೋಲಿಸಿ ಮಾಡಿದ ಪ್ರಯೋಗದಂತೆಯೇ ಹಲವಾರು ಹಿಂದೂ ಕಾನ್‌ಸೆಪ್ಟ್‌ಗಳನ್ನು ಪೋರ್ಚುಗೀಸರೂ ತಮ್ಮದನ್ನಾಗಿ ಮಾಡಿ ಕೊಂಡರು. ಮುಂಬಯಿಯ ' ಹೆರಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಹಿಸ್ಟರಿ ಮತ್ತು ಕಲ್ಚರ್' ನಲ್ಲಿ ಮಕರದ ಮೇಲೆ ನಿಂತಿರುವ ಮೇರಿ ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಕೋಟೇಶ್ವರದ ಈ ಪ್ರತಿಮೆಗಳ ಬಗ್ಗೆ ಯಾವುದೇ ಲಿಖಿತ ಉಲ್ಲೇಖ ಸಿಗುವುದಿಲ್ಲ. ಇವುಗಳನ್ನು ನಿರ್ಮಾಣ ಮಾಡಿದ ವರುಷ – ದಿನಾಂಕದ ಬಗೆಗೂ ಖಚಿತವಾಗಿ ತಿಳಿದಿಲ್ಲ. ಮೌಖಿಕವಾದ ದಾಖಲೆಗಳನ್ನು ಆಧರಿಸುವುದಾದರೆ ಈ ಶಿಲ್ಪಗಳಿಗೆ ಸುಮಾರು ೧೦೦ ರಿಂದ ೧೫೦ ವರ್ಷಗಳಾಗಿವೆ. ಆದರೆ ಇತಿಹಾಸದ ಆಧಾರವನ್ನು ಗಮನಿಸಿದರೆ ಸುಮಾರು ೩೦೦ ರಿಂದ ೩೫೦ ವರ್ಷಗಳಾಗಿವೆ ಪೋರ್ಚುಗೀಸರಿಂದ ದುರಸ್ಥಿ ಆದ ದೇವಸ್ಥಾನ ಗಳಲ್ಲಿ ಇದೂ ಒಂದು ಎಂದು ಖಚಿತವಾದ ತೀರ್ಮಾನಕ್ಕೆ ಬರಬಹುದು. ಮೌಖಿಕವಾದ ಆಧಾರವನ್ನು ಸ್ವೀಕರಿಸಿದರೆ ಇದು ಇಂಗ್ಲಿಷ್‌ರ ಕಾಲದ್ದಾಗುತ್ತದೆ. ಆದರೆ ಪೋರ್ಚುಗೀಸ್ ಕಲಾವಂತಿಕೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ, ಗೋವಾ, ಲಿಸ್ಬನ್ ಚರ್ಚ್ ಶಿಲ್ಪಗಳ ಮಾದರಿಯಲ್ಲೇ ಈ ಪ್ರತಿಮೆ ಗಳಿರುವುದನ್ನು ನೋಡಿದರೆ, ಈ ಕಲಾಕೃತಿಗಳನ್ನು ಮಾಡಿದವನು ಯಾರೋ ಪೋರ್ಚುಗೀಸ್ ಮೂಲದ ಕಲಾವಿದನಿದ್ದಂತೆ ತೋರುತ್ತದೆ. ಇಲ್ಲೂ ಈ ಕಲಾವಿದ ಪಾಶ್ಚಾತ್ಯ ಮುಖ, ದೇಹ, ಅಂಗಸೌಷ್ಟವದಲ್ಲಿ ಭಾರತೀಯ ದೇವರುಗಳನ್ನು ರೂಪಿಸುವ ಪ್ರಯತ್ನ ಮಾಡಿದ್ದಾನೆ. ಈ ಪ್ರತಿಮೆಗಳಿಗೆ ಗಾರೆಯ ಸಂಗಡ ಮಣ್ಣನ್ನು ಬಳಸಿದೆ. ನಯಗಾರಿಕೆಗೆ ಆಯ್ದು ಆಯ್ದು ಹುತ್ತದ

ಮಣ್ಣನ್ನೇ ಬಳಸುವ ಪದ್ಧತಿ ಪೋರ್ಚುಗೀಸರದ್ದಾದರಿಂದ ಈ ಪ್ರತಿಮೆಗಳು ವಿಶಿಷ್ಟವಾದ ರೀತಿಯಲ್ಲಿ ತಮ್ಮತನವನ್ನು ಉಳಿಸಿಕೊಂಡಿವೆ (ಪುಟ. ೧೦೮. ಥ್ರೆಶೋಲ್ಡ್ ಆಫ್ ಲೀಜರ್ : ಗೋವಾ ಕಲ್ಚರಲ್ ಪ್ಯಾಟ್ರನ್ಸ್). ನೂರಿನ್ನೂರು ವರ್ಷಗಳ ನಂತರ ಈ ದೇವಸ್ಥಾನ ತನ್ನ ಮೂರೂ ಧರ್ಮಗಳ ಸೊಬಗಿನಿಂದ ಅಪೂರ್ವ ನಿಧಿಯಾಗಬಹುದು. ಈಗ ಹಳೆಯ ಮೊಕ್ತೇಸರರು ಬದುಕಿಲ್ಲ; ಉಳಿದವರು ಸರಾಗವಾಗಿ ಬಾಯಿ ಬಿಡುತ್ತಿಲ್ಲ.

(ಕೃತಜ್ಞತೆಗಳು: ತಾಳಗುಪ್ಪ ಮತ್ತು ಸಾಗರಗಳಲ್ಲಿರುವ ಗೋವೆಯ ಮೂಲದ ಎಲ್ಲಾ ಕ್ರೈಸ್ತ ಕುಟುಂಬಗಳಿಗೆ; ಡಾ॥ ಸೂರ್ಯನಾಥ ಕಾಮತರಿಗೆ ಡಾ॥ ಗೋಪಾಲರಾವ್‌ರವರಿಗೆ, ಮಿಥಿಕ್ ಸೊಸೈಟಿ, ಬೆಂಗಳೂರು ಇವರಿಗೆ) *

ಆಧಾರ ಗ್ರಂಥಗಳು

೧. ಪೋರ್ಚುಗೀಸ್ ಇಂಡಿಯಾ ಇನ್ ದ ಮಿಡ್ ಸೆವೆಂಟೀನ್ತ್ ಸೆಂಚುರಿ: ಸಿ. ಆರ್. ಬಾಕ್ಸರ್.

೨. ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್ : ಪ್ರೊ॥ ಪಿ. ಗುರುರಾಜ ಭಟ್.

೩. ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್ : ಸಂ. ೯, ಭಾಗ ೧೧ - ೧೯೪೧. ಶಾಮಶಾಸ್ತ್ರಿ ಮತ್ತು ಲಕ್ಷ್ಮಿನಾರಾಯಣರಾವ್

೪. ಎ ಶಾರ್ಟ್ ಡಿಕ್ಷನರಿ ಆಫ್ ಆರ್ಕಿಟೆಕ್ಚರ್ : ಡೋರಾ ವೇರ್.

೫. ತುಳುನಾಡಿನ ಶಾಸನಗಳು : (ಸಂ) ಡಾ॥ ಕೆ.ವಿ.ರಮೇಶ್, ಎಂ. ಜೆ. ಶರ್ಮ.

೬. ತುಳುನಾಡಿನ ಇತಿಹಾಸ : ಡಾ॥ ಕೆ.ವಿ. ರಮೇಶ್.

ಜಗದೀಶ ಎಂ.ಹೆಚ್. ಅಗಸಿಬಾಗಲವರ *

ಕ್ರಿ.ಶ. ೧೦೫೪ರ ಕೊಪ್ಪಂ ಮತ್ತು ೧೦೬೪ರ ಮಡಕ್ಕುರು ಯುದ್ಧದ ಅನ್ವೇಷಣೆ

ಚಾಲುಕ್ಯರಾಜ ಒಂದನೆಯ ಸೋಮೇಶ್ವರ ಮತ್ತು ಚೋಳರಾಜ ರಾಜೇಂದ್ರದೇವ ಹಾಗೂ ಒಂದನೆಯ ವೀರ ರಾಜೇಂದ್ರದೇವ ಇವರ ನಡುವೆ ನಡೆದ ಮೊದಲ ಮತ್ತು ಎರಡನೆಯ ಯುದ್ಧಗಳನ್ನು ಕೊಪ್ಪಂ ಮತ್ತು ಮಡಕ್ಕುರು ಕಾಳಗಗಳು ಎಂದು ಗುರ್ತಿಸಲಾಗಿದ್ದು ಅವುಗಳು ಒಂದೇ ಸ್ಥಳದಲ್ಲಿ ನಡೆದಿದೆ ಯೆಂಬುದನ್ನು ಊಹಿಸಲು ಹೊಸ ಆಧಾರಗಳು ದೊರೆತಿವೆ.

ರಾಜೇಂದ್ರದೇವನ ೪ನೇ ವರ್ಷದ ಆಳ್ವಿಕೆಯಲ್ಲಿನ ಮಣಿಮಂಗಲಂ ಶಾಸನದಲ್ಲಿ ಯುದ್ಧವನ್ನು ಅಪೇಕ್ಷಿಸಿದ ಚೋಳರಾಜನು ಇರಟ್ಟ ಮಂಡಲವನ್ನು ಪ್ರವೇಶಿಸಿದನೆಂದೂ ೧ನೆಯ ಸೋಮೇಶ್ವರನು ಈ ಸುದ್ದಿಯನ್ನು ಕೇಳಿ ಇದು ತನಗೆ ಅಪಮಾನವೆಂದು ಕೋಪದಿಂದ ಕಣ್ಣುಗಳನ್ನು ಕುದಿಸುತ್ತಾ ಕೊಪ್ಪಂಗೆ ಹೋದನೆಂದು ತಿಳಿಸುತ್ತದೆ[೧]. ಈ ಯುದ್ಧವನ್ನು ಕೊಪ್ಪಂ ಯುದ್ಧ ಎಂದು ಗುರ್ತಿಸಲಾಗಿದೆ.

ಈ ಯುದ್ಧವು ಕೊಪ್ಪಂನಲ್ಲಿ (ಕೊಪ್ಪಳ) ನಡೆದಿರುವುದನ್ನು ನಾವು ಸಂಶಯಪಡಬಹುದು. ಏಕೆಂದರೆ ಶತ್ರುವೆ ಯುದ್ಧವನ್ನು ಅಪೇಕ್ಷಿಸಿ ಇರಟ್ಟಮಂಡಲಕ್ಕೆ (ರಟ್ಟಪಳ್ಳಿಗೆ) ಬಂದಾಗ ಚಾಲುಕ್ಯ ೧ನೇ ಸೋಮೇಶ್ವರನು ಕೊಪ್ಪಂಗೆ ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗಿದ್ದಲ್ಲಿ ಈ ಯುದ್ಧ ನಡೆದ ಪ್ರದೇಶ ಇರಟ್ಟಮಂಡಲದಲ್ಲಿಯೇ ಇರಬೇಕೆಂದು ನಾವು ಊಹಿಸಬಹುದು.

೧ನೆಯ ಸೋಮೇಶ್ವರನು ತನ್ನ ಆಕ್ರಮಣವನ್ನು ರಾಜೇಂದ್ರದೇವನ ಮೇಲೆ ಕೇಂದ್ರೀಕರಿಸಿ ಆತನ ತಲೆಯನ್ನು ತನ್ನ ಬಾಣಗಳಿಂದ ಘಾಸಿಗೊಳಿಸಿ, ಚೋಳರಾಜನ ತೊಡೆಯನ್ನು, ಪರ್ವತಗಳನ್ನು ಹೋಲುವ ಆತನ ಭುಜಗಳನ್ನು ಭೇದಿಸಿದನೆಂದು ಹೇಳುತ್ತಾ ಆನೆ ಮತ್ತು ಆತನು ಹತನಾದದ್ದು ಶಾಸನ ತಿಳಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ದೊರೆಯುವ ಇತರೆ ಶಾಸನಗಳು ಹೀಗಿವೆ. ಕ್ರಿ. ಶ. ೧೦೫೪ರ ಬೆಳಗಾವಿ ಶಾಸನ ಚೋಳರಾಜನು ಯುದ್ಧದಲ್ಲಿ ಧೈರ್ಯದಿಂದ ಹೋರಾಡಿ ಮಡಿದನೆಂದು ತಿಳಿಸುತ್ತದೆ[೨]. ಕ್ರಿ. ಶ. ೧೦೭೧ರ ಅಣ್ಣಿಗೇರಿ ಶಾಸನವು ಚೋಳರಾಜನು ೧ನೇ ಸೋಮೇಶ್ವರನಿಗೆ ತನ್ನ ತಲೆಯನ್ನು ಒಪ್ಪಿಸಿ ಪ್ರಾಣವನ್ನು ಕಳೆದುಕೊಂಡು, ವಂಶಪರಂಪರೆಯ ಆಳ್ವಿಕೆ ತಪ್ಪಿಸಿದನೆಂದು ತಿಳಿಸುತ್ತದೆ[೩]. ವಿಜಯರಾಜೇಂದ್ರದೇವನ ೩ ನೇ ವರ್ಷದ ಆಳ್ವಿಕೆಯಲ್ಲಿ ಕಲ್ಯಾಣಪುರ ಮತ್ತು ಕೊಲ್ಲಪುರವನ್ನು ಗೆದ್ದನಂತರ ಆನೆಯ ಮೇಲೆ ದೀರ್ಘ ನಿದ್ರೆಯನ್ನು (ಮರಣ ಹೊಂದಿದ) ಮಾಡಿದನೆಂದು ತಿಳಿಸುತ್ತದೆ.[೪] ರಾಜೇಂದ್ರದೇವನ ತಿರುಮಲವಾಡಿ ಶಾಸನ ರಾಜಾಧಿರಾಜನು ಕೊಪ್ಪಂ ಯುದ್ಧದಲ್ಲಿ ಹತನಾದ ಎಂದು ತಿಳಿಸುತ್ತದೆ[೫].

ರಟ್ಟಪಳ್ಳಿ ಗ್ರಾಮಕ್ಕೆ ಸುಮಾರು ೭ ಕಿ.ಮೀ. ದೂರದಲ್ಲಿ ಕುಮದ್ವತಿ ನದಿಯ ಬಲ ಭಾಗದಲ್ಲಿ ಕುಡುಪಲಿ ಎಂಬ ಗ್ರಾಮ ಇದೆ. ಈ ಗ್ರಾಮದ ಸನಿಹದಲ್ಲಿ ಕೊಪ್ಪಂ ಯುದ್ಧ ನಡೆದಿದೆ ಎಂದು ಕೆಳಗಿನ ಕಾರಣಗಳಿಂದ ಊಹಿಸಬಹುದು.

೧. ಚೋಳರಾಜನು ಯುದ್ಧವನ್ನು ಅಪೇಕ್ಷಿಸಿ ಇರಟ್ಟಮಂಡಲಕ್ಕೆ ಬಂದನೆಂದು ತಿಳಿಸಿರುವುದರಿಂದ, ಯುದ್ಧವು ಇರಟ್ಟ ಮಂಡಲದಲ್ಲಿಯೇ ನಡೆದಿರಬೇಕು, ದೂರದ ಕೊಪ್ಪಳದಲ್ಲಿ ಅಲ್ಲ.

೨. ರಟ್ಟಪಳ್ಳಿಯಿಂದ ಉತ್ತರಕ್ಕೆ ಕುಮದ್ವತಿ ನದಿಯ ಬಲಭಾಗದ ಪ್ರದೇಶವು ಸಮತಟ್ಟಾಗಿದ್ದು ಯಾವುದೇ ಬೆಟ್ಟಗಳಿಲ್ಲದೆ ಈ ಭೂಭಾಗವು ಕುಮದ್ವತಿಯು ತುಂಗಭದ್ರಾವನ್ನು ಸೇರುವ ಪ್ರದೇಶದ ವರೆವಿಗೂ ಇರುವುದರಿಂದ ಪ್ರಾಯಶಃ ಯುದ್ಧಕ್ಕೆ ಪ್ರಶಸ್ತ ಸ್ಥಳ ಆಗಿರಬಹುದು.

೩. ಕುಡುಪಲಿ ಗ್ರಾಮದಲ್ಲಿ ಬೀರದೇವರ ಮಟ್ಟಿ (ದಿಬ್ಬ) ಎಂಬ ಸ್ವಲ್ಪ ಎತ್ತರದ ಪ್ರದೇಶದಲ್ಲಿ ಬೀರದೇವನದೆಂದು ಇಂದೂ ಪೂಜಿಸಲ್ಪಡುತ್ತಿರುವ ಒಂದು ಸಮಾಧಿ ಇದೆ. ಈ ದೇವಸ್ಥಾನದ

* ನಂ ೬೬, ಒಂದನೇ ಅಡ್ಡ ರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ - ೫೭೭ ೨೦೧

ಗರ್ಭಗೃಹದ ಅಳತೆ (೪.೩೦.×೪. ೩೦) ಚ.ಮೀ. ಮುಂಭಾಗದ ಅರ್ಧಮಂಟಪದ ಅಳತೆ (೪.೩೦. × ೨.೩೦) ಚ.ಮೀ. ಇದೆ. ಇದರಲ್ಲಿ ಕೆಲವು ಉಬ್ಬುಶಿಲ್ಪಗಳು ಇವೆ.

೪. ದೇವಸ್ಥಾನದ ಹಿಂದಿನ ಗೋಡೆಯಲ್ಲಿ ಸಮಾಧಿ ರೂಪದಲ್ಲಿರುವ ದೀರ್ಘಚೌಕವು (೧.೩೦.×೦.೮೦) ಚ.ಮೀ. ಇದ್ದು ಇದರಲ್ಲಿ ಹೂವಿನ ಶಿಲ್ಪವಿದೆ. ದೀರ್ಘಚೌಕದ ಮೇಲೆ ಇರುವ ಸಣ್ಣ ಚೌಕವು (೦.೬೫. × ೦.೮೦) ಚ.ಮೀ. ಇದೆ. ಇದರಲ್ಲಿ ಆನೆಯ ಮೇಲೆ ಕುಳಿತಿರುವ ಎಡಗೈಯಲ್ಲಿ ಛತ್ರಿಯನ್ನು ಹಿಡಿದಿರುವ ಉಬ್ಬು ಶಿಲ್ಪವು ರಾಜೇಂದ್ರದೇವನು ಆನೆಯ ಮೇಲೆ ಮರಣ ಹೊಂದಿದನೆಂದು ಶಾಸನಗಳು ಹೇಳುವಂತೆ ಈ ಚಿತ್ರವು ತೋರಿಸುತ್ತಿರಬಹುದು.

೫. ರಾಜೇಂದ್ರದೇವನ ಮರಣಾನಂತರ ವೀರರಾಜೇಂದ್ರನು ಯುದ್ಧಸ್ಥಳದಲ್ಲಿ ಅಧಿಕಾರವನ್ನು ವಹಿಸಿಕೊಂಡನೆಂದು[೬] ಯುದ್ಧದಲ್ಲಿ ೧ ನೇ ಸೋಮೇಶ್ವರನ ತಮ್ಮ ಜಯಸಿಂಹನನ್ನು ಸ್ವರ್ಗಕ್ಕೆ ಕಳುಹಿಸಿದನೆಂದು ಹೇಳುತ್ತದೆ. ಬೀರದೇವನ ಸಮಾಧಿ ಮುಂದಿರುವ ಎರಡು ಕಂಭಗಳಲ್ಲಿ ತಲೆಯಲ್ಲಿ ಕಿರೀಟಧರಿಸಿ ಕೈ ಮುಗಿದು ಕುಳಿತಿರುವ ಎರಡು ಉಬ್ಬು ಶಿಲ್ಪಗಳು ರಾಜೇಂದ್ರ ದೇವನನಂತರ ಅಧಿಕಾರ ವಹಿಸಿಕೊಂಡ ವೀರಾರಾಜೇಂದ್ರನ ಶಿಲ್ಪ ಗಳಿರಬಹುದು.

೬. .ಕುಡುಪಲಿ ಪ್ರದೇಶವು ರಾಷ್ಟ್ರಕೂಟರ ಕಾಲದಿಂದಲೂ ಇರುವ ಗ್ರಾಮಗಳಿಂದ ಕೂಡಿದ ಪ್ರದೇಶ ಆಗಿರಬೇಕು. ಏಕೆಂದರೆ ಕುಡುಪಲಿ ಗ್ರಾಮದ ಉತ್ತರದ ಕುಮದ್ವತಿ ನದಿಯ ಬಲಭಾಗದಲ್ಲಿ ಹಿರೇಮಾಗನೂರಿನಲ್ಲಿ ರಾಷ್ಟ್ರಕೂಟರ ಎರಡು ಶಾಸನಗಳು ಲಭ್ಯ ಇದ್ದು, ಒಂದು ದ್ವಿಕೂಟಾಚಲ ದೇವಾಲಯ ಇದೆ.[೭]

೭. ಕುಡುಪಲಿ ಗ್ರಾಮದ ಉತ್ತರದ ಕುಮದ್ವತಿ ನದಿಯ ಎಡಭಾಗದಲ್ಲಿ ಕೂಲಿ ಗ್ರಾಮದಲ್ಲಿ ಈಚೆಗೆ ನಾನೇ ಒಂದು ರಾಷ್ಟ್ರಕೂಟ ಶಾಸನವನ್ನು ಪತ್ತೆ ಹಚ್ಚಿದ್ದು ಶಾಸನದ ಮೇಲೆ ಕುದುರೆಯ ಚಿತ್ರ ಇದ್ದು ಶ್ರೀ ವಲ್ಲಭ ಮತ್ತು ಮಾರಕ್ಕೆಅರಸನ ಉಲ್ಲೇಖ ಇದೆ. ಕುದುರೆಯ ಚಿತ್ರದ ಇನ್ನೊಂದು ಶಾಸನವು ಭಟ್ಟಾರಸನ ಕಾಲದ್ದು ಸನಿಹದ ಮೇದೂರಿನಲ್ಲಿ ಇದೆ[೮]. ಕ್ರಿ. ಶ. ೧೨೩೮ ನೇ ಸಿಂಘಣನ ಶಾಸನದ ಪ್ರಕಾರ ಇಂದಿನ ಕೂಲಿ ಗ್ರಾಮವು ಅಂದಿನ ಕೂವಲಿ ಎಂದು ಊಹಿಸಬಹುದು.[೯]

೮. ವೀರರಾಜೇಂದ್ರನು ೧ನೇ ಸೋಮೇಶ್ವರನ ಕೊನೆಯ ತಮ್ಮ ಜಯಸಿಂಹನನ್ನು ಸ್ವರ್ಗಕ್ಕೆ ಕಳುಹಿಸಿದನೆಂದು ಹೇಳಲಾಗಿದೆ. ಹಿರೇಮಾಗನೂರಿನಲ್ಲಿ ವೀರಗಲ್ಲಪ್ಪವೆಂದು ಕರೆಯಲ್ಪಡುವ ಆಳೆತ್ತರದ ಮಕರ ತೋರಣ ಹೊಂದಿದ, ಎಡಗೈಯಲ್ಲಿ ಕತ್ತಿಯನ್ನು ಬಲಗೈಯಲ್ಲಿ ಬಿಲ್ಲನ್ನು ಹಿಡಿದ ವೀರನ ಶಿಲ್ಪವು ವೀರರಾಜೇಂದ್ರ ನಿಂದ ಕೊಲ್ಲಲ್ಪಟ್ಟ ಜಯಸಿಂಹನದು ಇರಬಹುದು.

೯. ೧ನೇ ಸೋಮೇಶ್ವರನು ತನ್ನ ಕೊಪ್ಪಂ ಯುದ್ಧದ ಅಪಮಾನವನ್ನು ತೊಡೆದು ಹಾಕಲು ಚೋಳರಾಜನನ್ನು ಸಂಧಿಸಿದನೆಂದು ೨ ನೇ ರಾಜೇಂದ್ರನ ತಿರುಮಲವಾಡಿ ಶಾಸನ ತಿಳಿಸುತ್ತದೆ.[೧೦] ರಾಜ ಮಹೇಂದ್ರವರ್ಮನ ೩ನೇ ವರ್ಷದ ಆಳ್ವಿಕೆಯ ತಿರುಪ್ಪಪುಲಿಯರ್ ಶಾಸನ ೧ ನೇ ಸೋಮೇಶ್ವರನು ತೀವ್ರ ತಿರುವಿನ ನದಿಯ ದಡದಲ್ಲಿ ತನ್ನ ಬೆನ್ನನ್ನು ತೋರಿಸಿದನೆಂದು ತಿಳಿಸುತ್ತದೆ.[೧೧] ವೀರರಾಜೇಂದ್ರನ ತಿರುಮಕೂಡಲ್ ಮತ್ತು ತಿರುಪ್ಪಾನಾನಂಡಳ್ ಶಾಸನಗಳು ೧ನೇ ಸೋಮೇಶ್ವರನನ್ನು ಕೊಪ್ಪಂ ಮತ್ತು ಮಡಕ್ಕುರು ಯುದ್ಧದಲ್ಲಿ ಸೋಲಿಸಿರುವುದನ್ನು ಹೇಳುತ್ತದೆ.

ಮಡಕ್ಕುರು ಎಂಬುದನ್ನು ಕೆ.ಎ.ನೀಲಕಂಠ ಶಾಸ್ತ್ರಿಯವರು ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲೂಕ ವೇದಾವತಿ ನದಿಯ ದಡದ ಮೇಲಿರುವ ಮಾಡದಕೆರೆ[೧೨] ಎಂದು ಊಹಿಸಿದ್ದಾರೆ. ಮಡಕ್ಕುರು ಎಂದರೆ ತಮಿಳಿನಲ್ಲಿ ತೀವ್ರತಿರುವಿನಿಂದ ಕೂಡಿದ ಭಾಗ ಎಂದೂ ಇದು ತೀವ್ರತಿರುವಿನ ನದಿಯ ದಡದಲ್ಲಿ ನಡೆದ ಯುದ್ಧ ಆಗಿದ್ದು, ಅದು ಗ್ರಾಮದ ಹೆಸರು ಆಗಿರದೆ ಆ ಭಾಗದ ವರ್ಣನೆ ಆಗಿರಬಹುದೆಂದು ಡಾ॥ ಬಿ.ಆರ್. ಗೋಪಾಲ್ ಅಭಿಪ್ರಾಯಪಟ್ಟಿದ್ದಾರೆ.[೧೩]

ಮಡಕ್ಕುರು ತೀವ್ರತಿರುವಿನ ಭಾಗವಾಗಿದ್ದು, ತೀವ್ರತಿರುವಿನ ನದಿಯ ಭಾಗವು ಕುಡುಪಲಿ ಮತ್ತು ಕೂಲಿ ಗ್ರಾಮಗಳ ನಡುವೆ ಹರಿಯುತ್ತಿರುವ ಕುಮದ್ವತಿಯು ತೀವ್ರತಿರುವಿನಿಂದ ಕೂಡಿದೆ. ಈ ತೀವ್ರತಿರುವು ಭಾರತೀಯ ಸರ್ವೆ ಇಲಾಖೆಯ ನಕ್ಷೆ ೪೮-ಎನ್ ೧೧ ವೀಕ್ಷಿಸಿದಾಗ ಕಂಡುಬರುತ್ತದೆ. ಆದ್ದರಿಂದ ಕ್ರಿ.ಶ. ೧೦೫೪ ಮತ್ತು ೧೦೫೯ರ ಕೊಪ್ಪಂ ಮತ್ತು ಮಡಕ್ಕುರು ಯುದ್ಧಗಳು ಒಂದೇ ಸ್ಥಳದಲ್ಲಿ ನಡೆದಿದೆ ಎಂದು ಊಹಿಸಬಹುದು.

೧೦. ಮಣಿಮಂಗಲಂ ಶಾಸನದಲ್ಲಿ ಮಾಗನೂರು ನಾಡಿನಲ್ಲಿ ೨೦೦೦ ಕುಳಿಯ ಜಾಗವನ್ನು ಊರಿನ ದೇವಸ್ಥಾನಕ್ಕೆ ದತ್ತಿ ಬಿಟ್ಟ ಉಲ್ಲೇಖದೊಂದಿಗೆ ಅದರ ಗಡಿಗಳನ್ನು ಹೀಗೆ ಹೇಳಲಾಗಿದೆ.[೧೪]

ಪೂರ್ವದ ಗಡಿ - ಮಾಗನೂರು ಗ್ರಾಮದ ಪಶ್ಚಿಮದ ಗಡಿ
ದಕ್ಷಿಣದ ಗಡಿ - ಕೆರೆಯ ಉತ್ತರದ ದಂಡೆ
ಪಶ್ಚಿಮದ ಗಡಿ - ನಾಲೆಯ ಪೂರ್ವದ ಗಡಿ
ಉತ್ತರದ ಗಡಿ - ಕುಲತ್ತೂರಿನ ಪಶ್ಚಿಮದ ಗಡಿ

ಮಣಿಮಂಗಲಂನ ಇನ್ನೊಂದು ಶಾಸನದಲ್ಲಿ ಕುಲತ್ತೂರ ಗ್ರಾಮದಲ್ಲಿ ೨೦೦೦ ಕುಳಿಯ ಜಾಗದ ದತ್ತಿ ಬಿಟ್ಟ ಉಲ್ಲೇಖದೊಂದಿಗೆ ಅದರ ಗಡಿಗಳನ್ನು ಹೀಗೆ ಹೇಳಲಾಗಿದೆ.[೧೫]

ಉತ್ತರದ ಗಡಿ - ಕೆರೆಯ ದಕ್ಷಿಣಕ್ಕೆ
ದಕ್ಷಿಣದ ಗಡಿ - ಮಾಗನೂರಿನ ಉತ್ತರದ ಗಡಿ
ಪೂರ್ವದ ಗಡಿ - ಕಲರುಂಗಳಿಯ ಪಶ್ಚಿಮಕ್ಕೆ
ಪಶ್ಚಿಮದ ಗಡಿ - ಕೆರೆಯ ಪೂರ್ವಕ್ಕೆ

ಮಾಗನೂರಿನ ಉತ್ತರದ ಗಡಿಯನ್ನು ಕುಲತ್ತೂರು ಎಂದೂ ಕುಲತ್ತೂರಿನ ದಕ್ಷಿಣದ ಗಡಿಯನ್ನು ಮಾಗನೂರು ಎಂದು ಹೇಳಿರುವುದರಿಂದ, ಮಾಗನೂರು, ಕುಲತ್ತೂರು ಅಕ್ಕಪಕ್ಕದ

ಗ್ರಾಮಗಳಾಗಿದ್ದು ಕುಲತ್ತೂರನ್ನು ಕಾಂಜೀಪರಮ್‌ನ ತಾಲೂಕಿನ ಕೊಲತ್ತೂರು ಎಂದು ಗುರ್ತಿಸಲಾಗಿದೆ.[೧೬] ನಕ್ಷೆ ೪೮-ಎನ್ ೧೧ ರಲ್ಲಿ ನೋಡಿದಾಗ ಮಾಗನೂರ ಮತ್ತು ಕುಪ್ಪೆಲೂರು ಅಕ್ಕ ಪಕ್ಕದ ಗ್ರಾಮಗಳಾಗಿದ್ದು, ಇಂದಿನ ಕುಪ್ಪೆಲೂರು ಅಂದಿನ ಕುಲತ್ತೂರು ಆಗಿರುವ ಸಾಧ್ಯತೆ ಇದೆ. ಈ ಗಡಿಯಲ್ಲಿಯೆ ವಾಮನ ಮುದ್ರೆಯ ಎರಡು ಕಲ್ಲುಗಳು ದೊರೆತಿವೆ.

೧೧. ಕ್ರಿ.ಶ. ೧೦೬೪ರ ಕೂಡಲಸಂಗಮದ ಯುದ್ಧವು ಹೊಳೆಅನ್ನೇರಿ ಗ್ರಾಮದ ಸನಿಹ - ಕುಮುದ್ವತಿ ಮತ್ತು ತುಂಗಭದ್ರಾ ನದಿಯ ಸಂಗಮದ ಬಳಿ ನಡೆದಿರಬಹುದೆಂದು ಡಾ॥ ಬಿ. ಆರ್. ಗೋಪಾಲ್ ಅಭಿಪ್ರಾಯ ಪಟ್ಟಿದ್ದಾರೆ. ವೀರರಾಜೇಂದ್ರದೇವನ ೪ನೇ ವರ್ಷದ ಆಳ್ವಿಕೆಯ ಶಾಸನದಲ್ಲಿ [೧೭] ಮಹಾದಂಡನಾಯಕ ಚಾಮುಂಡರಾಯನ ಶಿರಚ್ಛೇಧ ಮಾಡಿ ಮತ್ತು ನವಿಲಿನಂಥ ಸೌಂದರ್ಯವನ್ನು ಹೊಂದಿದ್ದ ಚಾಮುಂಡರಾಯನ ಮಗಳು ನಾಗಲಿಯ ಮೂಗನ್ನು ಕೊಯ್ದನೆಂದು ತಿಳಿಸುತ್ತದೆ.

ಕ್ರಿ.ಶ. ೧೦೬೬ ಯುದ್ಧವು ಗೊತ್ತಿಲ್ಲದ ನದಿಯ ದಡದಲ್ಲಿನ ಯುದ್ಧ, ಕೂಡಲ ಅಥವಾ ಕರಂಡಿಯಯುದ್ಧ ಎಂದು ಕರೆಯಲಾಗಿದೆ. ಈ ಯುದ್ಧವು ಕೂಡಲಸಂಗಮದಲ್ಲಿಯೇ ನಡೆದ ೪ನೆಯ ಯುದ್ಧ. ಏಕೆಂದರೆ ವೀರರಾಜೇಂದ್ರನ ಮಣಿಮಂಗಲಂ ಶಾಸನ ೧೮ರಲ್ಲಿ ೧ನೇ ಸೋಮೇಶ್ವರನು, ಅವಮಾನದಲ್ಲಿ ಇರುವುದಕ್ಕಿಂತ ಸಾಯುವುದೆ ಮೇಲು ಎಂದು ತಿಳಿದು 'ಎಲ್ಲಿ ತಾನು ತನ್ನ ಮಕ್ಕಳು ಬೆನ್ನುತೋರಿಸಿ ಹಿಂತಿರುಗಿ ಬಂದೆವೊ ಅಲ್ಲಿಯೆ - ಕೂಡಲದಲ್ಲಿ ಮುಂದಿನ ಯುದ್ಧ' ಎಂದು ಸಾರಿ ಎಲ್ಲರಿಗೂ ತಿಳಿಯಲೆಂದು ರಟ್ಟಪಳ್ಳಿಯ ಮಂತ್ರಿಯ ಮೂಲಕ ಈ ರೀತಿಯ ಪತ್ರ ಬರೆದು ಕಳುಹಿಸುತ್ತಾನೆ: 'ಯಾರು ಭಯದಿಂದ ಗೊತ್ತಾದ ಸ್ಥಳವಾದ ಕೂಡಲಕ್ಕೆ ಬರುವುದಿಲ್ಲವೊ ಆತ ಸುಳ್ಳುಗಾರ.'

'ಎಲ್ಲಿ ತಾವು ಬೆನ್ನು ತೋರಿಸಿ ಹಿಂತಿರುಗಿ ಬಂದೆವೊ ಅಲ್ಲಿ' ಎಂದಿರುವುದರಿಂದ ೩ ಮತ್ತು ೪ ನೆಯ ಯುದ್ಧಗಳು ಒಂದೇ ಸ್ಥಳದಲ್ಲಿ ನಡೆದಿವೆ ಅಂದರೆ ಕೂಡಲಸಂಗಮದಲ್ಲಿ - ಹೊಳೆ ಆನವೇರಿಯಲ್ಲಿಯೆ.

೧೨. ಚೋಳರಾಜನು ನಿಶ್ಚಿತ ಸ್ಥಳಕ್ಕೆ ಬಂದು ಒಂದು ತಿಂಗಳು ಕಾಯ್ದು ಚಾಲುಕ್ಯರಾಜನು ಬರದೆ ಇದ್ದುದರಿಂದ ಸಿಟ್ಟಿಗೆದ್ದು ರಟ್ಟಪಳ್ಳಿಯನ್ನು ಸುಟ್ಟುಹಾಕಿದ ಉಲ್ಲೇಖ ಇದೆ. ಆನಂತರ ಚಾಲುಕ್ಯ ೬ನೇ ವಿಕ್ರಮಾದಿತ್ಯನು ಬಂದು ಕ್ಷಮೆ ಕೇಳಲು ಚೋಳರಾಜನು ಗೆದ್ದ ರಟ್ಟಪಳ್ಳಿ ಪ್ರಾಂತ್ಯವನ್ನು, ಸುಂದರ ಕಂಠೀಹಾರವನ್ನು ಹಾಕಿ ಹಿಂತಿರುಗಿಸಿದನೆಂದು ತಿಳಿಸುತ್ತದೆ.

ಕುಡುಪಲಿಯ ಬೀರದೇವರ ದೇವಸ್ಥಾನದ ಉಬ್ಬು ಶಿಲ್ಪಗಳು ಪ್ರಾಯಶಃ ಅನಂತರದ ಕಾಲದಲ್ಲಿ ನಿರ್ಮಾಣವಾಗಿದ್ದು ಈ ಘಟನೆಗಳನ್ನು ತೋರಿಸಿರಬಹುದು.

ಈ ಮೇಲ್ಕಂಡ ಸಂಗತಿಗಳಿಂದ ಕ್ರಿ.ಶ. ೧೦೫೪, ೧೦೫೯ರ ಯುದ್ಧವು ಕುಮುದ್ವತಿಯ ದಡದಲ್ಲಿನ ಕುಡುಪಲಿಯ ಸನಿಹದಲ್ಲಿ ಮತ್ತು ಕ್ರಿ.ಶ. ೧೦೬೪, ೧೦೬೬ರ ಯುದ್ಧಗಳು ಹೊಳೆಆನ್ನೇರಿಯ ಸನಿಹದಲ್ಲಿ ನಡೆದಿದೆಯೆಂದು ಊಹಿಸಬಹುದು.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. Manimangalam Ins. No. 29
೨. EC VII, SK 118, Belgami Ins.
೩. Dr. Fleet, **Canareese Dynasties,** note No. 85 PNO 443
೪. Alagundi Ins. line 22
೫. Ins SII Vol. XXI No 87, 1985, Tirumalavadi
೬. Manimangalam Ins. No. 29 line 9
೭. SII Vol. XVIII, No. 11 & 20
೮. KI Vol. IV, No 59
೯. KI Vol. VI, No 27 line 64
೧೦. SII Vol. V, No 647
೧೧. Ins. No. 1199, 1902 ?
೧೨. KAN Felicitation volume, P. 60 - 65
೧೩. Dr. B.R. Gopal, **The Kalyana Chalukyas & Kalachuries;** P. 184 -185
೧೪. Manimangalam Ins. No. 27
೧೫. Ibid, Ins. No. 33
೧೬. Madras Survey Map No. 289
೧೭. SII No. 20 ?
೧೮. Manimangalam Ins. No. 30

ಡಾ॥ ಸಿ. ನಾಗಭೂಷಣ *

ನಾಗಾವಿ: ಕೆಲವು ಹೆಚ್ಚಿನ ಸಂಗತಿಗಳು

ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲ್ಲೋಕಿನ ನಾಗಾವಿಯು ಈಗಿನ ಸನಿವಾಸ ವಿಶ್ವವಿದ್ಯಾಲಯದ ಮಾದರಿಯಲ್ಲಿ ವ್ಯವಸ್ಥಿತವಾದ ಘಟಿಕಾಲಯವನ್ನು ಪ್ರಾಚೀನ ಕಾಲದಲ್ಲಿ ಹೊಂದಿತ್ತು ಎಂಬುದು ನಾಗಾವಿಯಲ್ಲಿ ದೊರೆತ ಕ್ರಿ.ಶ. ೧೦೫೮ರ ಶಾಸನದಲ್ಲಿ ಉಲ್ಲೇಖಿತವಾಗಿರುವುದು ಸರ್ವವಿದಿತ ಸಂಗತಿಯಾಗಿದೆ. ಕಲ್ಯಾಣಿ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಅಹವಮಲ್ಲ ಸೋಮೇಶ್ವರನ ಕಾಲದಲ್ಲಿ ಕಾಳಿದಾಸಯ್ಯ ಎಂಬ ದಂಡನಾಯಕನು ನಾಗಾವಿಯನ್ನು ಪರಮೇಶ್ವರ ದತ್ತಿಯಾಗಿ ತಾಮ್ರಶಾಸನದ ರೂಪದಲ್ಲಿ ಪಡೆಯುವ ಮೊದಲೆ ಚತುರ್ವೇದ ಪಾರಾವಾರ ಪಾರಗಮರೆನಿಸಿದ ನಾಲ್ಕು ನೂರು ವಿಪ್ರೋತ್ತಮರನ್ನೊಳಗೊಂಡ ಮಹಾಗ್ರಹಾರವಾಗಿತ್ತು ಎಂಬುದನ್ನು ಈ ಶಾಸನದಲ್ಲಿಯ ಉಲ್ಲೇಖದಿಂದಲೇ ತಿಳಿಯಬಹುದಾಗಿದೆ. ಕಾಳಿದಾಸಯ್ಯ ದಂಡನಾಯಕನು ನಾಗಾವಿಯಲ್ಲಿ ಸ್ಥಾನಿಕ ವಿದ್ಯಾಲಯ ಮಟ್ಟದ ವಿದ್ಯೆಗಾಗರವಾದ ಮಧುಸೂದನಾಲಯವನ್ನು ಘಟಿಕಾಲಯವನ್ನು ನಿರ್ಮಿಸಿ ವಿದ್ಯಾಚಟುವಟಿಕೆಗಳು ನಿರಂತರವಾಗಿ ನಡೆಯಲು ದತ್ತಿಯನ್ನು ಬಿಟ್ಟು ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗಿಸಿದ್ದಾನೆ. ನಾಗಾವಿಯ ಘಟಿಕಾಲಯದಲ್ಲಿ ಪ್ರೌಢವಿದ್ಯೆಯ ಮಹತ್ವದ ಶಾಖೆಗಳಾದ ವೇದಗಳು, ಭಟ್ಟದರ್ಶನ, ನ್ಯಾಸ, ಪ್ರಭಾಕರದಂತಹ ಶಾಸ್ತ್ರ-ಮೀಮಾಂಸೆಗಳನ್ನು ಕಲಿಯುವ ೨೫೦ ವಿದ್ಯಾರ್ಥಿಗಳು ಕಲಿಸುವ ಅಧ್ಯಾಪಕರು, ಗ್ರಂಥಾಲಯ, ಗ್ರಂಥಾಲಯವನ್ನು ನೋಡಿಕೊಳ್ಳುವ ಸರಸ್ವತೀಭಂಡಾರಿ ಘಟಿಕ ಪ್ರಹಾರಿಗಳು ಇದ್ದರು. ಪ್ರತಿಯೊಂದು ಶಾಖೆಯಲ್ಲಿ ಬೋಧಿಸುವ ಉಪಾಧ್ಯಾಯರು ಸಂಭಾವನೆಯಾಗಿ ಭೂಮಿಯನ್ನು ಉಂಬಳಿಯಾಗಿ ಪಡೆದಿದ್ದರು ಎಂಬ ವಿವರ ಕ್ರಿ.ಶ. ೧೦೫೮ರ ನಾಗಾವಿ ಶಾಸನದಲ್ಲಿ ಉಲ್ಲೇಖಿತವಾಗಿದೆ.

ಚಿತಾಪುರ ತಾಲ್ಲೋಕಿನ ಪ್ರಕಟಗೊಂಡು ಚದುರಿ ಹೋಗಿರುವ ಶಾಸನಗಳನ್ನು ಸಂಗ್ರಹಿಸುವ ಸಲುವಾಗಿ ಹೈದರಾಬಾದ್ ಆರ್ಕಿಯಾಲಾಜಿಕಲ್ ಸೀರೀಸ್‌ನ ಸಂಪುಟಗಳನ್ನು ಪರಿಶೀಲಿಸುತ್ತಿರುವಾಗ ಹೈದರಾಬಾದ್ ಆರ್ಕಿಯಾಲಾಜಿಕಲ್ ಸೀರೀಸ್‌ನ ಸಂಪುಟ ೮ರ ಪುಟ ೩೦ ಮತ್ತು ೩೩ರಲ್ಲಿ ಪ್ರಕಟಗೊಂಡಿದ್ದ ಕಲ್ಯಾಣಿ ಚಾಲುಕ್ಯರ ಕಾಲದ ಕ್ರಿ.ಶ. ೧೦೬೮-೧೦೮೫ರ ನಾಗಾವಿಗೆ ಸೇರಿದ ಎರಡು ಶಾಸನಗಳು ವಿಶೇಷವಾಗಿ ಗಮನ ಸೆಳೆದವು. ಈ ಶಾಸನಗಳಲ್ಲಿ ವ್ಯಕ್ತವಾಗಿರುವ ವಿಷಯಗಳು ಕ್ರಿ.ಶ. ೧೦೫೮ರ ಶಾಸನಕ್ಕೆ ಪೂರಕವಾಗಿರುವುದಲ್ಲದೆ ನಾಗಾವಿಯಲ್ಲಿದ್ದ ವಿದ್ಯಾಸಂಸ್ಥೆಯ ವ್ಯಾಪ್ತಿಯನ್ನು, ಇನ್ನಿತರ ಸಾಂಸ್ಕೃತಿಕ ಅಂಶಗಳನ್ನು ತಿಳಿಯುವುದಕ್ಕೆ ನೆರವಾಗಿವೆ. ಇಲ್ಲಿಯವರೆಗೂ ಕ್ರಿ.ಶ. ೧೦೫೮ರ ಶಾಸನದಲ್ಲಿಯ ವಿವರವನ್ನು ಅನುಸರಿಸಿ ನಾಗಾವಿ ಘಟಿಕಾಲಯವಾಗಿತ್ತು ಎಂಬುದನ್ನು ಮಾತ್ರ ಗಮನಿಸಲಾಗಿತ್ತು. ಈ ಶಾಸನಗಳ ವಿವರದಿಂದ ನಾಗಾವಿಯ ಮಧುಸೂದನ ದೇವಾಲಯವು ಕೇವಲ ಘಟಿಕಾಲಯ ಮಾತ್ರವಾಗಿರದೆ ಆ ಕಾಲದಲ್ಲಿ ಸಾಮಾಜಿಕ ಸಂಸ್ಥೆಯಾಗಿಯೂ ಪ್ರಮುಖ ಪಾತ್ರವಹಿಸಿತ್ತು ಎಂಬುದು ತಿಳಿದು ಬರುತ್ತದೆ. ಕ್ರಿ.ಶ. ೧೦೫೮ರ ಕಾಲಕ್ಕೆ ಉನ್ನತ ಶಿಕ್ಷಣದ ಕಲಿಕೆಗೆ ಆಗರವಾಗಿದ್ದ ನಾಗಾವಿಯು ಕ್ರಿ.ಶ. ೧೦೮೫ರ ವೇಳೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಲಲಿತಕಲೆ ಚಟುವಟಿಕೆಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟು ಸಾಂಸ್ಕೃತಿಕ ಚಟುವಟಿಕೆಗಳ ನೆಲೆವೀಡು ಆಗಿತ್ತು ಎಂಬುದಾಗಿ ತಿಳಿದು ಬರುತ್ತದೆ.

ನಾಗಾವಿ ಘಟಿಕಾಲಯದಲ್ಲಿಯ ವಿದ್ಯಾಭ್ಯಾಸ ಚಿತ್ರಣದ ವ್ಯಾಪ್ತಿಯ ಬಗೆಗೆ ಕ್ರಿ.ಶ. ೧೦೬೮ ಹಾಗು ಕ್ರಿ.ಶ. ೧೦೮೫ರ ಶಾಸನಗಳ ಮೂಲಕ, ಕಲಿಯುವ ವಿದ್ಯಾರ್ಥಿಗಳ ವರ್ಗಶ್ರೇಣಿ ಇದ್ದುದರ ಬಗೆಗೆ ತಿಳಿದು ಬರುತ್ತದೆ. ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ, ಅನುಷ್ಠಾನಿಗಳು ವೇದ ವೇದಾಂಗಗಳನ್ನು ಅಭ್ಯಸಿಸುವ ವಿದ್ಯಾರ್ಥಿ ವರ್ಗ ಶ್ರೇಣಿ ಇದ್ದು ಪ್ರತಿಯೊಂದು ಶ್ರೇಣಿ ವರ್ಗವೂ ತನ್ನದೇ ಆದ ಭವನಗಳನ್ನು ಹೊಂದಿತ್ತು ಎಂಬುದಾಗಿ ತಿಳಿದು ಬರುತ್ತದೆ. ಈ ವಿವರ

* ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಸ್ನಾತಕೋತ್ತರ ಕೇಂದ್ರ, ಕೃಷ್ಣದೇವರಾಯನಗರ, ಸೊಂಡೂರು - ೫೮೩ ೧೧೯

ಕ್ರಿ.ಶ.೧೦೫೪ರ ಶಾಸನದಲ್ಲಿ ಉಲ್ಲೇಖಿತವಾಗಿಲ್ಲ. ಬೇರೆ ಬೇರೆ ಅಧ್ಯಾಪಕ ವರ್ಗ ಇದ್ದುದರ ಬಗೆಗೂ ಉಲ್ಲೇಖ ಇದೆ. ಅಂತಹವರೆಂದರೆ ಜನ್ನಯ ಚಟ್ಟೋಪಾಧ್ಯಾಯ್ಯರು, ಬ್ರಹ್ಮಪುರಿ ದೋಣಯಭಟ್ಟರು, ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಕಲ್ಪಗಳಲ್ಲಿ ಬಲ್ಲವರಾದ ಮೂವರು ಷಡಂಗಿಗಳು, ಸಂಜೆ ಮಠದಲ್ಲಿ ಪುರಾಣ ವಾಚಿಸುವ ಪುರಾಣಭಟ್ಟ ಇತ್ಯಾದಿಯವರು ಜ್ಞಾನಪ್ರಸಾರ ಕಾರ್ಯದಲ್ಲಿ ನಿರತರಾಗಿದ್ದು ಜೀವನೋಪಾಯಕ್ಕಾಗಿ ಅರ್ಹತೆಗನುಗುಣವಾಗಿ ಹಲವು ಮತ್ತರು ಭೂಮಿಯನ್ನು ದತ್ತಿಯಾಗಿ ಪಡೆದಿದ್ದರು. *

ದೇವಸ್ಥಾನದ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಬೇರೆ ಬೇರೆ ಜವಾಬ್ದಾರಿಯನ್ನು ಹೊತ್ತ ಕಾರ್ಯನಿರತ ಅಧಿಕಾರಿ ವರ್ಗಗಳಿದ್ದವು ಎಂಬುದು ಶಾಸನಗಳಿಂದ ತಿಳಿದು ಬರುತ್ತಿದ್ದು ಈ ಶಾಸನದಲ್ಲಿಯ ವಿವರವೂ ಕೂಡ ಮಧುಸೂದನ ದೇವಾಲಯದಲ್ಲಿ ವಿವಿಧ ರೀತಿಯ ಕಾರ್ಯ ನಿರತ ವ್ಯಕ್ತಿಗಳ ಉಲ್ಲೇಖ, ಅವರ ಜೀವನೋಪಾಯಕ್ಕಾಗಿ ನೀಡಿದ ದತ್ತಿಯ ಬಗೆಗೆ ತಿಳಿಸುತ್ತದೆ. ಅಂತಹವರೆಂದರೆ ದೇವಾಲಯವು ಶಿಥಿಲವಾದರೆ ಜೀರ್ಣೋದ್ಧಾರ ಮಾಡುವಂತಹ ಕಲುಕುಟಿಕ (ಜೀರ್ಣೋದ್ಧಾರದ ಬೆಸಕ್ಕೆ ಕೊಳ್ಚನುಣ್ಬುಮಾಡುವ) ವೋಜುಗಳು ನಾಲ್ವರು ಪೂಜೆಯ ಸಮಯದಲ್ಲಿ ಘಂಟೆಯನ್ನು ಬಾರಿಸುವ ದೇವರ ಘಟಿಗೆಯ ಮಾಣಿಗಳು ನಾಲ್ವರು, ಬ್ರಹ್ಮಚರ್ಯನಕ್ತ ಬೋಜನಮಧ ಶಯನದಿಂದ ದೇವರಂ ಪೂಜಿಸುವ ದೇಹಾರಿಗಳೀರ್ವರು, ದೇವರಿಗೆ ನೈವೇದ್ಯವನ್ನು ತಯಾರು ಮಾಡುವ ಬಾಣಸಿಗರು, ಕಾಪಿನ ಘಟಿಯರು ಮೂವರು, ದೇವರ ಪಳವಿಗೆ ಅಥವಾ ಧ್ವಜವನ್ನು ಹೊರುವ ಪಾಳವಿಗಳಿಬ್ಬರು, ಮದ್ದಳಿಯನ್ನು ಬಾರಿಸುವ ಮದ್ದಳಿಕಾರರು ನಾಲ್ವರು ಇದ್ದು ಜೀವನದ ನಿರ್ವಹಣೆಗಾಗಿ ಭೂಮಿಯನ್ನು ಉಂಬಳಿಯಾಗಿ ಪಡೆದಿದ್ದರು ಎಂಬುದಾಗಿ ತಿಳಿದುಬರುತ್ತದೆ.

ದೇವಾಲಯದ ಗರ್ಭಗುಡಿಯ ದೇವತಾ ವಿಗ್ರಹದ ಮುಂದುಗಡೆಯ ರಂಗದಲ್ಲಿ ನರ್ತಕಿಯರಿಂದ ನಡೆಯುವ ಗೀತ-ನೃತ್ಯಗಳಾದ ರಂಗಭೋಗಗಳು ಸಹ ಮಧುಸೂದನ ದೇವಾಲಯದಲ್ಲಿ ನಡೆಯುತ್ತಿದ್ದವು ಎಂದು ತಿಳಿದು ಬರುತ್ತದೆ. ರಂಗಭೋಗದ ಉಪಕರಣಗಳಂತಿದ್ದ ದೇವದಾಸಿಯರ ಉಲ್ಲೇಖ ಈ ಶಾಸನದಿಂದ ತಿಳಿದು ಬರುತ್ತದೆ. ಹಾಡುವ ಸಮುದಾಯದವರು, ನೃತ್ಯಗೀತಾದಿಗಳಲ್ಲಿ ಪರಿಣಿತರಾಗಿದ್ದು ದೇವರ ಕಾರ್ಯಕ್ಕೆ ಮೀಸಲಾಗಿದ್ದಂತಹ ಪಾತ್ರದವರು, ನಾಲ್ವರು ಕಂಭದ ಸೂಳೆಯರು ಈ ದೇವಾಲಯದಲ್ಲಿ ಇದ್ದು ದೇವತಾ ಕಾರ್ಯಕ್ಕೆ ಮೀಸಲಾಗಿದ್ದರು. ಇವರಿಗೂ ಜೀವನೋಪಾಯಕ್ಕಾಗಿ ಭೂಮಿಯನ್ನು ದತ್ತಿ ಬಿಟ್ಟಿರುವ ಬಗೆಗೆ ಈ ಶಾಸನ ತಿಳಿಸುತ್ತದೆ. ಈ ದೇವಾಲಯದಲ್ಲಿ ನಾಟ್ಯಶಾಲೆಯು ಇದ್ದಿರುವುದರ ಬಗೆಗೆ ಉಲ್ಲೇಖ ಇದೆ. ಹೀಗೆ ಪ್ರಾಚೀನ ಕಾಲದಲ್ಲಿ ದೇವಸ್ಥಾನವು ಊರಿನ ಕೇಂದ್ರ ಬಿಂದುವಾಗಿ ಆಯಾ ಊರಿನ ಸಾಂಸ್ಕೃತಿಕ ಜೀವನದ ವೃದ್ಧಿಗೆ ಕಾರಣೀಭೂತವಾಗಿದ್ದುದರ ಜೊತೆಗೆ ಶಿಲ್ಪ ಚಿತ್ರ, ಸಂಗೀತ ನರ್ತನದಂತಹ ಲಲಿತಕಲೆಗಳು ದೇವಸ್ಥಾನದ ಆಶ್ರಯದಲ್ಲಿ ರೂಪುಗೊಳ್ಳಲು ಆಶ್ರಯ ಕಲ್ಪಿಸಿದ್ದಲ್ಲದೆ, ಜನಜೀವನದ ಕೇಂದ್ರ ಬಿಂದುವಾಗಿ ಸಮಾಜದ ಮೇಲೆ ಪ್ರಭಾವವನ್ನು ಬೀರಿದ್ದವು ಎಂಬುದಕ್ಕೆ ನಾಗಾವಿಯ ಮಧುಸೂದನ ದೇವಾಲಯವು ಸಾಕ್ಷಿಯಾಗಿದೆ. ಧನಿಕರ ಧನವು ವಿದ್ಯೆಯ ಕಡೆಗೆ, ಕಲೆಗಳ ಕಡೆಗೆ ಹರಿಸುವಲ್ಲಿ ದೇವಸ್ಥಾನಗಳ ಹಿರಿಮೆ ಅಗಾಧವಾದುದು ಎಂಬುದು ಈ ದೇವಾಲಯದ ಶಾಸನದಿಂದ ತಿಳಿದುಬರುತ್ತದೆ.

ನಾಗಾವಿಯ ಮಧುಸೂದನ ದೇವಾಲಯದಲ್ಲಿ ವಿದ್ಯೆಗೆ ಹಾಗೂ ಲಲಿತಕಲೆಗಳಿಗೆ ಸಂಬಂಧಿಸಿದ ಚಟುವಟಿಕೆಗಳು ನಿರಂತರವಾಗಿ ಯಾವುದೇ ಅಡೆತಡೆಯಿಲ್ಲದೆ ನಡೆಯುತ್ತಿತ್ತು. ಮಧುಸೂದನ ದೇವಾಲಯವನ್ನು ನಿರ್ಮಿಸಿದ ಕಲ್ಯಾಣಿ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಅಹವಮಲ್ಲ ಸೋಮೇಶ್ವರನ ದಂಡ ನಾಯಕನಾದ ಕಾಳಿದಾಸ ದಂಡನಾಯಕ ಮಾತ್ರವಲ್ಲದೆ, ನಂತರದ ಕಾಲದಲ್ಲಿಯೂ ತ್ರಿಭುವನಮಲ್ಲನ ಮಹಾಸಾಮಂತ ಕನ್ನಡ ಸಂಧಿವಿಗ್ರಹಿ ಕಡಿತವೆರ್ಗ್ಗಡೆ ದಂಡನಾಯಕ ಮಧುಪರಸನಿಂದ ಹಾಗೂ ಅಹಿಹಯ ವಂಶದ ಲೋಕರಸ ಮಹಾಮಂಡಲೇಶ್ವರ ನಿಂದಲೂ ಭೂಮಿ ಹಾಗೂ ಇತರೆ ವಸ್ತುಗಳನ್ನು ದತ್ತಿಯಾಗಿ ಪಡೆದಿದ್ದಿತು ಎಂಬ ವಿವರ ಸಹ ಶಾಸನದಿಂದ ತಿಳಿದು ಬರುತ್ತದೆ. ನಾಗಾವಿ ಅಗ್ರಹಾರದ ನಾಲ್ಕುನೂರು ಮಹಾಜನಂಗಳು ಆ ಕಾಲದಲ್ಲಿ ಪ್ರತಿಷ್ಠಿತ ಸ್ಥಾನವನ್ನು ಪಡೆದಿದ್ದು ಯಾವುದೇ ಅರಸ, ಮಾಂಡಳೀಕ ಹಾಗೂ ದಂಡನಾಯಕರು ನಾಗಾವಿಯ ಯಾವುದೇ ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟರೂ ಇವರ ಸಮ್ಮುಖದಲ್ಲಿಯೇ ಬಿಡುತ್ತಿದ್ದರು ಎಂಬುದು ನಾಗಾವಿಯಲ್ಲಿ ದೊರೆತ ಉಳಿದ ನಾಲ್ಕು ಶಾಸನಗಳಿಂದ ತಿಳಿದು ಬರುತ್ತದೆ. ಉದಾ: ನಾಗಾವಿಯಲ್ಲಿ ಲಕ್ಷ್ಮಣೇಶ್ವರ ಮತ್ತು ಶ್ರೀ ಸಿದ್ಧೇಶ್ವರ ದೇವಾಲಯಗಳಿದ್ದು ಇವುಗಳ ದೇವರ ನೈವೇದ್ಯಕ್ಕೂ, ತ್ರಿಕಾಲದ ಪೂಜೆಗೂ ದಂಡನಾಯಕ ಕಾಳಿಮರಸರು ಹಾಗೂ ಹೈಹಯ ವಂಶದ ಮಹಾಮಂಡಲೇಶ್ವರ ಆನೆಮರಸರು ನಾಗಾವಿಯ ಮಹಾ ಗ್ರಹಾರದ ನಾಲ್ಕುನೂರು ವಿಪ್ರೋತ್ತಮರ ಸಮ್ಮುಖದಲ್ಲಿ ದತ್ತಿಯನ್ನು ಬಿಟ್ಟ ವಿವರ ಕ್ರಿ.ಶ. ೧೧೯೩ರ ನಾಗಾವಿ ಶಾಸನ ತಿಳಿಸುತ್ತದೆ.

ಇಲ್ಲಿಯವರೆಗೂ ನಾಗಾವಿಯನ್ನು ವ್ಯವಸ್ಥಿತವಾದ

* ಹೆಚ್ಚಿನ ವಿವರಗಳಿಗೆ ನೋಡಿ: ಎಂ.ಚಿದಾನಂದ ಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಪು. ೧೭೭-೧೯೦

ಘಟಿಕಾಲಯದ ಕೇಂದ್ರವಾಗಿದ್ದುದರ ಬಗೆಗೆ ತಿಳಿದಿದ್ದೆವು. ಆದರೆ ನಾಗಾವಿಗೆ ಇತ್ತೀಚಿಗೆ ಕೈಗೊಂಡ ಕ್ಷೇತ್ರಕಾರ್ಯದ ಅವಧಿಯಲ್ಲಿ ದೊರೆತ ಜೈನಧರ್ಮಕ್ಕೆ ಸಂಬಂಧಿಸಿದ ಕೆಲವೊಂದು ಅವಶೇಷಗಳಿಂದ ಅಗ್ರಹಾರ ಘಟಿಕಾಲಯವಾಗುವುದಕ್ಕಿಂತ ಮೊದಲು ಜೈನಧರ್ಮದ ತಾಣವೂ ಆಗಿತ್ತು ಎಂಬುದು ತಿಳಿದು ಬಂದಿದೆ. ನಾಗಾವಿಯ ಈಗಿನ ಮಧುಸೂದನ ದೇವಾಲಯದ ಹಿಂದಕ್ಕೆ ಅರ್ಧ ಕಿ.ಮೀ. ಅಂತರದಲ್ಲಿ ಪಾಳುಬಿದ್ದ ಕಟ್ಟಡಗಳ ಅವಶೇಷಗಳು ಹರಡಿದ್ದು ಆ ಅವಶೇಷಗಳನ್ನು ಕೆದಕಿ ಪರಿಶೀಲಿಸಿದಾಗ ಜೈನತೀರ್ಥಂಕರರ ವಿಗ್ರಹ ಹಾಗೂ ಇನ್ನಿತರ ಕುರುಹುಗಳು ಕಂಡುಬಂದವು. ಆ ಅವಶೇಷಗಳಿರುವ ಸ್ಥಳವನ್ನು ಉತ್ಖನನ ಮಾಡಿದರೆ ಜೈನಧರ್ಮಕ್ಕೆ ಸಂಬಂಧಿಸಿದ ಮತ್ತಷ್ಟು ಅವಶೇಷಗಳು ದೊರೆಯುವ ಅವಕಾಶ ಇದೆ. ಹೀಗಾಗಿ ನಾಗಾವಿಯು ಅಗ್ರಹಾರ, ಘಟಿಕಾಲಯ ಆಗುವುದಕ್ಕಿಂತ ಮೊದಲು ಜೈನಕೇಂದ್ರವೂ ಆಗಿದ್ದಿತು ಎಂಬಲ್ಲಿ ಸಂದೇಹವೇ ಇಲ್ಲ. ೯-೧೦ನೇ ಶತಮಾನದ ಅವಧಿಯಲ್ಲಿ ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಷ್ಟ್ರಕೂಟರು ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ ಜೈನಧರ್ಮವು ಪ್ರಮುಖ ಸ್ಥಾನಗಳಿಸಿಕೊಂಡಿದ್ದನ್ನು ಆ ಕಾಲದ ಶಾಸನಗಳು ಸಮರ್ಥಿಸಿವೆ. ಮಾನ್ಯಖೇಟದ ಪರಿಸರದಲ್ಲಿಯೇ ನಾಗಾವಿಯು ಇದ್ದುದರಿಂದ ಅಗ್ರಹಾರ-ಘಟಿಕಾಲಯವಾಗುವ ಮುನ್ನ ಜೈನ ಕೇಂದ್ರವೂ ಆಗಿದ್ದಿತು ಎಂದು ಹೇಳಬಹುದಾಗಿದೆ. ದೊರೆತಿರುವ ಹಾಗೂ ಉತ್ಖನನ ಮಾಡಿದರೆ ದೊರೆಯುವ ಅವಶೇಷಗಳನ್ನು ಪರಿಶೀಲಿಸಿದರೆ ಜೈನಧರ್ಮದ ಯಾವ ಶಾಖೆ ಇಲ್ಲಿ ಅಸ್ತಿತ್ವದಲ್ಲಿ ಇದ್ದಿತು ಎಂಬುದು ತಿಳಿದು ಬರುತ್ತದೆ. ಸುತ್ತಮುತ್ತಲ ಪರಿಸರದಲ್ಲಿ ಯಾಪನೀಯ ಪಂಥವು ಇದ್ದುದರ ಬಗೆಗೆ ಉಲ್ಲೇಖ ಇರುವುದರಿಂದ ಇಲ್ಲಿಯೂ ಯಾಪನೀಯ ಪಂಥ ಇದ್ದಿತೇ ಎಂಬ ಪ್ರಶ್ನೆ ನಮ್ಮಲ್ಲಿ ಉದ್ಭವಿಸುವುದು ಸಹಜ ಈ ಕೆಲಸ ಆದಷ್ಟು ಬೇಗ ನಡೆಯ ಬೇಕಾಗಿದೆ.

ಇಡೀ ಹಳೆಯ ನಾಗಾವಿಯನ್ನು ಒಂದು ದಿನವೆಲ್ಲಾ ಸುತ್ತಾಡಿ ಅಲ್ಲಿಯ ಈಗಿನ ಪಾಳುಬಿದ್ದ ಅವಶೇಷಗಳನ್ನು ಅವಲೋಕಿಸಿದಾಗ ಸುಮಾರು ೯೫೦ ವರ್ಷಗಳ ಹಿಂದೆ ಉನ್ನತ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ವ್ಯವಸ್ಥಿತ ಘಟಿಕಾಲಯವಾಗಿದ್ದು, ಸುತ್ತಮುತ್ತಲು ಖ್ಯಾತಿಯನ್ನು ಪಡೆದಿದ್ದಂತಹ ನಾಗಾವಿಯು ಅಲಕ್ಷಿತವಾಗಿದ್ದು ಅವಸಾನದ ಅಂಚಿನಲ್ಲಿದ್ದು ಗತಕಾಲದ ವೈಭವವನ್ನು ಸಾರುತ್ತ ನಿಂತಿದೆ. ಅಲ್ಲಿಯ ಅವಶೇಷಗಳನ್ನು ನೋಡಿದರೆ ಬಹುಶಃ ನಾಗಾವಿಯ ಘಟಿಕಾಲಯದ ಪರಿಸರವು ಮುಸ್ಲಿಮರ ಧಾಳಿಗೆ ಸಿಲುಕಿ ನಾಶವಾಗಿದ್ದಿರಬಹುದು. ಬಹಳಷ್ಟು ಘಟಿಕಾಲಯದ ಹಾಗೂ ದೇವಾಲಯದ ಕಟ್ಟಡಗಳನ್ನು ಹೊರಗಿನಿಂದ ನೋಡಿದರೆ ಎಲ್ಲಾ ಕಟ್ಟಗಳ ಮೇಲ್ಭಾಗವು ಗುಮ್ಮಟ ಹಾಗೂ ಮಿನಾರ್‌ಗಳನ್ನು ಒಳಗೊಂಡಂತೆ ತೋರಿಬರುವುದರಿಂದ ಇವೆಲ್ಲವೂ ಮುಸ್ಲಿಂ ಶೈಲಿಗೆ ಪರಿವರ್ತಿತವಾದುವೋ ಎಂಬಂತೆ ಕಂಡುಬರುತ್ತವೆ. ಒಳ ಹೊಕ್ಕು ನೋಡಿದರೆ ದೇವಾಲಯದ ವಾಸ್ತುಶೈಲಿಯಲ್ಲಿ ಹಿಂದು ದೇವಾಲಯವನ್ನೇ ಹೋಲುತ್ತವೆ.

ಕರ್ನಾಟಕದ ಸಂಸ್ಕೃತಿಯ ಪ್ರತೀಕವಾದ ನಾಗಾವಿಯು ಜಾಲಿಮುಳ್ಳುಗಿಡಗಳಿಂದ ಆವೃತವಾಗಿ ಪಾಳುಬಿದ್ದ ಅವಶೇಷ ಗಳಿಂದ ಯಾರಿಗೂ ಬೇಡವಾದ ಸ್ಥಳವಾಗಿದೆ. ಈಗಿನ ಅಲ್ಲಿಯ ಸ್ಥಿತಿಯನ್ನು ಮನಗಂಡರೆ ಹಿಂದೆ ನಾಗಾವಿಯು ವ್ಯವಸ್ಥಿತವಾದ ಘಟಿಕಾಲಯವಾಗಿತ್ತು ಎಂಬುದು ಕೇವಲ ಕಾಲ್ಪನಿಕವೋ ಎಂದು ಭೇಟಿಕೊಟ್ಟ ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವಲ್ಲ. ಸಂಬಂಧಿಸಿದ ಇಲಾಖೆ, ಸಂಸ್ಥೆ ಹಾಗು ಸ್ಥಳೀಯರೂ ನಾಗಾವಿಯ ಬಗೆಗೆ ಆಸಕ್ತಿ ತೋರಿಸಿದಂತೆ ಕಂಡು ಬರುತ್ತಿಲ್ಲ. ಆಂಧ್ರ ಪ್ರದೇಶ ಪುರಾತತ್ವ ಇಲಾಖೆಯವರ ಒಂದು ಫಲಕ ಮಾತ್ರ ಮಧುಸೂದನ ದೇವಾಲಯದ ಆವರಣದ ಮುಂಭಾಗದಲ್ಲಿ ಹಾಕಿರುವುದಿದೆ. ಈಗಂತೂ ಅಲ್ಲಿ ಬೆಳೆದಿರುವ ಜಾಲಿಮುಳ್ಳು ಗಿಡಗಳಿಂದ ಪ್ರದೇಶವನ್ನು ಪ್ರವೇಶಿಸುವುದು ಅತ್ಯಂತ ದುರ್ಗಮ ವಾಗಿದೆ. ಇನ್ನು ಮುಂದೆಯಾದರೂ ಯಾರೆಲ್ಲರೂ ಕನ್ನಡ ಸಂಸ್ಕೃತಿಯ ಪ್ರತೀಕವಾದ ನಾಗಾವಿಯನ್ನು ಯಥಾಸ್ಥಿತಿಗೆ ತರುವ, ರಕ್ಷಿಸುವ ಹೊಣೆ ಹೊರದಿದ್ದರೆ ವ್ಯವಸ್ಥಿತವಾದ ಘಟಿಕಾಲಯವು ನಾಗಾವಿಯಲ್ಲಿತ್ತು ಎಂಬುದು ಕೇವಲ ದಾಖಲೆಯಲ್ಲಿ ಮಾತ್ರ ಉಳಿಯುತ್ತದೆ.

*

ಡಾ॥ ಎಂ. ಜಿ. ಚಂದ್ರಕಾಂತ್ ಮತ್ತು ಎಂ.ಜಿ. ನಾಗರಾಜ್ *

ಕೊಡಗಿನ ನಾಗರಹೊಳೆಯ ಸಾಂಸ್ಕೃತಿಕ ಇತಿಹಾಸ ಮತ್ತು ಚಂಗಾಳ್ವರು

ಕೊಡಗಿನ ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಬೃಹತ್ ಶಿಲಾಯುಗದ ಅವಶೇಷಗಳು ಲಭ್ಯ. ಇವನ್ನು ಮೂಗ್ಲಿಂಗ್, ಕೋಲ್ ಹಾಗು ಕೆ.ಕೆ. ಸುಬ್ಬಯ್ಯ, ಅವರುಗಳು ಪತ್ತೆ ಮಾಡಿದ್ದಾರೆ. ಈಚೆಗೆ ರಾಜ್ಯ ಸರ್ಕಾರದ ಪುರಾತತ್ತ್ವ ಇಲಾಖೆಯೂ ಈ ಬಗ್ಗೆ ಹೊಸಶೋಧಗಳನ್ನು ನಡೆಸಿದೆ. ಈ ಅವಶೇಷಗಳಲ್ಲಿ ಪಾಂಡವ ಪಾರೆ (ಪಾಂಡವರ ಮನೆ) ಎಂದೂ ರೂಢಿಗೊಂಡ ಡಾಲ್‌ಮನ್‌ಗಳು ಇವೆ. ಈ ಕಲ್ಗೋರಿಗಳು, ದಕ್ಷಿಣ ಕೊಡಗಿನ ಹಾಗು ನಾಗರಹೊಳೆ ಅರಣ್ಯಕ್ಕೆ ಸಮೀಪವಾದ ತೂಚಮಕೇರಿಯಲ್ಲಿಯೂ ಕಾಣಬಂದಿವೆ. ಕ್ರಿ.ಪೂ. ೧೦೦೦ ವರ್ಷಗಳ ಹಿಂದಿನ ಕೊಡಗಿನ ಅವಶೇಷಗಳಿವು. ನಾಗರಹೊಳೆ ಅರಣ್ಯದಲ್ಲಿಯೂ ಇದೇ ರೀತಿಯ ರಚನೆಗಳಿವೆ. ಕೇರಳದ ವೈನಾಡು ಕಡೆಯಿಂದ ಬೃಹತ್ ಶಿಲಾಯುಗದ ಜನರು ಬಂದು ಈ ಭಾಗಗಳಲ್ಲಿ ಹಾಗು ಈ ಶಿಲಾಸಮಾಧಿ ರಚನೆಗಳಿಗೆ ಕಾರಣರಾದ ಸಾಧ್ಯತೆಯನ್ನೋ ಅಥವಾ ಆ ಕಾಲದಲ್ಲಿ ಇಲ್ಲಿಯೇ ಇದ್ದ ಸಾಧ್ಯತೆಯನ್ನೋ ಇವು ಸೂಚಿಸುವಂತಿವೆ. ಅವರ ಅನೇಕ ಆಚರಣೆಗಳು ಇಂದಿಗೂ ಈ ಅವಶೇಷಗಳ ನೆಲೆಯಲ್ಲಿ ಸಾಂಕೇತಿಕವಾಗಿ ನಡೆಯುತ್ತಿರುವುದು, ಪ್ರಭಾವಿಸಿರುವುದು ಗೋಚರವಾಗುತ್ತದೆ. ವೈನಾಡು ಒಂದು ಕಾಲಕ್ಕೆ ಕೊಡಗಿನ ಭಾಗವೇ ಆಗಿದ್ದ ಸಂಗತಿಯೂ ಇದಕ್ಕೆಲ್ಲ ಪೋಷಕವೇ ಆಗಿದೆ.

ನಾಗರಹೊಳೆಯ ಮೂಲನಿವಾಸಿ ಗಿರಿಜನರಾದ, ಜೇನುಕುರುಬರ, ಬೆಟ್ಟಕುರುಬರ ದೈವಾರಾಧನೆಯ ಆಚರಣೆಗಳಲ್ಲಿ ಪ್ರಾಗೈತಿಹಾಸಿಕ ಸಂಸ್ಕೃತಿಯ ಚಹರೆಗಳು ಕಂಡುಬರುತ್ತವೆ. ನಾಗರಹೊಳೆಯ ಅಮ್ಮಾಳೆಗುಡಿಯ ಭಿತ್ತಿಯ ಮೇಲೆ ವಾರ್ಷಿಕ ಹಬ್ಬದ ಸಮಯದಲ್ಲಿ ಪ್ರಾಗೈತಿಹಾಸಿಕ ಕಾಲದ ಚಿತ್ರಗಳ ರೂಪಗಳನ್ನೂ ಹೋಲುವಂತಹ ಚಿತ್ರಗಳನ್ನು ಇಂದಿಗೂ ಈ ಕುರುಬರು ಬಿಡಿಸುತ್ತ ಬಂದಿದ್ದಾರೆ. ಈ ಚಿತ್ರಗಳು ಇತಿಹಾಸಪೂರ್ವಕಾಲದ ಮನುಷ್ಯರ ದೇವಗಣಕ್ಕೆ ಸಂಬಂಧಿಸಿದಂತೆ ಬಿಡಿಸಿರುವ ಸ್ಪ್ಯಾನಿಷ್ ಬಂಡೆ ಚಿತ್ರಗಳ್[೧] ಮಾದರಿಯನ್ನು ಹೋಲುತ್ತವೆ. ಹೀಗೆ ಪ್ರಾಗೈತಿಹಾಸಿಕ ಚಹರೆಗಳನ್ನೂ ಆರೋಪಿಸಿ ಅಮ್ಮಾಳೆ ದೇವತೆಗೆ ಇಲ್ಲಿ ನಡೆದುಕೊಳ್ಳುತ್ತಾರೆ. ಹೀಗೆಯೆ ಅಮ್ಮಾಳೆ ಆರಾಧನೆಯ ಗುಡಿ ಹಾಗು ಅಮ್ಮಾಳೆಕೆರೆಗಳ ಅವಶೇಷಗಳನ್ನು ಉತ್ತರ ಕೊಡಗಿನ ನಂಜರಾಯಪಟ್ಟಣದ ಬಳಿಯ ದುಬಾರೆ ಕಾಡಿನ ಒಳಪ್ರದೇಶದಲ್ಲಿಯೂ ಕಾಣಬಹುದು. ಅಲ್ಲಿಗೂ ಜೇನುಕುರುಬರು ಸಂಬಂಧ ಗೊಂಡಿದ್ದಾರೆ. ಕೊಡಗಿನ ಮೂಲನಿವಾಸಿ ಜನಾಂಗವಾದ ದಲಿತ ಕೆಂಬಟ್ಟಿಗಳೂ ಅಮ್ಮಾಳೆಯ ಭಕ್ತರೆ. ತಿತಿಮತಿ ಹೆಬ್ಬಾಲೆಯ ಅಮ್ಮಾಳೆ - ಭದ್ರಕಾಳಿ ಹಬ್ಬಗಳಲ್ಲಿ ಈ ದೇವತೆಗೆ ಹೊಂದಿಕೊಂಡಂತೆ ನಡೆವ ಹಬ್ಬದಲ್ಲಿ ಅವರು ಪಾಲ್ಗೊಳ್ಳುತ್ತಾರೆ. ಗುತ್ಸವ್ ಆಪರ್ಟ್‌ನ[೨] ರೀತ್ಯಾ 'ಪರೆಯರ' (ದಲಿತ ಹರಿಜನ) ಮುಖ್ಯ ದೇವತೆಯು 'ಅಮ್ಮಾಳ್' (ಅಮ್ಮಾಳೆ) ಆಗಿದ್ದು 'ಪಾರ್ವತಿ' ದೇವತೆಯನ್ನು ಅದು ಪ್ರತಿನಿಧಿಸುತ್ತದೆ. ಅಂದರೆ ಪ್ರಾಗೈತಿಹಾಸಿಕ ಸಾಂಸ್ಕೃತಿಕ ವ್ಯೂಹವೊಂದು ಹೀಗೆ ಕೊಡಗಿನ ಉತ್ತರ ಹಾಗು ದಕ್ಷಿಣ ಭಾಗಗಳಲ್ಲಿ ವ್ಯಾಪಿಸಿ ಸಂಬಂಧಗೊಂಡಿತ್ತು ಎಂದಾಗುತ್ತದೆ. ಜೈವಿಕ ಆವರಣವಾಗಿ (Biosphere) ನಾಗರಹೊಳೆ ಅರಣ್ಯವು ನೀಲಗಿರಿ ಶ್ರೇಣಿ, ಮೂಡುಮಲೈ, ಬಂಡಿಪುರ ಅರಣ್ಯಗಳ ವ್ಯೂಹದ ಭಾಗವಾಗಿದೆ.

ಮೊದಲಾಳಿಕೆಯ ರಾಜವಂಶಗಳು

ಶಾಸನಗಳ ದೃಷ್ಟಿಯಿಂದ ನಾಗರಹೊಳೆ ಅರಣ್ಯ ಪ್ರದೇಶವು ಕಲ್ಪಾತಿ-ವೈನಾಡುವರೆಗೆ ಹರಡಿಕೊಂಡುದುದೇ ಆಗಿದೆ. ಕೊಡಗಿನ ಚಾಚು, ತೆರಕಣಾಂಬಿ (ಗುಂಡ್ಲುಪೇಟೆ) ಬಯಲ್ನಾಡಿನವರೆಗೂ ಇದ್ದಿದ್ದು, ಅಲ್ಲಿಯವರೆಗಿನ ಪ್ರದೇಶಕ್ಕೆ ಕುಡುಗುನಾಡು[೩] ಕೊಡಗು ವಿಷಯೆ ಎಂದಿರುವುದೂ ಶಾಸನೋಕ್ತವಾಗಿದೆ. ಕ್ರಿ.ಶ. ೭-ಆನೇ ಶತಮಾನದ ಶಾಸನಗಳಲ್ಲಿ ಈ ತೆರಕಣಾಂಬಿ, ವೈನಾಡು ಸಹಿತವಾಗಿ **'ಕೊಡಗೂರ್ವಿಷಯೆ ಕುಡುಗುನಾಡು'** ಎಂದೇ ಹೇಳಲಾಗಿದೆ.[೪] ವೈನಾಡಿನ ಚಾರಿತ್ರಿಕ ಹಿನ್ನಲೆ, ಹಾಗು ಅಲ್ಲಿನ ಕನ್ನಡ ಭಾಷಿಕ ಮೂಲನಿವಾಸಿಗಳ ಅಸ್ತಿತ್ವವೂ ಇದಕ್ಕೆ ಪೋಷಣೆ ನೀಡುವಂತಿದೆ.

---

* ೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - ೧೦

ವೈನಾಡಿನಲ್ಲಿಯೆ ಎಡಕಲ್ಲುಗುಡ್ಡವಿರುವುದು. ಅಲ್ಲಿನ ಬಂಡೆಯ ಮೇಲಿನ ಇತಿಹಾಸ ಪೂರ್ವಕಾಲದ ಚಿತ್ರಗಳಲ್ಲಿ ಸ್ವಸ್ತಿಕ ಚಿಹ್ನೆ, ಸೂರ್ಯ, ಮನುಷ್ಯಾಕೃತಿ, ತಾಂತ್ರಿಕ ಸಂಬಂಧದ ಸಂಕೇತಗಳು ಕಾಣಬರುತ್ತವೆ. ಬ್ರೂಸ್‌ಫೂಟ್‌ರ ರೀತ್ಯಾ ಇವು ಕೊರೆದವು, ಬಿಡಿಸಿದವುಗಳಲ್ಲ.[೬] ಗುಡ್ಡದ ಮೇಲಿನ ಕಂಬಗಳ ಬಳಿ 'ಮುದಿಯ. ಪಿಳ್ಳಿ' ದೇವತೆಗೆ (ಮಾದೇವಿಯ ಪಳ್ಳಿ = ಅಮ್ಮಾಳೆ ಗುಡಿ!) ಚೆಟ್ಟಿ ಜನಾಂಗದವರು ವಾರ್ಷಿಕ ಪೂಜೆಸಲ್ಲಿಸುತ್ತಾರೆ.[೭] ಈ ಚೆಟ್ಟಿಗಳು ವೈನಾಡು ತಿರುನೆಲ್ಲಿ ಪೆಮ್ಮಯ್ಯನಲ್ಲಿ ತುಲಾಮಾಸದ ಶ್ರಾವಣ ನಕ್ಷತ್ರದಲ್ಲಿ ಹುತ್ತರಿ ಕದಿರಿನ ಹಕ್ಕುದಾರರು; ಕನ್ನಡದ ಎಡನಾಡ ಶೆಟ್ಟರ ಮೂಲದವರಾಗಿ ನಂತರ 'ಚೆಟ್ಟಿ'ಗಳೆನಿಸಿಕೊಂಡಿರ ಬಹುದೆನಿಸುತ್ತದೆ. ಕಾರಣ ಕನ್ನಡದ ಎಡೆನಾಡ ಶೆಟ್ಟರು ತಿರುನೆಲ್ಲಿಯ ಮೂಲ ಜನಾಂಗ ಎನ್ನುವುದಿದೆ. ಪ್ರಸಿದ್ಧ ಸಂಶೋಧಕ ವಿ. ಬಾಲಕೃಷ್ಣ ಪಿಳ್ಳೆ ಅವರು ಎಡಕಲ್ ಗುಹಾಚಿತ್ರಗಳನ್ನು (ಕ್ರಿ.ಪೂ.) ಸಾವಿರ ವರ್ಷಗಳ ಹಿಂದಿನವು ಎಂದು ಗುರುತಿಸಿ ಕದಂಬ, ನಂತರ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳರ ಆಳ್ವಿಕೆಗೆ ವೈನಾಡು ಇದ್ದು ವಿಶಾಲ ಕರ್ನಾಟಕದ ಭಾಗವೆ ಆಗಿತ್ತು; ಇಲ್ಲಿನ ದೇಗುಲ ಹಾಗು ಅವುಗಳ ರಚನೆ ಅದನ್ನು ಪೋಷಿಸುತ್ತದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಇದರ ಜೊತೆಗೆ ವೈನಾಡಿನ ಮೂಲನಿವಾಸಿಗಳಲ್ಲಿ ಬಹು ಸಂಖ್ಯಾತರಾದ ಪಣಿಯರು (ಇಂದಿನ ಕೊಡಗಿನ ಯರವರ ಒಂದು ಪಂಗಡ) ಹಾಗು ಉರಾಳ ಕುರುಬರ ಭಾಷೆ ಕನ್ನಡಕ್ಕೆ ನಿಕಟ ಸಂಬಂಧಗೊಂಡದ್ದು. ನೂರಕ್ಕೆ ಎಪ್ಪತ್ತರಷ್ಟು ಅಚ್ಚಗನ್ನಡ ನುಡಿಗಳ ಬಳಕೆ ಹಾಗು ಉಚ್ಚಾರ ಇವರಲ್ಲಿದ್ದು ಕನ್ನಡದ ಒಂದು ಗ್ರಾಮ್ಯ ಸ್ವರೂಪ ಅದಾಗಿದೆ ಎಂದು ಭಾಷಾ ಸಂಶೋಧಕ ವಿ.ಅಯ್ಯಪ್ಪನ್ ಬರೆದಿದ್ದಾರೆ. ಕನ್ನಡ ಆಡುವ ಜೈನ, ವೈಷ್ಣವ, ಲಿಂಗಾಯಿತ ಹಾಗು ಕನ್ನಡ ಸೆಟ್ಟಿಗಳೂ ಇಲ್ಲಿದ್ದಾರೆ.[೯] ಡಾ||ಹುಲ್ಷ್ ಅವರು, ಈ ಗುಡ್ಡದ ಗವಿಯ ಸಂಸ್ಕೃತ ಭಾಷೆಯ ಭಿತ್ತಿಶಾಸನವನ್ನು ''ಶ್ರೀ ವಿಷ್ಣುವರ್ಮ ಕುಟುಮ್ಬಿಯ ಕುಲುವರ್ಧಸ್ಯ ಲಿರಿತ'' ಎಂದು ಓದಿದ್ದಾರೆ. ಕ್ರಿ.ಶ. ೩-೪ನೇ ಶತಮಾನದ ಈ ಶಾಸನ ಕೇರಳದ ಪ್ರಾಚೀನತಮ ಶಾಸನವೆನ್ನಲಾಗಿದೆ. ಈ ಶಾಸನದ ಮುಂದಿನ ಕಾಲದ ಇಲ್ಲಿನ ಇನ್ನೊಂದು ಶಾಸನದ ಪಾಠವು **'ಪಲಂಪುಲಿನಾನಂತಕಾರಿ'** ಎಂದಿದ್ದು ಹಲವು ಹುಲಿಗಳನ್ನು ಕೊಂದವ ಎಂಬ ಅರ್ಥವನ್ನು ನೀಡುತ್ತದೆ.[೧೦] ಇದಂತು ತಮಿಳು ಶಾಸನವಲ್ಲ.

ಈ ಗುಡ್ಡದ ಗವಿಯನ್ನು 'ಮುನಿಕಲ್‌ಗವಿ' ಎಂದೂ ಕರೆಯುವುದುಂಟು. ಮಲೆಯಾಳಂ ಪತ್ರಿಕೆಯೊಂದರಲ್ಲಿ ಸುಮಾರು ೧½ ವರ್ಷಗಳ ಹಿಂದೆ ಸಂಶೋಧನ ತಂಡವೊಂದು ಎಡಕಲ್ಲು ಗುಡ್ಡದಲ್ಲಿ (ಇರಾವತಿ ಮಹದೇವನ್‌ರ ರೀತ್ಯಾ ಕ್ರಿ.ಶ. ೩ನೇ ಶತಮಾನಕ್ಕೆ ಸೇರಿದ) ೪ ಬ್ರಾಹ್ಮಿಲಿಪಿಯ ಶಾಸನಗಳನ್ನು, ಕಂಡುಹಿಡಿದಿರುವ ಬಗ್ಗೆ ಸಬಾಸ್ಟಿನ್ ಜೋಸೆಫ್ ಅವರು 'ಎಡಕಲ್‌ಗುಹಾಲಿಪಿಗಳು - ಚೇರವಂಶಕ್ಕೆ ಸೇರಿದವು' ಎಂಬರ್ಥದಲ್ಲಿ ಲೇಖನವನ್ನು ಬರೆದಿದ್ದಾರೆ. ಸದ್ಯಕ್ಕೆ ಶಾಸನಗಳನ್ನು **'ಓಪ್ಪನ್ ಪವೀರ'; ಕಟುಮಿ ಪುತ್ತ್ ಚೇರ'** = ಹುಲಿಯಮಗ ಚೇರ; **ವೆಂಕೋಮಲ್ಯೆಕಚ್ಚಾವನ'** = ವೆಂಗೋಬೆಟ್ಟದಲ್ಲಿನ ಕಶ್ಯಪ; **ಕೋಪುತಿವಿರಕೊಟಾವಾ** = ಹೊಸವೀರ ಕೊಟಾವ(!) ಎಂದು ಓದಿ ತಂಡವು ತಾತ್ಕಾಲಿಕ ಪಾಠವನ್ನು ನೀಡಿದೆ. * ಇಲ್ಲಿ ಬ್ರಾಹ್ಮಿಲಿಪಿಯ ಅಕ್ಷರ ಬಳಕೆ, ಕೇರಳದ ಮನಲಿಕ್ಕರ ಮಠದಲ್ಲಿ 'ವಜ್ರಯಾನ'ದ ಮೂಲಗ್ರಂಥಗಳಲ್ಲಿ ಒಂದಾದ ಮಂಜುಶ್ರೀಮೂಲ ಕಲ್ಪ (ಕ್ರಿ.ಶ. ೨-೩ ನೇ ಶತಮಾನ)ದ ಹಸ್ತಪ್ರತಿಯೂ ದೊರೆತಿರುವುದು, ಇವೆಲ್ಲ ಬಹುಶಃ ಚೇರರ ಕಾಲದಲ್ಲಿ ಅಥವಾ ೩ನೇ ಶತಮಾನದಲ್ಲಿ ಎಡಕಲ್ಲು ಗುಡ್ಡದ ಪರಿಸರದಲ್ಲಿ 'ಬೌದ್ಧ ವಜ್ರಯಾನ - ಪಂಥಿಗಳ - ಬೌದ್ಧಸಿದ್ಧರ' ಅಸ್ತಿತ್ವವನ್ನು ನಿದರ್ಶಿಸುವಂತಿವೆ. ಅಲ್ಲದೆ ಇದೇ ಕೇರಳದ ಗಡಿಗೆ ಹೊಂದಿಕೊಂಡಿರುವ ಕೊಡಗಿನ ಮಂಚಳ್ಳಿ ಗ್ರಾಮದಲ್ಲಿ ಪಾದ ನಾಗಶಿಲ್ಪ (ನಾಗಹೆಡೆಯಾವೃತ ಜೋಡಿ ಪಾದಗಳ) - ಮಚಲಿಂದ ನಾಗಶಿಲ್ಪ ಫಲಕ ಲಭ್ಯವಿರುವಲ್ಲಿ, ವಜ್ರಯಾನದ ಪ್ರಭಾವದ ಬೌದ್ಧಸಿದ್ಧರ ಅಸ್ತಿತ್ವವನ್ನು ಸಮರ್ಥಿಸಬಹುದು. ಈ ಮಂಚಳ್ಳಿ ಕೂಡ ನಾಗರಹೊಳೆ ಅರಣ್ಯ ಪ್ರದೇಶದ ಸನಿಹದ ಗ್ರಾಮ. ಹೀಗಾಗಿ ಎಡಕಲ್ಲುಗುಡ್ಡ-ನಾಗರಹೊಳೆ ಅರಣ್ಯ ಪ್ರದೇಶ-ಮಂಚಳ್ಳಿ ಪರಿಸರವು ಬೌದ್ಧಸಿದ್ಧರ ಕೇಂದ್ರವಾಗಿ ಹಾನುಗಲ್ಲು ಕದಂಬರ ಬಹುಪೂರ್ವಕಾಲಕ್ಕೆ ಇದ್ದಿರಬಹುದೆನಿಸುತ್ತದೆ. ಈ ಶಾಸನಗಳೆಲ್ಲದರ ಭಾಷಾಶೈಲಿ ಪೂರ್ವ ತಮಿಳು - ಹಳಗನ್ನಡ ಶೈಲಿಯಂತೆ ತೋರಿ ಬರುತ್ತವೆ. ಆದರೆ ಬ್ರಾಹ್ಮಿಲಿಪಿಯ ಈ ಶಾಸನಗಳನ್ನು ೧. 'ಒಪನಾಪವಿರಅ', ೨. ಕಟುಮಷೆ[ಮೆ!] ಪುತ ವೇ[ವೀ]ರಕ', ೩. **'ವೆಡೋಕಿಷ಼ಇ ಕಚಂವವಡಿಹ್ಹಡಖ'**, ೪. **'(ರ?) ಕೋಪುತಿ ವೀಪ ಕೋಲೆನನಾ'**, ಎಂದೂ ಓದಲು ಲಿಪಿಯ ಸ್ವರೂಪವನ್ನು ಗಮನಿಸಿದರೆ ಸಾಧ್ಯವಿದೆ. ** ಅಂತಾಗಿ ಅನುಗುಣ ಅರ್ಥಗಳನ್ನು ಕೆದಕಬೇಕಾಗುತ್ತದೆ. ಇಲ್ಲಿನ ಕೆಲವು ಶಬ್ದಗಳು ಬಿರುದುಳ್ಳ ವೀರರನ್ನು ಸಂಕೇತಿಸುವಂತೆ ತೋರುತ್ತವೆ. 'ಚೇರ' ವಂಶಕ್ಕೆ ಸೇರಿದ ಲಿಪಿಗಳು ಎನ್ನಲೂ ಇನ್ನೂ ಸ್ಪಷ್ಟತೆ ಶಾಸನದಲ್ಲಿ ಅಗತ್ಯವಿದೆ.

ಇನ್ನು ಈ ಮೇಲಿನ ಮೊದಲ ಭಾಗದ ಶಾಸನಗಳಲ್ಲಿ ಹೆಕ್ಕಿದಾಗ ಉಕ್ತ ವಿಷ್ಣುವರ್ಮ, ಕದಂಬ ಮಯೂರವರ್ಮನ ಸಂಬಂಧದ ವಿಷ್ಣುವರ್ಮನಿದ್ದು ಕದಂಬವಂಶದ ಆಳ್ವಿಕೆಯ ಸೂಚನೆ ಯಾಗುವಂತಿದೆ. ಎರಡನೆ ಶಾಸನ ಹೊಯ್ಸಳ ಸಂಬಂಧವನ್ನೂ ಸೂಚಿಸುವಂತಿದ್ದು ಹಳಗನ್ನಡ ಶಬ್ದದ ಆವರಣವನ್ನು ತೋರುವುದೇ ವಿನಾ ತಮಿಳು ಶಾಸನಶಬ್ದವನ್ನಲ್ಲ. ಬಹುಶಃ ಮೊದಲ ಶಾಸನದ

---

* ಈ ಲೇಖನದ ಬಗ್ಗೆ ನನ್ನ ಗಮನ ಸೆಳೆದು ಅನುವಾದಿಸಿಕೊಟ್ಟು ಉಪಕರಿಸಿದ ಶ್ರೀ ಪಿ.ವಿ. ಕೃಷ್ಣಮೂರ್ತಿ ಅವರಿಗೆ ಲೇಖಕರು ಆಭಾರಿ.

ಪಾಠ ಶ್ರೀ ವಿಷ್ಣುವರ್ಮ ಕದಮ್ಬಯಾ ಕುಲ ವರ್ಧಸ್ಯ ಲಿಖಿತ ಎಂದಿರಬಹುದೇ! ಹಾಗಿದ್ದರೆ ಕದಂಬರ ಆಳ್ವಿಕೆಯ ಸ್ಪಷ್ಟ ಕುರುಹಾಗುತ್ತದೆ. ಇದು ಮುಂದೆ ಹಾನುಗಲ್ಲು ಕದಂಬರ ಆಳ್ವಿಕೆಗೂ ಹಿನ್ನಲೆ ಒದಗಿಸುವಂತೆ ಕಾಣುತ್ತದೆ. ಇದಲ್ಲದೆ ನಾಗರಹೊಳೆ ಪ್ರದೇಶದ 'ಅಮ್ಮಾಳೆ' ದೇಗುಲ ಚಿತ್ರಗಳ ಮೂಲ ಸಂಬಂಧವು, ಎಡಕಲ್ಲುಗುಡ್ಡದ ಮೂಲನಿವಾಸಿ ಚಿತ್ರಗಳೊಡನೆ ಇದ್ದು, ಅವರ ವಂಶದಲ್ಲಿ ಕೆಲವರು ನಾಗರಹೊಳೆ ಪ್ರದೇಶಕ್ಕೆ ಸರಿದು, ಇಂದಿಗೂ ಪರಂಪರೆಯನ್ನು ಮುಂದುವರಿಸಿರುವಂತಿದೆ. ಇಲ್ಲಿ ಚಾಲುಕ್ಯರಾಳ್ವಿಕೆಯನ್ನು ೧೧ನೇ ಶತಮಾನದಲ್ಲಿ ಹಾನುಗಲ್ಲು ಕದಂಬರ ಮೂಲಕ ಗುರುತಿಸಲು ಸಹಾಯಕವಾಗುವುದು, ನಾಗರಹೊಳೆಯ ಕುಂತೂರು ವೀರಗಲ್ ಶಾಸನದಿಂದ ಮಾತ್ರ. ರಾಷ್ಟ್ರಕೂಟರ ಆಳ್ವಿಕೆಯ ಕಾಲದ ಶಾಸನಗಳು ನಾಗರಹೊಳೆ ಪ್ರದೇಶದಲ್ಲಿ ಲಭ್ಯವಾಗಿಲ್ಲ ಅಥವಾ ರಾಷ್ಟ್ರಕೂಟರ ಕಾಲದ್ದೆನ್ನುವ ಹೇಳುಕೆ ಇದ್ದರೂ, ನಾಗರಹೊಳೆ ವೀರಗಲ್ ಶಾಸನದ ಲಿಪಿ ೧೧ನೇ ಶತಮಾನದ ಲಿಪಿ ಲಕ್ಷಣ ಹೊಂದಿರುವ ಕಾರಣ ಕಲ್ಯಾಣಿ ಚಾಲುಕ್ಯರ ಪ್ರಮುಖ ಮಾಂಡಲೇಶ್ವರರಾಗಿದ್ದ ಹಾನುಗಲ್ಲು ಕದಂಬರ ಕೊಡಗಿನಾಳ್ವಿಕೆಯ ಕಾಲಕ್ಕೇ ಅದನ್ನು ಗಮನಿಸಬೇಕಾಗುತ್ತದೆ.ಗಂಗರನ್ನು ಸೋಲಿಸಿ ಕೆಲಕಾಲ ಪುನ್ನಾಡನ್ನು ರಾಷ್ಟ್ರಕೂಟರು ವಶಮಾಡಿಕೊಂಡಿದ್ದರು. ಆದರೆ ಅದು ಅಲ್ಪಕಾಲವಾದ ಕಾರಣ 'ಪೂನಾಡು (ಪುನ್ನಾಟ) ಛಾಸಹಸ್ರ'ದ ವರೆಗೂ ಕೊಡಗಿನ ಗಡಿ ಇದ್ದರೂ, ನಾಗರಹೊಳೆಯಲ್ಲಿ ಅವರು ಶಾಸನ ಹಾಕಿಸುವಷ್ಟು ಆ ಕಾಲಕ್ಕೆ ಅದು ಅವರ ಗಮನಕ್ಕೆ ಸೆಳೆದಿತ್ತೆ! ಎಂಬುದಕ್ಕೆ ತಾರ್ಕಣೆ ಬೇಕಾಗುತ್ತದೆ.

ಕ್ರಿ. ಶ. ೧೦-೧೩ನೇ ಶತಮಾನಗಳ ಅವಧಿಯಲ್ಲಿ ಬನವಾಸಿ, ಗೋವಾ, ಹಾನುಗಲ್ಲು, ಮಂಜರಾಬಾದು ಬಯಲ್ನಾಡು ಪ್ರಾಂತಗಳಲ್ಲಿ ಆಳಿದ[೨೦] ಕದಂಬ ವಂಶದ ಪ್ರಸಿದ್ಧ ಮೂರು ಮುಖ್ಯ ಶಾಖೆಗಳು ಕೊಡಗಿಗೂ ಸಂಬಂಧಗೊಂಡವಾಗಿವೆ.

ಮಳಲಿ, ಮಗ್ಗೆ, ಕಿತ್ತೂರು ಶಾಸನಗಳಲ್ಲಿ 'ಶ್ರೀಮತ್‌ಚಾಗಿ ಬಯಲ್ನಾಡಂ,' 'ರವಿಯಮ್ಮರಸ ರಾಜಾಧಿರಾಜ ಬೀರಂ ಬಯ್ನನಾಡ ರಾಜ್ಯಂಗೆಯ್ಯುಯ್ದುವಂ,' 'ಬಯಲ್ನಾಡನಂ... ವೀರಮಹೇಶ್ವರ ಕದಂಬ ಕಂಠೀರವಂ....ಬನವಾಸಿ ವಿಷಯಾಧೀಶ್ವರಂ.... ಶ್ರೀಮನ್ಮಹಾಮಂಡಲೇಶ್ವರ ರಾಜಾಧಿರಾಜ ಬೀರಬಯಲ್ನಾಡ ನಾಡ ಈಕ ರವಿವರ್ಮ್ಮರಂ ಬಯಲ್ನಾಡ ಮುನ್ನೂಱುಮನೇಕ ರಾಜ್ಯಂಗೆಯ್ಯುತಿರೆ ಕೇರಳನಾಡ ಪುನ್ನಡಧಿಗರೆಯ ನಿಡುಳೆನಾಡ ರಾ [ಉತರಂ] ಕಾದವಮ್ಮನಾಡ ಪುನ್ನಡಧಿಗಾರಿಯು ಕಿಕ್ಕನಾಡಧಿಗಾರಿಯಾದ' ಎಂದೆಲ್ಲ ಕಾಣಬರುತ್ತವೆ.[೨೨] ರೈಸರು ಬಯಲ್ನಾಡ ಕದಂಬರಲ್ಲಿ ರವಿವರ್ಮ (ಕ್ರಿ.ಶ. ೯೯೮), ಕನ್ದವರ್ಮ (ಕ್ರಿ.ಶ. ೧೦೭೯), ಸಿವ (ಕ್ರಿ.ಶ. ೧೦೮೩), ಕಂಠೀರವ (ಕ್ರಿ.ಶ. ೧೦೯೦) ಮುಂತಾದವರನ್ನೂ ಗುರುತಿಸಿದ್ದಾರೆ. ಅಂದರೆ ವೈನಾಡು ಅಂದಿನ ಬಯಲ್ನಾಡೆನಿಸಿ, ಕೇರಳದ ಭಾಗಗಳೂ ಬಯಲ್ನಾಡ ಕದಂಬರಿಗೆ ಸೇರಿದ್ದ ಬಗ್ಗೆ ಇಲ್ಲಿ ಗಮನಕ್ಕೆ ಬರುತ್ತದೆ.

ಶಾಸನಗಳಲ್ಲಿ ಕುಡುಗುನಾಡೊಳಗಣ ಗೊಂಮಟಹಳ್ಳಿ, ಕೊಡಗೂರ್ನಾಟ್ಟು, ಕುಡಗನಾಡ ವೊಳಗಣ ತೆರಕಣಾಂಬಿ ಸೀಮೆ ಎಂದೂ ಇದೆ; ಹಾಗೆಯೇ 'ಸ್ವಸ್ತಿಶ್ರೀಮತ್ ಚಾಗಿ ಬಯಲ್ನಾಡಂ... ನಿರ್ಭ್ಭರಾಯ ಕಡಂಬಕಂ..... ಚಾಗಿ ಬಯಲ್ನಾಡನ ರಾಜ್ಯದನ್ನು' ಎಂಬ ಸಾಲುಗಳೂ ಹೆಗ್ಗಡದೇವನ ಕೋಟೆ ಶಾಸನಗಳಲ್ಲಿ ಕಾಣಬರುವಲ್ಲಿ[೧೬], ಬಯಲ್ನಾಡ ಕದಂಬರ ಕೊಡಗಿನ ಭಾಗಗಳ ಆಳ್ವಿಕೆಯ ವಿಸ್ತಾರವೂ ತಿಳಿಯುತ್ತದೆ. ಈ ಅರಸನ ಹೆಸರು ಹಾಸನ ಜಿಲ್ಲೆ ಮಂಜರಾಬಾದ್ ಶಾಸನದಲ್ಲಿಯೂ ಕಾಣಬರುತ್ತದೆ.

ಹಾನಗಲ್ಲು ಕದಂಬರಲ್ಲಿಯೂ ಬನವಾಸಿ ವಿಷಯಾಧೀಶ್ವರತ್ವದ (ಧಾರವಾಡದ ನೆರೆಯ ಮುಖ್ಯಪಟ್ಟಣ ಹಾನುಗಲ್ಲು ನೆಲೆಯಿಂದ ಹಾನುಗಲ್ಲುಕದಂಬರು ಬನವಾಸಿ ಪನ್ನಿರ್ಚ್ಛಾಸಿರ ಆಳುತ್ತಿದ್ದರು.[೧೪]) ಬಿರುದು ಇತ್ತು. ಕೊಡಗಿನ ಯಡೂರು ಶಾಸನದ ದುದ್ದರಸನು[೧೫] ಹಾನುಗಲ್ಲುಕದಂಬ ವಂಶಿಕ. ಇದರಿಂದ ಬಯಲ್ನಾಡ ಶಾಸನೋಕ್ತ ಚಾಗಿ, ಮಂಜರಾಬಾದ್ ಶಾಸನದ ಚಾಗಿ ಹಾಗೂ ಈ ದುದ್ದರಸನು ಹಾನುಗಲ್ ಕದಂಬವಂಶದ ಪ್ರತಿನಿಧಿಗಳಾಗಿ ಆಳುತ್ತಿದ್ದ ಬಗ್ಗೆ ಸೂಚನೆಯಾಗುತ್ತದೆ. ಕಲ್ಯಾಣಿ ಚಾಲುಕ್ಯರ ಪ್ರಮುಖ ಮಾಂಡಲೇಶ್ವರರ ಪಟ್ಟಿಯಲ್ಲಿ ಹಾನುಗಲ್ಲು ಕದಂಬ ರಾಜವಂಶದ ಹೆಸರಿರುವಲ್ಲಿ[೧೭] ಬಯಲ್ನಾಡು ಮಂಜರಾಬಾದ್ ಕದಂಬರೂ ಹಾನುಗಲ್ಲು ಶಾಖೆಯವರಾಗಿದ್ದು ತಮ್ಮ ಪ್ರಾದೇಶಿಕ ಹೆಸರನ್ನೇ ಪ್ರಚಲಿತಗೊಳಿಸಿಕೊಂಡಿದ್ದರೆನ್ನಬೇಕು. ನಾಗರಹೊಳೆಯ ಕ್ರಿ.ಶ. ೧೧ನೇ ಶತಮಾನದ ಕುಂತೂರು ವೀರಗಲ್ ಶಾಸನದ ಅಸ್ತಿತ್ವವೂ ಇದಕ್ಕೆ ಪೋಷಣೆ ನೀಡುವಂತಿದೆ. ಅಂದರೆ ತೆರಕಣಾಂಬಿಯಿಂದ ಹಿಡಿದು ಬಯಲ್ನಾಡು (ವೈನಾಡು), ನಾಗರಹೊಳೆ, ಯಡೂರು, ಮಂಜರಾಬಾದ್(ಸಕಲೇಶಪುರ)ವರೆಗೂ ಕೊಡಗಿನ ಪ್ರದೇಶವಿದ್ದು ಹಾನುಗಲ್ಲು ಕದಂಬ ವಂಶಿಕರು ಇಲ್ಲಿ ಆಳಿದ ಸಂಗತಿ ತಿಳಿಯುವಂತಾಗುತ್ತದೆ.

ಯಡೂರಿನ ನೆರೆಯಲ್ಲಿಯೆ ಹಾನುಗಲ್ಲು, ಹಾನುಗಲ್ಲು ಶೆಟ್ಟಿಹಳ್ಳಿ (ಹಯನುಗಲ್ಲು, ಗೋರಾಷ್ಟ್ರ!) ಎಂಬ ಹೆಸರಿನ ಪ್ರಮುಖ ಗ್ರಾಮಗಳು ಇಂದಿಗೂ ಇವೆ. ಅಂದರೆ ಧಾರವಾಡದ ನೆರೆಯ ಹಾನುಗಲ್ಲುಕದಂಬರು ಸಕಲೇಶಪುರ, ಯಡೂರು ಮೂಲಕ ನಾಗರಹೊಳೆಯ ಆಯಕಟ್ಟಿನ ನೆಲೆಯನ್ನು ಗುರುತಿಸಿಕೊಂಡು ಬಯಲ್ನಾಡು, ತೆರಕಣಾಂಬಿಯವರೆಗೆ ಆಳ್ವಿಕೆಯನ್ನು ಗಟ್ಟಿಗೊಳಿಸಿಕೊಂಡಿದ್ದರೆನ್ನಬೇಕು. ಅಂತಾಗಿ ಅವರ ಕಾಲಕ್ಕೆ ನಾಗರಹೊಳೆ ಅರಣ್ಯವು ದಕ್ಷಿಣ ಭಾಗದ ಆಯಕಟ್ಟಿನ ನೆಲೆಯಾಗಿ ಇತ್ತು.


ಕ್ರಿ.ಶ. ೧೧೮೧-೧೨೦೩ರ ಹಾನುಗಲ್ಲು ಕದಂಬರ ದೊರೆ ಕಾಮದೇವನು ಮಲೆನಾಡು, ತುಳುನಾಡು ಹಾಗೂ ಪಶ್ಚಿಮ ಘಟ್ಟಗಳನ್ನು ಗೆದ್ದ.[೧೮] ಬಹುಶಃ ಈ ಅವಧಿಯಲ್ಲಿ ಹೊಯ್ಸಳರ ಮಾಂಡಲೀಕರಾಗಿದ್ದ ಕೊಂಗಾಳ್ವರನ್ನು ಕ್ರಿ.ಶ. ೧೧೭೫ರ

(ನಂದಿಗುಂದ ಶಾಸನ [೨೫])ನಂತರದ ಅವರ ಕೊಡಗಿನಾಳ್ವಿಕೆಯನ್ನು ಮುಕ್ತಾಯಗೊಳಿಸಿದ ಸಂಕೇತವಿದಾಗಿರಬೇಕು. ಈ ನಂದಿಗುಂದ ಶಾಸನದಲ್ಲಿ ಉಕ್ತನಾದ ತೋಳೂರ ದುದ್ದರಸ, ಹಾನುಗಲ್ಲು ಕದಂಬ ದುದ್ದರಸ(ಕ್ರಿ.ಶ. ೧೦೬೫ ಯಡೂರು ಶಾಸನ)ನ ಮೊಮ್ಮಗನಾಗಿ ಕೊಂಗಾಳ್ವರ ಅಧೀನದಲ್ಲಿದ್ದಿರಬೇಕು. ಇದನ್ನು ಕಾಮದೇವ ತಿಳಿದೋ, ಏನೋ ತನ್ನ ವಂಶದ ಪ್ರತಿನಿಧಿಗಳಿಗೆ ಪಶ್ಚಿಮ ಘಟ್ಟಗಳ ಒಳ ಅಡಕದ ಕೊಡಗಿನ ತಮ್ಮ ಮೊದಲಿನ ನೆಲೆಯಲ್ಲಿ ಸ್ವತಂತ್ರವಾಗಿ ಈ ಭಾಗವನ್ನು ಗೆದ್ದು ಆಳಲು ಕೆಲಕಾಲವಾದರೂ ಅನೂಕೂಲಿಸಿರಬೇಕು. ಹಾಗಾಗಿ ಬಯಲ್ನಾಡು, ಯಡೂರಿನ ಹಾನುಗಲ್ಲು ಕದಂಬರಿಗೆ ನಾಗರಹೊಳೆಅರಣ್ಯ ಪ್ರದೇಶವು ನಡುವಣ ಆಯಕಟ್ಟಿನ ಸೇತುವಾಯಿತು. ಹಾನುಗಲ್ಲು ಕದಂಬರ ಯಾವ ವಂಶಿಕ ಪ್ರತಿನಿಧಿಗಳ ಹೆಸರೂ ಇಲ್ಲಿನ ಮುಂದಿನ ಶಾಸನಗಳಲ್ಲಿ ಕಾಣಬರದು. ಬಹುಶಃ ಇಲ್ಲಿ ಉಳಿದ ಆ ವಂಶೀಕರು ಸಾಮಾನ್ಯರಲ್ಲಿ ಬೆರೆತು ಹೋಗಿರಬೇಕು. ಮೂಲ - ದುದ್ದಂಡ ಕಂಬಂಡ, ಕೆದಂಬಾಡಿ, ಕಾದಂಡ, ಕಂಬೆಯಂಡ ಇತ್ಯಾದಿ ಗೌಡ ಹಾಗು ಕೊಡವ ಮನೆಪೆದಗಳು (ಮನೆತನದ ಹೆಸರು) ಈ ಹಾನುಗಲ್ಲು ವಂಶದ ಮೂಲದಿಂದ ಉಗಮಗೊಂಡು ಅಪಭ್ರಂಶಿತ ರೂಪದಲ್ಲಿರುವಂತೆ ಕಾಣುತ್ತದೆ. ಹಾನುಗಲ್ಲು, ಹಾನುಗಲ್ಲುಶೆಟ್ಟಳ್ಳಿ ಎಂಬ ಗ್ರಾಮಗಳಂತು ಇಲ್ಲಿವೆ.

ಈ ಹಾನುಗಲ್ಲು ಕದಂಬ ವಂಶದ ಆಳ್ವಿಕೆಯ ಸಮಯದಲ್ಲಿ ಮೊದಲ ಚಂಗಾಳ್ವರು ಕೊಡಗಿನ ಪೂರ್ವಭಾಗಗಳಲ್ಲಿ ಹಾಗು ದಕ್ಷಿಣದ ಮೇಲುಗಡಿಗೆ ಸೀಮಿತಗೊಂಡಿದ್ದಂತೆ ಕಾಣುತ್ತದೆ. ಅವರಂತೆ ಕೊಡಗಿನ ಭಾಗದಲ್ಲಿದ್ದ ಚೆಂಗಾಳ್ವರು ಶಿವನಿಷ್ಠೆಗೆ ತೆರೆದುಕೊಂಡು ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನನನ್ನು ಕುಲದೇವರನ್ನಾಗಿಸಿಕೊಂಡಿದ್ದರು. ಹಾನುಗಲ್ಲು ಕದಂಬರ ನಂತರ ಯಡೂರು ಸನಿಹದ ಅಬ್ಬಿಮಠದ ಜಯಮಲ್ಲಿಕಾರ್ಜುನನ ಗುಡಿಯ ಜೀರ್ಣೋದ್ಧಾರ ಹಾಗೂ ಅಲ್ಲಿನ ವೀರಶೈವ ಮಠದ ಜೀರ್ಣೋದ್ಧಾರವನ್ನು ಮಾಡಿದ ಸೂಚನೆ ಕ್ರಿ.ಶ. ೧೪೬೪ರ ಗುಡಿಯ ಅಪ್ರಕಟಿತ ಶಾಸನದಿಂದ ಸೂಚಿತವಾಗುತ್ತದೆ.

ನಾಗರಹೊಳೆಯ ವೀರಗಲ್ ಶಾಸನ : ನಾಗರಹೊಳೆ ಅರಣ್ಯ ಪ್ರದೇಶದ ಕುಂತೂರುವಿನಲ್ಲಿ ದೊರೆತ ಅಪ್ರಕಟಿತ ಶಾಸನೋಕ್ತ ವೀರಗಲ್ಲು ಎರಡು ಹಂತದ್ದು. ಶಾಸನವಿದ್ದ ವೀರಗಲ್‌ನ ಮೇಲು ಬಲಭಾಗವನ್ನು ಒಡೆದು ತೆಗೆಯಲಾಗಿದೆ. ಪುರಾತತ್ತ್ವ ಇಲಾಖೆಗೆ ಕಳುಹಿಸಲಾಯಿತು ಎನ್ನಲಾಗಿದೆ. ವೀರಗಲ್‌ನ ಕೆಳಗಣ ಮೊದಲಭಾಗದಲ್ಲಿ ಕಾಳಗದ ದೃಶ್ಯ ಮಾತ್ರ ಈಗ ಕಾಣಬರುತ್ತದೆ. ವೀರಗಲ್ ಬಲಬದಿಗೆ ಈ ದೃಶ್ಯದಲ್ಲಿ ಬಿಲ್ಲು ಹಾಗೂ ಖಡ್ಗಧಾರಿ ವೀರರ ಕ್ರಿಯಾತ್ಮಕ ಭಂಗಿ, ಹಾಗು ಖಡ್ಗಹಿಡಿದೇ ಹೋರಾಡಿ ಮಡಿದು ಬಿದ್ದ ವೀರನ ಆಘಾತ ಶಯ್ಯಾಭಂಗಿ ಗಂಭೀರವಾಗಿ ಕಾಣುತ್ತವೆ. ಹಾಗೆಯೇ ಎಡಬದಿಗೆ ಮುಂಬದಿ ಪಾದಗಳನ್ನು ಪುಟದೆಬ್ಬಿಸಿರುವ ಅಶ್ವಗಳ ಮೇಲಿನ ವೀರರ ಶಿಲ್ಪಗಳು ಕಲಾತ್ಮಕ ಗಂಭೀರ ಶೈಲಿಯಲ್ಲಿ ಮೂಡಿಬಂದಿವೆ. ಇಡೀ ಶಿಲ್ಪ ಕಾಳಗದ ರಭಸವನ್ನು ತೋರುವಂತಿದೆ. ನಾಗರಹೊಳೆ ಅರಣ್ಯ ಕಛೇರಿ ಬಳಿ ಈ ವೀರಗಲ್ ಇದೆ.

ವೀರಗಲ್‌ನ ಕಾಳಗದ ದೃಶ್ಯದ ತಳಬದಿ ಭಾಗದಲ್ಲಿ ಶಾಸನದ ಕನ್ನಡ ಅಕ್ಷರಗಳು ಕೆಲವೇ ಕಾಣಬರುತ್ತವೆ. ಶಾಸನದ ಈ ಭಾಗದ ಸಾಲುಗಳು, ಬಹಳಷ್ಟು ಅಳಿಸಿಹೋಗಿವೆ. ಇರುವ ಪದಗಳಿಂದ ಹೆಕ್ಕುವಲ್ಲಿ ವೀರ 'ನಾಕಿಯಣ' ಎಂಬ ಹೆಸರು ಕಾಣಬರುತ್ತದೆ. ಇಲ್ಲಿರುವ ಕ,ರ,ತ,ಸ,ಣ,ಚ,ಯ,ನ ಅಕ್ಷರಗಳು ೧೧ನೇ ಶತಮಾನದ (೧ನೇ ಸೋಮೇಶ್ವರನ ಕಲ್ಕೇರಿ ಶಾಸನ) ಲಿಪಿಗಳಿಗೆ ಹೊಂದಿಕೆಯಾಗುತ್ತವೆ. ವೀರಗಲ್‌ನ ಮೇಲ್ಭಾಗದ ಎಡತುದಿಯಲ್ಲಿ ಬಸವನ ಕಾಲೊಂದರ ಭಾಗ ಮಾತ್ರ ಕಾಣಬರುತ್ತದೆ. ಅಂತಾಗಿ ಕೈಲಾಸದ ದೃಶ್ಯ ಅಲ್ಲಿದ್ದಿರಬೇಕೆಂಬ ಊಹೆಗೆ ಇಂಬು



ದೊರೆಯುತ್ತದೆ. ಇದರಿಂದ ಈ ಶಾಸನ ಗಂಗರ ಕಾಲದ್ದೆನ್ನಬೇಕಾದರೆ ಅವರ ಮಾಂಡಲಿಕರಾಗಿದ್ದ ಚಂಗಾಳ್ವರು ಇಲ್ಲಿ ಆಳುತ್ತಿದ್ದರೆನ್ನ ಬೇಕಾಗುತ್ತದೆ. ಆಗ ಗಂಗರ ಅಧೀನದಲ್ಲಿದ್ದವರೆಗೂ ಅವರಲ್ಲಿ ಎಲ್ಲರೂ ಜೈನರಾಗಿ ಇಲ್ಲಿ ಉಳಿದಿದ್ದರು ಎನ್ನುವುದು ಕಷ್ಟವಾಗುತ್ತದೆ. ಈ ಶಾಸನ ಗಂಗರಿಗೆ ಸಂಬಂಧಿಸಿದ್ದೆಂದು, ಅವರಲ್ಲಿಯೂ ಶಿವಧರ್ಮಾನುಯಾಯಿಗಳಿದ್ದ ಕಾರಣ ಹೇಳಿದರೂ ಗಂಗರ ಶಾಸನ ಲಿಪಿಯನ್ನು ಈ ಶಾಸನ ಹೋಲದು. ಜೊತೆಗೆ ಗಂಗರದೇ ಎನ್ನುವ ಅನ್ಯ ಶಾಸನಗಳು ಪೆಗ್ಗೂರು, ಬಿಳಿಯೂರು, ಕೋತೂರು(ದ. ಕೊಡಗು) ಗಳಲ್ಲಿರುವಂತೆ ಈ ಪ್ರದೇಶದಲ್ಲಿ ದೊರಕಿಲ್ಲ. ರಾಷ್ಟ್ರಕೂಟರದೂ ದ.ಕೊಡಗಿನಲ್ಲಿಯಂತು ಲಭ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ೧೧ನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಮಾಂಡಲಿಕರಾದ ಹಾನುಗಲ್ಲು ಕದಂಬರ ಕಾಲದ ಶಾಸನವಿದಾಗಿದೆ ಎನ್ನಬೇಕು. ಈ ಶಾಸನ ಲಭ್ಯವಾದ ಕುಂತೂರು ಪ್ರದೇಶದಲ್ಲಿ ೨೦೦ ಅಡಿ ದೂರದಲ್ಲಿ ಶಿವದೇಗುಲವಿದ್ದುದರ ಕುರುಹಾಗಿ, ಲಿಂಗಪಾಣಿಪೀಠ ನಂದಿವಿಗ್ರಹ, ದೀಪದಮಲ್ಲಿ ಶಿಲ್ಪಗಳು ಭಿನ್ನಗೊಂಡು ಬಿದ್ದಿವೆ. ಶಾಸನವಿದ್ದ ಪ್ರದೇಶದಲ್ಲಿ,

ಕೋಟೆ ಕಡಂಗದ ಅವಶೇಷಗಳು ಕಾಣಬರುತ್ತವೆ ; ಮಣ್ಣಿನ ದಿಬ್ಬವಾಗಿ ಉಳಿದಿವೆ. ಆದರೆ ಮುಂದೆ ಚೋಳರನ್ನು ಹೊಯ್ಸಳರು ಸೋಲಿಸಿ, ಚಂಗಾಳ್ವರು ಹೊಯ್ಸಳರ ಮಾಂಡಲಿಕರಾದ ಮೇಲೆ ಈ ಪ್ರದೇಶ ಚಂಗಾಳ್ವರ ಆಳ್ವಿಕೆಗೆ ಬಂದಿತು.

ಶಾಸನದ ವೀರ ನಾಕಿಯಣ(ನಾಗಣ)ನ ಹೆಸರಿನಲ್ಲಿ ೧೧ನೇ ಶತಮಾನದಲ್ಲಿಯೋ ಅಥವಾ ೧೪ - ೧೫ನೇ ಶತಮಾನದಲ್ಲಿ ಆಳುತ್ತಿದ್ದ ಚಂಗಾಳ್ವ ನಾಗರಾಜನ ಹೆಸರಿನಲ್ಲಿಯೋ ಇಲ್ಲಿ ಹರಿವ ನದಿ ನಾಗರಹೊಳೆಗೆ ಹೆಸರು ಬಂತು. ಬಹುಶಃ **'ನಾಗನಹೊಳೆ'** ಎಂದು ಹೆಸರಾಗಿ ನಂತರ ಆಳಿದ ನಾಗರಾಜನ ಕಾರಣ **'ನಾಗರಹೊಳೆ'** ಎಂಬ ಹೆಸರು ರೂಢಿಗೆ ನಿಂತಿರಬೇಕು. **'ನಾಗರಾಜ ರಸ್ತೆ'** ಎಂಬ ಹಾದಿಯೂ ನಾಗರಾಜನ ವಿಗ್ರಹವಿರುವ ಅಮ್ಮಾಳೆಗುಡಿಗೆ ಸಾಗುವ ಹಾದಿಯಾಗಿದ್ದು ಸತಾರ್ಕಿಕವಾಗಿ ಹೆಸರು ಹೊಂದಿದೆ.

ಮೊದಲ (ಪೂರ್ವ) ಚಂಗಾಳ್ವರು

ಇವರು ಗಂಗರ ಕಾಲದಿಂದ ಕೊಡಗಿನ ಭಾಗಗಳನ್ನು ಆಳಿಕೊಂಡು ಬಂದವರೆ. ಕ್ರಿ.ಶ. ೯೭೨ ರ ತೊಳಲು ಶಾಸನದಲ್ಲಿ[೧೯] **'ಶ್ರೀಮತ್ ಚೆಂಗನಾಡ ಗೋವಂ ಹೊಶ್ಯಳ ಮಾರೆಯು ಸೊಸೆವೂರ ಆಳುತ್ತಿರೆ'** ಎಂದಿದೆ. ಇಲ್ಲಿನ 'ಚಂಗನಡಗೋವ' ಶಬ್ದವನ್ನು ಹೊಯ್ಸಳ ಮಾರೆಯನ ಸಂದರ್ಭದಿಂದ ಹೊಯ್ಸಳ ವಿನಯಾದಿತ್ಯನಿಗೆ ಸಂಬಂಧವಾಗಿ ಸೂಚಿಸಿ ಅದು ಚಂಗಾಳ್ವ ಹಾಗೂ ಹೊಯ್ಸಳರ ರಕ್ತ ಸಂಬಂಧದ್ದೆಂದು[೨೦] ಅಭಿಪ್ರಾಯ ಪಡಲಾಗಿದೆ. ಆದರೆ 'ಕಟಕದಗೋವಂ ರಕ್ಕಸಗಂಗಂ,'[೨೧] 'ವೀರವಿದ್ಯಾಧರಂ ಕಟಕದ ಗೋವನಚಳಿತ ಧೈರ್ಯಂ' ಎನ್ನುವಲ್ಲಿ 'ಕಟಕದಗೋವಂ' ಶಬ್ದಗಳು ಬಿರುದಿನ ರೂಪಗಳಂತೆ ಕಾಣುತ್ತವೆ.[೨೨] ಯಾದವ ವಂಶಿಕರೆಂದು ಹೇಳಿಕೊಳ್ಳುವ ಹೊಯ್ಸಳ ವಂಶೇತರ ಅರಸರೂ ಇದ್ದಾರೆ; 'ಚಂಗ' ಎಂದರೆ ಸಹಾಯಕ ಎಂಬ ಅರ್ಥವೂ ಕೊಡಗಿನಲ್ಲಿ ಪ್ರಚಲಿತವಿದೆ. ಈ ಕಾರಣ 'ಹೊಯ್ಸಳರ ಮಾಂಡಲಿಕರಾಗಿ ಚಂಗಾಳ್ವರು' ಎಂಬುದೇ 'ಚಂಗನಡಗೋವ' ಎಂಬ ಶಬ್ದಕ್ಕೆ ಅರ್ಥಸನಿಹವಾಗುವಂತಿದೆ; ಗೋವ ಎಂದರೆ ರಕ್ಷಕ ಎಂಬ ಅರ್ಥವೂ ಇರುವಲ್ಲಿ ಚಂಗನಾಡ ರಕ್ಷಕ ಎಂಬ ಬಿರುದು 'ಚಂಗನಡಗೋವ' ಶಬ್ದಕ್ಕೆ ಅರ್ಥೈಕ್ಯವಾಗುತ್ತದೆ. ಹೊಯ್ಸಳ ವಿನಯಾದಿತ್ಯನ ಕಾಲಕ್ಕೆ ಬಹಳ ಮುಂಚೆಯೆ ಚೋಳರ ಅಧೀನಕ್ಕೆ ಚಂಗಾಳ್ವರು ಬಂದಿದ್ದರಿಂದ ಹಾಗೆ ಹೊಯ್ಸಳರೊಡನೆ ವಂಶಿಕ ಸಂಬಂಧವನ್ನು ತಾರ್ಕಣೆಗೊಳಿಸುವುದು ಕಷ್ಟ.

ಹೊಯ್ಸಳ ವಂಶದ ಆರಂಭವನ್ನು ಕ್ರಿ.ಶ. ೯೫೦ ರಿಂದ ಗುರುತಿಸಿರುವಲ್ಲಿ[೨೩] ಕ್ರಿ,ಶ.೯೭೨ರ ಶಾಸನೋಕ್ತ ಹೊಯ್ಸಳ ಮಾರೆಯ ಹಾಗೂ ಅವನ ಮುನ್ನ ಹೊಯ್ಸಳರು ಚಂಗಾಳ್ವರ ಚಂಗಸಾಡನ್ನು ವಶಪಡಿಸಿಕೊಂಡಿರುವುದು ಸೂಚಿತವಾಗಿದೆ. ಹಾಗಾಗಿ ಬೇಲೂರು, ಹುಣಸೂರು, ಪಿರಿಯಾಪಟ್ಟಣ ಇತ್ಯಾದಿ ಕಡೆ ಚಂಗಾಳ್ವರ ಶಾಖೆಗಳಿದ್ದುದರ ಸಂಕೇತ ದೊರೆಯುತ್ತದೆ. ಅಲ್ಲದೆ ಕೊಡಗಿನ ದಕ್ಷಿಣ ಭಾಗದತ್ತವೂ ಹೊಯ್ಸಳರಿಂದಾಗಿ ಅವರು ಚದುರಿ ಗಂಗರ ಮಾಂಡಲಿಕರಾಗಿದ್ದಿರಬೇಕು. ಗಂಗರು ಕ್ರಿ.ಶ. ೧೦೦೧ರ ಪನಸೋಗೆ ಯುದ್ಧದಲ್ಲಿ ಚೋಳರಿಗೆ ಸೋತಮೇಲೆ ಚೋಳ ಮಾಂಡಲಿಕರಾಗಿ ಶಿವನಿಷ್ಠೆಗೆ ಚಂಗಾಳ್ವರು ಹೆಚ್ಚು ತೆರೆದುಕೊಂಡರು. ಚೋಳರು ಹೊಯ್ಸಳರಿಗೆ ಕ್ರಿ.ಶ ೧೧೧೬ ರ ವೇಳೆಗೆ ಸೋತಮೇಲೂ ಕೊಡಗು ಭಾಗದ ಚಂಗಾಳ್ವರು, ಹೊಯ್ಸಳರಿಗೆ ಕ್ರಿ.ಶ. ೧೧೪೫ ರವರೆಗೂ ಶರಣಾಗಿರಲಿಲ್ಲ. ಕ್ರಿ.ಶ. ೧೧೪೫ರ ವೇಳೆಗೆ ಹೊಯ್ಸಳ ಒಂದನೇ ನರಸಿಂಹನು ಶಿವಮೊಗ್ಗ ಜಿಲ್ಲೆಯ ಯುದ್ಧವೊಂದರಲ್ಲಿ ಚಂಗಾಳ್ವನನ್ನು ಕೊಂದು ಅವನ ರಾಜ್ಯ ವಶಮಾಡಿಕೊಂಡನೆನ್ನಲಾಗಿದೆ. ಆಗ ಚಂಗಾಳ್ವ ವಂಶಿಕರು ಕೊಡಗಿನ ತೀರ ದಕ್ಷಿಣ ಭಾಗಗಳಿಗೆ ಆಶ್ರಯಕ್ಕಾಗಿ ಸಾಗಿದರು.[೨೪] ಅಂದರೆ ೧೦ ನೇ ಶತಮಾನದಲ್ಲಿಯೆ ಜೈನಮೂಲದ ಚಂಗಾಳ್ವರು ಶಿವಮೊಗ್ಗ (!) ಹಾಸನ ಜಿಲ್ಲೆಯ ಕಡೆಯಿಂದ ಕೊಡಗಿಗೆ ಬಂದು ನೆಲಸಿದ್ದವರ ಬಗ್ಗೆ ತಿಳಿದಿದ್ದ ೧೨ನೇ ಶತಮಾನದ ಚಂಗಾಳ್ವರೂ, ಬಂದು ದಕ್ಷಿಣ ಕೊಡಗಿನಲ್ಲಿ ಸ್ಥಾಯಿಯಾದರೆನ್ನಬೇಕು. ಇನ್ನು ಕ್ರಿ.ಶ. ೧೧೭೪ರ ಪಾಲ್ಪರೆ ಯುದ್ಧದಲ್ಲಿ ಹೊಯ್ಸಳ ಬೆಟ್ಟರಸನು ಚಂಗಾಳ್ವರ ಪೆಮ್ಮವೀರಪ್ಪನನ್ನು ಸೋಲಿಸಿದ. ಆಗ ಬಾಡಗದ ನಂದಿದೇವ, ಕುರ್ಚಿಯ ಉದಯಾದಿತ್ಯದೇವರು ಚಂಗಾಳ್ವ ವಂಶಿಕರಾಗಿ ಪೆಮ್ಮವೀರಪ್ಪನ ನೆರವಿಗೆ ಬಂದವರೇ ಆಗಿದ್ದರು. ಇವರು ೧೦ ನೇ ಶತಮಾನದಲ್ಲಿ ಬಂದ ಚಂಗಾಳ್ವ ವಂಶಿಕರಿರಬೇಕು.

ನಾಗರಹೊಳೆ ಪ್ರದೇಶ, ಕುರ್ಚಿ-ಬಾಡಗ ಪ್ರದೇಶಗಳನ್ನು ಒಳಗೊಂಡುದುದೇ ಆಗಿತ್ತು, ಅಂತಾಗಿ ಚಂಗಾಳ್ವರ ಆಳ್ವಿಕೆಗೆ ಆ ಹೊತ್ತಿಗೆ ನಾಗರಹೊಳೆ ಪ್ರದೇಶ ಸೇರಿತ್ತು. ಕ್ರಿ.ಶ. ೧೨೦೩ರ ವರೆಗೆ ಅವರು ಹೊಯ್ಸಳರ ಅಧೀನರಾಗಿದ್ದರೂ ಆಗಾಗ್ಗೆ ಹೊಯ್ಸಳರ ಎದುರು ಬಂಡೇಳುವುದನ್ನು ಬಿಟ್ಟಿರಲಿಲ್ಲ. ನಾಗರಹೊಳೆ ಪ್ರದೇಶ ಅವರಿಗೆ ಸುರಕ್ಷಿತ ತಾಣವಾಗಿತ್ತು. ಕೊನೆಗೆ ಕ್ರಿ.ಶ. ೧೨೦೩ರ ನಂತರ ಕೊಡಗಿನ ಚಂಗಾಳ್ವರು ಪೂರ್ಣವಾಗಿ ಹೊಯ್ಸಳರ ಅಧೀನರಾದರು. ನಾಗರಹೊಳೆ ಕುಂತೂರು ಪ್ರದೇಶದಿಂದ ಕುರ್ಚಿ, ಬಾಡಗ ಸಹಿತ ಪಾಲ್ಪರೆಯನ್ನು ರಾಜಧಾನಿಯಾಗಿ ಮುಂದರಿಸಿ ಕೊಂಡು ನಂತರ ಹೊಯ್ಸಳ ಸೋಮೇಶ್ವರನ ಆಣತಿಯಂತೆ ಕೊಡಗು ಶ್ರೀರಂಗಪಟ್ಟಣವನ್ನು ಕ್ರಿ.ಶ.೧೨೪೫ರಿಂದ ರಾಜಧಾನಿ ಮಾಡಿಕೊಂಡು ರಾಮನಾಥಪುರ ಗಡಿಯಾಗಿ ಉತ್ತರ ಕೊಡಗಿನವರೆಗೂ ಅಬಾಧಿತವಾಗಿ ಕ್ರಿ.ಶ. ೧೩೦೦ ರವರೆಗೆ ಆಳಿದರು. ಅಂತಾಗಿ ಕೆಡಗಿನ ಚಂಗಂಡ, ಚಂಗೇಟಿರ ಇತ್ಯಾದಿ ಮನೆಪೆದಗಳೂ ಚಂಗಾಳ್ವರ ಆಳ್ವಿಕೆಯ ಪ್ರಭಾವವೇ ಆಗಿದೆ.

ಮಲ್ಲಿಕಾಫರನ ದಂಡಯಾತ್ರೆಯ ಕಾರಣ ಹೊಯ್ಸಳರ ಪ್ರಾಬಲ್ಯ ಕಡಿಮೆಯಾದಂತೆ ಮಾಂಡಲಿಕ ಚಂಗಾಳ್ವರ ಪ್ರಾಬಲ್ಯವೂ ಕುಂಠಿತವಾಯಿತು. ಹಾಗಾಗಿ ಕೊಡಗು ಶ್ರೀರಂಗಪಟ್ಟಣದ ಸುತ್ತಲ ಹೊಳೆಸಾಲಹಳ್ಳಿಗಳು, ಪಾಲ್ಪರೆ, ಕುರುಚಿ, ಬಾಡಗ, ಕುಂತೂರು

- ನಾಗರಹೊಳೆ, ಹಾಲೇರಿ, ಚೌಡ್ಲು, ಅಬ್ಬಿಮಠಗ್ರಾಮ, ದೊಡ್ಡಮಳತೆ, ಉಲುಗುಲಿ ಮುಂತಾದ ಕಡೆ ಚಂಗಾಳ್ವ ರಾಜಕುಟುಂಬಗಳು ದುರ್ಬಲ ತುಂಡುನಾಯಕರಂತೆ ಚದುರಿಕೊಂಡು ಇದ್ದುವು. ಈ ಕಾರಣ ಕ್ರಿ.ಶ. ೧೩೦೦-೧೩೭೫ರ ಸುಮಾರಿನವರೆಗೆ ಈ ವಂಶಿಕರು ಅಷ್ಟಾಗಿ ಪ್ರಸಿದ್ಧಿಗೊಳ್ಳಲಿಲ್ಲ. ತಾವುನಾಡು -ಅಂದರೆ ಕೊಡಗಿನ ವಾಯುವ್ಯದ ಕೆಳಭಾಗದ ಪ್ರದೇಶವನ್ನು ಕ್ರಿ.ಶ. ೧೩೭೧ರ ಶಾಸನೋಕ್ತ ಮಲೆಯಾಳದ ಮೇಲ್ಪುಂಡಿ ಕುಂಞ ಅರಸ[೨೫] ಆಳಲು ಇದೆಲ್ಲ ಅವಕಾಶ ಮಾಡಿರಬೇಕು.

ನಂತರದ ಚಂಗಾಳ್ವರ ಆಳ್ವಿಕೆ ಕ್ರಿ.ಶ. ೧೩೭೫-೧೪೦೦ ರ ಅವಧಿಯಲ್ಲಿ ಕೊಡಗಿನಲ್ಲಿ ಪುನರಾಭಿವೃದ್ಧಿಗೊಂಡಿತು. ಹಿರೇಮಳಲಿ ಶಾಸನದ ರೀತ್ಯಾ [೨೬] ಈ ವಂಶಾವಳಿಯಲ್ಲಿ ಕಾಣಬರುವ ಮೊದಲ ಹೆಸರು 'ಚಂಗಾಳ್ವ'. ಅವನ ನಂತರ ನಾಗ(ನಾಗರಾಜ), ರಂಗ (ರಂಗರಾಜ) ಮುಂತಾಗಿ ಕಾಣಬರುತ್ತಾರೆ. ಇವರೆಲ್ಲ ಕೊಡಗು ಶ್ರೀರಂಗಪಟ್ಟಣದಲ್ಲಿ ತಮ್ಮ ಪುನರುತ್ಥಾನ ಕಾಲದಲ್ಲಿ ಆಳಿದವರೆ.[೨೭] ಇದು ಈ ಪಟ್ಟಣದ ನೆರೆಗೆ ನಂಜರಾಯಪಟ್ಟಣವನ್ನು ರಾಜಧಾನಿಯಾಗಿ ಕ್ರಿ.ಶ. ೧೫೦೨ ರ ವೇಳೆಗೆ, ಇವರಿಂದ ೫ನೇ ತಲಮಾರಿನ ನಂಜರಾಜ ಕಟ್ಟಿದ ಚಾರಿತ್ರಿಕ ಸಂಗತಿಯಿಂದಲೂ ಸೂಚಿತವಾಗುತ್ತದೆ. ಮುಖ್ಯವಾಗಿ ನಾಗರಾಜ ಕೊಡಗು ಶ್ರೀರಂಗಪಟ್ಟಣವನ್ನು ಉತ್ತರಕೊಡಗಿನ ರಾಜಧಾನಿ ಮಾಡಿಕೊಂಡು, ದಕ್ಷಿಣಕೊಡಗಿನ ರಾಜಧಾನಿಯಾಗಿ ನಾಗರಹೊಳೆ-ಕುಂತೂರನ್ನು ಮಾಡಿಕೊಂಡು ಕ್ರಿ.ಶ.೧೪೦೦-೨೫ರಲ್ಲಿ ಆಳುತ್ತಿದ್ದುದು ಚಾರಿತ್ರಿಕ ಘಟನೆಗಳಿಂದ ಹಾಗೂ ಸ್ಥಳೀಯ ಪರಂಪರೆಯಿಂದ ಸೂಚಿತವಾಗುತ್ತದೆ. ಅಲ್ಲದೆ ಚಂಗಾಳ್ವ ಸಚಿವ ವಂಶವೂ ಇದ್ದು ಸಾಹಿತ್ಯ ಕೃತಿಗಳನ್ನು ಈ ಅವಧಿ ಮುನ್ನವೂ ರಚಿಸಿರುವುದು ಸ್ಪಷ್ಟವಿದೆ. ಜೊತೆಗೆ ಬೆಟ್ಟದಕೋಟೆಯ ನವದಣ್ಣಾಯಕರು ಹಾಗು ನಾಗರಾಜನ ನಡುವಣ ಹೋರಾಟದ ಸಂದರ್ಭವು ಈ ಬಗ್ಗೆ ಬೆಳಕನ್ನು ಚಲ್ಲುತ್ತದೆ.

ನವದಂಣಾಯಕರ ಸಂಬಂಧಗಳು

ಗುಂಡ್ಲುಪೇಟೆ ೧೧ನೆಯ ಶಾಸನದ ರೀತ್ಯಾ ಕುಡುಗು ನಾಡೆನಿಸಿದ್ದ ತೆರಕಣಾಂಬಿ ಪ್ರದೇಶವನ್ನು ನವದಂಣಾಯಕರು ೧೪ನೆಯ ಶತಮಾನದಲ್ಲಿ ಆಳುತ್ತಿದ್ದರು. ರೈಸರ ರೀತ್ಯಾ ಹೊಯ್ಸಳರ ಪತನದ ನಂತರ ಅಧಿಕಾರದ ಮಹಾತ್ವಾಕಾಂಕ್ಷಿಗಳಾಗಿದ್ದವರಲ್ಲಿ ಮೈಸೂರಿನ ದಕ್ಷಿಣದಲ್ಲಿದ್ದ ಬೆಟ್ಟದಕೋಟೆಯ ನವದಂಣಾಯಕರು ಇದ್ದರು; ಇವರು ಗೋಪಾಲಸ್ವಾಮಿ ಬೆಟ್ಟವನ್ನು ಆಕ್ರಮಿಸಿಕೊಂಡು ಇದ್ದರು. ಇವರು ಬಹುಶಃ ಮೂರನೇ ಹೊಯ್ಸಳ ಬಲ್ಲಾಳನ ಮಹಾಮಂತ್ರಿ ಪೆರುಮಾಳ ದಂಡನಾಯಕನ (ಕ್ರಿ.ಶ. ೧೨೮೩) ವಂಶಿಕರಿರಬಹುದೆಂಬುದು ರೈಸರ ಮಾತು.[೨೮] ಪೆರುಮಾಳ ದಂಡನಾಯಕನ ಮಗ ಮಾಧವ ದಂಡನಾಯಕನು ತೆರಕಣಾಂಬಿ ಪ್ರದೇಶದ ಪದಿನಾಲ್ಕುನಾಡಿನ (ಹದಿನಾಲ್ಕುನಾಡು - ಇಂದಿನ ಕೊಡಗಿನ ಪಾಡಿನಾಲ್ಕು ನಾಡಲ್ಲ) ಗೌರ್ನರ್ ಆಗಿ ಕ್ರಿ.ಶ. ೧೩೧೮ ರಲ್ಲಿದ್ದ. ತೆರಕಣಾಂಬಿಯಲ್ಲಿ ವಾಸ್ತವ್ಯವಿದ್ದ. ಅವನ ಮಗ ಕೇತಯ್ಯ ದಂಡನಾಯಕ ಕ್ರಿ.ಶ. ೧೩೨೧ ರಲ್ಲಿ, ಸಿಂಗೆಯ ದಂಡನಾಯಕ ಕ್ರಿ.ಶ. ೧೩೩೮ ರಲ್ಲಿ ಅಲ್ಲಿ ಆಳಿದರು. ಅವರು ತಮ್ಮನ್ನು 'ಸ್ವಲಿ(ಸ್ತಿ!) ಪುರಾಧೀಶ್ವರರು' ಎಂದು ಕರೆದುಕೊಂಡಿದ್ದಾರೆ. ಈ ನವದಂಣಾಯಕರು ಒಂಬತ್ತು ಜನ. ಪರಂಪರೆಯು ನಾಲ್ಕು ಸೋದರರೆಂದು ಹೇಳುತ್ತದೆ. ಅವರಲ್ಲಿ ಮುಖ್ಯನಾದವ ಭೀಮ ದಂಣಾಯಕ. ಅವನ ನೇತೃತ್ವದಲ್ಲಿ ಒಂದು ಗುಂಪು, ಉಳಿದ ಐದು ಜನರ ಒಂದು ಗುಂಪು ಸೇರಿ ಪರಸ್ಪರ ಕಚ್ಚಾಡುತ್ತಿದ್ದರು. ಈ ಐವರು ನಗರಪುರವೆನಿಸಿದ ನಂಜನಗೂಡನ್ನು ವಶಪಡಿಸಿಕೊಂಡು, ರತ್ನಪುರವೆನಿಸಿದ್ದ 'ಹೆಡತಲೆ' ಪಟ್ಟಣದಿಂದ ಪ್ರತ್ಯೇಕ ಆಳ್ವಿಕೆಯನ್ನು ನಡೆಸುತ್ತಿದ್ದರು. ಕೆಲಕಾಲಾನಂತರ ಹಿಂತಿರುಗಿ ಬಂದು ಬೆಟ್ಟದ ಕೋಟೆಯನ್ನು ಮೂರುವರ್ಷಗಳ ಕಾಲ ನಿರಂತರ ಮುತ್ತಿಗೆ ಮಾಡಿ ವಶಪಡಿಸಿಕೊಂಡರು. ಕೋಟೆಯನ್ನು ರಕ್ಷಿಸಿದ್ದ ಮಂಚದಂಣಾಯಕನು ಕುದುರೆ ಏರಿ ತಪ್ಪಿಸಿಕೊಂಡು ಹೋಗುವಲ್ಲಿ ವೈರಿಗಳ ಕೈಗೆ ಸಿಕ್ಕಿ ಹತನಾದ. ವಿಜಯಿಗಳಾದ ದಂಣಾಯಕರ ತಂಡವು ತಮ್ಮನ್ನು ವಂಶದ 'ಕಿರಿಯ ದಂಣಾಯಕ' ರೆಂದು ಕರೆದುಕೊಂಡರು. ಬೆಟ್ಟದಕೋಟೆಯಲ್ಲಿ ತಮ್ಮ ಸರ್ಕಾರವನ್ನು (ಆಳ್ವಿಕೆಯನ್ನು)ಸ್ಥಾಪಿಸಿ, ದಂಡಯಾತ್ರೆಗೆ ಹೊರಟರು. ಈ ದಂಡಯಾತ್ರೆಯಲ್ಲಿ ಕೊಡಗಿನ ದಕ್ಷಿಣಗಡಿಯಾದ ದೇವಾಸಿ ಬೆಟ್ಟದಿಂದ ಉತ್ತರದ ಗೋವಾದವರೆಗೆ, ಸತ್ಯಮಂಗಲದಿಂದ ಪಶ್ಚಿಮದಲ್ಲಿ ಕೊಡಗಿನ ವಾಯುವ್ಯದ ಇನ್ನೊಂದು ತುದಿ ಬಿಸಲೆಘಟ್ಟದವರೆಗೆ ಆಕ್ರಮಿಸಿದರು.[೨೯] ಸತ್ಯಮಂಗಲ ತಾಲೂಕಿನ ಡಣ್ಣಾಯಕನ ಕೋಟೆಯ ಪಾಳೇಗಾರರು ಹೊಯ್ಸಳರ ಪ್ರಧಾನಿಗಳಾಗಿದ್ದು, ವಿಜಯನಗರದ ಅರಸರ ಅಧೀನರಾಗಿ ಕ್ರಿ.ಶ. ೧೩೩೬ ರ ನಂತರವೂ ಇದ್ದರೆಂಬ ಸಂಗತಿಯೂ ಇದೆ.[೩೦] ಇವರು ತಿರುಮಲೆದೇವರ ಭಕ್ತರಾಗಿದ್ದರು.

ವಚನಕಾವ್ಯದಲ್ಲಿ, ಶ್ರೀರಂಗಪಟ್ಟಣ ಸಹಿತವಾಗಿ ಆಳಿಕೆ ರಾಜ್ಯವನ್ನು[೩೧]

''ಉಮ್ಮತ್ತೂರುವ ಕಾಡು ನರಸಿಪುರ ಮುಂತಾದ ಕರ್ನಾಟಕ ಕೋಟಿ ರಾಜ್ಯವನ್ನು ನವಧಣಾಯಕರು. ತಿಮ್ಮಣಧಣಾಯಕ, ಮಾರನ ದಣಾಯಕ, ಸೋಮಂ ಧಣಾಯಕ, ರಂಗರಾಜ ಧಣಾಯಕ. ತಿಮ್ಮಪ್ಪ ಧಣಾಯಕ, ಪಾರಿಯಂಬ ಧಣಾಯಕ, ಸೂತ್ರಾಮಣಿ ಧಣಾಯಕ. ತಿರುಮಲ ಧಣಾಯಕ, ಗೋವಿಂದ ಧಣಾಯಕ, ಶ್ರೀರಂಗರಾಜೈಯ್ಯನವರು, ರಾಮರಾಜೈಯ್ಯನವರು, ಉಮ್ಮತ್ತೂರು ರಾಯರಗಳು ಮುಂತಾದವರ ಆಳಿದ್ದು ರಾಜಿಕದಿಂದ ಪಾಳಾದದ್ದು ಸಹಾ ಆದ ವರ್ಷ ೬೧೮. ಉಭಯಂ ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ೧೪೩೪ ವರ್ಷದಲ್ಲು...'

-ಎಂದೆಲ್ಲ ಹೇಳಿ ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಅವನ ಆಳ್ವಿಕೆಗೆ ಅಂತಿಮವಾಗಿ ಒಳಪಟ್ಟ ಸಂಗತಿಯನ್ನು ತಿಳಿಸಿದೆ. ಕ್ರಿ.ಶ. ೧೫೧೨ ರ ಸುಮಾರಿನಲ್ಲಿ ಕಿರಿಯ ನವದಂಣಾಯಕರ ಪ್ರಾಬಲ್ಯ ಮುಕ್ತಾಯವಾದ ಬಗ್ಗೆ ಇಲ್ಲಿ ತಿಳಿಯುತ್ತದೆ.

ನಾಗರಹೊಳೆಯ ಮೂಲನಿವಾಸಿಗಳಾದ ಜೇನುಕುರುಬರು ಹೇಳುವ ಕತೆ ಹೀಗಿದೆ: ಕುಂತೂರನ್ನು ಆಳುತ್ತಿದ್ದ (ಚಂಗಾಳ್ವ) ದೊರೆ ನಾಗರಾಜ ಬಹಳ ಜನಪ್ರಿಯ ದೊರೆ. ದಕ್ಷಿಣದ ಕಡೆಯಿಂದ (ತೆರಕಣಾಂಬಿ) ಯಾರೋ ನಾಯಕರು ದಂಡೆತ್ತಿ ಬಂದು ನಾಗರಾಜ ದೊರೆಯ ಮೇಲೆ ಭಾರಿ ಯುದ್ಧ ಮಾಡಿದರು. ಬಹಳ ಹೋರಾಡಿದ ನಾಗರಾಜ ಕೊನೆಗೆ ವೀರಮರಣ ಪಡೆದ. ಅವನ ನೆನಪಿಗಾಗಿ ಇಲ್ಲಿ ಹರಿವ ಹೊಳೆಗೆ 'ನಾಗನಹೊಳೆ - ನಾಗರಹೊಳೆ' ಎಂದು ಹೆಸರಾಯಿತು. ಆ ರಾಜನ ಹೆಸರಿನಲ್ಲಿ ಪೂಜೆ ನಡೆದು ಬಂತು ಎಂದೆಲ್ಲ ಹೇಳುತ್ತಾರೆ.

ಈ ಕತೆಗೂ ನವದಂಣಾಯಕರ, ದಂಡೆಯಾತ್ರೆಗೂ ನಂಟು ಕಾಣುತ್ತದೆ. ಕ್ರಿ.ಶ. ೧೪೦೦ ರ ವೇಳೆಗೆ ನವದಂಣಾಯಕರ ವಂಶೀಕ ನಾಯಕರು ಗೋಪಾಲಸ್ವಾಮಿ ಬೆಟ್ಟವನ್ನು ಆಳುತ್ತಿದ್ದುದು, ೧೫೧೨ರ ವೇಳೆಗೆ ಆ ವಂಶೀಕರ ಆಳ್ವಿಕೆ ಮುಗಿದದ್ದೂ ಮೇಲಿನ ನಿರೂಪಣೆಗಳಿಂದ ತಿಳಿಯುತ್ತದೆ. ಯುದ್ಧವು ಕ್ರಿ.ಶ. ೧೪೦೦-೧೪೨೫ರ ನಡುವೆ ಆಗಿರುವ ಸಂದರ್ಭ; ಆ ಹೊತ್ತಿಗೆ ಕುಂತೂರಿನಲ್ಲಿ ನಾಗರಾಜ ಆಳುತ್ತಿದ್ದ. ಇದು ನಂತರದಚಂಗಾಳ್ವ ವಂಶದ ತಲೆಮಾರು,ಇಲ್ಲಿ ಆಳಿದ ಸೂಚನೆಯಾಗುವುದೂ ಗಮನಕ್ಕೆ ಬರುತ್ತದೆ.

ದಂಣಾಯಕರು ತಮ್ಮ ದಂಡಯಾತ್ರೆಯಲ್ಲಿ ಮೊದಲು ನಾಗರಹೊಳೆ-ಕುಂತೂರು ರಾಜಧಾನಿಯನ್ನು ವಶಮಾಡಿಕೊಂಡರು.ಬಹುಶಃ ಆ ಯುದ್ಧದಲ್ಲಿ ನಾಗರಾಜ ಹೋರಾಡಿ ವೀರ ಮರಣ ಪಡೆದಿರಬೇಕು. ನಂತರ ಚಂಗಾಳ್ವರ ನೆಲೆಗಳಾಗಿದ್ದ ಕುರ್ಚಿ, ಬಾಡಗಗಳ ಮೂಲಕ ದೇವಾಸಿಬೆಟ್ಟದ ಬಳಿಗೆ ಬಂದು ಪಶ್ಚಿಮ ಘಟ್ಟಗಳ ಮೂಲಕ ಗೋವಾ ತಲುಪಿರುವುದು ಕಾಣುತ್ತದೆ; ಇನ್ನೊಂದು ತಂಡ ನಾಗರಹೊಳೆಯಿಂದ ಪ್ರಾಚೀನ ಚಂಗಾಳ್ವರ ರಾಜಧಾನಿ ಪಾಲ್ಪರೆ, ಕೊಡಗು ಶ್ರೀರಂಗಪಟ್ಟಣ, ಸೋಮವಾರ ಪೇಟೆ, ಶನಿವಾರ ಸಂತೆ, ಗೊದ್ದು - ಬಿಸಿಲೆಘಟ್ಟದವರೆಗೆ ಸಾಗಿದ್ದು ಗಮನಕ್ಕೆ ಬರುತ್ತದೆ. ಭೂಪಟಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಹೀಗೆ ದಂಡಯಾತ್ರೆಯಲ್ಲಿ ವೈಷ್ಣವ ಪರಂಪರೆಗೆ ತೆರೆದುಕೊಂಡಿದ್ದ ದಂಣಾಯಕರು, ವೀರಶೈವ ಚಂಗಾಳ್ವರನ್ನು ಆಕ್ರಮಿಸುವಲ್ಲಿ ಶಿವಪಾರಮ್ಯದ ಮೇಲೆ ವಿಜಯ ಸಾಧಿಸುವ ಹುನ್ನಾರ ಹೊಂದಿದ್ದುದು ಸೂಚನೆಯಾಗುತ್ತದೆ. ಅವರ 'ಸ್ವಶಿಪುರಾಧೀಶ್ವರರು' ಎಂಬ ಆರೋಪ 'ಶಶಿಪುರಾಧೀಶ್ವರರು' ಎಂಬುದಕ್ಕೆ ಅನ್ವಯ ಎಂದರೆ ಚಂಗಾಳ್ವರ ರಾಜಧಾನಿಯಾಗಿದ್ದ 'ಪಾಲ್ಪರೆ' ಯನ್ನು ಗೆದ್ದ ಕುರುಹೂ ಆಗುತ್ತದೆ.

ಮಂಗರಸನು ಕ್ರಿ.ಶ. ೧೩೯೮ರ ಕಾಲದವ. ತನ್ನ ನಿಘಂಟುವಿನಲ್ಲಿ 'ಶಶಿಪುರಾಧಿಪತಿ ಸೋಮೇಶ್ವರ' ನನ್ನು ಸ್ತುತಿಸಿರುವುದು,[೩೧] ಪಾಲ್ಪರೆ (=ಪಾಲುಪುರ =ಶಶಿಪುರ -ಪಾಲ್ಪುರದ ಮಾರ್ಪಾಟು ರೂಪ ಪಾಲ್ಪರೆ!) ಯಲ್ಲಿನ ಸೋಮೇಶ್ವರ ಗುಡಿಯ ಅಧಿದೇವತೆಯನ್ನು ಕುರಿತಾಗಿಯೆ, ವಿನಾ ಹೊಯ್ಸಳ ಸೋಮೇಶ್ವರನನ್ನಲ್ಲ. ಆ ಸೋಮೇಶ್ವರನ ಕಾಲಕ್ಕೆ ಅವನು ಇದ್ದವನೂ ಅಲ್ಲ. ಅಂತಾಗಿ ಈ ಮಂಗರಸನೂ ಚಂಗಾಳ್ವ ನಾಗರಾಜನ ಕಾಲದವನಾಗಿದ್ದು ಪಾಲ್ಪರೆಯಲ್ಲಿ ಅವರ ಸಚಿವ ಅಥವಾ ಪಂಡಿತ ಅಥವಾ ಅಧಿಕಾರಿಯೋ ಆಗಿದ್ದ ಸೂಚನೆ ದೊರೆಯುತ್ತದೆ. ಪಾಲ್ಪರೆಯ ಪ್ರಾಮುಖ್ಯವೂ ತಿಳಿಯುತ್ತದೆ. ಕ್ರಿ.ಶ. ೧೧೭೧ರ ಚಂಗಾಳ್ವರ ಕಾಲದಿಂದ ಕ್ರಿ.ಶ. ೧೭೩೬ರ ಹಾಲೇರಿ ಅರಸ ಸಿರಿಬಾಯಿ ದೊಡ್ಡವೀರಪ್ಪನ ಕಾಲದವರೆಗೂ ಅಲ್ಲಿಯೆ ಯುದ್ಧರಂಗ ನಿರ್ಮಾಣವಾಗುತ್ತಿದ್ದುದೂ ಅದರ ಆಯಕಟ್ಟನ್ನು ಸೂಚಿಸುತ್ತದೆ. ಚಂಗಾಳ್ವರು, ಕೊಡಗುಶ್ರೀರಂಗಪಟ್ಟಣ, ನಾಗರಹೊಳೆ-ಕುಂತೂರನ್ನು ರಾಜಧಾನಿಯಾಗಿಸಿಕೊಂಡರೂ ಪಾಲ್ಪರೆ ಪ್ರಾಚೀನ ರಾಜಧಾನಿಯಾಗಿ ತನ್ನ ಮಹತ್ವವನ್ನು ಉಳಿಸಿಕೊಂಡೇ ಬಂದಿತೆನ್ನುವುದಕ್ಕೆ ಇವೆಲ್ಲ ಸಾಕ್ಷಿಯೆ.

ನಾಣಚ್ಚಿ ಮಠ: ಪೂರ್ವಚಂಗಾಳ್ವರೇ ವೀರಶೈವವನ್ನು ಅಪ್ಪಿದ್ದರು. ಚಂಗಾಳ್ವರ ನಾಗರಾಜ ನಾಗರಹೊಳೆ-ಕುಂತೂರನ್ನು ಎರಡನೆ ರಾಜಧಾನಿ ಮಾಡಿಕೊಂಡ ವೇಳೆಗೆ 'ನಾಣಚ್ಚಿ' ಮಠವನ್ನು ಅವನು ಸ್ಥಾಪಿಸಿದಂತೆ ತೋರುತ್ತದೆ. (ನಾಗರಹೊಳೆ ಅಭಯಾರಣ್ಯದ ಪ್ರವೇಶದ್ವಾರದಲ್ಲಿದ್ದ ಈ ಮಠದ ನೆಲಗಟ್ಟು ಮಾತ್ರ ಇಂದು ಉಳಿದಿದೆ) ಈ ಮಠ ಶಾಸನೋಕ್ತ ಕೊಳ್ಳೆಗಾಲದ ಬಳಿಯ 'ಕುಂತೂರುಸಿಂಹಾಸನ ವೀರಶೈವಮಠ'ದ ಪರಂಪರೆಯದೆಂದು[೩೨] ತೋರುತ್ತದೆ. ಆದರೂ ಆ ಕಾರಣವಾಗಿ ಇಲ್ಲಿ ನಾಗರಾಜನ ಕಾಲಕ್ಕೆ ಅಥವಾ ಮುಂಚೆಯೆ ಈ ಕುಂತೂರು ನಿರ್ಮಿತವಾಯಿತೋ ಎಂಬ ಬಗ್ಗೆ ಸ್ಪಷ್ಟವಿಲ್ಲ. ಈ ಮಠ ಚಂಗಾಳ್ವರ ರಾಜಗುರು ಮಠವಾಗಿತ್ತು. ಚಂಗಾಳ್ವರ ಅರಸೊತ್ತಿಗೆ ಅಳಿದು, ವೀರಶೈವ ಹಾಲೇರಿ ಅರಸರ ಕಾಲ ಮುಗಿದು ೧೫೦ ವರ್ಷಗಳ ನಂತರವೂ ಈ ಮಠದ ಗುರುಗಳ ಸ್ಮರಣೆ ಇಂದಿಗೂ ಇದೆ. ನಾಗರಹೊಳೆಗೆ ತಾಗಿದ ಕುಟ್ಟದ ಕುರುಚಿ ಕುಟ್ಟಾಲಮ್ಮನ - ಕರಿಂಗಾಳಿ - ಜಾತ್ರೆಯಲ್ಲಿ ಮಲೆಯಾಳದ ದಲಿತವರ್ಗದ ಮುನ್ನೂಟರು, 'ನಾಣಚ್ಚಿ ಮಠತ್ತುಳ್ಳ ಗುರುಗಳು ಉಂಡೋ' - ನಾಣಚ್ಚಿ ಮಠದ ಗುರುಗಳು ದಯಮಾಡಿಸಿರುವರೇ? ಎಂದು ಭಕ್ತಿ ಗೌರವದಿಂದ ಸ್ಮರಿಸುತ್ತಾರೆ. ಬಹುಶಃ ವೈನಾಡಿನಲ್ಲಿ ಈ ಮಠದ ಶಿಷ್ಯರು ಚಂಗಾಳ್ವರ ಕಾಲಕ್ಕೆ ಇದ್ದಿದ್ದು ಅಂದಿನ ಸಂಪರ್ಕದ ಸಂಕೇತವಾಗಿ ಇಂದಿಗೂ ಆಚರಣೆ ಉಳಿದು ಬಂದಿರಬೇಕು. ದೇವತೆಯ ಹಬ್ಬದಾಚರಣೆಗಳ ಆರಂಭವು ಈ ಮಠದ ಗುರುಗಳು ಹೋಗಿ ಆಶೀರ್ವಾದ ಮಾಡಿದ ಮೇಲೆಯೆ, ನಡೆಯುತ್ತಿತ್ತೆಂಬುದರ ಕುರುಹು ಕೂಡ ಇದಾಗಿದೆ.

ಅಮ್ಮಾಳೆಗುಡಿಯಲ್ಲಿ ನಾಗರಾಜನ ಆಸ್ಥಾನ ಶಿಲ್ಪ


ನಾಗರಹೊಳೆ ಅಭಯಾರಣ್ಯದ 'ನಾಗರಾಜರಸ್ತೆ' ಯಲ್ಲಿ ನೈರುತ್ಯಕ್ಕೆ ಸುಮಾರು ೨ ಕಿ.ಮೀ. ಸಾಗಿದರೆ ಮನೆಯಂತಿರುವ ಅಮ್ಮಾಳೆಗುಡಿ ಕಾಣಸಿಗುತ್ತದೆ. ವಾರ್ಷಿಕ ಹಬ್ಬದಲ್ಲಿ (ಫೆಬ್ರುವರಿ-

ಮಾರ್ಚಿ ಸುಮಾರಿಗೆ) ಈ ಗುಡಿಯ ಹೊರಭಿತ್ತಿಯ ಮೇಲೆ ಮೂಲನಿವಾಸಿ ಜೇನುಕುರುಬರು ಪ್ರಾಗೈತಿಹಾಸಿಕ ಕಾಲದ ಚಿತ್ರರೂಪಗಳನ್ನು ಬಿಡಿಸುತ್ತಾರೆ. ಈ ಚಿತ್ರಗಳಲ್ಲಿ, ಮಾನವಾಕೃತಿ, ಸೂರ್ಯ, ಜರಿಗಿಡದಂತಹ ಗೆರೆಗಳು, ನೀಳಜಡೆ ರಚನೆಗಳು ಸ್ಪ್ಯಾನಿಷ್ ಬಂಡೆಗಳ ಮೇಲಿನ ಇತಿಹಾಸ ಪೂರ್ವಕಾಲದ ಚಿತ್ರಗಳಂತೆ ಕಾಣಬರುತ್ತವೆ. ಬೆಟ್ಟ ಕುರುಬರೂ ಈ ಹಬ್ಬದಲ್ಲಿ ತೊಡಗಿಕೊಳ್ಳುತ್ತಾರೆ.



ಆಯತಾಕಾರದ ಹೆಂಚಿನ ಮಾಡು ಇರುವ ಈ ಗುಡಿಯ ಮಧ್ಯಭಾಗದಲ್ಲಿ ರಾಜಾಸ್ಥಾನದ ವ್ಯವಸ್ಥಾ ಮಾದರಿಯ ಶಿಲ್ಪಗಳು ವೇದಿಕೆಯ ಮೇಲಿವೆ. ಬದಿಗೆ ನೈವೇದ್ಯ ತಯಾರಿಸುವ ನೆಲೆಯೂ ಇದೆ. ಜೇನುಕುರುಬರು, ಬೆಟ್ಟಕುರುಬರು ಗುಡಿಯನ್ನು ಯಾವ ಹೆಸರಿನಿಂದಲಾದರೂ ಕರೆಯಲಿ, ಅದು ದೇವನೆಲೆಯೆಂದು ಭಾವಿಸಿ 'ಅಮ್ಮಾಳೆ' ಎಂಬುದೇ ಅವರಿಗೆ ರೂಢಿ.

ಇಲ್ಲಿನ ರಾಜಶಿಲ್ಪ ಬಹುಶಃ ಚಂಗಾಳ್ವ ನಾಗರಾಜನ ಶಿಲ್ಪರೂಪವೆನಿಸುತ್ತದೆ. ಪಂಚಲೋಹದ ಈ ಶಿಲ್ಪ ನಾಗರಾಜನ



ಕಾಲದ ಸ್ವರೂಪ-ಶೈಲಿಯನ್ನೋ ಹೋಲುವಂತಿದೆ. ನಾಗರಾಜ ಸಿಂಹಾಸನಸ್ಥ, ಕಿರೀಟಧಾರಿ. ಸಿಂಹಾಸನಕ್ಕೆ ಹೊಂದಿಸಿದಂತೆ ನೀಳ ಶ್ವೇತಛತ್ರಿ ಇದೆ. ಮುಖ್ಯವಾಗಿ ನಾಗರಾಜನ ಎದೆಯ ಮೇಲೆ ಎದ್ದು ಕಾಣುವ ಅವನ ಕಾಲದ ಮಾದರಿಯ ಇಷ್ಟಲಿಂಗದ ಕರಡಿಗೆ ಇದೆ. ಅವನ ಬಲಬದಿಗೆ ದಂಡನಾಯಕನದು (ಅಥವಾ ಅಂಗರಕ್ಷಕ) ಎನ್ನಬಹುದಾದ ವೀರಕ್ರಿಯಾಭಂಗಿಯ ಸ್ಥಾನಕ ಶಿಲ್ಪವಿದೆ. ಪಟ್ಟದಾನೆಯೂ ಇದೆ. ಎಡಕ್ಕೆ ಪಟ್ಟದ ಕುದುರೆ ಇದೆ. ಮುಂದೆ ಆನೆಗಳ ಸಾಲು ಇದೆ. ನಿಲ್ಲುದೀಪಗಳನ್ನು ಸಾಲಾಗಿ ಜೋಡಿಸಿಡಲಾಗಿದೆ. ಅಲ್ಲಿನ ಮೂಲನಿವಾಸಿ ಕುರುಬರಿಗೆ ವೀರಶೈವ ಚಂಗಾಳ್ವ ನಾಗರಾಜ ಒಂದು ಆರಾಧ್ಯ ದೈವ. ಅವನು ಸ್ಮರಣೀಯ ಚಾರಿತ್ರಿಕ ವ್ಯಕ್ತಿ ಎಂಬ ಬಗ್ಗೆ ಒಳ ಅರಿವಿದ್ದರೂ ತಮ್ಮ ಭಕ್ತಿ ಪರಂಪರೆಯಲ್ಲಿ ಏನೇ ಹೆಸರಿಟ್ಟು ಜೀವಂತವಿರಿಸಿದ್ದಾರೆ. ಆ ಮೂಲನಿವಾಸಿಗಳು ಆ ಅರಣ್ಯ ಪ್ರದೇಶದಲ್ಲಿ ಇರುವವರಿವಿಗೂ ಆ ಚಾರಿತ್ರಿಕ ಸ್ಮರಣೆಗೇನೂ ಬಾಧಕ ಬರದು. ನಾಗರಹೊಳೆ ಹಾಗೂ ಕೊಡಗುಶ್ರೀರಂಗಪಟ್ಟಣಕ್ಕೂ ಸಂಪರ್ಕವಿದ್ದುದರ ಕುರುಹಾಗಿ ಇಂದಿನ ಅಲ್ಲಿನ ದುಬಾರೆ ಕಾಡಿನ ಪಂಚಲಿಂಗೇಶ್ವರ ಗುಡಿಯ ಅವಶೇಷಗಳ ಹಿಂಬದಿಗೆ ಅಮ್ಮಾಳೆಕೆರೆಗಳಿದ್ದು ಅಮ್ಮಾಳೆ ನೆಲೆ ಇದ್ದು ಅಲ್ಲಿ ಜೇನು ಕುರುಬರು ವಾರ್ಷಿಕ ಪೂಜೆ ನಡೆಸುತ್ತ ಬಂದಿರುವುದಾಗಿದೆ.

ಚಂಗಾಳ್ವರ ಕಾಲದಲ್ಲಿಯೆ ನಾಗರ ಹೊಳೆ ಪ್ರದೇಶ ವನ್ಯ. ಮೃಗ ಬೇಟೆಗೆ ಪ್ರಸಿದ್ಧಿ ಇದ್ದಂತೆ, ಕೇರಳ ಕೊಡಗುಗಳ ನಡುವಣ ಪ್ರದೇಶವಾಗಿ, ವೈನಾಡು -ಕಲ್ಪಾತಿಯವರೆಗೆ ಕೊಡಗು ಇದ್ದಾಗಲೂ ಈ ಪ್ರದೇಶ ಮಹತ್ವ ಪಡೆದಿತ್ತು. ಕುಂತೂರು ನೆಲೆಯಲ್ಲಿ ಕಡಂಗ (ಕಂದುಕ-ಗುಡ್ಡೋಣಿ)ದ ಅವಶೇಷಗಳಿವೆ. ದೊಡ್ಡಹಳ್ಳದ ಬಸವೇಶ್ವರ ಗುಡಿ, ಕುಂತೂರು ಬೆಟ್ಟದ ಈಶ್ವರ ಗುಡಿಯೂ ಇದೆ. ಆಯ್ಯಪ್ಪ ಗುಡಿಯೂ ಇದೆ. ಹಾಲೇರಿ ವಂಶದ ಸಿರಿಬಾಯಿ ದೊಡ್ಡವೀರಪ್ಪನು (ಕ್ರಿ.ಶ. ೧೬೮೧-೧೭೩೬) ಪಾಲುಪರೆಯಲ್ಲಿ ಬಂದು ಇಳಿದು ಮೈಸೂರು ಸೈನ್ಯವನ್ನು ಸೋಲಿಸಿ ಕ್ರಿ.ಶ. ೧೬೯೦ರ ಸುಮಾರಿನಲ್ಲಿ ಹೆಗ್ಗಡ ದೇವನಕೋಟೆ ಬಳಿಯ ಹಂಪಾಪುರಕ್ಕೆ ಬೆನ್ನಟ್ಟಿ ಹೋಗಿ ಬಂದ ಸಂದರ್ಭ. ಹಾಗೆ ಹೋಗಿ ಬರುವಲ್ಲಿ ನಾಗರಹೊಳೆ ಅರಣ್ಯ ಪ್ರದೇಶವು ಹೆಗ್ಗಡ ದೇವನಕೋಟೆ, ಬಂಡಿಪುರ ಅರಣ್ಯಗಳಿಗೆ ಹೊಂದಿಕೊಂಡಿರುವ ಕಾರಣ ನಾಗರಹೊಳೆ ಮಾರ್ಗವನ್ನು ಅನುಸರಿಸಿ ಹೋಗಿಬಂದಂತಿದೆ.


ಒಂದನೇ ಲಿಂಗ ರಾಜ ಒಡೆಯನ ಕಾಲ ದಲ್ಲಿ (ಕ್ರಿ.ಶ. ೧೭೭೫-೭೯) ಕೋಟೆ ಅರಸು ಆಕ್ರಮಿಸಿದ ಕೊಡಗಿನ ಭಾಗವಾಗಿದ್ದ ಕಲ್ಪಾತಿ ವರೆಗಿನ ಬಯನಾಡು(ವೈನಾಡು) ಸೀಮೆಯಲ್ಲಿ ಠಾಣ್ಯವಿರಬೇಕಿತ್ತು. ಅದಕ್ಕಾಗಿ ಅಲ್ಲಿಗೆ ಸಾಗಲು ಆಯಕಟ್ಟಿನ ಮಧ್ಯನೆಲೆ ನಾಗರಹೊಳೆ ಅರಣ್ಯ ಮಾರ್ಗವಾಗಿತ್ತು. ಎರಡು ವರ್ಷ ಕಾಲ ಕಲ್ಪಾತಿಯಲ್ಲಿ ಲಿಂಗ ರಾಜೇಂದ್ರ ಒಡೆಯ ಠಾಣ್ಯವಿಟ್ಟುಕೊಂಡು ತಾನೂ ಅಲ್ಲಿದ್ದ.

ಹಾಲೇರಿ ವಂಶದ ಕೊನೆ ಅರಸರು, ಆಂಗ್ಲರು, ನಂತರ ಮೈಸೂರು ಅರಸರ ಕಾಲಕ್ಕೆ ನಾಗರಹೊಳೆ ಅರಣ್ಯಪ್ರದೇಶವು ಮೃಗ ಬೇಟೆಯ ಮನೋರಂಜನೆಗೆ ಮೀಸಲಾಗಿದ್ದ ಕಾರಣ ರಕ್ಷಿತ

ನೆಲೆಯಾಗಿತ್ತು. ಸಮುದ್ರ ಮಟ್ಟಕ್ಕಿಂತ ೨೫೦೦ ಅಡಿ ಎತ್ತರದಲ್ಲಿದೆ ಈ ನೆಲೆ.

ನಾಗರಹೊಳೆ ಮತ್ತು ನಾಗರಾಜ ರಸ್ತೆ

ವೈನಾಡು ಜಿಲ್ಲೆಯ ತೋಲುಪಟ್ಟಿಗದ್ದೆಯ ತೋಡು, ಕೇಂಬ್‌ಕೊಲ್ಲಿ - ಕುಟ್ಟಕ್ಕೆ ಒತ್ತಾಗಿರುವ ಫೇತ್‌ಎಸ್ಟೇಟ್‌ಮೂಲಕ ಸಾಗುವ, ಬಾಡಗ ಅರಣ್ಯಕ್ಕೆ ಒತ್ತಾಗಿ ಹರಿದು ನಾಲ್ಕೇರಿ ಅರಣ್ಯದ ಬಾಳೆಕೋವಿಗೆ ಬರುವ ನಾಣಚ್ಚಿತೋಡು, ಬಾಡಗಗ್ರಾಮದ ಗೊಟ್ಟೂರು ಕೋವು ತೋಡು, ಹುಲಿಪಟ್ಟಿ ಎಂಬಲ್ಲಿ ಒಂದಾಗುತ್ತವೆ. ಒಂದಾಗಿ ಶಾಂತಪುರದ ಗೋಣಿಗದ್ದೆ ಬಯಲು ಸಾಗುವಾಗ ಬೂಣೆಕೊಲ್ಲಿತೋಡು ಬಂದು ಸೇರುತ್ತದೆ.[೧೩] ಇವೆಲ್ಲದರ



ಸಂಯುಕ್ತರೂಪವೆ ನಾಗರಹೊಳೆ ಅರಣ್ಯದ ನದಿ, 'ನಾಗನಹೊಳೆ =ನಾಗರಹೊಳೆ. ಇದು ಇತಿಹಾಸದಿಂದ ಮೂಡಿಬಂದ ಹೆಸರೇ ವಿನಾ, ಹಾವಿನಂತೆ ಬಳಸಿ ಹರಿವ ಕಾರಣಕ್ಕಲ್ಲ. ಅದೊಂದು ಆಡಿಕೆ ಅಷ್ಟೆ. ಹಾವಿನಂತೆ ಹರಿವ ಎಷ್ಟೋ ನದಿಗಳಿಗೂ ಹಾಗೆ ಹೆಸರಿಲ್ಲ. 'ನಾಗರಹೊಳೆ' ಕೊಡಗು ಸರಹದ್ದಿನ ಪೂಜೆಕಲ್ಲು ಮೂಲಕ ಸಾಗಿ ಮೈಸೂರು ಜಿಲ್ಲಾ ಅರಣ್ಯದ ಮೇಟಿಕುಪ್ಪೆ, ಸುಂಕದಕಟ್ಟೆ ಹಾಯ್ದು ಸಾರಾತಿ ಹೊಳೆಯೊಡನೆ ಸೇರುತ್ತದೆ. ಆ ನಂತರ ತನ್ನ ಹೆಸರು ಬದಲಿಸಿಕೊಂಡು 'ತಾರಕಹೊಳೆ' ಎಂದು ಹೆಸರು ಹೊತ್ತು ಸರಗೂರು ಎಂಬಲ್ಲಿ ಕಪಿಸಿಯನ್ನು ಸೇರುತ್ತದೆ.

ನಾಗರಹೊಳೆ ಅರಣ್ಯಪ್ರದೇಶದಲ್ಲಿ ಬೂಣೆಕೊಲ್ಲಿ, ಶಾಂತಪುರ, ಗೋಣಿಗದ್ದೆ, ಗೊಟ್ಟೂರು, ಹುಲಿಕಲ್, ಬಾಳೆಕೋವು, ಪಡಸಾರಿ, ಜೋಯಿಕೊಲ್ಲಿ, ಕೊಡಂಗಿ, ನಾಣಚ್ಚಿ, ಹಾಗು ನಾಲ್ಕೇರಿ ಇತ್ಯಾದಿ ಗ್ರಾಮಸಮೂಹವು ಪ್ರಾಚೀನದಿಂದಲೂ ವ್ಯವಸಾಯದ ನೆಲೆಗಳಾಗಿ 'ನಾಗರಹೊಳೆ'ಯ ಆಸರೆಯನ್ನು ಪಡೆದಂತಹುಗಳಾಗಿವೆ.

ಈ ಅರಣ್ಯ ಪ್ರದೇಶವು ಜುಲೈ ೧೯೫೫ರಲ್ಲಿ ೨೮೫ ಚ.ಕಿ.ಮೀ. ವಿಸ್ತಾರದ ವನ್ಯಮೃಗ ಅಭಯಾರಣ್ಯ ಕ್ಷೇತ್ರವಾಗಿ ಕಲ್ಲಳ್ಳ ಹಾಗು ತಿತಿಮತಿ ಅರಣ್ಯಗಳನ್ನು ಒಳಗೊಂಡಿತು; ಇದರ ದಕ್ಷಿಣಭಾಗಕ್ಕೆ ವೈನಾಡು ಅರಣ್ಯವಿದೆ. ಹೆಗ್ಗಡದೇವನ ಕೋಟೆ ತಾಲೂಕು ಇದಕ್ಕೆ ತಾಗಿಕೊಂಡಿದೆ; ಹುಣಸೂರು-ಮೂರ್ಕಲ್ಲು ಹಾಗು ಹೆಗ್ಗಡದೇವನ ಕೋಟೆಯ ಮೂಲಕವೂ ನಾಗರಹೊಳೆಗೆ ಹಾದಿ ಇದೆ.[೧೪] ೧೯೭೫ರಲ್ಲಿ ಕಾಕನಕೋಟೆ, ಮೇಟುಕುಪ್ಪೆ, ವೀರನ ಹೊಸಳ್ಳಿ, ಕಚುವನಹಳ್ಳಿ ಅರಣ್ಯಗಳನ್ನು ಸೇರಿಸಿ ವಿಸ್ತಾರವನ್ನು ೫೭೧ ಚ.ಕಿ.ಮೀ.ಗೆ ಹೆಚ್ಚಿಸಲಾಯಿತು. ೧೯೮೩ರಲ್ಲಿ ಈ ಅಭಯಾರಣ್ಯವನ್ನು ರಾಷ್ಟ್ರೀಯ ಉದ್ಯಾನವೆಂದು ಕರೆದು, ೧೯೮೮ರಲ್ಲಿ ೬೪೩ ಚ.ಕಿ.ಮೀ.ಗೆ ವಿಸ್ತಾರಗೊಳಿಸಲಾಯಿತು.[೧೫] ೧೯೯೨-೯೩ರಲ್ಲಿ ರಾಜೀವ ಗಾಂಧಿ ರಾಷ್ಟ್ರೀಯ ಉದ್ಯಾನವನ ಎಂಬ ಹೆಸರನ್ನೂ ಈ ಅಭಯಾರಣ್ಯಕ್ಕೆ ನೀಡಲಾಗಿದೆ. 'ನಾಗರಾಜ ರಸ್ತೆ' ಎಂದಿದ್ದ ನಾಮಫಲಕ ಈಗ ಕಾಣಬರುತ್ತಿಲ್ಲ.

ಒಟ್ಟಾರೆ ಕ್ರಿ.ಪೂ.ಒಂದು ಸಾವಿರ ವರುಷಕ್ಕೂ ಮೀರಿದ ಸಾಂಸ್ಕೃತಿಕ ಚರಿತ್ರೆಯನ್ನು ನೆನಪಿಸುವ ಈ ನೆಲೆ ತನ್ನ ಐತಿಹಾಸಿಕ ಹೆಸರನ್ನು ಜನಮಾನದಸಲ್ಲಿ ಉಳಿಸಿಕೊಂಡೇ ಬಂದಿದೆ. ನಾಗರಹೊಳೆಯ ಮೂಲನಿವಾಸಿಗಳೂ ಪ್ರಾಗೈತಿಹಾಸಿಕ ಪರಂಪರೆ ಹಾಗು 'ನಾಗರಾಜ'ನ ಆಳ್ವಿಕೆಯನ್ನು ನೆನಪಿನಲ್ಲಿ ದೈವೀಕರಣಗೊಳಿಸಿ ಮೀಸಲಿರಿಸಿಕೊಂಡು ಸಾಗಿ ಬಂದಿದ್ದಾರೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. K.K. Subbaiah: **Archeology of Coorg,** Mysore, 1978, Pp. 84-85
೨. L.A. Krishna Iyer: **The Coorg Tribes and Castes,** Madras, 1948, Pp. 38-39
೩. Johannes Maringer: **The Gods of prehistoric Man** (German. 1956: English Trln-Mary Ilferd)1960, London, p.127)
೪. Gutsav Oppert: **The original Inhabitants of India,** New Delhi, 1955, p. 51
೫. E.C.Vol. I, **Coorg Inscriptions** (Revised Edn) : (Ed) B.L.Rice, Madras, 1914, P.20
೬. ಎ.ಕ.ಸಂ. ೩. ಮೈಸೂರು ಜಿಲ್ಲೆ, ಮೈಸೂರು ವಿಶ್ವವಿದ್ಯಾಲಯ, ೧೯೭೪, ಹೆಗ್ಗಡದೇವನ ಕೋಟೆ ೩೪೭, (ಕುಲಗಾಣಶಾಸನ - ಕ್ರಿ.ಶ. ೭-೮ ನೇ ಶತಮಾನ)
೭-೮ ಹೆಚ್.ಎಂ. ನಾಗರಾಜರಾವ್: 'ಎಡಕಲ್ಲುಗುಡ್ಡ - ಒಂದು ಪರಿಚಯ', ಬ್ರಹ್ಮಗಿರಿ (ದಿ. ಭಾರತಿಸುತರ ಸಂಸ್ಮರಣ ಗ್ರಂಥ), (ಸಂ) ಕೆ. ಸಚ್ಚಿದಾನಂದಯ್ಯ ಮತ್ತಿತರರು, ಮಡಿಕೇರಿ, ೧೯೭೭, ಪು. ೧೦೭-೧೦೮

೯. ಶಾನುಭಾಗ ನಾರಾಯಣರಾಯರು: ‘ವೈನಾಡಿನ ಕನ್ನಡಿಗರು’, ಕನ್ನಡನುಡಿ, ಸಂ.೧, ಸಂ. ೩೨ ಮತ್ತು ಸಂ. ೧ ಸಂ. ೩೩ (ಮೇ. ೧೨, ೧೯೩೯ ಮತ್ತು ಮೇ ೧೯, ೧೯೩೯) ಪು. ೨೬೪, ೨೭೧.

೧೦. ಹೆಚ್.ಎಂ. ನಾಗರಾಜರಾವ್: ಅದೇ, ಪು. ೧೦೮; ಆದರೆ ಲೇಖಕರು ಊಹಿಸಿದಂತೆ ಇದು ತಮಿಳು ಶಾಸನವಲ್ಲ. ಕಾರಣ ತಮಿಳು ಗ್ರಂಥ ‘ಪುಱನಾನೂಱು’ ನಲ್ಲಿನ ಕವಿತೆಗಳಲ್ಲಿ, (ಕನ್ನಡ ನುಡಿ ಸಂ. ೫, ಸಂ. ೪೯, ಅಕ್ಟೋಬರ್ ೧,೧೯೪೩ ಮತ್ತು ಸಂ-೬, ಸಂ. ೧ ಅಕ್ಟೋಬರ್ ೮, ೧೯೪೩) ‘ಪುಲಿಕಡಿಮಾ ಅಲ್’ ಎಂಬ ಸ್ವರೂಪವೇ ತಮಿಳಿನದಾಗಿದ್ದು, ನಿಡುಗಲ್ ಚೋಳರ ರಾಜನಿಗೆ ಅನ್ವಯಿಸಿದೆ. ಅದು ‘ಹುಲಿಯನ್ನು ಕಡಿದ ವೀರ’ ಎಂದರ್ಥವಾಗುತ್ತದೆ. ನೊಳಂಬ ಹಾಗೂ ನಿಡುಗಲ್ ಚೋಳರ ಶಾಸನಗಳು ಕನ್ನಡ ಪ್ರಭಾವದವು ಆಗಿ ಪುಲಿನಾಡೋ ಮೇಟ್ಟಿರ (S.II. Vol. IX, part.I. No. 3 & 4) ಎಂದಿರುವುದು ‘‘ಪುಲಿನಾಟ್ಟಕೆಟಿ - ಹುಲಿಕಡಿದವೀರ’’ ಎಂದಿರುವುದಕ್ಕೆ ಭಾಷಾವ್ಯತ್ಯಾಸವನ್ನು ಗಮನಿಸಬೇಕು. ಅಂತಾಗಿ ಪಲಂಪುಲಿನಾನಂತಕಾರಿ = ಪಲ್+ಪುಲಿ+ತಾನ್+ಅಂತಕಾರಿ ಎನ್ನುವಲ್ಲಿ ಕನ್ನಡ ಸ್ವರೂಪವನ್ನೂ ಕಾಣಬಹುದು.

** ಇಲ್ಲಿನ ೨ನೇ ಶಾಸನದ ‘ರ’ ಮತ್ತು ಕೊನೆಯ ಅಕ್ಷರ ‘ಕ’ಗಳ ಲಿಪಿ ಸ್ವರೂಪವು ಸಿಂಧೂ ಲಿಪಿಯ ಶೈಲಿಯನ್ನು ಉಳಿಸಿಕೊಂಡಿರುವಂತಿದೆ. ಹಾಗಾಗಿ ಬಲಗಡೆಯಿಂದ ‘ಕವೇರ ತಪುಮ ಷಟುಕ’ ಎಂದು ಓದಬಹುದಾದರೆ ಕವೇರ ಋಷಿಯ ತಪೋಭೂಮಿ ಎಂಬ ಊಹೆಗೆ ಸಾಗಬಹುದೇ ಎನಿಸುತ್ತದೆ. ಹೀಗೆಯೇ ೩ನೇ ಶಾಸನದಲ್ಲಿ ‘ಹ’ ಕಾರವು ಸಿಂಧೂಲಿಪಿಯ ಶೈಲಿಯನ್ನು ಹೋಲುತ್ತಾ ಶಾಸನದ ಕಾಲದವರೆಗೂ ಉಳಿಸಿಕೊಂಡಂತಿರುವುದು ಗಮನಾರ್ಹ.

೧೧-೧೨. ಎ.ಕ.ಸಂ. ೩, ಅದೇ, ಪೀಠಿಕೆ, ಪು. ೭೦; ಎ.ಕ.ಸಂ. ೩ ಅದೇ, ಹೆಗ್ಗಡದೇವನ ಕೋಟೆ ತಾ. ಮಳಲಿ ೧೧೦ (೧೦ನೇ ಶತಮಾನ), ಮಗ್ಗೆ ೧೪೨ (ಕ್ರಿ.ಶ. ೯೯೮-೯೯), ಕಿತ್ತೂರು ೧೨೩ (ಕ್ರಿ.ಶ. ೧೦೭೯)

೧೩. ಎ.ಕ. ಸಂ. ೩ ಅದೇ, ಕೆಲಸೂರು ೧೦೨ (೧೨ನೇ ಶತಮಾನ), ಬೇರಂಬಾಡಿ ೨೧೯ (೧೦ ನೇ ಶತಮಾನ), ರಾಘುವಾಪುರ ೪೦ (ಕ್ರಿ.ಶ. ೧೩೨೦), ಗೋಪಾಲಪುರ ೨೧೩ (ಕ್ರಿ.ಶ. ೧೫೫೭)

೧೪. ಹೆಚ್. ಆರ್. ರಘುನಾಥಭಟ್: **ಕರ್ನಾಟಕ ಶಾಸನ ಕಲೆ**, ಮೈಸೂರು, ೧೯೭೭, ಪು. ೩೪-೩೫

೧೫. ಎ.ಕ. ಸಂ. ೧ (ಪರಿಷ್ಕೃತ) **ಕೊಡಗು ಜಿಲ್ಲೆ**, ಮೈಸೂರು ವಿಶ್ವವಿದ್ಯಾಲಯ, ೧೯೭೨, ಯಡೂರು ೬೨ (ಕ್ರಿ.ಶ. ೧೦೯೫)

೧೬. ಡಾ. ಎಂ. ವಿ. ಕೃಷ್ಣರಾವ್: ‘ಬಾಣರು’, ಕರ್ನಾಟಕ ಪರಂಪರೆ, ಸಂ. ೧, ಬೆಂಗಳೂರು, ೧೯೭೦, ಪು. ೧೫೬

೧೭. **ಕನ್ನಡ ನಾಡಿನ ಚರಿತ್ರೆ** (ಭಾಗ. ೧) : (ಪ್ರ.ಸಂ) ಬಿ.ಎಂ. ಶ್ರೀಕಂಠಯ್ಯ, ಡಾ॥ ಬಿ.ಎ.ಸಾಲತ್ತೊರೆ, ಡಾ॥ ದೇಸಾಯಿ ಪಾಂಡುರಂಗರಾಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩, ಪು. ೫೨

೧೮. ಎ.ಕ. ೧ (ಪರಿಷ್ಕೃತ) **ಕೊಡಗುಜಿಲ್ಲೆ**, ಅದೇ, ನಂದಿಗುಂದ ೮೭

೧೯. ಎ.ಕ. ೯ (೧೯೯೦), **ಹಾಸನಜಿಲ್ಲೆ**, ಬೇಲೂರು ೫೪೦

೨೦. S.S. Jagirdar: **'New light on the Hoysalas'** Q.J.M.S. Vol. LXXXV. No. 1 Jan - Mar. 1994

೨೧-೨೨ (i) ಎ.ಕ. ೭ ಶಿವಮೊಗ್ಗ ೪ (ಕ್ರಿ.ಶ. ೧೧೭೭) ಮತ್ತು ಶಿವಮೊಗ್ಗ ೧೨೫ (ಕ್ರಿ.ಶ. ೧೦೧೯) (ii) ಎಂ.ಜಿ. ನಾಗರಾಜ್: **ವೀರಶೈವ ಅರಸು ವಂಶಗಳು**, ‘ಶ್ರೀನಿಜಗುಣ’ ಗೌರವ ಸಂಪುಟ. ಬೆಂಗಳೂರು, ೧೯೭೬ ಪು. ೬೩೧

೨೩. ಎಂ.ಎಸ್. ಪ್ರಭಾಕರ್: ‘ಮುಣ್ಣಪೊಯ್ಸಳ’, ಇತಿಹಾಸ ದರ್ಶನ, ಸಂ. ೧೧ ೧೯೯೬, ಪು. ೨೨೫

೨೪. E.C. Vol. IX: (Ed) L. Rice, **Bangalore District**, 1905, p. 19 and E.C. Vol. iv. Ng. 76

೨೫. ಎ.ಕ. ೧ (ಪರಿಷ್ಕೃತ) **ಕೊಡಗು ಜಿಲ್ಲೆ**, ಅದೇ, ಭಾಗಮಂಡಲ ೨೧

೨೬. ಎ.ಕ.ಸಂ. ೪. **ಮೈಸೂರು ಜಿಲ್ಲೆ**, ಮೈಸೂರು ವಿಶ್ವವಿದ್ಯಾಲಯ, ೧೯೭೫, ಪಿರಿಯಾಪಟ್ಟಣ ೧೩೨ (ಹಿರೇಮಳಲಿ)

೨೭. ಡಿ.ಎಸ್.ಕೃಷ್ಣಯ್ಯ: **ಕೊಡಗಿನ ಇತಿಹಾಸ**, ಮೈಸೂರು ವಿಶ್ವವಿದ್ಯಾಲಯ, ೧೯೭೪, ಪು. ೬೨

೨೮. E.C. Vol. I **Coorg. Inscriptions:** (Ed) L. Rice, Op. Cit., pp. 20-21

೨೯. ಡಾ॥ ಕೆ. ಆರ್. ಗಣೇಶ್: **ಆಂಧ್ರಪ್ರದೇಶದ ಕನ್ನಡ ಶಾಸನಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬, ಪು. ೧೭೭-೭೮

೩೦. **ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನಕಾವ್ಯವು:** (ಸಂ) ಡಾ॥ ಬಿ.ಎಸ್. ಕುಲಕರ್ಣಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೫, ಪು. ೩೫

೩೧. **ಅಭಿನವಾಭಿಧಾನಂ, ಅಭಿನವ ಮಂಗರಾಜ ವಿರಚಿತ:** (ಸಂ) ಎಂ. ಮರಿಯಪ್ಪ ಭಟ್ಟ, ಮದರಾಸು, ೧೯೫೨

೩೨ ಎ.ಕ. ಸಂ. ೩ **ಮೈಸೂರು ಜಿಲ್ಲೆ**, ೧೯೭೪, ಅದೇ; ಕೊಳ್ಳೇಗಾಲ ೭ (ಕುಂತೂರು, ಕ್ರಿ.ಶ. ೧೫೧೨, ಕ್ರಿ.ಶ. ೧೫೩೯, ಕ್ರಿ.ಶ. ೧೫೪೪ ರ ಶಾಸನಗಳು)

೩೩. ಈ ಮಾಹಿತಿಯನ್ನು ಒದಗಿಸಿಕೊಟ್ಟು ಕೆಲವು ನೆಲೆಗಳನ್ನು ತೋರಿದ ನಾಗರಹೊಳೆಯ ಜೇನುಕುರುಬರ ಶ್ರೀ ಕೆ. ಅಪ್ಪು (೫೫) ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುವೆ.

೩೪. **Coorg Gazetteer** : (Ed) B.N. Satyan, Bangalore, 1965, pp. 29-30, & 519

೩೫. **ಕೊಡಗು ಜಿಲ್ಲಾ ಗ್ಯಾಸೆಟಿಯರ್**: (ಸಂ.) ಸೂರ್ಯನಾಥ ಕಾಮತ್, ಬೆಂಗಳೂರು, ೧೯೯೨, ಪು. ೮೨೯

ಆರ್.ವೆಂಕಟೇಶಮೂರ್ತಿ *

'ಪಂಚಿಕೇಶ್ವರ' - ಒಂದು ಅರ್ಥ ಗ್ರಹಿಕೆ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಶಾಸನಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಿಕೊಂಡ ಸಂದರ್ಭದಲ್ಲಿ, ಇದೇ ತಾಲ್ಲೂಕಿಗೆ ಸೇರಿದ ಬೆಳ್ಳೂರಿನ ಕ್ರಿ.ಶ. ೧೨೭೧ ರ ಶಾಸನದಲ್ಲಿನ 'ಪಂಚಿಕೇಶ್ವರ' ಎಂಬ ಶಬ್ದ ಗಮನ ಸೆಳೆಯಿತು. ಆಗ ಕುತೂಹಲ ಮೂಡಿ, ಇನ್ನಿತರ ಶಾಸನಗಳನ್ನು ಪರಿಶೀಲಿಸಿದಾಗ ಈ ಪಂಚಿಕೇಶ್ವರವು ವಿವಿಧ ಅರ್ಥಗಳಲ್ಲಿ ಪ್ರಯೋಗವಾಗಿರುವಂತೆ ಕಂಡು, ಆಲೋಚಿಸುವಂತೆ ಮಾಡಿತು. ಈ ಹಿನ್ನೆಲೆಯಲ್ಲಿ ಇದರ ಅರ್ಥವನ್ನು ಗ್ರಹಿಸುವ ಪ್ರಯತ್ನ ಮಾಡಲಾಗಿದೆ.

ಶಿಕಾರಿಪುರ ತಾಲ್ಲೂಕಿನ ಸಾಲೂರು ಗ್ರಾಮದ ಶಾಸನವು ವೇದ ಮತ್ತು ತರ್ಕಶಾಸ್ತ್ರಗಳನ್ನು ಕಲಿತು ಯಮ, ನಿಯಮ ಮತ್ತು ಯೋಗಾಭ್ಯಾಸಗಳಲ್ಲಿ ತೊಡಗಿಸಿಕೊಂಡಿರುವ ಒಂದು ಸಾವಿರ ಮಹಾಜನರಿಗೆ **'ಗುಣಗನ ಮತ್ತರು'** ಅಳತೆಯಲ್ಲಿ ಅಳೆದ ಭೂಮಿಯನ್ನು ಊರಿಗೆ ಬರುವ ಅತಿಥಿಗಳಿಗೆ ಊಟೋಪಚಾರಗಳಿಗಾಗಿ ನೀಡಿರುವುದನ್ನು ದಾಖಲಿಸಿ, ನಂತರ, ಅದೇ ಗ್ರಾಮದಲ್ಲಿರುವ ಮಾದಿಮ್ಮಯ್ಯನ ವಂಶದವರು (ಪ್ರಾಯಃ ಈ ಮೊದಲು ಕೊಡುಗೆ ನೀಡಿದ್ದವನು ಮಾದಿಮ್ಮಯ್ಯ ಎಂಬ ವ್ಯಕ್ತಿಯೇ ಆಗಿರಬಹುದು) ಈಗಾಗಲೇ ನೀಡಿರುವ ಕೊಡುಗೆಯ ಜೊತೆಗೆ ಒಂದು ಮತ್ತರಿನ ೧/೪ ಭಾಗವನ್ನು ನೀಡಿ **'ಮತ್ತಂ ಅಲ್ಲಿ ಪಡಿಯ ಪೊನ್ನಂ ನೆರಪಿ ತಮ್ಮ ಮನೆಯಿಂ ಪಂಚಾಕೇಶ್ವರಮಮ್ ಪೊರಮಡಿಸಿ, ಓದಿಸಿ, ಆ ಅರ್ಥಮಂ ಪೂಜಿಸುವರು'** ಎಂದು ದಾಖಲಿಸಿದೆ.[೧]

ಬೇಲೂರಿನ ಶಾಸನವು 'ಹೊಯ್ಸಣೇಶ್ವರ ದೇವರ ಪಂಚಿಕೇಶ್ವರದ ವೋದಿದ ಬ್ರಾಹ್ಮಣರ ಪೂಜೆಗೋಸುಗ ಆ ಮಹಾಜನಂಗಳ ಕಯ್ಯಲು ಧರ್ಮವಡಿಯಲು ಬೀಜವೊನ್ನಾಗಿ ಕೊಟ್ಟಗದ್ಯಾಣ ಮೂವತ್ತು' ಎಂದು ದಾಖಲಿಸುತ್ತದೆ.[೨]

ಮತ್ತೊಂದು ಶಾಸನವು 'ಹೇಮಳಂಬಿ ಸಂವತ್ಸರದ ಭಾದ್ರಪದ ಸು. ೧೪ ಆ। ಶಾಂತಿಗ್ರಾಮದ....ಮಾವನಮಗ ಸಿಂಗಮಾವನು **ಪಂಚಿಕೇಶ್ವರ ದೇವರ ಧರ್ಮಕ್ಕೆ ಕೊಟ್ಟ ಬೀಜವೊಂನ್ನು ಗ ೨'** ಎಂದು ತಿಳಿಸುತ್ತದೆ.[೩]

ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಶಾಸನವು ಮೂರನೇ ಹೊಯ್ಸಳ ನರಸಿಂಹನ ಕಾಲದಲ್ಲಿ ಮಹಾಪ್ರಧಾನಿಯಾಗಿದ್ದ ಪೆರುಮಾಳೆದೇವ ದಣ್ನಾಯಕನ ಸಂಬಂಧದ್ದು ' ಶ್ರೀಮತ್ಸರ್ವ್ವನಮಸ್ಯದಗ್ರಹಾರ ಸ್ವಯಂಕೃತವಹ ವುದ್ಭವ ನರಸಿಂಹಪುರವಾದ ಬೆಳ್ಳೂರ ಶ್ರೀಮದಗ್ರಹಾರದಲ್ಲಿ ತಾವು ಮಾಡಿಸುವ ಶ್ರೀ **ಪಂಚಿಕೇಶ್ವರದಲಿ[೪] ಯಿಂದ್ರ ಪರ್ವ್ವದ ಧರ್ಮಕೆಯುಂ ಆರಣ ಪೂಜೆಗೆಯುಂ...** ಹನ್ನೆರಡು ಸಲಗೆಗದ್ದೆಯನೂ... ಇಪ್ಪತ್ತನಾಲ್ಕು ಸಲಗೆ ಗದ್ದೆ ಅನ್ನೂ ಗದ್ದೆ ಸಲಗೆ ಮೂವತ್ತಾಱನೂ ಆ ಬೆಳ್ಳೂರ ಆಯಿಂದ್ರ ಪರ್ವ್ವದ ಪಂಚಿಕೇಶ್ವರದ ಧರ್ಮಕ್ಕೆವೂ ಆರಣ ಪೂಜೆಯ ಧರ್ಮಕ್ಕೆವೂ ಆಚಂದ್ರಾರ್ಕ್ಕಸ್ಥಾಯಿಯಾಗಿ ನಡವಂತಾಗಿ ಆ ಕ್ಷೇತ್ರವನು ಆ ಪೆರುಮಾಳೆದೇವ ದಂಣ್ನಾಯಕರೂ ಆ ಮಹಾಜನಂಗಳೂ ಧಾರಾಪೂರ್ವ್ವಕಂ ಮಾಡಿಕೊಟ್ಟರು'. ಈ ರೀತಿ ದತ್ತಿ ಪಡೆದ ಮಹಾಜನರು ಈ ಗದ್ದೆಗೆ ಸೇಸೆ, ಸಿದ್ಧಾಯ, ಖಾಣ, ಅಭಾಗ್ಯತೆ, ಕಿಱುಕುಳ, ಪಟ್ಟಬದ್ಧ ಪುತ್ರೋತ್ಸಾಹ, ಆನೆಯ ಸೇಸೆ, ಕುದುರೆಯಸೇಸೆ, ಕಟಕಸೇಸೆ, ಮುಂತಾದ ತೆರಿಗೆಗಳ ಎಲ್ಲಾ ಬಾಧೆಗಳಿಂದ ಮುಕ್ತರಾಗುತ್ತಾರೆ. ದತ್ತಿ ಭೂಮಿಯಲ್ಲಿ ವ್ಯವಸಾಯ ಮಾಡಲು ರಂಗಗವುಡ ಹಿರಿಯಣ್ಣನ ಮಗ ಚವುಡಯ್ಯ, ಬೀರಗವುಡ, ಪಟ್ಟಣಸ್ವಾಮಿ ಮಾಚಿಸಟ್ಟಿ, ಬಾಚೆಯ ಸಾಹಿಣಿ, ಬಲ್ಲೆಯ ಹೆಗ್ಗಡಿಯ ಅಲ್ಲಪ್ಪ, ಚಿಕ್ಕಬಲ್ಲಯ್ಯ, ಸಂಚಿಯಣ್ಣ, ತಿಪ್ಪ, ಪೆರುಮಾಳೆದೇವ ದಂಣ್ನಾಯಕರ ಮಗ ನಾರಣ ದೇವಂಣ್ನ, ಅದ್ದಿಕದ ಸಿಂಗಣ್ಣ, ನಾಣಗೌಡಿಯ ಗೋಪಾಳದೇವ, ಎಂಬ ಹನ್ನೆರಡು ಜನರಿಗೆ ವಹಿಸಿಕೊಟ್ಟು ಇವರಿಗೆ ಪ್ರಸನ್ನ ಮಾಧವ ದೇವಾಲಯದ ದಕ್ಷಿಣ ಭಾಗದಲ್ಲಿ ವಾಸಕ್ಕಾಗಿ ಹನ್ನೆರಡು ಮನೆಗಳನ್ನು ಕಟ್ಟಿಸಿಕೊಟ್ಟು ಅವುಗಳಿಗೆ ಮನೆದೆಱೆಯನ್ನು ಮನ್ನ ಮಾಡುತ್ತಾರೆ.

---

* 'ನವಸುಮ', ನಂ-೨೭/೧, ೨೩ನೇ ಮುಖ್ಯ ರಸ್ತೆ, ೫೦ ಅಡಿ ರಸ್ತೆ, ಮುನೇಶ್ವರ ಬ್ಲಾಕ್, ಬೆಂಗಳೂರು - ೫೬೦ ೦೮೫

ಮೇಲೆ ತಿಳಿಸಿದ ಮೂವತ್ತಾರು ಸಲಗೆ ಭೂಮಿಯಲ್ಲಿ ತೋಟ ಅಥವಾ ಗದ್ದೆಯನ್ನು ಮಾಡಿಕೊಂಡು ತಮಗೆ ಇಷ್ಟಬಂದ ರೀತಿಯಲ್ಲಿ ಬೇಸಾಯವನ್ನು ಮಾಡಲು ಅನುಮತಿ ನೀಡುತ್ತಾರೆ. ಈ ರೀತಿ ಬೇಸಾಯದ ಸ್ವಾತಂತ್ರ್ಯವನ್ನು ಪಡೆದ ವೊಕ್ಕಲುಗಳು ಮೂವತ್ತಾರು ಸಲಗೆ ಭೂಮಿಯಿಂದ ಬರುವ ಉತ್ಪನ್ನದಲ್ಲಿ ಗುತ್ತಿಗೆ ಬಾಡಿಗೆಯ ರೂಪದಲ್ಲಿ ದೇವಾಲಯಕ್ಕೆ ತಾರಣ ಸಂವತ್ಸರದಿಂದ ಆರಂಭವಾಗಿ ಮೂರು ವರ್ಷಗಳು ಪ್ರತಿವರ್ಷ ೩೭ ಗದ್ಯಾಣ ಮತ್ತು ೨ ಪಣಗಳನ್ನು ಹಾಗೂ ಸರ್ವಜಿತು ಸಂವತ್ಸರದಿಂದ ಆರಂಭಗೊಂಡು ಪ್ರತಿವರ್ಷ ೫೪ ಗದ್ಯಾಣವನ್ನು ಆ ಪಂಚಿಕೇಶ್ವರದ ಆರಣ ಪೂಜೆ ಆ ಇಂದ್ರ ಪೂಜೆಯ ಧರ್ಮಕ್ಕೆ ಕೊಡಬೇಕೆಂದೂ, ಒಂದು ವೇಳೆ ಹನ್ನೆರಡು ಜನರಲ್ಲಿ ಯಾರಾದರೊಬ್ಬರು ಈ ಗುತ್ತಿಗೆ ಬಾಡಿಗೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ ಉಳಿದವರು ಜವಾಬ್ದಾರಿಯನ್ನು ತೆಗೆದುಕೊಂಡು ಕಟ್ಟುಗುತ್ತಿಗೆಯಾಗಿ ಆ ೫೪ ಗದ್ಯಾಣವನ್ನು ನೀಡಬೇಕೆಂದೂ ನಿಬಂಧನೆಯನ್ನು ವಿಧಿಸಿದರು. ಒಟ್ಟಿನಲ್ಲಿ ಈ ನಿಬಂಧನೆಯೊಂದಿಗೆ ಪ್ರತಿವರ್ಷ ಪಂಚಿಕೇಶ್ವರದ ಇಂದ್ರಪೂಜೆ ಮತ್ತು ಆರಣ ಪೂಜೆಗಳ ಸಂದರ್ಭಕ್ಕೆ ಸರಿಯಾಗಿ ಹಣವನ್ನು ಒದಗಿಸುವಂತೆ ಏರ್ಪಾಡು ಮಾಡಲಾಯಿತು. ಇದಲ್ಲದೆ ಭಟ್ಟ ವೃತ್ತಿಗಾಗಿ. ಬಾಲಶಿಕ್ಷೆಗಾಗಿ, ಕೆರೆಗಳ ಕೆಲಸಕ್ಕೆ ಹೂಡುವ ಬಂಡಿಗಳ ಆಳುಗಳ ಜೀವಿತಕ್ಕೆ, ಮಹಾಪ್ರಧಾನ ಪೆರುಮಾಳೆದೇವ ನಡೆಸುವ ಛತ್ರಕ್ಕೆ, ಬಾಣಸಿಗ, ಪರಿಚಾರಕರು ಮುಂತಾದವರಿಗೆ ಭೂಮಿಗಳನ್ನು ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತದೆ.[೪]

ಚನ್ನರಾಯಪಟ್ಟಣ ತಾಲ್ಲೂಕಿನ ಶಾಸನವು ' ಆ ಗದ್ದೆ ಸ ೫ ಯಾ ಕ್ಷೇತ್ರವನು ಆ ಬಾಳುಗಚ್ಚಿನ ಆಯಿಂದ್ರ ಪರ್ವ್ವದ ಪಂಚಿಕೇಶ್ವರ ದೇವರ ಧರ್ಮಕ್ಕೆವೂ ಆರಣ ಪೂಜೆಯ ಧರ್ಮಕ್ಕೆವೂ ಆಚಂದ್ರ ಸ್ಥಾಯಿಯಾಗಿ ನಡವಂತಾಗಿ' ಎಂದು ದಾಖಲಿಸಿದೆ.[೫]

" ಶ್ರೀ ಪಂಚಿಕೇಶ್ವರ ಧರ್ಮಖ ಧವಿಸೆಯ ಪೂಜೆಗೆ ಬಿಟ್ಟ ಗದ್ಯಾಣ ನಾಲ್ಕು ಮತ್ತು ಪಂಚಿಕೇಶ್ವರ ದೇವರ ಧರ್ಮಖ ಧವಿಸೆಯ ಪೂಜೆಗೆ ಹೊಂಗೆ ವರಿಷಕ್ಕೆ ಹಣವೆರಡು ಹಾಗವೆರಡಟಿ ಬಡ್ಡಿಯಲು ಬಿಟ್ಟ ಗದ್ಯಾಣ ನಾಲ್ಕು, ಹಣ ಹದಿನೈದು "[೬] "ಶ್ರೀ ಪಂಚಕೇಶ್ವರ ದೇವರದ ಧವಿಸೆಯ ಪೂಜೆಗೆ ಹೊಂಗೆ ವರಿಷಕ್ಕೆ ಹಣವೆರಡಟಿ ಬಡ್ಡಿಯಲು ಬಿಟ್ಟ ಗದ್ಯಾಣ ಹತ್ತು "[೭] ಎಂಬುದಾಗಿ ಬೇಲೂರಿನ ಎರಡು ಶಾಸನಗಳು ದಾಖಲಿಸಿವೆ.

ಪೆರುಮಾಳೆದೇವನು ತನ್ನ ಅಧಿಕಾರಾವಧಿಯಲ್ಲಿ 'ಚಿತ್ರದುರ್ಗ ಬೆಟ್ಟದಲ್ಲಿ ಪೆರುಮಾಳೆಪುರವನ್ನು ನಿರ್ಮಿಸಿ, ಕುರುಬನಕಾಳೆಯನ ಕೆರೆಯನ್ನು ಕ್ರಯವಾಗಿಕೊಂಡು ತನ್ನ ಹೆಸರಿನಲ್ಲಿ ಪೆರುಮಾಳೆ ಸಮುದ್ರವನ್ನು ಕಟ್ಟಿಸಿ, ತಾನು ಮಾಡಿದ ಪುರದಲ್ಲಿ ನಡೆಸುವ ಪಂಚಿಕೇಶ್ವರದ ಆಯಿಂದ್ರಪರ್ವದ ಧರ್ಮಕ್ಕೆ ಪೆರುಮಾಳೆ ಸಮುದ್ರದ ಕೆಳಗೆ ಸ್ವಲ್ಪ ಭೂಮಿಯನ್ನು ದತ್ತಿಯಾಗಿ ಬಿಟ್ಟದನ್ನು ' (ಚಿತ್ರದುರ್ಗ ೧೨) ಶಾಸನವು ತಿಳಿಸುತ್ತದೆ.[೮]

ಬೇಲೂರಿನ ಇನ್ನೊಂದು ಶಾಸನವು ' ಆ ಬಿಟ್ಟಿದೇವರಾಯರು ಪೂರ್ವದಲಾ ಕಲ್ಪಿಸಿದಂಥಾದೇವರ ವೇದಪಾರಾಯಣ। ಪಂಚಕೇಶ್ವರ। ಶ್ರೀ ಪಂಚರಾತ್ರ। ಶಾಸ್ತ್ರ ಮಂತ್ರ ಸಿದ್ಧಾಂತ ಮಾರ್ಗ್ಗ ಸಕಲ ಭೋಗ ನಿತ್ಯಾರ್ಚನ'[೯] ಎಂದು ವೇದ, ಆಗಮ ಇತ್ಯಾದಿಗಳ ಸಾಲಿನಲ್ಲಿ ಪಂಚಕೇಶ್ವರವನ್ನು ದಾಖಲಿಸಿದೆ.

ಕೆಲವು ಶಾಸನಗಳಲ್ಲಿ ಪಂಚಿಕೇಶ್ವರಕ್ಕೆ ಹೊಂದಿಕೊಂಡಂತೆ ದಾಖಲಾಗಿರುವ ಆಯಿಂದ್ರಪರ್ವ್ವ ಅಥವಾ ಯಿಂದ್ರಪರ್ವ ಮತ್ತು ಆರಣ ಪೂಜೆ ಎಂಬುದರ ಬಗ್ಗೆ ಇದಕ್ಕೆ ಪೂರಕವಾಗಿ ಗಮನಿಸುವುದು ಉಚಿತವೆನಿಸುತ್ತದೆ.

"ವರಣಾಕೃತ ಪೂಜಸ್ಯಾಂ ಆವರಣ ಪೂಜಿತಾ ವರ್ಣಾಜಿತ" (ಆರಣ ಪೂಜೆಯನ್ನು ಆವರಣ ಪೂಜೆಯೆಂದೂ ಕರೆಯುತ್ತಾರೆ) 'ಆವರಣ ದೇವತಾಯ ನಮಃ । ದ್ವಿತಿಯಾವರಣೇ ನಮಃ । ಶಂಖಾಯೇ ನಮಃ । ಪಂಚಕೇಶ್ವರ । ಗಜಕುಂಡಕ । ನಾಗಕುಂಡಕ। ದೈವೀಶಕ್ತಿಯಃ ಯಾ ಫಲ ಚಿಂತಾಗತಂ ನಾಸ್ತಿ ಸರ್ವಂ ಮಯಂ ನಾರಾಯಣ ರೂಪಂ।' ಆದಿಶಕ್ತಿ, ಶಿವಶಕ್ತಿ, ವೈಷ್ಣವಶಕ್ತಿ, ಗಜಶಕ್ತಿ ಮತ್ತು ನಿರ್ಲುಪ್ತಶಕ್ತಿ ಎಂಬ ಪಂಚಶಕ್ತಿಗಳ ಆರಾಧನೆಯೇ ಪಂಚಿಕೇಶ್ವರ ಪೂಜೆ.

ವಿಷ್ಣು ಮತ್ತು ಶಿವನನ್ನು ಏಕಕಾಲದಲ್ಲಿ ಆರಾಧಿಸುವುದೇ ಆರಣಪೂಜೆ. ಈ ಪೂಜೆಯನ್ನು ಇಂದ್ರನು ಸಂಧ್ಯಾಕಾಲದಲ್ಲಿ ನೆರವೇರಿಸಿದನೆಂದು ಪ್ರತೀತಿ ಇದೆ. ಈ ಆರಣ ಪೂಜೆಯು ಚೈತ್ರ, ಪುಷ್ಯ, ಮಾಘ ಮಾಸಗಳ ಮೂರು ತಿಂಗಳೂ, ಫಾಲ್ಗುಣದಲ್ಲಿ ಒಂದು ದಿನವೂ ನಡೆಯುತ್ತದೆ. ಚೈತ್ರ ಮತ್ತು ಪುಷ್ಯ ಮಾಸಗಳಲ್ಲಿ ಸಂಧ್ಯಾಕಾಲದಲ್ಲೂ ಮಾಘ ಮಾಸದಲ್ಲಿ ಪ್ರಾತಃಕಾಲದಲ್ಲೂ ಮತ್ತು ಫಾಲ್ಗುಣದಲ್ಲಿ ಒಂದು ದಿನ ಮಾತ್ರ ಮಧ್ಯಾಹ್ನ ಹನ್ನೆರಡು ಗಂಟೆಗೆ ನಡೆಯುವುದೆಂದು ತಿಳಿದುಬರುತ್ತದೆ. ಈ ಸಂದರ್ಭಗಳಲ್ಲಿ ಯಾವುದೇ ಪೂಜಾ ಸಾಮಗ್ರಿಗಳು ಪಂಚ ವಿಧಗಳನ್ನೊಳಗೊಂಡಿರುತ್ತವೆ.

ಇಂದ್ರಪರ್ವ ಅಥವಾ ಇಂದ್ರಪೂಜೆಯು ನವೆಂಬರ್ ಅಂತ್ಯದಿಂದ ಡಿಸೆಂಬರ್ ಆರಂಭದವರೆಗೆ ಪ್ರಾತಃಕಾಲ ಮತ್ತು ಸಂಧ್ಯಾಕಾಲಗಳಲ್ಲಿ ನಡೆಯುತ್ತದೆ. ಈ ಸಮಯದಲ್ಲಿ ಇಂದ್ರನನ್ನು ಗಜರೂಪದಲ್ಲಿ ಆವಾಹಿಸಿ, ಕ್ಷೀರ ನೈವೇದ್ಯದಿಂದ ಪೂಜಿಸಿ, ಕ್ಷೀರವನ್ನು ದೇವಾಲಯದ ಮುಂಭಾಗದಲ್ಲಿರುವ ಬಲಿಪೀಠಕ್ಕೆ ಅರ್ಪಿಸಿ ನಂತರ ಇತರ ಪೂಜಾಕಾರ್ಯಗಳನ್ನು ಕೈಗೊಂಡು ಕ್ಷೀರಾನ್ನದ ಪ್ರಸಾದವನ್ನು ವಿತರಿಸುತ್ತಾರೆ. ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ವರ್ಜ್ಯ ಮಾಡಿ ಕ್ಷೀರದಂತೆ ನಿರ್ಮಲವಾಗಿ ಶಾಂತಿಯು ಮನಸನ್ನು ತುಂಬಿ, ಪೂಜಾಕೈಂಕರ್ಯಗಳನ್ನು ಏಕಚಿತ್ತದಿಂದ ನಡೆಸುವಂತಾಗಲಿ ಎಂದು ಪ್ರಾರ್ಥಿಸುವ ಪೂಜೆಯೇ ಇಂದ್ರಪರ್ವ ಅಥವಾ ಇಂದ್ರ ಪೂಜೆ.[೧೦]

ಇಂದ್ರ ಪೂಜೆ ಅಥವಾ ಇಂದ್ರ ಪರ್ವವು ಪ್ರಾಚೀನ ಕಾಲದಲ್ಲಿ ಇಂದ್ರನ ಗೌರವಾರ್ಥ, ಪ್ರಮುಖವಾಗಿ ಅರಸರಿಂದಲೇ, ನಡೆಸಲ್ಪಡುತ್ತಿದ್ದ ಹಬ್ಬವೆಂದು ತಿಳಿದುಬರುತ್ತದೆ. ಇದು ಇಂದ್ರ ಧ್ವಜದ ಆರೋಹಣ ಮತ್ತು ಅವರೋಹಣ ಉತ್ಸವಗಳಿಗೆ ಸಂಬಂಧಿಸಿದ್ದು;[೨೫] ಹಾಗೂ ಇಂದ್ರಪರ್ವವೆಂದರೆ ತೀರ್ಥಂಕರನ ಜನ್ಮಾಭಿಷೇಕವಾದ ಮೇಲೆ ದೇವೇಂದ್ರನು ಮಾಡುವ ಆನಂದ ನೃತ್ಯ ಮತ್ತು ಹಬ್ಬವೆಂತಲೂ ಹೇಳಿದೆ. ಮಹಾಭಾರತದಲ್ಲಿ ಬರುವಂತೆ ಇದು ಆರಣೆಯ ಪೂಜೆಯ ಸಂದರ್ಭದಲ್ಲಿ ನಡೆಯುವ ಹಬ್ಬ ಎಂದೂ ತಿಳಿದು ಬರುತ್ತದೆ;[೧೨] ಎನ್ನುವ ಅಭಿಪ್ರಾಯಗಳೂ ಕಂಡುಬರುತ್ತವೆ.

ಈ ಎಲ್ಲಾ ವಿವರಗಳ ಪರಿಶೀಲನೆಯ ನಂತರ ಎರಡು ಹಂತಗಳಲ್ಲಿ 'ಪಂಚಿಕೇಶ್ವರ'ದ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಬಹುದಾಗಿದೆ. ಮೊದಲ ಹಂತದಲ್ಲಿ ' ಹೊಯ್ಸಣೇಶ್ವರ ದೇವರ ಪಂಚಿಕೇಶ್ವರದ ವೋದಿದ ಬ್ರಾಹ್ಮಣರ ಪೂಜೆಗೋಸುಗ' (ಬೇಲೂರು ೨೮೮) ; 'ಮತ್ತಂ ಅಲ್ಲಿ ಪಡಿಯ ಪೊನ್ನಂ ನೆರಪಿ ತಮ್ಮ ಮನೆಯಿಂ ಪಂಚಾಕೇಶ್ವರಮಮ್ ಪೊರಮಡಿಸಿ, ಓದಿಸಿ, ಆ ಅರ್ಥಮಂ ಪೂಜಿಸುವರು' (ಸಾಲೂರು ಕ್ರಿ.ಶ. ೮೭೦); ಮತ್ತು 'ದೇವರ ವೇದ ಪಾರಾಯಣ । ಪಂಚಕೇಶ್ವರ । ಶ್ರೀ ಪಂಚರಾತ್ರ । ಶಾಸ್ತ್ರ ಮಂತ್ರ ಸಿದ್ಧಾಂತ ಮಾರ್ಗ ಸಕಲ ಭೋಗ ನಿತ್ಯಾರ್ಚನ' (ಬೇಲೂರು ೧೪೪); ಎಂಬ ದಾಖಲೆಗಳಲ್ಲಿ '' ವೋದಿದ, ಓದಿಸಿ'' ಎಂಬ ಪದಗಳೊಂದಿಗೆ ವೋದಿದ ಬ್ರಾಹ್ಮಣರ ಪೂಜೆಗೋಸುಗ; ವೇದ, ಆಗಮ, ಶಾಸ್ತ್ರ ಮಂತ್ರಗಳ ಸಾಲಿನಲ್ಲಿ ದಾಖಲಾಗಿರುವ ಪಂಚಕೇಶ್ವರ; ಮತ್ತು ಆ ಅರ್ಥಮಂ ಪೂಜಿಸುವರು; ಎಂಬುದನ್ನು ಗಮನಿಸಿದಾಗ '' ಪಂಚಕೇಶ್ವರ'' ಎಂಬುದು ಪೂಜಾವಿಧಿ ವಿಧಾನಗಳ ವಿವರಣೆಯನ್ನೋ ಅಥವಾ ಮಂತ್ರಗಳನ್ನೋ ಒಳಗೊಂಡ ಗ್ರಂಥ ಅಥವಾ ತಾಡವೋಲೆ ಆಗಿರಬಹುದೆಂದು ಅರ್ಥೈಸುವುದರೊಂದಿಗೆ, ಗ್ರಾಮಸ್ಥರೆಲ್ಲರೂ ಭಾಗವಹಿಸುವ ಸಂಕೇತವಾಗಿ ಒಂದು ಪಡಿ (ಅರ್ಧಸೇರು) ಹೊನ್ನನ್ನು ಸಂಗ್ರಹಿಸಿ ಗ್ರಂಥವನ್ನು ಮೆರವಣಿಗೆ ಮಾಡಿಸಿ (ಪ್ರಾಯಃ ದೇವಾಲಯಕ್ಕೆ ತಂದು) ಅದರಲ್ಲಿರುವ ಪೂಜಾ ವಿಧಿ ವಿಧಾನಗಳ ಮಂತ್ರಗಳನ್ನು ಓದಿಸಿ (ಈಗಲೂ ಪದ್ಧತಿಯಲ್ಲಿರುವ ಯುಗಾದಿ ಹಬ್ಬದಂದು ನಡೆಸುವ ಪಂಚಾಗ ಶ್ರವಣದ ಸಂಪ್ರದಾಯದಂತೆ) ಆ ಹೊನ್ನನ್ನು ಪೂಜಿಸಿ (ಬಹುಶಃ ಲಕ್ಷ್ಮೀ ಪೂಜೆಗೆ ಸಂಬಂಧಿಸಿದ್ದಾಗಿರಬಹುದೆ?) ಮಂತ್ರಗಳನ್ನು ಹೇಳಿದ ಅಥವಾ ಗ್ರಂಥವನ್ನು ಓದಿದ ಬ್ರಾಹ್ಮಣರಿಗೆ ದಾನ ನೀಡುವ ಧಾರ್ಮಿಕ ಸಂಪ್ರದಾಯದ ಆಚರಣೆಯಾಗಿತ್ತೆಂದು ಊಹಿಸಬಹುದಾಗಿದೆ.

ಎರಡನೇ ಹಂತದಲ್ಲಿ, ಡಬ್ಲ್ಯೂ. ರೀವ್ ಅವರ ಇಂಗ್ಲಿಷ್-ಇಂಗ್ಲಿಷ್ ನಿಘಂಟುವಿನಲ್ಲಿ ' ಪಂಚ' ಎಂದರೆ 'ರೈತ' ಎಂಬ ಅರ್ಥವಿದ್ದು, ಈ ಹಿನ್ನೆಲೆಯಲ್ಲಿ ಬೇಲೂರಿನ (ಶಾ.ಸಂ. ೨೮೯, ೨೯೦, ೨೯೨ ಮತ್ತು ೨೯೩) ಶಾಸನಗಳಲ್ಲಿ ದಾಖಲಾಗಿರುವ (೧) ಶ್ರೀ ಪಂಚಕೇಶ್ವರ ಧರ್ಮಕ್ಕೆ ಕೊಟ್ಟ ಬೀಜವೊಂನು; (೨) ಪಂಚಕೇಶ್ವರ ಧರ್ಮ್ಮಖ ದವಿಸೆಯ ಪೂಜೆಗೆ ಬಿಟ್ಟಗದ್ಯಾಣ ನಾಲ್ಕು; ಮತ್ತು (೩) ಪಂಚಕೇಶ್ವರ ದೇವರದ ಧವಿಸೆಯ ಪೂಜೆಗೆ ಹೊಂಗೆ ವರಿಷಕ್ಕೆ ಹಣವೆರಡರ ಬಡ್ಡಿಯಲು; ಎಂಬುದನ್ನು ಗಮನಿಸಿದಾಗ, 'ಬೀಜವೊಂನು ಮತ್ತು ದವಿಸೆಯ ಪೂಜೆ' ಎಂಬ ಪದಗಳು ''ಪಂಚಕೇಶ್ವರ'' ಕ್ಕೆ ಹೊಂದಿಕೊಂಡಂತೆ ಒಳಕೆಯಾಗಿರುವುದರಿಂದ ಈ ಪಂಚಕೇಶ್ವರ ಪೂಜೆಯು ವ್ಯವಸಾಯಕ್ಕೆ ಸಂಬಂಧಿಸಿರಬಹುದೇ? ಎಂಬ ಅನುಮಾನವೂ ಮೂಡುತ್ತದೆ.

ಇದುವರೆಗಿನ ಲಭ್ಯಮಾಹಿತಿಗಳ ಅವಲೋಕನದಿಂದ, ಶಾಸನಗಳಲ್ಲಿ ದಾಖಲಾಗಿರುವ ರೂಪಗಳಾದ '' ಪಂಚಿಕೇಶ್ವರ, ಪಂಚಕೇಶ್ವರ, ಪಂಚಾಕೇಶ್ವರ'' ಗಳನ್ನು, ಮುಂದೆ ಇನ್ನೂ ಹೆಚ್ಚಿನ ಮಾಹಿತಿಗಳು ದೊರಕುವವರೆಗೆ, ' ಆರಂಭಕಾಲದಲ್ಲಿ ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಪೂಜಾ ವಿಧಿ ವಿಧಾನಗಳ ವಿವರಣೆಯನ್ನೋ ಅಥವಾ ಮಂತ್ರಗಳನ್ನೋ ಒಳಗೊಂಡು ಗ್ರಂಥ ಅಥವಾ ತಾಡವೋಲೆ ಆಗಿದ್ದು, ನಂತರದ ಕಾಲದಲ್ಲಿ ವ್ಯವಸಾಯ ಸಂಬಂಧೀದೇವರ ಪಟ್ಟಧರಿಸಿ, ಆನಂತರ ತನ್ನದೇ ಆದ ದೇವಾಲಯುವನ್ನೂ ಪಡೆದುಕೊಂಡಿತು ಎಂಬುದಾಗಿ ಅರ್ಥೈಸಬಹುದೆ? ತಾಡವೋಲೆಯ ಈ ಉಕ್ತ ಸಂಗತಿಗಳೇ ಈಶ್ವರ ಪ್ರೋಕ್ತವಾದದ್ದು ಎಂಬ ಹಿನ್ನೆಲೆಯಲ್ಲಿ ಆರಾಧನೆಯು ಆರಂಭವಾಗಿ, ಅದು ಮೂರ್ತ ಸ್ವರೂಪಕ್ಕೆ ಒಳಗಾದಾಗ ದೇಗುಲದ ನಿರ್ಮಾಣದಲ್ಲಿ ಪರ್ಯವಸಾನವಾಗಿರಬಹುದೆ? ಎನಿಸುತ್ತದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. (i) ಎಂ. ಎ. ಆರ್ (೧೯೨೭), ಪುಟ -೧೩೩, ಕ್ರಿ. ಶ. ೮೭೦ (ii) ಎಂ. ಚಿದಾನಂದ ಮೂರ್ತಿ : **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ೧೯೬೬, ಪು. ೧೯೪.

೨. ಎ.ಕ. ೯ (ಪರಿಷ್ಕೃತ), ಬೇಲೂರು ೨೮೮, ಕ್ರಿ.ಶ. ೧೨೩೧

೩. ಅದೇ ೨೮೯, ಕ್ರಿ.ಶ. ೧೨೩೭

೩ಅ. ಗ್ರಾಮದ ಸ್ಥಳೀಯರು ಗುರುತಿಸುವಂತೆ ದೇವಾಲಯವು ಪೂರ್ಣವಾಗಿ ಶಿಥಿಲವಾಗಿದ್ದು ದೇವಾಲಯದಲ್ಲಿ ವಿಷ್ಣು ಮತ್ತು ಶಿವ (ಹರಿ-ಹರ ಶಿಲ್ಪವಿರಬಹುದು), ಲಕ್ಷ್ಮೀನಾರಾಯಣ, ತ್ರಯಂಬಿಕಾದೇವಿ (ಕಾಳಿ) ಮತ್ತು ಗಜ ಶಿಲ್ಪಗಳಿದ್ದವು ಎಂದು ತಿಳಿದುಬರುತ್ತದೆ.

೪. ಎ.ಕ. VII ; (ಪರಿಷ್ಕೃತ) ನಾ.ಮಂ - ೭೪, ಬೆಳ್ಳೂರು ಕ್ರಿ.ಶ. ೧೨೭೧

೫. ಎ.ಕ. V ; ಚನ್ನರಾಯ ಪಟ್ಟಣ ೨೬೯, ಕ್ರಿ.ಶ. ೧೨೭೬

೬. ಅದೇ - ಬೇಲೂರು ೨೯೨, ಕ್ರಿ.ಶ. ೧೨೮೦

೭. ಅದೇ, ೨೯೩, ಕ್ರಿ.ಶ. ೧೨೮೪

೮. ಲಕ್ಷ್ಮಣ್ ತಲಗಾವಿ; - ಚಿತ್ರದುರ್ಗ ಬೆಟ್ಟದ ಪೆರುಮಾಳಿಪುರ: ಮರುಶೋಧನೆ; ಇತಿಹಾಸ ದರ್ಶನ, ಸಂಪುಟ - ೫ ; ೧೯೯೦

೯. ಅದೇ - ಬೇಲೂರು, ೧೪೪, ಕ್ರಿ.ಶ. ೧೩೯೭

೧೦. ನಾಗಮಂಗಲ ತಾಲ್ಲೂಕು ಬೆಳ್ಳೂರು ಗ್ರಾಮದ ಪ್ರಸನ್ನ ಮಾಧವ ದೇವಾಲಯದ ಅರ್ಚಕರಾದ ಶ್ರೀ ಎಸ್. ರಾಜಾಚಾರ್, ಆಗಮ ಪಂಡಿತರು, ಇವರು ಈ ಬಗ್ಗೆ ವಿವರಗಳನ್ನು ತಿಳಿಸಿ ಕ್ಷೇತ್ರಕಾರ್ಯದಲ್ಲಿ ಸಹಾಯ ಮಾಡಿದ್ದಕ್ಕಾಗಿ ಕೃತಜ್ಞತೆಗಳು.

೧೧. ಎ.ಕ. VII (ಪರಿಷ್ಕೃತ), ಪೀಠಿಕೆ, ಪುಟ - lXIV

೧೨. ಲಕ್ಷ್ಮಣ್ ತಲಗಾವಿ., ಪೂರ್ವೋಕ್ತ-ಪುಟ. ೧೩೦


ಪಿ.ವಿ. ಕೃಷ್ಣಮೂರ್ತಿ*

ಪ್ರಾಚೀನ ಭೌಗೋಳಿಕ - ಪ್ರಾದೇಶಿಕ ವಿಭಾಗಗಳಾಗಿ ಕಿಟಿಲೆ ಮತ್ತು ಕೆಟ್ಟಿಲಿನಾಡುಗಳು

ಪ್ರಾಚೀನತಮ ಸ್ಥಳನಾಮಗಳು; ಆ ಎಡೆಯ ಭೌಗೋಳಿಕ-ನೈಸರ್ಗಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತವೆ ಎಂಬುದು ಸ್ಥಳನಾಮ ವಿದ್ವಾಂಸರು ಕಂಡುಕೊಂಡಿರುವ ಸತ್ಯ ಸಂಗತಿ. ಈ ಸಂಗತಿ ಪ್ರಾಚೀನ ಪ್ರಾದೇಶಿಕ ವಿಭಾಗಗಳಿಗೂ ಅನ್ವಯವಾಗುತ್ತದೆ ಎಂಬುದು ಅಷ್ಟೇ ಸತ್ಯ. ವಿಶೇಷವಾಗಿ ಗಂಗವಾಡಿ ಪ್ರದೇಶದ ಪ್ರಾಚೀನತಮ ಶಾಸನೋಕ್ತ ಪ್ರಾದೇಶಿಕ ನಾಡುಗಳ ಹೆಸರುಗಳನ್ನು ಗಮನಿಸಿದರೆ, ಅವು ಆ ಪ್ರಾದೇಶಿಕ ವಿಭಾಗದ ಒಟ್ಟು ಭೌಗೋಳಿಕ - ನೈಸರ್ಗಿಕ ವೈಶಿಷ್ಟ್ಯವನ್ನು ಬಿಂಬಿಸುವುದು ಗೋಚರಿಸುತ್ತದೆ. ಉದಾಹರಣೆಗೆ: ಕುಕ್ಕಲನಾಡು, ಸೀಗಲನಾಡು, ಹೊಮ್ಮಳಿಗೆನಾಡು ತೊಜೆವಳಿನಾಡು ಮುಂತಾದವು. ಅಂತಹ ಭೌಗೋಳಿಕ ಪ್ರಾದೇಶಿಕ ವಿಭಾಗಗಳಲ್ಲಿ 'ಕಿಟಿಲೆನಾಡು' ಹಾಗೂ 'ಕೆಟ್ಗಲಿನಾಡು' ಎಂಬುವು ಕೂಡ ಗಮನಾರ್ಹವಾಗಿವೆ. ಈ ನಾಡುಗಳ ಭೌಗೋಳಿಕ ವ್ಯಾಪ್ತಿ, ನಾಮ ನಿಷ್ಪತ್ತಿ ಹಾಗೂ ಭೂವಿರವಣೆಯನ್ನು ಪರಿಶೀಲಿಸುವುದು ಪ್ರಸ್ತುತ ಕಿರು ಸಂಪ್ರಬಂಧದ ಆಶಯವಾಗಿದೆ.

ಕ್ರಿಸ್ತಶಕ ಸುಮಾರು ೭೯೦-೯೫ ರಲ್ಲಿ, ಗಂಗರ ಇಮ್ಮಡಿ ಶಿವಮಾರನ ಕಾಲದಲ್ಲಿ ಮಣಲೆ ಅರಸ (ಮಣಲೆ ಅರಸಕ್ರೂರ್ಮ್ಪಡಿಕಿಟಿಲೆ ನಾಡಾಳೆ) ಎಂಬುವನು ಕೂಮ್ಬಡಿ ಕಿಟಿಲೆನಾಡನ್ನು ಆಳುತ್ತಿದ್ದ ಎಂಬ ವಿವರ ಮೈಸೂರು ಜಿಲ್ಲೆಯ ತಿರುಮಕೂಡ್ಲು ನರಸೀಪುರ ತಾಲೂಕಿನ ವಿಜಯಪುರ ಗ್ರಾಮದ ಅರ್ಕೇಶ್ವರ ಗುಡಿ ಶಾಸನದಲ್ಲಿ[1] ಬಂದಿದೆ. ಸರಿಸುಮಾರು ಇದೇ ಕಾಲಕ್ಕೆ ಸೇರಿದ ವೀರಗಲ್ಲು ಶಾಸನವೊಂದು ರಾಮನಗರ ಸಮೀಪದ ಐಜೂರಿನ ಹನುಮಂತನಗರದಲ್ಲಿದ್ದು, ಕೆಟ್ಗಲಿನಾಡಿನ [2] ಕಲ್ಲೂರಿನ ಮುಗಚ್ಚವರ್ ಎಂಬುವನು ಕಣಕುಪ್ಪೆಯನ್ನು ಮುತ್ತಿ ಹೋರಾಡಿ ಮಡಿದ ವಿವರವನ್ನು ನೀಡುತ್ತದೆ.

'ಕಿಟಿಲೆನಾಡು' ಮತ್ತು 'ಕಿಟ್ಗಲಿ' ಎಂಬ ಈ ಎರಡೂ ಪ್ರಾಚೀನತಮ ಉಲ್ಲೇಖಗಳು ಮೇಲ್ನೋಟಕ್ಕೆ ಒಂದೇ ಎಂದು ತೋರಿದರೂ, ಈ ನಾಡುಗಳನ್ನು ಉಲ್ಲೇಖಿಸುವ ಶಾಸನಗಳು



* ಜಿಬಿಜೆ-೫೧೦, ೧೨ ನೇ ತಿರುವು, ಜವಾಹರನಗರ ೩ ನೇ ವಿಭಾಗ, ಮಾರತ್ತಹಳ್ಳಿ, ಬೆಂಗಳೂರು-೫೬೦ ೦೩೭

ದೊರೆತಿರುವ ಪ್ರದೇಶಗಳಲ್ಲಿ, ನಂತರ ಕಾಲದಲ್ಲಿ ದೊರೆತಿರುವ ಶಾಸನೋಲ್ಲೇಖಗಳನ್ನು ಪರಿಶೀಲಿಸಿದರೆ ಅವು ವಿಭಿನ್ನ ಪ್ರಾದೇಶಿಕ ಘಟಕಗಳಾಗಿರುವುದು ಕಂಡುಬರುತ್ತದೆ. ಅಂತೆಯೇ ಅವುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಸೂಕ್ತವೆಂದೆನಿಸುತ್ತದೆ.

ಕಿಟಿಲೆನಾಡು

'ಕಿಟಿಲೆನಾಡು' ಮತ್ತು ಅದರ ತಮಿಳೀಕರಣಗೊಂಡ ರೂಪ **'ಕಿಟಿಲೈನಾಟ್ಟು'** ಎಂಬುದು ಮೇಲೆ ಪ್ರಸ್ತಾಪಿಸಿದ ಕ್ರಿಸ್ತಶಕ ಸುಮಾರು ೭೯೦ರ ಗಂಗ ಶಿವಮಾರನ ಕಾಲದ ಮಣಲೆ ಅರಸರ ಕೂಮ್ಬಡಿಯ ಶಾಸನ ಮತ್ತು ಕ್ರಿಸ್ತಶಕ ೯೫೦ ರ ಪ್ರಸಿದ್ಧ ಆತಕೂರು ವೀರಗಲ್ಲು ಶಾಸನ,[೨] ನಂತರದಲ್ಲಿ ಕ್ರಿಸ್ತಶಕ ೧೦೦೨ರಿಂದ ಚೋಳರ ಹಾಗೂ ಕ್ರಿಸ್ತಶಕ ಸುಮಾರು ೧೧೩೦ ರಿಂದ ೧೨೬೦ರ ವರೆಗಿನ ಹೊಯ್ಸಳರ ಶಾಸನಗಳಲ್ಲಿ[೩] ಕಂಡುಬಂದಿದೆ. ಆ ಶಾಸನಗಳು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಮಳೂರು, ಮಳೂರುಪಟ್ಟಣ, ಹೊಂಗನೂರು, ತಾಳವಾಡಿ, ಮಂಗಾಪಟ್ಟಣ (ಕನ್ನಮಂಗಲ) ಕೂಡಲೂರು, ಬ್ಯಾಡರಹಳ್ಳಿ, ಹೊನ್ನಾಯಕನಹಳ್ಳಿ, ಬೇವೂರು, ಹರೂರು; ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಆತಕೂರು; ಮಳವಳ್ಳಿ ತಾಲೂಕಿನ ಹುಸ್ಕೂರು, ಅಂತರವಳ್ಳಿ ಗ್ರಾಮಗಳಲ್ಲಿ ಕಂಡುಬಂದಿದೆ. ಕ್ರಿಸ್ತಶಕ ೧೧೩೦ರ ನಂತರದ ಮದ್ದೂರು ತಾಲೂಕಿನ ವೈದ್ಯನಾಥಪುರ, ಬೊಪ್ಪಸಂದ್ರ, ಬೆಳ್ಳೂರು, ಮದ್ದೂರು, ಬಳಗರಹಳ್ಳಿ, ಕೌಡ್ಲೆ ಗ್ರಾಮಗಳಲ್ಲಿ; ಮಳವಳ್ಳಿ ತಾಲೂಕಿನ ಹುಲ್ಲಹಳ್ಳಿ ಮತ್ತು ಹುಲ್ಲೇಗಾಲ ಗ್ರಾಮಗಳಲ್ಲಿ ಹಾಗೂ ಚನ್ನಪಟ್ಟಣ ತಾಲೂಕಿನ ಕ್ರಿಸ್ತಶಕ ೧೩೬೯ರ ಮಳೂರುಪಟ್ಟಣ, ೧೩೯೫ ರ ಹರೂರು, ೧೫೭೩ ರ ಅಬ್ಬೂರು, ೧೫೩೪ ರ ಚಕ್ಕರೆ, ೧೬೬೦ ರ ನಾಗೋಹಳ್ಳಿ ಮತ್ತು ಇಗ್ಗಲೂರು ಗ್ರಾಮಗಳ ಶಾಸನಗಳಲ್ಲಿ ಕೆಳಲೆನಾಡು ಎಂಬ ಪ್ರಯೋಗ ಕಂಡುಬಂದಿದೆ.[೪] ಇದಲ್ಲದೆ ಕೈಟಿಲೆ[೫] ಕಲೆಳಿ,[೬] ಕೈಲ[೭] ಎಂಬ ಪರ್ಯಾಯ ರೂಪಗಳೂ ಶಾಸನಗಳಲ್ಲಿ ಉಕ್ತವಾಗಿವೆ.

ಕಿಟಿಲೆ/ಕೆಳಲೆನಾಡನ್ನು ಪ್ರಸ್ತಾಪಿಸುವ ಶಾಸನಗಳ ಭೌಗೋಳಿಕ ವಿವರಣೆಯನ್ನು ಗಮನಿಸಿದರೆ; ಆ ನಾಡಿನ ಪ್ರಾದೇಶಿಕ ವ್ಯಾಪ್ತಿಯನ್ನು ಈ ರೀತಿ ನಿರ್ಧರಿಸಬಹುದು: ಇಂದಿನ ಬೆಂಗಳೂರು ನಗರದ ನೈರುತ್ಯಕ್ಕೆ ಬರುವ ಚನ್ನಪಟ್ಟಣದ ಬಹುಭಾಗ, ಮದ್ದೂರು ಮಂಡ್ಯ, ಮಳವಳ್ಳಿ ತಾಲೂಕುಗಳ ಕೊಂಚಭಾಗ ಹಾಗೂ ತಿರುಮಕೂಡ್ಲು ನರಸೀಪುರ ತಾಲೂಕಿನ ಉತ್ತರ ಭಾಗಗಳು ಈ ಭೌಗೋಳಿಕ ವಿಭಾಗದಲ್ಲಿ ಅಂತರಗತವಾಗಿದ್ದು ಸಾಕಷ್ಟು ವಿಸ್ತಾರವಾಗಿದ್ದಿತೆನ್ನಬಹುದು. ಕ್ರಿಸ್ತಶಕ ೧೨೭೪ರ ಮದ್ದೂರು ಶಾಸನವು[೮] ಈ ನಾಡನ್ನು **'ಕೆಳಲೆ ಸಹಸ್ರ'** ಎಂದು ಕರೆದಿರುವುದು ಕಂಡುಬರುತ್ತದೆ. ಆದ್ದರಿಂದ ಇದು ಬಹುಮಟ್ಟಿಗೆ ಒಂದು ಸಾವಿರ ಗ್ರಾಮಗಳ ವ್ಯಾಪ್ತಿಯುಳ್ಳ ವಿಶಿಷ್ಟ ಭೌಗೋಳಿಕ ಪ್ರದೇಶವಾಗಿದ್ದಿತೆನ್ನಬಹುದು. **'ಕೆಳಲೆಯಹಳ್ಳಿ ಸೀಮೆ'** ಎಂಬ ಪ್ರಯೋಗ ಕೂಡ ಶಾಸನವೊಂದರಲ್ಲಿ[೯] ಬಂದಿದೆ.

ಕಿಟಿಲೆ / ಕಿಟಿಲೈ / ಕೆಳಲೆ ಎಂಬ ರೂಪಗಳನ್ನೊಳಗೊಂಡ ಶಾಸನಗಳು ದೊರತಿರುವ ಸ್ಥಳಗಳು ಬಹುಮಟ್ಟಿಗೆ ಶಿಂಷಾ ನದಿಯ ಎಡದಂಡೆ, ಅರ್ಕಾವತಿನದಿಯ ಬಲದಂಡೆಯ ಪ್ರದೇಶಗಳೂ ಸೇರಿದಂತೆ ಮಧ್ಯದಲ್ಲಿ ಬರುವ ಕಣ್ವಾನದಿಯ ಆಚೀಚಿನ ಪ್ರದೇಶಗಳಲ್ಲೇ ಅಂತರಗತವಾಗಿರುವುದು ಗಮನ ಸೆಳೆಯುತ್ತದೆ. ಈ ಪ್ರದೇಶದ ಭೌಗೋಳಿಕ ಸ್ವರೂಪವನ್ನು ಗಮನಿಸಿದರೆ ಇದು ಗಮನಾರ್ಹವಾಗಿ ತಗ್ಗು ಪ್ರದೇಶವಾಗಿದ್ದು ಚದುರಿದಂತೆ ವಿರಳವಾಗಿ ಬೆಟ್ಟಗುಡ್ಡಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಅಂತೆಯೇ ಈ ಪ್ರದೇಶವಾಚಿ 'ಕಿಟಿಲೆ' ಎಂಬುದು ನಿಶ್ಚಯವಾಗಿ ಇಲ್ಲಿನ ಭೂವೈಶಿಷ್ಟ್ಯತೆಯನ್ನು ಸೂಚಿಸುತ್ತದೆ ಎಂದೆನಿಸುತ್ತದೆ. 'ಕಿಟಿಲೆ' ಪದವು ಕೀಟ್+ಉಟಿ' ಎಂಬ ಎರಡು ಪದಗಳು ಸೇರಿ ರೂಪು ಗೊಂಡಿರಬೇಕು. 'ಕೀಟ್' ಅಥವಾ 'ಕಿಟ್' ಎಂದರೆ ತಗ್ಗಾದ ಅಥವಾ ಕೆಳಗೆ ಎಂಬರ್ಥವಿದೆ.. 'ಉಟಿ' ಎಂದರೆ ಸ್ಥಳ ಎಂದರ್ಥ [ಶಬ್ದಮಣಿ ದರ್ಪಣ, ಸೂತ್ರ ೩೩, ೪ನೇ ಅರ್ಥದ ಪ್ರಯೋಗ = " ಸ್ಥಾನವ್ಯಕ್ತಿಯಂ ಪೇಟ್ಟೊಡೆ ಉಟಿ," (ತ) ಉಟಿ=ಸ್ಥಳ] ಕೀಟ್+ಉಟಿ = ಕೀಟುಟಿ > ಕಿಟುಟಿ > ಕಿಟಿಲೆ> ಕೆಳಲೆ. ' ಕಿಟುಟಿ' ಎಂಬುದನ್ನು ತಗ್ಗಾದ ಪ್ರದೇಶ ಅಥವಾ ಕೆಳಗಿನಸೀಮೆ ಎಂದು ಅರ್ಥೈಸಬಹುದು. 'ಟ' ಕಾರ 'ಲ' ಕಾರವಾಗಿ ಹಾಗೂ 'ಇ' ಕಾರ 'ಎ' ಕಾರವಾಗಿ ಕಾಲಾಂತರದಲ್ಲಿ ಮಾರ್ಪಾಡುಗೊಂಡು ಬಳಕೆಯಾಗುವುದು ಸಾಮಾನ್ಯ. 'ಕಿಟುಟಿ' ಎಂಬ ಸಂಯುಕ್ತಪದದ ಅರ್ಥವನ್ನೇ ಹೋಲುವ ರೀತಿಯಲ್ಲಿ, ಉತ್ತರದಿಂದ ದಕ್ಷಿಣಕ್ಕೆ ಪ್ರವಹಿಸುವ ಅರ್ಕಾವತೀ, ಕಣ್ವಾ ಹಾಗೂ ಶಿಂಷಾನದಿಗಳ ಕಣಿವೆಯ ಪ್ರದೇಶವಿದ್ದು ಗಮನ ಸೆಳೆಯುತ್ತದೆ.

ನದಿಯ ಕಣಿವೆ ಪ್ರದೇಶ ತಗ್ಗಾಗಿರುವುದು ಸಹಜ ಆದರೆ ಶಾಸನಗಳಲ್ಲಿ ವಿಶಿಷ್ಟವಾಗಿ (ಕಿಟುಟಿ>) ಕಿಟಿಲೆ = ತಗ್ಗು ಪ್ರದೇಶವೆಂದು ಕರೆದಿರುವುದರ ವಿಶೇಷವೇನು? ಎಂಬುದನ್ನು ಪರಿಶೀಲಿಸುವ ಸಲುವಾಗಿ ಕರ್ನಾಟಕದ ಭೂಸ್ವರೂಪದ ಮೇಲ್ಮೈಲಕ್ಷಣವನ್ನು ಸೂಚಿಸುವ ನಕ್ಷೆಯನ್ನು[೧೦] ಪರಿಶೀಲಿಸಿದಾಗ, ಈ ಶಾಸನೋಕ್ತ ಕಿಟಿಲೆನಾಡು ಪ್ರದೇಶವು ಕಾವೇರಿ ನದಿಗೆ ನಿರುಣಿಸುವ ಗಮನಾರ್ಹ ಉಪನದಿಗಳಲ್ಲಿ ಒಂದಾದ ಶಿಂಷಾ, ಅದರ ಉಪನದಿ ಕಣ್ವಾನದಿ ಹಾಗೂ ಅರ್ಕಾವತೀನದಿಗಳ ತಗ್ಗು ಪ್ರದೇಶವಾಗಿರುವುದು ಕಂಡುಬಂದಿತು. ಆ ಪ್ರದೇಶವು ಸಮುದ್ರ ಮಟ್ಟದಿಂದ ಕೇವಲ ೬೪೦ ಮೀಟರುಗಳಿಂದ ೭೦೦ ಮೀಟರುಗಳಷ್ಟು ಮಾತ್ರ ಎತ್ತರವಿರುವುದಾಗಿದೆ. ಇದರ ನೆರೆಹೊರೆಯ ಪ್ರದೇಶಗಳಾದ ಪೂರ್ವಕ್ಕಿರುವ ಕನಕಪುರದ ಪೂರ್ವಭಾಗ, ಉತ್ತರಕ್ಕಿರುವ ಬೆಂಗಳೂರು, ಮಾಗಡಿ; ಪಶ್ಚಿಮದ ಮಂಡ್ಯ ತಾಲೂಕು ಪ್ರದೇಶಗಳು ದಿಢೀರನೇ ೮೮೪ರಿಂದ ೯೧೫ ಮೀಟರುಗಳಷ್ಟು ಎತ್ತರವಿರುವುದು ಕಂಡುಬರುತ್ತದೆ. ಈ ರೀತಿ ವಿಶಿಷ್ಟವಾಗಿ ಸರಾಸರಿ ೧೮೩ರಿಂದ ೨೧೩ ಮೀಟರುಗಳಷ್ಟು ತಗ್ಗಿನಲ್ಲಿರುವ ಪ್ರದೇಶವನ್ನು ಪ್ರಾಚೀನ ಕಾಲದಲ್ಲೇ ತಗ್ಗು ಪ್ರದೇಶವೆಂದು ಶಾಸನಗಳಲ್ಲಿ ದಾಖಲಿಸಿರುವುದು

ನಮ್ಮ ಪೂರ್ವಿಕರ ನಿಸರ್ಗನಿಷ್ಠತೆಯನ್ನೂ ಭೌಗೋಳಿಕ ಪರಿಜ್ಞಾನವನ್ನೂ ವಸ್ತುನಿಷ್ಠವಾಗಿ ಬಿಂಬಿಸಿರುವುದು ವಿಸ್ಮಯವನ್ನುಂಟುಮಾಡುತ್ತದೆ.

ಕೆಟ್ಗಲಿ ನಾಡು

ಕೆಟ್ಗಲಿನಾಡ ಉಲ್ಲೇಖವು ಮೊದಲಿಗೆ ರಾಮನಗರದ ವಿಸ್ತರಣವಾದ ಐಜೂರು ಹನುಮಂತನಗರ ಗ್ರಾಮದಲ್ಲಿ ದೊರೆತ ಕ್ರಿಸ್ತಶಕ ಸುಮಾರು ೭೫೦ರ ವೀರಗಲ್ಲು ಶಾಸನದಲ್ಲಿ ಬಂದಿದೆ. ಈ ತಾಲೂಕಿನ ವಡವಟ್ಟದ ಕ್ರಿಸ್ತಶಕ ೧೩೩೫ರ ಶಾಸನದಲ್ಲಿ[೧೨] 'ಕಲುವೊಳೆ'ನಾಡು ಎಂಬ ಉಲ್ಲೇಖವಿದೆ. ಕ್ರಿಸ್ತಶಕ ೧೩೫೧ ರ ಐಜೂರಿನ ಶಾಸನದಲ್ಲಿ 'ಕಲುವಳಿ' ಎಂಬ ಪ್ರಯೋಗ[೧೩] ಬಂದಿದೆ. ಕಲುವಳಿ <ಕಲುವೊಳೆ< ಎಂಬುವು ಕೆಟ್ಗಲಿ ಎಂಬುದರಿಂದಲೇ ರೂಪಾಂತರಗೊಂಡಿರಬೇಕು. ಇದರ ಮೂಲರೂಪವಾದ ಕೀಟ್ + ಕಲ್ + ಉಟಿ = ಕೀಟ್ಕಲುಟಿ ಎಂಬುದರಿಂದ, ಅಂದರೆ ಕಿಟ್ಕಲುಟಿ > ಕೆಟ್ಗುಟಿ > ಕೆಟ್ಗಲಿ ಎಂದಾಗಿ ನಂತರದಲ್ಲಿ ಕಲುವೊಳೆ, ಕೆಲುವಳಿ, ಕಲುವಳಿ ಕೆಳವಲ ಎಂಬ ಪ್ರಯೋಗಗಳು ಕ್ರಮವಾಗಿ ಬೆಳತೂರು, ವಡವಟ್ಟ, ಅಕ್ಕೂರು, ಮಾಗೇನಹಳ್ಳಿ ಗ್ರಾಮಗಳಲ್ಲಿ ದೊರೆತ ಶಾಸನಗಳಲ್ಲಿ ಬಂದಿದೆ. ಈ ಗ್ರಾಮಗಳೆಲ್ಲವೂ ಅರ್ಕಾವತಿ ನದಿಯ ಬಲದಂಡೆ ಹಾಗೂ ಕಣ್ವಾ ನದಿಯ ಎಡದಂಡೆಯ ಕಡೆಗಿದ್ದು ಕಿಟಿಲೆನಾಡಿನಂತೆ ಸಾಕಷ್ಟು ತಗ್ಗು ಪ್ರದೇಶವಾಗಿದ್ದು ಜೊತೆಗೆ ಹೆಚ್ಚಿನ ಸಂಖ್ಯೆಯ ಕಲ್ಲು ಬಂಡೆಗಳಿಂದ ಬೆಟ್ಟಗುಡ್ಡಗಳಿಂದ ಕೂಡಿರುವುದು ಕಂಡುಬರುತ್ತದೆ. ಅಂತೆಯೇ ಈ ಪ್ರದೇಶವು ಬೆಂಗಳೂರು ನಗರಕ್ಕೆ ನೈರುತ್ಯಕ್ಕೆ ಬರುವ ರಾಮನಗರ ತಾಲೂಕಿನ ಬಹುಭಾಗವನ್ನು ಒಳಗೊಂಡಿರುವುದು ಕಂಡುಬರುತ್ತದೆ. ಶ್ರೀ ಎಂ. ಜಿ. ನಾಗರಾಜ್ ಅವರು ತಮ್ಮ ಒಂದು ಲೇಖನದಲ್ಲಿ[೧೪] ಈ ಕೆಟ್ಗಲಿ ನಾಡನ್ನು ಕುರಿತು ಪ್ರಸ್ತಾಪಿಸುತ್ತಾ 'ಬಂಡೆಗಳ ನಾಡು ಕಲುವಳಿನಾಡು' ಎಂಬುದಾಗಿ ಗುರುತಿಸಿರುತ್ತಾರೆ.

ನಮ್ಮ ಕರ್ನಾಟಕದ ಪ್ರಾಚೀನ ಅರಸುಮನೆತನಗಳಲ್ಲಿ ಒಬ್ಬರಾದ ಗಂಗರು ತಮ್ಮ ಆಳಿಕೆಗೆ ಒಳಪಟ್ಟಿದ್ದ ಗಂಗವಾಡಿ ಪ್ರಾಂತದಲ್ಲಿನ ಅನೇಕ ಪ್ರಾದೇಶಿಕ ವಿಭಾಗಗಳನ್ನು, ಸ್ಥಳೀಯ ನೈಸರ್ಗಿಕ ಲಕ್ಷಣಗಳ ಹಿನ್ನೆಲೆಯಲ್ಲೇ ಹೆಸರಿಸುತ್ತಿದ್ದರೆಂಬುದಕ್ಕೆ ಈ ಕಿಟಿಲೆ ಹಾಗೂ ಕೆಟ್ಗಲಿನಾಡುಗಳೇ ಸಾಕ್ಷಿಯಾಗಿವೆ. ಹೀಗೆ ಗಂಗ ಅರಸರ ನೈಸರ್ಗಿಕ ನಿಷ್ಠೆ ಹಾಗೂ ಪ್ರಕೃತಿಪ್ರೇಮ ಅವರ ಪ್ರಾದೇಶಿಕ ವಿಭಾಗ ಹೆಸರುಗಳಲ್ಲೂ ಸುವ್ಯಕ್ತವಾಗಿದೆ. *

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ ೫, ತಿ. ನರಸೀಪುರ ೧೪೫, ಸು. ೯ನೇ ಶತಮಾನ

೨. ಶ್ರೀ ಎಂ. ಜಿ. ನಾಗರಾಜ್ ಅವರು ೧೯೭೭ರಷ್ಟು ಹಿಂದೆಯೇ ಶೋಧಿಸಿದ್ದ ಈ ವೀರಗಲ್ಲು ಶಾಸನ, ದಿನಾಂಕ ೩೧-೮-೮೦ ಉದಯವಾಣಿ ದಿನಪತ್ರಿಕೆಯ ಮ್ಯಾಗಸಿನ್ ವಿಭಾಗದಲ್ಲಿ ಬೆಳಕು ಕಂಡಿರುತ್ತದೆ. (**ರಾಮನಗರದ ಶಾಸನ - ಪೂರ್ವ ಹಳೆಗನ್ನಡ ಭಾಷೆ - ಲಿಪಿಗಳಿಗೆ ಒಂದು ಕೊಡುಗೆ**)

೩. **ಎಪಿಗ್ರಾಫಿಯಾ ಕರ್ನಾಟಕ**, ಸಂಪುಟ ೭, ಮದ್ದೂರು ೪೨

೪. ಅದೇ, ಸಂಪುಟ IX, ಚನ್ನಪಟ್ಟಣ ೧೩೨, ೧೩೦,೧೨೮, ೮೭, ೧೨೯, ೧೩೯, ೧೨೭, ೯೧, ಅದೇ, ಸಂಪುಟ-೭, ಮದ್ದೂರು ೪೨; ಮಳವಳ್ಳಿ ೨೯ ಮತ್ತು ೩೪

೫. ಅದೇ ಸಂಪುಟ IX, ಚನ್ನಪಟ್ಟಣ ೮೨, ೯೫, ೩೭, ೧೪೮, ೧೪೯, ೧೪೭, ೧೫೩, ೧೫೫, ೨೬, ೬೨, ಅದೇ, ಸಂಪುಟ ೭, ಮದ್ದೂರು ೬೮, ೧೧೫, ೭೮, ೬೯, ೭೫, ೧೦೮; ಮಳವಳ್ಳಿ ೨೮, ೩೯ ಇತ್ಯಾದಿ

೬. ಅದೇ, ಸಂಪುಟ IX, ಚನ್ನಪಟ್ಟಣ ೪೨, ಕ್ರಿ.ಶ. ೧೦೧೮

೭. ಅದೇ, ೧೮೧, ಕ್ರಿ.ಶ. ೧೫೩೦

೮. ಅದೇ, ೧೮೬, ಕ್ರಿ.ಶ. ೧೫೫೮

೯. ಅದೇ, ಸಂಪುಟ ೭, ಮದ್ದೂರು ೧

೧೦. ಅದೇ, ಮದ್ದೂರು ೨೩

೧೧. ಪ್ರೊ॥ ಟಿ. ಎಸ್. ಅಚ್ಯುತರಾವ್, **ಕರ್ನಾಟಕ ಪ್ರಾದೇಶಿಕ ಭೂಗೋಳ**, ಕ.ವಿ.ವಿ ಧಾರವಾಡ, ಪು. ೯ ಎದುರು (ನಕ್ಷೆ)

೧೨. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ IX, ಚನ್ನಪಟ್ಟಣ ೧೭೮ (ರೈಸರ ರೀತ್ಯಾ ಶಾಸನದ ಕಾಲ ಕ್ರಿ.ಶ. ೧೩೩೫; ಶಾಸನದ ರೀತ್ಯಾ ಕ್ರಿ.ಶ. ೧೨೩೬ = ಕ್ರಿ.ಶ. ೧೩೧೫ ಆಗಿದೆ.)

೧೩. ಅದೇ. ೧೬

೧೪. ಎಂ. ಜಿ. ನಾಗರಾಜ್, **ಪ್ರಾಚೀನತೆಯ ವಿಕಸನದಲ್ಲಿ ಬೆಳಕಾಗಿ ಬಂದ ಅರ್ವಾಚೀನ ಬೆಂಗಳೂರು ಜಿಲ್ಲೆ**, 'ಅಂಬಾರಿ', ಬೆಂಗಳೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಆನೇಕಲ್, ೧೯೮೧

ಡಾ॥ ಪಿ.ಎಸ್. ವಾಸುದೇವನ್ *

ಎಡೆನಾಡು - ಒಂದು ಆಡಳಿತಾಂಗ ವಿಭಾಗ - ಒಂದು ಅಧ್ಯಯನ

ಒಂದು ಸಾಮ್ರಾಜ್ಯದ ಅಥವಾ ರಾಷ್ಟ್ರದ ಆಡಳಿತವನ್ನು ತೃಪ್ತಿಕರವಾಗಿಯೂ ದಕ್ಷವಾಗಿಯೂ, ಆಡಳಿತಾತ್ಮಕ ಲೋಪ ದೋಷಗಳು ಬಾರದಂತೆ ನಿರ್ವಹಿಸಲು ಒಂದು ಸಾಮ್ರಾಜ್ಯವನ್ನು ಶ್ರೇಣೀಕೃತವಾಗಿ ವಿಭಜಿಸಿಕೊಂಡು ಆಡಳಿತವನ್ನು ನಿರ್ವಹಿಸು ತ್ತಿದ್ದುದು ಇತಿಹಾಸದಿಂದ ತಿಳಿದು ಬಂದ ವಿಷಯವೇ ಆಗಿದೆ. ಇತಿಹಾಸ ಮತ್ತು ಮಧ್ಯಕಾಲೀನ ಇತಿಹಾಸದಲ್ಲಿ ರಾಜ್ಯವನ್ನು ಸಮರ್ಪಕವಾಗಿ ವಿಭಜಿಸಿ ಆಡಳಿತ ನಿರ್ವಹಣೆಯಲ್ಲಿ ಒಂದು ಹೊಸ ಆಯಾಮವನ್ನು ಅಂದಿನ ಆಡಳಿತಗಾರರು ಸೃಷ್ಟಿಸಿ ಕೊಟ್ಟಿದ್ದಾರೆಂದರೆ ತಪ್ಪಾಗಲಾರದು. ಪ್ರಮುಖವಾಗಿ ಮಧ್ಯಕಾಲೀನ ಇತಿಹಾಸಕಾಲದ ಆಡಳಿತ ನಿರ್ವಹಣೆಯನ್ನು ಪರಿಶೀಲಿಸಿದಾಗ, ರಾಜ್ಯವನ್ನು, ನಾಡು, ಮಂಡಲ, ವಿಷಯ, ಸೀಮೆ, ವೇಂಟೆ, ಚಾವಡಿ, ವಳಿತ, ಸ್ಥಳ, ನಗರ, ಗ್ರಾಮ, ಹಳ್ಳಿ, ಮುಂತಾಗಿ ನಿರ್ದಿಷ್ಟ ಶ್ರೇಣಿಕೃತ ವಿಭಾಗಗಳನ್ನಾಗಿ ವಿಭಜಿಸಿ ರಾಜ್ಯವನ್ನು ಪರಿಪಾಲಿಸಿರು ವುದು ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ.

ಈ ವ್ಯವಸ್ಥೆಯನ್ನು ಎಲ್ಲಾ ಅರಸು ಮನೆತನದವರು ನಡೆಯಿಸಿಕೊಂಡು ಬಂದು ಕಾಲದಿಂದ ಕಾಲಕ್ಕೆ ಮತ್ತು ಒಂದು ಅರಸು ಮನೆತನದಿಂದ ಮತ್ತೊಂದಕ್ಕೆ ಅದು ಸಾಕಷ್ಟು ರೂಪಾಂತರ ಗೊಳ್ಳುತ್ತಲೇ ಬಂದಿರುವುದು ಗಮನಾರ್ಹ. ಆಡಳಿತ ವಿಭಾಗ ಅಥವಾ ಭೌಗೋಳಿಕ ವಿಭಾಗವೇ ಆಗಲಿ ಕಾಲಾನುಕ್ರಮದಲ್ಲಿ ಅದರ ವ್ಯಾಪ್ತಿ ಭಾಷಿಕವಾಗಿ ಮತ್ತು ಹೆಸರುಗಳಲ್ಲಿ ಕೆಲವೊಂದು ಸಣ್ಣಪುಟ್ಟ ಮಾರ್ಪಾಟುಗಳು ಆಗುತ್ತಿದ್ದವು.[೧] ಈ ಹಿನ್ನೆಲೆಯಲ್ಲಿ ಎಡೆನಾಡು ಅಥವಾ ಎಡತೊರೆನಾಡು ಎಂಬ ಒಂದು ಆಡಳಿತ ವಿಭಾಗವನ್ನು ಕುರಿತು ಚರ್ಚಿಸುವುದೇ ಈ ಲೇಖನದ ಉದ್ದೇಶ.

ಆಡಳಿತ ವಿಭಾಗವಾದ ಎಡೆನಾಡು, ಮೈಸೂರು ಜಿಲ್ಲೆಯ, ನಂಜನಗೂಡು, ಚಾಮರಾಜನಗರ, ತೀ. ನರಸೀಪುರ, ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳಲ್ಲಿರುವ ಶಾಸನಗಳಲ್ಲಿ ಎಡೆನಾಡು, ಎಡೆತೊರೆನಾಡು,ಎಡತೊಜ಼್‌ನಾಡು, ಎಡದೊರೆನಾಡು, ಎಡದೊಜ಼್‌ನಾಡು ಎಂದು ಶಾಸನಗಳಲ್ಲಿ ಉಕ್ತವಾಗಿದೆ. ಎಡೆನಾಡಿನ ಮೊದಲ ಉಲ್ಲೇಖವು ಬಸವನಪುರದ ೭-೮ ನೇ ಶತಮಾನದ ತಾಮ್ರಪಟ ಶಾಸನದಲ್ಲಿ ಉಲ್ಲೇಖವಾಗಿದ್ದು[೨] ಅಲ್ಲಿಂದ ಸುಮಾರು ೧೬ನೇ ಶತಮಾನದವರೆಗೆ ಶಾಸನಗಳಲ್ಲಿ ಸತತವಾಗಿ ಅದರ ಪ್ರಸ್ತಾಪನೆಯನ್ನು ಗಮನಿಸಬಹುದಾಗಿದೆ[೩] ಅಂದರೆ ಈ ವಿಭಾಗವು ಸರಿಸುಮಾರು ೯೦೦ ವರ್ಷಗಳವರೆಗೆ ಹೆಚ್ಚಿನ ಬದಲಾವಣೆಗಳಿಲ್ಲದೆ ಎಲ್ಲಾ ಅರಸು ಮನೆತನದವರು ಸದರಿ ಆಡಳಿತ ವಿಭಾಗವನ್ನು ಉಳಿಸಿಕೊಂಡು ಬಂದಿರುವುದು ಸಾಬೀತಾಗುತ್ತದೆ.

ಪುನ್ನಾಟರ[೪] ಆಳ್ವಿಕೆಗೊಳಪಟ್ಟ ಪ್ರದೇಶವಾದ ಈ ಭಾಗವು ತರುವಾಯ ಗಂಗರ ಅಧೀನಕ್ಕೊಳಗಾಯಿತು.[೫] ಗಂಗರು ರಾಷ್ಟ್ರಕೂಟ ಅರಸರಿಗೆ ಮಣಿದಾಗ ಈ ಪ್ರದೇಶವು ಸ್ವಲ್ಪ ಕಾಲದವರೆಗೂ ಅವರ ಅಧೀನದಲ್ಲಿದ್ದಿದ್ದು ಶಾಸನೋಕ್ತ ವಿಷಯವಾಗಿದೆ.[೬] ಕಾಲಕ್ರಮದಲ್ಲಿ ಎಡೆನಾಡನ್ನು ಒಳಗೊಂಡ ಪ್ರದೇಶವು ಹೊಯ್ಸಳ[೭] ಹಾಗೂ ಚೋಳರ ಆಳ್ವಿಕೆಗೊಳಗಾಯಿತು.[೮] ಅಧಿಕವಾಗಿ ಹೊಯ್ಸಳರ ಮತ್ತು ಚೋಳರ ಆಳ್ವಿಕೆಯಲ್ಲಿಯೇ ವಿಭಾಗವು ಇದ್ದಿತು.

ಎಡತೊರೆನಾಡು,[೯] ಎಡದೊರೆನಾಡು, ಎಡತೊಜ಼್, ಎಡೆನಾಡು,[೧೦] ಎಡದೊಜ಼್ ನಾಡು[೧೧] ಎಂದು ಪ್ರತ್ಯೇಕವಾಗಿಯೂ, ಅದರ ಜೊತೆಗೆ ಸ್ಥಳನಾಮದೊಂದಿಗೆ ಕಲೆತು ಶಾಸನಗಳಲ್ಲಿ ಉಕ್ತವಾಗಿದೆ.[೧೨] ಎಡತೊರೆ/ಎಡದೊರೆನಾಡು; ತಮಿಳು ಭಾಷೆಯಲ್ಲಿ ಇರುವ ಶಾಸನಗಳಲ್ಲಿ ತಮಿಳೀಕರಣಗೊಂಡು, ಇಡೈತುರೈನಾಡು,[೧೩] ಇಡೈನಾಡು,[೧೪] ಎಂದು ಉಲ್ಲೇಖಿಸಲ್ಪಟ್ಟಿದೆ. ಎಡತೊರೆನಾಡು ಹಾಗೂ ಎಡೆನಾಡು ಒಂದೇ ಆಗಿದ್ದು, ಶಾಸನಗಳಲ್ಲಿ ಎರಡು ರೀತಿಯಾಗಿಯೂ ಕಾಣಿಸಿಕೊಳ್ಳುತ್ತದೆ.

ಎಡೆನಾಡಿಗೆ ಸಂಬಂಧಿಸಿದಂತೆ ದೊರಕಿರುವ ಶಾಸನಗಳನ್ನು ಅಧ್ಯಯನದಿಂದ ಎಡೆನಾಡಿನ ಪರಿಚಯವನ್ನು ಶಾಸನಗಳ

* ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಕಾಮಲಾಪುರ - ೫೮೩ ೨೭೬

ಹಿನ್ನೆಲೆಯಲ್ಲಿ ಮಾಡಿಕೊಳ್ಳಬಹುದಾಗಿದೆ. ಸುಮಾರು ೪೫ ಕ್ಕೂ ಮಿಗಿಲಾದ ಶಾಸನಗಳು ಎಡನಾಡಿನ ಬಗೆಗೆ ಉಲ್ಲೇಖಿಸುತ್ತವೆ. ಎಡೆನಾಡು, ಪ್ರಾರಂಭದಲ್ಲಿ ಒಂದು ಚಿಕ್ಕ ಅರಸುಮನೆತನವಾದ ಪುನ್ನಾಟರ ಕಾಲದಲ್ಲಿ ಆಡಳಿತ ವಿಭಾಗವಾಗಿದ್ದು, ನಂತರದಲ್ಲಿ ಪ್ರಾಮುಖ್ಯವನ್ನು ಪಡೆಯಿತು. ಚೋಳರ ಕಾಲದಲ್ಲಿ ಈ ವಿಭಾಗವು ಗಂಗೈಕೊಂಡ ಚೋಳ ವಳನಾಡಿಗೆ ಸೇರಿದ ಇಡೈನಾಡು (ಎಡೆನಾಡು) ಆಗಿದ್ದಿತು.[೧೫] ಸುಮಾರು ೧೩ನೆಯ ಶತಮಾನದ ಹೊತ್ತಿಗೆ, ಅದು ಪೂರ್ಣಪ್ರಮಾಣದ ನಾಡಾಗಿ ಪರಿವರ್ತನೆ ಹೊಂದಿತು. ಈ ನಾಡನ್ನು 'ಎಡತೊರೆನಾಡು ವಿಷಯ'[೧೬] ಹಾಗೂ 'ಎಡನಾಡು ಸೀಮೆ'[೧೭] ಎಂದು ಸಹ ಉಲ್ಲೇಖಿಸಲ್ಪಟ್ಟಿದೆ. ಪ್ರಸ್ತುತ ಚರ್ಚಿಸಲ್ಪಡುತ್ತಿರುವ ಆಡಳಿತ ವಿಭಾಗದ ಶಾಸನಗಳು ಬೇರೆ ಪ್ರಾಂತ್ಯದಲ್ಲಿ ದೊರೆಯುವ ಶಾಸನಗಳಿಗಿಂತ ಭಿನ್ನವಾಗಿಲ್ಲದೆ, ದಾನ, ಕ್ರಯ, ಮುಂತಾದ ತತ್ಸಂಬಂಧಿ ವಿಷಯಗಳನ್ನು ಉಲ್ಲೇಖಿಸುವ ಲಿಖಿತಾಧಾರಗಳಾಗಿವೆ.

ಎಡತೊರೆನಾಡು, ಎಡೆನಾಡು ಪದದ ನಿಷ್ಪತ್ತಿಯು ಈ ರೀತಿಯಾಗಿದೆ: ಎಡ(ಡೆ) + ತೊ(ದೊ)ರೆ + ನಾಡು ಎಂಬ ಎರಡು ಪದಗಳಿಂದ ಕೂಡಿದೆ. ಎಡ ಎಂದರೆ ಎಡೆಯಲ್ಲಿ ಇರುವ ಸ್ಥಳವೆಂದು, ಎಡತೊರೆ, ಎಡದೊರೆ ಎಂದರೆ ಎರಡು ನದಿಗಳ / ತೊರೆಗಳ ನಡುವಿನ ಪ್ರದೇಶಕ್ಕೆ ಎಡೆತೊರೆ ಎಂದು ಹೆಸರು. ಎಡ ಎಂದರೆ ಎಡಗಡೆ ಇರುವುದು ಎಂಬುದಾಗಿಯೂ ಈ ಉದಾಹರಣೆಯಲ್ಲಿ ರಾಜ್ಯದ ಎಡಗಡೆ ಇರುವ ನಾಡು ಎಂದು ಸಹ ಅರ್ಥೈಸಬಹುದಾಗಿದೆ. ಇವೆರಡಲ್ಲದೆ, ನದಿಯ ಅಥವಾ ತೊರೆಯ ಎಡಭಾಗದಲ್ಲಿರುವ ನಾಡು ಎಂದು ಅಭಿಪ್ರಾಯ ಪಡಬಹುದು. ಆದರೆ ಎಡೆತೊರೆನಾಡಿನ ಊರುಗಳು ನದಿಯ ಎಡಭಾಗಕ್ಕೆ ಮತ್ತು ಎರಡು ತೊರೆಗಳ ನಡುವಿಗೆ ಮಾತ್ರ ಸೀಮಿತವಾಗಿಲ್ಲ. ತೊರೆಯಿಂದ ಬಲಕ್ಕೆ ಹಾಗೂ ನದಿಯಿಂದ ಸ್ವಲ್ಪ ದೂರದಲ್ಲಿಯೂ ಇದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ಭೌಗೋಳಿಕ ಪರಿಸರವನ್ನು ಗಮನಿಸುವುದು ಅಗತ್ಯ. ಈ ಭೂಭಾಗದಲ್ಲಿ ಕಾವೇರಿ ಮತ್ತು ಕಪಿಲಾ ನದಿಗಳು ಪೂರ್ವಾಭಿಮುಖವಾಗಿ ಹರಿಯುತ್ತವೆ. ಎರಡೂ ನದಿಗಳ ನಡುವಿನ ಪ್ರದೇಶಕ್ಕೆ ಎಡತೊರೆನಾಡು ಎಂದು ಹೆಸರಿಸಿರುವುದು ಅರ್ಥಪೂರ್ಣವಾಗಿದೆ. ಎಡೆತೊರೆ / ಎಡೆನಾಡಿನ ಉಲ್ಲೇಖವಿರುವ ಶಾಸನಗಳು ದೊರಕಿರುವ ಊರುಗಳು ಈ ಎರಡು ನದಿಗಳ ನಡುವಿನ ಪ್ರದೇಶವಾಗಿರುವುದು ನಮ್ಮ ವಾದಕ್ಕೆ ಹೆಚ್ಚು ಪುಷ್ಟಿಯನ್ನು ನೀಡುತ್ತದೆ. ಆದುದರಿಂದ ಎಡೆನಾಡು ಎಂಬುದು ಕೇವಲ ಆಡಳಿತಾಂಗ ವಿಭಾಗವಲ್ಲದೇ ಅದು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಸಹ ಸೂಚಿಸುತ್ತದೆ.

ಭಾಷಿಕ ದೃಷ್ಟಿಕೋನದಿಂದ ಎಡತೊರೆ/ಎಡದೊರೆ ಪದವನ್ನು ಗಮನಿಸುವುದು ಅಗತ್ಯ. ಎಂಟನೇ ಶತಮಾನದ ತಾಮ್ರಪಟದ ಶಾಸನದಲ್ಲಿ 'ಎಡತೊರೆ ವಿಷಯೆ' ಎಂದು ಉಲ್ಲೇಖಿತವಾಗಿದೆ. ನಂತರದ ಕಾಲಘಟ್ಟದಲ್ಲಿ ಎಡತೊರೆನಾಡು ಎಡೆನಾಡಾಗಿ ಮಾರ್ಪಟ್ಟಿದ್ದು (೯ನೇ ಶತಮಾನದ) ತರುವಾಯ ಎಡದೊರೆ ನಾಡಾಗಿ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ, ಈ ನಾಡಿಗೆ ಕನ್ನಡ ಶಾಸನಗಳಲ್ಲಿ ಹಿರಿಯ ನಾಡೆಂದು[೧೮] ತಮಿಳು ಶಾಸನಗಳಲ್ಲಿ ಪೆರಿಯನಾಡೆಂಬ[೧೯] ಪ್ರತಿನಾಮದೊಂದಿಗೆ ಬಳಸಿರುವುದು ಗಮನಾರ್ಹ.

ಈ ಭಾಗದ ಭೌಗೋಳಿಕ ಪ್ರದೇಶವು ಚೋಳರ ಆಳ್ವಿಕೆಗೊಳಪಟ್ಟ ನಂತರ ಈ ಎಡೆನಾಡು/ಎಡೆತೊರೆ ನಾಡಿನ ಸ್ವತಂತ್ರ ಸ್ಥಾನವು ಸ್ವಲ್ಪ ಮಟ್ಟಿಗೆ ಕುಂಠಿತವಾಗಿರುವುದು ಕಂಡು ಬರುತ್ತದೆ. ಚೋಳರ ಆಳ್ವಿಕೆಯಪೂರ್ವದಲ್ಲಿ ಎಡತೊರೆನಾಡು ಎಂದು ಕಾಣಿಸಿಕೊಳ್ಳುವ ಈ ಉಪವಿಭಾಗವು ಚೋಳರ ಆಳ್ವಿಕೆಯಲ್ಲಿ ಮಗದೊಂದು ಹಿರಿಯ ಭಾಗವಾದ ಗಂಗೈಕೊಂಡ ಚೋಳ ವಳನಾಡಿನ ಉಪವಿಭಾಗವಾಗಿ ಶಾಸನಗಳಲ್ಲಿ ಕಂಡುಬರುತ್ತದೆ.[೨೦] ಚೋಳರ ಶಾಸನಗಳಲ್ಲಿ ಮೊದಲಿಗೆ ಮೇಲೆ ಉಲ್ಲೇಖಿಸಲ್ಪಟ್ಟಂತೆ ಕಂಡುಬಂದರೂ ನಂತರದಲ್ಲಿ ಇಡೈನಾಡಾಗಿಯೇ ಕಾಣಿಸಿ ಕೊಳ್ಳುತ್ತದೆ. ಈ ಉಪವಿಭಾಗವು ಇಂದಿನ ಚಾಮರಾಜನಗರ ತಾಲೂಕಿನಲ್ಲಿರುವ ಪ್ರಾಚೀನ ಎಣ್ಣೆನಾಡಿನ[೨೧] ಪಕ್ಕದಲ್ಲಿಯೇ ಇತ್ತೆಂದು ಹೇಳಬಹುದು. ಈ ಪ್ರಾಂತ್ಯವು ಚೋಳರ ಆಳ್ವಿಕೆಗೆ ಒಳಪಟ್ಟ ನಂತರ, ಅಲ್ಲಿ ರಾಜಕೀಯ ಸಾಂಸ್ಕೃತಿಕ, ಭಾಷಿಕ, ಕಲೆ ಮತ್ತು ವಾಸ್ತುಶಿಲ್ಪ, ಶಾಸನ ಮುಂತಾದವುಗಳ ಮೇಲೆ ಸಾಕಷ್ಟು ಪ್ರಭಾವವು ಆಗಿರುವುದನ್ನು ನಾವು ಗಮನಿಸಬಹುದು.[೨೨] ಇದಕ್ಕೆ ಸಾಕ್ಷಿಯಾಗಿ ಈ ಭಾಗದಲ್ಲಿ ಸುಮಾರು ೪೦ಕ್ಕೂ ಹೆಚ್ಚು ಚೋಳರ ಶೈಲಿಯ ದೇವಾಲಯಗಳು ಮತ್ತು ತಮಿಳು ಶಾಸನಗಳು ದೊರಕಿವೆ. ತಮಿಳರ ಆಳ್ವಿಕೆಗೊಳಪಟ್ಟ ನಂತರ ಶಾಸನಗಳು ಕಾಲಕ್ರಮದಲ್ಲಿ ತಮಿಳು ಶಬ್ದಗಳನ್ನು ಒಳಗೊಂಡಿದ್ದು, ಕೆಲವು ತಮಿಳು ಸ್ಥಳನಾಮಗಳನ್ನು ನೆನೆಪಿಸುತ್ತವೆ. ಕನ್ನಡ ಶಾಸನಗಳಲ್ಲಿ ಕಾಣಿಸಿಕೊಂಡ ಎಡೆನಾಡು / ಎಡೆತೊರೆನಾಡು ತಮಿಳಿನಲ್ಲಿ ಇಡೈತುರೈನಾಡು ಹಾಗೂ ಇಡೈನಾಡಾಗಿರುವುದು ಗಮನಿಸತಕ್ಕ ಸಂಗತಿ. ಹೊಯ್ಸಳರು ಕರ್ನಾಟಕದ ಅರಸು ಮನೆತನವಾಗಿದ್ದರೂ, ಚೋಳರ ಪ್ರಭಾವದಿಂದಾಗಿ, ಅನೇಕ ಶಾಸನಗಳನ್ನು ತಮಿಳು ಭಾಷೆಯಲ್ಲಿಯೇ ಹೊರಡಿಸಿರುವುದು ಸೋಜಿಗದ ಸಂಗತಿಯೇ ಸರಿ. ಆದರೆ ಇದಕ್ಕೆ ವಿರುದ್ಧವಾಗಿ ಚೋಳರು ಮೂಲತಃ ತಮಿಳರಾದರೂ, ಈ ಪ್ರಾಂತ್ಯದ ಆಧಿಪತ್ಯವನ್ನು ಹೊಂದಿದ ನಂತರ ಸ್ವಲ್ಪ ಕಾಲದವರೆಗೆ ಅಲ್ಲಿ ಪ್ರಚಲಿತದಲ್ಲಿರುವ ಸ್ಥಳ ಮತ್ತು ಆಡಳಿತ ನಾಮಗಳನ್ನು ಕಡೆಗಾಣಿಸದೆ ಸೂಕ್ತವಾಗಿ ತಮಿಳು ರೂಪವನ್ನು ಬಳಸಿ ಹೇಳಿದ್ದಾರೆ.

ಎಡೆನಾಡಿನಲ್ಲಿ ಸುತ್ತೂರು, ತಡಿಮಾಲಂಗಿಯಂತಹ ಮುಖ್ಯವಾದ ಸ್ಥಳಗಳಿವೆ. ಸುತ್ತೂರು ಧಾರ್ಮಿಕ ಕ್ಷೇತ್ರವಾಗಿದ್ದು ವ್ಯಾಸರಾಜರ ಮಠವು ಈ ಊರಿನಲ್ಲಿರುವುದು ಎಡೆನಾಡಿನ

ಮಹತ್ವವನ್ನು ಹೆಚ್ಚಿಸಿದೆ. ಕಾವೇರಿ ಮತ್ತು ಕಪಿಲಾ ನದಿಗಳ ನಡುವಿನ ಪ್ರದೇಶಕ್ಕೆ ಎಡೆನಾಡು/ಎಡೆತೊರೆನಾಡು ಎಂದು ಹೆಸರಿಸಲ್ಪಟ್ಟಿರುವುದು ನಮ್ಮ ಪೂರ್ವಜರ ಭೌಗೋಳಿಕ ಪ್ರಜ್ಞೆಗೆ ಒಳ್ಳೆಯ ನಿದರ್ಶನವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಮಾತ್ರವಲ್ಲದೇ, ಕರ್ನಾಟಕದ ಉತ್ತರ ಭಾಗದಲ್ಲಿರುವ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ (ದೋ ಆಬ್) ಪ್ರದೇಶಕ್ಕೆ ಸಹ ಎಡೆನಾಡು ಎಂದು ಕರೆದಿರುತ್ತಾರೆ. ಅಂತೆಯೇ ಶಿವಮೊಗ್ಗ ಜಿಲ್ಲೆಯ ಕೆಲವು ಶಾಸನಗಳಲ್ಲಿ ಎಡತೊರೆ ನಾಡಿನ ಬಗೆಗೆ ಉಲ್ಲೇಖವಿದೆ.[೨೪] ನೆರೆರಾಜ್ಯದ ತಮಿಳುನಾಡಿನ ತಂಜಾವೂರಿನ ಕೆಲವು ಪ್ರದೇಶಗಳಲ್ಲಿ ಹಾಗೂ ಉತ್ತರ ಆರ್ಕಾಟ್ (ಪಾಲಾರ್ ನದಿ) ನಡುವಣ ಪ್ರದೇಶಕ್ಕೆ ಸಹ ಇಡೈನಾಡು/ಇಡೈನಾಟ್ಟು ಎಂದು ವಿಭಾಗೀಕರಿಸಿಕೊಂಡಿರುವ ಉದಾಹರಣೆಗಳು ನಮಗೆ ದೊರಕದೇ ಇಲ್ಲ.

ಎಡೆಯೂರು, ಎಡೆತೊರೆ, ಎಡತಲ, ಎಡೆಹಳ್ಳಿ ಮುಂತಾದ ಸ್ಥಳನಾಮಗಳು, ಎಡೆ ಅಥವಾ ಎಡ ಎಂಬ ಪದದಿಂದ ಪ್ರಾರಂಭಗೊಳ್ಳುವ ಸ್ಥಳನಾಮಗಳು ಸಾಮಾನ್ಯವಾಗಿ ನದಿ, ತೊರೆ ಅಥವಾ ಹಳ್ಳಗಳ ಎಡಭಾಗದಲ್ಲಿರುವುದು ಗಮನಾರ್ಹ. ಉದಾಹರಣೆಗೆ ಹೇಳವುದಾದರೆ, ಎಡೆಯೂರು ಶಿಂಷಾ ನದಿಯ ಎಡತೀರದಲ್ಲಿದೆ, ಅದೇ ರೀತಿಯಾಗಿ ಎಡಹಳ್ಳಿ ಎಂಬ ಸ್ಥಳವು ರಾಯಚೂರು ಜಿಲ್ಲೆಯಲ್ಲಿಯೂ, ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನಲ್ಲಿ ಎಡತೊರೆ, ಇಡೈತೊರೈ ಎಂಬ ಹೆಸರಿನ ಊರಿರುವುದು ಕುತೂಹಲಕಾರಿಯಾದ ಇವುಗಳಿಂದ ಎಡೆ ಅಥವಾ ಎಡ ಎಂಬ ಪದದಿಂದ ಮೊದಲಾಗುವ ಸ್ಥಳನಾಮಗಳು ಸಾಮಾನ್ಯವಾಗಿ ನೀರಿರುವ ಜಾಗವನ್ನು ತೋರಿಸಿ ಕೊಡುವುದರೊಂದಿಗೆ ನಿರ್ದಿಷ್ಟವಾಗಿ ನದಿ ಅಥವಾ ತೊರೆಯ ಎಡಭಾಗದಲ್ಲಿರುವುದೆಂದು ಸೂಚಿಸುತ್ತದೆ, ಬಲಮುರಿ, ಬಲನಾಡು ಮುಂತಾದ ಸ್ಥಳನಾಮಗಳು, ಆ ಸ್ಥಳವು ಬಲಭಾಗದಲ್ಲಿರುವುದನ್ನು ಸೂಚಿಸುತ್ತದೆ. ಎಡೆನಾಡು ಅಥವಾ ಎಡತೊರೆನಾಡು ಮೈಸೂರು ಜಿಲ್ಲೆಯ ಈಗಾಗಲೇ ಮೇಲೆ ಉಲ್ಲೇಖಿಸಲ್ಪಟ್ಟ ತಾಲೂಕುಗಳಲ್ಲಿ ವ್ಯಾಪಿಸಿದ್ದು ಸುಮಾರು ೯೦೦ ವರ್ಷಗಳವರೆಗೆ ಈ ಭಾಗದ ಇತಿಹಾಸವನ್ನು ಮುಖ್ಯವಾಗಿ ಆಡಳಿತ ಇತಿಹಾಸವನ್ನು ಅರಿಯಲು ಸಹಕಾರಿಯಾಗಿದೆ. ಇದರೊಂದಿಗೆ ಮಧ್ಯಕಾಲೀನ ಇತಿಹಾಸದಲ್ಲಿ ಆಗುತ್ತಿದ್ದ ಭಾಷಿಕ ಬದಲಾವಣೆಗಳು, ಆಡಳಿತ ವಿಭಾಗಕ್ಕೆ ಹೆಸರಿಡುವ ಪದ್ಧತಿ, ಮತ್ತು ವಿಭಾಗದ ವ್ಯಾಪ್ತಿಗಳನ್ನು ಸಹ ತಿಳಿಸಿಕೊಡುತ್ತದೆ. ಇದಲ್ಲದೆ ಸ್ಥಳೀಯ, ರಾಜಕೀಯ, ಆಡಳಿತ, ಧಾರ್ಮಿಕ ಮತ್ತು ಸಾಂಸ್ಕೃತಿಕ, ಚಟುವಟಿಕೆಗಳಲ್ಲಿ ಎಡೆನಾಡಿನ ಪಾತ್ರವು ತನ್ನದೇ ಆದ ವಿಶಿಷ್ಟ ಪಾತ್ರವನ್ನು ವಹಿಸಿತ್ತು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ.

ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಎಡೆನಾಡಿನ ಊರುಗಳ ಹೆಸರು

(ಹಾಗೂ ಎಡೆತೊರೆ ನಾಡಿನ ವಿವಿಧ ರೂಪಗಳು)

	ಊರ ಹೆಸರು	ಎಡೆತೊರೆ ನಾಡಿನ ವಿವಿಧ ರೂಪಗಳು	ಕಾಲ	ಉಲ್ಲೇಖ
೧.	ಬಸವನಪುರ	ಎಡತೊರನಾಡು ವಿಷಯೆ	೭-೮ ಶತ	E.C.III, Nj. 175
೨	ಮೂಡಹಳ್ಳಿ	ಎಡತೊರನಾಡು ವಿಷಯೆ	೮ ಶತ	E.C.III, Nj. 193
೩	ವರುಣ	ಎಡತೊರನಾಡು ಸಾಸಿರಂ	೮ ಶತ	E.C.IV, MY. 183
೪	ದೇವನೂರು	ಎಡೆನಾಡು ಪುನ್ನಾಡು	೮೦೮	E.C.III, Nj. 278
೫	ದೊಡ್ಡಹೊಮ್ಮ	ಎಡೆನಾಡು	೯೭೭	E.C.III, Nj. 294
೬	ಬಾಗಳಿ	ಎಡೆನಾಡಪಟ್ಟ(ಣ)	೧೦ ಶತ	E.C.IV, Ch. 114
೭	ನಗರ್ಗ	ಎಡೆನಾಡು	,,	E.C.V, Tn. 239
೮	ವಿಜಯಪುರ	ಎಡತೊರನಾಡು	೧೦೧೭	E.C.V, Tn. 142
೯	ಬಾಗಳಿ	ಎಡತೊರನಾಡು	೧೧೪೨	E.C.IV, Ch. 117
೧೦	ಕೆಂಪನಪುರ	ಎಡೆನಾಡು	೧೧೬೯	E.C.IV, Ch. 143
೧೧	ತುಂಬಲ	ಎಡತೊರನಾಡು	೧೧೮೦	E.C.V, Tn. 40
೧೨	ತಡಿಮಾಲಂಗಿ	ಎಡೆನಾಡು	೧೧೯೫	E.C.V, Tn. 236
೧೩	ಸುತ್ತೂರು	ಹಿರಿಯನಾಡು ಎಡೆನಾಡು	೧೧೯೬	E.C.III, Nj. 220
೧೦.	ಬದನಾಳು	ಎಡನಾಡು	೧೨೨೮	E.C.III, Nj. 274
೧೫	ಸುತ್ತೂರು	ಎಡತೊರನಾಡು	೧೦೧೫	E.C.III, Nj. 213
೧೬	ತಡಮಾಲಂಗಿ	ಇಡೈನಾಡು	೧೦೩೫	E.C.V, Tn. 232
೧೭	ಪಾಳ್ಯಂ	ಇಡೈಕುಂದುನಾಡು	೧೧೬೩	E.C.IV, Ko. 41
೧೮	ಮೂಗೂರು	ಇಡೈನಾಡು	೧೧೭೭	E.C.V, Tn. 262

೧೯	ಕುಲಗಾಣ	ಇಡ್ಯೆನಾಡು	೧೧೭೩	E.C.V, Ch. 343
೨೦	ಹೊನ್ನೂರು	ಇಡ್ಯೆನಾಡು	೧೧೯೧	E.C.IV, Yl. 18
೨೧	ಅಗರ	ಇಡ್ಯೆನಾಡು	೧೨ ಶತ	E.C.IV, Yl. 86
೨೨	ಅಂಕುಶಯ್ಯನಪುರ	ಇಡ್ಯೆನಾಡು	೧೨ ಶತ	E.C.III, NJ. 297
೨೩	ಹಳೇಪುರ	ಇಡ್ಯೆನಾಡು	೧೨೨೨	E.C.III, Nj. 321
೨೪	ಹೆಗ್ಗವಾಡಿ	ಇಡ್ಯೆನಾಡು	೧೨೪೨	E.C.IV, Ch. 85
೨೫	ಜೋಡಿಬಸವಾಪುರ	ಇಡ್ಯೆತೂರನಾಡು	೧೨೩೯	E.C.V, Tn. 36
೨೬	ಹುಣಸೂರು	ಇಡ್ಯೆನಾಡು	೧೩೧೪	E.C.V, Tn. 36

*

ಆಧಾರಸೂಚಿ ಮತ್ತು ಟಿಪ್ಪಣಿಗಳು

೧. ಕೃಷ್ಣಮೂರ್ತಿ ಪಿ.ವಿ., ಅವರು ಈ ನಿಟ್ಟಿನಲ್ಲಿ ಸಾಕಷ್ಟು ಅಧ್ಯಯನವನ್ನು ನಡೆಸಿರುವರು, 'ಬೆಂಗಳೂರು ಜಿಲ್ಲೆಯ ಪ್ರಾಚೀನ ಪ್ರಾದೇಶಿಕ ವಿಭಾಗಗಳು' ಇತಿಹಾಸ ದರ್ಶನ (ಇ.ದ.), ಸಂ. ೧, ಪು ೨೨; 'ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು' ಇ.ದ. ಸಂ. ೫, ಪು. ೯೮; 'ಕದಂಬಗಳಿಗೆ ಸಾವಿರ ನಾಡಿನ ಭೌಗೋಳಿಕ ವ್ಯಾಪ್ತಿ ಮತ್ತು ಪ್ರಾಚೀನತೆ', ಇ.ದ., ಸಂ. ೬, ಪು ೧೧೯; ' ಕುಕ್ಕಲನಾಡು ಒಂದು ಪ್ರಾಚೀನ ಪ್ರಾದೇಶಿಕ ವಿಭಾಗ', ಇ.ದ., ಸಂ. ೭ ಪು. ೧೪೪; 'ಶೀತಿ', ಶೀತಿಬೆಟ್ಟದ ಭೂಸ್ಮೃತಿ ಮತ್ತು ಶಾಸನಗಳ ಹಿನ್ನಲೆಯಲ್ಲಿ - ಒಂದು ಅಧ್ಯಯನ', ಇ. ದ., ಸಂ. ೮, ಪು. ೧೩೫; 'ಕೋಲಾಲನಾಡು - ಒಂದು ಚಾರಿತ್ರಿಕ ಪರಿಶೀಲನೆ' ಇ.ದ., ಸಂ. ೧೦, ಪು. ೧೫೦; 'ಕೈವಾರನಾಡು - ಶಾಸನಗಳ ಹಿನ್ನಲೆಯಲ್ಲಿ ಒಂದು ಅಧ್ಯಯನ' ಇ.ದ., ಸಂ. ೧೧, ಪು. ೨೦೭; Vasudevan, C.S., **'Administrative Nomenclature - A Study'**, Journal of the Place - names Society of India, Vol XIII, pp. 104 ff.

೨. ಎಪಿಗ್ರಾಫಿಯ ಕರ್ನಾಟಿಕ (ಎ.ಕ.), III, ನಂಜನಗೂಡು (ನಂ) ೧೭೫

೩. ಅದೇ, ನಂ. ೨೩೭

೪. ಅದೇ, ನಂ. ೧೭೫

೫. ಅದೇ, ನಂ. ೧೯೩

೬. ಅದೇ, ನಂ. ೨೭೮

೭. ಅದೇ, IV,ಚಾಮರಾಜನಗರ (ಚಾ) ೧೧೭

೮. ಅದೇ V,ಟೀ ನರಸೀಪುರ (ತಿ.ನ.) ೧೪೨

೯. ಅದೇ, III, ನಂ. ೧೭೫; ಕನ್ನಡ-ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಸಂ. ೧, ಪು. ೧೦೫೩ ಮತ್ತು ಪು. ೧೦೬೦

೧೦. ಅದೇ, ನಂ. ೨೩೯

೧೧. ಅದೇ, V,ಮೈಸೂರು (ಮೈ), ೧೮೩

೧೨. ಅದೇ, ತಿ.ನ. ೪೦

೧೩. ಅದೇ, ತಿ.ನ. ೨೪೦

೧೪. ಅದೇ, ತಿ.ನ. ೨೨೯; ಕನ್ನಡ-ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಸಂ. ೧, ಪು. ೧೦೫೦

೧೫. ಅದೇ, III, ನಂ. ೧೭೫

೧೬. ಅದೇ, V,ತಿ.ನ. ೨೩೨ ಮತ್ತು ೨೩೩

೧೭. ಅದೇ, III, ನಂ. ೧೭೫

೧೮. ಅದೇ, ನಂ. ೩೩೮

೧೯. ಅದೇ, ನಂ. ೨೨೦

೨೦. ಅದೇ, V, ತಿ.ನ. ೨೩೪

೨೧. ಅದೇ, ತಿ.ನ. ೨೩೩

೨೨. Vasudevan C.S., **"Administrative Nomenclature - A Study"**, Journal of the Place -Names Society of India, Vol. XIII, pp. 104 ff

೨೩. Vasudevan C.S., "**Scriptal Transmutability of Chola Inscriptions in Karnataka** (Mysore District)", Journal of the Epigraphical Society of India, vol. XVIII, pp. 110 ff

೨೪. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, ಸಂ-XI,- ಭಾ I, ಸಂ. ೭-೧೪; ಎಪಿಗ್ರಾಫಿಯಾ ಇಂಡಿಕಾ, ಸಂ, XII ಪು. ೩೧೩-೬೯

ಈ ಲೇಖನವನ್ನು ಸಿದ್ಧಪಡಿಸುವಾಗ ಸೂಕ್ತ ಸಲಹೆಗಳನಿತ್ತ ಡಾ II ದೇವರಕೊಂಡಾರೆಡ್ಡಿ ಅವರಿಗೆ ಕೃತಜ್ಞತೆಗಳು.

ಡಾ॥ ಎಸ್. ಕೆ. ಕೊಪ್ಪಾ*

ವಿಜಾಪುರ ಜಿಲ್ಲೆಯ ಕೆಲವು ಆಡಳಿತಾತ್ಮಕ ಸ್ಥಳನಾಮಗಳು

ಇಂದು ನಾಮಗಳ ಅಧ್ಯಯನಕ್ಕಾಗಿ ಮೀಸಲಾದ ನಾಮವಿಜ್ಞಾನ (Onamastics)ದೊಡ್ಡ ಶಾಖೆಯಾಗಿ ಬೆಳೆದಿದೆ. ಈ ನಾಮವಿಜ್ಞಾನದಲ್ಲಿ ಒಂದು ಪ್ರಮುಖ ಶಾಖೆ ಸ್ಥಳನಾಮ ವಿಜ್ಞಾನ (Toponomestics). ಕರ್ನಾಟಕದ ಸ್ಥಳನಾಮಗಳ ಅಧ್ಯಯನ ಈಚೆಗೆ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿದೆಯಾದರೂ ' ಅತಿಪರಿಚಯಾತ್ ಅವಜ್ಞಾ' ಎನ್ನುವ ಮಾತು ಸ್ಥಳನಾಮಗಳ ವಿಷಯದಲ್ಲಿ ಸತ್ಯವಾಗಿದೆ. ದಿನನಿತ್ಯ ಕಣ್ಣಿಗೆ ಕಾಣುವ ಸ್ಥಳಗಳು, ಮಾತುಮಾತಿಗೆ ಕಿವಿಗೆ ಬೀಳುವ ಅವುಗಳ ಹೆಸರುಗಳು ನಮ್ಮ ನಾಡಿನ ಅನೇಕ ವಿಷಯಗಳನ್ನು ಗರ್ಭದಲ್ಲಿರಿಸಿಕೊಂಡ ಮಹತ್ವದ ಸಾಧನಗಳೆಂಬುದು ಬಹುಜನಕ್ಕೆ ಗೊತ್ತಿಲ್ಲ.

ತೀರ ಪ್ರಾಚೀನಕಾಲದಲ್ಲಿ ಆಯಾ ಸ್ಥಳಗಳು ಅಲ್ಲಿನ ನೈಸರ್ಗಿಕ ಸ್ಥಿತಿಗತಿಗಳನ್ನು ಹೊಂದಿಕೊಂಡಿರುತ್ತಿದ್ದವು. ಆದರೆ ಬರಬರುತ್ತ ನಿಸರ್ಗಕ್ಕೆ ಬದಲಾಗಿ ಆಯಾ ಜನಾಂಗ, ವ್ಯಕ್ತಿ ಐತಿಹಾಸಿಕ ಮಹತ್ವದ ಸಂಗತಿಗಳು ಸ್ಥಳನಾಮಗಳಿಗೆ ಅಂಟಿಕೊಂಡು ಬಂದವು. ಈ ಎರಡನೇ ಗುಂಪಿಗೆ ಸೇರುವ ಸ್ಥಳನಾಮಗಳಲ್ಲಿ ಐತಿಹಾಸಿಕ ಮಹತ್ವದ ಆಡಳಿತಾತ್ಮಕ ಗ್ರಾಮನಾಮಗಳನ್ನು ಸೇರಿಸಬಹುದು. ವಿಜಾಪುರ ಜಿಲ್ಲೆಯ ಇಂಥ ಸ್ಥಳನಾಮಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಇಂಡಿ ತಾಲ್ಲೂಕಿನ ಅರ್ಜನಾಳ (ಅರಸನ + ಪಾಳ್ಯ > ಅರ್ಜನಪಾಳ್ಯ > ಅರ್ಜುನಪಾಳ > ಅರ್ಜುನವಾಳ > ಅರ್ಜನಾಳ); ವಿಜಾಪುರ ತಾಲ್ಲೂಕಿನ ಅರ್ಜುಣಗಿ[೧]ಅರ್ಜುನಗಿ[೧] (ಅರಸನ + ಕೆಯ್ > ಅರ್ಜುದ ಕೆಯ್ > ಅರ್ಜುನಗೆ > ಅರ್ಜುನ (ಣ) ಗಿ); ಸಿಂದಗಿ ತಾಲ್ಲೂಕಿನ ಮನ್ನಾಪುರ (ಮನ್ನೆಯ ಪುರ) ಹುನಗುಂದ ತಾಲ್ಲೂಕಿನ ರಾಯನಕೊಪ್ಪ, ವಿಜಾಪುರ ತಾಲ್ಲೂಕಿನ ಹೆಗಡಿಹಾಳ (ಹೆಗ್ಗಡೆಪಾಳ್ಯ) ಗ್ರಾಮಗಳಲ್ಲಿನ ಅರಸ, ಮನ್ನೆಯ, ರಾಯ, ಹೆಗ್ಗಡೆ ಮೊದಲಾದ ನಿರ್ದಿಷ್ಟಗಳು (specific) ಮಧ್ಯ ಕಾಲೀನ ಕರ್ನಾಟಕದ ಅಧಿಕಾರ ಪದವಿಗಳನ್ನು ಸೂಚಿಸುತ್ತವೆ. ಅಷ್ಟೇ ಅಲ್ಲ ಅವು ಅವರ ವಾಸದ ನೆಲೆಗಳೂ ಆಗಿದ್ದಿರಬೇಕು. ಅದೇ ರೀತಿ ಮುಸ್ಲಿಂ ಅರಸರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಮುದ್ದೇಬಿಹಾಳ ತಾಲ್ಲೂಕಿನ ಸುಲ್ತಾನಪುರ ಹುನಗುಂದ ತಾಲ್ಲೂಕಿನ ಪಾಚ್ಛಾಪುರ (ಬಾದಶಾ > ಬಾಶಾ > ಪಾಶಾ > ಪಾಚಾ + ಪುರ) ಗಳನ್ನು ಉಲ್ಲೇಖಿಸಬಹುದು. ವಿಜಾಪುರ ತಾಲ್ಲೂಕಿನ ಇಬ್ರಾಹಿಂಪುರ, ಗುಲ್ಬರ್ಗಾ ಜಿಲ್ಲೆಯ ಶಹಪುರಗಳು ಇದೇ ಮಾದರಿಗೆ ಸೇರುವಂಥವುಗಳು.

ಕರ್ನಾಟಕದ ಮಧ್ಯಕಾಲೀನ ಆಡಳಿತ ವ್ಯವಸ್ಥೆಯಲ್ಲಿ ಹಲವಾರು ವಿಭಾಗಗಳಿದ್ದವು. ಅವುಗಳಲ್ಲಿ ನಾಡು, ಕಂಪಣ, ಬಾಡ, ಅಗ್ರಹಾರ ಮುಖ್ಯವಾದವುಗಳು. ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 'ನಾದ' (ಚಿಕ್ಕನಾಡ ಕ್ರಿ.ಶ.೧೧೩೪)[೨] ಗ್ರಾಮ ನಾಮದಲ್ಲಿ ನಾಡುರೂಪವನ್ನು ಗುರುತಿಸಬಹುದು. ವಿಜಾಪುರ ತಾಲ್ಲೂಕಿನ ಅಂದು ಅದು ಐವತ್ತು ಹಳ್ಳಿಗಳ ಕಂಪಣವಾಗಿರುವುದರಿಂದ 'ಕಂಪಣ ಬಾಗೆ' ಸ್ಥಳನಾಮ ಕಾಲಾಂತರದಲ್ಲಿ 'ಕಂಬಾಗಿ' ಎಂದು ಮಾರ್ಪಟ್ಟಿತು. ಅದೇ ರೀತಿ ಮುದ್ದೇಬಿಹಾಳ ತಾಲ್ಲೂಕಿನ 'ನಾಲತವಾಡ' ನೋಡಬಹುದು. ಕ್ರಿ. ಶ. ೧೧೩೮ ರ ಶಾಸನದಲ್ಲಿ[೩] ಉಲ್ಲೇಖಗೊಂಡು ನಾಲ್ವತ್ತು ಹಳ್ಳಿಗಳ ಆಡಳಿತ ವಿಭಾಗ 'ನಾಲ್ವತ್ತುಂಬಾಡ' ಕಾಲಕ್ರಮೇಣ ನಾಲ್ವತುಂಬಾಡ > ನಾಲ್ವತುಬಾಡ > ನಾಲ್ವತವಾಡ > ನಾಲತವಾಡ ಆಗಿ ಮಾರ್ಪಟ್ಟಿತು. ಇಂಡಿ ತಾಲ್ಲೂಕಿನ ಹತ್ತಳ್ಳಿ (ಹತ್ತು + ಹಳ್ಳಿ) ಇಂಥದೇ ಇನ್ನೊಂದು ರೂಪ.[೪] ಇನ್ನು ಹಳ್ಳಿಯ ಗಡಿಯಾಗಿರುವ ಆಡಳಿತ ವಿಭಾಗ ಬಾಡಗಡಿಯ ರೂಪವನ್ನು ಬೀಳಗಿ ತಾಲ್ಲೂಕಿನ 'ಬಾಡಗಿ'[೫] ಮತ್ತು 'ಬಾಗಡಗೆ' ಯಲ್ಲಿ ಗುರುತಿಸಬಹುದು. ಇಂದು ಬಾಗಲಕೋಟೆ ಎಂದು ಪ್ರಸಿದ್ಧವಾಗಿರುವ ಸ್ಥಳ ಹಿಂದೆ 'ಬಾಗಡಗೆ ಎಪ್ಪತ್ತು'[೬] ಎಂದು ಎಪ್ಪತ್ತು ಹಳ್ಳಿಗಳ ಗಡಿ

* ಜಿ.ಆರ್.ಜಿ. ಕಲಾ ಹಾಗೂ ವಾಣಿಜ್ಯ ಕಾಲೇಜು ಇಂಡಿ - ೫೮೬೨೦೯, ಬಿಜಾಪುರ ಜಿಲ್ಲೆ

ಮೇರೆಯಾಗಿತ್ತು ಈ ಬಾಗಡಗೆ ಬಾಡಗಡಿಯೇ ಆಗಿರುವುದು ಇಲ್ಲಿ ಸ್ಪಷ್ಟವಾಗಿದೆ.

ರಾಜಕೀಯ ಮಹತಿಯನ್ನು ಪಡೆದ ಸ್ಥಳಗಳಲ್ಲಿ ಜಿಲ್ಲಾ ಕೇಂದ್ರಸ್ಥಳ ವಿಜಾಪುರ (ವಿಜಯಪುರ), ಬಾದಾಮಿ ತಾಲ್ಲೂಕಿನ ಪಟ್ಟದಕಲ್ಲು'; ಹುನಗುಂದ ತಾಲ್ಲೂಕಿನ 'ಅರಸಿಬೀದಿ,'ಗಳು ಪ್ರಮುಖವಾಗಿವೆ. ವಿಜಯೋತ್ಸವದ ಆಚರಣೆ(ಸ್ಮರಣೆ)ಗಾಗಿ ಬಂದಿರಬಹುದಾದ ಸ್ಥಳನಾಮ ವಿಜಯಪುರ ಶಾಸನಗಳಲ್ಲೆಲ್ಲ ಬಳಕೆಗೊಂಡಿದೆ. ಪ್ರಾಚೀನ 'ಕಿಸುವೊಳಲು' (ಕೆಚ್ಚನೆಯ ಪೊಳಲು) ಬಾದಾಮಿ ಚಾಲುಕ್ಯರು ಪಟ್ಟಗಟ್ಟಿಕೊಳ್ಳುವ ಮೂಲಕ ಪಟ್ಟದ ಕಿಸುವೊಳಲು ‘ 'ಪಟ್ಟದಕಲ್ಲು' ಆಗಿದೆ. ಹಾಗೆಯೇ ಚಾಲುಕ್ಯ ರಾಣಿ ಅಕ್ಕಾದೇವಿಯ ಆಡಳಿತಕ್ಕೊಳಪಟ್ಟ ಪ್ರಾಚೀನ ವಿಕ್ರಮಪುರ ಅವಳ ವಾಸದಿಂದಾಗಿ 'ಅರಸಿಬೀಡು' ಎಂದು ಹೆಸರು ಪಡೆಯಿತು ಅದು ಇಂದು ಅರಸಿಬೀದಿಯಾಗಿ ಹಳ್ಳಿಗರ ಬಾಯಲ್ಲಿ 'ಅರಸಿಬುಡ್ಡಿ'ಯಾಗಿ ನಿಂತಿದೆ.

ಇನ್ನು ಬ್ರಾಹ್ಮಣರಿಗೆ ದತ್ತಿಯಾಗಿ ನೀಡುತ್ತಿದ್ದ ಸಾವಿರಾರು ಅಗ್ರಹಾರಗಳ ವಿಷಯಕವಾಗಿ ಇಂದು ಮಾಹಿತಿ ಲಭ್ಯವಿದೆ. ಅಗ್ರರಿಗೆ ಅಂದರೆ ಬ್ರಾಹ್ಮಣರಿಗೆ ಆಹಾರಕ್ಕಾಗಿ ಕೊಡಮಾಡಿದ ಅಗ್ರಹಾರಗಳ ಆಡಳಿತ ವಿಷಯಕವಾಗಿ ಹಲವಾರು ಅಂಶಗಳು ಈಗ ಬೆಳಕಿಗೆ ಬಂದಿವೆ. ಇಂಥ ಅಗ್ರಹಾರ ಘಟಕ ಸೂಚನೆ ಇಂಡಿ ತಾಲ್ಲೂಕಿನ ಅಗರಬೇಡ [೧೧] 'ಭೂಯ್ಯಾರ' [೧೨] ಬಾಗೇವಾಡಿ ತಾಲ್ಲೂಕಿನ ಕೊಲ್ಹಾರ[೧೩] ಸ್ಥಳನಾಮಗಳಲ್ಲಿದೆ. ಅಗರಬೇಡ 'ಅಗ್ರಹಾರ ಬೇಡ' ಎಂದೇ ಪ್ರಸಿದ್ಧಿ ಪಡೆದಿತ್ತು

ಇಂಥ ಹಲವಾರು ಆಡಳಿತಾತ್ಮಕ ಸ್ಥಳನಾಮಗಳ ಅಧ್ಯಯನ ಕರ್ನಾಟಕದ ಇತರೆಡೆಗಳಲ್ಲಿಯೂ ನಡೆದರೆ ಪ್ರಾಚೀನ ಆಡಳಿತ ಮತ್ತು ಅದರ ಸ್ವರೂಪದ ವಿಷಯಕವಾಗಿ ಅನೇಕ ಅಂಶಗಳು ಇತಿಹಾಸ ಪುನಾರಚನೆಗೆ ದೊರಕುವುದರಲ್ಲಿ ಸಂದೇಹವಿಲ್ಲ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. SII. XX., ೧೪೬ ಅರ್ಜುಣಗಿ (ಅಜ್ಜುನಿಗೆ) ಕಾಲ. ಬಿಜ್ಜಳ

೨. SII. XXIII., ೨೦೨ ಅರ್ಜುನಗಿ (ಅರ್ಜುನಗಿ) ಕ್ರಿ. ಶ. ೧೨೦೭

೩. SII. XX. ೧೦೬

೪. SII. XXIII. ೬೭ ಹೊನವಾಡ

೫. SII. XV.೩೮

೬. ನೆರೆಯ ಮಹಾರಾಷ್ಟ್ರದಲ್ಲಿ 'ಚಾಲಿಸಗಾಂವ' ಊರಿರುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು

೭ SII. XV.೧೭೭, ಕ್ರಿ.ಶ. ೧೨೪೨

೮. IA. IX, P. ೧೯೬, ಕ್ರಿ.ಶ. ೧೧೬೯ - ೭೦

೯. IA. X, P. ೧೬೯, ಕ್ರಿ.ಶ. ೧೧೬೩

೧೦. SII. XI - i , ೮೦, ಕ್ರಿ.ಶ. ೧೦೪೭

೧೧. SII. XX. ೨೧೫, ಕ್ರಿ.ಶ. ೧೨೪೮

೧೨. SII. XX. ೧೩೮, ಕ್ರಿ.ಶ. ೧೧೬೨

೧೩ SII. XV. ೧೬೯, ಕ್ರಿ.ಶ. ೧೨೨೩

ಡಾ॥ ಹೆಚ್.ಎಸ್. ಉಷಾರಾಣಿ *

ರಾಮಚಂದ್ರಾಪುರ ಅಗ್ರಹಾರ - ಒಂದು ಆರ್ಥಿಕ ವಿಶ್ಲೇಷಣೆ

ರಾಮಚಂದ್ರಾಪುರಅಗ್ರಹಾರದ ವಿವರಗಳು ದೊರೆಯುವುದು ಧೀರ್ಘ ಶಾಸನಗಳಲ್ಲಿ ಒಂದಾದ ೧೬ ಹಲಗೆಗಳ ತಾಮ್ರ ಶಾಸನದಿಂದ[1]. ಈ ಶಾಸನ ೧೩೯೦ ಪಂಕ್ತಿಗಳಿಂದ ಕೂಡಿದ್ದು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ.

ಬ್ರಾಹ್ಮಣರಿಗೆ ಭೂದಾನ ಕೊಟ್ಟು ಪುಣ್ಯ ಸಂಪಾದಿಸುವ ಹಾಗೂ ಆ ಸ್ಥಳವನ್ನು ಧಾಳಿ, ತೆರಿಗೆ ಇತ್ಯಾದಿ ಹಿಂಸೆಗಳಿಲ್ಲದೆ ನೆಲೆಗೊಳಿಸುವ ಪರಂಪರೆ ನಮ್ಮಲ್ಲಿ ಬೆಳೆದು ಬಂದಿದೆ. ಈ ಪರಂಪರೆಯ ಗ್ರಾಮಗಳೇ ಅಗ್ರಹಾರಗಳು. ಅದರಂತೆ ಕಾಲಕಾಲಕ್ಕೆ ಹಲವು ಅಗ್ರಹಾರಗಳು ಸ್ಥಾಪನೆಗೊಂಡಿವೆ. ಅವುಗಳಲ್ಲಿ ೧೭೪೯ ರಲ್ಲಿ ರಚಿಸಲ್ಪಟ್ಟ ರಾಮಚಂದ್ರಾಪುರ ಅಗ್ರಹಾರವು ಒಂದು. ಈ ಅಗ್ರಹಾರವನ್ನು ಕಳಲೆ ದಳವಾಯಿ ದೇವರಾಜನು, ಎರಡನೆ ಕೃಷ್ಣರಾಜರ (೧೭೩೪-೬೬) ಅಪ್ಪಣೆ ಮೇರೆಗೆ ನಿರ್ಮಿಸಿದ. ಹಾಗಾಗಿ ಮೈಸೂರರಸರ ಕಾಲದಲ್ಲಿ ದಳವಾಯಿಗಳ ಆರ್ಥಿಕ ನೀತಿಯ ಬಗ್ಗೆ ತಿಳಿಯಲು ಈ ಅಗ್ರಹಾರ ನೆರವಾಗುತ್ತದೆ.

ರಾಮಚಂದ್ರಾಪುರ ಅಗ್ರಹಾರಕ್ಕೆ ೧೪ ಗ್ರಾಮಗಳ ಸೇರಿದ್ದವು. ಅವು ಯಾವುವೆಂದರೆ ಆಲಗೂಡು, ಕೆರೆಹಟ್ಟಿ, ಕೆಥಹಳ್ಳಿ, ವಾಠಾಳು, ನಾಗವಳ್ಳಿ, ಗಣಗನೂರು, ಕಾಗಲವಾಡಿ, ಜಂನೂರು, ಜ್ಯೋತಿಗೌಡನಪುರ, ಕಾರ್ಯ, ಹೊಂಡರಬಾಳು, ಯರಗಂಬಳ್ಳಿ, ಕಾರೇಪುರ ಮತ್ತು ಯಲುಕೂರು,[2] ಫಲವತ್ತಾದ ಭೂಮಿಯನ್ನೊಳಗೊಂಡ ಈ ಗ್ರಾಮಗಳಿಂದ ಬರಬಹುದಾದ ಆದಾಯ ೧೨೦ ಮಂದಿ ವೃತ್ತಿವಂತರಿಗೆ ಸಲ್ಲಬೇಕೆಂದು ಗೋಚರಿಸುತ್ತದೆ. ಅದರಂತೆ ಶಾಸನದಲ್ಲಿ " ಈ ಅಗ್ರಹಾರದ ಗ್ರಾಮಗಳು ೧೪ಕ್ಕೆ ಆಳಿದ ಸ್ವಾಮಿಯವರು ಅಪ್ಪಣೆ ಪಾಲಿಸಿ ಇರುವ॥ ನಿರೂಪ ಪ್ರಕಾರಕ್ಕೆ ಸಲುವ ವಲಯ ವಾಮನ ಮುದ್ರೆಕಲ್ಲುಗಳ ಮಧ್ಯದ ಗೃಹಾರಾಮಕ್ಷೇತ್ರ ಗದ್ದೆ ಬೆದ್ದಲು ತೋಟ ತುಡಿಕೆ ಅಣೆ ಅಚ್ಚುಕಟ್ಟು ಕೆರೆಕಾಲುವೆ ಕಾಡಾರಂಭ ನೀರಾರಂಭ. ಮಗ್ಗ ಮನೆವಣ ಸುಂಕ ಸುವರ್ನಾದಾಯ ಈಚಲು ಕಂದಾಯ ಬಾಲದೆರಿಗೆ ಹೊರಾದಾಯ ಚರಾದಾಯ ಜೋಡಿಬೇಡಿಗೆ ಹುಲ್ಲಹಣ ಬ್ರಾಹ್ಮಣನಿವೇಶನ ಶೂದ್ರನಿವೇಶನ ಹತ್ತಿಪೊಂಮು ಮಾರ್ಗದ ಸುಂಕ ದೇವರಾಯವಟ್ಟ ಪಟ್ಟೆಗಾಣಿಕೆ ಮುದ್ರೆಗಾಣಿಕೆ ಸೊಪ್ಪಿನತೋಟ ಬೆಲುನಾನುಪ್ಪೈರು ಉಪಗ್ರಾಮಗಳ ಹೆಚ್ಚುಹುಟ್ಟುವಳಿ ಕೆರೆಗಳ ಹೆಚ್ಚುಹುಟ್ಟುವಳಿ ಮುಂತಾದ ಆ ಸಕಲ ಸ್ವಾಮ್ಯವು ಮಾತೃಗ್ರಾಮಗಳಲ್ಲಿ ೧೨೦ ಮಂದಿಗೂ ಇತರ ಗ್ರಾಮಗಳಲ್ಲಿ ಆ ಐದು ತತ್ತಿನ ಮಹಾಜನರು ಮೂವತ್ತೊಂದು ಇಪ್ಪತ್ತಾರು ಇಪ್ಪತ್ತಾನಾಲ್ಕು ಇಪ್ಪತ್ತು ಹತ್ತೊಂಬತ್ತು ಈ ಸಂಖ್ಯೆಯ ಮಹಾಜನರಿಗೂ ಯಥಾಂಶವಾಗಿ ನಿರ್ವಿವಾದವಾಗಿ ಸಲುವುದು'' ಎಂದು ಹೇಳಲಾಗಿದೆ. ಇದರಿಂದ ಸುಮಾರು ೨೫ ತೆರಿಗೆಗಳ ಬಗ್ಗೆ ಮಾಹಿತಿ ಲಭಿಸುತ್ತದೆ. ಈ ವೇಳೆಗಾಗಲೆ ಹಣ ಚಲಾವಣೆಯಲ್ಲಿದ್ದರೂ ಉದ್ದೇಶಿತ ಆದಾಯವನ್ನು ನಗದುರೂಪದಲ್ಲಿ ನಿಗದಿಪಡಿಸಿಲ್ಲ. ತೆರಿಗೆಗಳಲ್ಲಿ ಮಗ್ಗವು ಹಾಗೂ ನೇಯ್ಗೆ ಕೈಗಾರಿಕೆ ಈ ವಲಯದಲ್ಲಿದ್ದುದನ್ನು ಸ್ಪಷ್ಟಪಡಿಸುತ್ತದೆ. ಈ ಅಗ್ರಹಾರದ ವ್ಯಾಪ್ತಿಗೊಳಪಟ್ಟ ಹೊಂಡರಬಾಳು ಗ್ರಾಮ ಕೊಳ್ಳೇಗಾಲ ತಾಲೂಕಿಗೆ ಸೇರಿದೆ. ಇಂದಿಗೂ ಕೊಳ್ಳೇಗಾಲ ರೇಷ್ಮೆ ಕೈಗಾರಿಕೆಗೆ ಹೆಸರುವಾಸಿಯಾಗಿದೆ.

ಇನ್ನು ಈ ಶಾಸನದಲ್ಲಿ ನೀಡಿರುವ ವಾಮನಮುದ್ರೆಕಲ್ಲುಗಳ ವಿವರ ಸ್ವಾರಸ್ಯಕರವಾಗಿದೆ. ೧೪ ಗ್ರಾಮಗಳ ಗಡಿ ಗುರುತಿಸಲು ನೆಟ್ಟ ಕಲ್ಲುಗಳ ವಿವರ ಹೀಗಿದೆ:

ಗ್ರಾಮ	ಗಡಿಕಲ್ಲುಗಳ ಸಂಖ್ಯೆ
ಆಲಗೂಡು	-
ಕೆರೆಹಟ್ಟಿ	೨೧೭
ಕೆಥಹಳ್ಳಿ	-
ವಾಠಾಳು	೪೬
ನಾಗವಳ್ಳಿ	೪೯

* 433 'ಇ' ಬ್ಲಾಕ್, ಜೆ.ಪಿ. ನಗರ, ಮೈಸೂರು - 570 008

ಗಣಗನೂರು	೬೫
ಕಾಗಲವಾಡಿ	೬೧
ಜಂನೂರು	೪೭
ಜ್ಯೋತಿಗೌಡನಪುರ	೪೦
ಕಾರ್ಯ	೫೨
ಹೊಂಡರಬಾಳು	೫೬
ಯರಗಂಬಳ್ಳಿ	೧೦೦
ಕಾರೇಪುರ	೩೭
ಯಲುಕೂರು	೬೦
ಸೋಸಲಿ[3]	
ಕೋಟೆಯಲ್ಲಿರುವ	
೧೨೦ ನಿವೇಶನಕ್ಕೆ	೧೮
ಒಟ್ಟು	೮೮೭

ಉಲ್ಲೇಖಿತ ಕಲ್ಲುಗಳ ಸಂಖ್ಯೆ ಹಾಗೂ ಅವುಗಳನ್ನು ನೆಡುವ ಕಾರ್ಯವನ್ನು ಅವಲೋಕಿಸಿದಾಗ ಲಭ್ಯವಿರುವ ಉದ್ಯೋಗಾವಕಾಶಗಳು ಮನದಟ್ಟಾಗುತ್ತದೆ. ಉದಾಹರಣೆಗೆ ಕಲ್ಲು ಕಡಿಯುವುದು, ರವಾನಿಸುವುದು, ನೆಡುವುದು, ಮುದ್ರೆಹಾಕುವುದು ಇತ್ಯಾದಿ. ಈ ಉದ್ಯೋಗ ತಾತ್ಕಾಲಿಕವಾಗಿದ್ದರೂ ಹೆಚ್ಚುವರಿ ವೇತನ ಗಳಿಸಲು ಸಹಕಾರಿಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ.

ಈ ಅಗ್ರಹಾರ ಶಾಸನವು ದಳವಾಯಿಗಳು ಬಳಸುತ್ತಿದ್ದ ಅಳತೆಕೋಲಿನ ಬಗ್ಗೆಯೂ ಮಾಹಿತಿ ನೀಡುತ್ತದೆ. ಪ್ರಸ್ತುತ ಶಾಸನ ರಚಿಸಿದ ಗಜಾರಣ್ಯಕ್ಷೇತ್ರವಾದ ತಲಕಾಡಿನ ಶ್ರೀ ಕೃಷ್ಣದೀಕ್ಷಿತರಿಗೆ ೩೨ ಹೆಜ್ಜೆ ಕೋಲಿನಲ್ಲಿ ಅಳೆದ ಭೂಮಿಯನ್ನು ಕೆರೆಹಟ್ಟಿ, ಕೆಥಹಳ್ಳಿ ಮುಂತಾದೆಡೆಗಳಲ್ಲಿ ಬಿಟ್ಟ ವಿವರವಿದೆ.

ಶಾಸನಗಳ ಮೂಲ ಉದ್ದೇಶ ದಾನದತ್ತಿಗಳನ್ನು ತಿಳಿಸುವುದು, ಹಾಗೂ ದಾನಿಗಳ ಹೆಸರನ್ನು ಶಾಶ್ವತಗೊಳಿಸುವುದು. ಈ ಅಗ್ರಹಾರ ನಿರ್ಮಾಣದಿಂದಾಗಿ ದಳವಾಯಿ ದೇವರಾಜನ ಹೆಸರು ಶಾಶ್ವತವಾದದ್ದೇನೊ ಹೌದು. ಆದರೆ ಮರಾಠರು ಹೈದರಾಬಾದಿನ ನಿಜಾಮ ಕೆಳದಿ, ಇಕ್ಕೇರಿ ನಾಯಕರು ಮೈಸೂರರಸರ ಮೇಲೆ ಆಕ್ರಮಣ ಮಾಡುತ್ತಿದ್ದ ಕಾಲದಲ್ಲಿ ಸೈನಿಕ ಶಕ್ತಿಯನ್ನು ವೃದ್ಧಿಸುವ ಅಗತ್ಯವಿತ್ತು. ಬದಲಿಗೆ ಉನ್ನತ ವರ್ಗವನ್ನು ಸಂತುಷ್ಟಗೊಳಿಸಿ ಅವರ ಕೃಪೆಗೆ ಪಾತ್ರರಾಗುವುದರತ್ತ ಆಡಳಿತ ವರ್ಗ ಆಸಕ್ತಿ ವಹಿಸಿತ್ತು. ಹೀಗಿದ್ದಾಗ್ಯೂ ಬೊಕ್ಕಸ ಬರಿದಾಗಿ ಆರ್ಥಿಕವಾಗಿ ನಷ್ಟಕ್ಕೊಳಗಾದ್ದರಿಂದ ೧೭೫೬ ರ ವೇಳೆಗೆ ಸೈನಿಕರಿಗೆ ವೇತನ ಕೊಡಲು ಹಣವಿಲ್ಲದಂತಾಗಿ ಅಶಾಂತಿ ತಲೆದೋರಿತು. ಈ ಸಂದರ್ಭವನ್ನು ಸದುಪಯೋಗಿಸಿಕೊಂಡ ಹೈದರಾಲಿ ಕ್ರಮೇಣ ಅಧಿಕಾರಕ್ಕೆ ಬಂದುದು ವಿಶೇಷವೆನಿಸುವುದಿಲ್ಲ.

ನಾಣ್ಯಗಳಲ್ಲಿ ಹಣ, ಹಾಗ, ವೀಸ, ಬೇಳೆಯ ಉಲ್ಲೇಖವಿದೆ. ಒಂದೆಡೆ ಎಪ್ಪತ್ತೆರಡು ಹಣದ ಭೂಮಿ ಎಂದು ಪ್ರಸ್ತಾಪಿಸಲಾಗಿದೆ.

ಕೊನೆಯದಾಗಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನವನ್ನು ಪ್ರತಿಬಿಂಬಿಸುತ್ತಿದ್ದ ಅಗ್ರಹಾರಗಳು ಆರ್ಥಿಕವಾಗಿ ಕೇಂದ್ರ ಸರ್ಕಾರಕ್ಕೆ ನಷ್ಟವನ್ನುಂಟು ಮಾಡುತ್ತಿದ್ದವು. ಏಕೆಂದರೆ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಯಲ್ಲಿ ಗ್ರಾಮಗಳೇ ನಾಡಿನ ಬೆನ್ನೆಲುಬು. ಅಂತಹ ಗ್ರಾಮಗಳಲ್ಲಿ ಹಲವು ಗ್ರಾಮಗಳು ಅಗ್ರಹಾರಗಳಿಗೆ ಸೇರಿದ್ದವು. ಆಧುನಿಕ ಕಾಲದ ವೇಳೆಗೆ ಬೃಹತ್ ಅಗ್ರಹಾರಗಳ ನಿರ್ಮಾಣದಿಂದಾಗಿ ಕೂಲಿಯಾಳುಗಳಿಗೆ, ಕೃಷಿ ಕಾರ್ಮಿಕರಿಗೆ ತಾತ್ಕಾಲಿಕ ಉದ್ಯೋಗ ಲಭಿಸುತ್ತಿದ್ದರೂ, ಕಂದಾಯ ರಹಿತ ಭೂಮಿಯಿಂದಾಗಿ ಆರ್ಥಿಕ ಮುಗ್ಗಟ್ಟಿಗೆ ಅವು ಎಡೆಮಾಡಿಕೊಟ್ಟಿದ್ದವು. ಹಾಗಾಗಿ ಅಸ್ತಿತ್ವದಲ್ಲಿದ್ದ ಅಗ್ರಹಾರಗಳನ್ನು ರಕ್ಷಿಸಿದರೆ ಸಾಕಿತ್ತು. ಹೊಸ ಅಗ್ರಹಾರಗಳ ಸ್ಥಾಪನೆಯ ಅಗತ್ಯವಿರಲಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಒಟ್ಟಿನಲ್ಲಿ ಆರ್ಥಿಕ ದೃಷ್ಟಿಕೋನದಿಂದ ಅಗ್ರಹಾರಗಳ ಅಧ್ಯಯನದ ಅಗತ್ಯವಿದೆ ಎನ್ನುವುದು ಮುಖ್ಯ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಎ.ಕ. ಸಂಪುಟ ೫ (ಪರಿಷ್ಕೃತ) ; ತಿ. ನರಸೀಪುರ ೧೬

೨. ಇಂದು ಈ ಗ್ರಾಮಗಳು ಮೈಸೂರು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಹಂಚಿ ಹೋಗಿವೆ; ಅದೇ, ತಿ. ನರಸೀಪುರ, ಚಾಮರಾಜನಗರ, ಕೊಳ್ಳೇಗಾಲ ಮತ್ತು ಯಳಂದೂರು. (ಮೈಸೂರು ಜಿಲ್ಲೆ)

೩. ತಿ. ನರಸೀಪುರದಿಂದ ಐದು ಕಿ.ಮೀ ದೂರದಲ್ಲಿದೆ. ಹಳೇಕಾಲದ ಮಣ್ಣಿನ ಮನೆಗಳು ಇವೆ.

ಆರ್.ಎಸ್. ರಡ್ಡೇರ *

ಸಗರ ನಾಡಿನ ಶಿವಶರಣರು

'ಸಗರ' ಎಂಬ ಹೆಸರು ಪೌರಾಣಿಕ ಕಥೆಗಳಲ್ಲಿ ಸಗರರಾಜನ ವ್ಯಕ್ತಿನಾಮವಾಗಿ ಪ್ರಸಿದ್ಧಿಯನ್ನು ಪಡೆದರೆ, ಪ್ರಾಚೀನ ಕರ್ನಾಟಕದಲ್ಲಿ ರಾಜಧಾನಿಯಾಗಿ ವೈಭವದಿಂದ ಮೆರೆದ ಇಂದಿನ ಗುಲಬರ್ಗಾ ಜಿಲ್ಲೆಯ ಶಹಾಪುರದ ಪಕ್ಕದಲ್ಲಿರುವ ಚಿಕ್ಕ ಹಳ್ಳಿ 'ಸಗರ' ವು ಸ್ಥಳನಾಮವಾಗಿ ಉಳಿದಿದೆ. ಅರ್ಧಚಂದ್ರಾಕಾರದಂತೆ ಗುಡ್ಡವನ್ನು ಸುತ್ತಿಕೊಂಡು ಸಗರವು ಚಾಲುಕ್ಯ ರಾಷ್ಟ್ರಕೂಟ, ಚಾಳುಕ್ಯ ಕಲ್ಯಾಣದ ವಿಜಯನಗರ ಸಾಮ್ರಾಜ್ಯಗಳ ಕಾಲಕ್ಕೆ ಒಂದು ಆಡಳಿತ ವಿಭಾಗವಾಗಿತ್ತು. ಹೆಚ್ಚೂ-ಕಡಿಮೆ ಭೀಮಾ ಮತ್ತು ಕೃಷ್ಣಾ ನದಿಗಳ ಮಧ್ಯದ ದೋ ಅಬ್' ಪ್ರದೇಶವಾದ ಇಂದಿನ ಗುಲಬರ್ಗಾ ಜಿಲ್ಲೆಯ ಜೇವರ್ಗಿ, ಶಹಪೂರ, ಮತ್ತು ಸುರಪುರ ತಾಲೂಕಿನ ಎಲ್ಲ ಪ್ರದೇಶವನ್ನು ಒಳಗೊಂಡು ಭೂಪ್ರದೇಶವೇ 'ಸಗರ ನಾಡು' ಎಂದು ಹಿಂದಿನಿಂದಲೂ ಕರೆಯಲ್ಪಡುತ್ತಿದೆ. ಆ ಪ್ರದೇಶದ ಬಹುಪಾಲು ಶಾಸನಗಳಲ್ಲಿ ಸಗರನಾಡಿನ ಉಲ್ಲೇಖವಿದೆ. ಚಿಕ್ಕಮುದನೂರಿನ ಶಾಸನದಲ್ಲಿ ಸಗರ-೫೦೦ರ ಉಲ್ಲೇಖವಿದ್ದರೆ, ಹಿರೇಮುದನೂರಿನ ಶಾಸನವೊಂದರಲ್ಲಿ ಸಗರ-೩೦೦ರ ಉಲ್ಲೇಖವಿದೆ. ಅರಸರ ಆಕ್ರಮಣ ಪ್ರವೃತ್ತಿಯಿಂದಾಗಿ ಸಗರನಾಡು ಭೌಗೋಳಿಕವಾಗಿ ವಿಸ್ತೃತ-ಸಂಕುಚಿತಗೊಂಡಿರಬಹುದಾದರೂ ಆ ನಾಡಿಗೆ ತನ್ನದೇ ಆದ ವಿಶೇಷ ಮಹತ್ವವಿದೆ.

ಭಾರತೀಯ ಆಧ್ಯಾತ್ಮಕ್ಷೇತ್ರಕ್ಕೆ ಸಗರನಾಡು ಅಮೂಲ್ಯವಾದ ಕಾಣಿಕೆಯನ್ನು ನೀಡಿದೆ. ಅಂತರ್ಮುಖದಲ್ಲಿಯೇ ಲೀನವಾಗಿದ್ದ ಭಾರತೀಯ ಆಧ್ಯಾತ್ಮಕ್ಕೆ ಬಹಿರ್ಮುಖ ದರ್ಶನವನ್ನು ಸೇರಿಸಿ ವೈವಿಧ್ಯತೆಯನ್ನು ತಂದುಕೊಟ್ಟ ಶ್ರೇಯಸ್ಸು ಸಗರನಾಡಿನ ಶಿವಶರಣರಿಗೆ ಸಲ್ಲುತ್ತದೆ. 'ದಾರ್ಶನಿಕತ್ವವನ್ನು ಅಳವಡಿಸಿಕೊಂಡು ಆತ್ಮತತ್ವವನ್ನೂ, ಅದರ ಸ್ವರೂಪಾನುಸ್ವರೂಪವನ್ನು ಕಾತರದಿಂದ ಕಾಣಲು ಅಂತರ್ಮುಖನಾಗಿ ಕುಳಿತ ಸಾಧಕನು ಸ್ವಾರ್ಥಿ' ಎಂದು ಮನಗಂಡ ಸಗರನಾಡಿನ ಶರಣರು (ದಾರ್ಶನಿಕರು) ಪರಂಪರೆಯ ಆತ್ಮಚಿಂತನೆಗೆ ಸಮಾಜಚಿಂತನೆಯೊಂದನ್ನು ಹೊಸದಾಗಿ ಸೇರಿಸಿ ಆಧ್ಯಾತ್ಮಕ್ಷೇತ್ರವನ್ನು ವಿಸ್ತಾರಗೊಳಿಸಿದರು. ಇದುವೇ 'ಶರಣತತ್ವ' ವೆಂದರೆ ವಿಸ್ತರೀಕರಣ ಮತ್ತು ಸಮಾಜೀಕರಣ. ಯಾವುದೂ ಕೇಂದ್ರೀಕರಣವಾಗಕೂಡದು; ಸಾಧ್ಯವಿದ್ದ ಎಲ್ಲವೂ ಸಮಾಜೀಕರಣ ಗೊಳ್ಳಬೇಕೆಂಬುದಕ್ಕಾಗಿಯೇ 'ಶರಣ ಚಳುವಳಿ' ಆರಂಭವಾಯಿತು. 'ವಚನ' ಅವರ ಈ ಪ್ರಣಾಳಿಕೆಯ ಸಾಹಿತ್ಯ ಸಾಧನವಾಯಿತು. ಶರಣ ಚಳುವಳಿ ತನ್ನ 'ಸುವರ್ಣಯುಗ' ವನ್ನು ಕಂಡದ್ದು ಕಲ್ಯಾಣವನ್ನು ಕೇಂದ್ರವಾಗಿಟ್ಟುಕೊಂಡ ಬಸವಣ್ಣನವರ ನೇತೃತ್ವದಲ್ಲಾದರೆ, ಶರಣ ಚಳುವಳಿ ಆರಂಭವಾದುದು ಈ ಚಳುವಳಿಯ ಮುಖ್ಯ ಸಂಘಟನಾಕಾರರಾದ ಜೇಡರ (ದೇವರ) ದಾಸಿಮಯ್ಯ, ಕೆಂಬಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ ಮೊದಲಾದವರಿಂದ ಎಂಬುದು ವಚನ ಸಾಹಿತ್ಯದ ಆಳವಾದ ಅಧ್ಯಯನದಿಂದ ತಿಳಿದುಬರುತ್ತದೆ. ಈ ಜೇಡರ (ದೇವರ, ಮುದನೂರು) ದಾಸಿಮಯ್ಯ, ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ ಮುಂತಾದವರು ಬಾಳಿ ಬದುಕಿದ್ದು 'ಸಗರನಾಡಿನ ಪರಿಸರ' ದಲ್ಲೆ ಎಂಬುದು ಸರ್ವವಿದಿತವಾಗಿದೆ. ಈ ಸಗರನಾಡಿನ ಶಿವಶರಣರು ಷಟ್‌ಸ್ಥಲ ಜ್ಞಾನಿಗಳೂ, ವಚನಕಾರರೂ, ವಾಗ್ಮಿಗಳೂ, ಪವಾಡಪುರುಷರೂ, ಸಮಾಜಚಿಂತಕರೂ ಮೇಲಾಗಿ ದಾರ್ಶನಿಕರೂ ಆಗಿದ್ದಾರೆ. ಈ ಪ್ರದೇಶದಲ್ಲಿ ಕಾಲಕಾಲಕ್ಕೆ ಅನೇಕ ಜನ ಶರಣರು ಆಗಿ ಹೋಗಿದ್ದಾರೆ. ಇವರನ್ನು ಕಾಲದ ದೃಷ್ಟಿಯಿಂದ ಬಸವಪೂರ್ವಯುಗದವರು, ಬಸವಕಾಲೀನ ಶರಣರು, ಬಸವೋತ್ತರ ಶರಣರೆಂದು ವಿಂಗಡಿಸಿ ಅಭ್ಯಸಿಸುವದು ಸೂಕ್ತವೆನಿಸುತ್ತದೆ. 'ಸಗರನಾಡಿನ ಶಿವಶರಣ' ರೆಂದು ನಾವು ಹೇಳಬಯಸುವ ಶರಣರೆಲ್ಲರೂ ಇಲ್ಲಿಯೇ ಜನಿಸಿ ಪ್ರಕಾಶಿಸಿದವರಲ್ಲ. ದಾಸಿಮಯ್ಯ, ಭೋಗಣ್ಣ, ಕೇಶಿರಾಜ, ಬ್ರಹ್ಮಯ್ಯ, ನಾಚಯ್ಯ ಮುಂತಾದವರು ಇಲ್ಲಿಯೇ ಜನಿಸಿ ಪ್ರಕಾಶಿಸಿದವರಾದರೆ, ಅಖಂಡೇಶ್ವರ, ಸಂಗಮೇಶ್ವರ ಮುಂತಾದ ಕೆಲವು ಶಿವಶರಣರು ಬೇರೆ ಕಡೆಗೆ ಜನಿಸಿ ಇಲ್ಲಿ ಪ್ರಕಾಶಿಸಿದವರಾಗಿದ್ದಾರೆ. ಅಂತೆಯೇ ಇಲ್ಲಿ ಜನಿಸಿ ಬೇರೆಡೆಗೆ

* ಕೇರಾಫ್ ಡಾ॥ ಎಸ್.ಪಿ. ಪಾಟೀಲ, ಕನ್ನಡ ಅಧಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ - ೫೮೦ ೦೦೩

ಹೋಗಿ ಮಹಿಮೆಯನ್ನು ತೋರಿದ ಶಿವರಣರೂ ಉಂಟು. ಈ ಮೂರು ರೀತಿಯವರನ್ನು ನಾನು ಅಭ್ಯಾಸಕ್ಕೆ ಎತ್ತಿಕೊಳ್ಳುತ್ತಿದ್ದೇನೆ.

ವಚನಸಾಹಿತ್ಯದ ಜಲದ ಸೆಲೆ ಚಿಮ್ಮಿ ಹೊಮ್ಮಿದ್ದು ಸಗರನಾಡಿನಿಂದಲೇ. ಬಸವಪೂರ್ವಯುಗದಲ್ಲೆ ಬದುಕಿ ಬಾಳಿದ ಜೇಡರ (ದೇವರ) ದಾಸಿಮಯ್ಯ, ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ ಮುಂತಾದ ಶರಣರು ಉಸಿರಾಡಿದ್ದು ಸಗರನಾಡಿನ ಗಾಳಿ. ಅವರು ಕ್ರಮವಾಗಿ ಮುದನೂರ, ಕೆಂಭಾವಿ, ಕೊಂಡುಗುಳಿಗಳಲ್ಲಿ ನೆಲೆಸಿದ್ದು ಅವು ಸಗರನಾಡಿನ ಪ್ರಾಚೀನ ಪ್ರಸಿದ್ಧ ಅಗ್ರಹಾರಗಳೆಂಬುದಕ್ಕೆ ಅಲ್ಲಿನ ಶಾಸನಗಳೇ ಸಾಕ್ಷಿ. ಮುದನೂರಿನ ಶಾಸನವೊಂದು ಆ ಗ್ರಾಮವನ್ನು 'ಸರ್ವನಮಸ್ಯದಗ್ರಹಾರ' ವೆಂದೂ, 'ದಕ್ಷಿಣ ವಾರಣಾಸಿ' ಎಂದೂ, 'ಶ್ರೀರಾಮದತ್ತಿ' ಎಂದು ಬಣ್ಣಿಸುತ್ತದೆ. ಇಂಥ ಪುಣ್ಯಕ್ಷೇತ್ರಗಳಲ್ಲಿ ಜನ್ಮವೆತ್ತಿದ ಶ್ರೀ ದೇವರ(ಜೇಡರ) ದಾಸಿಮಯ್ಯನವರು ಆದ್ಯವಚನಕಾರರು. ಇವರು ಸ್ಮರಿಸಿದ ಶ್ರೀ ಭೋಗಣ್ಣ ಪಕ್ಕದ ಊರಿನ ಕೆಂಭಾವಿಯವರು. ಅಂತೆಯೇ 'ಜಗವೆಲ್ಲವರಿಯಲು ತೊಷಜ'ಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ' ಎಂದು ಸಾಂಕೇತಿಕವಾಗಿ ದಾಸಿಮಯ್ಯನವರಿಂದ ಸ್ತುತಿಸಲ್ಪಟ್ಟ ಕೇಶಿರಾಜನು ಹತ್ತಿರದ ಕೊಂಡಗುಳಿಯವನು. ಇವರೆಲ್ಲರೂ ವಚನಕಾರರೆಂಬುದು ಸರ್ವವಿದಿತವಾಗಿದೆ. ಇವರೆಲ್ಲರ ವಚನಗಳು ಸಮಗ್ರವಲ್ಲದಿದ್ದರೂ ಉಪಲಬ್ಧವಾಗಿವೆ.

ಈ ನಾಡಿನ ಶರಣರು ಬಸವಪೂರ್ವ ಕಾಲದಲ್ಲೆ ಹಚ್ಚಿದ 'ವಚನ ಸಾಹಿತ್ಯ' ದ ದೀವಿಗೆಯು ಬಸವಾದಿ ಪ್ರಥಮರಿಗೆ ಸ್ಫೂರ್ತಿಯ ಜ್ಯೋತಿರ್ದಾನ ನೀಡಿತು. ಬಸವಯುಗದಲ್ಲೆ ಸರ್ವಾಂಗ ಲಿಂಗಿಗಳಾಗಿ, ಸದಾಚಾರಿಗಳಾಗಿ ಬೆಳಗಿದ ಸಗರದ ಬ್ರಹ್ಮಯ್ಯ, ಸಗರದ ನಾಚಯ್ಯ, ನೆಲುವಿಗೆಯ ಶಾಂತಯ್ಯ, ಅಗ್ಘವಣಿ ಹೊನ್ನಯ್ಯ, ಓಲೆಯ ಶಾಂತಯ್ಯ, ಉಂಡುಪವಾಸಿ - ಬಳಸಿ ಬ್ರಹ್ಮಚಾರಿಗಳು; ಬಸವ ನೇತೃತ್ವದ ಶರಣ ಚಳುವಳಿಯಲ್ಲಿ ಚಿರಸ್ಮರಣೀಯರು. ಬಸವ, ಚೆನ್ನಬಸವ, ಮುಂತಾದ ಪ್ರಮುಖ ಶರಣರ ಮೆಚ್ಚುಗೆಗೆ ಪಾತ್ರರಾಗಿ ಕಾಯಕಯೋಗಿಗಳಾದ ಇವರು ಆ ಕಾಲದಲ್ಲೆ ಸಗರನಾಡನ್ನು ಪ್ರಾತಿನಿಧಿಸಿದ್ದಾರೆ. ವಚನರಚನೆ, ಗೀತ-ಗಾಯನ, ಕಾವ್ಯ-ಕಲೆಗಳನ್ನು ಬರೆದು ಬಯಲಾದ ಈ ಶರಣರ ಸಾಹಿತ್ಯ ಸಂಪತ್ತು ಅಪಾರವಾದುದು. ಇದುವರೆಗೆ ಉಪಲಬ್ಧವಾದ ಅವರ ಸಾಹಿತ್ಯ ಸಂಪತ್ತು ಸದ್ಯ ತೋರುವ ಸುಳುಹು-ಸೂಚನೆಗಳ ಹೊಳಹಿನೆದುರಿಗೆ ಅತ್ಯಲ್ಪವೆಂದೇ ಹೇಳಬಹುದಾಗಿದೆ. ಅದೆಲ್ಲದರ ಶೋಧನೆಯಾದಾಗ ನಮಗೆ ಅವರ ಸಾಧನೆಯ ವಿರಾಟದರ್ಶನವಾಗುತ್ತದೆ.

ಬಸವಪೂರ್ವಯುಗದಿಂದಲೂ ಬೆಳಗಲೆಂದು ಹಚ್ಚಿದ ವಚನ ಜ್ಯೋತಿಯು ಕಲ್ಯಾಣದ ಕ್ರಾಂತಿಯು ನಂತರದಲ್ಲೆ ಉಳಿದೆಡೆಗಳಲ್ಲಿ ಎಣ್ಣೆಗುಂದಿತಾದರೂ ಸಗರನಾಡಿನಲ್ಲಿ ನಂದಾದೀವಿಗೆಯಾಗಿಯೇ ಬೆಳಗುತ್ತಾ ಬಂದಿದೆ. ಅಂತೆಯೇ ಬಸವೋತ್ತರ ಯುಗದಲ್ಲಿಯೂ ವಿಪುಲವಾಗಿ ಈ ನಾಡು ಮಹಾನ್ ಶರಣರಿಗೆ ಜನ್ಮವಿತ್ತಿದೆ. ಕೋಳಕೂರಿನ ಸೊಪ್ಪೆಯ ಸಿದ್ಧಬಸವ (೧೩ನೇ ಶತಕ) ಶಿರವಾಳದ ಸಿದ್ಧಲಿಂಗೇಶ್ವರ, ಅಲೂರ ಕೆಂಚಬಸವೇಶ್ವರ, ತಿಂಥಣಿ ಮೌನೇಶ್ವರ, ಜೇವರ್ಗಿ ಷಣ್ಮುಖಶಿವಯೋಗಿ, ರಾಮಪುರದ ಬಕ್ಕಪ್ಪನವರು, ಸುರಪುರದ ನಿಷ್ಠೆಯ ಕಡ್ಲೆಪ್ಪ ಮತ್ತು ವೀರಪ್ಪ ಮಂತ್ರಿಗಳು, ಕಿರೀಟ ಚೆನ್ನಬಸವೇಶ್ವರರು, ಯಾಳಗಿ ರಾಮಪ್ಪಯ್ಯನವರು, ಕಡಕೋಳ ಮಡಿವಾಳಪ್ಪನವರು ಮುಂತಾದ ಅನುಭಾವಿಗಳು ಬಸವೋತ್ತರ ಯುಗದ ಈ ನಾಡಿನ ಶಿವಶರಣರಾಗಿದ್ದಾರೆ. ಕಡಕೋಳ ಮಡಿವಾಳಪ್ಪನವರ ಅನುಭಾವ ಗೀತೆಗಳಂತೂ ಲೌಕಿಕ-ಅಲೌಕಿಕಗಳ ಲಿಂಗಾಂಗ ಸಾಮರಸ್ಯದ ಅದ್ಭುತ ತೃಪ್ತಿಯನ್ನು ಏಕಕಾಲಕ್ಕೆ ನೀಡುವ ಅವಶ್ಯ ರಸದೌತಣಗಳಾಗಿವೆ.

ಸಗರನಾಡು ಯಾವುದೇ ದೃಷ್ಟಿಯಿಂದ ಒಮ್ಮುಖವಲ್ಲ, ಸರ್ವತೋಮುಖವಾಗಿದೆ. ಮಹಿಳೆಯೂ ಮಹಾಶಿವಶರಣೆಯಾಗಿ ಮೆರಯಬಲ್ಲಳೆಂಬುದಕ್ಕೆ ಈ ನಾಡು ಮುಂಚೂಣಿಯಲ್ಲಿದೆ. 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವ ಆತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥ' ಎಂದು ದಾಸಿಮಯ್ಯನವರು ಮುನ್ನವೇ ಸಾರಿದ್ದಾರೆ. ಮಹಿಳೆಯಾದವಳೂ ಮನಸ್ಸು ಮಾಡಿದರೆ ಮಹಾಸಾಧಕಿಯಾಗಿ ಮೆರೆಯಬಲ್ಲಳೆಂಬುದನ್ನು ಈ ಮಾತು ಸೂಚಿಸುತ್ತದೆ. ಪತಿಯ ಈ ಸೂಚನೆಗೆ ಸಂವೇದನೆಯಾಗಿ ದಾಸಿಮಯ್ಯನ ಪತ್ನಿ ದುಗ್ಗಳೆಯು ಆದ್ಯಶಿವಶರಣೆಯಾಗಿ, ಆದ್ಯ ವಚನಕಾರ್ತಿಯಾಗಿ ಕಂಗೊಳಿಸುತ್ತಾಳೆ. ಅಂತೆಯೇ ಕೋಳೂರು ಕೊಡಗೂಸು, ಹೇರೂರ ತಿಲಕವ್ವೆ, ನಾಗದೇವನ ಸತಿ ಮಸಣಮ್ಮ ಮುಂತಾದ ಶಿವಶರಣೆಯರೂ ಈ ನಾಡಿನಲ್ಲೆ ಬಾಳಿ ಬೆಳಗಿದ್ದಾರೆ.

ಸಾಂಸ್ಕೃತಿಕ ಶ್ರೀಮಂತವಾದ ಸಗರನಾಡು ಯೋಗದ ಬಲ್ಮೆಯನ್ನು ಮೆರೆದ ಮಹಾನ್ ಶಿವಶರಣರ ನೆಲೆವೀಡಾಗಿದೆ. ಶಿಲ್ಪಕಲೆಯ ಸೊಗಸು ಈ ನಾಡಿನ ಪ್ರತಿಯೊಂದು ಹಳ್ಳಿಯಲ್ಲೂ ಚಲ್ಲುವರಿದಿದೆ. ಜಗತ್‌ಪ್ರಸಿದ್ಧವಾದ ಗರುಡಾದ್ರಿ ಚಿತ್ರ ಕಲೆಗಳಂಥ ವಿಶಿಷ್ಟ ಕಲೆಗಳನ್ನು ಇಂದಿಗೂ ಉಳಿಸಿಕೊಂಡು ಬಂದುದು ಈ ನಾಡಿನ ವಿಶೇಷತೆಯಾಗಿದೆ.

ರಾಜಕೀಯ ಚತುರತೆ, ಆಧ್ಯಾತ್ಮಿಕತೆ, ದಾರ್ಶನಿಕ ಮನೋಭಾವ, ಕಾಯಕಪ್ರೇಮ, ದಯೆ, ದಾನ, ಧರ್ಮ, ಕಷ್ಟ ಸಹಿಷ್ಣುತೆ, ಗಟ್ಟಿತನ, ನಿಷ್ಠೆ - ಮುಂತಾದ ಗುಣಗಳಿಗೆ ಹೆಸರಾದವರು ಇಲ್ಲಿನ ಜನ. ಅಂತೆಯೇ ಸಗರನಾಡು ಬಹುಪ್ರಾಚೀನಕಾಲದಿಂದಲೂ ಧಾರ್ಮಿಕ ಕೇಂದ್ರವಾಗಿ ಅಸ್ತಿತ್ವದಲ್ಲಿದೆ. ಸು.೧೧ನೇ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಮೊಳಕೆಯೊಡೆದ ಇಲ್ಲಿನ ದಾಸೋಹಕ್ಕೆ ದಾಸಿಮಯ್ಯನ ತವನಿಧಿಯೊಂದು ಸೇರಿ, ದಾಸೋಹಕ್ರಿಯೆ ಅಬಾಧಿತವಾಗಿ ಸಾಗುತ್ತ ಬಂದಿದೆ, ಸಾಗುತ್ತಿದೆ.

ದಾನ-ಧರ್ಮಗಳು ಇಲ್ಲಿಯ ಜನರ ಜೀವಧಾತುವಾಗಿ ಕಾರ್ಯ ಮಾಡುತ್ತಿರುವುದರಿಂದ ಮೇಲೆ ಉಲ್ಲೇಖಿಸಿದ ದಾಸೋಹಮೂರ್ತಿ ಶರಣರ ಜನ್ಮಕ್ಷೇತ್ರ ಮತ್ತು ಕಾರ್ಯಕ್ಷೇತ್ರಗಳಲ್ಲಿ ನಿತ್ಯ-ನಿರಂತರವಾಗಿ ಅನ್ನದಾಸೋಹ ಮತ್ತು ಜ್ಞಾನ ದಾಸೋಹಗಳು ನಡೆಯುತ್ತ ಬಂದಿವೆ. ಆ ಶರಣರ ಹೆಸರಿನಲ್ಲಿ ಅಸ್ತಿತ್ವದಲ್ಲಿರುವ ದೇವಾಲಯ - ಮಠಗಳಲ್ಲಿ ಪುರಾಣ - ಪುಣ್ಯಕಥೆಗಳ ಪಠಣವು ನಿತ್ಯವೂ ಒಂದಿಲ್ಲೊಂದು ರೀತಿಯಿಂದ ಸಾಂಗವಾಗಿ ಸಾಗುತ್ತಿದೆ. ಮಹಿಮೆಯನ್ನು ಮೆರೆದ ಆ ಶರಣರ ನಿತ್ಯನೂತನವಾದ ಕೃಪಾಶೀರ್ವಾದವೇ ಇದಕ್ಕೆಲ್ಲ ಕಾರಣವೆಂದು ಸಗರನಾಡಿನ ಜನ ಸ್ಮರಿಸುತ್ತಾರೆ.

ಈ ಸಗರನಾಡಿನ ಶಿವಶರಣರ ಬಗೆಗೆ ಇಲ್ಲಿಯವರೆಗೆ ಸಮಗ್ರವಾದ, ಸಮರ್ಪಕವಾದ ಅಧ್ಯಯನವು ಸಂಪೂರ್ಣವಾಗಿ ಆಗಿಲ್ಲ. ಐತಿಹಾಸಿಕವಾಗಿ ಬದುಕಿ, ಸಾರ್ವತ್ರಿಕವಾದ ಸಾರ್ವಕಾಲೀನ ಮೌಲ್ಯಗಳನ್ನು ಚಿರಂತನಗೊಳಿಸಿದ ಈ ಶರಣರ ಬಗೆಗೆ ಅಭ್ಯಸಿಸುವುದು ತುಂಬಾ ಅವಶ್ಯಕವಾಗಿದೆ.

*

ಬಸವರಾಜ ಅಮ್ಮಣಗಿ *

ರಾಯಬಾಗದ ಸಾಂಸ್ಕೃತಿಕ ಅಧ್ಯಯನ

ಕರ್ನಾಟಕದ ಸಾಂಸ್ಕೃತಿಕ ಅಧ್ಯಾಯದಲ್ಲಿ ಬೆಳಗಾವಿ ಜಿಲ್ಲೆಯದು ಮಹತ್ವದ ಪಾತ್ರವಿದೆ. ಇದೇ ಜಿಲ್ಲೆಯ ತಾಲೂಕ ಕೇಂದ್ರವಾದ ರಾಯಬಾಗವು ಪ್ರಮುಖವಾಗಿದ್ದು ಇಲ್ಲಿಯ ಶಿಲ್ಪಕಲಾ ಸಂಪತ್ತು ಸಮೃದ್ಧವಾಗಿದೆ. ಈ ಊರಿನ ಪುರಾತನ ಗುಡಿಗಳು, ಬಸದಿಗಳು ಕೂಡ ಕಲಾತ್ಮಕ ಮಹತ್ವದನುಗಳಾಗಿವೆ. ಇಲ್ಲಿಯ ನೆಲವನ್ನು ಅಗೆಯುವಾಗ ಉಳುವಾಗ ಕಲ್ಲಿನ ಮೂರ್ತಿಗಳು, ವೀರಗಲ್ಲುಗಳು, ಸುಳುಹುಗಳುಳ್ಳ ಶಿಲಾಸ್ತಂಭಗಳು ದೊರೆತಿವೆ. ಅಲ್ಲದೆ ಶಿಲಾಶಾಸನಗಳೂ ಕೂಡ ಸಿಕ್ಕಿವೆ. ಈ ಹಿನ್ನೆಲೆಯಲ್ಲಿ ರಾಯಬಾಗದ ಸಾಂಸ್ಕೃತಿಕ ಅಧ್ಯಯನ ಮಹತ್ವಪೂರ್ಣವೂ, ಅವಶ್ಯಕವೂ ಆಗಿದೆ.

ಊರ ಹೆಸರು: ರಾಯಬಾಗದ ಮೊದಲಿನ ಹೆಸರು 'ಬಾಗಿ' ಎಂದಾಗಿತ್ತು. ಕ್ರಿ.ಶ. ೧೧೦೦ರ ಶಾಸನದಲ್ಲಿ ಇದರ ಹೆಸರು 'ಬಾಗಿ' ಎಂದೇ ಇದೆ. ಒಮ್ಮೊಮ್ಮೆ 'ಪೂ-ಬಾಗಿ', 'ಪೂ-ಬಾಗೆ' ಎಂದೂ ಕರೆಯಲಾಗಿದೆ. ಇದೇ ಊರಿನ ನಿವಾಸಿಯಾಗಿದ್ದ ರಾಜಾದಿತ್ಯನೆಂಬ ಕವಿ ತನ್ನ ಕಾವ್ಯದಲ್ಲಿ "**ಕೂಂಡಿ ಮಂಡಲಕ್ಕನುಪಮಂ ಪೂವಿನ ಬಾಗೆ**" ಎಂದು ವರ್ಣಿಸಿದ್ದಾನೆ. 'ಪೂ ಬಾಗಿ' ಎಂದರೆ ಶಿರೀಷ ಹೂವು'. ಅಂದಿನ ಕಾಲದಲ್ಲಿ ಈ ಪ್ರದೇಶದಲ್ಲಿ ಶಿರೀಷಹೂವುಗಳು ಹೇರಳವಾಗಿದ್ದರಿಂದ ಈ ಅನ್ವರ್ಥಕನಾಮ ಬಂದಿದೆ. ರಟ್ಟರ ಕಾಲದ ಕ್ರಿ.ಶ.೧೧೨೭ರ ಶಾಸನದಲ್ಲಿ 'ಪೂವಿನ (ಹೂವಿನ) ಬಾಗೆಯ' ಎಂದು ಉಲ್ಲೇಖಮಾಡಲಾಗಿದೆ. ಕಾಲಾಂತರದಲ್ಲಿ 'ಪೂವಿನ-ಬಾಗೆ' ತನ್ನ ಹಿಂದಿನ 'ಪೂವಿನ' ಶಬ್ದವನ್ನು ಕಳೆದುಕೊಂಡು ಕೇವಲ 'ಬಾಗೆ', 'ಬಾಗಿ' ಯಾಗಿ ಉಳಿಯಿತು. ಇಂದಿಗೂ ಜನರ ಬಾಯಲ್ಲಿ 'ಬಾಗಿ' ಎಂದೇ ಉಳಿದಿದೆ. ಕೊಲ್ಹಾಪುರದ ರಾಜರು ಕ್ರಿ.ಶ.೧೭೪೦ರಲ್ಲಿ ಈ ಭಾಗವನ್ನು ಗೆದ್ದುಕೊಂಡು ಆಳ ಹತ್ತಿದಂದಿನಿಂದ 'ರಾಯರು' (ರಾಜರು) ಇರುವ 'ಬಾಗಿ', 'ರಾಯರ-ಬಾಗಿ'-'ರಾಯಬಾಗ' ವೆಂದು ಆಧುನಿಕ ನಾಮಕರಣವನ್ನು ಹೊಂದಿತು.

ರಾಯಬಾಗವು ರಾಜಕೀಯವಾಗಿ ಮೊದಲು ಬಾದಾಮಿ ಚಾಲುಕ್ಯರ, ನಂತರ ಕಲ್ಯಾಣ ಚಾಲುಕ್ಯರ, ಕಲಚೂರಿಗಳ ಆಧೀನಕ್ಕೊಳಪಟ್ಟಿತ್ತು. ಅವರ ಮಾಂಡಲಿಕರಾದ ಸೌಂದತ್ತಿರಟ್ಟರು ಈ ಭಾಗವನ್ನು ಕ್ರಿ.ಶ. ೯೨೦ ರಿಂದ ೧೨೨೦ ರವರೆಗೆ - ಅಂದರೆ ಸುಮಾರು ಮುನ್ನೂರು ವರ್ಷ ಆಳಿದರು. ರಟ್ಟರ ನಂತರ ಈ ಭಾಗವನ್ನು ಬಿಜಾಪುರದ ಆದಿಲ್‌ಶಾಹಿಗಳು, ಕೆಲವು ಕಾಲ ಮೊಗಲರ ಪ್ರತಿನಿಧಿಗಳು, ನಂತರ ಮರಾಠಾ ಅರಸರು ಆಳಿದ್ದಾರೆ.

ದಿಲ್ಲಿಯ ಅಲ್ಲಾ-ಉದ್ದೀನ ಖಿಲಜಿಯ ಸೇನಾಪತಿ ಮಲಿಕ-ಕಾಫರನು ದೇವಗಿರಿಯನ್ನು ವಶಪಡಿಸಿಕೊಂಡ ನಂತರ ದಕ್ಷಿಣದ ಕೊಂಕಣ, ಬೆಳಗಾವಿಯ ಕಡೆಗೂ ಸಾಗಿದನು. ಫರಿಸ್ತಾನು ಹೇಳುವಂತೆ ಖಿಲಜಿಯು ಬೆಳಗಾವಿ ಪ್ರದೇಶದಲ್ಲಿ ತನ್ನ ಇಬ್ಬರು ಅಧಿಕಾರಿಗಳನ್ನು ನೇಮಿಸಿದ್ದನು. ಅವರಲ್ಲೊಬ್ಬ ರಾಯಬಾಗದಲ್ಲಿ ನೆಲೆಸಿದ್ದನು. (ಇನ್ನೊಬ್ಬ ಹುಕ್ಕೇರಿಯಲ್ಲಿ ನೆಲೆಸಿದ್ದನು) ಕ್ರಿ.ಶ. ೧೩೪೭ರಲ್ಲಿ ಬಹಮನೀ ರಾಜ್ಯ ಸ್ಥಾಪನೆಯಾದ ನಂತರ ದೆಹಲಿಗೆ ಸಂಬಂಧಿಸಿದ ಪ್ರದೇಶವೆಲ್ಲ (ಘಟಪ್ರಭೆಯ ಉತ್ತರಕ್ಕೆ ಇದ್ದ ಭೂಭಾಗ) ಬಹಮನೀ ಆಡಳಿತಕ್ಕೆ ಒಳಪಟ್ಟಿತು. ದಕ್ಷಿಣದ ದೆಹಲಿ ಸುಲ್ತಾನರ ಆಡಳಿತದಲ್ಲಿ 'ಅಮೀರ' ಅಲ್-ಉದ್-ದಿನ್ ಹಸನನು ತನ್ನದೇ ಆದ ರಾಜವಂಶವನ್ನು ಸ್ಥಾಪಿಸಿದನೆಂದು ಪ್ರತೀತಿಯಿದೆ. ಈ ಹಸನನು ಮೂಲತಃ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡುಬೆ ಗ್ರಾಮದವನೆಂಬ ಅಭಿಪ್ರಾಯವೂ ಇದೆ. ಅವನಿಗೆ ಕುಡುಬೆ ಮತ್ತು ವೀರಜಗಳಲ್ಲಿ ಜಹಗೀರ ಇತ್ತೆಂಬ ಸಂಗತಿ ತಿಳಿದುಬರುತ್ತದೆ. ಅವನ ವಶದಲ್ಲಿದ್ದ ಬೆಳಗಾವಿಯ ಪ್ರದೇಶಗಳು ಮಲಿಕ ಸೈಫುದ್ದೀನನು ಆಡಳಿತ ಮಾಡುತ್ತಿದ್ದ ಪ್ರಾಂತದ ಭಾಗಗಳೇ ಆಗಿದ್ದವು.

ಬಿಜಾಪುರದ ಯುಸುಫ್‌ಆದಿಲನು ವಂಶ ಪರಂಪರಾಗತವಾದ ಬಹಮನಿಯ ಆಧೀನದಲ್ಲಿದ್ದ ಭಾಗಗಳನ್ನು ಪಡೆದುದರಿಂದ ರಾಯಭಾಗ, ಹುಕ್ಕೇರಿ, ಬೆಳಗಾವಿಗಳು ಅವನ

* 'ಬಸವ ನಿಲಯ', ೨ ನೇ ಮೆಯಿನ್, ೩ನೇ ಕ್ರಾಸ್, ಮಾರುತಿ ದೇವಾಲಯ ಸಮೀಪ, ನಾರಾಯಣಪುರ, ಧಾರವಾಡ - ೫೮೦೦೦೮

ಆಡಳಿತದ ಪ್ರಮುಖ ಕೇಂದ್ರಗಳಾಗಿಯೇ ಮುಂದುವರೆದವು. ಮೊದಲು ಅಸದ್‌ಖಾನನ್ನು ನಂತರ ಅವನ ಮಗನಾದ ಖಿಸವರ ಖಾನನನ್ನು ರಾಜ್ಯಪಾಲನನ್ನಾಗಿ ಮಾಡಲಾಯಿತು. ಅವನ ಆಧೀನದಲ್ಲಿ ಬೆಳಗಾವಿ, ರಾಯಬಾಗ, ಹುಕ್ಕೇರಿಗಳು ಉಳಿದುಕೊಂಡವು.

ಕ್ರಿ.ಶ. ೧೬೩೦ರಲ್ಲಿ ಮೊಗಲರ ಸೈನ್ಯವು ರಾಯಬಾಗವನ್ನು ತಲುಪಿ ಖಾನಜಮನ್‌ನ ನೇತೃತ್ವದಲ್ಲಿ ರಾಯಬಾಗ ಹುಕ್ಕೇರಿಗಳನ್ನು ಕೊಳ್ಳೆ ಹೊಡೆಯಿತು. ಇದೇ ರೀತಿ ಅಹಮದನಗರ ಸೈನ್ಯವು ಬಿಜಾಪುರದಿಂದ ಅಹಮದನಗರಕ್ಕೆ ಹಿಂದಿರುಗುವಾಗ ರಾಯಬಾಗ, ಹುಕ್ಕೇರಿಗಳನ್ನು ಲೂಟಿ ಮಾಡಿತು. ಮೊಗಲರ ಹೊಡೆತಕ್ಕೆ ಬಿಜಾಪುರ ಅದಿಲಶಾಹಿಯು ಜರ್ಜರಿತವಾಗಿ ಒಪ್ಪಂದದ ಕಾಗದ ಪತ್ರಗಳಿಗೆ ಸಹಿ ಹಾಕಿತು. ಇದರಿಂದ ತಾತ್ಕಾಲಿಕವಾಗಿ ಅದರ ಚಟುವಟಿಕೆಗಳು ಉತ್ತರದ ಗಡಿಯಲ್ಲಿ ನಿಂತು ಹೋದವು. ಆದರೂ ಆದಿಲಶಾಹಿ ಕಾಲದಲ್ಲಿ ಹುಕ್ಕೇರಿ, ರಾಯಬಾಗಗಳಲ್ಲಿ ಅಗರಬತ್ತಿ ಕಾರ್ಖಾನೆಗಳು ಪ್ರಾರಂಭಿಸಲ್ಪಟ್ಟವು. ಇಂಗ್ಲಿಷರೂ ಕೂಡ ರಾಯಬಾಗದಲ್ಲೊಂದು ಕಾಗದ ಕಾರ್ಖಾನೆಯನ್ನು ಪ್ರಾರಂಭಿಸಿದ್ದರು. ಹೀಗೆ ರಾಯಬಾಗವು ಆದಿಲಶಾಹೀ ಕಾಲದಲ್ಲಿ ಒಂದು ಪ್ರಮುಖ ವ್ಯಾಪಾರೀ ಕೇಂದ್ರವಾಗಿದ್ದಿತು. ಇಂದಿಗೂ ಇದು ಆ ಸ್ಥಾನವನ್ನು ಉಳಿಸಿಕೊಂಡಿದೆ.

ರಾಯಬಾಗವು ಹಲವು ಆಕ್ರಮಣಗಳನ್ನು ಕಂಡಿದ್ದರೆ ಕೊಲೆಗಳಿಗೂ ಸಾಕ್ಷಿಯಾಗಿದೆ. ೧೬೫೩ರಲ್ಲಿ ಇಬ್ರಾಹಿಮ್‌ನ ಸಹೋದರ ಇಸ್ಮಾಯಿಲ್‌ನು ಸ್ಥಾನೀಯ ರಾಜ್ಯಪಾಲನ ವಿರುದ್ಧ ಬಂಡೆದ್ದಾಗ ಅವನನ್ನು ಬಿಜಾಪುರದ ಸೇನಾಪತಿ ಹಮ್ಮೀದ ಖಾನನು ಸೆರೆಹಿಡಿದು ಅವನ ಸದ್ದನ್ನು ಅಡಗಿಸಿದ್ದನು. ಈ ಬಂಡಾಯದಲ್ಲಿ ಹುಕ್ಕೇರಿಯ ಆಡಳಿತಾಧಿಕಾರಿ ಐನ್-ಉಲ್-ಮುಲ್ಕಿ ಇಸ್ಮಾಯಿಲ್‌ನಿಗೆ ನೆರವು ನೀಡಿದ್ದನು. ನಿಜಾಮಶಾಹನು ಅವನನ್ನೇ ಬೆಂಬಲಿಸಿದ್ದನು. ಅವರೆಲ್ಲರೂ ರಾಯಬಾಗಕ್ಕೆ ಬಂದು ಹಮೀದಖಾನನನ್ನು ಕೊಲೆ ಮಾಡಿದರು. ನಂತರ ಇಸ್ಮಾಯಿಲ್‌ನನ್ನು ಬಿಜಾಪುರಕ್ಕೆ ಕರೆದೊಯ್ದು ಅವನ ಕಣ್ಣುಗಳನ್ನು ಕೀಳಿಸಿ ಸಾಯಿಸಿದರು.

ಮೊಗಲರ ತುಳಿತಕ್ಕೆ ರಾಯಬಾಗವು ಒಳಗಾದಂತೆ ಮರಾಠರ ಕೊಳ್ಳೆಗೂ ಆಹುತಿಯಾಯಿತು. ಶಿವಾಜಿಯ ಮಗನಾದ ಸಂಭಾಜಿಯು ಕ್ರಿ.ಶ. ೧೬೭೫ರಲ್ಲಿ ಹುಬ್ಬಳ್ಳಿಯಿಂದ ತನ್ನ ರಾಜ್ಯಕ್ಕೆ ಹಿಂದಿರುಗುವಾಗ ರಾಯಬಾಗವನ್ನು ಚೆನ್ನಾಗಿ ಲೂಟಿ ಮಾಡಿದನು. ಅದರ ಭೀಕರತೆಯ ಅರಿವು ಇಂಗ್ಲೀಷರ ವರದಿಯಿಂದ ಗೊತ್ತಾಗುತ್ತದೆ. ರಾಯಬಾಗದಲ್ಲಿದ್ದ ಇಂಗ್ಲೀಷರ ಫ್ಯಾಕ್ಟರಿಯು ಹೀಗೆ ವರದಿ ಮಾಡುತ್ತದೆ-''ದುಃಖಕರವಾದ ಸಂಗತಿಯೆಂದರೆ ರಾಯಬಾಗವನ್ನು ಬರ್ಬರ ರೀತಿಯಲ್ಲಿ ಹಾಳುಗೆಡವಲಾಯಿತು. ಬಟ್ಟೆಯು ದೊರೆಯದಿರುವುದಲ್ಲದೆ ಯುರೋಪಿಯನ್ನರ ಸಾಮಗ್ರಿಗಳು ಕೂಡ ಮಾರಲು ದೊರೆಯುತ್ತಿರಲಿಲ್ಲ.'' (English Records on Shivaji, II page 62)

ಹೀಗೆ ಮಧ್ಯಕಾಲೀನ ರಾಯಬಾಗದ ಜನಜೀವನವು ಅಶಾಂತಿ, ಅಸ್ಥಿರತೆ, ಲೂಟಿ, ಹಿಂಸೆ, ಆಕ್ರಮಗಳಿಂದ ಜರ್ಜರಿತವಾಗಿತ್ತು. ಪರಂಪರಾಗತವಾಗಿ ಸ್ಥಳೀಯರು ಹೇಳುತ್ತ ಬಂದ ಕಥನವೆಂದರೆ ಇಲ್ಲಿಯ ಜನರು ಸದಾ ಲೂಟಿ, ಆಕ್ರಮಣಗಳಿಗೆ ಎದೆಯೊಡ್ಡಿ ನಿಲ್ಲಬೇಕಾಗಿತ್ತು. ಅವರು ಹಗಲು ಒಂದು ಕಡೆ ಇರುತ್ತಿದ್ದರೆ ರಾತ್ರಿಯಲ್ಲಿ ಬೇರೊಂದು ಕಡೆಗೆ ವಾಸಿಸ ಬೇಕಾಗುತ್ತಿತ್ತು. ಇಷ್ಟರ ಮಟ್ಟಿನ ಅವರ ಅಸ್ಥಿರ ಬಾಳು.

ಮುಂದೆ ಕ್ರಿ.ಶ.೧೭೪೦ ರಲ್ಲಿ ಈ ಪ್ರದೇಶವನ್ನು ಕೊಲ್ಹಾಪುರದ ರಾಜರು (ತಾರಾಬಾಯಿ-ರಾಜಾರಾಮರಿಂದ ಪ್ರಾರಂಭವಾದ ಮರಾಠಾವಂಶ) ವಶಪಡಿಸಿಕೊಂಡು ಆಳಹತ್ತಿದಂದಿನಿಂದ ಇಲ್ಲಿಯ ಜನರು ನೆಮ್ಮದಿಯ ಜೀವನವನ್ನು ನಡೆಸುವಂತಾಯಿತು. ಈ ನಗರವು ಕೊಲ್ಹಾಪುರ ರಾಜರ ಮಳೆಗಾಲದ ವಾಸಸ್ಥಳವಾಗಿ ಪರಿಣಮಿಸಿತೇ ಹೊರತು ಹೆಚ್ಚಿನ ಅಭಿವೃದ್ಧಿಗಳೇನೂ ಇವರ ಆಳಿಕೆಯಲ್ಲಿ ಆಗಲಿಲ್ಲ. ಒಳ್ಳೆಯ ೨-೩ ಅರಮನೆಗಳು ನೋಡಲು ಸಿಗುತ್ತವೆ. ಆದರೆ ಮರಾಠಿಯ ಪ್ರಭಾವ ಜನಜೀವನದ ಮೇಲೆ ಸಾಕಷ್ಟು ಆಯಿತು. ಈ ತಾಲೂಕಿನ ಹಳ್ಳಿಗಳು ಮಾತ್ರ ಕನ್ನಡವನ್ನು ಗಟ್ಟಿಯಾಗಿ ಉಳಿಸಿಕೊಂಡವು. ಕ್ರಿ.ಶ.೧೯೪೭ರ ವರೆಗೆ ರಾಯಬಾಗವು ಮಹಲವಾಗಿಯೇ ಕೊಲ್ಹಾಪುರ ಸಂಸ್ಥಾನದ ಶಿರೋಳ ತಾಲೂಕಿನಲ್ಲಿಯೇ ಉಳಿಯಿತು. ಭಾರತ ಒಕ್ಕೂಟದಲ್ಲಿ ಸಂಸ್ಥಾನಗಳ ವಿಲೀನೀಕರಣವಾದಾಗ ರಾಯಬಾಗವು ಬೆಳಗಾವಿ ಜಿಲ್ಲೆಗೆ ಸೇರಿಸಲ್ಪಟ್ಟಿತು.

ಊರ ವರ್ಣನೆ: ರಾಯಬಾಗವು ರಟ್ಟರ ಕಾಲದಲ್ಲಿ ಹಲವು ಹೂವುಗಳಿಂದ, ಮರ-ಬಳ್ಳಿಗಳಿಂದ ಸುಂದರವಾಗಿದ್ದಿತು. ಭೂತಳದ ನಂದನವಾಗಿತ್ತು. ಎಲ್ಲ ಹೂವುಗಳಲ್ಲಿ ಶಿರೀಷ ಹೂವುಗಳದೇ ಆಧಿಕ್ಯ. ಪೊಸ ಪೊಂಗೋದಗೆ, ಜಾಜಿ, ಪಾಟಲಿ, ಲಸತ್ಸೇವಂತಿ ಸುರಹೊನ್ನೆ, ಸಂಪಿಗೆ, ಕಮಲ, ಮಲ್ಲಿಗೆ ಮುಂತಾದ ಹೂಗಳ ಸಮೂಹದಿಂದ ಈ ಊರು ಶೋಭಿಸುತ್ತಿತ್ತು ಅಷ್ಟ ದಿಕ್ಕುಗಳಲ್ಲಿಯೂ ಕಣ್ಣಿಗೆ ತಂಪನ್ನೀಡುವ ವೃಕ್ಷಗಳ ರಾಶಿಯೇ ರಾಶಿ. 'ಬಾಗಿ' ಯು 'ಪೂವಿನ-ಬಾಗಿ(ಬಾಗೆ) ಯೆಂಬ ಹೆಸರಿನಿಂದ ಚೆಲ್ಲಾಗಿತ್ತೆಂದು ಅಲ್ಲಿಯ ನಿವಾಸಿ ರಾಜಾದಿತ್ಯನು ತನ್ನ ಗಣಿತ ಗ್ರಂಥದಲ್ಲಿ ವರ್ಣಿಸುತ್ತಾನೆ. ಆದ್ದರಿಂದಲೇ ರಾಯಬಾಗವು ಕೂಂಡಿ (ಕುಹುಂಡಿ) ಮಂಡಲಕ್ಕೇ ಅನುಪಮ ರತ್ನವೆನಿಸಿದೆ. (**ಕೂಂಡಿ ಮಂಡಲಕ್ಕನುಪಮ ರತ್ನ ಮಂಡನಮೆನಿಪ್ಪಿದು ಪೂವಿನ ಬಾಗೆ ಸಂತತಂ**). ದಾರಿಹೋಕರು ಯಾವದೇ ದಿಕ್ಕಿನಲ್ಲಿ ನಿಂತರೂ ಅವರಿಗೆ ಗಿಡಗಳ ಸಾಲುಗಳು, ಅಲ್ಲಲ್ಲಿಗೆ ಒಳ್ಳೆಯ ಸುವಾಸನೆಗಳಿಂದ ಶೋಭಿಸುವ ಹೂದೋಟ ಗಳು, ಅಲ್ಲಲ್ಲಿ ಭ್ರಮರಗಳ ಸಾಲು, ಕೆರೆ ಸರೋವರಗಳಲ್ಲಿ ಹಂಸಗಳ ಸಾಲುಗಳು ಗೋಚರವಾಗುತ್ತಿದ್ದವು. ಆದರೆ ಇಂದು ಇದಕ್ಕೆ ವಿಪರೀತವಾಗಿ ಬಾಳೆಯ ತೋಟಗಳು, ಕಬ್ಬಿನ ತೋಟಗಳು ನೋಡಲು ಸಿಗುತ್ತವೆ. ಆ ವೈಭವ ಸೌಂದರ್ಯ ಇಂದು ಕಣ್ ಮರೆಯಾಗಿದೆ.

ರಾಜಾದಿತ್ಯ: ಇವನು ಪೂವಿನ ಬಾಗೆಯವ. ಜೈನ ಮತೀಯ. ಮೊಟ್ಟ ಮೊದಲಿಗೆ ಕನ್ನಡದಲ್ಲಿ ಗಣಿತ ಗ್ರಂಥವನ್ನು ಬರೆದವ.

ಕವಿ ಚರಿತ್ರೆಕಾರರ ರೀತ್ಯಾ ರಾಜಾದಿತ್ಯನು ವ್ಯವಹಾರಗಣಿತ ಕ್ಷೇತ್ರಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರಹಸುಗೆ, ಜೈನಸೂತ್ರ, ಟೀಕೋದಾಹರಣ ಮುಂತಾದವುಗಳನ್ನು ಬರೆದಿದ್ದಾನೆಂದು ತಿಳಿಯುತ್ತದೆ. ಈತನಿಗೆ 'ರಾಜವರ್ಮ' 'ಭಾಸ್ಕರ ಬಾದಯ್ಯ' ಎಂಬ ಹೆಸರುಗಳೂ, 'ಗಣಿತ ವಿಳಾಸ' 'ವಿದ್ಯಾಧರ' ಉತ್ತಮ ಭವ್ಯ ಭೂಷಣ' 'ಜನಪದ ಕಮಲ' 'ಮಧುಕರ' 'ಗಣಿತಶಾಸ್ತ್ರ ಪ್ರವೀಣ', 'ಓಜೆ ಬೆಡಂಗ' ಮುಂತಾದ ಬಿರುದುಗಳೂ ಇದ್ದಂತೆ ಕಂಡು ಬರುತ್ತದೆ. ಈ ಕವಿ ವಿಷ್ಣುನೃಪಾಲನ ಆಶ್ರಯ ದಲ್ಲಿದ್ದಿರಬಹುದೆಂಬ ಸೂಚನೆ ಕ್ರಿ.ಶ. ೧೧೮೩ ರ ನಾಗಮಂಡಲದ ಶಾಸನದಿಂದ ದೊರೆಯುತ್ತದೆ. ಇವನು ಗಣಿತದ ಸೂತ್ರಗಳನ್ನು ಪದ್ಯದಲ್ಲಿ, ಆ ಬಗ್ಗೆ ಟೀಕೆಗಳನ್ನು ಗದ್ಯದಲ್ಲಿ ಬರೆದು ಎಂಟು ಅಧಿಕಾರಗಳ 'ವ್ಯವಹಾರ ಗಣಿತ' ಎಂಬ ಕೃತಿ ರಚಿಸಿದ್ದಾನೆ. ರಟ್ಟರಕಾಲದಲ್ಲಿ ಬಹುಶಃ ರೂಢಿಯಲ್ಲಿದ್ದ ಅಂಕಗಣಿತ, ಬೀಜಗಣಿತ, ಕೋಷ್ಟಕಗಳನ್ನ ಈ ಕೃತಿಯಲ್ಲಿ ಮಂಡಿಸಿದ್ದಾನೆ. ಇದಲ್ಲದೆ ಕ್ಷೇತ್ರ ನಿಯಮಗಳನ್ನು ನಿರೂಪಿಸಿರುವ ಕ್ಷೇತ್ರಗಣಿತ, ಪ್ರಶ್ನೋತ್ತರ ರೂಪದ ಗಣಿತಕೃತಿ ಲೀಲಾವತಿ, ಹಾಗೂ ಪದ್ಯರೂಪದಲ್ಲಿ ಗಣಿತ ಸೂತ್ರಗಳನ್ನೊಳಗೊಂಡ 'ವ್ಯವಹಾರರತ್ನ' ಎಂಬ ಕೃತಿಯನ್ನು ಬರೆದಿದ್ದಾನೆ.

ಲೌಕಿಕ ಪ್ರಯೋಜನದೊಂದಿಗೆ ಆಧ್ಯಾತ್ಮಿಕ ಸಿದ್ಧಿ ಸಾಧಿಸುವುದಾಗಿದ್ದ ನಮ್ಮ ನಾಡಿನ ಅಂದಿನ ಶಿಕ್ಷಣವು ಮಠ-ಮಂದಿರಗಳಲ್ಲಿ, ಬಸದಿ-ವಿಹಾರಗಳಲ್ಲಿ, ಗುರುಕುಲಗಳಲ್ಲಿ ನಡೆಯುತ್ತಿತ್ತು. ಅಗ್ರಹಾರ, ಘಟಿಕಾಸ್ಥಾನ, ಬ್ರಹ್ಮಪುರಿ ಮುಂತಾದವುಗಳು ಅಂದಿನ ಶೈಕ್ಷಣಿಕ ಕೇಂದ್ರಗಳಾಗಿದ್ದುವು.

ಅಗ್ರಹಾರ: ಅಗ್ರಹಾರವೆಂದರೆ ಶ್ರೇಷ್ಠರಿರುವ ಸ್ಥಳ ಅಥವಾ ಊರು ಎಂದರ್ಥ. ವಿದ್ವಾಂಸರ ಉಪಜೀವನಕ್ಕಾಗಿ ನಿವೇಶನ ಅಥವಾ ಗ್ರಾಮ ಇಲ್ಲವೆ ಗ್ರಾಮಗಳನ್ನು ಅವರ ಉಪಭೋಗಕ್ಕೆ ಕೊಡುತ್ತಿದ್ದರು. ಆ ವಿದ್ವಾಂಸರ ಅಧ್ಯಯನ, ಅಧ್ಯಾಪನ ಕಾರ್ಯ ಅಲ್ಲಿಯೇ ನಡೆಯಲು ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿತ್ತು. ಹೀಗಾಗಿ ಅದೊಂದು ಸ್ವಯಂಪೂರ್ಣ, ಸ್ವಾಯತ್ತತೆಯುಳ್ಳ ಸಂಸ್ಥೆಯಾಗಿತ್ತು. ಸೌಂದತ್ತಿಯ ರಟ್ಟರ ಕಾಲದ ವಿದ್ಯಾಕೇಂದ್ರದ ಪ್ರಖ್ಯಾತಿ ದಕ್ಷಿಣ ಭಾರತದಲ್ಲೆಲ್ಲಾ ಹಬ್ಬಿತ್ತು. ಅದಕ್ಕೆಂದೇ "ಪ್ರಯಾಗ ಬಡಗಲು ತೆಂಕಲು ಬಾಗೆ..."

ಉತ್ತರದಲ್ಲಿ ಪ್ರಯಾಗವು (ಕಾಶೀ) ವಿದ್ಯೆಗೆ ಹೇಗೆ ಪ್ರಸಿದ್ಧವೋ ಹಾಗೆ ದಕ್ಷಿಣ ಭಾರತದಲ್ಲಿ 'ಬಾಗೆ' ಅಂದರೆ ರಾಯಬಾಗವು ಸುಪ್ರಸಿದ್ಧವೆಂದು ಕ್ರಿ.ಶ. ೧೧೦೦ ರ ಸಂಕ್ಕೇಶ್ವರ ಶಾಸನವು ಹೇಳುತ್ತದೆ. ರಟ್ಟರ ಕಾಲದ ಕ್ರಿ.ಶ. ೧೧೨೭ ರ ಇನ್ನೊಂದು ಶಾಸನವೊಂದರಲ್ಲಿ " ಶ್ರೀ ಮನ್ಮಹಾ ಘಟಿಕಾಸ್ಥಾನ ವಗ್ರಹಾರ ಬಾಗೆಯ ತ್ರಿಭೋಗಾಂತರ ಸಿದ್ಧಿಯಂ ಪಡೆದಾಳುತ್ತಮಿರೆ" ಎಂದು ಉಲ್ಲೇಖ ಮಾಡಲಾಗಿದೆ. ಅಂದರೆ ಅಂದಿನ ರಾಯಬಾಗವು (ಮಹಾ)ಘಟಿಕಾಸ್ಥಾನ, (ಪಿರಿಯ) ಅಗ್ರಹಾರವೆರಡನ್ನೂ ಹೊಂದಿದ್ದಿತು. ಸಂಖ್ಯೆ, ಸತ್ವಗಳಲ್ಲಿ ಈ ಎರಡೂ ಕೇಂದ್ರಗಳು ಸಬಲವಾಗಿದ್ದುದರಿಂದ 'ಮಹಾ' ವಿಶೇಷಣದಿಂದ ಕರೆದರೆಂದು ತೋರುತ್ತದೆ.

ಬ್ರಹ್ಮಪುರಿ: ರಾಯಬಾಗದ ಶಾಸನವೊಂದರಲ್ಲಿ "ಬ್ರಹ್ಮಪುರಿಗೆಯ ೧೦೦ ಮನೆ" ಎಂಬ ಉಲ್ಲೇಖ ಬರುವುದರಿಂದ ನಗರದ ಬಡಾವಣೆಯಲ್ಲಿ ಒಂದೆಡೆಗೆ ೧೦೦ ಜನ ಬ್ರಾಹ್ಮಣರು ವಾಸಿಸುತ್ತಿದ್ದರೆಂಬ ಸಂಗತಿ ತಿಳಿದು ಬರುತ್ತದೆ. ಈ ಬ್ರಾಹ್ಮಣರು ವೇದ, ಶಾಸ್ತ್ರ, ಕಾವ್ಯಗಳಲ್ಲಿ ಪರಿಣಿತರಿದ್ದರು. ಆದುದರಿಂದಲೇ "ಭುವನ ಕಾವ್ಯ ವಿಪ್ರೋತ್ತಮ ಕುಳತಿಳಕಂ" ಎಂದು ರಟ್ಟರ ಕಾಲದ ಇನ್ನೊಂದು ಶಾಸನವು ನಿರೂಪಿಸುತ್ತದೆ. ಈ ಬ್ರಾಹ್ಮಣರು ಅಭ್ಯಾಸಿಗಳಷ್ಟೇ ಅಲ್ಲ, "ಷಟ್ಕರ್ಮನಿರತರು " ಕೂಡ. ಇದರ ಜೊತೆಗೆ ತತ್ವಜ್ಞಾನದ ಅಧ್ಯಯನಶೀಲರಾಗಿದ್ದರು.

ರಾಯಬಾಗದ ನಿವಾಸಿ ಹಮ್ಮರಸನ ಮಗ ಚಾವುಂಡರಾಯನು ರಟ್ಟರಸರಲ್ಲಿ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದವನು. ಮತೀಯ ದೃಷ್ಟಿಯಿಂದ ಜೈನನಾದರೂ ವರ್ಣಾಶ್ರಮ ಧರ್ಮವನ್ನು ಅನುಸರಿಸುವವನಾಗಿದ್ದನು. ಒಂದೊಂದು ವರ್ಣದವರಿಗೆ ಒಂದೊಂದು ಪ್ರತ್ಯೇಕವಾದ ಬೀದಿಯನ್ನು ನಿರ್ಮಿಸಿದ್ದನು. ("ರಟ್ಟರಾಜ್ಯೋಧರಣ ಪರಿಣತಂ ಮಂತ್ರಿ ಚಾವುಂಡರಾಯಂ ನಯ ನಿಪುಣರುಪಾಯ ಚತುಷ್ಟಂಗಳಂ ರಟ್ಟ ರಾಜ್ಯದೊದ್ದೆಶೆ ವರುಣಾಶ್ರಮದೊಳೆ ಬಿದಿ ನಿಲಿಸಿದೆನೆ." In. N.K.& K. States.)

ಅಂದಿನ ಕಾಲದಲ್ಲಿ ಜೈನ ರಾಜರೂ ಕೂಡ ವರ್ಣಾಶ್ರಮ ಧರ್ಮವನ್ನು ಪಾಲಿಸುವುದು ಧರ್ಮ ಮತ್ತು ಕರ್ತವ್ಯವೆಂದು ಭಾವಿಸಿದ್ದರು. ಅದರಂತೆ ಆಚರಿಸುತ್ತಲೂ ಇದ್ದರು. ಇದರಿಂದ ವರ್ಣಾಶ್ರಮಧರ್ಮದ ಪ್ರಭಾವ, ಸಮಾಜದ ಮೇಲೆ ಅದರ ಹಿಡಿತ ಎಷ್ಟಿತ್ತೆಂಬುದು ಅರ್ಥವಾಗುತ್ತದೆ.

ಧರ್ಮ: ಧರ್ಮ ಭಾರತೀಯ ಜನಜೀವನದ, ಸಂಸ್ಕೃತಿಯ ಜೀವಾಳ. ನೈತಿಕ ಜೀವನ ನಡೆಸುವಲ್ಲಿ ಧರ್ಮದ ಪಾತ್ರ ಬಲು ಹಿರಿದು. ಭಾರತದಲ್ಲಿ ಅನೇಕ ಧರ್ಮಗಳು ಹುಟ್ಟಿ ಬೆಳೆದವು. ಈ ಕಾರಣ ಇಲ್ಲಿ ಧರ್ಮ ಸಮನ್ವಯತೆ ಸಿದ್ಧಿಸಿದೆ. ರಾಜರಾದವರು ಎಲ್ಲ ಧರ್ಮೀಯರನ್ನು ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಂಡಿದ್ದಾರೆ. ಇದೇ ಪರಂಪರೆಯನ್ನು ಕುಹುಂಡಿ ಮಂಡಳದ ರಟ್ಟರಾಜರು ಮುಂದುವರಿಸಿದರು. ಇವರು ಯಾಪನೀಯ (ಜೈನಧರ್ಮದ) ಪಂಥದ ಅನುಯಾಯಿಗಳಾಗಿದ್ದರು. ಇವರ ಕಾಲದಲ್ಲಿ ರಾಯಬಾಗದಲ್ಲಿಯೂ ಯಾಪನೀಯ ಪಂಥದ ಶಾಖೆಯೊಂದಿತ್ತು. ರಟ್ಟ ರಾಜರು ಸ್ವತಃ ಜೈನ ಧರ್ಮೀಯರಾದರೂ

ಶೈವಧರ್ಮಕ್ಕೂ ಪ್ರೋತ್ಸಾಹ, ಪೋಷಣೆಗಳನ್ನಿತ್ತರು. ಅವರು ಬ್ರಾಹ್ಮಣರಿಗೆ, ತಪಸ್ವಿಗಳಿಗೆ, ವಿದ್ವಾಂಸರಿಗೆ ಕವಿಗಳಿಗೆ ರಾಜಾಶ್ರಯ ಕೊಟ್ಟರು. ವರ್ಣಾಶ್ರಮ ಧರ್ಮವನ್ನು ಪೋಷಿಸಿದರು. ರಾಯಬಾಗ ಹಾಗೂ ಸಂಕೇಶ್ವರ ಜಿನಬಸ್ತಿಗಳ ಶಾಸನಗಳ ಪ್ರಕಾರ (ಕ್ರಿ.ಶ.೧೧೨೭ ಮತ್ತು ೧೨೦೦) ರಟ್ಟರಾಜರು ಸ್ವಧರ್ಮನಿಷ್ಠರೂ, ಪರಧರ್ಮ ಸಹಿಷ್ಣುಗಳೂ ಆಗಿದ್ದರೆಂದು ತಿಳಿದುಬರುತ್ತದೆ.

ರಾಯಬಾಗದಲ್ಲಿ ಜೈನರ ಆದಿನಾಥ ಬಸದಿ, ಮಹಾವೀರ ಬಸದಿಗಳ ಜೊತೆ ಜೊತೆಗೇ ಬಂಕನಾಥ ದೇವಾಲಯ, ಸೋಮನಾಥ ದೇವಾಲಯಗಳು ಶೈವಧರ್ಮದ ಪ್ರತೀಕಗಳಾಗಿ ನಿಂತಿವೆ. ಅಲ್ಲದೆ ಗಾಣಪತ್ಯ ಪಂಥದ ಕುರುಹಾಗಿ ಇಲ್ಲಿ ಅನೇಕ ಗಣಪತಿ ವಿಗ್ರಹಗಳು ಸ್ಮಾರಕಗಳಾಗಿ ನೆಲೆನಿಂತಿವೆ. ನರಸಿಂಹಮೂರ್ತಿ, ವಿಷ್ಣುಮೂರ್ತಿಗಳು ವೈಷ್ಣವ ಮತದ ಪ್ರತಿನಿಧಿಗಳಾಗಿ ವಿರಾಜಿಸುತ್ತಿವೆ. ಶಾಕ್ತಮತದ ದುರ್ಗಾ ದೇವತೆಯೂ ಇಲ್ಲಿ ನೆಲೆಸಿದ್ದಾಳೆ. ಶೈವ, ವೀರಶೈವರಿಗೆ ಸಿದ್ಧೇಶ್ವರ ದೇವಾಲಯ ಆರಾಧನಾ ಕೇಂದ್ರವಾದರೆ ಎಲ್ಲ ಮತೀಯರಿಗೆ ಸರ್ವಜನಪ್ರಿಯ ಮಾರುತಿ ಮಂದಿರವೂ ಪೂಜಾ ಹಾಗೂ ಶ್ರದ್ಧಾ ಸ್ಥಳವಾಗಿದೆ. ಇಸ್ಲಾಮ ಧರ್ಮದ ವಿಜಾಪುರದ ಆದಿಲಶಾಹೀ ಕಾಲದ ಪ್ರಾರ್ಥನಾ ಮಂದಿರವೂ (ಮಸೀದಿ) ಇದೆ. ಹೀಗೆ ರಾಯಬಾಗದಲ್ಲಿ ಜೈನ, ವೈಷ್ಣವ, ಶೈವ, ವೀರಶೈವ, ಇಸ್ಲಾಮ ಧರ್ಮಗಳ ಸಮನ್ವಯತೆಯನ್ನು ಕಾಣುತ್ತೇವೆ.

ವಾಸ್ತುಶಿಲ್ಪ: ಕಟ್ಟಡ ಕಟ್ಟುವ ಕಲೆ ವಾಸ್ತುಶಿಲ್ಪವೆನಿಸಿದರೆ, ಘನವಸ್ತುಗಳಲ್ಲಿ ಕೆತ್ತುವ, ಕಟೆಯುವ, ಚಿತ್ರಿಸುವ ಕಲೆಯು ಮೂರ್ತಿಶಿಲ್ಪವಾಯಿತು. ಕರ್ನಾಟಕದಲ್ಲಿ ಚಾಲುಕ್ಯ-ಶೈಲಿ, ಹೊಯ್ಸಳ ಶೈಲಿಗಳೆಂಬ ಎರಡು ಪ್ರಭೇದಗಳು ಉಂಟಾದವು. ಚಾಲುಕ್ಯ ಶೈಲಿಯ ಗುಡಿಗಳನ್ನು ಬಾದಾಮಿ, ಪಟ್ಟದಕಲ್ಲು, ಐಹೊಳೆಗಳಲ್ಲಿ ಕಾಣುತ್ತೇವೆ. ಈ ಮಾದರಿಯ ಗುಡಿಗಳು ಉತ್ತರ ಕರ್ನಾಟಕದಲ್ಲೆಲ್ಲಾ ಕಂಡುಬರುತ್ತವೆ. ಈ ಪರಂಪರೆಯನ್ನು ರಟ್ಟರಾಜರು ಉಳಿಸಿಕೊಂಡು ಬಂದರಲ್ಲದೆ, ಬೆಳಸಿಕೊಂಡೂ ಬಂದರು. ಅವರ ವಾಸ್ತುಶಿಲ್ಪವನ್ನು ಉತ್ತರ ಭಾಗದಲ್ಲಿ ರಾಯಬಾಗ, ತೇರದಾಳ ಯಕ್ತಂಬಾಗಳಲ್ಲಿ ಕಾಣುತ್ತೇವೆ. ರಾಯಬಾಗ ದೇವಾಲಯಗಳ ಒಂದು ವಿಹಂಗಮ ನೋಟವನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಸೋಮನಾಥ ದೇವಾಲಯ: ಈ ದೇವಾಲಯವನ್ನು ಬಾದಾಮಿ ಚಾಲುಕ್ಯರ ಮಹಾಕೂಟೇಶ್ವರ ದೇವಾಲಯದ ಮಾದರಿಯಲ್ಲಿ ಕಟ್ಟಲಾಗಿದೆ. ಇದರ ನಿರ್ಮಾಣ ಬಾದಾಮಿ ಚಾಲುಕ್ಯರ ಸಮಯದಲ್ಲಾಗಲಿ, ಅಥವಾ ಕಲ್ಯಾಣ ಚಾಲುಕ್ಯರ ಕಾಲದಲ್ಲಾಗಲಿ ಆಗಿರಬೇಕು. ಖಚಿತವಾದ ರಚನಾ ಕಾಲ ತಿಳಿದು ಬಂದಿಲ್ಲ. ಇದರ ಅಧಿಷ್ಠಾನ ನೆಲಗಟ್ಟಿನ ಮೇಲೆ ನಿಂತಿದ್ದು ಮೂರು ಸ್ತರಗಳಲ್ಲಿ ಪಸರಿಸಿದೆ. ಇದರ ಮೇಲೆ ಗರ್ಭಗುಡಿ, ಸುಕನಾಸಿಗಳನ್ನು ನಿರ್ಮಿಸಲಾಗಿದೆ. ಮೇಲ್ಛಾವಣಿಯ ಮೇಲೆ ಸುಮಾರು ಮೂವತ್ತು ಅಡಿ ಎತ್ತರದ ಶಿಖರವನ್ನು ರಚಿಸಲಾಗಿದೆ. ಆದರೆ ಈ ಶಿಖರವು ಇಟ್ಟಿಗೆ-ಗಚ್ಚಿನಿಂದ ನಿರ್ಮಿಸಲ್ಪಟ್ಟಿದ್ದು ಇದು ನಂತರದ ರಚನೆಯೆಂದು ಕಂಡು ಬರುತ್ತದೆ. ಶಿಖರದ ತುದಿಯಲ್ಲಿ ಕಳಸವಿದೆ. ಗುಡಿಯು ಪೂರ್ವಾಭಿಮುಖವಾಗಿದ್ದು ಪ್ರದಕ್ಷಿಣ ಪಥವು ಹೊರಗೇ ಇದೆ. ಈ ದೇವಾಲಯಕ್ಕೆ ಒಂದು ಪೂರ್ವಾಭಿಮುಖ, ಇನ್ನೊಂದು ದಕ್ಷಿಣಾಭಿಮುಖವಾದ ಎರಡು ಪ್ರವೇಶ ದ್ವಾರಗಳಿವೆ. ಇವುಗಳಿಗೆ ಹೊಂದಿಯೇ ಎರಡೂ ಮಗ್ಗಲೂ ಮಣಿತೋರಣಗಳಿವೆ. ನಂದೀ ಮಂಟಪವು ವಿಶಾಲವಾಗಿದೆ.

ನಂದಿ, ಈಶ್ವರಲಿಂಗ ಮಧ್ಯಮ ಗಾತ್ರದಿದ್ದರೂ ಭವ್ಯವೂ, ಆಕರ್ಷಕವೂ ಆಗಿದೆ. ದ್ವಾರದ ಚೌಕಟ್ಟುಗಳನ್ನು ಸುಂದರವಾಗಿ ಸಿಂಗರಿಸಲಾಗಿದೆ. ಮೊದಲನೆಯ ಪಟ್ಟಿಯ ಮೇಲ್ಭಾಗವನ್ನು ಸುಳುಹುಗಳಿಂದ ಅಲಂಕರಿಸಲಾಗಿದೆ. ಪಟ್ಟಿಯಲ್ಲಿ ವಾದ್ಯಕಾರರು, ನೃತ್ಯಗಾರರು ಇರುವರು. ಎರಡನೇ ಪಟ್ಟಿಯಲ್ಲಿ ಸುಳುವುಗಳಿವೆ. ಮೂರನೆಯದರಲ್ಲಿ ಆನೆಗಳು, ಕಲಶಗಳುಳ್ಳ ಕಂಬಗಳಿವೆ. ಮಗ್ಗುಲಿನ ಇನ್ನೊಂದು ಪಟ್ಟಿಯಲ್ಲಿ ಬಿಲ್ಲುಗಾರರು, ಗದಾಧಾರಿಗಳು, ಯುದ್ಧಕ್ಕೆ ಸಿದ್ಧರಾದ ಸೈನಿಕರು ನಿಂತಿದ್ದಾರೆ. ಇವರಲ್ಲಿ ಕೆಲವರಿಗೆ ಯಜ್ಞೋಪವೀತವಿದೆ. ಈ ಚಿತ್ರಗಳಲ್ಲಿ ಒಂದು ವಿಷ್ಣುವಿನ ಮೂರ್ತಿಯೂ ಕಂಡು ಬರುತ್ತದೆ. ಇದು ಧರ್ಮ ಸಮನ್ವಯದ ಸಂಕೇತವಾಗಿದೆ.

ರಂಗ ಮಂಟಪದ ಕಂಬಗಳು ಗಾತ್ರದಲ್ಲಿ ಚಚ್ಚೌಕವಾಗಿರುವವು. ಸಾಕಷ್ಟು ಎತ್ತರವೂ ಆಗಿವೆ. ಇವುಗಳ ಮೇಲೆ ಸುಳುವು ಮತ್ತು ಇತರ ಚಿತ್ರಗಳನ್ನು ಬಿಡಿಸಿರುವರು. ಮೇಲ್ಛಾವಣಿಯಲ್ಲಿ ಕಮಲಗಳನ್ನು ಬಿಡಿಸಲಾಗಿದೆ. ಈ ಸೋಮನಾಥ ದೇವಾಲಯವು ಮೊದಲು ಬಸದಿಯಾಗಿದ್ದು ನಂತರ ಶೈವ ದೇವಾಲಯವಾಗಿ ಪರಿವರ್ತಿಸಲಾಗಿದೆ ಎಂದು ಶ್ರೀ ಆರ್.ಆರ್. ಮುತಾಲಿಕರು ಅಭಿಪ್ರಾಯಪಟ್ಟಿದ್ದಾರೆ ('ಕಾಲ' - ತ್ರೈಮಾಸಿಕ). ಆದರೆ ಇದಕ್ಕೆ ಯಾವ ಆಧಾರಗಳನ್ನೂ ಒದಗಿಸಿಲ್ಲ. ಗರ್ಭಗುಡಿಯ ಚೌಕಟ್ಟಿನ ಮೇಲೆ ಸ್ತ್ರೀ ವಿಗ್ರಹವಿದೆ. ಇದು ಬಹುಶಃ ಗಜಲಕ್ಷ್ಮಿಯ ಮೂರ್ತಿಯಾಗಿರಬೇಕು; ಇದು ಜಿನ ಬಿಂಬವಲ್ಲ. ಈ ಗುಡಿಯ ಒಳ-ಹೊರಗೂ ಜೈನ ಕುರುಹುಗಳು, ಜಿನಬಿಂಬಗಳು, ಅಥವಾ ಮೂರ್ತಿಗಳಾವೂ ಇಲ್ಲ. ಆದರೆ ರಾಯಬಾಗ ಬಸದಿಗಳಲ್ಲಿ ಮಾತ್ರ ಸ್ಪಷ್ಟವಾದ ಜಿನಮೂರ್ತಿಗಳಿವೆ. ಶಿಲ್ಪ ಚಿತ್ರ ಪಟ್ಟಿಕೆಯಲ್ಲಿರುವುದಿಲ್ಲ.

ಬಂಕನಾಥ ದೇವಾಲಯ: ಈ ಗುಡಿಯ ಒಳಭಾಗವು ಪುರಾತನವಾದುದಾದರೆ ಶಿಖರವು ನವೀನತಮವಾಗಿದೆ. ಕಲ್ಲಿನ ಕಂಬಗಳು ಗಾತ್ರ ಮತ್ತು ಎತ್ತರದಲ್ಲಿ ಚಿಕ್ಕವಾಗಿವೆ. ಈ ಗುಡಿಯು ಸಾದಾ ಮತ್ತು ಸರಳ ರೀತಿಯಲ್ಲಿದೆ. ಗರ್ಭಗುಡಿಯಲ್ಲಿ ಶಿವಲಿಂಗವಿದೆ. ನಂದಿಯಿದೆ. ಈ ವೃಷಭದ ಬದಿಯಲ್ಲಿ ಪಾದುಕೆಗಳಿವೆ. ಈ ದೇವಾಲಯವನ್ನು ಹನ್ನೆರಡನೆಯ ಶತಮಾನದ

ಬಂಕನಾಥನೆಂಬ ಶರಣನು ಕಟ್ಟಿಸಿರಬಹುದೆಂದು ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಅವನ ಹೆಸರಿನಲ್ಲಿ ಇನ್ನಾರೋ ಕಟ್ಟಿಸಿರುವ ಸಾಧ್ಯತೆಯೂ ಇದೆ.

ಈ ಗುಡಿಯು ಕಂಬಗಳು ಅಖಂಡ ಏಕಕಲ್ಲಿನಲ್ಲಿ ಕಟೆದಂತವುಗಳು. ಗರ್ಭಗುಡಿಯ ನಾಲ್ಕು ಗೋಡೆಗಳ ಮೇಲೆ ಕಲ್ಲಿನ ಛಾವಣಿಯಿದೆ. ಚೌಕೋನಾಕಾರದಲ್ಲಿ ಕಲ್ಲುಗಳನ್ನು ಹೊಂದಿಸಿ ಮೇಲ್‌ಛಾವಣಿಯನ್ನು ಮಾಡಲಾಗಿದೆ. ಗರ್ಭಗುಡಿಯ ಮೇಲ್‌ಛಾವಣಿಯಂತೆಯೇ ರಂಗಮಂಟಪದ ಛಾವಣಿಯೂ ಇದೆ. ಈ ರಂಗಮಂಟಪದಲ್ಲಿ ವಿವಿಧ ಭಂಗಿಗಳಲ್ಲಿರುವ ಚಿತ್ರಗೊಂಬೆಗಳಿವೆ. ಒಂದರಲ್ಲಿ ನೃತ್ಯ ಮಾಡುವದಿದ್ದರೆ ಇನ್ನೊಂದರಲ್ಲಿ ಡೋಲು ಬಾರಿಸುವದಿದೆ. ಮತ್ತೊಂದು ಕಲ್ಲು ಚಿತ್ರ ವೀಣೆ ನುಡಿಸುವುದಿದೆ. ಒಂದು ಮೂರ್ತಿ ಬತ್ತಲೆಯಾಗಿದೆ. ಇನ್ನೊಂದು ವಿಚಿತ್ರವಾದ ಚಿತ್ರವಿದೆ. ಮುಖ ಒಂದರಲ್ಲಿಯೇ ಮೂರು ವ್ಯಕ್ತಿಗಳಿದ್ದು, ಅವು ಒಂದೇ ತೆರನಾಗಿವೆ. ಆ ಮೂರು ವ್ಯಕ್ತಿಗಳ ಕೈಕಾಲುಗಳು ಮೂರು ಬೇರೆ ಬೇರೆ ದಿಕ್ಕಿನಲ್ಲಿವೆ.

ಪ್ರವೇಶದ್ವಾರದ ಮೇಲ್ಗಡೆಗೆ ಬಹುಶಃ ಇತ್ತೀಚೆಗಿನ ನಿರ್ಮಿತ ಆಸೀನ ಗಣಪತಿ ವಿಗ್ರಹವಿದೆ. ಛಾವಣಿಯ ಮೇಲ್ಭಾಗ ಗಚ್ಚಿನದು ಇದ್ದು ಇದರ ಸುತ್ತಲೂ ಇಟ್ಟಂಗಿಯ ಒಂದು ಅಡಿ ಎತ್ತರದ ಗೋಡೆಯಿದೆ. ಗರ್ಭಗುಡಿಯ ಮೇಲ್ ಛಾವಣಿಯ ಮೇಲೆ ತ್ರಿಕೋನಾಕೃತಿಯ ಗೋಪುರವಿದೆ. ಈ ಗೋಪುರದ ಮುಂಭಾಗದಲ್ಲಿ ಸಿಮೆಂಟಿನಲ್ಲಿ ಬಿಡಿಸಲಾದ ಶಿವ-ಪಾರ್ವತಿಯರ ಚಿತ್ರವಿದೆ.

ಸಿದ್ಧೇಶ್ವರ ದೇವಾಲಯ: ಅಷ್ಟೇನೂ ಪ್ರಾಚೀನವೆನಿಸದ ಈ ಗುಡಿಯಲ್ಲಿ ಶಿವಲಿಂಗ ಹಾಗೂ ನಂದಿವಿಗ್ರಹವಿದೆ. ಗುಡಿ ಸುತ್ತ ಪೌಳಿ ಇದೆ. ಮುಸ್ಲಿಮ್ ಶೈಲಿಯ ಕಮಾನಿನ ಆಕಾರದಲ್ಲಿ ಗೋಡೆಗಳ ಮಧ್ಯದಲ್ಲಿನ ಕಂಬದ ಕಮಾನುಗಳನ್ನು ನಿರ್ಮಿಸಿದಂತಿದೆ.

ವೃಷಭನಾಥ ಬಸದಿ: ಈ ಬಸದಿಯನ್ನು ಚಾಲುಕ್ಯ ಶೈಲಿಯಲ್ಲಿ ನಿರ್ಮಿಸಲಾಗಿದೆ. ಪುರಾತನವಾದ ಈ ಬಸದಿಯು ಶಾಸನಗಳ ರೀತ್ಯಾ ಪಾರ್ಶ್ವನಾಥ ಬಸದಿಯಾಗಿದ್ದು ೧೬ನೇ ಶತಮಾನದ ನಂತರ ವೃಷಭನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈಗ ಪಾರ್ಶ್ವನಾಥ, ಶಾಂತಿನಾಥ ಮೂರ್ತಿಗಳನ್ನು ನಿಲ್ಲಿಸಲಾಗಿದೆ. ''ವೃಷಭನಾಥ ಬಸದಿಯನ್ನು ಶಕವರ್ಷ, ಕೃಷ್ಣಪಕ್ಷದ ೧೪೬೦ರಲ್ಲಿ, ವಾದಿಸಿಂಹ ಭಟ್ಟಾರಕರ ಉಪದೇಶದಿಂದ ದಿಲ್ಲಿ ಸಿಂಹಾಸನಾದೀಶ್ವರನು ಜೀರ್ಣೋದ್ಧಾರ ಮಾಡಿಸಿದನೆಂದು'' ಇಲ್ಲಿಯ ಒಂದು ಚಿಕ್ಕ ಶಾಸನದ ಸಾಲುಗಳಿಂದ ತಿಳಿದು ಬರುತ್ತದೆ.

ಈ ಜಿನಾಲಯವು ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪಗಳಿಂದ ಕೂಡಿದೆ. ಇಲ್ಲಿಯ ಕಂಬಗಳು ಭವ್ಯವೂ, ಎತ್ತರವೂ ಆಗಿವೆ. ಅಲ್ಲದೆ ಸುಳಿವು, ಕಮಲಗಳಿಂದ, ಕೆತ್ತನೆಯ ಕೆಲಸಗಳಿಂದ ಕೂಡಿವೆ. ಗರ್ಭಗುಡಿಯಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ವೃಷಭನಾಥ ದೇವರ ಮೂರ್ತಿಯಿದೆ. ಈ ವಿಗ್ರಹವನ್ನು ಕಪ್ಪುಶಿಲೆಯಲ್ಲಿ ಕಟೆಯಲಾಗಿದೆ. ಗರ್ಭಗುಡಿಯ ಬಾಗಿಲಲ್ಲಿ ಸುಂದರವಾದ ನಕ್ಷೆಗಳನ್ನು ಬಿಡಿಸಲಾಗಿದೆ. ಈ ಬಸದಿಯ ಹೊರಮಗ್ಗಲು, ಪೂರ್ವ ಮತ್ತು ಪಶ್ಚಿಮ ಗೋಡೆಗಳ ಮೇಲ್ಗಡೆಗೆ ವೃಷಭದೇವರ ಕಲ್ಲು ಮೂರ್ತಿಗಳಿವೆ. ಇಲ್ಲಿಯ ಸುಕನಾಸಿ ಮತ್ತು ನವರಂಗಗಳು ಮುಕ್ತವಾಗಿದ್ದವೆಂದು ತೋರುತ್ತದೆ. ನಂತರ ಗೋಡೆಗಳನ್ನು ಯಾವಾಗಲೋ ಕಟ್ಟಿಸಿರಬೇಕು. ಈ ಗೋಡೆಗಳು ಮೇಲ್ಛಾವಣಿಗಳು ಶಿಥಿಲವಾದಾಗ ಅವುಗಳ ಸಂರಕ್ಷಣೆಗೆ ಕಲ್ಲಿನ ಗೋಡೆಗಳನ್ನು ಕಟ್ಟಿಸಲಾಗಿದೆ. ಇದೇ ಜೀರ್ಣೋದ್ಧಾರಕ್ಕೆ ಒಳಗಾದ ಭಾಗ.

ಬಸದಿಯ ಮುಂದುಗಡೆಯ (ಮುಂಬದಿಯ) ಹೊರಗೋಡೆಯಲ್ಲಿ 'ಹಮ್ಮ'ನೆನ್ನುವವನು ಎರಡನೇ ಕಾರ್ತವೀರ್ಯನ ಅನುಗ್ರಹದಿಂದ ಕ್ರಿ.ಶ. ೧೧೨೭ರಲ್ಲಿ ಶಾಸನವೊಂದನ್ನು ಬರೆಯಿಸಿದನೆಂದು ಹೇಳಲಾಗಿದೆ. (**''ಕಾರ್ತವೀರ್ಯನುಗ್ರಹದಿಂ ಹಂಮ-ರಾಜನೂರ್ಜಿತ ತೇಜಂ ಬರೆಯಿಸಿದಂ ನಿಜವಂಶದ ಪುರಾತನರ್ಪ್ಪಡೆದ ಶಾಸನಂ..''**) ಈ ಬಸದಿಯ ಎದುರುಗಡೆ ಸುಮಾರು ಮೂವತ್ತು ಅಡಿಗಳಷ್ಟು ಎತ್ತರವಾದ ಮಾನಸ್ತಂಭವಿದೆ.

ಮಾರಸಿಂಗ ಶೆಟ್ಟಿಯ ಬಸದಿ: (ರಾಯಬಾಗಶಾಸನ -ಕ್ರಿ.ಶ ೧೧೫೯) ಹಿಂದಿನ ಅಗ್ರಹಾರ - ಇಂದಿನ ರಾಯಬಾಗದಲ್ಲಿ ಮಾರಸಿಂಗ ಬಸದಿಯೊಂದು ಇತ್ತೆಂದು ಶಾಸನಾಧಾರದಿಂದ ತಿಳಿದು ಬರುತ್ತದೆ. ಆದರೆ ಈಗ ಈ ಹೆಸರಿನ ಬಸದಿಯೇ ಅಸ್ತಿತ್ವದಲ್ಲಿಲ್ಲ. ಈ ಊರಿನ ನಿವಾಸಿ ನಾಕರಸನು ದಾಸಮಾರಗನಿಗೆ, ಈ ಬಸದಿಗೆ ಯಾವ ದತ್ತಿಗಳು ಇಲ್ಲವೆಂದು ಹೇಳಿದಾಗ, ಅವನು ಈ ಬಸದಿಗೆ ದಾನಮಾಡಿದನು. ಅವನೊಂದು ಸಲ ಜಿನಪೂಜೋತ್ಸವವನ್ನು ನೋಡಲು ಬಂದಿದ್ದನು. ಯಾಪನಿಯ ಸಂಘದ ಆಚಾರ್ಯರಾದ ಕುಮಾರಪಂಡಿತ ದೇವರ (ಪುನ್ನಗಮೂಲ ವೃಕ್ಷಗಣದ) ಪಾದ ಪೂಜೆಯ ನಂತರ ಈ ದಾನ ಕ್ರಿಯೆಯು ನಡೆಯಿತು ಈ ದಾನಿಯು ಮಹಾಪ್ರಧಾನ ಪ್ರಿಯ ದಂಡನಾಯಕ ಕಲಿಯರಸನ (ಕಲಿದೇವನ) ಅಳಿಯನೆಂದು ಹೇಳಲಾಗಿದೆ. ಆ ಶಾಸನದ ಮುಖ್ಯ ವಿವರ ಹೀಗಿದೆ - *''ಶ್ರೀಮದ್ದಂಡನಾಯಕ ದಾಸಿಮರಸರು (ಮದ) ಅಗ್ರಹಾರ ಹೂವಿನಬಾಗೆಯ ಮಾರಸಿಂಗ ಸೆಟ್ಟಿಯ ಬಸದಿಯ ಜಿನಪೂಜೋತ್ಸವಮಂ ನೋಡಲು ಬಂದಲ್ಲಿ .... ಶೂನ್ಯ ಸ್ಥಾನವೆಂದು ಬಿನ್ನಪಂಗೆಯ್ಯಲು....ಆ ಅಗ್ರಹಾರ ತಗ್ಗೆಯ ಮಾನ್ಯದೊಳು ರಾವಸೆಟ್ಟಿಯ ಕೆರೆ ಏರಿಯ ಕೇಶವೇಶ್ವರ ದೇವರ ಭೂಮಿಯಂ ಬಡಗಲ ಮೋಳೆಯವಾಡ ಬಟ್ಟೆಯಿಂ ಪಡವಲು ಮಾನ್ಯಕ್ಕೆ ಹೋದ ಬಟ್ಟೆಯಿಂ ಮೂಡಲು ೩೦ ಮತ್ತರ ಕೆಯಮಂ ಮಾನ್ಯದ ತೋಂಟದೊಳಗೊಂದು ತೋಂಟಮಂ.... ಪರಮ ಭಟ್ಟಾರಕ ಮುಖಕಮಳ ವಿರ್ನಿಗತ....ಶ್ರೀಯಾಪನೀಯ ಸಂಘಾವ ಪುನ್ನಾಗವೃಕ್ಷ ಮೂಲಗಣದ ಶ್ರೀಮದಾಚಾರ್ಯ ಕುಮಾರ ಕೀರ್ತಿ*

ಪಂಡಿತ ದೇವರ ಧಾರಪೂರ್ವಕಂ.....ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕಂ....ದೇವತಾ ಪೂಜೆಗಂ ಮುನಿಜನಹಾರ ದಾನಕ್ಕಂ....ಬಿಟ್ಟರೀಧರ್ಮಮಂ....ಶ್ರೀ ಮನ್ಮ ಹಾ ಘಟಿಕಾಸ್ಥಾನ ವಗ್ರಹಾರಂ ಪೂವಿನಬಾಗೆಯೂರೊಡೆಯ ಪ್ರಮುಖವಶೇಷ ಮಹಾಜನಂಗಳು ಸದ್ಧರ್ಮ್ಮದಿಂ ಪ್ರತಿಪಾಳಿಸುವರು.''

ನಾಕರಸನ ವಿನಂತಿಯು ಮೇರೆಗೆ ದಂಡನಾಯಕ ದಾಸಿಮರಸರು ಈ ಬಸದಿಗೆ ದತ್ತಿಯನ್ನು ಬಿಟ್ಟರೆಂದು ಸ್ಪಷ್ಟವಾಗುತ್ತದೆ. ಹೂವಿನಬಾಗೆಯ ಸೀಮೆಯಲ್ಲೊಂದು ರಾವಸೆಟ್ಟಿಯ ಹೆಸರಿನ ಕೆರೆಯಿದ್ದು ಅದರ ದಂಡೆಯ ಮೇಲೆ ಕೇಶವೇಶ್ವರ ದೇವಾಲಯವಿದೆ. ಈ ದೇವಾಲಯದ ನಿರ್ವಹಣೆಗೆ ಈ ಮೊದಲೇ ದಾನವಾಗಿ ಕೊಡಮಾಡಿದ ಭೂಮಿಯಿದೆ.

ಇದರ ಉತ್ತರಕ್ಕೆ ಮೊಳೆಯವಾಡಕ್ಕೆ ಹೋಗುವ ದಾರಿಯ, ಪಶ್ಚಿಮಕ್ಕೆ ಹೊಲಕ್ಕೆ ಹೋದ ದಾರಿಯ ಮತ್ತು ಪೂರ್ವಕ್ಕೆ ೩೦ ಮತ್ತರ ಹೊಲದ ತೋಟದೊಳಗಿನ ತೋಟದ ಸ್ವಲ್ಪ ಭಾಗವನ್ನು ಮಾರಸಿಂಗಸೆಟ್ಟಿ ಬಸದಿಯ ಜೀರ್ಣೋದ್ಧಾರಕ್ಕೆ, ನಿರ್ವಹಣೆಗೆ, ಪೂಜೆಗೆ, ಮುನಿಜನರ ಉಪಜೀವನಕ್ಕೆ, ದಾನಕ್ಕೆ ಪ್ರತಿಜ್ಞಾ ಪೂರ್ವಕವಾಗಿ ಬಿಟ್ಟು ಕೊಡಲಾಯಿತು. ಇಲ್ಲಿಯ ಘಟಿಕಾ ಸ್ಥಾನ, ಅಗ್ರಹಾರ ಹಾಗೂ ಪೂವಿನಬಾಗೆಯ ಒಡೆಯರು, ಪ್ರಮುಖ ಮತ್ತು ವಿಶೇಷವಾದ ಮಹಾಜನಗಳು ಸದ್ಧರ್ಮದಿಂದ ಇದರ ನಿರ್ವಹಣೆಯನ್ನು ಪಾಲಿಸಬೇಕೆಂದು ಆಜ್ಞಾಪಿಸಲಾಯಿತು.

ಇಲ್ಲಿ ಉಲ್ಲೇಖಿತವಾದ ಕೇಶವೇಶ್ವರ ದೇವಾಲಯವು ಅಸ್ತಿತ್ವದಲ್ಲಿಯೇ ಇಲ್ಲ. ಅಲ್ಲದೆ ಮೊಳೆಯವಾಡ ಊರು ಉಳಿದಿಲ್ಲ. ಇವೆಲ್ಲ ಕಾಲಗರ್ಭದಲ್ಲಿ ವಿಲೀನವಾಗಿ ಹೋಗಿವೆ.

ಗಡದ ಬಸದಿ (ಮಹಾವೀರ ಬಸದಿ): ಈ ಬಸದಿಯು ಈಗಿನ ನಗರದ ಉತ್ತರಕ್ಕೆ ಎರಡು ಕಿ.ಮೀ. ಅಂತರದಲ್ಲಿ ದಿನ್ನೆಯ ಮೇಲಿದೆ. ಇದರ ಹೊರಮೈ ಆಧುನಿಕವೆನಿಸಿದರೂ ಒಳಭಾಗವು ಚಾಲುಕ್ಯ ಶೈಲಿಯ ಶಿಲ್ಪದ್ದಾಗಿದೆ. ಕಂಬಗಳು ಗಾತ್ರದಲ್ಲಿ ಎತ್ತರವೂ, ದಪ್ಪವೂ ಆಗಿದ್ದು ಅನೇಕ ಸುಳಿವುಗಳಿಂದ ಕೂಡಿದ್ದಾಗಿವೆ. ಈ ಬಸದಿಯು ಪೂರ್ವಾಭಿಮುಖವಾಗಿದ್ದು, ಇಲ್ಲಿಯ ಜಿನಮೂರ್ತಿ, ವೇದಿಕೆಯ ಮೇಲೆ ನಿಂತ ಮಹಾವೀರನದಾಗಿದೆ. ಇದರ ಕೆತ್ತನೆಯ ಕೆಲಸ ಸೂಕ್ಷ್ಮವೂ, ಸುಂದರವೂ ಆಗಿದೆ. ಮಹಾದ್ವಾರವು ಸುಂದರ ಕೆತ್ತನೆಯಿಂದ ಕೂಡಿದೆ. ಇದರ ಮೇಲ್ಗಡೆಗೆ ಜಿನಮೂರ್ತಿಯಿದೆ. ಲಾಂಛನದ ಆಧಾರದಿಂದ ಇದು ಭಗವಾನ್ ಮಹಾವೀರನ ಮೂರ್ತಿಯೆಂದು ಸ್ಪಷ್ಟವಾಗುತ್ತದೆ. ಮುಖದಲ್ಲಿ ಶಾಂತಭಾವವಿದೆ. ಈ ಜಿನನನ್ನು ಅನೇ ಕಾರ್ತವೀರ್ಯನ ತಾಯಿ ಚಂದ್ರಿಕಾದೇವಿಯು ಆರಾಧಿಸುತ್ತಿದ್ದಳೆಂದು ಶಾಸನಾಧಾರದಿಂದ ತಿಳಿದುಬರುತ್ತದೆ. ಅವಳಿಗಾಗಿಯೇ ಈ ಬಸದಿಯು ಕಾರ್ತವೀರ್ಯನಿಂದ ಕಟ್ಟಿಸಲ್ಪಟ್ಟಿತ್ತು.

ಅವಳು ಘಟಸರ್ಪವೆಂಬ ರೋಗದಿಂದ (ಬೆನ್ನಹುರಿಗೆ ಅಂಟಿದ ಗಾಯ)-ಬಳಲುತ್ತಿದ್ದಳು. ಅದು ಔಷಧದಿಂದ ವಾಸಿಯಾಗಲಾರದೆಂದು ತಿಳಿದು ಬಂದಮೇಲೆ ಅವಳಿಗೊಂದು ಹಳ್ಳಿಗಾಡಿನ ಮನೆಯೊಂದನ್ನು ಕಟ್ಟಿಸಿ ಈ ಬಸದಿಯ ಬಳಿ ಅವಳನ್ನು ಅಲ್ಲಿಯೇ ಇಡಲಾಗಿತ್ತು. ಈ ಬಸದಿಯ ಹಿಂದೆ ಕಟ್ಟಿಸಿದ ಬಾವಿಯಲ್ಲಿಯೇ ಅವಳು ಸ್ನಾನಮಾಡಿ, ಶುಚಿರ್ಭೂತಳಾಗಿ ಮಹಾವೀರ ಸ್ವಾಮಿಯ ಪೂಜಾವ್ರತಗಳನ್ನು ಮಾಡಿ ಮಹಾವೀರ ಸ್ವಾಮಿಯ ಕೃಪೆಗೆ ಒಳಗಾದಳು. ಅವನ ಅನುಗ್ರಹದಿಂದಲೇ ಗುಣಮುಖಳಾದಳು. ಅಂದಿನಿಂದ ಆ ಬಸದಿಯ ಮಹತ್ವ ಹೆಚ್ಚಾಯಿತು.

ನೆಲಮನೆಯ ದೇವಾಲಯ: ನೆಲಮನೆಯಲ್ಲಿಯೇ ಗುಡಿಯು ನಿರ್ಮಿತವಾಗಿರುವುದರಿಂದ ಇದನ್ನು ನೆಲಮನೆಯ ದೇವಾಲಯವೆಂದು ಕರೆಯಲಾಗಿದೆ. ಒಂದು ಚಿಕ್ಕ ಕಲ್ಲಿನ ಮಂಟಪವಿದ್ದು ಇದರ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಪ್ರವೇಶ ದ್ವಾರದ ಚೌಕಟ್ಟು ಚಾಲುಕ್ಯ ಶಿಲ್ಪ ಮಾದರಿಯಲ್ಲಿದೆ. ಚೌಕಟ್ಟಿನ ಮೇಲ್ಗಡೆಗೆ ತೋರಣವಿದೆ. ಇದರಲ್ಲಿ ವಿವಿಧ ಚಿತ್ರಗಳನ್ನು ಬಿಡಿಸಲಾಗಿದೆ. ಅದರಲ್ಲೊಂದು ಪದ್ಮಾಸನದಲ್ಲಿ ಕುಳಿತ ಮೂರ್ತಿಯೊಂದಿದೆ. ಇದು ಜಿನಬಿಂಬವಿರಲು ಸಾಧ್ಯವಿದೆ. ಮೂಲತಃ ಇದು ಹಿಂದುಗಳ ದೇವಾಲಯವಾಗಿರದೆ ಜೈನರ ಬಸದಿಯಾಗಿರುವ ಸಂಭವವಿದೆ. ಹಾಗಿದ್ದ ಪಕ್ಷದಲ್ಲಿ ಇದು ಮಾರಸಿಂಗಸೆಟ್ಟಿ ಬಸದಿಯಾಗಿರಬಹುದೇ? ಇದಕ್ಕೆ ತೋರಣದಲ್ಲಿರುವ ಚಿತ್ರವು ಪುಷ್ಟಿ ಕೊಡುತ್ತದೆ. ಈಗ ಇಲ್ಲಿ ನರಸಿಂಹಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಈ ಮೂರ್ತಿಯನ್ನು ರಾಯಬಾಗ ಸಮೀಪದ ಜಲಾಲಪುರದಿಂದ ತಂದು ಇಡಲಾಗಿದೆ ಎಂದು ಮುಂಬಯಿ ಗ್ಯಾಝೆಟಿಯರ್ ಹೇಳುತ್ತದೆ. ಆದ್ದರಿಂದ ಇದು ಮೂಲ ನರಸಿಂಹ ದೇವಾಲಯ ಆಗಿರಲಾರದು.

ಈ ಗುಡಿಯ ಮುಗ್ಗುಲಿನಿಂದ ಹೊರಗೆ ಹೋಗುವ ಗುಪ್ತಮಾರ್ಗವಿತ್ತು. ಈಗ ಅದನ್ನು ಮುಚ್ಚಲಾಗಿದೆ. ಈ ಮಾರ್ಗವೂ ಊರ ಹೊರಗಿನ ಗಡದ ಬಸದಿಗೆ ಹೋಗಿರಬೇಕು.

ಮಾರುತಿ ಮಂದಿರ: ನಗರದ ಹೊರವಲಯದ ಉತ್ತರ ದಿಕ್ಕಿನಲ್ಲಿ ಚಿಕ್ಕದಾದ ಪುರಾತನ ಮಾದರಿಯ ಮಾರುತಿ ಮಂದಿರವಿದೆ. ಚೌಕಟ್ಟಿನ ಮಧ್ಯಭಾಗದಲ್ಲಿ ಸ್ತ್ರೀವಿಗ್ರಹವಿದ್ದು ಇದು ಗಜಲಕ್ಷ್ಮೀ ವಿಗ್ರಹವಾಗಿರಬಹುದಾಗಿದೆ. ಈ ಗುಡಿಯ ಹಿಂಬದಿಯಲ್ಲಿರುವ ಸುಳುವುಗಳುಳ್ಳ ಕಲ್ಲಿನ ಕಂಬಗಳನ್ನು, ಮಕರತೋರಣವನ್ನು ಕೋಟೆಯ ಗೋಡೆ ಹಾಳಾದನಂತರ ಅಥವಾ ಯಾವುದೇ ಗುಡಿ ಹಾಳಾದನಂತರ ಅದರ ಕಂಬಗಳನ್ನು ತಂದು ಇಲ್ಲಿ ನಿಲ್ಲಿಸಿ ಮಂದಿರವನ್ನು ನಿರ್ಮಿಸಲಾಗಿರುವಂತಿದೆ. ಇಲ್ಲಿನ ಮಾರುತಿ

ಮೂರ್ತಿಯೂ ಕೂಡ ಬೇರೆ ಊರಿನಿಂದ ತಂದು ಪ್ರತಿಷ್ಠಾಪಿಸಲಾಗಿದೆಯಂದು ಸ್ಥಳೀಯರು ಹೇಳುತ್ತಾರೆ. ಈ ಗುಡಿಯನ್ನು ನವೀಕರಿಸಿ ಗೋಪುರವನ್ನು ನಿರ್ಮಿಸಲಾಗಿದೆ. ಈ ಮಂದಿರದಲ್ಲಿ ಕಪ್ಪು ಕಲ್ಲಿನಲ್ಲಿ ಕೆತ್ತಿದ ಮಹಿಷಾಸುರನನ್ನು ಮರ್ದನ ಮಾಡುವ ದೃಶ್ಯ ಸುಂದರವಾಗಿದೆ. ಶಿಲ್ಪವೂ ಸುಂದರವಾಗಿದೆ.

ಕೋಟೆ: ರಾಯಬಾಗ ಕೋಟೆಯು ದೊಡ್ಡದಾದ ಕೋಟೆಗಳಲ್ಲಿ ಒಂದಾಗಿತ್ತು. ಇಂದು ಈ ಕೋಟೆ ಸುಸ್ಥಿತಿಯಲ್ಲಿ ಇಲ್ಲ. ನಿರ್ಲಕ್ಷಿತವಾಗಿದೆ. ಕೋಟೆಯ ಗೋಡೆಗಳನ್ನು ನಾಶಪಡಿಸಲಾಗುತ್ತಿದೆ. ಈ ಕೋಟೆಯು ಎರಡು ಆವರಣ ಗೋಡೆಗಳನ್ನು ಒಳಗೊಂಡಿತ್ತೆಂದು ತೋರುತ್ತದೆ. ಈ ನಗರದ ಪಶ್ಚಿಮ ದಿಕ್ಕಿನಲ್ಲಿ ಕೋಟೆಯ ಹೆಬ್ಬಾಗಿಲಿದ್ದು ಅದರಗುಂಟ ಹೊರಕೋಟೆಯಾವರಣ ವರ್ತುಳಾಕಾರವಾಗಿ ಆವರಿಸಿತ್ತು. ಕೋಟೆಯ ಗೋಡೆಗಳನ್ನು ಹಿರಿದಾದ ಬಂಡೆಗಲ್ಲುಗಳಿಂದ ಹಾಳು ಮಣ್ಣಿನಲ್ಲಿಯೇ ಕಟ್ಟಲಾಗಿತ್ತು. ಇದು ಬಹುಶಃ ಈ ಜಿಲ್ಲೆಯಲ್ಲಿಯೇ ಬಯಲು ಪ್ರದೇಶದ ವಿಶಾಲಜಾಗೆಯಲ್ಲಿ ಹಾಳುಮಣ್ಣು, ಕಲ್ಲುಗಳಿಂದ ಕಟ್ಟಿದ ಪ್ರಪ್ರಥಮವೂ, ಪುರಾತನವೂ ಆದ ಕೋಟೆಯಾಗಿದೆ. ಈ ಕೋಟೆಯ ಒಳಭಾಗದಲ್ಲಿಯೇ ಹೂವಿನ ಬಾಗೆ (ರಾಯಬಾಗ) ನೆಲೆಸಿತ್ತು. ಈ ಕೋಟೆಯ ಒಳ ಪ್ರದೇಶದಲ್ಲಿ ಬಸದಿಗಳು, ದೇವಾಲಯಗಳಿದ್ದವು. ಅಲ್ಲದೆ ಇಲ್ಲಿಯೇ ಅಗ್ರಹಾರ, ಘಟಿಕಾಸ್ಥಾನ, ಬ್ರಹ್ಮಪುರಿ, ಯಾಪನೀಯ ಸಂಘಗಳಿದ್ದು, ಹೂವಿನ, ಹಣ್ಣಿನ ತೋಟಗಳು ದೇವರ ಪೂಜೆ, ನೈವೇದ್ಯಗಳಿಗಾಗಿದ್ದವೆಂದು ತೋರುತ್ತದೆ.

ಮೂರ್ತಿಶಿಲ್ಪ : ಕಲೆ ಮೊದಲು ಅರಳಿದುದು ರೇಖಾ ಮತ್ತು ಭಿತ್ತಿ ಚಿತ್ರಗಳಲ್ಲಿ. ನಂತರ ಕಟ್ಟಿಗೆ, ಕಲ್ಲು, ತಾಮ್ರ, ಹಿತ್ತಾಳೆ, ಬೆಳ್ಳಿ ಮುಂತಾದ ಘನವಸ್ತುಗಳಲ್ಲಿ ದೇವರ ಮೂರ್ತಿಗಳನ್ನು ಕೆತ್ತುವ ಕಟೆಯುವ ಕಾರ್ಯ ಪ್ರಾರಂಭವಾಯಿತು. ಚಾಲುಕ್ಯರ ಮಾಂಡಲಿಕರಾದ ರಟ್ಟರು ಅವರ ಶಿಲ್ಪಕಲಾ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಅವರ ಪ್ರೋತ್ಸಾಹ, ಪ್ರೇರಣೆಗಳಿಂದ ಅನೇಕ ಬಸದಿಗಳು, ದೇವಾಲಯಗಳು ನಿರ್ಮಾಣವಾದವು. ರಾಯಬಾಗವು ಅಂದಿನ ಕಂಕನೂರು (ಇಂದಿನ ಕಂಕಣವಾಡಿ) ಉಪವಿಭಾಗದ ಪ್ರಮುಖ ನಗರವಾಗಿ ರಟ್ಟರ ಉಪರಾಜಧಾನಿಯಂತೆ ಮೆರೆದಿದೆ. ಈ ಕಾರಣದಿಂದಲೇ ಇಲ್ಲಿ ಅನೇಕ ಮೂರ್ತಿಗಳ, ದೇವಾಲಯಗಳ ನಿರ್ಮಾಣವೂ ಕೂಡ ಆಯಿತು. ಕರ್ನಾಟಕದ ಉತ್ತರಗಡಿಯಲ್ಲಿರುವ ರಾಯಬಾಗವೂ ಕರ್ನಾಟಕದ ಶಿಲ್ಪಕಲೆ, ಸಂಸ್ಕೃತಿಯನ್ನು ಅಳವಡಿಸಿಕೊಂಡಿದೆ.

ಗಣಪತಿ ವಿಗ್ರಹಗಳು: ರಾಯಬಾಗದಲ್ಲಿ ಕುಂಬಾರ ಓಣಿಯ ಗಣಪ, ಬಡಿಗೇರ ಓಣಿಯ ಗಣಪ ಎಂದು ಸ್ಥಳವಾಚಕ ಹೆಸರುಗಳಿಂದ ಕರೆಯಲ್ಪಡುವ ಗಣಪತಿ ಒಂದೊಂದೂ ವೈಶಿಷ್ಟ್ಯಪೂರ್ಣವಾಗಿವೆ. ಇವುಗಳನ್ನು ಎಲ್ಲಿಂದಲೋ ತಂದು ಇಟ್ಟವುಗಳೆಂದು ತೋರುತ್ತದೆ. ಹೊಸ ಮಸೀದಿ ಓಣಿಯ ಎದುರುಗಡೆಗೆ ಇರುವ ಆಲದ ಗಿಡದ ಕೆಳಗೊಂದು ತ್ರುಟಿತ ಗಣಪತಿ ವಿಗ್ರಹವೊಂದಿದ್ದು ಸುಸ್ಥಿಯಲ್ಲಿದೆ. ಇಲ್ಲಿಯೇ ಸಪ್ತಮಾತೃಕೆಯರ ತುಣುಕೊಂದು ಬಹಳೇ ಸುಂದರವಾಗಿದೆ. ಕೊರಳಹಾರದ, ಕಿರೀಟದ ಕಾಲ್ಗೆಜ್ಜೆಯ ಚತುರ್ಭುಜ ಗಣಪತಿಯೊಂದನ್ನು ಕಪ್ಪುಕಲ್ಲಿನಲ್ಲಿ ಕೆತ್ತಲಾಗಿದೆ. ಈ ಗಣಪತಿ ವಿಗ್ರಹಗಳಿಂದ ಕಂಡುಬರುವುದೇನೆಂದರೆ ಈ ಭಾಗದಲ್ಲಿ ಒಂದು ಕಾಲಕ್ಕೆ ಗಾಣಪತ್ಯಸಂಪ್ರದಾಯವು ಪ್ರಬಲ ವಾಗಿತ್ತೆಂಬುದು.

ವಿಷ್ಣು: ರಾಯಬಾಗದ ಗುಹಾಂತರದೇವಾಲಯದ ಹೊರಾಂಗಣದಲ್ಲಿ ಒಂದು ವಿಷ್ಣುವಿನ ಸುಂದರ ವಿಗ್ರಹವಿದೆ. ಇದರ ಎತ್ತರ ಮೂರೂವರೆ ಅಡಿ, ಅಗಲ ಎರಡು ಅಡಿ ಇರುವ ಈ ವಿಗ್ರಹಕ್ಕೆ ಸೂರ್ಯಪ್ರಭಾವಳಿ, ಶಿರಾಶ್ರಯಕ್ಕೆ ನಾಗಹೆಡೆ, ಕೊರಳಲ್ಲಿ ಮಣಿಗಳ ಹಾರ, ನೀಳವಾದ ಜಡೆಗಳು, ತೋಳಬಂದಿ. ಯಜ್ಞೋಪವೀತ, ಕಿರೀಟವಿದೆ. ಎರಡೂ ಮಗ್ಗಲಿನಲ್ಲಿ ಅಡ್ಡವಾಗಿ ಕಮಲ ಅರಳಿ ನಿಂತಿದೆ. ಟೊಂಕದಲ್ಲಿ ಮಣಿಗಳಿಂದ ಕೂಡಿದ ನಡಪಟ್ಟಿಯಿದೆ. ಕಲಾತ್ಮಕವಾಗಿದೆ. ನಡಪಟ್ಟಿಯ ನಡುವೆ ಸುಂದರ ನಿರಿಗೆಯ ವಸ್ತ್ರದ ತುಂಡೊಂದು ಹಾರಾಡುತ್ತಿದೆ. ಆದರೆ ಮೂರ್ತಿಯ ಮುಖ ವಿಕೃತವಾಗಿದೆ. ಈ ಮೂರ್ತಿಯ ಕುಸುರಿನ ಕೆಲಸ ಕಲಾತ್ಮಕವೂ, ಸುಂದರವೂ ಆಗಿದೆ.

ಲಕ್ಷ್ಮಿ: ವಿಷ್ಣುವಿನ ಎಡಪಾದದ ಅರ್ಧಭಾಗದಲ್ಲಿ ಚತುರ್ಭುಜ ಲಕ್ಷ್ಮಿಯು ಪದ್ಮಾಸನದಲ್ಲಿ ಮಂಡಿಸಿದ್ದಾಳೆ. ಒಂದು ಕೈಯಿಂದ ವಿಷ್ಣುವಿನ ಬಲಬದಿಯ ಮೊಳಕಾಲನ್ನೂ, ಇನ್ನೊಂದು ಕೈಯಿಂದ ಎಡಪಾದವನ್ನೂ ಹಿಡಿದಿದ್ದಾಳೆ. ಅವಳ ಕೈಯೊಂದರಲ್ಲಿ ಕಮಲಪುಷ್ಪವಿದೆ. ಕಟಿ ಮಧ್ಯದಲ್ಲಿ ಸೀರೆಯಿದೆ. ನಡಪಟ್ಟಿಯ ಮೂರು ದಳಗಳು ಮೂರು ಕಡೆಗೆ ಜೋತು ಬಿದ್ದಿವೆ. ಈ ಶಿಲ್ಪ ಅಂದಿನ ಸ್ತ್ರೀಯರು ಬಟ್ಟೆಯನ್ನು ಧರಿಸುವುದರ ಮೇಲೆ ಬೆಳಕನ್ನು ಚಲ್ಲುವಂತಿದೆ.

ನರಸಿಂಹ ವಿಗ್ರಹ : ಈ ಮೂರ್ತಿಯನ್ನು ಮಳಲು ಕಲ್ಲಿನಲ್ಲಿ ಕೆತ್ತಲಾಗಿದೆ. ಮೂರ್ತಿಯು ಎರಡೂವರೆ ಅಡಿಗಳಷ್ಟು ಎತ್ತರ, ಒಂದೂವರೆ ಅಡಿಯಷ್ಟು ಅಗಲವಾಗಿದೆ. ಕೆತ್ತನೆಯ ಕೆಲಸ ಅತಿ ಸೂಕ್ಷ್ಮವೂ, ಸುಂದರವೂ ಆಗಿದೆ. ಉಗ್ರತೆಯು ಮೈವೆತ್ತಿನಿಂತಿದೆ. ಈ ನರಸಿಂಹ ಹಿರಣ್ಯಕಶ್ಯಪನ ಹೊಟ್ಟೆಯನ್ನು ಹರಿದು ಕರುಳ ಮಾಲೆಯನ್ನು ಧಾರಣ ಮಾಡುತ್ತಿರುವ ದೃಶ್ಯ ಭಯಾನಕತೆಯನ್ನುಂಟುಮಾಡುವಂತಿದೆ, ಉಗ್ರವಾಗಿದೆ. ದೇವಾದಿ-ದೇವತೆಗಳು ಭಯಭೀತರಾಗಿ ಕೈಮುಗಿದು ನಿಂತಿದ್ದಾರೆ. ಪ್ರಹ್ಲಾದ ಹಾಗೂ ಅವನ ತಾಯಿಯೂ ಕೂಡ ಭಯ-ಭಕ್ತಿಯಿಂದ ನಿಂತಿದ್ದಾರೆ.

ಸೂಕ್ಷ್ಮ ಭಾವನೆಗಳ ಅಭಿವ್ಯಕ್ತಿ, ನಾಜೂಕುಗಳ ದೃಷ್ಟಿಯಿಂದ

ಇದೊಂದು ಅಪೂರ್ವ ಕಲಾಕೃತಿಯಾಗಿದೆ. ರುದ್ರರಮಣೀಯವಾದ ಈ ವಿಗ್ರಹ ವೈಶಿಷ್ಟ್ಯಪೂರ್ಣವಾಗಿದೆ.

ಮಹಿಷಾಸುರ ಮರ್ದಿನಿ (ದುರ್ಗ): ಬಲಗೈ ಅಭಯಹಸ್ತೆ, ಖಡ್ಗಧಾರಿಣಿ, ಅರ್ಧಪದ್ಮಾಸನಸ್ಥೆ, ಸಿಂಹಲಾಂಛನೆ, ಸೂರ್ಯ ಚಂದ್ರ ಚಿತ್ರಗಳ ಕಿರೀಟಧಾರಿಣಿ, ಯಜ್ಞೋಪವೀತೆ ಲಲಾಟ ರಂಧ್ರಾನ್ವಿತೆಯಾದ ಗಂಭೀರ ಭಾವದ ಈ ದೇವತಾ ಶಿಲ್ಪದ ಭ್ರೂಮಧ್ಯವು ರತ್ನಖಚಿತವಾಗಿದ್ದಿರುವ ಸಂಭವವಿದೆ. ಒಂದು ಎಡಗೈಯಲ್ಲಿ ನಾರಳವಿದ್ದರೆ ಇನ್ನೊಂದು ಎಡಗೈಯಲ್ಲಿ ತ್ರಿಶೂಲವಿದೆ. ಬಹಳ ಕಲಾತ್ಮಕವಾದ ಈ ಶಿಲ್ಪವು ಚಾಲುಕ್ಯ ಶಿಲ್ಪದ ಅತ್ಯುತ್ಕೃಷ್ಟವಾದ ಶಿಲಾಮೂರ್ತಿಯಾಗಿದ್ದು ಗಡಿನಾಡ ಶಿಲ್ಪಕಲೆಯಲ್ಲಿ ಅತಿ ಶ್ರೇಷ್ಠಸ್ಥಾನವನ್ನು ಹೊಂದಿದೆ.

ಅನ್ಯ ಶಿಲಾ ವಿಗ್ರಹಗಳು: ಈ ಮೊದಲು ಉಲ್ಲೇಖಿತವಾದ ಪ್ರಮುಖ ಶಿಲಾವಿಗ್ರಹಗಳಲ್ಲದೆ ನಾಗದೇವತೆ, ಶಿವಲಿಂಗ, ಸಪ್ತಮಾತೃಕೆಯ ವಿಗ್ರಹ ಮುಂತಾದ ಮೂರ್ತಿಗಳೂ ಅಲ್ಲಿ ನೋಡಲು ಸಿಗುತ್ತವೆ. ಒಂದು ಚೌಕಾಕೃತಿಯ ಕಲ್ಲಿನಲ್ಲೊಂದು ಮಕರದ್ದೋ, ಸಿಂಹದ್ದೋ ಆಕರ್ಷಕ ಚಿತ್ರವಿದೆ. ಊರ ಮಧ್ಯದ ಸಿದ್ಧೇಶ್ವರ ದೇವಾಲಯದ ಹೊರಭಾಗದಲ್ಲಿ ಗಂಡಭೇರುಂಡ (ಗರುಡದ್ವಯ) ಕಲ್ಲಿನ ಚಿತ್ರವಿದೆ. ಕಲ್ಲಿನ ಬಂಡೆಗಳಲ್ಲಿ ನಕ್ಷೆ, ಚಿತ್ರ, ಸುಳುಹುಗಳು ಇರುವದು ಕಂಡುಬರುತ್ತದೆ. ಬಂಕನಾಥ ಗುಡಿಯ ಹಿಂದಿನ ಓಣಿಯಲ್ಲಿ ಒಂದು ವೀರಗಲ್ಲಿನಲ್ಲಿ ಬಿಲ್ಲುಯುದ್ಧ, ಮಲ್ಲಯುದ್ಧದ ದೃಶ್ಯಗಳು ಕಾಣಬರುತ್ತವೆ. ಇದಲ್ಲದೆ ಚಾಮರಕನ್ನಿಕೆಯಾಗಿರಬಹುದಾದ ತ್ರುಟಿತವಾದ ಸ್ತ್ರೀವಿಗ್ರಹವಿದೆ. ಇಲ್ಲೊಂದು ನಾಲ್ಕಡಿ ಉದ್ದದ ಶಿವನಮೂರ್ತಿಯು ಡಮರು ಹಾಗೂ ತ್ರಿಶೂಲ ಸಹಿತವಿದೆ..

ಭೂಗತ ಶಿಲಾ ವಿಗ್ರಹಗಳು: ರಾಯಬಾಗದ ಮಹಿಷಾಸುರ ಮರ್ದಿನಿಯು (ದುರ್ಗಾ) ಇದೇ ನಗರದ ದೇಶಪಾಂಡೆಯವರ ತೋಟದ ಹೊಲದಲ್ಲಿದ್ದ ಭೂಗತ ಕಲಾವಿಗ್ರಹ. ಇದರಂತೆ ಕೈಬೆರಳು ಮುಕ್ಕಾಗಿರುವ ನರಸಿಂಹ ಮೂರ್ತಿಯೂ ಕೂಡ ಕೃಷ್ಣಾನದಿಯಲ್ಲಿ ಸಿಕ್ಕಿದುದನ್ನು ತಂದು ಅಲ್ಲಿಯ ಗುಡಿಯಲ್ಲಿ ಇಡಲಾಗಿದೆ. ಮಹಿಷಾಸುರಮರ್ದಿನಿಯ ಹಣೆಗೆ ಗುದ್ದಲಿಯ ಪೆಟ್ಟು ಬಿದ್ದು ಕಚ್ಚಾಗಿದೆ. ರಾಯಬಾಗದ ಪರಿಸರದಲ್ಲಿಯೇ ಅಂದರೆ ಕಬ್ಬೂರ ಗ್ರಾಮದ ಹೊಲದಲ್ಲಿ ವಿಷ್ಣುವಿನ ಮೂರ್ತಿಯೊಂದು ನೇಗಿಲು ಹೊಡೆಯುವಾಗ ದೊರಕಿ, ಅದನ್ನು ಹೊಲದಲ್ಲಿರುವ ಗುಡಿಯಲ್ಲಿಯೇ ಪ್ರತಿಷ್ಠಾಪಿಸಲಾಗಿದೆ. ಇದೇ ಪರಿಸರಲ್ಲಿ ಬ್ರಾಹ್ಮೀಲಿಪಿಯಲ್ಲಿ ಬರೆದ ಒಂದು ಶಾಸನವಿದೆ ಅದನ್ನೂ ಅದೇ ಗುಡಿಯಲ್ಲಿ ಸುರಕ್ಷಿತವಾಗಿ ಇಟ್ಟಿದ್ದಾರೆ. ಹೀಗೆಯೇ ನಿಲಜಿ ಎಂಬ ಗ್ರಾಮದ ಮನೆಯ ಹಾಳು ಮಣ್ಣಿನ ಗೋಡೆಯಲ್ಲಿ ಅಡಗಿಸಿಟ್ಟಿದ್ದ ಒಂದು ಮಧ್ಯಮ ಗಾತ್ರದ ಶಿವಲಿಂಗವು ಆ ಗೋಡೆ ಮಳೆಯ ಹೊಡೆತಕ್ಕೆ ಕುಸಿದು ಬಿದ್ದಾಗ ಗೋಚರಿಸಿತು. ಈ ಮನೆಯ ಸಮೀಪವೇ ಅಪೂರ್ಣವಾದ ಒಂದು ವಿಷ್ಣು ಮೂರ್ತಿ ಸಿಕ್ಕಿದೆ.

ಸಾಮಾಜಿಕ ಜೀವನ: ರಾಜರಿಂದ ಹಿಡಿದು ರೈತನವರೆಗೆ ಎಲ್ಲರೂ ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಅವರವರ ಶ್ರದ್ಧೆ, ಧಾರ್ಮಿಕ ನಂಬುಗೆಗೆ ಅನುಸಾರವಾಗಿ ಧರ್ಮವನ್ನು ಆಚರಿಸಬಹುದಾಗಿತ್ತು. ಆದ್ದರಿಂದಲೇ ನಮಗೆ ಶೈವ, ವೈಷ್ಣವ, ವೀರಶೈವ, ಜೈನ, ಶಾಕ್ತ, ಗಾಣಪತ್ಯ ಮುಂತಾದ ಸಂಪ್ರದಾಯಗಳ ಶಿಲಾವಿಗ್ರಹಗಳು, ದೇವಾಲಯಗಳು ಕಂಡು ಬರುತ್ತವೆ. ಸ್ತ್ರೀಯರು ಕಠಿಣ ವ್ರತಗಳನ್ನು ಪಾಲಿಸುತ್ತಿದ್ದರೆಂಬ ಸಂಗತಿ ತಿಳಿದು ಬರುತ್ತದೆ. ರಟ್ಟರಸ ಲಕ್ಷ್ಮೀದೇವನ ಹೆಂಡತಿ ಚಂದ್ರಿಕಾದೇವಿ "ಘಟಸರ್ಪ ವಿಜಯ" ಎಂಬ ದಿವ್ಯ (ಪರೀಕ್ಷೆ) ಎದುರಿಸಿದ ಪ್ರಸಂಗವನ್ನು ಬೆಳಗಾವಿ ಶಾಸನ ವಿವರಿಸುತ್ತದೆ. ಅಲ್ಲದೆ ರಾಯಬಾಗ ಶಾಸನವೂ ಕೂಡ 'ದಿವ್ಯ' ಮೆರೆದ ಸಂಗತಿಯನ್ನು ಪುಷ್ಟೀಕರಿಸುತ್ತದೆ. ಇವಳು ತನ್ನ ಪತಿಗೆ ಆಡಳಿತದಲ್ಲಿ ಸಹಾಯಕಳಾಗಿದ್ದಳೆಂಬ ವಿಷಯವೂ ವೇದ್ಯವಾಗುತ್ತದೆ.

ಸತಿ ಪದ್ಧತಿ ಇದ್ದ ಕಾರಣ ಮಾಸ್ತಿಕಲ್ಲುಗಳು, ಶೌರ್ಯ ಬಲಿದಾನ ಕಾರಣ ವೀರಗಲ್ಲುಗಳನ್ನು ನಿಲ್ಲಿಸುವ ಪದ್ಧತಿಯೂ ಇಲ್ಲಿ ಇತ್ತು. ಇದೇ ಕಾರಣಕ್ಕಾಗಿ ರಾಯಬಾಗ ಹಾಗೂ ಅದರ ಪರಿಸರದ ಊರುಗಳಲ್ಲಿ ಅನೇಕ ವೀರಗಲ್ಲುಗಳನ್ನೂ ಕಾಣುತ್ತೇವೆ.

ಅನ್ಯದೇವತಾ ವಿಗ್ರಹಗಳು: ರಾಯಬಾಗ ನಗರದ ವೃಷಭನಾಥ ಬಸದಿಯಲ್ಲಿ ಎರಡು ಸ್ತ್ರೀ ವಿಗ್ರಹಗಳಿವೆ. ಒಂದು ಗೌರೀ-ಗಣಪತಿಯದು. ಇನ್ನೊಂದು ರಾಜ ಸೇವಕಿಯದು. ಗೌರಿಯ ಮೂರ್ತಿ ನಿಂತ ಭಂಗಿಯಲ್ಲಿದೆ. ಅವಳ ಎಡ ಪಾದದ ಬಳಿ ಗಣಪತಿ ನಿಂತಿದ್ದಾನೆ. ಈ ವಿಘ್ನೇಶ್ವರನ ಮೂರ್ತಿ ಚಿಕ್ಕದಾಗಿದ್ದರೂ ಚೊಕ್ಕಟವಾಗಿದೆ. ಗೌರಿಯ ಮೂರ್ತಿ ಒಂದು ಅಡಿ ಅಗಲ, ಒಂದೂವರೆ ಅಡಿ ಎತ್ತರವಾಗಿದ್ದು ಸುಂದರವೂ, ಕಲಾತ್ಮಕವೂ ಆಗಿದೆ. ಈ ಗೌರಿ ಆಗಿನ ಕಾಲದ ಆಭರಣ ಹಾಗೂ ಬಟ್ಟೆಗಳನ್ನು ಧರಿಸಿದ್ದಾಳೆ. ಕೊರಳಲ್ಲಿ ಮುತ್ತಿನ ಹಾರವಿದೆ. ಅಲಂಕೃತಳಾಗಿ ಶೋಭಾಯಮಾನವಾಗಿದ್ದಾಳೆ.

ಇನ್ನೊಂದು ಸ್ತ್ರೀ ವಿಗ್ರಹ ರಾಜಸೇವಕಿಯದೆಂದು ಕಾಣುತ್ತದೆ. ಅವಳ ಬಲಗೈಯಲ್ಲಿ ಚಾಮರವಿದೆ. ಎಡಗೈ ಮುರಿದಿದೆ. ಎಡಗೈ ಸಮೀಪದಲ್ಲಿ ಕಲಶಗಳದೊಂದು ಶಿಖರಾಕೃತಿಯ ಶಿಲ್ಪಚಿತ್ರವಿದೆ. ಈ ವಿಗ್ರಹದ ಪೋಷಾಕೂ ಕೂಡ ವಿಗ್ರಹಕ್ಕಿಂತ ಭಿನ್ನವೇನೂ ಇಲ್ಲ. ಮೂರ್ತಿ ಅದರಷ್ಟೇ ಆಕಾರದಾಗಿದ್ದರೂ ಕೂಡ ಸುಂದರವಾಗಿದೆ, ಆಕರ್ಷಕವಾಗಿದೆ.

ಖಾಸಗಿ ಮನೆಯ ಅಂಗಳದಲ್ಲಿರುವ (ಶ್ರೀ ಕುಲಕರ್ಣಿಯವರ ಮನೆ) ರಾಜಸ್ತ್ರೀವೇಷದ ಆಕರ್ಷಕ, ಕಲಾತ್ಮಕ ದರ್ಪಣ ಸುಂದರಿ ವಿಗ್ರಹ ಮನಸ್ಸನ್ನು ಸೆಳೆಯುವಂತಿದೆ.

ಶ್ರೀ ಕುಲಗುಡೆ ಎಂಬವರ ಮನೆಯ ಮುಂದೆ ಹಣೆಯ ಮೇಲೆ ರುಂಡಮಾಲೆ ಇರುವ ವೀರಭದ್ರ, ಸ್ತ್ರೀಯ ರುಂಡ, ಮಕರ ಫಲಕ ಕಪ್ಪುಗಲ್ಲಿನ ಮಹಿಷಮರ್ದಿನಿ ಶಿಲ್ಪ ಆಕರ್ಷಕವಾಗಿವೆ.

ರಟ್ಟರಾಜ್ಯದಲ್ಲಿಯ ಜನರ ಉದ್ಯೋಗ ಒಕ್ಕಲುತನ, ನಂತರ ವ್ಯಾಪಾರ, ಬಡಿಗತನ, ಕಮ್ಮಾರಿಕೆ ಅಕ್ಕಸಾಲಿಗ, ನಾವಿದ, ನೇಕಾರ, ಸಿಂಪಿಗ ಇತ್ಯಾದಿ ಉಪಕಸುಬು ಸಹಿತವಾಗಿದ್ದಂತೆ ರಾಯಭಾಗದ ಜನರಲ್ಲೂ ಆ ರಾಜ್ಯದ ಪ್ರಜೆಗಳಲ್ಲಿಯೂ ಇತ್ತು. ಶಾಸನಗಳಲ್ಲಿ ಇದಕ್ಕೆ ಪುರಾವೆ ಇದೆ. ಇಲ್ಲಿನ ನೀರಾವರಿ ವ್ಯವಸ್ಥೆಯೂ ಅಚ್ಚುಗಟ್ಟಾಗಿತ್ತು.

ಸಾಮಾನ್ಯರು ನೂಲಿನ ಬಟ್ಟೆನ್ನು ಧರಿಸುತ್ತಿದ್ದರೆ, ಶ್ರೀಮಂತರು ರೇಶಿಮೆಯ ಬಟ್ಟೆಯನ್ನು ತೊಡುತ್ತಿದದರೆಂದು ತೋರುತ್ತದೆ. ಸಾಮಾನ್ಯ ಜನರು ತಲೆಗೆ ಒಂದು ಬಟ್ಟೆಯನ್ನು ಸುತ್ತಿಕೊಂಡು ನಡಕ್ಕೊಂದು ಬಟ್ಟೆಯನ್ನು ಕಟ್ಟಿಕೊಳ್ಳುತ್ತಿದ್ದರೆಂದು, ರಾಯಬಾಗ ಚಾವಡಿಯ ವೀರಗಲ್ಲನ್ನು ಅವಲೋಕಿಸಿದಾಗ ಕಂಡುಬರುತ್ತದೆ.

ಆಡಳಿತ ಪದ್ಧತಿ: ಆಡಳಿತದ ಅನುಕೂಲಕ್ಕಾಗಿ ರಾಜ್ಯವನ್ನು ಮಂಡಲ, ವಿಭಾಗ ಕಂಪಣ, ನಾಡು, ವಿಷಯ ಇತ್ಯಾದಿಯಾಗಿಯೂ, ಗ್ರಾಮಮಟ್ಟದಲ್ಲಿ ಬಾಡ್ರಹಳ್ಳಿ, ಅಗ್ರಹಾರ, ಗ್ರಾಮ, ಪಟ್ಟಣಗಳೆಂದೂ ವಿಭಾಗಿಸುತ್ತಿದ್ದರು. ಅವುಗಳ ಆಡಳಿತವನ್ನು ನಾಡಪೆರ್ಗಡೆ, ಪಟ್ಟಣಸ್ವಾಮಿ, ಊರಗಾಮಂಡ, ಮುಂತಾದ ಅಧಿಕಾರಿಗಳ ಮುಖಾಂತರ ಆಡಳಿತ ನಡೆಸುತ್ತಿದ್ದರು. ಅಂದಿನ ಆಡಳಿತದ ಮುಖ್ಯ ವಿಭಾಗವೆಂದರೆ 'ನಾಡು' ಆಗಿದ್ದಿತು. ಒಂದು ಮುಖ್ಯ ಹಳ್ಳಿಯಿರುವ ವಿಭಾಗವನ್ನೇ 'ಕಂಪಣ'ವೆಂದು ಕರೆದರು. ಇದು ಇಂದಿನ ಜಿಲ್ಲೆಗೆ ಸಮಾನವಾದುದು.

ಪೂವಿನ ಬಾಗಿ – ೧೨; ಕಂಕಣೂರ (ಇಂದಿನ ಕಂಕಣವಾಡಿ) ಉಪವಿಭಾಗವಾಗಿದ್ದಿತು. ಮಾದಿರಾಜನೆಂಬವನು ಕುರುಂಬೆಟ್ಟ (ಇಂದಿನ ಸಿಂದಿ ಕುರಬೇಟ. ತಾ॥ ಗೋಕಾಕ) ಪ್ರಭುವಾಗಿದ್ದನು. ಇವನಿಗೆ ಕಂಕನೂರ ಕಂಪಣದ ಅಧಿಕಾರವನ್ನೂ ನೀಡಲಾಗಿತ್ತು. ಅದರ ಆದಾಯವನ್ನು ಅವನಿಗೇ ಕೊಟ್ಟು ಬಿಡಲಾಗಿತ್ತು ("ಎರಗ ದೇವರಸರ್..... ಧಾರಾಪೂರ್ವಕಂ ಕೊಟ್ಟಂ"). ಈ ಮಾದಿರಾಜನು ರಟ್ಟರ ಆಡಳಿತದಲ್ಲಿ ಪ್ರಧಾನ ಮಂತ್ರಿಯೂ, ದಂಡನಾಯಕನೂ ಆಗಿದ್ದನೆಂದು ತಿಳಿದು ಬರುತ್ತದೆ.

ಹಳ್ಳಿಗಳ ಆಡಳಿತವನ್ನು 'ಗಾವುಂಡ' ರು ನಡೆಸಲು ಅವರಿಗೆ ಸಹಾಯಕವಾಗಿ "ಶಾನಬೋವ" (ಶಾನಭೋಗ) ಇರುತ್ತಿದ್ದನು. ಇವನು ಕಂದಾಯದ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿದ್ದನು. ಅವನ ಉಪಜೀವನಕ್ಕಾಗಿ ಭೂಮಿಯನ್ನು ಉಂಬಳಿಯಾಗಿ ಕೊಡುವ ಪದ್ಧತಿ ಇತ್ತೆಂಬುದನ್ನು ರಾಯಬಾಗದ ಶಾಸನ ಸ್ಪಷ್ಟಪಡಿಸುತ್ತದೆ. ಈ ಗಾವುಂಡನು ಗ್ರಾಮಾಧಿಕಾರಿಯಾಗಿ, ರಾಜನ ಪ್ರತಿನಿಧಿಯಾಗಿ, ಇರುತ್ತಿದ್ದನು. ಅಗ್ರಹಾರಗಳ ಆಡಳಿತವು 'ಮಹಾರಾಜನ' ರಿಂದ ನಿರ್ವಹಿಸಲ್ಪಡುತ್ತಿತ್ತು.

ಹಂಮ್ಮಣಯ್ಯ, ಚಾಚರಸ ಮತ್ತು ಪರಸವ್ವೆಯರ ಸುಪುತ್ರ. ಇವನೇ ರಾಯಬಾಗದ ಶಾಸನವನ್ನು (ಆದಿನಾಥ ಬಸದಿ) ಬರೆಯಿಸಿದವ. ಇವನು ರಟ್ಟರಾಜರ ಸಾಮಂತನಾಗಿ ರಾಯಬಾಗವನ್ನು ಆಳುತ್ತಿದ್ದನು. ಈತನು ಸಾಹಸಿ ಮತ್ತು ಅತಿವೀರ. ಇವನ ಸಹೋದರನಾದ ಬೆಟ್ಟಣ್ಣಯ್ಯ ವಿದ್ವಾನ್, ವಿದೂಷಕ. ಇನ್ನಿಬ್ಬರು ಸಹೋದರರಲ್ಲಿ ಶ್ರೀಕಾಳಿಮಯ್ಯನು ಸಾಹಿತಿ, ವಾಗ್ಮಿಯಾಗಿದ್ದರೆ ಚಾವುಂಡರಾಯನು ಪರಿಣತನಾದ ಮಂತ್ರಿಯಾಗಿದ್ದವ. ಈ ನಾಲ್ವರೂ ರಟ್ಟರಾಜ್ಯಕ್ಕೆ ಶೋಭಾಯಮಾನವಾಗಿದ್ದರು.

ಉಪಸಂಹಾರ : ಅಂದಿನ ರಾಯಬಾಗವು ಸಾಂಸ್ಕೃತಿಕ ದೃಷ್ಟಿಯಿಂದ ಬಹು ಪ್ರಮುಖವಾದ ನಗರ. ಇಲ್ಲಿನ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಬದುಕು, ಶಿಲ್ಪಕಲೆ ಬಹಳ ಗಮನಾರ್ಹವಾಗಿದ್ದ ಬಗ್ಗೆ ತಿಳಿಯುತ್ತದೆ. ಅಂತೇ ಇಲ್ಲಿ ದೊರೆತ ಶಾಸನಗಳು ಇಲ್ಲಿಯ ಜನರ ಜೀವನದ ಮೇಲೆ, ವಿಶೇಷವಾಗಿ ರಟ್ಟರ ಕಾಲದ ಆಡಳಿತದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅಲ್ಲದೆ ರಟ್ಟರ ಕಾಲದ ಸಾಂಸ್ಕೃತಿಕ ಜೀವನವನ್ನು ಅರಿಯಲು ಸಹಾಯಕವಾಗಿವೆ. ಅವುಗಳ ಆಧಾರದಿಂದ ಆ ಕಾಲದ ಜನಜೀವನ ಸುಖಮಯವಾಗಿ, ಸಮೃದ್ಧವಾಗಿತ್ತೆಂದು ನಿಃಸಂಶಯವಾಗಿ ಹೇಳಬಹುದು. ಈ ನಗರ ಧರ್ಮ ಸಮನ್ವಯವನ್ನು, ಪರಧರ್ಮ ಸಹಿಷ್ಣುತೆಯನ್ನು ತೋರಿಸಿದೆ. ರಾಯಬಾಗದ ನಿವಾಸಿ ರಾಜಾದಿತ್ಯನು ಗಣಿತಶಾಸ್ತ್ರವನ್ನು ಕಾವ್ಯದಲ್ಲಿ ಬರೆದು ಕನ್ನಡ ಸಾಹಿತ್ಯಕ್ಕೆ, ಗಣಿತ ಲೋಕಕ್ಕೆ ತನ್ನ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. ರಾಯಬಾಗವು ಅಂದು ಮಹಾ ಘಟಿಕಾ ಸ್ಥಾನವಾಗಿ, ಹಿರಿಯ ಅಗ್ರಹಾರವಾಗಿ ದಕ್ಷಿಣ ಭಾರತದಲ್ಲಿ ಉತ್ತರದ ಕಾಶೀ ವಿದ್ಯಾ ಪೀಠದಷ್ಟು ಮಹತ್ವದ ಸ್ಥಾನವನ್ನು ಪಡೆದಿತ್ತು. ಉಚ್ಚ ಶಿಕ್ಷಣದ ವಿದ್ಯಾಕೇಂದ್ರವಾಗಿತ್ತು. ಅದು ತನ್ನ (ಸಹಜ ಸೌಂದರ್ಯದಿಂದ ನಂದನವನವೂ ಆಗಿತ್ತೆಂಬುದನ್ನು ಮರೆಯಲಾಗದು. ಇಲ್ಲಿಯ ಜನರು ವೀರರೂ, ವಿದ್ವಾಂಸರೂ ಆಗಿದ್ದರು. ಅವರಿಗೆ ರಾಜಾಶ್ರಯ ದೊರೆತು ತಮ್ಮ ವಿದ್ವತ್ತೆಯನ್ನು ತೋರ್ಪಡಿಸಲು ಅನುವಾಗಿತ್ತು. ಅಲ್ಲಿಯ ಅಧಿಕಾರಿಗಳು ದೇವಾಲಯ, ಬಸದಿಗಳಿಗೆ ದತ್ತಿಯನ್ನು ಬಿಡುವ ಸತ್ ಸಂಪ್ರದಾಯವನ್ನು ಪಾಲಿಸುತ್ತಿದ್ದರು.

ಒಕ್ಕಲುತನಕ್ಕೆ ಅನುಕೂಲವಾಗುವಂತೆ ನೀರಾವರಿ ಯೋಜನೆಗಳನ್ನು ಕೆರೆ, ಬಾವಿಗಳ ನಿರ್ಮಾಣದ ಮೂಲಕ ಹಮ್ಮಿಕೊಂಡಿದ್ದರು.

ರಟ್ಟರ ರಾಜ್ಯವನ್ನು ಬೆಳೆಸಿ, ಉಳಿಸಿ, ಸುಭದ್ರಪಡಿಸಿ ಜನರಿಗೆ ಸುಖ-ಸಮೃದ್ಧಿಯನ್ನು ನೀಡುವಲ್ಲಿ ರಾಯಬಾಗ ನಗರದ ಪಾತ್ರ ಬಲುಹಿರಿದು. ಆದರೆ ರಟ್ಟರಾಜರ ಅವನತಿಯ ನಂತರ ಈ ಭಾಗವು ಬಿಜಾಪುರದ ಅದಿಲಶಾಹಿಗಳ ಕೈಗೆ ಹೋಯಿತು. ಕೆಲ ಸಮಯ ದಿಲ್ಲೀ ಸುಲ್ತಾನರ ಪ್ರತಿನಿಧಿಗಳು ಈ ಪ್ರದೇಶವನ್ನು ಆಳಿದರು. ಈ ಕಾಲದಲ್ಲಿ ಅನೇಕ ಸಲ ಅನ್ಯ ರಾಜರ ಧಾಳಿಗಳಿಗೆ ಇಲ್ಲಿಯ ಜನ ತುತ್ತಾದರು. ಇಲ್ಲಿ ರಕ್ತದ ಕೋಡಿಯೂ ಹರಿದಿದೆ. ಪ್ರಜೆಗಳು ಅನವಶ್ಯಕವಾಗಿ ಲೂಟಿಗೆ ಒಳಗಾದರು. ಆ ಸಮಯದಲ್ಲಿ ಜನರ ಶಾಂತಿ ನಷ್ಟವಾಯಿತು. ಭಯಭೀತ ಜೀವನ ನಡೆಸುವಂತಾಯಿತು.

ಆದಿಲಶಾಹಿಯ ಆಡಳಿತ ಮುಗಿದು ಕೊಲ್ಲಾಪುರದ ಮರಾಠಾ ಅರಸರ ಆಳ್ವಿಕೆಯು ಪ್ರಾರಂಭವಾದಾಗ ಮತ್ತೆ ಜನರಿಗೆ ನೆಮ್ಮದಿಯ ಜೀವನ ದೊರೆಯುವಂತಾಯಿತು. ಇವರ ಅವಧಿಯಲ್ಲಿ ಹೆಚ್ಚಿನ ಅಭಿವೃದ್ಧಿಗಳು ಆಗದೇ ಇದ್ದರೂ ಕೂಡ ಜನ ಜೀವವು ಶಾಂತಿ, ಸುಸ್ಥಿರತೆಯಿಂದ ಕೂಡಿದ್ದಿತು. ಇದರ ನಂತರದ ಚರಿತ್ರೆ ನಮಗೆಲ್ಲಾ ಪರಿಚಿತವಿದೆ.

*

ಆಕರ ಗ್ರಂಥಗಳು

೧. **Inscriptions in North Karnatak & Kollapur., State:** Prof. K.G. Kundanagar.

೨. **Karnatak through the Ages.** - Editorial Committee

೩. **Belgaum Dist. Gazetteer.** - (Revised Edition) Chief Editor - Dr. Suryanath Kamat

೪. **ರಟ್ಟರ ಕಾಲೀನ ಸಾಂಸ್ಕೃತಿಕ ಅಧ್ಯಯನ:** ಡಾ. ಶಿವನಗೌಡ ಪಾಟೀಲ.

೫. **ಕರ್ನಾಟಕದ ಸಾಂಸ್ಕೃತಿಕ ಸಮೀಕ್ಷೆ:** ತಿಪ್ಪೇರುದ್ರ ಸ್ವಾಮಿ

೬. **ಕುಕನೂರು ಒಂದು ಸಾಂಸ್ಕೃತಿಕ ಸಮೀಕ್ಷೆ:** ಡಾ॥ ಎಸ್.ಎಲ್. ಶಾಂತಕುಮಾರಿ

೭. **ಕನ್ನಡ ಕವಿ ಚರಿತ್ರೆ:** ಆರ್.ನರಸಿಂಹಾಚಾರ್ಯ

೮. **ಕುಕನೂರು: ಒಂದು ಸಾಂಸ್ಕೃತಿಕ ಅಧ್ಯಯನ :** ಡಾ. ಆರ್.ಎಸ್. ಬಿರಾದಾರ

೯. **ಶಿಕ್ಷಣ ಮತ್ತು ಸಂಸ್ಕೃತಿ:** ಆರ್.ಎಸ್.ಬಿದರಿ

೧೦. ಬಾಗ್ಗಿ. (ವಾರ್ಷಿಕ ಸಂಚಿಕೆ ೧೬೮೨-೮೩) **'ಶಾಸನಗಳಲ್ಲಿ ರಾಯಬಾಗ'**- ಪ್ರೊ॥ ಬಿ.ಜಿ. ಅಮ್ಮಣಗಿ

೧೧. ಬಾಗಿ - ೨ (ವಾರ್ಷಿಕ ಸಂಚಿಕೆ ೧೯೮೩-೮೪) **' ರಾಯಬಾಗದಲ್ಲಿಯ ಶಿಲಾವಿಗ್ರಹಗಳು.,** ಲೇ. ಪ್ರೊ. ಬಿ.ಜಿ. ಅಮ್ಮಣಗಿ

೧೨. **The Chalukyas of Badami.,** (Ed.) Dr. Nagaraja Rao. M.S

ಕೆ. ಅಭಿಶಂಕರ್ *

ವಿಜಯನಗರ ಮಹಾರಾಜ್ಯದ ಸಾಫಲ್ಯ–ವೈಫಲ್ಯ : ಒಂದು ಸಂಕ್ಷಿಪ್ತ ವಿಶ್ಲೇಷಣೆ

ಕಂಪಿಲಿರಾಯನ ಮತ್ತು ಮುಮ್ಮಡಿ ಹೊಯ್ಸಳ ಬಲ್ಲಾಳನ ದೂರದರ್ಶಿತ್ವ, ವೀರಸಾಹಸ ಮತ್ತು ಬಲಿದಾನಗಳನ್ನು ಕಂಡ, ಹಂಪಿ – ಪರಿಸರದವರಾದ ಪಂಚ ಸಂಗಮ ಸಹೋದರರು ದಕ್ಷಿಣ ಭಾರತಕ್ಕೆ ಬಂದೊದಗಿದ್ದ ಘೋರ ವಿಪತ್ತಿನ ಕಾಲದಲ್ಲಿ ವಿಜಯನಗರ ಮಹಾರಾಜ್ಯವನ್ನು ಸ್ಥಾಪಿಸಲು ಸಮರ್ಥರಾದರಷ್ಟೆ. ದೇಶೀಯ ಸಭ್ಯತೆ, ಸಂಸ್ಕೃತಿ, ಧರ್ಮ, ಸಾಹಿತ್ಯ- ಕಲೆ ಮತ್ತು ವಿಶಿಷ್ಟ ಮೌಲ್ಯಗಳ ರಕ್ಷಣೆಗಾಗಿ ಉದಯಿಸಿದ ಈ ಅಪೂರ್ವ ರಾಜ್ಯ ತನಗೆ ತಾನೇ ಮಾದರಿಯಾಗಿತ್ತು. ಕ್ರಿ.ಶ. ೧೩೨೮ ರ ಸುಮಾರಿಗೆ ಆಗಲೇ ಕಲಬುರ್ಗಿಯ ಸಮೀಪದ ಸಗರದಲ್ಲಿ, ಬಿದರೆಯಲ್ಲಿ ಮತ್ತು ಡೆಕ್ಕನ್ನಿನ ಇತರ ಕೆಲವು ಕಡೆಗಳಲ್ಲಿ ಅಲ್ಲದೆ ಸುದೂರ ದಕ್ಷಿಣದ ಮದುರೆಯಲ್ಲಿ ಸಹ ದಿಲ್ಲಿಯ ಸುಲ್ತಾನಿ ಪ್ರಭುತ್ವದ ಸೈನಿಕ ಠಾಣ್ಯಗಳು ಏರ್ಪಟ್ಟು, ಅವು ತಮ್ಮ ಸುತ್ತಮುತ್ತಲಿನ ಭಾಗಗಳನ್ನೆಲ್ಲ ತಮ್ಮ ಹತೋಟಿಯಲ್ಲಿ ಇಟ್ಟು ಕೊಂಡಿದ್ದವು. ೧೩೪೦ ರಲ್ಲಿ ತುಂಗಭದ್ರೆಯ ಉತ್ತರದಲ್ಲಿರುವ ಬಾದಾಮಿಯು, ಮಹಾಮಂಡಲೇಶ್ವರ ಸಂಗಮ ಹರಿಹರರಾಯನ ವಶದಲ್ಲಿದ್ದು, ಅಲ್ಲಿ ಅವನು ಕೋಟೆ ಕಟ್ಟಿಸಿದ ಉಲ್ಲೇಖವಿದೆ; ಹೀಗೆ, ಕೃಷ್ಣಾ – ತುಂಗಭದ್ರಾ ನದಿಗಳ ನಡುವಣ ಕೆಲವು ಭಾಗಗಳೂ ಆತನ ವಶದಲ್ಲಿದ್ದವು.

ಆದರೆ, ಸಂಗಮ ಸಹೋದರರು ಕರ್ನಾಟಕ ಮತ್ತು ಆಂಧ್ರದ ಬಹು ಭಾಗಗಳ ಮೇಲೆ ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳು ವಷ್ಟರಲ್ಲಿಯೇ, ಅಂದರೆ ೧೩೪೭ ರಲ್ಲಿ ಕಲಬುರ್ಗಿ ರಾಜಧಾನಿಯಾಗಿ ಉಳ್ಳ ಬಹಮನಿಶಾಹಿ ರಾಜ್ಯದ ಸ್ಥಾಪನೆಯಾಗಿ, ಡೆಕ್ಕನ್ನಿನ ಉತ್ತರ ಭಾಗಗಳಲ್ಲಿ ವಿಜಯನಗರದ ಪ್ರಗತಿಗೆ ತೀವ್ರ ಬಾಧಕವಾಯಿತು. ೧೩೫೪ರಲ್ಲಿ ಬಹಮನಿ ಸುಲ್ತಾನನು ಮದುರೆ ಸುಲ್ತಾನನೊಡನೆ ಸಂಪರ್ಕ ಬೆಳೆಸಿ, ವಿಜಯನಗರದ ರಾಯಚೂರು ಸೀಮೆಯ ಮೇಲೆ ಧಾಳಿ ಮಾಡಿದನು. ಹೀಗೆ ವಿಜಯನಗರವು ಎರಡು ಸುಲ್ತಾನಿ ಪ್ರಭುತ್ವಗಳ ಮಧ್ಯದಲ್ಲಿ, ಅಡಕತ್ತರಿಯಲ್ಲಿ ಸಿಕ್ಕಂತಹ ಸ್ಥಿತಿಯನ್ನು ಎದುರಿಸಬೇಕಾಗಿದ್ದಿತು. ೧೩೪೨ ರಲ್ಲಿಯೇ ಮುತ್ಸದ್ದಿ ಮುಮ್ಮಡಿ ಬಲ್ಲಾಳನು ಮದುರೆಯನ್ನು ವಶಪಡಿಸಿಕೊಳ್ಳಲು ಮಾಡಿದ ವಿಫಲ ಪ್ರಯತ್ನವನ್ನು ಸಂಗಮರು ೨೯ ವರ್ಷಗಳ ಬಳಿಕ ಅಂದರೆ ೧೩೭೧ರಲ್ಲಿ ಸಫಲಗೊಳಿಸಿದರು. ಅವರು ಸುಮಾರು ೧೩೭೮ರಲ್ಲಿ ಗೋವೆಯನ್ನು ಬಹಮನಿಗಳಿಂದ ಗೆದ್ದುಗೊಂಡು, ೧೪೭೨ರಲ್ಲಿ ಕಳೆದುಕೊಂಡರು. ತುಂಗಭದ್ರೆಯ ದಕ್ಷಿಣಕ್ಕೆ ಕನ್ಯಾಕುಮಾರಿ ಯವರೆಗೂ ಬಹಮನಿ ಮತ್ತು ಅದರ ಉತ್ತರಾಧಿಕಾರಿ ರಾಜ್ಯಗಳು ಆಕ್ರಮಣ ಮಾಡದಂತೆ ಪ್ರಬಲ ಪ್ರತಿಬಂಧ ಹಾಕಿ, ತಡೆಗಟ್ಟುವಲ್ಲಿ ವಿಜಯನಗರವು ಯಶಸ್ವಿಯಾಯಿತು. ಇದರಿಂದ ಇಡೀ ತಮಿಳುನಾಡು- ಕೇರಳ-ಸಿಂಹಳಗಳಿಗೆ ಪೂರ್ಣವಾಗಿ ರಕ್ಷಣೆ, ಶಾಂತಿ ಮತ್ತು ನೆಮ್ಮದಿ ಲಭಿಸಿದವು ಎಂಬುದನ್ನು ಗಮನಿಸಬೇಕು. ಆದರೆ ಕೃಷ್ಣಾನದಿಯ ದಕ್ಷಿಣ ಮತ್ತು ಉತ್ತರದಲ್ಲಿ ವಿಜಯನಗರದ ಆಧಿಪತ್ಯವು ಸಾಕಷ್ಟು ನೆಲೆಗೊಳ್ಳಲು ಸಾಧ್ಯವಾಗಲಿಲ್ಲವಷ್ಟೇ ಅಲ್ಲ, ಆಯಕಟ್ಟಿನ ಪ್ರದೇಶವಾದ ತುಂಗಭದ್ರಾ – ಕೃಷ್ಣಾ ನದಿಗಳ ನಡುತೊರೆ ನಾಡನ್ನು (ರಾಯಚೂರು ದೋ ಅಬ್) ಉಳಿಸಿ ಕೊಳ್ಳುವ ದಿಸೆಯಲ್ಲಿ ಎರಡು ಶತಮಾನಗಳವರೆಗೂ ಆಗಾಗ ಸೆಣಸಾಟವನ್ನು ನಡೆಸಬೇಕಾಯಿತು.

ಭಯೋತ್ಪಾದನೆ

ಈ ಸ್ಥಿತಿಗೆ ಹಲವು ಕಾರಣಗಳಿವೆಯೆಂದು ಹೇಳಬಹುದು. ಆ ಪ್ರದೇಶಗಳನ್ನು ವಿಜಯನಗರದ ಹತೋಟಿಗೆ ತರಲು ಹೆಣಗಿದಾಗ, ಸುಲ್ತಾನರು ದೌರ್ಜನ್ಯ ಮತ್ತು ಕ್ರೌರ್ಯದಿಂದ ಸಾಮೂಹಿಕ ಹತ್ಯೆ, ಸುಲಿಗೆ ಮಾಡುತ್ತ ನಾಡನ್ನು ಧ್ವಂಸ ಮಾಡುತ್ತಿದ್ದರು. ೧೩೫೮ ರಿಂದ ೧೩೭೫ರ ವರೆಗೆ ಆಳಿದ ಬಹಮನಿ ಸುಲ್ತಾನ ಮೊದಲನೆಯ ಮುಹಮ್ಮದಶಹ ವಿನಾಕಾರಣ ವಿಜಯನಗರದ ಖಜಾನೆಯ ಮೇಲೆ ಹುಂಡಿ ಬರೆದು, ಅದರ ಹಣ ಪಾವತಿ ಆಗುವವರೆಗೂ ನರಮೇಧವನ್ನು ನಿಲ್ಲಿಸಲಿಲ್ಲ. ಇಮ್ಮಡಿ ದೇವರಾಯನ ಸಮಕಾಲೀನನಾದ ಶಹಬುದ್ದೀನ್ ಅಹ್ಮದ್

* ಮಾಜಿ ಪ್ರಧಾನ ಸಂಪಾದಕ, ಕರ್ನಾಟಕ ಗ್ಯಾಸೆಟಿಯರ್ ಗ್ರಂಥಮಾಲೆ.

ನಡೆಸಿದ ಯುದ್ಧದಲ್ಲಿ, ಇಬ್ಬರು ದೊಡ್ಡ ಬಹುಮನಿ ಸೈನಿಕ ಅಧಿಕಾರಿಗಳು ಮತ್ತು ಇತರ ಕೆಲವರು ವಿಜಯನಗರದ ಸೆರೆಯಾಳುಗಳಾದಾಗ, ಅವನು ಎರಡು ಲಕ್ಷ ಮಂದಿಯ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಲಾಗಿ, ಆ ಯುದ್ಧ ಕೈದಿಗಳನ್ನು ವಿಜಯನಗರದವರು ಬಿಡುಗಡೆ ಮಾಡಿಬಿಟ್ಟರು. ಹೀಗೆ ವಿಜಯನಗರವು ಯುದ್ಧದಲ್ಲಿ ಗೆದ್ದಾಗಲೂ, ಅದರ ಪ್ರಯೋಜನ ಪಡೆಯುವ ಚಾಕಚಕ್ಯತೆ ತೋರಲಿಲ್ಲ. ಸುಲ್ತಾನರು ಇಂಥ ಭಯೋತ್ಪಾದನೆಯ ಅಸ್ತ್ರವನ್ನೂ ಉಪಯೋಗಿಸುತ್ತಿದ್ದರು. ಅವರು ತಮ್ಮ ಫಿರಂಗಿ ಮತ್ತು ಅಶ್ವದಳಗಳನ್ನು ಹೆಚ್ಚು ಸಜ್ಜಾಗಿಟ್ಟಿದ್ದು, ಆ ಕಾರ್ಯಗಳಿಗಾಗಿ ಪಶ್ಚಿಮ ಮತ್ತು ಮಧ್ಯ ಏಷ್ಯದಿಂದ ವಿದೇಶಿ ಯೋಧರನ್ನೂ ಬರಮಾಡಿಕೊಳ್ಳುತ್ತಿದ್ದರು.

ಆಂಧ್ರದ ವೆಲಮರು ಮತ್ತು ಒರಿಸ್ಸಾದ ಗಜಪತಿಗಳು ವಿಜಯನಗರಕ್ಕೆ ಸಹಕಾರ ನೀಡುವುದು ಹೋಗಲಿ, ಅದಕ್ಕೆ ವ್ಯತಿರಿಕ್ತವಾಗಿ, ವಿಜಯನಗರದ ವಶದಲ್ಲಿದ್ದ ಪೂರ್ವದ ಭಾಗಗಳನ್ನು ಆಕ್ರಮಿಸುತ್ತಲೇ ಇದ್ದರು. ವಿಜಯನಗರದವರು ಅವರನ್ನು ಹಿಂದಕ್ಕೆ ಅಟ್ಟುತ್ತಲೇ ಇದ್ದರು. ಕೃಷ್ಣದೇವರಾಯನು ಗಜಪತಿಗಳ ಸೈನ್ಯವನ್ನು ಕಟಕ್‌ದವರೆಗೂ ಹಿಮ್ಮೆಟ್ಟಿಸಿ ಪರಾಜಯ ಗೊಳಿಸಿದ್ದನು. ವಿಕೇಂದ್ರೀಕರಣ ಪರಂಪರೆಯ ನಮ್ಮ ದೇಶದಲ್ಲಿ ಸೋತವರನ್ನು ಸದೆಬಡಿದು ನಾಶಪಡಿಸುವ ಪದ್ಧತಿ ಇರಲಿಲ್ಲ. ವಿಜಯನಗರದ ಶಕ್ತಿಹರಣಕ್ಕೆ ಈ ಎರಡನೆಯ ಯುದ್ಧನೀತಿಯೂ ಒಂದು ಕಾರಣ. ವಿಜಯನಗರದ ದೊರೆಗಳು ಅವರಿಗೆ ಮನಗಾಣಿಸಿ ಅವರೊಡನೆ ಪರಸ್ಪರ ಸ್ಥಿರ ಮೈತ್ರಿ ಮತ್ತು ಅನಾಕ್ರಮಣ ಒಪ್ಪಂದ ಮಾಡಿಕೊಂಡಿದ್ದರೆ. ಪ್ರಯೋಜನಕಾರಿಯಾಗುತ್ತಿತ್ತು. ಸಂಗಮ ವಂಶದ ಕೊನೆಯ ರಾಜರು ದುರ್ಬಲರೂ ಆಗಿದ್ದರು. ತದನಂತರ ಬಂದ ತುಳುವ, ಸಾಳುವ ಮತ್ತು ಅರವೀಡು ರಾಜವಂಶಗಳ ಕೆಲವು ಅರಸರೂ ಸಂಗಮ ಸಹೋದರರ ಕಾಲದ ಉದಾತ್ತ ಧ್ಯೇಯಗಳನ್ನು ಮರೆತು, ಅಂತಃಕಲಹಗಳಲ್ಲಿ ತೊಡಗಿದ್ದರು. ಅರಮನೆಯಲ್ಲಿ ಅಧಿಕಾರಕ್ಕಾಗಿ ಕೊಲೆಗಳು, ಒಳಸಂಚುಗಳು ನಡೆಯುತ್ತಿದ್ದವು. ಉದಾಹರಣೆಗೆ, ಅಚ್ಯುತರಾಯನ ಮಗ ವೆಂಕಟನನ್ನು ಅವನ ಸೋದರಮಾವ ಸಲಕರಾಜು ತಿರುಮಲನೇ ಕೊಂದು, ತಾನೇ ಸರ್ವಾಧಿಕಾರಿಯಾಗಲು ಹವಣಿಸಿದನು. ವೆಂಕಟನ ತಾಯಿ (ಮಹಾರಾಣಿ) ತನ್ನ ಸೋದರನ ವಿರುದ್ಧ ಬಿಜಾಪುರದ ಸುಲ್ತಾನನ ನೆರವು ಕೇಳಿದಳು. ಇಂಥ ನೈತಿಕ ಪತನದ ಕಾಲದಲ್ಲಿಯೂ ಪ್ರಾಜ್ಞರಾಗಲಿ, ಮಠ ಮಾನ್ಯಗಳಾಗಲಿ ರಾಜ ಮನೆತನದವರನ್ನು ಸನ್ಮಾರ್ಗಕ್ಕೆ ತರಲಿಲ್ಲ.

ವಿಪರ್ಯಾಸ

ಕ್ರಿ.ಶ. ೧೫೪೩ ರಿಂದ ೧೫೬೫ ರವರೆಗೆ ಸರ್ವಾಧಿಕಾರಿ ಯಾಗಿದ್ದ, ದುಡುಕುವ ಸ್ವಭಾವದ ಅಳಿಯ ರಾಮರಾಯನು ಸಾಕಷ್ಟು ಎಚ್ಚರಿಕೆಯನ್ನು ವಹಿಸಲಿಲ್ಲ, ವಿದೇಶಾಂಗ ವ್ಯವಹಾರದಲ್ಲಿ ಜಾಣ್ಮೆಯನ್ನು ತೋರಲಿಲ್ಲ. ಹಿಂದು ವಂಶಸ್ಥನಾದ ಅಹಮ್ಮದನಗರದ ಸುಲ್ತಾನ್ ಹುಸೇನ್ ನಿಜಾಮ್‌ಶಹನು ಇತರ ಮೂವರು ಸುಲ್ತಾನರನ್ನೂ ತನ್ನೊಡನೆ ಒಂದುಗೂಡಿಸಿ, ವಿಜಯನಗರದ ಮೇಲೆ ಸಂಯುಕ್ತವಾಗಿ ಯುದ್ಧ ಹೂಡಿ ೧೫೬೫ರಲ್ಲಿ ವಿಜಯನಗರದ ವಿನಾಶಕ್ಕೆ ಒಂದು ಕಾರಣ ನಾದನೆಂಬುದು ವಿಪರ್ಯಾಸದ ಪರಾಕಾಷ್ಠೆಯಾಗಿದೆ. ವಿಜಯ ನಗರ-ಬಹಮನಿ ಯುದ್ಧವೊಂದರ ಸೆರೆಯಾಳಾದ ಒಬ್ಬ ಹಿಂದು ಯುವಕನಿಗೆ ಧರ್ಮಾಂತರ ಮಾಡಿ ಮಾಲಿಕ್ ಹಸನ್‌ನೆಂದು ಹೆಸರಿಡಲಾಯಿತು. ಅವನು ಬಹಮನಿ ದರ್ಬಾರಿನಲ್ಲಿ ಡೆಕ್ಕನಿ ಪಕ್ಷದ ಮುಖಂಡನಾದ. ಅವನ ಮಗನಾದ ಮಾಲಿಕ್ ಅಹಮ್ಮದನು ಅಹಮ್ಮದನಗರದ ಮುಸ್ಲಿಂ ರಾಜ್ಯವನ್ನು ಸ್ಥಾಪಿಸಿದ. ಈತನ ಮರಿಮಗನೇ ಆ ಹುಸೇನ್ ನಿಜಾಮಶಹ. ಅಳಿಯ ರಾಮರಾಯನ ಶಿರಚ್ಛೇದ ಮಾಡಿದವನೂ ಇವನೇ. ೧೫೬೫ರ ನಿರ್ಣಾಯಕ ಯುದ್ಧದಲ್ಲಿ, ವಿಜಯನಗರದ ಸೇವೆಯಲ್ಲಿದ್ದ ಇಬ್ಬರು ಮುಸ್ಲಿಂ ದಂಡನಾಯಕರು ವಿಶ್ವಾಸಘಾತ ಮಾಡಿ ತಮ್ಮ ಸೇನಾ ವಿಭಾಗಗಳ ಸಹಿತ ವೈರಿಗಳೊಡನೆ ಸೇರಿ, ವಿಜಯನಗರದ ಸೇನೆಯಲ್ಲಿ ಅಲ್ಲೋಲಕಲ್ಲೋಲ ಮಾಡಿ, ಅದು ಸ್ಥೈರ್ಯಗೆಟ್ಟು ಹಿಮ್ಮೆಟ್ಟುವಂತೆ ಮಾಡಿದರು. ಅದರ ಸೋಲಿಗೆ ನೆರವಾದರು. ಕೂಡಲೆ ವಿಜಯ ನಗರದ ಸೈನ್ಯವನ್ನು ಹುರಿದುಂಬಿಸಿ ಅದರ ಪುನರ್ ಸಂಘಟನೆ ಮಾಡಿ ಹೋರಾಡಲು ಮತ್ತು ರಾಜಧಾನಿಯನ್ನು ರಕ್ಷಿಸಲು ರಾಮರಾಯನ ತಮ್ಮಂದಿರಾದ ತಿರುಮಲ ಮತ್ತು ವೆಂಕಟಾದ್ರಿಗಳು ಪ್ರಯತ್ನಿಸದೆ ಪಲಾಯನ ಮಾಡಿದರು. ಭದ್ರಬುನಾದಿಯೊಡನೆ ಪ್ರಾರಂಭವಾದ ವಿಜಯನಗರ ಮಹಾರಾಜ್ಯವು ದೂರದೃಷ್ಟಿಯ ಧೋರಣೆಗಳಿಂದ ಕ್ರಮೇಣ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡು ಅಖಿಲ ಭಾರತದಲ್ಲಿಯೇ ಅತ್ಯಂತ ಪ್ರಬಲ ರಾಜವಾಗಬಹುದಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಅದರ ಅಧಃಪತನವಾಗಿ ದುರಂತ ಮಯ ಸನ್ನಿವೇಶವುಂಟಾಯಿತು.

ಸಹಿಷ್ಣುತೆ-ಸೌಮ್ಯತೆ

ಯಾವುದೊಂದು ಮತದ ಪರವಾಗಿ, ಧರ್ಮದ ಪರವಾಗಿ ವಿಜಯನಗರದ ಅರಸರು ಭೇದಭಾವ, ಅವ್ಯವಹಾರ ಮಾಡಲಿಲ್ಲ. ಅವರು ಆಂತರಿಕ ಮತೀಯ ಸಾಮರಸ್ಯವನ್ನು ಪ್ರೋತ್ಸಾಹಿಸಿದ ಉದಾಹರಣೆಗಳಿವೆ. ಶ್ರೀ ವೈಷ್ಣವ-ಜೈನ ಕಲಹವನ್ನು ನಿವಾರಣೆ ಮಾಡಿದರು. ''ವೈಷ್ಣವರ ಕಯ್ಯಲು ಜೈನರ ಕೈವಿಡಿದುಕೊಟ್ಟು .. ವೈಷ್ಣವರು, ಜೈನರು ಒಂದು, ಭೇದವಾಗಿ ಕಾಣಲಾಗದು...ವೈಷ್ಣವ ದರ್ಶನಕ್ಕೆಯು, ಜೈನದರ್ಶನಕ್ಕೆಯು ಭೇದವಿಲ್ಲ'' ...ವೆಂದು ಬುಕ್ಕರಾಯ ಸದುಪದೇಶ ನೀಡಿ, ಅವರಲ್ಲಿ ಸಮನ್ವಯ ಏರ್ಪಡಿಸಿದ ಬಗ್ಗೆ ಶಿಲಾಲೇಖವಿದೆ. ಶೈವರು ಶಿವನೆಂದೂ, ಬೌದ್ಧರು ಬುದ್ಧನೆಂದೂ ಮುಂತಾಗಿ ಉಪಾಸನೆ ಮಾಡುವುದು ಎಲ್ಲವೂ ಒಂದೇ ಎಂಬ ಅರ್ಥದ ಕಲ್‌ಬರಹವೂ ವಿಜಯನಗರದ ಕಾಲದ್ದೇ. ಕ್ರೈಸ್ತ, ಯಹೂದಿ, ಮುಸ್ಲಿಂ, ಹಿಂದು ಯಾರೇ ಆಗಲಿ ಅವರ ಧರ್ಮ ಯಾವುದೆಂದು ಪ್ರಶ್ನಿಸದೆ, ಅವರವರ ಧಾರ್ಮಿಕ

ನಂಬಿಕೆಗಳನ್ನು ಅನುಸರಿಸಲು ವಿಜಯನಗರ ರಾಜ್ಯದಲ್ಲಿ ಪೂರ್ಣ ಸ್ವಾತಂತ್ರ್ಯವಿತ್ತೆಂದು ವಿದೇಶಿ ಪ್ರವಾಸಿ ಬರ್ಬೋಸ ಬರೆದಿದ್ದಾನೆ. ಮುಸ್ಲಿಂ ಬಂಧುಗಳ ಉಪಯೋಗಕ್ಕಾಗಿ ರಾಜಧಾನಿಯಲ್ಲಿ ಮಸೀದಿಯನ್ನು ಕಟ್ಟಿಸಿಕೊಟ್ಟದ್ದಲ್ಲದೆ, ಪವಿತ್ರ ಕುರಾನಿನ ಪ್ರತಿಯನ್ನು ರಾಜಸಿಂಹಾಸನದ ಸಭಾಭವನದಲ್ಲಿ ಇಡಲಾಗಿತ್ತೆಂಬ ಉಲ್ಲೇಖವಿದೆ. ಅಹಮದ್‌ಖಾನ್ ಎಂಬ ಮುಸ್ಲಿಂ ಅಧಿಕಾರಿ ಇಮ್ಮಡಿ ದೇವರಾಯನಿಗೆ ಪುಣ್ಯವಾಗಲೆಂದು ಒಂದು ಮಸೀದಿಯನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಮೊದಲನೆಯ ಹರಿಹರನ ಕಾಲದಲ್ಲಿ ಹೊನ್ನಾವರದಲ್ಲಿ ಒಬ್ಬ ದೊಡ್ಡ ಮುಸ್ಲಿಂ ಅಧಿಕಾರಿ ಇದ್ದನು. ಇವನನ್ನು ವಿದೇಶಿ ಪ್ರವಾಸಿ ಇಬ್ನ ಬಟುಟಾ, 'ಸುಲ್ತಾನ್'ನೆಂದು ಕರೆದಿದ್ದಾನೆ. ವಿಜಯನಗರದ ಸೈನ್ಯದಲ್ಲೂ ಮುಸ್ಲಿಮರನ್ನು ಸೇರಿಸಿಕೊಳ್ಳುವ ರೂಢಿ ಇದ್ದು, ಅದು ಅಳಿಯ ರಾಮರಾಯನ ಕಾಲದಲ್ಲಿ ಹೆಚ್ಚಳವನ್ನು ಪಡೆಯಿತು. ವಿದೇಶಿ ಮುಸ್ಲಿಮರು ಭಾರತಕ್ಕೆ ತಂದಿದ್ದ ವಾಸ್ತುಶಿಲ್ಪದ ಶೈಲಿಯನ್ನೂ ವಿಜಯನಗರದ ಆಳರಸರು ಸ್ವೀಕರಿಸಿ ತಮ್ಮ ಕೆಲವು ಕಟ್ಟಡಗಳಲ್ಲಿ ಅಳವಡಿಸಿದ್ದನ್ನು ಕಾಣುತ್ತೇವೆ. ಯಾವ ಕೋಮು, ಧರ್ಮ ಅಥವಾ ಮತದ ಬಗ್ಗೆ ವಿಜಯನಗರದ ರಾಜರ ಮತ್ತು ಪ್ರಜೆಗಳ ವಿರೋಧವಿರಲಿಲ್ಲ. ಧರ್ಮವನ್ನು, ಮತವನ್ನು ರಾಜಕೀಯದೊಡನೆ ಬೆರೆಸುವ ರೂಢಿ ಭಾರತದ್ದಲ್ಲ. ಈ ದೇಶದಲ್ಲಿ ಪ್ರಾಚೀನ ಕಾಲದಿಂದ ನಡೆದು ಬಂದಿರುವ ಪರಮತ, ಪರಧರ್ಮ ಸಹಿಷ್ಣುತೆ ಮತ್ತು ಗೌರವದ ಉದಾತ್ತ ಮನೋಭಾವದ ಪರಂಪರೆಯನ್ನು ವಿಜಯನಗರವು ಅನುಸರಿಸಿತು; ದೇಶದಲ್ಲಿ, ದಕ್ಷಿಣ ಭಾರತದಲ್ಲಿ ಹೊಸದಾಗಿ ಉಂಟಾದ ದಾರುಣ ಪರಿಸ್ಥಿತಿಯಲ್ಲೂ ಈ ಪರಂಪರೆಯನ್ನು ಅದು ಅಖಂಡವಾಗಿ ಪ್ರೋತ್ಸಾಹಿಸಿತು, ಪೋಷಿಸಿತು ಎಂಬುದು ವಿಶೇಷವಾಗಿ ಲಕ್ಷಿಸತಕ್ಕ ಸಂಗತಿಯಾಗಿದೆ. ಅದಕ್ಕಾಗಿ ತೆತ್ತಬೆಲೆ, ಬಲಿದಾನ ವಿಪರೀತ. ಧರ್ಮಾಂಧತೆ ಮತ್ತು ಕ್ರೌರ್ಯ ಒಂದು ಕಡೆ, ಸಹಿಷ್ಣುತೆ ಮತ್ತು ಸೌಮ್ಯತೆ ಇನ್ನೊಂದು ಕಡೆ - ಇವುಗಳ ನಡುವಣ ತುಮುಲವು ಸುಮಾರು ಮೂರು ಶತಮಾನಗಳವರೆಗೆ ನಡೆದು, ಈ ಹೋರಾಟದ ಮುಂದಿನ ಮಣೆಹಕ್ಕಾಗಿ (ಛತ್ರಪತಿ) ಶಿವಾಜಿ ಭೋಸಲೆಗೆ ಪ್ರೇರಣೆ ನೀಡಿತು.

*

(ವಿಜಯನಗರ ಮತ್ತು ಡೆಕ್ಕನ್ ಸುಲ್ತಾನಿ ರಾಜ್ಯಗಳಿಗೆ ಸಂಬಂಧಪಟ್ಟ ಹಲವಾರು ಗ್ರಂಥಗಳನ್ನು, ಲೇಖನಗಳನ್ನು ಗಮನಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.)

ಡಾ॥ ಕೆ.ಎನ್. ಚಿಟ್ನೀಸ *

ಸವಣೂರ ನವಾಬರ ಮತ್ತು ಮರಾಠರ ಸಂಬಂಧ (೧೬೭೨-೧೭೯೪)

೧೬೭೨ರಲ್ಲಿ ಸವಣೂರ ಸಂಸ್ಥಾನವು ಅಸ್ತಿತ್ವದಲ್ಲಿ ಬಂದಾಗಿನಿಂದ ಹಿಡಿದು ೧೭೯೪ರಲ್ಲಿ ಐದನೆಯ ನವಾಬನಾದ ಅಬ್ದುಲ್ ಹಕೀಮಖಾನನ ಮರಣದ ವರೆಗೆ ಮರಾಠರ ಸಂಗಡ ಸವಣೂರ ನವಾಬರ ಸಂಬಂಧವು ವಿಶೇಷವಾಗಿ ಬಂದಿತು. ಈ ಸಂಬಂಧ ಬರಲಿಕ್ಕೆ ಮುಖ್ಯ ಕಾರಣವೆಂದರೆ ಉತ್ತರ-ದಕ್ಷಿಣ ಭಾರತದ ನಡುವಿನ ಹೆದ್ದಾರಿಯ ಮಧ್ಯದಲ್ಲಿರುವ ಸವಣೂರ ರಾಜ್ಯದ ಆಯಕಟ್ಟಿನ ಸ್ಥಾನ. ದಕ್ಷಿಣ ಭಾರತದ ಮೇಲೆ ತಮ್ಮ ವರ್ಚಸ್ಸನ್ನು ಪ್ರಸ್ಥಾಪಿಸುವುದಕ್ಕೋಸ್ಕರ ಸವಣೂರ ರಾಜ್ಯವನ್ನು ತಮ್ಮ ಅಂಕಿತದಲ್ಲಿ ಇಡುವದು ಮರಾಠರಿಗೆ ಆವಶ್ಯಕವಾಗಿತ್ತು.

ಶಿವಾಜಿರಾಜರ ಕಾಲದಲ್ಲಿಯೂ ಸಹ ಈ ಮಾತಿನ ಮಹತ್ವವು ತಿಳಿದಿತ್ತು. ಅಂತೆಯೇ ಅವರು ಈ ಪ್ರದೇಶದಲ್ಲಿಯ ಕೆಲವು ವಿಭಾಗಗಳನ್ನು ತಮ್ಮ ನಿಯಂತ್ರಣದಲ್ಲಿ ತಂದಿದ್ದರು. ಪೇಶವೆ ದಫ್ತರಿನಲ್ಲಿಯ ಒಂದು ಮರಾಠೀ ಮೋಡೀ ದಾಖಲೆಯ ಪ್ರಕಾರ ಬೆಳಗಾವಿ-ಪಾದಶಹಾಪುರ, ಸಂಪಗಾವ, ಗದಗ, ಲಕ್ಷ್ಮೇಶ್ವರ, ನವಲಗುಂದ, ಕೊಪ್ಪಳ, ಬೆಟಗೇರಿ ಮತ್ತು ಹಲ್ಯಾಳ ಈ ಎಂಟು ಪ್ರಾಂತಗಳು ಶಿವಾಜಿರಾಜರ ಕೈಕೆಳಗಿದ್ದವು [೧]. ಈ ಈ ಪ್ರಾಂತಗಳು ಕೃಷ್ಣಾ ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿದ್ದು ಸವಣೂರ ರಾಜ್ಯವು ಅವುಗಳನ್ನೊಳಗೊಂಡಿತ್ತು.

ಸವಣೂರ ಸಂಸ್ಥಾನದಲ್ಲಿ ಒಟ್ಟು ೧೪ ಜನ ನವಾಬರು ಆಳಿಹೋದರು. ಸಂಸ್ಥಾಪಕನಾದ ನವಾಬ ಅಬ್ದುಲ್ ಕರೀಮ ಖಾನನಿಗೆ ೧೬೭೨ರಲ್ಲಿ ವಿಜಾಪುರದ ಸಿಕಂದರ ಆದಿಲಶಹನು ೨೨ ಮಹಲುಗಳನ್ನೊಳಗೊಂಡ ಬಂಕಾಪುರ ಜಹಗೀರನ್ನು ಧಾರೆಯೆರೆದು ಕೊಟ್ಟದ್ದರಿಂದ ಸವಣೂರ ಸಂಸ್ಥಾನದ ಉದಯವಾಯಿತು. ಈ ಸಂಸ್ಥಾನವು ೧೯೪೮ರ ವರೆಗೆ ಅಸ್ತಿತ್ವದಲ್ಲಿತ್ತು. ಬಂಕಾಪುರ ಜಹಗೀರಿನ ಹದ್ದಿನಲ್ಲಿ ಶಿವಾಜಿರಾಜರ ಕೆಲವು 'ಪ್ರಾಂತ'ಗಳು ಇದ್ದದ್ದರಿಂದ ನವಾಬ ಅಬ್ದುಲ್ ಕರೀಮಖಾನ ಮತ್ತು ಶಿವಛತ್ರಪತಿ ಇವರ ನಡುವೆ ಸಂಘರ್ಷವಿತ್ತು. ನವಾಬ ಅಬ್ದುಲ್ ಕರೀಮಖಾನನ ನಂತರ ಬಂದ ನವಾಬ ಅಬ್ದುಲ್ ರಾಉಫಖಾನ (೧೬೮೬-೧೭೧೯)ನಿಗೆ ಮುಘಲ ಸಾಮ್ರಾಟ ಔರಂಗಜೇಬನು ೭೦೦೦ 'ಜಾತ' ಮತ್ತು ೬೦೦೦ 'ಸ್ವಾರ' ತರಗತಿಯ ಮನಸಬದಾರ ನನ್ನಾಗಿ ಮಾಡಿ ಅವನಿಗೆ 'ದಿಲೇರಖಾನ ಬಹಾದ್ದೂರ ದಿಲೇರಜಂಗ' ಎಂಬ ಪದವಿಯನ್ನು ದಯಪಾಲಿಸಿದನು. ಇದಲ್ಲದೆ ಎಷ್ಟೋ ಮಹಲುಗಳನ್ನೊಳಗೊಂಡ ಆಜಮನಗರ ಸರ್ಕಾರ ಮತ್ತು ತೊರಗಲ ಸರ್ಕಾರಗಳನ್ನು ಅವನಿಗೆ ಬಿಟ್ಟು ಕೊಟ್ಟನು [೨]. ಮುಂದೆ ಸವಣೂರ ರಾಜ್ಯವು ಉತ್ತರದಲ್ಲಿ ಕೃಷ್ಣಾನದಿಯಿಂದ ಹಿಡಿದು ದಕ್ಷಿಣದಲ್ಲಿ ತುಂಗಭದ್ರಾ ನದಿಯವರೆಗೆ ಹಬ್ಬಿತು. ವಾಯುವ್ಯ ಕಡೆಯಲ್ಲಿ ಒಂದು ಸಣ್ಣ ಭಾಗವು ಮಾತ್ರ ಇವರಕಡೆ ಇರಲಿಲ್ಲ. ಒಟ್ಟಿನ ಮೇಲೆ ಉತ್ತರದಲ್ಲಿ ಬೀಳಗಿಯಿಂದ ದಕ್ಷಿಣದಲ್ಲಿ ಮಾಸೂರಿನವರೆಗೂ ಹಾಗೂ ಪಶ್ಚಿಮದಲ್ಲಿ ಮಿಶ್ರಿಕೋಟೆಯಿಂದ ಹಿಡಿದು ಪೂರ್ವದಲ್ಲಿ ಕೊಪ್ಪಳದವರೆಗೂ ಸವಣೂರು ರಾಜ್ಯವು ಪಸರಿಸಿತ್ತು.

ನವಾಬ ಅಬ್ದುಲ್ ರಾವುಫಖಾನನ ಕಾಲದಲ್ಲಿ ಮರಾಠರಿಗೆ ದಕ್ಷಿಣರಾಜ್ಯಗಳ ಕಡೆಗೆ ಲಕ್ಷ್ಯ ಕೊಡಲು ಸಮಯವೇ ಸಿಗಲಿಲ್ಲ. ಶಿವಛತ್ರಪತಿಯ ಆಳಿಕೆಯ ನಂತರ ಮುಘಲರ ಕೈಯಿಂದ ಸಂಭಾಜಿರಾಜನ ಕೊಲೆ, ಜಿಂಜಿಗೆ ರಾಜಾರಾಮನ ಪ್ರಯಾಣ, ಶಾಹೂ ರಾಜನ ಬಂಧನ ಮತ್ತು ಬಿಡುಗಡೆ, ಪೇಶವೆ ರಾಜ್ಯಾಡಳಿತದ ಸ್ಥಾಪನೆ ಇವೇ ಮೊದಲಾದ ಘಟನೆಗಳಲ್ಲಿ ಅವರ ಸಮಯ ಹೊರಟುಹೋಯಿತು. ಪೇಶವೆ ರಾಜ್ಯ ಸ್ಥಾಪನೆಯ ನಂತರ ಅದನ್ನು ಸ್ಥಿರಮಾಡುವದರಲ್ಲಿ ಬಾಳಾಜಿ ವಿಶ್ವನಾಥನು ತೊಡಗಿದನು. ಹೀಗಾಗಿ ೧೭೨೦ರಲ್ಲಿ ೧ನೆಯ ಬಾಜೀರಾಯನು ಪೇಶ್ವೆ ಆಗುವವರೆಗೆ ದಕ್ಷಿಣ ಪ್ರದೇಶಗಳ ಕಡೆಗೆ ಲಕ್ಷ್ಯವನ್ನು ಕೊಡಲಿಕ್ಕೆ ಆಗಲಿಲ್ಲ. ೧ನೆಯ ಬಾಜೀರಾಯನು ದಕ್ಷಿಣದಲ್ಲಿ ಎರಡು ದಾಳಿಗಳನ್ನು ಮಾಡಿದನು [೩]. ನವ್ಹೆಂಬರ ೧೭೨೫ರಿಂದ ಮೇ ೧೭೨೬ರವರೆಗೆ ನಡೆದ ಮೊದಲನೆಯ ದಾಳಿಯಲ್ಲಿ ಬಾಜೀರಾಯನು

* ಎ ೧, ೨೩, ರಾಂಬಾಗ್ ಕಾಲೋನಿ, ನವಿಪೇಟ್, ಪುಣೆ - ೪೧೧ ೦೩೦

ಚಿತ್ರದುರ್ಗದವರೆಗೂ, ನವ್ಹೆಂಬರ ೧೭೨೬ರಿಂದ ಏಪ್ರಿಲ್ ೧೭೨೭ರ ವರೆಗೆ ನಡೆದ ಎರಡನೆಯ ದಾಳಿಯಲ್ಲಿ ಶ್ರೀರಂಗಪಟ್ಟಣದವರೆಗೂ ಹೋಗಿ ಬಂದನು. ಈ ದಾಳಿಗಳಲ್ಲಿ ೧ನೆಯ ಬಾಜೀರಾಯನ ಜೊತೆಗೆ ಫತೇಸಿಂಹ ಭೋಸಲೆ, ತ್ರಿಂಬಕರಾವ ದಾಭಾಡೆ, ಸಲ್ತಾನಜಿ ನಿಂಬಾಳಕರ ಮುಂತಾದ ಮರಾಠಾ ಸರದಾರರೂ ಇದ್ದರು.

ಈ ದಾಳಿಗಳಿಗೆ ಒಂದು ತಾತ್ವಿಕ ಹಿನ್ನೆಲೆಯೂ ಇದೆಯೆಂದು ಮರಾಠರು ಅನ್ನುತ್ತಿದ್ದರು. ಈ ಹಿನ್ನೆಲೆಯಲ್ಲಿ ಪೇಶವೆ ಮತ್ತು ಹೈದರಾಬಾದಿನ ನಿಜಾಮ ಇವರ ನಡುವೆ ವಿರೋಧವಿದ್ದು ಈ ವಿರೋಧದ ಮೂಲಕ ಸವಣೂರ ನವಾಬನು ಎಷ್ಟೋ ಸಲ ಗೊಂದಲದಲ್ಲಿ ಸಿಕ್ಕಿಕೊಳುತ್ತಿದ್ದನು. ೧೭೧೯ ರಲ್ಲಿ ಬಾಳಾಜಿ ವಿಶ್ವನಾಥನು ಮುಘಲ ಸಮ್ರಾಟ ಫರೂಖಸಿಯಾರ ಇವನ ಕಡೆಯಿಂದ ಸ್ವರಾಜ್ಯ, ಚೌಥಾಯಿ ಮತ್ತು ಸರದೇಶಮುಖಿ ಈ ಬಗ್ಗೆ ಮೂರು ಸನದುಗಳನ್ನು ಪಡೆದನು. ಈ ಸನದುಗಳು ಶಾಹೂ ಛತ್ರಪತಿಯ ಹೆಸರಿನಲ್ಲಿ ಇದ್ದವು. ಸ್ವರಾಜ್ಯ ಸನದಿನ ಮೂಲಕ ಶಾಹೂ ಛತ್ರಪತಿಯ ಕೈಕೆಳಗೆ ಆಳುತ್ತಿದ್ದ ಪೇಶವೆಗೆ ಹಿಂದೆ ಶಿವಛತ್ರಪತಿಯ ಸ್ವತಂತ್ರ ರಾಜ್ಯದಲ್ಲಿಯ ಪ್ರದೇಶಗಳ ಮೇಲೆ ಪೂರ್ಣ ಅಧಿಕಾರವು ಸಿಕ್ಕಿತು. ಚೌಥಾಯಿ ಮತ್ತು ಸರದೇಶಮುಖಿ ಸನದುಗಳಿಂದ ಪೇಶವೆಗೆ ಇಲ್ಲವೆ ಮರಾಠಾ ರಾಜ್ಯಕರ್ತರಿಗೆ ವಿಜಾಪುರ, ಗೋವಳಕೊಂಡ , ಬಿದರೆ, ವರ್ಹಾಡ, ಔರಂಗಾಬಾದ ಹಾಗೂ ಖಾನದೇಶ ಈ ಆರು ದಕ್ಷಿಣ ಸುಭೆಗಳಲ್ಲಿ ವಾರ್ಷಿಕ ಉತ್ಪನ್ನದ ಅನುಕ್ರಮವಾಗಿ ಶೇಕಡಾ ೨೫ ಮತ್ತು ೧೦ ಭಾಗಗಳನ್ನು ತೆಗೆದುಕೊಳ್ಳುವ ಅಧಿಕಾರವು ಪ್ರಾಪ್ತವಾಯಿತು. ಚೌಥಾಯಿಯು ಅಲ್ಲಿಯ ಪ್ರದೇಶದ ಸಂರಕ್ಷಣಕ್ಕಾಗಿ ತೆಗೆದುಕೊಂಡ ಬೆಲೆಯೆಂತೆಯೂ ಮತ್ತು ಸರದೇಶಮುಖಿಯು ಆ ಪ್ರದೇಶದಲ್ಲಿಯ ಕಂದಾಯವನ್ನು ಎತ್ತಿ ಒಟ್ಟುಕೂಡಿಸಿ ರಾಜ್ಯದ ಆಡಳಿತಕ್ಕೆ ಅದರ ಉಪಯೋಗ ಮಾಡುವ ಕೆಲಸಕ್ಕೆಂದು ಆನುವಂಶಿಕವಾಗಿ ಸಿಗುವ ವೇತನವೆಂದೂ ನಂಬಲಾಗಿತ್ತು.

ಚೌಥಾಯಿ ಮತ್ತು ಸರದೇಶಮುಖಿ ಸನದುಗಳ ಪ್ರಕಾರ ಈ ಹಣವನ್ನು ಎತ್ತುವ ನೆವದಿಂದ ಮತ್ತು ದಕ್ಷಿಣದಲ್ಲಿ ತಮ್ಮ ವರ್ಚಸ್ಸನ್ನು ಸ್ಥಾಪಿಸುವ ಉದ್ದೇಶದಿಂದ ೧ನೆಯ ಬಾಜೀರಾಯ ಮತ್ತು ಇತರ ಸರದಾರರ ನೇತೃತ್ವದಲ್ಲಿ ಮರಾಠರು ಚಿತ್ರದುರ್ಗಕ್ಕೆ ವಿಜಾಪುರ ಎಲಬುರ್ಗಿ ಮತ್ತು ಕೊಪ್ಪಳ ಮಾರ್ಗವಾಗಿ ದಾಳಿ ಮಾಡಿ ತಿರುಗಿಬಂದರು. ಈ ದಾಳಿಯಲ್ಲಿ ಬರುವ ಪ್ರದೇಶಗಳಿಂದ ಕಾಣಿಕೆಯನ್ನು ತೆಗೆದುಕೊಂಡು ಅಲ್ಲಲ್ಲಿ ವರ್ಚಸ್ಸನ್ನು ಸ್ಥಾಪಿಸಿದರು. ಸ್ವಾದಿರಾಜನಿಗೆ ವಿಶೇಷ ಸಂರಕ್ಷಣೆಯನ್ನು ಕೊಡಲಾಯಿತು[೪]. ಶ್ರೀರಂಗಪಟ್ಟಣದ ದಾಳಿಯಲ್ಲಿ ಬೆಳಗಾವ, ಸ್ವಾದಿ, ಲಕ್ಷ್ಮೇಶ್ವರ ಮತ್ತು ಬಿದನೂರ ಈ ಮಾರ್ಗದಿಂದ ೧ನೆಯ ಬಾಜೀರಾಯನು ಮತ್ತು ಮರಾಠಾ ಸೈನ್ಯವು ಹೋಯಿತು. ಈ ದಾಳಿಗಳಲ್ಲಿ ಚೌಥಾಯಿ ಮತ್ತು ಕಾಣಿಕೆಗಳನ್ನು ತೆಗೆದುಕೊಂಡರು ಮತ್ತು ಈ ಪ್ರದೇಶಗಳನ್ನು ವರ್ಚಸ್ಸಿನಲ್ಲಿ ತಂದರು. ಕೊಪ್ಪಳ, ಬೆಳಗಾವಿ, ಲಕ್ಷ್ಮೇಶ್ವರ, ಸ್ವಾದಿ ಈ ಪ್ರದೇಶಗಳು ಸವಣೂರ ರಾಜ್ಯದಲ್ಲಿದ್ದವು. ಸವಣೂರ ನವಾಬನ ಪ್ರಭುತ್ವವು ಈ ಪ್ರದೇಶಗಳ ಮೇಲೆ ನೇರವಾಗಿ ಇರದಿದ್ದರೂ, ಅವು ಅವನ ಈ ಅಂಕಿತದಲ್ಲಿದ್ದವು. ಆದ್ದರಿಂದ ಈ ದಾಳಿಗಳಲ್ಲಿ ಮರಾಠರಿಗೂ ಮತ್ತು ಸವಣೂರ ನವಾಬನಿಗೂ ಸಂಬಂಧವು ಬಂದೇ ಬಂದಿತು. ಈ ಕಾಲದಲ್ಲಿ ಅಬ್ದುಲ್ ಗಫಾರಖಾನನು ನವಾಬನಿದ್ದನು. ಆಮೇಲೆ ೧೭೩೦ರಲ್ಲಿ ಅಬ್ದುಲ್ ಮಜೀದ ಖಾನನು ಪಟ್ಟಕ್ಕೆ ಬರುವವರೆಗೆ ಮಜೀದಖಾನನ ಕಕ್ಕ ಅಬ್ದುಲ್ ಸತ್ತಾರಖಾನನು ರಾಜ್ಯಭಾರವನ್ನು ನೋಡುತ್ತಿದ್ದನು.

ದಕ್ಷಿಣದ ಆರು ಸುಭೆಗಳಲ್ಲಿ ಚೌಥಾಯಿ ಮತ್ತು ಸರದೇಶಮುಖಿಗಳ ಹಣವನ್ನು ತೆಗೆದುಕೊಳ್ಳುವ ಅಧಿಕಾರವು ಮುಘಲ ಸಾಮ್ರಾಟನಿಂದ ಸಿಕ್ಕಿದೆಯೆಂದು ಮರಾಠರು ಅನ್ನುತ್ತಿದ್ದರು. ಹೈದರಾಬಾದದ ನಿಜಾಮುಲ್ಮುಲ್ಕನು ತಾನೇ ಈ ಸುಭೆಗಳ ಮೇಲೆ ಮುಘಲ ಸಾಮ್ರಾಟನು ನೇಮಿಸಿದ ನಿಜವಾದ ಸುಭೇದಾರನೆಂದು ಪ್ರತಿಪಾದಿಸಿದನು. ಈ ಪ್ರಕಾರ ಇವರಿಬ್ಬರ ನಡುವೆ ಈ ಸುಭೆಗಳ ಮೇಲಿನ ಅಧಿಕಾರಕ್ಕಾಗಿ ಸಂಘರ್ಷವು ಉತ್ಪನ್ನವಾಯಿತು. ಈ ಕಲಹದಲ್ಲಿ ಸವಣೂರ ನವಾಬನಿಗೆ ಯಾರು ತನ್ನ ದೊರೆಯೆಂಬುದನ್ನು ತಿಳಿಯುವದು ಕಠಿಣವಾಯಿತು. ಈ ಪರಿಸ್ಥಿತಿಯು ೧೭೩೧ ರಲ್ಲಿ ಇನ್ನೂ ಕ್ಲಿಷ್ಟವಾಯಿತು. ಯಾಕೆಂದರೆ ಆ ವರ್ಷ ಸಾತಾರದ ಶಾಹೂ ಛತ್ರಪತಿ ಹಾಗೂ ಅವನ ಕಕ್ಕನ ಮಗನಾದ ಕೊಲ್ಹಾಪುರದ, ಸಂಭಾಜಿ ಛತ್ರಪತಿ ಇವರೀರ್ವರ ನಡುವೆ ವಾರಣಾ ಒಪ್ಪಂದವಾಗಿ ಅದರ ಪ್ರಕಾರ ತುಂಗಭದ್ರಾ ನದಿಯಿಂದ ಹಿಡಿದು ದಕ್ಷಿಣಕ್ಕೆ ರಾಮೇಶ್ವರದವರೆಗಿನ ಪ್ರದೇಶದಲ್ಲಿ ಇಬ್ಬರಿಗೂ ಸರಿಪಾಲು ಸಿಗಬೇಕು, ಉತ್ತರದಲ್ಲಿ ವಾರಣಾ ಮತ್ತು ಕೃಷ್ಣಾ ನದಿಗಳ ಸಂಗಮದಿಂದ ಹಿಡಿದು ದಕ್ಷಿಣದಲ್ಲಿ ತುಂಗಭದ್ರಾ ನದಿಯ ಮೇಲಿನ ನಿವೃತ್ತಿಸಂಗಮದವರೆಗಿನ ಪ್ರದೇಶವು ಸಂಭಾಜಿಗೆ ಹೋಗಬೇಕು, ಎಂದು ಕರಾರು ಆದದ್ದಲ್ಲದೆ ಇನ್ನೂ ಕೆಲವು ವಿಷಯಗಳ ಬಗ್ಗೆ ಅವರೀರ್ವರ ನಡುವೆ ನಿಶ್ಚಯ ಮಾಡಲಾಯಿತು[೫] ಈ ಪ್ರಕಾರ ಸವಣೂರ ರಾಜ್ಯದ ಪ್ರದೇಶವನ್ನು ಕೊಲ್ಹಾಪುರದ ಸಂಭಾಜಿ ಛತ್ರಪತಿಗೆ ಬಿಟ್ಟುಕೊಟ್ಟದ್ದರಿಂದ ಶಾಹೂ ಛತ್ರಪತಿಯ ಮಂತ್ರಿಯಾದ ಪೇಶವೆಗೆ ಈ ಭಾಗದಲ್ಲಿ ಕೈಹಾಕಲು ಇಲ್ಲವೆ ದಾಳಿ ಮಾಡಲು ಯಾವ ಅಧಿಕಾರವೂ ಉಳಿಯಲಿಲ್ಲ. ಇಂತಹ ಪ್ರಸಂಗದಲ್ಲಿ ಸವಣೂರ ನವಾಬನ ಸ್ಥಿತಿಯು ವಿಚಿತ್ರವಾಯಿತು. ಒಂದು ದೃಷ್ಟಿಯಿಂದ ನೋಡಿದರೆ, ೧೬೮೭ರಲ್ಲಿಯೇ ಔರಂಗಜೇಬನು ಸವಣೂರ ನವಾಬನನ್ನು ೭೦೦೦ ಜಾತ ಮತ್ತು ೬೦೦೦ ಸ್ವಾರ ತರಗತಿಯ ಮುಘಲಮನಸಬದಾರನನ್ನಾಗಿ ಮಾಡಿದ್ದರಿಂದ ಇವನು ಮುಘಲ ಬಾದಶಹನ ಇಲ್ಲವೆ ದಕ್ಷಿಣದಲ್ಲಿ ಬಾದಶಹನ ಪ್ರತಿನಿಧಿಯಾದ ಹೈದರಾಬಾದಿನ ನಿಜಾಮುಲ್ಮುಲ್ಕನ ಅಂಕಿತನಾಗಬೇಕು. ಇನ್ನೊಂದು ದೃಷ್ಟಿಯಿಂದ ಶಾಹೂ ಛತ್ರಪತಿಗೆ ಈ ಪ್ರದೇಶದಲ್ಲಿಯ ಚೌಥಾಯಿ ಮತ್ತು ಸರದೇಶಮುಖಿ ಹಕ್ಕುಗಳು

ಸಿಕ್ಕದ್ದರಿಂದ ಸವಣೂರ ನವಾಬನು ಅವನ ಅಧಿಕಾರವನ್ನು ಒಪ್ಪಬೇಕು ಇಲ್ಲವೆ ವಾರಣಾ ಒಪ್ಪಂದದ ಪ್ರಕಾರ ಕೊಲ್ಹಾಪುರದ ಛತ್ರಪತಿ ಸಂಭಾಜಿಯ ಅಧಿಕಾರವನ್ನು ಮನ್ನಿಸಬೇಕು. ಇದೇನೇ ಇದ್ದರೂ ನವಾಬ ಅಬ್ದುಲ್ ರಾವುಫಖಾನನಿಂದ ಓಡಿದು ನವಾಬ ಅಬ್ದುಲ್ ಮಜೀದಖಾನನವರೆಗೆ ನಿಜವಾಗಿಯೂ ಎಲ್ಲರೂ ಸ್ವತಂತ್ರವಾಗಿ ರಾಜ್ಯವಾಳಿದರು. ರಾವುಫಖಾನನು ಔರಂಗಜೇಬನಿಂದ ಮನಸಬನ್ನು ತೆಗೆದುಕೊಂಡ ಮೇಲೆ ಅಲ್ಪಕಾಲ, ಇಲ್ಲವೆ ಔರಂಗಜೇಬನ ಮರಣದ ಅಂದರೆ ೧೭೦೭ರ ವರೆಗೆ ಮುಘಲರ ಅಂಕಿತನಾಗಿದ್ದಿರಬಹುದು. ಆಮೇಲೆ ಸ್ವತಂತ್ರನಾದನು.

ವಾರಣಾ ಒಪ್ಪಂದದ ಪ್ರಕಾರ ಸವಣೂರ ರಾಜ್ಯದ ಪ್ರದೇಶವು ಕೊಲ್ಹಾಪುರದ ಛತ್ರಪತಿ ಸಂಭಾಜಿಯ ಕಡೆಗೆ ಹೋದರೂ ಪೇಶ್ವೆಯು ಯಾವದಾದರೂ ನೆವದಿಂದ ಈ ಪ್ರದೇಶವನ್ನು ತನ್ನ ವರ್ಚಸ್ಸಿನಲ್ಲಿಡುವ ಪ್ರಯತ್ನ ಮಾಡುತ್ತಿದ್ದನು. ಸಂಭಾಜಿಯೂ ಈ ಪ್ರದೇಶದಿಂದ ಕಪ್ಪಕಾಣಿಕೆಗಳನ್ನು ಎತ್ತುತ್ತಿದ್ದನು. ಸವಣೂರ ನವಾಬನು ಪ್ರಸಂಗಕ್ಕೆ ಅನುಸರಿಸಿ ನಡೆಯುತ್ತಿದ್ದನು.

ಸಂಭಾಜಿರಾಜನು ಇಲ್ಲಿಯ ಕಪ್ಪಕಾಣಿಕೆಗಳನ್ನೂ, ಚೌಥಾಯಿಯನ್ನೂ ಶಾಹೂಪಟ್ಟಿಯ ಮುಖಾಂತರ ತೆಗೆದುಕೊಳ್ಳುತ್ತಿದ್ದನು. ಸಂಭಾಜಿರಾಜನ ಕಡೆಯಿಂದ ೧೭೪೬ರಲ್ಲಿ ಯೇಸಾಜಿಗಾಯಕವಾಡನು ಬಂದು ನವಾಬ ಅಬ್ದುಲ್ ಮಜೀದಖಾನನ ಕಡೆಯಿಂದ ಶಾಹೂಪಟ್ಟಿಯನ್ನು ಕೇಳತೊಡಗಿದನು. ಕರಾರಿನ ಪ್ರಕಾರ ೫೦,೦೦೦ ರೂಪಾಯಿ ಶಾಹೂಪಟ್ಟಿಯನ್ನು ಕೊಡಬೇಕು, ಮತ್ತು ಅದರಲ್ಲಿ ೧೩,೦೦೦ ರೂಪಾಯಿಗಳನ್ನು ೧೭೪೬ರಲ್ಲಿಯೇ ಕೊಡಬೇಕು. ಅಬ್ದುಲ್ ಮಜೀದಖಾನ ನವಾಬನು ಈ ಕರಾರಿಗೆ ವಿಶೇಷ ಮಹತ್ವ ಕೊಡಲಿಲ್ಲ. ೧೩,೦೦೦ ರೂಪಾಯಿಗಳನ್ನು ನಗದುಕೊಡದೆ 'ಚಾವ' ಎಂಬ ಪರಗಣೆಯ ಮೇಲೇ ಹಣಕ್ಕಾಗಿ ವರಾತನ್ನು ಬರೆದುಕೊಟ್ಟನು[೬]. ಈ ಶಾಹೂಪಟ್ಟಿಯನ್ನು ಕೊಡಲು ನವಾಬನು ತಯಾರು ಇದ್ದಿದ್ದೇ ಇಲ್ಲ. ನಿಜವಾಗಿ ಹಣ ಸಿಗುವವರೆಗೂ ವರಾತಿಗೆ ಏನೂ ಅರ್ಥವಿದ್ದಿದ್ದಿಲ್ಲ.

ಸಂಭಾಜಿರಾಜನು ಇಲ್ಲವೆ ಅವನ ಸರದಾರರು ಅಲ್ಲಿ ಶಾಹೂ ಪಟ್ಟಿಯನ್ನು ತೆಗೆದುಕೊಳ್ಳುವ ಪ್ರಯತ್ನದಲ್ಲಿದ್ದಾಗಲೇ ಪೇಶವೆಯ ಅಧಿಕಾರಿಗಳೂ ಇಲ್ಲಿದ್ದು ಈ ಪ್ರದೇಶದ ಮೇಲೆ ತಮ್ಮ ಪ್ರಭುತ್ವವನ್ನು ಹೇಗೆ ಕೂಡಿಸಬೇಕೆಂಬ ಯೋಚನೆಯಲ್ಲಿದ್ದರು. ೨೯ ಸೆಪ್ಟೆಂಬರ, ೧೭೪೬ ರಂದು ನವಾಬ ಅಬ್ದುಲ್ ಮಜೀದಖಾನನ ಸ್ಥಾನದಿಂದ ಬರೆದ ಒಂದು ಪತ್ರದಲ್ಲಿ ಪೇಶವೆಯ ಅಧಿಕಾರಿಯು ಈ ಪ್ರದೇಶದಲ್ಲಿ ಸಂಭಾಜಿರಾಜನ ಆಳಿಕೆಯು ಕೊನೆಗೊಂಡ ಹಾಗೆ ಇದ್ದಂತೆಯೂ ಹಾಗೂ ಕರ್ನಾಟಕದಲ್ಲಿ ಪೇಶವೆಯ ಅಧಿಕಾರವನ್ನು ಪ್ರಸ್ಥಾಪಿಸುವದು ಅವಶ್ಯಕವಿದೆಯೆಂದೂ ತಿಳಿಸಿದ್ದನು.[೭] ಅದೇ ದಿನಾಂಕದ ಇನ್ನೊಂದು ಪತ್ರವನ್ನು ಸದಾಶಿವರಾವ ಬಾವುನಿಗೆ ಬರೆದಿದ್ದು ಆ ಪತ್ರ ಬರೆಯುವ ಮರಾಠರ ಪ್ರತಿನಿಧಿಯು ಈ ಪ್ರಾಂತದಲ್ಲಿ ಯಾರೂ ಧನಿಯಿಲ್ಲವೆಂದೂ ಸಂಭಾಜಿರಾಜನಿಗೆ ಯಾರೂ ಮಹತ್ವ ಕೊಡುವದಿಲ್ಲವೆಂದೂ ಆ ರಾಜನ ಕಡೆಯಿಂದ ಪೇಶ್ವೆಯು ಈ ಪ್ರದೇಶದಲ್ಲಿಯ ಸ್ವಾಮಿತ್ವವನ್ನು ತೆಗೆದುಕೊಂಡರೆ ಇಲ್ಲಿ ಶಾಂತಿ ಮತ್ತು ಭದ್ರತೆಗಳು ನೆಲಸುವವೆಂದೂ ತಿಳಿಸಿದ್ದನು. ಈ ಎಲ್ಲ ಕಾರಣಗಳಿಂದ ಈ ಪ್ರದೇಶದಲ್ಲಿ ಕಾಲು ಚಾಚಲಿಕ್ಕೆ ಪೇಶವೆಗೆ ಮೋಹವಾಗಿರಬೇಕು. ಆದ್ದರಿಂದಲೇ ಈ ಪ್ರದೇಶದ ಮೇಲೆ ತನ್ನ ನಿಯಂತ್ರಣವನ್ನು ಇಡಲು ಮೊದಲು ಮಾಡಿದನು. ಇದಲ್ಲದೇ ಪ್ರಾರಂಭದಲ್ಲಿಯೇ ಹೇಳಿದಂತೆ ಈ ಪ್ರದೇಶದ ಆಯಕಟ್ಟಿನ ಮಹತ್ವದಿಂದಲೂ ಪೇಶವೆಯು ಇದನ್ನು ತನ್ನ ಅಂಕಿತದಲ್ಲಿಡಲು ಇಚ್ಛಿಸಿದನು. ಪೇಶವೆಯ ದೊರೆಯಾದ ಶಾಹೂ ಛತ್ರಪತಿ ಹಾಗೂ ಕೊಲ್ಹಾಪುರದ ಸಂಭಾಜಿ ಛತ್ರಪತಿ ಇವರ ನಡುವಿನ ಜಗಳದ ಮೂಲಕ ನವಾಬ ಅಬ್ದುಲ್ ಮಜೀದಖಾನನಿಗೆ ಸಂಭಾಜಿ ಮತ್ತು ಪೇಶವೆ ಇವರಿಬ್ಬರನ್ನೂ ಎದುರಿಸಬೇಕಾಯಿತು. ಇದಲ್ಲದೆ ೧೭೪೦ರಲ್ಲಿ ಇನ್ನೊಬ್ಬ ಮರಾಠೆ ಸರದಾರ ರಘೂಜೀ ಭೋಸಲೆಯನ್ನೂ ಎದುರಿಸುವ ಪ್ರಸಂಗ ಬಂದಿತ್ತು. ಆದರೆ ಈ ಸಂಕಟ ಬೇಗನೇ ಹೊರಟು ಹೋಯಿತು. ಇದರ ಹಿನ್ನೆಲೆಯೇನೆಂದರೆ, ಅರ್ಕಾಟದ ನವಾಬನಾದ ದೋಸ್ತಅಲಿಯ ಅಳಿಯ ಚಂದಾ ಸಾಹೇಬನು ಮೋಸದಿಂದ ತಿರುಚನಾಪಳ್ಳಿಯನ್ನು ತೆಗೆದುಕೊಂಡು ಅದರ ಹತ್ತಿರವೇ ಇದ್ದ ತಂಜಾವೂರ ರಾಜ್ಯದ ಮೇಲೆ ಆಕ್ರಮಣ ಮಾಡುವ ಯೋಜನೆ ಮಾಡಹತ್ತಿದನು. ಆಗ ತಂಜಾವೂರ ರಾಜ್ಯದ ರಾಜನಾದ ಪ್ರತಾಪಸಿಂಹನು ಶಾಹೂ ಛತ್ರಪತಿಗೆ ಸೈನ್ಯಸಹಾಯ ಕಳಿಸೆಂದು ಬೇಡಿಕೊಂಡನು. ಶಾಹೂ ರಾಜನು ದೊಡ್ಡ ಸೈನ್ಯದೊಂದಿಗೆ ರಘೂಜೀ ಭೋಸಲೆಯನ್ನು ಕೊಟ್ಟುಕಳಿಸಿದನು. ಅವನ ಜೊತೆಗೆ ಫತೇಸಿಂಹ ಭೋಸಲೆಯೂ ಇದ್ದನು. ರಘೂಜೀ ಭೋಸಲೆಯು ತನ್ನ ದಕ್ಷಿಣ ದಂಡಯಾತ್ರೆಗೆ ಹೋಗುವಾಗ ತನ್ನ ರಾಜಕೀಯ ಪ್ರತಿನಿಧಿಯಾದ ಗಿರಮಾಜಿ ೧ರಾಮ ಇವನನ್ನು ಸವಣೂರಿನ ನವಾಬ ಅಬ್ದುಲ್ ಮಜೀದಖಾನನ ಕಡೆಗೆ ಕೊಟ್ಟು ಕಳಿಸಿದನು. ಅವನು ನವಾಬನನ್ನು ಭೆಟ್ಟಿಯಾಗಿ ಈ ಕೆಳಗಿನ ರಘೂಜಿಯ ಸಂದೇಶವನ್ನು ಕೊಟ್ಟನು:[೮] "ಶಾಹೂ ರಾಜನು ಕರ್ನಾಟಕ ಪ್ರದೇಶವನ್ನು ನನಗೆ ಒಪ್ಪಿಸಿದ್ದಾನೆ. ಆದ್ದರಿಂದ ಈ ಪ್ರಾಂತಕ್ಕೆ ಬೇರೆಯವರಾರೂ ಬರುವ ಕಾರಣವಿಲ್ಲ. ಮಾತುಕತೆಗಳಿಗಾಗಿ ನೀವು ನಿಮ್ಮ ಒಬ್ಬ ಯೋಗ್ಯಪ್ರತಿನಿಧಿಯನ್ನು ಕಳಿಸಬೇಕು"– ಅರ್ಥಾತ್ ಈ ಮಾತುಕತೆಗಳು ಕಪ್ಪ–ಕಾಣಿಕೆಯ ಹಣದ ಬಗ್ಗೆಯೇ ಇರಲಿಕ್ಕೆ ಸಾಕು. ಆದರೆ ಈ ವಿಷಯವನ್ನು ಮುಂದುವರಿಸಲಿಕ್ಕೆ ರಘೂಜಿಗೆ ಸಮಯ ಸಿಕ್ಕಂತೆ ತೋರುವುದಿಲ್ಲ. ಆದ್ದರಿಂದ ಇಷ್ಟಕ್ಕೇ ನಿಂತುಹೋಯಿತು.

ಶಾಹೂ ರಾಜನ ಅನುಮತಿಯಿಂದ ಮರಾಠ ಸರದಾರ ಬಾಬೂಜೀ ನಾಯಕ ಇವನು ತಿರುಚನಾಪಳ್ಳಿಯ ಬಿಡುಗಡೆ ಮಾಡಿ ತೆಗೆದುಕೊಳ್ಳುವುದಕ್ಕೋಸ್ಕರ ಮೊದಲು ೧೭೪೪ರಲ್ಲಿ ಆಮೇಲೆ

೧೭೪೬ರಲ್ಲಿ ಹೀಗೆ ಎರಡು ಸಲ ದಂಡಯಾತ್ರೆಯನ್ನು ಕೈಗೊಂಡನು. ಎರಡೂ ದಂಡಯಾತ್ರೆಗಳು ಯಶಸ್ವಿಗಳಾದವು. ಮೊದಲನೆಯ ದಂಡಯಾತ್ರೆಗೆ ಹೋಗುವ ಮುಂದೆ ಅಥವಾ ಬರುವ ಮುಂದೆ ಬಾಬೂಜೀ ನಾಯಕನು ಸವಣೂರ ರಾಜ್ಯದಲ್ಲಿಯ ಕಮಡೊಳ್ಳಿಯೆಂಬ ಹಳ್ಳಿಯಲ್ಲಿ ತಳವೂರಿ ಸವಣೂರ ನವಾಬ ಅಬ್ದುಲ್ ಮಜೀದಖಾನನ ಕಡೆಯಿಂದ ಕಪ್ಪಕಾಣಿಕೆಯನ್ನು ಸೆಳೆಯುವ ಪ್ರಯತ್ನಮಾಡಿದನು. ನವಾಬನು ಕಾಣಿಕೆಯನ್ನು ಕೊಡಲಿಕ್ಕೆ ನಿಷೇಧಿಸಿದ್ದರಿಂದ ಬಾಬೂಜೀ ನಾಯಕನು ಕಮಡೊಳ್ಳಿ ಕೋಟೆಗೆ ಮುತ್ತಿಗೆ ಹಾಕಿ ಅದರ ಕೆಲವು ಭಾಗಗಳನ್ನು ಕೆಡವಿದನು. ನವಾಬನ ರಾಜ್ಯದಲ್ಲಿಯ ಹುಸೇನಖಾನ ಪಠಾಣ ಎಂಬುವ ಒಬ್ಬ ಶಕ್ತಿಶಾಲೀ ಸರದಾರನ ಮಧ್ಯಸ್ತಿಕೆಯಿಂದ ಕೋಟೆಯ ಮುತ್ತಿಗೆಯನ್ನು ತೆಗೆಯಲೇ ಬೇಕಾಯಿತು. ಮತ್ತು ಮಹಾಠ ಸೈನ್ಯವು ಹಿಂದೆ ಸರಿಯ ಹತ್ತಿತು'[೯]. ಆಗ ನವಾಬ ಅಬ್ದುಲ್ ಮಜೀದಖಾನನು ತನ್ನ ಸೈನ್ಯದೊಡನೆ ಶತ್ರುಸೈನ್ಯದ ಮೇಲೆ ಮುಗಿಬಿದ್ದು ಅದನ್ನು ಮುರಿಬಡಿದನು. ಶತ್ರುಸೈನ್ಯವು ಓಡಿಹೋಯಿತು ಮತ್ತು ಸೇನಾಪತಿಯು ಪಾಳ್ಯವೆಂಬ ಗ್ರಾಮದಲ್ಲಿ ಅಡಗಿ ಕುಳಿತುಕೊಂಡನು. ಕೊನೆಗೆ ಬಾಬೂಜೀ ನಾಯಕನು ಒಪ್ಪಂದ ಮಾಡಿಕೊಂಡು ಪುಣೆಗೆ ಹೋದನು[೧೦]. ಬಾಳಾಜೀ ಬಾಜೀರಾವ ಪೇಶವೆ ಮತ್ತು ಬಾಬೂಜೀ ನಾಯಕ ಇವರ ನಡುವೆ ವೈಮನಸ್ಸಿತ್ತು. ಆದ್ದರಿಂದ ಪೇಶವೆಯ ಕಡೆಯಿಂದ ಈ ಬಗ್ಗೆ ಯಾವ ಪ್ರತೀಕಾರವೂ ಬರಲಿಲ್ಲ. ಆದರೆ ಯಾವಾಗ್ಗೆ ಅಬ್ದುಲ್‌ಮಜೀದಖಾನ ನವಾಬನು ಪೇಶವೆಯ ಪ್ರತಿನಿಧಿಗೆ ಚೌಥಾಯಿ ಮತ್ತು ಕಾಣಿಕೆಗಳನ್ನು ಕೊಡಲೊಲ್ಲನೆಂದು ತಿಳಿಯಿತೋ ಆವಾಗ್ಗೆ ಪೇಶವೆಯು ನವಾಬನ ಮೇಲೆ ದಾಳಿ ಮಾಡಿದನು. ಪೇಶವೆಯ ಸೈನ್ಯ ಸಾಮರ್ಥ್ಯವು ಹೆಚ್ಚು ಇದ್ದದ್ದರಿಂದ ಅವನ ಸೈನ್ಯವನ್ನು ಎದುರಿಸಲಿಕ್ಕಾಗದೇ ನವಾಬನು ಅವನ ಜೊತೆಗೆ ೧೭೪೭ರಲ್ಲಿ ಏಪ್ರಿಲ್ ೭ ರಂದು ಒಪ್ಪಂದವನ್ನು ಮಾಡಿಕೊಂಡನು.

ಈ ಒಪ್ಪಂದದ ಪ್ರಕಾರ ನವಾಬ ಅಬ್ದುಲ್ ಮಜೀದಖಾನನು ಪೇಶವೆಗೆ ೨ ತಾಲೂಕುಗಳು ೨೨ ಪರಗಣೆಗಳು, ೩ ಹಿಸ್ಸಾರುಗಳು ಅಲ್ಲದೆ ಮಹತ್ವದ ಕೋಟೆಗಳು, ೭ ಕಸಬೆಗಳು ಮತ್ತು ೨ ಹಳ್ಳಿಗಳು ಹೀಗೆ ಒಟ್ಟು ೩೬ ಮಹಾಲುಗಳನ್ನು ಬಿಟ್ಟುಕೊಟ್ಟನು. ಬೆಟಗೇರಿ ಮತ್ತು ಕೊಣ್ಣೂರು ಇವು ತಾಲೂಕುಗಳಿದ್ದವು. ಪರಗಣೆಗಳಲ್ಲಿ ಬಾಗಲಕೋಟ-ಬೀಳಗಿ, ಬೆಳಗಾವಿ, ಲಕ್ಷ್ಮೇಶ್ವರ, ರಾಯರ ಹುಬ್ಬಳ್ಳಿ, ನವಲಗುಂದ, ಗದಗ, ಗೋಕಾಕ ಮತ್ತು ಸಂಪಗಾವ ಕಿತ್ತೂರ ಇವು ಅಡಕವಾಗಿದ್ದವು. ಧಾರವಾಡ, ಹರಿಹರ ಮತ್ತು ಹಲ್ಯಾಳ ಇವು ಹಿಸ್ಸಾರುಗಳಾಗಿದ್ದವು. ನವಾಬನು ಬಂಕಾಪುರ ಸರಕಾರವನ್ನೂ ಹಾಗೂ ೮ ಪರಗಣೆಗಳು, ೧೦ ಸಂಮತ್ತುಗಳು, ೨ ಪೇಟೆಗಳು, ೧ ದುರ್ಗಯುಕ್ತ ಗ್ರಾಮ ಮತ್ತು ಇನ್ನೂ ಒಂದು ಸ್ಥಳ ಹೀಗೆ ೨೨ ಮಹಾಲುಗಳನ್ನೂ ತನ್ನ ಕಡೆಗೆ ಇಟ್ಟುಕೊಂಡನು. ಪರಗಣೆಗಳಲ್ಲಿ ಕುಂದುಗೋಳ, ಕಾರಡಗಿ-ಕಮತರಾಣ, ಮಿಶ್ರೀಕೋಟೆ, ರಾಣಿಬೆನ್ನೂರ ಮತ್ತು ಹಾನಗಲ ಇವು ಅಡಕವಾಗಿದ್ದವು. ಸಂಮತ್ತುಗಳಲ್ಲಿ ಕಲಘಟಗಿ, ತಡಸ, ಚಿಕ್ಕೆರೂರ, ಹಿರೇಕೆರೂರ ಮತ್ತು ಕಾಗಿನೆಲಿ ಇವು ಒಳಗೊಂಡಿದ್ದವು. ಕಸಬೆಹಾವೇರಿ ಮತ್ತು ಹಾವಸಭಾವಿ ಇವು ಪೇಟೆಗಳಿದ್ದವು. ಐರಣಿಯು ದುರ್ಗಯುಕ್ತ ಗ್ರಾಮವೂ ಕುಪ್ಪೆಲೂರ ಉಳಿದ ಒಂದು ಸ್ಥಳವೂ ಆಗಿದ್ದವು.[೧೧] ಪರಿಸ್ಥಿತಿಯ ಒತ್ತಡದ ಮೂಲಕ ಈ ಒಪ್ಪಂದವನ್ನು ಮಾಡಿಕೊಂಡರೂ ನವಾಬನು ಈ ಮಹಾಲುಗಳನ್ನು ಬಿಟ್ಟುಕೊಡಲು ಸಿದ್ಧನಿದ್ದಿಲ್ಲ. ಅಂತೆಯೇ ಈ ಒಪ್ಪಂದವಾದ ಕೆಲವೇ ದಿನಗಳ ಮೇಲೆ ನವಾಬನು ಸಾಧ್ಯವಾದಷ್ಟು ಮಹಾಲುಗಳನ್ನು ತಿರುಗಿ ತೆಗೆದುಕೊಳ್ಳುತ್ತಿದನು. ಬಹುಶಃ ಕೆಲವು ಮಹಾಲುಗಳ ಒಪ್ಪಂದವಾಗಿದ್ದರೂ ಪೇಶವೆಗೆ ಕೊಡಲೇ ಇಲ್ಲ. ನವಾಬನು ತನ್ನ ಸ್ಥಳದಲ್ಲಿ ಬಲಶಾಲಿಯಾಗಿದ್ದರಿಂದಲೂ ಪೇಶವೆಗೆ ಅವನ ಕಡೆಗೆ ಲಕ್ಷ್ಯ ಕೊಡಲಿಕ್ಕೆ ಸಮಯವಿಲ್ಲದೇ ಇದ್ದದ್ದರಿಂದಲೂ ನವಾಬನು ೨೧ ಮಹಾಲುಗಳನ್ನು ಮತ್ತೆ ತನ್ನ ವಶಮಾಡಿಕೊಂಡು ಸ್ವತಂತ್ರನಾಗಿಯೇ ಆಳಹತ್ತಿದನು. ಇನ್ನೂ ಅಷ್ಟು ಮಹಾಲುಗಳನ್ನು ವಶಪಡಿಸಿಕೊಳ್ಳುವ ಮುಂಚೆಯೇ ೧೭೫೪ ರಲ್ಲಿ ನವಾಬ ಅಬ್ದುಲ್ ಮಜೀದಖಾನನು ಮರಣ ಹೊಂದಿದನು.

ನವಾಬ ಅಬ್ದುಲ್ ಮಜೀದಖಾನನ ನಂತರ ಅವನ ಮಗ ಅಬ್ದುಲ್ ಹಕೀಮಖಾನನು ನವಾಬನಾದನು - ಇವನೇನೂ ತಂದೆಯಂತೆ ಶೂರನಿದ್ದಿದ್ದಿಲ್ಲ. ಆದರೂ ಸವಣೂರ ರಾಜ್ಯವನ್ನು ಸಂರಕ್ಷಿಸುವ ಕಾರ್ಯದಲ್ಲಿ ನಿರತನಾಗಿದ್ದನು. ಇಷ್ಟರಲ್ಲಿ ಬಾಳಾಜೀ ಬಾಜೀರಾಯನು ಈ ಸಂಸ್ಥಾನದ ಮೇಲೆ ತನ್ನ ಪ್ರಭುತ್ವವನ್ನು ಪ್ರಸ್ಥಾಪಿಸುವ ಯೋಜನೆಯನ್ನು ಮಾಡತೊಡಗಿದನು. ಇದಕ್ಕಾಗಿ ಒಂದು ನೆವವೂ ಸಿಕ್ಕಿತು. ಪೇಶವೆಯ ತೋಫುಖಾನೆಯಿಂದ ಮುಜಫರಖಾನ ಗಾರ್ದಿಯು ಅಲ್ಲಿಯ ಕೆಲಸಬಿಟ್ಟು ಹೊರಬಿದ್ದನು. ಬೇರೆ ಬೇರೆ ಕಡೆ ಹೋಗಿ ಕೊನೆಗೆ ನವಾಬ ಅಬ್ದುಲ್ ಹಕೀಮ ಖಾನನ ಆಶ್ರಯ ತೆಗೆದುಕೊಂಡನು. ಪೇಶವೆಯ ಮುಜಫರಖಾನ ಗಾರ್ದಿಯನ್ನು ಬಿಟ್ಟುಕೊಡಲು ನವಾಬನಿಗೆ ಹೇಳಿದರೂ ಅವನು ಹಾಗೆ ಮಾಡಲಿಲ್ಲ ಇದೇ ನೆವದಿಂದ ಯುದ್ಧ (೫ನೇ ದಿನಾಂಕ, ಮೇ ತಿಂಗಳು) ಹೂಡಿ ನವಾಬನನ್ನು ಸೋಲಿಸಿದನು ೧೭೫೬ರಲ್ಲಿ ಮತ್ತೆ ಒಪ್ಪಂದವಾಯಿತು. ಅದರ ಪ್ರಕಾರ ನವಾಬನು ಪೇಶವೆಗೆ ಈ ಸಲ ೫೭ ಮಹಾಲುಗಳನ್ನು ಬಿಟ್ಟುಕೊಟ್ಟನು. ಅವುಗಳಲ್ಲಿ ೯ ತಾಲೂಕುಗಳೂ ೧೪ ಪರಗಣೆಗಳೂ ೨ ಸಂಮತ್ತುಗಳೂ ೧ ಪೇಟೆಯೂ ೭ ಕಸಬೆಗಳೂ ೪ ಕೋಟೆಗಳೂ ೨ ಸರದೇಶಗತಿಗಳೂ ಹಾಗೂ ೧೮ ಗ್ರಾಮಗಳೂ ಅಡಕವಾಗಿದ್ದವು. ನವಾಬನು ೩೭ ಮಹಾಲುಗಳನ್ನು ತನ್ನ ಕಡೆಗೆ ಇಟ್ಟುಕೊಂಡನು. ಅವುಗಳಲ್ಲಿ ೬ ಪರಗಣೆಗಳೂ ೭ ಸಂಮತ್ತುಗಳೂ ೨ ಪೇಟೆಗಳೂ ೨ ಕಸಬೆಗಳೂ ೨ ಕೋಟೆಗಳೂ ೧ ಠಾಣೆಯೂ ಹಾಗೂ ೧೭ ಗ್ರಾಮಗಳೂ ಒಳಗೊಂಡಿದ್ದವು[೧೨]. ಈ ಗ್ರಾಮಗಳಲ್ಲಿ ಸ್ವಾದಿಯೂ ಒಂದಿತ್ತು.

೧೭೫೬ರ ಒಪ್ಪಂದದ ನಂತರ ಹಕೀಮಖಾನ ನವಾಬ

ಮತ್ತು ಮರಾಠರ ನಡುವಿನ ಸ್ನೇಹ ಸಂಬಂಧವು ಬೆಳೆಯುತ್ತಲೇ ಹೋಯಿತು. ನವಾಬನ ಸೈನ್ಯಶಕ್ತಿಯು ಕಡಿಮೆಯಾಯಿತು. ಏನಾದರೂ ಸಹಾಯ ಬೇಕಾದರೆ ಮರಾಠರ ಕಡೆಯಿಂದ ತೆಗೆದುಕೊಳ್ಳುತ್ತಿದ್ದನು.

೧೭೬೧ರಲ್ಲಿ ೩ನೆಯ ಪಾನಿಪತ್ ಯುದ್ಧದಲ್ಲಿ ಮರಾಠರ ಪರಾಭವವಾದ ನಂತರ ದಕ್ಷಿಣದಲ್ಲಿ ಹೈದರಅಲಿಯು ಹೆಚ್ಚು ಬಲಶಾಲಿಯೂ ಹೆಚ್ಚು ನಿರ್ಭಯನೂ ಆದನು. ಅವನ ಮಹತ್ವಾಕಾಂಕ್ಷೆಯೂ ಬೆಳೆಯತೊಡಗಿತು. ಅವನು ಹೊಸಕೋಟೆ, ಸಿರಾ, ಚಿಕ್ಕಬಳ್ಳಾಪುರ, ರಾಯದುರ್ಗ, ಹರಪನಹಳ್ಳಿ ಹೀಗೆ ಒಂದೊಂದಾಗಿ ಸಣ್ಣಸಂಸ್ಥಾನಗಳನ್ನು ಕೈವಶಪಡಿಸುತ್ತ ಕೊನೆಗೆ ಬಿದನೂರು ರಾಜ್ಯವನ್ನೂ ಗಿಳಂಕೃತ ಮಾಡಿದನು. ೧೭೬೩ರಲ್ಲಿ ಹೈದರನು ಸವಣೂರಿನ ನವಾಬನಾದ ಅಬ್ದುಲ್ ಹಕೀಮಖಾನನನ್ನು ಸೋಲಿಸಿ ಅವನ ಕಡೆಯಿಂದ ಕಪ್ಪಕಾಣಿಕೆಯನ್ನು ತೆಗೆದುಕೊಂಡನು[೧೩]. ಫೆಬ್ರುವರಿ ೧೭೬೪ರಲ್ಲಿ ೧ನೆಯ ಮಾಧವರಾವಪೇಶವೆಯು ಹೈದರಅಲಿಯನ್ನು ಸೋಲಿಸಿ ಪುನಃ ಅಲ್ಲಿಯ ಪ್ರದೇಶಗಳನ್ನು ತಾನು ಕೈವಶಮಾಡಿಕೊಳ್ಳುವ ಉದ್ದೇಶದಿಂದ ದಂಡಯಾತ್ರೆಯನ್ನು ಕೈಕೊಂಡನು. ಅವನದು ದೊಡ್ಡ ಸೈನ್ಯವಿತ್ತು [೧೪]. ಈ ಸುದ್ದಿಯನ್ನು ಕೇಳಿ ಹೈದರನು ರಟ್ಟೆಹಳ್ಳಿಯ ತನಕ ಬಂದು ಅಲ್ಲಿಯೇ ಸಮೀಪದಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಗಿಡಗಳ ಮರೆಯಲ್ಲಿ ಕಾದು ಕುಳಿತನು[೧೫]. ಇತ್ತ ಮಾಧವರಾಯನು ಪುಣೆಯಿಂದ ಬರುವಾಗ ದಾರಿಯಲ್ಲಿ ಮುನವಳ್ಳಿಯನ್ನೂ ಹುಬ್ಬಳ್ಳಿಯನ್ನೂ ಹಸ್ತಗತ ಮಾಡಿಕೊಂಡು ಕೊನೆಗೆ ಹೈದರ ಆಲಿಯ ನಿಯಂತ್ರಣದಿಂದ ಸವಣೂರ ನವಾಬನ ಬಿಡುಗಡೆ ಮಾಡಿದನು.[೧೬] ಆಮೇಲೆ ಮೇ ೧೭೬೪ರಲ್ಲಿ ರಟ್ಟೆಹಳ್ಳಿಯುದ್ಧದಲ್ಲಿ ಹೈದರನನ್ನು ಸೋಲಿಸಿದನು.[೧೭] ಜೂನದಲ್ಲಿ ಹೈದರನು ಮತ್ತೆ ಸವಣೂರನ್ನು ಕೊಳ್ಳೆ ಹೊಡೆಯಲು ಲಾಲಖಾನ ಎಂಬ ಸರದಾರನನ್ನು ಕಳಿಸಿದನು.[೧೮] ಆದರೆ ಪೇಶವೆಯು ಸವಣೂರಿನ ಸಂರಕ್ಷಣದ ವ್ಯವಸ್ಥೆಯನ್ನು ಇದಾಗಲೇಮಾಡಿ ಇಟ್ಟದ್ದರಿಂದ ಹೈದರನಿಗೆ ಮತ್ತೆ ಸವಣೂರನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ. ಮುಂದೆ ಡಿಸೆಂಬರ ೧೭೬೪ರಲ್ಲಿ ಜಡೆ ಆನವಟ್ಟಿಯಲ್ಲಿ ಹೈದರನ ಸಂಗಡ ಕಾಳಗವಾಗಿ ಅದರಲ್ಲಿ ಹೈದರನು ಮತ್ತೆ ಸೋತನು.[೧೯] ಆಮೇಲೆ ಮಾರ್ಚ ೧೭೬೫ರಲ್ಲಿ ಒಪ್ಪಂದವಾಗಿ ಹೈದರನು ಸವಣೂರ ನವಾಬನಿಗೆ ತೊಂದರೆ ಕೊಡುವದಿಲ್ಲವೆಂದು ಒಪ್ಪಿಕೊಂಡನು.[೨೦] ಈ ಒಪ್ಪಂದದಲ್ಲಿ ಇತರ ವಿಷಯಗಳು ಇದ್ದರೂ ಅವು ಸವಣೂರಿಗೆ ಸಂಬಂಧ ಪಟ್ಟಿದ್ದಿಲ್ಲ.

ಹೈದರನ ನಂತರ ಟೀಪೂವಿನ ಜೊತೆಗೂ ನವಾಬ ಅಬ್ದುಲ್ ಹಕೀಮಖಾನನ ಸಂಬಂಧವು ನೆಟ್ಟಗಿದ್ದಿಲ್ಲ. ನವಾಬನು ಅವರಿಬ್ಬರಿಗೂ ಹೆದರುತ್ತಿದ್ದನು. ೧೭೮೬ರಲ್ಲಿ ಟೀಪೂ ಸವಣೂರಿನ ಮೇಲೆ ದಾಳಿಮಾಡಿದನು. ನವಾಬನು ಮರಾಠರಿಂದಲೂ ಹೈದರಾಬಾದ ನಿಜಾಮನಿಂದಲೂ ಸಹಾಯ ತೆಗೆದುಕೊಂಡನು.[೨೧] ಪುಣೆಯಿಂದ ದೊಡ್ಡಸೈನ್ಯದೊಡನೆ ಹರಿಪಂತ ಫಡಕೆ ಮತ್ತು ಇತರ ಸರದಾರರು ಬಂದರು. ಇಷ್ಟರಲ್ಲಿಯೇ ಟೀಪೂ ಸವಣೂರನ್ನು ವಶಪಡಿಸಿಕೊಂಡು ಅದನ್ನು ಕೊಳ್ಳೆಹೊಡೆದು ಅಲ್ಲಿಯ ಸಂಪತ್ತಿಯನ್ನು ಅಪಹರಿಸಿದನು.[೨೨] ಮುಂದೆ ಮರಾಠರ ಮತ್ತು ಬ್ರಿಟಿಷರ ನಡುವಿನ ಮೈತ್ರಿಯ ಸಂಬಂಧದಿಂದ ಟೀಪೂವಿನ ಮೇಲೆ ರಾಜಕೀಯ ಒತ್ತಡ ಬಂದು ೧೭೮೭ರಲ್ಲಿ ಗಜೇಂದ್ರಗಡದ ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ಟೀಪೂ ಮರಾಠರಿಗೆ ಬಾದಾಮಿ, ನರಗುಂದ ಮತ್ತು ಕಿತ್ತೂರನ್ನೂ ನಿಜಾಮ ಅಲಿಗೆ ಆದವಾನಿಯನ್ನೂ ಮತ್ತು ನವಾಬ ಹಕೀಮಖಾನನಿಗೆ ಸವಣೂರನ್ನೂ ತಿರುಗಿಕೊಟ್ಟನು. ಆದರೆ ಈಗ ಸವಣೂರ ಸಂಸ್ಥಾನವು ಹಕೀಮಖಾನನದಿದ್ದರೂ ಅದು ಮರಾಠೆಯರ ಅಂಕಿತದಲ್ಲಿ ಉಳಿಯಿತು. ಕಾಲಕ್ರಮೇಣ ಅಳಿದುಳಿದ ಸವಣೂರನ್ನೂ ಮರಾಠೆಯರು ತಮ್ಮ ಕೈಯಲ್ಲಿ ತೆಗೆದುಕೊಂಡರು.

ನವಾಬ ಅಬ್ದುಲ್ ಹಕೀಮಖಾನನಿಗೆ ಪ್ರತಿ ತಿಂಗಳು ೪೦೦೦ ರೂಪಾಯಿಗಳ ನಿವೃತ್ತಿವೇತನವನ್ನು ಪೇಶವೆ ಸರಕಾರವು ಕೊಡಲಾರಂಭಿಸಿತು.[೨೩] ಈ ನವಾಬನು ಎಷ್ಟೋ ವರುಷ ಪುಣೆಯಲ್ಲಿಯೇ ಇದ್ದನು. ೧೭೯೪ರಲ್ಲಿ ಇವನ ಮರಣಾನಂತರ ಇವನ ವಂಶಜರಿಗೆ ವಾರ್ಷಿಕ ೪೮,೦೦೦/- ರೂಪಾಯಿಗಳ ನಿವೃತ್ತಿ ವೇತನದ ಬದಲಾಗಿ ೨೫ ಹಳ್ಳಿಗಳನ್ನು ಪೇಶವೆ ಸರ್ಕಾರವು ಬಿಟ್ಟುಕೊಟ್ಟಿತು. *

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಪುಣೆ ಅಭಿಲೇಖಾಗಾರ, ಕರ್ನಾಟಕ ಜಮಾವ : ೨೭೦ : ೧೭೦
೨. ದಿಲೇರಜಂಗಿ, ಪು. ೪
೩. **Selections from the Peshwa Daftar**
೪. ಶಿವಚರಿತ್ರ ಸಾಹಿತ್ಯ, III, ೪೯೭
೫. ಐತಿಹಾಸಿಕ ಪತ್ರೇ ಯಾದೀ, ಪು. ೪೩; ಕರವೀರ ಛತ್ರಪತಿ ಘುರಾಣ್ಯಾಚ್ಯಾ ಇತಿಹಾಸಾಚೀ ಸಾಧನೇ, I, ಪು. ೩೫
೬. SPD, Vol. XXV, Letter No. 25

೭. ಅದೇ, ಪತ್ರ ನಂ. ೨೯

೮. **SPD**, XXVIII, 37

೯. ದಿಲೇರಜಂಗೀ, ಪು. ೧೫-೧೬

೧೦. ಅದೇ, ಪು. ೧೬-೧೭

೧೧. ದಿಲೇರಜಂಗೀ, ಪು. ೧೮-೧೯; ಪು.ವಿ. ಮಾವಜೀ ಮತ್ತು ದ.ಬ. ಪಾರಸನಿಸ (ಸಂ), **ತಹ ವ ಕರಾರಮದಾರ** (ಮುಂಬಯಿ, ೧೯೧೪), ಪು. ೮೬-೮೭

೧೨. ದಿಲೇರಜಂಗೀ, ಪು. ೨೬-೩೧; **ತಹ ವ ಕರಾರಮದಾರ**, ಪು. ೮೮-೯೩

೧೩. ವಾಸುದೇವಶಾಸ್ತ್ರೀ ಖರೆ (ಸಂ), ಐತಿಹಾಸಿಕ ಲೇಖಸಂಗ್ರಹ, ೨ ನೆಯ ಖಂಡ, ಪತ್ರಕ್ರಮಾಂಕ ೩೧೬

೧೪. ಪಿಸೋಟೊ (**Memoirs of Hyder Ally**, by Peixoto), ಪು. ೧೨೬

೧೫ Wilks, **Historical Sketches of the South of India in an attempt to trace the History of Mysore,** I, P. 462

೧೬. ಐ.ಲೇ.ಸಂ. II, ೪೨೦

೧೭. **SPD**, XXXVII, 32

೧೮. ಐ.ಲೇ.ಸಂ., II, ೪೫೪

೧೯. ಅದೇ, ೫೦೯-೧೧

೨೦. **SPD**, XXXVII, 60, 61, 63

೨೧. ದಿಲೇರಜಂಗೀ, ಪು. ೪೬

೨೨. ದಿಲೇರಜಂಗೀ, ಪು. ೪೬-೪೭

೨೩. ಅದೇ, ಪು. ೪೯

ಡಾ॥ ಎಂ. ವಾಯ್. ಸಾವಂತ*

ಕಿತ್ತೂರು - ಮರಾಠಾ ಸಂಬಂಧ

ವಿಜಯನಗರ ಸಾಮ್ರಾಜ್ಯವು ಪತನವಾದ ನಂತರ ಕರ್ನಾಟಕದಲ್ಲಿ ಹಲವಾರು ಸಣ್ಣಪುಟ್ಟ ಸಂಸ್ಥಾನಗಳು ತಲೆ ಎತ್ತಿದುವು. ಅವುಗಳಲ್ಲಿ ಕಿತ್ತೂರ ಸಂಸ್ಥಾನವೂ[೧] ಒಂದು. ಕಿತ್ತೂರು ಇಂದು ಧಾರವಾಡ ಮತ್ತು ಬೆಳಗಾವಿ ನಡುವೆ ಹೆದ್ದಾರಿಯಲ್ಲಿ ಇರುವ ಒಂದು ದೊಡ್ಡ ಗ್ರಾಮ. ಹಿಂದೊಮ್ಮೆ ರಾಜಧಾನಿಯಾಗಿ ಮೆರೆದ ಪ್ರದೇಶ. ದೇಸಾಯಿನಾಯಕರ ಆಳಿಕೆಯಲ್ಲಿ ಬ್ರಿಟಿಷರ ವಿರುದ್ಧ ಗರ್ಜಿಸಿದ ನಾಡು. ಈಗ ಬೆಳೆದು ತಾಲೂಕು[೨] ಸ್ಥಾನವನ್ನು ಪಡೆಯಲು ಕಾಯುತ್ತಿದೆ.

ಕಿತ್ತೂರು ಕೇವಲ ಸುಮಾರು ೧೬೫ ವರ್ಷಗಳಷ್ಟು ಅಲ್ಪಕಾಲವೇ ಅಸ್ತಿತ್ವದಲ್ಲಿದ್ದರೂ ಅಲ್ಲಿನ ವೀರರ ಧೈರ್ಯ ಸ್ಥೈರ್ಯಗಳು ಇತಿಹಾಸ ಪ್ರಸಿದ್ಧವಾಗಿವೆ. ಬ್ರಿಟಿಷ ವಿರುದ್ಧ ಹೋರಾಡಿದ ಹೆಸರಾಂತ ರಾಣಿ ಚೆನ್ನಮ್ಮ - ಕಿತ್ತೂರ ಮನೆತನ ಈ ನಾಡಿಗಿತ್ತ ಅಪೂರ್ವ ಸ್ತ್ರೀರತ್ನ. ಆಕೆಯ ಸಾಹಸಮಯ ಜೀವನ ಮರೆಯಲಾಗದ ಸಂಗತಿ.

ಬೆಳಗಾವಿಯ ಕೋಟೆಯ ನಿರ್ಮಾಣ ಸಮಯದಲ್ಲಿ ಸಹಾಯ ಮಾಡಿದ್ದಕ್ಕಾಗಿ ಕಿತ್ತೂರ ಪ್ರದೇಶವನ್ನು ಬಿಜಾಪುರದ ಸುಲ್ತಾನರಿಂದ ಉಂಬಳಿಯಾಗಿ ಪಡೆದ ಈ ಪ್ರದೇಶ ಸುಮಾರು ಹನ್ನೆರಡು[೩] ಅಧಿಪತಿಗಳಿಂದ ಆಳಲ್ಪಟ್ಟಿತು. ಸಂಪಗಾವಿ ಹಾಗೂ ಕಿತ್ತೂರಗಳಲ್ಲಿ ಕೋಟೆಯನ್ನು ಅರಮನೆಗಳನ್ನು ಪೇಟೆಗಳನ್ನು ಕಟ್ಟಿ ಆಳಿದರು.

ಕಿತ್ತೂರು ಆಯಕಟ್ಟಿನ ಸ್ಥಳ ಹಾಗೂ ಫಲವತ್ತಾದ ಪ್ರದೇಶವಾಗಿದ್ದರಿಂದ ಈ ನಾಡಿನ ಅಧಿಪತಿಗಳನ್ನು ಮಾಂಡಲಿಕರನ್ನಾಗಿ ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಸುತ್ತಮುತ್ತಲಿನ ರಾಜರು ಪ್ರಯತ್ನಿಸಿದರು. ಅವರಲ್ಲಿ ಮರಾಠರು (ಪುಣೆಯ ಪೇಶ್ವೆಯರು) ಪ್ರಮುಖರು.

೧೫೩೪ ರಲ್ಲಿ ಬೆಳಗಾವಿಯ ನವಾಬ ಅಸದಖಾನನ ಮಿತ್ರ ಯೂಸುಫ್‌ಖಾನನ ಜಹಗೀರಿಯಲ್ಲಿ ಕಿತ್ತೂರು ಸೇರಿತು. ಬಿಜಾಪುರದ ಸುಲ್ತಾನರ ಅವನತಿಯ ಅನಂತರ ಕಿತ್ತೂರು ಸವಣೂರಿನ ನವಾಬರ ಅಧೀನವಾಯಿತು. ಆದರೆ ೧೭೪೬ರಲ್ಲಿ ಸವಣೂರಿನ ನವಾಬ ಕಿತ್ತೂರನ್ನು ಮರಾಠರ ವಶಕ್ಕೆ ಕೊಡಬೇಕಾಯಿತು. ೧೭೭೮ರಲ್ಲಿ ಹೈದರ ಅಲಿ ಕಿತ್ತೂರು ದೇಸಾಯಿಯನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲಿ ಮಾಡಿದರೂ ಮುಂದಿನ ವರ್ಷದಲ್ಲಿ ಪರಶುರಾಮಭಾವು ಅದನ್ನು ವಶಪಡಿಸಿಕೊಂಡು ದೇಸಾಯಿಯನ್ನು ಸೆರೆಹಿಡಿದ. ಕಾಲಕ್ರಮದಲ್ಲಿ ಕಿತ್ತೂರು ಮರಾಠರ ವಶವಾಯಿತು. ಪರಶುರಾಮಭಾವು ಕಿತ್ತೂರಿನಲ್ಲಿ ಮಮ್ಲತ್‌ದಾನನನ್ನು ನೇಮಿಸಿದನು.[೪]

ಕಿತ್ತೂರಿನ ದೊರೆ ಮಲ್ಲಸರ್ಜ (೧೭೮೨-೧೮೧೬) ದಕ್ಷ ಯೋಧನಾದರೂ ಪರಿಸ್ಥಿತಿಗೆ ತಲೆಬಾಗಿ ಪೇಶ್ವೆಯರ ಕೈಗೊಂಬೆಯಾಗಬೇಕಾಯಿತು. ೧೮೦೨ರಲ್ಲಿ ಮಲ್ಲಸರ್ಜ ಪೇಶ್ವೆಗಳಿಗೆ ಕಪ್ಪಕಾಣಿಕೆ ಸಲ್ಲಿಸುತ್ತಿದ್ದರು. ಸ್ವತಂತ್ರನಾಗಲು ಬಯಸಿದ. ಆದರೆ ಸ್ವಲ್ಪ ಸಮಯದಲ್ಲಿಯೇ ಮಲ್ಲಸರ್ಜ ಮರಾಠರಿಂದ ಸೆರೆಯಾಗಿ ಪುಣೆಯಲ್ಲಿ ಬಂದಿಯಾದ. ೧೮೧೬ರಲ್ಲಿ ಬಂಧಮುಕ್ತನಾದ ಮಲ್ಲಸರ್ಜ ಕಿತ್ತೂರಿಗೆ ಹಿಂದಿರುಗುವ ಮಾರ್ಗದಲ್ಲಿ ಮೃತನಾದ.

೧೮೧೬ರ ಮನ್ರೋ ಒಪ್ಪಂದದ[೫] ಪ್ರಕಾರ ಶಿವಲಿಂಗ ರುದ್ರಸರ್ಜನ ಕಾಲದಲ್ಲಿ ಬೆಳಗಾವಿ ಕಿಲ್ಲೆ ತೆಗೆದುಕೊಳ್ಳಲಿಕ್ಕೆ ಕಿತ್ತೂರು ಸಹಾಯ ಮಾಡಿತು. ಆದ್ದರಿಂದ ಬ್ರಿಟಿಷರು ಸಾಂಗಲಿ ಪಟವರ್ಧನ ಮತ್ತು ಕಿತ್ತೂರ ಇವುಗಳನ್ನು ಜಮೇದಾರಿ ಸಂಸ್ಥಾನಿಕರು (Tributory Princes) ಎಂದು ಮನ್ನಣೆ ನೀಡಿದರು[೬]. ಮುಂದೆ ಕಿತ್ತೂರು ಸಂಸ್ಥಾನ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಸಂಸ್ಥಾನದ ಬೇರೆ ಬೇರೆ ಪ್ರದೇಶಗಳನ್ನು ತಾಲೂಕಾ ಸ್ಥಳಗಳನ್ನಾಗಿ ರಚಿಸಲಾಯಿತು. ೧೮೩೫ರ ನಂತರ ಕಿತ್ತೂರು ಬೈಲಹೊಂಗಲ ತಾಲೂಕಿನಲ್ಲಿ ಸೇರ್ಪಡೆ ಆಯಿತು.

ಮರಾಠರು ಕಿತ್ತೂರಿಗೆ ತಾಲೂಕಾ (ಪರಗಣೆ)[೭] ಸ್ಥಾನವನ್ನು ನೀಡಿ ಆಡಳಿತವನ್ನು ನಡೆಸಿದರು. ೧೭೯೩ ರ ತಾಳೇಬಂದದ[೮] ಪ್ರಕಾರ ಅಬ್ಬಾಜಿ ಬಾನುರಾವ ಇವರು ಕಿತ್ತೂರಿನ ಆಡಳಿತಾಧಿಕಾರಿಯಾಗಿ ನೇಮಿಸಲ್ಪಟ್ಟಿದ್ದರು. ಇದರಲ್ಲಿ ೧ ಕಸಬಾ

---

* ಲಕ್ಷ್ಮೀನಗರ ವಿದ್ಯಾಗಿರಿ, ಧಾರವಾಡ - ೫೮೦ ೦೦೪

(ಮು.ಖಾ. ಹುಬ್ಬಳ್ಳಿ) ಮತ್ತು ೧೪ ಕರ್ಯಾತಗಳು (ಸಣ್ಣ ಆಡಳಿತ ವಿಭಾಗಗಳು) ಇದ್ದವು. ಅವುಗಳೆಂದರೆ ಬೆಳವಡಿ, ಸಂಪಗಾವ, ಹಲಸಿಗೆ, ಕಾರಲಗಿ, ಕೆಬೋಳಿ, ನೇಸರಗಿ, ಗೋಳಿಹಳ್ಳಿ, ಆಮಗಾವೆ, ಮನೋಳಿ, ನಂದಗಡ, ಕಾದರವಳ್ಳಿ, ಪುಟಗಾವ, ಕಲ್ಲೊಳ್ಳಿ ಮತ್ತು ಬಾಗೇವಾಡಿ. ಈ ಕರ್ಯಾತುಗಳಲ್ಲಿ ೨೮೨೪ ಮೌಜೆಗಳು (ಹಳ್ಳಿಗಳು) ಇದ್ದವು. ಇವುಗಳನ್ನು ೨೮೫ ಮಹಾಲುಗಳನ್ನಾಗಿ ರಚಿಸಲಾಗಿತ್ತು (ಕಂದಾಯ ವಿಭಾಗಗಳು). ಇವುಗಳಲ್ಲಿ ೧೧ ಗ್ರಾಮಗಳು ಇನಾಮ ಗ್ರಾಮಗಳಿದ್ದವು. ಅವುಗಳನ್ನು ಈ ಕೆಳಗಿನ ಇನಾಮದಾರರಿಗೆ ನೀಡಲಾಗಿತ್ತು. ಚಿಂತಾಮಣಿರಾವ ಮಿರಜಕರ, ದೌಲತರಾವ ಘೋರ್ಪಡೆ ಕಿಲ್ಲಾ ಹನಮಂತಗಡ, ಶ್ರೀಪತಗಾವ ಸರದೇಶಪಾಂಡೆ ಭೂಪತರಾವ ದೇಸಾಯಿ, ಸಾಗೋ ದೇಶಪಾಂಡೆ, ರುದ್ರಪ್ಪ ದೇಸಾಯಿ, ರುದ್ರೋ ವಿರುಪಾಕ್ಷ ಕುಲಕರ್ಣಿ ಮತ್ತು ಗುರಪ್ಪಾ ದೇಸಾಯಿ.

ಇದರ ಹೊರತಾಗಿ ೨೨ ಸರಂಜಾಮಿ ಗ್ರಾಮಗಳು ' ರಘುನಾಥರಾವ ಕುರುಂದವಾಡಕರ, ೨ ಶಮಾವಿಸ ಗ್ರಾಮಗಳು ಸಿದ್ಧೇಶ್ವರರಾವ ಬಿನಿವಾಲೆ, ೧೧ ದುಮಾಲೆ ಗ್ರಾಮಗಳು ಮಲ್ಲಪ್ಪ ವಿರುಪಾಕ್ಷಗೌಡಾ ಸರದೇಸಾಯಿ, ೧ ಭಿಮಾಜಿ ಬಾಬುರಾವ ಮತ್ತು ೪೪ ಗ್ರಾಮಗಳು ಭಿಷ್ಮಪ್ಪಾ ದೇಸಾಯಿ ಕಲೋರೆಕರ ಇವರಿಗೆ ನೀಡಲಾಗಿತ್ತು.

ಹೀಗೆ ೨೮೫ ಮಹಾಲುಗಳಲ್ಲಿ ೯೧ ಗ್ರಾಮಗಳನ್ನು ಇನಾಮು ನೀಡಿ ಉಳಿದ ೧೯೪ ಗ್ರಾಮಗಳು ಮರಾಠರ ನೇರ ಆಳ್ವಿಕೆಗೆ ಒಳಪಟ್ಟಿದ್ದವು. ಇವುಗಳಿಂದ ರೂ. ೪೧,೦೭೮೬=೦೦ ಕಂದಾಯ ವಸೂಲ ಆಗುತ್ತಿತ್ತು. ಇವುಗಳನ್ನು ಏಳು ಪ್ರಕಾರದ ಪಟ್ಟಿಗಳಲ್ಲಿ ವಸೂಲ ಮಾಡಲಾಗುತ್ತಿತ್ತು. ಅವುಗಳೆಂದರೆ ಜಮಾಬಂದಿ, ಪಾವಲಪಟ್ಟಿ, ಐನಾತ, ಜಾಜತಿಪಟ್ಟಿ, ಸಾಧನೂಕ ಮತ್ತು ಖರ್ಚುಪಟ್ಟಿ. ಇದರ ಹೊರತಾಗಿ ರೂ ೮೬೧೨-೮-೦ ಇನಾಮದಾರರಿಂದ ನಜರ ಪಡೆದದ್ದು ಹಾಗೂ ಇನ್ನುಳಿದ ಉತ್ಪನ್ನ ವತನದಾರರು, ಜುಡಿ ಇನಾಮದಾರರು ಹಾಗೂ ಕಮಾವಿಸದಾರರಿಂದ ವಸೂಲ ಮಾಡಲಾಗುತ್ತಿತ್ತು.

ಯಾವುದೇ ಪ್ರದೇಶವು ಪರಕೀಯರ ಆಳ್ವಿಕೆಗೆ ಒಳಪಟ್ಟಾಗ ಅಲ್ಲಿ ಆಡಳಿತಾತ್ಮಕ ಬದಲಾವಣೆ ಅಷ್ಟೇ ಅಲ್ಲ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಬದಲಾವಣೆಗಳು ಜರುಗುತ್ತವೆ. ಕಿತ್ತೂರ ಸಂಸ್ಥಾನದಲ್ಲಿ ಕೂಡ ಮರಾಠಾ ಸಂಸ್ಕೃತಿಯ ಪ್ರಭಾವ ಕಂಡು ಬಂದಿತು.

ಸಮಾಜವು ಜಾತಿ, ವರ್ಣಗಳಲ್ಲಿ ವಿಭಜಿತವಾಗಿತ್ತು. ಚತುರ್ವರ್ಣಗಳ ಜೊತೆಗೆ ಅನೇಕ ಉಪಜಾತಿಗಳು ಕಸಬಿಗನುಸಾರವಾಗಿ ರೂಢಿಯಲ್ಲಿ ಬಂದಿದ್ದವು. ಉದಾ. ವಾಣಿ, ಚಾಟಿ, ತೇಲಿ, ಕಾಸಾರ, ನೀಲಾರಿ, ಕೋಷ್ಟಿ, ಸೋನಾರ, ಜಾಲಗಾರ, ದರ್ಜಿ, ಬಾಗವಾನ ಇತ್ಯಾದಿ. ಬ್ರಾಹ್ಮಣರು, ಕ್ಷತ್ರಿಯರು ವಿಶೇಷ ಅಧಿಕಾರ ಹಾಗೂ ಸವಲತ್ತುಗಳನ್ನು ಹೊಂದಿದ್ದರು. ಸೈನ್ಯದಲ್ಲಿ ಎಲ್ಲ ವರ್ಗದ ಜನರೂ ಇದ್ದರು. ಬ್ರಾಹ್ಮಣರು ವಿದ್ಯಾರ್ಜನೆ, ಧಾರ್ಮಿಕ ವಿಧಿ-ಸಂಸ್ಕಾರಗಳನ್ನು ಆಚರಿಸುತ್ತಿದ್ದರು. ಇವರಿಗೆ ಸರ್ವ ಇನಾಮ, ಜುಡಿ ಇನಾಮ ಹಾಗೂ ಬಾಜೆ ಇನಾಮ ಎಂಬ ದಾನ-ದತ್ತಿಗಳಿದ್ದವು[೧೮]. ಮೇಜವಾನಿ, ದೇಹನಗಿ, ಪೋಟಗಿ, ನೇಮನೂತ ಇತ್ಯಾದಿ ವಿಶೇಷ ಸವಲತ್ತುಗಳನ್ನು ಹೊಂದಿದ್ದರು[೧೯]. ಬ್ರಾಹ್ಮಣರ ಅಗ್ರಹಾರ ಇತ್ತು. ಗುರುವಾರ ಪೇಟೆಯಲ್ಲಿ ಮರಾಠಾ ಬ್ರಾಹ್ಮಣ ಕುಟುಂಬಗಳು ಬಂದು ನೆಲೆಸಿದವು. ಉದಾ: ಜಿಲ್ಲೆದಾರ, ಇನಾಮದಾರ, ಬಾರಾನಿಸಿ. ಸಬನಿಸ, ಚಿಟ್ನಿಸ, ಕಂಚಿ ದೇಶಪಾಂಡೆ, ಕುಲಕರ್ಣಿ ಮುಂತಾದವರು.

ವೀರಶೈವರು (ಲಿಂಗಾಯಿತರು) ಬಹುಸಂಖ್ಯಾತರಾಗಿದ್ದರು. ಅವರು ತಮ್ಮ ಮಠಗಳಿಗೆ ನಡೆದುಕೊಳ್ಳುತ್ತಿದ್ದರು. ಕಿತ್ತೂರು ರಾಜ್ಯದಲ್ಲಿ ಸುಮಾರು ಸಾವಿರ ಮಠಗಳಿದ್ದುವೆಂದು ಹೇಳಲಾಗಿದೆ. ವೀರಶೈವರ ಪ್ರಧಾನ ಮಠ ''ಕಲ್‌ಮಠ'' ಕಿತ್ತೂರಿನಲ್ಲಿದ್ದ ಇದನ್ನು ''**ಸಾವಿರ ಸಂಸ್ಥಾನಮಠ**'' ಎಂದು ಕರೆಯಲಾಗುತ್ತಿತ್ತು. ವಿದ್ವತ್ತಿಗೆ ಹೆಸರಾದ ಕಲ್‌ಮಠಸ್ವಾಮಿಗಳು ಕಿತ್ತೂರು ಅರಸರಿಗೆ ಮಾರ್ಗದರ್ಶಕರಾಗಿದ್ದರು. ಸಾವಿರಮಠವು ಆಗಿನ ಕಾಲದಲ್ಲಿ ಸರ್ವೋಚ್ಚನ್ಯಾಯಾಲಯದಂತೆ ಕೆಲಸ ನಿರ್ವಹಿಸುತ್ತಿತ್ತು. ಮರಾಠರಿಗೆ ಗೋಸಾವಿಮಠ. ಶಾಕ್ತರಿಗಾಗಿ ಗೋರಖನಾಥ ಸಂಪ್ರದಾಯದ ಮಠಗಳಿದ್ದವು. ಮುಸಲ್ಮಾನರು ಮತ್ತು ಜೈನರು ಅಲ್ಪ ಸಂಖ್ಯೆಯಲ್ಲಿದ್ದರು. ಬೇರೆ ಬೇರೆ ಪ್ರದೇಶಗಳಿಂದ ಬಂದ ಮುಸಲ್ಮಾನರಿಗಾಗಿ ಬೇರೆ ಬೇರೆ ಮಸೀದಿಗಳಿದ್ದವು.

ಮರಾಠಾ ಆಡಳಿತದಿಂದ ಈ ಭಾಗದಲ್ಲಿ ಮರಾಠಿ ಭಾಷೆಯನ್ನು ಕನ್ನಡಿಗರ ಮೇಲೆ ಹೇರಲಾಯಿತು. ಮೋಡಿ ಲಿಪಿ ಕಲಿಯಬೇಕಾಯಿತು. ಲೆಕ್ಕಪತ್ರ-ವ್ಯವಹಾರವನ್ನು ಮೋಡಿಯಲ್ಲಿ ಬರೆಯುತ್ತಿದ್ದರು. ಮರಾಠಿ ಅಭಂಗಗಳು ಭಜನೆ-ಕೀರ್ತನೆಗಳು ಜನಪ್ರಿಯವಾದವು. ಜನರು ಉಪಯೋಗಿಸುವ ಆಯುಧಗಳು, ವೇಷಭೂಷಣಗಳು, ಊಟಉಪಚಾರ, ಹಬ್ಬಗಳು, ಶವ ಸಂಸ್ಕಾರಗಳು ಇತ್ಯಾದಿ ಪದ್ಧತಿಯಲ್ಲಿಯೂ ಅನುಕರಣೆ ಆಯಿತು. ಸನಾದಿ, ಕರಡಿ ಮಜಲು (ಮರಾಠಿಯಲ್ಲಿ ಚೌಘಡೆ) ರಣಹಲಗೆ, ಕಹಳೆಗಳು ಇವುಗಳ ಬಳಕೆ ಪ್ರಾರಂಭವಾಯಿತು. ಮರಾಠರ ಕಾಲದಲ್ಲಿ ಕಟ್ಟಲಾದ ಚೌಸಪ್ಪೆ ವಾಡೆಗಳು ಉತ್ತಮ ಕಾಷ್ಟಶಿಲ್ಪದ ಉದಾಹರಣೆಯಾಗಿದೆ. ಅಲ್ಲಲ್ಲಿ ದಂಡಿನದಾರಿಗಳನ್ನು ನಿರ್ಮಿಸಿದರು.

ಆದರೆ ಮರಾಠರ ಆಡಳಿತ ಚಟುವಟಿಕೆಗಳು ಬಹಳದಿವಸ ನಡೆಯಲಿಲ್ಲ. ದಬ್ಬಾಳಿಕೆ ಹಾಗೂ ಶೋಷಣೆಯಿಂದ ಕೂಡಿದ ಮರಾಠರ ಆಡಳಿತ ಅಪ್ರಿಯವಾಯಿತು.

*

* (ಈ ಲೇಖನ ರಚನೆಯಲ್ಲಿ ಸಹಾಯ ಮಾಡಿದ ಪ್ರೊ॥ ವ್ಹಿ.ಜಿ, ಮಾರಿಹಾಳರಿಗೆ ಲೇಖಕ ಕೃತಜ್ಞ).

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ವ್ಹಿ.ಜಿ. ಮಾರಿಹಾಳ : **ಕಿತ್ತೂರ ತಾಲುಕಾ ರಚನೆ.**

೨. '' : **ಮಹಾರಾಣಿ ಕಿತ್ತೂರ ಚೆನ್ನಮ್ಮನವರು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೮೬, ಪು. ೫

೩. ಅದೇ

೪ **Bombay Gazetteer** (Belgaum), PP. 390-91

೫ V.V. Khare (Ed) : **Historical Maratha Records,** Vol. XV. Page, 8054, ಭಾ. ಇ. ಸಂ. ಮಂಡಳ. ಪುಣೆ

೬ ಅದೇ

೭ ಜಿ.ಎಸ್. ಸರದೇಸಾಯಿ: **Poona Presidency Correspondence,** Govt of Bombay, 1958, Vol. XIII, PP. 339

೮. ಪೇಶ್ವೆ ದಪ್ತರ, **ಕರ್ನಾಟಕ** ಜಮಾವ, ರುಮಾಲ ನಂ. ೩೨೫ ಇನಾಮ ಕಮೀಶನ. ನಂ. ೧೨೩೪೬

೯. ಅದೇ

೧೦. ಅದೇ

೧೧. ಅದೇ

ಡಾ॥ ಡಿ.ಎಸ್. ಯೋಗೀಶ್ವರಪ್ಪ *

ಹಾಗಲವಾಡಿ ನಾಯಕರು: ಮಠಗಳ ಸ್ಥಾಪನೆ ಮತ್ತು ಪೋಷಣೆ

ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸನ್ಯಾಸಿಗಳು ವಾಸಿಸುವ ಕುಟೀರ. ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲವಾಗಿ ಕಾಲ ಉರುಳಿದಂತೆ ಇದು ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಚಾರ ಕೇಂದ್ರವಾಗಿ ಬೆಳೆದಿದೆ.[೧] ಬಸವೇಶ್ವರರ ವೀರಶೈವ ಧಾರ್ಮಿಕ ಕ್ರಾಂತಿ ರಾಜಕೀಯ ಆಂದೋಳನಕ್ಕೆ ಕಾರಣವಾಗಿ ಅನೇಕ ಶರಣರು ಕಲ್ಯಾಣವನ್ನು ತ್ಯಜಿಸಿ, ಕರ್ನಾಟಕದ ಅನೇಕ ಕಡೆ ನೆಲಸಿ ಅಲ್ಲಿ ಮಠಗಳನ್ನು ಸ್ಥಾಪಿಸಿದರು.[೨] ಇಂತಹ ಮಠಗಳಿಗೆ ಮಧ್ಯಯುಗದಲ್ಲಿಯೂ ರಾಜರುಗಳ, ಶ್ರೀಮಂತರುಗಳ ಆಶ್ರಯ ದೊರಕಿತು. ಉದಾಹರಣೆಗೆ ಕೆಳದಿಯ ನಾಯಕರು, ಹಾಗಲವಾಡಿ ನಾಯಕರು, ಉಮ್ಮತ್ತೂರು ಪಾಳೇಗಾರರು, ಬಿಜ್ಜಾವರ ಪಾಳೇಗಾರರು, ಕೊಡಗಿನ ಹಾಲೇರಿ ಅರಸು ಮನೆತನ, ಬೆಳವಡಿ, ಸ್ವಾದಿ, ಕಿತ್ತೂರು, ಬೀಳಗಿ ಇನ್ನೂ ಅನೇಕ ಚಿಕ್ಕ ಪುಟ್ಟ ಅರಸು ಮನೆತನಗಳು ಅನೇಕ ವೀರಶೈವ ಮಠಗಳನ್ನು ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಸ್ಥಾಪಿಸಿ, ಅವುಗಳನ್ನು ಪೋಷಿಸಿದರು. ಇವುಗಳಲ್ಲಿ ಹಾಗಲವಾಡಿ ಅರಸು ಮನೆತನವೂ ಪ್ರಮುಖವಾಗಿದೆ.

ಹಾಗಲವಾಡಿ ಪಾಳೆಯಪಟ್ಟಿನ ಕಾಲದ ಗ್ರಾಮಜೀವನದಲ್ಲಿ ಧರ್ಮ ಸಂಪ್ರದಾಯ, ರೂಢಿ, ಮತ್ತು ಕಟ್ಟಳೆಗಳು ಅತ್ಯಂತ ಪ್ರಭಾವಪೂರ್ಣ ಪಾತ್ರವನ್ನು ನಿರ್ವಹಿಸುತ್ತಿದ್ದವು. ಆ ದಿಸೆಯಲ್ಲಿ ಗ್ರಾಮಗಳಲ್ಲಿನ ಜನಜೀವನದ ಮೇಲೆ ಸ್ಪಷ್ಟ ಪ್ರಭಾವಗಳನ್ನು ಬೀರಿದ ಸಂಸ್ಥಾ ಪ್ರಾಕಾರಗಳೆಂದರೆ (೧) ದೇವಾಲಯಗಳು (೨) ಮಠಗಳು (೩) ಪುರೋಹಿತವರ್ಗ. ಹಾಗಲವಾಡಿ ಪಾಳೆಯಗಾರರು ಈ ಮೂರೂ ಸಂಸ್ಥೆಗಳನ್ನು ಪೋಷಿಸಿಕೊಂಡು ಬಂದರು. ಇವರು ಮಠಗಳ ಸ್ಥಾಪನೆ ಮತ್ತು ಪೋಷಣೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದ್ದುದನ್ನು ಅವರ ಕಾಲದ ಶಾಸನಗಳು ಪ್ರಸ್ತಾಪಿಸುತ್ತವೆ. ಮೂಲತಃ ಬೇಡರಾಗಿದ್ದ[೩] ಹಾಗಲವಾಡಿ ನಾಯಕರು ಆ ಮನೆತನದ ಎರಡನೇ ದೊರೆ ಬೈರಪ್ಪನಾಯಕನ ಕಾಲದಿಂದ ವೀರಶೈವ ಧರ್ಮಾವಲಂಬಿಗಳಾದರು[೪]. ಹೀಗೆ ಹಾಗಲವಾಡಿ ಅರಸುಮನೆತನಕ್ಕೆ ಬೈರಪ್ಪನಾಯಕ ವೀರಶೈವದ ಸೂರ್ಯನಾಗಿ ಉದಯಿಸಿ ತನ್ನ ಶಿವಭಕ್ತಿಪರ ವ್ಯಕ್ತಿತ್ವದ ಮೂಲಕ ಪಾಳೆಯಪಟ್ಟಿನ ತುಂಬೆಲ್ಲಾ ವೀರಶೈವದ ಬೆಳಕನ್ನು ಹರಡಿದ. ಮುದಿಯಯ್ಯನೆಂದೇ ಪ್ರಖ್ಯಾತಿಯಾಗಿದ್ದ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರರು ಈ ಅರಸು ಮನೆತನದ ಗುರುಗಳಾಗಿದ್ದರು. ಅಲ್ಲದೆ ಇವರ ಆಶೀರ್ವಾದದಿಂದ ಜನಿಸಿದ ತನ್ನ ಮಗನಿಗೆ ಬೈರಪ್ಪನಾಯಕನು ಮುದಿಯಪ್ಪನೆಂದು ಹೆಸರಿಟ್ಟಿದುದು ಸಿದ್ಧಲಿಂಗೇಶ್ವರರ ಮೇಲಿನ ಅವನ ಅಪಾರ ಭಕ್ತಿ ಮತ್ತು ಗೌರವವನ್ನು ಸೂಚಿಸುತ್ತದೆ. ಹೀಗೆ ವೀರಶೈವ ಧರ್ಮವನ್ನು ಅಪ್ಪಿಕೊಂಡ ಹಾಗಲವಾಡಿ ನಾಯಕರು ಆ ಧರ್ಮದ ಪ್ರಚಾರಕ್ಕಾಗಿ ಪಾಳೆಯಪಟ್ಟಿನಾದ್ಯಂತ ಅನೇಕ ಮಠ ಮಾನ್ಯಗಳನ್ನು ಸ್ಥಾಪಿಸಲು ಮುಂದಾದರು. ಈ ರೀತಿ ಸ್ಥಾಪಿಸಲ್ಪಟ್ಟ ಮಠಗಳು ಗ್ರಾಮಜೀವನದ ಸಂಘಟನೆಯಲ್ಲಿ ಪರೋಕ್ಷವಾಗಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸುತ್ತಿದ್ದವು.

ವಿಜಯನಗರದ ಅಧೀನಕ್ಕೆ ಒಳಪಟ್ಟ ಹಾಗಲವಾಡಿ ನಾಯಕರು ಆ ಸಾಮ್ರಾಜ್ಯದ ಅಮರನಾಯಕರಾಗಿ ೧೬-೧೭-೧೮ನೇ ಶತಮಾನಗಳಲ್ಲಿ ಆಡಳಿತವನ್ನು ನಡೆಸುತ್ತಿದ್ದರು. ಕ್ರಿ.ಶ. ೧೬೨೨ರಲ್ಲಿ ವಿಜಯನಗರದಲ್ಲಿ ಶ್ರೀ ವೀರರಾಮದೇವರಾಯನು ಆಳ್ವಿಕೆ ಮಾಡುತ್ತಿದ್ದನು. ಆ ಸಮಯದಲ್ಲಿ ಚಿಕ್ಕನಾಯಕನಹಳ್ಳಿ ಎಂಬ ಪಟ್ಟಣದಲ್ಲಿ ಮುದಿಯಪ್ಪನಾಯಕನು ಅವರಿಗೆ ಅಮರನಾಯಕನಾಗಿ ರಾಜ್ಯವಾಳುತ್ತಿದ್ದನು.[೫] ಎಡೆಯೂರ ಸಿದ್ಧಲಿಂಗೇಶ್ವರರ ಆಶೀರ್ವಾದದಿಂದ ಜನಿಸಿದ ಮುದಿಯಪ್ಪ ನಾಯಕನು ಸಹಜವಾಗಿಯೇ ವೀರಶೈವದಲ್ಲಿ ಹೆಚ್ಚಿನ ಒಲವು ತೋರಿ ತನ್ನ ಆಡಳಿತದ ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಮಠಗಳನ್ನು ಸ್ಥಾಪಿಸಿರುವುದನ್ನು ಅವನ ಶಾಸನಗಳು ಉಲ್ಲೇಖಿಸುತ್ತವೆ. ತಿಪಟೂರು ತಾಲ್ಲೂಕು ಹಟ್ನದ ಶಾಸನವೊಂದರ ಪ್ರಕಾರ ಹಾಗಲವಾಡಿಯ ಮೊದಲನೇ ಮುದಿಯಪ್ಪನಾಯಕನು

* ಮುಖ್ಯಸ್ಥರು, ಇತಿಹಾಸ ವಿಭಾಗ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು, ತುಮಕೂರು.

ಕ್ರಿ.ಶ. ೧೬೨೫ ರಲ್ಲಿ ಹಟ್ಟಿ ಎಂಬ ಗ್ರಾಮದಲ್ಲಿ ಬಸವರಾಜದೇವರು ಎಂಬ ಗುರುಗಳಿಗೆ ಹೊಸದಾಗಿ ಮಠವೊಂದನ್ನು ಕಟ್ಟಿಸಿಕೊಟ್ಟು, ಅದರ ನಿರ್ವಹಣೆಗೋಸ್ಕರ, ಆ ಊರಿನ ಕೆರೆಯ ಹಿಂದಿನ ಗದ್ದೆಯನ್ನು ದಾನಮಾಡಿದುದನ್ನು ಉಲ್ಲೇಖಿಸುತ್ತದೆ.[೬] ಈಗ ಹಟ್ಟಿದಲ್ಲಿರುವ ಮಠವು ಈಶ್ವರನ ಗುಡಿಯಾಗಿದ್ದು ಮುದಿಯಪ್ಪನಾಯಕನು ದಾನ ಮಾಡಿದ್ದ ಗದ್ದೆಯ ಉತ್ಪನ್ನದಿಂದಲೇ ಇಂದಿಗೂ ಅದರ ನಿರ್ವಹಣೆ ನಡೆಯುತ್ತಿರುವುದನ್ನು ಕಾಣಬಹುದು.

ಇವರ ಕಾಲದಲ್ಲಿ ಮಹಾಮಹತ್ತಿನ ಮಠ[೭] ಎಂಬ ಒಂದು ಮಠವರ್ಗವಿತ್ತು. ಇದು ವೀರಶೈವರ ಆಳ್ವಿಕೆಗೆ ಒಳಪಟ್ಟಿತ್ತು. ಮಹಾನ್ ಶಬ್ದವು ಗೌರವವನ್ನು ಸೂಚಿಸುತ್ತದೆ. ಮಹತ್ತುಗಳು ಗಾಢ ಸಂಬಂಧವನ್ನು ಕಲ್ಪಿಸಿಕೊಂಡಿದ್ದವು. ಮಠದ ಮುಖ್ಯಸ್ಥರಾಗಿ ನಿರೀಕ್ಷೆ ಮಾಡುವವರಿಗೆ "ಮಹಾಮಹತ್ತು" ಎಂದು ಕರೆಯುತ್ತಿದ್ದರು. ಅವರನ್ನು ಅರಸರು, ಪ್ರಜೆಗಳು ಮರ್ಯಾದೆ ಯಿಂದ ಕಾಣುತ್ತಿದ್ದರು. ಮಹತ್ತುಗಳು ನಾಯಕರಿಗೆ ಧಾರ್ಮಿಕ ವಿಷಯಗಳಲ್ಲಿ ಸರಿಯಾದ ಸಮಯೋಚಿತ ಸಲಹೆಯನ್ನು ನೀಡುತ್ತಿದ್ದರು. ಉದಾಹರಣೆಗೆ. ಚಿಕ್ಕನಾಯಕನಹಳ್ಳಿಯ ಬಳಿಯ ಜೋಗೀಹಳ್ಳಿಯಲ್ಲಿ ಮಹಾಮಹತ್ತಿನ ಮಠವಿತ್ತು. ಈ ಮಠವನ್ನು ಮುದಿಯಪ್ಪನಾಯಕನ ದಳವಾಯಿ ಆಗಿದ್ದ ಪರಮಪ್ಪನು ಕಟ್ಟಿಸಿದನು. ನಂದೀಶ್ವರ ಸ್ವಾಮಿಗಳು ಮಠದ ಮುಖ್ಯಸ್ಥರಾಗಿದ್ದರು. ದಳವಾಯಿ ಪರಮಪ್ಪನು ಆ ಮಠದ ಸಮೀಪದಲ್ಲೇ ಕೆರೆಯೂರನ್ನು ಕಟ್ಟಿಸಿ ತೋಟವನ್ನು ಮಾಡಿಸಿ ಮಠಕ್ಕೆ ದಾನ ಮಾಡಿದನು. ಅಲ್ಲದೆ ದಳವಾಯಿಯು ಈ ಮಠದಲ್ಲಿ ಸಮಸ್ತ ಪದಾರ್ಥವನ್ನು ಶಿವಾರ್ಪಣವ ಮಾಡುವಂಥಾ ಸತ್ಪುರುಷ ಮಾಹೇಶ್ವರರೇ ಇರಬೇಕು. ಅನಾರ್ಪಿತವ ಮಾಡಿ ಕೆಡಿಸುವಂಥಾ ಲಂಡ ಪುಂಡರು ಇದ್ದರೆ ವೀರ ಮಾಹೇಶ್ವರರ ವೊಡೆಯರ ಭಕ್ತರು ವಿಚಾರಿಸಿಕೊಂಡು ಅವರನ್ನು ಆ ಮಠದಿಂದ ಹೊರದೂಡಿ ಸತ್ಪುರುಷರನ್ನು ಇರಿಸಬೇಕು[೮] ಎಂದು ಆಜ್ಞೆಯೊಂದನ್ನು ಮಾಡಿದುದನ್ನು ಅವನ ಶಾಸನವು ತಿಳಿಸುತ್ತದೆ. ಪ್ರಾಯಶಃ ಮಠಗಳಲ್ಲಿ ಪುಂಡರು ಸೇರಿಕೊಂಡು ಅದರ ಪಾವಿತ್ರ್ಯಕ್ಕೆ ಧಕ್ಕೆ ತರುತ್ತಿದ್ದಿರಬಹುದು. ಆದ್ದರಿಂದಲೇ ದಳವಾಯಿಯು ಈ ರೀತಿಯ ಆಜ್ಞೆ ಮಾಡಿರಬಹುದು.

ಹಾಗಲವಾಡಿ ಪಾಳೆಯಗಾರರ ಕಾಲದಲ್ಲಿ ಅಧಿಕಾರಿ ವರ್ಗದವರು ಕಟ್ಟಿಸಿದ ಮಠಕ್ಕೆ ಅರಸು ಮನೆತನದವರು ದಾನ ಮಾಡುತ್ತಿದ್ದರು. ದಳವಾಯಿ ಶೀಲವಂತ ಪರಮಪ್ಪನು ಚಿಕ್ಕಜೋಗಿ ಹಳ್ಳಿಯಲ್ಲಿ ವಿರಕ್ತ ಮಠವೊಂದನ್ನು ಕಟ್ಟಿಸಿದನು. ಈ ಮಠಕ್ಕೆ ಹಾಗಲವಾಡಿ ಪಾಳೆಗಾರನಾಗಿದ್ದ ಮುದಿಯಪ್ಪನಾಯಕನು ಕ್ರಿ.ಶ.೧೬೨೩ರಲ್ಲಿ ಭೋಗಸಮುದ್ರ ಗ್ರಾಮವನ್ನು ದಾನ ಮಾಡಿದನು.[೯] ಈ ಮಠವು ಊರಿನ ಹೊರಭಾಗದಲ್ಲಿದ್ದು ವೀರಶೈವ ಧರ್ಮದ ತಾತ್ತ್ವಿಕ ಅಧ್ಯಯನಕ್ಕೆ ಹೆಚ್ಚಿನ ಗಮನವನ್ನು ನೀಡುತ್ತಿತ್ತು. ಈ ದಾನವನ್ನು ಮುದಿಯಪ್ಪನಾಯಕನ ಮಗನಾದ ಮೊದಲನೇ ಬೈರಪ್ಪನಾಯಕನು ನವೀಕರಿಸಿ ಈ ಮಠದಲ್ಲಿ ವೀರಮಾಹೇಶ್ವರರೇ ಇರಬೇಕು ಎಂದು ಅಪ್ಪಣೆ ಮಾಡಿದ ಉಲ್ಲೇಖ ಆ ಶಾಸನದಲ್ಲಿದೆ.[೧೦]

ಮಠಗಳಿಗೆ ಭೂದಾನವನ್ನು ನೀಡುವಾಗ ಹಾಗಲವಾಡಿ ಪಾಳೆಯಗಾರರು ಕೆಲವು ಕ್ರಮಗಳನ್ನು ಅನುಸರಿಸುತ್ತಿದ್ದುದು ಕಂಡು ಬರುತ್ತದೆ. ಮಠ ಇರುವ ಗ್ರಾಮದಲ್ಲೇ ಅನೇಕ ವೇಳೆ ಭೂದಾನವನ್ನು ನೀಡಿದರೂ ಕೂಡಾ, ಒಂದು ಗ್ರಾಮದ ಮಠಕ್ಕೆ ದೂರ ಇರುವ ಮತ್ತೊಂದು ಗ್ರಾಮದ ಭೂಮಿಯನ್ನು ನೀಡುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಮಠದ ಅಧಿಕಾರಿವರ್ಗದವರು ತಮ್ಮ ಪಾಲಿನ ಆದಾಯವನ್ನು ವಸೂಲಿ ಮಾಡಲು ಭೂ ದಾನವಿದ್ದ ಗ್ರಾಮಕ್ಕೆ ಹೋಗಬೇಕಾಗಿದ್ದುದು ಅನಿವಾರ್ಯವಾಗಿತ್ತು. ಇಂತಹ ಕ್ರಮದಿಂದ ಗ್ರಾಮಗ್ರಾಮಗಳ ನಡುವೆ ಪರಸ್ಪರ ಸಂಪರ್ಕ ಏರ್ಪಡುತ್ತಿತ್ತು. ಉದಾಹರಣೆಗೆ, ಹಾಗಲವಾಡಿ ದೊರೆ ಇಮ್ಮಡಿ ಮುದಿಯಪ್ಪ ನಾಯಕನು ತಮ್ಮ ಗುರುಗಳಾಗಿದ್ದ ಮುದ್ವೀರಸ್ವಾಮಿಗಳಿಗೆ ಹಾಗಲವಾಡಿಯಲ್ಲಿ ಮಠವನ್ನು ಕಟ್ಟಿಸಿಕೊಟ್ಟು, ಅದರ ನಿರ್ವಹಣೆ ಗೋಸ್ಕರ ಗೇರಹಳ್ಳಿ ಗ್ರಾಮಕ್ಕೆ ಲಿಂಗಸಾಗರ ಎಂಬ ನೂತನ ಹೆಸರನ್ನಿಟ್ಟು, ಆ ಗ್ರಾಮಕ್ಕೆ ಸಲ್ಲುವ ಗದ್ದೆ ಬೆದ್ದಲು, ತೋಟ, ತುಡಿಕೆ, ಅಣೆ, ಅಚ್ಚುಕಟ್ಟು, ಮುಂತಾದ ಸಕಲ ಸುವರ್ಣಾ ದಾಯವನ್ನು ನೀಡಿದುದನ್ನು ಕ್ರಿ.ಶ. ೧೭೩೬ರ ಶಾಸನವೊಂದು ತಿಳಿಸುತ್ತದೆ.[೧೧] ಮುದ್ವೀರ ಸ್ವಾಮಿಗಳು ಇಮ್ಮಡಿ ಮುದಿಯಪ್ಪ ನಾಯಕನ ರಾಜಗುರು, ಧರ್ಮಗುರುಗಳಾಗಿ ಮಾರ್ಗದರ್ಶನ ಮಾಡಿದರು. ಆಚಾರ್ಯಪರಂಪರೆಗೆ ಸೇರಿದ ಈ ವೀರಶೈವ ಯತಿಯ ಬಗೆಗೆ ಚನ್ನವೀರ ಕವಿಯ "ಮುದ್ವೀರ ತಾರಾವಳಿ" ಹಾಗೂ ಪ್ರೊ॥ ವೀರಣ್ಣರಾಜೂರ ಅವರ "ಹಾಗಲ್ವಾಡಿ ಮುದ್ವೀರ ಸ್ವಾಮಿಯ ಸ್ವರವಚನಗಳು" ಎಂಬವುಗಳಿಂದ ಅವರ ಜೀವನದ ಕೆಲವು ಪ್ರಮುಖ ಘಟನೆಗಳು ತಿಳಿದು ಬರುತ್ತವೆ.

ಇಮ್ಮಡಿ ಮುದಿಯಪ್ಪನಾಯಕನು ಹಾಗಲವಾಡಿ ಬಳಿಯ ಆಣೆಹಳ್ಳಿ ಗ್ರಾಮದ ತೋಪಿನಲ್ಲಿ ನೂತನ ಮಠವೊಂದನ್ನು ಕಟ್ಟಿಸಿ ಲಿಂಗಮುದ್ರೆಕಲ್ಲನ್ನು ಹಾಕಿಸಿದನು. ಈ ಗ್ರಾಮವನ್ನು ಮೊದಲು ಬ್ರಾಹ್ಮಣನಾದ ರಾಮಯ್ಯನಿಗೆ ಪಾಳೇಗಾರನು ದಾನ ಮಾಡಿದ್ದುದರಿಂದ ಆ ಗ್ರಾಮದ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಅವನಿಂದ ಪಡೆದುಕೊಂಡು ಆ ನೂತನ ಮಠಕ್ಕೆ ದಾನ ಮಾಡಿದನು. ಅವನಿಂದ ಸ್ವಲ್ಪ ಭಾಗ ಭೂಮಿಯನ್ನು ಪಡೆದುದಕ್ಕೆ ಬದಲಾಗಿ ಪಾಳೇಗಾರನು ರಾಮಯ್ಯನ ಒಂದು ಖಂಡುಗ ಗದ್ದೆಗೆ ಹಾಗಲವಾಡಿ ಕೆರೆಯಿಂದ ನೀರನ್ನು ಪೂರೈಸುವ ಏರ್ಪಾಟು ಮಾಡಿದನು.[೧೨] ಹೀಗೆ ಆಳುವ ವರ್ಗದಿಂದ ಮಠಗಳು ಪ್ರೋತ್ಸಾಹವನ್ನು ಪಡೆದುಕೊಂಡು ವೀರಶೈವ ಧರ್ಮಪ್ರಸಾರದ ಜೊತೆಗೆ, ಮಠಾಧ್ಯಕ್ಷರುಗಳು ಭೂ ಒಡೆಯರಾಗಿಯೂ ಕೆಲಸವನ್ನು ಮಾಡಬೇಕಾಯಿತು. ಈ ಮಠಗಳ ಗುರುಗಳು ಒಕ್ಕಲುಗಳನ್ನು ಇಟ್ಟು ಬೇಸಾಯವನ್ನು ಹೆಚ್ಚು ಹೆಚ್ಚಾಗಿ ಬಳಕೆಗೆ ತಂದರು. ಇದರಿಂದ ಕೃಷಿ ಕ್ಷೇತ್ರ ವಿಸ್ತಾರವಾಯಿತು. ಎಂದು ಹೇಳಬಹುದು.

ಹಾಗಲವಾಡಿಯ ಪಾಳೆಯಪಟ್ಟನಾದ್ಯಂತ ವಿವಿಧ ಹೆಸರಿನ ವೀರಶೈವಮಠಗಳು ಹೆಚ್ಚಾಗಿದ್ದವು. ರಾಜಧಾನಿಯಾಗಿದ್ದ ಹಾಗಲವಾಡಿಯಲ್ಲೇ ವಿವಿಧ ಹೆಸರಿನ ಮಠಗಳನ್ನು ಕ್ಷೇತ್ರಕಾರ್ಯ ದಲ್ಲಿ ಸಂಶೋಧಿಸಲಾಯಿತು. ಅವುಗಳು ಯಾವುವೆಂದರೆ:

ಮಹಂತಿನ ಮಠ, ಕಂತೇಸ್ವಾಮಿ ಮಠ, ಒಪ್ಪತ್ತೈಯ್ಯನ ಮಠ, ಕಣಗೀಲು ಮಠ, ಗುರುಪಾದಸ್ವಾಮಿ ಮಠ, ನಿರಂಜನ ಸ್ವಾಮಿ ಮಠ, ಲಿಂಗಪ್ಪನವರ ಮಠ, ವಿರಕ್ತ ಮಠ, ದಾಸೋಹಮಠ, ಸಿದ್ಧಪ್ಪನವರ ಮಠ.

ಗುಬ್ಬಿ ತಾಲ್ಲೂಕು, ತಾಲ್ಲೂಕು ಕಛೇರಿಯಲ್ಲಿ ದಾಖಲಾಗಿರುವ ಹಾಗಲವಾಡಿಯಲ್ಲಿ ಇರುವ ಮಠಗಳ ಹೆಸರು[೧೩]: ಕೋರಿಮಠ, ಚನ್ನಪ್ಪನ ಮಠ, ಮುದ್ವೀರಸ್ವಾಮಿ ಮಠ, ದಳವಾಯಿ ಮಠ, ಕಲ್ಲಮ್ಮತಾಯಿಮಠ, ಅರಸಿನಮಠ, ತಂಗುವಮಠ, ಚೌಕಿಮಠ, ಕೆರಲುಮಠ. ಹೀಗೆಯೆ ಪಾಳೆಯಪಟ್ಟಿನ ಇತರ ಕಡೆಗಳಲ್ಲಿಯೂ ವಿವಿಧ ಹೆಸರಿನ ವೀರಶೈವ ಮಠಗಳು ಇದ್ದುವು. ಅವುಗಳೆಂದರೆ, ಕಂತೇದೇವರ ಮಠ [೧೪], ಕಾಡಸಿದ್ಧೇಶ್ವರ ಮಠ [೧೫] (ನೊಣವಿನಕೆರೆ), ಕಲ್ಲುಮಠ [೧೬] (ಶಟ್ಟಿಕೆರೆ) ಇತ್ಯಾದಿ.

ಮೇಲಿನ ವಿವರಗಳನ್ನು ಪರಿಶೀಲಿಸಿದಾಗ ಕೆಲವೊಂದು ತೀರ್ಮಾನಗಳನ್ನು ಮಾಡಬಹುದು. ಒಂದನೆಯದಾಗಿ, ವಿವಿಧ ಹೆಸರಿನ ವೀರಶೈವಮಠಗಳು ಪಾಳೆಯಪಟ್ಟನಾದ್ಯಂತ ಇದ್ದವು. ಈ ಮಠಗಳು ವೀರಶೈವ ಧರ್ಮ ಪ್ರಚಾರದ ಜೊತೆಗೆ ವಿದ್ಯಾ ಕೇಂದ್ರಗಳೂ ಕೂಡಾ ಆಗಿದ್ದವು. ಎರಡನೆಯದಾಗಿ, ಮಠಗಳು ಗ್ರಾಮಾಂತರ ಪ್ರದೇಶದ ಜನರನ್ನು ಹಾಗಲವಾಡಿ ನಾಯಕರ ಪ್ರಭುತ್ವಕ್ಕೆ ಬಂಧಿಸುವ ಕೊಂಡಿಗಳಾಗಿದ್ದವು. ಮಠಗಳಿಗೆ ದತ್ತಿಯನ್ನು ಕೊಡುವುದರ ಮೂಲಕ ಮತ್ತು ಹೊಸದಾಗಿ ಮಠಗಳನ್ನು ಸ್ಥಾಪಿಸುವುದರ ಮೂಲಕವೂ ಹಾಗಲವಾಡಿ ಪಾಳೆಯಗಾರರು ಆ ಪ್ರದೇಶದಲ್ಲಿ ತಮ್ಮ ರಾಜಕೀಯ ಪ್ರಭುತ್ವವನ್ನು ವಿಸ್ತರಿಸುತ್ತಿದ್ದುದೇ ಅಲ್ಲದೆ ಮಠಗಳ ಆಡಳಿತ ವರ್ಗದ ಮುಖಾಂತರ ಭಕ್ತರ ನಿಷ್ಠೆಯನ್ನು ಸಂಪಾದಿಸುತ್ತಿದ್ದರೆಂದು ಹೇಳಬಹುದು. ಮೂರನೆಯದಾಗಿ, ಮಠಗಳ ಸ್ಥಾಪನೆಯಲ್ಲಿ ಶ್ರೀಮಂತರು, ಅಧಿಕಾರಿ ವರ್ಗದವರು ಪಾಲುಗೊಳ್ಳುತ್ತಿದ್ದುದನ್ನು ನೋಡಿದರೆ, ಆ ವರ್ಗಗಳಲ್ಲಿ ಹೇಗೆ ಸಮಾಜದಲ್ಲಿ ತಮ್ಮ ಹೆಸರನ್ನು ಶಾಶ್ವತಗೊಳಿಸಲು ಪ್ರಯತ್ನಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಒಟ್ಟಿನಲ್ಲಿ ಮಠಗಳು ದೇವಾಲಯಗಳಂತೆ ಹಾಗಲವಾಡಿ ಪಾಳೆಯಪಟ್ಟಿನ ಜೀವನಾಡಿಗಳಾಗಿದ್ದವು ಎಂದು ಹೇಳಬಹುದು. ●

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ - ಪು. ೧೧೧೫ ಮೈಸೂರು- ೧೯೭೯

೨. ಅದೇ, ಪು. ೧೧೧೯

೩. ತೀ.ನಂ.ಶ್ರೀ ಸಂಬಂಧಿಕರ ದಾನಪತ್ರ, ಸರ್ವೋದಯಪಥ - ಜಿ.ವಿ.ನಾ ಅಭಿನಂದನಾಗ್ರಂಥ - ಚಿ,ನಾ,ಹಳ್ಳಿ - ೧೯೮೨

೪. ಹಾಗಲವಾಡಿ ಕೃಷ್ಣಪ್ಪನಾಯಕನ ಬಳಿ ಇರುವ ಕಾಗದದ ಸುರುಳಿ

೫. ಎ.ಕ. ೧೬, ಚಿಕ್ಕನಾಯ್ಕನಹಳ್ಳಿ ೧

೬. ಎ.ಕ. ೧೬, ತಿಪಟೂರು ೧೦೨. ಎಂ. ಎ. ಆರ್. ೧೯೧೮ ಪು. ೫೭

೭. ಎ.ಕ. ೧೬, ಚಿಕ್ಕನಾಯ್ಕನಹಳ್ಳಿ - ೧

೮. ಅದೇ, ಎಂ. ಎ. ಆರ್, ೧೯೧೮ ಪು. ೫೩

೯. ಅದೇ

೧೦. ಅದೇ

೧೧. ಎಂ. ಎ. ಆರ್. ೧೯೩೦ ಪು. ೨೦೬

೧೨. ಎ.ಕ. ೧೨, ಚಿಕ್ಕನಾಯ್ಕನಹಳ್ಳಿ - ೩೮

೧೩. ತಾಲ್ಲೂಕು ಕಛೇರಿ, ಗುಬ್ಬಿತಾಲ್ಲೂಕು ಚರ ಮತ್ತು ಸ್ಥಿರಾಸ್ತಿಗಳ ಪಟ್ಟಿಯ ದಾಖಲೆ

೧೪. ಎ.ಕ. ೧೨, ಗುಬ್ಬಿ ೨೮

೧೫. ಮಹಂತಯ್ಯ ಹೆಚ್.ಆರ್. - ಸೋಮೆಕಟ್ಟೆ ಶಿವಾನುಭವ ಸಾಹಿತ್ಯ, ಅರಿಕೆ IV ಧಾರವಾಡ - ೧೯೬೨

೧೬. ಗುರು ಮಹಂತರ ಉತ್ಸವ ಮೂರ್ತಿಗಳ ಸಂಪ್ರೋಷಣೆ ಹಾಗೂ ಶಿವದೀಕ್ಷಾ ಸಂಸ್ಕಾರ ಮಹೋತ್ಸವ ಆಹ್ವಾನ ಪತ್ರಿಕಾ ದಿನಾಂಕ ೦೫-೧೧-೧೯೮೪

ಗೋವಿಂದಮೂರ್ತಿ ದೇಸಾಯಿ *

ಸವಣೂರಿನ ನವಾಬರು

ಸವಣೂರು ನವಾಬರ ಮೂಲ ಪುರುಷರು ಅಫ್‌ಘಾನಿಗಳು. ಕಾಬೂಲ ಬಳಿ ಇದ್ದ ಝೋರಾಸಾ ಮತ್ತು ಭೋರಾಸಾ ಹಳ್ಳಿಗಳ ಜಹಗೀರದಾರರು. ಮೀಯಾನಾ ಗುಡ್ಡಗಾಡಿಗೆ ಸೇರಿದ ಪಠಾಣರು; ಶಸ್ತ್ರವಿದ್ಯೆಯಲ್ಲಿ ನಿಪುಣರಿದ್ದ ಇವರು ಸಿಂಹಾಸನಕ್ಕೆ ಅತ್ಯಂತ ನಿಷ್ಠರಿರುತ್ತಿದ್ದರು. ಆದರೆ ಒಮ್ಮೆ ರಾಜನ ಮೇಲಿನ ವಿಶ್ವಾಸವನ್ನು ಕಳೆದುಕೊಂಡರೆ ಬೀದಿಗಿಳಿದು ಭಯಂಕರರಾಗುತ್ತಿದ್ದರು. ಈ ಮನೆತನದ ಮಲೀಕ ಅವತಾನ್‌ಖಾನನು ತೈಮೂರಲಂಗನ ಜೊತೆ ಕುದುರೆಯನ್ನೇರಿ ಹಿಂದೂಸ್ಥಾನವನ್ನು ಪ್ರವೇಶಿಸಿದನು. ಮೊದಲು ಇವನು ಮೊಗಲರಲ್ಲಿ ಸೇವೆಗೆ ನಿಂತನು. ಇವನಿಂದ ಐದನೇ ತಲೆಯವನಾದ ಅಬ್ದುಲ್ ಬಹಲೋಲ್‌ಖಾನ್ ನವಾಬನು ಜಹಂಗೀರನೊಡನೆ ವ್ಯಾಜ್ಯ ಕಾದು, ದಕ್ಷಿಣಕ್ಕೆ ಬಂದು ೧೬೫೬ರಲ್ಲಿ ವಿಜಾಪುರದ ಅದಿಲ್‌ಶಾಹಿ ಬಳಿ ಸೇವೆಗೆ ನಿಂತನು. ಇವನ ಮೊಮ್ಮಗ ಅಬ್ದುಲ್ ಕರೀಮ್‌ಖಾನನು ವಿಜಾಪುರದ ದರ್ಬಾರದಲ್ಲಿ ಉನ್ನತ ಹುದ್ದೆಗೆ ಏರಿ, ಸುಲ್ತಾನ್ ಸಿಕಂದರನು ಅಲ್ಪವಯಿ ಇರುವಾಗ ಅವನ ರಾಜ-ಪ್ರತಿನಿಧಿಯಾಗಿ ೧೬೭೭ರ ವರೆಗೆ ಅದಿಲ್‌ಶಾಹೀ ಆಡಳಿತವನ್ನು ನಡೆಸಿದನು.

ಇವನ ನಂತರ ಇವನ ಮಗ ಅಬ್ದುಲ್ ರವೂಫ್‌ಖಾನ್ ನವಾಬನು ಸವಣೂರು ಸುಬೇದಾರನಾಗಿ ಬಂಕಾಪುರಕ್ಕೆ ಬಂದು ಸವಣೂರು ರಾಜ್ಯದ ಅಡಿಗಲ್ಲನ್ನು ಹಾಕಿದನು. ೧೬೮೬ರಲ್ಲಿ ವಿಜಾಪುರದ ಕೊನೆಯ ದೊರೆ ಸುಲ್ತಾನ್ ಸಿಕಂದರನು ಔರಂಗಜೇಬನಿಗೆ ಸೋತಾಗ, ಅದಿಲಶಾಹಿ ರಾಜ್ಯವು ಅಸ್ತಂಗತವಾಯಿತು. ಸಿಕಂದರನು ಸೋತ ಮೇಲೆ, ವಿಜಾಪುರ ಕೋಟೆಯ ಕಿಲೀಕೈ ಮತ್ತು ರಾಜ್ಯದ ಮೊಹರನ್ನು ಅಬ್ದುಲ್ ರವೂಫ್‌ಖಾನನ ಮೂಲಕ ಔರಂಗಜೇಬನಿಗೆ ಕಳಿಸಿಕೊಟ್ಟನು. ಔರಂಗಜೇಬನು ರವೂಫ್‌ಖಾನನ ಶೌರ್ಯ, ಪಠಾಣಿ ಮುಖಕಳೆ ನೋಡಿ, ಇವನನ್ನು ಮೂರು ಸ್ಥರಕಾರ ಮತ್ತು ಇಪ್ಪತ್ತೆರಡು ಮಹಲುಗಳನ್ನೊಳಗೊಂಡ ಕರ್ನಾಟಕ ಪ್ರಾಂತದ ಸುಬೇದಾರನನ್ನಾಗಿ ಮಾಡಿದನು ಅಲ್ಲದೆ, ಇವನಿಗೆ ದಿಲೇರಖಾನ್, ದಿಲೇರಜಂಗ್ ಬಹದ್ದೂರ್ ಅನ್ನುವ ಬಿರುದು, ೨೦೦೦ ಸೈನ್ಯ ಮತ್ತು ೬೦೦೦ ಅಶ್ವದಳದ ಮುಖ್ಯಸ್ಥನನ್ನಾಗಿ ಮಾಡಿ, ಬಂಕಾಪುರಕ್ಕೆ ೧೬೮೬ರಲ್ಲಿ ಕಳಿಸಿದನು. ಸುಬೇದಾರಿಕೆ ನವಾಬನಿಗೆ ವಂಶಪಾರಂಪರೆಯಾಗಿ ಕೊಡಲ್ಪಟ್ಟಿತ್ತು. ೧೬೮೬ ರಲ್ಲಿ ಪ್ರಾರಂಭವಾದ ಈ ಮೀಯಾನಾ ಪಠಾಣೆಯ ಸವಣೂರ ರಾಜ್ಯವು ೧೯೪೮ರವರೆಗೂ ಅಸ್ತಿತ್ವದಲ್ಲಿದ್ದಿತು.

ಅಬ್ದುಲ್ ರವೂಫ್‌ಖಾನನು ಬಂಕಾಪುರಕ್ಕೆ ಬಂದ ಮೇಲೆ ಅವನಿಗೆ ಈ ಕರ್ನಾಟಕ ಸುಬಾಕ್ಕೆ ಹೊಸ ರಾಜಧಾನಿಯನ್ನು ಕಟ್ಟಬೇಕೆನಿಸಿತು. ಈ ಹೊಸ ರಾಜಧಾನಿಗೆ, ೧೬೮೭-೮೮ರಲ್ಲಿ ಸವಣೂರೆಂದು ಏಕೆ ಹೆಸರಿಟ್ಟರು ಅನ್ನುವ ಬಗ್ಗೆ ಈಗಾಗಲೇ ಕೆಲವು ದಾಖಲೆಗಳಿವೆ. ರವೂಫ್‌ಖಾನನು ಜನ್ಮರನಹಳ್ಳಿ ಎಂಬ ಗ್ರಾಮದಲ್ಲಿ ಹೊಸ ರಾಜಧಾನಿಯನ್ನು ಕಟ್ಟಿ ಶ್ರಾವಣ ಮಾಸದಲ್ಲಿ ಈ ಊರಿಗೆ ಹೋಗಿದ್ದರಿಂದ ಇದು ಶ್ರಾವಣೂರು - ಸವಣೂರು ಆಯಿತು ಎಂದು ಗ್ಯಾಜಿಟೀಯರದಲ್ಲಿ ಕೂಡ ಬಂದಿದೆ. ಕೆಲವರ ಪ್ರಕಾರ ಶಹಾನೂರು ಸವಣೂರಾಯಿತಂತೆ. ಆದರೆ ನನಗೆ ಇತ್ತೀಚೆಗೆ ದೊರೆತ ದಿಲೇರಜಂಗ ಅನ್ನುವ ಸವಣೂರು ಇತಿಹಾಸವನ್ನು ಹೇಳುವ ಏಕೈಕ ಗ್ರಂಥವಾದ ಈ ಪರ್ಶಿಯನ್ ಕಾವ್ಯದಲ್ಲಿ, ೧೫ ನೇ ಪ್ರಕರಣದಲ್ಲಿ ಸವಣೂರಿನ ಮುಸಲ್ಮಾನ ಇತಿಹಾಸಕಾರನೇ ಇದರ ಮೂಲವನ್ನು ಕೊಟ್ಟಿದ್ದಾನೆ. ಈ ಗ್ರಂಥ ೧೮೪೦-೧೮೬೦ರ ಮಧ್ಯೆ ಕಲ್ಲಚ್ಚಿನಲ್ಲಿ ಮುದ್ರಿತವಾಗಿದೆ. ರವೂಫ್‌ಖಾನನು ಬೇಟೆಗೆಂದು ಬಂಕಾಪುರದಿಂದ ಪೂರ್ವಕ್ಕೆ ಐದು ಮೈಲಗಳಷ್ಟು ದೂರದ ಆಡವಿಗೆ ಹೋದಾಗ ಒಂದು ಮೊಲವು ಕಂಟೆಯಿಂದ ಹಾರಿತು. ಅವನ್ನು ನೋಡಿ ನವಾಬನ ಬೇಟೆಯ ನಾಯಿಗಳು ಬೆನ್ನು ಹತ್ತಿದವು. ಮೊಲವು ತಾನು ಸಾಯವುದು ನಿಶ್ಚಿತವೆಂದು ಭಾವಿಸಿ, ಕೊನೆಯ ಉಪಾಯವೆಂದು ಕಣ್ಣನ್ನರಳಿಸಿ ಮೈ ಉಬ್ಬಿಸಿ, ಕಾಕದೃಷ್ಟಿಯಿಂದ ನಾಯಿಗಳನ್ನು ನೋಡಿತು. ಆಗ ನಾಯಿಗಳು ಅಂಜಿ ಹಿಂದೆ ಸರಿದವು.

* ೧೭, ಎಸ್.ಬಿ. ಐ. ಆಫೀಸರ ಕಾಲೋನಿ, ಬಸವೇಶ್ವರನಗರ, ಬೆಂಗಳೂರು - ೫೬೦೦೭೯

ಈ ರೀತಿ ಬಡ ಪ್ರಾಣಿ ಮೊಲವು, ಬಲಿಷ್ಠ ನಾಯಿಗಳನ್ನು ಹೆದರಿಸಿದ ಸ್ಥಳ ಜನವಸತಿ ಇಲ್ಲದ ಸಾವನಹಳ್ಳಿ ! ಇಲ್ಲಿ ಬಂಜರ ಭೂಮಿಯಿತ್ತು. ಈ ನೆಲದಲ್ಲಿ ಸತ್ಯವಿದೆಯೆಂದು ಭಾವಿಸಿದ ಅಬ್ದುಲ್ ರವೂಫ್‌ಖಾನನು ನಿಶಾನೆ ಹಚ್ಚಿ, ಹೊಸ ರಾಜಧಾನಿಯನ್ನು ಕಟ್ಟಲು ನಿರ್ಧರಿಸಿದನು. ಇಂತಹ ಐತಿಹ್ಯಗಳು ಅನೇಕ ರಾಜ್ಯ ಸ್ಥಾಪನೆಗಳ ಹಿಂದೆ ಇವೆ. ಕಟ್ಟಿ ದೊಡ್ಡದಾದ ಮೇಲೆ 'ಸಾವನ ಹಳ್ಳಿ' ಸಾವಣೂರು - ಸವಣೂರಾಯಿತು. ಪ್ರಾಯಶಃ ಈ 'ಸಾವನಹಳ್ಳಿ'ಯನ್ನೇ ಯಾರೋ ಸಂಸ್ಕೃತೀಕರಣ ಮಾಡಿ ಜನ್ಮಮರಣನಹಳ್ಳಿ ಮಾಡಿರಬೇಕು. ಈ ಹಿಂದೆ ಸವಣೂರು ಅಗ್ರಹಾರವಿತ್ತೆಂದು ಹೇಳಲಾಗಿದೆ. ಆದರೆ ಅದಕ್ಕೆ ಯಾವ ಆಧಾರಗಳೂ ಖಚಿತವಾಗಿ ದೊರೆತಿಲ್ಲ. ಈ ಸವಣೂರು ಅರಮನೆಯ ಮೂಲಗಳೇ ಸವಣೂರು ಹೆಸರಿನ ಬಗ್ಗೆ ವಿವರಣೆ ನೀಡಿರುವುದನ್ನು ಯಾರೇ ಗಮನಿಸಬೇಕು.

ಔರಂಗಜೇಬನು ಅಬ್ದುಲ್ ರವೂಫ್‌ಖಾನನಿಗೆ ಸನದನ್ನು ಕೊಟ್ಟಾಗ ಎರಡು ಕೋಟಿ ನಲವತ್ತು ಸಾವಿರ ರೂಪಾಯಿಗಳ ಉತ್ಪನ್ನ ವಿರುವ, ಬಂಕಾಪುರ, ಅರ್ಝುನಗರ (ಬೆಳಗಾವ) ಹಾಗೂ ತೋರಗಲ್ ಅನ್ನುವ ಮೂರು ಸರಕಾರ; ಕುಂದಗೋಳ, ಕಾರಡಗಿ, ಮಿಶ್ರಿಕೋಟೆ, ಹಾನಗಲ್, ರಾಣೀಬೆನ್ನೂರು, ಬಂಕಾಪುರ, ಅಡೂರು, ಕೂಪ್ಪೇಲೂರು, ತಿಳವಳ್ಳಿ ಅನ್ನುವ ಒಂಬತ್ತು ಪರಗಣ ಬೊಮ್ಮೀಗಟ್ಟೆ, ಕಲಘಟಗಿ, ತಡಸ, ಕೋಡ, ಕೆರೂರು ಖುರ್ದ ಕೆರೂರು ಬದ್ರೂಕ, ಕಾಗಿನೆಲ್ಲಿ, ನಿಡಸಂಗಿ, ಮಾಸೂರು, ಶಿಗ್ಗಾವಿ ಅನ್ನುವ ಹತ್ತು ಸಮತ್‌ಗಳನ್ನು; ಹಾವೇರಿ, ಹಂಸಾಭಾವಿ ಅನ್ನುವ ಎರಡು ಪೇಠಾಗಳನ್ನು ಹಾಗೂ ದೇಹಾತ ಐರಣಿಯನ್ನು (ಕೋಟೆಯನ್ನು) ಕೊಟ್ಟನು.

೧೬೮೬ರಿಂದ ೧೭೨೯ರ ವರೆಗೆ ಸವಣೂರನ್ನಾಳಿದ ರಾವೂಫ್‌ಖಾನನ ನಂತರ, ಸವಣೂರು ಗಾದಿಯ ಬಗ್ಗೆ ಅಣ್ಣ ತಮ್ಮಂದಿರಲ್ಲಿ ವ್ಯಾಜ್ಯವಾಗಿ ಕೊನೆಗೆ ಅಬ್ದುಲ್ ಗಫಾರ್‌ಖಾನನು ಪಟ್ಟಕ್ಕೆ ಬಂದನು. ಈ ಹೊತ್ತಿಗೆ ಪೇಶ್ವೆಯವರು ತಮ್ಮ ರಾಜ್ಯ ವಿಸ್ತರಣೆಗೆ ಪ್ರಾರಂಭಿಸಿದ್ದರು. ಗಫಾರ್‌ಖಾನನು ರಾಜ್ಯದ ವಿಸ್ತರಣೆಗೆ ಕೈಹಾಕಿ, ಕೃಷ್ಣಾ ಮತ್ತು ತುಂಗಭದ್ರಾನದಿಗಳ ಮಧ್ಯದ ದೋಅಬ್ ಪ್ರದೇಶವನ್ನು ತನ್ನದನ್ನಾಗಿ ಮಾಡಿಕೊಂಡನು. ಈ ಪ್ರದೇಶವನ್ನೇ ಥಾಮಸ್ ಮನ್ರೋ ಮುಂದೆ, ಸದರನ್ ಮರಾಠಾ ಕಂಟ್ರೀ ಎಂದು ನಾಮಕರಣ ಮಾಡಿದನು. ಮೊದಲು ಇದನ್ನು ಮದ್ರಾಸ ಪ್ರಾಂತಕ್ಕೆ ಸೇರಿಸುವ ಯತ್ನದಲ್ಲಿದ್ದರು. ಬ್ರಿಟಿಷ್ ಅಧಿಕಾರಿಗಳ ಮಧ್ಯೆ ಭಿನ್ನಾಭಿಪ್ರಾಯಗಳು ಬಂದು, ಈ ಭಾಗವನ್ನು ಕೊನೆಗೆ ಮುಂಬೈ ಪ್ರಾಂತಕ್ಕೆ ಸೇರಿಸಬೇಕೆಂದು ನಿರ್ಧರಿಸಲಾಯಿತು. ಈ ದೋಅಬ್ ಪ್ರದೇಶದಲ್ಲಿ ಇಂದಿನ ಪೂರ್ಣ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳ ಪ್ರದೇಶ ಹಾಗೂ ಕೃಷ್ಣಾನದಿ ದಕ್ಷಿಣಕ್ಕಿದ್ದ ವಿಜಾಪುರ ಜಿಲ್ಲಾ ಪ್ರದೇಶವು ಸೇರಿತ್ತು. ಈ ಪ್ರದೇಶದ ಮಳೆ-ಛಳಿ-ಬೆಳೆಗಳ ಮೇಲೆ, ಮಲೆನಾಡು, ಗಡಿನಾಡು ಹಾಗೂ ಬೆಳವಲನಾಡು ಎಂದು ಮೂರು ಪ್ರಾದೇಶಿಕ ವ್ಯತ್ಯಾಸಗಳನ್ನು ಮಾಡಲಾಗಿತ್ತು. ಈ ಭಾಗದಲ್ಲಿ ಉತ್ತರಕ್ಕೆ ಕೃಷ್ಣ ಹಾಗೂ ಅದರ ಎರಡು ಉಪನದಿಗಳಾದ ಘಟಪ್ರಭಾ-ಮಲಪ್ರಭಾ, ದಕ್ಷಿಣಕ್ಕಿದ್ದ ತುಂಗಭದ್ರಾ ಹಾಗೂ ಅದರ ಎರಡು ಉಪನದಿಗಳಾದ ವರದಾ-ಕುಮದ್ವತಿಗಳಲ್ಲದೆ, ಶಾಲ್ಮಲಾ ಮತ್ತು ಧರ್ಮಾ ಎಂಬೆರಡು ಉಪನದಿಗಳು, ಹಿರೇಹಳ್ಳ - ತುಪರೀಹಳ್ಳ, ಬೆಣ್ಣೀಹಳ್ಳಗಳು ನೀರನ್ನು ಒದಗಿಸುತ್ತಿದ್ದವು. ಇದರಿಂದ, ಈ ಫಲವತ್ತಾದ ಭೂಮಿಯ ಮೇಲೆ ೧೭೪೫ರ ಹೊತ್ತಿಗೆ ಪೇಶ್ವೆ ಕೊಲ್ಹಾಪುರದ ಸಂಭಾಜಿ ಹಾಗೂ ಹೈದ್ರಾಬಾದಿನ ನಿಜಾಮನು ತ್ರಿಕೋಣಾತ್ಮಕ ಸ್ಪರ್ಧೆಗಿಳಿದರು: ಮುಂದೆ ಹೈದರ ಆಲಿ ಕೂಡ ಕೆಲಕಾಲ ಸವಣೂರನ್ನು ಗೆದ್ದಿದ್ದನು.

ಸವಣೂರನ್ನಾಳಿದ ಒಟ್ಟು ಹದಿನೈದು ನವಾಬರಲ್ಲಿ, ಗಫಾರ್‌ಖಾನ್ ನವಾಬನು, ಈಶಾನ್ಯ ಭಾಗದ ಸ್ವಲ್ಪ ಪ್ರದೇಶವನ್ನು ಮರಾಠರಿಗೆ ಬಿಟ್ಟು ಕೃಷ್ಣ ಹಾಗೂ ತುಂಗಭದ್ರಾನದಿಗಳ ಪ್ರದೇಶಗಳನ್ನು ಸವಣೂರು ರಾಜ್ಯಕ್ಕೆ ಸೇರಿಸಿಕೊಂಡಿದ್ದನು. ಇವನ ನಂತರ ೧೭೩೦-೧೭೫೪ರ ವರೆಗೆ ಆಳಿದ ಮೊದಲನೇ ಅಬ್ದುಲ್ ಮಜೀದ್‌ಖಾನನು ಮೊಗಲರ ಅಧಿಕಾರವನ್ನು ಕಿತ್ತು ಎಸೆಯಲು ಪ್ರಯತ್ನಿಸಿದನು. ಆಗ ಮೊಗಲರ ಪ್ರತಿನಿಧಿ ನಿಜಾಮನು ಸವಣೂರ ಮೇಲೆ ಸೈನ್ಯವನ್ನು ತಂದಾಗ, ಅವನೊಡನೆ ಒಪ್ಪಂದವನ್ನು ಮಾಡಿಕೊಂಡನು; ಈ ಮಜೀದ್‌ಖಾನ ನವಾಬನು ಧಾರವಾಡ, ಬೆಳಗಾವ್, ವಿಜಾಪುರ ಜಿಲ್ಲೆಗಳಲ್ಲದೆ, ರಾಯಚೂರಿನ ಮೇಲೆಯೂ ತನ್ನ ಅಧಿಕಾರವನ್ನು ಸ್ಥಾಪಿಸಿದನು. ನವಾಬ ಅಬ್ದುಲ್ ಮಜೀದ್‌ಖಾನನಿಗೆ ಧಾರವಾಡವು ಅವನ ರಾಜ್ಯದ ಕೇಂದ್ರಬಿಂದುವಾಗಿತ್ತು.

ಇಂದಿನ ಹುಬ್ಬಳ್ಳಿಯನ್ನು ಸ್ಥಾಪಿಸಿದವನೇ ಸವಣೂರಿನ ನವಾಬ ಅಬ್ದುಲ್ ಮಜೀದ್‌ಖಾನನು. ಸವಣೂರಿನ ಪ್ರತಿಷ್ಠಿತ ನಾಗರೀಕರು ಪ್ರಶಸ್ತವಾದ ನಗರದಲ್ಲಿ ವಾಸಿಸಬೇಕೆಂದು, ಹೊಸ ಹುಬ್ಬಳ್ಳಿಯ ಶಂಕುಸ್ಥಾಪನೆ ಮಾಡಿದನು. ತಾನೇ ನಕ್ಷೆ ತೆಗೆದು, ವಿಶಾಲ ಬೀದಿ, ಮಹಡಿ ಸೌಧಗಳನ್ನು ಕಟ್ಟಿಸಿ, ಇತರ ಶ್ರೀಮಂತರಿಗೆ ಕಟ್ಟಿಸಿಕೊಳ್ಳಲು ಅನುಕೂಲತೆಗಳನ್ನು ಒದಗಿಸಿಕೊಟ್ಟನು. ಈ ಹೊಸನಗರಕ್ಕೆ **'ಮಜೀದಪುರ'** ಎಂಬ ನಾಮಕರಣ ಮಾಡಿದನು. ಈ ಮಜೀದಪುರ ಬೆಳೆದಂತೆ ಹುಬ್ಬಳ್ಳಿಯಾಯಿತು. ಹುಬ್ಬಳ್ಳಿಯಲ್ಲಿ ಇನ್ನೂ ಇವನನ್ನು ಸ್ಮರಿಸುವ ಮಜೀದಪುರ ಓಣಿ ಇದೆ.

ಇವನು ರಾಜ್ಯದ ಪಡಭೂಮಿಗಳನ್ನು ಒಂದು ಸೇರು ಬೆಣ್ಣೆಗೆ ಒಂದು ಎಕರೆ ಭೂಮಿಯಂತೆ ಸಾಗುವಳಿಗೆ ರೈತರಿಗೆ ಕೊಟ್ಟು ಹೆಚ್ಚು ಭೂಮಿಯನ್ನು ಸಾಗುವಳಿ ಮಾಡಿಸಿದನು. ಸವಣೂರಲ್ಲಿ ವೀಳೆದೆಲೆ ತೋಟಗಳಿಗೆ ನೀರು ಬೇಕೆಂದು ೬೪೦೦೦ ರೂಪಾಯಿ ವ್ಯಯಿಸಿ ಮೋತಿ ತಲಾವ್ ಅನ್ನುವ ದೊಡ್ಡಕೆರೆ ಕಟ್ಟಿಸಿದನು. ಇಂದಿಗೂ ಈ ಕೆರೆ ಸವಣೂರಿನ ಜೀವರೇಖೆಯಾಗಿದೆ.

ಸವಣೂರು ರಾಜ್ಯವನ್ನು ಸ್ಥಾಪಿಸಿದ ಅಬ್ದುಲ್ ರವುಫ್‌ಖಾನನಿಂದ ೧೯೪೮ರಲ್ಲಿ ಸವಣೂರು ಸಂಸ್ಥಾನವು ಧಾರವಾಡ ಜಿಲ್ಲೆಯಲ್ಲಿ ವಿಲೀನೀಕರಣ ಆಗುವವರೆಗೆ ೧೪ ನವಾಬರು ಆಳಿದರು. ಅವರಲ್ಲಿ ಪ್ರಮುಖರೆಂದರೆ, ಅಬ್ದುಲ್ ಗಫಾರ್‌ಖಾನ್, ಅಬ್ದುಲ್ ಮಜೀದ್‌ಖಾನ್, ಅಬ್ದುಲ್ ಹಕೀಮ್‌ಖಾನ್ ಹಾಗೂ ಅಬ್ದುಲ್ ದಿಲೇರಖಾನ್.

ಅಬ್ದುಲ್ ಮಜೀದ್‌ಖಾನ್‌ನು ದುರ್ಬಲನಾದಾಗ ಮೆತ್ತಗೆ ಇರುತ್ತಿದ್ದನು. ಶಕ್ತಿ ಹೆಚ್ಚಿದಾಗ ಎದ್ದು ಕುಳಿತುಕೊಳ್ಳುತ್ತಿದ್ದನು. ೧೭೫೪ರಲ್ಲಿ ಇವನು ಸತ್ತಾಗ, ಇವನ ಮಗ ಅಬ್ದುಲ್ ಹಕೀಮ್‌ಖಾನ್ ನವಾಬನು ಸವಣೂರು ಗಾದಿಗೆ ಬಂದನು. ಇವನು ಪಟ್ಟಕ್ಕೆ ಬಂದೊಡನೆ, ಇವನ ಮತ್ತು ಪೇಶ್ವೆಯವರ ಮಧ್ಯೆ ವೈಷಮ್ಯವು ಹೆಚ್ಚಾಗಿ, ೧೭೫೬ ರಲ್ಲಿ ಯುದ್ಧವಾಗಿ, ನವಾಬನು ರೂ.೮,೨೩,೯೨೬-೮೮ ಉತ್ಪನ್ನದ ೩೮ ಮಹಲುಗಳನ್ನು ಪೇಶ್ವೆಯವರಿಗೆ ಬಿಟ್ಟುಕೊಟ್ಟನು. ಇದರ ಜೊತೆ ಹನ್ನೊಂದು ಲಕ್ಷ ರೂಪಾಯಿ ಹಣವನ್ನು ಖಂಡಣೆಯೆಂದು ತೆತ್ತನು. ಅದರಲ್ಲಿ ರೂ. ೩,೧೦,೦೦೦ ಆ ಕ್ಷಣವೇ ಕೊಡಬೇಕು. ಉಳಿದ ರೂ. ೭,೯೦,೦೦೦ಗಳಲ್ಲಿ ರೂ. ೪,೧೦,೦೦೦ಗಳನ್ನು ಹದಿನೈದು ದಿವಸಗಳಲ್ಲಿ ಕೊಡಬೇಕು, ಕೊನೆಯ ಕಂತಿನ ಹಣ ಮುಟ್ಟುವ ವರೆಗೆ ನವಾಬನು ಬಂಕಾಪುರ ಕೋಟೆಯನ್ನು ಒತ್ತೆಹಾಕಬೇಕು, ಎಂಬ ಕರಾರಾಯಿತು. ಪೇಶ್ವೆಯವರಿಂದ ನವಾಬನು ಅರ್ಧ ರಾಜ್ಯವನ್ನೇ ಕಳೆದುಕೊಂಡನು. ಅವನು ಕೂಡಿಸಿಟ್ಟ ಸಂಪತ್ತನ್ನು ಹೀಗೆ ಹಾಳು ಮಾಡಿಕೊಂಡನು.

೧೭೬೧ರಲ್ಲಿ ಮರಾಠರು ಪಾಣಿಪತ್ತದಲ್ಲಿ ಸೋತೊಡನೆ ದುರ್ಬಲರಾಗುತ್ತ ನಡೆದರು. ಇದರಿಂದ ಪೇಶ್ವೆಯವರ, ನಿಜಾಮನ ಹಾಗೂ ಹೈದರಆಲಿಯ ಲಕ್ಷ್ಯ ಸವಣೂರಿನ ಮೇಲೆ ಬಿದ್ದಿತು. ೧೭೭೮ರಲ್ಲಿ ಹೈದರಆಲಿ ಕರ್ನಾಟಕ ಸುಬಾ ಗೆದ್ದು, ಪೇಶ್ವೆಯವರಿಂದ ಸವಣೂರು ರಾಜ್ಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಈ ಯುದ್ಧದ ನಂತರ, ೧೭೭೯ರಲ್ಲಿ ಹೈದರಆಲಿಯು ತನ್ನ ಮಗಳಾದ ಸುಲ್ತಾನಾಬೇಗಂಳನ್ನು ಹಕೀಮ್‌ಖಾನನ ಜೇಷ್ಠ ಪುತ್ರ ಖೈರ್‌ಖಾನ್‌ನಿಗೆ ಕೊಟ್ಟು, ಹಕೀಮಖಾನ್‌ನ ಮಗಳಾದ ಜಹನಾಬೇಗಂಳನ್ನು ತನ್ನ ಎರಡನೇ ಮಗ ಕರೀಮ್‌ಖಾನನಿಗೆ ತೆಗೆದುಕೊಂಡು ಅದ್ದೂರಿಯಿಂದ ಶ್ರೀರಂಗಪಟ್ಟಣದಲ್ಲಿ ಮೂರು ತಿಂಗಳ ಕಾಲ ವಿವಾಹ ಮಹೋತ್ಸವ ನಡೆಸಿದನು. ಈ ವಿವಾಹಗಳಿಗೆ ಅರ್ಧ ಸವಣೂರೇ ಹೋಗಿತ್ತು. ಇದರಿಂದ ಹೈದರಾಲಿ ಪೇಶ್ವೆಯವರಿಂದ ಗೆದ್ದ ಪ್ರದೇಶವನ್ನು ಪುನಃ ಹಕೀಮ್‌ಖಾನ್ ನವಾಬರಿಗೆ ಬಿಟ್ಟುಕೊಟ್ಟನು. ಈ ಲಗ್ನದಲ್ಲಿ ಹೈದರಾಲಿ ತನ್ನ ಅಳಿಯ ಖೈರ್‌ಖಾನನಿಗೆ ವರದಕ್ಷಿಣೆಯೆಂದು ಬಾಗಲುಕೋಟೆಯನ್ನು ಕೊಟ್ಟನು. ಹಿಂದಕ್ಕೆ ಈ ಬಾಗಲುಕೋಟೆ ಸವಣೂರಿಗೆ ಸೇರಿತ್ತು. ಈ ವಿವಾಹಗಳಿಗೆ ಕಾರಣನಾದವನು ಖಂಡೇರಾವ್ ಸಂಗೋಅನ್ನುವ ಸವಣೂರಿನ ದಿವಾನ ಮತ್ತು ರಾಯಭಾರಿ. ಪೇಶ್ವೆಯವರಿಗೆ ಈ ಸುದ್ದಿ ಕೇಳಿದೊಡನೆ ಪುನಃ ಅವರು ತಮ್ಮ ಸೈನ್ಯವನ್ನು ಕಳಿಸಿ ತಮ್ಮ ಪ್ರದೇಶವನ್ನು ಮರಳಿ ಪಡೆದರು. ಈ ಹಕೀಮ್ ಖಾನ್ ನವಾಬನು ಒಬ್ಬ ದುರ್ದೈವಿ. ಇವನ ಕಾಲಕ್ಕೆ ಸವಣೂರು ರಾಜ್ಯವು ೨೫ ಹಳ್ಳಿಗಳ ರಾಜ್ಯವಾಯಿತು. ಇದಕ್ಕೆ ಸ್ವಲ್ಪ ಮಟ್ಟಿಗೆ ಕಾರಣವೆಂದರೆ, ಹಕೀಮ್‌ಖಾನ್‌ನ ಬೀಗ ಟಿಪ್ಪೂ ಸುಲ್ತಾನ್‌ನು. ಹೈದರಾಲಿ ೧೭೮೨ ರಲ್ಲಿ ಸತ್ತಾಗ, ತಮ್ಮ ಮನೆತನದ ಹಿರಿಯನೆಂದು ಅಬ್ದುಲ್ ಹಕೀಮ್‌ಖಾನನಿಗೆ ಪತ್ರ ಬರೆದು, ದುಃಖತಪ್ತ ತಮ್ಮ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ, ತನ್ನ ಪಟ್ಟಾಭಿಷೇಕದ ಹೊತ್ತಿಗೆ ಶ್ರೀರಂಗಪಟ್ಟಣದಲ್ಲಿ ಇರಬೇಕೆಂದು ಹೇಳಿ ಕಳುಹಿಸಿದನು. ಆದರೆ ಹಕೀಮ್‌ಖಾನ್‌ನು ಅಲ್ಲಿಗೆ ಹೋಗಲಿಲ್ಲ. ಈ ಹಿಂದೆ ಹಕೀಮ್‌ಖಾನ್ ನವಾಬನು ಶ್ರೀರಂಗಪಟ್ಟಣಕ್ಕೆ ಹೋದಾಗ, ಟಿಪ್ಪೂ ಎದ್ದು ನಿಂತು ಇವನಿಗೆ ಗೌರವವನ್ನು ತೋರಿಸಲಿಲ್ಲವೆಂದು ಅವನನ್ನು ಕಂಡರೆ ಕಿಡಿ ಕಿಡಿಯಾಗುತ್ತಿದ್ದ. ಈಗ ಆ ಹಿಂದಿನ ಸೇಡನ್ನು ತೀರಿಸಿಕೊಳ್ಳಲು ಇವನು ಶ್ರೀರಂಗಪಟ್ಟಣಕ್ಕೆ ಹೋಗಲಿಲ್ಲ. ಇದರಿಂದ ಕ್ರುದ್ಧನಾದ ಟಿಪ್ಪೂ ೧೭೮೬ರಲ್ಲಿ ಸವಣೂರಿನ ಮೇಲೆ ಅಪಾರ ಸೈನ್ಯದೊಂದಿಗೆ ಧಾಳಿ ಮಾಡಿದನು. ಆಗ ಸವಣೂರು ನವಾಬನು ಪೇಶ್ವೆ ಮತ್ತು ನಿಜಾಮನಿಂದ ಸಹಾಯವನ್ನು ಕೇಳಿದನು. ಪುಣೆಯಿಂದ ಹರಿಪಂತ್ ಫಡಕೆ ಹಾಗೂ ಹೈದ್ರಾಬಾದಿನಿಂದ ಘನೀಮೀಯಾ ಮತ್ತು ತಹವರಜಂಗ್ ಸೈನ್ಯದೊಂದಿಗೆ ಬಂದರೂ ನವಾಬನು ಸೋತನು. ಅವನು ಸೋತು ಟೀಪುವಿನ ಕೈಯಿಂದ ತಪ್ಪಿಸಿಕೊಂಡು ಪುಣೆಗೆ ಓಡಿ ಹೋದನು. ಪುಣೆಯಲ್ಲಿ ೩ವರ್ಷ ಕಳೆದನು. ಇವನ ಜೀವನಾಂಶಕ್ಕೆ ಪೇಶ್ವೆಯವರು ಇವನಿಗೆ ತಿಂಗಳಿಗೆ ರೂ. ೪,೦೦೦-೦೦ ಪಿಂಚಣಿ ಗೊತ್ತುಪಡಿಸಿದರು ನಂತರ ಪೇಶ್ವೆ ಗಾದಿಯ ಮೇಲಿದ್ದ ಸವಾಯಿ ಮಾಧವರಾಯನು, ಪರಶುರಾಂ ಭಾವೂಪಟವರ್ಧನ್ ಅನ್ನುವ ಸರದಾರನನ್ನು ಅಪಾರ ಸೈನ್ಯದೊಂದಿಗೆ ಸವಣೂರಿಗೆ ಕಳಿಸಿದನು. ೧೭೯೦ರಲ್ಲಿ ಅಬ್ದುಲ್ ಹಕೀಂ ಖಾನನಿಗೆ ಸವಣೂರು ರಾಜ್ಯವು ಮರಳಿ ಬಂದಿತು. ಆದರೆ ರಾಜ್ಯದ ಆಡಳಿತೆಯನ್ನು ಪೇಶ್ವೆಯವರು ತಮ್ಮ ಸರದಾರರಿಗೆ ಒಪ್ಪಿಸಿ, ನವಾಬ್ ಹಕೀಮ್‌ಖಾನ್‌ನನ್ನು ಗುಲಾಮನಂತೆ ನಡೆಸಿಕೊಂಡರು. ಹಕೀಂ ಖಾನನು ತನಗೆ ತನ್ನ ರಾಜ್ಯವು ಮರಳಿ ಬರಬೇಕೆಂದು ಕೇಳಿದಾಗ "ನಿನ್ನ ರಾಜ್ಯವನ್ನು ನಾವು ಟೀಪುವಿನೊಡನೆ ಮಾಡಿದ ಯುದ್ಧದ ಸಾಲಕ್ಕಾಗಿ ೫,೦೦,೦೦೦ ರೂಪಾಯಿಗಳಿಗೆ ಒತ್ತೆ ಹಾಕಿದ್ದೇವೆ. ಆ ಸಾಲ ತೀರಿದೊಡನೆ ರಾಜ್ಯವನ್ನು ಮರಳಿಸುತ್ತೇವೆ ಎಂದು ಹೇಳಿದರು. ಆದರೆ ಅವರೆಂದೂ ನವಾಬನಿಗೆ ಮರಳಿ ಕರ್ನಾಟಕ ಸುಬಾ ಕೊಡಲಿಲ್ಲ. ನವಾಬನು ಪಿಂಚಣಿದಾರನಾಗಿ ಪ್ರತಿ ತಿಂಗಳು ಪೇಶ್ವೆಯವರಿಗೆ ಕೈಯೊಡ್ಡ ಬೇಕಾಯಿತು. ಹೀಗಾಗಿ ಇವನ ಕಾಲಕ್ಕೆ ವಿಶಾಲ ರಾಜ್ಯವಾಗಿದ್ದ ಸವಣೂರು ಸಣ್ಣ ರಾಜ್ಯವಾಯಿತು. ಇವನು ೧೭೯೪ರಲ್ಲಿ ಸವಣೂರಿನಲ್ಲಿ ಸತ್ತನು.

ಇವನಿಗೆ ೨೨ ಗಂಡು ಮಕ್ಕಳು. ಹಿರಿಯವನಾದ ಅಬ್ದುಲ್ ಖೈರಖಾನನು ಮದುವೆಯಾದಂದಿನಿಂದ (೧೭೭೯) ಶ್ರೀರಂಗಪಟ್ಟಣದಲ್ಲಿಯೇ ಉಳಿದನು. ಹೀಗಾಗಿ ಮುಂದಿನ ಗಾದಿಗೆ ಯಾರು ಏರಬೇಕೆಂಬ ಬಗ್ಗೆ ಹಕೀಮ್ ಖಾನನ ಮಕ್ಕಳಲ್ಲಿ ವಾಗ್ವಾದವಾಯಿತು. ತಂದೆಯ ಸಾವಿನ ಸುದ್ದಿ ತಿಳಿದು ಅಬ್ದುಲ್ ಖೈರಕಾನ್‌ಗೆ ಸವಣೂರಿಗೆ ಬರಲು ಸುಮಾರು ಒಂಬತ್ತು ತಿಂಗಳು ಹಿಡಿದವು. ಅಷ್ಟರಲ್ಲಿ ಇವನ ತಮ್ಮ ಹುಸೇನ್ ಖಾನ್ ಅಧಿಕಾರವನ್ನು ವಹಿಸಿಕೊಂಡಿದ್ದನು. ಖೈರ್‌ಖಾನನು ಶ್ರೀರಂಗಪಟ್ಟಣದಿಂದ ಸವಣೂರಿಗೆ ಬಂದಾಗ ಅವನ ತಮ್ಮನು ಇವನಿಗೆ ಅಧಿಕಾರವನ್ನು ವಹಿಸಿಕೊಡಲು ನಿರಾಕರಿಸಿದನು. ಆಗ ಖೈರ್‌ಖಾನನು ಪುಣೆಗೆ ಹೋಗಿ ಪೇಶ್ವೆಯವರ ಬಳಿ ತನ್ನ ಹಕ್ಕನ್ನು ಸ್ಥಾಪಿಸಿದನು. ಆಗ ಅವರು ತಮ್ಮ ಸರದಾರನಾಗಿ ಧೊಂಡೋಪಂತ್ ಗೋಖಲೆಯುನ್ನು ಖೈರ್‌ಖಾನನ ಜೊತೆ ಕಳಿಸಿ ಖೈರ್‌ಖಾನ್‌ನನ್ನು ಪುನಃ ಸವಣೂರು ಸಿಂಹಾಸನದ ಮೇಲೆ ಕೂಡಿಸಿದನು. ಆದರೆ ರಾಜ್ಯದ ಎಲ್ಲಾ ವ್ಯವಸ್ಥೆಯು ಪೇಶ್ವೆಯವರ ಕೈಯಲ್ಲಿತ್ತು. ಅಬ್ದುಲ್ ಖೈರ್‌ಖಾನ್ ಕೂಡ ಪಿಂಚಣಿಗಾಗಿ ಪೇಶ್ವೆಯವರ ಮುಂದೆ ಕೈಯೊಡ್ಡಬೇಕಾಯಿತು. ೧೭೯೯ರಲ್ಲಿ ಟೀಪು ಸತ್ತೊಡನೆ, ಧೊಂಡಿಯಾ ಪವಾರ್ (ವಾಘ) ಅವನ ಸೆರೆಮನೆಯಿಂದ ಓಡಿ ಬಂದು, ದಂಡು ಕಟ್ಟಿಕೊಂಡು ದಂಗೆಯೆದ್ದನು. ಕರ್ನಾಟಕದ ದೇಸಾಯಿ, ದೇಶಪಾಂಡೆ, ವತನದಾರರು ಧೊಂಡಿಯಾ ವಾಘನಿಗೆ ಸಹಾಯ ಮಾಡುತ್ತಿದ್ದರು. ಅದರಿಂದ ಧೊಂಡಿಯಾ ವಾಘನ ಉಪಟಳವೂ ಹೆಚ್ಚಿತು. ಇದನ್ನು ಸಹಿಸದ ಪೇಶ್ವೆಯವರು ಮತ್ತು ಇಂಗ್ಲೀಷರು ವಾಘನ ಬೆನ್ನು ಹತ್ತಿದರು. ಬ್ರಿಟೀಷರು ಅರ್ಥರ್ ವೆಲ್ಲೆಸ್ಲಿಯನ್ನು ಸೈನ್ಯದೊಂದಿಗೆ ಕರ್ನಾಟಕ ಸುಬಾಕ್ಕೆ ಕಳಿಸಿದರು. ಇಂಗ್ಲೀಷರೊಡನೆ ನಡೆದ ಯುದ್ಧದಲ್ಲಿ, ೧೮೦೦ ಸೆಪ್ಟೆಂಬರ್, ೧೦ ರಂದು ಧೊಂಡಿಯಾ ವಾಘ ನಂದೀಹಳ್ಳಿಯಲ್ಲಿ ೧೦ ಗುಂಡು ಬಡಿಸಿಕೊಂಡು ಸತ್ತನು. ಆಗ ವೆಲ್ಲೆಸ್ಲಿ ಮರಳಿ ಪುಣೆಗೆ ಹೋಗುವಾಗ ಸವಣೂರಿಗೆ ಬಂದನು. ಆಗ ಅಬ್ದುಲ್ ಕರೀಂಖಾನನು ಪೇಶ್ವೆಯವರಿಂದ ಬರುತ್ತಿದ್ದ ಪಿಂಚಣಿ ತನಗೆ ಸರಿಯಾಗಿ ಬಾರದೆ ತೊಂದರೆಯಾಗಿದೆ ಎಂದು ಅವನ ಮುಂದೆ ತನ್ನ ಅಳಲನ್ನು ತೋರಿಕೊಂಡನು. ಆಗ ವೆಲ್ಲೆಸ್ಲಿ ಖೈರಖಾನನಿಗೆ ಸಮಾಧಾನ ಹೇಳಿ ತಾನು ಪುಣೆಗೆ ಹೋಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿಸುವುದಾಗಿ ಹೇಳಿ ಆಶ್ವಾಸನೆಯನ್ನು ಕೊಟ್ಟನು.

ವೆಲ್ಲೆಸ್ಲಿ ಪುಣೆಗೆ ಹೋದ ಮೇಲೆ ಪೇಶ್ವೆಯವರೊಂದಿಗೆ ಮಾತನಾಡಿ ಪ್ರತಿ ತಿಂಗಳು ಕೊಡುವ ೪೦೦೦ ರೂಪಾಯಿಗಳ ಬದಲು, ಅಷ್ಟು ಉತ್ಪನ್ನವಿರುವ ಹಳ್ಳಿಗಳನ್ನು ಕೊಡಬೇಕೆಂದು ಸಲಹೆ ಮಾಡಿದನು. ಆಗ ಪೇಶ್ವೆಯವರು ಸವಣೂರಿನ ಸುತ್ತಲಿನ ಇಪ್ಪತ್ತೈದು ಕೆಟ್ಟ ಹಳ್ಳಿಗಳನ್ನು ಕೊಟ್ಟರು. ಆದರೆ ಈ ಹಳ್ಳಿಗಳ ಕಂದಾಯವನ್ನು ಕೂಡ ಪೇಶ್ವೆ ಸರದಾರರೇ ವಸೂಲು ಮಾಡಿ, ಅದರಲ್ಲಿ ಸೇವಾ ಶುಲ್ಕವನ್ನು ಮುರಿದುಕೊಂಡು ಉಳಿದದ್ದನ್ನು ಅಬ್ದುಲ್ ಖೈರ್‌ಖಾನ್‌ನಿಗೆ ಕೊಡುತ್ತಿದ್ದರು. ಅಬ್ದುಲ್ ಖೈರ್‌ಖಾನ್ ದುರ್ಬಲನಿದ್ದುದರಿಂದ ಅಸಹಾಯಕನಾಗಿದ್ದನು. ಇವನು ೧೮೨೭ರಲ್ಲಿ ಸತ್ತನು. ಈ ಹೊತ್ತಿಗೆ ಪೇಶ್ವೆಯವರು ನಿರ್ಬಲರಾಗುತ್ತ ನಡೆದು ೧೮೧೮ರಲ್ಲಿ ಪೂರ್ಣವಾಗಿ ರಾಜಕೀಯ ರಂಗದಿಂದ ನಿರ್ಗಮಿಸಿದರು.

ಇವನ ನಂತರ ಇವನ ಮಗನಾದ ಅಬ್ದುಲ್ ಫಯಾಜ್‌ಖಾನ್, ಅಬ್ದುಲ್ ಮುನ್ವರ್‌ಖಾನ್ ೬ ವರ್ಷ ಆಳಿದರೂ ಮಹತ್ವದ ಘಟನೆಗಳೇನೂ ನಡೆಯಲಿಲ್ಲ. ಮೂರನೇ ಮಗನಾದ ಅಬ್ದುಲ್ ದಿಲೇರ್‌ಖಾನ್‌ನು ೧೮೩೪ರಲ್ಲಿ ಪಟ್ಟಕ್ಕೆ ಬಂದು ೧೮೬೧ರ ವರೆಗೂ ಸಿಂಹಾಸನದಲ್ಲಿದ್ದನು. ಇವನ ಶಿಕ್ಷಣ ಧಾರವಾಡ, ಮುಂಬೈಗಳಲ್ಲಿ ನಡೆದು, ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವವನ್ನು ಗಳಿಸಿದ್ದನು. ಇವನು ಹತ್ತೆಂಟು ವರ್ಷ ಪುಣೆಯಲ್ಲಿ ಇದ್ದುದರಿಂದ ಎಲ್ಲಾ ಬ್ರಿಟಿಷ್ ಅಧಿಕಾರಿಗಳ ಸ್ನೇಹವನ್ನು ಸಂಪಾದಿಸಿದ್ದನು. ಇವನು ಭೂಕಂದಾಯದ ದಾಖಲೆಗಳನ್ನು ಸರಿಪಡಿಸಿದನು. ಬ್ರಿಟಿಷರು ಇವನಿಗೆ ದಿವಾಣಿ ಹಾಗೂ ಫೌಜದಾರಿ ಅಧಿಕಾರಗಳನ್ನು ಕೊಟ್ಟಿದ್ದರು. ಇವನಿಗೆ ಮರಣದಂಡನೆ ಕೊಡುವ ಅಧಿಕಾರವೂ ಇದ್ದಿತು.

ಇವನ ಕಾಲಕ್ಕೆ ಅಝಿಮುದ್ದೀನ್ ಫೈಜುದ್ದೀನ್ ದಳವಿ ಅನ್ನುವವನು ೩೮೭ ಪುಟದ ದಿಲೇರಖಾನ ಬಹದ್ದೂರ ದಿಲೇರ ಜಂಗ ಅನ್ನುವ ಇತಿಹಾಸವನ್ನು (೧೨೬೩ ಹಿಜರಾಶಕಾ) ೧೮೪೩ರಲ್ಲಿ ಬರೆದನು. ಇದು ಮೂಲತಃ ಪರ್ಶಿಯನ್ ಭಾಷೆಯ ಐತಿಹಾಸಿಕ ಕಾವ್ಯ. ದಿಲೇರ್‌ಖಾನ್ ನವಾಬನು ಇವನನ್ನು ನಂತರ ಮುನಸಿ ಎಂದು ನೇಮಿಸಿದನು. ಇವನೇ ೧೮೪೩ರಲ್ಲಿ ಇದನ್ನು ಪ್ರಕಟಿಸಿದನು. ನಂತರ ಮೋಡಿ ಲಿಪಿಯ ಮರಾಠಿ ಭಾಷೆಯಲ್ಲಿ ಈ ಗ್ರಂಥವು ೧೮೬೦ರಲ್ಲಿ ಧಾರವಾಡದ ಕಲ್ಲಚ್ಚಿನಲ್ಲಿ ಮುದ್ರಿತವಾಯಿತು. ಪ್ರಾಯಶಃ ಈ ಗ್ರಂಥದ ಪರ್ಶಿಯನ್ ಭಾಷೆಯ ಒಂದು ಪ್ರತಿ ಮುಂಬೈ ವಿಶ್ವವಿದ್ಯಾಲಯದಲ್ಲಿ ಇದೆಯೇನೊ? ಸವಣೂರು ಅರಮನೆಯ ಮೂಲ ಪರ್ಶಿಯನ್ ದಿಲೇರ್ ಜಂಗ್ ಕಾವ್ಯದ ಮೂಲ ಪ್ರತಿಯು ಜೆರಾಕ್ಸ್ ಹಾಗೂ ಮರಾಠಿ 'ದಿಲೇರ್‌ಜಂಗ್'ದ ಪ್ರತಿ ನನ್ನಲ್ಲಿವೆ. ಈ ಗ್ರಂಥದಲ್ಲಿ ಬರುವ ಘಟನೆಗಳು ಸಮಕಾಲೀನ ಐತಿಹಾಸಿಕ ಘಟನೆಗಳಿಗೆ ಸಂಗತವಾಗಿವೆ.

ಅಬ್ದುಲ್ ದಿಲೇರ್‌ಖಾನ್ ಈ ಕಾವ್ಯವನ್ನು ಬರೆಸಿದ್ದರಿಂದ ಅವನ ಅರ್ಧಚರಿತ್ರೆ ಇದರಲ್ಲಿ ಮೂಡಿಬಂದಿದೆ. ಇವನಿಗೆ ಮರಾಠಿ ಭಾಷೆ ಓದಲು, ಬರೆಯಲು ಚೆನ್ನಾಗಿ ಬರುತ್ತಿತ್ತು. ಕಾರಣ ಸವಣೂರು ರಾಜ್ಯದ ಭಾಷೆ ಆಗ ಮರಾಠಿ ಇದ್ದಿತು. ೧೯೦೦ ನಂತರ ಸವಣೂರಿನ ಆಡಳಿತೆಯ ಭಾಷೆ ಕನ್ನಡವಾಗಿರಬೇಕು.

ಅಬ್ದುಲ್ ದಿಲೇರ್‌ಖಾನ್‌ನು ಸವಣೂರಲ್ಲಿದ್ದ ಬ್ರಿಟಿಷ್ ಪೋಲೀಸರನ್ನು ಕಿತ್ತುಹಾಕಿ ಭಾರತೀಯ ಪೋಲೀಸರನ್ನು ನೇಮಿಸಿಕೊಂಡನು. ಇವನು ೧೮೬೨ರಲ್ಲಿ ತೀರಿಕೊಂಡ ಮೇಲೆ, ಇವನ ಮಗನಾದ ಎರಡನೇ ಖೈರಖಾನನು ಪಟ್ಟವೇರಿದನು.

ಇವನು ತನ್ನ ಐಷಾರಾಮಿಗಾಗಿ ದುಂದುವೆಚ್ಚಮಾಡಿ ಸವಣೂರು ಸಂಸ್ಥಾನವನ್ನು ಸಾಲದಲ್ಲಿ ಮುಳುಗಿಸಿ, ೧೮೮೩ರಲ್ಲಿ ತೀರಿಕೊಂಡನು. ನಂತರ ಇಬ್ಬರು ಇವನ ವಂಶಜರು ಪಟ್ಟವೇರಿದರೂ ಬಹುಕಾಲ ಬಾಳಲಿಲ್ಲ. ಈ ಸಂಸ್ಥಾನದ ಕೊನೆಯ ನವಾಬನೆಂದರೆ ಎರಡನೇ ಅಬ್ದುಲ್ ಮಜೀದ್‌ಖಾನ್. ೧೮೯೦ರಲ್ಲಿ ಇವನು ಹುಟ್ಟಿದಾಗ ಅಲ್ಪವಯಿ ಇದ್ದನು. ೧೯೧೨ರಲ್ಲಿ ಇವನು ಪಟ್ಟವೇರಿದನು. ಈ ಮಜೀದ್‌ಖಾನ್‌ನು ಧಾರವಾಡ ಹಾಗೂ ಅಜಮೀರ್‌ದ ಮೇಯೋ ರಾಜಕುಮಾರ ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದನು. ಅಲ್ಪ ಆದಾಯದಲ್ಲಿಯೇ ಸವಣೂರು ಸಂಸ್ಥಾನವನ್ನು ಚೊಕ್ಕಟವಾಗಿಟ್ಟಿದ್ದನು. ೧೯೪೮ರಲ್ಲಿ ಸಂಸ್ಥಾನವು ಧಾರವಾಡ ಜಿಲ್ಲೆಯಲ್ಲಿ ವಿಲೀನವಾದಾಗ ಇವನು ಬೆಂಗಳೂರಿಗೆ ವಾಸಿಸಲಿಕ್ಕೆ ಬಂದು ಅಲ್ಲಿಯೇ ಸತ್ತನು.

*

ಡಾ॥ ಹರಿಲಾಲ್ ಪವಾರ*

ಡೊಂಬರು : ಒಂದು ಐತಿಹಾಸಿಕ ಅಧ್ಯಯನ

ಭಾರತೀಯ ಸಮಾಜ ವ್ಯವಸ್ಥೆಯ ವರ್ಗೀಕೃತ ಶ್ರೇಣಿಯ ಪರಿಧಿಯಾಚೆ ಉಳಿದುಕೊಂಡಿರುವ ಅನೇಕ ಬುಡಕಟ್ಟುಗಳಲ್ಲಿ ಡೊಂಬರದು ವಿಶಿಷ್ಟ ಸಮೂಹ. ಸಮಾಜದ ಬದುಕಿನಲ್ಲಿ ತಮ್ಮದೇ ಸ್ಥಾನಮಾನವನ್ನು ಗಿಟ್ಟಿಸಿಕೊಂಡು ಬಂದಿರುವ ಹೆಮ್ಮೆ ಡೊಂಬರದು. ಇಂದಿನ ಯಾಂತ್ರಿಕ ಬದುಕಿನ ಪ್ರವಾಹಕ್ಕೆ ಕೊಚ್ಚಿ ಹೋಗುವ ಪೂರ್ವದಲ್ಲಿ ಇಂಥ ಅಲೆಮಾರಿ ಗುಂಪಿನ ವಿಲಕ್ಷಣ ಅಂಶಗಳನ್ನು ಪಳೆಯುಳಿಕೆಯ ರೂಪದಲ್ಲಾದರೂ ಹಿಡಿದಿಡುವ ಕಾರ್ಯ ಆಗಬೇಕಾಗಿದೆ.

ಅಲೆಮಾರಿ ಡೊಂಬರು

ಡೊಂಬರು ಒಂದು ಊರಲ್ಲಿ ಸ್ಥಿರವಾಗಿ ಇರುವುದುಂಟೆ? ಮನೆ-ಮಾರು ಗೊತ್ತು-ಗುರಿ ಇಲ್ಲದೆ, ಧೋ ಧೋ ಎಂದು ಸುರಿಯುವ ಮಳೆ, ಮೈ ಕೊರೆಯುವ ಚಳಿ, ಸುಡು ಬಿಸಿಲಿನಲ್ಲಿ ತಮ್ಮ ನೆಚ್ಚಿನ ಸಹಚರಿ ಪ್ರಾಣಿಗಳಾದ ಕತ್ತೆ, ಕುದುರೆಗಳ ಮೇಲೆ ಗಂಟುಮೂಟೆಗಳನ್ನು ಹೇರಿಕೊಂಡು ತಮ್ಮ ಹೊಟ್ಟೆಪಾಡಿಗಾಗಿ ಕಸರತ್ತಿನ ಪ್ರದರ್ಶನವನ್ನು ಆಡುತ್ತ ಊರಿಂದ ಊರಿಗೆ ಅಲೆಯುತ್ತಾರೆ.

'ಡೊಂಬಗೆ ನೆಲೆ ಇಲ್ಲ, ಡಂಬಿಗೆ ಬೆಲೆ ಇಲ್ಲ' ಎನ್ನುವ ಗಾದೆ ಎರಡು ಅಂಶಗಳನ್ನು ಸ್ಪಷ್ಟಪಡಿಸುತ್ತದೆ. ಒಂದು :ಡೊಂಬರಿಗೆ ಯಾವುದೇ ಸ್ಥಿರವಾದ ನೆಲೆ ಇಲ್ಲ. ಎರಡು : ಡಂಬನ್ನು ಬೆಲೆ ಕೊಟ್ಟು ಕೊಳ್ಳಬೇಕಾದ ಅಗತ್ಯ ಇಲ್ಲ. ಡೊಂಬನಿಗೂ ಡಂಬಿಗೂ ತುಳುಕುಹಾಕುವ ಈ ಗಾದೆ, ಡಂಬು ಎಲ್ಲೆಂದರಲ್ಲಿ ಯಾವ ಬೆಲೆಯೂ ಇಲ್ಲದೆ ಹೇರಳವಾಗಿ ಸಿಗುತ್ತಿದ್ದ ವಸ್ತು. ಡೊಂಬರು ನಮ್ಮ ದೇಶದಲ್ಲಿ ವಾಸವಾಗಿದ್ದು ಅವರು ಯಾವುದೇ ಪ್ರದೇಶದಲ್ಲಿ ಸ್ಥಿರವಾಗಿ ಕಾಲೂರದೇ ಅಲೆಮಾರಿ ಗುಂಪಾಗಿದ್ದರು ಎನ್ನುವುದನ್ನು ಈ ಮಾತು ಸೂಚಿಸುತ್ತದೆ. 'ಡಂಭಾಚಾರಕ್ಕೆ ಬೆಲೆ ಎನ್ನುವ ಧ್ವನಿಯೂ ಈ ಗಾದೆಯಲ್ಲಿದ್ದೀತು.' (ಡಾ॥ ಹಕಾರಿ, ೧೯೮೨: ೧೦೯).

ಡೊಂಬ ಪದದ ಅರ್ಥ

ಡೊಂಬ ಪದಕ್ಕೆ ಪರ್ಯಾಯವಾಗಿ ದೊಂಬ, ದೋವರ, ಡಂಬರ, ಡುಮ್ಮರ, ಡೊಮ್ಮಾರ ಶಬ್ದಗಳೂ ಬಳಕೆಯಲ್ಲಿವೆ. ಎಚ್.ಎ.ಸ್ಟೂಅರ್ಟ ಅವರ ಡೊಂಬ ಶಬ್ದ ಭೂತ, ಪಿಶಾಚಿ ಅಥವಾ ಒಂದು ಭಯಾನಕ ಶಕ್ತಿ ಮುಂತಾದ ಅರ್ಥವುಳ್ಳ 'ದೋಮ' ಶಬ್ದದಿಂದ ಬಂದಿರಬೇಕೆಂದು ನಿಲುವು ತಾಳಿದ್ದಾರೆ. ಡೊಂಬರು ಮೂಲತಃ ಉತ್ತರ ಭಾರತದವರು. ಇವರ ಮನೆಮಾತು ಗುಜರಾತಿ. ಗುಜರಾತಿ ಭಾಷೆಯಲ್ಲಿ ಡಮರ (ಡುಮರು) ಅಂದರೆ ತಮಟೆ ಎಂದರ್ಥ. ಡೊಂಬರ ದಂತಕಥೆ ಐತಿಹ್ಯಗಳಲ್ಲಿಯೂ ಡಮರದ ಪ್ರಸ್ತಾಪವಿದೆ. ಮೊದಲಿನಿಂದಲೂ ಇವರು ತಮ್ಮ ಶಕ್ತಿ ಪ್ರದರ್ಶನ ಸಮಯದಲ್ಲಿ ಹಿನ್ನೆಲೆ ವಾದ್ಯವಾಗಿ 'ಡುಮರ'ವನ್ನು ಬಳಸುತ್ತಿದ್ದರು. ಆದುದರಿಂದ ಡೊಂಬ ಪದವು ವಾದ್ಯದಿಂದಲೇ ಬಂದಿರಬೇಕು. ಬಹುಶಃ ಈ ಪದವು ಡುಮರ-ಡುಂಬರ-ಡಂಬರ-ದೊಂಬರ-ಡೊಂಬರ ಎಂದಾಗಿರಬೇಕು.

ಡೊಂಬರ ಮೂಲಸ್ಥಾನ

ಡೊಂಬರು ಮೂಲತಃ ಗುಜರಾತದವರು. ರಾಜಸ್ಥಾನ, ಪಂಜಾಬ, ಬಂಗಾಲ, ಬಿಹಾರ, ಓರಿಸ್ಸಾ, ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿಯೂ ಕಾಣಸಿಗುತ್ತಾರೆ. ಡೊಂಬರು ಮೂಲತಃ ಗುಜರಾತದವರು ಎಂಬುದಕ್ಕೆ ಇವರ ಆಡುಭಾಷೆ ಗುಜರಾತಿ ಉಪಭಾಷೆ ಆಗಿರುವುದೇ ಬಲವಾದ ಕಾರಣ. ಪೂರ್ವದಲ್ಲಿ ತಮ್ಮ ವೃತ್ತಿಯ ಕಾರಣದಿಂದಾಗಿ ದೇಶಾದ್ಯಂತ ಚದುರಿಕೊಂಡಿದ್ದಾರೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಡೊಂಬರಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಪೂರ್ವದಲ್ಲಿ ಇವರು ಒಂದೇ ಮೂಲದಿಂದ ಬಂದು ಕಾಲಾಂತರದಲ್ಲಿ ವಿವಿಧ ವೃತ್ತಿ ಪಂಗಡಗಳಾಗಿ ಬೇರ್ಪಟ್ಟಿರಬೇಕು. ಇಂದು ಇವರಲ್ಲಿ ಕೆಲವರು ತಮ್ಮ ಕುಲಸಂಕೇತಾರಾಧನೆ, ಭಾಷೆ ಇತ್ಯಾದಿಗಳನ್ನು ಮರೆತು

* ಸಹಾಯಕ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ - ೫೮೦ ೦೦೩

ವಿವಿಧ ಪ್ರಾಂತೀಯ ಭಾಷೆಗಳನ್ನು ತಮ್ಮ ಮನೆಮಾತಾಗಿ ರೂಢಿಸಿಕೊಂಡಿದ್ದಾರೆ.

ಡೊಂಬರ ಮೂಲವನ್ನು ಕುರಿತು ಜಿ. ಎ. ಗ್ರಿಯರ್ಸನ್ ಅವರು ಡೊಂಬರು ಯುರೋಪದ ಜಿಪ್ಸಿ ಜನಾಂಗದ ಮೂಲದವರಿರ ಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಇ. ಥರ್ಸ್ಟನ್ ಅವರು ಡೊಂಬರು ವಂಶಪಾರಂಪರ್ಯವಾಗಿ ಜಯಪುರ ಮಹಾರಾಜರ ಸಂಗೀತಗಾರರಾಗಿದ್ದರು ಎಂದು ಹೇಳಿದ್ದಾರೆ.

ಸುಮಾರು ೧೧೪೮ರಲ್ಲಿದ್ದ ಕಾಶ್ಮೀರದ ಕವಿ ಕಲ್ಹಣ ತನ್ನ ಕೃತಿ 'ರಾಜತರಂಗಿಣಿ'ಯಲ್ಲಿ ಡೊಂಬರ ಒಂದು ಕಲಾತ್ಮಕ ತಂಡದ ವರ್ಣನೆ ಮಾಡುತ್ತಾನೆ. ಸುಮಾರು ೯೩೬-೯೩೭ರ ಕಾಲಾವಧಿಯಲ್ಲಿ ರಾಜ್ಯವಾಳಿದ ಕಾಶ್ಮೀರದ ಅರಸು ಚಕ್ರವರ್ಮನ ಆಸ್ಥಾನಕ್ಕೆ ಪ್ರಸಿದ್ಧ ಡೊಂಬ ನಾಯಕ ರಂಗ ತನ್ನ ನೃತ್ಯ ಸಂಗೀತಗಾರರ ಗುಂಪಿನೊಡನೆ ಬಂದನು. ರಾಜತರಂಗಿಣಿ ಕಾವ್ಯದ ೫ನೆಯ ತರಂಗದಲ್ಲಿ ಸುಮಾರು ೨೮ ಶ್ಲೋಕಗಳು ಈ ಘಟನೆಯ ವರ್ಣನೆಗಾಗಿಯೇ ಮೀಸಲಾಗಿವೆ. (ಉದ್ಧೃತ, ಡಾ॥ ಹಕಾರಿ, ೧೯೮೭: ೧೧೫).

ದಂತಕಥೆ-ಐತಿಹ್ಯ

ಜನಪದ ಗುಂಪಿನವರನ್ನು ಕುರಿತು ಅಧ್ಯಯನ ಮಾಡುವಾಗ ಮೊದಲು ಅವರಲ್ಲಿ ಪ್ರಚಲಿತವಿರುವ ದಂತಕಥೆ ಐತಿಹ್ಯಗಳಿಗೆ ಮೊರೆಹೋಗುವುದು ಅನಿವಾರ್ಯ. ಏಕೆಂದರೆ ಈ ಕಥೆಗಳ ಹಿನ್ನೆಲೆಯಲ್ಲಿ ಎಷ್ಟೋ ವಾಸ್ತವ ಸಂಗತಿಗಳು ಗೋಚರಿಸದೆ ಇರಲಾರವು.

ಒಂದು ಐತಿಹ್ಯದ ಪ್ರಕಾರ, ರಾಜಸ್ಥಾನದ ರಜಪೂತ ಮನೆತನದಲ್ಲಿ 'ಬೆಂಗನ' ಎಂಬವನು ಕೆಲಸ ಮಾಡುತ್ತಿದ್ದನು. ಮುಂದೆ ಕೆಲವು ವರ್ಷಗಳು ಕಳೆದ ಮೇಲೆ ಅವನು ಅದೇ ಮನೆತನದ ರಾಜಕುಮಾರಿ 'ಭೀಕರಿ' ಎಂಬವಳನ್ನು ಅಪಹರಿಸಿಕೊಂಡು ಹೋಗಿ ಮದುವೆಯಾದನು. ಅವರ ಸಂತತಿಯಿಂದ ೧) ಫೇಸ (ಫೀಸಾಡಿ), ೨) ಮಾರ (ಮಾರವಾಡಿ), ೩) ಸಾಳ (ಡೊಂಬರ), ೪) ಮೋಲಾ (ಲಂಬಾಣಿ) ಮತ್ತು ೫) ಖಿಮಡ (ಮೇಲುಪಿಕಾರಿ) - ಹೀಗೆ ಐದು ಜನ ಗಂಡುಮಕ್ಕಳಾದರು. ಮುಂದೆ ಅವರು ಮದುವೆಯಾಗಿ ಬೇರೆಯಾದರು. ಆಗ ಫೇಸನಿಗೆ ಕಬ್ಬಿಣಬುಟ್ಟಿ, ಕುಡಗೋಲು, ಮಾರನಿಗೆ ಒಂದು ಗುಂಜಿ ಬಂಗಾರ, ಸಾಳನಿಗೆ ಒಂದು ಕತ್ತೆ, ಡುಮರ; ಮೋಲಾನಿಗೆ ಒಂದು ಆಕಳು, ಗೋಣಿಚೀಲ ಮತ್ತು ಖಿಮಡನಿಗೆ ಒಂದು ನಾಯಿ, ಬಿಲ್ಲು ಬಾಣ ಕೊಟ್ಟರು. ಹೀಗೆ ಐದು ಜನ ಸೋದರರಿಗೆ ಆಸ್ತಿಯಲ್ಲಿ ಭಾಗ ಮಾಡಿಕೊಟ್ಟರು. ಮುಂದೆ ಈ ಸಾಳನ ವಂಶಸ್ಥರೇ ಡೊಂಬರಾದರೆಂದು ಪ್ರತೀತಿ.

ವಿವಿಧ ವ್ಯಕ್ತಿ ಮತ್ತು ವೃಂದಗಳ ಶೌರ್ಯ ಬಲಿದಾನಗಳಿಗೆ ಸಂಬಂಧಿಸಿದ ಅನೇಕ ಸ್ಥಳೀಯ 'ಐತಿಹ್ಯ', 'ಪುರಾಣ', 'ದಂತಕಥೆ' ಕನ್ನಡನಾಡಿನ ಉದ್ದಗಲಕ್ಕೂ ಪ್ರಚಲಿತವಾಗಿವೆ. ತಲೆಮಾರಿನಿಂದ ತಲೆಮಾರಿಗೆ, ಹೆಚ್ಚಾಗಿ ಮೌಖಿಕ ಪರಂಪರೆಯ ಮೂಲಕ ಸಾಗಿಬಂದ ಈ ಬಗೆಯ ಸ್ಥಳೀಯ ಕತೆಗಳಲ್ಲಿ ಒಂದಷ್ಟು ವಾಸ್ತವಾಂಶವಿರುವುದು ನಿಜವಾದರೂ, ಕಾಲಕಾಲಕ್ಕೆ ಜನ, ಅದರಲ್ಲಿ ಹೆಚ್ಚಾಗಿ ಸ್ವಕಪೋಲಕಲ್ಪನೆಗಳನ್ನು ಸೇರಿಸುತ್ತ ಹೋಗುವುದೂ ನಿಜ. ಡೊಂಬನಿಗೆ ಸಂಬಂಧಿಸಿದ ಇಂಥ 'ಸ್ಥಳಕಥೆ'ಗಳಲ್ಲಿ ಡೊಂಬರ ವೃತ್ತಿ, ವೃಂದಗಳು ಬದಲಾಗದೆ ಪರಿಚಲನೆಗೊಂಡಿರುವುದು ಗಮನಾರ್ಹ (ಡಾ॥ ಹಕಾರಿ, ೧೯೯೩: ೨೦).

ಸಾಕುಪ್ರಾಣಿಗಳ ಬಿಡಾರ

ಡೊಂಬರಿಗೆ ಕತ್ತೆ ಎಂದರೆ ಬಲು ಪ್ರೀತಿ. ತಮ್ಮ ಗಂಟುಮೂಟೆ, ಈಚಲು ಗರಿಗಳಿಂದ ಹೆಣೆದಿರುವ ಕಡ್ಡಿ ಚಾಪೆಯ ಗುಡಿಸಲು, ಆಟಿಕೆಯ ನಿಚ್ಚಣಿಕೆ, ಕಬ್ಬಿಣದ ಸಲಾಕೆ, ಭಾರವಾದ ವಸ್ತು ಇವುಗಳನ್ನು ಕತ್ತೆಗಳ ಬೆನ್ನ ಮೇಲೆ ಸಾಗಿಸಲು ಅನುಕೂಲವಾಗುವುದರಿಂದ ಕತ್ತೆಗಳನ್ನು ಸಾಕುತ್ತಾರೆ. ಹಂದಿ, ಕುದುರೆ, ನಾಯಿ, ಕುರಿ, ಕೋಳಿಗಳನ್ನೂ ಸಾಕುತ್ತಾರೆ.

ಅಲೆಮಾರಿಗಳಾದ ಡೊಂಬರಿಗೆ ಕಾಲೂರಿದ್ದೇ ನೆಲೆ. ತಮ್ಮ ಕಸರತ್ತಿನ ವೃತ್ತಿ ಪ್ರದರ್ಶನಕ್ಕೆ ಯೋಗ್ಯವಾದ ಊರನ್ನು ಆಯ್ದುಕೊಂಡು ತಮ್ಮ ಗುಂಪಿನವರ ಅಥವಾ ತಮ್ಮ ಕುಟುಂಬದವರ ಜೊತೆಗೆ ಊರ ಹೊರಗಿನ ಬಯಲಲ್ಲಿ ಬಿಡಾರವನ್ನು ಹಾಕುತ್ತಾರೆ. ಇವರು ತಮ್ಮ ಬಿಡಾರವನ್ನು ಕಡ್ಡಿ ಚಾಪೆಯ ಗುಡಿಸಲು ಅಥವಾ ಬಟ್ಟೆಗಳಿಂದ ಸಿದ್ಧಪಡಿಸುತ್ತಾರೆ. ಬಿಡಾರದ ಪಕ್ಕದಲ್ಲಿ ಸಹಚರಿ ಪ್ರಾಣಿಗಳನ್ನು ಕಟ್ಟುತ್ತಾರೆ.

ಕಸರತ್ತು ಪ್ರದರ್ಶನ, ಶೌರ್ಯ ಸಾಹಸ

ಡೊಂಬರ ಜೀವನ ವಿಧಾನ ಮತ್ತು ವೃತ್ತಿ, ಸಹಜವಾಗಿಯೇ ಅವರಲ್ಲಿ ಏಕಪ್ರಕಾರವಾಗಿ ಧೈರ್ಯ ಸಾಹಸ ಪ್ರವೃತ್ತಿಗಳನ್ನು ಬೆಳೆಸಿದೆ. ಬೇಟೆಗಾರಿಕೆಯ ಕಾಲದಿಂದಲೇ ಅಲೆಮಾರಿಗಳಾಗಿ ಬದುಕುತ್ತ ಬಂದ ಡೊಂಬರ ಬದುಕಿನ ವಿಶಿಷ್ಟ ಮತ್ತು ಇತರ ವೃಂದಗಳಿಂದ ತೀರ ಭಿನ್ನವಾದ ವೃತ್ತಿಯೆಂದರೆ ವಿವಿಧ ಬಗೆಯ ಕಸರತ್ತುಗಳನ್ನು ದೈಹಿಕ ಶಕ್ತಿ ಸಾಧನೆಗಳನ್ನು ತಾವು ಬೀಡುಬಿಟ್ಟ ಕಡೆಯಲ್ಲೆಲ್ಲ ಪ್ರದರ್ಶಿಸುವುದು. ಆಟಕ್ಕೆ ಊರ ಮಧ್ಯದಲ್ಲಿ ಉತ್ತಮವಾದ ಸ್ಥಳವನ್ನು ಆಯ್ದುಕೊಳ್ಳುತ್ತಾರೆ. ಆಟ ಆರಂಭವಾಗುವ ಪೂರ್ವದಲ್ಲಿ ಡೋಲು ಬಾರಿಸುತ್ತ ಸಾರಿ ಬರುತ್ತಾರೆ. ಜನರು ಸೇರುತ್ತಿರುವಂತೆ ಗಣೆನೆಟ್ಟು ಹಗ್ಗ ಇಲ್ಲವೆ ತಂತಿಯನ್ನು ಕಟ್ಟಿ ಸಜ್ಜುಗೊಳಿಸುತ್ತಾರೆ. ನಿಚ್ಚಣಿಕೆ, ಬಿದರಿನ ಕೋಲು, ಕಬ್ಬಿಣದ ಸಲಾಕೆ ಇವುಗಳ ಜೊತೆಗೆ ಬಲರಾಮ ನೇಗಿಲು, ಚಕ್ಕಡಿ, ಕಲ್ಲು ಮುಂತಾದ ಆಟಿಕೆಯ ಸಾಮಾನುಗಳನ್ನು ಇಟ್ಟಿರುತ್ತಾರೆ. ರಂಗದ ಒಂದು ಮೂಲೆಯಲ್ಲಿ ಒಂದು ಚಾದರ ಇಲ್ಲವೆ ಕೌದಿಯನ್ನು ಹಾಸಿ ತಮಗೆ ಬಳುವಳಿಯಾಗಿ ಬಂದಂಥ ಖಡ್ಗ, ಕಠಾರಿ, ಚೂರಿ, ಭರ್ಜಿ ಇಟ್ಟಿರುತ್ತಾರೆ. ಗಂಡಸರು ಹನುಮಾನ್ ಚಡ್ಡಿ ಅಥವಾ ಪ್ಯಾಂಟ್ ತೊಟ್ಟು ಮೈಮೇಲೆ ಕೋಟು

ಧರಿಸಿರುತ್ತಾರೆ. ಕೆಲವರು ಬರಿಮೈಯಿಂದ ಇರುವುದುಂಟು. ತಲೆಗೆ ಒಂದು ಟವಲ್ ಸುತ್ತಿ ಕೊರಳಲ್ಲಿ, ಮತ್ತು ಮುಂಗೈಯಲ್ಲಿ ಆಂಜನೇಯ ಮುಖವಾಡದ ತಾಯತ ಕಟ್ಟಿರುತ್ತಾರೆ. ಹೆಂಗಸರು ಸೀರೆ, ರವಿಕೆಯನ್ನು ತೊಟ್ಟು ಕಿವಿಯಲ್ಲಿ ಜುಮಕಿ, ಮೂಗಿನಲ್ಲಿ ಚಂದ್ರಾಕಾರದ ನತ್ತು, ಕೊರಳಲ್ಲಿ ಹವಳ, ಮಣಿಸರ, ಮುಂಗೈತುಂಬ ಬಳೆ, ಕೈಬೆರಳಲ್ಲಿ ಬೆಳ್ಳಿ ಮತ್ತು ತಾಮ್ರದ ಉಂಗುರ, ಕಾಲ್ಬೆರಳಿಗೆ ಉಂಗುಟಿ ಹಾಕಿರುತ್ತಾರೆ. ಹಣೆ, ಗದ್ದ, ತೋಳು ಮತ್ತು ಮುಂಗೈಗಳಿಗೆ ವಿವಿಧ ವಿನ್ಯಾಸದ ಹಚ್ಚೆ ಹುಯ್ಸಿ ಕೊಂಡಿರುತ್ತಾರೆ. ಯುವತಿಯರು ರಂಗುರಂಗಿನ ಲಂಗ, ರವಿಕೆ ತೊಟ್ಟಿರುತ್ತಾರೆ. ಹುಡುಗರು ಅಂಗಿ ಚಲ್ಲಣ ತೊಟ್ಟು ಹಣೆಗೆ ಕರವಸ್ತ್ರ ಕಟ್ಟಿರುತ್ತಾರೆ. ಊರ ಪ್ರಮುಖರನ್ನು ಕೈಮುಗಿದು ಸ್ತುತಿ ಮಾಡುತ್ತಾರೆ. ಹೆಂಗಸು ರಂಗದ ಸುತ್ತಲೂ ಡೋಲು ಬಾರಿಸುತ್ತ ತಿರುಗುತ್ತಾಳೆ. ಮಕ್ಕಳು ಆಗಾಗ ಲಾಗ ಹಾಕಿ ಪ್ರೇಕ್ಷಕರಿಂದ ಮೆಚ್ಚುಗೆ ಪಡೆಯುತ್ತಾರೆ.

ರಂಗದ ಮಧ್ಯದಲ್ಲಿ ಡೊಂಬರ ಯಜಮಾನ ಆಂಜನೇಯ ಹೆಸರಿನ ಮೇಲೆ ಕೈಮುಗಿದು ಆಟಪ್ರಾರಂಭಿಸುತ್ತಾನೆ: ನೆಟ್ಟ ಗಣೆಕಟ್ಟಿರುವ ಹಗ್ಗ, ಇಲ್ಲವೆ ತಂತಿಯ ಮೇಲೆ ಮಕ್ಕಳು ಸರಸರನೆ ನಡೆದಾಡುವುದು, ನೆಟ್ಟಗಣೆಯ ತುದಿಗೆ ಸರ್ರನೆ ಮೇಲೇರುವುದು ಮೇಲಿಂದಲೆ ಕೆಳಗಿಳಿಯುವುದು, ನಿಂತಲ್ಲಿಯೇ ಲಾಗ ಹಾಕುವುದು, ನಿಚ್ಚಣಿಕೆಯ ಮೇಲೇರುವುದು, ಮೇಲಿಂದಲೆ ಕೆಳಗೆ ಚಂಗನೆ ಜಗಿಯುವುದು ಇತ್ಯಾದಿ. ಯುವತಿಯರು ಮೈ ಮಣಿಸಿ ವಿವಿಧ ಕಸರತ್ತಿನ ಪ್ರದರ್ಶನ ಮಾಡುವರು. ಡೊಂಬ-ಡೊಂಬತಿ ಜೊತೆಗೂಡಿ ಕಬ್ಬಿಣದ ಸಲಾಕೆಯನ್ನು ಗಂಟಲಿನ ಕೆಳಗಡೆ ಹಚ್ಚಿ ಏಕಕಾಲಕ್ಕೆ ಎದಿರುಬದಿರು ನಿಂತು ಮಣಿಸುವುದು, ಕೈಯಲ್ಲಿ ಖಡ್ಗ ಹಿಡಿದು ತಿರುಗಿಸುವುದು, ಭರ್ಜಿಯನ್ನು ಮೇಲೆಸೆದು ನೆಲಕ್ಕೆ ಬೀಳುವ ಮುಂಚೆ ಹಿಡಿಯುವುದು, ಮೂರು-ನಾಲ್ಕು ಕಬ್ಬಿಣದ ಗುಂಡುಗಳನ್ನು ಮೇಲೆಸೆದು ಕೆಳಗೆ ಬೀಳದಂತೆ ಆಡುವುದು, ಸೀಸೆಯ ಮೇಲೆ ನಿಲ್ಲುವುದು, ಕೈಯಿಂದ ಸೀಸೆಗಳನ್ನು ಒಡೆಯುವುದು, ಒಂದು ಅಡಿ ವರ್ತುಳಾಕಾರದ ಕಬ್ಬಿಣದ ಬಳೆಯೊಳಗಿಂದ ಡೊಂಬ-ಡೊಂಬತಿಯರಿಬ್ಬರೂ ಏಕಕಾಲಕ್ಕೆ ಹೊರಬರುವುದು, ಚಕ್ಕಡಿಯ ಎರಡು ಗಾಲಿಗಳನ್ನು ಹೆಗಲಿಗೆ ಹಾಕಿಕೊಂಡು ಜೋರಾಗಿ ತಿರುಗುವುದು, ಹಲ್ಲಿನಿಂದ ಬಲರಾಮ ನೇಗಿಲನ್ನು ಎತ್ತುವುದು, ಡೊಂಬತಿಗೆ ಅಂಗಾತ ಮಲಗಿಸಿ ಅವಳ ಎದೆಯ ಮೇಲೆ ನಾಲ್ಕಾರು ಕಲ್ಲುಗಳನ್ನು ಇಟ್ಟು ಒಡೆಯುವುದು, ಚಪ್ಪಟೆ ಕಲ್ಲುಗಳನ್ನು ಕೈಯಿಂದ ಒಡೆಯುವುದು - ಹೀಗೆ ಹಲವಾರು ರೋಮಾಂಚಕ ಆಕರ್ಷಣೀಯ ಶಕ್ತಿಪ್ರದರ್ಶನಗಳನ್ನು ಜನರ ಮುಂದೆ ಪ್ರದರ್ಶಿಸಿ, ಜನ ಮೆಚ್ಚುಗೆ ಪಡೆಯುತ್ತಾರೆ. ಪ್ರತಿಯೊಂದು ಮಜಲಿನ ಸಮಯದಲ್ಲಿ ಯಜಮಾನನು ಡೋಲು ಬಾರಿಸುತ್ತ ವ್ಯಾಖ್ಯೆ ವಿವರಣೆ ಹೇಳುತ್ತಾನೆ. ಮಧ್ಯ ಮಧ್ಯದಲ್ಲಿ ಪ್ರೇಕ್ಷಕರಿಗೆ ಚಪ್ಪಾಳೆ ತಟ್ಟಲು ಹುರಿದುಂಬಿಸುತ್ತಾನೆ. ಆಟ ಮುಗಿಯುವ ಮುಂಚೆ ಮತ್ತೊಮ್ಮೆ ಆಂಜನೇಯನಿಗೆ ಕೈಮುಗಿದು ನಿಲ್ಲಿಸುತ್ತಾರೆ.

ಕುಟುಂಬದ ಯಜಮಾನನು ಡೋಲು ಬಾರಿಸುತ್ತ ಪ್ರೇಕ್ಷಕರ ಕಡೆಗೆ ದಾನ ಮಾಡುವಂತೆ ಕೈಮುಗಿಯುತ್ತಾನೆ. ಆಟದ ಆಕರ್ಷಕ ಹುಡುಗಿ ಅಥವಾ ಹುಡುಗ ಕೈಯಲ್ಲಿ ಪಾತ್ರೆಯನ್ನು ಹಿಡಿದುಕೊಂಡು ಪ್ರೇಕ್ಷಕರ ಮುಂದೆ ಒಡ್ಡುತ್ತಾರೆ. ಅವರಿಂದ ಬಂದ ಹಣ ಸಂಗ್ರಹಿಸಿಕೊಂಡು ತಮ್ಮ ಸಹಕುಟುಂಬ ಪರಿವಾರದೊಂದಿಗೆ ಮುಂದಿನ ಊರಿಗೆ ಪ್ರಯಾಣ ಬೆಳೆಸುತ್ತಾರೆ.

ಉಪಸಂಹಾರ

ಸರಕಾರದ ಯೋಜನೆ ಮತ್ತು ಈ ವೃಂದಗಳಿಗೆ ಸಿಗುವ ವಿವಿಧ ಸೌಲಭ್ಯಗಳು ರಾಜಧಾನಿಯಿಂದ ಅವರ ಮೂಲ ನೆಲೆಗಳಿಗೆ ಹರಿದು ಮುಟ್ಟಬೇಕು. ಕತ್ತಲ ಗವಿಯಾಗಿರುವ ಅವರ ಮನೆ ಮನಗಳ ಬಾಗಿಲು ತಟ್ಟಬೇಕು. ಅವರಲ್ಲಿ ತಮ್ಮತನದ ಅರಿವು ಮೂಡಿ, ತಮ್ಮ ವಿಶಿಷ್ಟ ಸಂಸ್ಕೃತಿಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತ ರಾಷ್ಟ್ರೀಯ ಜೀವನದ ಮುಖ್ಯ ಪ್ರವಾಹದಲ್ಲಿ ಅವರು ಸೇರಬೇಕು. ದಟ್ಟದಾರಿದ್ರ್ಯ, ಅಸಹಾಯಕತೆಗಳ ಮಧ್ಯದಲ್ಲೂ ಸಾಹಸ ದಿಟ್ಟತನಗಳಿಂದ ಬಾಳಿದ ಡೊಂಬರಲ್ಲಿ, ಸ್ವಾಭಿಮಾನ, ಶೋಷಣೆಗೀಡಾಗದ ಪ್ರಜ್ಞೆ ಮೂಡಿ, ಅವರು ಸ್ವಾವಲಂಬಿತನದಿಂದ ತಲೆಯೆತ್ತಿ ಬಾಳುವಂತಾಗಬೇಕು. ಬರಲಿರುವ ಆ ಮುಂಬೆಳಗಿಗಾಗಿ ನಿರೀಕ್ಷಿಸುತ್ತ, ಜೊತೆ ಜೊತೆಗೆ ನಡೆಯುತ್ತಿರುವ ಸಾಮಾಜಿಕ ಪರಿವರ್ತನೆಯ ವಿವಿಧ ಆಯಾಮಗಳಲ್ಲಿ ಪಾಲುಗೊಳ್ಳುವುದು.

*

ಗ್ರಂಥ ಋಣ

೧ ಡಾ ॥ ದೇವೇಂದ್ರಕುಮಾರ ಹಕಾರಿ; ಡೊಂಬರ ಸಂಸ್ಕೃತಿ, ೧೯೯೩.

೨ ಡಾ ॥ ಹರಿಲಾಲ್ ಪವಾರ; 'ಡೊಂಬರು' : ಅಲೆಮಾರಿ ಬದುಕಿನ ಒಳನೋಟ, ಸಂಯುಕ್ತ ಕರ್ನಾಟಕ (ಸಾಪ್ತಾಹಿಕ ಸೌರಭ), ೭.೬.೧೯೯೨

೩ Edgar Thurston; **Castes and Tribes of Southern India**, , Vol. II, 1975.

ಪ್ರೊ|| ಲಕ್ಷ್ಮಣ್ ತೆಲಗಾವಿ*

ಚಿತ್ರದುರ್ಗದ ಪ್ರಾಚೀನ ನಾಮ : ಮರುಪರಿಶೀಲನೆ

ಚಿತ್ರದುರ್ಗದ ಪ್ರಾಚೀನ ನಾಮ ಕುರಿತು ಈವರೆಗೆ ಮಂಡಿತವಾದ ಮುಖ್ಯ ನಿರ್ಣಯಗಳು ಎರಡು: ಒಂದು, ಡಾ. ಎಂ.ಎಂ. ಕಲಬುರ್ಗಿ ಅವರದು[೧]; ಇನ್ನೊಂದು, ಡಾ. ಎಂ. ಚಿದಾನಂದಮೂರ್ತಿ ಅವರದು.[೨] ಸ್ವಾರಸ್ಯಕರ ಸಂಗತಿಯೆಂದರೆ, 'ಚಿತ್ರದುರ್ಗ' ಎಂಬುದರ ಪ್ರಾಚೀನ ರೂಪ ಕುರಿತು ಈ ವಿದ್ವಾಂಸರೀರ್ವರೂ ಒಂದೇ ನಿರ್ಣಯಕ್ಕೆ ಬಂದಿರುವುದು.

" 'ಚಿತ್ತರಕಲ್ಲು' (>ಸಿದ್ಧರಕಲ್ಲು) ಹೆಸರಿನಿಂದಲೇ ಚಿತ್ರಕಲ್ಲು ಬಂದಿದೆಯೇ ಹೊರತು 'ಚಿಮ್ಮತ್ತನಕಲ್ಲು ' ಹೆಸರಿನಿಂದಲ್ಲ" ಎಂದು ಡಾ. ಕಲಬುರ್ಗಿಯವರು ನಿರ್ಣಯಿಸಿದ್ದರೆ, " 'ಚಿತ್ರ'ದ ಮೂಲ 'ಸಿದ್ಧರ' ಇರಬಹುದು; ಆಗ, 'ಚಿತ್ರದುರ್ಗ'ವು 'ಸಿದ್ಧರ + ಕಲ್ಲುಗಳ ದುರ್ಗ' ಆಗುತ್ತದೆ" ಎಂದು ಡಾ. ಚಿದಾನಂದಮೂರ್ತಿಗಳು ಸಾಧಿಸಿರುವರು.

'ಚಿತ್ರದುರ್ಗ' ಎಂಬುದು 'ಸಿದ್ಧರದುರ್ಗ' ಎಂಬುದರಿಂದ ನಿಷ್ಪನ್ನಗೊಂಡಿದೆಯೆನ್ನುವ ಈ ವಿದ್ವಾಂಸರೀರ್ವರ ನಿರ್ಣಯ ಸಮರ್ಥನೀಯವಲ್ಲ ಎಂಬುದನ್ನು; ಹಾಗೆಯೇ, 'ಚಿತ್ರದುರ್ಗ'ದ ನಿಷ್ಪತ್ತಿಯನ್ನು 'ಬೆಮ್ಮತ್ತನಕಲ್ಲು' ಎಂಬುದರಿಂದ ಸಾಧಿಸುವುದು ತಪ್ಪು ಮತ್ತು ಪ್ರಾಚೀನ 'ಚಿತ್ರದುರ್ಗ' ಹೆಸರಿನ ಮೊದಲ ಅಕ್ಷರ 'ಬೆ' ಅಲ್ಲ 'ಚಿ' ಎಂಬುದೇ ಸರಿ ಎಂಬ ವಾದಗಳು ಸಹಾ ತರ್ಕ ಸಮ್ಮತವಾದುವಲ್ಲ ಎಂಬುದನ್ನು ಈ ಪ್ರಬಂಧದಲ್ಲಿ ಸೋದಾಹರಣವಾಗಿ ನಿರೂಪಿಸಲು ಪ್ರಯತ್ನಿಸಿದೆ.

* * *

ಲಿಖಿತ ಆಕರಗಳ ಪೈಕಿ ಮೊತ್ತಮೊದಲ ದಾಖಲೆಗಳಾಗಿ ಶಾಸನಗಳು ಉಳಿದು ಬಂದಿದ್ದು, 'ಚಿತ್ರದುರ್ಗ'ದ ಪ್ರಾಚೀನ ಹೆಸರು 'ಬೆಂಮತ್ತೂರು' ಹಾಗೂ 'ಬೆಂಮಚನೂರು' ಎಂಬ ಉಲ್ಲೇಖಗಳನ್ನು ಹೊಂದಿರುವ ಶಾಸನಗಳ ಕಾಲ ೧೧ನೇ ಶತಮಾನ.[೩] ಇದಕ್ಕೂ ಪೂರ್ವದಲ್ಲಿ 'ಸೂಳ್ಗಲ್ಲು' ಎಂಬುದರ ವಿನಾ ಚಿತ್ರದುರ್ಗ ಬೆಟ್ಟ ಮತ್ತು ಪರಿಸರಕ್ಕೆ ಇದ್ದ ಹೆಸರು ಕುರಿತು ಅಧಿಕೃತ ದಾಖಲೆಗಳಿಲ್ಲ. 'ಸೂಳ್ಗಲ್ಲು' ಎಂಬುದು ಸಹಾ ಈಗಿನ ಚಿತ್ರದುರ್ಗ ಬೆಟ್ಟ ಪರಿಸರದ ಭಾಗವೊಂದಕ್ಕೆ ಇದ್ದ ಹೆಸರೆಂದು ಈಗಾಗಲೇ ದೃಢಪಟ್ಟಿದೆ. ಈ ದೃಷ್ಟಿಯಿಂದ, ಬೆಂಮತ್ತೂರು ಅಥವಾ ಬೆಂಮಚನೂರು ಎಂಬುದು ಶಾಸನದಲ್ಲಿ ಉಲ್ಲೇಖಗೊಳ್ಳುವ ಪೂರ್ವದಲ್ಲೆ ಈ ಪರಿಸರದಲ್ಲಿ ಈ ಹೆಸರಿನ ಆಡುರೂಪಗಳು ಪ್ರಚಲಿತವಿದ್ದಿರುವ ಸಾಧ್ಯತೆ ಇಲ್ಲದಿಲ್ಲ. ಹಾಗಾದರೆ, ಅವು ಯಾವ ರೂಪದಲ್ಲಿದ್ದಿರಬಹುದು? ಎಷ್ಟು ಹಳೆಯವಿದ್ದಿರಬಹುದು?

ಕ್ರಿಸ್ತಶಕ ೨ನೇ ಶತಮಾನದ ವರೆಗೆ ಚಿತ್ರದುರ್ಗದಲ್ಲಿ ಅಧಿಕಾರ ಸ್ಥಾಪಿಸಿದ್ದವರು ಶಾತವಾಹನ ಮಹಾರಥಿಗಳು. ಅವರ ಅವಧಿಯಲ್ಲಿ ಚಿತ್ರದುರ್ಗಕ್ಕೆ ಇದ್ದ ಹೆಸರಿನ ಬಗೆಗೆ ಲಿಖಿತ ಮಾಹಿತಿಯಿಲ್ಲ. ಆದರೆ ಚರಿತ್ರಪೂರ್ವ ಕಾಲದಿಂದಲೂ ಚಿತ್ರದುರ್ಗ ಬೆಟ್ಟ ಪರಿಸರ ಮಾನವನ ಆವಾಸಸ್ಥಾನವಾಗಿದ್ದು, ಶಾತವಾಹನರ ಆಳ್ವಿಕೆಯ ಹಂತದವರೆಗೆ ತಮ್ಮದೇ ನಾಗರಿಕತೆಯನ್ನು ರೂಪಿಸಿಕೊಂಡಿದ್ದುದಕ್ಕೆ ಪುರಾತತ್ವೀಯ ಆಧಾರಗಳಿವೆ. ಈ ಜನರೇ ಚಿತ್ರದುರ್ಗದ ಪ್ರಾಚೀನ ನಾಮದ ಸೃಷ್ಟಿಕರ್ತರೆನ್ನಲು ಅಡ್ಡಿಯಿಲ್ಲ.

ಸ್ಥಳನಾಮವೊಂದರ ಹುಟ್ಟುವಿಕೆಯಲ್ಲಿ ಪರಿಣಾಮ ಬೀರಿರಬಹುದಾದ ಆಯಾ ಪ್ರದೇಶದ ವೈಲಕ್ಷಣ್ಯಗಳನ್ನು ಗಮನಿಸಬೇಕಾದುದು ಅತ್ಯಂತ ಅವಶ್ಯ. ಬಟ್ಟಬಯಲಿನ ಸೀಮೆಗಳಲ್ಲಿಯ ಸ್ಥಳನಾಮ ಸೃಷ್ಟಿ ಪ್ರಕ್ರಿಯೆ ದಟ್ಟವಾದ ಕಾಡು-ಗುಡ್ಡಗಳಿಂದಾವೃತವಾದ ಪ್ರದೇಶಗಳಲ್ಲಿಯ ಸ್ಥಳನಾಮ ಸೃಷ್ಟಿ ಪ್ರಕ್ರಿಯೆಗಿಂತ ಭಿನ್ನವಾದುದು. ಈವರೆಗೆ ನಡೆದಿರುವ ಸ್ಥಳ ಮತ್ತು ವ್ಯಕ್ತಿನಾಮಗಳ ಅಧ್ಯಯನಗಳು ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.[೪] ಬೃಹತ್ ಗುಂಡುಗಳಿಂದ ಆವೃತಗೊಂಡು ವಿಸ್ತಾರವಾಗಿ ಹರಡಿರುವ ಚಿತ್ರದುರ್ಗ ಬೆಟ್ಟ ಪರಿಸರವನ್ನು ಸ್ಥಳನಾಮ ಅಧ್ಯಯನದ ದೃಷ್ಟಿಯಿಂದ ಈ ಹಿನ್ನೆಲೆಯಲ್ಲಿ ನೋಡುವುದು ಸೂಕ್ತ. ಪ್ರಸ್ತುತ ಪ್ರಬಂಧದಲ್ಲಿ ಭೂವೈಜ್ಞಾನಿಕ ಮತ್ತು

* ಮುಖ್ಯಸ್ಥರು, ಚರಿತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಕಮಲಾಪುರ ೫೮೩ ೨೨೧

ಪುರಾತತ್ತ್ವೀಯ ಸಂಶೋಧನೆಗಳಿಂದ ಶ್ರುತಪಟ್ಟಿರುವ ಸಂಗತಿಗಳನ್ನು ಆಧರಿಸಿ ಚಿತ್ರದುರ್ಗ ಪ್ರಾಚೀನ ನಾಮ ಕುರಿತ ಜಿಜ್ಞಾಸೆಯನ್ನು ಚರ್ಚಿಸಲು ಪ್ರಯತ್ನಿಸಿದೆ.

* * *

೧. ಮೊದಲನೆಯದಾಗಿ, ಭೂವೈಜ್ಞಾನಿಕ ಶೋಧನೆಗಳ ಪ್ರಕಾರ, ನೈಸರ್ಗಿಕವಾಗಿ ಪ್ರಪಂಚದ ಕೇವಲ ಒಂಬತ್ತು ಭೂವಲಯಗಳಿಗೆ ಸೀಮಿತವಾದ ತೀರಾ ಹಳೆಯ ಶಿಲೆ ಚಿತ್ರದುರ್ಗದಲ್ಲಿ ಕಂಡುಬರುತ್ತದೆ.[೫] ಚಿತ್ರದುರ್ಗ ಉಪವರ್ಗವು ಧಾರವಾಡ ಶಿಲಾಸ್ತೋಮದ ಅತ್ಯಂತ ಕಿರಿಯ ಶಿಲಾವರ್ಗವಾಗಿದ್ದು, ಇದರ ಜಲಜಶಿಲಾ ಸಮುದಾಯ ಅಗ್ನಿಶಿಲೆಗಳೊಡಗೂಡಿ ಚಲಿತವಲಯ (ಮೊಬೈಲ್ ಬೆಲ್ಟ್) ಆಗಿದೆಯೆಂದು ವ್ಯಕ್ತ ಪಡುತ್ತದೆ. ಚಿತ್ರದುರ್ಗ ಬೆಟ್ಟ ಪಂಕ್ತಿಗಳಲ್ಲಿ ಸರ್ವೇ ಸಾಧಾರಣ ವಾಗಿ ಕಂಡುಬರುವ ಶಿಲೆಯೆಂದರೆ ಗ್ರಾನೈಟ್ ಕಣಶಿಲೆ.

ಭೂವಿಜ್ಞಾನಿಗಳು ರೇಡಿಯೊ ವಿಕಿರಣ ಧಾತುಗಳಿಂದ ಸ್ಪಷ್ಟಪಡಿಸಿಕೊಂಡಿರುವಂತೆ, ಚಿತ್ರದುರ್ಗ ಕಣಶಿಲೆಯ ವಯಸ್ಸು ೨೬೦ ಕೋಟಿ ವರುಷಗಳು. ೧೯೦೫ರಲ್ಲಿ ಮೈಸೂರು ಭೂಗರ್ಭ ವಿಜ್ಞಾನ ಪರಿವೀಕ್ಷಣ ಇಲಾಖೆಯ ಸಂಪತ್ತೈಯಂಗಾರ್ ಅವರು ಶ್ರುತಪಡಿಸಿದ ಸಿದ್ಧಾಂತದ ಪ್ರಕಾರ, ಚಿತ್ರದುರ್ಗ ಶಿಲಾಪೇರಿಕೆ 'ಜಲಜಶಿಲಾ ಸಂಚಯನ'ದಿಂದ ಉಂಟಾಗಿದೆ. ಈ ವಿನೂತನ ಸಿದ್ಧಾಂತ ಕರ್ನಾಟಕ ಭೂ ಇತಿಹಾಸಕ್ಕೆ ಒಂದು ಹೊಸ ತಿರುವು ನೀಡಿತಲ್ಲದೆ, ಭೂ ಇತಿಹಾಸಜ್ಞರಲ್ಲಿ ಹೊಸದೃಷ್ಟಿಯನ್ನೇ ಬೆಳೆಸಿತು. ಸಂಪತ್ತೈಯಂಗಾರ್ ಅವರ 'ಜಲಜಶಿಲೋದ್ಭವ ತತ್ವ'ವನ್ನು ಈಚಿನ ನೂರಾರು ಭೂವಿಜ್ಞಾನಿಗಳು ಸಮರ್ಥಿಸುವುದರೊಡನೆ ಇದಕ್ಕೆ ಹೊಸ ಸಾಕ್ಷ್ಯಗಳನ್ನು ಒದಗಿಸಿರುವರು.

ಜಲಜಶಿಲಾಸಂಚಯನ ಸಿದ್ಧಾಂತವು ಚಿತ್ರದುರ್ಗ ಜಿಲ್ಲೆ ೨೬೦ ಕೋಟಿ ವರುಷಗಳ ಹಿಂದೆ ಮಹಾಸಾಗರ ಅಥವಾ ಸಮುದ್ರದ ಕೆಳಭಾಗವಾಗಿದ್ದಿತೆಂಬುದನ್ನು ಹಾಗೂ ಈ ಜಿಲ್ಲೆಯ ಶಿಲೆಗಳಾದ ಮರಳುಶಿಲೆ, ಪೆಂಡಿಶಿಲೆ, ಸುಣ್ಣಶಿಲೆ ಮತ್ತು ಜೇಡುಶಿಲೆಗಳು ಸಾಗರ ತಳದ ಮಹಾಕಂದರಗಳಲ್ಲಿ ಸಂಚಯಗೊಂಡುವೆಂಬುದನ್ನು ಮೊತ್ತಮೊದಲಿಗೆ ಬೆಳಕಿಗೆ ತಂದಿತು. ಇದನ್ನು 'ಚಿತ್ರದುರ್ಗ ಪದರುಶಿಲಾವಲಯ' ಎಂದು ಕರೆಯಲಾಯಿತು. ಇದು ಮುಖ್ಯವಾಗಿ ಅಗ್ನಿಶಿಲೆ, ರೂಪಾಂತರ ಶಿಲೆ ಹಾಗೂ ಜಲಜಶಿಲೆಗಳಿಂದ ಕೂಡಿರುವಂಥಾದ್ದು. ಈ ವಲಯ ೨೦ ರಿಂದ ೨೫ ಕಿ.ಮೀ. ಅಗಲವಾಗಿ ಹಾಗೂ ಸುಮಾರು ೩೦ ರಿಂದ ೪೦ ಕಿ.ಮೀ. ಆಳದಷ್ಟು ಮಂದವಾಗಿ ಇದೆ. ಹಾಗೆಯೇ, ಇದು ಸುಮಾರು ೫೦ ಕಿ.ಮೀ. ಉದ್ದವಿದ್ದು, ಚಿತ್ರದುರ್ಗದಿಂದ ಗದಗ್‌ವರೆಗೆ ಹಾಗೂ ದಕ್ಷಿಣಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವರೆಗೆ ಒಂದೇ ತೆರನಾದ ಶಿಲಾಓಟವುಳ್ಳ ಹಲವು ವಿಧದ ಪದರುಶಿಲೆಗಳಿಂದ ಕೂಡಿದೆ. ಜಲಜಶಿಲೆಯೇ ಹೆಚ್ಚಾಗಿರುವ ಈ ವಲಯದಲ್ಲಿ ಸುಣ್ಣಶಿಲೆ, ಕಬ್ಬಿಣಯುತ ಬೆಣಚುಶಿಲೆ, ಜೇಡುಶಿಲೆ, ಪೆಂಟೆಶಿಲೆ, ಮರಳು ಶಿಲೆಗಳು ಹೆಚ್ಚಾಗಿ ಕಂಡುಬರುತ್ತವೆ. ಚಿತ್ರದುರ್ಗ ಪರಿಸರದ ಶಿಲಾವರ್ಗ ಸಹಾ ಇದೇ ತೆರನಾದುದು.

ಗಮನಾರ್ಹ ಅಂಶವೆಂದರೆ, ಚಿತ್ರದುರ್ಗದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿನ್ನದ ಸಿರಗಳು ಕಂಡುಬಂದಿವೆ. ಮುಖ್ಯವಾಗಿ, ಚಿತ್ರದುರ್ಗ ಬೆಟ್ಟ ಪರಿಸರದ ಇಂಗಳದಹಾಳು ಮತ್ತು ಕುಂಚಿಗನ ಹಾಳು ಪ್ರದೇಶಗಳು ಅಗ್ನಿಶಿಲೆಗಳಲ್ಲಿಯ ಬೆಣಚು ಸಿರಬಳ್ಳಿಗಳ ವಲಯವಾಗಿದ್ದು, ಇಲ್ಲಿ ತಾಮ್ರದ ಅದಿರು ಮತ್ತು ಚಿನ್ನವನ್ನು ಗಣಿ ಮಾಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಲಾಗಾಯ್ತಿನಿಂದಲೂ ಜನಪದರು ಚಿತ್ರದುರ್ಗ ಬೆಟ್ಟ ಪರಿಸರವನ್ನು 'ಚಿನ್ನದದುರ್ಗ'ವೆಂತಲೇ ಕರೆಯುತ್ತಾ ಬಂದಿರುವುದು ಗಮನಾರ್ಹ. ಉದಾ.- "ಚಿತ್ತರದ ಕಲ್ಲು ಎಂಬೋದು ಚಿನ್ನದಕೋಟೆ; ಚಿನ್ನ ಮುರಿದಾರೆ ಚಿನ್ನ ಚಿಗರೋದು; ಚಿನ್ನ ಮುರಿದರೆ ಚಿತ್ತರದಕಲ್ಲು,"[೬] ಇತ್ಯಾದಿ. ಈಚಿನ ಸಾಹಿತ್ಯ ಕೃತಿ 'ಮರುಳಸಿದ್ಧಕಾವ್ಯ' (ದೇಪಕವಿ ಕೃತ)ದಲ್ಲೂ ಚಿತ್ರದುರ್ಗ ಬೆಟ್ಟವನ್ನು 'ಚಿನ್ನದಗಿರಿ ಪರ್ವತ'ವೆಂತಲೇ ಸಂಬೋಧಿಸಿದೆ. ಇವುಗಳ ಆಶಯ ಏನೇ ಇದ್ದರೂ ಚಿತ್ರದುರ್ಗ ದೊಡನೆ 'ಚಿನ್ನ'ವನ್ನು ಕಲ್ಪಿಸಿ ಗುರುತಿಸಿರುವುದು ಮುಖ್ಯವೆನಿಸುತ್ತದೆ.

ಈ ದೃಷ್ಟಿಯಿಂದಲೂ ಚಿತ್ರದುರ್ಗ ಪರಿಸರದಲ್ಲಿ ನಡೆದ ಗಣಿಗಾರಿಕೆ ಪ್ರಸ್ತುತ ಅಧ್ಯಯನಕ್ಕೆ ಮಹತ್ವದ ಹಿನ್ನೆಲೆ ಒದಗಿಸುವಂಥಾದ್ದು. 'ಚಿನ್ನದ ಬೀಡು' ಎಂದೇ ಹೆಸರಾದ ಕೋಲಾರ ಹಾರನ್ ಬ್ಲೆಂಡ್ ಪದರಶಿಲೆಯಿಂದೊಡಗೂಡಿದ ಬೂದು ಬಣ್ಣದವು. ಹಾಗೆಯೇ, ಕ್ಲೋರೈಡಿನಿಂದ ಕೂಡಿದ ಹಸಿರುಕಲ್ಲು ಗಳೊಡನಿರುವ ಬಿಳುಪು ಬೆಣಚಿನ ಸಿರಗಳು ಶಿವಮೊಗ್ಗ ಮತ್ತು ಚಿತ್ರದುರ್ಗ ಪ್ರದೇಶಗಳಲ್ಲಿ ಹರಡಿದ್ದು, ಈ ಎರಡು ಬಗೆಯ ಬೆಣಚಿನಲ್ಲಿಯೂ ಬಂಗಾರ ಸೇರಿರುವುದು ವಿಶೇಷ. ಈ ಕಾರಣದಿಂದ ಕೋಲಾರದ ಬಂಗಾರದ ಸಿರಗಳ ವಿಸ್ತಾರವನ್ನು ಗುರುತಿಸಲು ಬಹು ಹಿಂದೆಯೇ ಗಣಿ ಇಂಜಿನೀಯರರು ಮತ್ತು ಭೂಗರ್ಭಶಾಸ್ತ್ರಜ್ಞರು ಈ ಭಾಗಗಳಲ್ಲೆಲ್ಲ ಸಂಚರಿಸಿದ್ದು ದಾಖಲುಗೊಂಡಿದೆ. ಉದಾ.- ೧೮೮೭ ರಲ್ಲಿ ರಾಬರ್ಟ್ ಬ್ರೂಸ್‌ಫುಟ್ ಹಾಗೂ ೧೮೮೮ ರಲ್ಲಿ ಕೋಲಾರದ ಬಂಗಾರದ ಅದುರಿನ ಕ್ಷೇತ್ರದ ವಿಸ್ತಾರವನ್ನು ಶೋಧಿಸಲು ಮೆರ್ವಿನ್ ಸ್ಮಿತ್ ಎಂಬ ಗಣಿ ಇಂಜಿನೀಯರೂ ಇಲ್ಲಿಗೆ ಬಂದಿದ್ದರು.

ಒಟ್ಟಿನಲ್ಲಿ, ಬಂಗಾರ ಸೇರಿರುವ ಬೆಣಚಿನ ಸಿರಗಳು ಚಿತ್ರದುರ್ಗ ಪರಿಸರದಲ್ಲೂ ಕಂಡುಬಂದಿರುವುದು; ಹಾಗೂ ಇಂಗಳದಹಾಳು ಮರಡಿಯ ಬೋಳುಗುಡ್ಡಗಳನ್ನು ಈ ಬಗೆಯ ಸಿರಗಳ ಕಾರಣದಿಂದಾಗಿ 'ಬೆಳ್ಳಿಗುಡ್ಡದ ಸಾಲು' ಎಂದು ಗುರುತಿಸಿರುವುದು ಗಮನಾರ್ಹ. ಈಚೆಗೆ ಇಲ್ಲಿ ವಿಪುಲವಾಗಿ ಚಿನ್ನ ದೊರೆಯುತ್ತಿರುವುದೂ ವಿಶೇಷ. ಭೂವಿಜ್ಞಾನಿಗಳು ಕೈಗೊಂಡ

ಅಧ್ಯಯನಗಳ ಪ್ರಕಾರ, ಇಂಗಳದಹಾಳು ಪರಿಸರದಲ್ಲಿ ಕ್ರಿ.ಪೂ. ೩ ಅಥವಾ ೪ನೇ ಶತಮಾನದಿಂದಲೇ ಮಾನವ ತನ್ನ ಬದುಕನ್ನು ಆರಂಭಿಸಿದ್ದ.[೭] ಮಾನವ ನಿರ್ಮಿಸಿದ ಕೆಲವು ಉಪಕರಣಗಳನ್ನು ಬಳಸುವ ಕಾರ್ಯ ಆರಂಭಗೊಂಡುದು ಶಾತವಾಹನರ ಆಳ್ವಿಕೆಯಲ್ಲಿ; ಅಂದರೆ ಕ್ರಿ.ಪೂ. ಸು. ೨೩೦ ರಿಂದ ಕ್ರಿ.ಶ. ೨೨೦ರ ಅವಧಿಯಲ್ಲಿ.[೮] ಅಂದರೆ, ಇಲ್ಲಿಗೆ ೨೦೦೦ ವರುಷಗಳ ಹಿಂದೆಯೇ ಚಿತ್ರದುರ್ಗ ಪರಿಸರದಲ್ಲಿ ಗಣಿಗಾರಿಕೆ ಆರಂಭಗೊಂಡಿದ್ದಿತು. ಚಿತ್ರದುರ್ಗ ಬೆಟ್ಟ ಮತ್ತು ಚಂದ್ರವಳ್ಳಿಗಳಲ್ಲಿ ದೊರೆತ ತಾಮ್ರದ ಆಭರಣ, ಇತ್ಯಾದಿ ವಸ್ತುಗಳು ಇಂಗಳದಹಾಳು ಗಣಿಯಲ್ಲಿ ದೊರೆತ ತಾಮ್ರದಿಂದಲೇ ತಯಾರಿಸಿರಬಹುದೆಂಬ ಅಭಿಪ್ರಾಯವೂ ಇದೆ. ಅಲ್ಲದೆ, ಬಂಗಾರದ ಶೋಧನೆಗೆಂದೇ ತೋಡಲಾದ ಗಣಿಗಳು ಚಿತ್ರದುರ್ಗ ಪ್ರದೇಶದಲ್ಲೂ ಕಂಡುಬಂದಿದ್ದು, ಇವುಗಳ ತೋಡುವಿಕೆಯಲ್ಲಿ ನೂರಾರು ವರುಷಗಳ ಪರಿಶ್ರಮದ ಲಕ್ಷಣಗಳು ಗೋಚರಿಸಿವೆಯೆಂತಲೂ ಭೂವಿಜ್ಞಾನಿಗಳು ನಿರ್ಣಯಿಸಿರುವರು. ಇಷ್ಟಲ್ಲದೆ, ಗಣಿ ಕಾರ್ಮಿಕರು ಈ ಪರಿಸರದ ಮೂಲನಿವಾಸಿಗಳೇ ಆಗಿರಬಹುದೆಂಬ ಅಭಿಪ್ರಾಯವೂ ಇದೆ.

೨. ಎರಡನೆಯದಾಗಿ, ಪುರಾತತ್ತ್ವೀಯ ಸಂಶೋಧನೆಗಳು ಚಿತ್ರದುರ್ಗದ ಪ್ರಾಚೀನ ನಾಮದ ಬಗೆಗೆ ನೀಡುವ ಸುಳಿವನ್ನು ಇಲ್ಲಿ ಪರಿಶೀಲಿಸಬಹುದು. ಚರಿತ್ರಪೂರ್ವ ಎಡೆಗಳನ್ನು ಜನಸಾಮಾನ್ಯರು ಸಾಮಾನ್ಯವಾಗಿ ದೆವ್ವ, ರಾಕ್ಷಸ, ಭೂತ, ಭೇತಾಳಗಳ ಆವಾಸಸ್ಥಾನಗಳೆಂಬುದಾಗಿ ಗುರುತಿಸುವುದುಂಟು. ವಾಸ್ತವದಲ್ಲಿ, ಇವು ಪುರಾತತ್ತ್ವ ನಿವೇಶನಸಂಬಂಧಿ ಎಡೆಗಳೆನ್ನುವುದು ಗಮನಾರ್ಹ. ಚಿತ್ರದುರ್ಗ ಬೆಟ್ಟ ಮತ್ತು ಪರಿಸರದಲ್ಲಿ ನೆಲೆಗೊಂಡಿರುವ ಇಂಥಾ ಎರಡು ಎಡೆಗಳನ್ನು ಇಲ್ಲಿ ಉದಾಹರಿಸುವುದರೊಡನೆ ಮೇಲಿನ ಅಂಶವನ್ನು ದೃಢೀಕರಿಸಬಹುದು.

ಮೊದಲನೆಯದಾಗಿ, ಕುಂಚಿಗನಹಾಳು ಗ್ರಾಮಕ್ಕೆ ಹೊಂದಿಕೊಂಡಂತೆ ಇರುವ ತಗ್ಗು ಪ್ರದೇಶವನ್ನು ಗ್ರಾಮಸ್ಥರು 'ದೆವ್ವನಕೆರೆ' ಅಥವಾ 'ದೆವ್ವದಕೆರೆ' ಎನ್ನುವುದುಂಟು. ಸುಮಾರು ೫೦ ಎಕರೆ ಅಚ್ಚುಕಟ್ಟು ಹೊಂದಿರುವ ಈ ಪ್ರಾಚೀನ ಕೆರೆಯಲ್ಲಿ ಈಗ ಸಾಗುವಳಿ ಮಾಡಲಾಗುತ್ತಿದೆ. ಈಗಿನ ರಾಷ್ಟ್ರೀಯ ಹೆದ್ದಾರಿಯಿಂದ ಗ್ರಾಮಕ್ಕೆ ಹೊಂದಿಕೊಂಡಿರುವ ನಾಯಕ ಅರಸರ ಕಾಲದ ಬುರುಜು(ಬುರುಜಾಲು)ವರೆಗೆ ಈ ಕೆರೆಯ ವಿಸ್ತಾರವಿದೆ. ಈ ದೆವ್ವದಕೆರೆಯ ಹೆಚ್ಚುವರಿ ನೀರು ಸಮೀಪದಲ್ಲೆ ನಿರ್ಮಾಣಗೊಂಡಿರುವ ನಾಯಕ ಅರಸರ ಕಾಲದ ಕಂಬವ್ವನಕೆರೆಗೆ ಹರಿಯುತ್ತದೆ. ದೆವ್ವದಕೆರೆಯ ಪಕ್ಕದಲ್ಲಿ ಪ್ರಾಕ್ಚಾರಿತ್ರಿಕ ಶಿಲಾವೃತ್ತ(ಗುತ್ತಿ)ಗಳು ವಿಪುಲವಾಗಿ ಕಂಡುಬರುತ್ತವೆ. ಹಾಗೆಯೇ, ಈ ಗುತ್ತಿಗಳ ಸಮೀಪದಲ್ಲಿ, ಅಂದರೆ ಕುಂಚಿಗನಹಾಳು ಗ್ರಾಮಕ್ಕೆ ಹೊಂದಿಕೊಂಡಿರುವ ಮಟ್ಟಿಯ ಬಂಡೆಗಳ ಮೇಲೆ ಇದೇ ಅವಧಿಗೆ ಸೇರಿದ ಪ್ರಾಣಿ ಮತ್ತು ಮಾನವರ ಕೊರೆಚಿತ್ರಗಳೂ ಸಾಕಷ್ಟು ಸಂಖ್ಯೆಯಲ್ಲಿ ಇರುವುದನ್ನು ನೋಡಬಹುದು.

ಎರಡನೆಯದಾಗಿ, ಕುಂಚಿಗನಹಾಳು ಕಣಿವೆ ಮಾರ್ಗವಾಗಿ ಮದಕರಿಪುರಕ್ಕೆ ಹೋಗುವ ಬಂಡಿಜಾಡು ಅಥವಾ ಹಳ್ಳದ ಹಾದಿಯಲ್ಲಿರುವ ಮಟ್ಟಿಯ ಇಳಿಜಾರಿನಲ್ಲಿ ಪ್ರಾಕ್ಚಾರಿತ್ರಿಕ ಕಾಲದ ನಿಲುವುಗಲ್ಲು (ಮೆನ್‌ಹಿರ್)ಗಳ ಸಾಲು ಇದ್ದು, ಈ ದಿನ್ನೆಯನ್ನು ಗ್ರಾಮೀಣರು 'ಭೂತಪ್ಪನ ದಿನ್ನೆ' ಎನ್ನುವುದುಂಟು. ಇದು ಸಹಾ ಅತ್ಯಂತ ಪ್ರಾಚೀನ ಎಡೆಯೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿಯೇ ಸಮೀಪದಲ್ಲಿರುವ ಗುಡ್ಡವೊಂದಕ್ಕೆ ಭೂತಪ್ಪನಗುಡ್ಡವೆಂಬ ಹೆಸರಿರುವುದು ಗಮನಾರ್ಹ.

ಚಿತ್ರದುರ್ಗ ಬೆಟ್ಟ ಪರಿಸರಕ್ಕೂ ಇದೇ ಬಗೆಯ ಕುತೂಹಲಕಾರಿ ಐತಿಹ್ಯವೊಂದನ್ನು ಆರೋಪಿಸಲಾಗಿದೆ. ಈ ಐತಿಹ್ಯದ ಪ್ರಕಾರ, ಬ್ರಹ್ಮರಾಕ್ಷಸನೊಬ್ಬ ಬೆಟ್ಟದ ಮೇಲೆ ವಾಸಿಸುತ್ತಿದ್ದು, ಅವನು ಚಂದ್ರವಳ್ಳಿಯನ್ನು ಅನೇಕ ಸಲ ನಾಶಪಡಿಸಿದ.[೯] ವಿದ್ವಾಂಸರು ಅಭಿಪ್ರಾಯ ಪಡುವಂತೆ, ಬ್ರಹ್ಮರಾಕ್ಷಸ ಪದವು 'ಬೌದ್ಧಪಂಡಿತ' ಎಂಬುದಕ್ಕೆ ಸಮಾನಾರ್ಥವುಳ್ಳದ್ದು.[೧೦] ಚಂದ್ರವಳ್ಳಿಯಲ್ಲಿ ಕದಂಬರ ಕಾಲ ಆರಂಭವಾಗುವವರೆಗೆ ನೆಲಸಿದ್ದ ಬೌದ್ಧ ಭಿಕ್ಷುಗಳು ಮಯೂರವರ್ಮನು ವೇದಮತೀಯರಿಗೆ ನೀಡಿದ ಪೋಷಣೆ-ಪ್ರೋತ್ಸಾಹಗಳಿಂದ ತಮ್ಮ ನೆಲೆಯನ್ನು ಕಳೆದುಕೊಂಡರು. ಅವರ ವಾಸಸ್ಥಳವು ಬ್ರಹ್ಮರಾಕ್ಷಸನ ಕಲ್ಲು ಎಂದಾಗಿ, ಅದು ಅಪಭ್ರಂಶವಾಗಿ ಬೆಮ್ಮತ್ತನಕಲ್ಲು ಎಂದಾಗಿರ ಬೇಕೆಂದು ಅಭಿಪ್ರಾಯಪಡಲಾಗಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಹೇಳುವಂತೆ, ಬ್ರಹ್ಮರಾಕ್ಷಸ ಶಬ್ದದಲ್ಲಿ ನಿಜವಾದ ಚರಿತ್ರೆ ಅಡಗಿದೆ.[೧೧] ಅವರು ಭಾವಿಸಿದಂತೆ, ಬೆಟ್ಟದ ತುದಿಯಲ್ಲಿ ಇದ್ದ ರಾಕ್ಷಸನ ಹೆಸರು ಬೆಮ್ಮಂತ; ಬ್ರಹ್ಮಹತ್ಯಾ ರಾಕ್ಷಸನೇ ಬೆಮ್ಮಂತ ರಾಕ್ಷಸನಾಗಿರಬಹುದು.[೧೨]

ಇಲ್ಲಿ ಅವಶ್ಯ ಗಮನಿಸಬೇಕಾದ ಸಂಗತಿಯೆಂದರೆ, ಚಿತ್ರದುರ್ಗದ ಪ್ರಾಚೀನ ನಾಮದ ಮೂಲವನ್ನು ನಿರ್ಧರಿಸುವಲ್ಲಿ ಬ್ರಹ್ಮರಾಕ್ಷಸ-ಬೆಮ್ಮಂತರ ಕಲ್ಪನೆಯನ್ನು ಸುಲಭವಾಗಿ ತಳ್ಳಿಹಾಕಲಾಗದು ಎಂಬುದು.

ಇನ್ನು ಚಾರಿತ್ರಿಕವಾಗಿ ನೋಡುವುದಾದರೆ, ಕ್ರಿ. ಶ. ಸು. ೯-೧೦ನೇ ಶತಮಾನದವರೆಗೆ ಅಂದರೆ ಬಾದಾಮಿ ಮತ್ತು ಕಲ್ಯಾಣದ ಚಾಲುಕ್ಯರ ಪ್ರಭಾವ ಆಗತೊಡಗುವವರೆಗೆ, ಚಿತ್ರದುರ್ಗ ಬೆಟ್ಟ ಪರಿಸರ ನಾಥಪಂಥದವರ ಅಥವಾ ರಹಸ್ಯ ತಾಂತ್ರಿಕಪಂಥದವರ ನೆಲೆಯೆನಿಸಿದ್ದಿತು. ರಸವಿದ್ಯೆಯಲ್ಲಿ ಪರಿಣತರಾದ 'ರಸಾಸಿದ್ಧ'ರೇ ಇವರೆಂದು ಭಾವಿಸಲಾಗುತ್ತದೆ. ಇವರ ಕೆಲವು ನಿಗೂಢ ಚಟುವಟಿಕೆಗಳ ಬಗೆಗೆ ಆಗಿನ ಜನರಲ್ಲಿ ಯಾವ ಭಾವನೆ ಇದ್ದಿತೋ ತಿಳಿಯದು. ಪ್ರಾಯಶಃ ಅವರ ದೃಷ್ಟಿಯಲ್ಲಿ ಈ ರಸಾಸಿದ್ಧರು ಭೂತಗಳೋ ಬ್ರಹ್ಮರಾಕ್ಷಸರೋ ಆಗಿದ್ದಿರಬಹುದು! ಈ ರಸಾಸಿದ್ಧರು (ಏಳುಮಂದಿ ಸಿದ್ಧರು?) ಸುಮಾರು ೧೬ನೇ ಶತಮಾನದವರೆಗೂ ಬೆಟ್ಟದಲ್ಲಿ ನೆಲಸಿದ್ದರೆಂದು ಚಿತ್ರದುರ್ಗ ಚರಿತ್ರೆ ಕುರಿತ ದಾಖಲೆಗಳು ಸೂಚಿಸುತ್ತವೆ.

* * *

ಹಿಂದೆಯೇ ಹೇಳಿದಂತೆ, ಚಿತ್ರದುರ್ಗದ ಪ್ರಾಚೀನ ನಾಮದ ಮೊದಲ ಅಕ್ಷರ ಕುರಿತು ವಿಚಾರಮಾಡಿರುವ ವಿದ್ವಾಂಸರು, ಈ ಮೂಲ ಹೆಸರಿನ ಮೊದಲ ಅಕ್ಷರ 'ಬೆ' ಅಲ್ಲ 'ಚಿ' ಎಂದು ವಾದಿಸಿದ್ದಾರೆ. ಇಂಥಾ ವಾದವನ್ನು ಮಂಡಿಸಿರುವವರಲ್ಲಿ ಡಾ. ಎಂ.ಎಂ. ಕಲಬುರ್ಗಿ[೧೩] ಮತ್ತು ಬಿ. ರಾಜಶೇಖರಪ್ಪ ಅವರು ಮುಖ್ಯರು.[೧೪] ಈ ಅಭಿಪ್ರಾಯವನ್ನು ಬೆಂಬಲಿಸಿದ್ದಾರೆ ಡಾ.ಎಂ. ಚಿದಾನಂದಮೂರ್ತಿ.[೧೫]

ಶಾಸನಗಳನ್ನು ಮತ್ತು ಹಸ್ತಪ್ರತಿಗಳನ್ನು ಓದುವಾಗ ಅನೇಕ ವಿದ್ವಾಂಸರು ಬೆ, ಚಿ ಗಳಲ್ಲಿ ಪರಸ್ಪರ ಗೊಂದಲಮಾಡಿಕೊಳ್ಳುತ್ತಾರೆಂದು; ಈ ಅಕ್ಷರಸಾದೃಶ್ಯಭ್ರಾಂತಿ ವಿದ್ವಾಂಸರನ್ನು ದಾರಿ ತಪ್ಪಿಸಿದೆಯೆಂದು ಈ ವಿದ್ವಾಂಸರು ಅಭಿಪ್ರಾಯಪಟ್ಟಿರುವರು. ಚಿತ್ರದುರ್ಗ ಪ್ರದೇಶದ ಕನ್ನಡ ಶಾಸನಗಳಲ್ಲಿ ಬಿ-ಭೆ-ಬೆ-ಚಿ ಗಳಲ್ಲಿ ಇರುವ ದಟ್ಟ ಸಾದೃಶ್ಯ ಮತ್ತು ಅವುಗಳಲ್ಲಿರುವ ಸೂಕ್ಷ್ಮ ಅಂತರಗಳನ್ನು ಕುರಿತು ಬಿ. ರಾಜಶೇಖರಪ್ಪನವರು ವಿವೇಚಿಸಿರುವರು.

ಆದರೆ ಶಾಸನಗಳ ಬೆಂಮತ್ತನೂರನಾಡು ಎಂಬುದೇ ಇಂದಿನ ಚಿತ್ರದುರ್ಗ ಎಂಬ ಹೆಸರಿನ ಮೂಲರೂಪವೆಂಬುದನ್ನು ಸಾಧಾರವಾಗಿ ನಿರೂಪಿಸಲೆತ್ನಿಸಿದ್ದಾರೆ ಪಿ.ವಿ. ಕೃಷ್ಣಮೂರ್ತಿ.[೧೬] ಕನ್ನಡ ಲಿಪಿಗಳ ಬೆಳವಣಿಗೆಯ ಕ್ರಮವನ್ನು ಪರಿಶೀಲಿಸಿದರೆ, ಕ್ರಿ.ಶ. ಸು. ೧೨ನೇ ಶತಮಾನಕ್ಕಿಂತ ಹಿಂದಿನ ಶಾಸನಗಳಲ್ಲಿ 'ಚಿ' ಮತ್ತು 'ಬೆ' ಅಕ್ಷರಗಳನ್ನು ಕಿಂಚಿತ್ತೂ ಸಂಶಯಕ್ಕೆಡೆಯಿಲ್ಲದಂತೆ ಗುರುತಿಸಬಹುದು; ಆದರೆ ಈ ಸಮಸ್ಯೆಯನ್ನು ಕುರಿತು ವಿಚಾರ ಮಾಡಿರುವ ವಿದ್ವಾಂಸರು ಈ ಸಂಬಂಧದಲ್ಲಿ ಗಮನಿಸಿರುವುದು ಕ್ರಿ.ಶ. ೧೨೮೦ರ ನಂತರದ ಕಾಲಕ್ಕೆ ಸೇರಿದ ಶಾಸನಗಳನ್ನು ಮಾತ್ರ; ಚಿತ್ರದುರ್ಗ ಪ್ರಾಚೀನ ನಾಮದ ಮೊದಲ ಅಕ್ಷರ 'ಬೆ' ಅಲ್ಲ 'ಚಿ' ಎಂಬ ಆತುರದ ಅಭಿಪ್ರಾಯಕ್ಕೆ ಈ ವಿದ್ವಾಂಸರು ಬರಲು ಇದರಿಂದ ಅವಕಾಶವಾಗಿದೆ; ಕ್ರಿ.ಶ. ಸು. ೧೨೬೦ಂಕ್ಕಿಂತ ಹಿಂದಿನ ಮತ್ತು ಕ್ರಿ.ಶ. ಸು. ೧೩೬೦ರ ನಂತರದ ಶಾಸನಗಳಲ್ಲಿನ ಈ ಅಕ್ಷರಗಳನ್ನು ಅವು ತ್ರುಟಿತ ಸ್ವರೂಪವಲ್ಲದಿದ್ದ ಪಕ್ಷದಲ್ಲಿ 'ಚಿ' ಎಂಬುದನ್ನು 'ಬೆ' ಎಂದಾಗಲೀ 'ಬೆ' ಎಂಬುದನ್ನು 'ಚಿ' ಎಂದಾಗಲೀ ಓದಲಿಕ್ಕೆ ಸಾಧ್ಯವಿಲ್ಲ ಎಂಬುದಾಗಿ ತಮ್ಮ ಲೇಖನದಲ್ಲಿ ಸಾಧಿಸಿದ್ದಾರೆ, .ಪಿ.ವಿ. ಕೃಷ್ಣಮೂರ್ತಿ.

ಮೇಲೆ ಪ್ರಸ್ತಾಪಿಸಿರುವ ಭೂವೈಜ್ಞಾನಿಕ, ಪುರಾತತ್ತ್ವೀಯ, ಚಾರಿತ್ರಿಕ, ಭಾಷಿಕ, ಇತ್ಯಾದಿ ಸಂಗತಿಗಳನ್ನು, ವಾದಗಳನ್ನು ವಿಶ್ಲೇಷಿಸುವ ಮುನ್ನ, ಇಂಥದೇ ಇನ್ನೊಂದು ಸ್ಥಳನಾಮ ಸಮಸ್ಯೆಯೊಂದರತ್ತ ವಿದ್ವಾಂಸರ ಗಮನ ಸೆಳೆಯುವುದು ಅಗತ್ಯವೆಂದು ತೋರುತ್ತದೆ. ಪ್ರಸ್ತುತ ಪ್ರಬಂಧದ ಸಮಸ್ಯೆಗೆ ಹತ್ತಿರವಿರುವ ಹಾಗೂ ಮೂಲದಲ್ಲಿ ಐತಿಹ್ಯವನ್ನು ಸಹಾ ಹೊಂದಿರುವ ಅಂಥಾ ಸ್ಥಳನಾಮವೆಂದರೆ 'ಬೆಂಗಳೂರು'.

ಐತಿಹ್ಯ ಹೇಳುವಂತೆ, ಹೊಯ್ಸಳ ವೀರಬಲ್ಲಾಳ ಬೇಟೆಗಾಗಿ ಇಲ್ಲಿಗೆ (ಬೆಂಗಳೂರು ಪರಿಸರಕ್ಕೆ) ಬಂದಾಗ, ಅವನು ಹಸಿದಿದ್ದಾಗ, ಒಬ್ಬಳು ಅಜ್ಜಿ 'ಬೆಂದಕಾಳನ್ನು' ಆತನಿಗೆ ನೀಡಿ ಸಂತೃಪ್ತಿ ಪಡಿಸಿದಳು. ತಾನು ತಿಂದ ಬೆಂದಕಾಳಿನ ಹೆಸರನ್ನೇ ಆಧರಿಸಿ ಆ ಸ್ಥಳವನ್ನು 'ಬೆಂದಕಾಳೂರು'ಎಂದು ಕರೆದ ವೀರಬಲ್ಲಾಳ. ಇದು ಕಾಲಕ್ರಮದಲ್ಲಿ ಬೆಂಗಳೂರು ಎಂದಾಯಿತು.[೧೭] ಬೇಗೂರಲ್ಲಿ ದೊರೆತ ೯ನೇ ಶತಮಾನದ ಶಾಸನವೊಂದರಲ್ಲಿ ಇದನ್ನು 'ಬೆಂಗಳೂರು' ಎಂದು ಉಲ್ಲೇಖಿಸಿದ್ದು, ಆ ಕಾರಣದಿಂದ ಈ ಮೇಲಿನ ಕಥೆಯನ್ನು ಸುಳ್ಳಾಗಿಸುತ್ತದೆಯೆಂದು ಹಾಗೂ ಬೆಂಗ ಅಥವಾ ರಕ್ತಹೊನ್ನೆ ಮರದಿಂದ ಈ ಹೆಸರು ಬಂದಿರಬಹುದೆಂದು ಅಭಿಪ್ರಾಯಪಡಲಾಗಿದೆ.[೧೮] ಪ್ರಾಗೈತಿಹಾಸಿಕ ಕಾಲದಿಂದಲೂ ಈ ಪ್ರದೇಶ ಜನವಾಸ್ತವ್ಯವುಳ್ಳದ್ದಾಗಿದ್ದಿತೆಂಬುದನ್ನು ಪುರಾತತ್ತ್ವ ಶೋಧನೆಗಳು ದೃಢಪಡಿಸಿವೆ.

ಡಾ.ಕೊ.ವ್ಯಾ.ರಮೇಶ ಅವರು, ಬೆಂದಕಾಳೂರಿನ ಕಥೆಯನ್ನು ಪ್ರಸ್ತಾಪಿಸುತ್ತಾ ಅದರ ಕಾಲವನ್ನು ಕ್ರಿ.ಶ. ೧೧-೧೨ನೇ ಶತಮಾನಗಳೆಂದು ಸೂಚಿಸಿದ್ದಾರೆ.[೧೯] ಅಲ್ಲದೆ, ಬೆಂಗಳೂರು ಸ್ಥಳನಾಮಕ್ಕೆ ಸಂಬಂಧಿಸಿದ ಎರಡನೇ ಕಥೆಯನ್ನು ಅವರು ಹೀಗೆ ಕೊಟ್ಟಿದ್ದಾರೆ: ಹೊಸನಗರ ಒಂದನ್ನು ಕಟ್ಟಿಸುವ ಸಲುವಾಗಿ ಕ್ರಿ.ಶ. ೧೬ನೇ ಶತಮಾನದಲ್ಲಿ ಕೆಂಪೇಗೌಡನು ಅಲ್ಲಿಯ ಮರಗಳನ್ನು ಸುಟ್ಟುಹಾಕಿದ್ದನಾಗಿ, ಆ ಸ್ಥಳದಲ್ಲಿ ನಿರ್ಮಾಣಗೊಂಡ ನಗರಕ್ಕೆ 'ಬೆಂದಕಾಡೂರು' ಎಂದು ಹೆಸರಾಗಿ, ಕಾಲಕ್ರಮದಲ್ಲಿ ಅದೇ ಬೆಂಗಳೂರು ಎಂದಾಯಿತು.[೨೦] ಅವರು ಮುಂದುವರೆದು, ಕ್ರಿ.ಶ. ೯ನೇ ಶತಮಾನದಷ್ಟು ಹಿಂದೆಯೇ ಬೇಗೂರು ಶಾಸನದಲ್ಲಿ ಬೆಂಗಳೂರು ಎಂಬ ಸ್ಥಳನಾಮವು ಉಲ್ಲೇಖಿತವಾಗಿರುವ ಕಾರಣ, ಮೇಲಿನ ಎರಡು ಐತಿಹ್ಯಗಳೂ ಕೇವಲ ಕಟ್ಟುಕತೆಗಳಷ್ಟೆ ಎಂದಿರುವರು.

ಆದರೆ ಬೆಂಗಳೂರಿನ ಸ್ಥಳನಾಮವನ್ನು ನಿರ್ಧರಿಸುವ ದೃಷ್ಟಿಯಿಂದ ಡಾ. ರಮೇಶ ಅವರು ಮಾಡಿರುವ ವಿಶ್ಲೇಷಣೆ ಅತಿ ಮುಖ್ಯವಾದುದು. ಅವರ ಪ್ರಕಾರ, ಬೆಂಗಳೂರು ನಗರ ಬೆಳೆದಿರುವುದು ಕೆಲವು ಬೆಣಚುಕಲ್ಲಿನ ಗುಡ್ಡೆಗಳ ಸುತ್ತ. ಬೆಣಚುಕಲ್ಲಿನ ಪ್ರಾಚೀನ ದ್ರಾವಿಡರೂಪವು ಪೆಣ್ಕಲ್ ಎಂದೂ ಹಳಗನ್ನಡ ರೂಪವು ಬೆಣ್ಕಲ್ > ಬೆಣ್ಗಲ್ ಎಂದೂ ಇದ್ದು, ಅದರ ಸುತ್ತ ಮುತ್ತ ಬೆಳೆದ ಊರಿಗೆ ಹಿಂದಿನಿಂದಲೂ ಬೆಣ್ಗಲೂರು > ಬೆಂಗಳೂರು ಎಂದಾಗಿರಬೇಕು.[೨೧]

ಬೆಂಗಳೂರು ಸ್ಥಳನಾಮ ಕುರಿತ ಚರ್ಚೆಯ ಹಿನ್ನೆಲೆಯಲ್ಲಿ 'ಬೆಂದಕಾಳೂರು' ರೂಪವನ್ನು ನಿರಾಕರಿಸುತ್ತ ಅಥವಾ ಕುಚೋದ್ಯಕ್ಕೆಂಬಂತೆ ಉದಾಹರಿಸುತ್ತ ಬಂದ ವಿದ್ವಾಂಸರು, ಇಂಥಾ ಜನಪದ ನಿರುಕ್ತಿಯನ್ನು ಸ್ವಲ್ಪಮಟ್ಟಿಗಾದರೂ ಪರಿಶೀಲಿಸುವ ತಾಳ್ಮೆ ವಹಿಸಿದ್ದ ಪಕ್ಷದಲ್ಲಿ, ಭೂವೈಜ್ಞಾನಿಕ ವೈಶಿಷ್ಟ್ಯವನ್ನೊಳಗೊಂಡ ಸ್ಥಳನಾಮದ ಖಚಿತರೂಪವನ್ನು ಬಹು ಹಿಂದೆಯೇ ಗುರುತಿಸಬಹುದಿತ್ತೆಂದೆನಿಸುತ್ತದೆ. ಪ್ರಸ್ತುತ ಚರ್ಚೆಯ ಹಿನ್ನೆಲೆಯಲ್ಲಿ ಪ್ರಸ್ತಾಪಿಸಬೇಕಾದ ಸಂಗತಿಯೆಂದರೆ, ಬೆಣಚುಕಲ್ಲಿನ ಹಿನ್ನೆಲೆಯಲ್ಲಿ

‘ಬೆಣ್ಚು (ಬೆಂಚ > ಬೆಂತ > ಬೆಂದ) + ಕಲ್ಲು (= ಬೆಣ್ಗಲ್)+ ಊರು’ ಆಗಿ, ಜನಪದರ ಬಾಯಲ್ಲಿ ‘ಕಲ್ಲು > ಕಾಳು’ ಆಗಿ ‘ಬೆಂದಕಾಳೂರು’ ಪ್ರಚಾರಕ್ಕೆ ಬಂದಿತು; ಅಡುಗೂಲಜ್ಜಿ ಕಥೆಯಾಗಿ ಪರಿವರ್ತನೆಗೊಂಡು ವಿದ್ವಾಂಸರ ದಿಕ್ಕುಗೆಡಿಸಿತು! ವಾಸ್ತವದಲ್ಲಿ, ‘ಬೆಂದಕಾಳೂರು’ ಎಂಬುದು ಬೆಣಚುಕಲ್ಲು ಊರಿನ ಪರ್ಯಾಯ ರೂಪವೇ, ಅಂದರೆ ‘ಬೆಂದಕಲ್ಲೂರು’ ರೂಪವೇ ಆಗಿದ್ದು, ಇಂದಿನ ಬೆಂಗಳೂರು ಸ್ಥಳನಾಮದ ಮೂಲ ಹಾಗೂ ಖಚಿತ ರೂಪವೇ, ಆಗಿರುತ್ತದೆ. ಈ ಕಾರಣಕ್ಕಾಗಿ ‘ಬೆಂದಕಾಳೂರು’ ಎನ್ನುವುದು ಕೇವಲ ಕಪೋಲಕಲ್ಪಿತವಾದುದೆಂಬ ಅಭಿಪ್ರಾಯವನ್ನು ಇನ್ನು ಮುಂದೆ ನಮ್ಮ ವಿದ್ವಾಂಸರು ಬಿಟ್ಟುಕೊಡುವುದು ಅಗತ್ಯ.

* * *

ಬೆಮ್ಮತ್ತನಕಲ್ಲು ಎಂಬುದೇ ಚಿತ್ರದುರ್ಗದ ಆರಂಭದ ಹೆಸರು ಎಂದು ಅಭಿಪ್ರಾಯ ಪಡುವವರು, ಅದು ಸಸ್ಯಮೂಲದಿಂದ ನಿಷ್ಪನ್ನಗೊಂಡುದೆಂದು ವಿವರಿಸಲು ಪ್ರಯತ್ನಿಸುತ್ತಾರೆ. ಉದಾಹರಣೆಗೆ, ಪಿ.ವಿ. ಕೃಷ್ಣಮೂರ್ತಿಯವರು, ‘ಬೆಂಮತ್ತು’ ಎಂಬುದರ ಮೂಲವು ಉಷ್ಣವಲಯದಲ್ಲಿ ಬಹುವಾಗಿ ಬೆಳೆಯುವ ಮಿಮೋಸೇಸಿ ಎಂಬ ಸಸ್ಯವರ್ಗಕ್ಕೆ ಸಂಬಂಧಿಸಿದುದೆಂದು ಹೇಳಿದ್ದಾರೆ.[೨೨] ಈ ಸಸ್ಯ ಕುಟುಂಬಕ್ಕೆ ಕರಿಜಾಲಿ, ಕಗ್ಗಲಿ, ಸೀಗೆ, ಬನ್ನಿಮರ, ಆನೆಗೊಬ್ಬಿ, ಮುಳ್ಳುಸೀಗೆ, ಮುಗಳಿ ಮುಂತಾದವು ಸೇರಿದ್ದು, ಚಿತ್ರದುರ್ಗವು ಇಂಥಾ ಸಸ್ಯವರ್ಗವನ್ನು ಸ್ವಾಭಾವಿಕವಾಗಿಯೇ ಹೊಂದಿರುವ ಪ್ರದೇಶವಾದ್ದರಿಂದ ಇದನ್ನು ಬೆಮ್+ಅತ್ತು+ಊರು = ಬೆಂಮತ್ತೂರು; ಬೆಂಮತ್ತನೂರು ಎಂಬುದಾಗಿ ಸಾಧಿಸಬಹುದೆಂಬುದು ಅವರ ನಿರ್ಣಯ.[೨೩] ಅವರ ಈ ಹೇಳಿಕೆಗೆ ಆಧಾರವಾಗಿರುವುದು, ಚಿತ್ರದುರ್ಗ ನಗರ ಪರಿಸರವು ಅಕೇಷಿಯಾ(ಕಗ್ಲಿ) ಎಂಬ ಸಸ್ಯವರ್ಗವನ್ನು ಹೆಚ್ಚಾಗಿ ಒಳಗೊಂಡಿದೆಯೆಂಬ ಚಿತ್ರದುರ್ಗ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಲಾದ ಮಾತು.[೨೪] ಮೇಲೆಯೇ ಹೇಳಿರುವಂತೆ, ಬೆಂಗಳೂರು ಹೆಸರಿನ ಮೂಲವೂ ಬೆಂಗ ಅಥವಾ ರಕ್ತಹೊನ್ನೆ ಮರದಿಂದ ಹೊರಟಿರಬಹುದೆಂದು ವಿದ್ವಾಂಸರು ಹೀಗೆಯೇ ಅಭಿಪ್ರಾಯಪಟ್ಟಿರುವುದುಂಟು.

ಸ್ಥಳವೊಂದರ ಮೂಲನಾಮ ಕುರಿತ ಅಧ್ಯಯನ ಪ್ರಾಕೃತಿಕ ಸನ್ನಿವೇಶ ಮತ್ತು ಜನವಸತಿಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕೆಲವು ವಿಶಿಷ್ಟ ಸಂಕೇತಗಳನ್ನು ಒಳಗೊಳ್ಳುತ್ತದೆ. ಜನಬಳಕೆಯಲ್ಲಿ ಬಂದ ಇಂಥಾ ನಿರ್ದೇಶನಾಮಗಳು ಕಾಲಕ್ರಮದಲ್ಲಿ ಬದಲಾವಣೆಗೊಂಡರೂ ಅವುಗಳ ಧಾತುರೂಪಗಳು ಸಹಜ ವಾಗಿಯೇ ಉಳಿದು ಬರುವುದುಂಟು. ಚಿತ್ರದುರ್ಗ ಬೆಟ್ಟ ಪರಿಸರದ ಇಂಥಾ ಪ್ರಾಕೃತಿಕ ಸನ್ನಿವೇಶದ ಕಾರಣಕ್ಕಾಗಿಯೇ ಅಲ್ಲಿಯ ವಿವಿಧ ಎಡೆಗಳಿಗೆ ನಾನಾ ಹೆಸರುಗಳು ರೂಢಿಗೆ ಬಂದುದನ್ನು ಗಮನಿಸಬಹುದು. ಶಾತವಾಹನ ಪೂರ್ವ ಮತ್ತು ಅವರ ಆಡಳಿತಾವಧಿಯಲ್ಲಿ ಚಿತ್ರದುರ್ಗ ಇಂದಿನಂತೆಯೇ ಚಿನ್ನದ ನಿಕ್ಷೇಪದ ಕಾರಣದಿಂದಾಗಿ ಎಲ್ಲರ ಗಮನ ಸೆಳೆದುದಂತೂ ದಿಟ. ಇಂಥಾ ಪ್ರಸಿದ್ಧ ಚಿನ್ನದ ಗಣಿ ಉದ್ಯಮ ಸ್ಥಳವೊಂದರ ಸಂಕೇತನಾಮವಾಗಿ ಪ್ರಚಾರಗೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಿದುದನ್ನು ನಿರಾಕರಿಸುವಂತಿಲ್ಲ. ಚಿತ್ರದುರ್ಗ ಬೆಟ್ಟದ ಸುತ್ತಲೂ ಇರುವ ಕುಂಚಿಗನಹಾಳು - ಇಂಗಳದಹಾಳು-ಕುರುಮರಡಿಕೆರೆ-ಹೊನ್ನ ಮರಡಿ-ಅನ್ನೆಹಾಳು-ತಮಟಕಲ್ಲು- ಗುಡ್ಡದ ರಂಗವ್ವನಹಳ್ಳಿ ಮೊದಲಾದುವು ಚಿನ್ನ ಮತ್ತು ತಾಮ್ರದ ನಿಕ್ಷೇಪಗಳನ್ನು ಹೊಂದಿರುವ ಎಡೆಗಳೆಂಬುದು ನಿಖರವಾಗಿ ತಿಳಿದುಬರುವುದರಿಂದ, ಭೂವಿಜ್ಞಾನದ ನೆಲೆಯಲ್ಲಿ ಚಿತ್ರದುರ್ಗದ ಎಡೆಗೆ ಈ ಸಂಬಂಧವಾದ ಹೆಸರು ಬಂದಿರುವುದು ಸಹಜವೇ. ಪುರಾತತ್ತ್ವೀಯ ಆಕರಗಳು ಇದಕ್ಕೆ ಪೂರಕವಾಗಿರುವುದು ಗಮನಾರ್ಹ.

ಈ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸುವುದರೊಡನೆ, ಚಿತ್ರದುರ್ಗದ ಪ್ರಾಚೀನ ನಾಮ ಕುರಿತು ಈ ಕೆಳಗಿನಂತೆ ಕೆಲವು ವಿಚಾರಗಳನ್ನು ಮಂಡಿಸಬಹುದು:

೧. ಪ್ರಸ್ತುತ ಅಧ್ಯಯನವು ೧೧ನೇ ಶತಮಾನಕ್ಕೂ ಹಿಂದಿನ, ಅಂದರೆ ಲಿಖಿತ ಸಂಪ್ರದಾಯದ ಶಾಸನಗಳು ಚಿತ್ರದುರ್ಗದ ಪ್ರಾಚೀನ ನಾಮವನ್ನು ಪ್ರಸ್ತಾಪಿಸುವುದಕ್ಕೂ ಮುಂಚಿನ, ಚಿತ್ರದುರ್ಗ ಹೆಸರಿನ ಮೂಲರೂಪವನ್ನು ಅರಿಯುವ ಪ್ರಯತ್ನವಾಗಿದೆ.

೨. ಚಿತ್ರದುರ್ಗದ ಪ್ರಾಚೀನ ನಾಮವನ್ನು ನಿಖರವಾಗಿ ನಿರ್ಧರಿಸುವಲ್ಲಿ ನೆರವಿಗೆ ಬರುವುವೆಂದರೆ ಭೂವೈಜ್ಞಾನಿಕ ಮತ್ತು ಪುರಾತತ್ತ್ವೀಯ ಸಂಶೋಧನೆಗಳು.

೩. ಈ ಸಂಶೋಧನೆಗಳು ಶಾತವಾಹನ ಆಳ್ವಿಕೆಯ ಪೂರ್ವ ಮತ್ತು ಆಳ್ವಿಕೆಯ ಅವಧಿಗಳ ಚಿತ್ರದುರ್ಗ ಪರಿಸರದ ಭೌಗೋಳಿಕ ಸನ್ನಿವೇಶವನ್ನು ನಿಖರವಾಗಿ ಗುರುತಿಸುವುದರೊಡನೆ, ಚಿತ್ರದುರ್ಗದ ಪ್ರಾಚೀನ ನಾಮ ಪ್ರಾಕೃತಿಕ ಗುಣಲಕ್ಷಣಗಳಿಂದ ನಿಷ್ಪನ್ನವಾದ ಸ್ವಾಭಾವಿಕ ನಾಮವೆಂಬುದನ್ನು ವ್ಯಕ್ತಪಡಿಸುತ್ತವೆ.

೪. ಭೂವೈಜ್ಞಾನಿಕ ಸಂಶೋಧನೆಯ ಪ್ರಕಾರ, ಚಿತ್ರದುರ್ಗ ಬೆಟ್ಟಪರಿಸರ ಅಗ್ನಿಶಿಲೆಗಳಲ್ಲಿಯ ಬೆಣಚು ಶಿರಬಳ್ಳಿಗಳ ವಲಯವಾಗಿದ್ದು, ಚಿತ್ರದುರ್ಗದ ಪ್ರಾಚೀನ ನಾಮಕ್ಕೆ ಇದೇ ಮೂಲ ಎನಿಸಿದೆ.

೫. ಚಿತ್ರದುರ್ಗ ಪರಿಸರದಲ್ಲಿಯ ಇಂಥಾ ಬೆಣಚುಕಲ್ಲಿನ ಗುಡ್ಡಗಳ ಕಾರಣದಿಂದಾಗಿ, ಬೆಣಚುಕಲ್ಲು ಎಂಬುದೇ ಕಾಲಾಂತರದಲ್ಲಿ ಬೆಮ್ಮತ್ತನಕಲ್ಲು [ಬೆಣಚುಕಲ್ಲು > ಬೆಂಚ(ಜ)ರ ಕಲ್ಲು> ಬೆಂತರಕಲ್ಲು> ಬೆಮತರಕಲ್ಲು> ಬೆಮ್ಮತರ(ನ)ಕಲ್ಲು> ಬೆಮ್ಮತ್ತನಕಲ್ಲು] ಆಗಿರುವ ಸಾಧ್ಯತೆ ಇದರಿಂದ ಕಂಡುಬರುತ್ತದೆ. (ಇದಕ್ಕೆ ‘ಬೆಂಗಳೂರು’ ಹೆಸರಿನ ನಿಷ್ಪತ್ತಿ ಸಮರ್ಥನೆ ಒದಗಿಸುತ್ತದೆ). ಬೆಮ್ಮತ್ತನಕಲ್ಲು ಹೆಸರಿನ ಹಿನ್ನೆಲೆಯಲ್ಲಿ ಯಾವುದೇ ಸಸ್ಯವರ್ಗವಿರದೆ ಶಿಲಾವರ್ಗವಿರುವುದು ಸ್ಪಷ್ಟ.

೬. ಪ್ರಾಯಶಃ ಬೆಮ್ಮತ್ತನಕಲ್ಲು ಅಥವಾ ಅದರ ಇತರ ರೂಪಗಳು ಚಿತ್ರದುರ್ಗ ಬೆಟ್ಟಪರಿಸರಕ್ಕೆ ಸೀಮಿತಗೊಂಡಂತೆ ಮಾತ್ರ ಬಳಕೆಯಲ್ಲಿದ್ದಿರಬಹುದು.

೭. ಪುರಾತತ್ತ್ವೀಯ ಅಧ್ಯಯನಗಳ ಹಿನ್ನೆಲೆಯಲ್ಲಿ, ಆ ಸಂಬಂಧದ ಐತಿಹ್ಯಗಳ ಪ್ರಭಾವವೂ ಅಪಾರವಾಗಿದ್ದು, ಚಿತ್ರದುರ್ಗ ಬೆಟ್ಟವನ್ನು ಬ್ರಹ್ಮರಾಕ್ಷಸನಕಲ್ಲು ಎಂದು ಜನರು ಸಂಬೋಧಿಸುತ್ತಿದ್ದುದು ಗಮನಾರ್ಹ. ಬೆಮ್ಮಂತನೆಂಬ ರಾಕ್ಷಸನಿದ್ದ ಕಲ್ಲಿನಿಂದ ಬೆಮ್ಮತ್ತನಕಲ್ಲು ಅಥವಾ ಅದರ ಹತ್ತಿರದ ರೂಪ ಉಂಟಾದುದನ್ನು ಇಲ್ಲಿ ತಳ್ಳಿಹಾಕುವಂತಿಲ್ಲ. (ಇದು ಮೂಲತಃ ಹುಲ್ಲೂರು ಶ್ರೀನಿವಾಸ ಜೋಯಿಸರ ಊಹೆ ಎಂಬ ಆರೋಪವನ್ನು ಈ ಅಂಶ ಸ್ಪಷ್ಟವಾಗಿ ನಿರಾಕರಿಸುತ್ತದೆ).

೮. ಈ ಮೇಲಿನ ಅಂಶಗಳ ಕಾರಣದಿಂದಾಗಿ, ಪ್ರಸ್ತುತ ಅಧ್ಯಯನ, ಚಿತ್ರದುರ್ಗದ ಪ್ರಾಚೀನ ನಾಮದ ಮೊದಲ ಅಕ್ಷರ 'ಬೆ' ಅಲ್ಲದೆ ಬೇರೆ ಅಲ್ಲ ಎಂಬುದನ್ನು ದೃಢವಾಗಿ ಸಮರ್ಥಿಸುತ್ತದೆ.

೯. ಆರಂಭದ ಶಾಸನಗಳಲ್ಲಿ ಲಿಪಿಕಂಡರಣೆಕಾರರು ಬೆಮ್ಮತ್ತನಕಲ್ಲು ಎಂಬ ಹೆಸರಿನಲ್ಲಿಯ ಮೊದಲ ಅಕ್ಷರ 'ಬೆ' ಎಂಬುದನ್ನು 'ಚಿ' ಎಂದು ಕಾಣಿಸಿದ್ದರೆ, ಅದು ಲಿಪಿಸಾದೃಶ್ಯ ಭ್ರಾಂತಿಯಿಂದ ಘಟಿಸಿದ ದೋಷವಿರಬಹುದು.

೧೦. ಈ ಹಿನ್ನೆಲೆಯಲ್ಲಿ, 'ಸಿದ್ಧರದುರ್ಗ'ದಿಂದಲೇ ಈಗಿನ ಚಿತ್ರದುರ್ಗ ಎಂಬ ಹೆಸರು ಬಂದಿದೆ ಎಂಬ ವಾದ ಅಪ್ರಸ್ತುತ ಮಾತ್ರವಲ್ಲ, ಅದು ಕೇವಲ ಪಂಡಿತ ನಿಷ್ಪತ್ತಿಯೆಂದು ಮೇಲ್ನೋಟಕ್ಕೇ ಸಾಬೀತು ಪಡುವಂಥಾದ್ದು. *

ಆಧಾರ ಸೂಚಿ ಮತ್ತು ಟಿಪ್ಪಣಿಗಳು

೧ ಮಾರ್ಗ, ಸಂಪುಟ ೨, ೧೯೮೮, ಬೆಂಗಳೂರು, ನರೇಶ್ ಅಂಡ್ ಕಂಪನಿ, ಪು. ೧೮೩-೧೮೭: ಲೇಖನ: 'ಚಿತ್ರದುರ್ಗದ ಪ್ರಾಚೀನ ಹೆಸರು'

೨ ವಾಗರ್ಥ, ೧೯೮೧, ಬೆಂಗಳೂರು, ಬಾಪ್ಕೊ, ಪು. ೩೫-೩೬

೩ ಎ.ಕ., ಸಂಪುಟ ೧೧, ಚಿತ್ರದುರ್ಗ ೭೮ (ಕ್ರಿ.ಶ. ೧೦೬೦) ಮತ್ತು ಚಿತ್ರದುರ್ಗ ೮೨ (ಕ್ರಿ.ಶ. ೧೧೭೪)

೪ ಉದಾ: ನೋಡಿ: ವಾಗರ್ಥ, ಪು. ೯-೭೮

೫ ವಿವರಗಳಿಗೆ: ಟಿ.ವಿ. ಶಿವರುದ್ರಪ್ಪ, 'ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ', ೧೯೮೭, ಹರತಿಸಿರಿ (ಹೆಚ್.ವಿ. ವೀರನಾಯಕ 'ಹರತಿ' ನೆನಪಿನ ಸಂಪುಟ),ಹರ್ತಿಕೋಟೆ, ವಾಲ್ಮೀಕಿ ಸಾಹಿತ್ಯ ಸಂಪದ, ಪು. ೫೬೬-೫೮೦

೬ ಕರಾಕ್ರ (ಸಂ.), ೧೯೮೦, ಚಿತ್ರಕಲ್ಲು ಮದಕರಿ

೭ *Gazetteer of India*, 1967, p. 29

೮ R. Shankar, 'How old are the mine working of Ingaldhal (Karnataka)?', *The Journal of the Geological Society of India* , Vol. 33, No. 1, 1989, Bangalore, Geological Society of India, pp. 64 - 70; ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ೧೯೭೬, ಚಿತ್ರದುರ್ಗ, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಪು. ೧೩೩

೯ M.H. Krishna, 1931, *Excavation at Chandravalli* (MAR 1929), Bangalore, Archaeological Survey of Mysore, p.5

೧೦ P. Lakshminarasu, 'Buddhism in Mysore', *QJMS.*, Vol . 31, 1931, p. 334; ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು. ೨೭

೧೧ ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಪು. ೨೭-೨೮

೧೨ ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ೧೯೯೫, ಚಿತ್ರದುರ್ಗ, ಹು.ಶ್ರೀ. ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಪು. ೩೮೦

೧೩ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೭೦-೧, ಜೂನ್ ೧೯೮೫, ಪು. ೧೦೬

೧೪ ಸಾಧನೆ, ೧೩-೪, ಅಕ್ಟೋಬರ್-ಡಿಸೆಂಬರ್, ೧೯೮೪, ಪು. ೯೧-೯೮

೧೫ ಸಾಧನೆ, ೧೪-೨, ಏಪ್ರಿಲ್-ಜೂನ್, ೧೯೮೫, ಪು. ೧೪೦

೧೬ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೭೪-೧,೨, ಜೂನ್-ಡಿಸೆಂಬರ್, ೧೯೮೯, ಪು. ೧೧-೨೩

೧೭ ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ೩, ೧೯೮೬, ಬೆಂಗಳೂರು, ಕರ್ನಾಟಕ ಸರಕಾರ, ಪು. ೫೫೨

೧೮ ಅದೇ, ಪು. ೫೫೨

೧೯ ಸಂಶೋಧನ (ಡಾ.ಎಂ. ಚಿದಾನಂದಮೂರ್ತಿ ಗೌರವ ಸಂಪುಟ), ೧೯೯೧, ಬೆಂಗಳೂರು, ಡಾ. ಎಂ. ಚಿದಾನಂದಮೂರ್ತಿ ಅಭಿನಂದನ ಸಮಿತಿ, ಪು. ೧೪೬

೨೦ ಅದೇ, ಪು. ೧೪೬

೨೧ ಅದೇ, ಪು. ೧೪೭

೨೨ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೭೪-೧, ೨, ಜೂನ್-ಡಿಸೆಂಬರ್, ೧೯೮೯, ಪು. ೬

೨೩ ಅದೇ, ಪು. ೬-೭

೨೪ *Chitradurga District Gazetteer*, 1967, Bangalore, Government of Karnataka, p. 18

ಡಾ॥ ಶ್ರೀನಿವಾಸ ಹಾವನೂರ *

ಯುರೋಪಿಯನ್ನರು ಕಂಡ ಧಾರವಾಡ

ಧಾರವಾಡ-ಇದು ಜಿಲ್ಲೆಯ ಮುಖ್ಯ ಪಟ್ಟಣ. ಇದಕ್ಕೆ ಹೇಳಿಕೊಳ್ಳುವಂತಹ ಮಹತ್ವಪೂರ್ಣವಾದ ಹಿಂದಿನ ಚರಿತ್ರೆಯೇನೂ ಇಲ್ಲ. ಧಾರವಾಡದ ಕೋಟೆಯ ಮಹತ್ವವನ್ನು ಅರಿತಿದ್ದ ಟಿಪ್ಪೂ ಸುಲ್ತಾನನು ಕ್ರಿ.ಶ. ೧೭೬೧ರ ವರೆಗೆ ತನ್ನ ವಶದಲ್ಲಿಟ್ಟುಕೊಂಡು, ಜಮಾಲ್‌ಬದರುದ್ದೀನ್‌ಖಾನ್ ಎಂಬ ತನ್ನ ಸಂಬಂಧಿಯೊಬ್ಬನನ್ನು ಅದರ ಅಧಿಕಾರಿಯನ್ನಾಗಿ ನೇಮಿಸಿದ್ದನು. ೧೭೯೦-೯೧ರಲ್ಲಿ ಮರಾಠರು ಪರಶುರಾಮಪಂತ ಪಟವರ್ಧನನ ನೇತೃತ್ವದಲ್ಲಿ ಧಾರವಾಡದ ಕೋಟೆಗೆ ಮುತ್ತಿಗೆ ಹಾಕಿದರು. ಆಗ ಬ್ರಿಟಿಷರು ಮೊದಲು ಕ್ಯಾಪ್ಟನ್ ಲಿಟಲ್ ಮತ್ತು ಆನಂತರ ಕರ್ನಲ್ ಫ್ರೆಡ್ರಿಕ್ ಎಂಬುವವರ ನೇತೃತ್ವದಲ್ಲಿ ಸೈನ್ಯದ ಒಂದು ತುಕಡಿಯನ್ನು ಕಳುಹಿಸಿ ಸಹಾಯಮಾಡಿದರು.

ಏಳು ತಿಂಗಳ ಕಾಲ, ಭಾರೀ ಸೈನ್ಯದೊಂದಿಗೆ ಸತತವಾಗಿ ಪ್ರಯತ್ನಪಟ್ಟರೂ ಸ್ವಾಧೀನವಾಗದಷ್ಟು ಭದ್ರವಾಗಿತ್ತು ಕೋಟೆ. ಕೊನೆಗೆ ಆಹಾರ ಹಾಗೂ ಇತರ ಅಗತ್ಯ ವಸ್ತುಗಳ ಕೊರತೆಯಿಂದಾಗಿ ಬದರುದ್ದೀನ್‌ಖಾನ್ ಶರಣಾಗತನಾಗಬೇಕಾಯಿತು.

ಯುದ್ಧದಲ್ಲಿ, ಫಾಸ್ಟರ್, ಮ್ಯಾಕ್ಸ್‌ವೆಲ್, ಚಾಮರ್‌ರಂಥ ಅನೇಕ ಸೇನಾಧಿಕಾರಿಗಳು ಮರಣವನ್ನಪ್ಪಿದರು. ಹೀಗೆ, ಧಾರವಾಡ ಬ್ರಿಟಿಷರ ಅಗಣಿತ ಬಲಿಯನ್ನು ತೆಗೆದುಕೊಂಡೇ, ಒಳಗೆ ಪ್ರವೇಶವನ್ನು ಕೊಟ್ಟಿತು!

ಆ ವೇಳೆಗೆ, ಅದರ ಯುದ್ಧ ತಂತ್ರದ ಮಹತ್ವವನ್ನು ಅವರು ಅರಿತರು. ಕೊನೆಯ ಮೈಸೂರು ಯುದ್ಧದಲ್ಲಿ (ಕ್ರಿ.ಶ. ೧೭೯೯) ಟಿಪ್ಪುಸುಲ್ತಾನನನ್ನು ಸೋಲಿಸಲು ಮುಖ್ಯ ಪಾತ್ರವಹಿಸಿದ್ದ ಆರ್ಥರ್ ವೆಲ್ಲೆಸ್ಲಿ, ಗುಟ್ಟಾಗಿ ಕೋಟೆಯ ಸುತ್ತಲೂ ತಿರುಗಿ ವಿಷಯ ಸಂಗ್ರಹಿಸುತ್ತಿದ್ದನು. ನೈರುತ್ಯ ದಿಕ್ಕಿನಿಂದ ಕೋಟೆಯನ್ನು ಆಕ್ರಮಿಸಬಹುದೆಂದು, ತನ್ನ ಒಂದು ವರದಿಯಲ್ಲಿ ತಿಳಿಸಿದ್ದನು. ಆದರೆ ಆತನ ಯೋಜನೆ ಸಿದ್ಧಿಸಲಿಲ್ಲ. ಕ್ರಿ.ಶ. ೧೮೦೩ರಲ್ಲಿ ಕೋಟೆಯನ್ನು ಪ್ರವೇಶಿಸಲು ಮಾತ್ರ, ಅವನಿಗೆ ಮರಾಠರಿಂದ ಒಪ್ಪಿಗೆ ಸಿಕ್ಕಿತು.

ಕ್ರಿ.ಶ. ೧೮೧೭ರಲ್ಲಿ ಮರಾಠರು ತಮ್ಮ ಅಧೀನದಲ್ಲಿದ್ದ ದಕ್ಷಿಣ ಪಟ್ಟಿಯ ಕೆಲವು ಪ್ರದೇಶಗಳನ್ನು ಬಿಟ್ಟುಕೊಡಲೇಬೇಕಾಗಿ ಬಂದಿತು. ಧಾರವಾಡ ಹಾಗೂ ಅದರ ಸುತ್ತಲಿನ ಕ್ಷೇತ್ರಗಳನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಆ ಪ್ರವೇಶವನ್ನು ಅವರು 'ಧಾರವಾಡ ಸುಭಾ' ಎಂದು ಕರೆದರು. ಆನಂತರವೇ ಅದು ಪ್ರಾಧಾನ್ಯವನ್ನು ಪಡೆಯಿತು. ಒಂದು ಸಣ್ಣ ಸೈನ್ಯದ ತುಕಡಿಯ ಸಹಾಯದಿಂದ ಬಾಂಬೆ ಪ್ರಾಂತದ ದಕ್ಷಿಣ ಭಾಗದ ವಿಶಾಲವಾದ ಪ್ರದೇಶವನ್ನು ಗೆದ್ದುಕೊಂಡು, ಬ್ರಿಟಿಷ್ ಚರಿತ್ರೆಯಲ್ಲಿ ದಾಖಲಿಸಿದಂತಹ ಕೀರ್ತಿ, ಸುಪ್ರಸಿದ್ಧ ಥಾಮಸ್ ಮನ್ರೋಗೆ ಸೇರುತ್ತದೆ. ಧಾರವಾಡವನ್ನು ಅವನು ತನ್ನ ಕೇಂದ್ರ ಕಾರ್ಯ ಸ್ಥಾನವನ್ನಾಗಿ ಮಾಡಿಕೊಂಡನು. ತನ್ನ ವರದಿಗಳಲ್ಲಿ ಅಲ್ಲಲ್ಲಿ ಕೊಟ್ಟಿರುವ ಉಲ್ಲೇಖನಗಳಿಂದ ಅವನಿಗೆ ಆ ಪ್ರದೇಶ ಎಷ್ಟು ಪ್ರಿಯವಾಗಿತ್ತೆಂಬುದು ತಿಳಿದು ಬರುತ್ತದೆ. ಬ್ರಿಟಿಶ್ ಚಕ್ರಾಧಿಪತ್ಯದ ಭವಿಷ್ಯದ ಆಡಳಿತ, ವಿಸ್ತರಣೆ ಮುಂತಾದವುಗಳ ಬಗ್ಗೆ ಕುರಿತು ಶಾಂತವಾಗಿ ಯೋಚನೆ ಮಾಡಿ, ಗವರ್ನರ್ ಜನರಲ್‌ಗೆ ಸವಿಸ್ತಾರವಾದ ಪತ್ರವನ್ನು ಅವನು ಇಲ್ಲಿಂದಲೇ ಬರೆದನು. (ತಾ॥ ೧೨.೮.೧೯೧೭)

ಮರುವರ್ಷವೆ, ಎಂದರೆ ೧೮೧೮ರಲ್ಲಿ ಸೇಂಟ್ ಜಾನ್ ಥ್ಯಾಕರೆಯನ್ನು 'ಧಾರವಾಡ ಸುಭಾ'ದ ಜಿಲ್ಲಾ ಮುಖ್ಯಾಧಿಕಾರಿಯಾಗಿಯೂ ಹಾಗೂ ದಕ್ಷಿಣ ಮರಾಠ ರಾಜ್ಯಗಳ ರಾಜಕೀಯ ಕಾರ್ಯಾಧಿಕಾರಿಯಾಗಿಯೂ ನೇಮಿಸಲಾಯಿತು. ಕಿತ್ತೂರಿನ ಯುದ್ಧದಲ್ಲಿ (ಕ್ರಿ.ಶ. ೧೮೨೪) ಇವನು ಮಡಿದ ಸಂಗತಿ ಪ್ರಸಿದ್ಧವಾಗಿದೆ ಮತ್ತು ಈತನ ಸಮಾಧಿಯು ಧಾರವಾಡದಲ್ಲಿಯ ಕ್ರೈಸ್ತರ ಸಮಾಧಿಸ್ಥಳದಲ್ಲಿ ಒಂದೆಡೆ ಅಜ್ಞಾತವಾಗಿ ಉಳಿದುಕೊಂಡಿದೆ (ಈಗಿನ ಕಿತ್ತೂರ ಚೆನ್ನಮ್ಮ ಉದ್ಯಾನದಲ್ಲಿ ಅಲ್ಲ).

* ಆಶ್ರಯ ಅಪಾರ್ಟ್‌ಮೆಂಟ್ಸ್, ೩೬, ವಿನಾಯಕ ಲೇಔಟ್, ೧ನೇ ಮೆಯಿನ್, ವಿಜಯನಗರ ಪಶ್ಚಿಮ, ಬೆಂಗಳೂರು - ೫೬೦ ೦೪೦

ಈತನ ಬಗ್ಗೆ ಕೆಲವೊಂದು ವಿಷಯಗಳು ಹೆಚ್ಚು ಜನರಿಗೆ ತಿಳಿದಿಲ್ಲ. ಒಂದು, ಈತನು ಪ್ರಸಿದ್ಧ ಆಂಗ್ಲಕವಿ ವಿಲಿಯಮ್ ಥ್ಯಾಕರೆಯ ಮಗ. ಎರಡನೆಯದಾಗಿ, ಈತನ ಸಮಾಧಿಯ ಬಳಿಯೇ ಬ್ಲಾಕ್, ಡೈಟನ್ ಮತ್ತು ಸೆವೆಲ್ ಎಂಬ ಮೂರು ಜನ ಸೇನಾನಾಯಕರ ಸಮಾಧಿಗಳೂ ಇವೆ. ಕೊನೆಯದಾಗಿ, ಈ ಪಟ್ಟಣದಿಂದ ನಾಲ್ಕು ಮೈಲಿಗಳ ದೂರದಲ್ಲಿರುವ ಒಂದು ಗೊಲ್ಲರ ಹಳ್ಳಿಗೆ 'ಥ್ಯಾಕರೆಪುರ'ವೆಂದು ನಾಮಕರಣ ಮಾಡಲ್ಪಟ್ಟಿತ್ತು. ಆದರೆ ಅದು ಚಲಾವಣೆಗೆ ಬರಲಿಲ್ಲ.

೧೮೨೨-೧೮೩೩ರವರೆಗೆ, ವಾಲ್ಟರ್ ಎಲಿಯಟ್ ಎಂಬವವನು ಜಿಲ್ಲಾ ಮುಖ್ಯಾಧಿಕಾರಿಯ ಸಹಾಯಕ ಅಧಿಕಾರಿಯಾಗಿ ಧಾರವಾಡದಲ್ಲಿದ್ದನು. ಎಲಿಯಟ್‌ನನ್ನು ಮತ್ತೊಬ್ಬ ಅಧಿಕಾರಿ ಸ್ಟೀವನ್‌ಸನ್ ಎಂಬುವನೊಟ್ಟಿಗೆ ಕಿತ್ತೂರಿನಲ್ಲಿ ಬಂಧನದಲ್ಲಿ ಇಡಲಾಗಿತ್ತು. ಮುಂಬಾಯಿ ಸರಕಾರವು ಮೊದಲ ಬಾರಿಗೆ ಪ್ರಾಥಮಿಕ ಶಾಲೆಯನ್ನು ಆರಂಭಿಸಬೇಕೆಂದುಕೊಂಡಾಗ, ಅದು ಮರಾಠಿ ಮಾಧ್ಯಮದ್ದು ಇರಬೇಕೆಂದು ಯೋಚಿಸಿತ್ತು. ಇಲ್ಲಿಯ ಹೆಚ್ಚು ಜನರ ಮಾತೃಭಾಷೆಯು ಕನ್ನಡವಾಗಿರುವುದನ್ನು ಎಲಿಯಟ್ ಗಮನಿಸಿದ್ದನು. ಆದ್ದರಿಂದ ಇಲ್ಲಿ ಕನ್ನಡ ಪ್ರಾಥಮಿಕ ಶಾಲೆಯನ್ನೇ ಆರಂಭಿಸಬೇಕೆಂಬ ಸೂಚನೆಯನ್ನು ಕೊಟ್ಟನು. ಅಲ್ಲದೆ, ಈ ಸೂಚನೆ ಜಾರಿಗೆ ಬರುವುದಕ್ಕೆ ತಡವಾದಾಗ ತಾನೇ ಕನ್ನಡ ಶಾಲೆಯನ್ನು ಪ್ರಾರಂಭಿಸಿ, ಮೊದಲ ಎರಡು ವರ್ಷ ಶಿಕ್ಷಕರಿಗೆ ತನ್ನ ಕೈಯಿಂದ ಸಂಬಳವನ್ನು ಕೊಟ್ಟನು. ಹೀಗೆ ಈತನು ಇಲ್ಲಿ ಕನ್ನಡ ಶಿಕ್ಷಣದ ತಳಪಾಯವನ್ನು ಹಾಕಿದನು.

ಈ ಪ್ರದೇಶದಲ್ಲಿರುವ ಸುಮಾರು ಐದುನೂರು ಶಾಸನಗಳನ್ನು ಮೊಟ್ಟ ಮೊದಲಬಾರಿಗೆ ಈತನು ಬೆಳಕಿಗೆ ತಂದನು. ಆ ಕಾಲದಲ್ಲಿ, ಶಾಸನಶಾಸ್ತ್ರವು ತೀರ ಶೈಶವಾವಸ್ಥೆಯಲ್ಲಿದ್ದಿತು. ಅವುಗಳನ್ನು ಅಭ್ಯಸಿಸಿ, ಅನೇಕ ಐತಿಹಾಸಿಕ ವಿಷಯಗಳನ್ನು ಪ್ರಥಮವಾಗಿ ಬೆಳಕಿಗೆ ತಂದು, ರಾಯಲ್ ಏಷ್ಯಾಟಿಕ್ ಸೊಸೈಟಿಯಲ್ಲಿ 'ಹಿಂದೂ ಇನ್‌ಸ್ಕ್ರಿಪ್ಷನ್ಸ್' ಎಂಬ ಪ್ರಬಂಧವನ್ನು ಮಂಡಿಸಿ ಪ್ರಕಟಿಸಿದ್ದನು. ಈತನ ಈ ಶಾಸನಗಳ ಅಧ್ಯಯನವು ಮುಂದೆ ಪ್ರಖ್ಯಾತ ಶಾಸನತಜ್ಞರಾದ ಜೆ. ಎಫ್. ಫ್ಲೀಟ್ ಮುಂತಾದವರ ಕೆಲಸಕ್ಕೆ ನಾಂದಿಯಾಯಿತು.

ಅವನು ತನ್ನ 'ನೆನಪುಗಳನ್ನು' ಬರೆದಿದ್ದಾನೆ. ಆ ಗ್ರಂಥವು ಆ ಕಾಲದ ಮುಂಬಯಿ ಕರ್ನಾಟಕದ ಸಮಾಜದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಅಷ್ಟೇ ಅಲ್ಲದೆ ಧಾರವಾಡದ ಸ್ಥಳೀಯ ಜನರೊಂದಿಗೆ ಆತನಿಗಿದ್ದ ನಿಕಟಸಂಪರ್ಕವನ್ನು ಅದು ಎತ್ತಿ ತೋರಿಸುತ್ತದೆ.

ಆತನು ಧಾರವಾಡದಲ್ಲಿದ್ದಾಗ, ಆತನಿಗೆ ಸಂಬಂಧಿಸಿದ ಮತ್ತೊಂದು ವಿಷಯವು ಮಹತ್ವದ್ದಾಗಿದೆ. ಆ ಕಾಲದಲ್ಲಿ ಧಾರವಾಡದ ಸುತ್ತಮುತ್ತ ದಟ್ಟವಾದ ಕಾಡಿತ್ತು. ಅದರಲ್ಲಿ ಯಥೇಷ್ಟವಾಗಿ ಹುಲಿಗಳಿದ್ದುವು. ಎಲಿಯಟನಿಗೆ ಬೇಟೆ ಯಾಡುವುದರಲ್ಲಿ ಬಹಳ ಆಸಕ್ತಿ. ಅದ್ದರಿಂದ ಅವನಿಗೆ ವನ್ಯ ಜೀವಿಗಳ ಬಗ್ಗೆ ತಿಳಿಯಲು ಬಹಳ ಅನುಕೂಲವಾಗಿದ್ದಿತು. ಜೀವ ವಿಕಾಸದ ಬಗ್ಗೆ ಅಧ್ಯಯನ ನಡೆಸುತ್ತಿದ್ದ ಅವನ ಸ್ನೇಹಿತನಾದ ಚಾರ್ಲ್ಸ್ ಡಾರ್ವಿನ್‌ನ ಪ್ರಾರ್ಥನೆಯ ಮೇರೆಗೆ, ಇವನು ಧಾರವಾಡ ಹಾಗೂ ಸುತ್ತಮುತ್ತಲಿನ ಕಾಡುಗಳಲ್ಲಿಯ ಸಸ್ತನಿ ವನ್ಯಜೀವಿಗಳ ಚಟುವಟಿಕೆಗಳ ಬಗ್ಗೆ ಮಾಹಿತಿಗಳನ್ನು ಅವನಿಗೆ ರವಾನಿಸುತ್ತಿದ್ದನು. (ಈ ಕುರಿತು ವ್ಯವಹರಿಸಿದ ಪತ್ರಗಳು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸುರಕ್ಷಿತವಾಗಿವೆ).

ಜಾನ್ ಕ್ಯಾಂಬೆಲ್ ಎಂಬ ಒಬ್ಬ ತರುಣ ೧೮೩೧ರಲ್ಲಿ ಧಾರವಾಡಕ್ಕೆ ಬಂದು, ಒಂದು ತಿಂಗಳವರೆಗೆ ಎಲಿಯಟನ ಜೊತೆಗೆ ವಾಸವಾಗಿದ್ದನು. ಇಲ್ಲಿ ಬಂದನಂತರ, ಸುತ್ತಮುತ್ತಲಿನ ಕುರುಚಲು ಕಾಡುಗಳು, ವಿಶಾಲವಾದ ಬಯಲು ಪ್ರದೇಶ, ಸಣ್ಣ ಪುಟ್ಟ ಕೆರೆಗಳು, ಸರೋವರಗಳು, ಧಾರವಾಡದ ಸೌಂದರ್ಯವನ್ನು ಹೆಚ್ಚಿಸಿರುವುದನ್ನು ಕಂಡನು. ಇದಕ್ಕೆ ಮೊದಲು ಮದ್ರಾಸ್ ಹಾಗೂ ಬೇರೆ ಊರುಗಳಲ್ಲಿ ಆಂಗ್ಲ ಸಮುದಾಯವನ್ನು ಕಂಡಿದ್ದನು. ಅವರಲ್ಲಿ ಬೇಟೆಗಾರರೆಂದು ಹೇಳಿಕೊಳ್ಳುತ್ತಿದ್ದವರು, ರಾವುತರಂತೆ ಉಡುಪುಧರಿಸಿ, ಗೂಳಿನಾಯಿ ಮತ್ತು ಹೊಡೆದಾಡುವ ಹುಂಜಗಳನ್ನು ಸಾಕಿಕೊಂಡು ಕಾಸ್ತಾರರಂತೆ ಮಾತನಾಡುವುದನ್ನು ಕಂಡಿದ್ದನು. ಆದರೆ, ಇಂತಹ ಯಾವ ಲಕ್ಷಣವನ್ನೂ ಅವನು ಧಾರವಾಡದಲ್ಲಿ ಕಾಣಲಿಲ್ಲ. ಈ ಕುರಿತು ಅವನು ಈ ರೀತಿ ಅಭಿಪ್ರಾಯಪಟ್ಟಿದ್ದಾನೆ:

''ಧಾರವಾಡದ ಸಮಾಜವು ನಿಶ್ಚಿತವಾಗಿ ಪ್ರಗತಿಪರವಾದದ್ದು. ಸಾರ್ವಜನಿಕರು ಸಾಕಷ್ಟು ವಿಷಯ-ಪರಿಜ್ಞಾನವುಳ್ಳವರೂ, ಸುಶೀಲರೂ ಅಸಂಸ್ಕೃತ ಹಾಗೂ ದರ್ಪದ ಭಾಷೆಗಳನ್ನು ಉಪಯೋಗಿಸದವರೂ ಒಳ್ಳೆಯ ಕ್ರೀಡಾಮನೋಭಾವುಳ್ಳವರೂ ಆಗಿದ್ದಾರೆ. ಇತ್ತೀಚೆಗೆ ಎಲ್ಲೆಲ್ಲೂ ಕಾಣಬರುವ ಅಸಂಸ್ಕೃತ ಭಾಷೆಯ ಬದಲಿಗೆ, ಬೆಡಗು ಬಿನ್ನಾಣಗಳಿಲ್ಲದ, ಸ್ಥಳೀಯ ಸೊಗಡಿರುವ ಆಂಗ್ಲ ಭಾಷೆಯಲ್ಲಿ ಅವರು ವ್ಯವಹರಿಸುವುದು ಸಂತಸದ ವಿಷಯ''.

ಈತನ ಪ್ರಕಾರ ಯುರೋಪಿಯನ್ ಸಮುದಾಯ ಸಾಕಷ್ಟಿಲ್ಲದಿದ್ದರೂ ಸ್ಥಳೀಯ ರೋಮನ್ ಕ್ಯಾಥೋಲಿಕರು ತಕ್ಕಷ್ಟು ಸಂಖ್ಯೆಯಲ್ಲಿ ಇದ್ದಾರೆ.

೧೯ನೆಯ ಶತಮಾನದ ಪೂರ್ವದಲ್ಲಿ ಬ್ರೂಸ್‌ಫುಟ್ ಎಂಬ ಭೂವಿಜ್ಞಾನಿ, ಧಾರವಾಡ ಸುಭಾದ ಪ್ರದೇಶಗಳ ಶಿಲಾಶಾಸ್ತ್ರದ ಪರಿಶೀಲನೆ ಮಾಡಿ, ಇಲ್ಲಿನ ಶಿಲೆ ತುಂಬಾ ಅಪರೂಪವಾದದ್ದು ಎಂದು ಅಭಿಪ್ರಾಯಪಟ್ಟು, ಅದಕ್ಕೆ 'ಧಾರವಾಡ ಸಿಸ್ಟ್' ಎಂದು ಹೆಸರಿಸಿದ್ದಾನೆ.

ಯುರೋಪಿಯನ್ನರನ್ನು ವಿಶೇಷವಾಗಿ ಆಕರ್ಷಿಸಿದ್ದುದೆಂದರೆ ಇಲ್ಲಿಯ ಹತ್ತಿ. ಇಂಗ್ಲೆಂಡಿನ ಹತ್ತಿ ಗಿರಣಿಗಳು, ಅಮೇರಿಕಾದಿಂದ

ಹತ್ತಿಯನ್ನು ತರಿಸಿಕೊಳ್ಳುತ್ತಿದ್ದುವೆಂಬುದು ತಿಳಿದ ವಿಷಯ. ಗುಣಮಟ್ಟವನ್ನು ಉತ್ತಮಗೊಳಿಸಿದರೆ, ಪಶ್ಚಿಮ ಭಾರತದಲ್ಲಿ ಬೆಳೆಯುವ ಹತ್ತಿಯನ್ನೂ ಉಪಯೋಗಿಸಿಕೊಳ್ಳಬಹುದೆಂಬುದನ್ನು ಅವರು ಕಂಡುಕೊಂಡರು. ಮುಂಬಯಿ ಸರಕಾರವು ಉತ್ತಮ ಮಟ್ಟದ ಬೀಜಗಳನ್ನು ಅಮೇರಿಕಾದಿಂದ ತರಿಸತೊಡಗಿತು. ಈ ಕ್ಷೇತ್ರದಲ್ಲಿ ಅನುಭವಶಾಲಿಗಳಾದ ಲಷ್ (೧೮೨೯) ಮತ್ತು ಮರ್ಸರ್ (೧೮೪೪) ಎಂಬ ಕೃಷಿತಜ್ಞರನ್ನು ಭಾರತಕ್ಕೆ ಆಹ್ವಾನಿಸಿತು. ಅವರು ಧಾರವಾಡವನ್ನು ಕೇಂದ್ರವಾಗಿಟ್ಟುಕೊಂಡು, ತಮ್ಮ ಪ್ರಯೋಗ ನಡೆಸಲು ಸುತ್ತಮುತ್ತಲಿನ ಅನೇಕ ಹಳ್ಳಿಗಳಿಗೆ ಭೇಟಿಯಿತ್ತರು. ಮುಂದಿನ ಹೆಜ್ಜೆಯಾಗಿ ಹತ್ತಿಯಿಂದ ಬೀಜವನ್ನು ಬೇರ್ಪಡಿಸುವ ಗಿರಿಣಿಯನ್ನು ಧಾರವಾಡದಲ್ಲಿ ನಿರ್ಮಿಸುವ ಯೋಜನೆಯಾಗಿತ್ತು.

ಇದೇ ಸುಮಾರಿಗೆ ಬಾಸೆಲ್‌ನಿಂದ ರೆವರೆಂಡ್ ಮೊಗ್ಲಿಂಗ್ ಇಲ್ಲಿಗೆ ಬಂದನು. ಅವನು ಪ್ರಾರಂಭಿಸಿದ ಆಂಗ್ಲ ಪ್ರಾಥಮಿಕ ಶಾಲೆಗೆ ಊರಿನ ಪ್ರಮುಖ ಬ್ರಾಹ್ಮಣರು ತಮ್ಮ ಮಕ್ಕಳನ್ನು ಗುಟ್ಟಾಗಿ ಕಳುಹಿಸಲಾರಂಭಿಸಿದರು. ಹೀಗೆ ಬಾಸೆಲ್ ಮಿಷನರಿಯು ಧಾರವಾಡದಲ್ಲಿ ಪಾಶ್ಚಿಮಾತ್ಯ ಶಿಕ್ಷಣಕ್ಕೆ ಮಾರ್ಗ ಮಾಡಿಕೊಟ್ಟಿತು ಮತ್ತು ಕ್ರಿ.ಶ. ೧೮೬೧ರಲ್ಲಿ ಸ್ಥಾಪಿಸಿದ ಇಂದಿನ ಬಾಸೆಲ್ ಮಿಶನ್ ಹೈಸ್ಕೂಲ್ ಅದಕ್ಕೆ ಸಾಕ್ಷಿಯಾಗಿದೆ. ಮೊಗ್ಲಿಂಗ್ ಅಲ್ಲದೆ, ಕಿಟೆಲ್ ಕೂಡ ಇಲ್ಲಿ ಸ್ವಲ್ಪಕಾಲದವರೆಗೆ ಇದ್ದನು. ಈತ ಪ್ರಸಿದ್ಧ ಭಾಷಾವಿಜ್ಞಾನಿ ಎಂಬುದಕ್ಕೆ ಈತನ ಕನ್ನಡ-ಇಂಗ್ಲಿಷ್ ನಿಘಂಟು ಸಾಕ್ಷಿಯಾಗಿದೆ. ಇವನಿಗಿಂತ ಧಾರವಾಡದಲ್ಲಿ ಹೆಚ್ಚುಕಾಲ ವಾಸಿಸಿ, ಅದನ್ನು ಪ್ರೀತಿಸಿದವನು ಡಾ॥ಲೈಗ್ಗಲರ್ ಎಂಬಾತ. ಈತನ ಖ್ಯಾತಿ ಶಿಕ್ಷಣತಜ್ಞನೆಂಬುದಾಗಿ ಇದ್ದಿತು. ಧಾರವಾಡದ ಆಗಿನ ಸಾಹಿತಿಗಳು ಆತನನ್ನು ಎಷ್ಟು ಮೆಚ್ಚಿದ್ದರೆಂದರೆ, ಕರ್ನಾಟಕ ವಿದ್ಯಾವರ್ಧಕ ಸಂಘವು ಪ್ರಾರಂಭವಾದ ಮೂರನೆಯ ವರ್ಷದಲ್ಲಿಯೇ(೧೮೯೩-೯೪) ಆತನನ್ನು ಒಮ್ಮತದಿಂದ ಅಧ್ಯಕ್ಷನನ್ನಾಗಿ ಆರಿಸಿತು.

೧೯ನೆಯ ಶತಮಾನದ ಮಧ್ಯ ಭಾಗದ ವೇಳೆಗೆ ಧಾರವಾಡಕ್ಕೆ ಬರತೊಡಗಿದ್ದ ಯುರೋಪಿಯನ್ನರ ಸಂಖ್ಯೆ ಹೆಚ್ಚತೊಡಗಿತು. ಜಿಲ್ಲಾ ಅಧಿಕಾರಿಗಳು, ನ್ಯಾಯಾಧೀಶರು, ಸೇನಾ ಸಿಬ್ಬಂದಿಗಳು ಮತ್ತು ಇತರ ಅಧಿಕಾರಿಗಳಲ್ಲದೆ, ವೈದ್ಯರೂ ಸಿವಿಲ್ ಎಂಜಿನಿಯರುಗಳೂ, ಗುತ್ತಿಗೆದಾರರು ಹೀಗೆ ವಿವಿಧ ಹುದ್ದೆ-ವೃತ್ತಿಗಳ ಜನರು ಧಾರವಾಡದಲ್ಲಿದ್ದರು. ಧಾರವಾಡವು ಮೊದಲು ಕಾರಾಗೃಹದ ಅನಂತರ ರೈಲಿನ ವಿಭಾಗಕ್ಕೂ ಕೇಂದ್ರವಾಗಿತ್ತು. ಸರಕಾರಿ ಹಾಗೂ ಖಾಸಗೀ ಕಟ್ಟಡಗಳು ಪಾಶ್ಚಿಮಾತ್ಯ ಶೈಲಿಯಲ್ಲಿ ನಿರ್ಮಿತವಾದುವು. ೧೮೩೯ರಿಂದ ಧಾರವಾಡದಲ್ಲಿಯೇ ವಾಸವಾಗಿದ್ದ ಜ್ಯೂಕ್ಸ ಎಂಬಾತನು ಇಂತಹ ಹೊಸ ಕಟ್ಟಡಗಳ ಲೆಕ್ಕ ಇಟ್ಟಿದ್ದನು. ಆತನ ಪ್ರಕಾರ ಮುಖ್ಯ ಅಂಚೆ ಕಚೇರಿಯು ೭೦ನೆಯ ಕಟ್ಟಡವಾಗಿತ್ತು. ಆತನ 'ಧಾರವಾಡದ ನೆನಪುಗಳು ಒಬ್ಬ ಹಳೆಯ ನಿವಾಸಿಯಿಂದ' ಎಂಬ ೧೮೯೦ರಲ್ಲಿ ಪ್ರಕಾಶಗೊಂಡ ಪುಸ್ತಕದಲ್ಲಿ ಇಂತಹ ಅನೇಕ ಮಾಹಿತಿಗಳು ದೊರಕುತ್ತವೆ. ಎಷ್ಟೇ ಪ್ರಯತ್ನಪಟ್ಟರೂ ದುರದೃಷ್ಟದಿಂದ ಆ ಪುಸ್ತಕ ನನಗೆ ದೊರಕಲಿಲ್ಲ. ಆದರೆ ಅದರ ಪುರವಣಿ ಪುಸ್ತಕ ಮಾತ್ರ ದೊರಕಿದೆ. ೩೦ ಪುಟಗಳಷ್ಟಾದರೂ ದೊರಕಿದ್ದು ಪ್ರಯೋಜನಕಾರಿಯಾಗಿದೆ.

ಈ ಪುರವಣಿಯಲ್ಲಿ, ಆ ಕಾಲದಲ್ಲಿದ್ದ ಯುರೋಪಿಯನ್ನರ ಜನನ, ಮರಣ ಹಾಗೂ ಮದುವೆಗಳ ದಾಖಲೆಗಳಿವೆ, ಮನರಂಜನಾ ಕಾರ್ಯಕ್ರಮಗಳ ವರದಿ ಕೂಡ ಇದೆ. (ಅಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಯುರೋಪಿಯನ್ನರೇ ಭಾಗ ವಹಿಸುತ್ತಿದ್ದರು). ಒಂದೊಂದು ಸಂಜೆ ಒಬ್ಬೊಬ್ಬರ ಮನೆಯಲ್ಲಿ ಪ್ರತಿನಿತ್ಯ ಸೇರುವ ಪದ್ಧತಿಯಿತ್ತು (Evenings at Home). ೧೮೮೬ರಲ್ಲಿ 'ಜಿಮಖಾನಾ ಕ್ಲಬ್' ಪ್ರಾರಂಭಿಸಲ್ಪಟ್ಟಿತು. ಅಂದು ಜಿಲ್ಲಾ ನ್ಯಾಯಾಧೀಶರ ಪತ್ನಿ ಅಲ್ಲಿಯ ಜನರ ಮನೆಯಲ್ಲಿ ತಯಾರಿಸಿದ ಕರಕುಶಲ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸಿ, ಹರಾಜು ಹಾಕಿದರು.

ಜೂಕ್ಸ್ ಮುಂದೆ ಬರೆಯುವುದೇನೆಂದರೆ :

'ವ್ಯಾಪಾರವು ಎಷ್ಟು ಬಿರುಸಾಗಿರುತ್ತದೆಂದರೆ, ಸಂಜೆ ಆರರೊಳಗೆ ಪ್ರದರ್ಶನದ ಎಲ್ಲಾ ಮಳಿಗೆಗಳೂ ಖಾಲಿಯಾಗಿ ಬಿಡುತ್ತಿದ್ದುವು. ಮರುದಿನ, ಅದೃಷ್ಟದ ಆಯ್ಕೆ (lottery) ನಡೆಯಿತು. ಅದರಲ್ಲಿ ನಮ್ಮ ಧರ್ಮಶೀಲನಾದ ಪಾದ್ರಿಗೆ ಮಕ್ಕಳು ತೊಡುವ ಅಂಗಿ ದೊರೆಯಿತು. (ಅವನಿಗೆ ಅದರಿಂದ ಯಾವ ಪ್ರಾಪಂಚಿಕ ಉಪಯೋಗವಿದೆ?). ಅದನ್ನವನು ತಕ್ಷಣವೆ ಒಬ್ಬ ತಾಯಿಗೆ ಅವಳ ಮಗುವಿಗಾಗಿ ಕೊಟ್ಟು ಬಿಟ್ಟನು.'

ಹರಾಜಿನ ಹಣವನ್ನೆಲ್ಲ ಒಂದು ಕಟ್ಟಡಕ್ಕಾಗಿ ಎಂದು Y.W.C.A.ಗೆ ಕೊಡಲಾಯಿತು. ಈ ರೀತಿಯ ಅನೇಕ ದಾನಧರ್ಮಗಳ ದೃಷ್ಟಾಂತಗಳಿವೆ. ಶಿಕೋನ ಎಂಬ ಒಬ್ಬ ಗ್ರೀಕ್ ಗುತ್ತಿಗೆದಾರ, ತನ್ನ ಕೆಲಸಗಳು ಪೂರೈಸಿದ ನಂತರ ಸ್ಥಳೀಯ ಚರ್ಚಿಗೆ ಧಾರಾಳವಾಗಿ ದಾನವನ್ನು ಕೊಟ್ಟನು (೧೮೮೮). ಹೀಗೆ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಸಂಭವಿಸುತ್ತಿದ್ದ ಕ್ಷಾಮಕ್ಕೆ ಸ್ಥಳೀಯ ಯುರೋಪಿಯನ್ನರು ಯಥಾಶಕ್ತಿ ಸಹಾಯವನ್ನು ಮಾಡುತ್ತಿದ್ದರು.

ಇಲ್ಲಿ ಗಮನಿಸ ತಕ್ಕ ಮತ್ತೊಂದು ವಿಷಯವೆಂದರೆ, ಅವರಲ್ಲಿ ಬಹುಮಂದಿ ಒಂದಕ್ಕಿಂತ ಹೆಚ್ಚು ವೃತ್ತಿಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರು. ಉದಾಹರಣೆಗೆ ಫೋರ್ಬ್ಸ್. ಮೂಲತಃ ಅವನು ವೈದ್ಯ ಹಾಗೂ ಜಿಲ್ಲಾ ವೈದ್ಯಾಧಿಕಾರಿಯಾಗಿ ಸೇವೆಸಲ್ಲಿಸುತ್ತಿದ್ದ. ಆದರೆ ಅವನೊಬ್ಬ ಸಿವಿಲ್ ಇಂಜಿನಿಯರನೂ ಆಗಿದ್ದ! ಊರಿನ ಮಾರುಕಟ್ಟೆಯಿಂದ ಸಲಕಿನಕೊಪ್ಪ ಎಂಬ ಹಳ್ಳಿಯವರೆಗೆ ಈಗಿರುವ ರಸ್ತೆಯನ್ನು ಅವನೇ ನಿರ್ಮಿಸಿದನಂತೆ. ಇದಲ್ಲದೆ, ಆ ನಂತರ ಹತ್ತಿ



ಬೆಳೆಯ ವಿಷಯದಲ್ಲಿ ತಜ್ಞನಾಗಿ ೧೮೬೦ರಲ್ಲಿ ಹತ್ತಿಬೀಜ ಬೇರ್ಪಡಿಸುವ ಕಾರ್ಖಾನೆ (ಹಿಂದೆ ಹೇಳಿದೆ)ಯಲ್ಲಿ ವ್ಯವಸ್ಥಾಪಕನಾಗಿ ನೇಮಕಗೊಂಡನು. ಮುಂದೆ ಹತ್ತಿ ಬೆಳೆ ಯೋಜನೆಯ ಮುಖ್ಯ ಅಧಿಕಾರಿಯಾಗಿ ಇಡೀ ಪ್ರಾಂತಕ್ಕೇ ಪ್ರಮುಖ ಅಧಿಕಾರಿಯಾಗಿ ನೇಮಿಸಲ್ಪಟ್ಟನು.

ಶಿಯರರ್ ಎಂಬ ಹತ್ತಿ ವಿಷಯದ ತಜ್ಞನು ಬಂದು ಧಾರವಾಡದ ನೆರೆಯಲ್ಲಿಯ ನವಲೂರು ಎಂಬ ಹಳ್ಳಿಯಲ್ಲಿ ಮಾದರಿ ತೋಟವನ್ನು ಬೆಳೆಸಿ ಪ್ರಖ್ಯಾತ ಉದ್ಯಾನ ತಜ್ಞನೆನಿಸಿಕೊಂಡನು. ಮುಂದೆ ಪುಣೆಯಲ್ಲಿ 'ಎಂಪ್ರೆಸ್ ಗಾರ್ಡನ್' ಎಂಬ ಹೆಸರಿನ ಬೃಹತ್ ಉದ್ಯಾನಕ್ಕೆ ನಿರ್ವಾಹಕನಾಗಿ ನೇಮಿಸಲ್ಪಟ್ಟನು.

೧೯೧೦ರಲ್ಲಿ, ಕ್ಲೆಮೆಂಟ್ಸ್ ಎಂಬ ಜಿಲ್ಲಾ ನ್ಯಾಯಾಧೀಶನು ಧಾರವಾಡ ಗಾಯನ ಸಮಾಜವನ್ನು ಸ್ಥಾಪಿಸಿ ಭಾರತೀಯ ಸಂಗೀತ ಪರಂಪರೆಯ ಅಧ್ಯಯನಕ್ಕೆ ಅನುವು ಮಾಡಿಕೊಟ್ಟನು. ತಂಜಾವೂರು ಹಾಗೂ ಕರ್ನಾಡ್‌ಗಳಿಂದ ಸಂಗೀತಗಾರರನ್ನು ಕರೆಯಿಸಿ, ಎರಡೂ ಪದ್ಧತಿಗಳ ಸಂಗೀತಾಭ್ಯಾಸ ಮಾಡಲು ಪ್ರಯತ್ನಿಸಿದನು. ಅನಂತರ ೧೯೨೦ರಲ್ಲಿ ಲಂಡನ್ನಿನಲ್ಲಿ The Ragas of Tanjore ಎಂಬ ಸಂಗೀತಕ್ಕೆ ಸಂಬಂಧಿಸಿದ ಅಪರೂಪದ ಪುಸ್ತಕವನ್ನು ಬಿಡುಗಡೆ ಮಾಡಿದನು.

ಹೀಗೆ ೧೮೧೮ರಿಂದ ೧೯೨೮ರ ವರೆಗೆ ಮುವತ್ತಕ್ಕೂ ಹೆಚ್ಚು ಜಿಲ್ಲಾಧಿಕಾರಿಗಳು ಈ ಜಿಲ್ಲೆಯನ್ನು ಆಳಿದರು. ಥ್ಯಾಕರೆ ಹಾಗೂ ಪೇಂಟರ್ ಹೀಗೆ ಒಂದಿಬ್ಬರು ಸಾಮ್ರಾಜ್ಯಶಾಹೀ, ಸ್ವಪ್ರತಿಷ್ಠೆಯ ಅಧಿಕಾರಿಗಳನ್ನು ಬಿಟ್ಟರೆ ಉಳಿದವರು ಸಾಮಾನ್ಯ ಜನರೊಂದಿಗೆ ಸೌಹಾರ್ದದ ಸಂಬಂಧವನ್ನು ಇಟ್ಟುಕೊಂಡಿದ್ದರು. ೧೯೨೧ರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಗೋಲಿಬಾರಿನ ಆಜ್ಞೆಯನ್ನು ಕೊಟ್ಟವ ಈ ಪೇಂಟರ್. ಆ ರೀತಿ ನಡೆದ ಪ್ರಸಂಗವೆಂದರೆ ಅದೊಂದೇ. ಧಾರವಾಡದಲ್ಲಿ ಮಾಳಮಡ್ಡಿ ಎಂಬ ಸ್ಥಳವಿದೆ, ಅದನ್ನು ಇಲ್ಲಿಯವರೆಗೆ 'ಗಿಬ್-ಟೌನ್' ಎಂದು ಗಿಬ್ ಎಂಬ ಜಿಲ್ಲಾಧಿಕಾರಿಯ ಹೆಸರಿನಲ್ಲಿ ಕರೆಯುತ್ತಿದ್ದರು. ನಿಸ್ಬತ್-ದೇಸಾಯಿ ಎಂಬ ಮನೆತನದವರಿದ್ದಾರೆ. ಇವರ ಮೊದಲರ್ಧದ ಪದವು ನಿಸ್ಬತ್ ಎಂಬ ಜಿಲ್ಲಾಧಿಕಾರಿಯನ್ನು ಸೂಚಿಸುತ್ತದೆ (೧೮೨೮). ಪ್ರಾಯಶಃ, ಧಾರವಾಡದ ತಂಪು ಹವೆ, ನಾಗರಿಕರ ಸುಧಾರಿತ ವ್ಯವಹಾರ ಇವುಗಳಿಂದಾಗಿ ಯುರೋಪಿಯನ್ ಅಧಿಕಾರಿಗಳು ಇಲ್ಲಿ ಬಂದು ಸೌಹಾರ್ದತೆಯಿಂದ ನೆಲೆಸಲು ಪ್ರೇರೇಪಿಸಿರಬಹುದು. ಇತ್ತೀಚಿನ ಒಂದು ಉದಾಹರಣೆ ಎಂದರೆ ಎ. ಸಿ. ಫ್ಯಾರೆನ್ ಎಂಬುವವರು, ಸ್ವಾತಂತ್ರ್ಯದ ನಂತರವೂ ಧಾರವಾಡದ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾಗಿ ಮುಂದುವರಿದು ಇಲ್ಲಿಯೇ ನೆಲೆಸಿದ್ದರು. ನಿವೃತ್ತಿಯ ಅನಂತರವೂ ಕೆಲವು ವರ್ಷಗಳ ಕಾಲ ಧಾರವಾಡದಲ್ಲಿಯೇ ಇದ್ದರು.

ಕಳೆದ ಮೂವತ್ತು ವರ್ಷಗಳಲ್ಲಿ ಯಾವ ಯುರೋಪಿಯನ್ನರೂ ಧಾರವಾಡದಲ್ಲಿ ವಾಸವಾಗಿದ್ದುದ್ದು ನನಗೆ ಕಂಡು ಬಂದಿಲ್ಲ. ಅವರ ಸ್ಮಶಾನವಂತೂ ತಿಪ್ಪೆಗಳ ಆಗರವಾಗಿದೆ. ಆದರೆ ಅವರ ಹಿಂದಿನವರು ಕಟ್ಟಿಸಿದ ಕಟ್ಟಡಗಳು ಮಾತ್ರ ಚರಿತ್ರೆಯಲ್ಲಿ ಕುತೂಹಲವಿರುವವರ ಕಣ್ಣಿಗೆ ಬೀಳಬಹುದು.

(ಅನುವಾದ : ಸೌ. ಮೀನಾರಾವ್)

*

ಡಾ॥ ಬಿ. ಲೀಲಾ*

ಹತ್ತೊಂಬತ್ತನೇ ಶತಮಾನದಲ್ಲಿ ಮಹಿಳೆಯ ಆರೋಗ್ಯ ಹಾಗೂ ಕೌಂಟೆಸ್ ಆಫ್ ಢಫರಿನ್ ಪಂಡ್: ಇದರಲ್ಲಿ ಮೈಸೂರಿನ ಪಾತ್ರ-ಒಂದು ವಿಶ್ಲೇಷಣೆ

ಇಂಡಿಯಾ ದೇಶದ ಮಹಿಳೆಯರ ಬಗ್ಗೆ ಆರೋಗ್ಯದ ಕಾಳಜಿ ಬ್ರಿಟಿಷ್ ಸರಕಾರದ ದೃಷ್ಟಿಯಲ್ಲಿ ಪ್ರಾಮುಖ್ಯ ಪಡೆದದ್ದು ಸುಮಾರು ೧೯ನೇ ಶತಮಾನದ ಉತ್ತರಾರ್ಧದಲ್ಲಿ. ಅದಕ್ಕೂ ಹಿಂದೆ ಮಹಿಳೆಯರ ಆರೋಗ್ಯದ ಬಗ್ಗೆ ಕೈಕೊಂಡ ಯಾವುದೇ ಕಾರ್ಯಕ್ರಮದ ಪುರಾವೆ ಸಿಕ್ಕುವದಿಲ್ಲ. ಇದಕ್ಕೆ ಕಾರಣ ಹಲವಾರು. ಪರದೆಯ ಹಿಂದಿದ್ದ ಸ್ತ್ರೀಯ ಪಾರತಂತ್ರ್ಯ ಮತ್ತು ವಿದ್ಯಾಭ್ಯಾಸದ ಕೊರತೆ ಮತ್ತು ಅನಾಸಕ್ತಿ.

ಪಾಶ್ಚಿಮಾತ್ಯ ಮಹಿಳೆಯರ ಕಣ್ಣಿನಲ್ಲಿ ಇಂಡಿಯಾ ದೇಶದ ಮಹಿಳೆಯ ಬಗ್ಗೆ ಇದ್ದ ಕಳಕಳಿ ಮತ್ತು ವಿಕ್ಟೋರಿಯಾ ರಾಣಿಯ ಅಣತಿಯ ಮೇಲೆ, ಕೌಂಟೆಸ್ ಆಫ್ ಢಫರಿನ್,* ಇಂಡಿಯಾ ದೇಶದ ಮಹಿಳೆಯ ಆರೋಗ್ಯದ ಬಗ್ಗೆ ವಿವರವಾಗಿ ಚರ್ಚಿಸಿ ಮಹಿಳೆಯರ ಆರೋಗ್ಯದ ಪುರೋಭಿವೃದ್ಧಿಗೆ ನಿಧಿಯೊಂದನ್ನು ಸಂಗ್ರಹಿಸ ಬೇಕೆಂದು ಮತ್ತು ಪಾಶ್ಚಿಮಾತ್ಯ ವೈದ್ಯಕೀಯ ತರಬೇತಿಗೆ ಇಂಡಿಯಾ ದೇಶದ ಮಹಿಳೆಯನ್ನು, ಸಾಕಷ್ಟು ತಯಾರಿಸಬೇಕೆಂದು ೧೮೮೬ರಲ್ಲಿ 'ಕೌಂಟೆಸ್ ಆಫ್ ಢಫರಿನ್' ನಿಧಿಯನ್ನು ಸಂಗ್ರಹಿಸಲು ಉದ್ದೇಶಿಸಿದರು. ಮುಖ್ಯವಾದ ಉದ್ದೇಶ: ಇದರಿಂದ ಸಾಕಷ್ಟು ಮಹಿಳಾ ವೈದ್ಯರು ನರ್ಸ್‌ಗಳು ಕಾಲಕ್ರಮೇಣ ತರಬೇತು ಹೊಂದಿದಲ್ಲಿ, ಹೆರಿಗೆ, ಸ್ತ್ರೀರೋಗ ಇವುಗಳನ್ನು ಅವಲೋಕಿಸಿ ಮಹಿಳೆಗೆ ಉತ್ತಮವಾದ ವೈದ್ಯಕೀಯ ಸೌಲಭ್ಯವನ್ನು ಒದಗಿಸ ಬಹುದು ಎಂದು. ಹೀಗಾಗಿ ಮಹಿಳೆಯರ ಪುರೋಭಿವೃದ್ಧಿಗೆ ಮಹಿಳೆಯರಿಂದಲೇ ಸ್ಥಾಪಿತವಾದ ಸಂಸ್ಥೆ **'ಢಫರಿನ್ ಫಂಡ್.'**

ಬ್ರಿಟಿಷರ ಆಳ್ವಿಕೆಯಲ್ಲಿ ಆಸ್ಪತ್ರೆಗೆ ಡಾಕ್ಟರ್ ಎಂದರೆ ಅವನು ದಂಡಿನಲ್ಲಿರುವ ಸೈನಿಕರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವವನು. ಅವನು ಸಾಮಾನ್ಯ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಲು ನೇಮಿಸಿದಂಥಾ ವೈದ್ಯನಲ್ಲ. ಹೀಗಾಗಿ ಪರದೆಯ ಹಿಂದಿದ್ದ ಸ್ತ್ರೀಗೆ ವೈದ್ಯಕೀಯ ಸೌಲಭ್ಯದ ಬಗ್ಗೆ ಯಾವ ಅರಿವೂ ಇರಲಿಲ್ಲ. ಮೈಸೂರು ಸಂಸ್ಥಾನದಲ್ಲಿ ೧೮೮೬ರಲ್ಲಿ ಹೆಂಗಸರಿಗೆಂದು ವೈದ್ಯಕೀಯ ಸೌಲಭ್ಯವಿದ್ದ ಆಸ್ಪತ್ರೆಗಳು ಕೇವಲ ಎರಡು: (ಅ) ಹೆರಿಗೆ ಆಸ್ಪತ್ರೆ, ಬೆಂಗಳೂರು (ಆ) ಮೈಸೂರು ಮಹಾರಾಣಿ ಆಸ್ಪತ್ರೆ.

೧೮೮೬ ರಿಂದ ೧೮೯೦ರ ವರೆಗಿನ ಆಸ್ಪತ್ರೆಯ ದಾಖಲೆಗಳನ್ನು ನೋಡಿದರೆ ಗಂಡಸರು ೬೪.೪೦% ವೈದ್ಯಕೀಯ ಸೌಲಭ್ಯವನ್ನು ಉಪಯೋಗಿಸಿದ್ದರೆ, ಸ್ತ್ರೀಯರು ಕೇವಲ ೨೬% ವೈದ್ಯಕೀಯ ಸೌಲಭ್ಯವನ್ನು ಉಪಯೋಗಿಸಿರುವುದು ಕಂಡು ಬರುತ್ತದೆ.[೧] ಹೆರಿಗೆಯ ಕಾಲದಲ್ಲಿ ಸ್ತ್ರೀಗೆ ಮನೆಯಿಂದ ಹೊರಗೆ ಹೋಗುವುದಕ್ಕೆ ಧೈರ್ಯ ಸಾಲದು. ಅದಲ್ಲದೆ ಸೂಲಗಿತ್ತಿಯ ಸಹಾಯದಿಂದ ಮನೆಯಲ್ಲಿಯೆ ಹೆರಿಗೆಯನ್ನು ಮಾಡಿಸುವರು. ಆದರೆ ಮುಸಲ್ಮಾನರು ಆಸ್ಪತ್ರೆಯ ಸೌಲಭ್ಯವನ್ನು ಹೆಚ್ಚು ಉಪಯೋಗ ಪಡಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇದಕ್ಕೆಲ್ಲಾ ಕಾರಣ ಸ್ತ್ರೀ ವೈದ್ಯರ ಕೊರತೆ. ಸ್ತ್ರೀ ವೈದ್ಯರ ಕೊರತೆಯನ್ನು ನಿವಾರಿಸಲು ಸ್ಥಾಪಿಸಿದ ಸಂಸ್ಥೆ **'ಕೌಂಟೆಸ್ ಆಫ್ ಢಫರಿನ್ ಫಂಡ್'**. ಲೇಡಿ ಢಫರಿನ್‌ರ ಪ್ರಕಾರ ಇಂಡಿಯಾ ದೇಶದ ಮಹಿಳೆಗೆ ವೈದ್ಯಕೀಯ ಸೌಲಭ್ಯ ತಲುಪಬೇಕಾದರೆ ಅದು ಮಹಿಳಾವೈದ್ಯರಿಂದ ಮಾತ್ರ ಸಾಧ್ಯ. ಅಂತೇ ಮೈಸೂರಿನಲ್ಲಿದ್ದ ಬ್ರಿಟಿಷ್ ರೆಸಿಡೆಂಟ್ ಲ್ಯಾಲ್‌ರವರು ಪತ್ನಿಯೊಡನೆ ಮೈಸೂರು ಮಹಿಳಾ ಆಸ್ಪತ್ರೆಗೆ ಭೇಟಿಕೊಟ್ಟಾಗ, "It is a new nice Hospital but as the doctors are men it is not yet a great success so far as Purdha patients are concerned"[೨],. ಎಂಬ ಉದ್ಗಾರ ಬಂತು.

ಸಂಸ್ಥೆಯ ಮುಖ್ಯ ಉದ್ದೇಶ

ಈ ಸಂಸ್ಥೆಗೆ ಬ್ರಿಟಿಷ್ ಸಂಸ್ಥಾನದ ಅಧಿಕಾರಿಗಳು, ಹಾಗು ಸ್ಥಳೀಯ ಗಣ್ಯ ನಾಗರಿಕರ ಪ್ರೋತ್ಸಾಹವಿತ್ತು. ಇದರ ಪ್ರಧಾನ ಸೆಂಟ್ರಲ್ ಕಮಿಟಿಯೊಂದು ಕಲ್ಕತ್ತಾದಲ್ಲಿದ್ದು ಸ್ಥಳೀಯ ಮುಖ್ಯ

* ಫ್ಲಾಟ್ ನಂ.೪೬, ಶ್ಯಾಮಲ, ೧ನೇ ಅಂತಸ್ತು, ಮಾತುಂಗ, ಮುಂಬಯಿ - ೪೦೦ ೦೧೯

ಕಮಿಟಿಗಳು ತಮ್ಮ ಅಂಗ ಸಂಸ್ಥೆಗಳನ್ನು ಹೊಂದಿದ್ದವು. ಸಂಸ್ಥೆಯ ಮುಖ್ಯ ಉದ್ದೇಶ : (೧) ಮಹಿಳಾ ವೈದ್ಯಕೀಯ ತರಬೇತಿ ಮತ್ತು ಮಹಿಳಾ ಆಸ್ಪತ್ರೆ ಸಹಾಯಕ ಡಾಕ್ಟರ್ ಮತ್ತು ನರ್ಸ್ ಹಾಗು ಸೂಲಗಿತ್ತಿಯರ ತರಬೇತಿ (೨) ಮಹಿಳೆಯರಿಗೆಂದು ಆಸ್ಪತ್ರೆಯನ್ನು ಸ್ಥಾಪಿಸುವದು (೩) ಸ್ಥಳೀಯ ಧನಿಕರಿಂದ ಹಣ ಸಂಗ್ರಹಿಸುವದು (೪) ಮಹಿಳಾ ಡಾಕ್ಟರರ ನೇತೃತ್ವದಲ್ಲಿ ಮಹಿಳಾ ವಾರ್ಡ್ ಸ್ಥಾಪಿಸುವದು.

ಇದಕ್ಕೆ ಸದಸ್ಯತ್ವ: (೧) ಲೈಫ್ ಕೌನ್ಸಿಲರು (೨) ಆಜೀವ ಸದಸ್ಯರು (೩) ಸಾಧಾರಣ ಸದಸ್ಯರು. ರೂ. ೫೦೦೦ ಅಥವಾ £ ೫೦೦ ಕೊಟ್ಟವರು ಲೈಫ್ ಕೌನ್ಸಿಲರು. ಸಾಧಾರಣ ಸದಸ್ಯರು ರೂ. ೫ ಅಥವಾ ೧೦ ರೂ. ಕೊಡಬೇಕಾಗಿತ್ತು. ಮೊಟ್ಟಮೊದಲನೆ ಸದಸ್ಯರು (Life Councillor) ಅಂದರೆ (೧೮೮೬) ಮೈಸೂರು ಮಹಾರಾಜರು. ದಿವಾನ ಶೇಷಾದ್ರಿಐಯರ್ ಮತ್ತು ಶಂಕರ್ ಕನ್ನಮಯ್ಯ ಆಜೀವ ಸದಸ್ಯತ್ವವನ್ನು ಹೊಂದಿದ್ದರು.[೬] ಇದರಿಂದ ರಾಜಪ್ರೋತ್ಸಾಹ ಇರುವದು ಕಂಡುಬರುತ್ತದೆ. ೧೮೯೩ರಲ್ಲಿ ಮೈಸೂರು ಮಹಾರಾಜರು ಮದ್ರಾಸಿನ ಬ್ರಾಂಚಿಗೆ ಪೋಷಕ ರಾಗಿರುವದು ಕಂಡುಬರುತ್ತದೆ. ಢಫರಿನ ಶಾಖೆಗಳು ಮುಂಬಯಿ,



ಪಂಜಾಬ್, ಬರ್ಮ,ಸೆಂಟ್ರಲ್ ಪ್ರಾವಿನ್ಸ್, ಬೆಂಗಾಲ್ ಮತ್ತು ಮೈಸೂರುಗಳಲ್ಲಿ ಇದ್ದವು.[೭]

ಮಹಿಳಾ ವೈದ್ಯಾಲಯದ ಮೊದಲ ಹೆಜ್ಜೆಗಳು

ಇಂಗ್ಲೆಂಡಿನಿಂದ ವೈದ್ಯಕೀಯ ತರಬೇತಿ ಹೊಂದಿದ ಡಾಕ್ಟರ್ ಒಬ್ಬರು ಬಂದು ತನ್ನ ಸಹಾಯವನ್ನು ಒದಗಿಸಿದರೆ ಸುಮಾರು ೩೦೦ ರೂ. ಮಾಸಿಕವೇತನ. ಅದಲ್ಲದೆ ಡಾಕ್ಟರ್‌ಗಳ ವಸತಿ ಇವುಗಳಿಲ್ಲದ ಸ್ಥಳೀಯ ಜಾಗದಲ್ಲಿ ನಾನಾ ತರಹದ ತೊಂದರೆ ಯನ್ನು ಎದುರಿಸಬೇಕಾಗಿತ್ತು. ಆದ್ದರಿಂದ ಈ ಡಾಕ್ಟರ್‌ಗಳ ತರಬೇತಿಗಿಂತ ನರ್ಸ್ ಮತ್ತು ಸೂಲಗಿತ್ತಿಯರ ತರಬೇತಿಗೆ ಸರ್ಕಾರವು ಹೆಚ್ಚು ಗಮನವನ್ನು ಹರಿಸಿತು.

೧೮೮೭ರಲ್ಲಿ ಸರ್ಕಾರವು ಇಬ್ಬರು ಲೇಡಿ ಡಾಕ್ಟರರ ಸೌಲಭ್ಯವನ್ನು ಒದಗಿಸಿತು. ಮತ್ತು ತಾಲೂಕು ಆಸ್ಪತ್ರೆಗಳಿಗೆ ಸರಕಾರದಿಂದ ತರಬೇತಿ ಹೊಂದಿದ ಮಿಡ್‌ವೈಫ್‌ಗಳನ್ನು ನೇಮಿಸಿತು. ಮೈಸೂರಿನಿಂದ ೧೮೮೭ರಲ್ಲಿ ೧೧ ಜನ ಮಿಡ್‌ವೈಫ್‌ಗಳು ತರಬೇತಿ ಹೊಂದಿದರು. ಮೈಸೂರು, ಬೆಂಗಳೂರು ಆಸ್ಪತ್ರೆಗಳಲ್ಲೂ ಸ್ತ್ರೀಯರಿಗೆ ತರಬೇತಿ ಶಾಲೆಗಳನ್ನು ಆರಂಭಿಸಿದ್ದೇ ಅಲ್ಲದೆ ಮದ್ರಾಸಿನ Lying in Hospital ನಲ್ಲಿ ತರಬೇತಿಗಾಗಿ ಕಳುಹಿಸಿತು. ಇದಲ್ಲದೆ ಢಫರಿನ್ ಫಂಡ್ ಸಹಾಯ ಒದಗಿಬಂತು.

ಗ್ರಾಮೀಣ ಜನರು ಸಾಮಾನ್ಯವಾಗಿ ವೈದ್ಯಕೀಯ ಡಾಕ್ಟರರ ಸಹಾಯವನ್ನು ಪಡೆಯದೆ 'ದಾಯಿಯಿಂದ' ಹೆರಿಗೆ ಮಾಡಿಸುವರು. ಅನುಭವವಿಲ್ಲದ ದಾಯಿಯಿಂದ ಹೆರಿಗೆ ಮಾಡಲ್ಪಟ್ಟು ಮಗು ಹುಟ್ಟುವದಕ್ಕೆ ಮುನ್ನ ಮರಣವನ್ನಪ್ಪುವುದು. ಆದ್ದರಿಂದ ೧೮೮೭ರ ಹೊತ್ತಿಗೆ ಸರ್ಕಾರದ ಗಮನ ಸುತ್ತ ಮುತ್ತ ಇದ್ದ ಹಳ್ಳಿ ಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದರಲ್ಲಿ ಕೇಂದ್ರೀಕರಿಸಿ ಸೂಲಗಿತ್ತಿಯರಿಗೆ ವಿಶೇಷ ಟ್ರೇನಿಂಗ್ ಕೊಡುವುದರ ಮೂಲಕ ಮಕ್ಕಳ ಮರಣ ಸಂಖ್ಯೆಯನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಯಿತು. ಮತ್ತು ಸರ್ಕಾರ ಹೆಚ್ಚಿನ ಖರ್ಚನ್ನು ಭರಿಸಿತು. ೧೮೮೬ರಲ್ಲಿ ೪ ಜನ ತರಬೇತಿ ಹೊಂದಿದ ಸೂಲಗಿತ್ತಿಯರಿದ್ದರೆ ೧೮೯೦ರಲ್ಲಿ ೧೧ ಜನ ತರಬೇತಿ ಹೊಂದಿದ್ದರು.

ಆಸ್ಪತ್ರೆಯ ಮೇಲೆ ಮಾಡಿದ ಖರ್ಚುಗಳು

		ಮೈಸೂರು	ಬೆಂಗಳೂರು
೧೮೮೬	ರೂ	೪೮೨೬	೪೨೯೦
೧೮೮೭	'	೪೪೮೪	೪೫೩೯
೧೮೮೮	'	೪೯೩೭	೫೮೨೧
೧೮೮೯	'	೫೧೩೮	೬೩೦೬
೧೮೯೦	'	೫೧೮೦	೬೨೪೫

ಢಫರಿನ್ ಫಂಡ್‌ನಿಂದ ಮೈಸೂರಿಗಾದ ಲಾಭವೆಂದರೆ ಹೆಚ್ಚಿನ ಹಣ ಸಂಸ್ಥೆಯಿಂದ ಕೊಡಲ್ಪಡದಿದ್ದರೂ ಸರ್ಕಾರದ ವತಿಯಿಂದ ಮತ್ತು ಸಂಸ್ಥೆಯಿಂದ ಸುಮಾರು ಜನ ಸೂಲಗಿತ್ತಿಯರು ತರಬೇತಿ

ಹೊಂದಿ, ಬೆಂಗಳೂರು, ಮೈಸೂರಿನಂಥ ದೊಡ್ಡ ಊರುಗಳಲ್ಲ ಲ್ಲದೆ ಹಳ್ಳಿಗಳಿಗೂ, ಸಾಮಾನ್ಯರಿಗೂ ವೈದ್ಯಕೀಯ ಸೌಕರ್ಯ ಒದಗುವಂತಾಗಿದ್ದು. ೧೮೯೪ರಲ್ಲಿ ೫ ಜನ ಸೂಲಗಿತ್ತಿಯರು ತರಬೇತಿ ಪಡೆದು ತೇರ್ಗಡೆ ಹೊಂದಲಾಗಿ ತಾಲೂಕುಗಳಿಗೆ ವೈದ್ಯಕೀಯ ಸೌಕರ್ಯಒದಗಿತು. ೧೮೯೫ರಲ್ಲಿ ಮಿಸ್. ಗೋವಿಂದರಾಜುಲು (LRSP) ಎಂಬ I grade Doctor ನ್ನು ಮೈಸೂರು ಆಸ್ಪತ್ರೆಯಲ್ಲಿ ನೇಮಿಸಲಾಯಿತು. ಇದಲ್ಲದೆ ಮೈಸೂರು, ಬೆಂಗಳೂರು, ಕೋಲಾರ, ಶಿವಮೊಗ್ಗ ಚಿಕ್ಕಮಗಳೂರಿನಲ್ಲಿ, II grade ಮಹಿಳಾ ಡಾಕ್ಟರ್‌ಗಳು ಢಫರಿನ್ ಫಂಡ್ ಅಂಗವಾಗಿಯೋ, ಅಥವಾ ಸ್ವತಂತ್ರ ವಾಗಿಯೋ ನೇಮಿಸಲ್ಪಟ್ಟಿದ್ದರು. ವಿದ್ಯಾರ್ಥಿ ವೇತನದ ಮೂಲಕ, ಸ್ಥಳೀಯರನ್ನೂ ವೈದ್ಯಕೀಯ ವೃತ್ತಿ ಆಕರ್ಷಿಸಿತು. L.M.S. degree ಪಡೆದು ಡಾಕ್ಟರ್ ಆಗಬಹುದಿತ್ತು. ಆದರೆ I grade doctor ಆಗಬೇಕಾದಲ್ಲಿ ಅದಕ್ಕೆ ವಿದೇಶದ ಡಿಗ್ರಿ ಬೇಕಾಗಿತ್ತು.

೧೮೯೮ರ ವೇಳೆಗೆ ಸ್ಥಳೀಯ ಕ್ರಿಶ್ಚಿಯನ್, ಯೂರೋಪಿಯನ್ ಮತ್ತು ಮಹಮ್ಮದಿಯ ಮಹಿಳೆಯರು ಸೂಲಗಿತ್ತಿ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದ್ದೇ ಅಲ್ಲದೆ, ಮುಸ್ಲಿಂ ಪಂಗಡದ ಮೊಟ್ಟಮೊದಲು ಪಾಸುಮಾಡಿದ ಏಕೈಕ ಮಹಿಳೆ, ಮೈಸೂರಿನ ಪ್ಲೇಗ್ ಉಪದ್ರವದಲ್ಲಿ ಸಮರ್ಪಕವಾಗಿ ವೈದ್ಯಕೀಯ ಜಮೇದಾರಿ ಯನ್ನು ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.[೫]

ಕೌಂಟಿಸ್ ಆಫ್ ಢಫರಿನ್ ಫಂಡ್‌ನಿಂದ ಮೈಸೂರಿನಲ್ಲಿ ಜಾಗ್ರತಿಯಾದದ್ದು ನಿಜ. ಹಲವಾರು ನಾಗರೀಕರ ಸಹಾಯ[೬] ಮತ್ತು ಸರ್ಕಾರದವತಿಯಿಂದ ಲೇಡಿ ಕರ್ಜನ್ ಆಸ್ಪತ್ರೆಯನ್ನು ೧೯೦೦ರಲ್ಲಿ ತೆರೆಯಲಾಯಿತು. ಮಿಡ್‌ವೈಫ್‌ಗಳ ಸಂಖ್ಯೆಯು ಹೆಚ್ಚಿದ್ದಲ್ಲದೆ ವೈದ್ಯಕೀಯ ಸೌಲಭ್ಯ ಎಲ್ಲಾ ಊರಿಗೂ ತಲಪಿತು.[೭] ಇದಲ್ಲದೆ ೧೯೦೨ರಲ್ಲಿ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿದ್ದಲ್ಲದೆ ಅದಕ್ಕೆ ತಗಲಿರುವ ವೆಚ್ಚವನ್ನು ಗಮನಿಸಿರೆ ಢಫರಿನ್ ಫಂಡ್‌ನ ಪ್ರಭಾವ ಕಂಡುಬರುತ್ತದೆ.

Name of the Hospital Dispensary built by the Connected with the Association

	Name	Amount Obtained
1.	Her Highness the Maharani's Hospital Mysore	22,622
2.	Maternity Hospital Bangalore	33,034
3.	" " Chikmagalur	5,500
4.	" " Hassan	4,060
5.	Female Dispensary attached to City Hospital (Bangalaore Tumkur Chitradurg)	6,000
6.	Lady Curzan Hospital	1,10,000

(Mysore Government and Native Gentlemen)

ನರ್ಸ್ ತರಬೇತಿಗೆ ಸ್ಥಳೀಯರು ಹೋಗುತ್ತಿದ್ದದು ಬಹಳ ಕಡಿಮೆ. ಅದೂ ಅಲ್ಲದೆ ತರಬೇತಿ ಪೂರ್ಣಹೊಂದಿ ಗ್ರಾಮಾಂತರ ಗಳಿಗೆ ಕೆಲಸಕ್ಕಾಗಿ ಹೋದಾಗ ಅವರಿಗೆ ಸರಿಯಾದ ವಸತಿ ಇಲ್ಲದೆ ಹೋದರೆ ಅವರು ಹೊಂದಿಕೊಳ್ಳಲಾರರು. ಅದೂ ಅಲ್ಲದೆ ಬ್ರಾಹ್ಮಣ ವಿಧವೆಯರು ಒಂದು ಹೊತ್ತು ಉಪವಾಸಮಾಡಿ ಕೆಲಸವನ್ನು ನಿರ್ವಹಿಸಲು ಕಷ್ಟವಾಗುತ್ತಿತ್ತು. ಅದೂ ಅಲ್ಲದೆ ಅವರು ತಿಂಗಳಲ್ಲಿ ಮೂರು ದಿನ ರಜ ಬೇಡುತ್ತಾರೆ. ಹೀಗಾಗಿ ಬ್ರಾಹ್ಮಣ ವಿಧವೆಯರಿಗೆ ಈ ವೃತ್ತಿ ಸರಿಯಲ್ಲ ಎಂದು ವಾದವಾಯ್ತು.

ವಿಕ್ಟೋರಿಯಾ ಮೆಮೊರಿಯಲ್ ಸ್ಕಾಲರ್‌ಷಿಪ್‌ನಿಂದ (೧೯೦೪) ಹಲವಾರು ವಿದ್ಯಾರ್ಥಿಗಳಿಗೆ ಸೂಲಗಿತ್ತಿ ತರಬೇತಿಗೆ ಪ್ರೇರೇಪಿಸಲಾಯಿತು. ಢಫರಿನ್ ಫಂಡಿನಿಂದ ತರಬೇತಿ ಹೊಂದುವ ವಿದ್ಯಾರ್ಥಿನಿಗೆ ಸಾಕಷ್ಟು ಪಠ್ಯಪುಸ್ತಕ ಓದುವ ಪರಿಚಯ ಇರಬೇಕಾಗಿತ್ತು. ಲೇಡಿ ಕರ್ಜನ್ ಈ ಕುಂದುಕೊರತೆಗಳನ್ನು ಅಭ್ಯಸಿಸಿ ಇರುವ ದಾಯಿಗಳಿಗೆ ಸೂಕ್ತ ತರಬೇತಿ ಕೊಟ್ಟಲ್ಲಿ ಸ್ಥಳೀಯ ಭಾಷೆಯಾದ ಕನ್ನಡದ ಮೂಲಕ ಅವರು ತಮ್ಮ ಕೆಲಸವನ್ನು ಸಮರ್ಪಕವಾಗಿ ನಡೆಸಬಹುದು ಎಂದು ಅಭಿಪ್ರಾಯ ಪಟ್ಟರು. ಮತ್ತು ಇದಕ್ಕಾಗಿ ಕನ್ನಡದಲ್ಲಿ ಸೂಲಗಿತ್ತಿಯರಿಗೆಂದೇ ತಯಾರಾದ ಪುಸ್ತಕ ಪ್ರಕಟಿಸಲ್ಪಟ್ಟಿತು.

ವಿಕ್ಟೋರಿಯಾ ಮೆಮೊರಿಯಲ್ ಫಂಡ್‌ನಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನೂ ಕೊಟ್ಟು ತರಬೇತಿಗೆ ಕಳುಹಿಸಲಾಗುತ್ತಿತ್ತು. ೧೯೦೫ರ ಢಫರಿನ್ ವಾರ್ಷಿಕ ವರದಿಯಿಂದ ನರಸಮ್ಮ ಎಂಬ ಬ್ರಾಹ್ಮಣ ವಿದ್ಯಾರ್ಥಿನಿಯು ಸೂಲಗಿತ್ತಿಯ ತರಬೇತಿಗೆ ಸೇರಿರುವುದನ್ನು ಕಾಣುತ್ತೇವೆ. ಇದಲ್ಲದೆ ಸ್ಥಳೀಯರಾದ ಮಾಣಿಕ್ಯಮ್ಮ (ಕ್ರಿಶ್ಚಿಯನ್) ವೆಂಕಟಮ್ಮ (ಹಿಂದು) ತರಬೇತಿ ಹೊಂದಿರುವದು ಕಾಣಸುತ್ತದೆ. ಇದರಿಂದ ತರಬೇತಿ ಹೊಂದಿದ ಸ್ಥಳೀಯರು ಮತ್ತು ಕನ್ನಡ ಭಾಷೆ ಬರುವ ಸೂಲಗಿತ್ತಿಯರು ದೊರಕುವಂತಾಯ್ತು. ತಿಂಗಳ ತರಬೇತಿಗೆ ಖರ್ಚಾಗುತ್ತಿದ್ದುದು ೧೦ರೂ. ಆದರೆ ಇದಕ್ಕೆಲ್ಲ ಹಲವಾರು ದಾಯಿಯರ ವಿರೋಧವಿತ್ತು. ದಾಯಿಯರು ತಮ್ಮ ಕುಂದುಕೊರತೆಗಳನ್ನು ಮುಂದುಮಾಡಿ ತಮಗೆ ಇದು ಅವಮಾನಕರವೆಂದೂ, ಮತ್ತೆ ಹಲವರು ಐರೋಪ್ಯ ನಾಗರೀಕತೆಯನ್ನು ತಮ್ಮ ಮೇಲೆ ಹೇರುತ್ತಿದ್ದಾರೆಂದೂ ಆಕ್ಷೇಪಿಸಿದರು. ಇಷ್ಟೆಲ್ಲಾ ವಿರೋಧವಿದ್ದರೂ ಲೇಡಿ ಕರ್ಜನ್‌ರವರ ಆಣತಿಯಂತೆ 'ಮ್ಯಾನುಯಲ್ ಆಫ್ ಮಿಡ್‌ವೈಫರಿ'' ಎಂಬ ಪುಸ್ತಕವನ್ನು ಲೇಡಿ ವಿಕ್ಟೋರಿಯಾ ಮೆಮೋರಿಯಲ್ ಸ್ಕಾಲರ್‌ಷಿಪ್ ವತಿಯಿಂದ Lt. Col C. P. Lukis M.B. I.M.S ರವರಿಂದ ಬರೆಸಿ, ಮುನ್ನುಡಿಯನ್ನು B. Franklin ಅವರಿಂದ ಬರೆಸಲಾಯ್ತು. ಇದಕ್ಕೆ ಉತ್ತೇಜನವಾಗಿ ಮೈಸೂರು ಸರ್ಕಾರದ ವತಿಯಿಂದ ಕನ್ನಡ ಆವೃತ್ತಿ ಹೊರಬಂದಿತು. ಈ ಕನ್ನಡದ ಪ್ರತಿಗಳು ಚಿತ್ರವನ್ನು ಹೊಂದಿದ್ದುವು. ಇನ್ನೊಂದು ಪಾಟಿಯಾಲ ಸ್ಟೇಟ್‌ನಿಂದ ಉರ್ದು ಪ್ರತಿ ಹೊರಬಂತು. ೧೯೧೦ರಲ್ಲಿ ಮೈಸೂರಿನಿಂದ ೨೦ ಜನ ವಿದ್ಯಾರ್ಥಿಗಳು ಮಿಡವೈಫ್ ಟ್ರೈನಿಂಗ್ ತರಬೇತಿ ಹೊಂದಿದ್ದರು. ೧೯೧೪ರ ಹೊತ್ತಿಗೆ ಎರಡು ವರ್ಷ ತರಬೇತಿ ಹೊಂದಿದ ಸೂಲಗಿತ್ತಿಯರನ್ನು ನಾವು ಕಾಣಬಹುದು

ಮತ್ತು ೧೯೨೦ರಿಂದ ಆಚೆಗೆ ಸ್ಥಳೀಯ ಮಹಿಳಾ ಡಾಕ್ಟರುಗಳು ವೈದ್ಯಕೀಯ ಸೇವೆ ಕೈಗೊಂಡಿರುವುದನ್ನು ಕಾಣಬಹುದು.

ಬ್ರಿಟಿಷರ ರಾಜಕೀಯದಲ್ಲಿ ಪಾಶ್ಚಾತ್ಯ ಔಷಧಿ ಪದ್ಧತಿ ಅತ್ಯಂತ ಮುಖ್ಯಪಾತ್ರವನ್ನು ವಹಿಸಿತು. ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಪಡೆದ ಡಾಕ್ಟರಿಗೆ ಇಂಡಿಯಾದಲ್ಲಿ ಸಾಕಷ್ಟು ಅನುಭವ ಅವಕಾಶ ಸಿಕ್ಕಿತು. ಇದಲ್ಲದೆ ಇಂಡಿಯಾದಲ್ಲಿ ಸಾಕಷ್ಟು ಪ್ರೋತ್ಸಾಹ ದೊರಕಿತು. ಇಂಡಿಯಾ ದೇಶದ ಮಹಿಳೆಯ ಆರೋಗ್ಯದ ಕಾಳಜಿ ಒಂದು ಆಕಸ್ಮಿಕವೆನ್ನಬಹುದು ಎಂದು (April Seminar-1995) ಮಾಸಪತ್ರಿಕೆ ವಿವರಿಸಿದೆ. *The Politics of Gender and Medicine in Colonial India: The Countess of Dufferin's Fund 1885-1888* ಎಂದು ಬರೆಯುತ್ತಾ ಮನಿಷಾಲಾಲ್‌ರವರು ಕೂಡ ಇದೇ ರೀತಿ ಅಭಿಪ್ರಾಯ ಪಟ್ಟಿರುತ್ತಾರೆ.

ಸರ್ಕಾರದ ವತಿಯಿಂದ ಪ್ರೋತ್ಸಾಹದ, ಪರಿಣಾಮವಾಗಿ ವೈದ್ಯಕೀಯ ಅಭ್ಯಾಸದ ಕಡೆ ಸ್ಥಳೀಯರ ಗಮನ ಹರಿಸುವಿಕೆ, ಮತ್ತು ತರಬೇತಿಯ ನಂತರ ಸರ್ಕಾರದಲ್ಲಿ ಉತ್ತಮವಾದ ಕೆಲಸ ಮತ್ತು ವೈದ್ಯಕೀಯ ವೃತ್ತಿಯ ನಿಶ್ಚಿತವಾದ ಧೋರಣೆ, ಇವುಗಳು ಗಮನಿಸಬೇಕಾದ ಅಂಶಗಳು.

ರಾಜಕೀಯ ಧೋರಣೆಯಿಂದ ಬೇರೆ ಬೇರೆ ವೈದ್ಯ ಪದ್ಧತಿಯಲ್ಲಿದ್ದ ಅನುಕರಣೆ ಕಡಿಮೆಯಾಗಿ, ಹೆಚ್ಚಾಗಿ ಪಾಶ್ಚಿಮಾತ್ಯ ಔಷಧ ಪದ್ಧತಿ ಸರ್ವಾನುಮತವಾಗಿ ಅಂಗೀಕರಿಸಲ್ಪಟ್ಟಿತು. ೧೯ನೇ ಶತಮಾನದ ಕೊನೆಯಲ್ಲಿ ಸ್ಥಳೀಯ ಔಷಧ ಪದ್ಧತಿ ಹಿಂದುಳಿದ ಜನಾಂಗದ ಔಷಧ ಪದ್ಧತಿಯೆಂದೂ, ಇದನ್ನು ನಾಗರೀಕ ಜನರು ಅನುಕರಣೆ ಮಾಡಕೂಡದೆಂದು ನಿಶ್ಚಯಿಸಲ್ಪಟ್ಟಿತು. ಆದ್ದರಿಂದ ಹಲವಾರು ವರುಷ ಸ್ಥಳೀಯ ಔಷಧ ಪದ್ಧತಿಯು ಹಿಂದುಳಿಯ ಬೇಕಾಯಿತು. (೧೯೩೦) ಆದರೆ ಇತ್ತಿಚೆಗೆ ಸ್ಥಳಿಯ ಪದ್ಧತಿಯ ಔಷಧಿ ಬೆಳಕಿಗೆ ಬಂದು ಪುನರುತ್ಥಾನವಾಗಿದೆ. ಸಮುದಾಯಕ್ಕೆ ಆರೋಗ್ಯ ಸುಧಾರಣೆಯ ಕೆಲಸ ಹಲವಾರು ಕಡೆ ನಡೆದಿದೆ. ಮತ್ತು ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯು ಕೇವಲ ಹಲವರಿಗಾಗಿ ಮೀಸಲಾದದ್ದು ಎಂಬ ನಂಬಿಕೆ ಸಡಿಲಿಸಿದೆ. ಇತ್ತೀಚೆಗೆ ಮಹಿಳೆಯರ ಆರೋಗ್ಯ ಸುಧಾರಿಸಿದೆ. ಮತ್ತು ಇದಕ್ಕೆ ಹಲವಾರು ಮಾಧ್ಯಮಗಳು ಕಾರಣವಾಗಿದೆ. ಇದನ್ನು ಹಳ್ಳಿಗಳಲ್ಲೂ ಕಾಣಬಹುದು.

'ಕೌಂಟೆಸ್ ಆಫ್ ಢಫರಿನ್' ಸಂಸ್ಥೆ ಮೈಸೂರಿನಲ್ಲಿ ಮಹಿಳಾ ವೈದ್ಯಕೀಯ ಜಾಗೃತಿ ಉಂಟುಮಾಡಿದ್ದಂತೂ ನಿಜ. ಇದು ಮೈಸೂರಿನ ಸಾಮಾಜಿಕ ಸುಧಾರಣೆಯಲ್ಲಿ ಮುಖ್ಯವಾದ ಅಂಶವೆಂದು ನನಗೆ ಅನ್ನಿಸುತ್ತದೆ.

*

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*. ಕ್ರಿ.ಶ. ೧೮೮೪-೮೮ರ ಅವಧಿಯಲ್ಲಿ ಇಂಡಿಯಾದ ವೈಸರಾಯ್ ಆಗಿದ್ದ ಲಾರ್ಡ್ ಢಫರಿನ್ ದಿ ಕೌಂಟ್ ಅವರ ಪತ್ನಿಯೇ ಕೌಂಟೆಸ್ ಆಫ್ ಢಫರಿನ್ ಅಥವಾ ಲೇಡಿ ಢಫರಿನ್. ಇವರು ಭಾರತದ ಮಹಿಳೆಯರಿಗೆ ವೈದ್ಯಕೀಯ ಸೇವೆಸಲ್ಲಿಸುವುದರ ಮೂಲಕ ಪ್ರಸಿದ್ಧರಾದರು.

೧. **Report on the Administration of Mysore for the year 1886-87 to 1890-91 & See also Asiatic Quarterly Review,** April 1886. p.237

೨. Marchioness of Dufferin and Ava: our Viceregal Life in India, Selections from my Journey Vol. II. p. 85, 1889

೩. **The Countess of Dufferin Fund: Eighth Annual Report** of the National Association for Supplying Female Medical Aid to the Women of India for the year 1892. p.103

೪. **Funds Collected in various branches, upto 1st Jan 1887:**
Bengal Rs. 55398 Burma Rs 4700; N.W. Oudh 91,500; Berar Rs 6219; Central Province Rs. 42,834; Punjab 4,500; Bombay Rs. 65,915; Madras Rs. 22,069; Mysore Rs.11,000 = Total: Rs, 3,55635 - (Source) Calcutta Review, Vol. LXXXX, July 1887

೫. Dufferin Report - 1898

೬. ಗಣ್ಯನಾಗರೀಕರಲ್ಲಿ ಧನಸಹಾಯ ಮಾಡಿದವರು: ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್, ವಿ. ಗಂಗಾಧರ ಚೆಟ್ಟಿಯಾರ್, ಬಿ.ಪಿ. ಅಣ್ಣಾಸ್ವಾಮಿ ಮೊದಲಿಯಾರ್, ಹಾಜಿ ಇಸ್ಮೆಯೆಲ್ ಸೇಟ್, ಬೈರಾಂಜಿ ನವರೋಜಿ ದರಾಬ್‌ಜಿ ಸೇಟ್; ಸರ್ಕಾರದ ವತಿಯಿಂದ ೧ಲಕ್ಷ ರೂಪಾಯಿ ಸಂದಿತು.

೭. Midwives Trained & Supplied : Bangalore-14, Kolar-12, Tumkur-11, Mysore-16, Hassan-8, Shimoga-10, Kadur-7, Chitradurga-9

ಪ್ರೊ॥ ಸಿ.ವಿ. ಮಠದ*

ಸ್ವಾತಂತ್ರ್ಯಹೋರಾಟದಲ್ಲಿ ಯಾಳಗಿ ಮನೆತನದ ಪಾತ್ರ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮನೆತನಗಳು ಭಾಗವಹಿಸಿ ಅದಕ್ಕಾಗಿ ವಿವಿಧ ರೀತಿಯಾಗಿ ತೊಂದರೆಗಳನ್ನು ಅನುಭವಿಸಿದ ನಿದರ್ಶನಗಳಿವೆ. ಅಂಥ ಮನೆತನಗಳಲ್ಲಿ ಉತ್ತರ ಕರ್ನಾಟಕದ ಬೆಳಗಾವಿಯ ''ಯಾಳಗಿ'' ಮನೆತನವೂ ಒಂದಾಗಿದೆ. ಈ ಮನೆತನದ ಬಹಳಷ್ಟು ಜನ ಜೈಲುವಾಸ ಅನುಭವಿಸಿದ್ದಾರೆ.

೧೯೪೨ರ 'ಕ್ವಿಟ್ ಇಂಡಿಯಾ' ದೇಶಬಿಟ್ಟು ತೊಲಗಿ ಚಳುವಳಿಯಲ್ಲಿ ಈ ಮನೆತನದ ೨೦ ಸದಸ್ಯರಲ್ಲಿ ೧೩ ಜನ ಜೈಲಿಗೆ ಹೋಗಿದ್ದರು. ಮನೆಯಲ್ಲಿ ಬರಿ ಚಿಕ್ಕಮಕ್ಕಳು ವಯಸ್ಸಾದವರು ಮಾತ್ರ ಇದ್ದರು. ಉತ್ತರ ಕರ್ನಾಟಕದಲ್ಲಿ ಈ ಯಾಳಗಿ ಮನೆತನವು ಸ್ವಾತಂತ್ರ್ಯ ಹೋರಾಟದಲ್ಲಿ ಬಹು ಮುಖ್ಯ ಪಾತ್ರ ವಹಿಸಿತ್ತು.

ಯಾಳಗಿ ಮನೆತನದಲ್ಲಿ ಮೊದಲು ಜೈಲುವಾಸ ಅನುಭವಿಸಿದವರೆಂದರೆ, ಗೋವಿಂದರಾವ್. ಸೆರೆ ಅಂಗಡಿ ಎದುರು ಪಿಕೆಟಿಂಗ್ ಹಾಗೂ ಸತ್ಯಾಗ್ರಹ ನಡೆಸಿದ ಕಾರಣಕ್ಕಾಗಿ ಎರಡು ಸಲ ಜೈಲುವಾಸ ಅನುಭವಿಸಿದ್ದರು. ಪರದೇಶಿ ಬಟ್ಟೆಗಳ ನಿಷೇಧದಲ್ಲಿಯೂ ಪ್ರಮುಖ ಪಾತ್ರವಹಿಸಿದ್ದರು. ಹಾಗೂ ಪರದೇಶಿ ಬಟ್ಟೆಗಳನ್ನು ಸುಟ್ಟುಹಾಕಿದ್ದರು. ಗೋವಿಂದರಾವ್ ಅವರ ವಿಚಾರದಂತೆ ಸ್ವಾತಂತ್ರ್ಯ ಬರಿ ಶಾಂತಿಯಿಂದ ಮಾತ್ರ ಸಿಗುವುದಿಲ್ಲ ಅದಕ್ಕಾಗಿ ಉಗ್ರ ಹೋರಾಟವೂ ಅವಶ್ಯವಿದೆ ಎಂದಾಗಿತ್ತು. ಅಂತೆಯೇ ಗೋವಿಂದರಾವ್ ''ಮ್ಯಾಝಿನಿ ಕ್ಲಬ್'' ಎಂಬ ಹೆಸರಿನಿಂದ ಯುವ ಸಂಘಟನೆಯನ್ನು ಪ್ರಾರಂಭಿಸಿದ್ದರು. ಜೊಸೇಫ್‌ಮ್ಯಾಝಿನಿಇಟಲಿಯ ದೊಡ್ಡ ಹೋರಾಟಗಾರ ನಾಗಿದ್ದನು. ಗೋವಿಂದರಾಯರು ಮಹಾರಾಷ್ಟ್ರದಲ್ಲಿಯ ಮೇಲ್ವರ್ಗದ ಉಗ್ರಗಾಮಿಗಳ ಜೊತೆ ಸಂಬಂಧ ಇಟ್ಟುಕೊಂಡಿದ್ದರು. ಹಾಗೆಯೇ ಪಂಜಾಬ್ ಬಂಗಾಳದಲ್ಲಿಯ ಉಗ್ರರ ಜೊತೆಗೂ ಕೂಡ ಸಂಬಂಧ ಇಟ್ಟುಕೊಂಡಿದ್ದರು. ಆ ಕಾಲಕ್ಕೆ ಕಾಂಗ್ರೆಸ್‌ನಲ್ಲಿ ಎರಡು ಬಣಗಳಿದ್ದವು. ಒಂದು ಉಗ್ರಗಾಮಿಗಳ ಬಣ, ಇನ್ನೊಂದು ಸೌಮ್ಯವಾದಿಗಳ ಬಣ. ಲಾಲ್, ಬಾಲ್, ಪಾಲ್ ಇವರು ಉಗ್ರವಾದಿಗಳ ಮುಖಂಡರು. ಇವರ ಜೊತೆ ಗೋವಿಂದರಾವ್ ಸಂಬಂಧ ಬೆಳೆಸಿದ್ದರು. ಯುವಕರನ್ನು ಇಂಥ ಉಗ್ರವಿಚಾರಗಳಿಂದ ಪ್ರಭಾವಿತಗೊಳಿಸುವ ವಿಚಾರವನ್ನು ಗೋವಿಂದರಾಯರು ಪ್ರಥಮವಾಗಿ ಈ ಭಾಗದಲ್ಲಿ ಪ್ರಾರಂಭಿಸುವ ಸಾಹಸಗೈದರು. ಹಾಗೆಯೇ ಕೆಲವು ಅಯುಧಗಳ ತಯಾರಿಕೆಯ ಬಗ್ಗೆಯೂ ಸಾಹಿತ್ಯವನ್ನು ಸಂಗ್ರಹಿಸಿ ಅವುಗಳ ತಯಾರಿಕೆಯಲ್ಲಿ ತೊಡಗಿದ್ದರು. ಯುವಕರಿಗೆ ಇಂಥ ಆಯುಧಗಳ ಉಪಯೋಗದ ಬಗ್ಗೆ ಶಿಕ್ಷಣ ನೀಡಿದರು. ಉಗ್ರವಾದಿಗಳಾದ ಗೋವಿಂದರಾಯರು ಯುವಕರನ್ನು ಹುರಿದುಂಬಿಸಿ ಬ್ರಿಟಿಷರ ವಿರುದ್ಧ ಧ್ವನಿ ಎತ್ತುವಂತೆ ಮಾಡಿದರು. ಬೆಳಗಾವಿ ಭಾಗದಲ್ಲಿಯೇ ಪ್ರಥಮವಾಗಿ ಇಂಥ ಉಗ್ರ ಹೋರಾಟಗಾರರ ಗುಂಪುಗಳನ್ನು ತಯಾರು ಮಾಡಿದವರಲ್ಲಿ ಗೋವಿಂದರಾಯರು ಪ್ರಥಮರೆನ್ನಬಹುದು.

ಗೋವಿಂದರಾಯರು ಆ ಸಮಯದ ಒಬ್ಬ ಉತ್ತಮ ಸಮಾಜ ಸೇವಕರಾಗಿ ಕೂಡ ಈ ಭಾಗದಲ್ಲಿ ಹೆಸರು ಮಾಡಿದ್ದರು. ಇವರು ನವೆಂಬರ್ ೧೮೮೮ರಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿಗ್ರಾಮದಲ್ಲಿ ಜನಿಸಿದರು. ಇವರ ಶಿಕ್ಷಣ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಆಯಿತು. ಇವರ ದೃಷ್ಟಿ ರಾಷ್ಟ್ರೀಯ ಆಂದೋಲನದತ್ತ ಇದ್ದುದರಿಂದ ಉಚ್ಚ ಶಿಕ್ಷಣದತ್ತ ಮನಸ್ಸು ಮಾಡಲಿಲ್ಲ. ಇವರ ತಂದೆತಾಯಿಗಳು ಬೇಗ ತೀರಿಕೊಂಡುದರಿಂದ ಮನೆಯಲ್ಲಿಯೇ ಹಿರಿಯರಾದ ಗೋವಿಂದರಾಯರಿಗೆ ಮನೆತನದ ಜವಾಬ್ದಾರಿ ಕೂಡ ಬಿದ್ದಿತು. ಗೋವಿಂದರಾಯರು ತಮ್ಮ ದಕ್ಷತೆ ಹಾಗೂ ಕಾರ್ಯತತ್ಪರತೆಗಳ ಬಗ್ಗೆ ಹೆಸರು ಮಾಡಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರು ತೆಗೆದುಕೊಂಡ ನಿಲುವು ಎಂಥವರನ್ನೂ ಬೆರಗುಗೊಳಿಸುವಂತೆ ಮಾಡಿತ್ತು. ಮನೆತನದ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಹೇಳಿಕೊಳ್ಳುವಂತೆ ಇದ್ದಿರಲಿಲ್ಲ. ಅವರ ತಂದೆ ಕಂದಾಯ ಇಲಾಖೆಯಲ್ಲಿ ಕಾರಕೂನರಾಗಿದ್ದರು. ನಂತರ ಎಕ್ಸೈಜ್ ಇನ್‌ಸ್ಪೆಕ್ಟರ್ ಎಂದು ಭಡ್ತಿಯಾಗಿದ್ದರು. ಗೋವಿಂದರಾಯರ ಸಹೋದರರಾದ ಜೀವನರಾವ್ ಹಾಗೂ ಕೃಷ್ಣರಾವ್ ಅವರೂ

---

* ಪ್ರಾಚಾರ್ಯರು, ಎಸ್.ಎಸ್. ಮಹಿಳಾ ಕಾಲೇಜ್, ಹಾವೇರಿ

ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಅಣ್ಣನ ಹಾದಿಯನ್ನೇ ಅನುಸರಿಸಿದರು.

"ಕರ್ನಾಟಕದ ಸಿಂಹ" ಎನಿಸಿಕೊಂಡ ಗಂಗಾಧರರಾವ್ ದೇಶಪಾಂಡೆಯವರ ಬೆಂಗಾವಲಾಗಿ ನಿಂತವರು ಗೋವಿಂದ ರಾಯರು. ಸ್ನೇಹಿತನಾಗಿ, ತತ್ವಜ್ಞಾನಿಯಾಗಿ, ಮಾರ್ಗದರ್ಶಿಯಾಗಿ, ಗೋವಿಂದರಾಯರು ಗಂಗಾಧರರಾಯರಿಗೆ ಸಹಕರಿಸುತ್ತಿದ್ದರು. ಹುದ್ಲಿಯ ಒಂದು ಕೊಲೆಯ ಮೊಕದ್ದಮೆಯಲ್ಲಿ ಗಂಗಾಧರರಾವ್ ಅವರ ಹೆಸರೂ ಸೇರಿತ್ತು. ಶಂಕರ ದೇಶಪಾಂಡೆಯವರ ಕೊಲೆಯ ಪ್ರಕರಣದಲ್ಲಿ ಗಂಗಾಧರರಾಯರ ವಿರುದ್ಧ ಖಟ್ಲೆ (ಕೇಸ್) ದಾಖಲಿಸಲು ಪೋಲಿಸರು ಯಶಸ್ವಿಯಾಗಿದ್ದರು. ಆದರೆ ಗೋವಿಂದರಾಯರ ಚಾಣಾಕ್ಷತನದಿಂದಾಗಿ ಪೋಲಿಸರು ಗಂಗಾಧರರಾಯರ ವಿರುದ್ಧ ಕೇಸ್ ದಾಖಲಿಸದಂತೆ ಕೆಲಸ ನಿರ್ವಹಿಸಿದ್ದರು. ಈ ಮೊಕದ್ದಮೆಯ ಮುಖ್ಯ ಸಾಕ್ಷಿಯಾದ ಮನೆಯ ಸೇವಕ ಹುಸೇನಸಾಬ್ ಎಂಬುವವನನ್ನು ಈ ಮೊಕದ್ದಮೆಯ ವಿಚಾರಣೆ ನಡೆದಾಗ ಕೋರ್ಟಿಗೆ ಹಾಜರಾಗದಂತೆ ನೋಡಿಕೊಂಡವರು ಗೋವಿಂದರಾಯರು. ಮುಖ್ಯ ಸಾಕ್ಷಿ ಇಲ್ಲದುದಕ್ಕಾಗಿ ಗಂಗಾಧರರಾಯರ ವಿರುದ್ಧ ನಡೆದ ಮೊಕದ್ದಮೆ ಬಿದ್ದು ಹೋಯಿತು. ಮುಂದುವರೆದು ಕೋರ್ಟಿನಲ್ಲಿ ಸಾಕ್ಷಿಗಾಗಿ ಇಟ್ಟ ಮಾನವ ಮೂಳೆಗಳನ್ನು ಬದಲಾಯಿಸಿ ಅವುಗಳ ಸ್ಥಳದಲ್ಲಿ ಆಡಿನ ಮೂಳೆಗಳನ್ನು ಇಡಲಾಯಿತು. ನಂತರ ಮೂಳೆಗಳ ತಜ್ಞರು ಪರೀಕ್ಷಿಸಿ ಇವು ಮಾನವನ ಮೂಳೆಗಳಲ್ಲ ಎಂದು ಅಭಿಪ್ರಾಯ ಪಟ್ಟಾಗಲೇ ಪೋಲಿಸರ ಎಲ್ಲ ಪ್ರಯತ್ನಗಳೂ ಪೂರ್ತಿಯಾಗಿ ಬಿದ್ದು ಹೋದವು. ಗಂಗಾಧರರಾಯರು ನಿರಪರಾಧಿ ಎಂದು ಘೋಷಿಸಲಾಯಿತು. ನಂತರ ಗಂಗಾಧರ ರಾಯರ ವಿರುದ್ಧವಿದ್ದ ಮೊಕದ್ದಮೆ ಬಿದ್ದು ಹೋಯಿತು. ಇಂಥ ಅನೇಕ ಮೊಕದ್ದಮೆಗಳಲ್ಲಿ ಗೋವಿಂದರಾಯರು ತಮ್ಮ ಜಾಣತನವನ್ನು ತೋರಿದ ಅನೇಕ ಉದಾಹರಣೆಗಳಿವೆ. ದುರ್ದೈವದಿಂದ ಗೋವಿಂದರಾಯರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ತೀರಿಹೋದರು, ಇನ್ನೂ ಸ್ವಲ್ಪಕಾಲ ಇದ್ದಿದ್ದರೆ ಅವರು ಇನ್ನೂ ಅನೇಕ ಚಾತುರ್ಯದ ಘಟನೆಗಳನ್ನು ನಡೆಸಬಹುದಿತ್ತು. ಆದರೆ ವಿಧಿಯ ಕೈವಾಡವೇ ಬೇರೆಯಾಗಿತ್ತು.

ಆದರೆ ಇವರ ಸಹೋದರ ಜೀವನರಾವ್ ಶಾಂತಿಯುತವಾಗಿ ಸತ್ಯಾಗ್ರಹ ನಡೆಯಬೇಕೆಂಬ ವಿಚಾರಧಾರೆಯವರಾಗಿದ್ದರು. ಇವರು ಗಾಂಧೀಜಿಯವರ ವಿಚಾರಗಳನ್ನು ಮನ್ನಿಸಿ ಅವರ ಎಲ್ಲ ಶಾಂತಿಯುತ ಸತ್ಯಾಗ್ರಹಗಳಲ್ಲಿ ಭಾಗಿಯಾಗಿದ್ದರು. ಇವರ ಮುಖದಲ್ಲಿ ಮೀಸೆಗಳು ಎದ್ದು ಕಾಣುತ್ತಿದ್ದವು. ಒಳ್ಳೆ ವ್ಯಕ್ತಿತ್ವವನ್ನು ಹೊಂದಿದ್ದ ಗೋವಿಂದರಾಯರ ಇಬ್ಬರೂ ಸಹೋದರರೂ ಜೀವನರಾವ್ ಹಾಗೂ ಕೃಷ್ಣರಾವ್ ಗಾಂಧೀತತ್ವವನ್ನಾಧರಿಸಿದ ಸೌಮ್ಯವಾದಿಗಳಾಗಿದ್ದರು. ಆದರೆ ಅಣ್ಣನಂತೆ ಟಿಳಕರ ಉಗ್ರವಾದಿತ್ವಕ್ಕೆ ಮಾರುಹೋಗಲಿಲ್ಲ. ಕೃಷ್ಣರಾಯರು ಮನೆತನದ ಎಲ್ಲ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಹಾಗೂ ಸದಾ ಶಾಂತ ಸ್ವಭಾವದವರಾಗಿದ್ದರು. ಆದಾಗ್ಯೂ ಅನೇಕ ಸಲ ಇವರೂ ಕೂಡ ಸೆರೆಮನೆ ವಾಸವನ್ನನುಭವಿಸಿದ್ದರು.

ಅಂದಿನ ಅನೇಕ ರಾಷ್ಟ್ರನಾಯಕರು ಬೆಳಗಾವಿಗೆ ಬಂದರೆ ಯಾಳಗಿ ಮನೆತನಕ್ಕೆ ಭೇಟಿಕೊಡದೇ ಹೋಗುತ್ತಿರಲಿಲ್ಲ. ಅವರ ಜೊತೆ ದೇಶದ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು. ಗಾಂಧೀಜಿಯವರ ಸತ್ಯಾಗ್ರಹದಲ್ಲಿ ಯಾಳಗಿ ಮನೆತನದ ಅನೇಕ ಸದಸ್ಯರು ಭಾಗವಹಿಸಿದ್ದರು. ಅಂಥವರಲ್ಲಿ ಪ್ರಮುಖರಾದವರ ಹೆಸರನ್ನು ಈ ಕೆಳಗಿನಂತೆ ನೋಡಬಹುದಾಗಿದೆ: ೧) ಗೋವಿಂದರಾವ್ ೨) ಜೀವನರಾವ್ ೩) ಕೃಷ್ಣರಾವ್ ೪) ವಸಂತರಾವ್ ೫) ಗಜಾನನ ೬) ಹನಮಂತ್ ೭) ಅರವಿಂದ ೮) ವಿಠ್ಠಲ ರಾವ್ ೯) ಮಾಲತಿ ತ್ರಿಂಬಕ್ ದಶರತ್ (ಮೊದಲನೆ ಹೆಸರು ಯಾಳಗಿ) ೧೦) ರಮಾಬಾಯಿ ಜೀವನರಾವ್ ಯಾಳಗಿ ೧೧) ವೆಂಕಟೇಶ ಹಾಗು ೧೨) ಡಾ॥ ಅನಂತ್ ಮತ್ತು ೧೩) ದತ್ತೋಪಂತ ಈ ಮೂವರೂ ಗೋವಿಂದರಾಯರ ಮಕ್ಕಳಾಗಿದ್ದರು.

ಮೇಲಿನ ೧೩ಜನರಲ್ಲಿ ಗಜಾನನ ರಾಯರ ಹೆಸರು ಸ್ವಾತಂತ್ರ್ಯ ಹೋರಾಟದಲ್ಲಿ ವಿಶೇಷತೆಯನ್ನು ಪಡೆದಿತ್ತು. ೧೯೪೨ರಲ್ಲಿ ಬ್ಯಾರಿಷ್ಟರ್ ನಾಥ ಪೈ ಅವರು ಗಜಾನನರಾಯನ ಗುಂಪಿನಲ್ಲಿದ್ದರು, ಇವರ ತಂದೆ ಕೃಷ್ಣರಾಯರು ನಾಥ ಪೈಅವರು ಗಜಾನನರಾಯರ ಮುಖವಾಣಿ (spoksman) ಯಂತಿದ್ದರು. ಗಜಾನನರಾಯರು ಮುಖಂಡರಾಗಿದ್ದರು. ಆಳಕವಾಡಿಯ ಪೋಸ್ಟ್‌ಬ್ಯಾಗ್ ಲೂಟಿ ಮಾಡಿದರು. ಟೆಲಿಗ್ರಾಫ್ ವಯರನ್ನು ಕತ್ತರಿಸಿರು. ತ್ರಿವರ್ಣ ಧ್ವಜವನ್ನು ಬೆಳಗಾವಿಯಲ್ಲಿಯೇ ಆಯಕಟ್ಟಿನಸ್ಥಳವಾದ ಗಣಪತಿ ಗಲ್ಲಿಯಲ್ಲಿರುವ ಸಾರ್ವಜನಿಕ ಗ್ರಂಥಾಲಯದ ಮೇಲೆ ಮಧ್ಯರಾತ್ರಿಯಲ್ಲಿ ಹಾರಿಸಿ ತಮ್ಮ ಜೀವನಕ್ಕೆ ಧಕ್ಕೆಬರುವ ಪರಿಸ್ಥಿತಿ ಉಂಟು ಮಾಡಿಕೊಂಡರು. ಇವರ ಬಗ್ಗೆ ಇನ್ನೊಂದು ಘಟನೆ ಹೇಳಬೇಕೆಂದರೆ, ಒಂದು ಸಲ ಇವರು ನಾಟಕೀಯ ರೀತಿಯಲ್ಲಿ ಕೋರ್ಟ ಆವರಣದಿಂದ ಪೋಲಿಸರ ಸರ್ಪಗಾವಲಿನಿಂದ ತಪ್ಪಿಸಿಕೊಂಡು ಓಡಿ ಹೋಗಿ; ಹೊರಗಿಟ್ಟ ಒಂದು ಬೈಸಿಕಲ್ ತೆಗೆದುಕೊಂಡು ಹೋಗಿಯೇ ಬಿಟ್ಟರು; ಎಲ್ಲೆಡೆ ಪೋಲಿಸರು ಹುಡುಕಿದರೂ, ಪಟ್ಟಣದ ಎಲ್ಲ ರಸ್ತೆಗಳಲ್ಲಿ ಪೋಲಿಸರ ಸೀಟಿ ಶಬ್ಧಗಳೇ ಕೇಳಿದವು. ಆದಾಗ್ಯೂ ಗಜಾನನರಾವ್ ಅವರಿಗೆ ಸಿಗದಾದರು.

ಈ ರೀತಿ ಅಂದಿನ ಬ್ರಿಟಿಷ್ ಸರಕಾರಕ್ಕೆ ಸಿಂಹಸ್ವಪ್ನರಾದ ಯಾಳಗಿ ಬಂಧುಗಳು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆಯ ಛಾಪು ಮೂಡಿಸಿದ್ದಾರೆ. ಇಂತಹ ಹೆಮ್ಮೆಯ ವೀರಪುತ್ರರನ್ನು ಪಡೆದ ಭಾರತಮಾತೆಯು ಧನ್ಯಳು. ರಾಯರ ಜೀವನವು ಇಂದಿನ ಯುವಕರಿಗೆ ಮಾರ್ಗದರ್ಶಿ ಎಂಬುದರಲ್ಲಿ ಸಂದೇಹವಿಲ್ಲ.

*

ಎಂ.ಬಿ. ಪಾಟೀಲ*

ಧಾರವಾಡ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಪ್ರಾರಂಭದ ಹಂತ (೧೮೬೦-೧೯೩೦)

ಒಂದು ಪ್ರದೇಶದ ಆರ್ಥಿಕ ಬೆಳವಣಿಗೆಯನ್ನು ರೂಪಿಸುವಲ್ಲಿ ಮತ್ತು ಅದಕ್ಕೆ ಪೂರಕವಾಗಿ ಕಾಲಕ್ರಮೇಣ ಉಂಟಾಗುವ ಸಾಮಾಜಿಕ, ಸಾಂಸ್ಕೃತಿಕ, ಬದಲಾವಣೆಗಳನ್ನು ತರುವಲ್ಲಿ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಬಹು ಮುಖ್ಯ ಪಾತ್ರವನ್ನು ವಹಿಸುವವು.. ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಂಘಟಿತವಾಗಿರಲಿ ಅಸಂಘಟಿತವಾಗಿರಲಿ ಬಹು ಪ್ರಭಾವಶಾಲಿಯಾಗಿರುವವು. ಬ್ರಿಟಿಷ್ ಕಂಪನಿಯ ಕಾನೂನು ಜಾರಿಗೆ ಬಂದ ನಂತರ (೧೮೬೦) ಭಾರತದಲ್ಲಿ ಜಾಯಿಂಟ್‌ಸ್ಟಾಕ್ ಕಂಪನಿಗಳು ರಚನೆಗೊಂಡು ದೊಡ್ಡ ಪ್ರಮಾಣದಲ್ಲಿ ಕೈಗಾರಿಕೆಗಳು, ಬ್ಯಾಂಕಿಂಗ್, ಉತ್ಪಾದನೆ, ನಿರ್ಮಾಣ, ವಿಮೆವ್ಯವಹಾರ, ಮುಂತಾದ ಆರ್ಥಿಕ ಚಟುವಟಿಕೆಗಳನ್ನು ಖಾಸಗಿಯವರು ಪ್ರಾರಂಭಿಸಿದರು. ಕರ್ನಾಟಕದಲ್ಲಿ ಆಧುನಿಕ ವಾಣಿಜ್ಯಬ್ಯಾಂಕಿಂಗ್ ವ್ಯವಸ್ಥೆ ತನ್ನದೇ ಆದ ಅನೇಕ ಏಳು ಬೀಳುಗಳ ೧೩೪ ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದ್ದರೆ. ಸಹಕಾರ ಚಳುವಳಿಯು ಮುಂದಿನ ದಶಕದಲ್ಲಿ ಒಂದುನೂರು ವರ್ಷಗಳ ಪರಿಧಿಯ ಕಕ್ಷೆಯನ್ನು ಸಮೀಪಿಸುತ್ತದೆ.

ಇಂದಿನ ಆರ್ಥಿಕ ವ್ಯವಸ್ಥೆಯಲ್ಲಿ ಈ ಎರಡೂ ವಿಭಿನ್ನ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳನ್ನು ಉತ್ತೇಜಿಸುವಲ್ಲಿ ಬಹು ಪ್ರಮುಖ ಪಾತ್ರವಹಿಸುತ್ತಿವೆ. ಕರ್ನಾಟಕಕ್ಕೆ ಸೀಮಿತಗೊಂಡಂತೆ ಹೇಳುವುದಾದರೆ ಇಂದು ಲಭ್ಯ ಇರುವ ದಾಖಲೆಗಳ ಪ್ರಕಾರ, ಆಧುನಿಕ ಬ್ಯಾಂಕಿಂಗ್ ಉದ್ಯಮ ಪ್ರಥಮ ಬೀಜಾಂಕುರವಾದದ್ದು ೧೮೬೩ರಲ್ಲಿ ಧಾರವಾಡದಲ್ಲಿ ಎಂದು ತಿಳಿದು ಬರುವುದು. ಇದಾದ ಒಂದು ವರ್ಷದ ನಂತರ ೧೮೬೪ರಲ್ಲಿ ಮದ್ರಾಸ್ ಪ್ರಸಿಡೆನ್ಸಿ ಬ್ಯಾಂಕ್ (೧೮೪೩) ಬೆಂಗಳೂರಿನ ದಂಡು ಪ್ರದೇಶದಲ್ಲಿ ತನ್ನ ಒಂದು ಶಾಖೆಯನ್ನು ತೆರೆಯಿತು. ಇದು ಹಳೆಯ ಮೈಸೂರು ಪ್ರದೇಶದ ಪ್ರಥಮ ಸರ್ಕಾರಿ ಬ್ಯಾಂಕಾಗಿತ್ತು. ಮುಂದಿನ ಕೆಲವು ವರ್ಷಗಳಲ್ಲಿ ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳು ರಾಜ್ಯದ ಪ್ರಮುಖ ಸ್ಥಳಗಳಾದ ಬೆಳಗಾವಿ (೧೮೬೭), ಮಂಗಳೂರು (೧೮೬೮), ಹುಬ್ಬಳ್ಳಿ (೧೮೭೦), ಕುಮಟಾ (೧೮೭೨-೭೩) ಬಳ್ಳಾರಿ (೧೮೭೬) ಗಳಲ್ಲಿ ಶಾಖೆಗಳನ್ನು ತೆರೆದವು. ಅದರಂತೆ ನಮ್ಮ ರಾಜ್ಯದ ಪ್ರಥಮ ಸಹಕಾರ ಸಂಘದ ತೊಟ್ಟಿಲು ತೂಗಿದ್ದು ಧಾರವಾಡ ಜಿಲ್ಲೆಯ ಗದಗ ತಾಲೂಕಿನ (ಗದಗಿನಿಂದ ೧೮ ಕಿ.ಮೀ.) ಕಣಗಿನಹಾಳ ಗ್ರಾಮದಲ್ಲಿ ಮತ್ತು ಇಂದು ಗದಗಿನ ಭಾಗವಾಗಿರುವ ಬೆಟಗೇರಿಯಲ್ಲಿ ಎಂದು ದಾಖಲೆಗಳು ತಿಳಿಸುತ್ತವೆ. ಅಂದಿನ ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕ್ (೧೮೪೦) ಧಾರವಾಡದಲ್ಲಿ ೧೮೬೩ರಲ್ಲಿ ಹತ್ತಿ ನಿರ್ಯಾತ ವ್ಯಾಪಾರದಲ್ಲಿ ತೊಡಗಿದ್ದ ಯೂರೋಪಿಯನ್ ಕಂಪನಿಗಳು ಮತ್ತು ಸ್ಥಳೀಯ ವ್ಯಾಪಾರಸ್ಥರ ಅನುಕೂಲತೆಗಾಗಿ ಮತ್ತು ಆ ಪ್ರದೇಶದ ಆರ್ಥಿಕ ಅಭಿವೃದ್ಧಿಗಾಗಿ ಈ ಶಾಖೆಯನ್ನು ತೆರೆಯಲಾಯಿತು. ಈ ಬ್ಯಾಂಕಿನ ಬಡ್ಡಿ, ವರ್ತಕರು ವಿಧಿಸುವ ಬಡ್ಡಿಗಿಂತಲೂ ತುಂಬಾ ಕಡಿಮೆಯಾಗಿತ್ತು. ಈ ಶಾಖೆಯ ಮೂಲಕ ಮುಂಬೈ ವರ್ತಕರಿಗೆ ಮತ್ತು ಸ್ಥಳೀಯ ವರ್ತಕರಿಗೆ ಹುಂಡಿಯ ಸೌಲಭ್ಯವನ್ನು ಒದಗಿಸುವುದಲ್ಲದೆ, ಈ ಭಾಗದ ಸಂಚಿತ ಠೇವಣಿಯನ್ನು ಕಡಿಮೆ ಖರ್ಚಿನಲ್ಲಿ ಮುಂಬೈಗೆ ವರ್ಗಾಯಿಸುವದಾಗಿತ್ತು. ಹತ್ತಿಯ ವ್ಯಾಪಾರಸ್ಥರ ಅನುಕೂಲಕ್ಕಾಗಿ ೧೮೬೩ರಲ್ಲಿ ಪ್ರಾರಂಭವಾದ ಧಾರವಾಡ ಶಾಖೆಯು ಬಹಳ ದಿವಸ ನಡೆಯಲಿಲ್ಲ, ೧೫ ವರ್ಷಗಳ ನಂತರ ೧೮೭೮ರಲ್ಲಿ ಅದನ್ನು ಮುಚ್ಚಿ ವ್ಯವಹಾರಗಳನ್ನು ಹುಬ್ಬಳ್ಳಿ ಶಾಖೆಗೆ ವರ್ಗಾಯಿಸಲಾಯಿತು. ಅಂತಿಮವಾಗಿ ಹುಬ್ಬಳ್ಳಿ ಶಾಖೆಯನ್ನು ೧೮೮೪ರಲ್ಲಿ ಮುಚ್ಚಲಾಯಿತು.

ಈ ಮೇಲಿನ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಮುಚ್ಚುವುದಕ್ಕೆ

* ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸಟಿಯರ್, ಕಾವೇರಿ ಭವನ, ಬೆಂಗಳೂರು-೫೬೦ ೦೦೯

ಕಾರಣವಾದ ಹಲವಾರು ಪ್ರಮುಖ ಅಂಶಗಳಲ್ಲಿ ಅಮೇರಿಕನ್ ಸಿವಿಲ್ ಯುದ್ಧದ ಅವಧಿಯಲ್ಲಿ (೧೮೬೧-೬೫) ಹೆಚ್ಚಿದ ಬೆಲೆಗಳು ಯುದ್ಧದ ನಂತರ ಬಿದ್ದು ಹೋದ್ದರಿಂದ ಸಟ್ಟಾ ವ್ಯಾಪಾರಲ್ಲಿ ತೊಡಗಿದ್ದ ಬ್ಯಾಂಕುಗಳು ಅತಿಯಾದ ನಷ್ಟವನ್ನು ಅನುಭವಿಸ ಬೇಕಾಯಿತು. ೧೮೬೮ರಲ್ಲಿ ಬೊಂಬಾಯಿ ಬ್ಯಾಂಕ್ ದಿವಾಳಿ ತಗೆಯಬೇಕಾಯಿತು. ಇದೇ ವರ್ಷ ಇದೇ ಹೆಸರಿನ ಇನ್ನೊಂದು ಬ್ಯಾಂಕನ್ನು ಹುಟ್ಟುಹಾಕಲಾಯಿತು. ಇದೇ ಪರಿಸ್ಥಿತಿ ಮದ್ರಾಸ್ ಬ್ಯಾಂಕಿಗೂ ಒದಗಿತು. ಈ ಎರಡು ಬ್ಯಾಂಕುಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸಲು ಮತ್ತು ದಿವಾಳಿಯಾಗಲು 'ಕಾಟನ್‌ಬೂಮ್' ಮತ್ತು ಹತ್ತಿಯ ಬೆಲೆಯಲ್ಲಿ ತೀವ್ರತರ ಏರಿಳಿತ ಕಾರಣವಾಗಿತ್ತು. ಈ ಭಾಗದ ಹತ್ತಿಯ ವಿಪುಲ ಬೆಳೆಯು (ಕಾಟನ್‌ಭೂಮ್) ಜನಜೀವನದ ಮೇಲೆ ಆರ್ಥಿಕ ಸಮಾಜಿಕ, ಸಾಂಸ್ಕೃತಿಕ ರಂಗದಲ್ಲಿ ತೀವ್ರತರವಾದ ಒಳ್ಳೆಯ ಮತ್ತು ಕೆಟ್ಟ ಬದಲಾವಣೆಗಳನ್ನು ಉಂಟುಮಾಡಿತು ಎಂಬುದಕ್ಕೆ ಸಾಕಷ್ಟು ದಾಖಲೆಗಳು ಉಂಟು.

ಈ ಭಾಗದಲ್ಲಿ ಹತ್ತಿಯ ಬೆಳೆಯು ಒಂದು ರೀತಿಯಲ್ಲಿ ವ್ಯವಸಾಯದಲ್ಲಿ ವಾಣಿಜ್ಯೀಕರಣ ತಂದಿತು. ಎಂದು ಹೇಳಿದರೆ ಇನ್ನೊಂದು ರೀತಿಯಲ್ಲಿ "ಹತ್ತಿಯನ್ನು ಬಿತ್ತಿದ ರೈತ ಹಾಳಾದ" ಎಂಬುದು ಅಷ್ಟೇ ಸತ್ಯವಾಗಿತ್ತು. ಹತ್ತಿಗೆ ಹೆಚ್ಚುತ್ತಿರುವ ಬೇಡಿಕೆ ಮತ್ತು ಏರುತ್ತಿರುವ ಬೆಲೆಯ ಲಾಭವನ್ನು ಪಡೆದ ಅನೇಕ ಶ್ರೀಮಂತ ರೈತರು ಎತ್ತಿನಕೋಡುಗಳಿಗೆ ಬಂಗಾರದ ಬಳೆ (ಕೊಡನಸು) ಹಾಕಿ ತಮ್ಮ ಶ್ರೀಮಂತಿಕೆಯನ್ನು ಮೆರೆದರೆ ಅತಿಯಾದ ಹಣದ ಚಲಾವಣೆಯಿಂದ ಸಾಮಾಜಿಕ ಸಾಂಸ್ಕೃತಿಕ ದುಷ್ಪರಿಣಾಮಗಳು ಉಂಟಾದವು. ಈ ಹಣದುಬ್ಬರದ ಸದುಪಯೋಗ ಆದದ್ದು ಕೇವಲ ಎರಡು ವರ್ಗಕ್ಕೆ. ಒಂದು ವರ್ತಕರಿಗೆ ಇನ್ನೊಂದು ಸರ್ಕಾರಿ ನೌಕರರು ಮತ್ತು ಹೆಚ್ಚಿದ ಆಸ್ತಿವ್ಯವಹಾರ ವ್ಯಾಜ್ಯಗಳಿಂದ ವಕೀಲರಿಗೆ ಎಂದು ದಾಖಲೆಗಳಿಂದ ತಿಳಿದು ಬರುವುದು. ಈ ಬೆಲೆ ಹೆಚ್ಚಳ ವರದಕ್ಷಿಣೆ, ಮದುವೆ ವೆಚ್ಚಗಳು, ರೈತ, ಕೂಲಿ-ಕಾರ್ಮಿಕರು, ಮುಂತಾದವರ ಮೇಲೆಯೂ ಪರಿಣಾಮ ಬೀರದೆ ಇರಲಿಲ್ಲ.

ಸಿರಿವಂತರ ಜಿಲ್ಲೆ

೧೮೮೮ರ ಸರ್ಕಾರದ ವರದಿ ತಿಳಿಸುವಂತೆ ಬೊಂಬಾಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಪೈಕಿ ಧಾರವಾಡ ಜಿಲ್ಲೆಯು ಅತ್ಯಂತ ಹೆಚ್ಚಿನ ಸಂಖ್ಯೆಯ ಶ್ರೀಮಂತ ವರ್ತಕರಿಂದ ಕೂಡಿತ್ತು. ನಾಲ್ಕು ಜಿಲ್ಲೆಗಳು ಸೇರಿ ವಾರ್ಷಿಕ ರೂಪಾಯಿ ೧೦ಸಾವಿರಕ್ಕೂ ಹೆಚ್ಚು ಆದಾಯಹೊಂದಿದ್ದ ವರ್ತಕರ ಸಂಖ್ಯೆ ೩೮ ಆಗಿದ್ದರೆ ಅದರ ಅರ್ಧದಷ್ಟು ಧಾರವಾಡ ಜಿಲ್ಲೆಯಲ್ಲಿ ಇದ್ದರು. ಹುಬ್ಬಳ್ಳಿ ನಗರದ ಸುಮಾರು ೭೦೦ ಜನ ವರ್ತಕರಲ್ಲಿ ಸುಮಾರು ೩೦೦ ಜನರ ವ್ಯವಹಾರ ಬಂಡವಾಳ ರೂ.೧೦ ಸಾವಿರದಿಂದ ಒಂದು ಲಕ್ಷದವರೆಗೆ ಇತ್ತು. ಹುಬ್ಬಳ್ಳಿಯನ್ನು 'ಛೋಟಾ ಮುಂಬಯಿ' ಎಂದು ಕರೆಯುತ್ತಿದ್ದರು. ಈ ವರ್ತಕರು ವ್ಯಾಪಾರ ಮತ್ತು ಲೇವಾದೇವಿಯನ್ನು ಜೊತೆ ಜೊತೆಯಾಗಿ ಮಾಡುತ್ತಿದ್ದರು. ಲೇವಾದೇವಿ ಒಂದು ಸಾಮಾಜಿಕ ಪ್ರತಿಷ್ಠೆಯ ಮತ್ತು ಅತ್ಯಂತ ಲಾಭದಾಯಕ ಉಪಕಸಬಾಗಿತ್ತು. ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಬ್ಯಾಂಕುಗಳು ಸಾಮಾನ್ಯವಾಗಿ ಶೇ.೬ ಬಡ್ಡಿ ವಿಧಿಸುತ್ತಿದ್ದರೆ ವರ್ತಕರ ಬಡ್ಡಿ ಶೇ. ೧೨ ರಿಂದ ೧೮ರ ವರೆಗೆ ಇತ್ತು.

ಈ ಮೇಲೆ ಉಲ್ಲೇಖಿಸಿದ ಸರ್ಕಾರಿ ವಲಯದ ಬ್ಯಾಂಕುಗಳು ಅಲ್ಲದೇ ೧೯೦೫ರ ಸ್ವದೇಶಿ ಚಳುವಳಿಯಿಂದ ಪ್ರಭಾವಿತರಾದ ಅನೇಕ ಸ್ಥಳೀಯ ಕ್ರಿಯಾಶೀಲ ವರ್ತಕರು ಬ್ಯಾಂಕುಗಳನ್ನು ಪ್ರವರ್ತಿಸಿದರು. ಅಂದಿನ ದಿನಗಳಲ್ಲಿ ಬ್ಯಾಂಕುಗಳನ್ನು ಪ್ರಾರಂಭಿಸುವುದಕ್ಕೆ ದೇಶದ ಕೇಂದ್ರ ಬ್ಯಾಂಕಾದ ಇಂಪೀರಿಯಲ್ ಬ್ಯಾಂಕಿನ ನಿಬಂಧನೆಗಳು ಅಷ್ಟೊಂದು ಕಠಿಣವಾಗಿರಲಿಲ್ಲ. ಈ ಜಿಲ್ಲೆಯಲ್ಲಿ ನೊಂದಾಯಿಸಲ್ಪಟ್ಟ ಅತ್ಯಂತ ಹಳೆಯ ಬ್ಯಾಂಕಿಂಗ್ ಕಂಪನಿಗಳಲ್ಲಿ ಹುಬ್ಬಳ್ಳಿಯು ವಾಯಕರ ಕಂಪನಿ (೧೯೨೨), ಅಂಕಲಗಿ ಬ್ಯಾಂಕ್ ಧಾರವಾಡ (೧೯೨೩), ಪೂನಾ ಮೂಲದ ಪೂನಾಬ್ಯಾಂಕ್ (೧೮೯೮) ಧಾರವಾಡದಲ್ಲಿ ೧೯೨೮ರಲ್ಲಿ ಒಂದು ಶಾಖೆಯನ್ನು ಹೊಂದಿತ್ತು. ಧಾರವಾಡದಲ್ಲಿ ಶ್ರೀಮಧ್ವ ಬ್ಯಾಂಕ್ ಎಂಬ ಬ್ಯಾಂಕು ನೋಂದಾಯಿಸಲ್ಪಟ್ಟಿತು. ಆದರೆ ಅದು ಕಾರ್ಯಾರಂಭ ಮಾಡಲಿಲ್ಲ. ಅಂಕಲಗಿ ಬ್ಯಾಂಕ್ ಕನಿಷ್ಟ ಒಂದಾಣೆ ಠೇವಣಿಯನ್ನು ಸ್ವೀಕರಿಸುವ ಮೂಲಕ ಅಲ್ಪ ಉಳಿತಾಯ ಯೋಜನೆಯನ್ನು ಪ್ರಾರಂಭಿಸಿತ್ತು. ಈ ಬ್ಯಾಂಕುಗಳೇ ಅಲ್ಲದೇ ೧೯೨೯ರಲ್ಲಿ ಹಾನಗಲ್‌ನಲ್ಲಿ ಲಕ್ಷ್ಮಿಬ್ಯಾಂಕ್, ೧೯೩೦ರಲ್ಲಿ ಹುಬ್ಬಳ್ಳಿಯಲ್ಲಿ ಸಿಟಿಬ್ಯಾಂಕ್ ಮತ್ತು ಕರ್ನಾಟಕಬ್ಯಾಂಕ್ ಪ್ರಾರಂಭವಾದವು. ಈ ಬ್ಯಾಂಕುಗಳಲ್ಲಿ ಮುಂದೆ ಕೆಲವು ಸಮಾಪನಗೊಂಡರೆ ಕೆಲವು ಇತರೇ ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಂಡವು.

ಸಹಕಾರ ಚಳುವಳಿ

ಈ ಆಂದೋಲನದ ಮೂಲ ಉದ್ದೇಶ: ಸ್ಥಳೀಯವಾಗಿ ಸ್ವಯಂ ಪ್ರೇರಣೆಯಿಂದ ಪರಸ್ಪರ ಸಹಾಯಮಾಡುವ ಉದ್ದೇಶದಿಂದ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಹುಟ್ಟು ಹಾಕುವುದು, ಅದರ ಮೂಲಕ ಗ್ರಾಮೀಣ ಅರ್ಥವ್ಯವಸ್ಥೆಯ ಬೆನ್ನೆಲುಬಾದ ವ್ಯವಸಾಯಕ್ಕೆ ಸುಲಭ ಬಡ್ಡಿದರದಲ್ಲಿ ಹಣಕಾಸಿನ ನೆರವು ಒದಗಿಸುವುದು. ಮೈಸೂರು ಸಂಸ್ಥಾನದಲ್ಲಿ ಈ ವ್ಯವಸ್ಥೆಯನ್ನು ಸಹಕಾರ ಚಳುವಳಿಯು ೧೯೦೪ರಲ್ಲಿ ಕಾನೂನಿನ ಚೌಕಟ್ಟಿನಲ್ಲಿ ರೂಪುಗೊಳ್ಳುವ ಒಂದು ದಶಕ ಪೂರ್ವದಲ್ಲಿಯೇ ಅಂದರೇ ೧೮೯೪ ರಲ್ಲಿಯೇ ಪ್ರಾಯೋಗಿಕವಾಗಿ 'ವ್ಯವಸಾಯ ಬ್ಯಾಂಕು'ಗಳ ಮೂಲಕ ಪ್ರಾರಂಭಿಸಲಾಯಿತು. ಈ ವ್ಯವಸ್ಥೆ ೧೯೨೦ರ ವರೆಗೆ ಮುಂದುವರೆಯಿತು. ಮೊದಲೇ ವಿವರಿಸಿದಂತೆ ಕಣಗಿನ ಹಾಳದಲ್ಲಿ ೧೯೦೫, ಮೇ ೮ರಂದು ಪ್ರಾರಂಭವಾದ ಪ್ರಾಥಮಿಕ ಪತ್ತಿನ

ಸಹಕಾರ ಸಂಘ ದೇಶದಲ್ಲಿಯೇ ಮೊದಲನೆಯದು ಎಂದು ಹೇಳಲಾಗುವುದು. ಕರ್ನಾಟಕದ ಮಟ್ಟದಲ್ಲಿ ಇದೇ ಮೊದಲನೆಯದು. ಇದರ ಸ್ಥಾಪಕರು ಹಿಂದುಳಿದ ಕುರುಬ ಸಮಾಜದ ಸಿದ್ಧನಗೌಡ, ಸಣ್ಣರಾಮನಗೌಡ ಪಾಟೀಲ (೧೮೪೩-೧೯೩೩). ಇವರನ್ನು ಕರ್ನಾಟಕದ ಪ್ರಥಮ ಸಹಕಾರಿ ಧುರೀಣ ಎಂದು ಕರೆಯಬಹುದು. ಪ್ರಾರಂಭದಲ್ಲಿಯೇ ಹಲವಾರು ಮಹಿಳಾ ಸದಸ್ಯರನ್ನು ಹೊಂದಿದ್ದ ಹಿರಿಮೆ ಈ ಸಂಸ್ಥೆಯದಾಗಿತ್ತು. ಇದೇ ಗದಗ ತಾಲ್ಲೂಕಿನಲ್ಲಿ ಸ್ಪರ್ಧಾತ್ಮಕ ಮನೋಭಾವನೆಯಿಂದ ಹುಲಕೋಟಿ, ಚಿಕ್ಕಹರವಿಗೋಳ ಮತ್ತು ಮಲಸಮುದ್ರಗಳಲ್ಲಿ ೧೯೦೫ನೇ ವರ್ಷದಲ್ಲಿ ವ್ಯವಸಾಯ ಸಾಲದ ಸಂಘಗಳು ಮೂಡಿಬಂದವು. ಈ ಮೇಲೆ ಉಲ್ಲೇಖಿತ ಸಂಸ್ಥೆಗಳು ಇಂದಿಗೂ ಚಾಲನೆಯಲ್ಲಿ ಇರುವವು. ಇಂದಿಗೂ ಗದಗ ತಾಲೂಕು ಸಹಕಾರಿ ಸಂಸ್ಕೃತಿಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡಿರುವ ರಾಜ್ಯದ ಮಾದರಿ ತಾಲೂಕಾಗಿದೆ. ಇಂದಿನ ಸಹಕಾರಿ ವ್ಯವಸ್ಥೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಹಣಕಾಸಿನ ನೆರವನ್ನು ಒದಗಿಸುವಲ್ಲಿ ಬಹು ಮಹತ್ವದ ಪಾತ್ರವಹಿಸುತ್ತವೆ. ಈ ಬಗ್ಗೆ ಕರ್ನಾಟಕವು ರಾಷ್ಟ್ರದಲ್ಲಿಯೇ ಮೂರನೆಯ ಸ್ಥಾನವನ್ನು ಹೊಂದಿರುವುದು. ಈ ದಿಶೆಯಲ್ಲಿಯೂ ಧಾರವಾಡ ಜಿಲ್ಲೆಯ ಹಿರಿಮೆ ದೊಡ್ಡದು. ಇಂತಹ ಪ್ರಥಮ ಪಟ್ಟಣಬ್ಯಾಂಕು ಪ್ರಾರಂಭವಾದದ್ದು ಬೆಟಗೇರಿಯಲ್ಲಿ ೧೮-೧೦-೧೯೦೫ರಂದು. ಅಂದಿನ ಬೆಟಗೇರಿಯ ಬಡನೇಕಾರರಿಗೆ ಹಣಕಾಸಿನ ನೆರವು ಒದಗಿಸುವ ಉದ್ದೇಶದಿಂದ ಇದನ್ನು ಹುಟ್ಟು ಹಾಕಲಾಯಿತು. ಈ ಸಂಸ್ಥೆಯನ್ನು ಹುಟ್ಟುಹಾಕಿದವರು ರೆವರೆಂಡ್ ಕಾನನ್.ಸಿ.ಎನ್. ರಿವಿಂಗ್ಟನ್ ಎಂಬ ಜರ್ಮನ್ ಮಿಶನ್ನಿನ ಕ್ರೈಸ್ತ ಪಾದ್ರಿ. ಅದರ ಮುಂದಿನ ವರ್ಷವೇ ೧೯೦೬ರಲ್ಲಿ ಹುಬ್ಬಳ್ಳಿ ಧಾರವಾಡಗಳಲ್ಲಿ ಪಟ್ಟಣ ಸಹಕಾರಿಬ್ಯಾಂಕುಗಳು ಪ್ರಾರಂಭವಾದವು.

*

ಆಧಾರ ಗ್ರಂಥಗಳು

೧ ಧಾರವಾಡ ಜಿಲ್ಲಾ ಗ್ಯಾಸೆಟಿಯರ್ (ಇಂಗ್ಲಿಷ್) ೧೮೮೪

೨ ಕರ್ನಾಟಕ ಗ್ಯಾಸೆಟಿಯರ್ ಮುಂಬೈ - ೧೮೯೩ ವೆಂಕಟ ರಂಗೋ ಕಟ್ಟಿ, ಅನುವಾದ

೩ ಧಾರವಾಡ ಜಿಲ್ಲಾ ಗ್ಯಾಸೆಟಿಯರ್‌ಗಳು, ೧೯೫೯ - ಮತ್ತು ೧೯೯೫

೪ ಹುಬ್ಬಳ್ಳಿ ಧಾರವಾಡ ತಾಲೂಕು ದರ್ಶನ, ಎಂ.ಬಿ. ಪಾಟೀಲ, ಐಬಿಹೆಚ್ ಪ್ರಕಾಶನ, ಬೆಂಗಳೂರು

೫ ಲೇಖಕರು ಸ್ವಂತ ಸಂಗ್ರಹಿಸಿದ ಮಾಹಿತಿಗಳು

೬ A Banking odyssevy, **The Story of Canara Bank,** M.V. Kamath, 1991

ವೇಮಗಲ್ ಸೋಮಶೇಖರ್ *

ಪ್ರಥಮ ಮಹಾಯುದ್ಧದಲ್ಲಿ ಬೆಂಗಳೂರಿನ ಪಾತ್ರ (೧೯೧೪-೧೮)

ಪ್ರಥಮ ಮಹಾಯುದ್ಧವು ೧೯೧೪ರಲ್ಲಿ ಪ್ರಾರಂಭವಾದಾಗ ಮೈಸೂರು ಸಂಸ್ಥಾನದಲ್ಲಿ ೧೮೯೨ರಲ್ಲಿ ಪ್ರಾರಂಭವಾಗಿದ್ದ 'ಮೈಸೂರು ಇಂಪೀರಿಯಲ್ ಲ್ಯಾನ್ಸರ್ಸ್ ಎಂಬ ಸೈನ್ಯದ ದಳವು ಮಹಾಯುದ್ಧಕ್ಕೆ ಸನ್ನದ್ಧವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮನವಿ ಮೇರೆಗೆ ಯುದ್ಧ ನಿಧಿಯನ್ನು ಪ್ರಾರಂಭಿಸಿ ಹಣವನ್ನು ಸಂಗ್ರಹಿಸಿದರು. ಈ ಕಾರ್ಯಕ್ಕಾಗಿ ಬೆಂಗಳೂರು ನಗರದಲ್ಲಿ ಕೆಲವು ಗಣ್ಯ ವ್ಯಕ್ತಿಗಳನ್ನು ಸರ್ಕಾರ ನೇಮಿಸಿತು. ಹಣ ಸಂಗ್ರಹಣೆಗಾಗಿ ಅಠಾರಕಛೇರಿಯಲ್ಲಿ 'ವಾರ್‌ಲೋನ್' ಕಛೇರಿಯನ್ನು ಮತ್ತು ಇತರೆ ಕೆಲಸಗಳಿಗಾಗಿ ನೃಪತುಂಗ ರಸ್ತೆಯಲ್ಲಿರುವ Y.M.C.A ಕಟ್ಟಡದಲ್ಲಿ ಏರ್ಪಾಟುಮಾಡಿದರು.

ನವಸೈನಿಕರನ್ನು ಯುದ್ಧರಂಗಕ್ಕೆ ಜಮಾಯಿಸಲು ಎಫ್.ಎಸ್. ರಾಘವಾಚಾರ್ಯರನ್ನು ಬೆಂಗಳೂರು ಜಿಲ್ಲೆಯ ರಿಕ್ರೂಟ್‌ಮೆಂಟ್ ಅಧಿಕಾರಿಯನ್ನಾಗಿ ನೇಮಿಸಲಾಯಿತು.

ಈ ವಿಷಯವನ್ನು ತಿಳಿದುಕೊಂಡು ತುಮಕೂರು ಜಿಲ್ಲೆಯ ಮೂಡಿಗೆರೆ ನಿವಾಸಿ ಸೈಯದ್ ಇಮಾಮ್ ಎಂಬುವರು ತಮ್ಮ ಒಬ್ಬ ಮಗನನನ್ನು ಮತ್ತು ಇಬ್ಬರು ಮೊಮ್ಮಕ್ಕಳನ್ನು ಕರೆದುಕೊಂಡು ಬೆಂಗಳೂರು ನಗರಕ್ಕೆ ಆಗಮಿಸಿ ಯುದ್ಧರಂಗಕ್ಕೆ ಸೇರಿಸಿದರು. ಇದಕ್ಕೆ ಮೊದಲಿನಿಂದಲೇ ಇಮಾಮ್ ಅವರ ಹಿರಿಯ ಮಗ ಯುದ್ಧರಂಗದಲ್ಲಿ ಸೇವೆ ಸಲ್ಲಿಸುತ್ತಿದ್ದನು. ಖಾತುಂಬೀ ಎಂಬ ಮುಸ್ಲಿಮ್ ಮಹಿಳೆಯು ತಾನಾಗಿಯೇ ಸೈನ್ಯದ ರಿಕ್ರೂಟ್‌ಮೆಂಟ್ ಕಛೇರಿಗೆ ಆಗಮಿಸಿ ತನಗಿದ್ದ ಒಬ್ಬನೇ ಮಗನನ್ನು ಸೈನ್ಯಕ್ಕೆ ಸೇರಿಸಿದಳು. ನಗರದಲ್ಲಿ ಪೆನ್‌ಷನ್ ಸಿಪಾಯಿ ಆಗಿದ್ದು ನಂತರ ಪ್ರಸಿದ್ಧ ವರ್ತಕರಾಗಿದ್ದ ಸೈಯದ್ ಅಹಮದ್ ಅವರು ೧೩೫ ಹೊಸ ಸೈನಿಕರು ನೇಮಕವಾಗಲು ವಿಶೇಷವಾಗಿ ನೆರವಾದರು. ಕಾವಲ್ ಬೈರಸಂದ್ರದ ಪಟೇಲ್ ವೆಂಕಟಸ್ವಾಮಿ ಎಂಬ ಖಾಸಗಿ ವ್ಯಕ್ತಿಯು ಈ ಯುದ್ಧಕ್ಕೋಸ್ಕರ ಸಹಾಯಮಾಡುವುದಕ್ಕಾಗಿ ಮಾತುಕೊಟ್ಟು ೫೪ ಜನರು ನೇಮಕವಾಗಲು ಕಾರಣನಾದನು. ವೃದ್ಧನಾಗಿದ್ದ ರಾಮಸ್ವಾಮಿ ಎಂಬ ಪೆನ್‌ಷನ್ ಸಿಪಾಯಿಯು ಬಹಳ ಸಾಹಸಮಾಡಿ ೧೭ ಜನ ಯುವಕರನ್ನು ಆಯ್ಕೆ ಮಾಡಿಸಿದನು. ಇವರುಗಳಿಗೆ ಇಂಡಿಯಾ ಸರ್ಕಾರದವರು 'ರಿಕ್ರೂಟ್ ಮೆಂಟ್ ಬ್ಯಾಡ್ಜಸ್, ಎಂಬ ಪದಕಗಳನ್ನು ದಯಪಾಲಿಸಿ ಪುರಸ್ಕರಿಸಿದರು.

ಲಾಲ್‌ಬಾಗ್‌ನ ತೋಟದ ಪಾಠಶಾಲೆಯಲ್ಲಿ ತರಬೇತಿ ಪಡೆದಿದ್ದ ಒಬ್ಬ ಉತ್ತಮ ತೋಟಗಾರನನ್ನು ಬಾಗ್ದಾದ್‌ಗೆ ಕಳುಹಿಸಿಕೊಡಲಾಯಿತು. ಈತನು ಅಲ್ಲಿ ಮದರಾಸ್ ತೋಟಗಾರರ ದಳದ ಯೂನಿಟ್ಟಿನಲ್ಲಿ ಕಮಾಂಡರ್ ಆಗಿ ಒಳ್ಳೆಯ ಕಾರ್ಯ ನಿರ್ವಹಿಸಿದನು.

ನಗರದ ಸೆಂಟ್ರಲ್ ಜೈಲಿನಿಂದ ೨೪೪ ಖೈದಿಗಳನ್ನು ಮೆಸಪೊಟೋಮಿಯಾದ ಸೈನ್ಯದಳದಲ್ಲಿ Porters ಆಗಿ ಕೆಲಸ ಮಾಡುವುದಕ್ಕಾಗಿ ಕಳುಹಿಸಿ ಕೊಡಲಾಯಿತು. ಮತ್ತು ಈ ಜೈಲಿನಲ್ಲೇ ತಯಾರಾಗುತ್ತಿದ್ದ ನೂರಾರು ಕಂಬಳಿಗಳನ್ನು ಹಾಗೂ ನಗರದಲ್ಲಿ ಪ್ರಸಿದ್ಧಿಪಡೆದಿದ್ದ ಸುಬ್ಬಯ್ಯ ಶೆಟ್ಟರ್ ಕಂಬಳಿ ಕಾರ್ಖಾನೆಯಿಂದ ಒಂದುಲಕ್ಷ ರೂಪಾಯಿಯ ಕಂಬಳಿಗಳನ್ನು ಸರಬರಾಜು ಮಾಡಲಾಯಿತು.

ಬೌರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಲ್ಲಿನ ಸದಸ್ಯರು 'ಬಾವುಟದ ಉತ್ಸವ' (Flag Fete) ವನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಒಂದು ನಾಟಕ ಮಂಡಳಿಯವರು ಸಹ ತಮ್ಮ ಕೆಲವು ನಾಟಕಗಳಿಂದ ವಸೂಲಾದ ಹಣದಲ್ಲಿ ೨೬೨ ರೂ. ೪ ಆಣೆಯನ್ನು ಮತ್ತು ನಗದಾಗಿ ೭೩೨ ರೂಪಾಯಿಗಳನ್ನು ಸಹಾಯ ಮಾಡಿದರು.

ನಗರದ ವಿವಿಧ ಮಹಿಳಾ ಸಮಾಜದವರು ಅನೇಕ ಸಾಂಸ್ಕೃತಿಕ ಉತ್ಸವಗಳನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಈ ಸಮಾಜಗಳ ಪೈಕಿ ಚಾಮರಾಜಪೇಟೆಯ ಶಾರದ ಸ್ತ್ರೀ ಸಮಾಜದ

* ೩೭೦, 'ದೀಪ', ೪ನೇ ಅಡ್ಡರಸ್ತೆ, ಲಕ್ಷ್ಮೀಪುರ, ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯

ಮಹಿಳೆಯರೆಲ್ಲರೂ ಸೇರಿ 'ಒಂದು ಪೌಂಡ್‌ದಿನ' ಎಂಬ ಸಾಂಸ್ಕೃತಿಕ ಉತ್ಸವವನ್ನು ಆಚರಿಸಿ ಹಣವನ್ನು ಸಂಗ್ರಹಿಸಿದರು. ಜೊತೆಗೆ ಸಿದ್ಧಪಡಿಸಿದ ಉಡುಪುಗಳನ್ನು ಮತ್ತು ೧೮ ಜೊತೆ ಚಪ್ಪಲಿಗಳನ್ನು ಯುದ್ಧರಂಗಕ್ಕೆ ಕಳುಹಿಸಿಕೊಟ್ಟರು. ಮೈಸೂರು ಸಂಸ್ಥಾನದಿಂದ ಹೊರದೇಶಗಳಿಗೆ ಹೋಗಿದ್ದ ಸೈನಿಕರಿಗೆ ನಗರದ ಪ್ರಜೆಗಳು ಈ ಕೆಳಕಂಡ ದಿನ ಬಳಕೆ ಪದಾರ್ಥಗಳನ್ನು ಕಳುಹಿಸಿಕೊಟ್ಟರು:

ಬೀಡಿಗಳು ೨೦ ಸಾವಿರ, ಬಿರಿ ಹಾಕಿದ ಸುಣ್ಣ ೨ಪೌಂಡ್, ಸಿಗರೇಟು ೧ಸಾವಿರ, ಉಪ್ಪಿನಕಾಯಿ ೧೫ ಪೌಂಡ್; ಉಂಡೆನಶ್ಯ ೫೦೦ ತೊಲ, ಹುರಿಗಾಳು ೫೦ಸೇರು, ಅಡಿಕೆಪುಡಿ ೨೦೦ ಪೌಂಡ್, ಮತ್ತು ಹಪ್ಪಳ, ಜಿಂತಾನ್ ಪ್ಯಾಕೆಟ್ ೫೦ ಪೌಂಡ್

ಈ ರೀತಿಯಾಗಿ ಇನ್ನೂ ಅನೇಕ ಸಾಂಬಾರ್ ಪದಾರ್ಥಗಳನ್ನು, ಬಟ್ಟೆ ಬರೆಗಳನ್ನು, ಪುಟ್‌ಬಾಲ್, ಕ್ರಿಕೆಟ್ ಆಟದ ಸಾಮಗ್ರಿಗಳನ್ನು ಕಳುಹಿಸಿಕೊಟ್ಟರು.

ಈ ಯುದ್ಧದ ಸಂಬಂಧದಲ್ಲಿ ಸಹಾಯ ಮಾಡಿದ ವರ್ತಮಾನ ಪತ್ರಿಕೆಗಳು : ಕರ್ನಾಟಕ ಅರ್ಥಸಾಧಕ ಪತ್ರಿಕೆ, ಸಂಪದಭ್ಯುದಯ, ಒಕ್ಕಲಿಗರ ಪತ್ರಿಕೆ ಮತ್ತು Daily Post. ಈ ಪತ್ರಿಕೆಗಳೆಲ್ಲವೂ ಯುದ್ಧಕ್ಕೆ ಸಂಬಂಧಪಟ್ಟ ಸಭೆಗಳು, ನಿಧಿಸಂಗ್ರಹಣೆ, ವಾರ್ತೆಗಳು, ಹಾಗೂ ಇತರೆ ವಿಷಯಗಳನ್ನು ಉಚಿತವಾಗಿ ಪ್ರಕಟಿಸುತ್ತಿದ್ದವು. ನಗರದ ಪಬ್ಲಿಸಿಟಿ ಬೋರ್ಡ್‌ನವರು ಚಿತ್ರ ಸಹಿತ ದೊಡ್ಡ ದೊಡ್ಡ ಸೂಚನಾಪತ್ರಗಳನ್ನು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಪ್ರಚುರ ಪಡಿಸಿದರು. ಯುದ್ಧಕ್ಕೆ ಸಂಬಂಧಪಟ್ಟ ಮಾಹಿತಿಯುಳ್ಳ ಕೆಲವು ಕಿರು ಪುಸ್ತಕಗಳನ್ನು ನಗರದ ಮುಖ್ಯ ಕಛೇರಿಗಳಿಗೆ ಕಳುಹಿಸಿಕೊಟ್ಟರು.

ನಗರದಲ್ಲಿ ತಂಗಿದ್ದ ಬ್ರಿಟಿಷ್ ಸೈನಿಕರಿಗಾಗಿ Y.M.C.A ಸಂಘದವರು ವಿಶೇಷವಾಗಿ ಸಹಾಯಮಾಡಿದರು. ಇವರಿಗೆ ನಗರಕ್ಕೆ ಸಮೀಪದಲ್ಲಿದ್ದ ಅಲಸೂರು, ಹೆಬ್ಬಾಳ, ಆಗರಂಗಳಲ್ಲಿ ಪ್ರತ್ಯೇಕ ವಾದ ಶಿಬಿರಗಳನ್ನು ಪ್ರಾರಂಭಿಸಿದರು. ಅಲ್ಲೆಲ್ಲಾ ಸಭೆ, ಸಂಗೀತ, ವಿನೋದ ಹಾಗೂ ವಾದ್ಯಗಳು ನಡೆಯುತ್ತಿದ್ದುವು. ಹಲವಾರು ಆಟಪಾಟಗಳು ಹಾಗೂ ಮದ್ಯಪಾನೀಯ ಏರ್ಪಾಟು ಮಾಡಲಾಗಿತ್ತು. ಇವರೆಲ್ಲರ ರಸ್ತೆಸಾರಿಗೆ ಉಪಯೋಗಕ್ಕಾಗಿ ಮೂರು ಮೋಟಾರುಗಾಡಿಗಳನ್ನು ಒದಗಿಸಿದ್ದರು. ಈ ಮೋಟಾರುಗಳಲ್ಲಿ ಆಗಾಗ್ಗೆ ನಗರದ ರೇಷ್ಮೆಯ ಕಾರ್ಖಾನೆ, ಗಂಧದೆಣ್ಣೆಯ ಕಾರ್ಖಾನೆ, ನೂಲಿನ ಕಾರ್ಖಾನೆ, ಹೊಗೆ ಸೊಪ್ಪಿನ ಕಾರ್ಖಾನೆ, ಲಾಲ್‌ಬಾಗ್, ದೊಡ್ಡ ಬಸವಣ್ಣನ ಗುಡಿ ಇನ್ನೂ ಮುಂತಾದ ಸ್ಥಳಗಳಿಗೆ ಆ ಸೈನಿಕರು ಭೇಟಿಕೊಡುತ್ತಿದ್ದರು.

೧೯೧೮ ನವಂಬರ್ ೧೧ ರಂದು ಜರ್ಮನಿಯೊಂದಿಗೆ ಯುದ್ಧ ವಿಶ್ರಾಂತಿಯ ಒಪ್ಪಂದವು ಪೂರೈಸಿತೆಂದು ನಗರಕ್ಕೆ ವರ್ತಮಾನ ತಲುಪಿತು. ಈ ಸಮಾಚಾರವನ್ನು ನಗರದ ಅಂಗಡಿಗಳ ಮುಂದೆ ಪ್ರಚುರಪಡಿಸಿದರು. ಪ್ರಜೆಗಳು ಸಂತೋಷಪಟ್ಟು ಬಹು ಉತ್ಸಾಹದಿಂದ ಮನೆ ಬಾಗಿಲುಗಳನ್ನು ಅಲಂಕರಿಸಿದರು. ಎಲ್ಲಾ ದೇವಾಲಯಗಳಲ್ಲೂ, ಚರ್ಚ್‌ಗಳಲ್ಲೂ ಘಂಟಾನಾದಗಳು ಮೊಳಗಿದರೆ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆಗಳು ನಡೆದುವು ಈ ಕಾರಣದಿಂದಾಗಿ ೭-೧೨-೧೯೧೮ನೆ ಶನಿವಾರದಂದು ಪಬ್ಲಿಕ್ ರಜಾದಿನವೆಂದು ಘೋಷಿಸಲಾಯಿತು ಅಂದು ದಿವಸ ಪೂರ್ತಿಯಾಗಿ 'ವಿಜಯೋತ್ಸವ'ವು ಬಹು ವಿಜೃಂಭಣೆಯಿಂದ ನಡೆಯಿತು. ನಗರದ ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಬೆಳಗ್ಗೆ ೮ ಗಂಟೆಗೆ ಮೆರವಣಿಗೆ ಪ್ರಾರಂಭವಾಗಿ ಸೈನ್ಯ ಸವಾರರು, ವಾದ್ಯ ಮತ್ತು ನಿಶಾನೆಗಳೊಂದಿಗೆ ಅವಿನ್ಯೂರಸ್ತೆ, ಕೋಟೆಯ ಮೂಲಕ ಸಿಟಿ ಇನ್‌ಸ್ಟಿಟ್ಯೂಟ್, ಮಿಂಟೋ ಆಸ್ಪತ್ರೆ, ಚಾಮರಾಪೇಟೆ ಮೊದಲನೆ ಮುಖ್ಯ ರಸ್ತೆಯನ್ನು ಹಾದು ಮೈಸೂರುರೋಡ್ ಸರ್ಕಲ್‌ನಲ್ಲಿರುವ ಪೋಲಿಸ್ ಮೈದಾನಕ್ಕೆ ಹೊರಟಿತು. ರಾಜಕುಮಾರ ಸಿ. ದೇವರಾಜ ಅರಸ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಬಿ. ಎಫ್. ಬೌರಿಂಗ್, ಚೀಫ್ ಕಮಾಂಡೆಂಟ್‌ರಾದ ಕರ್ನಲ್ ಜಿ. ದೇವರಾಜ ಅರಸ್ ಅವರುಗಳು ಮೆರವಣಿಗೆಯ ಮುಖಂಡತ್ವವನ್ನು ವಹಿಸಿದ್ದರು. ಹಾದಿಯು ಚಪ್ಪರ ತೋರಣಗಳಿಂದ ಅಲಂಕೃತಗೊಂಡಿತ್ತು. ಅಲ್ಲಲ್ಲಿ ಜನರು ಸೈನಿಕರಿಗೆ ಪುಷ್ಪಗುಚ್ಛಗಳನ್ನು, ಹಾರಗಳನ್ನು ಅರ್ಪಿಸುತ್ತಿದ್ದರು.

ಸಿಟಿಇನ್‌ಸ್ಟಿಟ್ಯೂಟ್ ಮತ್ತು ಮಿಂಟೋ ಆಸ್ಪತ್ರೆಯ ವರ್ತುಲಗಳಲ್ಲಿ ಜಯಸೂಚಕಗಳಾದ ಕಮಾನುಗಳನ್ನು ನಿರ್ಮಿಸಿ ಮೊದಲಿನ ಕಮಾನಿನ ಮೇಲೆ 'ಜಯ' ಎಂಬ ಫಲಕವೂ, ಎರಡನೆಯ ಕಮಾನನಿನ ಮೇಲೆ 'ಶಾಂತಿ' ಎಂಬ ಫಲಕವೂ ಕಂಗೊಳಿಸುತ್ತಿತ್ತು. ಸುಮಾರು ೧೦ ಗಂಟೆಗೆ ೧೬೦೦ ಜನ ಪೋಲೀಸರು ಪೋಲಿಸ್ ಮೈದಾನದಲ್ಲಿ ನೆರದಿದ್ದರು. ೨೧ ತೋಪುಗಳು ಉಡಾಯಿಸಲ್ಪಟ್ಟವು. ಜಯಘೋಷಗಳನ್ನು ಮಾಡಿದರು. ಕೆ.ಪಿ. ಪುಟ್ಟಣ್ಣಶೆಟ್ಟರು ಮಹಾರಾಜರ ನಿರೂಪವನ್ನು ಇಂಗ್ಲಿಷ್‌ನಲ್ಲಿ ಓದಿದನಂತರ ಮಹಮದ್ ಅಬ್ಬಾಸ್‌ಖಾನ್ ಅವರು ಕನ್ನಡದಲ್ಲಿ ಆ ನಿರೂಪವನ್ನು ಭಾಷಾಂತರ ಮಾಡಿದರು.

ಸಭೆ ನಡೆದ ನಂತರ ಮಧ್ಯಾಹ್ನ ಹಳೇತರಗು ಪೇಟೆ ಗಾಣಿಗರ ಪೇಟೆ, ನಗರ್ತರಪೇಟೆಗಳಲ್ಲಿ ಪ್ರಸಿದ್ಧ ವ್ಯಾಪಾರಿಗಳಾಗಿದ್ದಂಥ ಮಂಡಿ ಹರಿಯಣ್ಣನವರು, ಯಜಮಾನ್ ಬಸವಪ್ಪನವರು ಮತ್ತು ಬಿ. ರಾಜಪ್ಪನವರುಗಳು ಸೇರಿ ಆರು ಸಾವಿರಕ್ಕೂ ಹೆಚ್ಚು ಜನಕ್ಕೆ ಭಾರಿ ಭೋಜನವನ್ನು ಏರ್ಪಡಿಸಿದ್ದರು. ಮುನಿಸಿಪಲ್ ಕೌನ್ಸಿಲರ್ ಗಳಾದ ಬಿ. ಉಸ್ಮಾನ್‌ಖಾನ್ ಅವರು ಗಾಣಿಗರ ಪೇಟೆಯಲ್ಲಿ ಸುಮಾರು ಎರಡು ಸಾವಿರ ಜನ ಮುಸ್ಲಿಮ್ ಬಡವರಿಗೆ ಅನ್ನದಾನವನ್ನು ಮಾಡಿದರು.

ಊಟವಾದನಂತರ ಧನಲಕ್ಷ್ಮಿ ಥಿಯೇಟರ್ (ನಾಟಕ ಶಾಲೆ) ಯಲ್ಲಿ ವಿನೋದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ವಿಜಯೋತ್ಸವದ ಪ್ರಯುಕ್ತ ಸಾಯಂಕಾಲ ೬ಗಂಟೆಗೆ ಏಕಕಾಲದಲ್ಲಿ ೨,೦೦೦ ವಿದ್ಯುದ್ದೀಪಗಳು ಹಚ್ಚಲ್ಪಟ್ಟು ಎಲ್ಲರಿಗೂ ಆನಂದ ವನ್ನುಂಟುಮಾಡಿತು. ಎಲ್ಲಾ ಕಟ್ಟಡಗಳು, ಕಮಾನುಗಳು, ಬೆಳಕಿನಿಂದ ಪ್ರಕಾಶಿಸಿದುವು. ರಾತ್ರಿ ಏಳುಗಂಟೆಯ ಮೇಲೆ ಪೌಜಿನ ಕವಾಯಿತು ನಂತರ ಪಟಾಕಿ ಬಾಣ ಬಿರುಸುಗಳಿಂದ ಬಹು ಸಂಭ್ರಮ ದಿಂದ ನಡೆದು ರಾತ್ರಿ ೯ ಗಂಟೆಗೆ ಅಂದಿನ ವಿಶೇಷ ವಿಜಯೋತ್ಸವ ಸಮಾರಂಭ ಮುಕ್ತಾಯ ಗೊಂಡಿತು.

(ಈ ಲೇಖನಕ್ಕಾಗಿ 'ಯುದ್ಧಲ್ಲಿ ಮೈಸೂರಿನ ಸಹಾಯ' ಎಂಬ ಪುಸ್ತಕವನ್ನು ಉಪಯೋಗಿಸಿಕೊಂಡಿರುತ್ತೇನೆ)

*

ಎಂ.ಜಿ. ನಾಗರಾಜ್*

ಹಾಸನ ಜಿಲ್ಲೆಯ ವೀರಶೈವ ಮಠಗಳು

ಶಾಸನೋಕ್ತ ಮಠಗಳು

ಕ್ರಿ. ಶ. ೭ ನೇ ಶತಮಾನದಿಂದಲೇ ಹಾಸನ ಜಿಲ್ಲೆಯಲ್ಲಿ ಮಠಪರಂಪರೆ ಇದ್ದದ್ದು ಕಾಣಬರುತ್ತದೆ.

ಶಾಸನಗಳ ಹಿನ್ನೆಲೆಯಲ್ಲಿ ಗಮನಿಸುವಾಗ ೧೦-೧೧ನೇ ಶತಮಾನಗಳಲ್ಲಿ ಕಾಳಾಮುಖ ಶೈವ ಹಾಗು ವೀರಶೈವ ಮಠಗಳ ಪ್ರಭಾವ ಕಾಣಬರುತ್ತದೆ. ಕ್ರಿ.ಶ. ೧೧೯೫-೯೬ರ ನಿಟ್ಟೂರು ಶಾಸನ[೧] ಕ್ರಿ.ಶ.೧೧೭೦-೭೧ದ ಜಕ್ಕೇನಹಳ್ಳಿ ಶಾಸನ[೨] ತರಿಗಳಲೆ ಶಾಸನಗಳಲ್ಲಿ[೩] ಕಾಳಾಮುಖ ಶೈವರ ಮಠ ಹಾಗೂ ಅವಕ್ಕೆ ಅಂಟಿದಂತ ದೇಗುಲಗಳಿಗೆ ದಾನ, ಹಾಗೂ ಶೈವಯತಿಗಳ ಕುರಿತ ವಿವರಗಳು ದೊರಕುತ್ತವೆ. ಹೊಯ್ಸಳ ಹಾಗೂ ಚಂಗಾಳ್ವ ರಾಜಾಶ್ರಯಗಳನ್ನು ಇವು ಪಡೆದಿರುವುದು ಕಾಣಬರುತ್ತದೆ. ಹೀಗೆಯೆ ೧೨ನೇ ಶತಮಾನದ, ಜಾಜೂರು[೪] ಕೊಳಗುಂದ[೫], ದ್ಯಾಮೇನಹಳ್ಳಿ[೬] ಯಡವನಹಳ್ಳಿ ಶಾಸನಗಳು ಮಾಹೇಶ್ವರರ ಹಾಗು ಕಾಳಾಮುಖ ಶೈವಯತಿಗಳ ಮಠಗಳ ಪ್ರಭಾವ, ಕಲಿದೇವರ ಗುಡಿಗಳ ಅಸ್ತಿತ್ವ, ಹಾಗು ಭೈರವಾರಾಧನೆಯ ಸಂಗತಿಗಳನ್ನು ತಿಳಿಸುತ್ತವೆ. ಇವೆಲ್ಲ ಮುಂದೆ ವೀರಶೈವ ಮಠಗಳಾದುವು. ಇವುಗಳಲ್ಲಿ ಕೆಲವು ಮಾಹೇಶ್ವರರ ಅಸ್ತಿತ್ವವನ್ನೂ ಸೂಚಿಸುವುದರಿಂದ ಆಗಲೇಅವು ವೀರಶೈವ ಮಠಗಳಾಗಿದ್ದ ಸೂಚನೆ ನೀಡುತ್ತವೆ.

ವೀರಶೈವಪೀಠ ಅದರಲ್ಲೂ ಶ್ರೀ ಶೈಲ ನಿಡುಮಾಮಿಡಿ ಪೀಠದ ಶಿಷ್ಯಪರಂಪರೆಯಲ್ಲಿ ಬರುವ ದೇವರ ದಾಸಿಮಯ್ಯನಿಗೆ ಅನ್ವಯವೆಂದು ತೋರುವ ಅಂಕನಾಥಪುರದ ಶಾಸನ[೭] (೧೦-೧೧ನೇ ಶತಮಾನ!) ವೊಂದು ಗಮನಾರ್ಹವಾಗಿದೆ. ಆ ಶಾಸನದ ಸಾಲುಗಳು ಇಂತಿವೆ:

'ಕಗುಣ[ಗ] । ಶೀಲಾಚಾ । ಮ್ಪನ್ನರಪ್ಪ । ದಡಿಗ । ಯ್ಯನ ಮ । ವಣಸ । ದೇವರದಾ । ಶ್ರೀಮ । ಯ್ಯನ ತ । ಣ್ಣಗಡಜ್ಜ । ಳ್ಪಯ್ಯಲ್ಜ । ಮಾಳೊಡೆ. । ತಲೆಯ । ಸನಂಗೆಯ್ದು ।

ಇದು ಶಿವಭಕ್ತನೋರ್ವನ ಮರಣವನ್ನು ಸೂಚಿಸುತ್ತ-ದೆನ್ನಲಾಗಿದೆ. ಆದರೂ ಈ ಶಾಸನದಲ್ಲಿರುವ ವೀರಶೈವದ ಪಾರಿಭಾಷಿಕ ಶಬ್ದಗಳಾದ, ಶೀಲಾಚಾರ, ಗಣಂಗಳು ಹಾಗು ದೇವರದಾಸಿಮಯ್ಯನ ಹೆಸರು, ಗಮನ ಸೆಳೆಯುತ್ತವೆ. ದೇವರದಾಸಿಮಯ್ಯನು ಅಭಿನವಪಾಶುಪತದವನಾಗಿದ್ದು, ಆ ಅಭಿನವ ಪಾಶುಪತವೇ ವೀರಶೈವ ಎನ್ನುವ ಹಾಗೂ ಎಳಮೇಲ ಸಿಂಹಪರ್ಷೆಯ ಲಕುಲೀಶ ಪಾಶುಪತವೂ ವೀರಶೈವ ಎಂಬ ಅಭಿಪ್ರಾಯಗಳಲ್ಲಿರುವಲ್ಲಿ, ಅವನು ಬಸವಪೂರ್ವ ವೀರಶೈವದ ಚಟುವಟಿಕೆಗಳಲ್ಲಿ ಸಕ್ರಿಯನಾಗಿ ತೊಡಗಿದ್ದ ಎಂದು ಹೇಳುವುದುಂಟು.[೮] ಆ ಲಕುಲೀಶನು ಕಾಳಾಮುಖ ಶೈವ ಪಂಥದ ಮೂಲದವನಾಗಿ, ಅವನು ಆರಂಭಿಸಿದ ಚಳುವಳಿಯು ಲಿಂಗಾಯತ ಮತದಲ್ಲಿ ಪರಿಣಮಿಸಿರಬಹುದು ಎನ್ನುವುದೂ ಇದೆ.[೯] ಇಂತಿರುವಲ್ಲಿ ದೇವರದಾಸಿಮಯ್ಯನ ಗಣಂಗಳಲ್ಲಿ ಒಬ್ಬನ ಕಾಯಕದ ಸಂಗತಿಯ ಜೊತೆಗೆ ಮಠದಾಚರಣೆಯ ಸೂಚನೆಯನ್ನು ಈ ಶಾಸನ ನೀಡುತ್ತದೆ; ಕಾಳಾಮುಖ ಶೈವವು ವೀರಶೈವ ಮಠದಾಚರಣೆಗೆ ಪರಿವರ್ತನೆಗೊಂಡ ಸಂಗತಿಯನ್ನೂ ಇದು ಸೂಚಿಸುವಂತಿದೆ. ಇದರ ಜೊತೆಗೆ ತವನಂದಿ ಶಾಸನದಲ್ಲಿ 'ತವನಿಧಿ' ಎಂಬ ಗ್ರಾಮದ ಹೆಸರೂ ಬಳಕೆ ಆಗಿದೆ.[೧೦] 'ತವನಂದಿ' ಹೆಸರಿನ ಪ್ರಾಚೀನ ರೂಪ 'ತವನಿಧಿ'ಯೆ. ಈ 'ತವನಿಧಿ' ಶಬ್ದ ದೇವರದಾಸಿಮಯ್ಯನಿಗೆ ತೀರ ನಿಕಟವಾದ ಶಬ್ದ. ಈ 'ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದವ ಪಡೆದ'ವನು. ಮಾವನೂರು ('ಮುವಣಸ'ವೆ ಮಾವನೂರು ಆಗಿರಬಹುದು!) ಶಾಸನದಲ್ಲಿ 'ಶ್ರೀ ಪರ್ವತಕ್ಕೆಡೆ ಯಾಡುತಿರ್ಪ ನೇಹಮಂ ಕಂಡು ಶ್ರೀ ಮಲ್ಲಿಕಾರ್ಜುನಂ, ಗುರುಕಾರುಣ್ಯಾಂ... ಈ ಮಹಾಗಣಂಗಳೆ ವೊಡೆಯರು', ಎಂದಿರಲು ಶ್ರೀಶೈಲಪೀಠದ ಪ್ರಭಾವವೂ ಈ ನೆರೆಯಲ್ಲಿದ್ದುದು ಸ್ಪಷ್ಟವಾಗುತ್ತದೆ. ಈ ತವನಿಧಿ ದೇವರ ದಾಸಿಮಯ್ಯನು ಶ್ರೀಶೈಲ ನಿಡುಮಾಮಿಡಿ ಪೀಠದ ಜ॥

---

* ನಂ. ೧೭೫, ೭ನೇ ಅಡ್ಡರಸ್ತೆ, ಶ್ರೀರಾಮನಗರ, ಮಹಾಲಕ್ಷ್ಮೀಪುರಂ, ಬೆಂಗಳೂರು - ೫೬೦ ೦೮೬

ಚಂದ್ರಗುಂಡ ಶಿವಾಚಾರ್ಯರ ಕರಕಮಲ ಸಂಜಾತನಾದ ಕಾರಣ, ಶ್ರೀಶೈಲ ನಿಡುಮಾಮಿಡಿ ಪೀಠದ ಶಾಖಾಮಠಗಳು ದೇವರದಾಸಿಮಯ್ಯನಿಂದಾಗಿ ಈ ಪರಿಸರ ದಲ್ಲಿದ್ದುವು ಎಂಬ ಸೂಚನೆಯೂ ಇಲ್ಲಿ ಒದಗುವಂತಿದೆ.

ಕ್ರಿ.ಶ. ೧೩೬೨ರ ಕೇರಳಾಪುರದ ಶಾಸನದಲ್ಲಿ **'ಅಜುವಥ ಮೂವರು ಮಹಾಗಣಂಗಳು ಬರಸಿದ ಪರಿವರ್ತನ.... ನಂಬಿಯಣಂಗಳ ಗಣಮಠದ... ಮಠಪತಿಗಳಿಗೆ ಆ ವೃತ್ತಿ ಯಂತರುಗಳು... ಮಠದ ಧರ್ಮವ ಕೆಡಿಸಿದವನು'** ಎಂದೆಲ್ಲ ವೀರಶೈವದ ಹಾಗೂ ಅದರ ಮಠದ ಸಂಬಂಧದ ಪಾರಿಭಾಷಿಕ ಶಬ್ದಗಳಿವೆ; ಜೊತೆಗೆ ವೀರಭದ್ರ ದೇವರಿಗೆ (ವಿರೇಶ್ವರ)ದಾನದ ಸಂದರ್ಭಗಳನ್ನು ಹೇಳಲಾಗಿದೆ.[೧೦] ಈ ಶಾಸನದ ಅಂಶಗಳನ್ನು ಗಮನಿಸಿದರೆ ಕೇರಳಾಪುರದಲ್ಲಿ ವೀರಭದ್ರದೇವರ ಗುಡಿಯು ವೀರಶೈವ ಮಠಕ್ಕೆ ಹೊಂದಿಕೊಂಡಿದ್ದುದು ಸೂಚಿತವಾಗುತ್ತದೆ; ಆ ಮಠ ಶ್ರೀಶೈಲಪೀಠ ಸಂಪ್ರದಾಯಕ್ಕೆ ಸೇರಿದ್ದುದರ ಸೂಚನೆಯೂ ದೊರೆಯುತ್ತದೆ; ಅಲ್ಲಿ ನಡೆಯುತ್ತಿದ್ದ ವೃತ್ತಿಗಳ ಹಾಗೂ ಮಠಪತಿಗಳ ಅಸ್ತಿತ್ವವನ್ನು ಶಾಸನವು ಹೇಳುತ್ತದೆ. ೧೧ನೇ ಶತಮಾನದ ನೆರೆಯ ಕೊಡಗಿನ ಬಳುಗುಂದದ ಅಪ್ರಕಟಿತ ಶಾಸನದಲ್ಲಿ[೧೧] ಬರುವ **'ಗೊರುಣ ಭದ್ರ ಗುರೋಪಿ ಮಾರತಿಂಬಿ ನಿಂಣಗಣ ಗೋಪತಿಕೋಕ್ಸ...ಭದ್ರಗೋತ್ರಾ ಶಿಕ್ಸರ್'**, ಹಾಗೂ ದೇವರದಾಸಿಮಯ್ಯನ ಗುರುವಿನ ಪೀಠಾರೋಹಣದ ಮುನ್ನಿನ ಹೆಸರು 'ಗೋಪತಿ' ಎಂದಿರುವಲ್ಲಿ ಅಂಕನಾಥಪುರದ ಶಾಸನದ 'ದಾಸಿಮಯ್ಯನ ತಣ್ಣಗಣ' (ಶಿವಗಣ!) ಹಾಗು ಕೇರಳಾಪುರ ಶಾಸನದ **'ನಂಬಿಯಣಂಗಳ ಗಣ'** ಎಂಬ ಶಬ್ದಗಳನ್ನು ಗಮನಿಸುವಲ್ಲಿ ಈ ಪ್ರದೇಶದಲ್ಲಿ ಪ್ರಚಲಿತವಿದ್ದ ವೀರಶೈವ ಗಣಸಂಪ್ರದಾಯದ ಬಗ್ಗೆ ಸುಳುಹು ದೊರೆಯುವಂತಿದೆ. 'ಗಣ' ಶಬ್ದ ಜೈನಧರ್ಮಕ್ಕೆ ಮಾತ್ರವೆ ಮೀಸಲಾಗದೆ ವೀರಶೈವದಲ್ಲಿಯೂ ಪ್ರಚಲಿತವಿದ್ದ ಸುಳುಹು ಇಲ್ಲಿ ಕಾಣುತ್ತದೆ.

ಪುಷ್ಪಗಿರಿಯ ಮೇಲೆ ಮಲ್ಲಿಕಾರ್ಜುನ ಮಠವಿತ್ತು. ವೀರಭದ್ರ ದೇಗುಲವೂ ಇದ್ದು ಕೆಂಡೋತ್ಸವ ನಡೆಯುತ್ತಿತ್ತು. ಮಲ್ಲಿಕಾರ್ಜುನ ದೇಗುಲವಿರುವ ಈ ಗಿರಿಯ ದೇಗುಲದ ಭಿತ್ತಿ ಹಾಗೂ ಮಂಟಪದ ಕಂಬದ ಶಾಸನಗಳಲ್ಲಿ ನಖರೇಶ್ವರ ವೋರುಂಗಲ್ಲ ವೀರಭದ್ರದೇವರಿಗೆ ದಾನ ಬಿಟ್ಟ ಸಂಗತಿ ಇದೆ. ಶಾಪಾಶಯದಲ್ಲಿ, ದಾನಾಪಹರಣ ಮಾಡಿದರೆ ಗುರುವನ್ನು ಕೊಂದ ಪಾಪಕ್ಕೆ ಗುರಿ ಎಂದು ಉಕ್ತವಾಗಿದೆ. ವಿಜಯನಗರದರಸ ವೀರಹರಿಹರ ಮಹರಾಯರ ಅಳಿಯ ಪುಲ್ಲಖಂಡ ಸಿದ್ದರಾಜರು ಈ ವೀರಭದ್ರದೇವರಿಗೆ ದಾನ ನೀಡಿದ ಸಂಗತಿಯೂ ಇದೆ. ಇಲ್ಲಿನ ಶಾಸನಗಳು[೧೨] ಹೇಳುವ ಈ ಸಂಗತಿಗಳಿಂದಾಗಿ, ಬೆಟ್ಟದ ಮೇಲೆ ಮಲ್ಲಿಕಾರ್ಜುನ ಮಠ-ದೇಗುಲದ ಜೊತೆಗೆ ವೋರುಂಗಲ ವೀರಭದ್ರ ದೇವರ ಸಾಕ್ಷಿಗುಡಿಗಳು ಇಲ್ಲಿದ್ದ ಸೂಚನೆಯನ್ನು ನೀಡುತ್ತವೆ. ರಾಘವಾಂಕ ಕ್ರಿ.ಶ.೧೨೬೦ರ ಸುಮಾರಿಗೆ ವೀರೇಶ ಚರಿತ್ರೆಯನ್ನು ಬರೆದು ಕಾಕತೀಯರ ವೋರಂಗಲ್ಲಿಗೆ ಹೋಗಿ ಒಪ್ಪಿಸಿದ. ಅಂತಾಗಿ ಹಕ್ಕಬುಕ್ಕರು ವೋರಂಗಲ್ಲಿನ ಕಾಕತೀಯರಲ್ಲಿ ನಿಲ್ಲುವ ಮುನ್ನವೆ ವೋರಂಗಲ್ಲು ವೀರಭದ್ರದೇವರು ಬೇಲೂರು ಪ್ರದೇಶದಲ್ಲಿ ಪ್ರಸಿದ್ಧಿಗಿದ್ದು ನಂತರ ಸಿದ್ದರಾಜರು ಬೇಲೂರಿನಲ್ಲಿ ಅಧಿಕಾರಿಯಾಗಿ ನಿಂತು ದಾನ ಶಾಸನ ಹಾಕಿಸಿರುವಂತಿದೆ. ಮಲ್ಲಿಕಾರ್ಜುನ ಮಠವೂ ಅವನ ಕಾಲಕ್ಕೇ ಇದ್ದು, ವೀರಶೈವದ ಪ್ರಭಾವವನ್ನು ಸೂಚಿಸುತ್ತದೆ. ಬಹುಶಃ ಈ ಪುಷ್ಪಗಿರಿ ಮಲ್ಲಿಕಾರ್ಜುನ ಮಠದ ಶಾಖೆಗಳು ಜಿಲ್ಲೆಯಲ್ಲಿ ಇದ್ದುವೆನಿಸುತ್ತದೆ.

೧೫ನೆಯ ಶತಮಾನದಲ್ಲಿ ಹುಲುಕುಂದ ಶಾಸನದ ರೀತ್ಯಾ[೧೩] ಯಿದಿಯಾರುವರದ (ಉದೇವಾರ) ಗ್ರಾಮದಲ್ಲಿ ಮುರುಘ ಸಂಪ್ರದಾಯದ ಮಠದ ಸ್ವಾಮಿಗಳಿದ್ದ ಸಂಗತಿ ಕಾಣಬರುತ್ತದೆ. ಮಠದ ಸ್ವಾಮಿಗಳು ವಿರಕ್ತಸಂಪ್ರದಾಯದವರು ಅಥವಾ ಅದರ ಸಮೀಪ ಸಂಪ್ರದಾಯದವರು ಎಂದೂ ಹೇಳಿದೆ. ಬಹುಶಃ ಮುರುಘ ಶಾಖಾಮಠವಾಗಿದ್ದ ಕಾರಣ ಹಾಗೆ ಹೇಳಿರಬೇಕು. ಶಾಸನದ ಆರಂಭದಲ್ಲಿ ಬಾಣನ 'ಹರ್ಷಚರಿತ'ದ ಶಿವನ ಕುರಿತ ಮಂಗಳ ಶ್ಲೋಕವಾದ 'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ... ಶಂಭವೇ' ಎಂಬ ಶ್ಲೋಕದ ಬಳಕೆ ಇದೆ; 'ಶ್ರೀಮದೇಸಿಕ' ಶಬ್ದ 'ಷಟ್‌ಸ್ಥಲ ಚಕ್ರವರ್ತಿ' ಶಬ್ದದೊಡಗೂಡಿ ಬಂದಿದೆ; **'ವಿರಕ್ತ ಶಿಖಾಮಣಿ ಮುರಿಗೆಸ್ವಾಮಿ'**ಗಳ ಸಮೀಪ ಸಂಪ್ರದಾಯವೆಂದಿದೆ. ಅಲ್ಲದೆ 'ಬ್ರಹ್ಮಾನಂದ ಪರಶಿವಮೂರ್ತಿ' ಎಂಬ ಗುರು ಸಂಪ್ರದಾಯದ ಮಠಾಧಿಕಾರಿ, ವಿರಕ್ತ ಸಂಪ್ರದಾಯದೊಡನೆ ಸಹಯೋಗವಿದ್ದ ಸಂಗತಿಯೂ ತಿಳಿಯುವಂತಿದೆ. ಕೊಡಗಿನ ಅಬ್ಬಿ ಮಠ ಶಾಸನದಲ್ಲಿ[೧೪] ಬರುವ ಗುರು-ವಿರಕ್ತ ಸಮನ್ವಯ ಸಂಬಂಧದಕಾರಣ ಕುಂಭಕೋಣದ ಪೆರಿಯಮಠಕ್ಕೆ **'ವೀರ ಸಿಂಹಾಸನ-ಮುರುಘ ಬ್ರಹ್ಮತರ್ಕ'** ಎಂಬ ಗುರು-ವಿರಕ್ತ ಸಂಯುಕ್ತಕ ಹೆಸರಿರುವಂತೆ,[೧೫] ಉದೇವಾರ-ಹುಲುಕುಂದ ದಲ್ಲಿಯೂ ಸಹಯೋಗನಾಮಗಳು ಮಠಾಧಿಕಾರಿಯಲ್ಲಿ ಮೂಡಿರ ಬೇಕೆನಿಸುತ್ತದೆ. ಅಂತಾಗಿ 'ಶ್ರೀಮದೇಸಿಕ, - ಷಟ್‌ಸ್ಥಲ ಚಕ್ರವರ್ತಿ- ವಿರಕ್ತ ಶಿಖಾಮಣಿ ಮುರಿಗೆಸ್ವಾಮಿಗಳು' ಎಂಬ ಶಬ್ದಗಳು ಹಾಗೆಯೇ ಮೂಡಿಬಂದಿರುವಂತಿವೆ.

ಚಿತ್ರದುರ್ಗದ ಮುರುಗಾಮಠದ ಕರ್ತೃಗಳು ತೋಂಟದ ಸಿದ್ಧಲಿಂಗರ ನಂತರ ಮುರುಗಾ ಶಾಂತವೀರಸ್ವಾಮಿಗಳವರೆಗೆ (ಕ್ರಿ.ಶ. ೧೬೪೦-೧೭೦೦) ಸದಾ ಚರ ಸಂಪ್ರದಾಯ ಅನುಸರಿಸಿ ಬರಿ ಸಂಚಾರದಲ್ಲಿಯೆ ಇದ್ದು ಒಂದೆಡೆ ನಿಂತವರಲ್ಲ, ಎಂಬ ಅಭಿಪ್ರಾಯವಿದೆ[೧೬]. ಈ ಸಂಪ್ರದಾಯ ಹೇಗೆ ಇರಲಿ ೧೫ನೇ ಶತಮಾನದಲ್ಲಿಯಂತು ನಿರ್ದಿಷ್ಟವಾಗಿ ಒಂದು ನೆಲೆಯನ್ನೂ ವಿರಕ್ತ ಚರಮೂರ್ತಿಗಳು ಹೊಂದಿದ್ದರು ಎಂಬುದಕ್ಕೆ ಸದ್ಯದ ಮೇಲಿನ ಕ್ರಿ.ಶ.೧೪೭೯ರ ಹುಲಕುಂದ ಶಾಸನ ಸೂಚನೆಯಾಗುತ್ತದೆ.

ಚನ್ನರಾಯಪಟ್ಟಣದ ಕ್ರಿ.ಶ. ೧೫೮೭ ರ ಸ್ತಂಭ ಶಾಸನದಲ್ಲಿ, ಫಿರಂಗಿಮಠ, ರಾಮೇಶ್ವರದೇವರ ಗುಡಿ, ಯರಡು ಸಿರಸಿನ ಬಸವನ ಪ್ರತಿಷ್ಠೆ ಹಾಗು ಕೊಳಸಹಿತವಾಗಿ ಪಡುವಣ ಮಠವನ್ನು ನಿರ್ಮಿಸಿದ ಬಗ್ಗೆ ಹೇಳಲಾಗಿದೆ; ಸಂಧ್ಯಾಮಠವನ್ನು ನಿರ್ಮಿಸಿ ಗುಡಿಯನ್ನು ಹೊಂದಿಸಿರುವ ಸೂಚನೆಯೂ ಶಾಸನದಲ್ಲಿದೆ. 'ತಂಮಕುಲಶ್ಚ ಮಿತಾತ್ತಿ ವೀರೇಶ್ವರ ಹಾಗು ಭದ್ರಕಾಳಂಮ ಮಾಚಳೇಶ್ವರ (ಮಡಿವಾಳ ಮಾಚಯ್ಯ!) ದೇವಮೂರ್ತಿಗಳನ್ನು ಪ್ರತಿಷ್ಠಿಸಿದ ಸಂಗತಿಯನ್ನೂ ಹೇಳಲಾಗಿದೆ. ಇದು ಮಠ ದೇಗುಲಕ್ಕೆ ಸಂಬಂಧಿಸಿದ ಹುಲಿಮುಖದ ಚಾವಡಿಯಲ್ಲಿ ಪ್ರತಿಷ್ಠೆಯಾಗಿದೆ. ಈ ಶಾಸನ ಸಂಗತಿಗಳೆಲ್ಲ ಒಳಗರಮ್ಮ ದೇಗುಲದ ಉಯ್ಯಾಲೆ ಕಂಬಗಳ ಮೇಲೆ ಬಿಡಾವಣೆ ಆಗಿರುವುದು ಗಮನಾರ್ಹ. ಈ ಉಯ್ಯಾಲೆಕಂಬವು ಗ್ರಾಮದೇವತೆ ಒಳಗರಮ್ಮನಿಗೆ ಸಂಬಂಧಗೊಂಡು 'ಸುಗ್ಗಿಕಟ್ಟೆಕಂಬ'ಗಳ ಪ್ರತೀಕವಾಗಿ ಮಠದ ಸಪ್ತಮಾತೃಕಾ ಆರಾಧನೆ (ರುದ್ರ ಕನ್ನಿಕೆಯರ) ಗೆ ಹೊಂದಿಕೊಂಡಿರುವ ಸಂದರ್ಭವಾಗಿದೆ. ಕೊಡಗಿನ ಸುಗ್ಗಿಕಟ್ಟೆ ಹಬ್ಬವು ಹೀಗೆಯೆ ವೀರಶೈವ ಮಠಕ್ಕೆ ಸಪ್ತ ಮಾತೃಕೆಯರ ಸಂಕೇತಗಳೊಡನೆ (ತೊರೆನೂರು ಮಠ, ಹೆಗ್ಗಡಹಳ್ಳಿಮಠ, ಚೌಡ್ಲು, ಯಡೂರು ಅಬ್ಬಿಮಠ) ಆಚರಣೆಗೆ ಇರುವಲ್ಲಿ ಹಾಸನ ಜಿಲ್ಲೆಯ ಈ ಸಂಗತಿಯೂ ಸಂವಾದಿ ಉದಾಹರಣೆ ಆಗಿದೆ ಎನ್ನಬೇಕು. ಇದು ಮಠ ಹಾಗು ಗ್ರಾಮೀಣ ಸಾಂಸ್ಕೃತಿಕ ಸಾಮಾಜಿಕ ಸಂಬಂಧಗಳ ಪ್ರಾಚೀನ ಉದಾಹರಣೆ ಆಗಿದೆ.

ಚನ್ನರಾಯಪಟ್ಟಣದ ದೊಡ್ಡಕೊಳದ ಮಠವನ್ನು ಕಾನಕಾರನ ಹಳ್ಳಿಯ (ಚಂನಪಟ್ಟಣ ಸೀಮೆ) ಪ್ರಭು ಆಲೂರ ಭೀಮನ ಆಣತಿ(!) ಯಂತೆ ಪಾತ್ಸಾಹನು ಕಲ್ಲಿನ ಕೋಟೆಯ ಜೊತೆಗೆ ಮಂಟಪ, ಕೊಳ ಸಹಿತವಾಗಿ ಕಟ್ಟಿಸಿಕೊಟ್ಟದ್ದು ಶಾಸನೋಕ್ತವಾಗಿದೆ.[೧೭] ಕ್ರಿ.ಶ.೧೬೪೭ರಲ್ಲಿ ಇದೇ ಕಾನಕಾರನ ಹಳ್ಳಿಯ ಪ್ರಭು ದೊಡ್ಡೈಯ್ಯ ಎಂಬುವನು ಚನ್ನರಾಯಪಟ್ಟಣದಲ್ಲಿ ಕಲ್ಲಿನಕೋಟೆಯನ್ನು ಕಟ್ಟಿಸುವ ಸಮಯದಲ್ಲಿ ಅವನ ಪಾರುಪತ್ಯಗಾರ ಕಲಸುಗೆರೆಯ ಸ್ಥಳದ ಕೆಂಪಣಗೌಡನು ಕಲ್ಲುಮಠ ಹಾಗೂ ಕೊಳವನ್ನು ಕಟ್ಟಿಸಿಕೊಟ್ಟದ್ದಿದೆ.[೧೮]

ಕ್ರಿ.ಶ. ೧೬೪೭ರ ಚನ್ನರಾಯಪಟ್ಟಣದ ಗದ್ದೆ ರಾಮೇಶ್ವರ ದೇಗುಲ ಶಾಸನದ ರೀತ್ಯಾ ವಿಜೆಯಪುರದ ಪಾತ್ಸಾಹನು ಸಂಧ್ಯಾಮಠ, ಕೊಳಭಾವಿ, ಬಸವನಕಂಬ, ಉಯ್ಯಾಲೆ ಕಂಬ(ಸುಗ್ಗಿ ಸ್ತಂಭಗಟ್ಟೆ) ಕಟ್ಟಿಸಿದ ಸಂಗತಿ ಇದೆ. ಇದೇ ಊರಿನ ಕ್ರಿ.ಶ. ೧೬೬೪ರ 'ಭಕ್ತರ ಹಳ್ಳಿ' ಶಾಸನವು, ಆ ನೆರೆಯಲ್ಲಿ ವೀರಶೈವ ಮಠವಿದ್ದ ಸೂಚನೆ ನೀಡುತ್ತದೆ; ಮಠಕ್ಕೆ 'ಭಕ್ತರಹಳ್ಳಿ ಮಠ' ಎಂಬ ಹೆಸರಿದ್ದ ಬಗ್ಗೆಯೂ ಸೂಚನೆ ನೀಡುವಂತಿದೆ.

ಕರ್ಜುವಳ್ಳಿ ಗ್ರಾಮದ ಕಲ್ಲೇದೇವರ ಗುಡಿ ಬಳಿ ಇರುವ ಶಾಸನ ರೀತ್ಯಾ, ಅಲ್ಲಿದ್ದ ಶಾಂತದೇವರ ಮಠಕ್ಕೆ - 'ಸಿಂಗಿರಿಕಳಿ ಶಾಂತದೇವರು' ಯಿ ಮಟದೇವರ ಕೂಡಿರುಯಿ ಸೊಸ್ತಿಯ ನಡೆಸುವ ಬಗ್ಗೆ ಹೇಳಿ ೨೪ ಖಂಡುಗ ಭತ್ತವನ್ನು ಮಠದ ಅಮೃತಪಡಿ ಸೇವೆಗೆ ದಾನ ನೀಡಿರುವುದನ್ನು ಹೇಳಿದೆ.[೧೯] ಬಹುಶಃ ಈ ಮಠವು ಹೊಯ್ಸಳರ ಕಾಲದಲ್ಲಿ ಮೊದಲಿಗೆ ಕಾಳಾಮುಖ ಶೈವರ ಮಠವಾಗಿದ್ದು ನಂತರ ವೀರಶೈವ ಮಠವಾದಂತಿದೆ. ಈ ಮಠಕ್ಕೆ ದೇಗುಲವೂ ಅಂಟಿಕೊಂಡಿತ್ತು.

ಕ್ರಿ.ಶ. ೧೨೭೪ರ ತಳತೊರೆಯ ಮಹಾಲಿಂಗೇಶ್ವರ ದೇಗುಲ ಶಾಸನದಲ್ಲಿ[೨೦] 'ತಳತೊಜೆಯ ರಾಮುಗುರುಗಳ ಮಗ ಕಲ್ಲಯ್ಯ', ಹೊಯ್ಸಳ ದಂಡನಾಯಕನೆದುರು ಕಾದಿ ಮಡಿದ ಸಂಗತಿ ಇದೆ; ಅಲ್ಲದೆ 'ಶಿವಸರಣ ದೀಕ್ಷ ಪುತ್ರನು ಹರಗಣಂಗಳ ಭೃಂಗಿ.... ವೀರ ಮಡಿದನತಿಧೀರನು ನಂದಿನಾಥ ವೀರಭದ್ರಂ ಮೆಚ್ಚಲು' ಎಂದಿರುವಲ್ಲಿ ವೀರಶೈವದ ಪರಿಕ್ರಮ ಹಾಗೂ ಪಾರಿಭಾಷಿಕ ಪದಗಳೂ ಕಾಣಬರುತ್ತವೆ. ಹೀಗಾಗಿ 'ತಳತೊಜೆ ಮಠ'ವೊಂದಿದ್ದು ಅದರ ಮಠಾಧಿಪತಿ ರಾಮುಗುರು ಆಗಿದ್ದ; ಅವನಿಂದ ದೀಕ್ಷಿತನಾದವ ಕಲ್ಲಯ್ಯ ಎಂಬ ಸೂಚನೆ ಕಾಣುತ್ತದೆ. ಚಂಗಾಳ್ವರ ಕೊಡಗುಶ್ರೀರಂಗಪಟ್ಟಣದ ವೀರಶೈವ ದೊರೆ ಬೊಪ್ಪದೇವ ಶ್ರೀರಂಗನ ಪರಮಭಕ್ತನಾಗಿದ್ದ ಎಂಬ ಹಿನ್ನೆಲೆಯಲ್ಲಿ ತಳತೊಜೆಯ ಮಠದ ಗುರುವಿನ ಹೆಸರು 'ರಾಮಗುರು' ಎಂದಿರುವುದು ಹೊಯ್ಸಳರ ಆ ಕಾಲಕ್ಕೆ ಅಚ್ಚರಿ ಎನಿಸುವುದಿಲ್ಲ. ಆ ಮಠದ ಪ್ರದೇಶದಲ್ಲಿ ಅಬ್ಬಿಯೊಂದಿದ್ದು 'ತಲೆತೊಜ' ಎಂಬ ಶುದ್ಧ ಕನ್ನಡ ಶಬ್ದದ ಬಳಕೆ ಕಾಣುತ್ತದೆ.; ಮುಂದೆ ಅದು 'ತಳತೊರೆ' ಎಂಬ ರೂಪಕ್ಕೆ ತಿರುಗಿತು (ಕೊಡಗಿನ ಅಬ್ಬಿ ಮಠದ ಬಳಿಯ ತಲ್ತೊರೆ > ತಲತೊರೆ> ತಲೆತೊರೆ ಎಂಬ ಗ್ರಾಮವೂ ಇದಕ್ಕೊಂದು ಸಂವಾದಿ ಉದಾಹರಣೆ ಎನಿಸುತ್ತದೆ).

ಮೂಡ್ನಹಳ್ಳಿ ಮಠದ ಗುರುವಿಗೆ, ಗ್ರಾಮವೊಂದನ್ನು ದಾನವಾಗಿ ಶಿವಪೂಜೆ ಜಪತಪ ಜಂಗಮಾರ್ಚನೆಗೆ ಲಿಂಗಮುದ್ರೆ ಹಾಕಿಕೊಟ್ಟಿರುವ ಶಾಸನೋಕ್ತ ಸಂಗತಿ ಇದೆ.[೨೧] ಶಾಪಾಶಯದಲ್ಲಿ ದಾನ ಕೆಡಿಸದಿರಲು 'ವಿಭೂತಿ ರುದ್ರಾಕ್ಷಿಗೆ ಹೊರಗು' ಎಂಬ ವೀರಶೈವಪರ ಆಶಯದ ಜೊತೆಗೆ 'ಗೋವು ಬ್ರಾಂಹಣರನು... ವಾರಣಾಸಿಯಲ್ಲಿ ಕೊಂದವರು', ಆಗುತ್ತಾರೆ ಎಂದೂ ಹೇಳಿದೆ. ಇದು ಒಂದು ಸಾಮಾನ್ಯ ಪರಿಭಾಷೆಯಾಗಿ ರೂಢಿಗೊಂಡಿತ್ತು ಎನಿಸುತ್ತದೆ ವಿನಾ ನಿರ್ದಿಷ್ಟ ವರ್ಗ-ವರ್ಣದ ಹೆಚ್ಚಳಕ್ಕಾಗಿ ಬರೆಯುತ್ತಿದ್ದ ರೂಢಿ ಎಂದು ಈ ಸಂದರ್ಭದಲ್ಲಿಯಂತು ಅನಿಸುವುದಿಲ್ಲ. ಮೂಡ್ನಹಳ್ಳಿ ಮಠದ ಅಸ್ತಿತ್ವವನ್ನೂ(೧೬-೧೭ ಶತಮಾನ) ಈ ಶಾಸನ ಸೂಚಿಸುತ್ತದೆ. ೧೭ನೇ ಶತಮಾನದಲ್ಲಿ 'ಅಗ್ರಹಾರ' ಗ್ರಾಮವನ್ನು ನಂಜರಾಯಪಟ್ಟಣದರಸು ಶ್ರೀಕಂಠರಾಜಯ್ಯರಾದ ಪಿರಿಯರಾಜಯ್ಯದೇವನು ಲಿಂಗಣವಡೆಯರಿಗೆ ಲಿಂಗಮುದ್ರೆ ಹಾಕಿ ಶಿವಾರ್ಪಿತವಾಗಿ ಶಾಸನ ನೀಡಿದ್ದಾನೆ[೨೨]; ಶಾಪಾಶಯದಲ್ಲಿ ಬರುವ 'ಲಿಂಗದ್ರೋಹಿ, ಜಂಗಮದ್ರೋಹಿ' ಎಂಬ ಶಬ್ದಗಳೇ ಅಲ್ಲಿನ ವೀರಶೈವ ಮಠವೊಂದರ

ಅಸ್ತಿತ್ವವನ್ನೂ ಹೇಳುತ್ತದೆ. ಜೊತೆಗೆ ಗ್ರಾಮದ ಹೆಸರು 'ಅಗ್ರಹಾರ'ವೆನ್ನುವುದು ವೀರಶೈವ ಗುರುಗಳು ಹಾಗೂ ಜಂಗಮರಿಗೆ ಅಗ್ರಹಾರವೊಂದನ್ನೂ ಸ್ಥಾಪಿಸಿಕೊಟ್ಟ ಸಂಗತಿಯಾಗಿ ಕಾಣುವಂತಿದೆ. ಹಾಗಾಗಿ **ಅಗ್ರಹಾರಮಠ** ಎಂಬ ಹೆಸರನ್ನೂ ಗಮನಿಸಬೇಕಾಗುತ್ತದೆ. ಬಲ್ಲೇನಹಳ್ಳಿ ಗುಡಿಯ ಶಾಸನವನ್ನು[೨೩] ಬರೆದ ಲಿಪಿಗಾರ 'ಮಟದ ರಾಚೋಟಿದೇವರು' ಎಂದಿರುವಲ್ಲಿ ಬಹುಶಃ ೧೭-೧೮ನೇ ಶತಮಾನದಲ್ಲಿ ಬಲ್ಲೇನಹಳ್ಳಿ ಮಠವಿದ್ದುದರ ಸೂಚನೆ ದೊರೆಯುತ್ತದೆ.

ಹೊನ್ನಗೊಂಡನಹಳ್ಳಿಯಲ್ಲಿ ಮಹಾಮಹತ್ತಿನ ಮಠವೊಂದು ಇದ್ದು ೧೭ನೇ ಶತಮಾನದಲ್ಲಿ ಆ ಗ್ರಾಮವನ್ನು ದಾನವಾಗಿ ಪಡೆದ ಸಂಗತಿ ಇದೆ. ಆ ಗುರುಸ್ಥಲದ ಮಠದ ಗುರುವಾಗಿ ಚಂನವೀರ ಸಿದ್ದಲಿಂಗದೇವರು ಆಗ ಇದ್ದು ವಿಭೂತಿ ಖರ್ಚಿಗೆ ಮಠದಿಂದ ಹಣದ ಸಹಾಯ ಮಾಡಿದ ಸಂಗತಿ ಇದೆ. ಹೊನ್ನಗೊಂಡನಹಳ್ಳಿ ಮಠದ ಈ ದಾನಕ್ಕೆ ಸಾಕ್ಷಿಯಾಗಿ ಪಂಡಿತಾರಾಧ್ಯ ಗುರುದೇವರು, ಹಾಲುಕುರಿಕೆ(ಮಠದ)ದೇವರು, ಯರಡುಕೆರ್ತಿ(ಮಠದ) ಗುರುಸಿದ್ದದೇವರು, ಮಳಬಸವಲಿಂಗ ದೇವರು ಸಮ್ಮತಿ ನೀಡಿರುವುದು ಶಾಸನೋಕ್ತವಾಗಿರುವಲ್ಲಿ[೨೪], ಆ ಪ್ರದೇಶದ ವೀರಶೈವ ಗುರುಗಳು ಹಾಗೂ ಮಠಗಳ ಹೆಸರು ತಿಳಿಯುವಂತಿದೆ. ಇಲ್ಲಿ **'ಯೆರಡುಕೆರ್ತಿಮಠ'**ದ ಗುರುಗಳು ದೊಡ್ಡಗದ್ದವಳ್ಳಿಯಲ್ಲಿ ೧೨ನೇ ಶತಮಾನದಲ್ಲಿ ಇದ್ದಿರಬಹುದಾದ ಮಠದ ಪರಂಪರೆಯವರೇ ಎಂಬ ಊಹೆಗೆ ಅವಕಾಶವಿದೆ. ಕಾರಣ ಅಲ್ಲಿನ ಶಾಸನದಲ್ಲಿ[೨೫] 'ಧಂಮ್ರ್ಮವ ಕಿಡಿಸಿದಂ ಲಿಂಗಭೇದಿ ಇಕ್ಕತ್ತಿಗೆಯ ಕೊಂದ' ಎಂಬ ವೀರಶೈವ ಪ್ರಭಾವ ಸೂಚಿತ ಶಾಪಾಶಯ ಕಾಣುತ್ತದೆ. 'ಇಕ್ಕತ್ತಿಗೆ' ಎಂದರೆ ಉಭಯ ಮುಖಿ ಹಸು; ಆಗತಾನೆ ಕರು ಹಾಕುತ್ತಾ ಇದ್ದು ಹಿಂದೊಂದು ಕೊರಳು, ಮುಂದೊಂದು ಕೊರಳು ಕಾಣುವ ಹಸು (ಇರ್ < ಎರಡು,ಕತ್ತು + -ಇಗೆ)[೨೬]. ಲಿಂಗವನ್ನು ಒಡೆದ ಪಾಪ ಹಾಗೂ ಕರು ಹಾಕುತ್ತಿರುವ ಹಸುವನ್ನು ಕೊಂದ ಪಾಪದ ಬಗ್ಗೆ ಹೇಳಿದೆ. ಆದರೆ ಲಕ್ಷ್ಮಿ ಗುಡಿಯಲ್ಲಿ ಈ ಶಾಸನವಿರುವಲ್ಲಿ ಆ ನೆರೆಯ ವೀರಶೈವಧರ್ಮಿಗಳ ಬಹುಸಂಖ್ಯಾತತೆಯನ್ನೂ ಸೂಚಿಸುವಂತಿದೆ. ಇದಲ್ಲದೆ ಇರ್‌ಕತ್ತು > ಎರಡು ಕರ್ತು> ಎರಡು ಕೆರ್ತು> ಯೆರಡುಕರ್ತಿ ಆಗಿರಬಹುದು.

ಬೆಂಡೆಕೆರೆ ಸಿದ್ದೇಶ್ವರ ದೇಗುಲದ ಕಂಬದ ಶಾಸನದಲ್ಲಿ ಬರುವ[೨೭] '...ಶಾಂಮಂಬು ಶ್ರೀಲ್ಲಿಂಗ ಚಕ್ರವರ್ತಿ ಶ್ರೀಮಲ್ಲಿಕೆರ್ಜುನ ದೇವರ ದಿವ್ಯ ಶ್ರೀಪಾದಪದ್ಮಾರಾಧಕರಾದ ಶ್ರೀ ಭಿಕ್ಷವತ್ತಿ ಆಯನವರು ಬೆಂಡೆಕೆರೆಯ ಸಿವಸ್ತಗಳಿಗೆ ಗಣಚಾರದ....' ಇತ್ಯಾದಿ ಶಬ್ದಗಳನ್ನು ಗಮನಿಸಿದರೆ ಬೆಂಡೆಕೆರೆಯಲ್ಲಿ ವೀರಶೈವ ಮಠವೊಂದಿದ್ದು, ಅದು ಶ್ರೀಶೈಲ ಸಂಪ್ರದಾಯ(ಪೀಠ)ದ ಶಾಖಾಮಠವಾಗಿದ್ದುದರ ಬಗ್ಗೆಯೂ ತಿಳಿಯುತ್ತದೆ. ಈ ಶಾಸನದಲ್ಲಿನ ವೀರಶೈವ ಪಾರಿಭಾಷಿಕ ಶಬ್ದಗಳೂ ಇದಕ್ಕೆ ಪೋಷಕವಾಗಿವೆ. ಇಂದಿಗೂ ೧೭-೧೮ ನೇ ಶತಮಾನದ ಶಾಸನೋಕ್ತ ಬೆಂಡೆಕೆರೆಮಠ ವೀರಶೈವ ಜನಾಂಗದಲ್ಲಿ ಪ್ರಚಲಿತವಿದೆ. ಸಿದ್ದೇಶ್ವರ ದೇಗುಲಕ್ಕೆ ಅಂಟಿಕೊಂಡಂತೆ ಈ ವೀರಶೈವ ಮಠವಿತ್ತೆಂಬ ಸೂಚನೆಯೂ ಇಲ್ಲಿದೆ. ಕಾಳಾಮುಖ ಶೈವ ಅಥವಾ ನಾಥಪಂಥ ಮೂಲದಿಂದ ಈ ಸಿದ್ಧೇಶ್ವರ ಆರಾಧನೆ ಈ ಮಠಕ್ಕೇ ತಾಗಿರಬಹುದೇ ಎಂಬ ಅನುಮಾನ ಬರಬಹುದು. ಅಂದರೆ ಶ್ರೀ ಶೈಲದಲ್ಲಿ ಬೌದ್ಧಸಿದ್ಧರ ಪರಂಪರೆ ಇದ್ದದ್ದು ಈ ಹಾಸನ ಜಿಲ್ಲೆಗೂ ಹರಡಿ ಶೈವ ಅವಧೂತರಾಗಿ, ಕಾಳಾಮುಖ ಶೈವರೆನಿಸಿ ನಂತರ ವೀರಶೈವಕ್ಕೆ ಹಾಸನ ಜಿಲ್ಲೆಯಲ್ಲೂ ಪರಿವರ್ತನಗೊಂಡರು ಎನ್ನಬಹುದು; ಶ್ರೀಶೈಲದಲ್ಲಿಯೆ ಪಂಡಿತಾರಾಧ್ಯರು ಬೌದ್ಧಸಿದ್ಧ ಮೂಲದ ಕಾಳಾಮುಖ ಶೈವರನ್ನು ಶ್ವೇತಮುಖಿಗಳನ್ನಾಗಿಸಿದ ಪರಂಪರೆ ಇರುವಲ್ಲಿ ಇಲ್ಲಿಯೂ ಆ ಶ್ರೀ ಶೈಲ ಪೀಠದ ಪ್ರಭಾವ ಬಿದ್ದಿರಲಿಕ್ಕೇ ಸಾಕು. ಅಂತಾಗಿ ಸಿದ್ಧೇಶ್ವರ ಆರಾಧನೆಯನ್ನು ತಾಂತ್ರಿಕ ವಜ್ರಯಾನದ ಬೌದ್ಧಸಿದ್ಧ ಮೂಲದಿಂದ, ವೀರಶೈವಕ್ಕೆ ಬಂದವರು ಮುಂದುವರಿಸಿದರು ಅಥವಾ ಅಳವಡಿಸಿಕೊಂಡರೆಂಬುದಕ್ಕೆ ಈ ಶಾಸನ ಸಾಕ್ಷಿ ಆಗಬಹುದು. ಶ್ರೀಶೈಲ ಮಲ್ಲಿಕಾರ್ಜುನನ **'ಸ್ವಯಂಭು ಲಿಂಗತ್ವ'**ವನ್ನು ಈ ಶಾಸನ ನೆನೆದಿದೆ.

ಪ್ರಚಲಿತವಾಗಿರುವ ಮಠಗಳು

ಇಂದಿನ ಸಾಮಾಜಿಕ ಸನ್ನಿವೇಶಕ್ಕನುಗುಣವಾಗಿ ಸ್ಪಂದಿಸಿ ಶಿಕ್ಷಣ, ವಸತಿ ಶಾಲೆಗಳನ್ನು ನಡೆಸಿಕೊಂಡು ಹೋಗುತ್ತಿರುವ ಮಠಗಳು ಜಿಲ್ಲೆಯಲ್ಲಿವೆ. ಮಾಹೇಶ್ವರ ಜಂಗಮ ಜಾತ್ರೆ, ಸುಗ್ಗಿಕಟ್ಟೆ ಹಬ್ಬಗಳು ಈ ಮಠಗಳಲ್ಲಿ ಸಾಮಾನ್ಯವಾಗಿ ಅಡಕಗೊಂಡಿರುವ ಸಾಂಸ್ಕೃತಿಕ ಚರ್ಯೆಗಳಾಗಿವೆ. ಕೆಲವು ಮಠಗಳಲ್ಲಿ ಸ್ವಾಮಿಗಳಿದ್ದರೆ, ಕೆಲವೆಡೆ ಜಂಗಮರು, ಕೆಲವೆಡೆ ಸಂಸಾರಿಗಳು, ಮಠಗಳ ನಿರ್ವಹಣೆ ನೋಡಿಕೊಳ್ಳುತ್ತಿದ್ದಾರೆ. ಹಾಸನಜಿಲ್ಲೆಯಲ್ಲಿ ಒಟ್ಟು ೧೦೮ ಮಠಗಳಿದ್ದವು. ಅವುಗಳಲ್ಲಿ ಇಂದು ಅದರ ಶೇಕಡ ಸುಮಾರು ೫೦ ಭಾಗದಷ್ಟು ಉಳಿದುಕೊಂಡಿವೆ. ಇಂಥವುಗಳಲ್ಲಿ ಕೆಲವಷ್ಟು ಮಠಗಳ ಬಗ್ಗೆ ಈ ಮುಂದೆ ಪ್ರಸ್ತಾಪಿಸಲಾಗಿದೆ.

ತಂಗೇರು ಹಳ್ಳದ ಮಠ: ಹಾಸನದ ಕಸಬಾಕ್ಕೆ ಸೇರಿದ ಶಂಕರನಹಳ್ಳಿಯ ಈ ಮಠದ ಅಧ್ಯಕ್ಷರು ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು. ಈ ಮಠ ಮುರುಘಾಸಂಪ್ರದಾಯಕ್ಕೆ ಸೇರಿದುದಾಗಿದೆ. ಸ್ವಂತ ಕಾಯಕದಿಂದ ಮಠದ ಆಸ್ತಿ ಹೆಚ್ಚಿಸಿದ್ದಾರೆ. ನಾಲ್ಕು ಗದ್ದುಗೆಗಳಿರುವ ಈ ಮಠದ ಗುರುಗಳಿಗೆ ಹಿಂದಿನ ಸ್ಥಳೀಯ ಪಾಳೇಗಾರರೂ ಜಮೀನು ದಾನನೀಡಿದ್ದರು. ಇಲ್ಲಿನ ಗ್ರಾಮಗಳಲ್ಲಿ ವೀರಭದ್ರನ ಒಕ್ಕಲುಗಳು ಹೆಚ್ಚಿದ್ದು ಈ ಪ್ರದೇಶದ ಒಕ್ಕಲಿಗರಲ್ಲಿ ವೀರಭದ್ರ ಆರಾಧನೆ ಪ್ರಬಲ ಹಾಗೂ ಕೆಂಡೋತ್ಸವ ಜಾತ್ರೆ ಸಾಮಾನ್ಯ ರೂಢಿ. ಈ ಗ್ರಾಮೀಣ ಒಕ್ಕಲಿಗರು ಈ ಮಠದ ಸ್ವಾಮಿಗಳನ್ನು ವೀರಭದ್ರ ಜಾತ್ರೆ, ಕೆಂಡೋತ್ಸವಕ್ಕೆ ಭಕ್ತಿ ಬಿನ್ನಹವಿಟ್ಟು ಕರೆಸುತ್ತಾರೆ. ಈ ಮಠದಲ್ಲಿ ಸಂಸ್ಕೃತ ಕಾವ್ಯಗಳ ಓಲೆಗರಿ ಕಟ್ಟುಗಳ ಸಂಗ್ರಹವನ್ನು ನಿರ್ವಹಿಸಲಾಗಿತ್ತು. ಜಾತ್ರೆ, ಸಂತೆಗೆ ಬಂದ ಜನ,

ನೀರಿನಹಳ್ಳದ ಬಳಿ ಇದ್ದು ಅಂತಾಗಿ ಹೆಸರುಗೊಂಡಿದ್ದ ತಂಣೀರುಹಳ್ಳದ ಮಠದಲ್ಲಿ ಉಳಿಯುತ್ತಿದ್ದರು. ಈಗ ಮೇಲ್ದದಿಗೆ ವರ್ಗಾವಣೆಗೊಂಡು, ಕಲ್ಯಾಣಮಂಟಪವೊಂದನ್ನು ಜನಪಯೋಗಿಯಾಗಿ ಹೊಂದಿದೆ. ನಾಲ್ಕು ಗುರುಗದ್ದುಗೆಗಳಿದ್ದು, ಚೌಡಮ್ಮನ ಪೂಜೆ ಕೂಡ ಉಂಟು. ಕೊಡಗಿನ ತೊರೆನೂರು ಮಠ ಪಂಚಕಗಳಲ್ಲಿ ದಲಿತ ಸ್ತ್ರೀಭಕ್ತೆಯ ಕಳಶ ಪೂಜೆಯ ಸಂಕೇತವಾಗಿ ಸಿದ್ದೇಶ್ವರ ಗದ್ದುಗೆ ಬಳಿ ಚೌಡಮ್ಮ ಪೂಜೆ ಇರುವಂತೆ ಇಲ್ಲಿಯೂ ಅನ್ವಯವಾಗಿರಬಹುದು.

ಈ ಮಠಕ್ಕೆ ಸಹಯೋಗ ಸಂಪರ್ಕದ ಮಠವಾಗಿ ಸಂಕೋಲೆಪುರದ **ಸಂಕಲಾಪುರ ಮಠವಿದೆ.** ಪುಂಡರನ್ನು ಇಲ್ಲಿ ಸಂಕೋಲೆಯಿಂದ ಬಂಧಿಸುತ್ತಿದ್ದ ಕಾರಣವೂ ಈ ಹೆಸರು ನಿಂತಿತು. ಬಹುಶಃ ರಾಜ ಮಾನಿತ ಮಠವಾಗಿ ಮಠದ ಮೀಸಲು ದಳವು ಈ ರಕ್ಷಣಾಕಾಯಕದಲ್ಲಿ ತೊಡಗುತ್ತಿದ್ದಿರಬೇಕು. ಈ ಮಠದ ಆದಿಗುರುಗಳು ಶಾಂತಮಲ್ಲ ಸ್ವಾಮಿಗಳು. ಮೊದಲಿಗೆ ಕಾಡಿನೊಳಗೆ ಈ ಮಠವು ಇದ್ದು ಶಂಕರಲಿಂಗೇಶ್ವರ ಗುಡಿಯನ್ನು ಹೊಂದಿತ್ತು. ಕೋಟೆಯೂ ಇತ್ತು. ಇಂದು ಅಲ್ಲಿ ಅವಶೇಷ ಮಾತ್ರ ಉಳಿದಿದೆ.

ಶಾಂತಮಲ್ಲಸ್ವಾಮಿಗಳ ಸಾಕ್ಷಿ(ತೋರು)ಗದ್ದುಗೆ ಮಠದ ಗರ್ಭಗುಡಿಯಲ್ಲಿದೆ. ಇಲ್ಲಿ ಆ ಗುರುಗಳು ಅಂತಿಮ ಅನುಷ್ಠಾನ ನಡೆಸಿದರಂತೆ. ಗುಡಿಯಲ್ಲಿ ಸುಂದರ ಭುವನೇಶ್ವರಿ ಇದೆ. ಕ್ರಿ.ಶ ೧೨೦೦ರ ಸುಮಾರಿನ ಈ ಗುರುಗಳು ಇಲ್ಲಿ ಕೆಲಕಾಲ ವಾಸ್ತವ್ಯವಿದ್ದು ನಂತರ ಕೊಡಗಿನ ಪುಷ್ಪಗಿರಿಯ ಬಳಿ ಲಿಂಗೈಕ್ಯರಾದರು. ಈ ಮಠದಲ್ಲಿ ಕಾರ್ತಿಕ ದೀಪೋತ್ಸವ, ಪಾದಪಲ್ಲಕ್ಕಿಉತ್ಸವ(ಪಲ್ಲಕ್ಕಿ ಪಾದೋತ್ಸವ!) ನಡೆಯುತ್ತದೆ. ವೀರಗಾಸೆ, ಕೋಲಾಟ ಜಾನಪದ ಹಾಡುಗಾರಿಕೆ ಇಲ್ಲಿದ್ದು ಸಾಂಸ್ಕೃತಿಕ ಸಂಬಂಧಗಳನ್ನು ಜನತೆಯೊಡನೆ ಗಟ್ಟಿಗೊಳಿಸಿಕೊಂಡಿದೆ. ಗುರುಸ್ಥಲದ ಬಾಳೆಹೊನ್ನೂರು ಶಾಖೆಯ ಶಿಡುಗಳಲೆ ಮಠದ ಸ್ವಾಮಿಗಳಿಂದ ೧೯೬೦ ರಲ್ಲಿ ಪಟ್ಟಾಧಿಕಾರ ಪಡೆದ ಹಾಲಿ ಷ॥ಬ್ರ॥ಧರ್ಮರಾಜೇಂದ್ರ ಸ್ವಾಮಿಗಳು ಈ ಮಠದ ಮುಖ್ಯಸ್ಥರಾಗಿದ್ದಾರೆ. ಈ ಮಠವು ಶಕ–ಸಾತವಾಹನರನೆಲೆ ಎಂಬ ಐತಿಹ್ಯವಿರುವ ಊರಾದ **ಸಕಲೇಶಪುರ** ಮಠವೆಂದೂ ಹೆಸರಾಗಿದೆ.

ಜವೇನಹಳ್ಳಿ(ಜವನಹಳ್ಳಿ)ಮಠ: ನಿರಾಭಾರಿ ವೀರಶೈವ ವಿರಕ್ತ ಸಂಪ್ರದಾಯದ ಈ ಮಠದಲ್ಲಿ ಶ್ರೀ ಸಂಗಮೇಶ್ವರ ಸ್ವಾಮಿಗಳ ಮೂಲ ಗದ್ದುಗೆ ಇದೆ. ಅದಿಗುರುಗಳ ತಪೋನುಷ್ಠಾನ ಕ್ಷೇತ್ರವಾಗಿ ಈ ಗ್ರಾಮವಿತ್ತು. ಈ ಪರಂಪರೆಯಲ್ಲಿ ಬಂದವರು ಮುಖ್ಯವಾಗಿ ದೊಡ್ಡ ಶಾಂತವೀರಸ್ವಾಮಿಗಳು ಹಾಗೂ ಚಿಕ್ಕವೀರಸ್ವಾಮಿಗಳು. ಶಿವಯೋಗ ಮಂದಿರದಿಂದ ಅನುಗ್ರಹೀತರಾಗಿ ೧೯೮೬ರಲ್ಲಿ ಮಠದ ಪಟ್ಟಾಧಿಕಾರಕ್ಕೆ ಬಂದ ಸಂಗಮೇಶ್ವರ ದೇವರು, ತತ್ಪೂರ್ವ ಹಿಂದಿನ ಗುರುಗಳಾದ ಸಂಗಮೇಶ್ವರ ಸ್ವಾಮಿಗಳು ೧೯೫೧ರಿಂದ ಮಠೋನ್ನತಿಗಾಗಿ ದುಡಿದ ಆದರ್ಶವನ್ನು ಮುಂದುವರಿಸಿದರು. ಸಕಲೇಶಪುರ ತಾಲೂಕಿನ ಹಾಡ್ಲಹಳ್ಳಿಗ್ರಾಮದ ಅಗಚಿಗದ್ದೆಯ ಹಾಲುಒಡೆಯರ ಮಠವು. ಈ ಮಠದ ಶಾಖೆಯಾಗಿತ್ತು. ಆ ಮಠದ ಪತ್ರದ ದಾಖಲೆ(ಕ್ರಿ.ಶ.೧೨೩೩)ಯೂ ಇದೆ. ತಾಮ್ರ ಶಾಸನವೂ ಇದೆ. ೬.೮.೧೯೧೧ರ ದಾಖಲೆಯೊಂದರಲ್ಲಿ 'ಶ್ರೀ ಜವರನಹಳ್ಳಿ ಮಠದ ಚರಮೂರ್ತಿಗಳ ಪಾದಾರವಿಂದಕ್ಕೆ ಹೆತ್ತೂರು ಗ್ರಾಮದ ಪಟೇಲ್ ದೊಡ್ಡೇಗೌಡನ ಬಿನ್ನಹ... ಅಗಚಿಗದ್ದೆಯ ಮಠವು ಗದ್ದಿಗೆಯು ಬಿದ್ದು ಪೂಜೆ ವಗ್ಯೆರೆ ನಡೆಯದೆ ಹಾಲುವಡೆಯರ ಪೂಜೆ ನಿಂತು ಹೋಗಿದೆ...'[೨೮] ಎಂದಿದೆ.

ಈ ಮಠದಲ್ಲಿರುವ ಕ್ರಿ.ಶ.೧೨೨೫ರ ತಾಮ್ರ ಶಾಸನದಲ್ಲಿ[೨೯] 'ಬೇಲೂರು ನಾಯಕರ ಪೈಕಿಯು ವೆಂಕಟಾದ್ರಿನಾಯಕರ ಕ್ರಿಷ್ಣಪ್ಪನಾಯಕರು ಹಾಲವಡೆಯರ್ರಿಗೆ... ಹೆತ್ತಿಗೆ ನಾಡ ಹೆತ್ತೂರ ಮಂದೆ ವಳಿತವಾದ ಕಿರಕಹಳ್ಳಿ ಗೊದ್ಮುವಳನಾಡ ಮರತ್ತೂರ ಮಂದೆ ವಳಿತವಾದ ಬಾಜಿಹಳ್ಳಿಯಿೂ ಉಭಯಗ್ರಾಮಗಳ ಮಧ್ಯದಲ್ಲಿಯಿರುವ ಅಗಚಿಗದ್ದೆ ಮಾನಿಯಲ್ಲಿ ಮಠಾಕಟ್ಟಿಶಿ ಮಠದ ಧರ್ಮಕ್ಕೆ' ಭೂದಾನ ವಿತ್ತ ಸಂಗತಿ ಇದೆ. ಇದೆಲ್ಲ ಹಾಲಿ ಜವೇನಹಳ್ಳಿ ಮಠದ ಅಂದಿನ ಪ್ರಭಾವ, ಪ್ರಾಮುಖ್ಯದ ಚಿತ್ರವನ್ನೂ ನೀಡಿ ರಾಜ ಮಾನಿತವೆಂದೂ ತಿಳಿಸುವಂತಿದೆ.

ಇಂದು ಈ ಮಠ ಸ್ವತಂತ್ರ ನಿರ್ವಹಣೆಯಲ್ಲಿದ್ದು, ವಿದ್ಯಾ ಸಂಸ್ಥೆಯನ್ನು ಹೊಂದಿದೆ. ವಸತಿಶಾಲೆ ಹಾಗೂ ಕಲ್ಯಾಣ ಮಂದಿರವನ್ನು ಹೊಂದಿದೆ. ಅನ್ಯಧರ್ಮೀಯರಿಂದ ಆಕ್ರಮಿತವಾಗಿದ್ದ ಜಾಗವನ್ನು ಬಿಡಿಸಿಕೊಳ್ಳಲಾಗಿದೆ. ಮಠದ ಕಟ್ಟಡ ಒಂದು ವಿಶಾಲ ದೇಗುಲದಂತಿದ್ದು ಗರ್ಭಗೃಹದಲ್ಲಿ ಮೂಲ ಕತೃ ಗದ್ದುಗೆ ಇದೆ. ದೊಡ್ಡಶಾಂತವೀರಸ್ವಾಮಿಗಳ ಆರಾಧನೆಯು ಜುಲೈ ತಿಂಗಳಲ್ಲಿ ನಡೆಯುತ್ತದೆ.

ತೇಜೂರು ಮಾಯಿಗೌಡನಹಳ್ಳಿ **ರಾಜಾಪುರದ ಮಠವು** ಹೊಳೆನರಸೀಪುರ ತಾಲೂಕಿನಲ್ಲಿದೆ. ಬಾಳೆಹೊನ್ನೂರು ಶಾಖೆಗೆ ಸೇರಿದ ಶಿಷ್ಯವರ್ಗದ ಮಠ. ಮೊದಲು ಕೊಡಗಿಗೆ ಸೇರಿದ್ದು, ಹೇಮಾವತಿ – ಯಗಚಿ ನದಿಗಳ ಸಂಗಮದ ಬಳಿ ಇದ್ದ ರಾಜಾಪುರದ ಮಠ ಇದಾಗಿತ್ತು. ಹೇಮಾವತಿ ಅಣೆಕಟ್ಟಿನ ಕಾರಣ ಆ ಗ್ರಾಮ ಮುಳುಗಲಾಗಿ ಭಕ್ತರ ಅಪೇಕ್ಷೆ ಮೇರೆಗೆ ಈ ನೆಲೆಗೆ ಗುರುಗಳು ಬಂದು ನಿಂತರು. ಮಠವೂ ನಿರ್ಮಾಣಗೊಂಡಿತು. ಹೊಳೆ ನರಸೀಪುರ ಟೌನ್‌ಮಠ, ಹುಣಸೆಮರದ ಮಠ (ಅನ್ಯಧರ್ಮಿಗಳಿಂದ ಆಕ್ರಮಿತ), ಕಲ್ಮಠ, ನಂಜರಾಪುರದ ಮಠಗಳು ಇಂದು ಪರಾಧೀನವಾಗಿವೆ. ರಾಜಾಪುರ ಮಠದ ಇಂದಿನ ಮುಖ್ಯಸ್ಥರು ಷ.ಬ್ರ. ಚಂದ್ರಶೇಖರ ಸ್ವಾಮಿಗಳು. ಈ ಮಠ ಬಹಳ ಸುಂದರ ಪ್ರಾಕೃತಿಕ ಸನ್ನಿವೇಶದಲ್ಲಿದೆ. ಹಿಂದೆ ಮಠದ ಚೌಡಮ್ಮನ ಪೂಜೆ ಇತ್ತು.

ಚಿಲುಮೆಮಠ: ಚಿಲುಮೆ ಉಕ್ಕುವ ನೆಲೆಯಲ್ಲಿರುವ ಕಾರಣ ಹೆಸರುಗೊಂಡ ಈ ವಿರಕ್ತಮಠ ಮುರುಘಾ ಸಮುಯದ್ದು. ಅರಕಲಗೂಡು ತಾಲೂಕಿಗೆ ಸೇರಿದ್ದು. ಊರಿನಿಂದ ದಕ್ಷಿಣಕ್ಕೆ ಅರೆ ಮೈಲಿ ದೂರದಲ್ಲಿದೆ. ಚಿನ್ಮೂಲಾದ್ರಿಯಿಂದ ಬಂದ ಚಿಲುಮೇಶ್ವರ

ಸ್ವಾಮಿಗಳು ಇಲ್ಲಿ ಶಿಷ್ಯನಿಗೆ ನೀರು ಬಗೆಯಲು ಹೇಳಿದರು. ಬಗೆದಾಗ ನೀರು ಬುಗ್ಗೆಯಾಗಿ ಬಂತು. ಆಗ ಸ್ವಾಮಿಗಳು ಇಲ್ಲಿಯೆ ನಿಂತು ಚಿಲುಮೆಮಠ ಎಂದು ಹೆಸರಿಟ್ಟರು. ಇವರು ಕಟ್ಟಿಸಿದ ಕೆರೆಗೆ 'ಮುತ್ತಾತನ ಕೆರೆ' - ಮುತ್ತತ್ತಿನಕಟ್ಟೆ ಎಂಬ ಹೆಸರಿಸಿದೆ. ಮಠದಲ್ಲಿರುವ ಅವರ ತೋರುಗದ್ದುಗೆಗೆ ಈ ಚಿಲುಮೆ ನೀರಿನಿಂದ ಇಂದಿಗೂ ಅಭಿಷೇಕಾದಿಗಳು ನಡೆಯುತ್ತವೆ. ಸ್ವಾಮಿಗಳು ಇಲ್ಲಿಗೆ ಬಂದ ಕಾಲ ಕ್ರಿ.ಶ. ೧೮೮೫ ಎಂದೆನ್ನಲಾಗಿದೆ. ಶ್ರೀ ನಿ.ಪ್ರ. ಶಿವದೇವ ಸ್ವಾಮಿಗಳು ಈ ಮಠದ ಮುಖ್ಯಸ್ಥರು.

ಮರೂರು ಮಠ: ಅರಕಲಗೂಡಿನ ಸನಿಹದಲ್ಲಿದೆ. ಇದನ್ನು ಸಿದ್ದೇಶ್ವರಸ್ವಾಮಿ ಮಠ ಎಂದೂ ಕರೆಯುವುದುಂಟು. ವಿಜಯನಗರ ದರಸು ಪ್ರೌಢದೇವರಾಯನ ಅಮಾತ್ಯ ಲಕ್ಕಣ್ಣ ದಂಡೇಶನಿಗೆ ನೂರೊಂದು (ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣವು ಪೌಢದೇವರಾಯನಿಗೆ ನೂರೊಂದು ವಿರಕ್ತರ ಸಂಬಂಧ ಕಲ್ಪಿಸಿರುವಂತೆ) ವಿರಕ್ತರ ಪೈಕಿಯು ಸಿದ್ದೇಶ್ವರ ಯತಿಗಳು ಸಂಬಂಧಗೊಂಡವರೆನ್ನಲಾಗಿದೆ. ಇವರದು ಕ್ರಿ.ಶ. ೧೪೨೫-೧೪೪೬ರ ಅವಧಿ. ಮುಸ್ಲಿಮರ ಧಾಳಿಯ ಕಾರಣ ಆನೆಗೊಂದಿಯಿಂದ ಅರಸುಮಕ್ಕಳ ಜೊತೆಯಲ್ಲಿ ಬಂದು ಮರೂರು ಗ್ರಾಮದ ಉತ್ತರ ದಿಕ್ಕಿನಲ್ಲಿ **'ಆನೆಗೊಂದಿಕಾವಲು'** ಎನ್ನುವ (ಇಂದಿಗೂ ರೆವೆನ್ಯೂ ದಾಖಲೆಯಲ್ಲಿ ಈ ಹೆಸರಿದೆ) ನೆಲೆಯಲ್ಲಿ ಸಿದ್ದೇಶ್ವರ ಯತಿಗಳು ತಂಗಿದರಂತೆ. ಬಹುಶಃ ಈ ಘಟನೆ ಕ್ರಿ.ಶ. ೧೪೪೩ರ ಸುಮಾರಿನಲ್ಲಿ ನಡೆದಿರುವಂತಿದೆ. ಲಕ್ಕಣ್ಣದಂಡೇಶ ಆ ಸಮಯದಲ್ಲಿ ಸಿಂಹಳದಲ್ಲಿ ಸೈನಿಕ ಕಾರ್ಯಾಚರಣೆಯಲ್ಲಿದ್ದ. ಪ್ರೌಢದೇವರಾಯನ ಕೊಲೆಯ ಸಂಚು ನಡೆದು, ವಿಜಯನಗರದಲ್ಲಿ ಕೋಲಾಹಲವಿರಲು, ಬಹಮನಿ ಸುಲ್ತಾನ ರಾಯಚೂರು ಪ್ರದೇಶದ ಮೇಲೆ ಧಾಳಿ ಮಾಡಿದ ಸಮಯ. ಲಕ್ಕಣ್ಣ ದಂಡೇಶ ಹಿಂತಿರುಗಿ ಬಂದು ಈ ಧಾಳಿಯನ್ನು ಅಡಗಿಸುವ ಮುನ್ನಿನ ಅವಧಿಯಲ್ಲಿ, ಸಿದ್ದೇಶ್ವರರು ಮರೂರು ನೆಲೆಗೆ ಬಂದಿರಬೇಕು. (ಇದು ವಿಜಯನಗರದ ಪತನಾನಂತರದ ಕತೆ ಅಲ್ಲ) ಇವರು ಬಂದು ಊರಿಗೆ ಪಶ್ಚಿಮದಿಸೆಯಲ್ಲಿ ಮಠದ - ಕೊಪ್ಪಲು ಮರೆಯೂರು > ಮರೂರುವಿನಲ್ಲಿ ಮಠ ಸ್ಥಾಪಿಸಿದರು. ಅದೇ ಮರೂರು ಮಠ. ಅಲ್ಲಿ 'ಅಗ್ಗವಣಿಕಟ್ಟೆ' 'ಗುಡ್ಡನಕಟ್ಟೆ' (ಗುರುವಿನ ಕಟ್ಟೆ, ಗುರುವಿನ ತೋಪು) ಕೂಡ ಇವೆ. ಮೂಲ ಸಿದ್ದೇಶ್ವರಗದ್ದುಗೆ ಕೊತ್ತನಕೆರೆ (ಕೊತ್ತಲಕೆರೆ) ಗ್ರಾಮದಲ್ಲಿದೆ. ಊರಿನವರ ಪ್ರಾರ್ಥನೆ ಪ್ರಕಾರ ಅರಸು ಮಕ್ಕಳ ಗದ್ದುಗೆಗಳು ಮಠದ ನೆರೆಗೆ ಆದುವಾಗಿ, ಮಠದ ಕೊಪ್ಪಲು ಎಂದು ವಾಡಿಕೆ ಆಯಿತು. ಸುತ್ತಮುತ್ತ ದಾನವಾಗಿ ಬಂದಿದ್ದ ಭೂಮಿ ಇಂದು ಪರಾಧೀನವಾಗಿದೆ. ಇಲ್ಲಿ ಮಠದ ಜೀರ್ಣೋದ್ಧಾರ ಕೈಂಕರ್ಯ ಮಾಡಿದ ಶಾಂತವೀರಸ್ವಾಮಿಗಳ ಗದ್ದುಗೆಯೂ ಇದೆ. ವಿಜಯನಗರದ ಸಂಬಂಧದ ಕಾರಣ ಈ ಮಠದಲ್ಲಿ ಚೈತ್ರಶುದ್ಧ ಪೌರ್ಣಮಿಯಂದು **ಹಂಪೆ ಹುಣ್ಣಿಮೆ - ದವನ ಹುಣ್ಣಿಮೆ** ಯು (ಯುಗಾದಿಯಿಂದ ೧೫ ದಿನ ಪೌರ್ಣಮಿ ವಿಶೇಷ ಪೂಜೆ) ವಿಶೇಷವಾಗಿ ನಡೆಯುತ್ತದೆ. ಈ ಮಠದ ಅಧಿಕಾರವೂ ಮುರುಘಾಸಮಯದ ಶ್ರೀ ನಿ.ಪ್ರ. ಶಿವದೇವಸ್ವಾಮಿಗಳ ಅಂಕಿತಕ್ಕಿದೆ. ಪಾಳುಬಿದ್ದಿದ್ದ ಆ ಮಠವನ್ನು ಈ ಸ್ವಾಮಿಗಳ ಹಿಂದಿನವರಾದ ಶಾಂತವೀರಸ್ವಾಮಿಗಳು ಜೀರ್ಣೋದ್ಧಾರ ಮಾಡಿದ ಕಾರಣ ವಿರಕ್ತ ಸಂಪ್ರದಾಯಕ್ಕೆ ಕೂಡಿಕೊಂಡಿತೆನ್ನಲಾಗಿದೆ. ಮುರುಘಾಸಮಯದ ಮಾದಾಪುರ ಮಠ, ದೊಡ್ಡಬೊಮ್ಮನಹಳ್ಳಿ ಮಠ, ಸಿದ್ದೇಶ್ವರ ಗದ್ದುಗೆ ಇರುವ ಚಿಕ್ಕಬೆಮ್ಮತ್ತಿ ಮಠ, ನಲ್ಲೂರು ಜಂಗಮ ಮಠಗಳು ಚಿಲುಮೆ ಮಠದ ಸ್ವಾಮಿಗಳ ಅಧಿಕಾರಕ್ಕೆ ಒಳಪಟ್ಟಿವೆ. ದೊಡ್ಡಮಠವು ಅರಕಲಗೂಡಿನಲ್ಲಿದ್ದು ಮುರುಘಸಂಪ್ರದಾಯಕ್ಕೆ ಕಾಲಾಂತರದಲ್ಲಿ ಸೇರಿಕೊಂಡಿತು. ಮೊದಲಿಗೆ ಈ ಮಠಕ್ಕೆ ಪರ್ವತ ಒಡೆಯರ ಮಠ ಎಂಬ ಹೆಸರಿತ್ತು.

ಕೋಳುಗುಂದ ಕೇದಿಗೆ ಮಠ: ಅರಸೀಕೆರೆ ತಾಲೂಕು ಮಾರ್ಗೇನಹಳ್ಳಿಯಲ್ಲಿದ್ದು ಒಂದು ಕಾಲಕ್ಕೇ ಬಾಳೆಹೊನ್ನೂರು ಶಾಖಾಮಠದ ಗುರುಗಳ ಅಂಕಿತಕ್ಕಿತ್ತೆನ್ನಲಾಗಿದೆ. ಈಗ ಮುರುಘಾ ಸಂಪ್ರದಾಯಕ್ಕೆ ಸೇರಿದೆ. ಕೇದಿಗೆ ಅಡ್ಲು, ಎಂಬ ಕೇದಿಗೆ ವನದಲ್ಲಿ ಮೊದಲಿಗೆ ಈ ಮಠವಿದ್ದ ಕಾರಣ ಕೇದಿಗೆ ಮಠವೆನಿಸಿತು. ಕರಿಬಸವಸ್ವಾಮಿಗಳು ಇಲ್ಲಿನ ಆದ್ಯಗುರುಗಳು. ಅವರಿಂದ ನಾಲ್ಕನೇ ತಲೆಯವರಾದ ರುದ್ರಮುನಿರಾಜ ದೇಶಿಕೇಂದ್ರ ಸ್ವಾಮಿಗಳು ಆ ವನದಿಂದ ಗ್ರಾಮದಲ್ಲಿನ ಇಂದಿನ ನೆಲೆಗೆ ಮಠವನ್ನು ಬದಲಾಯಿಸಿದರು. ಮುರುಳುಲಿಂಗವನ್ನು ಫಾಲ್ಗುಣ ಮಾಸದಲ್ಲಿ ಜಂಗಮರು ಬಾಯಿಗೆ ಬಟ್ಟೆ ಕಟ್ಟಿಕೊಂಡು ಕೇದಿಗೆ ಅಡ್ಲುವಿನಿಂದ ತಂದು ಗದ್ದುಗೆಗಳ ಬಳಿ ಸ್ಥಾಪಿಸಿ ಮಾಹೇಶ್ವರ ಸ್ವಾಮಿ ಜಾತ್ರೆ ನಡೆಸುತ್ತಾರೆ. ಧ್ವಜಾರೋಹಣ, ರುದ್ರಾಭಿಷೇಕ - ಅಷ್ಟೋತ್ತರ ಇತ್ಯಾದಿ ಆಚರಣೆಗಳು ನಡೆಯುತ್ತವೆ. ವೀರಗಾಸೆ, ಚೌಡಿಕೆಮೇಳ, ಶಿವಕಥೆಗಳು, ಈ ಸಮಯದಲ್ಲಿ ನಡೆಯುತ್ತವೆ. ಗ್ರಾಮದೇವತೆಯ ಹಬ್ಬದಲ್ಲಿ, ಬನಶಂಕರಿ ಹಾಗೂ ಹೊನ್ನಮ್ಮ ದೇವರು ಈ ಮಠಕ್ಕೆ ಬಂದು ಮಹಾಮಂಗಳಾರತಿ, ಪ್ರಸಾದವನ್ನು ಪಡೆಯುತ್ತಾರೆ. ರುದ್ರ ಮುನಿರಾಜ ದೇಶಿಕೇಂದ್ರ ಸ್ವಾಮಿಗಳ ಕಾಲದಲ್ಲಿ ತೊಗಟರು ಈ ಮಠದಿಂದ ವೀರಶೈವದೀಕ್ಷೆ (ಲಿಂಗಧಾರಣೆ) ಪಡೆದವರಾದರು. ವಿದ್ಯಾಸಂಸ್ಥೆಗಳಿಗೆ, ಆರೋಗ್ಯಕೇಂದ್ರ, ಆಸ್ಪತ್ರೆ, ಅಂಚೆ ಕಚೇರಿ, ದೂರವಾಣಿ ಕೇಂದ್ರ, ಪಶುಚಿಕಿತ್ಸಾಲಯ ಇತ್ಯಾದಿಗಳಿಗೆ ಮಠದ ವತಿಯಿಂದ ಭೂದಾನ, ಹಣದಾನ ನೀಡಿರುವ ಬಗ್ಗೆ ಮಠದ ಗುರುಗಳಾದ ಶ್ರೀ ನಿ.ಪ್ರ. ಜಯಚಂದ್ರಶೇಖರಸ್ವಾಮಿಗಳು ತಿಳಿಸಿರುತ್ತಾರೆ. ಮದುವೆಗಾಗಿ ಉಚಿತವಾಗಿ ಕಲ್ಯಾಣಭವನ ಬಳಸಿಕೊಳ್ಳಲು ಅವಕಾಶವನ್ನು ಮಠವು ಸಂದರ್ಭಾನುಸಾರ ನೀಡಿದೆ.

ಚಿಲುವನಹಳ್ಳಿ ಗವಿ ಮಠವು: ಕೇದಿಗೆ ಮಠದ ನಿರ್ವಹಣೆಗೆ ಸೇರಿದೆ. ಇಲ್ಲಿ ಕೆಳಗಣ ಗವಿ ಮಠವಿದ್ದು ಸಿದ್ದಮಲ್ಲಪ್ಪನ ಗದ್ದುಗೆ, ಛತ್ರಿ ಬಸವಣ್ಣ, ರುದ್ರಗುಡಿ, ಗಣೇಶ ಷಣ್ಮುಖ ಹಾಗು ಹಾಲು ಸಿದ್ದೇಶ್ವರರ ಗುಡಿಗಳೂ ಇವೆ. ಇಲ್ಲಿನ ಗದ್ದುಗೆಯನ್ನು



ಹಾಲುಸಿದ್ಧೇಶ್ವರರು

ಗುರುಸಿದ್ಧಮಲ್ಲಾರ್ಯಶಿವಯೋಗಿಗಳದೆನ್ನುತ್ತಾರೆ. ಹಾಲು ಸಿದ್ಧೇಶ್ವರರ **ಶಿಲ್ಪ** ಗಮನಾರ್ಹವಾಗಿದೆ. ಜಟೆಯೆ ಪ್ರಭಾವಳಿಯಂತೆ ಸುತ್ತುವರಿದಿದೆ. ಅದರ ಇಳಿಪು ಗುಂಗುರು ಶೈಲಿ ಮೋಹಕವಾಗಿದೆ. ಆಸೀನ ಪೂಜಾಭಂಗಿಯಲ್ಲಿ, ಕರಸ್ಥಲದಲ್ಲಿ ಇಷ್ಟ ಲಿಂಗ ಹಿಡಿದು, ಬಲಗೈಯಲ್ಲಿ ರುದ್ರಾಕ್ಷಿ ಜಪಮಾಲೆ ಹಿಡಿದ ಉಬ್ಬು ಶಿಲ್ಪವಿದಾಗಿದೆ. ಪೀಠದ ಕೆಳಗೆ ನಾಗಹೆಡೆಗಳ ಶಿಲ್ಪವಿದ್ದು ಹುತ್ತದ ಸಂಕೇತವೇ ಎನಿಸಿ ಎಡೆಯೂರು ಯತಿಗಳ ನೆನಪು ತರುತ್ತದೆ. ಗೋವಿನ ಶಿಲ್ಪವೂ ಇಲ್ಲುಂಟು. ಮಗು ಸಹಿತವಾಗಿ ದಂಪತಿ ಶಿಲ್ಪವೂ (ಬಹುಶಃ ಅನುಗ್ರಹೀತ) ಪೀಠದ ಕೆಳಭಾಗದಲ್ಲಿದೆ.

ಇಲ್ಲಿನ ಷಣ್ಮುಖನಲ್ಲಿ ಮುಮ್ಮೊಗದ ಶಿಲ್ಪ ಮಾತ್ರ ಕಾಣುತ್ತದೆ. ಅವನು ಮಯೂರದ ಮೇಲೆ ಆಸೀನನಿದ್ದಾನೆ. ವೀರಭದ್ರ(ರುದ್ರ)ನ ಶಿಲ್ಪದ ರುಂಡಮಾಲೆ ವಜ್ರಹಾರದಂತಿದ್ದು ಒಂದೇ ರುಂಡವನ್ನು ಹೊಂದಿದೆ.

ಚೆಲುವನಹಳ್ಳಿ ಮೇಲಣ ಗವಿಮಠದ ಬಂಡೆಗಲ್ಲುಗಳ ಮೇಲೆ ಪ್ರಾಗೈತಿಹಾಸಿಕ ಕಾಲದ ಬಂಡೆಗಲ್ ಚಿತ್ರಗಳಿವೆ. ಆದಿಗುರು ಬಸವಲಿಂಗಸ್ವಾಮಿಗಳ ಗದ್ದುಗೆ ಇಲ್ಲಿದ್ದು, ಪುತ್ರವರ್ಗದ ಶ್ರೀಶೈಲ ಶಾಖಾ ಮಠವಿದಾಗಿದೆ. ಶ್ರಾವಣದಲ್ಲಿ ಗದ್ದುಗೆಯ ಆರಾಧನೆ, ದಾಸೋಹ, ನವರಾತ್ರಿಯಲ್ಲಿ ದಿನವೂ ನಂದಾದೀಪ, ದೇವೀಪಾರಾಯಣ, ಕಾರ್ತೀಕ ದೀಪೋತ್ಸವ ಇಲ್ಲುಂಟು. ಈ ಮಠದ ಎರಡನೆಯ ಗುರುಗಳಾದ ಜಟಾಧರ ಸ್ವಾಮಿಗಳ ಆರಾಧನೆ ಚೈತ್ರ ಶುದ್ಧ ಹುಣ್ಣಿಮೆಯಂದು ನಡೆಯುತ್ತದೆ. ಬಾಳೆಹಳ್ಳಿ, ಶ್ರೀ ಶೈಲದ ಸ್ವಾಮಿಗಳು, ಮೇಟಿಕುರ್ಕೆ, ತಂಣೇರುಹಳ್ಳ ಮಠದ ಸ್ವಾಮಿಗಳು ಇಲ್ಲಿನ ಪೂಜಾದರ್ಶನಕ್ಕೆ ದಯಮಾಡಿಸುತ್ತಾರೆ. ಅಂತಾಗಿ ಗುರುವಿರಕ್ತ ಸಮನ್ವಯ ಸಂಪ್ರದಾಯ ಇಲ್ಲಿ ಕಾಣಬರುತ್ತದೆ. ಈಗ ಜಂಗಮ ಚನ್ನಬಸವಯ್ಯನವರು ಈ ಮಠದ ಉಸ್ತುವಾರಿ ನೋಡುತ್ತಿದ್ದಾರೆ.

ಮೇಲಣಗವಿ ಮಠದ ದಕ್ಷಿಣಬದಿಯ ಕೆಳಭಾಗದಲ್ಲಿ **ಶರಣಮ್ಮನ ಮಂಟಪ**ವಿದೆ. ಈಕೆ ಸಿದ್ಧಮಲ್ಲಾರ್ಯರಲ್ಲಿ ಬಂದು ಶರಣತ್ವ ನೀಡಿ ಎಂದಳಂತೆ. ಸಿದ್ಧಮಲ್ಲಾರ್ಯರು ನಿನಗೆ ಈಗಲೇ ಅದು ಸಲ್ಲುವುದು ಕಷ್ಟ, ಬೇಡ ಎಂದರಂತೆ. ಆಕೆ ಒಪ್ಪಲಿಲ್ಲ. ಆಗ ಗುರುಗಳು, ನೀನು ನಿರ್ವಾಣದಲ್ಲಿ ಹೋಗಿ ಭಿಕ್ಷೆ ತೆಗೆದುಕೊಂಡು ಬಾ ಎಂದರು. ಆಕೆ ಚೆಲುವನಹಳ್ಳಿಗೆ ಹೋಗಿ ಗುರುಗಳು ಹೇಳಿದಂತೆ ಭಿಕ್ಷೆ ಬೇಡಿ ತಂದಳು. ಆಗ ಆಕೆಗೆ 'ಶರಣತ್ವ' ನೀಡಿ, ಭಕ್ತರ ಸೇವೆ ಮಾಡಿಕೊಂಡಿರು, ಎಂದು ಹೇಳಿ, ಆಶ್ರಮ-ಮಂಟಪಕಟ್ಟಿ ಕಳುಹಿಸಿದರು. ಈ ಸ್ವಾಮಿಗಳು ಉಂಡಿಗನಾಳು ದೇಸಾಣೆ ಗುಡ್ಡದಲ್ಲಿ **ದೇಸಾಣೆಮಠ** ಕಟ್ಟಿ ಯೋಗಾಶ್ರಮವನ್ನೂ ಹೊಂದಿದ್ದರು. ಬಹುಶಃ ಇವರ ಕಾಲ ೧೯ನೇ ಶತಮಾನವೆಂದು ಮಠದ ಶಿಲ್ಪಗಳನ್ನು ಗಮನಿಸುವಲ್ಲಿ ತೋರುತ್ತದೆ.



ಮೂರು ಕಳಶದ ಮಠ, ತಂಣೇರು ಹಳ್ಳದ ಮಠ

ಮೂರು ಕಳಶದ ಮಠವು ಅರಸೀಕೆರೆ ಎಳೆನಾಡು ಸಂಸ್ಥಾನ ಮಠ ಪರಂಪರೆಯದು. ಪುತ್ರವರ್ಗದ ಸ್ವತಂತ್ರ ಮಠವಾಗಿದ್ದು ಈಗ ಶಿಷ್ಯವರ್ಗಕ್ಕೆ ಸೇರಿದೆ. ಚರಪಟ್ಟಾಧ್ಯಕ್ಷತೆ ಹೊಂದಿದೆ. (ಹಾಸನ ಜಿಲ್ಲೆಯ ಮಠಪರಂಪರೆಯಲ್ಲಿ ಅರ್ಧಭಾಗ ಶಿಷ್ಯವರ್ಗದ್ದೆ ಆಗಿದೆ ಎನ್ನುವುದಿದೆ). ಈ ಮಠದ ಸ್ಥಾಪಕರು ಬೂದಿಗುರುಸಿದ್ಧ ಸ್ವಾಮಿಗಳು. ಇಲ್ಲಿ ಚನ್ನಬಸವೇಶ್ವರ, ಸಿದ್ಧರಾಮೇಶ್ವರ ಹಾಗು ಅಲ್ಲಮಪ್ರಭುಗಳ ಹೆಸರಲ್ಲಿ ಗದ್ದುಗಳಿವೆ. ಬಹುಶಃ ಆ ಕಾರಣ ೩ ಕಳಶವಿರಬೇಕು. ಮೇಲಣಮಠ, ಕೆಳಗಣಮಠ ಎಂಬ ವಿಭಾಗಗಳಿದ್ದು, ಪಟ್ಟದ ಹಾಗು ಚರದ ಸಹಯೋಗ ಇಲ್ಲಿ ಕಾಣಬರುತ್ತದೆ. ಅರಕಲಗೂಡು ತಾಲೂಕು ಅಜ್ಜೂರು ಗ್ರಾಮದ

(ವೀರಶೈವಾಚಾರ ತಪ್ಪಿಹೋದ) ದಾಸ ಒಕ್ಕಲಿಗರು ಪೂರ್ವದಿಂದಲೂ ಈ ಮಠಕ್ಕೆ ನಡೆದುಕೊಂಡು ಬಂದಿದ್ದಾರೆ. 'ಏಳುನಾಡು'ಗಳ ಸಂಬಂಧ ಹೊಂದಿದ್ದು, ಏಳುನಾಡು ಶಬ್ದ ಅಪಭ್ರಂಶವಾಗಿ ಎಳನಾಡು ಎಂದು ಮಠಕ್ಕೆ ಅಂಟಿಕೊಂಡಿತೆನ್ನಲಾಗಿದೆ. ವಾಡಿಕೆಯಲ್ಲಿ ಚರಂತಿಮಠ, ಕಂತೆ ಒಡೆಯರ ಮಠ, ದೊಡ್ಡ ಮಠ ಎಂಬ ಹೆಸರುಗಳು ಈ ಮಠಕ್ಕಿದ್ದುವು. ನೊಳಂಬ ಅರಸು ವಂಶದವರ ಶಿಷ್ಯತ್ವ ಈ ಮಠ ಪರಂಪರೆಗೆ ಬಂದಿದೆ ಎನ್ನಲಾಗಿದೆ. ಈ ಮಠದಲ್ಲಿರುವ ಶಾಸನ ಕಣ್ಣೋದಿನಲ್ಲಿ ಕಾಣಬರುವುದಿಂತಿದೆ:

೧೬೧೮। ಶ್ರೀ ಮದ್ರಂಭಾಪುರಿ ವೀರಶ್ಸಿಂಹ್ಸಾ। ಸನ ಶ್ರೀ ಮದ್ಸುರಶೀಕೆರೆ ಶ್ರೀ ಮಠದ ಚರಪಟ್ಟಾ।ಧ್ಯಕ್ಷಾ: ಬಸವಲ್ಲಿಂಗ ದೇಶಿಕೇಂದ್ರ ಸ್ವಾಮಿಗ। ಳವರಿಂದ ಶಿಥಿಲವಾಗಿದ್ದ ಯಿೂ ಮಠವಂನ್ನ। ಹೊಸದಾಗಿ ತಯಾರ್ಮಾಡಿಸಲ್ಪಟ್ಟಿದೆ ಹೇವಿಳಂಬ ನಾಮ ಸಂ।

ಇದರಿಂದ ೧೭ನೇ ಶತಮಾನದಲ್ಲಿ ಈ ಮಠವನ್ನು ಜೀರ್ಣೋದ್ಧಾರಗೊಳಿಸಿದ ಸಂಗತಿ ತಿಳಿಯುತ್ತದೆ. ಇಂದು ಈ ಮಠದ ವತಿಯಿಂದ ೯ ವಿದ್ಯಾಸಂಸ್ಥೆಗಳು ನಡೆಯುತ್ತಿವೆ. ವಸತಿ ಶಾಲೆ, ಸಂಸ್ಕೃತ ಪಾಠಶಾಲೆ, ಕಲ್ಯಾಣಮಂಟಪಗಳೂ ನಿರ್ಮಾಣಗೊಂಡಿವೆ. ಶ್ರೀ ಷ.ಬ್ರ ಜ್ಞಾನಪ್ರಭುಸಿದ್ಧರಾಮ ದೇಶಿಕೇಂದ್ರ ಮಹಾಸ್ವಾಮಿಗಳು ಈ ಮಠದ ಮುಖ್ಯರಾಗಿದ್ದಾರೆ.

ಹಾರ್ನಳ್ಳಿ ಕೋಡಿಮಠಕ್ಕೆ ಹೆಸರು ಬರಲು ಕಾರಣ ಹಾರ್ನಳ್ಳಿ ಕೆರೆ ಹಾಗೂ ಅದಕ್ಕಿದ್ದ ೫೦೦ ಕೋಡಿಗಳು ಕಾರಣವಂತೆ. ಈ ಕೋಡಿಯ ನೀರಿನಲ್ಲಿ ಮಿಂದು ಮಠದ ಗದ್ದುಗೆ ಬಳಿಬಂದು ಪ್ರಾರ್ಥಿಸಿದಾಗ ರಾಜನೊಬ್ಬನಿಗೆ ಚರ್ಮದ ಬಿಳುಪು ರೋಗ ವಾಸಿ ಆಯಿತಂತೆ. ಹೀಗೆ ಐತಿಹ್ಯ ಹಾಗು ಅಗಸ್ತ್ಯನೂ ಈ ಕೆರೆಕಟ್ಟೆ ಚರ್ಮವ್ಯಾಧಿ ತವಿಸಿಕೊಂಡ ಸಂಬಂಧವನ್ನು ಇಲ್ಲಿನ ಬೆಟ್ಟದ ನೀರಿಗೆ ಹೇಳುವಕಾರಣ ಪೌರಾಣಿಕ ಹಿನ್ನೆಲೆಯೂ ಈ ಮಠಕ್ಕೆ ಅಂಟಿದೆ. ಪ್ರಾಚೀನ ಪ್ರಸಿದ್ಧವಾದ ಈ ಸಂಸ್ಥಾನಮಠವನ್ನು ಅನಾದಿ ನಿರಂಜನ ಜಗದ್ಗುರು ಜಂಗಮ ಪೀಠವೆಂದು ಹೇಳುವ ಸಂಪ್ರದಾಯವಿದೆ. ಬಹುಶಃ ಕಾಳಾಮುಖಶೈವರು ವೀರಶೈವ ಸಂಪ್ರದಾಯಕ್ಕೆ ಈ ಪರಿಸರದಲ್ಲಿ ಬರಲು ಈ ಪೀಠವೂ ಪ್ರಭಾವ ಬೀರಿರುವಂತಿದೆ. ಇದು ಬಸವಪೂರ್ವಮಠ ಎನ್ನುವ ಅಭಿಪ್ರಾಯವೂ ಇದೆ. ಆದಿಗುರು ನೀಲಮ್ಮಒಡೆಯರ (ನೀಲಮ್ಮಜ್ಜ) ನಿರ್ವಿಕಲ್ಪ ಶಿವಯೋಗ ಸಮಾಧಿ ಇಲ್ಲಿದೆ. ಅಂತಾಗಿ ಬಸವಣ್ಣ ಮುಂದಿರದೆ, ಗುರುಗಳನ್ನು ಹಿಂಬಾಲಿಸುವ ರೂಢಿಯ ಶಿಲ್ಪವಿಲ್ಲಿದೆ.

ಉತ್ತರ ಕರ್ನಾಟಕದ ಮಹದೇಶ್ವರಗಿರಿಯಿಂದ ಬಂದ ಗುರುಗಳು ನೀಲಕಂಠಸ್ವಾಮಿಗಳು. ಹಾರ್ನಹಳ್ಳಿಯ ಬೇಡಕುಲದ ಪಾಳೇಗಾರ ಇವರಲ್ಲಿ ಸಂತಾನ ಕೃಪೆಗಾಗಿ ಬೇಡಿದ. ಹೆಣ್ಣು ಮಗು ಜನಿಸಿತು. ನೀಲಮ್ಮ ಎಂದು ಹೆಸರಿಟ್ಟ. ೧೨ ವರ್ಷದವಳಾದ ಸಮಯ. ಗುರುಗಳು ಜೀವಂತ ಸಮಾಧಿಗೆ ಹೋಗುವಲ್ಲಿ ಅವರ ಸೇವೆಗಿದ್ದ ನೀಲಮ್ಮ ತಾನೂ ಅವರೊಡನೆ ಸಮಾಧಿ ಆಗಬೇಕೆಂದಳು. ಆಗ ನಿಂಬೆಭಾಗ, ತೆಂಗುಭಾಗ (ಹೋಳುಗಳು) ಮಾಡಿಟ್ಟು, ಆ ನೀರ ಮೇಲೆ ದೀಪವಿಟ್ಟರಂತೆ. 'ಎಂದು ಇವು ಒಣಗಿ ದೀಪ ಆರುವುದೋ ಆಗ ಗದ್ದುಗೆ ಮಾಡಿ' ಎಂದು ಭಕ್ತರಿಗೆ ನುಡಿದರಂತೆ. ಹಾಗೆ ದೀಪ ಆರಿದಾಗ ನೋಡುವಲ್ಲಿ ಕನ್ಯೆ ನೀಲಮ್ಮ ಇದ್ದ ಜಾಗದಲ್ಲಿ ಹೂರಾಶಿ ಇತ್ತಂತೆ. ಅಂದಿನಿಂದ ಈ ಗದ್ದುಗೆಗೆ ನೀಲಮ್ಮಜ್ಜಯ್ಯ (ನೀಲಮ್ಮ ಒಡೆಯರು) ಗದ್ದುಗೆ ಎಂಬ ಹೆಸರುದಿಸಿತು.

ಫಾಲ್ಗುಣ ಬಹುಳದಲ್ಲಿ ನಡೆವ ಈ ಮಠದ ಜಂಗಮ - ಮಾಹೇಶ್ವರ ಜಾತ್ರೆ ಬಹಳ ಪ್ರಸಿದ್ಧ. ೧ನೇ ದಿನ ನಡೆಮುಡಿ, ೨ ನೇ ದಿನ ಜಾತ್ರೆ, ೩ನೇ ದಿನ ರಾತ್ರಿ ಹಣ್ಣು ಹಂಪಲು ತುಪ್ಪ ಬೆಲ್ಲ ಸಕ್ಕರೆಯ ದಾಸೋಹ, ೪ನೇ ದಿನ ಒಳಪಲ್ಲಕ್ಕಿ ಉತ್ಸವ. ಅಂದು ಮುತ್ತೈದೆ ಸೇವೆ. ಮಂಟಪದಲ್ಲಿ ಹರಿಶಿನ ಕುಂಕುಮ ಸೀರೆ ಕುಪ್ಪಸವಿಟ್ಟು ಗುರುಗಳು ಆಶೀರ್ವದಿಸಿ ಮುತ್ತೈದೆಯರಿಗೆ ಉಡಿ ತುಂಬಿಸುತ್ತಾರೆ. ಈ ಜಾತ್ರೆಯಲ್ಲಿ ೨೫ ಮುತ್ತೈದೆಯರು ಒಟ್ಟಾಗಿ ಹೊರಟು ನಂತರ ಬೇರೆ ಬೇರೆಯಾಗಿ ಜಂಗಮ ಪೂಜೆ ನಡೆಸುತ್ತಾರೆ. ಇಲ್ಲಿ ಈ ಜಾತ್ರೆಯ ಸಮಯದಲ್ಲಿ ಮೊದಲು ಹೆಂಗಸರಿಗೆ ಪ್ರಸಾದ ವಿನಿಯೋಗ ನಂತರ ಉಳಿದವರಿಗೆ.



ಗ್ರಾಮದೇವತೆಗಳು

ಊರಿನ ಗ್ರಾಮದೇವತೆ ಕೋಡಮ್ಮನದೇ, ಮಠದ ಪಶ್ಚಿಮ ಮುಂಬದಿಯ ದೇಗುಲ (ಉಯ್ಯಾಲೆ ಸುಗ್ಗಿಕಂಬ, ವೀರಗಲ್ಲು, ಹಾಗೂ ಪ್ರಾಚೀನ ಶಿಲ್ಪಗಳಿರುವ ದೇಗುಲ). ಜಾತ್ರೆಯಲ್ಲಿ ಅಲಂಕೃತ ಕೋಡಮ್ಮ, ಚಲುವರಾಯ, ಧೂ(ಭೂ)ತರಾಯ, ಹಾಗೂ ವೀರಭದ್ರರ ಮೊಗಗಳನ್ನು ಗದ್ದುಗೆ ಬಳಿ ತಂದು ಪ್ರಾರ್ಥಿಸಿ ಮಂಗಳಾರತಿ, ಆಶೀರ್ವಾದ, ಭಸ್ಮದಗಟ್ಟಿ. ರುದ್ರಾಕ್ಷಿ ಪಡೆದು ಗಂಗಾಮತಸ್ತ ಪೂಜಾರಿಗಳು ಸಾಗುತ್ತಾರೆ. ನಂತರ ಉಯ್ಯಾಲೆ ಕಂಬದಲ್ಲಿ ಉಯ್ಯಾಲೆ ಆಡಿಸುತ್ತಾರೆ.

ಕೊಡಗಿನ ದೊಡ್ಡ ವೀರರಾಜೇಂದ್ರ ಒಡೆಯ ಈ ಮಠದ ಶಿಷ್ಯ. ತನ್ನ ಈ ಗುರುಗಳ ಆಸ್ತಿ ಮುಟ್ಟದೆ ಗೌರವ ಸಲ್ಲಿಸಲು ಹೈದರನಿಗೆ ತಿಳಿಸಿದನಂತೆ. ಅದರಂತೆ 'ವಿ' ಅಕ್ಷರದ ಸುತ್ತ ಉರ್ದು ಲಿಪಿಯಲ್ಲಿ ದೊಡ್ಡ ವೀರರಾಜೇಂದ್ರ ಒಡೆಯನ ಹೆಸರು ಬರೆದ ಕಿಂಕಾಪಿನ ಟೋಪಿ ಕೊಟ್ಟ ಎನ್ನಲಾಗಿದೆ. ಆದರೆ ಹೈದರ್



ನೀಲಮ್ಮಜ್ಜಯ್ಯ ಗದ್ದುಗೆ ಹಾಗೂ ರಾಜದಾನಿತ ಟೋಪಿ, ಚೌರಿ, ಪಾದುಕೆಗಳು

ವೀರರಾಜೇಂದ್ರ, ಒಡೆಯನ ಸಂಪರ್ಕಕ್ಕೆ ಬಂದಾಗ, ಒಡೆಯನಿಗೆ ಹದಿಹರಯ. ಹಾಗು ಅವನ ಮಹಾರಾಜತ್ವ ಸ್ಥಾಪಿತವಾಗಿರಲಿಲ್ಲ. ೧೭೮೨ರಲ್ಲಿ ಹೈದರನಿಂದ ಗೊರೂರಿನಲ್ಲಿ ಸೆರೆಗಿಡಲ್ಪಟ್ಟ. ಅಲ್ಲದೆ 'ವಿ' ಅಕ್ಷರದ ಸುತ್ತ ಮಹಾರಾಜ ವೀರರಾಜೇಂದ್ರ ಒಡೆಯರ್ ಎಂಬ ಉರ್ದು ಲಿಪಿಯ ಅಕ್ಷರಗಳು ರಾಜ ಮುದ್ರಾಸಂಕೇತವಾಗಿ ಟೋಪಿಯ ಮೇಲೆ ಹೊಂದಿಸಲ್ಪಟ್ಟಿವೆ; ಜೊತೆಗೆ 'ವಿ' ರಾಜ ಮುದ್ರೆಯುಳ್ಳ ಚೌರಿಯನ್ನು ನೀಡಲಾಗಿದೆ. ಅಂತಾಗಿ ಕ್ರಿ.ಶ. ೧೭೯೬ ರಲ್ಲಿ ರಾಜ ಪಟ್ಟಾಭಿಷೇಕವು ನಾಲ್ನಾಡು ಅರಮನೆಯಲ್ಲಿ ಒಡೆಯನಿಗೆ ನಡೆದ ಮೇಲೆ ಈ ಗೌರವ ಸಲ್ಲಿಸಿರಬೇಕೆನ್ನಿಸುತ್ತದೆ. ಇನ್ನು ಹಾರ್ನಳ್ಳಿಯ ಮುಸ್ಲಿಮರು ಗುರುವಿನ ಸಂಕೇತವಿಟ್ಟು ವೇಷಮರೆಸಿ ಮೆರವಣಿಗೆ ಮಾಡಲು ಅಪಚಾರ ಘಟಿಸಿತಂತೆ. ಹೈದರನಿಗೆ ಸುದ್ದಿ ಹೋಗಿ ಗುರುಗಳನ್ನು ಪರೀಕ್ಷಿಸಲು ತಟ್ಟೆಯಲ್ಲಿ ಮಾಂಸ ಮುಚ್ಚಿ ಕಳುಹಿಸಿದನಂತೆ. ಗುರುಗಳು ಮುಸುಕು ಮುಟ್ಟಿ ಸರಿಸಿದಾಗ ಅದು ಹೂರಾಶಿ ಆಗಿತ್ತಂತೆ. ಆಗ ಹೈದರ ಈ ಮಹಿಮೆ ಕಂಡು ದಂತದ ಪಾದುಕೆಗಳ ಮೇಲೆ ''ವೀರ ಹೈದರನ ಖುರಕ್' (ಕಾಣಿಕೆ) ಎಂದು ಉರ್ದು ಲಿಪಿಲಿಖಿತ ಮಾಡಿ ರಾಜಗೌರವ ಸಲ್ಲಿಸಿದ. ಈ ಎಲ್ಲ ರಾಜಗೌರವದ ವಸ್ತುಗಳು ಇಂದಿಗೂ ಮಠದಲ್ಲಿವೆ. ಹೊಸದಾಗಿ ಪಟ್ಟಾಧಿಕಾರವಾಗುವ ಸಂದರ್ಭದಲ್ಲಿ ಮೂರು ದಿನ ಗವಿಯೊಳಗಿದ್ದು ಬಂದು ಅರ್ಹತೆ ಪಡೆದ ಮೇಲೆ ನೇಮಕವಾದ ಗುರುಗಳು ಈ ರಾಜಗೌರವದ ಚಿಹ್ನೆಗಳನ್ನು ಧರಿಸುತ್ತಾರೆ. ಅಂದು ಮುಸ್ಲಿಮರು ನಮಾಜು ಮಾಡಿ 'ದಿನ್ ಹರಹರ ಮಹಾದೇವ' ಎನ್ನುತ್ತಾರಂತೆ. ನೀಲಕಂಠಸ್ವಾಮಿಗಳ ಜೊತೆಗೆ ಉತ್ತರ ಕರ್ನಾಟಕದಿಂದ ಮುಸ್ಲಿಮ್ ಫಕೀರರೂ ಸಹಯೋಗವಾಗಿ ಬಂದ ಕಾರಣವೂ ಈ ಮಠ ಹಿಂದೂ ಮುಸ್ಲಿಂ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದೆ ಎನ್ನಲಾಗಿದೆ. ಕೊಡಗಿನ ಮೊದಲ ನಿರಂಜನ ಪೀಠವೆನ್ನಲಾದ ದೊಡ್ಡ ಕೊಡ್ಲಿ ಕಲ್ಲುಮಠವು ಹಾರ್ನಳ್ಳಿ ಕೋಡಿಮಠದೊಡನೆ ಸಂಬಂಧಗೊಂಡಿತ್ತೆನಿಸುತ್ತದೆ. ಅಂತಾಗಿ ೨ನೇ ಲಿಂಗಾರಜ ಒಡೆಯನ ಕಾಲದಲ್ಲೂ ಈ ಮಠಗಳ ಸಂಬಂಧಗಳು ಮತ್ತೂ ಗಟ್ಟಿಗೊಂಡಂತಹ ಘಟನೆಗಳು ಕಾಣಬರುತ್ತವೆ.

ನೀಲಮ್ಮಜ್ಜಯ್ಯನ ಗದ್ದುಗೆ ಪೂರ್ವಮುಖಿಯಾಗಿದ್ದರೆ, ಕ್ರಿ.ಶ. ೧೮೮೧ರ ಸುಮಾರಿನಲ್ಲಿ ಈ ಮಠದ ಗುರುಗಳಾಗಿದ್ದ ಶಿವಲಿಂಗಜ್ಜ ಅವರ ಗದ್ದುಗೆ ಉತ್ತರ ಮುಖಿ ಆಗಿದೆ. ಮಠದಲ್ಲಿನ ದಾಖಲೆಯೊಂದರ ರೀತ್ಯಾ ಶಿವಲಿಂಗಜ್ಜ ಅವರು ಬರೆದಿರುವಂತೆ, **'ಮೈಸೂರು ಶೀಮೆಯ ದೊರೆಗಳವರಾದ ಪೂರ್ವದ ಚಾಮರಾಜ ವಡೆಯರವರು ಮತ್ತು ನವಾಬರವರು - ಇತರ ದೇಶವಾದ--ವಿಜಯಪುರದ - ಪಾಲೂಜ ಸಾಹೇಬರವರ್ರು -- ಡಿಲ್ಲಿ - - ಪಾಲೂಜ ಸಾಹೇಬರವರ್ರು - ಸಹಾ ಇ(ಈ) ಮಠದ ಅಭಿಮಾನಿಗಳಾಗಿ - ನಿರೂಪಗಳು ಕೋಟಿರುವುದಲ್ಲದೆ.'** ಎಂಬ ಸಾಲುಗಳು ಇಂದಿಗೂ ಇರುವ ಈ ಮಠದ ಖ್ಯಾತಿಗೆ ಪ್ರಾಚೀನ ಸಾಕ್ಷಿಯನ್ನು ಹೇಳುವಂತಿವೆ. ನೂರಹತ್ತು ವರ್ಷಗಳ ಕಾಲ ಬದುಕಿದ್ದ ಈ ಸ್ವಾಮಿಗಳ ಸಮನ್ವಯ ಸಂಬಂಧವು ಕ್ರಿ.ಶ ೧೮೨೬ರಲ್ಲಿ ರಂಭಾಪುರಿ ಪಟ್ಟಾಧ್ಯಕ್ಷರಾಗಿದ್ದ ಗುರು ಬಸವರಾಜೇಂದ್ರ ಸ್ವಾಮಿಯವರೊಡನೆ ಇದ್ದ ಬಗ್ಗೆ ಈ ಮಠದ ದಾಖಲೆಯೊಂದರಲ್ಲಿ ಕಂಡುಬರುತ್ತದೆ. ಈ ಶಿವಲಿಂಗಸ್ವಾಮಿಗಳು ಒಂದು ಶತಮಾನದ ಮುಂಚೆಯೆ ತಮ್ಮ ತಪೋನುಭಾವ - ಜ್ಞಾನದಿಂದ ಓಲೆಗರಿಯಲ್ಲಿ ಭವಿಷ್ಯವಾಚಿ ಕೃತಿ (ನಾಡಿ ಶಾಸ್ತ್ರ ಅಲ್ಲ)ಯನ್ನೂ ಬರೆದ ಬಗ್ಗೆ ಹಾಲಿ ಮಠಾಧ್ಯಕ್ಷರಾದ ಶ್ರೀ ಮ.ನಿ.ಪ್ರ. ಶಿವಾನಂದಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು ತಿಳಿಸುತ್ತಾರೆ. ಈ ಪೀಠಕ್ಕೆ ಹಾರನಹಳ್ಳಿಯಿಂದ ಬೆಳಗಾವಿಯವರೆಗೂ ೧೦೬ ವಿರಕ್ತ ಶಾಖಾ ಮಠಗಳಿವೆ ಎನ್ನಲಾಗಿದೆ. ಕುಮಾರ ಸಮಯದ ಸಂಬಂಧವೂ ಇದೆ ಎನ್ನಲಾಗಿದೆ. ಈ ಪೀಠದ ಆಶ್ರಯದಲ್ಲಿ ವಿದ್ಯಾಸಂಸ್ಥೆಗಳ ನಿರ್ವಹಣೆ, ಅಸ್ಪೃಶ್ಯತಾ ನಿವಾರಣೆ, ಅಂತರ್ ಜಾತಿ ವಿವಾಹ, ದಾಸೋಹಾದಿಗಳು ನಡೆಯುತ್ತಿವೆ.

ಬಾಣಾವರದ ಕೋಡಿಮಠ(ಶಾಖಾಮಠ)ದಲ್ಲಿ ಕರಿಬಸವೇಶ್ವರಸ್ವಾಮಿಗಳ ಕ್ರಿಯಾಗದ್ದುಗೆ ಇದೆ. ಜಯಚಾಮ ರಾಜೇಂದ್ರ ಒಡೆಯರವರು ಈ ಮಠಕ್ಕೆ ತೆಂಗಿನ ತೋಟ ದಾನ ನೀಡಿದ್ದಾರೆ. ಕರಿಬಸವೇಶರ ಮಾಹೇಶ್ವರ ಜಾತ್ರೆ ಮುಗಿದ ೧೫ ದಿನದ ಮೇಲೆ ಇಲ್ಲಿ ರುದ್ರದೇವರ ಕೆಂಡೋತ್ಸವ ನಡೆಯುತ್ತದೆ. ವೀರಗಾಸೆ ಸಹ ಉಂಟು. ಈ ಮಠದಲ್ಲಿನ ಶಿಲ್ಪಗಳಲ್ಲಿ, ನಾಗ, ಕೂರ್ಮ, ಹಂಸ, ಹೊಯ್ಸಳ ಹುಲಿ ಹಾಗೂ ಮಿಥುನ ಶಿಲ್ಪಗಳಿವೆ. ಕಾಳಾಮುಖ ಶೈವಯತಿ(ಮಾಹೇಶ್ವರ?) ಯಂತೆ ಕಾಣುವ ಶಿಲ್ಪವೂ ಇದೆ. ಬಿಲ್ಲುಬಾಣ ಹಿಡಿದ ವೀರ, ಸ್ಥಾನಕ ನಂದಿ ಹಾಗೂ ಕುದುರೆಯ ಮೇಲೆ ಶಿವಲಿಂಗವಿರುವ ಶಿಲ್ಪಗಳೂ ಇವೆ. ಹಸ್ತಿಸೋಪಾನವನ್ನೂ ಹೊಂದಿದ ಈ ಮಠದ ಸುತ್ತ ಗುರುಗಳ ೬ ಗದ್ದುಗೆಗಳಿವೆ. ಶಿಲ್ಪಕ್ಕೆ ಹೆಸರಾಗಿರುವ ಈ ಮಠವು ಈ ಸುತ್ತಲಿನ ಕಾಳಾಮುಖಶೈವ, ಮಾಹೇಶ್ವರ - ವೀರಶೈವದ ವಿಕಾಸ ಪರಂಪರೆಯನ್ನು ಶಿಲ್ಪ ಹಾಗೂ ವಾಸ್ತುವಿನ ಮೂಲಕ ಸೂಚಿಸುವಂತಿದೆ.

ಪುಷ್ಪಗಿರಿ ಸಂಸ್ಥಾನ ಮಲ್ಲಾಪುರ ಮಠದಲ್ಲಿನ ತಾಮ್ರಶಾಸನದಲ್ಲಿ[೬೦] 'ಸ್ವಯಂಭು ಚಕ್ರವರ್ತಿ ಭ್ರಮರಾಂಬಿಕಾ ವಲ್ಲಭ ಶ್ರೀ ಮನ್ ಮಹಾಮಲ್ಲಿಕಾರ್ಜುನ ಮಹಾಲಿಂಗದೇವುನಿಕಿ ಅಂಗರಂಗ ವೈಭವಾಲು ಅಮೃತ ಪಳ್ಳೆಕು' ಎಂಬ ದಾನದ ಸಂಗತಿ (ಕ್ರಿ.ಶ. ೧೮೨೧) ಇದೆ. ಈ ಮಠದ ಗುರುಗಳ ಹೆಸರುಗಳಲ್ಲಿ 'ಮಲ್ಲಿಕಾರ್ಜುನ' ಎಂಬ ಶಬ್ದ ಅವಿಭಾಜ್ಯ ಅಂಗವಾಗಿ ಸೇರಿದೆ. ಅಂದರೆ ಈ ಮಠ ಮೊದಲಿಗೆ ಶ್ರೀಶೈಲ (ಪುತ್ರವರ್ಗ) ಶಾಖೆಯಾಗಿತ್ತೆಂಬುದರ ಕುರುಹು ಅದು ಆಗಿದೆ. ಕಾಲಾಂತರದಲ್ಲಿ ರಂಭಾಪುರಿ ಶಾಖೆಯ ನಿರ್ವಹಣೆಗೊಳಪಟ್ಟಿತು. ಬಹುಶಃ ಪಿರಿಯಾಪಟ್ಟಣದರಸು ಹಾಲೇರಿವಂಶಜ ನಂಜುಂಡ ಅರಸುವಿನ ಜಂಗಮ ವಂಶ ಸಂಬಂಧಿಗಳು ಈ ಮಠದ ನಿರ್ವಹಣೆಗೆ ನಿಂತ ಮೇಲೆ ಈ ಬದಲಾವಣೆ ಆಗಿರುವಂತಿದೆ. ಪ್ರಸ್ತುತ ಮಠಾಧಿಪತಿ ಷ.ಬ್ರ. ದೊಡ್ಡಮಲ್ಲಿಕಾರ್ಜುನ ಒಡೆಯರ್ ಅವರು ತಿಳಿಸುವಂತೆ ಕ್ರಿ.ಶ. ೧೬೪೪ ರ ನಂಜುಂಡ ಅರಸುವಿನ ಜಂಗಮ ಸಂಬಂಧಿಗಳು ಪಿರಿಯಾಪಟ್ಟಣದಿಂದ ಬಂದು[೬೧] ಉರಿಗದ್ದುಗೆಯ ಮೇಲೆ ಕುಳಿತು ತಪಸ್ಸು ಮಾಡಲು ಹಿರಿಗರ್ಜೆಗೆ ಬಂದರು. ಪುಷ್ಪಗಿರಿಯಲ್ಲೊಂದು ಶಿವಲಿಂಗವನ್ನು ಸ್ಥಾಪಿಸಿದರು. ಹಿರಿಗರ್ಜೆಯ ಕಾಡಲ್ಲಿ ಹೆಜ್ಜೆಗೊಂದು ದೆವ್ವ ಇತ್ತಂತೆ. ಅಲ್ಲಿನ ಸೀತಾಳೆದಂಡಿನ ಪಾಳೆಯಗಾರರು ಸ್ವಾಮಿಗಳಿಗೆ ಬೇಕಂತಲೇ ಅಲ್ಲಿಯೆ ಮಠದ ನೆಲೆಕೊಟ್ಟರು. ಸ್ವಾಮಿಗಳು ತಮ್ಮ ತಂಗಿ ಬಸಮ್ಮಣ್ಣಿ ಒಡೆಯರೊಡನೆ ವಾಸ್ತವ್ಯಕ್ಕೆ ನಿಂತರು. ಆದರೂ ದಂಡು ಬಂದಾಗ ಸ್ವಾಮಿಗಳಿಗೆ ವಿಷಯ ತಿಳಿಯಿತು. ಬೊಗಸೆ ಭತ್ತ ಎರಚಿದರು. ಅವೇ ಜೇನು ನೊಣಗಳಾಗಿ ದಂಡನ್ನು ಮುತ್ತಿತಂತೆ. ಬೆಂಕಿಯಂತಹ ಉರಿ ದಂಡಿಗಾಯಿತು. ಆಗ ಪಾಳೇಯಗಾರ ಕ್ಷಮೆ ಕೇಳಿದ. ನಂತರ ಉರಿಗದ್ದುಗೆ ಈಶ್ವರ ಮಲ್ಲಿಕಾರ್ಜುನ ಒಡೆಯರನ್ನು ಪಾಳೆಯಗಾರನ ವಂಶೀಕರು ಗುರುಗಳನ್ನಾಗಿ ಮಾಡಿಕೊಂಡರು. ಈ ಗುರುಗಳು ವೆಂಕಟೇಂದ್ರ ನಾಯಕನ (ವೆಂಕಟಾದ್ರಿ ನಾಯಕ) ಮಗಳ ಅಷ್ಟಾವಕ್ರತನವನ್ನು ಕಳೆದುದಕ್ಕಾಗಿ ಅವನು ದಾನವಾಗಿ ೧೨ ಸಾವಿರದಷ್ಟು ದತ್ತಿಯನ್ನು ನೀಡಿದ. ಇದಕ್ಕೆ ಪೂರಕವೆಂಬಂತೆ ಬೇಲೂರು ವೆಂಕಟಾದ್ರಿ ನಾಯಕನು 'ಮಲಪುರವನ್ನು' ತಮಗೆ ಪುಣ್ಯವಾಗಲಿಯೆಂದು ಪುಷ್ಪಗಿರಿ ಮಟಕೆ ಲಿಂಗಮುದ್ರೆ ಹಾಕಿಕೊಟ್ಟ ಶಾಸನವು ಮಠದ ತೋಟದಲ್ಲಿ ಗ್ರಾಮದ ಹೆಬ್ಬಾಗಿಲ ಬಳಿ ಇದೆ.[೬೨] ಈ ಮಠಕ್ಕೆ **ಹಿರಿಗರ್ಜೆ ಮಠ** ಎಂದೂ ಹೆಸರಿಸುವುದುಂಟು. ಪುಷ್ಪಗಿರಿಯಿಂದ ಹಿರಿಗರ್ಜೆಗೆ, ನಂತರ ಮಲ್ಲಾಪುರಕ್ಕೆ ಮಠವು ಬಂದು ನಿಂತಿತು. ಬಸಮ್ಮಣ್ಣಿ ಒಡೆಯರ ಜೀವಂತ ಸಮಾಧಿ - ಗದ್ದುಗೆ ಇಲ್ಲಿದೆ. ಅಂತಾಗಿ ಶಿವರಾತ್ರಿಯ ಶಿವಯೋಗದಲ್ಲಿ ಇಲ್ಲಿ ಮುತ್ತೈದೆಯರ ಹಬ್ಬ ನಡೆಯುತ್ತದೆ. ಶ್ರಾವಣದಲ್ಲಿ ರುದ್ರಾಭಿಷೇಕ, ದಾಸೋಹ ಇಲ್ಲಿ ವೈಭವದಿಂದ ಒಂದು ಕಾಲಕ್ಕೆ, ನಡೆಯುತ್ತಿತ್ತು. ಇಲ್ಲಿನ ಸ್ವಾಮಿಗಳಿಗೆ 'ಹಾಲೇರಿ ಜಂಗಮರು' ಎಂದೇ ದಾಖಲೆಯಲ್ಲಿತ್ತು. ಈ ಹಾಲೇರಿ ಅರಸು ವಂಶಿಕ ಸಂಬಂಧವು ಸಣ್ಣಮಲ್ಲಿಕಾರ್ಜುನ ಒಡೆಯರ ತಲೆಮಾರಿಗೆ (೫ನೇ ತಲಮಾರು) ಮುಕ್ತಾಯವಾಯಿತು.

ಶ್ರೀ ಶೈಲ ಪುಷ್ಪಗಿರಿ ಮಹಾಸಂಸ್ಥಾನ ಶ್ರೀ ಮಠದ ಅಧಿಪತಿಗಳ ವಾಸ್ತವ್ಯ ಚಿಲ್ಕೂರಿನಲ್ಲಿದೆ. ಇಲ್ಲಿನ ಚರಪಟ್ಟಾಧ್ಯಕ್ಷರು ಶ್ರೀ ಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳು. ನಂದಿಗುಡಿ ಶ್ರೀ ಶೈಲ ಮಠವು ಆಂಧ್ರದ ಶ್ರೀಶೈಲ ಪೀಠಕ್ಕೆ ಉಪಮಠವಾಗಿದೆ. ನಂದಿಗುಡಿ ಶ್ರೀಶೈಲ ಮಠಕ್ಕೆ ಪ್ರಸ್ತುತ ಮಠವು ಶಾಖೆ ಆಗಿದೆ. ಈ ಮಠದ ಮೂಲ ನೆಲೆ 'ಚೌಕಿ ಮಠ' (ಇಂದಿನ ನೆಲೆಗೆ ಮುಕ್ಕಾಲು ಮೈಲು ದೂರ) ವೆಂಬಲ್ಲಿತ್ತು. ಇಂದಿನ ಮಠವನ್ನು ಕ್ರಿ.ಶ. ೧೯೧೯ರ ಸುಮಾರಿನಲ್ಲಿ ಕಟ್ಟಲಾಯಿತು. ಹಿಂದಿನ ಸ್ವಾಮಿಗಳು ಕಂತೆಭಿಕ್ಷ ತಂದು ದಾಸೋಹ ನಡೆಸುತ್ತಿದ್ದರು. ಕೋಟೆಅಡೆಹೊಲ, ಕುದುರೆ ಬೀದಿ ಹೊಲ ಇತ್ಯಾದಿಗಳು ಇಲ್ಲಿ ಇದ್ದು ಐತಿಹಾಸಿಕ ಪ್ರಾಮುಖ್ಯವನ್ನು ಈ ಮಠ ಜೊತೆಗೂಡಿ ಪಡೆದಿದೆ.

ಹೆಗ್ಗಡಹಳ್ಳಿ ಮಠವು ಇಂದು ಹಾಸನ ಜಿಲ್ಲೆಗೆ ಸೇರಿದ ಗಡಿಮಠವಾಗಿದ್ದರೂ ಒಂದು ಕಾಲಕ್ಕೆ ಪೂರ್ಣವಾಗಿ ಕೊಡಗಿಗೆ ಸೇರಿದ್ದು, ದೊಡ್ಡವೀರರಾಜೇಂದ್ರ ಒಡೆಯನಿಂದ ಜಹಗೀರಿ ಪಡೆದಿತ್ತು. ಮಕರ ಸಂಕ್ರಾತಿಯ ಸಮಯದಲ್ಲಿ ನಡೆಯುವ ಹಾಸನ ಜಿಲ್ಲೆಯ ಗೊದ್ದು ದೊಡ್ಡಯ್ಯನಜಾತ್ರೆ, ಕೊಡಗು ಜಿಲ್ಲೆ ಶನಿವಾರಸಂತೆ ಬಳಿಯ ಹುಲುಕೋಡಿನ ಹುಲುಕೋಡಯ್ಯನ ಜಾತ್ರೆ, ಇವೆರಡರ ಸಾಂಸ್ಕೃತಿಕ ಸಂಬಂಧ ಮಾತ್ರ ಈ ಮಠಕ್ಕೆ ಇಂದೂ ಉಳಿದುಬಂದಿದೆ. ಈ ಮಠದ ಗಮನಾರ್ಹವಾದ ಸಮಾಜೋ-ಸಾಂಸ್ಕೃತಿಕ ಕೈಂಕರ್ಯವೆಂದರೆ ದಲಿತ ಬಲಗೈ ಹರಿಜನ ವ್ಯಕ್ತಿಗಳಿಗೆ **ಕೊಟವಳಿ-ಕಣೆಯ** ದೀಕ್ಷೆ ನೀಡಿ ಮಠದಲ್ಲಿ ನಿರ್ಬಾಧಿತ ಸಂಪರ್ಕವನ್ನು ಬೆಳೆಸಿರುವುದಾಗಿದೆ. ಮೇಲ್ಸೂಚಿತ ಉಭಯ ಜಾತ್ರೆಗಳಿಗೆ ದಲಿತ ಸಮಾಜದ ಧಾರ್ಮಿಕ **ಕುಳವಾಡಿ** ಮುಖ್ಯರೂ ಆದ ಈ ಕೊಟವಳಿ-ಕಣೆಯರ ಸಹವಾಸದಲ್ಲಿಯೆ ಮಠದ ಗುರುಗಳು ಸಾಗುತ್ತಾರೆ. ಮಠದ ಇಂದಿನ ಸ್ವಾಮಿಗಳಾದ ಷ.ಬ್ರ. ಶಿವಶಂಕರ



ಕೊಟವಳಿ - ಕಣಯ

ಶಿವಾಚಾರ್ಯರು ಈ ಪರಂಪರೆಯನ್ನು ಇಂದಿಗೂ ಪಾಲಿಸಿದ್ದಾರೆ. ಈ ಸಂದರ್ಭದಲ್ಲಿ ಕೇಳಿ ಬರುವ '**ಕೊಟವಳಿ**' ಶಬ್ದವು ಧಾರ್ಮಿಕ ಮುಖ್ಯಸ್ಥವಂತಿಕೆಯ ಶಬ್ದವಾದರೂ 'ಕುಳವಾಡಿ' ಎಂಬ ಶಬ್ದದ ಅಪಭ್ರಂಶವೆನಿಸುತ್ತದೆ. ಡಾ.ಜಿ.ಎಸ್. ಗಾಯಿ ಅವರು ಹಲ್ಮಿಡಿ ಶಾಸನದ 'ಕುಱುಮ್ಬಿಡಿ' ಶಬ್ದವನ್ನು ಸಂಸ್ಕೃತದ 'ಕುಟುಂಬ ವೃತ್ತಿ' ಅಥವಾ ಕನ್ನಡದ 'ಕುತ್ತುಂಬಿತ್ತಿ' ಗೆ ಹೋಲಿಸಿ ವಂಶಪಾರಂಪರ್ಯ ಅಣುಗುಜೀವಿತದ ಅರ್ಥಕ್ಕೆ ಸಮೀಕರಿಸಿದ್ದಾರೆ. '**ಕುಱುಮ್ಬಿಡಿ**' ಶಬ್ದವನ್ನು ಶಾಸನ ತಜ್ಞ ಎಂ.ಜಿ. ಶರ್ಮರು ಶಾಸನದ ಮರು ಓದಿನಲ್ಲಿ '**ಕುಟುಮ್ಬಿಡಿ**' ಎಂದಿದ್ದಾರೆ. ಡಾ.ಎಂ.ಎಂ. ಕಲಬುರ್ಗಿ ಅವರು ವೇಳೆವಾಳಿ - ಜೋಳವಾಳಿ ಸಂಬಂಧವನ್ನೂ, 'ಮನೆಮಗನ್'ಗೆ ಹೋಲಿಸಿದ್ದಾರೆ. ಕುಳವಾಡಿಕೆಗೆ '**ನಾಯಿಮಣ್ಣು**' ಪಾರಂಪರಿಕ ಹಕ್ಕಿನ ಭೂಮಿಯಾಗಿ ಇರುತ್ತದೆ. ಹಲ್ಮಿಡಿಯ ಹಿರಡೆಲಿಂಗನ ಹಬ್ಬದಲ್ಲಿ ಪ್ರಾಚೀನ ಐದು ಪಾಲಿನ (ನಾಯಿ ಮಣ್ಣು !) ಕುಳವಾಡಿಗಳೇ ಮುಖ್ಯರಾಗಿದ್ದಾರೆ. ಈ ಹಿನ್ನೆಲೆಗಳನ್ನು ಹೊಂದಿಸಿಕೊಂಡಾಗ ಕುಳವಾಡಿ ಶಬ್ದದ ಪ್ರಾಚೀನ ರೂಪ 'ಕುಱುಮ್ಬಿಡಿ' ಆಗಿರಬಹುದೆ? ಎನಿಸುತ್ತದೆ. ಪ್ರಸ್ತುತ ಮಠದ ಕೊಟವಳಿಗಳು ಹಾಗು ಹಲ್ಮಿಡಿ ಮತ್ತು ನೆರೆಗ್ರಾಮದ ಹಿರಡೆಲಿಂಗನ ಪೂಜಾರಿ ಕುಳವಾಡಿಗಳ ಆಚಾರಗಳು, ಕೊಟವಳಿ ಸಂಬಂಧಗಳನ್ನು ತೋರುವಲ್ಲಿ ಕುಱುಮ್ಬಿಡಿ >ಕುಟುಮ್ಬಿಡಿ >ಕುಳಂವಿಡಿ >ಕುಳವಾಡಿ> ಕೊಟವಳಿ ಆಗಿರುವ ಸಾಧ್ಯತೆಯನ್ನು ಪರಿಶೀಲಿಸಬಹುದು. ಅಂತಾದರೆ ಈ ಮಠದ ಸಾಂಸ್ಕೃತಿಕ ಕೈಂಕರ್ಯವೊಂದು, ಕನ್ನಡದ ಮೊದಲ ಶಾಸನದ ಶಬ್ದವೊಂದನ್ನು ಅಪಭ್ರಂಶ ರೂಪದಲ್ಲಿ ಯಾದರೂ ಚಾಲ್ತಿಗಿಟ್ಟಿದೆ ಎನ್ನಬೇಕು. ಈ ಬಗ್ಗೆ ಮತ್ತಷ್ಟು ಸಂಶೋಧನೆಯ ಅಗತ್ಯವಿದೆ.

ಶ್ರೀಗುರುಸಂಗಮೇಶ್ವರ ಸ್ವಾಮಿ ಮಠ ಅಥವಾ ಸಂಗಪ್ಪನ ಮಠ ಎಂದು ಹೆಸರಾದ ಶರಣಸ್ತಲದ ಮಠವೊಂದು ಆಲೂರು ತಾಲೂಕು ನಿಡ್ನೂರಿನಲ್ಲಿದೆ. ಏಳು ಶರಣಸ್ತಲದ ಮಠಗಳ ಪೈಕಿ ಇದೂ ಒಂದೆನ್ನಲಾಗಿದೆ. ಈ ಸ್ತಲದವರು ವಿರಕ್ತ ಸಂನ್ಯಾಸಿ ಸಂಪ್ರದಾಯದವರು. ಇವರಲ್ಲಿ ಗೋತ್ರ ಸೂತ್ರಗಳು ಬರುವುದಿಲ್ಲ ಎನ್ನುವುದಿದೆ. ಇಲ್ಲಿ ಮೂಲ ಕತೃಗದ್ದುಗೆ ಇರುವುದಿಲ್ಲ. ಕತೃವಿನ ಬಳಕೆಯ ಪಾದುಕೆ ದಂಡ ಉರಿಹಸ್ತ ಇತ್ಯಾದಿ ಪ್ರತೀಕಗಳನ್ನು ಗದ್ದುಗೆ ಮೇಲಿಟ್ಟು ಸಂಕೇತಿಸುವುದು ಇಲ್ಲಿನ ರೂಢಿ. ಸಾಮಾನ್ಯವಾಗಿ ಪೀಠಾಧಿಕಾರಿಗಳು ಶಾಖಾಮಠಕ್ಕೆ ನೇಮಿಸಿದ ಮುಖ್ಯಸ್ಥರ ಸೇವೆ ಮಾಡಿಕೊಂಡು ಬಂದ ಶರಣರು ಮಠದ ನಿರ್ವಹಣೆಗೆ ಕಾಲಾಂತರದಲ್ಲಿ ನಿಲ್ಲುವುದು ಇಲ್ಲಿ ವಾಡಿಕೆ. ಇವರು ಸಂಸಾರಿಗಳು. ಮಠದ ನಿರ್ವಹಣೆ ಮಾಡುತ್ತ ಕೋರಣ್ಯಕ್ಕೆ ಹೋಗಿ ದವಸ ಧಾನ್ಯತಂದು ದಾಸೋಹ ನಡೆಸುವ ಸಂಪ್ರದಾಯ ಇವರದು. ಪ್ರಸ್ತುತ ಮಠದಲ್ಲಿ 'ಉರಿಹಸ್ತ' ದ ಜಾತ್ರೆ, ಸಂಗಮೇಶ್ವರ ಅಡ್ಡೆಯ ಮೆರವಣಿಗೆ, ಹರಿಜನ ಅರ್ಚಕ ಪೂಜಿತ ಸಂಗಮೇಶ್ವರ ಸ್ವಾಮಿಗಳ ಬಂಟ, ಭೂತರಾಯನ ಹಬ್ಬಗಳು ನಡೆಯುತ್ತವೆ. ವೀರಭದ್ರ ಮತ್ತು ಮಲ್ಲೇಶ್ವರ ಲಿಂಗಗಳೂ ಇಲ್ಲಿವೆ. ಶ್ರೀ ಕೆ.ಎಸ್. ಚಂದ್ರಶೇಖರಪ್ಪ ಅವರು ಮಠದ ನಿರ್ವಾಹಕ ಮುಖ್ಯಸ್ಥರಾಗಿದ್ದಾರೆ. ಗೃಹಸ್ತರಾಗಿ ಗುರುಲಿಂಗ ಜಂಗಮ ಸೇವಾನಿರತರಾಗಿ ಬಸವಾದಿ ಪ್ರಮಥರ 'ಆಚರಣೆ'ಗಳ ಪಾಲನ ನಿಷ್ಠೆ ಇರುವ ಈ ಶರಣಸ್ಥಲದ ಮಠಗಳು ಹಾಸನ ಜಿಲ್ಲೆಯ ವೀರಪ್ಪನಮಠ, ಸಂಗಪ್ಪನಮಠ, ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿಮಠ, ನಿರ್ವಾಣಸ್ವಾಮಿಮಠ, ಗಾಳಹಳ್ಳಿಮಠ ಇತ್ಯಾದಿಗಳಾಗಿವೆ. ಈ ಮಠದ ಮುಖ್ಯಸ್ಥರೆಲ್ಲ ಸೋದರಿಕೆ ಸಂಬಂಧದವರಾಗಿದ್ದಾರೆ.

ಜ॥ ಸರೂರು ಶಾಂತಮುತ್ತಂ ಶಾಖಾ ಬಾಣಾವರ ಹೊಸಂಭತ್ತು ಗಡಿಮಠವು ಶಿಷ್ಯವರ್ಗದ ಸ್ವತಂತ್ರ ಪಟ್ಟದ ಮಠವಾಗಿದೆ. ಹಾಲುಮತದ ಒಡೆಯರೆನಿಸಿದ ಇಷ್ಟಲಿಂಗಧಾರಿ ಗುರುಗಳಿಲ್ಲಿದ್ದಾರೆ. ಇದರ ಮೂಲ ನಿಜಾಂಸ್ಟೇಟ್‌ನ ಸರಗೂರು (ಇಂದಿನ ಬಿಜಾಪುರದ ಮುದ್ದೇಬಿಹಾಳದ ಸರಗೂರು ಆಗಿರಲೂಬಹುದು) ಎನ್ನಲಾಗಿದೆ. ಕರ್ನಾಟಕ, ಆಂಧ್ರ, ಕೇರಳ ಹಾಗೂ ತಮಿಳುನಾಡುಗಳಲ್ಲಿ ಇದರ ಸೋದರ ಶಾಖಾ ಮಠಗಳಿವೆ. ಇಂದೂರಿನ ರಾಜವಂಶಕ್ಕೆ ಈ ಮಠದವರು ರಾಜಗುರುಗಳು. ಮೈಸೂರು ಜಿಲ್ಲೆಯ ಗಡಿಮಠವಾಗಿ ಒಂದು ಕಾಲಕ್ಕೆ ೯ ಜಿಲ್ಲಾ ಗಡಿಗಳಿಗೆ ರಹದಾರಿ ನೀಡುವ ಕಾಯಕ (ಬಹುಶಃ ಪ್ರಾಂತೀಯ ಭಕ್ತರಿಗೆ) ಈ ಮಠಕ್ಕೆ ಇದ್ದ ಕಾರಣ ಹೊಸಂಭತ್ತು ಗಡಿ ಮಠವೆನಿಸಿತು. ಈ ಮಠದಲ್ಲಿ ರೇವಣ-ರೇಣುಕ, ಸಿದ್ಧರಾಮ, ಬಸವ, ಪ್ರಭುದೇವ ಮತ್ತು ರುದ್ರದೇವರ ಹೆಸರಲ್ಲಿ ಏಕಪೀಠಸ್ಥಪಂಚಲಿಂಗ ಗದ್ದುಗೆಗಳಿವೆ. ವೀರಭದ್ರ ಹಲಗೆಯೂ

ಇದೆ. ೧೨ ವರ್ಷಕ್ಕೊಮ್ಮೆ ಲಿಂಗದಕಂತೆ, ರುದ್ರನಹಲಗೆ ಇಟ್ಟು ಜಾತ್ರೆ ನಡೆಸುತ್ತಾರೆ. ಮಠದಿಂದ ಇಷ್ಟಲಿಂಗದೀಕ್ಷೆ ಪಡೆದ ಮಠದ ಶಿಷ್ಯರಿಗೆ ಆ ಸಮಯದಲ್ಲಿ ಮುಳ್ಳುಪಲ್ಲಕ್ಕಿಯ ಮೇಲೆ ಮಲಗುವ **ದಳವಾಯಿಕೆ ಪಟ್ಟ**, ಕತ್ತಿಯ ಮೇಲೆ ಮಲಗುವ **ಹಲಗೆದಳವಾಯಿಕೆ ಪಟ್ಟ**, ಬೀರೇದೇವರ **ಪೂಜಾರಿಕೆಪಟ್ಟ**, ಮೈಮೇಲೆ ಗಣ ಬರುವ **ಈರಗಾರಿಕೆ ಪಟ್ಟ**, ವಾರಕ್ಕೊಮ್ಮೆ ದೇವರ ಮನೆಯಲ್ಲಿ ಶುದ್ಧ ಮುದ್ರಿಕೆಯಲ್ಲಿ ಉಪವಾಸವಿದ್ದು ಬರುವ **ಒಂದೊತ್ತಿನಪಟ್ಟ**, ಕತ್ತಿಯ ಮೇಲೆ ನಿಲ್ಲುವ **ಕಟ್ಟಲಗೆಪಟ್ಟ**, **ಗೊರವಿಕೆಪಟ್ಟ**, **ದಾಸಯ್ಯಗಳ ಪಟ್ಟ** ಇತ್ಯಾದಿ ೯ ಪಟ್ಟಗಳನ್ನು ಬಹುಶಃ ವೀರಶೈವಾಚಾರಗಳ ಮತ್ತು ಗಡಿ ಅಧಿಕಾರ ಸಂಖ್ಯೆಯ ಸಂಕೇತವಾಗಿ ನೀಡುವ ರೂಢಿ ಈ ಮಠದಲ್ಲಿದೆ. ಗುರು-ವಿರಕ್ತ ಸಮನ್ವಯ, ಹೆಣ್ಣಿಗೂ ಆದರವಿರುವ ಈ ಮಠದ ಮುಖ್ಯರು ಶ್ರೀ ಬಸವ ಒಡೆಯರ್ ಹಾಗೂ ಭೂದೇವಸ್ವಾಮಿ ಒಡೆಯರ್ ಆಗಿದ್ದಾರೆ.

ಹಾಸನ ಜಿಲ್ಲೆಯ ಈ ವೀರಶೈವ ಮಠಗಳನ್ನು ಗಮನಿಸುವಲ್ಲಿ ಬೌದ್ಧಸಿದ್ಧರು, ಜೈನ, ಕಾಳಾಮುಖ ಶೈವ ಪರಿಸರದಲ್ಲಿ, ವೀರಶೈವವು ವಿಕಸಿಸಿ ಬಂದಿರುವುದು ಕಾಣಬರುತ್ತದೆ. ಇಲ್ಲಿನ ನಾಗಹೆಡೆ ಸುತ್ತುವರಿದ ಪಾದಶಿಲ್ಪಗಳು ಬೌದ್ಧಸಿದ್ಧ ಸಂಪ್ರದಾಯದ ತಾಂತ್ರಿಕ ಮೂಲದಿಂದ ಬಂದು ಬೌದ್ಧಸಿದ್ಧರು ಶೈವ ಅವಧೂತರಾಗಿ ವೀರಶೈವಕ್ಕೆ ಐಕ್ಯರಾದ ಮೇಲೆ, ವೀರಭದ್ರ, ಭೈರವಮೂರ್ತಿ, ದೇಗುಲಗಳ ಮುಂದೆ ಪ್ರತ್ಯೇಕ ಶಿಲ್ಪಗಳಾಗಿ ಕಂಡರಿಸಲ್ಪಟ್ಟವೆನ್ನಬೇಕು ಇದು ಕರ್ನಾಟಕದ ಇತರೆಡೆ ಕಂಡುಬಂದಿರುವಂತೆ ಇಲ್ಲಿಯೂ ಪ್ರಭಾವಗೊಂಡಿದೆ. ವೀರಶೈವ ಗುರು-ವಿರಕ್ತ ಪರಂಪರೆಯ ಸಮನ್ವಯ ಇಲ್ಲಿ ಕಾಣಬರುತ್ತದೆ. ಮಠದಾಚರಣೆಗಳು, ದೇಗುಲಗಳನ್ನು ತಾಗಿಸಿಕೊಂಡು ಜನಪದ ಸಂಸ್ಕೃತಿಯನ್ನು ಮೇಳೈಸಿಕೊಂಡಿವೆ. ಮಠದಲ್ಲಿನ ಸ್ತಂಭಗಳು, ಶಿಲ್ಪಗಳು, ಪ್ರಾಗೈತಿಹಾಸಿಕ ಚಿತ್ರಗಳು, ಅವುಗಳ ಕಾಲದ ನಿರ್ಧಾರ, ವಾಸ್ತವ್ಯಗೊಂಡ ಸಮಯ ಹಾಗೂ ಶಿಲ್ಪ ವೈವಿಧ್ಯಗಳನ್ನು ತಿಳಿಯಲು ಸಹಾಯಕವಾಗಿವೆ. ಶರಣಸ್ಥಲ ಹಾಗೂ ಹೊಸಂಭತ್ತು ಗಡಿ, ಮಠ, ರಾಜಮಾನಿತ ಮಠ, ಸ್ತ್ರೀಯರಿಗೆ ಆದರಉಳ್ಳ ಶಿವ-ಶರಣ ಸಂಸ್ಕೃತಿಯ ಮಠಗಳು ಈ ಜಿಲ್ಲೆಯ ಮಠಗಳ ವೈಶಿಷ್ಟ್ಯವನ್ನೂ ಸಮಾಜ ಸೇವೆಯನ್ನೂ ಎತ್ತಿ ತೋರಿವೆ. ಇಲ್ಲಿಯೂ ಮಹಾ ಮಹತ್ತಿನ ಮಠಗಳಿದ್ದು ಅವು ಗುರುಸ್ಥಲದವೆ. ಮಹಾಮಹತ್ತಿನ ಅರ್ಧ ಸಿಂಹಾಸನ ಪೀಠಗಳಿಗೆ ಅನ್ವಯವಾಗುವಂತಹುದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅವು ಇಲ್ಲಿ ಕಾಣಬರುತ್ತವೆ. ಸಿದ್ಧ ಸಂಪ್ರದಾಯವನ್ನು ಐಕ್ಯಮಾಡಿಕೊಂಡ ಕಾರಣ ಸಿದ್ಧೇಶ್ವರ ದೇಗುಲಗಳು ವೀರಶೈವ ಮಠಗಳಿಗೂ ಅಂಟಿಕೊಂಡು ಬಂದಂತೆ ಕಾಣುತ್ತವೆ.

ಜಿಲ್ಲೆಯ ವೀರಶೈವ ಮಠಗಳ ಹೆಸರುಗಳು ಹಾಗು ಸಂಪ್ರದಾಯ

ಅರಕಲಗೂಡು ತಾಲೂಕಿನ ಮಠಗಳು : ದೊಡ್ಡ ಮಠ (ಮು), ಚಿಲುಮೆ ಮಠ(ಮು), ಮರೂರು ಮಠ (ಮು), ಮಾದಾಪುರ ಮಠ(ಮು), ದೊಡ್ಡ ಬೊಮ್ಮನಹಳ್ಳಿ ಮಠ (ಮು), ಚಿಕ್ಕಬೊಮ್ಮತ್ತಿಮಠ (ಮು), ನಲ್ಲೂರು ಜಂಗಮ ಮಠ (ಮು) ಹಂಡರಂಗಿ ಮಠ (ಶ್ರೀ ಶೈಲ), ಜಯಾನಂದ ಆಶ್ರಮ, ಹೊನ್ನಗೊಂಡನ ಹಳ್ಳಿ ಮಠ (ಶ್ರೀ ಶೈಲ), ತರಿಗಳಲೆ ಮಠ, ಕೇರಳಾಪುರದ ಮಠ, ಆಗ್ರಹಾರ ಮಠ, ಬಸವಾಪಟ್ಟಣ ಮಠ, ಮೂಡ್ಲಹಳ್ಳಿ ಮಠ, ಹಾಲುಕುರಿಕೆ ಮಠ, ಯೆರಡುಕರ್ತಿ ಮಠ (ಜಾಳೂರು, ದ್ಯಾಮೇನಹಳ್ಳಿ, ಯಡವನಹಳ್ಳಿ, ಕೊಳಗುಂದ ಮಠಗಳು).

ಅರಸೀಕೆರೆ ತಾಲೂಕಿನ ಮಠಗಳು: ಮೂರು ಕಳಶದ ಮಠ ಎಳನಾಡು ಸಂಸ್ಥಾನ (ಗುರುಸ್ಥಲ), ಮೇಲಣ ಮಠ, ಚಲುವನ ಹಳ್ಳಿ ಮೇಲಣಗವಿ ಮಠ (ಶ್ರೀ ಶೈಲ), ಸಾತಂಗರ ಮಠ (ರಂಭಾ), ಅಯ್ಯನಹಳ್ಳಿ ಹಿರೇಹಳ್ಳಿ ಮಠ (ಸಂಸಾರಿ ಮಠ), ಬಂಡಿಹಳ್ಳಿ ರೇವಣಸಿದ್ಧೇಶ್ವರ ಮಠ (ರಂಭಾ) ನಾಗೇನಹಳ್ಳಿ ಮಠ (ತರಳಬಾಳು), ಹರಳುಕಟ್ಟೆ ಮಠ ಕೋಳುಗೋಡು ಕೆಳಗಣ ರುದ್ರದೇವರ ಮಠ (ರಂಭಾ - ಸಂಸಾರಿ), ಹಲಕೂರು ಮಠ, ಫಲಾಹಾರಸ್ವಾಮಿ ಮಠ (ರಂಭಾ -ಪರಾ), ಅಳಕಟ್ಟೆ ಮಠ (ತರಳಬಾಳು), ತಳತೂರಮಠ (ಉ!) ಬೆಂಡೆಕೆರೆ ಮಠ (ಶ್ರೀ ಶೈಲ), ಹೊಸಂಭತ್ತು ಗಡಿಮಠ; ದೇಸಾಣಿ ಮಠ (ರಂಭಾ), ಹಾರ್ನಳ್ಳಿ ಕೋಡಿ ಮಠ (ನಿರಂಜನ ಪೀಠ), ಬಾಣಾವರದ ಕೋಡಿಮಠ, ಮಾಡಾಳು ವಿರಕ್ತಮಠ (ಮು), ಮಾಡಾಳು ನೀಲಲೋಚನ ಮಹಾಸ್ವಾಮಿಗಳ ಆಶ್ರಮ, ಮಾರಗೊಂಡನಹಳ್ಳಿ ಮಠ, ಕೇದಿಗೆ ಮಠ (ಮು), ಚೆಲುವನಹಳ್ಳಿ ಕಳಗಣ ಗವಿಮಠ, ಅಂಚೆಕೊಪ್ಪಲಿನ ಬೂದಪ್ಪನ ಮಠ (ಪರಾ), ಮರಳುಸಿದ್ಧೇಶ್ವರ ಮಠ (ಪರಾ), ಕಲ್ಲುಗುಡಿ ಮಠ, ಕೆಂಗಲ್ಲು ಸಿದ್ದೇಶ್ವರ ಮಠ, ಸಿಂದಿಗೆರ ಕರಡಿಗವಿಮಠ, ಬೆಳಗೋಡು ಕಲ್ಮಠ, ದೊಡ್ಡಮೇಟಿ ಕುರ್ಕ ಬೂದಿಹಾಳುಸ್ವಾಮಿ ಮಠ, ಬಾಣಾವರದ ಸಿದ್ಧರಾಮೇಶ್ವರ ಮಠ, ವಿಜಯಪುರದ ಮಠ, ನಂದಿಕುಳಿ ಮಠ.

ಆಲೂರು ತಾಲೂಕಿನ ಮಠಗಳು: ಶರಣಸ್ಥಲದ ಮಠಗಳಾದ ಸಂಗಪ್ಪನ ಮಠ, ವೀರಪ್ಪನ ಮಠಗಳು; ಹುಲುಕುಂದ ಮಠ (ರಂಭಾ-ಮು) ಅಜ್ಜನ ಮಠ (ಮು-ಪರಾ), ನಲ್ಲೂರು ಮಠ (ಪರಾ), ತಿಪ್ಪಾಪುರ ಮಠ (ಪರಾ), ಮಾರನಾಯಕನಹಳ್ಳಿ ಹೊಸಮಠ,

ಚೆನ್ನರಾಯಪಟ್ಟಣ ತಾಲೂಕಿನ ಮಠಗಳು: ಅಣತಿಕೋಡಿಹಳ್ಳಿಮಠ, ಚನ್ನರಾಯಪಟ್ಟಣ ಟೌನ್‌ಮಠ, ಪಡುವಣ ಮಠ, ಸಂಧ್ಯಾಮಠ, ದೊಡ್ಡಕೊಳದ ಮಠ, ಕಲ್ಲುಮಠ, ಫಿರಂಗಿ ಮಠ, ಭಕ್ತರಹಳ್ಳಿಮಠ - ಈ ಎಲ್ಲ ಮಠಗಳು ಆಸ್ತಿ ಸಹಿತ ಪರಾಧೀನವಾಗಿವೆ.

ಬೇಲೂರು ತಾಲೂಕಿನ ಮಠಗಳು: ಚಿಲಕೂರುಮಠ (ಶ್ರೀಶೈಲ), ಪುಷ್ಪಗಿರಿ ಮಲ್ಲಿಕಾರ್ಜುನ ಮಠ (ಶ್ರೀಶೈಲ), ಮಲ್ಲಾಪುರದ ಮಠ (ರಂಭಾ), ಮತ್ತಾವರದ ಗವಿಮಠ (ಶ್ರೀಶೈಲ), ಶಂಕರದೇವರ ಮಠ (ಶ್ರೀಶೈಲ), ಯಲಹಂಕಮಠ (ತರಳಬಾಳು), ಹಳೇಬೀಡಿನ ಕಲ್ಮಠ, ವೆಂಕಟಪೇಟೆ ಮಠ (ಮು), ಚೌಕಿ ಮಠ (ಶ್ರೀಶೈಲ), ಬೆಳಗೋಡುಮಠ, ಈಶ್ವರನಹಳ್ಳಿ ಮಠ, ಬಿಕ್ಕೋಡುಮಠ (ಹಾರ್ನಳ್ಳಿ ಕೋಡಿಮಠ ನಿರ್ವಹಣೆ), ಜಡೆಶಂಕರದೇವರಮಠ.

ಸಕಲೇಶಪುರ ತಾಲೂಕಿನ ಮಠಗಳು: ಸಕಲೇಶಪುರದ ಮಠ-ಸಂಕಲಾಪುರದ ಮಠ (ರಂಭಾ), ಶಾಂತಪುರದ ಮಠ (ಶ್ರೀ ಶೈಲ), ತೆಂಕಲಗೂಡು ಬೃಹನ್ಮಠ - ಐಸಳೂರು ಮಠ (ಉ), ಹೆಗ್ಗಡಹಳ್ಳಿ ಮಠ (ಶ್ರೀಶೈಲ), ಅಗಟಿಗದ್ದೆ ಹಾಲು ಒಡೆಯರ ಮಠ-ಹೆತ್ತೂರು ಮಠ, ಉದೇವಾರದ ಬಾಳದ ಕಲ್ಲುಮಠ (ಶ್ರೀಶೈಲ !), ಬಾಳ್ಳುಮಠ-ಬಾಳಲುಮಠ (ಮು !) ಗೊಳಗಂಡ ಮಠ, ಚಂಗಡಹಳ್ಳಿ ಮಠ(ಮು), ಬಾಳುಗೋಡುಮಠ.

ಆಧಾರ ಸೂಚಿ ಹಾಗು ಟಿಪ್ಪಣಿಗಳು

೧. ಎ.ಕ. ೮, (ಪರಿಷ್ಕೃತ), ಹಾಸನಜಿಲ್ಲೆ, ಮೈಸೂರು ವಿಶ್ವವಿದ್ಯಾಲಯ, ೧೯೮೪, ಹಾಸನ ೭೧ (ನಿಟ್ಟೂರು), ಕ್ರಿ.ಶ. ೧೦೯೫-೯೬

೨. ಅದೇ, ಹಾಸನ ೧೧೬ (ಜಕ್ಕೇನಹಳ್ಳಿ), ಕ್ರಿ.ಶ. ೧೧೭೦-೭೧

೩. ಅದೇ, ಅರಕಲಗೂಡು ೧೩೨ (ತರಿಗಳಲೆ), ಕ್ರಿ.ಶ. ೧೧೮೬

೪-೬ ಎ.ಕ. ೫ (ಅನುಬಂಧ), ಹಾಸನಜಿಲ್ಲೆ, ೧೯೪೨: ಅರಸೀಕೆರ ೨೧೬ (ಜಾಜೂರು), ಕ್ರಿ.ಶ. ೧೧೯೫; ಅರಸೀಕೆರೆ ೨೩೬ (ಕೊಳಗುಂದ), ಕ್ರಿ.ಶ. ೧೧೬೧; ಅರಸೀಕೆರೆ ೨೪೧ (ದ್ಯಾಮೇನಹಳ್ಳಿ), ಕ್ರಿ.ಶ. ೧೧೮೯

೭. ಎ.ಕ. ೮ (ಪರಿಷ್ಕೃತ), ಅದೇ, ಹೊಳೆನರಸೀಪುರ ೬೪ (ಅಂಕನಾಥಪುರ, ೧೧ ನೇ ಶತಮಾನ ?)

೭. ಡಾ. ಕಲಬುರ್ಗಿ ಎಂ. ಎಂ, ೧೯೯೧: ಐತಿಹಾಸಿಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. ೧೧೮
ಡಾ. ಹಿರೇಮಠ ಬಿ.ಆರ್ : ಎಳಮೇಲ ಸಿಂಹಪರ್ಷೆ - ಅಭಿನವಪಾಶುಪತ - ವೀರಶೈವ, ಮಾಮಿಡಿ (ಮೂರ್ತಿಂಗಳೋಲೆ), ಶ್ರೀ ಜ.ಚ.ನಿ. ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, ಸಂ. ೧೨, ಸಂಗಮಸಂಚಿಕೆ ೪೬-೪೭, ೧೯೯೧, ಪು. ೪೩-೪೪

೮. ಡಾ. ಕಲಬುರ್ಗಿ ಎಂ. ಎಂ: ಅದೇ, ಪು. ೧೧೪, ೨-೩ ನೇ ಅಡಿ ಟಿಪ್ಪಣಿಗಳು

೯. ಎ.ಕ. ೮, ಹಾಸನ ಜಿಲ್ಲೆ, ಅದೇ, ಹೊಳೆನರಸೀಪುರ ೮೬ (ತವನಂದಿ), ಕ್ರಿ.ಶ. ೧೨೪೮ ಹೊಳೆನರಸೀಪುರ ೯೫ (ಮಾವನೂರು), ಕ್ರಿ.ಶ. ೧೨೮೨.

೧೦. ಎ.ಕ. ೮, ಅದೇ, ಅರಕಲಗೂಡು ೯೬ (ಕೇರಳಾಪುರ), ಕ್ರಿ.ಶ. ೧೩೬೨

೧೧. ಎಂ.ಜಿ. ನಾಗರಾಜ್ : ಕೊಡಗಿನ ಕೊಲೆ ಕಲ್ಲುಗಳು, ಹರತಿಸಿರಿ, (ಸಂ) ಲಕ್ಷ್ಮಣ್ ತೆಲಗಾವಿ, ಹರ್ತಿಕೋಟೆ, ೧೯೮೩, ಪು. ೭೨೦

೧೨. E.C.Vol. V (Supplement), Hassan Dt, Belur. 366 (1314 - 23 AD!); Belur 363 (1299 AD); Belur 368

೧೩. ಎ.ಕ. ೮, ಅದೇ, ಆಲೂರು ೨೬ (ಹುಲುಕುಂದ, ಕ್ರಿ.ಶ. ೧೪೭೬); ಎ.ಕ. ೫ (ರೈಸ್ ಸಂಪಾದಿತ), ಹಾಸನ ೧೫೫

೧೪. ಎ.ಕ. ೧ (ಪರಿಷ್ಕೃತ) ಕೊಡಗು ೬೩ (ಅಬ್ಬಿಮಠ, ಕ್ರಿ.ಶ. ೧೭೨೮ - ೧೭೯೬)

೧೫. ನಾಗರಾಜ್ ಎಂ.ಜಿ. 'ಕೊಡಗಿನ ವೀರಶೈವ ಮಠಗಳ ಕೊಡುಗೆ', ದಾಸೋಹ ಸಿರಿ, ಸಿದ್ದಗಂಗಾಕ್ಷೇತ್ರ ೧೯೯೭

೧೬. ಮಲ್ಲಾಪುರ ಬಿ.ವ್ಹಿ : 'ಶಾಸನಗಳಲ್ಲಿ ಮುರಿಗೆಯ ಸಂಪ್ರದಾಯ ..' ಚನ್ನೂಲಾದ್ರಿ ಚೇತನ (ರಜತಮಹೋತ್ಸವ ಸ್ಮರಣ ಸಂಚಿಕೆ), ೧೯೮೬, ಪು. ೩೩ ಅಡಿಟಿಪ್ಪಣಿ. ೧೪೦

೧೭-೧೮ ಎ.ಕ. ೫, ಚನ್ನರಾಯಪಟ್ಟಣ ೧೫೮ (೧೬-೧೭ ನೇ ಶತಮಾನ); ಚನ್ನರಾಯಪಟ್ಟಣ ೧೫೯ (ಕ್ರಿ.ಶ. ೧೬೪೭)

೧೯. ಎ.ಕ. ೫, ಹಾಸನ ೪೪ (ಕರ್ಜುವಳ್ಳಿ, ಕ್ರಿ.ಶ. ೧೬ ನೇ ಶತಮಾನ)

೨೦. ಅದೇ, ಅರಸೀಕೆರೆ ೧೫೯ (ತಳತೂರೆ, ಕ್ರಿ.ಶ. ೧೨೭೮)

೨೧. ಎ.ಕ. ೮ (ಪರಿಷ್ಕೃತ), ಅರಕಲಗೂಡು ೨೧ (ಮೂಡ್ಲಹಳ್ಳಿ, ೧೬-೧೭ ನೇ ಶತಮಾನ)

೨೨. ಅದೇ, ಅರಕಲಗೂಡು ೩೬ (ಅಗ್ರಹಾರ, ೧೭ನೇ ಶತಮಾನ)

೨೩. ಅದೇ, ಹಾಸನ ೬೪ (ಬಲ್ಲೇನಹಳ್ಳಿ, ೧೭-೧೮ ನೇ ಶತಮಾನ)

೨೪-೨೫. ಅದೇ, ಅರಕಲಗೂಡು ೧೦ (ಹೊನ್ನಗೊಂಡನಹಳ್ಳಿ, ೧೭ನೇ ಶತಮಾನ); ಹಾಸನ ೨೪ (ದೊಡ್ಡಗದ್ದವಳ್ಳಿ, ೧೨ ನೇ ಶತಮಾನ)

೨೬. ಕನ್ನಡ ಕನ್ನಡ ನಿಘಂಟು, ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್ತು, ೧೯೭೦, ಪು.೭೪೨

೨೭. ಎ.ಕ. ೫ (ರೈಸ್ ಆವೃತ್ತಿ), ಹಾಸನ ಜಿಲ್ಲೆ, ಅರಸೀಕೆರೆ ೩೭ (ಬೆಂಡೆಕೆರೆ, ೧೭-೧೮ ನೇ ಶತಮಾನ !)

೨೮. ಈ ಮಾಹಿತಿಗಳನ್ನು ೨೩.೪.೧೯೮೭ರಲ್ಲಿ ಒದಗಿಸಿದವರು ಹಾಸನದ ಶ್ರೀ ಬಿ.ಪಿ.ಐ. ಸಾಮಿಗೌಡರು.

೨೯. ಎ.ಕ. ೫, ಹಾಸನ ೧೭ (ಜವನಹಳ್ಳಿ, ಕ್ರಿ.ಶ. ೧೭೭೫)

೩೦. ಅದೇ, ಬೇಲೂರು ೨೩೪ (ಮಲ್ಲಾಪುರ, ಕ್ರಿ.ಶ. ೧೮೨೧)

೩೧. ಎಂ.ಜಿ. ನಾಗರಾಜ್; 'ಹಾಲೇರಿ ಅರಸರ ರಾಜಗುರುಗಳು; ಸಿದ್ಧರಾಮ ಸಂಪದ (ಸಂ) ಡಾ॥ ಬಿ.ವ್ಹಿ ಶಿರೂರ, ಯಲಬುರ್ಗಿ, ೧೯೯೫, ಪು. ೮೯

೩೨. ಅದೇ, ಬೇಲೂರು ೨೩೩ (ಮಲ್ಲಾಪುರ, ಕ್ರಿ.ಶ. ೧೭೨೮)

ಡಾ॥ ಬಿ. ನಂಜುಂಡಸ್ವಾಮಿ *

ಗುಬ್ಬಿ ಹೊಸಹಳ್ಳಿ ಅರಸು ಮನೆತನದವರಲ್ಲಿ ದೊರೆತ ಮೈಸೂರು ಅರಸರ ಪ್ರಧಾನ ಚನ್ನಪ್ಪಯ್ಯನ ಪತ್ರ

ತುಮಕೂರು ಜಿಲ್ಲೆಯಲ್ಲಿ ಹಲವಾರು ಪಾಳೆಯಪಟ್ಟುಗಳು ಯಶಸ್ವಿಯಾಗಿ ರಾಜ್ಯಭಾರ ಮಾಡಿ ನಾಡು ನುಡಿಗೆ ತಮ್ಮದೆ ಆದ ಸೀಮಿತ ವಲಯದಲ್ಲಿ ಕಾಣಿಕೆಯನ್ನು ಕೊಟ್ಟಿವೆ. ನೂರಾರು ವರ್ಷ ಆಂತರಿಕ ಜಗಳ ಯುದ್ಧ ಇಂತಹ ಎಲ್ಲಾ ವಿಧವಾದ ಕ್ಷೋಭೆಯಲ್ಲಿಯೂ ಶಕ್ತಿಮೀರಿ ಶ್ರಮಿಸಿದ ಹತ್ತಾರು ಪಾಳೆಯಪಟ್ಟುಗಳನ್ನು ನಾವು ಗಮನಿಸಬಹುದು.

ಗುಬ್ಬಿ ತಾಲ್ಲೂಕು ಗುಬ್ಬಿಹೊಸಹಳ್ಳಿ ಅರಸು ಮನೆತನದ ಅಧ್ಯಯನವನ್ನು ಪ್ರಾರಂಭಮಾಡಿರುವ ನನಗೆ ಒಂದರ ಹಿಂದೆ ಒಂದು ಕೌತುಕ ವಿಷಯಗಳು ತಿಳಿಯುತ್ತಾ ಬಂದಿವೆ. ಪ್ರಕಟಿತವಾಗಿರುವ ಒಂದು ತಾಮ್ರಶಾಸನ, ತ್ರುಟಿತವಾಗಿ ದೊರೆತಿರುವ ಕೈಫಿಯತ್ತು, ಹಲವಾರು ಕಾಗದ ಪತ್ರಗಳು ಬಿಟ್ಟರೆ ಸಾಹಿತ್ಯಕವಾದ ಶಾಸನದ ಆಧಾರವುಳ್ಳ ಇನ್ನು ಯಾವ ಮಾಹಿತಿಗಳು ಲಭ್ಯವಿಲ್ಲ.

.......ಶಾಲಿವಾಹನ ಶಖ ೧೩೨೭ನೇ ಆಂಗಿರ್ಸ ಸಂವತ್ಸರದಲ್ಲಿ ಕೋಟೆಯನ್ನು ನಿರ್ಮಾಣಮಾಡಿ ಪೂರ್ವದಲ್ಲಿಯಿದ್ದ ಸಂಣ ಗ್ರಾಮದ ಹ್ಸೆರ್ರು ಯಿ ಗ್ರಾಮಕೆ ಗುಬ್ಬಿಯೆಂಬುದಾಗಿ ಹ್ಸೆರಿಯಿಟ್ಟು ಆ ಸಂಣಗ್ರಾಮಕೆ ಹಳೆಗುಬ್ಬಿ ಯೆಂಬುದಾಗಿ ಹ್ಸೆರಿಟ್ಟು ಶೃಂಗಮುನಿ ಆಶ್ರಮ ಸ್ತಳದಲ್ಲಿ ಶಿಂಗೋನಹಳ್ಳಿಯೆಂಬದಾಗಿ ವಂದು ಗ್ರಾಮ ನಿರ್ಮಾಣ ಮಾಡ್ಸಿ ಶೀಮೆಯಂನ್ನು ಅನುಭವಿಸಿಕೊಂಡುಯಿದರ್ರು.....

"ಗುಬ್ಬಿ ಹ್ಯೊಸಹಳ್ಳಿ ಪಾಳ್ಯಪಟಿನ ಕೈಪೆತಿನ ವಿವರ್ರಾ" ಎಂಬ ತ್ರುಟಿತ ಕಾಗದದಲ್ಲಿ ಗುಬ್ಬಿ ಕೋಟೆ ಬಗ್ಗೆ ಇರುವ ಮಾಹಿತಿ, ಗುಬ್ಬಿಕೋಟೆ ಕಟ್ಟಿಸಿದ್ದು ಕ್ರಿ.ಶ. ೧೪೦೫ರಲ್ಲಿ. ಆ ಪೂರ್ವದಲ್ಲೆ ಹೊಯ್ಸಳ ಶೈಲಿಯ ಬೇಟೆರಾಯಸ್ವಾಮಿ ದೇವಸ್ಥಾನ ಅಲ್ಲಿ ಇತ್ತು. ಆ ದೇವಸ್ಥಾನ ನಿರಾಭರಣ ಸುಂದರಿಯಂತೆ ಇದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಬಿಲ್ಲು ಇಡಿದಿರುವ ಬೇಟೆರಾಯ, ವಿಷ್ಣುವಿನ ವಿಗ್ರಹವಿದೆ. ಕೆತ್ತನೆಗಳು ಅಷ್ಟೇನು ಇಲ್ಲದ ಸಾಮಾನ್ಯ ವಿಗ್ರಹ. ಪೀಠದಲ್ಲಿ ಗರುಡನ ಕೆತ್ತನೆ ಇದೆ. ಅರ್ಧ ಮಂಟಪ ನವರಂಗ, ನವರಂಗದ ದ್ವಾರದ ಪಕ್ಕದಲ್ಲಿ ಆಳ್ವಾರುಗಳ ಅಂಜಲಿ ಬದ್ಧವಾಗಿರುವ ವಿಗ್ರಹಗಳು ಇದ್ದು, ನವರಂಗದಲ್ಲಿ ಹೊಯ್ಸಳ ಶೈಲಿಯ ಕಂಬಗಳು ಇವೆ. ನವರಂಗದಲ್ಲಿ ಉತ್ತರಾಭಿಮುಖ ದಕ್ಷಿಣಾಭಿಮುಖವಾದ ಎರಡು ಗರ್ಭಗುಡಿಗಳು ಇದ್ದು, ಉತ್ತರಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಸುಖಾಸೀನವಾಗಿರುವ ನಾಲ್ಕು ಅಡಿ ಎತ್ತರದ ಸುಂದರವಾದ ಕೆತ್ತನೆ ಉಳ್ಳ ಲಕ್ಷ್ಮಿಯ ವಿಗ್ರಹವಿದೆ. ದಕ್ಷಿಣಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಕಲ್ಲಿನ ಪೀಠವಿದ್ದು ಪೀಠದಲ್ಲಿ ಗರುಡನ ಕೆತ್ತನೆ ಇದ್ದು ವಿಗ್ರಹ ಮಾತ್ರ ಇಲ್ಲ. ಈಗ ಆ ಗರ್ಭಗುಡಿಯನ್ನು ಶಯನೋತ್ಸವಕ್ಕೆ ಉಪಯೋಗಿಸುತ್ತಾರೆ. ಅಲ್ಲಿ ಇದ್ದ ವಿಗ್ರಹ ಯಾವುದು? ಏನು? ಎಂದು ನಾನು ಹಿರಿಯರನ್ನು ಕೇಳಿದ್ದೆ. ಆದರೆ ವಿಷಯ ಮಾತ್ರ ತಿಳಿದು ಬರಲಿಲ್ಲ. ಗುಬ್ಬಿಹೊಸಹಳ್ಳಿ ಅರಸುಮನೆತನದವರಲ್ಲಿ ದೊರೆತ ಈ ಪತ್ರದಿಂದ ಅಲ್ಲಿ ಇದ್ದ ವಿಗ್ರಹದ ಸ್ಪಷ್ಟ ಚಿತ್ರ ತಿಳಿದು ಬಂದಂತೆ ಆಯಿತು.

ಹೊನ್ನಪ್ಪಗೌಡರ ಕಾಲಮಾನ ಯಾವುದು? ಮಹಿಶೂರ ಪ್ರಧಾನ ಚಂನಪೈಯನವರು ಯಾರ ಕಾಲದಲ್ಲಿ ಪ್ರಧಾನರಾಗಿದ್ದರು? ಈ ಪ್ರಶ್ನೆಗಳಿಗೆ ಈಗ ನನ್ನಲ್ಲಿ ಉತ್ತರವಿಲ್ಲ. ಗುಬ್ಬಿಹೊಸಹಳ್ಳಿ ಪಾಳೇಗಾರರಲ್ಲಿ ಬಹಳಷ್ಟು ಜನರ ಹೆಸರು ಗೊಂದಲವಿದೆ. ಅಳಿದು ಉಳಿದಿರುವ ಕಾಗದ ಪತ್ರಗಳ ಅಧ್ಯಯನದ ನಂತರ ಈ ವಿಚಾರದಲ್ಲಿ ಸ್ಪಷ್ಟತೆ ಮೂಡಬಹುದು.

ಮೈಸೂರು ಪ್ರಧಾನರು ಗುಬ್ಬಿಹೊಸಹಳ್ಳಿ ಹೊನ್ನಪ್ಪ ಗೌಡನಿಗೆ ಸಸ್ನೇಹಾ ವಿನಯಾರ್ಥ ಮಾಡಿಕೊಂಡು ತಮ್ಮ ಕ್ಷೇಮಕ್ಕೆ ಅಥವಾ ಪರಿಣಾಮಕ್ಕೆ ಬರಸಿ ಕಳುಹಿಸಿ, ನವಾಬ ನಾಸರಜಂಗರವರು ಯಿ ಪ್ರಾಂತ್ಯಕ್ಕೆ ಬಂದು ಇದ್ದಾಗ ಕೈದಾಳ ಚೆನ್ನಿಗರಾಯಸ್ವಾಮಿ ವಿಗ್ರಹವನ್ನು ಭಿನ್ನ ಮಾಡಿದ್ದರಿಂದ ಯಿ ಸ್ಥಳದಲ್ಲಿ ಪ್ರತಿಷ್ಠೆ ಮಾಡಿಸತಕ್ಕ ಬಗ್ಗೆ ಗುಬ್ಬಿ ಕೋಟೆಯಲಿ ಬೇಟೆರಾಯಸ್ವಾಮಿ ದೇವಸ್ಥಾನದಲ್ಲಿ ಇರುವ ಚನ್ನಕೇಶವ ವಿಗ್ರಹ

* ಪಂಡಿತ ತಾರಾನಾಥ್ ಆಯುರ್ವೇದ ಚಿಕಿತ್ಸಾಲಯ, ತುಮಕೂರು ಶಾಪಿಂಗ್ ಕಾಂಪ್ಲೆಕ್ಸ್, ಬಿ.ಎಚ್. ರಸ್ತೆ, ತುಮಕೂರು-೫೭೨೧೦೨

ಇರುವದರಿಂದಲೂ ಈ ಬಗ್ಗೆ ಹರಕಾರರ ಕಳುಹಿಸಿ ಇದ್ದೀತು ಆ ಪ್ರಕಾರಕ್ಕೆ ಗುಬ್ಬಿ ಕೋಟೆ ಒಳಗೆ ಬೇಟೆರಾಯಸ್ವಾಮಿಯವರ ದೇವಸ್ಥಾನದಲ್ಲಿ ಪೂಜೆಯಿಲ್ಲದೆಯಿರುವ ಚನ್ನಕೇಶವಸ್ವಾಮಿ ವಿಗ್ರಹವನ್ನು ಕೈದಾಳ ಸ್ಥಳಕ್ಕೆ ಯಿೂ ಹರಿಕಾರರ ಸಂಗಡ ಜೋಪಾನದಲಿ ಸಾಗಿಸಿ ಕಳುಹಿಸುವ ಹಾಗೆ ಮಾಡಿಸಿ ಆ ವಿವರಕ್ಕು ನಿಮ್ಮ ಪರಿಣಾಮಕ್ಕು ಬರೆ [ಸಿ] ಕಳುಹಿಸುವ ಹಾಗೆ ಮಾಡಿಸುವುದು, ಎಂದು ಬರೆದಿರುವ ಪತ್ರದಿಂದ ಕೈದಾಳದಲ್ಲಿ ಮೊದಲು ಇದ್ದ ವಿಗ್ರಹ, ಅಂದರೆ ತ್ರುಟಿತ ವಿಗ್ರಹ ಏನಾಯಿತು? ಇನ್ನು ಮುಂತಾದ ಯಾವ ಮಾಹಿತಿಯೂ ಇಲ್ಲ. ಈ ಕಾಗದದಿಂದ ಕೈದಾಳದ ದೇವಾಲಯದಲ್ಲಿ ಮರುಪ್ರತಿಷ್ಠೆಗೊಂಡಿರುವುದು ಖಚಿತಗೊಂಡಿದೆ.

ಧರ್ಮಾಭಿಮಾನಿಗಳಾದ ಮೈಸೂರು ಅರಸರು ಅನ್ಯರಿಂದ ದುರಾಕ್ರಮಣಗೊಂಡ ದೇವಾಲಯದ ಪುನಃ ಪ್ರತಿಷ್ಠಾಪನೆ ಬಗ್ಗೆ ಅವರು ಕೈಗೊಳ್ಳುತ್ತಾ ಇದ್ದ ಕ್ರಮಗಳ ಬಗ್ಗೆ ಸಹ ಬೆಳಕು ಚೆಲ್ಲುತ್ತದೆ. ಹರಿಕಾರರನ್ನು ಅಲ್ಲಿಂದ ಇಲ್ಲಿಗೆ ಕಳುಹಿಸಿ, ಗುಬ್ಬಿಹೊಸಹಳ್ಳಿ ಅರಸರ ಗಮನಕ್ಕೆ ತಂದು ಮತ್ತೆ ಹರಿಕಾರರನ್ನು ಕಳುಹಿಸಿ ಗುಬ್ಬಿಯಿಂದ ಕೈದಾಳಕ್ಕೆ ಜೋಪಾನವಾಗಿ ಸಾಗಿಸುವ ಬಗ್ಗೆ ವ್ಯವಸ್ಥೆ ಮಾಡುವಂತೆ ವಿನಯಾರ್ಥ ಬರೆದು ಆ ಕೆಲಸವೆಲ್ಲ ಮುಗಿದ ನಂತರ ಪರಿಣಾಮಕ್ಕೆ ಬರೆದು ತಿಳಿಸುವ ಹಾಗೆ ಈ ಪತ್ರ ತಿಳಿಸುತ್ತದೆ.

ಈ ಮೂಲಪತ್ರವನ್ನು ನೋಡಲು ಅವಕಾಶ ಮಾಡಿಕೊಟ್ಟ ಆ ಅರಸುಮನೆತನದವರಿಗೆ ನನ್ನ ಕೃತಜ್ಞತೆಗಳು.

ಅನುಬಂಧ – ೧

ಶ್ರೀರಾಮ

೧ ಶ್ರೀಮತ್ಸಕಲಗುಣಸಂಪಂನರಾದ ಗುಬ್ಬಿಹೊಸಹಳ್ಳಿ ಪೂಂನಪಗೌಡರ್‍ರಿಗೆ ಮಹಿಶೂರ ಪ್ರಧಾನ ಚೆಂನಪ್ಪಯನವರು

೨ ಸ್ವಸ್ನೇಹಾಲು ಸಂಪ್ರೀತಿ ಯಿಂಕಾರ್‍ಯಕ್ಕೆ ಕಳುಹಿದ ವಿನ ಯಾರ್ಥ। ನಾಲು ಕ್ಷೇಮದಲ್ಲಿ ಯಿಧೇವೆ ನಿಂಮ ಪರ್‍ರಿಣಾಮಕ್ಕೆ ಬರೆಸಿ

ಕಳುಹಿಸುವ ಹಾಗೆ ಮಾಡಿಸುವದು ಅದಾಗಿ। ನವಾಬ ನಾಸರಜಂಗರವರು ಯೀ ಪ್ರಾಂತ್ಯಕ್ಕೆ ಬಂದು ಯಿದ್ದಾಗ ಕೈದಾಳ ಚೆಂ

೪ ನ್ನಿಗರ್‍ರಾಯಸ್ವಾಮಿ ವಿಗ್ರಹವಂನ್ನೂ ಭಿಂನ್ನಾ ಮಾಡಿದ್ದ ರ್‍ರಿಂದ ಯಿೂ ಸ್ಥಳದಲ್ಲಿ ಪ್ರತಿಷ್ಠೆ ಮಾಡಿಸತಕ್ಕ ಬಗ್ಗೆ ಗುಬ್ಬಿ ಕೋಟೆಯ

೫ ಲ್ಲಿ ಬೇಟೆರಾಯಸ್ವಾಮಿಯವರ ದೇವಸ್ಥಾನದಲ್ಲಿ ಯಿರುವ ಚೆಂನಕೇಶವ ವಿಗ್ರಹಲು [ವನ್ನು?] ಬೇಕಾಗಿಯಿರುವದ ರ್‍ರಿಂದ ಯಿೂ

೬ ಬಗ್ಗೆ ಹರಕಾರರ ಕಳುಹಿಸಿ ಯಿದ್ಧಿತು ಆ ಪ್ರಕಾರಕ್ಕೆ ಗುಬ್ಬಿ ಕೋಟೆವಳಗೆ ಬೇಟೆರಾಯಸ್ವಾಮಿಯವರ ದೇವಸ್ಥಾ

೭ ನದಲ್ಲಿ ಪೂಜೆಯಿಲ್ಲದೆ ಯಿರುವ ಚೆಂನಕೇಶವಸ್ವಾಮಿೂ ವಿಗ್ರಹವಂನ್ನು ಕೈದಾಳ ಸ್ಥಳಕ್ಕೆ ! ಯಿೂ ಹರಕಾರರ

೮ ಸಂಗಡ ಜೋಪಾನದಲ್ಲಿ ಸಾಗಿಸಿ ಕಳುಹಿಸುವ ಹಾಗೆ ಮಾಡ್ಸಿ ಆ ವಿವರಕ್ಕು ನಿಂಮ ಪರ್‍ರಿಣಾಮಕ್ಕು ಬರೆಸಿ ಕಳು

೯ ಹಿಸುವ ಹಾಗೆ ಮಾಡಿಸುವುದು। ಶ್ರೀರಾಮ

ಅನುಬಂಧ – ೨

ಆಂಗ್ಲೋ ಫ್ರೆಂಚ್ ಯುದ್ಧಗಳು ಅಥವಾ ಕರ್ನಾಟಿಕ್ ಯುದ್ಧಗಳು

ಕರ್ನಾಟಿಕ್ ಯುದ್ಧವು ಡೂಪ್ಲೆಯಿಂದ ದಕ್ಷಿಣ ಭಾರತದ ರಾಜ ಮನೆತನದ ಒಳಜಗಳದ ಅವಕಾಶವನ್ನು ಉಪಯೋಗಿಸಿ ಕೊಂಡು ಮಾಡಿದ್ದು.

Nizam-ul-Mulk Asaf Jah Hyderabad & Carnatic 21/May 1948 ಇವನು ತನ್ನ ಎರಡನೇ ಮಗ ನಾಸಿರ್ ಜಂಗ್‌ನನ್ನು ೧೭೪೮-೫೦ ಸಿಂಹಾಸನಾರೋಹಣ ಮಾಡಿಸಿದ. ಆದರೆ, ಹಿಂದಿನ ನಿಜಾಮನ ಮೊಮ್ಮಗ Muzafar Jung ನಾನೆ ಸಿಂಹಾಸನದ ಹಕ್ಕುದಾರ ಎಂದ. Arcotನಲ್ಲಿ Anwar-ud-din ಇದ್ದ. ಚಂದಸಾಹೇಬ್ ನವಾಬ್‌ನ ಅಳಿಯ. ಈ ಎರಡು ಜಗಳಗಳು ಒಟ್ಟಿಗೆ ಸೇರಿ

ಆಗ ಡೂಪ್ಲೆಯು Mazafar Jungನನ್ನು ಸುಭೇದಾರ ನನ್ನಾಗಿ ಚಂದಸಾಹೇಬ್‌ನನ್ನು ಆರ್ಕಾಟ್‌ನ ನವಾಬನನ್ನಾಗಿ ಮಾಡಿದ.

ಆಗ ಇಂಗ್ಲೀಷರು ನಾಸಿರ್ ಜಂಗ್, Anwar-ud-din ಸಹಾಯಕರಾಗಿ ನಿಂತು ಕೊಂಡರು. ಈ ಯುದ್ಧದಲ್ಲಿ ಮುಜಾಫರ್ ಜಂಗ್ ಚಂದಾಸಾಹೇಬ್ ಮತ್ತು ಫ್ರೆಂಚ್‌ನವರು ಅನ್ವರ ಉದ್ದೀನ್‌ನನ್ನು ೧೭೪೯ರಲ್ಲಿ ಸೋಲಿಸಿ ಯುದ್ಧದಲ್ಲಿ ಕೊಂದರು ವೆಲ್ಲೂರು ಪಕ್ಕದ ಅಬೂರುನಲ್ಲಿ ನಾಸಿರ್‌ಜಂಗ್ ೧೭೫೦ರಲ್ಲಿ ಸತ್ತ. ಮುಸಾಫರ್ ಜಂಗ್ ಸುಭೇದಾರನಾದ ನಾಸಿರ್‌ಜಂಗ್ ೧೭೫೦ ರಲ್ಲಿ ಸತ್ತಿರುವುದರಿಂದ ಅದಕ್ಕಿಂತ ಹಿಂದೆ ಈ ಪ್ರದೇಶಕ್ಕೆ ಬಂದಾಗ ಕೈದಾಳದ ದೇವಾಲಯದ ವಿಗ್ರಹವನ್ನು ನಾಶಮಾಡಿರಬೇಕು. ತದನಂತರ ಅಂದರೆ ೧೭೬೦ರ ಸುಮಾರಿನಲ್ಲಿ ಗುಬ್ಬಿಯಿಂದ ಕೈದಾಳಕ್ಕೆ ವಿಗ್ರಹವನ್ನು ಸಾಗಿಸಿರಬೇಕು. ಈ ವಿಷಯದ ಕಡೆ ನನ್ನ ಗಮನ ಸೆಳೆದ ಯೋಗೀಶರವರಿಗೆ ಧನ್ಯವಾದಗಳು.

*

ಡಾ॥ ಎಚ್. ಎಸ್ ಗೋಪಾಲರಾವ್ *

ಶಾಸನತಜ್ಞ ಶ್ರೀ ತಿ.ತಾ. ಶರ್ಮ

ಶರ್ಮಾಜಿ, ತಿ.ತಾ. ಶರ್ಮ ಎಂದೇ ಚಿರಪರಿಚಿತರಾಗಿದ್ದ ತಿರುಮಲೆ ತಾತಾಚಾರ್ಯ ಶರ್ಮ ಅವರು ಕನ್ನಡ ನಾಡು ಮತ್ತು ನುಡಿಗೆ ಸಲ್ಲಿಸಿರುವ ಸೇವೆ ಅಪಾರ. ರಾಷ್ಟ್ರಾಭಿಮಾನಿಯಾಗಿಯೂ ಅವರು ಸ್ಮರಣೀಯರು. ಶರ್ಮರಿಂದ ನಾಡಿಗೆ ಮತ್ತು ರಾಷ್ಟ್ರಕ್ಕೆ ಸಂದಿರುವ ಸೇವೆ ಬಹುಮುಖವಾದುದು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳು ಮತ್ತು ಕರ್ನಾಟಕ ಏಕೀಕರಣಕ್ಕೆ ನಡೆದ ಚಳುವಳಿಗಳು-ಎರಡರಲ್ಲೂ ಶರ್ಮಾಜಿ ಅವರು ಸಮಸಮನಾಗಿ ಪಾಲ್ಗೊಂಡವರು. 'ವಿಶ್ವಕರ್ನಾಟಕ' ಪತ್ರಿಕೆಯ ತಿ.ತಾ.ಶರ್ಮರು ಆಳುವ ಅಧಿಕಾರಿಗಳ ತಪ್ಪುಗಳನ್ನು ಅಂಜದೆ ಬಹಿರಂಗಗೊಳಿಸಿದರು. ಜನರ ಬಗ್ಗೆ ಅತ್ಯಂತ ಪ್ರೀತಿಯನ್ನಿರಿಸಿಕೊಂಡಿದ್ದ ಶರ್ಮರು ಅನೇಕ ಸಂಘ-ಸಂಸ್ಥೆಗಳ ನೇತೃತ್ವ ವಹಿಸಿ ಸಾರ್ಥಕ ಸೇವೆ ಸಲ್ಲಿಸಿದರು.

ಶರ್ಮಾಜಿ ಅವರನ್ನು ಅರ್ಥಮಾಡಿಕೊಳ್ಳಲು ಅವರ ಸುತ್ತು ನಿಂತು ನಿಂತು ಹಲವು ಬಾರಿ ಪ್ರದಕ್ಷಿಣೆ ಮಾಡಬೇಕು. ಆಗಲೂ, ಅವರು ಪೂರ್ಣ ಅರ್ಥವಾದರೆಂದು ಬೀಗುವಂತಿಲ್ಲ. ಅವರನ್ನು ಅರ್ಥಮಾಡಿಕೊಳ್ಳುವುದು ಇನ್ನೂ ಇರುತ್ತದೆ. ಸಂಸ್ಕೃತಿಯ ಅಭಿಮಾನಿಯಾಗಿ ಶರ್ಮರು ನಡೆಸಿರುವ ಕಾರ್ಯಗಳು ಸರ್ವಜನ ಮಾನ್ಯವಾದುವು; ಎಲ್ಲ ಕಾಲಕ್ಕೂ ನಿಲ್ಲುವಂತಹವು. ಶರ್ಮಾಜಿ ಅವರ ಸಂಶೋಧನ ಕಾರ್ಯಗಳ ಬಗೆಗೆ ಸ್ಥೂಲವಾಗಿ ತಿಳಿಯುವ ಕೆಲಸವನ್ನು ಈ ಲೇಖನದ ಮೂಲಕ ಮಾಡಲಾಗಿದೆ.

ಸಂಶೋಧಕ ಶರ್ಮರು ಬಹುವಾಗಿ ನೆಮ್ಮಿಕೊಂಡದ್ದು ಶಾಸನಶಾಸ್ತ್ರವನ್ನಾದರೂ ವಾಸ್ತು, ಶಿಲ್ಪ, ಸಾಹಿತ್ಯ, ಸಂಗೀತ ಇತ್ಯಾದಿಗಳ ಬಗೆಗೂ ಅವರಿಗೆ ಅಪಾರವಾದ ಆಸಕ್ತಿ ಇತ್ತು, ಕಾಳಜಿ ಇತ್ತು. ರಾಷ್ಟ್ರದ ಸ್ವಾತಂತ್ರ್ಯಕ್ಕೆ, ರಾಜ್ಯದ ಏಕೀಕರಣಕ್ಕೆ ಹೋರಾಡಿದ ಹಲವಾರು ಗಣ್ಯರ ಪೈಕಿ ತಿ.ತಾ. ಶರ್ಮರು ಅಗ್ರ ಪಂಕ್ತಿಯಲ್ಲೇ ನಿಲ್ಲುತ್ತಾರೆ. ಅವರ 'ವಿಶ್ವಕರ್ನಾಟಕ' ಪತ್ರಿಕೆಯಂತೂ ಆಳುವವರ ಲೋಪ-ದೋಷಗಳನ್ನು ಯಾವ ಮುಲಾಜೂ ಇಲ್ಲದೆ ಬಹಿರಂಗಗೊಳಿಸುತ್ತಿತ್ತು. ತಮ್ಮ ನಿಷ್ಠೆ ಮತ್ತು ಪ್ರಾಮಾಣಿಕತೆಗಳನ್ನು ಸದಾ ಉಳಿಸಿಕೊಂಡಿದ್ದ ಶರ್ಮರು ಆಳುವ ವರ್ಗದೊಡನೆ ಯಾವುದೇ ರೀತಿಯ ಒಪ್ಪಂದಗಳಿಗೂ ಸಿದ್ಧರಿರಲಿಲ್ಲ. ಮನೆಯವರಿಂದ 'ರಾಜ' ಎಂದು ಕರೆಸಿಕೊಂಡ ಅವರು 'ರಾಜ'ನಂತೆಯೇ ಬಾಳಿದವರು. ಬಾಳಿನುದ್ದಕ್ಕೂ ಹೋರಾಟ ಜೀವಿಯಾಗಿಯೇ ಇದ್ದ ಶರ್ಮರು ಕರ್ನಾಟಕ ಇತಿಹಾಸಕ್ಕೆ; ಅದರಲ್ಲೂ ವಿಶೇಷವಾಗಿ ಶಾಸನಶಾಸ್ತ್ರದ ಮೂಲಕ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಅಪರಿಮಿತವಾದುದು. ಅವರು ಶಾಸನಗಳನ್ನು ಕುರಿತು ಬರೆದಿರುವ ಲೇಖನಗಳನ್ನೆಲ್ಲಾ ಒಂದು ಸಂಪುಟವಾಗಿ ಪ್ರಕಟಿಸಿದರೆ ಅದರ ಮಹತ್ವ ಆಸಕ್ತರೆಲ್ಲರ ಅರಿವಿಗೆ ಸಹಜವಾಗಿಯೇ ಬರುತ್ತದೆ.

೧೯೧೯ರಿಂದ ೧೯೨೪ರವರೆಗೆ ಐದುವರ್ಷಗಳ ಕಾಲ ಭಾರತೀಯ ಪುರಾತತ್ವ ಇಲಾಖೆಯ ಶಾಸನವಿಭಾಗದಲ್ಲಿ ಕಾರ್ಯ ನಿರ್ವಹಿಸಿದರು. ಅವರನ್ನು ಶಾಸನತಜ್ಞನನ್ನಾಗಿ ರೂಪಿಸಿದವರು ಹೊಸಕೋಟೆ ಕೃಷ್ಣಶಾಸ್ತ್ರಿಗಳು. ಆಗ ಗೆಳೆಯರಾಗಿ ದೊರೆತವರು ಸಿ.ಆರ್. ಕೃಷ್ಣಮಾಚಾರ್ಯರು. ತಿ.ತಾ. ಶರ್ಮರ ತಾತ ರಾಜಗೋಪಾಲಾಚಾರ್ಯರು ಬಿ.ಎಲ್. ರೈಸ್ ಮತ್ತು ಹುಲ್ಷ್ ಅವರಿಗೆ ಆಪ್ತರಾಗಿದ್ದವರು. ಅವರೊಡನೆ ಚರ್ಚೆ ನಡೆಸುವಷ್ಟು ಸ್ನೇಹ ಪಡೆದಿದ್ದರು. ಅದೆಲ್ಲವನ್ನೂ ನೆನಪಿಸುತ್ತಾ ಶರ್ಮರಿಗೆ ಸಿಂಹಾಚಲದಲ್ಲಿ ಕೃಷ್ಣಶಾಸ್ತ್ರಿಗಳು ಶಾಸನಗಳನ್ನೋದುವುದನ್ನು ಕಲಿಸಿದರು. ಆ ಐದು ವರ್ಷಗಳಲ್ಲಿ ಶರ್ಮರು ಶಾಸನಶಾಸ್ತ್ರ ಇಲಾಖೆಯಲ್ಲಿ ಪಡೆದ ಅನುಭವವನ್ನು ಜೀವಮಾನದುದ್ದಕ್ಕೂ ಬಳಸಿಕೊಂಡರು ಮತ್ತು ಇತರರಿಗೆ ಸಂತೋಷದಿಂದ ಹಂಚಿದರು.

ಮನೆ ಮಾತು ತಮಿಳು, ಊರಿನ ಮಾತು ತೆಲುಗು, ಪ್ರದೇಶದ ಮಾತು ಕನ್ನಡ ಮತ್ತು ಸಾಂಪ್ರದಾಯಿಕವಾಗಿ ಮನೆತನದ ಹಿರಿಯರಿಂದ ಕಲಿತ ಸಂಸ್ಕೃತ, ಆಗಿನ ಕಾಲಕ್ಕೆ ಆಧುನಿಕವೆನಿಸಿದ್ದ ಶಿಕ್ಷಣದ ಮೂಲಕ ಕಲಿತ ಇಂಗ್ಲಿಷ್-ಹೀಗಾಗಿ ತಿ.ತಾ. ಶರ್ಮರಿಗೆ ಐದು ಭಾಷೆಗಳು ಚೆನ್ನಾಗಿ ತಿಳಿದಿದ್ದವು. ಆದರೆ ಅವರ ಮೊದಲ ಪ್ರೀತಿ ಕನ್ನಡಕ್ಕೆ. ಉಳಿದ ಭಾಷೆಗಳು ವಾಡಿಕೆಯಂತೆ ಬಳಕೆ, ಅಷ್ಟೆ.

---

* ಸ್ವಸ್ತಿಶ್ರೀ ಸ್ಕಂದ, ಅರಸಿನ ಕುಂಟೆ, ನೆಲಮಂಗಲ ತಾ॥ ಬೆಂಗಳೂರು ಗ್ರಾಮಾಂತರ ಜಿಲ್ಲೆ - ೫೬೨೧ ೧೨೩

ಶಾಸನ ಇಲಾಖೆಗೆ ಸೇರಿದ ಕೆಲವೇ ದಿನಗಳಲ್ಲಿ ಸಿಂಹಾಚಲದಲ್ಲಿ ಹೊಸಕೋಟೆ ಕೃಷ್ಣಶಾಸ್ತ್ರಿಗಳ ಗುರುತನದಲ್ಲಿ ಶಾಸನಗಳನ್ನೋದುವುದನ್ನು ಕಲಿತ ತಿ.ತಾ ಶರ್ಮರು, ನಂತರ ಆಂಧ್ರದ ಅಮರಾವತಿಯಲ್ಲೂ ಕ್ಷೇತ್ರಕಾರ್ಯ ಮಾಡಿ ತಮ್ಮ ಜ್ಞಾನದ ಹಸಿವನ್ನು ಹಿಂಗಿಸಿಕೊಳ್ಳಲು ಪ್ರಯತ್ನಿಸಿದರು. ಆವರೆಗೆ ಕೇವಲ ಪಡಿಮೂಡಿದ ಅಚ್ಚುಗಳಲ್ಲೇ ಉಳಿದಿದ್ದ ಎಷ್ಟೋ ಕನ್ನಡ/ತೆಲುಗು ಶಾಸನಗಳನ್ನು ಶರ್ಮರು ಓದಿದರು; ಅರ್ಥೈಸಿದರು. ಶಾಸನ ಇಲಾಖೆಯಲ್ಲಿ ಇದ್ದಾಗಲೇ ಅವರು ಕನ್ನಡದಲ್ಲಿ ಸಿದ್ಧಪಡಿಸಿದ 'ಶಿಲಾಶಾಸನಗಳಲ್ಲಿ ಕಂಡ ಕರ್ನಾಟಕ ಕವಿಗಳು: ಭಾಗ-೧' ಇಲಾಖೆಯಿಂದಲೇ ಪ್ರಕಟವಾಯಿತು ಅದೊಂದು ಮಹತ್ಸಾಧನೆ. ಆ ಗ್ರಂಥಕ್ಕೆ ಮುನ್ನುಡಿ ಬರೆದವರು ಹೊಸಕೋಟೆಕೃಷ್ಣಶಾಸ್ತ್ರಿಗಳು. ಶರ್ಮರು ಕನ್ನಡದಲ್ಲಿ ಬರೆದಿದ್ದ, ಶಿಲಾಶಾಸನಗಳಲ್ಲಿ ಕಂಡ ಕರ್ನಾಟಕ ಕವಿಗಳು, ಅದು ಕನ್ನಡದಲ್ಲಿದೆ ಎಂಬ ಕಾರಣದಿಂದಾಗಿಯೇ ಪ್ರಕಟಣೆಗೆ ಮೊದಲು ಆಗಿನ ನಿರ್ದೇಶಕ ಜಾನ್ ಮಾರ್ಷಲ್ ಒಪ್ಪಲಿಲ್ಲ . ಆ ಕೃತಿ ಪ್ರಕಟವಾಗಲೇ ಬೇಕೆಂಬ ಆಸೆ ಕೃಷ್ಣ ಶಾಸ್ತ್ರಿಗಳದು. ತಿ.ತಾ.ಶರ್ಮರು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡಲು ಒಪ್ಪಲಿಲ್ಲ. ಕೊನೆಗೆ ಜಾನ್ ಮಾರ್ಷಲ್ ಸೋತರು. 'ಮೆಮಾಯರ್ಸ್ ಆಫ್‌ದಿ ಇಂಪೀರಿಯಲ್ ಆರ್ಕಿಯಲಾಜಿಕಲ್ ಸೀರೀಸ್'ನ ೧೩ನೆಯ ಕೃತಿಯಾಗಿ ಶರ್ಮರ ಕನ್ನಡದ **'ಶಿಲಾಶಾಸನಗಳಲ್ಲಿ ಕಂಡ ಕರ್ನಾಟಕ ಕವಿಗಳು : ಭಾಗ-೧'** ಪ್ರಕಟವಾಯಿತು. ಆ ಮಾಲಿಕೆಯಲ್ಲಿ ದೇಶಭಾಷೆಗಳಲ್ಲಿ ಪ್ರಕಟವಾದ ಮೊದಲ ಗ್ರಂಥ ಇದಾಯಿತು.

ಶರ್ಮರು 'ಶಿಲಾಶಾಸನಗಳಲ್ಲಿ ಕಂಡ ಕರ್ನಾಟಕ ಕವಿಗಳು: ಭಾಗ-೨'ನ್ನೂ ಸಿದ್ಧಪಡಿಸಿದ್ದಾರೆ. ಅದರಲ್ಲಿ ೩೧ ಕವಿಗಳ ಪ್ರಸ್ತಾಪವಿದೆ. ಆದರೆ ಆ ಕೃತಿ ಪ್ರಕಟಣೆಯ ಬೆಳಕು ಕಾಣಲಿಲ್ಲ.

ಶರ್ಮರು ಸಂಶೋಧಕರಾಗಿ ಶಾಸನ, ಇತಿಹಾಸ ಮತ್ತು ಸಾಹಿತ್ಯ ವಿಷಯಗಳನ್ನು ಕುರಿತು ನೂರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ ಮತ್ತು ಅವುಗಳು ಹೆಚ್ಚಾಗಿ ಕನ್ನಡ ಸಾಹಿತ್ಯ ಪರಿಷತ್ತಿನ **'ಕನ್ನಡ ನುಡಿ'** ಪತ್ರಿಕೆಯಲ್ಲಿ ಪ್ರಕಟವಾಗಿವೆ. ೩೦-೧೦-೧೯೬೭ರಿಂದ ೧೬-೧-೧೯೭೧ರ ವರೆಗೆ ಕನ್ನಡ ನಾಡು, ನುಡಿ, ಭಾಷೆ ಮತ್ತು ಸಂಸ್ಕೃತಿ ಎಂಬ ಶೀರ್ಷಿಕೆಯಲ್ಲಿ ೪೧ ಲೇಖನಗಳು, ೧-೪-೧೯೭೧ರಿಂದ ೧೬-೯-೧೯೭೧ರ ವರೆಗೆ **'ಇತಿಹಾಸ ಚಿಂತನ'** ಶೀರ್ಷಿಕೆಯಲ್ಲಿ ೭ ಲೇಖನಗಳು ಮತ್ತು 'ಶಿಲಾಶಾಸನಗಳ ಅವಲೋಕನ ಎಂಬ ಶೀರ್ಷಿಕೆಯಲ್ಲಿ ೧-೧೧-೧೯೭೨ ರಿಂದ ೧೬-೧೦-೧೯೭೩ರ ವರೆಗೆ ೨೪ ಲೇಖನಗಳು 'ಕನ್ನಡ ನುಡಿ'ಯಲ್ಲಿ ಪ್ರಕಟವಾಗಿವೆ. ಮೇಲ್ಕಂಡ ೭೨ ಲೇಖನಗಳಲ್ಲಿ ಆಯ್ದ ಕೆಲವನ್ನು 'ವಿಚಾರ ಕರ್ನಾಟಕ' ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಲಾಗಿದೆ. ತಜ್ಞರ ಮೂಲಕ ಲಿಪಿಶಾಸ್ತ್ರವನ್ನು ಕಲಿತು, ಆ ಬಗ್ಗೆ ಸತತ ಸಂಪರ್ಕವನ್ನು ಉಳಿಸಿಕೊಂಡಿದ್ದ ಶರ್ಮರು ಹಲವಾರು ಹೊಸ ಶಾಸನಗಳನ್ನು ಪತ್ತೆ ಮಾಡಿ ಪ್ರಕಟಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಅವರು ಶಾಸನಗಳ ಮೂಲಕ ವಿವಿಧ ವಿಷಯಗಳನ್ನು ಕುರಿತಂತೆ ಮಾಡಿರುವ ವಿಮರ್ಶಾತ್ಮಕ ಅಧ್ಯಯನ, ವಿಶೇಷ ಗಮನ ಸೆಳೆಯುತ್ತದೆ; ಮಾತ್ರವಲ್ಲ ಶರ್ಮರ ಬಹುಶ್ರುತತ್ವದ ಪರಿಚಯ ಮಾಡುತ್ತದೆ. ಶರ್ಮರಿಗೆ ಪೂರ್ವಾರ್ಜಿತವಾಗಿ ಸಂಸ್ಕೃತವೂ, ಸ್ವಯಾರ್ಜಿತವಾಗಿ ಕನ್ನಡವೂ ಚೆನ್ನಾಗಿ ತಿಳಿದಿದ್ದವು. ಶಾಸನಗಳಲ್ಲಿ ಕನ್ನಡ ವಾಕ್ಯರಚನೆ ಹೇಗಿರುತ್ತದೆ, ಶಾಸನಗಳಲ್ಲಿರುವ ಗದ್ಯದ ಸೊಗಸೇನು? ಶಾಸನಗಳ ಮೂಲಕ ಕನ್ನಡ ಮತ್ತು ಸಂಸ್ಕೃತ ಬಾಂಧವ್ಯವನ್ನು ಹೇಗೆ ಗ್ರಹಿಸಬಹುದು ಇತ್ಯಾದಿ ಅನೇಕ ವಿಷಯಗಳು ಶರ್ಮರ ಲೇಖನಗಳಲ್ಲಿ ಖಚಿತವಾಗಿ ಅಭಿವ್ಯಕ್ತಗೊಂಡಿವೆ. ಈಗಾಗಲೇ ತಿಳಿಸಿರುವಂತೆ ಶರ್ಮರಿಗೆ ಕನ್ನಡವಲ್ಲದೆ ತೆಲುಗು, ತಮಿಳು, ಮತ್ತು ಸಂಸ್ಕೃತ ಭಾಷೆಗಳ ಬಗೆಗೂ ಚೆನ್ನಾದ ಜ್ಞಾನವಿದ್ದುದರಿಂದ ಶಾಸನಗಳ ಒಳ-ಹೊರಗನ್ನು ಸುಲಭವಾಗಿ ಪ್ರವೇಶಿಸಿ ಖಚಿತವಾದ ವಿಷಯಗಳನ್ನು ಬೆಳಕಿಗೆ ತರುವ ಅದ್ಭುತ ಶಕ್ತಿಯಿತ್ತು. ಆದರೆ ಶರ್ಮರ ಮೊದಲ ಪ್ರೀತಿ ಕನ್ನಡವೇ ಎಂಬುದನ್ನು ಅವರ ಅನೇಕ ಲೇಖನಗಳ ಮೂಲಕ ತಿಳಿಯಬಹುದು. ಶಾಸನಗಳಲ್ಲಿ ಅಚ್ಚ ಕನ್ನಡದ ವ್ಯಕ್ತಿನಾಮಗಳನ್ನು ಗುರುತಿಸುವುದರಲ್ಲಿ ಇದ್ದ ವಿಶೇಷ ಆಸಕ್ತಿಯನ್ನು ಅವರು ಹೊನ್ನೂರಿನ ಶಾಸನದ ಬಗೆಗೆ ಬರೆದಿರುವ ಟಿಪ್ಪಣಿಯಿಂದ ಗ್ರಹಿಸಬಹುದಾಗಿದೆ (ವಿಚಾರ ಕರ್ನಾಟಕ, ಪು. ೩೧) ಆ ಶಾಸನದಲ್ಲಿ ಶರ್ಮರು ಗುರುತಿಸಿರುವ ಕನ್ನಡ ಹೆಸರುಗಳಲ್ಲಿ ಕೆಲವು ಕೆಳಗಿನಂತಿವೆ: ಗಣಜ್ಜ, ಬಾಳುಬ್ಬ, ಕೊಣಬ್ಬ, ನಾರಣಬ್ಬ, ನಾಗಬ್ಬ, ರೇವಬ್ಬ, ಇತ್ಯಾದಿ.

ಶರ್ಮಾಜಿ ಅವರಿಗೆ ಸ್ಥಳನಾಮಗಳ ಬಗೆಗೂ ವಿಶೇಷವಾದ ಆಸಕ್ತಿ ಇತ್ತು. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಕೆಲವು ಗ್ರಾಮಗಳನ್ನು ಅವರು ವರ್ಗೀಕರಿಸಿರುವುದು ಅತ್ಯಂತ ಕುತೂಹಲ ಕಾರಿ ಮಾತ್ರವಲ್ಲ, ಬೋಧಪ್ರದವೂ ಆಗಿದೆ. ಮೃಗ, ಪಕ್ಷಿ, ಕ್ರಿಮಿ-ಕೀಟಗಳ ಹೆಸರಿನ ಊರುಗಳದೇ ಒಂದು ಪಟ್ಟಿಕೊಟ್ಟಿದ್ದಾರೆ (ಹುಲಿಕಲ್ಲು, ಮಂಗನ ಹಳ್ಳಿ, ನರೀಪುರ, ಕೋಗಿಲು, ಚೇಳುಕೆರೆ, ಹುಳವಾಡಿ, ಗೆದ್ದಲಹಳ್ಳಿ ಇತ್ಯಾದಿ)- ಹೀಗೆಯೇ ಗಿಡ, ಬಳ್ಳಿ, ಹಣ್ಣು, ಕಾಯಿ ವರ್ಗದ ಊರುಗಳು (ಗೇರಹಳ್ಳಿ, ಶೀಗೆಹಳ್ಳಿ, ಕನ್ನೆಲ್ಲಿ, ಸೋರ್ಹುಣಸೆ, ಹುಳಿಮಾವು, ಹೊರಮಾವು, ಹೆಸರಘಟ್ಟ, ಸಂಪಿಗೆ ಹಳ್ಳಿ ಇತ್ಯಾದಿ). ಕೆಲವು ವಿಚಿತ್ರವಾದರೂ ಆಕರ್ಷಕವಾದ ಊರುಗಳು (ಹಾಡೋ ಸಿದ್ದಾಪುರ, ಕೊಡತಿ, ಕೈತತ್ತಿ, ಕಣ್ಣು ಮಿಟಿಕೆ, ಹುದ್ದಿನಾಣೆ, ಗಲಿಬಿಲಿ ಕೋಟೆ, ಉಪವಾಸಪುರ, ಮುಳ್ಳಹಳ್ಳಿ, ಕೈಲಂಚ, ಗಡಿಬಿಡಿ ಜಂಗಮಹಳ್ಳಿ, ತಿಗಣೆ, ಗಬ್ಬೂರು ಇತ್ಯಾದಿ) ಶರ್ಮರಿಂದ ಗುರುತಿಸಲ್ಪಟ್ಟಿವೆ. ಇವುಗಳ ಬಗೆಗೆ ಸ್ಥಳನಾಮ ಅಧ್ಯಯನ ನಡೆದರೆ ಆಯಾಯಾ ಸ್ಥಳದ ಇತಿಹಾಸವನ್ನು ಪುನಾರಚಿಸಲು ಸಾಧ್ಯವಾಗುವುದು ಅಸಂಭವವಲ್ಲ.

ಸಣ್ಣ ಲೇಖನಗಳ ಮೂಲಕ ಹಿರಿದಾದ ವಿಷಯಗಳನ್ನು ತಿಳಿಸುವ ವಿಶಿಷ್ಟಶಕ್ತಿ ಶರ್ಮಾಜಿ ಅವರಿಗಿತ್ತು. ಒಂದು ಶಾಸನದ ಬಗೆಗಾಗಲೀ, ಒಂದು ಶಿಲ್ಪದ ಬಗೆಗಾಗಲೀ, ಅಥವಾ ಒಂದು ಸಾಹಿತ್ಯದ ವಿಷಯವನ್ನಾಗಲೀ ಶರ್ಮರು ಸಮಾನ ಗೌರವದಿಂದ ಕಾಣುತ್ತಿದ್ದರು. ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದ ಯಾವುದೂ ಅವರಿಗೆ ವರ್ಜ್ಯವಲ್ಲ. ಮಣ್ಣಿನಲ್ಲಿ ಹೊತುಹೋಗಿರುವ ನಾಗರೀಕತೆಯನ್ನು ಉತ್ಖನನಗಳ ಮೂಲಕ ಹೊರಜಗತ್ತಿಗೆ ತೋರಿಸಬೇಕೆಂದು ಸೂಚಿಸುವ ಶರ್ಮರು, ತಕ್ಷಣವೇ ತೆಲುಗು-ಕನ್ನಡ ಬಾಂಧವ್ಯದ ಬಗೆಗೆ ಚರ್ಚಿಸುತ್ತಾರೆ; ಪತ್ರಾಗಾರದ ಪ್ರಯೋಜನ ಪಡೆಯಬೇಕಾದ್ದು ಅತ್ಯಂತ ಅವಶ್ಯಕ ಎನ್ನುತ್ತಲೇ ಕಂಠೀರವ ನರಸರಾಜ ವಿಜಯವನ್ನು ಪರಿಚಯಿಸುತ್ತಾರೆ. ಶರ್ಮಾಜಿ ಅವರು ತಾವು ಆವರೆಗೆ ಪಡೆದಿದ್ದ ಶಾಸನಶಾಸ್ತ್ರದ ವಿಶಿಷ್ಟ ಜ್ಞಾನಸಂಪತ್ತನ್ನು ಓದುಗರಿಗೆ ತುತ್ತುತುತ್ತಾಗಿ ಉಣಬಡಿಸುವ ಪರಿಯೇ ಖುಷಿ ನೀಡುತ್ತದೆ. ಊಟಮಾಡುವವರು ತಮಗಿಷ್ಟ ಬಂದಷ್ಟು ತುತ್ತು ತಿನ್ನಬಹುದು. ಚೆಲ್ಲಿ ಹಾಳುಮಾಡುವಂತಿಲ್ಲ

ಡಾ॥ ರಿತ್ತಿ ಅವರು ಒಂದು ಲೇಖನದಲ್ಲಿ ಕುರುಡಿಯ ಗುಡಿಯೊಂದರ ದುರವಸ್ಥೆಯ ಬಗ್ಗೆ ಪ್ರಸ್ತಾಪಿಸಿರುವುದನ್ನು ಉದಹರಿಸುತ್ತಾ ಶರ್ಮರು ಪುರಾತತ್ತ್ವ ಇಲಾಖೆಯ ಬಗೆಗೆ ಆಗ ವ್ಯಕ್ತಪಡಿಸಿದ್ದ ಅಭಿಪ್ರಾಯವು ಇಂದಿಗೂ ಬೆಲೆಯುಳ್ಳದ್ದಾಗಿದೆ. ಆ ಅಭಿಪ್ರಾಯ ಹೀಗಿದೆ:

"ವಾಸ್ತು ಶಿಲ್ಪ ಕಲಾಖನಿಯೆಂದು ಕೀರ್ತಿಗಳಿಸಿರುವ ನಮ್ಮ ರಾಜ್ಯದಲ್ಲಿ ಅಮೂಲ್ಯ ಪ್ರಾಚೀನ ಐತಿಹಾಸಿಕ-ಕಲಾವಸ್ತುಗಳು ಹೀಗೆ ಹಾಳಾಗುತ್ತಿವೆ. ನಮ್ಮ ರಾಜ್ಯ ಸರಕಾರ ಕೂಡಲೇ 'ಆರ್ಕಿಯಲಾಜಿಕಲ್' ಆಡಳಿತ ಶಾಖೆಯನ್ನು ಸ್ವತಂತ್ರಮಾಡಿ, ಸಕಲಾಂಗ ಸಂಪೂರ್ಣಮಾಡಿ, ಸಾಕಾದಷ್ಟು ಮಂದಿ ನಿಪುಣ ಅಧಿಕಾರಿಗಳನ್ನು ಕೊಟ್ಟೀತೆಂದೂ, ವಾರ್ಷಿಕ ಆಯ-ವ್ಯಯ ಅಂದಾಜಿನಲ್ಲಿ ಈ ಆಡಳಿತಶಾಖೆಗೆ ಕನಿಷ್ಠಪಕ್ಷ ೫ ಲಕ್ಷ ರೂ.ಗಳನ್ನಾದರೂ ಒದಗಿಸೀತೆಂದೂ ನಿರೀಕ್ಷಿಸೋಣ.

ಈಗಿರುವಂತೆ ಈ ಆಡಳಿತಶಾಖೆಯು ಮೈಸೂರು ವಿಶ್ವವಿದ್ಯಾನಿಲಯದ ಒಂದಂಗವಾಗಿದೆ. ಇರಲಿ, ಬಾಧಕವಿಲ್ಲ, ಈ ಅಂಗದ ಬೆಲೆಯನ್ನರಿತು ವಿಶ್ವವಿದ್ಯಾನಿಲಯವದನ್ನು ಬಲವಪಡಿಸಬೇಕಾದ ಅವಶ್ಯಕತೆ ಇದೆ. ನೂರಾರಲ್ಲ ಸಾವಿರಾರು ಪ್ರಾಚೀನ ದೇವಾಲಯಗಳೂ, ಶಿಲಾಶಾಸನಗಳೂ, ಶಿಲಾಮೂರ್ತಿಗಳೂ ಹಾಳಾಗುತ್ತಿವೆ. ಅವುಗಳ ಸಂರಕ್ಷಣೆ ಅತ್ಯಗತ್ಯ. ಹಾಗೆಯೇ ಭೂಶೋಧನೆಗಾಗಿ ಹತ್ತಾರು ಪ್ರಾಚೀನ ಐತಿಹಾಸಿಕ ಕ್ಷೇತ್ರಗಳು ಅರ್ಧ ಶತಮಾನದಿಂದ ಕಾದಿವೆ. ಈ ಕೆಲಸ ನಡೆಯದೆ ಇದ್ದರೆ ಸತ್ಯವೂ ಪೂರ್ಣವೂ ಆದ, ಕರ್ನಾಟಕ ಸರ್ವತೋಮುಖವಾದ ಇತಿಹಾಸ ಬರೆಯಲು ಸಾಧ್ಯವಿಲ್ಲ" (ವಿಚಾರ ಕರ್ನಾಟಕ. ಪು. ೮೩,೮೪.)

ಶರ್ಮಾಜಿ ಅವರು ಆಶಿಸಿದ್ದಂತೆ ರಾಜ್ಯ ಸರಕಾರದ ಪುರಾತತ್ತ್ವ ಇಲಾಖೆಯು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಗೊಂಡು ಸ್ವತಂತ್ರ ಇಲಾಖೆಯಾಗಿದೆ; ಆ ಇಲಾಖೆಯು ತನಗೆ ಸಾಧ್ಯವಿರುವ ಮಟ್ಟಿಗೂ ಶರ್ಮಾಜಿ ಅವರು ನಿರೀಕ್ಷಿಸಿದ್ದ ಕೆಲಸಗಳನ್ನು ಮಾಡುತ್ತಿದೆ.

ಇಂಡಿಯನ್ ಆಂಟಿಕ್ವೆರಿ (ಸಂ. ೨೨)ಯ ಒಂದು ಲೇಖನದಲ್ಲಿ ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿ ಕುಂತಲದೇಶದ ಸೀಮಾರೇಖೆಗಳು ಉತ್ತರಕ್ಕೆ ನರ್ಮದಾ ನದಿ, ದಕ್ಷಿಣಕ್ಕೆ ತುಂಗಭದ್ರಾ, ಪಶ್ಚಿಮಕ್ಕೆ ಅರಬ್ಬೀ ಸಮುದ್ರ ಮತ್ತು ಪೂರ್ವಕ್ಕೆ ಗೋದಾವರೀ ನದಿ ಮತ್ತು ಪೂರ್ವ ಘಟ್ಟಗಳು ಎಂದು ಪ್ರಸ್ತಾಪಿಸಿರುವುದನ್ನು ಉಲ್ಲೇಖಿಸುತ್ತಾ, ಕವಿರಾಜಮಾರ್ಗಕಾರನು ನೀಡಿರುವ ಕನ್ನಡ ನಾಡಿನ ಗಡಿ ಮತ್ತು ಮೇಲೆ ಶಾಸನದ ಮೂಲಕ ತಿಳಿದು ಬಂದ ಗಡಿಗಳನ್ನು ಆಧರಿಸಿ ಕರ್ನಾಟಕದ ಒಂದು ನಕ್ಷೆಯನ್ನು ರಚಿಸಬಾರದೆ ಎಂದು ಹಂಬಲಿಸುತ್ತಾರೆ. ಇತಿಹಾಸದ ಪುನಾರಚನೆಗೆ ಶಾಸನಗಳ ಸಮರ್ಪಕ ಬಳಕೆ ಆಗುತ್ತಿಲ್ಲ ಎಂಬ ವಿಷಾದ ಶರ್ಮರಿಗಿದ್ದಂತೆ ತೋರುತ್ತದೆ.

ಸಾವಿರಾರು ಕನ್ನಡ ಮತ್ತು ತೆಲುಗು ಶಾಸನಗಳನ್ನು ಕಂಡಿದ್ದು ಓದಿದ್ದು ಶರ್ಮರಿಗೆ ಕನ್ನಡ ಮತ್ತು ತೆಲುಗು ಲಿಪಿಯಲ್ಲಿ ವ್ಯತ್ಯಾಸವಿಲ್ಲ ಎನಿಸಿದ್ದು ಸಹಜವಾಗಿಯೇ ಇದೆ. ೧೦-೧೧ನೆಯ ಶತಮಾನದವರೆಗಂತೂ ಈ ಎರಡು ಲಿಪಿಗಳಲ್ಲಿ ಅಂತಹ ವಿಶೇಷವಾದ ವ್ಯತ್ಯಾಸವೇನಿರಲಿಲ್ಲ ಎಂದು ಲಿಪಿಶಾಸ್ತ್ರ ಬಲ್ಲ ಎಲ್ಲರೂ ಒಪ್ಪುತ್ತಾರೆ.

ಶಾಸನಶಾಸ್ತ್ರಕ್ಕೆ ಸಂಬಂಧಿಸಿದಂತೆ ಏನೇ ಅಧ್ಯಯನ ಆಗುತ್ತಿದ್ದರೂ ಆ ಬಗ್ಗೆ ತಿಳುವಳಿಕೆ ಹೊಂದಿರುತ್ತಿದ್ದ ಶರ್ಮರು, ಕರ್ನಾಟಕದ ಮಹತ್ವವನ್ನು ಕುಗ್ಗಿಸುವ ಯಾವುದೇ ವಿಷಯ ಪ್ರಕಟವಾದರೂ ತಕ್ಷಣ ಪ್ರತಿಕ್ರಿಯಿಸುತ್ತಿದ್ದರು. ಅದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ. ಡಾ॥ಗುಪ್ತೆ ಅವರ ಪುಸ್ತಕವೊಂದನ್ನು ವಿಮರ್ಶಿಸಿದ ಎನ್.ಎಸ್. ರಾಮಸ್ವಾಮಿ ಎನ್ನುವವರು 'ಪಟ್ಟದಕಲ್ಲಿನ ವಿರೂಪಾಕ್ಷದೇವಾಲಯವನ್ನು ದಕ್ಷಿಣ ದೇಶದ ಶಿಲ್ಪಿಗಳು ನಿರ್ಮಿಸಿದರು' ಎಂಬ ಅಭಿಪ್ರಾಯವನ್ನು ೨೧-೯-೧೯೬೯ರ ದಿ ಸಂಡೇ ಸ್ಟ್ಯಾಂಡರ್ಡ್‌ನಲ್ಲಿ ಪ್ರಕಟಿಸಿದ್ದರು. ಆ ಬಗ್ಗೆ ಶರ್ಮರ ಪ್ರತಿಕ್ರಿಯೆ ತೀವ್ರವಾಗಿತ್ತು ಮತ್ತು ಅರ್ಥಪೂರ್ಣವಾಗಿತ್ತು. ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಲ್ಲೇ ಇರುವ ಕನ್ನಡ ಶಾಸನವೊಂದರ ಪ್ರಕಾರ ದೇವಾಲಯದ ದಕ್ಷಿಣಭಾಗವನ್ನು ನಿರ್ಮಿಸಿದವನು ರೇವಡಿಒವಜ್ಜ. (**ಸ್ವಸ್ತಿ ಶ್ರೀ ಶಿಲೆಮುದ್ದರ ಮರ್ಮಾನ್ ಸರ್ವ್ವಸಿದ್ಧಿ ಆಚಾಜ್ಯರ ಚಟ್ಟರ ರೇವಡಿ ಒವಜ್ಜರ್ ತೆಂಕಣ ದಿಶೆ ಮಾಡಿದೋರ್**). ಪಟ್ಟದ ಕಲ್ಲಿನಲ್ಲಿ ಪಲ್ಲವರ ಪ್ರತಿಷ್ಠೆ ಮಾಡಲು ತೆಂಕಣ 'ದಿಶೆ'ಯನ್ನು ತೆಂಕಣ ದೇಶ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಇಂತಹ ಮೊಂಡು ನಿರ್ಣಯಗಳು ಇತಿಹಾಸವನ್ನು ಹಾಳು ಮಾಡುತ್ತವೆ. ಹೀಗೆ ಇತಿಹಾಸವನ್ನು ತಿರುಚುವ ಕೆಲಸ ಶರ್ಮರಿಗೆ ಪ್ರಿಯ ವಾಗಿರಲಿಲ್ಲ. ನೆಲಮಂಗಲದ ಸಮೀಪ ಬಿನ್ನಮಂಗಲದ ಮುಕ್ತಿನಾಥೇಶ್ವರ ದೇವಾಲಯವನ್ನು ಅವರು

ಚೋಳರಕಾಲದ ನಿರ್ಮಾಣವೆಂದು ಒಪ್ಪಿಕೊಂಡಿದ್ದರು. ಶರ್ಮರು ಕನ್ನಡದ ಅಭಿಮಾನಿಯಾಗಿದ್ದರೂ, ಆ ಕಾರಣಕ್ಕೆ ಇತಿಹಾಸವನ್ನು ತಿರುಚುವ ಮತ್ತು ತಮ್ಮ ಮೂಗಿನ ನೇರಕ್ಕೆ ಹೇಳುವ ಕೆಟ್ಟ ಪ್ರಯತ್ನಗಳನ್ನು ಎಂದೂ ಮಾಡಿದವರಲ್ಲ.

ಓದುಗರಿಗೆ ಇತಿಹಾಸದ ವಿಷಯಗಳನ್ನು ಆರಿಸಿ ಆರಿಸಿ ಹೇಳಿ, ಅವರಲ್ಲಿ ಇತಿಹಾಸದ ಬಗೆಗೆ ಪ್ರೀತಿ, ಆಸಕ್ತಿ ಹುಟ್ಟಲು ಶರ್ಮರು ಕಾರಣರಾಗಿದ್ದಾರೆ. ಆ ನಿಟ್ಟಿನಲ್ಲಿ ಶರ್ಮರಿಗೆ ಶಾಸನಗಳ ಜೊತೆಗೆ ಇತಿಹಾಸಕ್ಕೆ ಸಂಬಂಧಿಸಿದ ಇತರ ವಿಷಯಗಳೂ ಮುಖ್ಯವೆನಿಸಿವೆ. ಅದಕ್ಕೆ ಎರಡು ಉದಾಹರಣೆಗಳನ್ನು ನೀಡಿದರೆ ಅಪ್ರಸ್ತುತವಾಗಲಾರದು. ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿ ಶಿವಾಜಿಯ ತಂದೆ ಷಹಜಿಯ ಸಮಾಧಿ ಇದೆ ಎಂದು ಇತಿಹಾಸಕಾರರು ತಿಳಿದಿದ್ದಾರೆ. ಆ ಊರಿನ ಸ್ಥಳಪರೀಕ್ಷೆ ಮಾಡಿದ ಡಾ॥ ಎಂ.ಎಚ್.ಕೃಷ್ಣರು ತಮ್ಮ ವರದಿಯಲ್ಲಿ ದಾಖಲಿಸಿರುವ, ಆ ಊರಿನಲ್ಲಿ ನಾಡಿಗ ಗಂಗಣ್ಣನವರ ಬಳಿ ಇತ್ತು ಎನ್ನಲಾದ ಒಂದು ಹಸ್ತಲಿಖಿತ ಪ್ರತಿಯನ್ನು ಕೋ- ಆಪರೇಟಿವ್ ಇನ್ಸ್‌ಪೆಕ್ಟರೊಬ್ಬರು ಪಡೆದು ಅದನ್ನು ಹಿಂದಿರುಗಿಸದಿದ್ದುದನ್ನು ನೆನಪಿಗೆತಂದುಕೊಳ್ಳುತ್ತಾ ಹೀಗೆ ಬರೆಯುತ್ತಾರೆ: 'ಈ ಸಂದರ್ಭದಲ್ಲಿ ಒಂದುಪ್ರಾರ್ಥನೆ ವಾಚಕರಲ್ಲಿ. ನಾಡಿಗ ಗಂಗಣ್ಣನವರಿಂದ ಹಸ್ತಪ್ರತಿಗ್ರಂಥವನ್ನೊಯ್ದ ಆ 'ಕೋ-ಆಪರೇಟಿವ್ ಇನ್ಸ್‌ಪೆಕ್ಟರ್' ಜೀವಿಸಿದ್ದರೆ ಅವರಾಗಲಿ ಒಂದುವೇಳೆ ಅವರಿಲ್ಲವಾದರೆ ಅವರ ಬಂಧುಬಳಗದವರು ಯಾರಾದರೂ ಇದ್ದರೆ ಅವರಾಗಲಿ. ಈ ಗ್ರಂಥ ಕುರಿತು ಕೊಂಚ ಶೋಧನೆ ನಡೆಸಿ, ಆ ವಿಚಾರವನ್ನು ಕುರಿತು ಕನ್ನಡ ಸಾಹಿತ್ಯ ಪರಿಷತ್ತಿಗೆ ತಿಳಿಸಿದರೆ ಮಹೋಪಕಾರ ಮಾಡಿದ ಹಾಗಾಗುತ್ತದೆ' (ವಿಚಾರ ಕರ್ನಾಟಕ, ೧೮೫). ಒಂದು ಹಸ್ತಪ್ರತಿಯ ಶೋಧನೆಗೆ ಶರ್ಮರಿಗಿದ್ದ ಕಳಕಳಿ ಈ ಮಾತುಗಳಲ್ಲಿ ವ್ಯಕ್ತವಾಗಿವೆ. ಅಂತೆಯೇ ಶರ್ಮರಿಗೆ ವಾಸ್ತು ಮತ್ತು ಶಿಲ್ಪಗಳ ಬಗೆಗೂ ಅತೀವ ಕಾಳಜಿ. ಹಳೆಯಬೀಡಿನ ದೇವಾಲಯದ ಬಗೆಗೆ ಫರ್ಗ್ಯೂಸನ್ ಬರೆದಿದ್ದ ಒಂದು ಮಾತನ್ನು ಶರ್ಮರು ನೆನಪಿಗೆ ತಂದುಕೊಳ್ಳುತ್ತಾರೆ. ಅದು ಹಳೇಬೀಡಿನ ಹೊಯ್ಸಳೇಶ್ವರನ ದೇವಾಲಯದ ವಿಮಾನ ಭಾಗದ ಗೋಪುರದಲ್ಲಿ ಬೆಳೆದಿದ್ದ ಅವಳಿ ಗಿಡದ ಬಗೆ ಫರ್ಗ್ಯೂಸನ್ ಆಡಿದ್ದ ಮಾತು: 'ಕೂಡಲೇ ಇದನ್ನು ಕಡಿದು ನಿರ್ಮೂಲ ಮಾಡಬೇಕು. ಇಲ್ಲವಾದರೆ ದೇವಾಲಯ ಉಳಿಯುವುದಿಲ್ಲ'. ಎಂತಹ ಎಚ್ಚರಿಕೆ! ಶರ್ಮರು ಬರೆಯುತ್ತಾರೆ! 'ಯಾರೂ ಅವನ ಮಾತಿಗೆ ಕಿವಿಗೊಡಲಿಲ್ಲ. ಗಿಡ ಬೆಳೆಯುತ್ತ, ಕಲ್ಲುಗಳು ಉರುಳ ಲಾರಂಭಿಸಿದುವು., ಬಿದ್ದಬಿದ್ದ ಹಾಗೆ ಆ ಶಿಲ್ಪಕರ್ಮದ ಕಲ್ಲುಗಳನ್ನು ಊರಿನ ಮಹಾಜನರು ಮನೆಗಳಿಗೆ ಸಾಗಿಸಿ, ಒರಳು ಕಲ್ಲುಗಳನ್ನು, ಬೀಸುವ ಕಲ್ಲುಗಳನ್ನಾಗಿ ಕಾರ ಅರೆವ ಕಲ್ಲುಗಳನ್ನಾಗಿ, ಮಾಡಿಕೊಳ್ಳಲಾರಂಭಿಸಿದರು!' -ನೋವು ತುಂಬಿದ ಕಟುವಾದ ಮಾತು. ಅದಕ್ಕೆ ಬಹಳ ಅರ್ಥವಿದೆ.

ಒಂಬತ್ತು ಮತ್ತು ಹತ್ತನೆಯ ಶತಮಾನಗಳಲ್ಲಿ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಅತಿಯಾಗಿತ್ತು ಎಂಬುದನ್ನು ಶರ್ಮರು ಉದಾಹರಣೆಗಳ ಸಹಿತ ತಿಳಿಸುತ್ತಾರೆ. ಹೂವಿನ ಹಿಪ್ಪರಗಿ (ಬಿಜಾಪುರ ಜಿಲ್ಲೆ) ಮತ್ತು ಸೊರಟೂರು (ಧಾರವಾಡ ಜಿಲ್ಲೆ) ಶಾಸನಗಳ ನೆರವಿನಿಂದ ಶರ್ಮರು ತಮ್ಮ ಅಭಿಪ್ರಾಯಕ್ಕೆ ಪುಷ್ಟಿ ಪಡೆದಿದ್ದಾರೆ. ಅದೇ ಶಾಸನಗಳಿಂದ ಶರ್ಮರು ಕನ್ನಡದಲ್ಲಿ ಗದ್ಯ ಬೆಳೆದು ಬಂದಿರುವ ಕ್ರಮವನ್ನು ಖಚಿತ ಪಡಿಸಿದ್ದಾರೆ.

ಶರ್ಮರು ಬೆಳಕಿಗೆ ತಂದ ಜಲಸೂತ್ರದ ಸಿಂಗಾಯಭಟ್ಟನನ್ನು ಶಾಸನಗಳ ಬಗೆಗೆ ಆಸಕ್ತಿಹೊಂದಿರುವವರು ಮರೆಯುವುದಿಲ್ಲ. ೧೪ನೆಯ ಶತಮಾನದಲ್ಲಿ ಕಾಲುವೆಯೊಂದನ್ನು ನಿರ್ಮಿಸಿದ ಕೀರ್ತಿ ಸಿಂಗಾಯಭಟ್ಟನದು. ಸಿಂಗಾಯಭಟ್ಟನನ್ನು ಉಲ್ಲೇಖಿಸುವ ಶಾಸನ ಪಾಠದ ಸ್ಥೂಲಪರಿಚಯ ಹೀಗಿದೆ. *'ಶ್ರೀ ಪ್ರತಾಪ ಬುಕ್ಕರಾಯರು ಪೆನುಗೊಂಡ ಪಟ್ಟಣದಲ್ಲಿ ಸುಖರಾಜ್ಯಂ ಗೆಯುತ್ತಲು ಎಲ್ಲಾ ಪ್ರಜೆಗಳೂ ಸುಖದಲಿ ಇರಬೇಕಾಗಿ ಜೀವಂಗಳಿಗೆಲ್ಲಾ ಉದಕವೇ ಪ್ರಾಣವಾಗಿ ಪೆನುಗೊಂಡೆಗೆ ಹೆನ್ನಯ ನದಿಯನೂ ತರಬೇಕೆಂದು ಶ್ರೀ ವೀರಪ್ರತಾಪ ಬುಕ್ಕರಾಯ ಚಾವಡಿ ಒಳಗೆ ದಶವಿದ್ಯಾಚಕ್ರವರ್ತಿ ಜಲಸೂತ್ರದ ಸಿಂಗಾಯಭಟ್ಟನಿಗೆ ನಿರೂಪವಕೊಟ್ಟು....... ಆ ಸಿಂಗಾಯಭಟ್ಟನು ಆ ಕಾಲುವೆಯಂ ಸಿರುವರದ ಕೆರೆಗೆ ತಂದು ಆ ಕಾಲುವೆಯ ಹೆಸರನೂ ಪ್ರತಾಪಬುಕ್ಕರಾಯಮಣ್ಡಲದ ಕಾಲುವೆಯಾಗಿ ಮಾಡಿಸಿ ಶಾಸನವನೂ ಬರಸಿದನೂ..* ಅದೇ ಶಾಸನದಲ್ಲಿ ಸಿಂಗಯಭಟ್ಟನನ್ನು ಹೀಗೆ ಹೊಗಳಲಾಗಿದೆ.

'ಜಲಸೂತ್ರ ಸ್ವರಶಾಸ್ತ್ರೇ
ರಸವೈದ್ಯ ಸತ್ಯ ಭಾಷಾಯಾಂ
ರುದ್ರಯ ಸಿಂಗರಿ ಭವತಃ
ಸದೃಶಃ ಕೋವಾಮಹೀತಲೇ ಶೂರಃ'

ಸಿಂಗಯಭಟ್ಟನನ್ನು ಪರಿಚಯಿಸಿದ ಶರ್ಮರು ಹಳೇಬೀಡು ದೇವಾಲಯದ ಕೆಲವು ಶಿಲ್ಪಿಗಳ ಹೆಸರನ್ನು ಗುರುತಿಸಿದ್ದಾರೆ. ಇದೇನು ದೊಡ್ಡವಿಷಯ! ಆ ಕೆಲಸವನ್ನು ಹಲವಾರು ಶಾಸನ ತಜ್ಞರು ಮಾಡಿದ್ದಾರೆ, ಎಂದು ಯಾರಾದರೂ ಆಕ್ಷೇಪಿಸಿದರೆ ಅದಕ್ಕೆ ಉತ್ತರವಿದೆ. ದೇವಾಲಯದ ಜೀರ್ಣೋದ್ಧಾರದ ಸಂದರ್ಭದಲ್ಲಿ ತೆಗೆದ ಕಲ್ಲುಗಳನ್ನು ಜೋಡಿಸುವಾಗ ಕೆಲಸಗಾರರು ಮತ್ತು ಮೇಲ್ವಿಚಾರಕರು ಮಾಡಿದ ತಪ್ಪು ಅಥವಾ ಅಜಾಗರೂಕತೆಯಿಂದಾಗಿ ಕಲ್ಲುಗಳು ಕ್ರಮಬದ್ಧವಾಗಿ ಜೋಡಿಸಲ್ಪಡದೆ, ಶಾಸನಗಳ ಪಾಠದಲ್ಲಿ ಸ್ಪಷ್ಟತೆ ತಪ್ಪಿದೆ. ಅಂತಹ ಸಮಯದಲ್ಲಿ ಶರ್ಮರು ಅತ್ಯಂತ ಎಚ್ಚರಿಕೆಯಿಂದ ಕೆಲವು ಹೆಸರುಗಳನ್ನು ಗುರುತಿಸಿದ್ದಾರೆ. ಅದು ಗುರುತಿಸಿ ಗೌರವಿಸಬೇಕಾದ ಕೆಲಸ.

ಶರ್ಮರು ತರುಣರನ್ನು ಶಾಸನ ಸಂಶೋಧನೆಯತ್ತ ಕೈಬೀಸಿ ಕರೆದರು. ಅದರ ಫಲವಾಗಿಯೇ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ

೧೯೭೭ರ ವೇಳೆಗೆ ಶಾಸನಶಾಸ್ತ್ರ ತರಗತಿಗಳು ಆರಂಭವಾದುವು. ಶರ್ಮರ ಸೂಚನೆಯನ್ನು ಕಾರ್ಯರೂಪಕ್ಕೆ ತಂದವರು ಕನ್ನಡ ಸಾಹಿತ್ಯ ಪರಿಷತ್ತಿನ ಆಗಿನ ಅಧ್ಯಕ್ಷ ಜಿ. ನಾರಾಯಣರು. ಇತಿಹಾಸ, ಶಾಸನ, ಪುರಾತತ್ತ್ವ ಇತ್ಯಾದಿ ವಿಷಯಗಳ ಬಗ್ಗೆ ಆಸಕ್ತಿ ಇರುವ ತರುಣರ ಕೆಲಸವನ್ನು ಗಮನಿಸಿ ಬೆನ್ನುತಟ್ಟುವುದರಲ್ಲಿ ಶರ್ಮರು ಹಿಂದೆ ಬೀಳುತ್ತಿರಲಿಲ್ಲ. ಅದಕ್ಕೊಂದು ಉದಾಹರಣೆಯನ್ನು 'ವಿಚಾರ ಕರ್ನಾಟಕ'ದಲ್ಲೇ ಕಾಣಬಹುದು (ಪು. ೨೦೩). ಆಲ್ಲ ಚಿರಂಜೀವಿ ಅವರು ಚಿಕ್ಕಮಗಳೂರು ಪುರಸಭಾ ಕಾರ್ಯಾಲಯದ ಉದ್ಯಾನವನದಲ್ಲಿದ್ದ ಚಿತ್ರಶಿಲ್ಪದ ಬಗ್ಗೆ ತಮ್ಮ ಗಮನ ಸೆಳೆದದ್ದನ್ನು ಪ್ರಸ್ತಾಪಿಸುವ ಶರ್ಮರು ಚಿರಂಜೀವಿ ಅವರನ್ನು ಪ್ರಶಂಸಿಸಿದ್ದಾರೆ. ಸಂಶೋಧನೆಯ ಕ್ಷೇತ್ರಕ್ಕೆ ಶರ್ಮಾಜಿ ಅವರ ಕೊಡುಗೆ ಅಪಾರ ಮತ್ತು ಅತ್ಯಂತ ಮಹತ್ತ್ವಪೂರ್ಣ.

ಈಗಾಗಲೇ ಪ್ರಸ್ತಾಪಿಸಲಾಗಿರುವ 'ವಿಚಾರ ಕರ್ನಾಟಕ' ಕೃತಿಯಲ್ಲದೆ ಶರ್ಮರು ಪ್ರಕಟಿಸಿದ್ದ 'ಚಾರಿತ್ರಿಕ ದಾಖಲೆಗಳು' ಕೃತಿಯೂ ಸಂಶೋಧಕರಿಗೆ ಅತ್ಯಂತ ಅಮೂಲ್ಯ ಆಕರಗ್ರಂಥವಾಗಿದೆ. ಆ ಕೃತಿಯಲ್ಲಿ ಶರ್ಮರು ರಾಮರಾಯನ ಬಖೈರು, ಹೈದರ್‌ನಾಮೆ ಮತ್ತು ಕೊಡಗು ವೀರರಾಜೇಂದ್ರನ ಪತ್ರವನ್ನು ಬೆಳಕಿಗೆ ತಂದಿದ್ದಾರೆ. ವಿಜಯನಗರದ ರಾಮರಾಯ ಮತ್ತು ಬಹಮನಿ ಸುಲ್ತಾನರ ನಡುವೆ ರಕ್ಕಸಗಿ-ತಂಗಡಗಿಯಲ್ಲಿ ನಡೆದ ಯುದ್ಧದ ವಿವರಗಳು ರಾಮರಾಯನ ಬಖೈರಿನಿಂದ ದೊರೆಯುತ್ತವೆ. ಈ ಬಖೈರು ಮದರಾಸಿನ ಓರಿಯಂಟಲ್ ಹಸ್ತಪ್ರತಿಗಳ ಗ್ರಂಥಾಲಯದಲ್ಲಿದ್ದು ೧೯೨೧ರಲ್ಲಿ ಶರ್ಮರ ಗಮನಕ್ಕೆ ಬಂದಿತ್ತು.

ಹೈದರನ ಸಮಕಾಲೀನನಾದ ನಲ್ಲಪ್ಪ ಬರೆದ ಹೈದರ್ ನಾಮಾದಲ್ಲಿ ಹೈದರನ ಹಲವು ಯುದ್ಧಗಳು ಮತ್ತು ಅವುಗಳ ಸೋಲು-ಗೆಲುವುಗಳ ಪರಿಚಯ ಲಭಿಸುತ್ತದೆ. ಇದರ ಹಸ್ತಪ್ರತಿಯನ್ನು ೧೭೯೯ರಲ್ಲೇ ಕರ್ನಲ್ ವಿಲ್ಕ್ಸ್ ಮೈಸೂರು ಅರಮನೆಯಲ್ಲಿ ಪತ್ತೆ ಮಾಡಿದ್ದ.

ಕೊಡಗಿನ ಪ್ರಸಿದ್ಧ ದೊರೆ ದೊಡ್ಡ ವೀರರಾಜೇಂದ್ರ ಒಡೆಯನು ಬ್ರಿಟಿಷ್ ಅಧಿಕಾರಿಗಳಿಗೆ ಬರೆದಿದ್ದ ಸುದೀರ್ಘ ಪತ್ರವು ರಾಜೇಂದ್ರನಾಮೆ ಯಲ್ಲಿರುವ ಅದೇ ಅಂಶಕ್ಕೆ ಸರಿಹೊಂದಿ ಉಳಿದು ಬಂದಿದೆ.

ಕರ್ನಾಟಕದ ಇತಿಹಾಸದ ಬಗೆಗೆ ಖಚಿತವಾಗಿ ತಿಳಿದಿದ್ದ ಶರ್ಮರು ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕಾಂಗ್ರೆಸ್ ಸಮಿತಿ ಪ್ರಕಟಿಸಿದ '**ಕರ್ನಾಟಕದ ಕೈಪಿಡಿ**'ಯ ಸಲುವಾಗಿ ವಿಶೇಷ ಕಾರ್ಯ ನಿರ್ವಹಿಸಿದ್ದಾರೆ. ಆರಂಭಕಾಲದಿಂದ ಶ್ರೀರಂಗಪಟ್ಟಣದ ಪತನದ ವರೆಗೆ ಸುಮಾರು ೧೪೦ ಪುಟಗಳಲ್ಲಿ ಕರ್ನಾಟಕದ ಇತಿಹಾಸವನ್ನು ಶರ್ಮರು ಆ ಕೃತಿಯಲ್ಲಿ ಸ್ಥೂಲವಾಗಿ ಪರಿಚಯಿಸಿದ್ದಾರೆ.

ಕರ್ನಾಟಕದ ಇತಿಹಾಸದ ಅಧ್ಯಯನಕ್ಕೆ ಶಾಸನಗಳು ಮತ್ತು ಹಸ್ತಪ್ರತಿಗಳ ಪತ್ತೆ, ಪ್ರಕಟಣೆಗಳ ಮೂಲಕವಷ್ಟೇ ಅಲ್ಲದೆ, ಅವುಗಳನ್ನು ಕೇವಲ ವಿದ್ವಾಂಸರಿಗಷ್ಟೇ ಸೀಮಿತಗೊಳಿಸದೆ ಇತಿಹಾಸ ಪ್ರಿಯರೆಲ್ಲರಿಗೂ ಲೇಖನಗಳ ಮೂಲಕ ಪ್ರಚುರಪಡಿಸಿ ರುಚಿಹತ್ತಿಸಿದ ಶರ್ಮರನ್ನು, ಆಗ ಅವರಿಂದ ಬೆನ್ನುತಟ್ಟಿಸಿ ಕೊಂಡವರು ಮಾತ್ರವಲ್ಲ, ಇಂದಿನ ಯುವ ಸಂಶೋಧಕರೂ ಮರೆಯುವುದಿಲ್ಲ. ಆವರ ಅಪರಿಮಿತ ಜ್ಞಾನದ ಅರಿವು ಎಲ್ಲರಿಗೂ ದೊರೆಯುವಂತಾಗಲು, ಅವರ ಪ್ರಕಟಿತ ಲೇಖನಗಳನ್ನು ಹಲವು ಸಂಪುಟಗಳಲ್ಲಿ ಯಾವುದಾದರೂ ಹಿರಿಯ ಸಂಸ್ಥೆ ಪ್ರಕಟಿಸಿದರೆ, ಯುವ ಸಂಶೋಧಕರಿಗೆ ಉಪಕಾರ ಆಗುತ್ತದೆ. *

ಪ್ರೊ॥ ಎಚ್.ಆರ್. ರಘುನಾಥ ಭಟ್ *

ಹುಬ್ಬಳ್ಳಿಯಲ್ಲೊಂದು ಶಿಲಾಶಾಸನ ಶೋಧನೆ

'ಎಲ್ಯಯ ಪುರ್ಬ್ಬದವಳ್ಳಿ' 'ಎಲೆಯ ಪುರ್ವಳ್ಳಿ 'ಎಲೆಯ ಹುಬ್ಬಳ್ಳಿ', 'ಶ್ರೀಮದನಾದಿಯ' ಬಣಂಜುವಟ್ಟಣಂ ಹುಬ್ಬಳ್ಳಿ' ಎಂದು ಮುಂತಾಗಿ ಖ್ಯಾತಿ ಪಡೆದ ಹುಬ್ಬಳ್ಳಿಯ ಅನಂತನಾಥ ಬಸದಿ ಸಮುಚ್ಚಯದಲ್ಲಿ ಜೀರ್ಣೋದ್ಧಾರ ಕಾರ್ಯ ಕೈಕೊಂಡಾಗ ಶಿಲಾಶಾಸನ ಫಲಕವೊಂದು ಆಕಸ್ಮಿಕವಾಗಿ ಪತ್ತೆಯಾಯಿತು. ಇದರ ಶಿರೋ ಶಿಲ್ಪ ಸಂಯೋಜನೆಯಲ್ಲಿ ಶಿವಲಿಂಗವನ್ನು ಆರಾಧಿಸುತ್ತಿರುವ ಶಿವಾಚಾರ್ಯರು ಬಸವಣ್ಣ ಆಕಳು ಮತ್ತು ಕರುಗಳ ಉಬ್ಬು ಶಿಲ್ಪವಿರುವುದರಿಂದ ಪ್ರಾಯಶಃ ಇದು ಜೈನಬಸದಿಯಲ್ಲಿ ಪ್ರದರ್ಶಿತವಾಗಬಾರದೆಂದು ಗೋಡೆಯ ಸಂದಿಯೊಂದರಲ್ಲಿ ಇಡಲಾಗಿತ್ತು. ಪ್ರಯಾಸಪಟ್ಟು ಇದನ್ನು ಹೊರತೆಗೆದು ಶಾಸನದ ಪಡಿಯಚ್ಚು ತೆಗೆದಾಗ ಹಲವು ಸ್ವಾರಸ್ಯ ಸಂಗತಿಗಳು ಹೊರಬಿದ್ದವು. ಅವುಗಳನ್ನಿಲ್ಲಿ ಸಂಗ್ರಹಿಸಿಕೊಡಲಾಗಿದೆ.

ಇದೊಂದು ಶೈವ ಶಿಲಾಶಾಸನವಾಗಿದೆ. ಅರ್ಧ ವೃತ್ತಾಕಾರದ ಶಿರೋಶಿಲ್ಪಭಾಗದ ಬಲತುದಿಯಲ್ಲಿ ಸೂರ್ಯ ಹಾಗೂ ಎಡತುದಿಯಲ್ಲಿ ಚಂದ್ರನ ರೇಖಾ ಚಿತ್ರಗಳಿವೆ. ಈ ಫಲಕದ ಪಟ್ಟಿಯ ಮೇಲೆ ಶಾಸನ ಕೆತ್ತಲು ಸ್ಥಳಾವಕಾಶವನ್ನುಂಟುಮಾಡಿಕೊಂಡರೂ, ಖಾಲಿಬಿಡಲಾಗಿದೆ, ಇದರ ಕೆಳಭಾಗದಲ್ಲಿ ಫಲಕದ ಮೇಲೆ ಕಂಡರಿಸಿರುವ ಶಾಸನ ಪಾಠದಲ್ಲಿ ಈಗ ಇಪ್ಪತ್ತ ಮೂರು ಸಾಲುಗಳು ಉಳಿದಿವೆ; ಉಳಿದವು ತ್ರುಟಿತವಾಗಿವೆ.

ಶಾಸನದ ಆರಂಭದಲ್ಲಿ ಶುಭ ಚಿಹ್ನೆಯನ್ನು ಸುಂದರವಾಗಿ ಚಿತ್ರಿಸಲಾಗಿದೆ. ನಂತರ ವಿಷ್ಣು-ವರಾಹ ಸ್ತುತಿಯನ್ನು ನೀಡಲಾಗಿದೆ. ಆಳುತ್ತಿರುವ ಅರಸನಾದ ಶ್ರೀಮತ್ ತ್ರಿಭುವನ ಮಲ್ಲದೇವರಾದ, ಆರ್ಮಡಿ ವಿಕ್ರಮಾದಿತ್ಯನ, ಬಿರುದು-ಬಾವಲಿಗಳೊಂದಿಗೆ ಪ್ರಸ್ತಾಪಿಸಲಾಗಿದೆ.

ಶಾಸನ ಪಾಠದ ಆರರಿಂದ ಹನ್ನೊಂದನೆಯ ಸಾಲಿನವರೆಗೆ ಶ್ರೀಮದ್ ಅಗ್ರಹಾರ ಎಲ್ಯೆಯ ಪುರ್ಬ್ಬದವಳ್ಳಿಯ ಇನ್ನೂರು ಪ್ರಮುಖ ಮಹಾಜನರು ಊರೊಡೆಯರಾಗಿದ್ದುದನ್ನು, ಉಲ್ಲೇಖಿಸಲಾಗಿದೆ. ಅವರ ಗುಣಗಾನ ಮಾಡುತ್ತಾ ಯಮನಿಯಮ ಸ್ವಾಧ್ಯಾಯ ಮೌನಧಾರಣ ಮೌನಾನುಷ್ಠಾನ ಪರಾಯಣರು, ವೇದಾರ್ಥ ವಿದ್ಯಾಪಾರಗರು, ಷಟ್ಕರ್ಮ ನಿರತರು, ಸಪ್ತ ಸ್ತೋಮ ಸತ್ಯವಾಕ್ಯ ಆವಗಾಹನ ಪವಿತ್ರೀಕೃತ ಶರೀರರು ತ್ರಿಂಶತ್ಸಹಸ್ರ ಸಮಯಾಗ್ರಗಣ್ಯರು, ಏಕವಾಕ್ಯರು, ದುಷ್ಟನಿಗ್ರಹ, ವಿಶಿಷ್ಟ ಪ್ರತಿಪಾಳನರು ಎಂದು ಮುಂತಾಗಿ ಪ್ರಶಂಸಿಸಲಾಗಿದೆ. ಇವೆಲ್ಲವೂ ಶುದ್ಧ ಕನ್ನಡ ಭಾಷೆಯಲ್ಲಿವೆ.

ಶಾಸನ ಪಾಠದ ಹನ್ನೆರಡನೆಯ ಸಾಲಿನಿಂದ ಇಪ್ಪತ್ತ ಮೂರನೆಯ ಸಾಲಿನವರೆಗೂ ಸಂಸ್ಕೃತ ಶ್ಲೋಕ ಮತ್ತು ವೃತ್ತದಲ್ಲಿ ಮುಖ್ಯ ವಿಷಯವನ್ನು ದಾಖಲಿಸಲಾಗಿದೆ. ಗೌಡಮಾಧ್ವಾಳಿಕಾ ಗ್ರಾಮದಲ್ಲಿ ಸಂಭವಿಸಿದವರೂ ಕಾಶ್ಯಪಾನ್ವಯರೂ ಆದ ಸಾರಸ್ವತರಲ್ಲಿ ಯಜ್ಞಮಾಡಿದ ಮಾಧವನೆಂಬುವನು ಸಾಕ್ಷಾತ್ ಮಾಧವನಂತಿದ್ದ. ಆ ಯಾಜ್ಞಿನಕ ಮಗನಾದ ಜನಕನಾದರೋ ಸಾಕ್ಷಾತ್ ಜನಕನಂತಿದ್ದ. ಅನೇಕ ಶಿಷ್ಯರ ಮನಸ್ಸೆಂಬ ಕಮಲವನ್ನರಳಿಸುವಲ್ಲಿ ಸೂರ್ಯನಂತಿದ್ದ ಆತನ ಮಗ ಭೀಮ ಎಂಬುವನಾಗಿದ್ದ. ಆತನ ಮಗ ಶ್ರೀ ಮಿಶ್ರದಾಮೋದರ ಆತನ ಮಗ ಮತ್ತು ಬುಧಾದಿಪ ಮತ್ತು ಆತನ ವಂಶಜರ ಪಾಂಡಿತ್ಯ ಪ್ರತಿಭೆಯನ್ನು ಮುಕ್ತಕಂಠದಿಂದ ಹೊಗಳಲಾಗಿದೆ. ಮಹಾಭಾಷ್ಯ, ಮೀಮಾಂಸೆ, ತರ್ಕ, ವೈದ್ಯವಿದ್ಯೆ, ಪಾಣಿನೀ, ಶೈವಾಗಮಗಳಲ್ಲಿ ವಿಶಾರದರಾಗಿದ್ದರು. ಇವರಿಗೆ ಪ್ರಾಯಶಃ ನೀಡಿದ ದಾನ ಈ ಶಾಸನ ಪಾಠದ ಮುಂದಿನ ಭಾಗದಲ್ಲಿದ್ದಿರಬೇಕು. ದುರದೃಷ್ಟವಶಾತ್ ಆ ಭಾಗ (೨೪ನೆಯ ಸಾಲಿನಿಂದ ಮುಂದಿನ ಭಾಗ) ಸಂಪೂರ್ಣವಾಗಿ ಒಡೆದು ಹೋಗಿದ್ದಲ್ಲದೆ, ಅದು ಕಳೆದು ಹೋಗಿದೆ ಅಥವಾ ನಶಿಸಿಹೋಗಿದೆ. ಅದು ಬಹುಶಃ ದಾನಭಾಗವಾಗಿದ್ದು ಅದರಲ್ಲಿ ತೇದಿವಿವರಗಳೂ ಅಡಕವಾಗಿತ್ತೋ ಏನೋ! ಅದೆಲ್ಲ ಈಗ ನಮ್ಮ ಊಹೆಗೆ ಬಿಟ್ಟು, ಅಳಿದುಳಿದಿರುವ ಈ ಶಾಸನದ ವೈಶಿಷ್ಟ್ಯವನ್ನು ಸದ್ಯಕ್ಕೆ ಗೋಚರಿಸುವಂತೆ ಹೀಗೆ ಸೂಚಿಸಬಹುದು:

* ಪ್ರಾಧ್ಯಾಪಕರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

೧. ಹಳೇ ಹುಬ್ಬಳ್ಳಿಯು ಇನ್ನೂರು ಮಹಾಜನ ಪ್ರಮುಖರಿರುವ ಒಂದು ಅಗ್ರಹಾರವಾಗಿತ್ತು. ಅದನ್ನು "ಎಲೆಯ ಪುಬ್ಬುದವಳ್ಳಿ" ಎಂದು ಕರೆಯಲಾಗಿತ್ತು. ಎಲೆ ಹೂಬಳ್ಳಿಗಳಿಂದ ತುಂಬಿದ್ದ ಈ ಹಳ್ಳಿ ಮುಂದೆ ಹುಬ್ಬಳ್ಳಿ ಎಂದು ಮಾತ್ರ ಕರೆಸಿಕೊಂಡಿತು.

೨. ಇಲ್ಲಿ ಪ್ರಕಾಂಡ ಪಂಡಿತಜನರಿದ್ದರು. ಅವರ ಬಣ್ಣನೆಯಲ್ಲಿ ಸ್ವಲ್ಪ ಮಟ್ಟಿಗೆ ಉತ್ಪ್ರೇಕ್ಷೆ ಅತಿಶಯೋಕ್ತಿ ನುಸುಳಿರಬೇಕು.

೩. ಹನ್ನೊಂದನೆಯ ಶತಮಾನದ ಹೊತ್ತಿಗಾಗಲೇ ಅಲ್ಲಿ ಕಾಶ್ಯಪಗೋತ್ರದ ಸಾರಸ್ವತರಿದ್ದರು. ಅವರು 'ಗೌಡ ಮಾಧ್ವಾಳಿಕಾಗ್ರಾಮ ಸಂಭವರು' ಎಂಬುದು ತುಂಬ ಕುತೂಹಲಕಾರಿ ಸಂಗತಿ. ಅವರಲ್ಲಿ ಮಾಧವ ಜನಕ-ಭೀಮ-ಬುಧಾದಿಪ-ದಾಮೋದರ ಮುಂತಾದವರು ಪ್ರಕಾಂಡ ಪಂಡಿತರಾಗಿದ್ದರು.

೪. ಈ ಶಾಸನೋಕ್ತ ಗೌಡಮಾಧ್ವಾಳಿಕಾಗ್ರಾಮ ಯಾವುದಿರಬೇಕು? ಇದು ಗೋವಾದ ಮಡಗಾಂವ್ ಇರಬಹುದೆ? ಅದನ್ನು ಪ್ರಾಚೀನ ವಿದ್ಯಾಕೇಂದ್ರ ಎಂಬ ಕಾರಣದಿಂದಾಗಿ 'ಮಠಗ್ರಾಮ' ಎಂದು ಕರೆಯಲಾಗಿತ್ತು. ಇಲ್ಲಿ 'ಮಾಧವ' ಎಂಬ ಪ್ರಸಿದ್ಧ ಅಮಾತ್ಯ, ಕಲ್ಯಾಣ ಚಾಳುಕ್ಯರ ಕಾಲದಲ್ಲಿದ್ದ. ಅನಂತರ ಮಧ್ವಾಚಾರ್ಯರು ಮಡಗಾಂವಿಗೆ ಬಂದಿದ್ದರೆಂದೂ ಹೇಳುತ್ತಾರೆ. ಅಲ್ಲಿ ದಾಮೋದರ, ಚಂದ್ರನಾಥ ನಾರಾಯಣ, ಈಶ್ವರ, ಭಗವತೀ ಶಾಂತೇರಿ, ಗ್ರಾಮದೇವರೇ ಮುಂತಾದ ದೇವಾಲಯ ಗಳಿದ್ದವು.[೬]

೫. ಮಡಗಾಂವ್ ಪರಶುರಾಮ ಸೃಷ್ಟಿಯಿಂದಾದ ಸ್ಥಳ. ಇದನ್ನು ಆರಾಧಿಸುವ 'ಗೌಡ' ಜನಾಂಗ ಅಲ್ಲಿಯ ಮೂಲ ನಿವಾಸಿಗಳು. ಅಸ್ಟ್ರಾಡ್ ಜನಾಂಗದ 'ಮುಂಡ' ವಿಭಾಗಕ್ಕೆ ಸೇರಿದ ಈ ಜನ ಮೂಲದಲ್ಲಿ ಆಗ್ನೇಯ ಏಷ್ಯಾದಿಂದ ಅಸ್ಸಾಂ, ಬಂಗಾಲ, ಕೇರಳ, ಗೋವಾ ಪ್ರದೇಶಗಳಿಗೆ ವಲಸೆ ಬಂದರು. ಅವರ ಭಾಷೆ 'ಗೌಡ' ಭಾಷೆಯಾಗಿತ್ತು. ಈಗ ಕೊಂಕಣಿ ಮಾತನಾಡುತ್ತಾರೆ. ಇವರನ್ನು ಕುಣಬಿ, ಗಾಂವಕರ್, ವೆಲಿಪ್ ಎಂದೂ ಕರೆಯುತ್ತಾರೆ. ಈ ಮೂಲ ನಿವಾಸಿ ಗೌಡರಿದ್ದ ಮಠಗ್ರಾಮ (ಮಠಗಾಂವ್) ಸಾರಸ್ವತರ ಪ್ರಧಾನ ನೆಲೆವೀಡಾಗಿದೆ. ಅವರ ಪ್ರಾಚೀನತಮ ಉಲ್ಲೇಖ ಹನ್ನೊಂದನೆಯ ಶತಮಾನದಲ್ಲಿ ಹುಬ್ಬಳ್ಳಿ ಶಾಸನದಲ್ಲಿ ಬಂದಿರುವುದೊಂದು ವಿಶೇಷ ಸಂಗತಿ. ರಾಷ್ಟ್ರಕೂಟರ ಕಾಲದ ಚಿಂಚಣಿ ಶಾಸನದಲ್ಲಿ 'ಪಂಚಗೌಡರ' ಉಲ್ಲೇಖವಿರುವುದನ್ನು ಇಲ್ಲಿ ಹಿನ್ನೆಲೆಯಾಗಿ ತೆಗೆದುಕೊಳ್ಳಬಹುದು. ಒಟ್ಟಾರೆ ಈ ಹುಬ್ಬಳ್ಳಿ ಶಿಲಾಶಾಸನ ಗೌಡ ಮಾಧ್ವಾಳಿಕಾಗ್ರಾಮ ಸಂಭವರಾದ ಸಾರಸ್ವತರ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಅವರ ಪ್ರಾಚೀನತೆ ಶಾಸನೀಯವಾಗಿ ಇಲ್ಲಿ ಉಲ್ಲೇಖಿತವಾಗಿದ್ದು ಉತ್ತರ ಕರ್ನಾಟಕದ ಪ್ರಸಿದ್ಧ ವ್ಯಾಪಾರಿ ಕೇಂದ್ರವಾದ ಹುಬ್ಬಳ್ಳಿಯಲ್ಲಿ ಅವರ ಪ್ರಖ್ಯಾತಿ ಹರಡಿದ್ದನ್ನು ಇದು ಪ್ರಚುರಪಡಿಸುತ್ತದೆ.

ಶಾಸನ ಪಾಠ

೧ ◎ ಜಯಾತ್ಯದಿ ಬ್ರಿತಂ ವಿಷ್ಣೋರ್ವ್ವಾರಾಹಕ್ಷೋಣತಾನ್ ವಪಕ್ಷಾಣಾನ್ನತಃ ದಂಷ್ಟ್ರಾಗ್ರಾಂ
೨ (ಣ) ವಿಶ್ರಾನ್ತಭುವನಂ ವಪುಃ ಸ್ವಸ್ತಿ ಶ್ರೀ ಪ್ರಿಥ್ವೀವಲ್ಲಭ ಮಹಾರಾಜಾದಿರಾ
೩ ಜ ಪರಮೇಶ್ವರ ಪರಮ ಭಟ್ಟಾರಕ ಸತ್ಯಾಶ್ರಯ ಕುಳತಿ(ಳ)ಕಂ ಚಾಳು
೪ ಕ್ಯಾಭರಣಂ ಶ್ರೀಮತ್ರಿಭುವನ ಮಲ್ಲದೇವರ ವಿಜಯರಾಜ್ಯಾಮು
೫ ತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ ತಾರಂಬರಂ ಸಲುತ್ತಮಿರೆ ॥ ◎
೬ ◎ ಸ್ವಸ್ತಿಯಮನಿಯಮ ಸ್ವಾಧ್ಯಾಯ ಮೌನ ಧಾರಣ ಮೌನಾನುಷ್ಠಾಣ ಪ
೭ ರಾಯಣರ್ವಿಧಿತ ವೇದಾರ್ತ್ಥ ವಿದ್ಯಾಪಾರಗರು ಷಟ್ಕರ್ಮ್ಮ ನಿರತರು ಸ
೮ ಪ್ತ ಸ್ತೋಮ ಸತ್ಯವಾಕ್ಯದಾವಗಾಹನ ಪವಿತ್ರೀಕೃತ ಶರೀರರುಪ್ಪಾ
೯ ತ್ರಿಂಶತ್ಸಹಸ್ರ ಸಮಯಾಗ್ರಗಣ್ಯರ್ಯೇಕವಾಕ್ಯರ್ದುಷ್ಟ ನಿ
೧೦ ಗ್ರಹ ವಿಶಿಷ್ಟಪ್ರತಿಪಾಳನರಪ್ಪ ಶ್ರೀಮದಗ್ರಹಾರ ಎಲ್ಯಯ
೧೧ ಪುಬ್ಬದವಳ್ಳಿಯೂರೊಡೆಯ ಪ್ರಮುಖ ಮಹಾಜನ ವಿನ್ನೂರ್ಬ್ಬರು ◎
೧೨ ಶ್ಲೋಕ ॥ ಗೌಡಮಾಧ್ವಾಳಿಕಾಗ್ರಾಮ ಸಂಭವಃ ಕಾಶ್ಯಪಾನ್ವಯಃ ಆಸೀತ್ಸಾ
೧೩ ರಸ್ವತೋ ಯಜ್ವಾ ಮಾಧವೋ ಮಾಧವೋಪಮಃ ॥ ಯಜ್ವಾತಸ್ಯಾತ್ಮಜೋಪ್ಯಾ
೧೪ ಸೀಜ್ಜನಕೋ ಜನಕೋಪಮಃ ಅಶೇಷ ಶಿಷ್ಯಾಧೀಪದ್ಮ ವಿಕಾಸನ ದಿವಾಕರ ॥ವೃ॥
೧೫ ತಸ್ಯಾಸೀತ್ತನಯಸ್ಸತಾಮ್ ಭೀಮತಃ ಋ ತ್ಯಬ್ದಯಾ ಜೀ ದ್ವಿಜಕ್ಷೋಣಿ ಪಾ
೧೬ ಳ ಶಿರೋಮಣಿ ದ್ಯುಮಣಿ ಭಿಜ್ಯೋನ್ನಿದ್ರ ಪಾದಾಂಬುಜಃ ಅಧ್ಯೇತಾನಿಖಿಳ ಶ್ರು

೧೭ ತೇರಿಹ ಮಹಾಭಾಷ್ಯ ಪ್ರವಕ್ತಾಪರಂ ಮೀಮಾಂಸಾಖಿಳ ತರ್ಕ ಕರ್ಕಶಮತೇ-
೧೮ ಮಿಶ್ರದಾಮೋದರಃ ॥ ತೇನಾಜನಿದ್ವಿಜಶ್ರೇಷ್ಠೋ ಪೂಜಾದಿತ್ಯ ಬುಧಾದಿಪಃ
೧೯ ವೀತತಾ ಮಾಯಾಜ್ವಾಣಿ ನೀಯಾಬ್ದಿ ಪಾರಗಃ ॥ ಮಿಾಮಾಂಸಾ... ಶ್ರೀಜಾಬಿ ಶ್ರೀ ಅದೀತ
೨೦ ಜ್ಞೋ ವೇದಾನ್ತ ವೇದಿನಾ ಷಟ್ತರ್ಕ್ಯಕರ್ಕಶಾ ಭಾಸಸಾ........
೨೧ . ವೈದ್ಯ ವಿದ್ಯಾವಿದಾ ಮಾಹ್ಯೋ ಮಾನ್ಯೋ ಜ್ಯೋತಿ ಶ್ರೀ........
೨೨ ಸೈ(ಶೈ)ವಾಗಮ ವಿಶಾರದಃ ಪರವಾದಿಮ........
೨೩ ...+ಸಂಕ್ಷೋದ ಕ್ಷಮ ಬುದ್ಧಿ............
೨೪ (ತ್ರುಟಿತ)...............

ಆಧಾರ ಸೂಚಿ ಮತ್ತು ಅಡಿ ಟಿಪ್ಪಣಿಗಳು

* ಶಾಯಿಯಿಂದ ತೆಗೆದ ಪಡಿಯಚ್ಚನ್ನಾಧರಿಸಿ ಓದಲಾದ ಶಾಸನ ಪಾಠ

೧. ಹುಬ್ಬಳ್ಳಿ ಪ್ರದೇಶದ ಶಾಸನಗಳಲ್ಲಿ ಈ ಬಗೆಯ ಉಲ್ಲೇಖಗಳಿವೆ.
ನೋಡಿ ಕಇ-V , ಎಸ್.ಐ.ಐ. XV, XVIII, ಎ.ಇ. XXVI , ಜಿ.ಎಂ. ಮೊರೆಸ್., ಕದಂಬಕುಲ, ಮುಂಬಯಿ ೧೯೩೧

೨. ಅನಂತನಾಥ ಬಸದಿಯ ಧರ್ಮದರ್ಶಿಗಳಿಗೆ ಅಜಿತ ಪ್ರಸಾದರಿಗೆ ಕೃತಜ್ಞತೆಗಳು. ಈ ಶಾಸನ ವ್ಯಾಸಂಗದಲ್ಲಿ ಅಮೂಲ್ಯ ಸಲಹೆ ನೀಡಿದ ಪ್ರೊ॥ ಜಿ.ಎಸ್. ದೀಕ್ಷಿತ, ಪ್ರೊ॥ ಶ್ರೀನಿವಾಸ ರಿತ್ತಿ, ಶ್ರೀ ಸೀತಾರಾಮ ಜಾಗೀರದಾರ, ಗಣಪತಿಭಟ್ ಮುಂತಾದವರಿಗೆ ಕೃತಜ್ಞನಾಗಿದ್ದೇನೆ

೩. ಗೆಝುಟಿಯರ್ ಆಫ್ ಇಂಡಿಯಾ-ಗೋವಾ ದಮನ್ ದೀವ್, ಪಾರ್ಟ್-೧, ಗೋವಾ, ೧೯೭೬

೪. ಹೆಚ್ಚಿನ ಚರ್ಚೆಗೆ ನೋಡಿ, ಕ್ಯೂಜೆಎಂಎಸ್ LXXXIII-1 (೧೯೯೨), ಪು. ೯೧-೧೧೯
ಅವಸ್ಥಿ, ಎ.ಬಿ.ಎಲ್, ಸ್ಟಡೀಸ್ ಇನ್ ಸ್ಕಾಂದಪುರಾಣ, ಸಂ. ೧-೨, ಎಂ. ಗೋವಿಂದಪೈ ವಾಙ್ಮಯ, ಉಡುಪಿ, ೧೯೯೫, ಇತ್ಯಾದಿ

ಡಾ॥ ಗುರುದೇವಿ ಉ. ಹುಲೆಪ್ಪನವರ ಮಠ *

ತಪಸ್ವಿ ಪ. ಪೂಜ್ಯ ಮಹಾಂತಪ್ಪಗಳು

'ಸಂನ್ಯಾಸವೇ ಮಾನವಜೀವನದ ಸರ್ವೋಚ್ಚವಾದ ಆದರ್ಶ' ಎಂದು ಕವಿ ಕುವೆಂಪು ಅವರು ಉದ್ಧರಿಸಿರುವಂತೆ ಮಾನವಜೀವನದ ಪರಮ ಆದರ್ಶವಾದ, ತ್ಯಾಗ ಪ್ರಧಾನವಾದ ಸಂನ್ಯಾಸ ಜೀವನವನ್ನು ಅತ್ಯಂತ ಪ್ರೀತಿಯಿಂದ ಆಯ್ದುಕೊಂಡ ಶ್ರೇಷ್ಠ ಸಂನ್ಯಾಸಿ ಶಂಕರಾಚಾರ್ಯರಂತೆ, ವೀರ ಸಂನ್ಯಾಸಿ ವಿವೇಕಾನಂದರಂತೆ ಪರಿಶುದ್ಧ ಸಂನ್ಯಾಸ ಜೀವನವನ್ನು ನಡೆಸಿ ಸಂನ್ಯಾಸತ್ವದ ಶ್ರೇಷ್ಠತೆ, ಸತ್ವಗಳನ್ನು ನಮಗೆ ತೆರೆದು ತೋರಿಸಿದ ಅಪ್ಪಟ ಶಿವಯೋಗಿಗಳು ಧಾರವಾಡದ ಮುರುಘಾಮಠದ ಪರಮಪೂಜ್ಯ ಶ್ರೀ ಮ.ನಿ.ಪ್ರ.ಸ್ವ. ಮಹಾಂತಮಹಾಸ್ವಾಮಿಗಳು. ಧಾರವಾಡ ಜಿಲ್ಲೆಯ ಪಶುಪತಿ ಹಾಳದಲ್ಲಿ ವೀರಸಂಗಯ್ಯ-ಕರಿಬಸಮ್ಮರ ಪುಣ್ಯೋದರದಿಂದ ಜನಿಸಿದ ಪೂಜ್ಯರನ್ನು ಸದ್ಭಕ್ತರೆಲ್ಲ ಭಕ್ತಿಭಾವದುಂಬಿ ಕರೆಯುವದು 'ಮಹಾಂತಪ್ಪಗಳು, ಧರಣಿಯ ಮೇಲಿನ ದೇವರು' ಎಂದೇ. ಮುರುಘಾಮಠದ ಅಂದಿನ ಪೀಠಾಧಿಪತಿಗಳಾಗಿದ್ದ ಲಿಂಗಾನುರಾಗಿ, ಜಂಗಮಪ್ರೇಮಿ, ಶಿವಯೋಗಿ ಶ್ರೇಷ್ಠ, ತ್ರಿವಿಧದಾಸೋಹಮೂರ್ತಿ ಪೂಜ್ಯ ಮೃತ್ಯುಂಜಯಪ್ಪಗಳು ಪಶುಪತಿಹಾಳಕ್ಕೆ ಒಮ್ಮೆ ದಯಮಾಡಿಸಿದ್ದ ಸಂದರ್ಭದಲ್ಲಿ ಬಾಲಕ ಮಹಾಂತಪ್ಪಗಳನ್ನು ನೋಡಿದರು. ಬಾಲಕನಲ್ಲಿ ಅಪೂರ್ವ ಚೇತನ ಗುರುತಿಸಿದ ಪೂಜ್ಯರು ಆತನನ್ನು ತಮ್ಮೊಂದಿಗೆ ಕರೆದೊಯ್ಯುವ ಪವಿತ್ರ ಬಯಕೆಯನ್ನು ವ್ಯಕ್ತಪಡಿಸಿದರು. ಏನಾಶ್ಚರ್ಯ? ಸತತವೂ ತಾಯ್ತಂದೆಗಳಿಗಂಟಿ ಕೊಂಡೇ ಇರಬಹುದಾದ ವಯಸ್ಸಿನ ಬಾಲಕ ಮಹಾಂತಪ್ಪಗಳು ಎಲ್ಲರನ್ನೂ, ಎಲ್ಲವನ್ನು ಬಿಟ್ಟು ಮಗು ತಾಯಿಯನ್ನು ಹಿಂಬಾಲಿಸುವಂತೆ ಮೃತ್ಯುಂಜಯಪ್ಪಗಳನ್ನು ಹಿಂಬಾಲಿಸಿ ಧಾರವಾಡಕ್ಕೆ ಬಂದರು. ಬಾಲಕ ಮಹಾಂತಪ್ಪಗಳನ್ನು ಆದರ್ಶ ಶಿವಯೋಗಿಯನ್ನಾಗಿ, ಪೀಠಾಧಿಪತಿಯನ್ನಾಗಿ ರೂಪಿಸುವ ಸಂಕಲ್ಪ ತೊಟ್ಟು ಪೂಜ್ಯ ಮೃತ್ಯುಂಜಯಪ್ಪಗಳು ಅವರಿಗೆ ಸಂಸ್ಕೃತ ಸಾಹಿತ್ಯ, ವೀರಶೈವಧರ್ಮ, ಸಾಹಿತ್ಯ ಕೃತಿಗಳ ಅಧ್ಯಯನ ಮಾಡಿಸಿದರು. ತಮ್ಮ ಗುರುಗಳಾಗಿದ್ದ ಶ್ರೀ ಸಿದ್ಧಲಿಂಗಯತಿಗಳಿಂದ ವಿರಕ್ತಾಶ್ರಮ ಕೊಡಿಸಿದರು. ಒಂದೇ ಮಾತಿನಲ್ಲಿ ಹೇಳುವುದಾದರ ಅವರನ್ನು ತಮ್ಮಂತೆ ಮಾಡಿದರು. ಪೂಜ್ಯ ಮೃತ್ಯುಂಜಯಪ್ಪಗಳ ಅಕ್ಷಯ ಶ್ರೀರಕ್ಷೆಯಡಿ, ಸಮರ್ಥ ಗರಡಿಮನೆಯಲ್ಲಿ ಅವರ ಕರಕಮಲ ಸಂಜಾತರಾಗಿ ಅರಳಿದ, ಬೆಳೆದ ಮಹಾಂತಪ್ಪಗಳು ಗುರುಗಳ ಸಿರಿಮುಡಿಗೆ ಹೂ ತಂದರು. ಭಕ್ತರ ಹೃನ್ಮನಗಳ ಮಂದಾರವಾದರು. ಮಠದ ಸತ್ಪರಂಪರೆ, ಕೀರ್ತಿ ಉಳಿಸಿ, ಬೆಳೆಸಿದ ಕೀರ್ತಿವಂತ ಘಟರಾದರು. ಶಿವಯೋಗ ಸಾಧನೆಯ ಜೊತೆಗೆ ಸಮಾಜೋದ್ಧಾರದ ಮಹಾಮಣಿಹವನ್ನು ಲಿಂ. ಹಾನಗಲ್ಲ ಕುಮಾರ ಮಹಾಸ್ವಾಮಿ ಗಳಂತೆ ಕೈಗೆತ್ತಿಕೊಂಡಿದ್ದ ಮೃತ್ಯುಂಜಯಪ್ಪಗಳು ಅಜ್ಞಾನ, ಅವಿದ್ಯೆಯ ಅಂಧಕಾರದಲ್ಲಿ ತೊಳಲಿ ಬಳಲುತ್ತಿದ್ದ ಸಮಾಜವನ್ನು ಸುಶಿಕ್ಷಿತ ಸುಸಂಸ್ಕೃತ ಸಮಾಜವನ್ನಾಗಿ ಮಾಡುವ ಸಂಕಲ್ಪ ತೊಟ್ಟರು. ಶಿಕ್ಷಣಕ್ಕಾಗಿ ಹಾತೊರೆದಿದ್ದ ಅನೇಕ ವಿದ್ಯಾರ್ಥಿಗಳಿಗೆ ಪ್ರಸಾದ, ವಸತಿಯ ತೀವ್ರ ಸಮಸ್ಯೆಯನ್ನು ಮನದಂದು ಶ್ರೀಮಠದಲ್ಲಿ ಉಚಿತ ಪ್ರಸಾದನಿಲಯ ಸ್ಥಾಪಿಸಿದರು. ಅರವತ್ತೂರು ಪುರಾತನರ ಪುಣ್ಯಸ್ಮರಣೆಯ ದ್ಯೋತಕವಾಗಿ ಅವರ ಹೆಸರಿನ ಅರವತ್ತೂರು ವಸತಿಕೋಣೆಗಳನ್ನು ನಿರ್ಮಿಸಿದರು. ಅದೇ ಸಮಯದಲ್ಲಿ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಕೂಡ ಸ್ಥಾಪನೆಯಾದದ್ದರಿಂದ (೧೯೧೭) ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ-ವಸತಿ-ಪ್ರಸಾದಗಳ ಸೌಲಭ್ಯ ದೊರೆತವು. ಪ್ರಸಾದ ನಿಲಯದ ಸಮಸ್ತ ಉಸ್ತುವಾರಿಯನ್ನು ಮಾತೃಹೃದಯಿ ಮಹಾಂತಪ್ಪಗಳಿಗೆ ವಹಿಸಿಕೊಟ್ಟರು. ಕಾರ್ಯದಕ್ಷತೆ, ಗುರುಭಕ್ತಿಗೆ ಇನ್ನೊಂದು ಹೆಸರಾಗಿದ್ದ ಮಹಾಂತಪ್ಪಗಳು ಮಠದ ಕಾರ್ಯ ಚಟುವಟಿಕೆ ಗಳೊಂದಿಗೆ, ಪ್ರಸಾದನಿಲಯದ ಎಲ್ಲ ವ್ಯವಸ್ಥೆಯನ್ನು ಕಾಳಜಿ ಪೂರ್ವಕವಾಗಿ, ಸಮರ್ಥರೀತಿಯಲ್ಲಿ ನೋಡಿಕೊಂಡರು. ಮೃತ್ಯುಂಜಯಪ್ಪಗಳು ಅರವತ್ತೂರು ಪುರಾತನರ ಹೆಸರಿನಿಂದ ಕಟ್ಟಿಸಿದ ೬೩ ಕೋಣೆಗಳನ್ನು ಪರಿಪೂರ್ಣ ಬದಲಾಯಿಸಿ ವಿದ್ಯಾರ್ಥಿಗಳ ವಸತಿಗಾಗಿ ೧೨೬ ಕೋಣೆಗಳನ್ನೊಳಗೊಂಡ ಎರಡು ಅಂತಸ್ತಿನ ಸುಂದರ ಕಟ್ಟಡವನ್ನು ಆ ನಂತರ ಮಹಾಂತಪ್ಪಗಳು ನಿರ್ಮಿಸಿದ್ದು ಅವರ ಶಿಕ್ಷಣ ಪ್ರೇಮಕ್ಕೆ ಕನ್ನಡಿ ಹಿಡಿಯುತ್ತದೆ.

---

* ಇಂಗ್ಲಿಷ್ ವಿಭಾಗ, ಶ್ರೀ ಮೃತ್ಯುಂಜಯ ಕಾಲೇಜು, ಧಾರವಾಡ - ೫೮೦ ೦೦೮.

ಮೃತ್ಯುಂಜಯಪ್ಪಗಳು ಲಿಂಗೈಕ್ಯರಾದ ತರುವಾಯ ಮಠದ ಆವರಣದಲ್ಲಿ ಒಂದು ಪ್ರೌಢಶಾಲೆ ಹಾಗೂ ಆರ್.ಎಲ್.ಎಸ್. ಹೈಸ್ಕೂಲಿನ ಆವರಣದಲ್ಲಿ ಶ್ರೀ ಮೃತ್ಯುಂಜಯ ಮಹಾ ವಿದ್ಯಾಲಯ (ಈ ಕಾಲೇಜನ್ನು ಅನಂತರ ಕೆ.ಎಲ್.ಇ. ಸಂಸ್ಥೆಗೆ ವಹಿಸಿ ಕೊಡಲಾಯಿತು)ಗಳನ್ನು ಮಹಾಂತಪ್ಪಗಳು ಪ್ರಾರಂಭಿಸಿದ್ದು ಅವರ ಶೈಕ್ಷಣಿಕ ಪ್ರಸಾರ, ಆಸಕ್ತಿಗಳಿಗೆ ನಿದರ್ಶನ. ಅಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೃತ್ಯುಂಜಯಪ್ಪಗಳ ಹೆಸರಿನಲ್ಲಿ ವ್ಯಾಖ್ಯಾನಮಾಲೆಗೆ ಇಪ್ಪತ್ತೈದುಸಹಸ್ರ ರೂಪಾಯಿಗಳನ್ನು ನೀಡಿದ್ದು ಶಿಕ್ಷಣದ ಮೇಲಿದ್ದ ಅವರ ಕಳಕಳಿಗೆ ಸಾಕ್ಷಿ ನುಡಿಯುತ್ತದೆ. ಎಷ್ಟೋ ಶಾಲಾ ಕಾಲೇಜುಗಳ ಸ್ನೇಹಸಮ್ಮೇಳನ ಸಮಾರಂಭಗಳಿಗೆ ಮಹಾಂತಪ್ಪಗಳು ಆಮಂತ್ರಿಸಲ್ಪಟ್ಟಾಗ ಪೂಜ್ಯ ಮೃತ್ಯುಂಜಯಪ್ಪಗಳ ಹೆಸರಿನಲ್ಲಿ ನಿರಂತರವೂ ಬಹುಮಾನ-ಪ್ರಶಸ್ತಿ ನೀಡಲು ಹಣ ನೀಡಿ, ಮಕ್ಕಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವಂತೆ ಊರವರನ್ನೂ ಪ್ರೇರೇಪಿಸುತ್ತಿದ್ದರು. ಸಮಾಜದ ಬಹಳಷ್ಟು ಮಕ್ಕಳು, ಎಲ್ಲ ಮಕ್ಕಳಿಗೆ ಶಿಕ್ಷಣ ಸಂಸ್ಕಾರ ಪಡೆಯಲಿ, ನಾಡು ಸಮೃದ್ಧವಾಗಲಿ ಅನ್ನುವ ಅಭೀಪ್ಸೆ ಮಹಾಂತಪ್ಪಗಳದಾಗಿತ್ತು. ಮುರುಘಾ ಮಠದಲ್ಲಿಯ ಅನೇಕ ಸತ್ಸಂಪ್ರದಾಯ, ಉತ್ತಮ ಪರಂಪರೆಗಳ ಹರಿಕಾರರು ಮಹಾಂತಪ್ಪಗಳು. ವಸತಿನಿಲಯದ ವಿದ್ಯಾರ್ಥಿಗಳಲ್ಲಿ ಧರ್ಮ-ದೇವರುಗಳ ಬಗೆಗೆ ಪೂಜ್ಯ ಭಾವವನ್ನು, ಶ್ರದ್ಧೆ-ನಿಷ್ಠೆಗಳನ್ನು ಬಿತ್ತಿ ಬೆಳೆಸಲು ಪೂಜೆ-ಪ್ರಾರ್ಥನೆ-ಶಿವಾನುಭವ ಸಭೆ, ಇನ್ನುಳಿದ ಶ್ರೀಮಠದ ಸಾಹಿತ್ಯಿಕ-ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲು ತೆಗೆದುಕೊಳ್ಳುವುದನ್ನು ಕಡ್ಡಾಯ ಗೊಳಿಸಿದರು. ಇಂದಿಗೂ ಪ್ರಸಾದ ನಿಲಯದ ಎಲ್ಲ ವಿದ್ಯಾರ್ಥಿಗಳೂ ವಾರಕ್ಕೊಮ್ಮೆ ಮೃತ್ಯುಂಜಯ ನಗರದ ಮುಖ್ಯ ಬೀದಿಗಳಲ್ಲಿ ಭಜನೆ ವಚನ ಗಾಯನ ಮಾಡುತ್ತ ಶಿವಾನುಭವ ಸಂದೇಶ ಬೀರುತ್ತಿರುವದುಂಟು. ಈ ಸತ್ಪರಂಪರೆಯನ್ನು ಪ್ರಾರಂಭಿಸಿದವರು ಶಿವಾನುಭಾವಿ ಪೂಜ್ಯ ಮಹಾಂತಪ್ಪಗಳು.

ಶಿಕ್ಷಣ ಪ್ರೇಮಿ ಮಹಾಂತಪ್ಪಗಳನ್ನು ಭಕ್ತಾದಿಗಳು ಅಕ್ಕರತೆ-ಕಕ್ಕುಲತೆಗಳಿಂದ 'ಅಪ್ಪ' ಎಂದು ಕರೆದರೂ ಮಹಾಂತಪ್ಪಗಳ ಲ್ಲಿದ್ದುದು ಅಮ್ಮನ ಹೃದಯ, ಮಾತೃಮಮತೆ, ಕರಗುವ ಕರುಳು, ಮರುಗುವ ಮನಸ್ಸು. ಮೃತ್ಯುಂಜಯಪ್ಪಗಳದು ಶಿಸ್ತು ಸಂಯಮದ ಕಟ್ಟುನಿಟ್ಟಿನ ವ್ಯಕ್ತಿತ್ವ. ಮಠದಲ್ಲಿಯ ಪ್ರಸಾದನಿಲಯದ ಯಾವುದೇ ಕೋಣೆಯ ಆವರಣದಲ್ಲಿ ಕಸ-ಕಡ್ಡಿ ಕಾಣಸಿಕ್ಕರೆ ಅವರು ರುದ್ರಾವತಾರ ತಾಳುತ್ತಿದ್ದರಂತೆ. 'ತಂದೆ ಮಕ್ಕಳಿಗೆ ಬುದ್ಧಿ ಹೇಳುವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ' ಎಂಬ ಶರಣವಾಣಿಯನ್ವಯ ತಪ್ಪುಮಾಡಿದ ವಿದ್ಯಾರ್ಥಿ ಸುಧಾರಿಸಿ ಶುದ್ಧನಾಗಲಿ ಎನ್ನುವ ಏಕೈಕ ಸದುದ್ದೇಶದಿಂದ ಮೃತ್ಯುಂಜಯಪ್ಪ ಗಳು ತಪ್ಪಿತಸ್ಥರ ಮೇಲೆ ಕೊಪಗೊಂಡು ಬೆತ್ತ ಪ್ರಹಾರ ಮಾಡುತ್ತಿದ್ದರಂತೆ. ಲೌಕಿಕದಲ್ಲಿ ಅಪ್ಪ ದರ್ಪದಿಂದ ಮಗನನ್ನು ದಂಡಿಸುವಾಗ ಅಮ್ಮ ಮಧ್ಯಸ್ಥಿಕೆ ವಹಿಸಿ 'ಇರ್‍ಲಿ ಬಿಡ್ರಿ, ಸಾಕು ಬಿಡ್ರಿ, ಎನ್ನುತ್ತ ಕೂಸನ್ನು ಈಚೆಗೆಳೆದುಕೊಂಡು ಯಜಮಾನರ ಕೈಯ್ಯಲ್ಲಿಯ ಕೋಲನ್ನು ಆಚೆಗೆಸೆದು ಕಂದನ ಕಣ್ಣೀರೊರೆಸುತ್ತ ತಾನೂ ಒರೆಸಿಕೊಳ್ಳುವ ತಾಯಿಯಂತೆ ಮೃತ್ಯುಂಜಯಪ್ಪಗಳು ವಿದ್ಯಾರ್ಥಿಗಳ ತಪ್ಪುಕಂಡು ಕನಲಿದಾಗ ಅವರೊಂದಿಗೇ ಇರುತ್ತಿದ್ದ ಅಮ್ಮನಂತಹ ಮನದ ಮಹಾಂತಪ್ಪಗಳು ಮಧ್ಯ ಪ್ರವೇಶಿಸಿ ಬೆಣೆಯಲ್ಲಿ ಬೆರಳಾಡಿಸಿದಂತೆ'ಇದೊಂದು ಸಲ ಕ್ಷಮಿಸ್ರೆಪಾರಿ'ನಾ ಕರಿಸಿ ಹೇಳ್ತೀನ್ರಿಪ್ಪಾ, ಎಂದೆಲ್ಲ ಮುನಿದ ಮುನಿಯನ್ನು ಸಮಾಧಾನ ಪಡಿಸುತ್ತಿದ್ದರಂತೆ. ಇಷ್ಟಕ್ಕೇ ಮುಗಿಯದ ಮಹಾಂತಪ್ಪಗಳ ಮಾತೃಗರಳು ದಂಡನೆಗೊಳಗಾದ ಮಕ್ಕಳನ್ನು ಕರೆಸಿ ಏಕಾಂತದಲ್ಲಿ ಅವರಿಗೆ ಚುರುಮುರಿ, ಕಡಲೆ, ಕಬ್ಬು, ತರಿಸಿಕೊಟ್ಟು ಸಂತೈಸುತ್ತಿದ್ದರಂತೆ; ವಸತಿನಿಲಯದಲ್ಲಿದ್ದು ಮಾತೃಹೃದಯಿ ಮಹಾಂತಪ್ಪಗಳ ಈ ಬಗೆಯ ಮಮತೆಯ ಅಮೃತಪಾನ ಮಾಡಿ ಇಂದು ನಾಡಿನ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಡಾ॥ ಬಿ.ಸಿ. ಜವಳಿ, ಕವಿ ಚೆನ್ನವೀರಕಣವಿ. ಡಾ॥ ಮಲ್ಲಾಪೂರ ಬಿ.ವ್ಹಿ. ಮುಂತಾದವರು ಮೇಲಿನ ಮಧುರ ನೆನಪುಗಳನ್ನು ಮಹಾಂತಪ್ಪಗಳ ಅಮೃತಮಹೋತ್ಸವ ನಿಮಿತ್ತ ಪ್ರಕಟಗೊಂಡ ಸ್ಮರಣ ಸಂಚಿಕೆಯ ಲೇಖನಗಳಲ್ಲಿ ಧನ್ಯತೆಯೊಂದಿಗೆ ಮಾಡಿಕೊಂಡಿದ್ದುಂಟು.

ಕವಿ ಡಿ.ವ್ಹಿ.ಜಿ.ಯವರ 'ಹಸೆಯೊಂದು ನಿನಗೇಕೆ ಈ ಬ್ರಹ್ಮ ಪುರಿಯೊಳಗೆ? ಹಸುವಾಗು, ಸಸಿಯಾಗು ಶಿಶುವಾಗು ನೀಂ ಮನದಿ' ಎನ್ನುವ ಸೊಲ್ಲನ್ನು ಸಾರ್ಥಕಪಡಿಸಿ ತೋರಿಸಿದ ಪೂಜ್ಯರೆಂದರೆ ಮಹಾಂತಪ್ಪಗಳು. ಹೆಸರು, ಕೀರ್ತಿಗಾಗಿ ಅವರು ಕಿಂಚಿತ್ತೂ ಪರದಾಡಿದವರಲ್ಲ. ಶ್ರೀಮಠದಲ್ಲಿ ವರ್ಷವಿಡೀ ಕಾರ್ಯಕ್ರಮಗಳು. ಸಭೆ- ಸಮಾರಂಭಗಳಿಗೆ ಲೆಕ್ಕವಿಲ್ಲ. ಆದರೆ ಒಂದಾದರೂ ಆಮಂತ್ರಣ ಪತ್ರಿಕೆಯಲ್ಲಿ ಮಹಾಂತಪ್ಪಗಳ ಹೆಸರಿರುತ್ತಿರಲಿಲ್ಲವಂತೆ. ಎಲ್ಲದರಲ್ಲೂ 'ಮೃತ್ಯುಂಜಯಪ್ಪಗಳ ಮಹಾಬೆಳಕಿನಡಿಯಲ್ಲಿ' ಎಂದಿಷ್ಟೇ ಇರುತ್ತಿತ್ತಂತೆ. ಈ ಅಂಶವನ್ನು ಶ್ರೀ ಮಠದಲ್ಲಿ ಅಧ್ಯಾತ್ಮಿಕ ಶಿಕ್ಷಣ ಪೂರೈಸಿದ ಶ್ರೀ ಗುರುಪಾದ ದೇವರಮಠ ಎನ್ನುವ ಪೂಜ್ಯ ರೋರ್ವರು ಅತ್ಯಂತ ಮಾರ್ಮಿಕವಾಗಿ ಪ್ರಸ್ತಾಪಿಸಿದ್ದುಂಟು. ಸಸಿಯಂತೆ ಇನ್ನೋರ್ವರಿಗೆ, ಜಗತ್ತಿಗೆ ಉಪಕಾರ ಮಾಡಿ, ಹಸುವಿನಂತೆ ಸಂಪರ್ಕದಲ್ಲಿ ಬಂದವರಿಗೆಲ್ಲ ಮಮತೆಯ ಹಾಲನ್ನೇ ದಯಪಾಲಿಸಿ ಮನದಲ್ಲಿ ಶಿಶುವಿನಂತೆ ಮುಗ್ಧವಾಗಿದ್ದವರು, ನಿಷ್ಕಪಟಿಯಾಗಿದ್ದವರು ನಿಗರ್ವಕ್ಕೆ ಇನ್ನೊಂದು ಹೆಸರಾದವರು ಪೂಜ್ಯ ಮಹಾಂತಪ್ಪಗಳು.

೧೯೪೭ನೇ ಇಸ್ವಿಯಲ್ಲಿ ಮುರುಘಾಮಠದಲ್ಲಿ ಪೂಜ್ಯ ಮೃತ್ಯುಂಜಯಪ್ಪಗಳ ಸತ್ಪ್ರೇರಣೆಯ ಮೇರೆಗೆ ಪ್ರಾರಂಭಗೊಂಡ ಶಿವಾನುಭವ ಸಂಸ್ಥೆಯನ್ನು ಸರ್ವಾಂಗಸುಂದರವಾಗಿ, ಅರ್ಥಪೂರ್ಣವಾಗಿ ಬೆಳೆಸಿದ ಕೀರ್ತಿ ಮಹಾಂತಪ್ಪಗಳದು. ಈ ಸಂಸ್ಥೆಯ ಪ್ರಕಟಣೆ, ಪುಸ್ತಕಗಳನ್ನು, ಸಂಸ್ಥೆಯ ಶಿವಾನುಭವ ಪ್ರಸಾರದ ಮುಖಪತ್ರಿಕೆಯಾದ 'ಸಾವಧಾನ' ಪತ್ರಿಕೆಯನ್ನು ಬೇರೆಡ

ಮುದ್ರಿಸುವದು ತೊಂದರೆದಾಯಕವಾಗಿದ್ದರಿಂದ ಮಠದಲ್ಲೇ 'ಶ್ರೀ ಜಯವಿಭವ ಮುರುಘರಾಜೇಂದ್ರ ಮುದ್ರಣಾಲಯ' ಎನ್ನುವ ಪ್ರೆಸ್ಸನ್ನು ಸ್ಥಾಪಿಸಿ ಮಠದ ಪ್ರಕಟನೆಗಳೆಲ್ಲ ಅಲ್ಲಿಯೇ ಮುದ್ರಣ ವಾಗುವಂತೆ ಮಾಡಿದ ಶ್ರೇಯಸ್ಸು, ದೂರದರ್ಶಿತ್ವ ಮಹಾಂತಪ್ಪ ಗಳದು.

'ಎಲ್ಲ ಎಲ್ಲವನರಿದು ಫಲವೇನು ತನ್ನ ತಾನರಿಯದನ್ನಕ್ಕರ' ಎನ್ನುವ ಶರಣವಾಣಿಯಂತೆ ತನ್ನನ್ನು ತಾನು ಅರಿಯುವ ಜ್ಞಾನ ಇಹಪರದಲ್ಲೇ ಶ್ರೇಷ್ಠಜ್ಞಾನ. ತಾನು ಬೇರೇನೂ ಅಲ್ಲ. ಶಿವನಂಶವೇ ಆಗಿದ್ದೇನೆ ಎನ್ನುವ ಜ್ಞಾನ ಸಂಪಾದನೆಯೇ ಶ್ರೇಷ್ಠ ಸಂಪಾದನೆ. ಅಂತಾಗಿ ಸ್ವಯಂಜ್ಞಾನ, ಶಿವಜ್ಞಾನ ಮಾಡಿಕೊಡುವ ಸದುದ್ದೇಶದಿಂದ ಮೃತ್ಯುಂಜಯಪ್ಪಗಳು ಶಿವಾನುಭವ ತರಬೇತಿ ಶಿಬಿರ, ಶಿವಾನುಭವ ಪರೀಕ್ಷೆಗಳನ್ನು ಪ್ರಾರಂಭಿಸಿದ್ದರು. ಮಹಾಂತಪ್ಪಗಳು ತಮ್ಮ ಗುರುಗಳ ಪರಂಪರೆಯನ್ನು ಶ್ರದ್ಧೆಯಿಂದ ಮುಂದುವರಿಸಿಕೊಂಡು ಹೋಗುವದರೊಂದಿಗೆ ಶಿವಾನುಭವ ಪರೀಕ್ಷೆಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಒಂದು ಪರೀಕ್ಷೆ ಕಮಿಟಿ ರಚಿಸಿ ಈ ಬಗ್ಗೆ ಯೋಜನೆ ರೂಪಿಸಲು ಪಂ. ನಾಗಭೂಷಣ ಶಾಸ್ತ್ರಿಗಳು, ಹಂಸಭಾವಿಯ ಟಿ.ವಿ. ಉಗ್ರಾಣಕರ ಗುರುಗಳು, ಎಲಿ ಮಾಸ್ತರರು ಮುಂತಾದವರಿಗೆ ಸೂಚಿಸಿದರು. ವೀರಶೈವಧರ್ಮ - ಸಾಹಿತ್ಯಗಳಲ್ಲಿ ಅಪಾರ ಕೃಷಿಗೈದ ಈ ವಿದ್ವಾಂಸರು ಶಿವಾನುಭವ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಮಹಾಂತಪ್ಪಗಳ ಸತ್ಸಂಕಲ್ಪದಂತೆ ನಡೆಸಿಕೊಂಡು ಬರುತ್ತಿರುವುದುಂಟು.

ನಾಡಿನ ಪಂಡಿತರು ವಿದ್ವಾಂಸರು, ಕಲಾವಂತರು, ಸಾಹಿತಿಶ್ರೇಷ್ಠರನ್ನು ಗೌರವಾದರಿಂದ ಕಂಡು ಪುರಸ್ಕರಿಸಿ ಸಮಾಜಕ್ಕೆ ಅವರ ಸೇವೆ ಸಂದಾಯವಾಗುವಂತೆ ಮಾಡುವ ಸಹೃದಯವಂತಿಕೆ ಮೃತ್ಯುಂಜಯಪ್ಪ ಮಹಾಂತಪ್ಪಗಳೀರ್ವರಿಗೂ ಇತ್ತು. ಪೂಜ್ಯ ರೀರ್ವರೂ ಪಂ|| ನಾಗಭೂಷಣ ಶಾಸ್ತ್ರಿಗಳು, ಬಳ್ಳಾರಿಯ ಪಂ.ನಾಗೇಶ ಶಾಸ್ತ್ರಿಗಳು, ಜೋಳದರಾಶಿ ದೊಡ್ಡನಗೌಡರಂತಹ ವಿದ್ವಾಂಸರಿಗೆ ಆಶ್ರಯ-ಪ್ರೋತ್ಸಾಹ ನೀಡಿ, ಗ್ರಂಥಗಳನ್ನು ಬರೆಸಿ ಅವರ ಪ್ರತಿಭೆ ನಾಲ್ದೆಸೆಯಲ್ಲಿ ಹರಡುವಂತೆ, ಸಮಾಜಕ್ಕೆ ಪ್ರಯೋಜನವಾಗುವಂತೆ ಮಾಡಿದರು. ಆ ಮೂಲಕ ನಾಡು ನುಡಿಗೆ ತಮ್ಮ ಸೇವೆ ಸಲ್ಲಿಸಿದರು.

ಜನ ಸಾಮಾನ್ಯರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವದರ ಜೊತೆಗೆ ಸಾಮಾಜಿಕ ಮಾನವೀಯ, ಸಾಂಸ್ಕೃತಿಕ ಮೌಲ್ಯಗಳನ್ನು ಬಿತ್ತಿ ಬೆಳೆಯಲೆಂದು ಮೃತ್ಯುಂಜಯಪ್ಪ ಗಳಂತೆ ಮಹಾಂತಪ್ಪಗಳೂ ಊರೂರಿಗೆ ಪಾದಯಾತ್ರೆ ಬೆಳೆಸಿದರು. ಬಸವಾದಿ ಪ್ರಮಥರ ತತ್ತ್ವಾದರ್ಶಗಳನ್ನು ಬಿಂಬಿಸಿದರು. ಶಿವಾನುಭವ ಪ್ರಚಾರ- ಪ್ರವಾಸ ಕೈಕೊಂಡು ಶಿವಾನುಭವ ಸಂದೇಶ ಬೀರಿದರು. ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಗ್ರಂಥಮಾಲೆಯ ವತಿಯಿಂದ ನಾಡಿನ ಪರಿಣಿತ ಸಾಹಿತಿ, ತತ್ವಜ್ಞಾನಿಗಳ ಗ್ರಂಥಗಳನ್ನು ಪ್ರಕಟಿಸಿ ಸಾಹಿತ್ಯ-ಧರ್ಮಗಳ ಪ್ರಸಾರಗೈದ ಮಹಾಂತಪ್ಪಗಳ ಸಾಹಿತ್ಯ ಸೇವೆ ಅವಿಸ್ಮರಣೀಯ.

ಎಲೆಯ ಮರೆಯ ಕಾಯಿಯಂತೆ ತಮ್ಮ ಗುರುವಿನೊಂದಿಗೆ, ಸದಾ ತೆರೆಯ ಹಿಂದಿದ್ದು ಕೊಂಡೇ ನಿರ್ವಹಿಸಿ ಅವರು ಲಿಂಗೈಕ್ಯವಾದ ನಿರ್ವಹಿಸಿ ನಂತರವೂ ಮಠದ ಸಮಸ್ತ ಉಸ್ತುವಾರಿಯನ್ನು ಸಮರ್ಥ ರೀತಿಯಿಂದ ಹೊತ್ತುಕೊಂಡು ಹೋಗುವುದರ ಜೊತೆಗೆ ಅನೇಕ ಶೈಕ್ಷಣಿಕ, ಸಾಹಿತ್ಯಿಕ, ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಶ್ರೀ ಮಠದಲ್ಲಿ ಹಮ್ಮಿಕೊಂಡು ಸಮಾಜೋದ್ಧಾರಗೈದ ಕಾವೀ ವಸನಕ್ಕೆ ಕೀರ್ತಿತಂದ, ಮಠದ ಘನಕೀರ್ತಿಯನ್ನು ಬಾನೆತ್ತರಕ್ಕೆ ಒಯ್ದ ಪೂಜ್ಯ ಮಹಾಂತಪ್ಪಗಳ ಅಮೃತಮಹೋತ್ಸವವನ್ನು ಅವರ ಅಪಾರ ಭಕ್ತವೃಂದವು ೧೯೮೫ರಲ್ಲಿ ಆಚರಿಸಿ ಧನ್ಯತೆಯನ್ನು ಅನುಭವಿಸಿತು. ಪರಿಮಳ ಪುಷ್ಪದಂತೆ ನಿರಂತರವೂ ಜೊತೆಜೊತೆ ಯಾಗಿಯೇ ಇರುತ್ತಿದ್ದ ಕ್ರಿಯೆ-ಪ್ರತಿಕ್ರಿಯಗಳಂತಿದ್ದ ಮೃತ್ಯುಂಜಯಪ್ಪ- ಮಹಾಂತಪ್ಪಗಳವರದು ಮಾದರಿಯ ಗುರುಶಿಷ್ಯ ಸಂಬಂಧ-ಪರಂಪರೆ. ಪೂಜ್ಯ ಮಹಾಂತಪ್ಪಗಳ ಗುರುಭಕ್ತಿಯಂತೂ ಮೂರೂಲೋಕಗಳಿಗೆ ಆದರ್ಶಪ್ರಾಯ. ಚಿತ್ರದುರ್ಗದ ಜಗದ್ಗುರು ಜಯವಿಭವಮಹಾಸ್ವಾಮಿಗಳು ಲಿಂಗೈಕ್ಯರಾದ ಸಂದರ್ಭದಲ್ಲಿ ಆ ಪೀಠಕ್ಕೆ ಮಹಾಂತಪ್ಪಗಳ ಹೆಸರು ಸೂಚಿಸಲಾಯಿತಂತೆ. ಗುರುಗಳ ಶುಶ್ರೂಷೆಯಲ್ಲಿ ತಮ್ಮನ್ನೇ ಮರೆತಿದ್ದ ಮಹಾಂತಪ್ಪಗಳು 'ಅಪ್ಪಗಳ ಸೇವೆಯೇ ನನಗೆ ಪರಮ ಪದವಿ ನನಗಿನ್ನೇನೂ ಬೇಡ' ಎಂದುದ್ಗರಿಸಿದರಂತೆ; ಅಥಣಿ ಶಿವಯೋಗಿಗಳ ಲಿಂಗನಿಷ್ಠೆ, ಪೂಜ್ಯ ಮೃತ್ಯುಂಜಯಪ್ಪಗಳ ತ್ರಿವಿಧ ದಾಸೋಹನಿಷ್ಠೆಗಳೇ ಮೂರ್ತಿ ವೆತ್ತಂತಿದ್ದ ಮಹಾಂತಪ್ಪಗಳು ಈ ನಾಡಿನ ಪುಣ್ಯ ವಿಶೇಷ. ನಮ್ಮ ಪಾಲಿನ ದೇವರು. ಅವರ ಸತ್ಪರಂಪರೆಯನ್ನು ಮುಂದುವರೆಸಿ ಕೊಂಡು ನಡೆದಿರುವ ಮಹಾಂತಪ್ಪಗಳ ಕರುಣೆಯ ಕಂದರಾದ ಇಂದಿನ ಪೀಠಾಧಿಪತಿ ಶ್ರೀ ಮ.ನಿ.ಪ್ರ.ಸ್ವ. ಶಿವಯೋಗಿ ಮಹಾ ಸ್ವಾಮಿಗಳೂ ನಮ್ಮ ಸುಕೃತ ಫಲ.

*

ಡಾ॥ ಪಂಚಾಕ್ಷರಿ ಹಿರೇಮಠ *

ಧಾರವಾಡದ ಶ್ರೀ ಮುರುಘಾಮಠ - ಶ್ರೀ ಮೃತ್ಯುಂಜಯ ಅಪ್ಪಗಳು

ಧಾರವಾಡದ ಉತ್ತರ ಭಾಗ. ಈ ವಿಸ್ತರಣದ ಹೆಸರು ಶ್ರೀ ಮೃತ್ಯುಂಜಯ ನಗರ. ಈ ನಗರದ ಕೊನೆಯಲ್ಲಿ ನೆಲೆಸಿರುವುದು ಶ್ರೀಮುರುಘಾಮಠ. ಮಠದ ಪ್ರಶಾಂತವಾದ ಆವರಣದ ಒಳಪೊಕ್ಕು ಒಂದು ನಿಮಿಷ ಮುಂದೆ ನಡೆದರೆ ನಂದೀ ಧ್ವಜಸ್ತಂಭ. ಅದರ ಎದುರಿಗಿರುವುದೇ "ಶಿವಾನುಭವ ಮಂಟಪ", ಬಲಕ್ಕೆ ಮುಳುಗುಂದದ ಬಾಲಲೀಲಾ ಮಹಾಂತ ಶಿವಯೋಗೀಶ್ವರರ ಪುಣ್ಯನಾಮ ಪಡೆದಿರುವ ಮಂದಿರ. ಈ ಮಂದಿರದ ಅರ್ಧ ಭಾಗದಲ್ಲಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಗ್ರಂಥ ಮಾಲೆಯ ಕಾರ್ಯಾಲಯವಿದೆ. ಈ ಗ್ರಂಥಮಾಲೆ ಸುಮಾರು ಒಂದೂವರೆ ಲಕ್ಷ ರೂಪಾಯಿ ಬೆಲೆ ಬಾಳುವ ಬೃಹದ್ ಗ್ರಂಥಗಳನ್ನು ಪ್ರಕಟಿಸಿದೆ. ಇನ್ನರ್ಧಭಾಗದಲ್ಲಿ ಅಂಚೆ ಕಚೇರಿಯಿದೆ. ಅಲ್ಲಿಂದ ಮುಂದೆ ಬಂದರೆ ಈ ಲೋಕದ ಪರಮ ಗುರುವಾದ ಅಥಣಿಯ ಶಿವಯೋಗಿಗಳ ಮಹಾಸನ್ನಿಧಾನಕ್ಕೆ ಮಾರ್ಗತೋರುವ ಮಹಾಮಂಟಪ. ಮಂಟಪದಲ್ಲಿ ಬಂದು ತದೇಕಚಿತ್ತರಾಗಿ ಸುತ್ತಲೂ ಕಣ್ಣಾಡಿಸಿದರೆ ಶ್ರೀಶಿವಯೋಗಿಗಳ ಅಮೋಘವಾದ ಪವಾಡಮಯ ಜೀವನವನ್ನು ನಮ್ಮ ಚಿತ್ತಭಿತ್ತಿಯಲ್ಲಿ ಮೂಡಿಸುವ ಹಲವಾರು ಸುಂದರವಾದ ತೈಲಚಿತ್ರಗಳು. ಈ ಚಿತ್ರಗಳನ್ನು ಈ ನಾಡಿನ ಹೆಸರಾಂತ ಪ್ರಸಿದ್ಧ ಚಿತ್ರ ಕಲಾವಿದರಾದ ಶ್ರೀ ಮುರಿಗೆಪ್ಪಚೆಟ್ಟಿ ಅವರು ಶಿವಯೋಗಿಗಳಲ್ಲಿ ತಮಗಿರುವ ಭಕ್ತಿ, ಶ್ರದ್ಧೆಗಳಿಗೆ ಸಾಕ್ಷಿಯಾಗಿ ಚಿತ್ರಿಸಿದ್ದಾರೆ.

ಅಲ್ಲಿಂದ ಮುಂದೆ ಶಿವನ ಸಾನ್ನಿಧ್ಯ. ಬಹು ಎಚ್ಚರಿಕೆಯಿಂದ, ಶಿವಯೋಗಿಯನ್ನು ಸ್ಮರಿಸುತ್ತ ಅಹಂಕಾರದ ಯಾವ ಕಾಳಸರ್ಪವೂ ಎಲ್ಲಿಯೂ ಸುಳಿಯದ ಹಾಗೆ ಎಚ್ಚರವಹಿಸಿ, ಮೈ-ಮನ-ಚಿತ್ತ ಎಲ್ಲವೂ ಮಣಿದು ಪರಿಶುದ್ಧವಿರಿಸಿಕೊಂಡು ಮುಂದೆ ಸಾಗಬೇಕು. ಮಹಾಮಂಟಪದ ದ್ವಾರ ದಾಟಿದರೇ ಸಾಕು ಪಾರಮಾರ್ಥಿಕ ಲೋಕದ, ಶಿವಲೋಕದ ಲಿಂಗಮಯವಾಗಿರುವ ಪರಮ ತಾಣ ಗೋಚರವಾಗುತ್ತದೆ. ಯಾವುದೋ ಒಂದು ದಿವ್ಯ ಲೋಕದೊಳಗೆ ಪೊಕ್ಕಂತೆ ಅನುಭವ. ಸರಿ, ಅಲ್ಲಿಂದ ಮುಂದೆ ಹೋದರೆ ಚಂದ್ರಕಾಂತ ಶಿಲೆಯ ಬಣ್ಣ ಬಣ್ಣದ ತುಣುಕುಗಳನ್ನು ಹಾಸಿದ ಸುಂದರ ನೆಲ. ಆಚೆ-ಈಚೆ ಬೆಳಕಿನ ಸಾಲು. ಪೂರ್ಣಿಮೆಯ ಪೂರ್ಣ ಚಂದ್ರನ ಹಾಗಿರುವ ಗೋಲಾಕಾರದಿಂದ ಬೆಳಕು ಹರಡುತ್ತದೆ. ಈ ವಿದ್ಯುತ್ ಬೆಳಕಿನ ಸಾಲಿನಲ್ಲಿ ಮುಂದೆ ಹೋದರೆ ಶ್ರೀ ಶಿವಯೋಗಿಗಳು ಮುಹೂರ್ತಮಾಡಿರುವ ಮಂಟಪ, ಬಹು ಕಲಾತ್ಮಕವಾಗಿದೆ. ಮಂಟಪದ ಪ್ರದಕ್ಷಿಣೆ ಹಾಕಿಕೊಂಡು ಎದುರಿಗೆ ಬಂದರೆ ಲಿಂಗವೇ ತಾವಾಗಿರುವ ಪರಮ ಶಿವ ಶ್ರೀ ಶಿವಯೋಗಿಗಳ ದಿವ್ಯದರುಶನ. ಭಕ್ತಿಯಿಂದ ಸಾಷ್ಟಾಂಗವೆರಗಿ ನಿಂತು ಧ್ಯಾನಾಸಕ್ತರಾಗಿ ದೃಷ್ಟಿಸಿದರೆ ಸುತ್ತಲೂ ಬೆಳಕು ಹರಡಿದ ಹಾಗೆ ನಮ್ಮ ಒಳಗೂ, ಹೊರಗೂ ಬೆಳಕು ಸುಳಿದ ಹಾಗೆ ಭಾಸವಾಗುತ್ತದೆ. ಅಲ್ಲ ಅನುಭವಾಗುತ್ತದೆ. ಶಿವಯೋಗಿಗಳ ಮೂರ್ತಿ ಕೆಲಕಾಲ ಕಾಣದಂತಾಗಿ ಅಲ್ಲಿ ಕೇವಲ ನಿರ್ಮಲಾಂತಃಕರಣದ ಪರಮ ಪ್ರಸನ್ನತೆ, ತೇಜೋ ಪೂರ್ಣವಾದ ಚಿತ್ಕಳೆ ಕಾಣಿಸುತ್ತದೆ. ಆದು ಭಾವ ಭಾಸ ಈ ಮಹಾಪುಣ್ಯ ಇಲ್ಲಿಗೆ ಒಲಿದು ಬಂದುದು ನಮ್ಮ ಶ್ರೀ ಮೃತ್ಯುಂಜಯ ಅಪ್ಪಗಳವರ ಸಾಧನಾಫಲ. ಈ ಮಹಾಬೆಳಕು, ಚಿತ್ಕಳೆ ಶ್ರೀಗಳವರಿಗೆ ಒಲಿದ ಪರಿ ವರ್ಣಿಸಲಾಗದು. ಅದು ಶಬ್ದದಾಚೆಯ ಮಾತು.

ಶ್ರೀ ಶಿವಯೋಗಿಗಳ ಈ ಮಹಾ ಮಂಟಪ, ಕಲಾಕೌಶಲ್ಯ ದಿಂದೊಡಗೂಡಿದೆ. ಅಲ್ಲಿ ಎಳೆಯ ಬಳ್ಳಿಯ ಹಾಗೆ, ಬಳ್ಳಿಯ ಎಸಳಿನ ಹಾಗೆ ಇರುವ ಸುಳುಹುಗಳು, ತೋರಣಗಳು, ಜಾಲರಿಗಳು ಬಹು ಚೆಲುವಾಗಿವೆ.

ಶಿವಯೋಗಿಗಳ ಈ ಮಂಟಪದ ಸುತ್ತಲೂ ನಿರ್ಮಿತ ಗೊಂಡಿರುವ ಸೊಗಸಾದ ಈ ತೋಟ! ತೆಂಗುಗಳ ಗರಿಯ ಚಾಮರವು, ದಿಕ್ಕು ದಿಕ್ಕಿಗೂ ಗಾಳಿಯಲಿ ಸುಳಿಯುವ ಸಂಪಿಗೆಯ ಕಂಪು, ಚೆಂಗುಲಾಬಿ, ಜಾಜಿ, ಮಲ್ಲಿಗೆ, ಸೇವಂತಿಗೆ, ಬಕುಳ ಪುಷ್ಪಗಳ, ಹಿತ ಮಿತವಾದ ನವಿರಾದ ಸುವಾಸನೆ ನಿತ್ಯವೂ ಶಿವಯೋಗಿಯ ಸಾನ್ನಿಧ್ಯಕ್ಕೆ ಸಲ್ಲಿ ಕೃತಾರ್ಥತೆ ಪಡೆಯುತ್ತಿವೆ. ಇಲ್ಲಿನ ನಾಗಲಿಂಗ ಪುಷ್ಪ. ನೋಡಿದಾಗ ಎಂಥ ನಾಸ್ತಿಕನೂ ಆಸ್ತಿಕನಾದಾನು. ಅದು ಅಂತಹ ಪವಾಡಮಯ ಸತ್ವವನ್ನು

* ಜಯನಗರ, ಧಾರವಾಡ - ೫೮೦ ೦೦೧

ಹೊಂದಿದೆ. ಸಮಸ್ತ ಸೃಷ್ಟಿಯೇ ಶಿವಪೂಜೆ, ಲಿಂಗಪೂಜೆಯಲ್ಲಿದೆಯೆನ್ನುವುದನ್ನು ತೋರುವ ಈ ಪುಷ್ಪ, ತ್ರಿಕಾಲವೂ ಶಿವಯೋಗಿಗಳ ಪಾದ ಸನ್ನಿಧಿಯಲ್ಲಿ ಸಲ್ಲುತಿದೆ. ಶಿವಯೋಗಿಗಳ ಮಂಟಪದ ಬಲಬದಿಯಲ್ಲಿರುವ ಕೊನೆ ನೋಡಿ ! ಅದುವೇ ಪುಷ್ಪ ಕದಳಿಯ ಬನ! ಶ್ರೀಶೈಲದ ಕದಳಿಯ ಬನದಲ್ಲಿ ಅಂದು ಎಂಟುನೂರು ವರ್ಷಗಳ ಹಿಂದೆ ಪರಮ ವೈರಾಗ್ಯನಿಧಿ ಅಕ್ಕ ಮಹಾದೇವಿ, ಪ್ರಭುದೇವರು ಬಯಲಾದ ಕದಳಿಯಬನ. ಸುಲಭವಾಗಿ ಹೋಗಲು ಸಾಧ್ಯವಾಗದಷ್ಟು ಘೋರಾರಣ್ಯ ಅದು ಈಗ. ಅಂತಹ ಸ್ಥಳದಿಂದ, ಆ ಪುಣ್ಯ ಕ್ಷೇತ್ರದಿಂದ ಈ ಕ್ಷೇತ್ರಕ್ಕೆ ಈ ಕದಳಿ ಬಂದಿದೆ. ಈಗ ಇದು ಹತ್ತೆಂಟು ಕದಳಿಗಳ ಪುಷ್ಪ ಕದಳಿ ಬನ.

ಈ ಬನದಾಯಿ ಸುಗಂಧವ ಬೀರಿ ತನು ಮನ, ಚಿತ್ತವನು ತಣಿಸುತಿಹಳು. ಇಲ್ಲಿಯ ಮಣ್ಣಿನ ಕಣಕಣವೂ ಸುವಾಸನೆ ತಾಳಿದೆ. ಇಲ್ಲಿಯ ಮಣ್ಣು ಪನ್ನೀರಿನ ಸಿಂಚನ ಪಡೆದಿದೆಯೇನೋ ಎನ್ನಿಸುತಿದೆ. ಎಲ್ಲಿ ನೋಡಿದರೂ ಶಿವ ಕಳೆಯ, ಚಿದ್ವಿಭೂತಿಯ ತಾಳಿ ನಿಂತಿರುವ ಬಿಲ್ವಪತ್ರಿ.

ಶ್ರೀ ಶಿವಯೋಗಿಗಳ ಮಹಾಮಂಟಪ, ಮಂಟಪದ ಸುತ್ತಲೂ ಇರುವ ಚೆಲುವಾದ ತೋಟ. ತೋಟದ ಸುತ್ತಲೂ ಇರುವ ಅರವತ್ತು ಮೂರು ಮಂದಿ ಪುರಾತನರ ಪುಣ್ಯನಾಮ ಹೊತ್ತು ನಿಂತಿರುವ ಅರವತ್ತುಮೂರು ವಸತಿ ಕೋಣೆಗಳು. ಈ ಅವರತ್ತುಮೂರು ಕೋಣೆಗಳಲ್ಲಿ ಮೂರುನೂರು ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳಲ್ಲಿ ತತ್ವಜ್ಞಾನದ, ಸಮಾಜಶಾಸ್ತ್ರದ, ಮಾನವ ಶಾಸ್ತ್ರದ, ಸಾಹಿತ್ಯದ, ವಿಜ್ಞಾನದ, ಕಾವ್ಯದ, ಕೃಷಿ ವಿಜ್ಞಾನದ ಅಭ್ಯಾಸಿಗಳಿದ್ದಾರೆ. ಮಹಾಸ್ವಾಮಿಗಳ ಕರುಣಾ ಕಟಾಕ್ಷದ ರಕ್ಷಣೆಯಲ್ಲಿ ಬಾಳುತ್ತಿರುವ ಈ ವಿದ್ಯಾರ್ಥಿ ವೃಂದದ ಪುಣ್ಯ ವಿಶೇಷವೇ ಪುಣ್ಯ ವಿಶೇಷ.

ಇಲ್ಲಿರುವ ನೂರಾರು ವಿದ್ಯಾರ್ಥಿಗಳಿಗೆ ಪ್ರಸಾದ, ವಸತಿಯ ಸೌಕರ್ಯದೊಂದಿಗೆ ಅವರ ಬದುಕನ್ನು ಸಂಸ್ಕಾರಗೊಳಿಸುವ ಕೆಲಸವೂ ನಡೆಯುತ್ತಿದೆ. ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸದಾಚಾರದ ಓಜಸ್ಸನ್ನು, ಸೇವಾಭಾವನೆಯನ್ನು ಇಲ್ಲಿಯ ವಿದ್ಯಾರ್ಥಿಗಳು ಪಡೆಯುತ್ತಾರೆ.

ಶ್ರೀ ಮುರುಘರಾಜೇಂದ್ರ ಪ್ರಸಾದ ನಿಲಯದಲ್ಲಿ ಪ್ರಸಾದ ಸ್ವೀಕರಿಸಿದ ವಿದ್ಯಾರ್ಥಿಗಳು ಸಾವಿರಾರು. ಸಮಸ್ತ ಭಾರತದಲ್ಲಿ, ಪರದೇಶದಲ್ಲಿ ಇಲ್ಲಿ ವಿದ್ಯಾರ್ಥಿಗಳಾಗಿದ್ದವರು ಹಿರಿದಾದ ಸ್ಥಾನಗಳಲ್ಲಿದ್ದಾರೆ. ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಮಂತ್ರಿಗಳಾಗಿದ್ದಾರೆ, ಪತ್ರಿಕಾಕರ್ತರಾಗಿದ್ದಾರೆ, ವಿಧಾನ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ, ನ್ಯಾಯಾಧೀಶರಾಗಿದ್ದಾರೆ, ಎಲ್ಲಕ್ಕೂ ಹೆಚ್ಚು ರಾಷ್ಟ್ರದ ಪ್ರಾಮಾಣಿಕ, ಸದಾಚಾರ ಸಂಪನ್ನ ನಾಗರಿಕರಾಗಿದ್ದಾರೆ.

ಶ್ರೀಮದಥಣಿ ಶಿವಯೋಗಿಯ ಸೇವೆಯಲಿ ಸಮೆದ, ಭಾವ ಬುದ್ಧಿಯಲಿ ಮಿಂದಪುಣ್ಯ-ನಮ್ಮ ಅಪ್ಪಗಳವರದು. ಅರವತ್ತುಮೂರು ಮಂದಿ ಪುರಾತನರ ನೆರಳಿನಲ್ಲಿ ಸಂಜೆ ಮುಂಜಾನಿನಲಿ ಮಹಾಸ್ವಾಮಿಗಳದು ಪ್ರದಕ್ಷಿಣೆ. ಈ ಪ್ರದಕ್ಷಿಣೆ ಭಕ್ತಿ, ಜ್ಞಾನ, ವೈರಾಗ್ಯ ಪಥದಲ್ಲಿ ಶ್ರೀಗಳು ನಡೆಯುವ ನಡೆಯಾಗಿದೆ. ಶ್ರೀ ಶಿವಯೋಗಿಗಳ, ಬಸವಾದಿ ಪ್ರಮಥರ, ಪುರಾತನರ ಅಸಂಖ್ಯಾತ ಶರಣರಲ್ಲಿ ನಮ್ಮ ಅಪ್ಪಗಳು ತಳೆದಿರುವ ಭಕ್ತಿ, ಇರಿಸಿರುವ ನಂಬಿಕೆ, ಶ್ರದ್ಧೆಗಳ ಹಾಗೂ ಅವರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಭೃತ್ಯಾಚಾರದ ಪ್ರತೀಕವಾಗಿದೆ ಈ ಪ್ರದಕ್ಷಿಣೆ.

ವೈರಾಗ್ಯದ ಪರಮಮೂರ್ತಿಯಾದ ಈ ಕಾಷಾಯಂಬರ ಧಾರಿಯ ಹೆಜ್ಜೆಯ ತುಂಬ ನಕ್ಷತ್ರಗಳ ತಿಳಿ ಬೆಳಕು. ಆ ಬೆಳಕಿನ ಹೆಜ್ಜೆಯನ್ನು ಗುರುತಿಸಿ ನಡೆಯುತ್ತಿರುವ ಮತ್ತೋರ್ವ ಕಾಷಾಯಂಬರಧಾರಿ ಶ್ರೀ ಮ.ನಿ.ಪ್ರ ಮಹಾಂತ ಸ್ವಾಮಿಗಳು.

ಶ್ರೀಮೃತ್ಯುಂಜಯ ಅಪ್ಪಗಳು ಎಂದರೆ ಲೋಕ ಕಲ್ಯಾಣಾರ್ಥವಾಗಿ ಹರನಾಗಿ ಧರೆಗಿಳಿದು ಬಂದಿರುವ ಪರಮ ಪುರುಷ. ಶ್ರೀ ಶಿವಯೋಗಿಗಳ ದರ್ಶನ ಪಡೆದು ಪುನೀತರಾಗಿ ಹೊರಗೆ ಬಂದು ಬಲಕ್ಕೆ ತಿರುಗಿದರೆ ಪಕ್ಕದಲ್ಲಿರುವುದೇ ಬಸವ ತೀರ್ಥ. ಅಲ್ಲಿಂದ ಕಾಣಿಸುವುದೇ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹಾಗೂ ಅಖಿಲ ಭಾರತ ವ್ಯಾಪ್ತಿ ಪಡೆದಿರುವ ಅಖಿಲ ಭಾರತ ಶಿವಾನುಭವ ಸಂಸ್ಥೆಯ ಕೇಂದ್ರ ಕಾರ್ಯಾಲಯ. ಶ್ರೀಗಳ ಪ್ರೇರಣೆಯಿಂದ ನಿರ್ಮಾಣಗೊಂಡು ದೇಶದ ಕಲ್ಯಾಣ ಕಾರ್ಯದಲ್ಲಿ ಮಹೋನ್ನತ ಕಾರ್ಯವೆಸಗುತ್ತಿರುವ ಹಲವಾರು ಸಂಸ್ಥೆಗಳಲ್ಲಿ ಈ ಸಂಸ್ಥೆ ಬಹುಮುಖ್ಯವಾದುದು. ಈ ಸಂಸ್ಥೆ ಅನುಭಾವ ಸಾಹಿತ್ಯವನ್ನು ತಿಳಿಗನ್ನಡದಲ್ಲಿ ಬರೆದ ಅದೆಷ್ಟೋ ಗ್ರಂಥಗಳನ್ನು ಪ್ರಕಟಿಸಿದೆ. ನಾಡಿನ ಎಲ್ಲ ಸ್ಥಳಗಳಲ್ಲೂ ಶಿವಾನುಭವ ಸಮ್ಮೇಳನಗಳನ್ನು ನಡೆಯಿಸಿ ಶಿವಯೋಗಿಗಳ, ಶರಣರ, ಮಹಾನುಭಾವರ ಸಂದೇಶಗಳನ್ನು ಸಾಮಾನ್ಯ ಜನತೆಯ ಮನದ ಬಾಗಿಲವರೆಗೆ ತಲುಪಿಸಿದೆ. ಶಿವಾನುಭವವನ್ನು ಸದಾ ತಿಳಿಪಡಿಸಲು ಒಂದು ಪ್ರಮುಖ ಸಾಧನವಾಗಿದೆ, ಈ ಸಂಸ್ಥೆಯ ಮುಖಪತ್ರವಾದ ''ಸಾವಧಾನ'' ಪತ್ರಿಕೆ. ಈ ಕಾರ್ಯಾಲಯದ ಹಿಂದೆ ಇರುವುದೇ 'ಶ್ರೀ ಜಯದೇವಮಂದಿರ' ಅತಿಥಿಗೃಹ. ಅಲ್ಲಿಂದ ಈಚೆಗೆ ಹೊಸದಾಗಿ ನಿರ್ಮಾಣಗೊಂಡಿರುವ ಐದು ಕೋಣೆಗಳುಳ್ಳ ಮತ್ತೊಂದು ಅತಿಥಿಗೃಹ. ಮತ್ತೆ ''ಬಸವ ತೀರ್ಥ''ದ ಹತ್ತಿರ ಬಂದರೆ ಚಿತ್ರದುರ್ಗದ ಜಗದ್ಗುರು ಮಹಾಸನ್ನಿಧಿಗೆ ದಯಮಾಡಿಸಿದಾಗ ವಿಶ್ರಮಿಸುವ ಹಾಗೂ ಹರಗುರು ಚರಮೂರ್ತಿಗಳ ವಾಸಕ್ಕಾಗಿ ನಿರ್ಮಿತಗೊಂಡಿರುವ ಮಂದಿರಗಳು. ಅಲ್ಲಿಂದ ಒಳಗೆ ಬಂದರೆ ಪ್ರಶಾಂತವಾದ ಪ್ರಾಕಾರವುಳ್ಳ ಬಯಲು. ಅದರ ಎದುರಿಗಿರುವುದೇ ಪ್ರಸಾದ ಸ್ವೀಕರಿಸುವ ಸ್ಥಳ. ಅದರೀಚಿಗಿರುವುದೇ ಪ್ರಸಾದ ಸಿದ್ಧಗೊಳಿಸುವ ತಾಣ. ಒಮ್ಮೆಗೇ ಐದುನೂರು ಜನರು

ಪ್ರಸಾದಸ್ವೀಕರಿಸಬಹುದಾದಂತಹ ವಿಶಾಲವಾದ ಹಾಲ್ ಇದು. ನೂರಾರು ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆಯೊಂದಿಗೆ, ತುತ್ತಿಗೊಮ್ಮೆ ಶಿವಯೋಗಿಯನ್ನು ಸ್ಮರಿಸುತ್ತ ಪ್ರಸಾದ ಸ್ವೀಕರಿಸುವುದನ್ನು ನೋಡಿದ ಕಣ್ಣು ಪಾವನವಾಗುತ್ತದೆ, ಇಲ್ಲಿ ಪ್ರಸಾದ ಸ್ವೀಕರಿಸಿದ ಕಾಯ ಪವಿತ್ರವಾಗುತ್ತದೆ.

ಪ್ರಸಾದ ಸ್ವೀಕರಿಸುವ ಈ ಹಾಲ್‌ಗೆ ಹೊಂದಿಯೇ ಪರಮ ಪೂಜ್ಯ ಶ್ರೀಗಳು ವಿಶ್ರಮಿಸುವ ಚಿಕ್ಕದಾದ, ಚೊಕ್ಕಟವಾದ ಒಂದು ಹಾಲ್. ಸದಾ ಮುಗುಳ್ನಗುತ್ತಲೇ ಇರುವ, ನಗುಮುಖಿ. ನಮ್ಮ ಅಪ್ಪಗಳು ನಕ್ಕಾಗಲೆಲ್ಲ ಬೆಳಕಿನ ಕಿರಣಗಳು ಚಲ್ಲವರಿದಂತೆ ನಗೆ ತಿಂಗಳು ಸುತ್ತಲೂ ಹರಡುತ್ತದೆ. ದರ್ಶನಾರ್ಥಿಗಳಾಗಿ ಬಂದ ಎಲ್ಲರ ಯೋಗಕ್ಷೇಮವ ವಿಚಾರಿಸಿ "ಶಿವಯೋಗಿ ಉತ್ತರೋತ್ತರ ಕಲ್ಯಾಣವನ್ನುಂಟು ಮಾಡಲಿ" ಎಂದು ಹರಸುವುದು ಸದಾ ಶ್ರೀಗಳ ಮನಸ್ಸು. ಅವರು ವಿಶ್ರಮಿಸುವ ಮಂಚದ ಎದುರಿಗೇನೇ ಇರುವ ಮಂಟಪದಲ್ಲಿ ಆ ಹಾಲ್‌ನಷ್ಟು ಎತ್ತರವಾಗಿರುವ, ಭವ್ಯವಾದ ಶ್ರೀ ಶಿವಯೋಗಿಗಳ ಬಹು ಸುಂದರವಾದ ತೈಲಚಿತ್ರ. ಅಲ್ಲಲ್ಲಿ ಶಿವಶರಣರ, ಬಸವಣ್ಣನವರ, ಚಿತ್ರದುರ್ಗದ ಜಗದ್ಗುರುಗಳ ಚಿತ್ರಗಳಿಂದ ಸುಶೋಭಿತಗೊಂಡಿದೆ ಈ ಹಾಲ್. ಗುರುವಿನ ಸೇವೆಯಲ್ಲಿಯೇ ಸದಾ ನಿರತರಾಗಿರುವ ಶ್ರೀ ಮ.ನಿ.ಪ್ರ. ಶ್ರೀ ಮಹಾಂತಸ್ವಾಮಿಗಳು ಈ ಬದಿಯಲ್ಲಿ ಮುಹೂರ್ತಮಾಡಿರುತ್ತಾರೆ. ಮಹಾಂತಪ್ಪಗಳು, ಶ್ರೀ ಮೃತ್ಯುಂಜಯ ಅಪ್ಪಗಳವರ ನೆರಳು. ಅಂದು ಶ್ರೀ ಶಿವಯೋಗಿಗಳಿಗೆ ಶ್ರೀ ಮೃತ್ಯುಂಜಯ ಅಪ್ಪಗಳು ಇದ್ದ ಹಾಗೆ ಇಂದು ಶ್ರೀ ಮೃತ್ಯುಂಜಯ ಅಪ್ಪಗಳವರಿಗೆ ಶ್ರೀ ಮಹಾಂತಪ್ಪಗಳು. ಅಂದಿನ ಆ ಗುರು ಶಿಷ್ಯರ ಅಪೂರ್ವವಾದ ಸಂಬಂಧದ ಪುನರಾವೃತ್ತಿ ನಡೆದಿದೆ.

ಶ್ರೀಗಳವರ ದರ್ಶನಾಶೀರ್ವಾದ ಪಡೆದು ಹೊರಗೆ ಬಂದರೆ ಅನುಭವ ಮಂಟಪ, ಸಾವಿರಾರು ಜನರು ಕೂಡಬಹುದಾದಂತಹ ವಿಶಾಲವಾದ ಸ್ಥಳ. ಈ ಮಂಟಪದಲ್ಲಿಯೇ ಪ್ರಸಾದನಿಲಯದ ವಿದ್ಯಾರ್ಥಿಗಳು ಬೆಳಗಿನ ನಾಲ್ಕೂವರೆ ಗಂಟೆ ಹಾಗೂ ಸಂಜೆಯ ಏಳು ಗಂಟೆಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವದು. ಇಲ್ಲಿಯೇ ಎಲ್ಲ ಕಾರ್ಯಕ್ರಮಗಳು ಜರುಗುವದು. ವರ್ಷದ ತುಂಬ ಕಾರ್ಯಕ್ರಮಗಳಿದ್ದೇ ಇರುತ್ತವೆ ಇಲ್ಲಿ.

ಶ್ರೀ ಮುರುಘಾಮಠದಲ್ಲಿ ಶ್ರಾವಣಮಾಸ...

ಶ್ರೀ ಮುರುಘಾಮಠದಲ್ಲಿ ಪ್ರತಿವರ್ಷವೂ ಶ್ರಾವಣಮಾಸ ವೆಂದರೆ ಈ ನಾಡಿನ ಸುತ್ತಲಿನ ಪ್ರದೇಶಕ್ಕೆ ಜ್ಞಾನದಾಸೋಹದ ಹಬ್ಬ. ಶ್ರಾವಣಮಾಸ ಕವಿಕುಲಕ್ಕೆ ಯಾರಿಗೂ ಇಲ್ಲದ ಮೋಹ. ನೋಡಿದ ಎತ್ತಲೂ ಹಸಿರು ನಿಬ್ಬಣ ನೆರೆಯುವ ಈ ಕಾಲ ಕಣ್ಣಿಗೆ ಸೊಗಸಾದ ಹಬ್ಬ. ಎಲ್ಲ ಕಡೆಯಲ್ಲೂ ತುಳು ತುಳುಕಿ ನಿಂತಿರುವ, ಬೆಟ್ಟದವರೆಗೂ ಏರಿರುವ ಈ ಹಸಿರು ಸೌಂದರ್ಯ ನೋಡುವವರ ಕಣ್ಣಿನಲ್ಲಿ ತುಂಬಿ ನಿಲ್ಲುತ್ತದೆ. ಇಂಥ ಶ್ರಾವಣ, ಪ್ರಕೃತಿಯ ಯೌವ್ವನದ ವೈಭವ ಸಾರುತ್ತಿದ್ದರೆ, ಶ್ರೀ ಮುರುಘಾಮಠದಲ್ಲಿ ಭಕ್ತಿಜ್ಞಾನ, ದಾಸೋಹ, ಪೂಜೆ, ಶ್ರದ್ಧೆ, ನಿಷ್ಠೆ, ಕಾವ್ಯ, ಭಾಷಣ, ಪುರಾಣ, ಪ್ರವಚನ, ಸಂಗೀತದ ಮಧುರ ರಾಗಾಲಾಪದಲ್ಲಿ ಮೈದಳೆದು ಜೀವನದಲ್ಲಿ ಕಲ್ಯಾಣವನ್ನು, ಬದುಕಿನಲ್ಲಿ ಶಿವಸೌಂದರ್ಯವನ್ನು ತುಂಬುತ್ತದೆ. ದೇಶದ ನಾನಾ ಭಾಗಗಳಿಂದ ಕವಿಗಳು, ಭಾಷಣಕಾರರು, ಆಸ್ಥಾನ ವಿದ್ವಾನರು, ಗಮಕಿಗಳು, ಸರ್ವಕಲಾ ಪ್ರಪೂರ್ಣರು, ಪಂಡಿತೋತ್ತಮರು, ಸಂಗೀತೋತ್ತಮರು, ದೇಶಿಕೋತ್ತಮರು ಶ್ರೀ ಮುರುಘಾಮಠಕ್ಕೆ ಬಂದು ಮಹಾಸನ್ನಿಧಾನದಲ್ಲಿ ಸೇವೆ ಸಲ್ಲಿಸುತ್ತಾರೆ. ಈ ಸಮಯದಲ್ಲಿ ನಿತ್ಯವೂ ಸಾವಿರಾರು ಜನರಿಗೆ ಜ್ಞಾನ ದಾಸೋಹದೊಂದಿಗೆ ಅನ್ನದಾಸೋಹವೂ ನಡೆಯುತ್ತದೆ.

ಈ ಎಲ್ಲ ಕಾರ್ಯಕ್ರಮಗಳು ಈ ಜ್ಞಾನ ಹಾಗೂ ಅನ್ನದಾಸೋಹದ ಹಿನ್ನೆಲೆಯಲ್ಲಿ ಪರಮ ಚೇತನಶಕ್ತಿ ನಮ್ಮ ಪರಮಗುರು, ಪರಮಾರಾಧ್ಯ ಶ್ರೀ ಮೃತ್ಯುಂಜಯ ಅಪ್ಪಗಳು. ಈ ಮಹಾಯೋಗಿಯ ತಪಸ್ಸು ಈ ನಾಡನ್ನು ಬೆಳಗುತ್ತಿರುವುದರಿಂದಲೇ ಇಂಥ ವೈಜ್ಞಾನಿಕ ಯುಗದಲ್ಲೂ ಮಾನವನಲ್ಲಿ ದೇವರ ಬಗೆಗೆ, ಪಾರಮಾರ್ಥಿಕ ಜೀವನದ ಬಗೆಗೆ ಆಸ್ಥೆ, ಶ್ರದ್ಧೆ, ನಿಷ್ಠೆ ಬಲಿಯುತ್ತಿರುವುದು ಸಾಧ್ಯವಾಗಿದೆ. ಮೃತ್ಯುಂಜಯ ಅಪ್ಪಗಳು ಸರ್ವರನ್ನೂ ಪ್ರೀತಿಸಲು ಕಲಿಸಿದರು. ಸಕಲ ಜೀವಾವಳಿಯ ಲೇಸ ಬಯಸಿದರು. ಬಂದ ಭಕ್ತರಲ್ಲಿ ಸ್ವಧರ್ಮನಿಷ್ಠೆ ಪರಧರ್ಮ ಸಹಿಷ್ಣುತೆಯ ಬೀಜಬಿತ್ತಿ. 'ಇವ ನಮ್ಮವ. ಇವ ನಮ್ಮವ' ಎನ್ನುವುದೇ ವೀರಶೈವಧರ್ಮವೆಂದು ಸಾರಿದರು. ಪೂಜ್ಯಪಾದರ ಸನ್ನಿಧಿಗೆ ದೇಶವಿದೇಶದ ಅತಿರಥಿ ಮಹಾರಥಿಗಳು ಬಂದರು. ರಾಜ ಮಹಾರಾಜರು ಬಂದು ಯಾವುದೋ ಅಲೌಕಿಕವಾದುದನ್ನು ಪಡೆದ ಭಾಗ್ಯಶಾಲಿಗಳಾದರು. ಆಜಾತಿ, ಈ ಜಾತಿ ಈ ಯಾವ ಭೇದ ಭಾವವೂ ಸನ್ನಿಧಿಯ ಹತ್ತಿರ ಸುಳಿಯಲಿಲ್ಲ.

೧೯೧೬ಕ್ಕಿಂತ ಮೊದಲು ಈ ಮಠದ ಹೆಸರನ್ನು ಬಹುಶಃ ಯಾರೂ ಕೇಳಿರಲಿಲ್ಲ. ೧೯೧೬ರಲ್ಲಿ ಕರ್ನಾಟಕ ಕಾಲೇಜು ಆರಂಭಗೊಂಡಾಗ ಪೂಜ್ಯ ಅಪ್ಪಗಳು ಯೋಜಿಸಿದ್ದು, ಗ್ರಾಮೀಣ ಪ್ರದೇಶದಿಂದ ಓದಲು ಬರುವ ಬಡ ಮಕ್ಕಳ ಪ್ರಸಾದ, ವಸತಿ ಬಗ್ಗೆ. ಆ ಯೋಜನೆಯ ಫಲವೇ ಈ ಪ್ರಸಾದನಿಲಯ. ಉಚಿತ ಪ್ರಸಾದ ನಿಲಯ ಎಂಬ ಕಲ್ಪನೆ ಪೂಜ್ಯ ಅಪ್ಪಗಳದು. ಅದನ್ನು ಆಗು ಮಾಡಿದವರೇ ಅಪ್ಪಗಳು. ಈಗ ಇದು ಇಷ್ಟೊಂದು ಬೃಹತ್ತಾಗಿ ಬೆಳೆದುನಿಂತಿದೆ.

ಶ್ರೀಮಠಕ್ಕೆ ಪೂಜ್ಯ ಅಪ್ಪಗಳು ಬರುವವರೆಗೂ ಯಾವ ವ್ಯಕ್ತಿತ್ವವೂ ಇರಲಿಲ್ಲ. ಈ ಪ್ರದೇಶ ಎಂಭತ್ತು ವರ್ಷಗಳ ಪೂರ್ವದಲ್ಲಿ ಡಬ್ಬಿಗಳ್ಳಿಗಳಿಂದ ತುಂಬಿದ ಕಾಡಾಗಿತ್ತು. ಈ ಕಾಡಿನಲ್ಲಿ ಕುಂಬಾರರ ಕಪ್ಪು ಹಂಚಿನ ಮೂರಂಕಣದ ಮುರುಕು ಮಠ, ಹೆಸರಿಗೆ ಮಠ. ಮಳೆಗಾಲದಲ್ಲಿ ಪೂಜ್ಯ ಅಪ್ಪಗಳಿಗೆ ನೀರು

ಹನಿಯದ ಸ್ಥಳ ಕೂಡ ಸಿಗುತ್ತಿರಲಿಲ್ಲ ಮಲಗಲು. ಇಂಥಲ್ಲಿ ಶ್ರೀಗುರು ಅಥಣಿಯ ಶಿವಯೋಗಿಯ ಆಶೀರ್ವಾದ ಪಡೆದು ಬಂದ ಅಪ್ಪಗಳು ಶ್ರೀಮಠಕ್ಕೆ ಒಂದು ಇತಿಹಾಸ ನಿರ್ಮಿಸಿದರು. ಈ ಮಠದ ಇತಿಹಾಸವೆಂದರೆ ಪೂಜ್ಯ ಅಪ್ಪಗಳು. ಅವರೊಂದಿಗಿದ್ದು ಅವರ ಸೇವೆಯಲ್ಲಿಯೇ ತಮ್ಮ ಸಮಗ್ರ ಬದುಕನ್ನು ಸವೆಸಿದ ಶ್ರೀ ನಿ.ಪ್ರ. ಮಹಾಂತಪ್ಪಗಳು ತಮ್ಮ ಗುರುಗಳು ಆರಂಭಿಸಿದ ಎಲ್ಲ ಸಂಸ್ಥೆಗಳನ್ನು ಅಮೋಘವಾದ ರೀತಿಯಲ್ಲಿ ಕಾಪಾಡಿಕೊಂಡು ಬಂದರಲ್ಲದೆ ಅಭೂತಪೂರ್ವವಾಗಿ ಬೆಳೆಸಿದರೂ ಕೂಡ. ಮಹಾಂತಪ್ಪಗಳ ಕರಸಂಜಾತರಾಗಿ ಶ್ರೀ ಮಠಾಧ್ಯಕ್ಷರಾಗಿರುವ ಶ್ರೀ ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳು ಹಿಂದಿನ ಇಬ್ಬರು ಗುರುಗಳು ಆಶೀರ್ವಾದ ಪಡೆದು ಅವರ ಕಾರ್ಯಗಳನ್ನು ಶ್ರದ್ಧೆಯಿಂದ ಮುಂದುವರಿಸಿಕೊಂಡು ಹೊರಟಿದ್ದಾರೆ. ಲೋಕಕಲ್ಯಾಣವೇ ಈ ಮಠದ ಘನ ಉದ್ದೇಶವಾಗಿರುವುದರಿಂದ, ಶ್ರೀ ಮೃತ್ಯುಂಜಯ ಅಪ್ಪಗಳು ಹಚ್ಚಿರುವ ಜ್ಞಾನಜ್ಯೋತಿಗಳು, ಇಲ್ಲಿ ನಿರಂತರವಾಗಿ ಬೆಳಗುತ್ತ, ನಾಡಿನ ಅಜ್ಞಾನ, ಜನಮನದ ಕಾಳಿಕೆಯ ಕಳೆಯುತ್ತವೆ ಎನ್ನುವಲ್ಲಿ ನನಗೆ ಅಪಾರ ನಂಬಿಕೆಯಿದೆ.

*

ವೀರಪ್ಪ, ಗುರುಪಾದಪ್ಪ ಕೋರಿಶೆಟ್ಟರ *

ಮೃತ್ಯುಂಜಯಪ್ಪ ನೀನು ಮಾಡಿದ ಕಾರ್ಯಕ್ಕೆ ಚುತಿಯಿಲ್ಲ ಅಥಣಿ ಮುರುಘೇಂದ್ರ ಶಿವಯೋಗಿಗಳವರ ಪ್ರಸಾದ ವಾಣಿ

ಧಾರವಾಡದ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ''ಕಾಯಕವಾದ ಇಷ್ಟಲಿಂಗ ಪೂಜೆಯನ್ನು ಸತ್ಯ ಶುದ್ಧತೆಯಿಂದ ಸಾವಧಾನವಾಗಿ ಅವಧಾನ ಭಕ್ತಿಯಲ್ಲಿ ಶ್ರದ್ಧಾನಿಷ್ಠಾಭಕ್ತಿಗಳೊಡನೆ ಮಾಡಿ ಲಿಂಗದೊಳಗಿನ ಜಂಗಮವರ್ಯ ಗುರು ಮುರುಘೇಂದ್ರ ಮಹಾ ಶ್ರೀ ಶಿವಯೋಗಿಗಳವರನ್ನು ಹನ್ನೆರಡು ವರ್ಷ ತನುವ ಕೊಟ್ಟು ಒಲಿಸಿಕೊಂಡು ಸದ್‌ಭಕ್ತರ ಭಕ್ತಿಯ ಶಕ್ತಿಯಿಂದ ಜಂಗಮ, ದಾಸೋಹ, ಶಿವಾನುಭವವನ್ನು ನಡೆಯಿಸುತ್ತ ಲೋಕದ ಸದ್ಭಕ್ತರನ್ನು ದೇವಭಕ್ತರನ್ನಾಗಿ ಮಾಡುವುದಕ್ಕೆ, ತಮ್ಮ ನಡೆ ನುಡಿಯು ಭಕ್ತಿ ಚಾರಿತ್ರ್ಯವನ್ನು ತೋರಿಸಲು ಮಾಡಿದ ಕಾರ್ಯಗಳೇ ಅವರ ವ್ಯಕ್ತಿತ್ವವನ್ನು ತೋರಿಸುತ್ತವೆ. ಈ ಕಾರ್ಯವು ೧೯೧೭ ರಿಂದ ೧೯೬೪ರ ವರೆಗೆ ನಡೆಯಿತು.

ಕೆಲವರು ಲೌಕಿಕದ ಸಂಸಾರವನ್ನು ಗುರುಲಿಂಗ ಜಂಗಮದ ಸೇವೆಯನ್ನು ತನು ಮನ ಧನದಿಂದ ಸತ್ಯಶುದ್ಧ ಕಾಯಕದೊಡನೆ ಲಿಂಗಪೂಜೆ ಮಾಡುತ್ತ ಲಿಂಗದಲ್ಲಿ ಜಂಗಮ ದರ್ಶನಮಾಡುತ್ತ ತಮ್ಮ ಲೌಕಿಕದ ಸಂಸಾರವನ್ನು ಸನ್ಮಾರ್ಗದಲ್ಲಿ ನಡೆಯಿಸಿ ಸಸಾರವನ್ನಾಗಿ ಮಾಡಿಕೊಂಡು ಶರಣ ಶರಣೆಯರಾಗಿದ್ದಾರೆ. ಈ ಪರಂಪರೆಯು ಇಪ್ಪತ್ತನೆಯ ಶತಮಾನದವರೆಗೆ ಅವ್ಯಾಹತವಾಗಿ ನಡೆದುಬಂದಿದೆ. ತ್ರಿವಿಧ ದಾಸೋಹ, ಸತ್ಯ ಶುದ್ಧ ಕಾಯಕ ದೊಡನೆ ಭಕ್ತಿಯ ರಾಜಮಾರ್ಗದಲ್ಲಿ ಬಂದ ಶಿವಶರಣ ಪರಂಪರೆಯನ್ನು ಮತ್ತೆ ಮರುಘಾಮಠದ ಮೃತ್ಯುಂಜಯ ಮಹಾ ಸ್ವಾಮಿಗಳವರು ಹತ್ತೊಂಬತ್ತನೆಯ ಶತಮಾನದಿಂದ ಮುಂದುವರಿಸಿ ಕೊಂಡು ಬಂದಿದ್ದಾರೆ, ಇವರು ನಡೆದು ಬಂದ ರಾಜಮಾರ್ಗವನ್ನು ನೋಡೋಣ.

೧೯ನೆಯ ಶತಮಾನದಲ್ಲಿ ಬಸವಾದಿ ಪ್ರಮಥರ ಭಕ್ತಿಯ ರಾಜಮಾರ್ಗದಲ್ಲಿ ನಡೆದು ಬಂದ ಎಷ್ಟೋ ಜಂಗಮವರ್ಯರ ಮಾಲಿಕೆಯಲ್ಲಿ ಅಥಣೀ ಮುರುಘೇಂದ್ರ ಶ್ರೀ ಶಿವಯೋಗಿಗಳ ವರೊಬ್ಬರು ಆಗಿ ಹೋಗಿದ್ದಾರೆ. ಇವರು ಬಸವಣ್ಣನವರ ವಚನಕ್ಕೆ ಅಪ್ಪನವರ ವಚನವೆಂದು ಅಪ್ಪಣೆ ಮಾಡುತ್ತಿದ್ದರು. ಆ ಅಪ್ಪನವರ ವಚನಗಳನ್ನು ನಿತ್ಯ ತಪ್ಪದೆ ಎರಡು ವೇಳೆ ಪಠಿಸುತ್ತಿದ್ದರು. ಈ ಪವಿತ್ರ ಭಕ್ತಿಪಥದ ಪುಸ್ತಕಕ್ಕೆ ರೇಷ್ಮೆಯ ಬಟ್ಟೆ ಕಟ್ಟಿ ತಾವೇ ಸ್ವತಃ ಪಲ್ಲಂಗದ ಮೇಲೆ ಇಡುತ್ತಿದ್ದರು. ಆ ಪಲ್ಲಂಗದ ಮೇಲೆ ಶ್ರೀ ಶಿವಯೋಗಿಗಳವರು ಮಲಗುತ್ತಿದ್ದಿಲ್ಲ. ಚಾಪೆಯ ಮೇಲೆ ಮಲ ಗುತ್ತಿದ್ದರು. ಇದರ ಮೇಲಿಂದ ಅಪ್ಪನವರ ವಚನದ ಮೇಲೆ ಅಪಾರವಾದ ಭಕ್ತಿ ಎಷ್ಟಿತ್ತೆಂಬುದು ಗೊತ್ತಾಗುತ್ತದೆ. ಅಪ್ಪನವರ ವಚನಗಳ ಸ್ವರೂಪ ಶ್ರೀ ಶಿವಯೋಗಿಗಳವರು ಆಗಿದ್ದರು.

ಇಂಥವರ ಸೇವೆಯನ್ನು ಹನ್ನೆರಡು ವರ್ಷ ತನುವನ್ನು ಕೊಟ್ಟು ಗುರು ಮುರುಘ ಎಂದು ಶಿವಯೋಗಿಗಳವರನ್ನು ಒಲಿಸಿಕೊಂಡರು. ಮೃತ್ಯುಂಜಯ ಅಪ್ಪಗಳವರು ಆ ಶಿವಯೋಗಿ ಗಳವರ ಕೃಪಾಕಟಾಕ್ಷದ ಬಲದಿಂದ ಸ್ವಧರ್ಮದಲ್ಲಿ ನಿಷ್ಠೆ ಪರಧರ್ಮದಲ್ಲಿ ವಿಶ್ವಪ್ರೇಮದ ಮಾರ್ಗದೊಳಗೆ ಭಕ್ತಿಯೆಂಬ ಹಾಲನ್ನು ಕುಡಿಸುತ್ತ ಹೊರಟರು.

೧೯೧೭ರಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಪ್ರಸಾದನಿಲಯವು ಪ್ರಾರಂಭವಾಯಿತು. ಇದರ ಬೆಳವಣಿಗೆಗೆ ಮತ್ತು ಒಳ ಪಂಗಡವಿಲ್ಲದ ಬಡಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವವರ ಸಲುವಾಗಿಹಳ್ಳಿಹಳ್ಳಿಗೆ ಪಟ್ಟಣದಿಂದ ಪಟ್ಟಕ್ಕೆ ಹೆಗಲಮೇಲೆ ಲಿಂಗಪೂಜೆಯ ಸಾಮಾನುಗಳ ಹಸಿವೆಯನ್ನು ಹೊತ್ತುಕೊಂಡು ಪಾದಚಾರಿಗಳಾಗಿ ಸಂಚರಿಸುತ್ತ ಭಿಕ್ಷೆಯ ಕಾಯಕದಿಂದ ಬಂದ ಪ್ರಸಾದವನ್ನು ಕೊಟ್ಟು ಮಕ್ಕಳನ್ನು ಸಲಹುತ್ತಿದ್ದರು.

ಈ ಶಿಕ್ಷಣದ ಜೊತೆಯಲ್ಲಿ ವಿದ್ಯಾರ್ಥಿಗಳಲ್ಲಿಯ ಒಬ್ಬ ಸೆಕ್ರೆಟರಿಯ ಮುಖಾಂತರ ನಿತ್ಯ ಸಾಯಂಕಾಲ ಪ್ರಾರ್ಥನೆ ಮುಗಿದ ನಂತರ ವಿದ್ಯಾರ್ಥಿಗಳಿಗೆ ಲಿಂಗಾನುಭವದ ವಿಷಯದ ಬಗ್ಗೆ

* ವ್ಯವಸ್ಥಾಪಕರ, ಶ್ರೀಮುರುಘಾಮಠ, ಧಾರವಾಡ,

ಅನುಭಾವಿಗಳಾದ ಪಂಡಿತರಿಂದ ಬೋಧನೆಯನ್ನು ಮಾಡಿಸಿ ಅವರನ್ನು ವಿದ್ಯಾರ್ಜನೆಯೊಡನೆ ವಿದ್ಯಾಭ್ಯಾಸದ ಕಾಯಕವನ್ನು ಸನ್ಮಾರ್ಗದಲ್ಲಿ ನಡೆಯಿಸುವಂತೆ ತಿಳುವಳಿಕೆ ಮಾಡಿಸುತ್ತಿದ್ದರು. ಸಾಯಂಕಾಲದ ಈ ಪ್ರಾರ್ಥನೆಯ ಸಮಯಕ್ಕೆ ಎಷ್ಟೋ ಗೃಹಸ್ಥರೂ ಕೂಡ ಬಂದು ಭಾಗಿಗಳಾಗಿ ಅಪ್ಪಗಳವರು ಕೊಡಿಸುವ ಲಿಂಗ ತತ್ವದ ಬೋಧನೆಯನ್ನು ಕೇಳಿ ಮನದಾನದಲ್ಲಿದ್ದು ತಮ್ಮ ಕಾಯಕ ದವರೊಡನೆ ನೆಮ್ಮದಿಯಿಂದ ಇರುತ್ತಿದ್ದರು.

ಶಿವಾನುಭವದೊಡನೆ ಬಂದ ನಿಜಗುಣ ಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ, ಘನಮಠ ಶಿವಯೋಗಿಗಳ, ಮುಪ್ಪಿನ ಷಡಕ್ಷರ ಶಿವಯೋಗಿಗಳ ಎಡೆಯೂರು ಸಿದ್ಧಲಿಂಗ ಈ ಈಶ್ವರ ಮುಳುಗುಂದ ಬಾಲಲೀಲಾ ಮಹಾಂತ ಶಿವಯೋಗಿಗಳ, ಮೈಲಾರ ಬಸವಲಿಂಗ ಶರಣ, ಅಥಣೀ ಗಚ್ಚಿನಮಠದ ಶ್ರೀ ಮುರುಘರಾಜೇಂದ್ರ ಶಿವಯೋಗಿಗಳ ಹಾಗೂ ಸಿದ್ಧಲಿಂಗಪ್ಪಗಳ, ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಜಯದೇವ ಸ್ವಾಮಿಗಳ ಹಾಗೂ ಶರಣ ಶರಣೆಯರ ಗ್ರಂಥಗಳನ್ನು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳವರ ಗ್ರಂಥಮಾಣೆಯ ಹೆಸರಿನಿಂದ ನೂರಾರು ಪ್ರಕಟಿಸಿದ್ದಾರೆ ಮತ್ತು ಇವುಗಳನ್ನು ಗುರುಜಂಗಮರಿಗೆ ಸಮಾಜಕ್ಕೆ ಅರ್ಪಿಸಿದ್ದಾರೆ. ಇದರಂತೆ ಸಾಹಿತಿ ಗಳಿಗೆ ಗೌರವಾನ್ವಿತ ಮೇಧಾವಿಗಳಿಗೆ ಮತ್ತು ಅನೇಕ ಜನ ತತ್ವಜ್ಞಾನಿಗಳಿಗೆ ಆಶೀರ್ವಾದಿಸಿದ್ದಾರೆ. ಸಮಾಜದ ಎಲ್ಲ ಬಾಂಧವರಿಗೆ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪುಣ್ಯ ಜೀವಿಗಳಿಗೆ ಜ್ಞಾನದ ಬೆಳಕು ಅವರ ಆತ್ಮಕ್ಕೆ ಬೀಳಲೆಂದು ಓದಿ ಅರಿತು ಆಚರಿಸತಕ್ಕ ಅನುಕೂಲವಾಗಲೆಂದು ಮಹೋಪಕಾರ ಮಾಡಿದ್ದಾರೆ. ೧೯೧೭ ರಿಂದ ೧೯೬೭ರ ವರೆಗೆ ಪ್ರಸಾದ ನಿಲಯವು ಹೆಮ್ಮರವಾಗಿ ನಿಂತು ಇಲ್ಲಿಯ ಪ್ರಸಾದದ ಮದ್ದ ಸೇವಿಸಿ ಇದರಿಂದ ಆರೋಗ್ಯವುಳ್ಳವರಾಗಿ ಆಕಾಶದಲ್ಲಿ ನಕ್ಷತ್ರಗಳು ಪ್ರಕಾಶಮಾನವಾಗಿ ಹೊಳೆಯುವಂತೆ ರಾಷ್ಟ್ರಮಟ್ಟದಲ್ಲಿ ಸಮಾಜದಲ್ಲಿ ಧಾರ್ಮಿಕ ರಂಗದಲ್ಲಿ ಅನೇಕ ತರಹದ ಕಾಯಕ ಜೀವಿಗಳು ಹೊಳೆಯುತ್ತಿದ್ದಾರೆ. ಹೊಳೆದು ಹೋಗಿದ್ದಾರೆ.

೧೯೪೧ರಲ್ಲಿ ಮೃತ್ಯುಂಜಯ ಮಹಾಸ್ವಾಮಿಗಳವರು ಪ್ರಸಾದ ನಿಲಯಗಳ ಪರಿಷತ್ತು ಕರೆದಿದ್ದರು. ಈ ಪರಿಷತ್ತಿನಲ್ಲಿ ಇಡೀ ಭಾರತದ ಲಿಂಗಾಯತ ಪ್ರಸಾದನಿಲಯಗಳು ಭಾಗ ವಹಿಸಿದ್ದವು. ಈ ಪ್ರಸಾದ ನಿಲಯದ ಪ್ರಮುಖರು ಈ ಪ್ರಸಾದ ನಿಲಯದ ಪ್ರಸಾದದ ವ್ಯವಸ್ಥಾ, ಸ್ವಚ್ಚತಾ, ಶಿಸ್ತು, ಇಲ್ಲಿಯ ಪ್ರಾರ್ಥನೆ ಮತ್ತು ಸೇವಾ ಭಾವನೆ ಮೊದಲಾದವುಗಳ ಕಾರ್ಯವನ್ನು ನೋಡಿ ಸಂತೋಷಪಟ್ಟು ಮನದಾನಂದದಿಂದ ಈ ಪ್ರಸಾದ ನಿಲಯವು ಎಲ್ಲ ಪ್ರಸಾದನಿಲಯಗಳ ರಾಜಾ ಎಂದು ಘೋಷಿಸಿದರು. ಅಪ್ಪಗಳವರು ಈ ವಿದ್ಯಾರ್ಜನೆಗೆ ಅವಕಾಶ ನೀಡಿ ಸ್ವಧರ್ಮದಲ್ಲಿ ನಿಷ್ಠೆ ಪರಧರ್ಮದಲ್ಲಿ ವಿಶ್ವಪ್ರೇಮವನ್ನು ಹುಟ್ಟಿಸಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಾ ಕೃಪಾಶೀರ್ವಾದ ಮಾಡುತ್ತಿದ್ದರು. ಪ್ರತಿಯೊಂದು ಸಭೆಯಲ್ಲಿ ಮಂಗಲಕಾಲಕ್ಕೆ ಭಕ್ತರ ಭಕ್ತಿಯನ್ನು ನನ್ನ ಸೆರಗಿನಲ್ಲಿ ಕೊಟ್ಟು ನನಗೂ ಭಕ್ತಿ ಕಲಿಸಿರಿ ಅಂತಾ ಅಪ್ಪಣೆ ಮಾಡುತ್ತಿದ್ದರು. ಇದು ಅವರ ಕಿಂಕರತ್ವವನ್ನು ತೋರಿಸುತ್ತದೆ.

೧೯೪೧ರಲ್ಲಿ ಅಖಿಲ ಭಾರತ ಶಿವಾನುಭವ ಸಂಸ್ಥೆಯನ್ನು ಸ್ಥಾಪಿಸಿ ಇದರ ಮುಖಾಂತರ ಇದರ ಮುಖಪತ್ರಿಕೆಯಾದ **'ಸಾವಧಾನ'**ವನ್ನು ೧೯೪೭ರಲ್ಲಿ ಹೊರಡಿಸಿದರು. ಇದಕ್ಕೆ ಮಹಾ ತತ್ವಜ್ಞಾನಿಗಳಾದ ಮತ್ತು ಪಂಡಿತರಾದ ನಾಗಭೂಷಣ ಶಾಸ್ತ್ರಿಗಳವರನ್ನು ಸಂಪಾದಕರನ್ನಾಗಿ ಮಾಡಿದರು. ನೆಮ್ಮದಿಯ ಸಂಸಾರವನ್ನು ಸಸಾರವನ್ನಾಗಿ ಮಾಡಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತೆ ತತ್ವಜ್ಞಾನಿಗಳಾದ ಪಂಡಿತ ನಾಗಭೂಷಣ ಶಾಸ್ತ್ರಿಗಳವರ ಸಂಪಾದಕತ್ವದಿಂದ ಸಮಾಜದಲ್ಲಿ ನಡೆನುಡಿಯ ಆಚರಣೆಯಿಂದ ಕೂಡಿದ ಜ್ಞಾನದ ಪ್ರಸಾರವು ಉತ್ತಮವಾಗಿ ಇಲ್ಲಿಯವರೆಗೆ ನಡೆದುಬಂದಿದೆ.

ಈ ಸಂಸ್ಥೆಯು, ಶಿವಾನುಭವ ಕ್ಲಾಸುಗಳನ್ನು ನಡೆಯಿಸಿ ಪ್ರತಿವರ್ಷ ಪರೀಕ್ಷೆಗಳನ್ನು ತಕ್ಕೊಂಡು ಈ ಪರೀಕ್ಷೆಯಲ್ಲಿ ಶಿವಾನುಭವದ ಸಂಪೂರ್ಣ ತಿಳುವಳಿಕೆಯಲ್ಲಿ ಉತ್ತಮವಾಗಿ ಬರೆದು ಮೊದಲನೆಯ ತರಗತಿಯಲ್ಲಿ, ಪ್ರವೇಶ, ಪರಿಚಯ, ಭೂಷಣಗಳಲ್ಲಿ, ಪಾಸಾದ ವಿದ್ಯಾರ್ಥಿ, ವಿದ್ಯಾರ್ಥಿನಿಗಳಿಗೆ ಶ್ರೀ ಶಿವಯೋಗಿಗಳವರ ಮೂರ್ತಿ ಇರುವ ಬಂಗಾರದ ಪದಕವನ್ನು ಶ್ರೀ ಅಪ್ಪಗಳವರಿಂದ ಕೊಡಿಸಿ ಆಶೀರ್ವದಿಸಿತ್ತು. ಈ ಮೂರು ಪರೀಕ್ಷೆಗಳ ಪಠ್ಯ ಪುಸ್ತಕಗಳನ್ನು ಈ ಸಂಸ್ಥೆಯು ಪ್ರಕಟಿಸಿ ಅಭ್ಯಾಸಕ್ಕೆ ಅನುಕೂಲಮಾಡಿಕೊಟ್ಟಿತ್ತು. ಈ ಸಂಸ್ಥೆಯು ಉತ್ತಮ ಬೋಧಕರನ್ನು ತರಬೇತಿಯ ಮುಖಾಂತರ ತಯಾರಿಗೊಳಿ ಇಡುತ್ತಿತ್ತು. ಮತ್ತು ಹದಿನೇಳು ಸಮ್ಮೇಳನಗಳನ್ನು ಬೆಳಗಾಂ, ಧಾರವಾಡ, ಚಿತ್ರದುರ್ಗ, ಹಂಸಭಾವಿ ಮೊದಲಾದ ಅನೇಕ ಕಡೆಗೆ ನಡೆಯಿಸಿ ಮಾನವನು ದೇವನಾಗುವ ಸದ್ಗುಣದೊಡನೆ ಪ್ರೋತ್ಸಾಹಿಸುತ್ತಿತ್ತು. ಈ ಸಂಸ್ಥೆಯ ಮುಖಾಂತರ ಶ್ರೀ ಅಪ್ಪಗಳವರು ಒಳಪಂಗಡಗಳನ್ನು ಕಿತ್ತುಹಾಕಿದರು.

೧೯ನೆಯ ಶತಮಾನದಲ್ಲಿ ಮೃತ್ಯುಂಜಯಪ್ಪಗಳವರು ಮಹಾಜ್ಞಾನಿಗಳಾದ, ಹಣೆಗೆ ಭಸ್ಮದ ತ್ರಿಪುಂಡರ ಧಾರಣ, ಕೊರಳಲ್ಲಿ ಲಿಂಗ, ಮೈಮೇಲೆ ಖಾದಿ ಬಟ್ಟೆಯ ಹೊದಿಕೆ, ಖಾದಿ ದೋತರದೊಡನೆ ಇರುವ ಕರ್ನಾಟಕದ ಗಾಂಧೀ ಹರ್ಡೇಕರ ಮಂಜಪ್ಪನವರನ್ನು ಕೂಡಿಕೊಂಡು ಬಸವಜಯಂತಿಯ ಆಚರಣೆ ಯನ್ನು ನಡೆಸಲು ಪ್ರಾರಂಭಿಸಿದರು. ಮತ್ತು ಷಟ್‌ಸ್ಥಲದ ಧ್ವಜವನ್ನು ಹಾರಿಸಿ ಎಲ್ಲ ಕಡೆಗೆ ಮೆರೆಯಿಸಿದರು.

ಜಂಗಮವು ಲಿಂಗವಾಗಿದ್ದರಿಂದ ಜಾತಿ ಕುಲ ಸೂತಕವಿಲ್ಲದ ಅಜಾತಂಗೆ ಕುಲವಿಲ್ಲವೆಂದು ಬಸವಣ್ಣನವರ ಕೆಳಗಿನ ವಚನ ನೋಡಿದರೆ ಅರಿವಾಗುತ್ತದೆ.

ಆಚಾರವನರಿಯಿರಿ, ವಿಚಾರವನರಿಯಿರಿ,

ಜಂಗಮಸ್ಥಲ ಲಿಂಗ ಕಾಣಿರಯ್ಯಾ,

ಜಾತಿ ಭೇದವಿಲ್ಲ ಸೂತಕವಿಲ್ಲ ಅಚಾಂತಂಗೆ ಕುಲವಿಲ್ಲ,

ನುಡಿದಂತೆ ನಡೆಯದಿನ್ನರೆ

ಕೂಡಲಸಂಗಯ್ಯಾ ಮೆಚ್ಚ ಕಾಣಿರಯ್ಯಾ

ಇದನ್ನೇ ಮೈಲಾರ ಬಸವಲಿಂಗ ಶರಣರು ತಮ್ಮ ಕೃತಿಯಲ್ಲಿ ಹೇಳಿದ್ದನ್ನು ಕೆಳಗೆ ಕಾಣಿಸಿದ್ದೇನೆ. ಇದರಿಂದ ಮೃತ್ಯುಂಜಯಪ್ಪಗಳವರ ಪ್ರಮಥರ ಶಿವಾಚರಣೆಯ ಕಾರ್ಯವನ್ನು ಹೇಗೆ ನಡೆಯಿಸಿಕೊಂಡು ಹೋಗುತ್ತಿದ್ದರು. ಎಂಬುದು ಗೊತ್ತಾಗುತ್ತದೆ.

ಗುರುಕಲ ಸುಜಾತರೆಂದೆನಿಸುತಿಹ ಸದಭಕ್ತ

ಶರಣರೋಳ್ ಪೂರ್ವ ಕುಲಗೋತ್ರಜಾತ್ಯಾಶ್ರಮವ

ನರಸಿ ನೋಡದ ಭಕ್ತ ಜಂಗಮವೇ ಧನವೆಂದು ನೆರನಂಬಿ ಬಳಿಕಲವರ

ಚರಣ ಸೇವೆಯನು ಮನ ವಚನ ಕಾಯಕವು ತ್ರೈ

ಕರಣ ಶುದ್ಧತೆಯಿಂದ ಮಾಡಿ ಭಕ್ತಿಯೊಳವರ

ಕರುಣ ಪ್ರಸಾದವನು ಭೋಗಿಸುವ ಪ್ರಮಥರ ಶಿವಾಚರಣಗಾಣನು,

ಇದನ್ನರಿತ ಮೃತ್ಯುಂಜಯ ಅಪ್ಪಗಳವರು ಯಾವಾಗಲೂ ಮಠದಲ್ಲಿ ಹತ್ತು ಹನ್ನೆರಡು ಗುರು ಜಂಗಮರನ್ನು ವಾಸಿಸಿಕೊಂಡು ಅವರ ಮಧ್ಯದಲ್ಲಿ ಇರುತ್ತಿದ್ದರು. ಇವರ ಪೂರ್ವಾಶ್ರಮವನ್ನು ಮನಭಾಗದಲ್ಲಿ ಎಂದೂ ತರುತ್ತಿರಲಿಲ್ಲ.

ಮೃತ್ಯುಂಜಯ ಅಪ್ಪಗಳವರ ಕೃಪಾದೃಷ್ಟಿಗೆ ಯಾವುದೇ ರೀತಿಯ ಕಾಯಕವಿರಲಿ ನಡೆ ನುಡಿಯ ಧರ್ಮಾಚರಣೆಯುಳ್ಳ ಸದಭಕ್ತರು ದರ್ಶನ ಮಾಡಿಕೊಂಡಿರುವರೋ ಅವರೆಲ್ಲರಿಗೆ ಅವರ ಸಂಸಾರವು ಸನ್ಮಾರ್ಗದಲ್ಲಿ ನಡೆದು ಸಸಾರವುಳ್ಳದ್ದಾಗಿ ನೆಮ್ಮದಿಯಿಂದ ಇರುವಂತೆ ಮಾಡಿದ್ದಾರೆ. ಅವರ ದರ್ಶನಕ್ಕೆ ಬಂದವರು ಎಷ್ಟೋ ಪ್ರಮುಖರು. ಇದರಲ್ಲಿಯ ಕೆಲವು ಪ್ರಮುಖರ ಬಗ್ಗೆ ಕೆಳಗೆ ಕಾಣಿಸಿದ್ದೇನೆ. ಮತ್ತು ದರ್ಶನಕ್ಕೆ ಬಂದವರನ್ನು ಬರೆಯಲಾಗಿದೆ.

೧) ರಾಷ್ಟ್ರಪತಿ, ಡಾ॥ರಾಜೇಂದ್ರ ಪ್ರಸಾದ, ೨) ತತ್ವಜ್ಞಾನಿ ರಾನಡೆಯವರು ೩) ಶ್ರೀರಾಮ ಕೃಷ್ಣ ಮಠದ ಸಂಬುದ್ದಾನಂದರು, ೪) ನಿಜಲಿಂಗಪ್ಪನವರು ೫) ಸಭಾಪತಿ ಹಳ್ಳಿಕೇರಿ ಗುದ್ದಲ್ಲೆಪ್ಪನವರು, ಬಿ. ಜಿ. ಬಣಕಾರರವರು ೬) ಬೌದ್ಧ ಧರ್ಮದ ಗುರುಗಳು ೭) ದಿವಾಕರ ರಂಗರಾಯರು, ೮) ಮೈಸೂರು ಮಹಾರಾಜರಾದ ಜಯಚಾಮರಾಜ ಒಡೆಯರರು ೯) ರ್‍ಯಾಂಗಲ್‌ರ ಶ್ರೀ ಪಾವಟೆಯವರು ವಾಯ್ಸ ಚಾನ್ಸ್‌ಲರ. ಮೈಸೂರು ಅರಮನೆಯ ಗುರುಗಳು, ಗೌರಿಶಂಕರ ಮಹಾಸ್ವಾಮಿಗಳವರು, ಜೈನ ಸಾಹಿತಿಗಳಾದ ರಾಮಮುದಲಿಯಾರ, ಮತ್ತು ಲಕ್ಷಣ ಮುದಲಿಯಾರ ಇನ್ನೂ ಅನೇಕ ಕವಿಗಳು ಗಮಕಿಗಳು, ಸಾಹಿತಿಗಳು ಕಲಾವಂತರು ಇವರೊಡನೆ ಮನ್ಸೂರ್ ಮಲ್ಲೇಶಪ್ಪನವರು, ಬಸವರಾಜ ರಾಜಗುರುಗಳು ಮತ್ತು ಪಂಚಾಕ್ಷರಯ್ಯಾನವರು ಹಿರೇಮಠರು ಇಬ್ಬರು ಉಪಕುಲಪತಿಗಳು ಆದ ಸದಾಶಿವ ಒಡೆಯರವರು ಆರ್.ಸಿ. ಹಿರೇಮಠ, ಸರ್ವಜ್ಞನ ವಚನಶೋಧಕರಾದ ಉತ್ತಂಗಿ ಚನ್ನಪ್ಪನವರು, ಇನ್ನೂ ಅನೇಕ ಮೇಧಾವಿಗಳವರು ದರ್ಶನ ಪಡೆದಿದ್ದಾರೆ. ಶ್ರೀ ಮುರುಘಾಮಠದ ಮಹಾಂತಪ್ಪಗಳವರು, ಮೃತ್ಯುಂಜಯ ಅಪ್ಪಗಳವರು ಮಾಡಿದ ಕಾರ್ಯಗಳೆಂದರೆ ಮಹಾಂತಪ್ಪಗಳವರ ಕಾರ್ಯ, ದೇಹ ಎರಡು ಆತ್ಮಾ ಒಂದೆ ಇದ್ದು ಮೃತ್ಯುಂಜಯಪ್ಪಗಳವರ ನೆರಳಿನಂತೆ ಇದ್ದರು ಮಹಾಂತಪ್ಪಗಳವರು. ಮೃತ್ಯುಂಜಯಪ್ಪಗಳವರು ಜ್ಞಾನಾ ರೂಪವಾಗಿದ್ದರೆ ಸಣ್ಣ ಅಪ್ಪಗಳವರು ಕ್ರಿಯಾರೂಪವಾಗಿದ್ದರು. ಆದ್ದರಿಂದ ೧೯೨೩ರಿಂದಾ ೧೯೬೩ರ ವರೆಗೆ ಅವ್ಯಾಹತವಾಗಿ ಮೇಲೆ ಹೇಳಿದ ಎಲ್ಲ ಕಾರ್ಯಜ್ಞಾನದಲ್ಲಿ ಹುಟ್ಟಿದ್ದನ್ನು ಕ್ರಿಯಾಕ್ಕೆ ಅಪ್ಪಣೆಯಾಗುತ್ತಿತ್ತು. ಮಹಾಂತಪ್ಪಗಳವರನ್ನು ೧೯೨೩ ರಿಂದ ೧೯೬೪ರ ವರೆಗೂ ಅವರ ತನುವಿನಿಂದ ಚೆನ್ನಾಗಿ ಸೇವೆ ತಕ್ಕೊಂಡು ಅವರಿಗೆ ತಮ್ಮ ಶಿವಲಿಂಗ ದೃಷ್ಟಿಯೊಳಗಿನ ತೇಜಸ್ಸನ್ನು ಕೊಟ್ಟು ಹೋಗಿದ್ದಾರೆ. ಶ್ರೀ ಮೃತ್ಯುಂಜಯ ಅಪ್ಪಗಳ ಆ ತೇಜಸ್ಸಿನ ಕೃಪಾಶೀರ್ವಾದದಿಂದಾಗಿ ಮಠದಲ್ಲಿ ಸದ್ಭಕ್ತರ ಸದ್ಭಕ್ತಿಯ ಸಂಪತ್ತು ಅವರ ಪಾದದಲ್ಲಿ ಹೆದ್ದೊರೆಕೆರೆ ತುಂಬಿದಂತೆ ತುಂಬಿ ಹರಿದಾಡಿ ಕೋಡಿ ಒಡೆದು ಸಮಾಜಕ್ಕೆ ಹರಿದು ಭಕ್ತಿ ಚಾರಿತ್ರ್ಯ ತೋರಿ ಸಲಹುವರಾಗಿದ್ದುದರಿಂದ ಅವರು ಜಂಗಮ ಸಾರ್ವಭೌಮರಾದರು.

ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳು ಮಾಡಿದ ಲೋಕಹಿತ ಕಾರ್ಯಗಳು ಸಾವಿರಾರು. ಅವರು ಆಶೀರ್ವದಿಸಿದ ಭಕ್ತರ ಸಂಖ್ಯೆಯೂ ಅಪಾರ. ಅವೆಲ್ಲ ಈಗ ಪವಾಡಗಳೆಂಬಂತೆ ತೋರುತ್ತದೆ. ಆದರೆ ಅಂದಿಗೆ ಅವು ಸತ್ಯ ಸಂಗತಿಗಳು.

ಡಾ॥ ಮೋದಿ ಮುರಿಗಪ್ಪನವರು ಶ್ರೀ ಮೃತ್ಯುಂಜಯ ಅಪ್ಪಗಳವರ ಕಣ್ಣಿನ ಪರೆಯನ್ನು ಆಧುನಿಕ ಶಸ್ತ್ರಗಳಿಂದ ಸಾವಧಾನದಿಂದ ಅವಧಾನದ ಕಣ್ಣಿನ ಪೊರೆ ಸರಳವಾಗಿ ತೆಗೆದು ಅದೇ ಕಣ್ಣಿಗೆ ಆ ಪೋರೆಯನ್ನು ತೋರಿಸುವ ಮೊದಲೇ ಅಪ್ಪಗಳವರ ಕೃಪಾ ಶಿವಲಿಂಗ ದೃಷ್ಟಿ ಡಾ॥ ಮುರಿಗಪ್ಪನವರ ಮೇಲೆ ಬಿತ್ತು. ಅವಾಗ್ಗೆ ಅಪ್ಪಗಳವರು ಮುರಿಗೆಪ್ಪಾ ಕಣ್ಣು ಕೊಟ್ಟೆ ಅಂತಾ ಆನಂದದ ಅಪ್ಪಣೆ ಆದಕೂಡಲೇ ಆ ಡಾಕ್ಟರರು ಮಠದೊಳಗೆ ಕೂತ ಆ ಮುರುಘೇಶನು ಕೊಟ್ಟಿದ್ದಾನೆ ಅಂತಾ ಅವರ ಪಾದಕ್ಕೆ ನಮಸ್ಕಾರ ಮಾಡಿ ಆ ಪೊರೆಯನ್ನು ಅದೇ ಕಣ್ಣಿಗೆ ತೋರಿಸಿದರು. ಮುಂದೆ ಇವರೊಂದಿಗೆ ನೂರಾರು ಜನ ಬಡ ಜನರ ನೇತ್ರದ ಪೊರೆ ತೆಗೆದು ಅಪ್ಪಗಳವರ ಉಪಚಾರದಂತೆ ಎಲ್ಲ ರೀತಿಯಿಂದ ಉಪಚಾರ ಮಾಡಿ, ಅಪ್ಪಗಳವರ ಕೃಪಾಶೀರ್ವಾದ ಮಾಡಿಸಿ ಕಳುಹಿಸಿಕೊಟ್ಟರು.

ಬಡ ವಿದ್ಯಾರ್ಥಿ ಪಾಟೀಲ ಪುಟ್ಟಪ್ಪನವರು ಈ ಪ್ರಸಾದ

ಸಿ ಮದಲ್ಲಿ ಓದಿ, ಆ ಓದನ್ನು ಸಾವಧಾನದಿಂದ ಅವಧಾನದಲ್ಲಿ ಶ್ರದ್ಧಾ ನಿಷ್ಠಾ ಭಕ್ತಿಯಿಂದ ಕಲಿತಿದ್ದರಿಂದ ಅವರು ವಿದ್ಯಾವಂತರಾಗಿ ಸಣ್ಣ ಕಾಯಕದಲ್ಲಿ ತೊಡಗಿದ್ದರು. ಹುಬ್ಬಳ್ಳಿಯಲ್ಲಿ ಒಂದು ದಿವಸ ಇದೇ ಪ್ರಸಾದ ನಿಲಯದಲ್ಲಿ ಓದಿ ವಿದ್ಯಾವಂತರಾಗಿ ಮಂತ್ರಿಗಳಾದ ಕೆ.ಎಫ್.ಪಾಟೀಲರ ಸಂಗಡ ಅವರ ಕಾರಿನಲ್ಲಿ ಧಾರವಾಡಕ್ಕೆ ರಾಜಕೀಯ ಕಾರ್ಯಕ್ರಮದ ನಿಮಿತ್ತವಾಗಿ ಬಂದಾಗ ಶ್ರೀ ಮುರುಘಾ ಮಠಕ್ಕೆ ಬಂದು ತಾಯಿಯಂತೆ ಪ್ರಸಾದದ ಮದ್ದಕೊಟ್ಟು ಈ ಸ್ಥಾನಕ್ಕೆ ಕಳಿಸಿದ ಗುರು ತಾಯಿ ಮೃತ್ಯುಂಜಯ ಅಪ್ಪಗಳವರನ್ನು ಅವರ ಸದ್ಗುರುಪುತ್ರರಾದ ಮಹಾಂತಪ್ಪಗಳ ದರ್ಶನ ಮಾಡಿಕೊಂಡು ಪ್ರಸಾದ ತೆಗೆದುಕೊಂಡು ಹೋದರು. ಅವಾಗ ಪಾಟೀಲ ಪುಟ್ಟಪ್ಪನವರನ್ನು ರಾಜಕೀಯ ವಿಚಾರದೊಳಗೆ ಮರೆತುಬಿಟ್ಟು ಹೋದರು.

ಶ್ರೀ ಪಾಟೀಲ ಪುಟ್ಟಪ್ಪನವರು ಮಠದ ಒಳಗೆ ಬಂದು ಒಂದು ಕಟ್ಟೆಯ ಮೇರೆ ಕುಳಿತು ನಿರ್ಗತೆಯಿಂದ ವಿಚಾರ ಮಾಡುತ್ತ, ಹುಬ್ಬಳ್ಳಿಗೆ ಹೋಗಲಿಕ್ಕೆ ಕಿಸೆಯಲ್ಲಿ ಒಂದು ಕಾಸೂ ಕೂಡಾ ಇರಲಿಲ್ಲ. ಯಾರನ್ನು ಕೇಳುವುದು? ಇಲ್ಲಿ ನನಗೆ ಪರಿಚಯಸ್ಥರು ಯಾರೂ ಇಲ್ಲವಲ್ಲ ಅಂತಾ ಅನ್ನುವಷ್ಟರಲ್ಲಿ ಒಳಗ ಮೃತ್ಯುಂಜಯ ಅಪ್ಪಗಳವರು ಮಹಾಂತದೇವರು ಹೊರಗೆ ಪಾಟೀಲ ಪುಟ್ಟಪ್ಪ ಕೂತಿದ್ದಾನೆ, ಒಳಗೆ ಕರೆಯಿರಿ, ಅಂತಾ ದೇವರಿಗೆ ಅಪ್ಪಣೆಮಾಡಿದರು. ಇಲ್ಲಪಾ ಕೆ.ಎಫ್.ಪಾಟೀಲ ಮಂತ್ರಿಗಳವರ ಕಾರಿನಲ್ಲಿ ಹೋದ್ರು ಅಂತಾ ಹೇಳಿದ ಕೂಡಲೇ ಅಪ್ಪಗಳವರು ಜ್ಞಾನದ ಕಣ್ಣಿನಿಂದ ನೋಡಿದ ಅವರನ್ನು ಹೊರಗೆ ಕೂತಿದ್ದಾರಪಾ ಮತ್ತೊಮ್ಮೆ ನೋಡಿರಿ ಅಂತಾ ಅಪ್ಪಣೆಯಾದ ಕೂಡಲೇ ಹೊರಗೆ ಹೋಗಿ ನೋಡಲು ಅಲ್ಲಿ ಕೂತಿದ್ದರು.

ಪುಟ್ಟಪ್ಪನವರೇ ಅಪ್ಪಗಳವರು ತಮ್ಮನ್ನು ಕರೆಯಿರಿ ಅಂತಾ ಅಪ್ಪಣೆ ಮಾಡಿದ್ದಾರೆ, ಬೇಗನೆ ಬನ್ನಿರಿ ಅಂತಾ ಹೇಳಿದರು. ಅವಾಗ ನಾನು ಆಶೀರ್ವಾದ ತೆಗೆದುಕೊಂಡಿದ್ದೇನೆ. ಅಂತಾ ಹೇಳಿದರು. ಆದರೂ ಬರಲಿಕ್ಕೆ ಹೇಳಿದ ತಕ್ಷಣ ಒಳಗೆ ಬಂದು ಸಾಷ್ಟಾಂಗ ಹಾಕಿ ಎದ್ದು ನಿಂತರು. ಆವಾಗ 'ದೇವರೂ' ಅಂದ ತಕ್ಷಣ, ಪಾಕೀಟಿನಲ್ಲಿ ಕೃಪಾಶೀರ್ವಾದ ಇಟ್ಟುಕೊಂಡು ಅಂದು ಅವರ ಹಸ್ತದಲ್ಲಿ ಕೊಟ್ಟರು. ಪುಟ್ಟಪ್ಪ, ಶ್ರೀ ಶಿವಯೋಗಿಗಳವರ ಕೃಪಾಶೀರ್ವಾದ ತೆಗೆದುಕೊ, ಶಿವಯೋಗಿಗಳವರು ಕಲ್ಯಾಣ ಮಾಡಲಿ ಅಂತಾ ಆಶೀರ್ವಾದ ಅವರ ಮಡಿಯಲ್ಲಿ ಹಾಕಿದರು. ತಕ್ಷಣ ನಮಸ್ಕರಿಸಿ ಹೊರಗೆ ಬಂದು ನೋಡಲು ಅದರಲ್ಲಿ ಆರು ರೂಪಾಯಿಗಳು ಇದ್ದವು. ಇದನ್ನು ನೋಡಿ ಕಣ್ಣಿಗೆ ಒತ್ತಿಕೊಂಡು ಆನಂದಭಾಷ್ಪಗಳನ್ನು ಉದುರಿಸುತ್ತ ಹುಬ್ಬಳಿಗೆ ಹೋದರು. ಈಗ ಪಾಟೀಲ ಪುಟ್ಟಪ್ಪನವರು ಎಷ್ಟೋ ಗೌರವದ ಹುದ್ದೆಗಳೊಂದಿಗೆ ಪತ್ರಿಕೋದ್ಯಮದಲ್ಲಿ ಸಾರ್ವಭೌಮರಾಗಿದ್ದಾರೆ.

ಶ್ರೇಷ್ಠ ಕವಿಗಳಾದ ಕಣವಿಯವರು ಸಹ ಈ ಪ್ರಸಾದನಿಲಯದ ವಿದ್ಯಾರ್ಥಿಗಳು. ಮತ್ತೊಬ್ಬ ಬಡ ವಿದ್ಯಾರ್ಥಿ ದೊಡ್ಡವಾಡದ ಗುರುಪುತ್ರಪ್ಪನವರು ಶ್ರೀ ಮುರುಘಾಮಠದ ಶ್ರೀ ಮ.ನಿ.ಜಗದ್ಗುರು ಮುರುಘರಾಜೇಂದ್ರ ಪ್ರಸಾದ ನಿಲಯಕ್ಕೆ ಹೈಸ್ಕೂಲಿಗೆ ವಿದ್ಯಾರ್ಜನೆಗಾಗಿ ಈ ಪ್ರಸಾದ ನಿಲಯದ ಅರ್ಜಿ ತೆಗೆದುಕೊಂಡು ಅದರಲ್ಲಿಯ ಎಲ್ಲ ಮಾಹಿತಿ ತುಂಬಿ ಕಳಿಸಿಕೊಟ್ಟಿದ್ದರು. ಆ ವೇಳೆಗೆ ಪ್ರಸಾದ ನಿಲಯಕ್ಕ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಗೆ ಆಗಿದ್ದರಿಂದ ಈ ವಿದ್ಯಾರ್ಥಿಯನ್ನು ತೆಗೆದುಕೊಂಡಿರಲಿಲ್ಲ.

ಅವಾಗ ಆ ವಿದ್ಯಾರ್ಥಿಯು ನಿರಾಶೆಯಿಂದ ನಿರ್ಗತಿಕವಾಗಿ ಊರೊಳಗೆ ಹೇಗೋ ಕಾಲ ಕಳೆದು ಮತ್ತೊಮ್ಮೆ ಶ್ರೀ ಮೃತ್ಯುಂಜಯಪ್ಪಗಳವರ ದರ್ಶನಕ್ಕೆ, ಬಂದರು, ದರ್ಶನದ ನಂತರ ಬಹಳ ತ್ರಾಸಿನಲ್ಲಿರುವ ಈ ಬಡ ವಿದ್ಯಾರ್ಥಿಯೂ ಮತ್ತೆ ಅಪ್ಪಗಳವರನ್ನು ಪ್ರಾರ್ಥಿಸಿಕೊಂಡನು. ತಮ್ಮ ಪ್ರಸಾದ ನಿಲಯದಲ್ಲಿ ಪ್ರವೇಶಕ್ಕಾಗಿ, ಅವಾಗ ಅಪ್ಪಗಳವರು ಪ್ರಸಾದ ನಿಲಯದ ಚೇರಮನ್ನರನ್ನೂ ಕರೆದು ಈ ಬಡ ವಿದ್ಯಾಥಿಯನ್ನು ಪ್ರಸಾದ ನಿಲಯಕ್ಕೆ ಪ್ರವೇಶ ಕೊಡಿರಿ ಅಂತಾ ಅಪ್ಪಣೆ ಯಾದಕೂಡಲೇ, ಆಗಲಿ ಎಂದು ಈ ಬಡ ವಿದ್ಯಾರ್ಥಿ ಪ್ರವೇಶ ಮಾಡಿಕೊಂಡರು.

ಈ ವಿದ್ಯಾರ್ಥಿಯು ಬಹಳ ಬಡತನದಿಂದ ವಿದ್ಯಾರ್ಜನೆ ಜೊತೆಯಲ್ಲಿ ಗುರು ಸೇವೆಯನ್ನು ಶ್ರದ್ಧಾ ನಿಷ್ಠಾ ಭಕ್ತಿಯಿಂದ ಮಾಡಿ ಗುರು ತಾಯಿಯ ಒಲುಮೆಗೆ ಪಾತ್ರರಾಗಿ ವಿದ್ಯಾವಂತರಾಗಿ ಪದವಿಯೊಡನೆ ಕೃಪಾಶೀರ್ವಾದ ಪಡೆದುಕೊಂಡು ಸರಕಾರಿ ಹುದ್ದೆಗೆ ಹೋಗದೆ ಸ್ವಂತ ಸತ್ಯಶುದ್ಧ ಕಾಯಕವಾದ ಎಣ್ಣೆಯ ವ್ಯಾಪಾರ ಮಾಡುತ್ತ ಈಗ ಎಣ್ಣೆಯ ಸಾರ್ವಭೌಮರಾಗಿ ಅನೇಕ ಸಂಘ ಸಂಸ್ಥೆಗಳಿಗೆ ಅಧ್ಯಕ್ಷರಾಗಿಯೂ ಚೇರಮನ್ನರಾಗಿಯೂ, ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಇನ್ನೂ ಬರುತ್ತಿದ್ದಾರೆ. ಧಾರವಾಡವೆಂದರೆ ಶ್ರೀ ಮುರುಘಾಮಠ ಮತ್ತು ಕರ್ನಾಟಕ ವಿಶ್ವವಿದ್ಯಾಲಯ, ದೊಡ್ಡವಾಡ ಗುರುಪುತ್ರಪ್ಪನವರು.

ನನ್ನಲ್ಲಿರುವ ದುಷ್ಟ ಕೆಲಸದಿಂದ ಹಿಡಿದು ಸತ್ಯ ಅಸತ್ಯಗಳನ್ನು, ಸತತವಾಗಿ ಮಾಡುವುದನ್ನು ಪ್ರತ್ಯಕ್ಷ ಜಂಗಮ ಪರಶಿವ ತಾವು ಆಗಿದ್ದೀರಿ: ನಾನು ತಮ್ಮಲ್ಲಿ ಮುಚ್ಚಿ ಏನಾದರೂ ಹೇಳಿದರೆ ಮತ್ತೆ ಅನೇಕ ಪಾಪ ಕರ್ಮದ ಜನ್ಮತಾಳಬೇಕಾಗುತ್ತದೆ. ಆದ್ದರಿಂದ ಎಲ್ಲ ಪಾಪ ಕರ್ಮ ಪುಣ್ಯ ಮಾಡಿದ್ದನ್ನು ಸತ್ಯವಾಗಿ ಹೇಳುತ್ತೇನೆ. ಅಂತಾ ತಮ್ಮ ಚರಿತ್ರೆ ಹೇಳಿದ್ದರಿಂದ ಇವರ ಪರವಾನಿಗೆ ಇಲ್ಲದೇ, ಲೋಕದೊಳಗಿನ ಎಂಥ ಮಹಾ ಜ್ಞಾನಿ ಡಾಕ್ಟರರು ಇರಲಿ, ತಮ್ಮ ಆರೋಗ್ಯದ ಪರೀಕ್ಷೆಗೆ ಯಾರನ್ನೂ ಒಳಗೆ ಬಿಡುವಂತೆ ಇರಲಿಲ್ಲ. ಇವರನ್ನು ಕರೆದು ನೀವು ಹೇಳಿದ ಡಾಕ್ಟರರು ಬರಲಿ ಅಂತಾ ಅಪ್ಪಣೆ ಮಾಡುತ್ತಿದ್ದರು. ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಒಬ್ಬ ಡಾಕ್ಟರರು ಸತ್ಯದ ಮೂರ್ತಿಯಾಗಿ ಅಪ್ಪಗಳವರ ಕೃಪೆಗೆ ಪಾತ್ರರಾಗಿ ಸತ್ಯದ ಸಾರ್ವಭೌಮರಾದರು. ಮತ್ತು ತಮ್ಮ ಜನ್ಮವನ್ನು ಕಡೇ ಜನ್ಮವನ್ನಾಗಿ ಮಾಡಿಕೊಂಡು ಹೋದರು. ಅವನಿಗೆ ಪೂರ್ವ ಜನ್ಮವಿಲ್ಲ. ಸಂಪೂರ್ಣ ಮುಕ್ತಿ ಹೊಂದಿದರು. ಇದೇ ಅವರು ಮಾಡಿದ ಸತ್ಯ ಶುದ್ಧವಾದ ಲಿಂಗಪೂಜೆ, ಜಂಗಮ ಸೇವೆ.

ಈ ರೀತಿ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರು ಜ್ಞಾನವಾಗಿದ್ದರೆ ಅವರ ಮಾನಸಪುತ್ರರಾದ ಮಹಾಂತ ಅಪ್ಪಗಳು ಕ್ರಿಯಾ ಆಗಿದ್ದರು. ಮೃತ್ಯುಂಜಯ ಸ್ವಾಮಿಗಳವರ ಆದರ್ಶಗಳನ್ನು ಕ್ರಿಯೆಯ ರೂಪರಾದ ಮಹಂತ ದೇವರೇ ಲೋಕದ ಮಾನವರಿಗೆ ಎತ್ತಿ ತೋರಿಸಿದ್ದಾರೆ. ಶ್ರೀ ಜಗದ್ಗುರು ಮೂರುಘ ರಾಜೇಂದ್ರ ಪ್ರಸಾದ ನಿಲಯದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಗ್ರಂಥಮಾಲೆಯ ಮತ್ತು ಅಖಿಲ ಭಾರತ ಶಿವಾನುಭವ ಸಂಸ್ಥೆಯ ಇದರ ಮುಖ ಪತ್ರಿಕೆಯಾದ 'ಸಾವಧಾನ' ಮುಖಾಂತರವಾಗಿ ಮೇಲೆ ಹೇಳಿದ ಎಲ್ಲ ಕಾರ್ಯಗಳು ಮಹಾಂತ ದೇವರ ಕ್ರಿಯೆಯಿಂದ ಮೃತ್ಯುಂಜಯ ಅಪ್ಪಗಳವರ ಜ್ಞಾನದ ಕ್ರಿಯೆಯನ್ನು ತೋರಿಸಿ ಭಕ್ತಿ ಚಾರಿತ್ರ್ಯದ ಮುಖಾಂತರ ಸದ್‌ಭಕ್ತರನ್ನು ಸಲಹೆ ಅವರ ಸಂಸಾರವನ್ನು ಸನ್ಮಾರ್ಗದತ್ತ ಒಯ್ದು ಸಸಾರವನ್ನಾಗಿ ಮಾಡಿ ನೆಮ್ಮದಿಯಿಂದ ಆಯುಷ್ಯ ವಿರುವವರೆಗೆ ಇರುವಂತೆ ಮಾಡಿ ಅಜಾತ ಶತ್ರುಗಳಾಗಿದ್ದಾರೆ. ಮತ್ತು ಮುಂದೆ ಬರುವವರೂ ಸಹ ಅಜಾತಶತ್ರುಗಳಾಗುತ್ತಾರೆ. ಈ ಮಠವು ಅಜಾತಶತ್ರುವೇ ಆಗಿದೆ.

ಇದನ್ನೇ ಮೈಲಾರ ಬಸವಲಿಂಗ ಶರಣರ ಕೆಳಗಿನ ತಮ್ಮ ಕೃತಿಯಲ್ಲಿ ಹೇಳಿದ್ದಾರೆ :

ಜಂಗಮನಾ ವ್ಯಕ್ತಿತ್ವವನ್ನು
ಶಕ್ತಿವಿರಹಿತನ ನಿರ್ಗುಣಲೀಲೆ ಮುಗಿಯಲ್ಕೆ
ಭಕ್ತಿ ಹಿತವಾಗಿರ್ಪ ಷಟ್ ಶಕ್ತಿಯೊಡಗೂಡಿ
ಭಕ್ತ ಮಾಹೇಶ ಪ್ರಸಾದಿಯ ಸುಲಿಂಗಿ ಶರಣಕ್ಕೆ
ಷಟ್‌ಸ್ಥಲ ಬ್ರಹ್ಮಿಯು
ಯುಕ್ತಿಯ ಸಗುಣರೂಪವಧರಿಸಿ ಧರೆಯೊಳ ವಿ
ರಕ್ತಿಯಿಂದಾಚರಿಸಿ ನಡೆನುಡಿಗಳೊಂದಾದ
ಭಕ್ತಿ ಚಾರಿತ್ರ್ಯವನ್ನು ತೋರಿ ಸಲಹಿದ
ಚೆನ್ನವೀರಮದ ಗುರುಜಯಾ

ಈ ರೀತಿ ಚೆನ್ನವೀರ ಸ್ವಾಮಿಗಳೇ ಮೃತ್ಯುಂಜಯ ಸ್ವಾಮಿಗಳಾಗಿ ಲೋಕದಲ್ಲಿ ಮಾನವರು ಎಲ್ಲ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡಲು ಪ್ರೇರಣೆ ನೀಡಿದ್ದಾರೆ.

*

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯

೧೯೯೫ನೆಯ ಸಾಲಿನ ವಾರ್ಷಿಕ ವರದಿ

ಹತ್ತು ವರ್ಷಗಳ ಅವಧಿಯಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯು ರಾಜ್ಯದ ಗೌರವಯುತ ಸಂಸ್ಥೆಯಾಗಿ ಬೆಳೆಯಲು ಕಾರಣರಾಗಿರುವ ಆತ್ಮೀಯ ಸದಸ್ಯ ಬಂಧುಗಳೇ,

೧೯೯೫ನೆಯ ಸಾಲಿನ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

ಅಕಾದೆಮಿಯು ನಡೆಸುವ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಕ್ಕೆ ಈ ವರ್ಷ ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯವು ಇಪ್ಪತ್ತೈದು ಸಾವಿರ ರೂಪಾಯಿಗಳ ನೆರವು ನೀಡಿ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲು ಕಾರಣವಾಗಿದೆ. ಅದಕ್ಕಾಗಿ ಅಕಾದೆಮಿಯು ರಾಜ್ಯ ಪುರಾತತ್ತ್ವ ಇಲಾಖೆಯ ನಿರ್ದೇಶಕರು ಮತ್ತು ಇತರ ಅಧಿಕಾರವರ್ಗದವರಿಗೆ ಅತ್ಯಂತ ಋಣಿಯಾಗಿದೆ.

'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮ ಉದ್ಘಾಟನಾ ಸಮಾರಂಭವನ್ನು ರಾಜ್ಯ ಪುರಾತತ್ತ್ವ ಇಲಾಖೆಯ ಸಹಯೋಗದೊಂದಿಗೆ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯಲ್ಲಿ ದಿನಾಂಕ: ೧೬-೮-೧೯೯೫ ರಂದು ಸಂಜೆ ೬-೦೦ ಗಂಟೆಗೆ ಹಮ್ಮಿಕೊಳ್ಳಲಾಗಿತ್ತು. ಈ ವರ್ಷದ ಕಾರ್ಯಕ್ರಮಗಳಿಗೆಂದೇ ಕಲಾವಿದ ಶ್ರೀ ಟಿ.ಕೆ. ರಾವ್ ಅವರು ಸಿದ್ಧಪಡಿಸಿಕೊಟ್ಟಿದ್ದ, 'ಭಿತ್ತಿ ಚಿತ್ರ' ವನ್ನು ನಿವೃತ್ತ ನ್ಯಾಯಮೂರ್ತಿ ಶ್ರೀ ಎಚ್.ಜಿ. ಬಾಲಕೃಷ್ಣ ಅವರು ಅನಾವರಣ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಬಾಲಕೃಷ್ಣ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಇತಿಹಾಸ ಮತ್ತು ಸಂಸ್ಕೃತಿಗಳ ಬಗ್ಗೆ ಸರಿಯಾಗಿ ತಿಳುವಳಿಕೆ ಇಲ್ಲದವರಿಂದ ನಾಶವಾಗುತ್ತಿರುವ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳನ್ನು ಸಂರಕ್ಷಿಸಬೇಕಾದ ಅಗತ್ಯತೆಯ ಬಗೆಗೆ ಒತ್ತಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಅಕಾದೆಮಿಯ ಅಧ್ಯಕ್ಷರೂ, ಪ್ರಖ್ಯಾತ ಇತಿಹಾಸ ತಜ್ಞರೂ ಆದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಕಾಗದಪತ್ರದ ದಾಖಲೆಗಳನ್ನು ರಕ್ಷಿಸಿಡಬೇಕಾದ ಅಗತ್ಯವನ್ನು ವಿಶೇಷವಾಗಿ ಪ್ರಸ್ತಾಪಿಸಿದರು.

ಬೆಂಗಳೂರಿನಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಉದ್ಘಾಟನೆಯಾದ ನಂತರ ಕರ್ನಾಟಕದಾದ್ಯಂತ ವಿವಿಧ ಸ್ಥಳಗಳಲ್ಲಿ ನಡೆದಿರುವ ಕಾರ್ಯಕ್ರಮಗಳ ಪಟ್ಟಿ ಮುಂದಿನಂತಿದೆ.

ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ/ಮುಖ್ಯಅತಿಥಿ	ಉಪನ್ಯಾಸಕರು
೧೬-೮-೯೫	ಸರ್ಕಾರಿ ಕಲಾ ಕಾಲೇಜು, ಬೆಂಗಳೂರು	ಪ್ರೊ.ಜಿ.ಎಚ್. ಮಾದಯ್ಯ	ಡಾ: ಸೂರ್ಯನಾಥ ಕಾಮತ್
೧೬-೮-೯೫	ಹಗರಿಬೊಮ್ಮನಹಳ್ಳಿ	ಶ್ರೀ ಬಿ.ಆರ್. ಸಕ್ರೆಗೌಡ್ರು, ಶ್ರೀ ಬಾಲಸುಬ್ರಹ್ಮಣ್ಯಂ, ಶ್ರೀಮತಿ ಪದ್ಮಾ ವಿಠಲ್, ಶ್ರೀ ಕುಂ.ಬಾ. ಸದಾಶಿವಪ್ಪ,	
೧೬-೮-೯೫	ಜಿ.ಕೆ. ಹಿರೇಗೌಡರ ಸಂಯುಕ್ತ ಪದವಿ ಪೂರ್ವ ಕಾಲೇಜು, ರೊಟ್ಟಿಗವಾಡ, ಧಾರವಾಡ ಜಿಲ್ಲೆ	ಪ್ರಾಚಾರ್ಯ ಎ.ಎಲ್. ಪೋಲೀಸ್ ಪಾಟೀಲ್ ಶ್ರೀ ಬಸವರಾಜ ಬಗರಿ	ಪ್ರೊ: ಕೆ.ಸಿ. ಮಲ್ಲಿಗವಾಡ ಪ್ರೊ: ಜಿ.ಬಿ. ವೆಂಕಟರೆಡ್ಡಿ
೧೯-೮-೯೫ ರಿಂದ ೨೩-೮-೯೫	ಜಮಖಂಡಿ, ಬಿಜಾಪುರ ಜಿಲ್ಲೆ	ಶ್ರೀ ಸತ್ಯಕಾಮ, ಶ್ರೀ ಜಿ.ಆರ್. ಕುಲಕರ್ಣಿ ಡಾ: ಕೃಷ್ಣ ಕೊಲ್ಹಾರ ಕುಲಕರ್ಣಿ, ಪ್ರೊ: ಎಸ್.ಬಿ. ಮಟೋಳಿ	
೧೮-೮-೯೫	ಮುರಳಿ ಪ. ಪೂರ್ವ ಕಾಲೇಜು,ನೆಲಮಂಗಲ	ಶ್ರೀ ಕೆ.ಎನ್. ಪ್ರಕಾಶ್	ಡಾ:ಎಚ್.ಎಸ್. ಗೋಪಾಲರಾವ್
೧೮-೮-೯೫	ಸರ್ಕಾರಿ ಪ.ಪೂ. ಕಾಲೇಜು, ನೆಲಮಂಗಲ	ಶ್ರೀ ಬಿ.ಪಿ. ವಾಡಕರ್,	ಡಾ:ಎಚ್.ಎಸ್. ಗೋಪಾಲರಾವ್

ದಿನಾಂಕ	ಸ್ಥಳ	ಅಧ್ಯಕ್ಷತೆ/ಉದ್ಘಾಟನೆ/ಮುಖ್ಯಅತಿಥಿ	ಉಪನ್ಯಾಸಕರು
೧೬-೮-೯೫ ರಿಂದ ೨೧-೮-೯೫	ಕನಕಪುರ ತಾಲ್ಲೂಕಿನ ವಿವಿಧ ಸ್ಥಳಗಳಲ್ಲಿ ೨೬ ಕಾರ್ಯಕ್ರಮಗಳು		
೧೯-೮-೯೫	ಸೆಂಟ್ರಲ್ ಹೈಸ್ಕೂಲ್, ಹುಕ್ಕೇರಿ	ಡಾ: ಸಾ.ಶಿ. ಮುರುಳಯ್ಯ, ಶ್ರೀ ಮನು ಬಳಗಾರ, ಡಾ: ವಿ.ಜಿ. ಹಿರೇಮಠ, ಶ್ರೀ ಎಸ್.ಎಂ. ಸೊನ್ನದ	ಪ್ರೊ: ರಮೇಶ್ ಪಾಳೇಕರ್
೨೦-೮-೯೫	ಶ್ರೀ ಹನುಮಾನ ಮಂದಿರ,ಗೋಗಿ(ಪೇಠ) (ಕರ್ನಾಟಕ ಕಲಾರಂಗ, ಗೋಗಿ)	ಶ್ರೀ ಶರಣಬಸಪ್ಪಗೌಡ ದರ್ಶನಾಪೂರ, ಪ್ರೊ: ಆರ್.ಕೆ.ಹುಡಗಿ ಶ್ರೀ ಶಂಕ್ರಣ್ಣ ಮಾರ್ಕ್ಯಾಳ, ಶ್ರೀ ಎಂ.ಜಿ. ಮತ್ತೂರ	
೨೦-೮-೯೫	ಶ್ರೀ ಗವಿ ಸಿದ್ದೇಶ್ವರ ಪ್ರೌಢಶಾಲೆ, ಕೊಪ್ಪಳ ಮತ್ತು ಕ.ಸಾ.ಪ. ಕೊಪ್ಪಳ	ಶ್ರೀ ಎಚ್.ಎನ್. ಪಾಟೀಲ್	ಡಾ: ದೇವರಕೊಂಡಾರೆಡ್ಡಿ ಪ್ರೊ: ಹೀ.ಚಿ. ಬೋರಲಿಂಗಯ್ಯ ಶ್ರೀ ಅಮರೇಶ್ ನುಗಡೋಣಿ
೨೦-೮-೯೫	ಶಂಬಾವಿಚಾರ ವೇದಿಕೆ, ಗಾಂಧಿ ಸಾಹಿತ್ಯ ಸಂಘ, ಬೆಂಗಳೂರು		ಪ್ರೊ: ಜಿ.ಎಸ್. ದೀಕ್ಷಿತ್
೨೧-೮-೯೫	ಸ.ಕಿರಿಯ ಪ್ರಾಥಮಿಕ ಶಾಲೆ ಹೊಸಳ್ಳಿ, ಧಾರವಾಡ ಜಿಲ್ಲೆ		
೨೧-೮-೯೫	ಸ.ಕಿರಿಯ ಪ್ರಾಥಮಿಕ ಶಾಲೆ, ಚಿಕ್ಕನಸ್ನಟ್ಟಿ, ಧಾರವಾಡ ಜಿಲ್ಲೆ		
೧೬-೮-೯೫ ರಿಂದ ೨೧-೮-೯೫	ಕಲ್ಮಠದ ಮಹಿಳಾ ವಿದ್ಯಾಲಯ, ಗಂಗಾವತಿ	ಪ್ರೊ : ಎಸ್.ವಿ. ಪಾಟೀಲ್, ಶ್ರೀ ಎಚ್. ಪ್ರಭಾಕರ ಪ್ರೊ: ಬಿ.ಎನ್.ಉಪ್ಪಿನ, ಶರಣಬಸಪ್ಪ ಕೋಲ್ಕಾರ	
೨೩-೮-೯೫	ವಿ.ವಿ. ಸಂಘ ಕಲಾ ಮಹಾವಿದ್ಯಾಲಯ ಬಿಜಾಪುರ	ಶ್ರೀ ಎನ್.ಕೆ. ಕುಲಕರ್ಣಿ, ಡಾ: ಅ. ಸುಂದರ ಡಾ: ಕೃಷ್ಣ ಕೊಲ್ಹಾರ ಕುಲಕರ್ಣಿ	ಡಾ: ಎಸ್.ವಿ. ಪಾಡಿಗಾರ
೨೩-೮-೯೫	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹರ್ಲಾಪುರ, ಧಾರವಾಡ ಜಿಲ್ಲೆ		
೨೩-೮-೯೫	ಗ್ರಾಮ ಪಂಚಾಯಿತಿ, ಹರ್ಲಾಪುರ, ಧಾರವಾಡ ಜಿಲ್ಲೆ		
೨೩-೮-೯೫	ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ, ತಿಮ್ಮಾಪುರ, ಧಾರವಾಡ ಜಿಲ್ಲೆ		
೨೪-೮-೯೫	ಕ.ಸಾ.ಪ. ದೇವನಹಳ್ಳಿ		ಡಾ: ಸೂರ್ಯನಾಥ ಕಾಮತ್
೨೪-೮-೯೫	ಗ್ರಾಮ ಪಂಚಾಯಿತಿ, ಬೆಳಧಡಿ, ಧಾರವಾಡ ಜಿಲ್ಲೆ		
೨೪-೮-೯೫	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಧಡಿ, ಧಾರವಾಡ ಜಿಲ್ಲೆ		
೨೫-೮-೯೫	ಕನಕದಾಸ ಶಿಕ್ಷಣ ಸಮಿತಿ, ಮುಳಗುಂದ, ಧಾರವಾಡ ಜಿಲ್ಲೆ		
೨೫-೮-೯೫	ಶ್ರೀಮತಿ ನೀಲಮ್ಮ ಸರ್ಕಾರಿ ಪ.ಪೂ.ಕಾಲೇಜು ಮಾಗಡಿ, ಧಾರವಾಡ ಜಿಲ್ಲೆ		
೨೫-೮-೯೫	ಶ್ರೀ ಜೆ.ಎಫ್.ಸಿ. ಪ್ರೌಢಶಾಲೆ, ಯಳವತ್ತಿ, ಧಾರವಾಡ ಜಿಲ್ಲೆ		
೨೫-೮-೯೫	ವಾಣಿವಿಲಾಸ ಪ.ಪೂ. ಕಾಲೇಜು, ಬೆಂಗಳೂರು		ಡಾ: ಎಚ್. ಎಸ್. ಗೋಪಾಲರಾವ್
೨೬-೮-೯೫	ಸರ್ಕಾರಿ ಪ.ಪೂ. ಕಾಲೇಜು, ಹಾರೋಹಳ್ಳಿ		ಡಾ: ಎಚ್.ಎಸ್. ಗೋಪಾಲರಾವ್
೨೭-೮-೯೫	ಬಸವ ಸೇವಾ ಕೇಂದ್ರ, ಅತ್ತಿಗುಪ್ಪೆ, ಬೆಂಗಳೂರು,	ಶ್ರೀ ಹೊ.ಸ. ಸುಬ್ರಹ್ಮಣ್ಯಂ,	ಡಾ: ಸೂರ್ಯನಾಥ, ಕಾಮತ್
೨೭-೮-೯೫	ಭಾರತೀಯ ಕರ್ನಾಟಕ, ಸಂಘ, ಬೆಂಗಳೂರು	ಪ್ರೊ: ಜಿ.ಎಸ್. ದೀಕ್ಷಿತ್,	ಡಾ: ಸೂರ್ಯನಾಥ ಕಾಮತ್
೨೭-೮-೯೫	ಶ್ರೀ ಬೆಕ್ಕಿನ ಕಲ್ಮಠ, ಶಿವಮೊಗ್ಗ	ಶ್ರೀ ಮ.ನಿ.ಪ್ರ.ಪ್ರಭೂಸ್ವಾಮಿಗಳು, ಶ್ರೀ ಮ.ನಿ.ಪ್ರ ಶ್ರೀಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಡಾ: ಕೆ.ಎನ್. ಚಂದ್ರಶೇಖರ್, ಶ್ರೀ ವಿ.ಎಸ್. ಹಿರೇಮಠ	ಶ್ರೀ ಎಂ. ಮಾಧವ ಪೈ.
೨೮-೮-೯೫	ಕ.ಸಾ.ಪ. ದೊಡ್ಡಬಳ್ಳಾಪುರ ತಾ.,	(೪ ಕಾರ್ಯಕ್ರಮಗಳು)	
೨-೯-೯೫	ಗಣಪತಿ ಪದವಿ ಪೂರ್ವ, ಕಾಲೇಜು, ಮಂಗಳೂರು	ಶ್ರೀ ಕೆ.ಜಯರಾಮಸೆಟ್ಟಿ, ಡಾ: ಸುರೇಂದ್ರರಾವ್	
೨-೯-೯೫ ರಿಂದ ೧೧-೯-೯೫	ಕ.ಸಾ.ಪ. ಚನ್ನಪಟ್ಟಣ ತಾಲ್ಲೂಕು, ವಿವಿಧ ಸ್ಥಳಗಳಲ್ಲಿ ೧೭ ಕಾರ್ಯಕ್ರಮಗಳು		
೭-೯-೯೫	ಸರ್ಕಾರಿ ಪ್ರೌಢಶಾಲೆ, ಕಡಕೋಳ, ಧಾರವಾಡ-ಜಿಲ್ಲೆ		
೪-೯-೯೫	ಸ.ಕಿ.ಪ್ರೌಢಶಾಲೆ, ಜಲ್ಲಿಗೇರಿ, ಧಾರವಾಡ ಜಿಲ್ಲೆ		
೬-೯-೯೫	ಸ.ಕಿ. ಪ್ರಾಥಮಿಕ ಶಾಲೆ, ಕೂಸಲಾಪುರ, ಧಾರವಾಡ ಜಿಲ್ಲೆ		
೭-೯-೯೫	ಜಿ.ಪ. ಹಿರಿಯ ಪ್ರಾಥಮಿಕ ಶಾಲೆ ಕಡಕೋಳ, ಧಾರವಾಡ ಜಿಲ್ಲೆ		

೧೬-೯-೯೫	ಕ.ಸಾ.ಪ. ಶಿವಮೊಗ್ಗ ತಾಲ್ಲೂಕು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ	ಕತ್ತಿಗೆ ಚನ್ನಪ್ಪ, ಶ್ರೀ ಸಿದ್ದಯ್ಯ ಹಿರೇಮಠ ಶ್ರೀ ಎನ್.ಜಿ. ಜಯದೇವಪ್ಪ, ಶ್ರೀ ಆರ್ ನರೇಂದ್ರ, ಶ್ರೀ ಜಿ.ಸೋಮಶೇಖರಪ್ಪ	ಡಾ: ಎಸ್. ತಿಮ್ಮಯ್ಯ ನಾಯ್ಕ ಶ್ರೀ ಮಾಧವ ಪೈ
೨೦-೯-೯೫	ಕ.ವಿ.ವಿ. ಧಾರವಾಡ	ಡಾ: ಸೂರ್ಯನಾಥ ಕಾಮತ್, ಡಾ: ಎಚ್.ಆರ್. ರಘುನಾಥ್ ಭಟ್ ಶ್ರೀಮತಿ ಶಾಲಿನಿ ರಜನೀಶ	
೬-೧೦-೯೫	ಶೇಷಾದ್ರಿಪುರಂ ಸಂಜೆ, ಕಾಲೇಜು ಬೆಂಗಳೂರು	ಶ್ರೀ ಕೆ.ಎಂ. ಸಂಜಪ್ಪ	ಪ್ರೊ.: ಇಕ್ಬಾಲ್ ಅಹಮದ್
೩-೧೨-೯೫	ಸರ್ಕಾರಿ ಪ.ಪೂ. ಕಾಲೇಜ್, ನೆಲಮಂಗಲ	ಶ್ರೀ ಟಿ.ನಿರಂಜನ್	ಡಾ: ಸೂರ್ಯನಾಥ ಕಾಮತ್
೩೧-೧೨-೯೫	ಕರ್ನಾಟಕ ವಿಮೋಚನಾರಂಗ, ಶಿವಮೊಗ್ಗ	ಪ್ರೊ: ಎಸ್.ವಿ.ಬಾರಿ, ಶ್ರೀ ಬಂಜಗೆರೆ ಜಯಪ್ರಕಾಶ್ ಶ್ರೀ ಟಿ. ಮಂಜುನಾಥ್, ಶ್ರೀ ಎಸ್. ಆರ್. ವೆಂಕಟೇಶ್	ಶ್ರೀ ಎಸ್. ಸುಂದರ
೬-೬-೯೫	ಎಂ.ಇ.ಎಸ್. ಕಾಲೇಜು, ಬೆಂಗಳೂರು		ಡಾ: ಎಚ್.ಎಸ್. ಗೋಪಾಲರಾವ್
೩-೧-೯೬	ಸ.ಪ.ಪೂ. ಕಾಲೇಜು,ತ್ಯಾಮಗೊಂಡಲು		ಡಾ: ಎಚ್.ಎಸ್. ಗೋಪಾಲರಾವ್

ಮೇಲ್ಕಂಡ ಕಾರ್ಯಕ್ರಮಗಳಲ್ಲದೆ ಕರ್ನಾಟಕದಾದ್ಯಂತ ಇನ್ನೂ ಹಲವೆಡೆಗಳಲ್ಲಿ '**ಐತಿಹಾಸಿಕ ಪರಂಪರೆ ಉಳಿಸಿ**' ಕಾರ್ಯಕ್ರಮಗಳು ನಡೆದಿರುವ ಬಗ್ಗೆ ಮೌಖಿಕ ಮಾಹಿತಿ ಮಾತ್ರ ದೊರೆತಿದ್ದು, ಲಿಖಿತ ರೂಪದಲ್ಲಿ ದಾಖಲೆಗಳು ಲಭ್ಯವಾಗಿಲ್ಲ.

ಒಂಬತ್ತನೆಯ ವಾರ್ಷಿಕ ಸಮ್ಮೇಳನ

ಅಕಾದೆಮಿಯ ಒಂಬತ್ತನೆಯ ವಾರ್ಷಿಕ ಸಮ್ಮೇಳನವು ೧೯೯೫ರ ಸೆಪ್ಟೆಂಬರ್ ೯, ೧೦ ಮತ್ತು ೧೧ರಂದು ಬೆಳಗಾವಿಯಲ್ಲಿ ಶ್ರೀ ನಾಗನೂರ ರುದ್ರಾಕ್ಷಿ ಮಠದ ವೀರಶೈವ ಅಧ್ಯಯನ ಅಕಾಡೆಮಿಯ ಆಶ್ರಯದಲ್ಲಿ ಶ್ರೀ ನಾಗನೂರ ಪ್ರಭುದೇವ ಸಭಾಗೃಹ (ಕಲ್ಯಾಣ ಮಂಟಪ)ದಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ॥ ಎ.ವಿ. ನರಸಿಂಹಮೂರ್ತಿಯವರು ಸಮ್ಮೇಳನಾಧ್ಯಕ್ಷರಾಗಿದ್ದರು.

ದಿನಾಂಕ: ೯-೯-೧೯೯೫ರಂದು ಬೆಳಿಗ್ಗೆ ೧೦ ಗಂಟೆಗೆ ಬೆಳಗಾವಿಯ ಶ್ರೀ ನಾಗನೂರ ರುದ್ರಾಕ್ಷಿ ಮಠದ ಶ್ರೀ ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಸಮ್ಮೇಳನವನ್ನು ಗದಗ-ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಮ.ನಿ.ಪ್ರ. ಡಾ॥ ತೋಂಟದ ಸಿದ್ಧಲಿಂಗ ಸ್ವಾಮಿಗಳು ಉದ್ಘಾಟಿಸಿ, ಇತಿಹಾಸದ ಅರಿವಿನ ಮಹತ್ವದ ಬಗೆಗೆ ಎಲ್ಲರ ಗಮನ ಸೆಳೆದರು. ಸಮ್ಮೇಳನದ ಉದ್ಘಾಟನೆಯ ಸಂದರ್ಭದಲ್ಲಿ ರಾಜ್ಯ ಪುರಾತತ್ವ ಇಲಾಖೆಯು ಪ್ರಕಟಿಸಿದ ಮೂರು ಕೃತಿಗಳು, ವೀರಶೈವ ಅಧ್ಯಯನ ಅಕಾಡೆಮಿಯ ಎರಡು ಕೃತಿಗಳು, ಶ್ರೀ ಹರಿ ಪ್ರಕಾಶನದ ಮತ್ತು ಅಕಾದೆಮಿಯ ರಾಯಚೂರು ಘಟಕದ ಒಂದೊಂದು ಕೃತಿಗಳು ಬಿಡುಗಡೆಯಾದುವು . ಅಕಾದೆಮಿಯ ಅಧ್ಯಕ್ಷರಾದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಶ್ರೀ ಸಿ.ಟಿ.ಎಂ. ಕೊಟ್ರಯ್ಯನವರ '**ಇರಿಗೇಷನ್ ಸಿಸ್ಟಂ ಇನ್ ವಿಜಯನಗರ**', ಎಚ್.ಆರ್. ರಘುನಾಥಭಟ್ ಅವರ '**ಬಿಳಗಿ ಅರಸು ಮನೆತನ**', ಡಾ॥ ಬಿ.ಕೆ.ಗುರುರಾಜಾರಾವ್ ಅವರು ಅನುವಾದಿಸಿದ ಡಾ॥ ಎಸ್.ಆರ್.ರಾವ್ ಅವರ '**ಲೋಥಲ್ ಮತ್ತು ಸಿಂಧೂ ನಾಗರೀಕತೆ**' ಕೃತಿಗಳನ್ನು ಬಿಡುಗಡೆ ಮಾಡಿದರು. ಡಾ॥ ಸಿ.ಎಸ್. ಪಾಟೀಲರ '**ಪಂಚತಂತ್ರ ಇನ್ ಕರ್ನಾಟಕ ಸ್ಕಲ್ಪ್‌ಚರ್ಸ್**' ಮತ್ತು ಡಾ॥ ಕೆ.ಜಿ. ಭಟ್‌ಸೂರಿ ಅವರ '**ಕ್ಯಾಟಲಾಗ್ ಆಫ್ ಆಂಟಿಕ್ವಿಟೀಸ್ ಇನ್ ಶಿವಮೊಗ್ಗ ಮ್ಯೂಸಿಯಂ**' ಕೃತಿಯನ್ನು ಡಾ॥ ಎಂ. ಚಿದಾನಂದಮೂರ್ತಿ ಅವರು ಬಿಡುಗಡೆ ಮಾಡಿದರು.ಡಾ॥ ಸೂರ್ಯನಾಥ ಕಾಮತರ '**ಸಂಗೊಳ್ಳಿ ರಾಯಣ್ಣ**' ಕೃತಿಯನ್ನು ಪ್ರೊ॥ ಪಿ.ಕೆ. ಬಾಗೋಡಿ ಅವರು, ಶ್ರೀರಾಮ ಇಟ್ಟಣ್ಣನವರ '**ಹಲಗಲಿ ಒಂದು ಅಧ್ಯಯನ**' ಕೃತಿಯನ್ನು ಡಾ॥ ಎಂ.ಎಂ. ಕಲಬುರ್ಗಿ ಅವರೂ, ಡಾ॥ ಬಸವಲಿಂಗ ಸೊಪ್ಪಿಮಠ ಅವರ '**ಅಕರ**' ಕೃತಿಯನ್ನು ಡಾ॥ ಎಂ.ಬಿ. ನೇಗಿನಹಾಳ ಅವರೂ ಬಿಡುಗಡೆ ಮಾಡಿದರು. ಅಕಾದೆಮಿಯು '**ಇತಿಹಾಸದರ್ಶನ**'ದ **ಹತ್ತನೆಯ ಸಂಪುಟವನ್ನು** ಬಿಡುಗಡೆ ಮಾಡಿದ ಶ್ರೀ ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳು ನಂತರ ಆಶೀರ್ವಚನ ನೀಡಿದರು. ಸಮ್ಮೇಳನದ ಸಂದರ್ಭ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆ ಏರ್ಪಡಿಸಿದ್ದ ವಸ್ತು ಪ್ರದರ್ಶನವನ್ನುಬೆಳಗಾವಿಯ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಜಿನದತ್ತದೇಸಾಯಿ ಉದ್ಘಾಟಿಸಿದರು.

ಕಳೆದ ವರ್ಷದ ಸಮ್ಮೇಳನದ ನಂತರ ಈ ವರೆಗೆ ಪಿಎಚ್.ಡಿ., ಪದವಿ ಪಡೆದ ಅಕಾದೆಮಿಯ ಏಳು ಜನ ಸದಸ್ಯರಿಗೆ, ಸ್ಮರಣಫಲಕಗಳನ್ನು ನೀಡಿ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಶುಭ ಹಾರೈಸಿ ಸನ್ಮಾನಿಸಿದರು. ಸನ್ಮಾನಿತರಾದ ಸದಸ್ಯರೆಂದರೆ– ೧) ಮೂಡಬಿದರೆಯ ಡಾ॥ ಗಣಪಯ್ಯ ಭಟ್ ೨) ಬೆಂಗಳೂರಿನ ಡಾ॥ ಡಿ.ವಿ.ಪರಮಶಿವಮೂರ್ತಿ, ೩) ಶಿವಮೊಗ್ಗದ ಡಾ॥ ಜಿ.ವಿ. ಕಲ್ಲಾಪುರ್ ೪) ಮೈಸೂರಿನ ಡಾ॥ ಎಂ.ಡಿ. ಮಹದೇವಯ್ಯ ೫) ಧಾರವಾಡದ ಡಾ॥ ವಿಠಲ ಪೋತದಾರ, ೬) ಬೆಂಗಳೂರಿನ ಡಾ॥ ಎ.ಎಲ್.ನರಸಿಂಹನ್ ಮತ್ತು ೭) ಹಂಪಿಯ ಡಾ॥ ಸಿ.ಮಹದೇವ.

ಶ್ರೀ ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳಿಂದ ಸನ್ಮಾನಿತರಾಗಿ ಆಶೀರ್ವಾದ ಪಡೆದ ಸಮ್ಮೇಳನಾಧ್ಯಕ್ಷ ಪ್ರೊ॥ ಎ.ವಿ.

ನರಸಿಂಹಮೂರ್ತಿ ಅವರು ವಿಚಾರಪ್ರದ ಅಧ್ಯಕ್ಷ ಭಾಷಣ ಮಾಡಿದರು.

ಶ್ರೀ ಮ.ನಿ.ಪ್ರ. ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಆಶೀರ್ವಚನದ ನಂತರ ಶ್ರೀ ವಿ.ಸಿ. ಮಾಲಗತ್ತಿ ಸರ್ವರಿಗೂ ವಂದನೆ ಸಲ್ಲಿಸಿದರು.

ಅದೇ ದಿನ ಸಂಜೆ ೪-೩೦ಕ್ಕೆ ಔಪಚಾರಿಕವಾಗಿ ನಡೆದ ಸಮಾರೋಪ ಸಮಾರಂಭದಲ್ಲಿ ಉಪಸ್ಥಿತರಿದ್ದ ಶ್ರೀ ಮ.ನಿ.ಪ್ರ ಸಿದ್ಧರಾಮ ಮಹಾಸ್ವಾಮಿಗಳು ಸಮ್ಮೇಳನದ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಆಶೀರ್ವದಿಸಿ ಸನ್ಮಾನಿಸಿದರು. ಅಕಾದೆಮಿಯ ವತಿಯಿಂದ ಸಮ್ಮೇಳನದ ಸಂಘಟನೆಗೆ ಶ್ರಮಿಸಿದ ಹಲವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಪ್ರತಿನಿಧಿ ಶುಲ್ಕವಾಗಿ ವಸೂಲಾಗಿದ್ದ ಹಣ ರೂ. ೧೧,೦೦೦ ಗಳನ್ನು ಶ್ರೀ ಮ.ನಿ.ಪ್ರ. ಸಿದ್ಧರಾಮಸ್ವಾಮಿಗಳು ಅಕಾದೆಮಿಗೆ ಕೊಡುಗೆಯಾಗಿ ನೀಡಿದರು. ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡ ಒಂಬತ್ತನೆಯ ವಾರ್ಷಿಕ ಸಮ್ಮೇಳನದ ಚಾಲನೆ ಗೋಷ್ಠಿಗಳ ೨ನೇ ದಿನದ ನಂತರ ೧೦-೯-೯೫ ರಂದು ಸಂಜೆ ೬-೩೦ ಕ್ಕೆ ಸಮ್ಮೇಳನ ಸಭಾಂಗಣದಲ್ಲಿ ಅಕಾದೆಮಿಯ ಸರ್ವಸದಸ್ಯರ ಸಭೆ ನಡೆಯಿತು.

ಸಮ್ಮೇಳನದ ವಿವಿಧ ಗೋಷ್ಠಿಗಳು

ದಿನಾಂಕ	ಗೋಷ್ಠಿ	ಸಮಯ	ಅಧ್ಯಕ್ಷತೆ	ನಿರ್ವಹಣೆ	ಮಂಡಿತ ಪ್ರಬಂಧಗಳ ಸಂಖ್ಯೆ
೯.೯.೯೫	೧	೨.೧೫-೪.೩೦	ಡಾ॥ ಅ. ಸುಂದರ	ಶಿ. ರಾಜೇಂದ್ರಪ್ಪ	೧೮
,,	೨	೪.೪೫-೬.೩೦	ಡಾ॥ ಎಂ.ಎಂ. ಕಲಬುರ್ಗಿ	ಡಾ॥ ಮೃತ್ಯುಂಜಯರುಮಾಲೆ	೯
		(ವಿಶೇಷ ಗೋಷ್ಠಿ, ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ್ದು)			
೧೦.೯.೯೫	೩	೯.೦೦-೧೧:೪೫	ಡಾ॥ ಎಚ್.ಆರ್. ರಘುನಾಥ ಭಟ್	ಶಿವಕುಮಾರ್ ಸುಬ್ಬಯ್ಯ	೧೮
,,	೪	೧೧.೪೫-೧.೪೫	ಡಾ॥ ಕೆ.ಜಿ. ವಸಂತಮಾಧವ	ಜೆ.ಟಿ. ಜಯರಾಮಯ್ಯ	೭
,,	೫	೨.೪೦-೧.೦೦	ಡಾ॥ ಸಿಂದಗಿ ರಾಜಶೇಖರ್	ಕೆ.ಬಿ. ಶಿವತಾರಕ್	೧೪
,,	೬	೪.೧೫-೬.೦೦	ಡಾ॥ ಡಿ.ವಿ. ದೇವರಾಜ್	ಡಾ॥ ಕೆಳದಿ ವೆಂಕಟೇಶ್	೫
೧೧.೯.೯೫	೭	೬.೦೦-೧೧.೦೦	ಡಾ॥ ಕೆ.ಎಸ್. ಶಿವಣ್ಣ	ಕೆ. ವಸಂತಲಕ್ಷ್ಮಿ	೯
,,	೮	೧೧.೩೦-೧.೩೦	ಡಾ॥ ಎಸ್.ಆರ್. ಗುಂಜಾಳ	ಬಿ. ಪಾಂಡುಕುಮಾರ್	೮
,,	೯	೨.೦೦-೪.೦೦	ಡಾ॥ ಶ್ರೀನಿವಾಸ ಹಾವನೂರ್	ಪಿ.ವಿ. ಕೃಷ್ಣಮೂರ್ತಿ	೫

ಸರ್ವಸದಸ್ಯರ ಸಭೆ

ಕರ್ನಾಟಕ ಇತಿಹಾಸ ಅಕಾದೆಮಿಯ ೯ನೆಯ ವಾರ್ಷಿಕ ಸಮ್ಮೇಳನದ ಸಭಾಸ್ಥಾನವಾದ ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿ ಮಠದ ಶ್ರೀ ಪ್ರಭುದೇವ ಕಲ್ಯಾಣ ಮಂಟಪದಲ್ಲಿ, ಮೊದಲೇ ಸರ್ವಸದಸ್ಯರಿಗೂ ಪತ್ರಮುಖೇನ ತಿಳಿಸಿದ್ದಂತೆ ದಿನಾಂಕ: ೧೦-೯-೯೫, ಭಾನುವಾರ ಸಂಜೆ ೬-೩೦ಕ್ಕೆ ಅಕಾದೆಮಿಯ ಅಧ್ಯಕ್ಷರಾದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವಸದಸ್ಯರ ಸಭೆಯ ನಡವಳಿಕೆಗಳು ಕೆಳಕಂಡಂತಿವೆ.

ಸಭೆಯನ್ನು ಆರಂಭಿಸಲು ಪ್ರಧಾನ ಕಾರ್ಯದರ್ಶಿ ಡಾ॥ ಎಚ್.ಎಸ್. ಗೋಪಾಲರಾವ್ ಅವರು ಸರ್ವಸದಸ್ಯರ ಅನುಮತಿ ಕೋರಿದರು. ಡಾ॥ ಅ. ಸುಂದರ ಅವರು ಸಭೆಯ ಆರಂಭಕ್ಕೆ ಒಪ್ಪಿಗೆ ನೀಡಿದರು. ಸರ್ವಸದಸ್ಯರೂ ಅದನ್ನು ಅನುಮೋದಿಸಿದರು.

ಸಭೆಯ ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಪ್ರಸಿದ್ಧ ಶಾಸನತಜ್ಞ ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿಯ ೨ನೆಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾದ ಡಾ॥ ಜಿ.ಎಸ್. ಗಾಯಿ ಅವರ ಗೌರವಾರ್ಥ ಎರಡು ನಿಮಿಷಗಳ ಮೌನ ಶ್ರದ್ಧಾಂಜಲಿ ಅರ್ಪಿಸಲಾಯಿತು.

ನಂತರ ಶ್ರೀಮತಿ ಜಯಮ್ಮ ಎಚ್. ಕರಿಯಣ್ಣ ಅವರು ಪ್ರಾರ್ಥನೆ ಮಾಡಿದರು. ಅಕಾದೆಮಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಡಾ॥ ಎಚ್.ಆರ್. ರಘುನಾಥ್‌ಭಟ್ ಅಧ್ಯಕ್ಷರಾದಿಯಾಗಿ ಸರ್ವಸದಸ್ಯರನ್ನೂ ಸಭೆಗೆ ಹಾರ್ದಿಕವಾಗಿ ಸ್ವಾಗತಿಸಿದರು.

೧೯೯೪ನೆಯ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಆರಂಭದಲ್ಲೇ ಸರ್ವಸದಸ್ಯರಿಗೂ ಹಂಚಿದ್ದುದರಿಂದ ಅದರ ವಾಚನದ ಅವಶ್ಯಕತೆ ಇಲ್ಲವೆಂಬ ಡಾ॥ ಸೂರ್ಯನಾಥ ಕಾಮತ್ ಅವರ ಸೂಚನೆಯನ್ನು ಶ್ರೀ ವಿ.ಸಿ. ಮಾಲಗತ್ತಿ ಅನುಮೋದಿಸಿದರು. ವರದಿಗೆ ಸಂಬಂಧಿಸಿದಂತೆ ಕಳೆದ ವರ್ಷದ ಸರ್ವಸದಸ್ಯರ ಸಭೆಯಲ್ಲಿ ಸ್ವೀಕರಿಸಲಾಗಿದ್ದ ಠರಾವುಗಳ ಬಗೆಗೆ ವಿ.ಸಿ. ಮಾಲಗತ್ತಿ ಪ್ರಶ್ನಿಸಿದರು.

ಕಳೆದ ವರ್ಷದ 'ಇತಿಹಾಸದ ಬಗೆಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹುಟ್ಟಿಸಲು ಡಿಗ್ರಿ ಕಾಲೇಜಿನ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳು ರಜೆಯ ಸಮಯದಲ್ಲಿ ಊರಿಗೆ ಹೋದಾಗ, ತಮ್ಮ ಊರಿನ ಸುತ್ತಮುತ್ತಣ ಊರುಗಳ ಐತಿಹಾಸಿಕ ವಿಷಯಗಳ ಬಗೆಗೆ ಲೇಖನ ಬರೆಯುವಂತೆ ಪ್ರೇರೇಪಿಸಬೇಕು' ಎಂಬ ಠರಾವಿನ ಬಗೆಗೆ ಪ್ರಧಾನ ಕಾರ್ಯದರ್ಶಿಯವರು, ಕಾಲೇಜು ಪ್ರಾಧ್ಯಾಪಕರಿಗೆ ಆ ಬಗೆಗೆ ಅಕಾದೆಮಿಯು ನೇರವಾಗಿ ಪತ್ರ ಬರೆಯದಿದ್ದರೂ, ಪ್ರತಿ ವರ್ಷ ನಡೆಸುವ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದಿಂದ ಇದು ಸಾಧ್ಯವಾಗುತ್ತಿದೆಯೆಂದು ಸ್ಪಷ್ಟಪಡಿಸಿದರು.

ಕಳೆದ ವರ್ಷದ 'ಎಸ್.ಎಸ್.ಎಲ್.ಸಿ. ವರೆಗಿನ ಎಲ್ಲಾ ತರಗತಿಗಳಲ್ಲಿ ಭಾರತ ಸ್ವಾತಂತ್ರ್ಯದ ಇತಿಹಾಸದಲ್ಲಿ ಕನ್ನಡಿಗರ ಪಾತ್ರ ಮತ್ತು ಕರ್ನಾಟಕ ಏಕೀಕರಣ ಚಳುವಳಿಯ ಬೋಧನೆ ಕಡ್ಡಾಯವಾಗಿರಬೇಕು' ಎಂಬ ಮತ್ತೊಂದು ಠರಾವಿನ ಬಗೆಗೆ ಯಾವುದೇ ರೀತಿಯ ಪ್ರಗತಿಯನ್ನು ಸಾಧಿಸಲಾಗಿಲ್ಲ ಎಂದು ಪ್ರಧಾನ ಕಾರ್ಯದರ್ಶಿಯವರು ಸ್ಪಷ್ಟಪಡಿಸಿದರು.

೧೯೯೨ರ ಜುಲೈನಲ್ಲಿ ಅಕಾದೆಮಿಯ ಆರನೆಯ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿದ ಆಗಿನ ಶಿಕ್ಷಣಮಂತ್ರಿ ಶ್ರೀ ಎಂ. ವೀರಪ್ಪ ಮೊಯಿಲಿ ಅವರು ಆಶ್ವಾಸನೆ ನೀಡಿದ್ದ ನಲವತ್ತು ಸಾವಿರ ರೂಪಾಯಿಗಳ ಸರ್ಕಾರದ ಸಹಾಯಧನವು ೧೯೯೫ರಲ್ಲಿ ಬಂದಿದೆ ಎಂಬುದನ್ನು ಸಭೆಗೆ ತಿಳಿಸಲಾಯಿತು.

''ಐತಿಹಾಸಿಕ ಪರಂಪರೆ ಉಳಿಸಿ'' ಕಾರ್ಯಕ್ರಮದ ಭಿತ್ತಿಪತ್ರಗಳನ್ನು ಅಕಾದೆಮಿಯ ಸದಸ್ಯರಿಗೂ ಕಳುಹಿಸಬೇಕು ಎಂಬ ಹೊದಿಗೆರೆ ಕಲ್ಲಪ್ಪನವರ ಸೂಚನೆಗೆ ಡಾ॥ ಸೂರ್ಯನಾಥ ಕಾಮತ್ ಅವರು, ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಮಾಡಲು ಮತ್ತು ಎಷ್ಟು ಭಿತ್ತಿಪತ್ರಗಳು ಬೇಕು ಎಂದು ತಿಳಿಸಲು ಎಲ್ಲಾ ಸದಸ್ಯರನ್ನೂ ಕೋರಲಾಗುತ್ತದೆ. ಕೋರಿಕೆ ಬಂದ ಸದಸ್ಯರಿಗ ಮಾತ್ರ ಅವರು ಕೇಳಿದಷ್ಟು ಭಿತ್ತಿಪತ್ರಗಳನ್ನು ಕಳುಹಿಸಲಾಗುತ್ತದೆ ಎಂದು ತಿಳಿಸಿ, ಕೋರಿಕೆ ಸಲ್ಲಿಸದ ಸದಸ್ಯರಿಗೂ ಭಿತ್ತಿಪತ್ರಗಳನ್ನು ಕಳುಹಿಸುವುದು ಸುಲಭವಾಗಿ ಸಾಧ್ಯವಾಗದು ಎಂದು ಸ್ಪಷ್ಟಪಡಿಸಿದರು.

ದೇವಾಲಯಗಳು ಮತ್ತು ಐತಿಹಾಸಿಕ ಸ್ಮಾರಕಗಳ ಜೀರ್ಣೋದ್ಧಾರದ ಬಗ್ಗೆ ಸರ್ಕಾರ ಯಾವ ರೀತಿ ಆಸಕ್ತಿ ವಹಿಸಲು ಸಾಧ್ಯ ಎಂಬ ಡಿ.ಎನ್.ಅಕ್ಕಿ ಅವರ ಪ್ರಶ್ನೆಗೆ, ಸಭೆಯಲ್ಲಿ ಹಾಜರಿದ್ದ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದ ನಿರ್ದೇಶಕ ಡಾ॥ ಡಿ.ವಿ. ದೇವರಾಜ್ ಅವರು ಉತ್ತರಿಸಿದರು. ಐತಿಹಾಸಿಕ ಮಹತ್ವವನ್ನು ಗುರುತಿಸಿ, ಆದ್ಯತೆಯ ಮೇರೆಗೆ ದೇವಾಲಯ ಮತ್ತು ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮತ್ತು ಜೀರ್ಣೋದ್ಧಾರಗಳ ಬಗೆಗೆ ತಮ್ಮ ಇಲಾಖೆ ಆಸಕ್ತಿ ವಹಿಸಿ ಕಾರ್ಯನಿರತವಾಗಿದೆ ಎಂದು ತಿಳಿಸಿದರು, ಬೀದರ್‌ನಕೋಟೆ ಬೀದರ್ ಜಿಲ್ಲೆಯ ಜಲಸಂಗ್ವಿ, ಮಂಡ್ಯ ಜಿಲ್ಲೆಯ ಹೊಸಬೂದನೂರು ಇತ್ಯಾದಿ ಸ್ಥಳಗಳಲ್ಲಿ ದೇವಾಲಯಗಳ ಸಂರಕ್ಷಣಾ ಕಾರ್ಯ ಆಗಿರುವುದನ್ನೂ ಅವರು ತಿಳಿಸಿದರು. ಕಿತ್ತೂರಿನಲ್ಲಿ ವಸ್ತುಸಂಗ್ರಹಾಲಯದ ಸ್ಥಾಪನೆಯ ಬಗೆಗೆ ವಿ.ಸಿ. ಮಾಲಗತ್ತಿ ಅವರು ಕೇಳಿದ ಪ್ರಶ್ನೆಗೆ ಡಾ॥ ಡಿ.ವಿ.ದೇವರಾಜ್ ಅವರು ಸದ್ಯದಲ್ಲೇ ಅದು ಆರಂಭವಾಗಲಿದೆ ಎಂದು ತಿಳಿಸಿದರು.

ಈ ಚರ್ಚೆಗಳ ಅಂತಿಮ ಹಂತದಲ್ಲಿ ಡಾ॥ ಸೂರ್ಯನಾಥ ಕಾಮತ್ ಅವರು, ಜನತೆ ತಮ್ಮ ಕ್ಷೇತ್ರಗಳ ವಿಧಾನಸಭಾ ಸದಸ್ಯರು ವಿಧಾನ ಪರಿಷತ್ ಸದಸ್ಯರು ಮತ್ತು ಲೋಕಸಭಾ ಸದಸ್ಯರ ಬೆನ್ನುಹತ್ತಿ, ತಮ್ಮ ಕ್ಷೇತ್ರಗಳಲ್ಲಿ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗೆ ಕಾರ್ಯತತ್ಪರರಾಗಬೇಕಾದ್ದು, ಅತ್ಯವಶ್ಯಕ ಎಂದರು. ಆ ನಿಟ್ಟಿನಲ್ಲಿ ಅಕಾದೆಮಿಯ ಸದಸ್ಯರು ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಮನವಿ ಮಾಡಿದರು.

ಕೆಲವು ಖಾಸಗಿ ವಸ್ತು ಸಂಗ್ರಹಾಲಯಗಳಲ್ಲಿ ಕೃತ್ರಿಮ ಐತಿಹಾಸಿಕ ವಸ್ತುಗಳ ಸಂರಕ್ಷಣೆ ಆಗುತ್ತಿರುವುದರ ಬಗ್ಗೆ ಧಾರವಾಡದ ಡಾ॥ರು.ಮ. ಷಡರಕ್ಷರಯ್ಯ ಅವರು ಪ್ರಸ್ತಾಪಿಸಿದಾಗ ಡಾ॥ ಡಿ.ವಿ.ದೇವರಾಜ್ ಅವರು ಆ ಬಗ್ಗೆ ಎಚ್ಚರವಹಿಸಬೇಕಾದ್ದು, ಪೋಲೀಸ್ ಇಲಾಖೆಯೆಂದೂ, ಸಿಬ್ಬಂದಿಯ ಮಿತಿಯಿಂದಾಗಿ ತಮ್ಮ ಇಲಾಖೆ ಆ ಬಗ್ಗೆ ಎಚ್ಚರಿಕೆ ವಹಿಸುವುದು ಕಷ್ಟವೆಂದೂ, ಅಕಾದೆಮಿಯ ಸದಸ್ಯರು ಆಸಕ್ತಿ ವಹಿಸಿ ಅಂತಹ ಕೃತ್ರಿಮ ವಸ್ತುಗಳ ಬಗೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಧಾನ ಕಾರ್ಯದರ್ಶಿಯವರು ಮಂಡಿಸಿದ ೧೯೯೪ನೆಯ ಸಾಲಿನ ವರದಿಯನ್ನು ಸ್ವೀಕರಿಸಬಹುದೆಂದು ಡಾ॥ ಶಿ.ಬಾ.ಪಾಟೀಲ್ ಸೂಚಿಸಿದರು, ಕುಂ.ಬಾ. ಸದಾಶಿವಪ್ಪ ಸೂಚನೆಯನ್ನು ಅನುಮೋದಿಸಿದರು.

೧೯೯೪ನೇ ಸಾಲಿನ ಜಮಾ-ಖರ್ಚು ವರದಿಯನ್ನೂ ಸದಸ್ಯರಿಗೆ ಮೊದಲೇ ನೀಡಲಾಗಿತ್ತು. ಅದನ್ನು ಮಂಡಿಸಿದ ಕೋಶಾಧಿಕಾರಿ ಎಂ.ಬಿ. ಪಾಟೀಲರು ಅಕಾದೆಮಿಯ ಆರ್ಥಿಕ ಪರಿಸ್ಥಿತಿಯ ಸ್ಥೂಲಚಿತ್ರ ನೀಡಿ, ಸದಸ್ಯತ್ವ ಶುಲ್ಕ ಬಾಕಿ ನೀಡಬೇಕಾಗಿರುವ ಆಜೀವ ಸದಸ್ಯರು, ಶುಲ್ಕವನ್ನು ಪೂರ್ಣವಾಗಿ ಪಾವತಿ ಮಾಡಬೇಕೆಂದು ಮನವಿ ಮಾಡಿದರು. ಜಮಾ-ಖರ್ಚು ವರದಿಯನ್ನು ಒಪ್ಪಬಹುದೆಂದು ವಿ.ಸಿ.ಮಾಲಗತ್ತಿ ಸೂಚಿಸಿದರು. ಸಿದ್ದಯ್ಯ ಹಿರೇಮಠ ಸೂಚನೆಯನ್ನು ಅನುಮೋದಿಸಿದರು.

೧೯೯೫ನೇ ಸಾಲಿನ ಮುಂಗಡ ಪತ್ರದ ಪ್ರತಿಗಳನ್ನೂ ಸದಸ್ಯರಿಗೆ ಮೊದಲೇ ಒದಗಿಸಲಾಗಿತ್ತು. ೧೯೯೫ನೇ ಸಾಲಿನಲ್ಲಿ ದಶಮಾನೋತ್ಸವದ ಆಚರಣೆಗಾಗಿ ಸ್ವಲ್ಪ ಹಣವನ್ನು ಮುಂಗಡಪತ್ರದಲ್ಲಿ ಸೇರಿಸಲು ಸೂಚಿಸಿದ ಡಾ॥ ಶ್ರೀನಿವಾಸಹಾವನೂರ್ ಮುಂಗಡ ಪತ್ರವನ್ನು ಒಪ್ಪಬಹುದೆಂದು ಸೂಚಿಸಿದರು. ಡಾ॥ ರು.ಮ. ಷಡಕ್ಷರಯ್ಯ ಸೂಚನೆಯನ್ನು ಅನುಮೋದಿಸಿದರು.

ಠರಾವುಗಳು

ದೂರದರ್ಶನದಲ್ಲಿ 'ಒಂದಿಷ್ಟು ಇತಿಹಾಸ' ಅಥವಾ ಅಂತಹ ಕಾರ್ಯಕ್ರಮಗಳು ಪ್ರಸಾರವಾಗಬೇಕು ಎಂದು ಶಿವಕುಮಾರ ಸುಬ್ಬಯ್ಯ ಅವರು ಠರಾವು ಮಂಡಿಸುವ ಸೂಚನೆ ನೀಡಿದ್ದರು. ಆ ವಿಷಯವು ಠರಾವು ಆಗಬೇಕಾದ್ದು ಅವಶ್ಯಕವಿಲ್ಲವೆಂದೂ, ಅಕಾದೆಮಿಯ ಸದಸ್ಯರು ಆ ಬಗ್ಗೆ ಪತ್ರ ಮುಖೇನ ದೂರದರ್ಶನಕ್ಕೆ ಬರೆದು ಒತ್ತಾಯಿಸಬೇಕೆಂದೂ ಡಾ॥ ಸೂರ್ಯನಾಥ ಕಾಮತ್ ಸಲಹೆ ನೀಡಿದರು. ಆ ಸಲಹೆಯನ್ನು ಸರ್ವಸದಸ್ಯರೂ ಅನುಮೋದಿಸಿದರು.

ಎಪಿಗ್ರಾಫಿಯಾ ಕರ್ನಾಟಿಕ ಸಂಪುಟಗಳ ಪರಿಷ್ಕರಣೆಯ ಕಾರ್ಯ ವಿಳಂಬವಾದರೆ, ಅವುಗಳ ಪುನರ್ಮುದ್ರಣ ಕಾರ್ಯವನ್ನಾದರೂ ಪುರಾತತ್ವ ಇಲಾಖೆಯು ಮಾಡಬೇಕೆಂದೂ, ಅಂತೆಯೇ ಕರ್ನಾಟಕದ ಎಲ್ಲಾ ಜಿಲ್ಲೆಗಳ ಶಾಸನ ಸಂಪುಟಗಳ ಪ್ರಕಟಣೆಯೂ ತುರ್ತಾಗಿ ಆಗಬೇಕೆಂದು ಆರ್.ವೆಂಕಟೇಶಮೂರ್ತಿ, ಸುಭಾಷಚಂದ್ರಬೋಸ್, ಕೆ.ಆರ್. ಗಣೇಶ್, ಕೆ.ಎಲ್. ರಾಜಶೇಖರ್, ತಿಮ್ಮೇಗೌಡ, ಬಿ. ರಾಜಶೇಖರಪ್ಪ ಅವರು ಠರಾವು ಮಂಡಿಸಿದರು. ಪುನರ್ಮುದ್ರಣ ಕಾರ್ಯದ ಬಗ್ಗೆ ಮೈಸೂರು ವಿಶ್ವವಿದ್ಯಾಲಯದೊಡನೆ ವ್ಯವಹರಿಸಿ ಪರಿಶೀಲಿಸುವುದಾಗಿ ತಿಳಿಸಿದ, ಡಾ॥ ಡಿ.ವಿ.ದೇವರಾಜ್ ಈಗಾಗಲೇ ಹಂಪಿಯ ಶಾಸನ ಸಂಪುಟ ಸಿದ್ಧವಾಗುತ್ತಿರುವುದನ್ನು ತಿಳಿಸಿದರು. ಉಳಿದ ಎಲ್ಲಾ ಜಿಲ್ಲೆಗಳ ಶಾಸನ ಸಂಪುಟಗಳ ಸಿದ್ಧತೆಯ ಬಗ್ಗೆ ಇಲಾಖೆ ಆಸಕ್ತಿ ವಹಿಸಿದೆ ಎಂದೂ ಅವರು ತಿಳಿಸಿದರು. ಆದಷ್ಟು ಬೇಗ ಎ.ಕ. ಸಂಪುಟಗಳು ಸಂಶೋಧಕರಿಗೆ ಲಭ್ಯವಾಗಬೇಕು ಎಂಬ ಅಭಿಪ್ರಾಯವನ್ನು ಸರ್ವಸದಸ್ಯರೂ ಅನುಮೋದಿಸಿದರು.

ರಾಜ್ಯ ಸರ್ಕಾರದ ಆರಾಧನಾ ಯೋಜನೆಯ ಅಡಿಯಲ್ಲೆ ರಾಜ್ಯದ ಪ್ರಾಚೀನ ದೇವಾಲಯಗಳ ಜೀರ್ಣೋದ್ಧಾರವಾಗಬೇಕೆಂದೂ, ಆ ಬಗ್ಗೆ ಸರ್ಕಾರಕ್ಕೆ ಕೋರಿಕೆ ಸಲ್ಲಿಸಬೇಕೆಂದು ವಿ.ಸಿ. ಮಾಲಗತ್ತಿ ಠರಾವು ಮಂಡಿಸಿದರು. ಅದನ್ನು ಸರ್ವಸದಸ್ಯರೂ ಅನುಮೋದಿಸಿದರು.

ಆಡಿಟರ ನೇಮಕ

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳ ಆಡಿಟ್ ಮಾಡುತ್ತಿರುವ ಕೆ.ವಿ. ಆಚಾರ್ಯ ಮತ್ತು ಕಂಪೆನಿಯವರೇ ೧೯೯೫ನೆಯ ಸಾಲಿನ ಲೆಕ್ಕಪತ್ರಗಳ ಆಡಿಟ್‌ಗೂ ಮುಂದುವರಿಯಬಹುದೆಂದು ಡಾ॥ ದೇವರಕೊಂಡಾರೆಡ್ಡಿ ಮಾಡಿದ ಸೂಚನೆಯನ್ನು ಸಿ.ವಿ. ಮಠದ ಅನುಮೋದಿಸಿದರು. ಆಂತರಿಕ ಆಡಿಟ್‌ರನ ಅವಶ್ಯಕತೆ ಇಲ್ಲವೆಂದೂ ಸರ್ವಸದಸ್ಯರು ಅಭಿಪ್ರಾಯಪಟ್ಟರು.

ಅಧ್ಯಕ್ಷ ಭಾಷಣ ಮಾಡಿದ ಪ್ರೊ॥ ಜಿ.ಎಸ್.ದೀಕ್ಷಿತ್ ಅವರು ಅಕಾದೆಮಿಗೆ ಒಂದು ಸಾವಿರ ರೂ. ನೆರವು ನೀಡಲು ಮುಂದೆ ಬಂದಿರುವ ಡಾ॥ ಎಸ್.ಕೆ. ಜೋಷಿ, ಐದುನೂರು ರೂ. ನೆರವು ನೀಡಲು ಮುಂದೆ ಬಂದಿರುವ ತುಮಕೂರು ಸುನಂದ ಮತ್ತು ಐದು ಸಾವಿರ ರೂ.ಗಳ ಇಡುಗಂಟನ್ನಿಟ್ಟು, ಅದರ ಬಡ್ಡಿಯಿಂದ ಪ್ರತಿ ವರ್ಷ ತರುಣ ಸಂಶೋಧಕರೊಬ್ಬರಿಗೆ (ಇತಿಹಾಸ ದರ್ಶನದಲ್ಲಿ ಪ್ರಕಟವಾಗುವ ಲೇಖನಗಳನ್ನಾಧರಿಸಿ) ಬಹುಮಾನ ನೀಡಲು ವ್ಯವಸ್ಥೆ ಮಾಡಲು ಮುಂದೆ ಬಂದಿರುವ ಪ್ರೊ॥ ಎ.ವಿ. ನರಸಿಂಹಮೂರ್ತಿ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಅಕಾದೆಮಿಯ ಉಪಾಧ್ಯಕ್ಷರಲ್ಲೊಬ್ಬರಾದ ಎಂ.ಜಿ. ನಾಗರಾಜ್ ಸರ್ವಸದಸ್ಯರಿಗೂ ವಂದನೆ ಸಲ್ಲಿಸಿದರು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳು

ದ್ವಿತೀಯ ಪಿ.ಯು.ಸಿ.ಯ ಇತಿಹಾಸ ವಿದ್ಯಾರ್ಥಿಗಳಿಗಾಗಿ ನಡೆಸುವ ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ಈ ವರ್ಷ ೧೨-೩-೧೯೯೫ ರಂದು, ಐದು ಕೇಂದ್ರಗಳಲ್ಲಿ ನಡೆಸಲಾಯಿತು. ಬೆಂಗಳೂರು, ಮೈಸೂರು, ಧಾರವಾಡ ಮತ್ತು ಗುಲ್ಬರ್ಗಗಳಲ್ಲದೆ ಈ ವರ್ಷ ಕರಾವಳಿ ಪ್ರದೇಶದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಐದನೆಯ ಕೇಂದ್ರವಾಗಿ ಕಾರ್ಕಳವನ್ನು ಆರಿಸಲಾಗಿತ್ತು. ಒಟ್ಟು ೫೦೮೮ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ಹಾಕಿದ್ದು, ೪೧೨೦ ಜನ ಹಾಜರಾಗಿದ್ದರು.

ಬೆಂಗಳೂರು ಕೇಂದ್ರದಲ್ಲಿ ಶ್ರೀ ವೆಂಕಟರಾಜು, ಶ್ರೀ ಮಲ್ಲಿಕಾರ್ಜುನ; ಮೈಸೂರು ಕೇಂದ್ರದಲ್ಲಿ ಡಾ॥ ಎಂ.ಎಸ್. ಕೃಷ್ಣಮೂರ್ತಿ, ಧಾರವಾಡ ಕೇಂದ್ರದಲ್ಲಿ ಡಾ॥ ಎಚ್.ಆರ್. ರಘುನಾಥ್ ಭಟ್, ಡಾ॥ ಎಂ.ಕೆ. ಸಾವಂತ್, ಗುಲ್ಬರ್ಗಾ ಕೇಂದ್ರದಲ್ಲಿ ಪ್ರೊ॥ ವಸಂತ ಕುಷ್ಟಗಿ ಮತ್ತು ಸ್ವಾಮಿರಾವ್ ಕುಲಕರ್ಣಿ, ಕಾರ್ಕಳದಲ್ಲಿ ಪ್ರಾಂಶುಪಾಲ ಪ್ರೊ॥ ಭಟ್ ಅವರು ಪರೀಕ್ಷೆಗಳನ್ನು ನಡೆಸಲು ಸಹಕರಿಸಿದರು. ಅವರೆಲ್ಲರಿಗೂ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ. ಪರೀಕ್ಷೆಗಳನ್ನು ನಡೆಸಲು ಸ್ಥಳಾವಕಾಶ ನೀಡಿದ ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಮೈಸೂರಿನ ಮರಿಮಲ್ಲಪ್ಪ ಕಾಲೇಜು, ಧಾರವಾಡದ ಕಿಟೆಲ್ ಕಾಲೇಜು, ಗುಲ್ಬರ್ಗದ ಎನ್.ವಿ.ಕಾಲೇಜು ಮತ್ತು ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜುಗಳ ಆಡಳಿತ ವರ್ಗ ಮತ್ತು ಪ್ರಾಂಶುಪಾಲರಿಗೆ,

ಮೌಲ್ಯಮಾಪನ ಕಾರ್ಯಕ್ಕೆ ಸ್ಥಳಾವಕಾಶ ನೀಡಿದ ಸರ್.ಎಂ.ವಿಶ್ವೇಶ್ವರಯ್ಯ ಎಂಜನಿಯರಿಂಗ್ ಕಾಲೇಜಿನ ಪ್ರಾಚಾರ್ಯರಿಗೆ ಅಕಾದೆಮಿ ಕೃತಜ್ಞತೆ ಸಲ್ಲಿಸುತ್ತದೆ.

ಪರೀಕ್ಷಾ ಕಾರ್ಯಕ್ರಮಗಳಲ್ಲಿ ಪೂರ್ಣ ನೆರವು ನೀಡಿದ ಶ್ರೀ ಸಿ.ಆರ್.ಗಾಡಗೋಳಿ ಅವರಿಗೆ ಅಕಾದೆಮಿಯು ವಿಶ್ವಾಸದಿಂದ ಕೃತಜ್ಞತೆ ಸಲ್ಲಿಸುತ್ತದೆ.

ಕಾರ್ಯಕಾರಿ ಸಮಿತಿಯ ಸಭೆಗಳು

೧೯೯೫ನೆಯ ಸಾಲಿನಲ್ಲಿ ಕಾರ್ಯಕಾರಿ ಸಮಿತಿಯು ಬೆಂಗಳೂರಿನಲ್ಲಿ ನಾಲ್ಕು ಬಾರಿ (೭-೬-೧೯೯೫, ೩-೮-೧೯೯೫, ೬-೯-೧೯೯೫ ಮತ್ತು ೨೬-೧೦-೧೯೯೫) ಸಭೆ ಸೇರಿ ಅಕಾದೆಮಿಯ ವಿವಿಧ ಕಾರ್ಯ ಚಟುವಟಿಕೆಗಳ ಬಗೆಗೆ ಚರ್ಚಿಸಿ ಸುಸೂತ್ರವಾಗಿ ಕಾರ್ಯಗಳು ನಡೆಯಲು ಕಾರಣವಾಗಿದೆ. ನಾಲ್ಕೂ ಸಭೆಗಳ ಅಧ್ಯಕ್ಷತೆಯನ್ನು ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ವಹಿಸಿದ್ದರು. ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಹಾಜರಿದ್ದು ಮತ್ತು ಸಭೆಗಳಲ್ಲಿ ಹಾಜರಾಗಲು ಸಾಧ್ಯವಾಗದಿದ್ದರೂ ಸಲಹೆ-ಸೂಚನೆಗಳ ಮೂಲಕ ಸಹಕರಿಸಿದ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರಿಗೂ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಸದಸ್ಯರ ಸಂಖ್ಯೆ:

ಈ ವಾರ್ಷಿಕ ಸರ್ವಸದಸ್ಯರ ಸಭೆಗೆ ಸೂಚನೆಯನ್ನು ಕಳುಹಿಸುವ ವೇಳೆಗೆ ಅಕಾದೆಮಿಯ ಸದಸ್ಯತ್ವದ ವಿವರ ಕೆಳಕಂಡಂತಿದೆ :

ವರ್ಷ	ಅಜೀವ	ಸಾಮಾನ್ಯ	ಒಟ್ಟು
೧೯೯೦-೯೧	೨೯೦	೩೫೨	೬೪೨
೧೯೯೫ ಮೇ ೨೩ ಕ್ಕೆ	೬೫೦	೫೦	೭೦೦

ಅಕಾದೆಮಿಯ ಘಟಕಗಳು

ಶ್ರೀ ತ.ರಂ. ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ ಅಕಾದೆಮಿಯ ಬೆಂಗಳೂರು ಘಟಕವೂ, ಡಾ॥ ಎಂ.ಎಸ್. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಘಟಕವೂ, ಡಾ॥ ಎಚ್.ಆರ್. ರಘುನಾಥ್ ಭಟ್ ಅವರ ಅಧ್ಯಕ್ಷತೆಯಲ್ಲಿ ಧಾರವಾಡ ಘಟಕವೂ ಶ್ರೀ ಕುಂ.ಬಾ.ಸದಾಶಿವಪ್ಪ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲಾ ಘಟಕವೂ ಶ್ರೀ ಎಂ.ನಾಗಪ್ಪ ಅವರ ಅಧ್ಯಕ್ಷತೆಯಲ್ಲಿ ರಾಯಚೂರು ಘಟಕವೂ ಕಾರ್ಯನಿರ್ವಹಿಸುತ್ತಿವೆ.

ಬೆಂಗಳೂರು ಘಟಕವು ೨೪-೨-೧೯೯೫ ರಂದು ಸಂಜೆ ೫ ಘಂಟೆಗೆ ಕರ್ನಾಟಕ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯ ಜೊತೆಗೆ ಬೆಂಗಳೂರಿನ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪುಸ್ತಕಗಳ ಬಿಡುಗಡೆಯ ವಿಶೇಷ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಡಾ॥ ಡಿ.ವಿ.ದೇವರಾಜ್ ಅವರ **'ಹಿಸ್ಟರಿ ಆಫ್ ಸೋಮನಾಥಪುರ ಟೆಂಪಲ್ ಕಾಂಪ್ಲೆಕ್ಸ್'** ಕೃತಿಯನ್ನು ಕರ್ನಾಟಕದ ಘನ್ಯಾ ಮುಖ್ಯ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡ ಅವರು ಬಿಡುಗಡೆ ಮಾಡಿದರು. ಡಾ॥ ಸಿ.ಎಸ್. ಪಾಟೀಲ್ ಅವರ **'ಕರ್ನಾಟಕ ಶಿಲ್ಪದಲ್ಲಿ ಪಂಚತಂತ್ರ'** ಕೃತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಜಿ.ನಾರಾಯಣ ಅವರೂ, **'ದಿ ಮ್ಯಾಗ್ನಿಫಿಸೆಂಟ್ ಮೈಸೂರು ದಸರಾ ಚಿತ್ರ ಸಂಪುಟ'**ವನ್ನು ಅಕಾದೆಮಿಯ ಅಧ್ಯಕ್ಷರಾದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರೂ ಬಿಡುಗಡೆ ಮಾಡಿದರು. ಪ್ರೊ॥ ಜಿ.ಎಸ್.ದೀಕ್ಷಿತ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಾ॥ ಬಾ.ರಾ. ಗೋಪಾಲ್ ಅವರು ಕೃತಿಗಳ ಪರಿಚಯ ಮಾಡಿದರು.

ಅಕಾದೆಮಿಯ ಇತರ ಘಟಕಗಳ ಕಾರ್ಯಕ್ರಮಗಳ ಬಗೆಗೆ ಸ್ಥಳಾಭಾವದಿಂದ ಇಲ್ಲಿ ಪ್ರಸ್ತಾಪಿಸಲಾಗಿಲ್ಲ.

ಇತರ ಕಾರ್ಯಕ್ರಮಗಳು

ತನ್ನ ಹತ್ತನೆಯ ವರ್ಷದಲ್ಲಿ ಕಾಲಿಟ್ಟ ಕರ್ನಾಟಕ ಇತಿಹಾಸ ಅಕಾಡೆಮಿಯು ತನ್ನ ದಶವಾರ್ಷಿಕ ಉತ್ಸವದ ಅಂಗವಾಗಿ ದಿ: ೮-೧೨-೧೯೯೫, ೯-೧೨-೯೫ ಮತ್ತು ೧೦-೧೨-೯೫ರಂದೂ ಮೂರು ದಿನಗಳ ಕಾಲ ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ **ಸಂಶೋಧನ ತರಬೇತಿ** ಕಾರ್ಯಾಗಾರವನ್ನು ನಡೆಸಿತು.

ದಿನಾಂಕ: ೮-೧೨-೯೫ ರಂದು ಸಂಜೆ ೬ ಘಂಟೆಗೆ ಗುಲ್ಬರ್ಗಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ॥ಕೆ.ಎಚ್.ಚೆಲುವರಾಜು

ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಪ್ರೊ॥ ಪ್ರತಿಭಾ ಚಿಣ್ಣಪ್ಪ ಮಾರ್ಗದರ್ಶಕ ಭಾಷಣ ಮಾಡಿದರು. ಸಭಾಧ್ಯಕ್ಷತೆ ವಹಿಸಿದ್ದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಶ್ರೀ ವಿ.ಸಿ. ಮಾಲಗತ್ತಿ ಅವರು ಸಂಕಲಿಸಿದ 'ಅಕಾದೆಮಿಯ ಸಮ್ಮೇಳನಾಧ್ಯಕ್ಷರ ಉಪನ್ಯಾಸಗಳು' ಕೃತಿಯನ್ನು ಬಿಡುಗಡೆ ಮಾಡಿದರು.

ಸಂಶೋಧನ ತರಬೇತಿ ಕಾರ್ಯಾಗಾರದ ಮೊದಲ ಗೋಷ್ಠಿಯ (೯-೧೨-೯೫ ರಂದು ಬೆಳಿಗ್ಗೆ ೯-೩೦) ಅಧ್ಯಕ್ಷತೆಯನ್ನು ಶ್ರೀ ಎಚ್.ಕೆ.ಶ್ರೀನಿವಾಸನ್ ವಹಿಸಿದ್ದರು. ಪ್ರಾಗೈತಿಹಾಸಿಕ ಸಂಶೋಧನೆ ಕುರಿತು ಡಾ॥ ಅ.ಸುಂದರ ಮತ್ತು ಶಾಸನಗಳಿಂದ ಸಂಶೋಧನೆ ಕುರಿತು ಡಾ॥ ಬಾ.ರಾ. ಗೋಪಾಲ್ ಉಪನ್ಯಾಸ ನೀಡಿದರು. ಶ್ರೀ ಪಿ.ವಿ. ಕೃಷ್ಣಮೂರ್ತಿ ಗೋಷ್ಠಿಯ ನಿರ್ವಹಣೆ ಮಾಡಿದರು.

ಎರಡನೆಯ ಗೋಷ್ಠಿಯು (೯-೧೨-೧೯೯೫ರಂದು ಮಧ್ಯಾಹ್ನ ೧-೪೫) ಡಾ॥ ಶ್ರೀನಿವಾಸ ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ನಡೆದು, ಡಾ॥ ಎಂ.ಚಿದಾನಂದಮೂರ್ತಿ ಅವರು ಇತಿಹಾಸ ಮತ್ತು ಸಾಹಿತ್ಯ ಸಂಶೋಧನೆ ಕುರಿತು, ಶ್ರೀ ಎಚ್.ಪಿ. ಶಶಿಧರಮೂರ್ತಿ ಕಾಗದ ಪತ್ರ ದಾಖಲೆಗಳು - ಸಂಶೋಧನೆ ಕುರಿತು ಉಪನ್ಯಾಸ ನೀಡಿದರು. ಶ್ರೀ ಜೆ.ಟಿ. ಜಯರಾಮಯ್ಯ ಗೋಷ್ಠಿಯ ನಿರ್ವಹಣೆ ಮಾಡಿದರು.

ಮೂರನೆಯ ಗೋಷ್ಠಿಯ (೧೦-೧೨-೧೯೯೫ ರಂದು ಬೆಳಿಗ್ಗೆ ೯-೩೦) ಅಧ್ಯಕ್ಷತೆಯನ್ನು ಶ್ರೀ ಸಿ.ಕೃಷ್ಣಮೂರ್ತಿ ವಹಿಸಿದ್ದರು. ಡಾ॥ ಎಸ್.ರಾಜಶೇಖರ್ ಅವರು ವಾಸ್ತು ಮೂರ್ತಿ ಶಿಲ್ಪ - ಸಂಶೋಧನೆಗಳು ವಿಷಯವಾಗಿ ಮಾತನಾಡಿದರು. ಬಿ.ಪಾಂಡುಕುಮಾರ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ನಾಲ್ಕನೆಯ ಗೋಷ್ಠಿಯ (೧೦-೧೨-೧೯೯೫ ರಂದು ಮಧ್ಯಾಹ್ನ ೧-೪೫) ಅಧ್ಯಕ್ಷತೆಯನ್ನು ಡಾ॥ ಸೂರ್ಯನಾಥ ಕಾಮತ್ ವಹಿಸಿದ್ದರು. ಎಂ.ಜಿ. ಮಂಜುನಾಥ ನಿರ್ವಹಿಸಿದ ಗೋಷ್ಠಿಯಲ್ಲಿ ಡಾ॥ ಎಚ್.ಆರ್. ರಘುನಾಥ ಭಟ್ ಇತಿಹಾಸಕ್ಕೆ ಸಂಬಂಧಿಸಿದ ಇತ್ತೀಚಿನ ಸಂಶೋಧನೆಗಳ ಬಗೆಗೂ, ಡಾ॥ ಡಿ.ವಿ. ದೇವರಾಜ್ ಅವರು ಇತ್ತೀಚಿನ ಪುರಾತತ್ತ್ವ ಸಂಶೋಧನೆಗಳ ಬಗೆಗೂ ಉಪನ್ಯಾಸ ಮಾಡಿದರು.

ದಿನಾಂಕ: ೧೦-೧೨-೧೯೯೫ರಂದು ಸಂಜೆ ೫ಘಂಟೆಗೆ ಸಂವಾದ ಕಾರ್ಯಕ್ರಮ ನಡೆಯಿತು. ಸಂಶೋಧನ ತರಬೇತಿ ಕಾರ್ಯಾಗಾರದಲ್ಲಿ ಸುಮಾರು ೬೦ ಜನ ತರುಣ ಸಂಶೋಧಕರು ಪಾಲ್ಗೊಂಡಿದ್ದರು. ಕಾರ್ಯಕ್ರಮಕ್ಕೆ ಶ್ರೀ ಗಂಗಾರಾಮ್, ಶ್ರೀ ಅಶೋಕ್ ಕುಮಾರ್, ಪ್ರೊ॥ ಜಿ.ಎಸ್. ದೀಕ್ಷಿತ್, ಡಾ॥ ಪ್ರತಿಭಾ ಚಿಣ್ಣಪ್ಪ, ಡಾ॥ ಸೂರ್ಯನಾಥ ಕಾಮತ್, ಡಾ॥ ಎಚ್.ಎಸ್. ಗೋಪಾಲರಾವ್, ಶ್ರೀ ಎಂ.ಬಿ. ಪಾಟೀಲ್, ಡಾ॥ ದೇವರಕೊಂಡಾರೆಡ್ಡಿ, ಶ್ರೀಮತಿ ಕೆ. ವಸಂತಲಕ್ಷ್ಮಿ, ಅವರು ಆರ್ಥಿಕ ನೆರವು ನೀಡಿದರು. ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್ ಸಹ ಆರ್ಥಿಕ ನೆರವು ನೀಡಿತು. ಇತಿಹಾಸಪ್ರಿಯ ಗೆಳೆಯರು ಸೇರಿ ದಶಮಾನೋತ್ಸವದ ಮೂರೂ ದಿನ ಕಾಫಿ ವ್ಯವಸ್ಥೆಯ ಜವಾಬ್ದಾರಿ ವಹಿಸಿಕೊಂಡಿದ್ದರು.

೧೯೯೫ನೆಯ ಸಾಲಿನಲ್ಲಿ ನೃಪತುಂಗ ಸಂಶೋಧನ ಕೇಂದ್ರಕ್ಕೆ (ಅಕಾದೆಮಿಯ ಅಂಗಸಂಸ್ಥೆ) ರೂ. ೩,೦೦೦-೦೦ಗಳ ನೆರವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರ ಲೇಖನ ಸಂಪುಟದ ಬಿಡುಗಡೆಯ ಕಾರ್ಯಕ್ರಮಕ್ಕೆ ರೂ. ೨,೦೦೦-೦೦ ಮತ್ತು ಗುಲ್ಬರ್ಗದಲ್ಲಿ ರಾಷ್ಟ್ರಕೂಟ ಸಮ್ಮೇಳನ ನಡೆಸಲು ರೂ. ೧,೦೦೦-೦೦ ನೆರವನ್ನು ಅಕಾದೆಮಿಯು ನೀಡಿದೆ.

ಕೃತಜ್ಞತೆಗಳು

ಅಕಾದೆಮಿಯ ೯ನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿದ ಬೆಳಗಾವಿಯ ಶ್ರೀ ನಾಗನೂರು ರುದ್ರಾಕ್ಷಿ ಮಠದ ಶ್ರೀ ವೀರಶೈವ ಅಧ್ಯಯನ ಅಕಾಡೆಮಿ, ಪೂಜ್ಯ ಶ್ರೀ ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳು, ಡಾ॥ ಎಸ್.ಆರ್ ಗುಂಜಾಳ ಅವರಿಗೆ ಅಕಾದೆಮಿಯು ಗೌರವಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ. ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮಕ್ಕೆ ಆರ್ಥಿಕ ನೆರವು (ರೂ.೨೫,೦೦೦) ನೀಡಿದ ಕರ್ನಾಟಕ ರಾಜ್ಯ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯ ನಿರ್ದೇಶಕರು ಮತ್ತು ಸಿಬ್ಬಂದಿಗೆ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ. ಇತಿಹಾಸದರ್ಶನ ಸಂಪುಟಕ್ಕೆ ರೂ. ೪,೫೦೦ಗಳ ನೆರವು ನೀಡಿದ ಐ.ಸಿ.ಎಚ್.ಆರ್.ಸಂಸ್ಥೆಗೆ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಅಕಾದೆಮಿಗೆ ಕಾಣಿಕೆಯ ರೂಪದಲ್ಲಿ ಆರ್ಥಿಕ ನೆರವು ನೀಡಿದ, ಧಾರವಾಡದ ಡಾ॥ ಎಸ್.ಕೆ.ಜೋಶಿ ಮತ್ತು ತುಮಕೂರಿನ ಶ್ರೀಮತಿ ಸುನಂದಾ, ಪೀಠೋಪಕರಣಗಳಿಗಾಗಿ ನೆರವು ನೀಡಿದ ಬಿ.ಪಾಂಡುಕುಮಾರ್ ಮತ್ತು ಕ.ವಿ.ಮಂಡಳಿಯ ಗೆಳೆಯರು - ಅವರು ಅಕಾದೆಮಿಯ ಬಗೆಗೆ ಇಟ್ಟಿರುವ ಅಭಿಮಾನಕ್ಕಾಗಿ ಅಕಾದೆಮಿಯು ಅತ್ಯಂತ ವಿಶ್ವಾಸದಿಂದ ಕೃತಜ್ಞತೆ ಸಲ್ಲಿಸುತ್ತದೆ.

೧೯೯೨ರ ಸಾಲಿನಲ್ಲಿ ಆಗಿನ ಶಿಕ್ಷಣ ಮಂತ್ರಿ ಮಾನ್ಯ ಶ್ರೀ ವೀರಪ್ಪ ಮೊಯಿಲಿ ಅವರು ನೀಡಿದ್ದ ಆಶ್ವಾಸನೆಯು ೧೯೯೫ರಲ್ಲಿ ಈಡೇರಿದ್ದು, ಈ ವರ್ಷದ 'ಇತಿಹಾಸ ದರ್ಶನ'ದ ಮುದ್ರಣಕ್ಕೆ ಮಾತ್ರ ಕರ್ನಾಟಕ ಸರ್ಕಾರವು ರೂ.೪೦,೦೦೦ ಆರ್ಥಿಕ ನೆರವು ನೀಡಿದೆ. ಅದಕ್ಕಾಗಿ ಸಂಬಂಧಿಸಿದವರಿಗೆ ಮತ್ತು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

'ಇತಿಹಾಸದರ್ಶನ'ದ ಮತ್ತು 'ಐತಿಹಾಸಿಕ ಪರಂಪರೆ ಉಳಿಸಿ' ಭಿತ್ತಿಪತ್ರಗಳ ಮುದ್ರಣಕಾರ್ಯವನ್ನು ಸಕಾಲಕ್ಕೆ ಅತ್ಯಂತ ಸಮರ್ಪಕವಾಗಿ ಮಾಡಿಕೊಡುತ್ತಿರುವ ಲಕ್ಷ್ಮಿಮುದ್ರಣಾಲಯದ ಮಾಲೀಕರಾದ ಶ್ರೀ ಅಶೋಕ್‌ಕುಮಾರ್ ಮತ್ತು ಅವರ ಸಿಬ್ಬಂದಿಗೆ(ವಿಶೇಷವಾಗಿ ಶ್ರೀ ವೆಂಕಟೇಶ್) ಅಕಾದೆಮಿಯು ಕೃತಜ್ಞವಾಗಿದೆ. ಅಕಾದೆಮಿಯ ಇತರ ಮುದ್ರಣ ಕಾರ್ಯವನ್ನು ಮಾಡಿಕೊಡುತ್ತಿರುವ ನಾಗೇರಿ ಮುದ್ರಣಾಲಯದ ಶ್ರೀ ಶಾಂತಾರಾಂಪ್ರಭು ಅವರಿಗೂ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ದಶಮಾನೋತ್ಸವ ಆಚರಣೆಯ ಸಂಬಂಧ ಆರ್ಥಿಕ ನೆರವು ನೀಡಿ ಸಹಕರಿಸಿದ ಶ್ರೀ ಗಂಗಾರಾಮ್, ಶ್ರೀ ಶಾಂತಾರಾಂ ಪ್ರಭು, ಶ್ರೀ ಅಶೋಕ್ ಕುಮಾರ್ ಮತ್ತು ನಮ್ಮವರೇ ಆದ ಹಲವಾರು ಹಿತೈಷಿಗಳಿಗೆ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಅಕಾದೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಪ್ರಬಂಧಗಳನ್ನು ಮಂಡಿಸುತ್ತಾ ಸಂಶೋಧನೆಯ ಕ್ಷೇತ್ರವನ್ನು ಫಲಪ್ರದ ಮಾಡುತ್ತಿರುವ ತರುಣ ಸಂಶೋಧಕರು ಮತ್ತು ಮಾರ್ಗದರ್ಶನ ಮಾಡುತ್ತಿರುವ ಹಿರಿಯ ಸಂಶೋಧಕರಿಗೆ ಅಕಾದೆಮಿಯು ಹೃದಯಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.

ಕೇವಲ ಹತ್ತು ವರ್ಷಗಳಲ್ಲಿ ಕರ್ನಾಟಕ ಇತಿಹಾಸ ಅಕಾದೆಮಿಯು ರಾಜ್ಯದ ಪ್ರತಿಷ್ಠಿತ ಸಂಸ್ಥೆಯಾಗಿ ಉಳಿಯಲು ಇದರ ಸಕ್ರಿಯ ಸದಸ್ಯರೇ ಕಾರಣ. ಅಕಾದೆಮಿಯ ಗೌರವ ಪ್ರತಿಷ್ಠೆಗಳು ಬೆಳೆಯಲು ಸರ್ವಸದಸ್ಯರೇ ಕಾರಣ ಎಂದು ಮತ್ತೊಮ್ಮೆ ಅತ್ಯಂತ ಹೆಮ್ಮೆಯಿಂದ ತಿಳಿಸಬಯಸುತ್ತೇನೆ.

ಡಾ॥ ಎಚ್.ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿ
(ಕಾರ್ಯಕಾರಿ ಸಮಿತಿಯ ಅನುಮತಿಯ ಮೇರೆಗೆ)

ಕರ್ನಾಟಕ ಇತಿಹಾಸ ಅಕಾದೆಮಿ (ರಿ.,)

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆವರಣ, ಬಸವನಗುಡಿ ರಸ್ತೆ,
ನರಸಿಂಹರಾಜಾ ಕಾಲೋನಿ, ಬೆಂಗಳೂರು - ೫೬೦ ೦೧೯

೧೯೯೬ನೆಯ ಸಾಲಿನ ವಾರ್ಷಿಕ ವರದಿ

ಪ್ರಿಯ ಸದಸ್ಯ ಬಂಧುಗಳೇ

ಇತಿಹಾಸ ಅಕಾದೆಮಿಯು ತನ್ನ ಆರಂಭದ ೧೦ ವರ್ಷಗಳಲ್ಲಿ ಆರೋಗ್ಯಕರವಾಗಿ, ಸಾರ್ಥಕವಾಗಿ ಬೆಳೆದು ಈಗ ಕರ್ನಾಟಕ ಇತಿಹಾಸದ ಬಗೆಗೆ ಪ್ರೀತಿ ಇರಿಸಿಕೊಂಡಿರುವ ಎಲ್ಲರ ಗಮನ ಸೆಳೆದು ೧೧ನೆಯ ವರ್ಷಕ್ಕೆ ಕಾಲಿಟ್ಟಿದೆ. ಇದಕ್ಕೆ ಕಾರಣವೆಂದರೆ ಅಕಾದೆಮಿಯ ಸದಸ್ಯರು ವರ್ಷವಿಡೀ ಅಕಾದೆಮಿಯ ಚಟುವಟಿಕೆಗಳನ್ನು ವಿಸ್ತರಿಸುತ್ತಲೇ ಇರುವುದಾಗಿದೆ.

೧೯೯೬ರ 'ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮ

ಕಳೆದ ವರ್ಷಗಳಂತೆಯೇ ಈ ವರ್ಷವೂ ೧೬-೮-೧೯೯೬ ರಂದು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಬೆಂಗಳೂರಿನಲ್ಲಿ ನಡೆಯಿತು. ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ಸಚಿವೆಯವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು **'ಐತಿಹಾಸಿಕ ಪರಂಪರೆ ಉಳಿಸಿ'** ಭಿತ್ತಿ ಚಿತ್ರವನ್ನು ಅನಾವರಣ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿ ತಮ್ಮ ಭಾಷಣದಲ್ಲಿ ಇತಿಹಾಸ ಮತ್ತು ಸಾಂಸ್ಕೃತಿಕ ಜಾಯಮಾನವನ್ನು ಬೆಳೆಸಬೇಕಾದ ಅವಶ್ಯಕತೆಯ ಬಗ್ಗೆ ತಿಳಿಸಿದರು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಮಾನ್ಯ ಶ್ರೀ ಇ.ಎಸ್. ವೆಂಕಟರಾಮಯ್ಯನವರು ತಮ್ಮ ಮುಖ್ಯ ಅತಿಥಿ ಭಾಷಣದಲ್ಲಿ ಇತಿಹಾಸ ಅಕಾದೆಮಿಯ ಸಕ್ರಿಯಾವಂತಿಕೆ ಹಾಗು ಇತಿಹಾಸ ಪರಂಪರೆ ಉಳಿಸುವ ಬಗ್ಗೆ ಇರುವ ಕಾಳಜಿಯ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಖ್ಯಾತ ಇತಿಹಾಸ ತಜ್ಞ ಡಾ॥ ಸೂರ್ಯನಾಥ ಕಾಮತ್ ಅವರು, ನಾಡಿನ ಮೂಲೆ ಮೂಲೆಗಳಲ್ಲಿ ಅಡಗಿರುವ ಸಾಂಸ್ಕೃತಿಕ ಆಸ್ತಿಯನ್ನು ಕಾಪಾಡುವ ಅಗತ್ಯತೆಯ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತುತ ಪಡಿಸಿದರು.

ಪ್ರಸ್ತುತ ವರ್ಷದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮವು ರಾಜ್ಯ ಪುರಾತತ್ವ ಇಲಾಖೆಯ ಸಹಯೋಗ ಹಾಗು ಆರ್ಥಿಕ ನೆರವಿನೊಂದಿಗೆ ಬೆಂಗಳೂರಿನ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ನಡೆಯಿತು. ಈ ವರ್ಷದ ಕಾರ್ಯಕ್ರಮಕ್ಕೆ ಭಿತ್ತಿ ಚಿತ್ರವನ್ನು ಖ್ಯಾತ ಕಲಾವಿದ ಶ್ರೀ ಸೂರಿ ಅವರು ಸಿದ್ಧಪಡಿಸಿಕೊಟ್ಟು ಉಪಕರಿಸಿದರು. ಈ ಕಾರ್ಯಕ್ರಮದ ಉದ್ಘಾಟನೆಯ ನಂತರ ನಾಡಿನ ವಿವಿಧ ಕಡೆ ನಡೆದ ಕಾರ್ಯಕ್ರಗಳ ಪಟ್ಟಿಯನ್ನು ಮುಂದಿನ ಪುಟಗಳಲ್ಲಿ ನೀಡಿದೆ.

ಹತ್ತನೆಯ ವಾರ್ಷಿಕ ಸಮ್ಮೇಳನ

ಅಕಾದೆಮಿಯ ಹತ್ತನೆಯ ವಾರ್ಷಿಕ ಸಮ್ಮೇಳನವು ೧೯೯೬ರ ಜೂನ್ ೭,೮ ಮತ್ತು ೯ರಂದು ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಧಾರವಾಡದ ಶ್ರೀ ಮುರುಘಾಮಠದ ಆಶ್ರಯದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ೭-೬-೯೬ ರಂದು ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸಭಾಭವನದಲ್ಲಿ ನಡೆದ ಸಮ್ಮೇಳನದ ಉದ್ಘಾಟನೆಯನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿರಾಜ್ ಮತ್ತು ಕನ್ನಡ-ಸಂಸ್ಕೃತಿ ಸಚಿವರಾದ ಮಾನ್ಯ ಶ್ರೀ ಎಂ.ಪಿ. ಪ್ರಕಾಶ್ ಅವರು ಮಾಡಿದರು. ಶ್ರೀ ಮುರುಘಾಮಠದ ಶ್ರೀ ಮ.ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಎಸ್. ರಾಮೇಗೌಡರು ವಹಿಸಿದ್ದರು. ಕರ್ನಾಟಕದ ಹಿರಿಯ ಇತಿಹಾಸಕಾರರೂ, ಅಕಾದೆಮಿಯ ಅಧ್ಯಕ್ಷರೂ ಆದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಸಮ್ಮೇಳನಾಧ್ಯಕ್ಷರಾಗಿದ್ದು, ಕೆರೆಕಟ್ಟೆಗಳ ರಕ್ಷಣೆಯ ಮಹತ್ವದ ಬಗೆಗೆ ಇತಿಹಾಸ ಪ್ರೇಮಿಗಳ ಗಮನ ಸೆಳೆದರು. ''**ಇತಿಹಾಸ ದರ್ಶನ**'ದ ಹನ್ನೊಂದನೆಯ ಸಂಪುಟವನ್ನು ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಪ್ರೊ॥ ಆರ್.ಸಿ. ಹಿರೇಮಠ್ ಅವರು ಬಿಡುಗಡೆ ಮಾಡಿದರು. ದಶಮಾನೋತ್ಸವ ಸ್ಮರಣ ಸಂಪುಟವಾದ **'ಅರಿವು'**, ಕ.ವಿ.ವಿ.ದ ಕುಲಸಚಿವ ಶ್ರೀ ರಜನೀಶ್ ಗೋಯಲ್ ಅವರಿಂದ ಬಿಡುಗಡೆ ಆಯಿತು. ಶ್ರೀ ಮ.ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳು ಕಳೆದ ಸಾಲಿನಲ್ಲಿ ಪಿ.ಎಚ್.ಡಿ. ಪದವಿ ಪಡೆದ ಅಕಾದೆಮಿಯ ಸದಸ್ಯರನ್ನು ಸನ್ಮಾನಿಸಿ ಆಶೀರ್ವಚನ ನೀಡಿದರು. ಉದ್ಘಾಟನಾ ಸಮಾರಂಭದಲ್ಲೇ

ಡಾ॥ ಡಿ.ಪಿ. ಪರಮಶಿವಮೂರ್ತಿ ಅವರ 'ಸಂಶೋಧನೆಯ ಹಿರಿ' ಕೃತಿಯನ್ನು ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ॥ ಡಿ.ವಿ. ದೇವರಾಜ್ ಅವರೂ, ಶ್ರೀಮತಿ ಹನುಮಾಕ್ಷಿ ಗೋಗಿ ಅವರ 'ಗುಲ್ಬರ್ಗಾ ಜಿಲ್ಲೆಯ ಶಾಸನಗಳು' ಕೃತಿಯನ್ನು ಕರ್ನಾಟಕ ವಿ.ವಿ.ದ ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾದ ಪ್ರೊ॥ ಎಂ.ಬಿ. ನೇಗಿನಹಾಳ ಅವರೂ ಡಾ॥ ಕೆ.ಜಿ. ಭಟಸೂರಿ ಅವರ 'ಧಾರನಾಥ ದೇವಾಲಯ ಧಾರೇಶ್ವರ' ಮತ್ತು ಡಾ॥ ರು.ಮ. ಷಡಕ್ಷರಯ್ಯ ಅವರ 'ಬೀದರ ಜಿಲ್ಲೆಯ ಶಾಸನಗಳು' ಕೃತಿಗಳನ್ನು ಕ.ವಿ.ವಿ.ಯ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಪ್ರೊ॥ ಎಂ.ಎಂ. ಕಲಬುರ್ಗಿ ಅವರೂ ಮಾಡಿದರು.

ಇದೇ ಸಂದರ್ಭದಲ್ಲಿ ಕ.ವಿ.ವಿ.ದ ಕನ್ನಡ ಸಂಶೋಧನ ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿ ಶ್ರೀ ಅನಿಲ ಬೆಟಗೇರಿಯವರ 'ಸ್ಟೋನ್ ಕೊಲಾಜ್', ಶ್ರೀ ಹುಣಸೂರು ಕೇಶವಮೂರ್ತಿ ಅವರ 'ನಾಣ್ಯ ಪ್ರದರ್ಶನ' ಮತ್ತು ರಾಜ್ಯ ಪುರಾತತ್ವ ಇಲಾಖೆಯವರಿಂದ ಛಾಯಾಚಿತ್ರ ಪ್ರದರ್ಶನಗಳು ನಡೆದವು.

೭-೯-೯೬ರ ೨-೩೦ರಿಂದ ೯-೬-೯೬ರ ಸಂಜೆ ೫ ಗಂಟೆಯ ವರೆಗೆ ಡಾ॥ ಅ.ಸುಂದರ, ಡಾ॥ ಶ್ರೀನಿವಾಸರಿತ್ತಿ, ಡಾ॥ ಡಿ.ವಿ. ದೇವರಾಜ್, ಡಾ॥ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಡಾ॥ ಎಸ್. ಕೆ. ಜೋಶಿ, ಪ್ರೊ॥ ಲಕ್ಷ್ಮಣ್ ತೆಲಗಾವಿ, ಡಾ॥ ರು.ಮ. ಷಡಕ್ಷರಯ್ಯ, ಡಾ॥ ಕೆ.ಎನ್. ಚಿಟ್ನೀಸ್, ಡಾ॥ ಬಿ.ಆರ್.ಹಿರೇಮಠ, ಡಾ॥ ಬಾ.ರಾ. ಗೋಪಾಲ್-ಮುಂತಾದ ವಿದ್ವಾಂಸರುಗಳ ಅಧ್ಯಕ್ಷತೆಯಲ್ಲಿ ನಡೆದ ಹನ್ನೆರಡು ಗೋಷ್ಠಿಗಳಲ್ಲಿ ಹಿರಿಯ ವಿದ್ವಾಂಸರು ಮತ್ತು ತರುಣ ವಿದ್ವಾಂಸರುಗಳಿಂದ ಇತಿಹಾಸದ ವಿವಿಧ ವಿಷಯಗಳಿಗೆ ಸಂಬಂಧಿಸಿದ ೨೬ ಪ್ರಬಂಧಗಳು ಮಂಡಿಸಲ್ಪಟ್ಟವು.

೮-೬-೧೯೯೬ರಂದು ಬೆಳಿಗ್ಗೆ ೧೧ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯವರೆಗೆ ಶ್ರೀಮುರುಘಾಮಠಕ್ಕೆ ಸಂಬಂಧಿಸಿದ ವಿಶೇಷ ಗೋಷ್ಠಿಯು ಧಾರವಾಡದ ಶ್ರೀ ಮುರುಘಾಮಠದಲ್ಲಿಯೇ ನಡೆಯಿತು. ಶ್ರೀ.ಮ.ನಿ.ಪ್ರ ಶಿವಯೋಗಿ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆದ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಡಾ॥ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಅವರು ವಹಿಸಿದ್ದರು. ಆ ವಿಶೇಷ ಗೋಷ್ಠಿಯಲ್ಲಿ ಒಂಬತ್ತು ಪ್ರಬಂಧಗಳ ಮಂಡನೆಯಾಯಿತು.

೯-೬-೧೯೯೬ರಂದು ಸಂಜೆ ೫-೩೦ಗಂಟೆಗೆ ಹಿರಿಯ ಸಾಹಿತಿಗಳಾದ ಶ್ರೀ ಎನ್ಕೆ ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಸೆನೆಟ್ ಭವನದಲ್ಲೇ ನಡೆದ ಸಮಾರೋಪ ಸಮಾರಂಭದಲ್ಲಿ ಹುಬ್ಬಳ್ಳಿ-ಧಾರವಾಡದ ಪೋಲೀಸ್ ಕಮೀಶನರ್ ಡಾ॥ ಡಿ.ವಿ. ಗುರುಪ್ರಸಾದ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಮುಖ್ಯ ಅತಿಥಿಗಳು ಇತಿಹಾಸ ಪ್ರಜ್ಞೆಯ ಅವಶ್ಯಕತೆಯ ಬಗೆಗೆ ಮಾತುಗಳನ್ನಾಡಿದರು. ಅಧ್ಯಕ್ಷರಾದ ಶ್ರೀ ಎನ್ಕೆ ಕುಲಕರ್ಣಿ ಅವರು ಐತಿಹಾಸಿಕ ಕಾದಂಬರಿಗಳ ಬಗೆಗೆ ಮಾತನಾಡಿದರು.

ಸಮ್ಮೇಳನದ ಯಶಸ್ಸಿನ ಬಗೆಗೆ ಹಲವಾರು ಪ್ರತಿನಿಧಿಗಳು ತುಂಬು ಹೃದಯದಿಂದ ಮೆಚ್ಚುಗೆ ಸಲ್ಲಿಸಿದರು. ಸಮ್ಮೇಳನದ ಯಶಸ್ಸಿಗೆ ಕ.ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗಗಳು ಕ.ವಿ.ವಿ. ಮತ್ತು ಶ್ರೀ ಮುರುಘಾಮಠದ ಜೊತೆಗೆ ಹೆಚ್ಚಿನ ಸಹಕಾರ ನೀಡಿದ್ದುವು. ಈ ಸಂದರ್ಭದಲ್ಲಿ ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದವರ ನೆರವೂ ಇದ್ದುದನ್ನು ಸ್ಮರಿಸಲಾಯಿತು.

ಸರ್ವಸದಸ್ಯರ ಸಭೆಯ ವರದಿ

ದಿನಾಂಕ ೮-೭-೧೯೯೭ ಶನಿವಾರ ಸಂಜೆ ೬-೩೦ಕ್ಕೆ ಹಿಂದೆಯೇ ತಿಳಿಸಿದ್ದಂತೆ ಧಾರವಾಡದಲ್ಲಿ ಅಕಾದೆಮಿಯ ದಶವಾರ್ಷಿಕ ಸಮ್ಮೇಳನ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಸಭಾಂಗಣದಲ್ಲೇ ಅಕಾದೆಮಿಯ ಅಧ್ಯಕ್ಷರಾದ ಪ್ರೊ: ಜಿ.ಎಸ್ ದೀಕ್ಷಿತ ಅವರ ಅಧ್ಯಕ್ಷತೆಯಲ್ಲಿ ಅಕಾದೆಮಿಯ ಹತ್ತನೆಯ ಸರ್ವ ಸದಸ್ಯರ ಸಭೆಯು ನಡೆಯಿತು. ಅದರ ನಡವಳಿಕೆಗಳು ಕೆಳಕಂಡಂತಿವೆ.

೧) ಸರ್ವಸದಸ್ಯರ ಸಭೆಯ ಆರಂಭಕ್ಕೆ ಪ್ರಧಾನ ಕಾರ್ಯದರ್ಶಿ ಡಾ॥ಎಚ್.ಎಸ್. ಗೋಪಾಲರಾವ್ ಅವರು ಸದಸ್ಯರ ಅನುಮತಿ ಕೋರಿದರು. ಧ್ವನಿಯ ಮೂಲಕ ಸರ್ವಸದಸ್ಯರೂ ಸಭೆಯ ಆರಂಭಕ್ಕೆ ಅನುಮತಿ ನೀಡಿದರು.

೨) ಮೈಸೂರಿನ ಶ್ರೀಮತಿ ಪ್ರಭಾಮಣಿ ಅವರ ಪ್ರಾರ್ಥನೆಯ ನಂತರ ಡಾ॥ ಎಚ್.ಎಸ್. ಗೋಪಾಲರಾವ್ ಅವರು ಅಧ್ಯಕ್ಷರಾದಿಯಾಗಿ ಸರ್ವರನ್ನೂ ಸಭೆಗೆ ಸ್ವಾಗತಿಸಿದರು.

೩) ಸಭೆಯ ಆರಂಭಕ್ಕೆ ಮೊದಲೇ ಸದಸ್ಯರಿಗೆ, ೧೯೯೫ನೆಯ ಸಾಲಿನ ಆಯವ್ಯಯ ಪತ್ರ ಮತ್ತು ೧೯೯೬ನೆಯ ಸಾಲಿನ ವಾರ್ಷಿಕ ವರದಿಯ ಮಂಡನೆಗೆ ಪ್ರಧಾನ ಕಾರ್ಯದರ್ಶಿ ಡಾ॥ ಎಚ್. ಎಸ್. ಗೋಪಾಲರಾವ್ ಸಿದ್ಧರಾದಾಗ ಬೆಂಗಳೂರಿನ ಶ್ರೀ ತ.ರಂ. ಕೃಷ್ಣೇಗೌಡರು ವರದಿ ವಾಚನದ ಅವಶ್ಯಕತೆ ಇಲ್ಲವೆಂದೂ, ವರದಿಯ ಪ್ರತಿಯೇ ಎಲ್ಲರಿಗೂ ತಲುಪಿರುವುದರಿಂದ ಅದನ್ನು ಸ್ವೀಕರಿಸಬಹುದೆಂಬ ಸೂಚನೆ ನೀಡಿದರು. ಸೂಚನೆಯನ್ನು ಬೆಳಗಾವಿಯ ಶ್ರೀ ವಿ.ಸಿ. ಮಾಲಗತ್ತಿ ಅವರು ಅನುಮೋದಿಸಿದರು. ಅಂತೆಯೇ ಸರ್ವಸದಸ್ಯರ ಅನುಮೋದನೆಯೂ ದೊರೆಯಿತು.

೪) ಅಕಾದೆಮಿಯ ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲರು ೧೯೯೫ನೆಯ ಸಾಲಿನ ಲೆಕ್ಕ ಪತ್ರಗಳನ್ನು ಮಂಡಿಸಿದರು. ಬೆಂಗಳೂರಿನ ಕ್ಯಾಪ್ಟನ್ ಶ್ರೀ ಬಿ.ಕೆ. ರಾವ್ ಅವರು ಪತ್ರದಲ್ಲಿದ್ದ ಅನುವಾದದ ಖರ್ಚಿನ ಬಗೆಗೆ ಪ್ರಸ್ತಾಪಿಸಿದರು. ಆ ವಿಷಯಕ್ಕೆ ಉತ್ತರಿಸುತ್ತಾ ಶ್ರೀ ಎಂ.ಬಿ. ಪಾಟೀಲರು, ೧೯೯೪ನೆಯ ಸಾಲಿನಲ್ಲಿ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು, ತನ್ನ ರಾಜ್ಯ ದಶವಾರ್ಷಿಕ ಪುರವಣಿಯ ಅನುವಾದ ಕಾರ್ಯವನ್ನು (ಇಂಗ್ಲಿಷ್‌ನಿಂದ ಕನ್ನಡಕ್ಕೆ) ಅಕಾದೆಮಿಗೆ ಒಪ್ಪಿಸಿತ್ತು. ಆ ಸಂಬಂಧ ಬಂದ ಹಣದಲ್ಲಿ ಅನುವಾದಕರಿಗೆ ಮತ್ತು ಅ ಜವಾಬ್ದಾರಿಯ ನೇತೃತ್ವ ವಹಿಸಿದವರಿಗೆ ಸಂಭಾವನೆ ನೀಡಲಾಗಿದೆ. ಅನುವಾದದ ನೇತೃತ್ವವಹಿಸಿದ್ದ ಪ್ರೊ: ಜಿ.ಎಸ್. ದೀಕ್ಷಿತ್ ಅವರು ತಮಗೆ ದೊರೆತ ಸಂಭಾವನೆಯಲ್ಲಿ ಸ್ವಲ್ಪ ಹಣವನ್ನು ಅಕಾದೆಮಿಗೆ ಕಾಣಿಕೆಯಾಗಿ ನೀಡಿದ್ದಾರೆ ಎಂದು ಸ್ಪಷ್ಟೀಕರಣ ನೀಡಿದರು.

೫) ಕೋಶಾಧಿಕಾರಿಗಳು ಅಜೀವ ಸದಸ್ಯತ್ವದ ಶುಲ್ಕ ಬಾಕಿ ಇರುವ ಬಗ್ಗೆ ಸದಸ್ಯರ ಗಮನ ಸೆಳೆದರು. ಸುಮಾರು ರೂ.೨೫,೦೦೦-೦೦ ಬಾಕಿ ಇದ್ದು, ಇದನ್ನು ಸದಸ್ಯರು ಶೀಘ್ರವೇ ಪಾವತಿ ಮಾಡಿ ಸಹಕರಿಸಬೇಕೆಂದೂ ಅವರು ಮನವಿ ಮಾಡಿದರು. ಆ ಹಂತದಲ್ಲೇ ಹಲವು ವರ್ಷಗಳಿಂದ ಸದಸ್ಯತ್ವ ಶುಲ್ಕ ಏರಿಕೆ ಆಗದಿರುವುದನ್ನು ಕೋಶಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಅಜೀವ ಸದಸ್ಯತ್ವದ ಶುಲ್ಕವನ್ನು ಈಗಿರುವ ರೂ. ೩೦೦-೦೦ ರಿಂದ ರೂ ೫೦೦-೦೦ಕ್ಕೂ, ಸಾಮಾನ್ಯ ಸದಸ್ಯತ್ವವನ್ನು ವಾರ್ಷಿಕ ರೂ. ೪೦-೦೦ ರಿಂದ ೫೦-೦೦ಕ್ಕೂ ಹೆಚ್ಚಿಸಬಹುದೆಂದು ಶ್ರೀ ಕೆ. ಅಭಿಶಂಕರ್ ಸೂಚಿಸಿದರು. ಅಲ್ಪಕಾಲದ ಚರ್ಚೆಯ ನಂತರ ಅಜೀವ ಸದಸ್ಯತ್ವದ ಶುಲ್ಕವನ್ನು, ಒಂದೇ ವರ್ಷದೊಳಗೆ ಎರಡು ಕಂತುಗಳಲ್ಲಿ ಮುಗಿಯಬೇಕಾದ ರೂ. ೪೦೦-೦೦ಕ್ಕೆ, ಸಾಮಾನ್ಯ ಸದಸ್ಯತ್ವದ ವಾರ್ಷಿಕ ಶುಲ್ಕವನ್ನು ರೂ ೫೦-೦೦ಕ್ಕೆ ಮತ್ತು ಸಂಘ-ಸಂಸ್ಥೆಗಳ ಸದಸ್ಯತ್ವ ಶುಲ್ಕವನ್ನು ರೂ. ೫೦೦-೦೦ಕ್ಕೆ ಹೆಚ್ಚಿಸಬಹುದೆಂದು ಶ್ರೀ ತ.ರಂ. ಕೃಷ್ಣೇಗೌಡರು ಸೂಚಿಸಿದರು. ಶ್ರೀ ವಿ.ಸಿ.ಮಾಲಗತ್ತಿ ಅವರು ಸೂಚನೆಯನ್ನು ಅನುಮೋದಿಸಿದರು. ಹಾಜರಿದ್ದ ಸದಸ್ಯರೆಲ್ಲರ ಅನುಮತಿಯೂ ದೊರೆಯಿತು.

೬) ಅಕಾದೆಮಿಯು ಕಳೆದ ಎಂಟು ವರ್ಷಗಳಿಂದ ೨ನೇ ಪಿ.ಯು.ಸಿ. ಇತಿಹಾಸ ವಿದ್ಯಾರ್ಥಿಗಳಿಗೆ ನಡೆಸುತ್ತಾ ಬಂದಿರುವ ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ೧೯೯೭ನೆಯ ಸಾಲಿನಿಂದ ನಿಲ್ಲಿಸಲು ಅಕಾದೆಮಿಯ ಕಾರ್ಯಕಾರೀ ಸಮಿತಿ ಆಲೋಚಿಸಿದೆ. ಅದಕ್ಕೆ ಸರ್ವ ಸದಸ್ಯರ ಸಭೆ ಒಪ್ಪಿಗೆ ನೀಡಬೇಕೆಂದು ಡಾ॥ಸೂರ್ಯನಾಥ ಕಾಮತ್ ಕೋರಿದರು. ಪರೀಕ್ಷೆಗಳನ್ನು ನಡೆಸುವುದು ಎಲ್ಲಾ ರೀತಿಯಲ್ಲೂ ಕಷ್ಟಕರವಾಗಿದ್ದು, ಮೊದಲಿನ ಸೇವಾ ಮನೋಭಾವದ ಪ್ರವೃತ್ತಿ ಈಗ ಕಡಿಮೆಯಾಗಿದೆ. ಜೊತೆಗೆ ಪರೀಕ್ಷೆಯಲ್ಲಿ ಏನಾದರೂ ಏರು-ಪೇರಾದರೆ ಅದರಿಂದ ಅಕಾದೆಮಿಯ ಮರ್ಯಾದೆಗೆ ಭಂಗ ಬರುತ್ತದೆ. ಪರೀಕ್ಷೆ ನಡೆಸಲು ಸ್ಥಳಾವಕಾಶಕ್ಕೆ, ಮೇಲ್ವಿಚಾರಣೆಗೆ, ಮೌಲ್ಯಮಾಪನಕ್ಕೆ, ಅರ್ಜಿ ಪಟ್ಟಿಯ ಯಾದಿ, ಪ್ರಶಸ್ತಿಪತ್ರ ಇತ್ಯಾದಿ ಕಾರ್ಯಗಳು-ಹೀಗೆ ಎಲ್ಲಾ ಕೆಲಸಗಳಿಗೂ ಹೆಚ್ಚು ಹಣ ಬೇಕಾಗಿದ್ದು, ಕೊನೆಗೆ ಉಳಿಯುವ ಹಣ ಅತ್ಯಲ್ಪ ಪ್ರಮಾಣದ್ದು. ಆದ್ದರಿಂದ ಕೇವಲ ಶ್ರಮದ ಜೊತೆಗೆ, ಮರ್ಯಾದೆಗೆ ಧಕ್ಕೆ ತರಬಹುದಾದಂತಹ ಪರೀಕ್ಷೆಗಳನ್ನು ನಿಲ್ಲಿಸಬೇಕೆಂಬುದು ಡಾ॥ ಕಾಮತರ ಮನವಿ ಯಾಗಿತ್ತು. ಶ್ರೀ ಕೆ. ಅಭಿಶಂಕರ್ ಮತ್ತು ಶ್ರೀ ಅಚ್ಯುತ ದೇವರಾಯರು ಡಾ॥ ಕಾಮತರ ಅಭಿಪ್ರಾಯವನ್ನು ಸಮರ್ಥಿಸಿದರು. ಆದರೆ ಡಾ॥ ರಾ.ಮ. ಷಡಕ್ಷರಯ್ಯ, ಶ್ರೀ ತಿರುಮಲೆ ಶ್ರೀರಂಗಚಾರ್, ಡಾ॥ ಶ್ರೀನಿವಾಸ ಹಾವನೂರ್ ಮತ್ತು ಶ್ರೀ ತ.ರಂ. ಕೃಷ್ಣೆಗೌಡರು ಪರೀಕ್ಷೆಗಳನ್ನು ನಿಲ್ಲಿಸುವುದಕ್ಕೆ ವಿರೋಧ ಸೂಚಿಸಿದರು. ಸುದೀರ್ಘ ಚರ್ಚೆ ನಡೆಯಿತು. ಈ ಪರೀಕ್ಷೆಗಳಿಂದಾಗಿ ವಿದ್ಯಾರ್ಥಿಗಳಲ್ಲಿ ಇತಿಹಾಸದ ಬಗ್ಗೆ ಪ್ರೀತಿ ಹೆಚ್ಚಿದೆ. ಪ್ರತಿ ವರ್ಷ ಪರೀಕ್ಷೆಗೆ ಕೂರುವ ವಿದ್ಯಾರ್ಥಿಗಳ ಸಂಖ್ಯೆಯ ಹೆಚ್ಚಳವೇ ಅದಕ್ಕೆ ಸೂಚನೆ; ಆದ್ದರಿಂದ ಎಷ್ಟೇ ಕಷ್ಟವಾದರೂ, ಅಕಾದೆಮಿಯ ಮರ್ಯಾದೆ ಹೋಗದಂತೆ ಎಚ್ಚರ ವಹಿಸಿ, ಪರೀಕ್ಷೆಗಳನ್ನು ಮುಂದುವರಿಸಬೇಕೆಂದು ಡಾ॥ ಹಾವನೂರ್ ಸೂಚಿಸಿದರು. ಮುಂದುವರಿದ ಚರ್ಚೆಯಲ್ಲಿ ಶ್ರೀ ತಿರುಮಲೆ ಶ್ರೀರಂಗಾಚಾರ್ಯ, ಶ್ರೀ ನೀರಲಗಿ, ಶ್ರೀ. ತ.ರಂ. ಕೃಷ್ಣೇಗೌಡ, ಶ್ರೀ ವಿ.ಸಿ. ಮಾಲಗತ್ತಿ ಮತ್ತು ಡಾ॥ ಹಾವನೂರ್ ಪಾಲುಗೊಂಡರು- ಎಲ್ಲರ ಅಭಿಪ್ರಾಯವೂ ಪರೀಕ್ಷೆಯನ್ನು ನಿಲ್ಲಿಸಕೂಡದೆಂದೇ ಆಗಿತ್ತು. ಈ ಹಂತದಲ್ಲಿ ಸಭಾಧ್ಯಕ್ಷತೆ ವಹಿಸಿದ್ದ ಪ್ರೊ॥ ಜಿ.ಎಸ್.ದೀಕ್ಷಿತ್ ಅವರು, ಈ ವಿಷಯದ ಬಗೆಗೆ ನಿರ್ಧರಿಸಲು, ಮುಂಬರುವ ಕಾರ್ಯಕಾರೀ ಸಮಿತಿಯು ಒಂದು ಉಪ ಸಮಿತಿಯನ್ನು ನೇಮಿಸಿ, ಆ ಸಮಿತಿಯ ಅಭಿಪ್ರಾಯದಂತೆ ಮುಂದುವರಿಯಬೇಕೆಂದು ಸಲಹೆ ಮಾಡಿದರು. ಸರ್ವ ಸದಸ್ಯರೂ ಆ ಸಲಹೆಗೆ ಒಪ್ಪಿಗೆ ಸೂಚಿಸಿದರು.

೭) ಕೋಶಾಧಿಕಾರಿ ಶ್ರೀ ಎಂ.ಬಿ. ಪಾಟೀಲರು ಮಂಡಿಸಿದ ೧೯೯೭ನೆಯ ಸಾಲಿನ ಆಯ-ವ್ಯಯ ಪತ್ರವನ್ನು ಒಪ್ಪಬಹುದೆಂದು ಶ್ರೀ ಕೆ.ಜಿ. ರಾವ್ ಸೂಚಿಸಿದರು. ಶ್ರೀ ವಿ.ಸಿ. ಮಾಲಗತ್ತಿ ಅನುಮೋದಿಸಿದರು. ಶ್ರೀ. ಎಂ.ಬಿ. ಪಾಟೀಲರು ನಂತರ ಮಂಡಿಸಿದ ೧೯೯೭ನೆಯ ಸಾಲಿನ ಮುಂಗಡ ಬಡ್ಜೆಟ್ ಅನ್ನು ಒಪ್ಪಬಹುದೆಂದು ಶ್ರೀ ಮೋಹನ ಹೆಗಡೆ ಸೂಚಿಸಿದರು. ಡಾ॥ ಎ.ಕೆ. ಶಾಸ್ತ್ರಿ ಅದನ್ನು ಅನುಮೋದಿಸಿದರು.

ಠರಾವುಗಳ ಮಂಡನೆ

ಅ) ಕೇಂದ್ರ ಪುರಾತತ್ತ್ವ ಇಲಾಖೆಯ ಧಾರವಾಡ ವಲಯವನ್ನು ಶೀಘ್ರ ಕಾರ್ಯರೂಪಕ್ಕೆ ತರಬೇಕೆಂದು ಈ ಸರ್ವಸದಸ್ಯರ ಸಭೆ ಒತ್ತಾಯಿಸುತ್ತದೆ. ಈ ವಲಯದಲ್ಲಿ ಕರ್ನಾಟಕದ ಬೆಳಗಾವಿ ವಿಭಾಗ ಹಾಗೂ ಗುಲ್ಬರ್ಗಾ ವಿಭಾಗಗಳನ್ನು ಸೇರ್ಪಡೆ ಮಾಡುವುದು ಉಚಿತವೆಂದು ಈ ಸಭೆ ಸೂಚಿಸಬಯಸುತ್ತದೆ.

ಸೂಚನೆ : ಶ್ರೀ ಕೆ. ಅಭಿಶಂಕರ್, ಬೆಂಗಳೂರು ಅನುಮೋದನೆ: ಶ್ರೀ ಸಿದ್ದಯ್ಯ ಹಿರೇಮಠ್, ಶಿವಮೊಗ್ಗ (ಸರ್ವಾನುಮತ)

ಆ) ಕರ್ನಾಟಕ ರಾಜ್ಯ ಪತ್ರಾಗಾರಕ್ಕೆ ವಿಧಾನಸೌಧದಲ್ಲಿರುವ ಕಟ್ಟಡದ ಅವಕಾಶವು ತೀರ ಮಿತವಾಗಿದೆ ಹಾಗೂ ಅಲ್ಲಿಗೆ ವಿದ್ವಾಂಸರಿಗೆ ಹೋಗಿ ಬರಲು ಹಾಗೂ ಕುಳಿತು ಅಧ್ಯಯನ ಮಾಡಲು ಸ್ಥಳಾವಕಾಶ ಸಾಲದಾಗಿದೆ. ಆದುದರಿಂದ ರಾಜ್ಯ ಪತ್ರಾಗಾರಕ್ಕೆ ಆಧುನಿಕ ಹಾಗೂ ವೈಜ್ಞಾನಿಕ ವಿಧಾನಗಳಿಂದ ಸುಸಜ್ಜಿತವಾದ ಪ್ರತ್ಯೇಕ ಕಟ್ಟಡವನ್ನು ರಾಜ್ಯ ಸರ್ಕಾರವು ಕಟ್ಟಿಸಬೇಕೆಂದು ಸರ್ವಸದಸ್ಯರ ಈ ಸಭೆ ಒತ್ತಾಯಿಸುತ್ತದೆ.

ಸೂಚನೆ: ಶ್ರೀ ವಿ.ಸಿ. ಮಾಲಗತ್ತಿ, ಬೆಳಗಾವಿ ಅನುಮೋದನೆ: ಶ್ರೀ ಕೃ.ಸು. ಸುಬ್ರಹ್ಮಣ್ಯ, ಬೆಂಗಳೂರು

ಇ) ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳ ಪುನರ್ವಿಮರ್ಶೆಯ ಕಾರ್ಯ ಮೈಸೂರು ವಿಶ್ವವಿದ್ಯಾಲಯದಲ್ಲಿ ತೀವ್ರಗತಿಯಿಂದ ನಡೆಯುವಂತೆ ಸರ್ಕಾರವು ಕ್ರಮ ಕೈಗೊಳ್ಳುವಂತೆ ಈ ಸಭೆಯು ಒತ್ತಾಯಿಸುತ್ತದೆ. ಅಲ್ಲದೆ ಬೆಳಗಾವಿ ವಿಭಾಗದ ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟಗಳನ್ನು ಪ್ರಕಟಿಸುವ ಕಾರ್ಯವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೂ, ಗುಲ್ಬರ್ಗಾ ಇಲ್ಲವೆ ಕನ್ನಡ ವಿಶ್ವವಿದ್ಯಾಲಯಕ್ಕೂ ಒಪ್ಪಿಸಿ, ಬರುವ ಐದು ವರ್ಷಗಳಲ್ಲಿ ಇಪ್ಪತ್ತು ಜಿಲ್ಲೆಗಳ ಸಂಪುಟಗಳು ವಿದ್ವಾಂಸರಿಗೆ ದೊರೆಯುವಂತೆ ತುರ್ತುಕ್ರಮ ಕೈಗೊಳ್ಳಬೇಕೆಂದು ಸರ್ವಸದಸ್ಯರ ಈ ಸಭೆ ಸರ್ಕಾರಕ್ಕೆ ಒತ್ತಾಯಿಸುತ್ತದೆ.

ಸೂಚನೆ : ಡಾ || ಚೆನ್ನಕ್ಕ ಪಾವಟೆ, ಧಾರವಾಡ ಅನುಮೋದನೆ: ಸರ್ವಾನುಮತ

ಈ) ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದ ವಿದ್ವಾಂಸರನ್ನು ಗೌರವಿಸಲು **ಕದಂಬ-ಗಂಗ ವಾರ್ಷಿಕ ಪ್ರಶಸ್ತಿ**ಯನ್ನು ಸರ್ಕಾರವು ನೀಡಬೇಕೆಂದು ಈ ಸರ್ವಸದಸ್ಯರ ಸಭೆ ಒತ್ತಾಯಿಸುತ್ತದೆ. ಈಗ ಇತಿಹಾಸ ಸಂಶೋಧನೆಗೆ ಸಾಕಷ್ಟು ಪ್ರೋತ್ಸಾಹ ಸಿಗದಿರುವುದರಿಂದ ಈ ಅಧ್ಯಯನದ ಮಹತ್ವದ ಬಗ್ಗೆ ಜನರ ಕಣ್ತೆರೆಸಲು ಅಂಥ ಪ್ರಶಸ್ತಿ ಅವಶ್ಯಕ

ಸೂಚನೆ: ಶ್ರೀ ಕೆ. ಅಭಿಶಂಕರ್, ಬೆಂಗಳೂರು ಅನುಮೋದನೆ: ಸರ್ವಾನುಮತ

ಉ) ಕರ್ನಾಟಕದಲ್ಲಿರುವ ಪ್ರಾಚೀನ ದೇವಾಲಯ ಮತ್ತು ಇತರ ಪ್ರಾಚ್ಯವಸ್ತುಗಳ ವೈಜ್ಞಾನಿಕ ವಿಧಾನದ ರಕ್ಷಣೆಗಾಗಿ ಸರಕಾರವು ಸಾರ್ವಜನಿಕರ ನೆರವಿನಿಂದ ಒಂದು ನಿಧಿಯನ್ನು ಸ್ಥಾಪಿಸಬೇಕು. ಈಗಾಗಲೇ ಇಂಥ ಕಾರ್ಯ ಮಾಡುತ್ತಿರುವ ಧರ್ಮ ಸ್ಥಳದಂಥ ಶ್ರೀಮಂತ ದೇವಾಲಯವೇ ಅಲ್ಲದೇ, ಮಠಗಳ ನೆರವನ್ನು ಈ ನಿಧಿಯ ಸಂಗ್ರಹಣೆಗಾಗಿ ಪಡೆಯಬೇಕು ಎಂದು ಈ ಸಭೆ ಒತ್ತಾಯಿಸುತ್ತದೆ. ಪ್ರಾಚೀನ ಪರಂಪರೆಯು ನಶಿಸದಂತೆ ಇಂಥ ಕ್ರಮ ಕೈಗೊಳ್ಳುವುದು-ಅತ್ಯವಶ್ಯವೆಂದು ಸಭೆ ಕಳಕಳಿಯಿಂದ ಬಿನ್ನವಿಸುತ್ತದೆ.

ಸೂಚನೆ: ಶ್ರೀ ಕೆ. ಅಭಿಶಂಕರ, ಬೆಂಗಳೂರು ಅನುಮೋದನೆ: ಸರ್ವಾನುಮತ

ಐತಿಹಾಸಿಕ ಕಥೆ, ಕಾದಂಬರಿಗಳಲ್ಲಿ ತಪ್ಪು ತಿಳುವಳಿಕೆ ಬರದಂತೆ ಎಚ್ಚರಿಸಲು ಲೇಖಕರಿಗಾಗಿ ವಿಚಾರ ಸಂಕಿರಣವೊಂದನ್ನು ನಡೆಸಬೇಕೆಂಬ ಸೂಚನೆಯು ಶ್ರೀ ಕೆ. ಅಭಿಶಂಕರ್ ಅವರಿಂದ ಬಂದಾಗ ಪ್ರೊ || ಕ.ವೆಂ. ರಾಜಗೋಪಾಲ್ ಅವರು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವುದೇ ಠರಾವನ್ನು ಒಪ್ಪಲು ಸಾಧ್ಯವಿಲ್ಲವೆಂದು ಪ್ರತಿಭಟಿಸಿದರು. ಅವರ ಅಭಿಪ್ರಾಯವನ್ನು ಸರ್ವ ಸದಸ್ಯರೂ ಒಪ್ಪಿದರು.

ಇನ್ನೂ ಹಲವು ಠರಾವುಗಳ ಮಂಡನೆಗೆ ಸದಸ್ಯರು ಪ್ರಯತ್ನಿಸಿದಾಗ ಬಹು ಮುಖ್ಯವಾದ ಕೆಲವೇ ಠರಾವುಗಳ ಸ್ವೀಕಾರದಿಂದ ಕ್ರಿಯಾಶೀಲತೆ ಉಳಿಯುತ್ತದೆಂದೂ, ಸಂಪ್ರದಾಯವೆಂಬಂತೆ ಹೆಚ್ಚು ಠರಾವುಗಳ ಸ್ವೀಕಾರ ಸೂಕ್ತವಲ್ಲವೆಂದೂ ಡಾ ||ಸೂರ್ಯನಾಥಕಾಮತ್ ಸೂಚಿಸಿದರು. ಅದನ್ನು ಸಭೆ ಒಪ್ಪಿತು.

ಆಡಿಟರ್ ನೇಮಕ:

ಈವರೆಗೆ ಅಕಾದೆಮಿಯ ಲೆಕ್ಕಪತ್ರಗಳನ್ನು ಆಡಿಟ್ ಮಾಡುತ್ತಿರುವ ಕೆ.ವಿ. ಆಚಾರ್ಯ ಮತ್ತು ಕಂಪೆನಿಯವರೇ ಮುಂದಿನ ಅಂದರೆ ೧೯೯೬-೯೭ನೆಯ ಸಾಲಿಗೂ ಆಡಿಟರ್ ಆಗಿ ಮುಂದುವರಿಯಬಹುದೆಂದೂ, ಅವರಿಗೆ ಈಗ ನೀಡುತ್ತಿರುವ ರೂ. ೧,೦೦೦-೦೦ ಸಂಭಾವನೆಯ ಬದಲು ಮುಂದಿನ ವರ್ಷ ರೂ. ೧೫೦೦-೦೦ ಸಂಭಾವನೆ ನೀಡಬಹುದೆಂದೂ ಕೋಶಾಧಿಕಾರಿ ಶ್ರೀ ಎಂ.ಬಿ.ಪಾಟೀಲ್

ಸೂಚಿಸಿದರು. ಅದನ್ನು ಸರ್ವಸದಸ್ಯರೂ ಒಪ್ಪಿದರು. ಈವರೆಗೆ ಸಕಾಲಕ್ಕೆ ಲೆಕ್ಕಪತ್ರ ಪರಿಶೀಲಿಸಿ ಕೊಟ್ಟಿರುವ ಕೆ.ವಿ.ಆಚಾರ್ಯ ಮತ್ತು ಕಂಪೆನಿಯವರಿಗೆ ಸಭೆ ಕೃತಜ್ಞತೆ ಸೂಚಿಸಿತು.

ಹೊಸ ಕಾರ್ಯಕಾರಿ ಸಮಿತಿಯ ನೇಮಕ:

೧೯೯೬-೯೭ ಮತ್ತು ೧೯೯೭-೯೮ನೆಯ ಸಾಲಿಗೆ ಅಂದರೆ ಮುಂದಿನ ಎರಡು ವರ್ಷಗಳಿಗೆ ಕಾರ್ಯಕಾರೀ ಸಮಿತಿಯಲ್ಲಿರಬಹುದಾದ ಸದಸ್ಯರ ಪಟ್ಟಿಯೊಂದನ್ನು ಡಾ॥ ಶ್ರೀನಿವಾಸ ಹಾವನೂರ್ ಅವರು ಸಿದ್ಧಪಡಿಸಿದ್ದು, ಅದನ್ನು ಅಧ್ಯಕ್ಷರ ಅನುಮತಿ ಪಡೆದು ಸಭೆಯಲ್ಲಿ ವಾಚಿಸಿದರು. ಅವರು ವಾಚಿಸಿದ ಪಟ್ಟಿಯಲ್ಲಿದ್ದ ಹೆಸರುಗಳು ಕೆಳಕಂಡಂತಿವೆ:

ಸರ್ವಶ್ರೀ

೧. ಡಾ॥ ಸೂರ್ಯನಾಥ ಕಾಮತ್,ಬೆಂಗಳೂರು
೨. ಡಾ॥ ಡಿ.ವಿ. ದೇವರಾಜ್, ಮೈಸೂರು
೩. ಎಂ.ಜಿ. ನಾಗರಾಜ್, ಬೆಂಗಳೂರು
೪. ಡಾ॥ ಎಚ್.ಎಸ್. ಗೋಪಾಲರಾವ್, ಬೆಂಗಳೂರು
೫. ಡಾ॥ ಎಚ್.ಆರ್. ರಘುನಾಥ್ ಭಟ್ ಧಾರವಾಡ
೬. ಡಾ॥ ಕೆ. ವಸಂತಲಕ್ಷ್ಮಿ, ಬೆಂಗಳೂರು
೭. ಎಂ.ಜಿ. ಪಾಟೀಲ್, ಬೆಂಗಳೂರು
೮. ಡಾ॥ ಜೆಂ.ಶಾ. ಶ್ಯಾಮಲಾ ರತ್ನಕುಮಾರಿ, ಬೆಂಗಳೂರು
೯. ಡಾ॥ ಅ. ಸುಂದರ, ಬಿಜಾಪುರ
೧೦. ಡಾ॥ ಎಸ್.ರಾಜಶೇಖರ್, ಧಾರವಾಡ
೧೧. ಡಾ॥ ಚೆನ್ನಕ್ಕ ಪಾವಟೆ, ಧಾರವಾಡ
೧೨. ಡಾ॥ ಎ.ಕೆ. ಶಾಸ್ತ್ರಿ, ಶಿರಸಿ
೧೩. ಗುರುಮೂರ್ತಿ ಪೆಂಡಕೂರು, ಹಗರಿಬೊಮ್ಮನಹಳ್ಳಿ
೧೪. ಪ್ರೊ॥ ಲಕ್ಷ್ಮಣ್ ತೆಲಗಾವಿ, ಹಂಪಿ
೧೫. ಡಾ॥ ದೇವರಕೊಂಡಾರೆಡ್ಡಿ, ಹಂಪಿ
೧೬. ವಿ.ಸಿ. ಮಾಲಗತ್ತಿ, ಬೆಳಗಾವಿ
೧೭. ಪ್ರೊ॥ ಭೀಮಪ್ಪ ಸುರಪುರ, ಶಹಾಪುರ
೧೮. ಕೇಶವ ಉಮರ್ಜಿ, ಜಮಖಂಡಿ
೧೯. ಸಿದ್ದಯ್ಯ ಹಿರೇಮಠ, ಶಿವಮೊಗ್ಗ
೨೦. ಡಾ॥ ಕೆ.ಜಿ. ವಸಂತ ಮಾಧವ, ಹಳೆಯಂಗಡಿ

ಡಾ॥ ಶ್ರೀನಿವಾಸ ಹಾವನೂರ್ ಅವರು ಸೂಚಿಸಿದ ಹೆಸರುಗಳನ್ನು ಸರ್ವಸದಸ್ಯರೂ, ಅನುಮೋದಿಸಿದರು. ಅಲ್ಲದೆ ಈವರೆಗೆ ಅಕಾದೆಮಿಯ ಅಧ್ಯಕ್ಷರಾಗಿದ್ದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರು ಮುಂದೆ ಅಕಾಡೆಮಿಯ ಅಜೀವ ಗೌರವ ಅಧ್ಯಕ್ಷರಾಗಿರಬೇಕೆಂಬ ಡಾ॥ ಶ್ರೀನಿವಾಸ್ಥ ಹಾವನೂರರ ಸೂಚನೆಯನ್ನು ಸಭೆ ಅನುಮೋದಿಸಿತು.

ಅಕಾದೆಮಿಯ ಸಂಘಟನೆಗಾಗಿ ಬೇರೆಬೇರೆ ಭಾಗಗಳಲ್ಲಿ ಕಾರ್ಯನಿರ್ವಹಿಸಲು (ಅಕಾಡೆಮಿಯ ಘಟಕಗಳಿಗೆ ಸಂಬಂಧ ಪಡೆದ) ಕೆಳಕಂಡವರ ಹೆಸರುಗಳನ್ನು ಡಾ॥ ಶ್ರೀನಿವಾಸ ಹಾವನೂರ್ ಸೂಚಿಸಿದರು.

ಮೈಸೂರು	–	ಡಾ॥ ಎಂ.ಎಸ್. ಕೃಷ್ಣಮೂರ್ತಿ
ವಿಜಾಪೂರ	–	ಡಾ॥ ಅ.ಸುಂದರ
ಧಾರವಾಡ	–	ಡಾ॥ ರು.ಮ. ಷಡಕ್ಷರಯ್ಯ
ಬೆಂಗಳೂರು	–	ಶ್ರೀ ತ.ರಂ. ಕೃಷ್ಣೇಗೌಡ
ಬಳ್ಳಾರಿ	–	ಶ್ರೀ ಕುಂ.ಬಾ. ಸದಾಶಿವಪ್ಪ
ರಾಯಚೂರು	–	ಶ್ರೀ ಎಂ. ನಾಗಪ್ಪ
ತುಮಕೂರು	–	ಡಾ: ಬಿ.ನಂಜುಂಡಸ್ವಾಮಿ

–ಸಭೆಯು ಈ ಹೆಸರುಗಳನ್ನು ಅನುಮೋದಿಸಿತು.

ಮುಂದಿನ (ಹನ್ನೊಂದನೆಯ) ವಾರ್ಷಿಕ ಸಮ್ಮೇಳನ:

೧೯೯೭ರಲ್ಲಿ ನಡೆಯಬೇಕಾದ ಅಕಾದೆಮಿಯ ಹನ್ನೊಂದನೆಯ ವಾರ್ಷಿಕ ಸಮ್ಮೇಳನವನ್ನು ಸೋಂದೆಯ ಶ್ರೀ ಸ್ವರ್ಣವಲ್ಲೀ ಮಠದ ಆಶ್ರಯದಲ್ಲಿ ಶಿರಸಿಯಲ್ಲಿ ನಡೆಸಬೇಕೆಂದು, ಶ್ರೀ ಮಠದ ಪರವಾಗಿ ಡಾ॥ ಎ.ಕೆ. ಶಾಸ್ತ್ರಿ ಅವರು ಆಮಂತ್ರಿಸಿದರು. ಆಮಂತ್ರಣವನ್ನು ಸಭೆಯು ಅತ್ಯಂತ ಗೌರವ ಮತ್ತು ಕೃತಜ್ಞತೆಗಳಿಂದ ಸ್ವೀಕರಿಸಿ, ಆಶ್ರಯ ನೀಡಲಿರುವವರಿಗೆ ಧನ್ಯವಾದ ಸೂಚಿಸಿತು.

ಸಭಾಧ್ಯಕ್ಷರ ಭಾಷಣದ ನಂತರ, ಕಾರ್ಯದರ್ಶಿಗಳಲ್ಲೊಬ್ಬರಾದ ಡಾ॥ಎಚ್.ಆರ್. ರಘುನಾಥ್ ಭಟ್ ಅವರು ಸಭಾಧ್ಯಕ್ಷರಿಗೆ, ಸಮ್ಮೇಳನದ ಆಶ್ರಯದಾತರಿಗೆ ಮತ್ತು ಸರ್ವಸದಸ್ಯರಿಗೆ ಧನ್ಯವಾದಗಳನ್ನರ್ಪಿಸಿದರು.

ಇತಿಹಾಸ ಪ್ರಶಸ್ತಿ ಪರೀಕ್ಷೆಗಳು

ಕಳೆದ ವರ್ಷಗಳಂತೆ ಈ ವರ್ಷವೂ ಎರಡನೆಯ ಪಿ.ಯು.ಸಿ ಇತಿಹಾಸ ವಿದ್ಯಾರ್ಥಿಗಳಿಗೆ ೧೦-೩-೧೯೯೬ ರಂದು, ಐದು

ಕೇಂದ್ರಗಳಲ್ಲಿ ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ನಡೆಸಲಾಯಿತು. ಒಟ್ಟು ೫೩೮೦ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಪರೀಕ್ಷೆಗಳನ್ನು ನಡೆಸಲು ಸಹಕರಿಸಿದ ಪ್ರೊ॥ ವೆಂಕಟರಾಜು, ಡಾ॥ ಮಲ್ಲಿಕಾರ್ಜುನ, ಡಾ॥ ಎಂ. ಎಸ್. ಕೃಷ್ಣಮೂರ್ತಿ, ಡಾ॥ ಎಚ್.ಆರ್. ರಘುನಾಥ ಭಟ್, ಡಾ॥ ಎಂ.ವೈ. ಸಾವಂತ್, ಪ್ರೊ॥ ವಸಂತ ಕುಷ್ಟಗಿ, ಡಾ॥ ಸ್ವಾಮಿರಾವ್ ಕುಲಕರ್ಣಿ, ಡಾ॥ ಭಟ್ ಮತ್ತಿತರರಿಗೆ ಅಕಾದೆಮಿಯು ಕೃತಜ್ಞತೆ ಸಲ್ಲಿನುತ್ತದೆ. ಪರೀಕ್ಷೆಗಳ ಸಂಬಂಧ ಶ್ರೀ ಸಿ.ಆರ್. ಗಾಡಗೋಳಿ ಅವರು ನೀಡಿದ ನೆರವನ್ನೂ ಸಹ ಅಕಾದೆಮಿ ವಿಶೇಷವಾಗಿ ದಾಖಲಿಸುತ್ತದೆ. ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಆಸ್ಥೆಯಿಂದ ಮಾಡಿಕೊಟ್ಟ ಮಾಲ್ಯಮಾಪಕರಿಗೆ ಮತ್ತು ಅದಕ್ಕೆ ಸ್ಥಳಾವಕಾಶ ನೀಡಿದ ಸರ್ಕಾರೀ ಕಲಾ ಕಾಲೇಜಿನ ಮುಖ್ಯಸ್ಥರು ಹಾಗೂ ಪರೀಕ್ಷೆಗಳನ್ನು ನಡೆಸಲು ಸ್ಥಳಾವಕಾಶ ನೀಡಿದ ಎಲ್ಲಾ ಕಾಲೇಜುಗಳ ವ್ಯವಸ್ಥಾಪಕರು ಮತ್ತು ಮುಖ್ಯಸ್ಥರಿಗೆ ಅಕಾದೆಮಿಯು ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಕಾರ್ಯಕಾರೀ ಸಮಿತಿಯ ಸಭೆಗಳು

೧೯೯೬ನೆಯ ಸಾಲಿನಲ್ಲಿ ಅಕಾಡೆಮಿಯ ಕಾರ್ಯಕಾರೀ ಸಮಿತಿಯು ಆರು ಬಾರಿ (ಬೆಂಗಳೂರಿನಲ್ಲಿ ಐದು ಸಭೆಗಳು: ೨೦.೧.೯೬, ೧೯.೪.೯೬, ೧.೬.೯೬, ೧೫.೭.೯೬, ೧೪.೧೧.೯೬, ಮತ್ತು ಧಾರವಾಡದಲ್ಲಿ ಒಂದು ಬಾರಿ ೯.೬.೯೬) ಸಭೆ ಸೇರಿ ಅಕಾದೆಮಿಯ ವಿವಿಧ ಕಾರ್ಯ ಚಟುವಟಿಕೆಗಳ ಬಗೆಗೆ ಚರ್ಚಿಸಿ, ಸುಸೂತ್ರ ಕಾರ್ಯ ನಿರ್ವಹಣೆಗೆ ನೆರವಾಗಿದೆ. ೯.೬.೯೬ರ ವರೆಗಿನ ನಾಲ್ಕು ಸಭೆಗಳ ಅಧ್ಯಕ್ಷತೆಯನ್ನು ಆಗಿನ ಅಧ್ಯಕ್ಷರಾಗಿದ್ದ ಪ್ರೊ॥ ಜಿ.ಎಸ್. ದೀಕ್ಷಿತ್ ಅವರೂ, ನಂತರದ ಎರಡು ಸಭೆಗಳ ಅಧ್ಯಕ್ಷತೆಯನ್ನು ೯.೬.೯೬ರಂದು ಅಧ್ಯಕ್ಷರಾಗಿ ಆಯ್ಕೆಗೊಂಡ ಡಾ॥ ಸೂರ್ಯನಾಥ ಕಾಮತ್ ಅವರೂ ವಹಿಸಿದ್ದರು. ಸಭೆಗಳಲ್ಲಿ ಹಾಜರಿದ್ದು ಅಕಾದೆಮಿಯ ಕಾರ್ಯಗಳು ಯಶಸ್ವಿಯಾಗಿ ನಡೆಯಲು ಕಾರಣರಾದ ಮತ್ತು ಸಭೆಯಲ್ಲಿ ಹಾಜರಾಗಲು ಸಾಧ್ಯವಾಗದಿದ್ದರೂ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ ಎಲ್ಲಾ ಕಾರ್ಯಕಾರೀ ಸಮಿತಿಯ ಸದಸ್ಯರಿಗೂ ಅಕಾದೆಮಿಯು ಕೃತಜ್ಞತೆ ಸಲ್ಲಿಸುತ್ತದೆ.

ಸದಸ್ಯರ ಸಂಖ್ಯೆ

೧೯೯೬ರ ಅಂತ್ಯಕ್ಕೆ ಅಕಾದೆಮಿಯ ಸದಸ್ಯರ ಸಂಖ್ಯೆ ಈ ಕೆಳಕಂಡಂತಿದೆ:

ಆಜೀವ	800
ಸಾಮಾನ್ಯ	20
ಸಂಘ ಸಂಸ್ಥೆಗಳು	20
ಒಟ್ಟು	840

ಅಕಾದೆಮಿಯ ಘಟಕಗಳು

೧೯೯೬-೯೮ರ ಅವಧಿಗೆ ಇತಿಹಾಸ ಅಕಾದೆಮಿಯ ಹೊಸ ಕಾರ್ಯಕಾರೀ ಸಮಿತಿಯು ೮-೯-೧೯೯೬ರಂದು ಅಸ್ತಿತ್ವಕ್ಕೆ ಬಂದ ನಂತರ, ಅಕಾದೆಮಿಯ ಘಟಕಗಳಲ್ಲೂ ಕಾರ್ಯಕಾರೀ ಸಮಿತಿಯು ಬದಲಾಗಿದೆ.

ಬೆಂಗಳೂರು ಜಿಲ್ಲಾ ಘಟಕವು ಶ್ರೀ ತ.ರಂ. ಕೃಷ್ಣೇಗೌಡರ ಅಧ್ಯಕ್ಷತೆಯಲ್ಲಿ, ಮೈಸೂರು ಘಟಕವು ಡಾ॥ ಎಂ.ಎಸ್. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ, ಶಿವಮೊಗ್ಗ ಜಿಲ್ಲಾ ಘಟಕವು ಜಗದ್ಗುರು ಶ್ರೀ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳ ಗೌರವಾಧ್ಯಕ್ಷತೆ ಮತ್ತು ಶ್ರೀ ಹೆಚ್.ಎಂ. ಚಂದ್ರಶೇಖರಪ್ಪನವರ ಅಧ್ಯಕ್ಷತೆಯಲ್ಲಿ, ಧಾರವಾಡ ಘಟಕವು ಡಾ॥ ಹೆಚ್.ಆರ್. ರಘುನಾಥಭಟ್ ಅವರ ಅಧ್ಯಕ್ಷತೆಯಲ್ಲಿ, ಬಳ್ಳಾರಿ ಜಿಲ್ಲಾ ಘಟಕವು ಶ್ರೀ ಗುರುಮೂರ್ತಿ ಪೆಂಡಕೂರು ಮತ್ತು ಶ್ರೀ ಕುಂ.ಬಾ. ಸದಾಶಿವಪ್ಪ ಅವರ ನೇತೃತ್ವದಲ್ಲಿ, ಬಿಜಾಪುರ ಘಟಕವು ಶ್ರೀ ಕೇಶವ ಉಮರ್ಜಿ ಮತ್ತು ಡಾ॥ ಕೃಷ್ಣಕೊಲ್ಹಾರ ಕುಲಕರ್ಣಿ ಅವರ ನೇತೃತ್ವದಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಕರ್ನಾಟಕ ಇತಿಹಾಸ ಅಕಾದೆಮಿಯ ಮೈಸೂರು ಘಟಕದ ೧೯೯೬ನೇ ಸಾಲಿನ ವರದಿ

೧೯೯೬-೯೮ನೇ ಸಾಲಿಗೆ ಆಯ್ಕೆಯಾದ ಕಾರ್ಯಕಾರೀ ಸಮಿತಿ

ಅಧ್ಯಕ್ಷರು : ಡಾ॥ ಎಂ.ಎಸ್. ಕೃಷ್ಣಮೂರ್ತಿ
ಉಪಾಧ್ಯಕ್ಷರು : ಡಾ॥ ಗೋಪಾಲ್. ಆರ್

ಖಜಾಂಚಿ : ಶ್ರೀ ಎಂ.ಎಸ್. ಪೂಜಾರಿ

ಕಾರ್ಯದರ್ಶಿ : ಶ್ರೀ ಮೈಸೂರು ನಾಗರಾಜ ಶರ್ಮ
ಸಹಕಾರ್ಯದರ್ಶಿ : ಡಾ॥ ಜಿ.ವಿ. ಗಾಯತ್ರಿ

ಸದಸ್ಯರು: ಸರ್ವಶ್ರೀ ೧. ಡಾ॥ ಬಿ.ಆರ್. ಗೋಪಾಲ, ೨. ಡಾ॥ ಕೆ.ಎಸ್. ಶಿವಣ್ಣ, ೩. ಡಾ॥ ಎನ್. ಎಸ್. ತಾರಾನಾಥ, ೪. ಪ್ರೊ॥ ಎಂ. ಪ್ರಸನ್ನ ಕುಮಾರ, ೫. ಪ್ರೊ॥ ಚಂದ್ರರಾಜೇ ಅರಸ್, ೬. ಡಾ॥ ವಸಂತಕುಮಾರಿ, ೭. ಎ.ಕೆ. ರಾಜೇಅರಸ್, ೮. ಡಾ॥ ಎಚ್. ಟಿ. ತಳವಾರ, ೯. ಎಸ್. ಎಚ್. ಟಿ. ತಳರಾರ, ೧೦. ಮಾಧವ. ನಾ. ಕಟ್ಟಿ, ೧೧. ಡಾ॥ ಬಿ.ವಿ. ಸುಧಾಮಣಿ, ೧೨. ಎಂ.ಎನ್. ಪ್ರಭಾಕರ

ಘಟಕದಿಂದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಗಳು

ದಿನಾಂಕ	ಸ್ಥಳ	ಆಧ್ಯಕ್ಷತೆ/ಉಪನ್ಯಾಸ	ವಿಷಯ
		ಸರ್ವಶ್ರೀ:	
೨೫.೧.೯೬	ಗುಡ್‌ಷಪರ್ಡ್ ಹೈಸ್ಕೂಲು	ಶ್ರೀ ಮೈ.ನಾ.ಶರ್ಮ	ಆದಿಮಾನವನ ಕತೆ
೮.೯.೯೬	ಮಾತೃಮಂಡಳಿ ಹೈಸ್ಕೂಲು	ಶ್ರೀ ಮೈ.ನಾ.ಶರ್ಮ	ಆದಿಮಾನವನ ಕತೆ
೯.೯.೯೬	ಮಾತೃಮಂಡಳಿ ಶಾಲೆ	ಶ್ರೀ ಮೈ.ನಾ.ಶರ್ಮ	ಪುರಾತತ್ವಶಾಸ್ತ್ರ
೧೨.೯.೯೬	ಮಹಾಜನಾ ಹೈಸ್ಕೂಲ್	ಡಾ॥ ವಸುಂಧರಾ ಫಿಲಿಯೋಜ	ವಿಜಯನಗರ
೨೦-೯-೯೬	ಭೌತಶಾಸ್ತ್ರ ವಿಭಾಗ-ಮಾನಸಗಂಗೋತ್ರಿ,	ಡಾ॥ ಎಂ. ಎಸ್. ಕೃಷ್ಣಮೂರ್ತಿ	ತಲಕಾಡಿನ ಉತ್ಖನನ

ವಿಶೇಷ ಉಪನ್ಯಾಸಗಳು

೨೮.೨.೯೬	ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ	ಡಾ॥ ಎ.ವಿ. ನರಸಿಂಹಮೂರ್ತಿ ಐರಾವತಂ ಮಹಾದೇವನ್ (ಐ.ಎ.ಎಸ್)	ದಿ ಇಂಪ್ಯಾರ್ಕ್ಟ್ ಆಫ್ ಲಿಟರಸಿ ಆನ್ ದಿ ಹಿಸ್ಟರಿ ಆಫ್ ಸೌತ್ ಇಂಡಿಯಾ
೨.೪.೯೬	ಮೈಸೂರು ಅರಮನೆ ಬಿಡದಿ ಸಭಾಂಗಣ	ಡಾ॥ ಕೆ. ವಿ. ರಮೇಶ್ ಡಾ॥ ಸೂರ್ಯನಾಥ ಕಾಮತ್	ಮೈಸೂರು ಪ್ರಾಂತದಲ್ಲಿನ ಸ್ವಾತಂತ್ರ್ಯ ಪೂರ್ವದಲ್ಲಿನ ಸಮಾಜ ಸುಧಾರಣಾ ಚಳುವಳಿಗಳು
೧೪.೧೧.೯೬	ಪ್ರಾಚೀನ ಇತಿಹಾಸ ಮತ್ತು	ಡಾ॥ ಶ್ರೀಮತಿ ವಸುಂಧರಾ ಫಿಲಿಯೋಜ	ಕರ್ನಾಟಕದಲ್ಲಿ ಕಾಳಾಮುಖರು

ಶಾಖೆಯು ಪ್ರತಿ ತಿಂಗಳ ಎರಡನೇ ಬುಧವಾರದಂದು ಸಭೆ ಸೇರಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತದೆ.

*   *   *   *

ಕರ್ನಾಟಕ ಇತಿಹಾಸ ಅಕಾದೆಮಿಯ ಶಿವಮೊಗ್ಗ ಜಿಲ್ಲಾ ಘಟಕದ ೧೯೯೫-೯೬ ನೇ ಸಾಲಿನ ವರದಿ

ದಿ॥ ೩.೩.೯೬ರಂದು ಕ.ಇ. ಅಕಾದೆಮಿಯ ಜಿಲ್ಲಾ ಘಟಕವು ಶಿವಮೊಗ್ಗೆಯ ಬೆಕ್ಕಿನ ಕಲ್ಮಠದಲ್ಲಿ ಅಸ್ತಿತ್ವಕ್ಕೆ ಬಂದಿತು. ಶ್ರೀ ಮ.ನಿ. ಜ॥ ಶ್ರೀ. ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಘಟಕದ ಗೌರವಾಧ್ಯಕ್ಷರಾಗಿರಲು ಒಪ್ಪಿ ಹರಸಿದರು. ಜಿಲ್ಲಾ ಕಾರ್ಯಕಾರಿ ಸಮಿತಿ ಹಾಗು ತಾಲೂಕು ಪ್ರತಿನಿಧಿಗಳನ್ನು ಆಯ್ಕೆಮಾಡಲಾಯಿತು. ಅದಕ್ಕೆ ಕೇಂದ್ರದಿಂದ ಸಮ್ಮತಿ ಪಡೆಯಲಾಯಿತು.

ಗೌರವಾಧ್ಯಕ್ಷರು : ಜ॥ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಶ್ರೀ ಬೆಕ್ಕಿನ ಕಲ್ಮಠ

ಅಧ್ಯಕ್ಷರು : ಹೆಚ್. ಎಂ. ಚಂದ್ರಶೇಖರಪ್ಪ

ಉಪಾಧ್ಯಕ್ಷರು : ಹೆಚ್. ಇಬ್ರಾಹಿಂ, ಬಿ.ಎಸ್. ರಾಮಭಟ್ಟ

ಪ್ರಧಾನ ಕಾರ್ಯದರ್ಶಿ : ಸಿದ್ದಯ್ಯ ಹಿರೇಮಠ,

ಕಾರ್ಯದರ್ಶಿ: ಜಯದೇವಪ್ಪ ಜೈನಕೇರಿ

ಘಟಕದಿಂದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಗಳು

.ದಿನಾಂಕ	ಸ್ಥಳ	ಉದ್ಘಾಟನೆ/ಅಧ್ಯಕ್ಷತೆ/ಮುಖ್ಯಅತಿಥಿ/ಉಪನ್ಯಾಸಕರು
೨೨.೮.೯೫	ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಬೆಕ್ಕಿನ ಕಲ್ಮಠದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮಗಳು	
೧೨.೧೨.೯೫	ಬಸವೇಶ್ವರ ಪ್ರೌಢಶಾಲೆ ಇಂಡಿಯನ್ ಪ್ರೌಢಶಾಲೆ, ರೋಟರಿಶಾಲೆ,	ಹೆಚ್.ಎಸ್.ಚಂದ್ರ ಶೇಖರಪ್ಪ ಟಿ.ಎಸ್.ರಾಮಭಟ್ಟರ ನೆರವಿನಿಂದ ಪ್ರಬಂಧ ಸ್ಪರ್ಧೆಗಳು ನಡೆದುವು.
೧೧,೧೨.೯.೯೬	ರಾಜ್ಯ ಪುರಾತತ್ವ ಇಲಾಖೆ, ಮಲೆ ನಾಡು ವೀರಶೈವ ಅಧ್ಯಯನ ಸಂಸ್ಥೆ- ಶಿವಪ್ಪನಾಯಕನ ಅರಮನೆ	ಡಾ॥ ಡಿ.ವಿ. ದೇವರಾಜ್, ಡಾ॥ ಎಚ್.ಎಸ್. ಗೋಪಾಲರಾವ್
೬.೧೨.೧೯೯	ಸರ್ಕಾರಿ ಪ್ರೌಢಶಾಲೆ ಸವಳಂಗ	ಪ್ರಬಂಧ ಸ್ಪರ್ಧೆ ಮತ್ತು ವಸ್ತು ಪ್ರದರ್ಶನ

೧೯೯೬ರಲ್ಲಿ ಕರ್ನಾಟಕದ ಇತರೆಡೆಗಳಲ್ಲಿ ನಡೆದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮಗಳು

ದಿನಾಂಕ	ಸ್ಥಳ	ಉದ್ಘಾಟನೆ/ಅಧ್ಯಕ್ಷತೆ/ಮುಖ್ಯಅತಿಥಿ	ಉಪನ್ಯಾಸಕರು
		ಸರ್ವಶ್ರೀ :	ಸರ್ವಶ್ರೀ :
೧೬.೮.೯೬	ಕನ್ನಡ ಸಾಹಿತ್ಯ ಪರಿಷತ್ ಘಟಕ ಮತ್ತು ರಾಷ್ಟ್ರೋತ್ಥಾನ ಪ್ರೌಢಶಾಲೆ, ಹಗರಿಬೊಮ್ಮನ ಹಳ್ಳಿ	ಟಿ.ರಾಜಪ್ಪ, ಕೆ.ಎಸ್. ನಿಜಲಿಂಗಪ್ಪ ಎಚ್.ಎಲ್. ಬಾಲರಾಜು	ಕೆ. ರಾಮನ ಗೌಡ
೧೬.೮.೯೬	ಪಿ.ಡಬ್ಲ್ಯೂ ಡಿ.ವಿಭಾಗ ಮೊಳಕಾಲ್ಮೂರು	ಟಿ.ಎಸ್. ಓಬಯ್ಯ (ಮೇನೇಜರ್)	ಕೆ.ಜಿ. ವೆಂಕಟೇಶ್
೧೬.೮.೯೬	ಮೊಳಕಾಲ್ಮೂರು, ಗಾರ್ಡ್‌ಸಂಸ್ಥೆ	ಬೋರಯ್ಯನವರು	ಅನ್ನದಾನಿ ಆರ್. ವೀರಭದ್ರಪ್ಪ
೧೬.೮.೯೬	ಸರ್ಕಾರಿ ಜ್ಯೂನಿಯರ್ ಕಾಲೇಜು ಯರ್ರೇನಹಳ್ಳಿ	ಎಂ. ಮಲ್ಲಿಕಾರ್ಜುನ	
೧೬.೮.೯೬	ವಾಲ್ಮೀಕಿ ಮಹರ್ಷಿ ಪ್ರೌಢಶಾಲೆ ರಾಯಪುರ	ತಿಪ್ಪೇರುದ್ರಪ್ಪ	ವಿರೂಪಾಕ್ಷಿ ಹಂಪೆಯವರ ನಿರ್ದೇಶನ
೧೬.೮.೯೬	ತಿಪ್ಪೇಹಳ್ಳಿ ಪ್ರಾಥಮಿಕ ಶಾಲೆ	ತಿಪ್ಪೇರುದ್ರಪ್ಪ	
೧೬.೮.೯೬	ಕೊಂಗಾಡಿಯಪ್ಪ ಪದವಿಪೂರ್ವ ಕಾಲೇಜು, ದೊಡ್ಡಬಳ್ಳಾಪುರ	ಡಾ॥ ಡಿ.ವಿ. ದೇವರಾಜ್, ಬಿಂಡಿಗನವಿಲೆ ಭಗವಾನ್	ಜಂಬಣ್ಣ, ಎಸ್
೧೬.೮.೯೬	ಸರ್ಕಾರಿ ಪದವಿ ಪೂರ್ವ ಕಾಲೇಜು ದೊಡ್ಡಬಳ್ಳಾಪುರ	ಶ್ರೀಮತಿ ಯಶೋಧರಾ (ಪ್ರಾಂಶುಪಾಲರು)	ಕೆ.ಬಿ. ಚನ್ನಬಸಪ್ಪ
೧೬.೮.೯೬	ಕೊಂಗಾಡಿಯಪ್ಪ ಪ್ರೌಢಶಾಲೆ	ಡಿ.ಕೃಷ್ಣಪ್ಪ (ಪ್ರಭಾರ ಮುಖ್ಯೋಪಾಧ್ಯಾಯರು)	ಎಸ್. ಜಂಬಣ್ಣ
೧೬.೮.೯೬ ರಿಂದ ೨೪.೮.೯೬	ಹಗರಿ ಬೊಮ್ಮನಹಳ್ಳಿ ಸಮೀಪದ ಹಳ್ಳಿಗಳಲ್ಲಿ ಕಾರ್ಯಕ್ರಮಗಳು		ಕೆ. ರವೀಂದ್ರನಾಥ
೧೭.೮.೯೬	ಥಿಯೊಸಾಫಿಕಲ್ ಮಹಿಳಾ ಕಾಲೇಜು ಹೊಸಪೇಟೆ	ಜಿ.ಬಸವಂತಪ್ಪ	ಪ್ರೊ॥ ಲಕ್ಷ್ಮಣ್ ತೆಲಗಾವಿ
೧೭.೮.೯೬	ಮಾದರಿ ಪ್ರಾಥಮಿಕ ಶಾಲೆ, ಹುಲಿಕೆರೆಯಲ್ಲಿ ಕಾರ್ಯಕ್ರಗಳು		ಅಂಜನಪ್ಪನವರ ನಿರ್ದೇಶನ
೧೭.೮.೯೬	ದಾಸರಹಳ್ಳಿ	ಮೊಟೆತ್ತಿನ ಬಸಪ್ಪ (ಸ್ವಾತಂತ್ರ ಹೋರಾಟಗಾರರು)	
೧೭.೮.೯೬	ಕಾನಹೊಸಹಳ್ಳಿ	ಸಿದ್ದಯ್ಯನ ಕೋಟೆ ರುದ್ರಮುನಿ	
೧೭.೮.೯೬	ಕಾನಕಟ್ಟೆ(ಜಗಳೂರು ತಾ)	ತಿಪ್ಪಯ್ಯ ನಾಯಕ	
೧೭.೮.೯೬	ಪೂಜಾರಹಳ್ಳಿ, ಗ್ರಾಮ ಪಂಚಾಯಿತಿ	ತಿಪ್ಪಯ್ಯ ನಾಯಕ	
೧೭.೮.೯೬	ಸರಕಾರಿ ಪದವಿಪೂರ್ವ ಕಾಲೇಜು ತೆಲಗಿ	ಜಿ. ಬಸವಂತಪ್ಪ	ಟಿ.ಎಸ್.ಕೃಷ್ಣ ಮೂರ್ತಿ
೧೮.೮.೯೬	ಕಂಪಳ ರಂಗಸ್ವಾಮಿ ಪ್ರೌಢಶಾಲೆ ಕುಮತಿ ಗ್ರಾಮ	ನಾಗರಾಜಪ್ಪ	
೧೮.೮.೯೬	ಕರ್ನಾರ್ ಕಟ್ಟೆ, ಹುರುಳಿಹಾಳ್, ಓಬಳಾಪುರ ಜುಮ್ಮೋಲನಹಳ್ಳಿ-೫ ಕಾರ್ಯಕ್ರಮಗಳು		ಜೆ.ಸ್ವಾಮಿ ಮತ್ತು ಹೆಚ್.ಪಿ. ಓಬಯ್ಯ ನವರು ನಡೆಸಿದ್ದು
೨೦.೮.೯೬	ವಾಸವಿ ಕಾಲೇಜು ಹೊಸಪೇಟೆ	ಎಚ್.ವಸಂತರಾವ್ ದೇಸಾಯಿ	ಡಿ.ಕೃಷ್ಣಮೂರ್ತಿ
೨೦.೮.೯೬	ಸರಕಾರಿ ಪ್ರೌಢಶಾಲೆ ಕಮಲಾಪುರ	ಪ್ರೊ॥ ಲಕ್ಷ್ಮಣ ತೆಲಗಾವಿ (ಕ.ವಿ.ವಿ)	
೨೦.೮.೯೬	ಜಿ.ಪಿ.ಜಿ. ಪದವಿ ಪೂರ್ವಕಾಲೇಜು ಹೂವಿನ ಹಡಗಲಿ	ಎಂ.ಪಿ.ಎಂ.ದಯಾನಂದಸ್ವಾಮಿ	ಜಿ.ಜಿ. ಹುಬ್ಬಳ್ಳಿ
೨೦.೮.೯೬	ಕೊಪ್ಪಳ	ಸಿದ್ದಯ್ಯಹಿರೇಮಠ	
೨೧.೮.೯೬	ಸರಕಾರಿ ಪದವಿಪೂರ್ವ ಕಾಲೇಜು ಸಿರುಗುಪ್ಪ	ವೆಂಕಟಪ್ಪಗಿರಿಯಪ್ಪ	ಗೋಪಾಲಯ್ಯ
೨೧.೮.೯೬	ವಿಜಯನಗರ, ಕಾಲೇಜು, ಹೊಸಪೇಟೆ	ಪ್ರೊ॥ ಎಚ್.ಎಂ. ಚಂದ್ರಶೇಖರ ಶಾಸ್ತ್ರಿ	ಗುರುಬಸವರಾಜು ಡಾ॥ ದೇವರ ಕೊಂಡಾರೆಡ್ಡಿ (ಕ.ವಿ.ವಿ)
೨೧.೮.೯೬	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	ಎನ್. ವಿಜಯಭಾಸ್ಕರ್ ಕನ್ನಡ ಸಂಘ, ಬೆಂಗಳೂರು	ಡಾ॥ ಸೂರ್ಯನಾಥ ಕಾಮತ್ ಡಾ॥ ಡಿ.ವಿ. ದೇವರಾಜ್
೨೧.೮.೯೬	ಕಂಪ್ಲಿ, ದೇವಸಮುದ್ರ	೨ ಕಾರ್ಯಕ್ರಗಳು	ಮಂಜುನಾಥ ಕೇಲ
೨೧.೮.೯೬	ಸರಕಾರಿ ಪ್ರೌಢಶಾಲೆ, ಹಣಬಿ	ಎನ್.ಕೇಶವಮೂರ್ತಿ	ಎಸ್. ಜಂಬಣ್ಣ

ದಿನಾಂಕ	ಸ್ಥಳ	ಉದ್ಘಾಟನೆ/ಅಧ್ಯಕ್ಷತೆ/ಮುಖ್ಯಅತಿಥಿ	ಉಪನ್ಯಾಸಕರು
೨೧.೮.೯೬	ಎಂ.ಎ.ಬಿ.ಎಲ್. ಪ್ರೌಢಶಾಲ ದೊಡ್ಡಬಳ್ಳಾಪುರ	ಸಿ.ನಿರ್ಮಲ(ಮುಖ್ಯೋಪಾಧ್ಯಾಯಿನಿ)	ಅಬ್ದುಲ್‌ಕರೀಂ
೨೨.೮.೯೬	ರವಿವರ್ಮ ಕಾಲೇಜು,ಹೊಸಪೇಟೆ	ಡಾ॥ ಮಲಶೆಟ್ಟಿ, ಇಟಗಿ ಬಾಲಸುಬ್ರಹ್ಮಣ್ಯ, ಈರಣ್ಣ	ಡಾ॥ ದೇವರ ಕೊಂಡಾರೆಡ್ಡಿ
೨೨.೮.೯೬	ಬುಕ್ಕಸಾಗರ	ಶಾರದಮ್ಮ	
೨೨.೮.೯೬	ಸರ್ಕಾರಿ ಪ್ರೌಢಶಾಲೆ, ಹೊಸಹಳ್ಳಿ	ಶ್ರೀವರದರೆಡ್ಡಿ	ನೀಲಾವರ ಸುರೇಂದ್ರ ಅಡಿಗ
೨೨.೮.೯೬	ಸರ್‌ದೇಸಾಯಿ ಜ್ಯೂನಿಯರ್ ಕಾಲೇಜು ಯಾದಗೂಡ್ ಮತ್ತು ಹುಕ್ಕೇರಿ	ಎ.ಜೆ.ಪಾಟೀಲ್	ಬಿ.ಡಿ.ಮಾಳಗಿ
೨೨.೮.೯೬	ಸರಕಾರಿ ಜ್ಯೂನಿಯರ್ ಕಾಲೇಜು ಕೂಡ್ಲಿಗಿ	ಎ.ಬಿ. ಅಡ್ಡಮನಿ(ಪ್ರಾಂಶುಪಾಲರು)	ಎಚ್.ಎಂ.ವಿಜಯಕುಮಾರ್ ಟಿ.ಎಂ.ಸೋಮಯ್ಯ
೨೩.೮.೯೬	ಸರಕಾರಿ ಪದವಿ ಪೂರ್ವಕಾಲೇಜು ಸಂತೇಬೆನ್ನೂರು	ಟಿ.ಎನ್. ನಿಜಲಿಂಗಪ್ಪ (ಕ.ಸಾಹಿತ್ಯ ಪರಿಷತ್ ತಾಲೂಕ್ ಅಧ್ಯಕ್ಷರು)	ಸಿದ್ದಯ್ಯ ಹಿರೇಮಠ
೨೩.೮.೯೬	ಪ್ರಾಥಮಿಕ ಮಾಧ್ಯಮಿಕ ಮಹಾವಿದ್ಯಾಲಯ ಬಂಕಾಪುರ	ಎ.ಕೆ. ಅದವಾನಿ ಮಠ	'ಬಂಕಾಪುರ ಶೋಧನೆ'-ಪುಸ್ತಕವನ್ನಾಧರಿಸಿ. 'ಬಂಕಾಪುರ ಐತಿಹಾಸಿಕ ಜ್ಞಾನೋದಯ ಪರೀಕ್ಷೆ', ನಡೆಸಿದ್ದಾರೆ.
೨೩.೮.೯೬	ಎ.ಕ.ಕೆ. ಸರ್ಕಾರಿ ಪದವಿ ಪೂರ್ವ ಕಾಲೇಜು ಹಿರೇ ಹಡಗಲಿ	ಎಸ್.ಸಿ. ಕೆಂಭಾವಿ ಜಿ.ಸೋಮಶೇಖರ	ಕೆ.ದಯಾನಂದಗೌಡ
೨೬.೮.೯೬	ಅಮಪ. ಶಂ. ಪ್ರೌಢಶಾಲೆ ಹೊಳಗುಂದಿ	ಬಿ.ಕೊಟ್ರಪ್ಪ	ಬಿ.ರುದ್ರಪ್ಪ
೨೬.೮.೯೬	ಶಿಕ್ಷಕರ ತರಬೇತಿ ಕೇಂದ್ರ, ಹರಪನಹಳ್ಳಿ	ಬಿ. ಚಂದ್ರಶೇಖರ	ಜಿ. ಬಸವಂತಪ್ಪ
೨೬.೮.೯೬	ಜೆ.ವಿ.ಪಿ.ವಿ ಸರ್ಕಾರಿ ಪ್ರಥಮ ದರ್ಜೆಕಾಲೇಜು, ರಾಮನಗರ, ಹಗರಿಬೊಮ್ಮನಹಳ್ಳಿ	ಟಿ. ಕೃಷ್ಣನಾಯಕ್ ಡಾ॥ ದೇವರ ಕೊಂಡಾರೆಡ್ಡಿ(ಕವಿವಿ)	
೨೭.೮.೯೬	ಇಂದಿರಾಗಾಂಧಿ ಬಾಲಕಿಯರ ಪ್ರೌಢಶಾಲೆ, ಹಗರಿಬೊಮ್ಮನಹಳ್ಳಿ	ಕೆ. ಪ್ರಕಾಶ್ (ಮುಖ್ಯೋಪಾಧ್ಯಾಯರು)	ಸವಿತಾ ಆಲೂರ್
೨೭.೮.೯೬	ಸರಕಾರಿ ಪದವಿಪೂರ್ವ ಕಾಲೇಜು, ಹರಪನಹಳ್ಳಿ	ವೈ.ವಿರೂಪಾಕ್ಷಪ್ಪ	ಜಿ. ತಿಲೋಕಿಕರ್
೨೮.೮.೯೬	ಗಂ. ಭೀ.ಪದವಿಪೂರ್ವಕಾಲೇಜು ರಾಮನಗರ, ಹಗರಿಬೊಮ್ಮನಹಳ್ಳಿ	ಟಿ.ಬಸವರಾಜು	ಡಾ॥ ಮೃತ್ಯುಂಜಯರುಮಾಲೆ
೨೯.೮.೯೬	ರೇಣುಕ ಸಮನ್ವಯ ಸಂಯುಕ್ತ ಪದವಿಪೂರ್ವ ಕಾಲೇಜು ಹಗರಿಬೊಮ್ಮನ ಹಳ್ಳಿ	ಇಂದುಮತಿ ತಿಪ್ಪೇಸ್ವಾಮಿ (ಪ್ರಾಚಾರ್ಯರು)	ಹೆಚ್.ಬಾಲರಾಜು (ಕ್ಷೇತ್ರ ಶಿಕ್ಷಣಾಧಿಕಾರಿಗಳು)
೨೯.೮.೯೬	ಶೆಟ್ಟಿಗುರುಶಾಂತಪ್ಪ ಸಂಯುಕ್ತ ಪದವಿಪೂರ್ವ ಕಾಲೇಜು, ಬಳ್ಳಾರಿ	ಚೋರನೂರು ಕೊಟ್ರಪ್ಪ	ಎಚ್.ಮೆಹಬೂಬ್
೩೦.೮.೯೬	ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸರಕೋಡು	ಬಾಣದ ಬಸಪ್ಪ (ಗ್ರಾಮ ಪಂಚಾಯಿತಿ ಅಧ್ಯಕ್ಷರು)	ಹಿ.ಮ.ಕೊಟ್ರಯ್ಯ
೩೦.೮.೯೬	ಪಾಪುಸ್ವಾಮಿ ಸರ್ಕಾರಿ ಪ್ರೌಢಶಾಲೆ ಹಗರಿಬೊಮ್ಮನಹಳ್ಳಿ	ಎಚ್.ಕೃಷ್ಣಮೂರ್ತಿ	ಜಿ.ಮಲ್ಲಿಕಾರ್ಜುನ
೩೧.೮.೯೬	ಗುರುಮೂರ್ತಿ ಪೆಂಡಕೂರ್ ಅವರ ಮನೆ	ಗುರುಮೂರ್ತಿ ಪೆಂಡಕೂರ್	ಜಿ.ಮಲ್ಲಿಕಾರ್ಜುನ

೩೧.೮.೯೬ ರಿಂದ ಬಳ್ಳಾರಿ ಜಿಲ್ಲೆಯ ೮ ತಾಲೂಕುಗಳಲ್ಲಿ ೧೮ ಕಾರ್ಯಕ್ರಮಗಳನ್ನು ಕುಂ.ಬಾ. ಸದಾಶಿವಪ್ಪನವರು ನಿಯೋಜಿಸಿದ್ದಾರೆ.

೪.೯.೯೬	ಸರಕಾರಿ ಪ್ರೌಢಶಾಲೆ,ಚೀಲೂರು ಬೆಂಗಳೂರು ಗ್ರಾಮಾಂತರ ಜಿಲ್ಲೆ	ಶ್ರೀನಿವಾಸಮೂರ್ತಿ	ಎಸ್.ಪಿ.ರಮೇಶ್
೫.೯.೯೬	ಸರಕಾರಿ ಪ್ರೌಢಶಾಲೆ ಚಿಕ್ಕಮುದವಾಡಿ	ಶಿವರಾಮೇಗೌಡರು	ಮುನಿರಾಜಪ್ಪ
೫.೯.೯೬	ಶ್ರೀ ಮಹಾಲಿಂಗಸ್ವಾಮಿ ಪ್ರೌಢಶಾಲೆ ಹೊಸನಹಳ್ಳಿ	ಎನ್.ಎಂ. ಬಸವರಾಜ್	ಮುನಿರಾಜಪ್ಪ

ದಿನಾಂಕ	ಸ್ಥಳ	ಉದ್ಘಾಟನೆ/ಅಧ್ಯಕ್ಷತೆ/ಮುಖ್ಯಅತಿಥಿ	ಉಪನ್ಯಾಸಕರು
೫.೯.೯೬	ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ	ಡಾ॥ ಕೃಷ್ಣ ಕೊಲ್ಹಾರ ಕುಲಕರ್ಣಿ (ಪ್ರಾಚಾರ್ಯರು)	ಡಾ॥ ಎಸ್.ಕೆ.ಕೊಪ್ಪ ವಿದ್ಯಾರ್ಥಿಗಳಿಂದ ಪ್ರಬಂಧ ಮಂಡನ ಮತ್ತು ವಸ್ತು ಪ್ರದರ್ಶನ
೫.೯.೯೬	ಸರ್ಕಾರಿ ಪ್ರೌಢಶಾಲೆ, ಅತ್ತಿಹಳ್ಳಿ	ಮುಖ್ಯೋಪಾಧ್ಯಾಯರು	ಎನ್.ಪಿ. ರಮೇಶ್
೬.೯.೯೬	ಗ್ರಾಮಾಂತರ ಪ್ರೌಢಶಾಲೆ, ಹಾರೋಹಳ್ಳಿ	ಹೆಚ್.ಎಸ್.ರಾಮಚಂದ್ರ	ಕೆ.ಪಿ. ಪ್ರಕಾಶ್
,,	ಸರ್ಕಾರಿ ಪ್ರೌಢಶಾಲೆ, ಶಿವನಹಳ್ಳಿ	ದೊಡ್ಡರಂಗಪ್ಪ	ಸೀಗಣ್ಣ
೭.೯.೯೬	ಶ್ರೀ ನಿರ್ವಾಣಸ್ವಾಮಿ ವಸತಿ ಪ್ರೌಢಶಾಲೆ ಶ್ರೀ ದೇಗುಲಮಠ	ಕೆ.ಪಿ. ಗಣೇಶಯ್ಯ	ಡಿ.ಕೃಷ್ಣಯ್ಯ
,,	ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಕನಕಪುರ	ಶ್ರೀಮತಿ ಸುಮಿತ್ರಾಬಾಯಿ	ಮುನಿರಾಜಪ್ಪ
೯.೯.೯೬	ಪುರಸಭಾ ಪ್ರೌಢಶಾಲೆ, ಕನಕಪುರ	ಆರ್.ಎ.ಖಾನ್	ಎಂ. ಗೋವಿಂದಪ್ಪ
೯.೯.೯೬	ಸರ್ವೋತ್ತಮ ಪದವಿ ಪೂರ್ವ ಕಾಲೇಜು, ಬೆಂಗಳೂರು	ಡಾ॥ ಕೆ. ನಾಗೇಶ ಹತ್ವಾರ್ (ಸಂಸ್ಥಾಪಕ ಕಾರ್ಯದರ್ಶಿಗಳು)	ಡಾ॥ ಎಚ್.ಎಸ್. ಗೋಪಾಲರಾವ್
೧೦.೯.೯೬	ಮೈಕೇಲ್ ಪ್ರೌಢಶಾಲೆ, ಕನಕಪುರ	ಶ್ರೀಮತಿ, ತೆರೆಸಮ್ಮ ಜೋಸೆಫ್	ಕು. ತ್ರಿಪುರಸುಂದರಿ
೧೧.೯.೯೬	ಸರ್ಕಾರಿ ಪ್ರೌಢಶಾಲೆ, ಉಯ್ಯಂಬಳ್ಳಿ	ಕೂ.ಗಿ.ಗಿರಿಯಪ್ಪ	ಮುನಿರಾಜಪ್ಪ
೧೨.೯.೯೬	ಸರ್ಕಾರಿ ಪ್ರೌಢಶಾಲೆ, ಏರಂದ್ಯಾಪನ ಹಳ್ಳಿ	ರಾಜಶೇಖರ್	ಶ್ರೀ ಕೆ.ಪಿ. ಪ್ರಕಾಶ್
೧೪.೯.೯೬	ಸರ್ಕಾರಿ ಮಾದರಿ ಪ್ರೌಢಶಾಲೆ ಅತ್ತಿಗುಪ್ಪೆ, ಬೆಂಗಳೂರು		ಡಾ॥ ಎಚ್.ಎಸ್.ಗೋಪಾಲರಾವ್
೧೯.೯.೯೬	ಶ್ರೀ ಛತ್ರಪತಿ ಶಿವಾಜಿ ವಿದ್ಯಾಮಂದಿರ ಸೊಂಡೂರು	ಪಾಂಡುರಂಗಾಚಾರ್ ಗಲಗಲಿ	ಎ.ಎ.ಸಿದ್ಧಾಂತಿ
೧೯.೯.೯೬	ಬಸವೇಶ್ವರ ಪ್ರಥಮದರ್ಜೆ ಕಾಲೇಜು, ಬೆಂಗಳೂರು	ಡಾ॥ ಬೆಂ.ಶಾ. ಶ್ಯಾಮಲ ರತ್ನ ಕುಮಾರಿಯವರ ನಿರ್ವಹಣೆ	ಶ್ರೀ ಹರ್ಷ ಮತ್ತು ಮೂನಾರವರಿಂದ ಚಿತ್ರಪ್ರದರ್ಶನ
೨೦.೯.೯೬	ಮಾಯ ಆಂಗ್ಲ ಪ್ರೌಢಶಾಲೆ, ವಿಜಯಪುರ	ಸಿ. ಎಂ. ವೀರಣ್ಣ	ಬಿ.ಮಾಣಿಕ್ ಚಂದ್ ಜೈನ್, ಯ. ಚಿ.ದೊಡ್ಡಯ್ಯ
೨೧.೯.೯೬	ಪ್ರಗತಿ ಪ್ರೌಢಶಾಲೆ,ವಿಜಯಪುರ	ಶ್ರೀಮತಿ ಸುಧಾ ಸತೀಶ್	ಎ.ವೀರಶೆಟ್ಟಪ್ಪ
,,	ರೋಟರಿ ಪ್ರೌಢಶಾಲೆ, ವಿಜಯಪುರ	ಎಂ. ಮುನಿಯಪ್ಪ	ಶ್ರೀಮತಿ ಮಂಜುಳ
೩.೧೦.೯೬	ಬಿ.ಇ.ಎಸ್. ಸಂಜೆಕಾಲೇಜು,ಬೆಂಗಳೂರು		ಡಾ.ಸೂರ್ಯನಾಥ ಕಾಮತ್
೬.೧೨.೯೬	ಸರಕಾರಿ ಪ್ರೌಢಶಾಲೆ, ಸವಳಂಗ	ಎಚ್.ಎಂ. ಚಂದ್ರಶೇಖರಯ್ಯ	ಜಯದೇವ ಜೈನಕೇರಿ ಎಸ್. ಜಿ.ಸಮಕ್ ಬಿ.ಎಸ್.ರಾಮಭಟ್ (ವಸ್ತು ಪ್ರದರ್ಶನ ಮತ್ತು ಪ್ರಬಂಧ ಸ್ಪರ್ಧೆ ವ್ಯವಸ್ಥೆ)
೧೭.೧.೯೭	ಹಿರೇಕಲ್ಮಠ		ಸಿದ್ದಯ್ಯ ಹಿರೇಮಠ

ಅಕಾದೆಮಿಯ ಇತರ ಕಾರ್ಯಕ್ರಮಗಳು (ಕೇಂದ್ರ)

ಅಕಾದೆಮಿಯು ದಶವಾರ್ಷಿಕ ಉತ್ಸವದ ನೆನಪಿಗಾಗಿ ಇತಿಹಾಸದ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯೊಂದನ್ನು ನಡೆಸಿ, ಮೊದಲ ಮೂರು ಸ್ಥಾನ ಪಡೆದ ಅಭ್ಯರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಿದೆ.

೧೯೯೬ರ ಫೆಬ್ರವರಿ ೯,೧೦ ಮತ್ತು ೧೧ ರಂದು ಹಂಪಿಯ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಹಂಪಿಯಲ್ಲಿ ನಡೆಸಿದ ವಿಜಯನಗರ ಸಾಮ್ರಾಜ್ಯದ ೬೬೦ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಇತಿಹಾಸ ಅಕಾದೆಮಿಯೂ ಸಹಕಾರ ನೀಡಿತು. ಆ ಸಂದರ್ಭ ನಡೆದ ೮ ವಿಚಾರ ಗೋಷ್ಠಿಗಳಲ್ಲಿ ಸುಮಾರು ೭೫ ಪ್ರಬಂಧಗಳು ಮಂಡನೆಯಾದವು. ಅವುಗಳಲ್ಲಿ ಕೆಲವನ್ನು ಈಗಾಗಲೇ ಹೆರಿಟೇಜ್ ಟ್ರಸ್ಟ್ ಪುಸ್ತಕರೂಪದಲ್ಲಿ ಪ್ರಕಟಿಸಿ ಉಪಕಾರಮಾಡಿದೆ.

೧೯೯೬ರ ಅಕ್ಟೋಬರ್ ೧೨,೧೩ ಮತ್ತು ೧೪ರಂದು ಅಕಾದೆಮಿಯು ಬೆಂಗಳೂರಿನಲ್ಲಿ ಇತಿಹಾಸಪೂರ್ವಕಾಲದ ಬಗ್ಗೆ ಸಂಶೋಧನಾ ತರಬೇತಿ ಕಾರ್ಯಾಗಾರ ನಡೆಸಿತು. ಡಾ॥ ಅ.ಸುಂದರ ಅವರು ಕಾರ್ಯಾಗಾರ ನಿರ್ದೇಶಕರಾಗಿದ್ದರು. ೧೨.೧೦.೯೬ರಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ॥ ಎನ್. ಆರ್. ಶೆಟ್ಟಿಯವರು ಕಾರ್ಯಾಗಾರ ಉದ್ಘಾಟನೆ ಮಾಡಿದರು. ಆ ಸಂದರ್ಭದಲ್ಲಿ ಖ್ಯಾತ ಪುರಾತತ್ವಜ್ಞರಾದ ಡಾ॥ ಎಸ್. ಆರ್. ರಾವ್ ಅವರು ಮಾರ್ಗಸೂಚಿ ಭಾಷಣ ಮಾಡಿದರು. ಡಾ॥ ಸೂರ್ಯನಾಥ ಕಾಮತ್

ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಗಾರದಲ್ಲಿ ೬೮ಜನ ಅಭ್ಯರ್ಥಿಗಳು ಪಾಲ್ಗೊಂಡಿದ್ದು, ಆ ಸಂದರ್ಭ ವಿವಿಧ ವಿಷಯಗಳ ಬಗೆಗೆ ಡಾ॥ ಅ.ಸುಂದರ, ಡಾ॥ ಸೂರ್ಯನಾಥ ಕಾಮತ್, ಶ್ರೀ ಎಲ್.ಕೆ. ಶ್ರೀನಿವಾಸನ್, ಶ್ರೀ ಎಂ.ವಿ.ವಿಶ್ವೇಶ್ವರ, ಡಾ॥ ಚೂಡಾಮಣಿ ನಂದಗೋಪಾಲ್ ಉಪನ್ಯಾಸ ನೀಡಿದರು. ೧೩.೧೦.೯೬ರಂದು ಬೆಂಗಳೂರು ಸಮೀಪದ ಕಣ್ಣೂರಿಗೆ ಶಿಬಿರಾರ್ಥಿಗಳನ್ನು ಬೃಹತ್ ಶಿಲಾಯುಗದ ನೆಲೆಯ ಸಂದರ್ಶನಕ್ಕೆ ಕರೆದೊಯ್ಯಲಾಯಿತು. ಈ ಶಿಬಿರದ ಯಶಸ್ಸಿಗೆ ಆರ್ಥಿಕವಾಗಿ ಅಕಾದೆಮಿಯ ಕೆಲವು ಸಕ್ರಿಯ ಸದಸ್ಯರಲ್ಲದೆ ಮಿಥಿಕ್ ಸೊಸೈಟಿ, ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಶ್ರೀಮತಿ ಅಲಿ ತ್ರಾ ಪಟೇಲ್ ಅವರು ನೀಡಿದ ನೆರವನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಗಿದೆ.

ಕೃತಜ್ಞತೆಗಳು

ಅಕಾದೆಮಿಯ ಹತ್ತನೆಯ ವಾರ್ಷಿಕ ಸಮ್ಮೇಳನಕ್ಕೆ ಆಶ್ರಯ ನೀಡಿ ಯಶಸ್ವಿಯಾಗಿ ನಡೆಸಿಕೊಟ್ಟ ಧಾರವಾಡದ ಶ್ರೀ ಮುರುಘಾಮಠದ ಶ್ರೀ ಮ.ನಿ.ಪ್ರ. ಶಿವಯೋಗಿ ಮಹಾಸ್ವಾಮಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ॥ ಎಸ್. ರಾಮೇಗೌಡ, ಅದೇ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆ ಮತ್ತು ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗದ ಸಕಲರಿಗೂ ಅಕಾದೆಮಿಯು ಅತ್ಯಂತ ಕೃತಜ್ಞವಾಗಿದೆ. ಅಕಾದೆಮಿಯ ಹಲವಾರು ಕಾರ್ಯಕ್ರಮಗಳಿಗೆ ಸಹಯೋಗ ನೀಡಿ ಸಹಕರಿಸಿರುವ ಬೆಂಗಳೂರಿನ ಮಿಥಿಕ್ ಸೊಸೈಟಿ, ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮದ ಸಲುವಾಗಿ ರೂ ೨೫,೦೦೦/= ಆರ್ಥಿಕ ನೆರವು ನೀಡಿದ ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ, ದೇಣಿಗೆ ನೀಡಿ ಪ್ರೋತ್ಸಾಹಿಸಿದ ಧಾರವಾಡದ ಡಾ॥ ಎಸ್.ಕೆ. ಜೋಶಿ, ಸಂಶೋಧನ ತರಬೇತಿ ಕಾರ್ಯಾಗಾರದ ಸಂದರ್ಭ ಆರ್ಥಿಕ ನೆರವು ನೀಡಿದ ಶ್ರೀಮತಿ ಅಲ್ಮಿತ್ರಾ ಪಟೇಲ್, ಅಕಾದೆಮಿಯ ಹಲವಾರು ಸದಸ್ಯರು, ಪ್ರಗತಿ ಕೋ-ಆಪರೇಟಿವ್ ಬ್ಯಾಂಕ್, ಇತಿಹಾಸದರ್ಶನದ ಮುದ್ರಣ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತಿರುವ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ್ ಕುಮಾರ್, ಶ್ರೀ ವೆಂಕಟೇಶ್ ಮತ್ತು ಇತರ ಸಿಬ್ಬಂದಿ, ನಮ್ಮ ಇತರ ಮುದ್ರಣ ಕಾರ್ಯಗಳಿಗೆ ನೆರವಾಗುತ್ತಿರುವ ವಾಗ್ದೇವಿ ಮುದ್ರಣಾಲಯದ ಶ್ರೀ ಶಾಂತಾರಾಂಪ್ರಭು, ಪರೀಕ್ಷೆಗಳ ಸಂದರ್ಭ ವಿಶೇಷ ನೆರವು ನೀಡುತ್ತಿರುವ ಶ್ರೀ ಸಿ.ಆರ್. ಗಾಡಗೋಳಿ ಮತ್ತಿತರರನ್ನು ಅಕಾದೆಮಿಯು ಕೃತಜ್ಞತೆಯಿಂದ ಸ್ಮರಿಸುತ್ತದೆ. ಅಕಾದೆಮಿಯು ಇತಿಹಾಸ ಪ್ರಶಸ್ತಿ ಪರೀಕ್ಷೆಗಳನ್ನು ನಡೆಸಲು ಸ್ಥಳಾವಕಾಶ ನೀಡಿ ಸಹಕರಿಸುತ್ತಿರುವ ಬೆಂಗಳೂರಿನ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜು, ಶೇಷಾದ್ರಿಪುರಂ ಕಾಲೇಜು, ಮೈಸೂರಿನ ಬನುಮಯ್ಯ ಕಾಲೇಜು ಮತ್ತು ದಳವಾಯಿ ಹೈಸ್ಕೂಲು ಧಾರವಾಡದ ಕಿಟೆಲ್ ಕಾಲೇಜು, ಗುಲ್ಬರ್ಗದ ಎನ್.ವಿ.ಕಾಲೇಜು ಮತ್ತು ಮಂಗಳೂರಿನ ಗಣಪತಿ ಹೈಸ್ಕೂಲುಗಳ ವ್ಯವಸ್ಥಾಪಕರು ಮತ್ತು ಪ್ರಾಂಶುಪಾಲರಿಗೆ ಅಕಾದೆಮಿ ಕೃತಜ್ಞತೆ ಸಲ್ಲಿಸುತ್ತದೆ.

ಅಕಾದೆಮಿಯ ಗೌರವವನ್ನು ಉಳಿಸಲು ಮತ್ತು ಬೆಳೆಸಲು ಸದಾ ಸಹಕರಿಸುತ್ತಿರುವ ಅಕಾದೆಮಿಯ ಎಲ್ಲ ಸದಸ್ಯರಿಗೂ ಅಕಾದೆಮಿ ಗೌರವ ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.


ಡಾ॥ ಎಚ್.ಎಸ್. ಗೋಪಾಲರಾವ್
ಪ್ರಧಾನ ಕಾರ್ಯದರ್ಶಿ
(ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ)

ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ

ಪ್ರಾಚೀನ ಇಗರ್ಜಿ, ಮಸೀದಿ, ಗುಡಿ
ನಮ್ಮ ಪರಂಪರೆಯ ಭವ್ಯ ಮುಡಿ

ಇತಿಹಾಸದ ಸಂಶೋಧನೆ
ನಮ್ಮ ತಿಳಿವಿನ ವರ್ಧನೆ

ಕರ್ನಾಟಕ
ಇತಿಹಾಸ ಅಕಾದೆಮಿ



ನೆರವು: ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆ